Regd No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6



ವರ್ಷ ೨೫ ವಾರ ೧೮] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25 No. 18

Founder: SRI A. B. SHETTY.

ಉಡುಪಿ ● 3—1—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಉಳುಕು, ಕೆಮ್ಮು, ಛಳಿ, ಹಲ್ಲು ನೋವುಗಳಿಗೆ ... ಎನಿಸೋಣ, ಛಾಯೆಗಳು ... ವಿಷಜಂತುಗಳು ಕಚ್ಚಿದಾಗ ... ರೋಗಗಳಿಗೂ ...

REGD.

ಪ್ರಪಂಚದಲ್ಲಿ ಮತ್ತು ಸರ್ವತ್ರ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE CANARA MUTUAL ASSURANCE COMPANY, LTD.,

(UDIPI, S. India.)

Good Wishes

We thank all our Policy-holders, Agents, Medical Examiners and well-wishers for their co-operation and wish them a happy, peaceful and prosperous life in the NEW YEAR.

B. Vaikunta Baliga,

Chairman.

BOARD OF DIRECTORS.

---

150 ಪುಟಗಳು! ಬಣ್ಣಬಣ್ಣದ ಚಿತ್ರ!

ಕನ್ನಡ ಪತ್ರಿಕಾಪ್ರಪಂಚದಲ್ಲಿ ಪ್ರಥಮ ಪ್ರಯತ್ನ!

'ಅಂತರಂಗ'ದ

ಆಯುರ್ವೇದ ಸಮ್ಮೇಲನಾಂಕ

ಅಖಿಲಭಾರತ ಖ್ಯಾತಿಯ ಲೇಖಕ ವರ್ಗ!

ಕನ್ನಡಿಗರಿಗೆ ಈ ವರೆಗೆ ಯಾರೂ ಅರ್ಪಿಸದ ಹೊಸ ವರ್ಷದ ಹೊಸ ಮಾದರಿಯ ಕಾಣಿಕೆ.

ಪ್ರತಿ ಡಾಕ್ಟರ, ವೈದ್ಯರಷ್ಟೇ ಅಲ್ಲ—ಪ್ರತಿಯೊಬ್ಬ ಕನ್ನಡಿಗನೂ ಸಂಗ್ರಹಿಸತಕ್ಕ ಅತ್ಯಮೂಲ್ಯ ಸಂಚಿಕೆ-

ಇಷ್ಟಿದ್ದರೂ ಬೆಲೆ ಬರೇ **1—0—0** ಮಾತ್ರ.

ಮೆನೇಜರ್, 'ಅಂತರಂಗ' ವಾರಪತ್ರಿಕೆ, ಉಡುಪಿ, ದ.ಕ.

The Bombay Life Assurance Co., Ltd.

(ESTD: 1908)

1944ರ ಹೊಸ ವ್ಯವಹಾರವು 2½ ಕೋಟಿಗೂ ಮಿಕ್ಕಿ

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** [1910

ದಕ್ಷಿಣ ಭಾರತದ ಚೀಫ್ ಏಜಂಟರು.

ಕಳೆದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—**53,00,000.**

KOCHIKAR BROTHERS, LTD.

Central Office:—UDIPI. S. K.

Mangalore ○ Calicut ○ Bangalore ○ Madras ○ Madura ○ Trivandrum ○ Bombay

---

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.**

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L. I. M; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank at

KANHANGAD

on 17-11-1945, by

Sri B. Appaswamy Chetty, B. A., R. D. O., Puttur.

A branch of the Bank will be opened at MERCARA shortly.

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

ಶುದ್ಧ ಆಯುರ್ವೇದದ ಕೀರ್ತಿಧ್ವಜ ಹಾರಿಸೋಣ!

[ನಿಖಿಲಭಾರತ ಆಯುರ್ವೇದ ಪರಿಷತ್ತಿನ ೩೪ನೇ ವಾರ್ಷಿಕ ಮಹಾಧಿವೇಶನದ ಅಧ್ಯಕ್ಷ ಪ್ರಾಣಾಚಾರ್ಯ, ವೈದ್ಯ ವಾಚಸ್ಪತಿ, ಆಯುರ್ವೇದ ಶಾಸ್ತ್ರಿ ಇತ್ಯಾದಿ ಪದವೀಧರರಾದ ಕವಿರಾಜ ಶ್ರೀ ಮಣೀಂದ್ರ ಕುಮಾರ ಮುಖ್ಯೋಪಾಧ್ಯಾಯ (ಮುಖರ್ಜಿ) ಬಿ. ಎ., ಅವರ ಭಾಷಣದ ಸಾರಾಂಶ]



ಇವರು ಕಲ್ಕತ್ತ ವಿಶ್ವ ವಿದ್ಯಾ ನಿಲಯದ ಪದವೀಧರರಾದ ಬಳಿಕ ಬಿ. ಎಲ್. ಪರೀಕ್ಷೆಗೆ ಓದಬೇಕೆಂದಿದ್ದವರು ಮಹಾತ್ಮಾ ಗಾಂಧಿಯವರ ತತ್ತ್ವಗಳ ಮೋಹಕ್ಕೊಳಗಾಗಿ, ಆ ಮಾರ್ಗವನ್ನು ಬಿಟ್ಟು ೧೯೨೧ನೆಯ ಸಾಲಿನಲ್ಲಿ ಸುಪ್ರಸಿದ್ಧ ಕವಿರಾಜ ಶಿರೋಮಣಿ ಶ್ಯಾಮದಾಸ ವಾಚಸ್ಪತಿ ಎಂಬ ವಿದ್ವಾಂಸರಲ್ಲಿ ಸೇವೆ ಮಾಡಿ ಗುರುಮುಖೇನ ಆಯುರ್ವೇದ ಶಾಸ್ತ್ರಾಧ್ಯಯನಕ್ಕಾರಂಭಿಸಿದರು. ಅದರಲ್ಲಿಯೇ ಲೀನರಾಗಿ ಆಯುರ್ವೇದ ಶಾಸ್ತ್ರಿ ಉಪಾಧಿಯನ್ನು ಪಡೆದ ಬಳಿಕ, ಕೆಲ ಕಾಲ ಶ್ಯಾಮದಾಸ ವಾಚಸ್ಪತಿಯವರ ಚಿಕಿತ್ಸೆಯಲ್ಲಿದ್ದ ದಿವಂಗತ ಸನ್ಯಾಸೀಯ ಪಂಡಿತ ಮೋತಿಲಾಲ್ ನವರು ಅವರ ಆರೋಗ್ಯದ ಮೇಲ್ವಿಚಾರಣೆಗಾಗಿ ಇವರನ್ನು ವಾಚಸ್ಪತಿಯವರು ನೇಮಿಸಿದ್ದರು. 'ಜರ್ನಲ್ ಆಫ್ ಆಯುರ್ವೇದ' ಎಂಬ ಇಂಗ್ಲಿಷ್ ಮಾಸಪತ್ರಿಕೆಗೆ ಇವರು ಸಂಪಾದಕರಾಗಿದ್ದರು. ಇವರು ತಮ್ಮ ಗುರುಗಳಾದ ಶ್ಯಾಮದಾಸ ವಾಚಸ್ಪತಿಗಳಿಗೆ ಸಹಾಯಕ ವೈದ್ಯರಾಗಿದ್ದರು. ವೈದ್ಯ ಶಾಸ್ತ್ರ ಪೀಠ ಮತ್ತು ಚಿತ್ತರಂಜನ ಆಸ್ಪತ್ರೆಗಳ ಮೇಲ್ವಿಚಾರಕರಾಗಿದ್ದರು. ಬಿಹಾರಿನ ಭೂಕಂಪದಲ್ಲಿ ಆಯುರ್ವೇದಿಕ್ ಮೆಡಿಕಲ್ ಮಿಶನಿನ ಮುಖಂಡರಾಗಿಯೂ, ೧೯೨೮ರಲ್ಲಿ ಕಲಕತ್ತದಲ್ಲಿ ನೆರೆದ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸಮಯದಲ್ಲಿ ಪ್ರಜ್ವಲಿತ ಕೀರ್ತಿಶಾಲಿಗಳಾಗಿರುವ ಶ್ರೀ ಸುಭಾಸ್‌ಚಂದ್ರ ಭೋಸರ ನೇತೃತ್ವದಲ್ಲಿ ರಚಿತವಾದ ಆಯುರ್ವೇದಿಕ್ ಮೆಡಿಕಲ್ ಕ್ಯಾಂಪಿನ ನೇತೃಗಳಾಗಿಯೂ, ಮಧುಸೂದನ ಜಾತೀಯ ವಿದ್ಯಾಲಯವೆಂಬ ಪ್ರೌಢಶಾಲೆಯ ಪ್ರಧಾನಾಧ್ಯಾಪಕರಾಗಿಯೂ ಜನ ಸೇವೆ ಸಲ್ಲಿಸಿರುವರು. ಎರಡು ಬಾರಿ ನಿಖಿಲ ಭಾರತೀಯ ಆನುವಂಶಿಕ ಆಯುರ್ವೇದಜ್ಞರ ಸಮ್ಮೇಲನಾಧ್ಯಕ್ಷರಾಗಿದ್ದರು. ರಾಜಕೋಟೆ, ಬೆಜವಾಡಗಳಲ್ಲಿ ಕಳೆದ ಎರಡು ವರುಷಗಳಲ್ಲಿ ಸೇರಿದ ನಿಖಿಲ ಭಾರತೀಯ ಆಯುರ್ವೇದ ಮಹಾ ಸಮ್ಮೇಲನ ೩೨, ೩೩ನೆಯ ಅಧಿವೇಶನಗಳಿಗೆ ಅಧ್ಯಕ್ಷರಾಗಿದ್ದು, ಈ ವರುಷವೂ ಏಕ ಮತದಿಂದ ನಿ-ಭಾ-ಆ-ಮ-ಸಮ್ಮೇಲನದ ೩೪ನೆಯ ಅಧಿವೇಶನಕ್ಕೆ ಅಧ್ಯಕ್ಷರಾಗಿ ಮಣಿಪಾಲದಲ್ಲಿ ಮತ್ತೆ ಅಧ್ಯಕ್ಷ ಪೀಠದಲ್ಲಿ ವಿರಾಜಿಸುತ್ತಿರುವರು. ಶುದ್ಧಾಯುರ್ವೇದ ಪ್ರಸಾರವೇ ಅವರ ಜೀವನ ಧ್ಯೇಯ. ಇಂಗ್ಲಿಷ್, ಸಂಸ್ಕೃತ, ಬಂಗಾಲಿ ಮತ್ತು ಹಿಂದೀ ಭಾಷೆಗಳನ್ನು ಚೆನ್ನಾಗಿ ಬಲ್ಲವರಿವರು. ನಿಖಿಲ ಭಾರತ ಆಯುರ್ವೇದದ ಇತಿಹಾಸದಲ್ಲಿ ಏಕ ಸತತವಾಗಿ ೩ ಬಾರಿ ಅಧ್ಯಕ್ಷರಾಗಿ ಆರಿಸಲ್ಪಟ್ಟವರಲ್ಲಿ ಇವರೇ ಮೊದಲನೆಯವರು.

ಆಯುರ್ವೇದದ ಉನ್ನತಿಪಥದಲ್ಲಿ ರುಷ ಅತಿದೊಡ್ಡ ತೊಡಕೆಂದರೆ ಅದರ ನಿಜವಾದ ಅರಿವು ಅನೇಕರಿಗಿಲ್ಲದಿರುವುದು. ರಾಜಕೀಯ ದಾಸ್ಯದಿಂದಾಗಿ ನಮ್ಮ ಬಡ ಭಾರತ ದೇಶವು ಹಲವು ಶತಮಾನಗಳಿಂದ ಕಂಗೆಟ್ಟಿದೆ. ಭಾರತೀಯ ಸಂಸ್ಕೃತಿಯ ಮೂಲ ಅಂಗಗಳಲ್ಲೊಂದಾದ ಸಂಸ್ಕೃತ ಭಾಷೆಯ ಮೇಲೆ ಸರಕಾರದ ವಕ್ರದೃಷ್ಟಿಯಿರುವ ಕಾರಣ ಆ ಸಂಸ್ಕೃತಿ ಮತ್ತು ಅದರ ಶಿಶುವಾದ ಆಯುರ್ವೇದವು ಇಂದ್ರ ಮೂಕ ಜೀವನವನ್ನು ನಡೆಸುತ್ತಿದೆ. ಉಪಯೋಗದಲ್ಲಿಲ್ಲದ ಲೋಹವು ಕುಮೇಣ ಪ್ರಭೆ ಕುಂದಿ, ತುಕ್ಕು ಹಿಡಿಯುವಂತೆ ಆಯುರ್ವೇದದ ಅವಸ್ಥೆಯಾಗಿದೆ. ಆಯುರ್ವೇದವು ಅಶಾಸ್ತ್ರೀಯವೆಂಬ ಭಾವನೆಯೂ ಕೆಲವರಲ್ಲಿ ಉಂಟಾಗಿದೆ. ಆದರೂ, ಇವೆಲ್ಲ ಪರಿಸ್ಥಿತಿಗಳ ನಡುವೆ ಆಯುರ್ವೇದವು ತಲೆಯೆತ್ತಿ ನಿಂತಿರುವುದಾದರೆ, ಜನತೆಗೆ ಅದು ಪ್ರಾಚೀನ ಮಹರ್ಷಿಗಳಿಂದ ಪರಂಪರಾಗತವಾಗಿ ಬಂದಿರುವ ಆಸ್ತಿಯೆಂಬ ವಿಶ್ವಾಸವೊಂದೇ ಅದಕ್ಕೆ ಕಾರಣವೆನ್ನಬಹುದು.

ದೇಶದಲ್ಲಿ ನವಜಾಗೃತಿಯಾದಂತೆಯೇ ಆಯುರ್ವೇದದಲ್ಲಿಯೂ ಇತ್ತೀಚೆಗೆ ಹೊಸಹೊಸ ಅಭಿಪ್ರಾಯಗಳು ತಲೆದೋರಿವೆ. ಈ ಅಭಿಪ್ರಾಯಗಳೊಳಗೆ ಪರಸ್ಪರ ಘರ್ಷಣೆಯೂ ಉಂಟಾಗಿರುವುದು ತಪ್ಪಿಲ್ಲ. ಆದರೆ ವೈದ್ಯಕ ಗಳ ಹಮ್ಮೀಕರಣದ ಪರವಾಗಿ ವಾದಿಸುವಂತಹ ಮಿಶ್ರ ವೈದ್ಯರು ಆಯುರ್ವೇದಕ್ಕೆ ಹಾನಿಯನ್ನು ಮಾಡುತ್ತಿದ್ದಾರೆ ಅದು ಕಾರಣವೇ ಅಂತಹ ಆಯುರ್ವೇದ ಪಂಡಿತರು ತಲೆಯೆತ್ತದಂತೆ ನಾವು ಪ್ರಯತ್ನಿಸಿ, ಆಯುರ್ವೇದ ಕಾಂಗ್ರೆಸ್ಸು ಪ್ರತಿಪಾದಿಸುತ್ತ ಬಂದಿರುವ 'ಶುದ್ಧ ಆಯುರ್ವೇದ ಶಾಸ್ತ್ರ'ದ ಉನ್ನತಿಯ ಕಡೆಗೇನೆ ನಮ್ಮ ಲಕ್ಷ್ಯವನ್ನಿಡತಕ್ಕದು. ಅದೇ ಆಯುರ್ವೇದದ ಉನ್ನತಿಯ ನಿಜವಾದ ಮಾರ್ಗ. 'ಶುದ್ಧ ಆಯುರ್ವೇದ'ವೆಂದೊಡನೆ ಬರೀ ಏಕಾಂಗ ಆಯುರ್ವೇದ ಯಾ 'ಕಾಯ ಚಿಕಿತ್ಸೆ' ಎಂಬುದಾಗಿ ನೀವು ಸಂದೇಹಪಡಬಾರದು. ಆಯುರ್ವೇದ ಎಂಬ ಶಬ್ದದಲ್ಲೇ 'ಅಷ್ಟಾಂಗ ಆಯುರ್ವೇದ'ವು ಅಡಕವಾಗಿದೆ; ಅದೇ ಶಾಸ್ತ್ರೀಯವಾಗಿದೆ. ಪ್ರತಿಯೊಂದು ವೈದ್ಯ ಶಾಸ್ತ್ರವು ತನ್ನ ಸ್ವಂತ ಮಾರ್ಗದಲ್ಲಿ ನಡೆವರೇನೆ, ನಮ್ಮಲ್ಲಿರುವ ಆತ್ಮಹೀನತಾಭಾವ, ನಿರಾಶಾವಾದ, ಅಪಜಯದ ಅಳುಕು,–ಇವೆಲ್ಲ ಮಾಯವಾಗಬಲ್ಲವು. ಇಂತಹ ಸ್ವತಂತ್ರವಾದ ಮಾರ್ಗದಲ್ಲಿ, ಹಲವು ಎಡರು ತೊಡರುಗಳಿವೆ ...ಅನ್ನು ನಾನು ಒಪ್ಪುತ್ತೇನೆ ಆದರೆ ಮೊದಲಿನಿಂದ, ನಾವು ತಪ್ಪುಗಳಾಗದಂತೆ ಜಾಗರೂಕರಾಗಿಟ್ಟುಕೊಂಡು, ಅನ್ಯರಿಂದ ಎರವು ಪಡೆಯದೆ ಅವರನ್ನು ಅನುಕರಿಸುವ ಹವ್ಯಾಸಕ್ಕೆ ಬಲಿಬೀಳದೆ, ಯಾ ಅವರಿಂದ ಅಭಿಪ್ರಾಯ ಚೌರ್ಯ ಮಾಡದೆ, ನಮ್ಮ ಸ್ವಯಂ ಕರ್ತೃತ್ವ ಶಕ್ತಿಯಿಂದ ನಮ್ಮ ಯೋಜನೆ–ಕಾರ್ಯಕ್ರಮಗಳನ್ನು ಮುಂದೊತ್ತಿ ಹೋಗೋಣ. ಶುದ್ಧ ಆಯುರ್ವೇದದ ಸರಿಯಾದ ಬೆಲೆಯರಿಯದ ಅರ್ಧ ಜಾಣರಾದ ಅಧಿಕಾರಿಗಳು ಧೋರಣೆ ಹಾಗೂ ಮೂಲ ತತ್ವಗಳ ಕಡೆಗೆ ಮಾತ್ರ ಗಮನವಿತ್ತು, ಶಾಸ್ತ್ರೀಯ ವಿಷಯಗಳ ಸಾಧನೆಯ ಪಂಡಿತರಿಗೆ ಹಾಗೂ ಆಯುರ್ವೇದ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವನ್ನು ಕೊಡಲಿ ಅವರು ತಮ್ಮ ತಪ್ಪುಗಳನ್ನು ತಿದ್ದಿಕೊಂಡು ತಮ್ಮ ಪಥದಲ್ಲಿ ತಾವೇ ಮುಂದುವರಿಯುತಿರಲಿ. ಆಗ ತಾನೆ ಆಯುರ್ವೇದದ ಕಲ್ಯಾಣವಾದೀತು ಅಲ್ಲದೆ, ಒಂದು ಶಾಸ್ತ್ರದೊಂದಿಗೆ ಮತ್ತೊಂದನ್ನು ಹೊಂದಿಸಿ, ಮೂಲ ತತ್ವಗಳಲ್ಲಿ ಸುದೃಢವಾಗಿರುವ ಆಯುರ್ವೇದದ ಉನ್ನತಿಗೆ ಯಾರೂ ಕಂಟಕ ಪ್ರಾಯರಾಗದಿರಲಿ ಎಂದು ನಾನು ಮುಂದಾಗಿಯೇ ಎಚ್ಚರಿಕೆ ಕೊಡಲು ಬಯಸುತ್ತೇನೆ.

ಆಯುರ್ವೇದವು ತನ್ನದೇ ಆದ ಶಾಸ್ತ್ರೀಯ ರೀತಿಯಲ್ಲಿ ಬೆಳೆದು ಪುನರುಜ್ಜೀವಿಸಬೇಕಾದರೆ ಕನಿಷ್ಠಪಕ್ಷ ೫೦ ವರ್ಷಗಳ ಅವಧಿಯು ಬೇಕಾದೀತೆಂದು ನನ್ನೆಣಿಕೆಯಾಗಿದೆ. ಈ ಅವಧಿಯು ಬಹಳ ದೀರ್ಘವಾಗಿದೆಂದು ನಿಮಗೆ ತೋರಬಹುದು. ಆದರೆ ಅನಂತವಾದ ಕಾಲ ಹಾಗೂ ಆಯುರ್ವೇದದ ಪ್ರಾಚೀನತೆಯನ್ನು ಪರಿಗಣಿಸುವಾಗ, ೫೦ ವರ್ಷಗಳೆನ್ನುವುದು ಸಾಗರದ ಹನಿಯಂತೆಯೇ ಸರಿ. ಅದರ ಪುನರುಜ್ಜೀವನಕ್ಕೆ ಅಕುಲವಾದ ಸಂಪತ್ತು ಕೂಡಾ ಅಗತ್ಯ. ಕೇವಲ ಒಂದು ಸತ್ಯಾನ್ವೇಷಣೆಗೆ ಹಲವು ವರ್ಷಗಳ ಸಾಧನೆಯು ಬೇಕಾಗಿರುವಾಗ ಮತ್ತು ಪೂರ್ಣತೆಯನ್ನು ಹೊಂದಿದ ಎಲ್ಲ ಇತರ ಶಾಸ್ತ್ರಗಳ ತತ್ವಗಳು ಕೊನೆಯಲ್ಲಿ ಆಯುರ್ವೇದವನ್ನೇ ಸೇರುತ್ತವೆನ್ನುವಾಗ–ಅದರ ಸ್ವತಂತ್ರವಾದ ಪುನರುಜ್ಜೀವನಕ್ಕೆ ಇಂತಿಷ್ಟೇ ಅವಧಿಯು ಬೇಕೆಂದು ಹೇಳಲಿಕ್ಕಾಗುವುದಿಲ್ಲ.

ಇತರ ಎಲ್ಲ ಕ್ಷೇತ್ರಗಳಂತೆಯೇ ಆಯುರ್ವೇದದಲ್ಲಿಯೂ ಯುದ್ಧೋತ್ತರ ಯೋಜನೆಗಳ ಮಾತು ಕೇಳಬರುತ್ತಿದೆ. ಆಯುರ್ವೇದದ ಪ್ರತಿನಿಧಿಗಳೆಂದು ಹೇಳಿಸಿಕೊಳ್ಳುವ ಕೆಲವರು ಮುಂದೆ ತಂದಿರುವ ಕೆಲವು ಯೋಜನೆಗಳಂತೂ ತೀರ ಪೊಳ್ಳು ಹಾಗೂ ಸವಿನಾಶದೃಷ್ಟಿಯವುಗಳೆಂದು ನಾನು ಹಲವು ಕಡೆಗಳಲ್ಲಿ ತೋರಿಸಿಕೊಟ್ಟಿದ್ದೇನೆ. ಎಲ್ಲ ಯೋಜನೆಗಳು ವಿಶಾಲ ತಳಹದಿಯ ಮೇಲೆ ರಚಿತವಾಗಿ, ಆಯುರ್ವೇದವು ಏಕರೂಪದಲ್ಲಿ, ಸ್ವತಂತ್ರವಾಗಿ ಬೆಳೆದು ಸಾಂಸ್ಕೃತಿಕವಾಗಿ, ಸುವ್ಯವಸ್ಥಿತವಾಗ ಬೇಕು ಹೊರತು, ವಿಶ್ವವಿದ್ಯಾಲಯಗಳಲ್ಲಿ ಅಲ್ಲೊಂದು ಇಲ್ಲೊಂದು ಆಯುರ್ವೇದ ವಿಷಯಗಳನ್ನಿಟ್ಟು ಅಥವಾ ಎಲೋಪೆತಿಕ್ ಕಾಲೇಜುಗಳಲ್ಲಿ ಕೆಲವು ಆಯುರ್ವೇದ ವಿಷಯಕ ವ್ಯಾಖ್ಯಾನಗಳನ್ನು ನಿಯೋಜಿಸುವುದರಿಂದ ಯಾವ ಪ್ರಯೋಜನವೂ ಸಿಗಲಾರದು. ಅರೆಮನಸ್ಸಿನಿಂದ ಮುಂದೊತ್ತಲ್ಪಡುವ ಅಂತಹ ಯೋಜನೆಗಳಿಂದ ಆಯುರ್ವೇದದ ಕಲ್ಯಾಣವಾಗಲಾರದು. ಆಯುರ್ವೇದದ ಹಿತಚಿಂತಕರಲ್ಲಿ ಹಲವರು ಪ್ರತಿಯೊಂದು ಶಾಸ್ತ್ರಕ್ಕೆ ತನ್ನದೇ ಆದ ವಿಕಾಸ, ಯಾ ಬೆಳವಣಿಗೆಯ ರೀತಿಯಿದೆಯೆಂಬುದನ್ನು ಮರೆತಿರುತ್ತಾರೆ. ಅಂತಹ ಮಹನೀಯರು ಕೇವಲ ರಾಷ್ಟ್ರಹಿತದೃಷ್ಟಿಯಿಂದ ಆಯುರ್ವೇದದ ಮೇಲೆ ಅಭಿಮಾನ ತಾಳಿದರೆ ಸಾಲದು. ಅವರು ಆಯುರ್ವೇದವನ್ನು ಹೃತ್ಪೂರ್ವಕ ಪ್ರೀತಿಸುವಂತೆ ನಾವು ಅವರ ಕಣ್ದೆರೆಯತಕ್ಕದು.

ಯಾವ ಸಾಂಸ್ಕೃತಿಕ ಯಾ ವಿಧಾಯಕ ಕಾರ್ಯಕ್ರಮವು ಸಫಲವಾಗಬೇಕಾದರೂ ಸಂಘಟನೆಯು ಅಗತ್ಯ. ನಮ್ಮ ಹಕ್ಕು ಭಾದ್ಯತೆಗಳನ್ನು ಮರಳಿ ಪಡೆಯಬೇಕಾದರೆ,–ನಮ್ಮ ಧ್ಯೇಯಗಳನ್ನು ಸಾಧಿಸಬೇಕಾದರೆ–ಮೊತ್ತಮೊದಲು ನಮ್ಮ ಮನೆಯನ್ನು ನಾವು ಸರಿಪಡಿಸಬೇಕು. ಅರ್ಥಾತ್ ಆಯುರ್ವೇದ ವೃತ್ತಿಗೆ ಸೇರಿದವರೆಲ್ಲ ಸಂಘಟಿತರಾಗಬೇಕು. ಆಯುರ್ವೇದದ ಸಂದೇಶವನ್ನು ನಾಡಿನ ಎಲ್ಲೆಡೆಗೆ ಮಾತ್ರವಲ್ಲ ಹೊರ ನಾಡುಗಳಿಗೂ ಪಸರಿಸಬೇಕು. ನಮ್ಮ ಎಲ್ಲ ಇದಿರಾಳಿಗಳನ್ನೂ, ಸ್ವಾರ್ಥಿಗಳನ್ನೂ, ವಂಚಕರನ್ನೂ–ಎಲ್ಲ ಬಗೆಯ ಶತ್ರುಗಳನ್ನೂ ಪ್ರತಿಭಟಿಸಿ ಆಯುರ್ವೇದ ಶಾಸ್ತ್ರವನ್ನು ಕಾಪಾಡಬೇಕು. ಇದೇ ನೀವು ಈ ವರ್ಷ ನಿಮ್ಮ ಅಧಿಪತಿಯಾಗಿ ಆರಿಸಿರುವ ನನ್ನಿಂದ ನಿರೀಕ್ಷಿಸಬಹುದಾದ ಆಸುಜ್ಞೆಯಾಗಿದೆ.

(೧೧ನೇ ಪುಟ ನೋಡಿರಿ)

ಮದ್ರಾಸಿನಲ್ಲಿ ೧೯ನೇ ಕನ್ನಡ ಸಾಹಿತ್ಯ ಸಮ್ಮೇಲನ

ಡಾ। ರಾಮರಾವ್–ರಾಜಾಜಿ–ಶ್ರೀ. ಕೈಲಾಸಂ ಭಾಷಣಗಳ ಸಾರ.

ಡಾ। ಯು. ರಾಮರಾಯರ ಸ್ವಾಗತ ಭಾಷಣ

ಮದ್ರಾಸಿನಲ್ಲಿ ನೆಲೆನಿಂತಿರುವ ಮತ್ತು ಕನ್ನಡವೇ ಮನೆ ಮಾತಾಗಿರುವ ಕನ್ನಡಿಗರ ದೀರ್ಘಕಾಲದ ಬಯಕೆಯೊಂದು ಈಗ ನೆರವೇರಿತು. ಆಡಳಿತೆಯ ಮಟ್ಟಿಗೆ ಕರ್ನಾಟಕವು ಹಲವು ಪ್ರಾಂತ್ಯಗಳಲ್ಲಿ ಹಂಚಿಬಿದ್ದಿದೆ; ಕೆಲವೆಡೆಗಳಲ್ಲಿ ತನ್ನ ಭಾಷಾ ಭಗಿನಿಗಳೊಡನೆ ಕನ್ನಡವು ಸ್ಪರ್ಧಿಸಬೇಕಾಗಿದೆ. ಆದರೆ ಕನ್ನಡಿಗರಲ್ಲೀಗ ಒಂದು ಹೊಸ ಚೇತನ ಮೂಡಿದೆ; ನವಜಾಗ್ರತಿ ಮೊಳೆತಿದೆ. ಇದಕ್ಕೆ ಇಂದಿನ ಸಭೆಯೇ ನಿದರ್ಶನ. ಈ ಜಾಗ್ರತಿಯು ಭಾಷಾವಾರು ಪ್ರಾಂತ್ಯಗಳ ಫಲಬಿಡುವದು ನಿಶ್ಚಯ. ಕರ್ನಾಟಕವು ಯಾವ ಕೊರತೆಯೂ ಇಲ್ಲದ ದೇಶ. ಕರ್ನಾಟಕದ ಏಕೀಕರಣಕ್ಕಾಗಿ—ಅದರ ವೈಶಿಷ್ಟ್ಯಕ್ಕಾಗಿ—ಪ್ರತಿಯೊಬ್ಬ ಕನ್ನಡಿಗನೂ ಹೋರಾಡಬೇಕು. ಏಕೀಕರಣವಿಲ್ಲದೆ ಕನ್ನಡಿಗರಿಗೆ ಶುಭ್ರ ಭವಿಷ್ಯವಿಲ್ಲ. ಚೆನ್ನಪಟ್ಣ (ಮದ್ರಾಸ್)ದಲ್ಲಿ ಸಮ್ಮೇಲನ ಕರೆದುದು ಅಸಮರ್ಪಕವಲ್ಲ. ಇದು ಚೆನ್ನಪ್ಪ ನಾಯಕನ ಹೆಸರು ತಾಳಿಕೊಂಡ ನಗರ. ವಿಜಯನಗರ ಸಾಮ್ರಾಜ್ಯದ ಓರ್ವ ಚೇಫ್ತಾನನೇ ಈ ನಾಯಕ. ಮದ್ರಾಸ್ ಮತ್ತು ಕರ್ನಾಟಕಗಳೊಳಗೆ ಕೊಂಡಿಯಿತ್ತು ಎಂಬುದಕ್ಕೆ ಚರಿತ್ರೆಯಲ್ಲಿ ಎಷ್ಟೋ ದಾಖಲೆಗಳಿವೆ. ಆಂಧ್ರರು ಮತ್ತು ತಮಿಳರೂ ನೋಡಲಾಗುವಂತೆ ಕರ್ನಾಟಕದ ಸಮಸ್ಯೆಗಳ ಮೇಲೆ ಈ ಸಮ್ಮೇಲನದಿಂದ ಬೆಳಕುಬೀಳುವ ಮತ್ತೊಂದು ಉಪಕಾರವೂ ಆಗಿದೆ. ಮದ್ರಾಸಿನ ಕನ್ನಡಿಗರಿಗೆ ತಮ್ಮ ಸ್ವಭಾಷಾಜ್ಞಾನವನ್ನು ವೃದ್ಧಿಸಿಕೊಳ್ಳುವ ಅನುಕೂಲತೆಗಳು ಕಡಿಮೆ. ಅವರು ಆಂಧ್ರರು ಅಥವಾ ತಮಿಳರೊಂದಿಗೆ ಸೇರಿಹೋಗುವ ಅಪಾಯ ಕೂಡಾ ಇದೆ. ಕನ್ನಡ ಕೂಸುಗಳಿಗಾಗಿ ಪ್ರಾಥಮಿಕ ಶಾಲೆಗಳಿಲ್ಲ; ಕಾಲೇಜುಗಳಲ್ಲಿ ಕನ್ನಡವು ದ್ವಿತೀಯ ಭಾಷೆಯಾಗಿ ಅಂಗೀಕಾರ ಪಡೆದಿಲ್ಲ; ಅ. ಭಾ. ಆಕಾಶವಾಣಿಯ ಮದ್ರಾಸ್ ಕೇಂದ್ರವು ಕನ್ನಡವನ್ನು ಸ್ವೀಕರಿಸಿಲ್ಲ. ಇವು ಮತ್ತು ಇತರ ಸಮಸ್ಯೆಗಳು ಈ ನಗರದ ಕನ್ನಡಿಗರನ್ನು ಇದಿರಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಾ ಕನ್ನಡಿಗರ ಕೇಂದ್ರ ಸಂಸ್ಥೆಯಾಗಬೇಕು. ಎಲ್ಲಾ ಕನ್ನಡಿಗರ ಕಷ್ಟ ಪರಿಹಾರ ಅದರ ಮೂಲಕ ಆಗಬೇಕು. ಬಳ್ಳಾರಿಯ ಜನರು ಕನ್ನಡ ಧ್ವಜವನ್ನೆತ್ತಿ ಹಿಡಿದಿರುವದು ಹೆಗ್ಗಳಿಕೆಯ ವಿಷಯ. ಅಲ್ಲಿಯ ವೀರಶೈವ ಕಾಲೇಜಿನಲ್ಲಿ ಕನ್ನಡವು ಐಚ್ಛಿಕವಾಗಿ ಪರಿಗ್ರಹಿಸಲ್ಪಟ್ಟಿದೆ. ಆದರೆ ಕರ್ನಾಟಕದ ಬೇರೆ ಭಾಗಗಳು ಕೊಡಬೇಕಾದಷ್ಟು ಬೆಂಬಲವನ್ನು ಬಳ್ಳಾರಿಗೆ ಕೊಡುತ್ತಿಲ್ಲ. ಮಂಗಳೂರು ಮತ್ತು ಅನಂತಪುರಗಳು ಬಳ್ಳಾರಿಯ ಮಾದರಿಯನ್ನನುಕರಿಸುವವೆಂದು ನನ್ನಾಶೆ. ಕನ್ನಡ ಪಂಡಿತರು ಮತ್ತು ಲೇಖಕರು, ಕನ್ನಡ ಭಾಷಾ ಭಂಡಾರವನ್ನೂ ಆ ಮೂಲಕ ಕರ್ನಾಟಕತ್ವವನ್ನೂ ಬೆಳೆಸುವಂತೆ ಅವರಿಗೆ ವಿಶೇಷ ಪ್ರೋತ್ಸಾಹ ಕೊಡಬೇಕೆಂದು ನಾನು ಒತ್ತಾಯಪೂರ್ವಕ ಕೇಳಿಕೊಳ್ಳುತ್ತೇನೆ.

ಉದ್ಘಾಟಕ ರಾಜಾಜಿಯ ಕನ್ನಡ ಭಾಷಣ.

ನನಗೆ ಕನ್ನಡ ಭಾಷೆ ಗೊತ್ತಿದೆ. ತಮಿಳು, ತೆಲುಗು, ಕನ್ನಡಗಳು ನಿತ್ಯದ ಮಾತಾಗಿದ್ದ ಜಿಲ್ಲೆಯಲ್ಲಿ ಹುಟ್ಟಿದವ ನಾನು. ನನ್ನ ಉಚ್ಚ ಶಿಕ್ಷಣ ಕನ್ನಡ ಊರಾದ ಬೆಂಗಳೂರಲ್ಲಾಗಿತ್ತು. ನಾನು ಕನ್ನಡ ಸಾಹಿತಿಯಲ್ಲವಾದರೂ ಅದರ ಸೌಂದರ್ಯಗಳನ್ನರಿಯದವನಲ್ಲ. ನಮ್ಮ ಜೀವನ, ಸಂಸ್ಕೃತಿ ಮತ್ತು ಭಾಷೆಗಳು ಸಾವಿರಾರು ವರ್ಷಗಳಿಂದ ಒಟ್ಟಿಗೆ ಹೆಣೆದುಕೊಂಡೇ ಬಾಳಿವೆ. ನಮ್ಮ ಆವೇಗ, ಸುಖ, ದುಃಖ, ಇವಾವುದನ್ನಾದರೂ ನಮ್ಮ ಸ್ವಭಾಷೆಯ ಸಾಹಿತ್ಯದ ಮೂಲಕವಲ್ಲದೆ ಬೇರೆ ಯಥಾಪ್ರತಿ ಮೂಡಿಸುವದು ಅಸಾಧ್ಯ. ಸಾಹಿತ್ಯದಲ್ಲಿ ಸವಿಯಿದೆ. ಆ ಸವಿಯಲ್ಲಿ ಪೂರ್ಣತೆ ಮತ್ತು ಸತ್ಯವಿದೆ; ಇಂತಹ ಸಾರವನ್ನು ನಮ್ಮ ಸಭಾಷೆಯ ಸಾಹಿತ್ಯದಿಂದಲ್ಲದೆ ಅನ್ಯಥಾ ಸವಿಯುವದು ಅಸಾಧ್ಯ. ಒಂದು ಭಾಷೆಯು ಪುಷ್ಟಿಯಾಗಿ—ಬಹುಮುಖವಾಗಿ—ಬೆಳೆಯ ಬೇಕಾದರೆ ಎಲ್ಲದರಲ್ಲೂ ನಾವು ಆ ಭಾಷೆಯನ್ನೇ ಉಪಯೋಗಿಸಬೇಕು. ನಿರ್ವಾಹವಿಲ್ಲದಾಗ ಹೊರತು ವಿದೇಶೀಯ ಅನ್ಯ ಸ್ವತಯಾರಿ ಭಾಷೆಯನ್ನು ಬಳಸಬಾರದು. ಉಪಯೋಗವೇ ಬೆಳವಣಿಗೆ ಮತ್ತು ಪುಷ್ಟಿಗೆ ಕಾರಣವೆಂಬುದು ಪ್ರಕೃತಿ ನಿಯಮ. ಎಲ್ಲಾ ವಿಷಯಗಳಲ್ಲೂ ಇದೇ ಸತ್ಯ. ಆದರೆ ಕೆಲವು ನಿರ್ಬಂಧಗಳೆಡೆಯಲ್ಲಿ ಮಾತ್ರ ನಾವು ನಮ್ಮ ಸ್ವಭಾಷೆಗಳನ್ನು ಉಪಯೋಗಿಸಿ ಅವುಗಳು ಕ್ಷೀಣಿಸುವಂತೆ ಮಾಡಿದ್ದೇವೆ. ನಮ್ಮೀ ತಪ್ಪಿನಿಂದ ಅಸಡ್ಡೆಯಿಂದಾದ ಭಾಷೆಯ ದೌರ್ಬಲ್ಯವನ್ನು ನಾವೇ ದೂರುತ್ತಿದ್ದೇವೆ. ಇದು ಲಜ್ಜಾವಹ ತಕ್ಸೀರು. ನಮ್ಮ ಭಾಷೆಗಳ ಸಾರ ಭಂಡಾರ ಅಲ್ಲಿ ಕಾಯುತ್ತಾ ಬಿದ್ದಿದೆ. ನಾನದನ್ನು ತಮಿಳಿನಲ್ಲಿ ಕಂಡಿದ್ದೇನೆ. ನೀವು—ಪ್ರತಿಯೊಬ್ಬ ಕನ್ನಡಿಗನೂ—ಕನ್ನಡದಲ್ಲಿ ಅದನ್ನೇ ಕಂಡಿದ್ದೀರೆಂದು ನೆನಸುತ್ತೇನೆ. ಕಲೆ ಮತ್ತು ಸಾಹಿತ್ಯಗಳ ಏಕೀಕರಣವು ಆಡಳಿತೆಯ ಗಡಿಗಳ ಏಕೀಕರಣಕ್ಕಿಂತ ಹೆಚ್ಚಿನದು. ಕನ್ನಡ ಭಾಷೆಯ ಮೂಲಕ ಅಖಿಲ ಕರ್ನಾಟಕವು ಒಂದೇ. ಕನ್ನಡ ಭಾಷಾ ಭಂಡಾರವನ್ನು ಹೆಚ್ಚಿಸುವದರಲ್ಲಿ ನೀವು ನಿರತರಾಗಿಬಿಟ್ಟರೆ, ಕರ್ನಾಟಕದ ಏಕೀಕರಣದ ಮಹಾ ಶಕ್ತಿಯೇ ನೀವಾಗುವಿರಿ. ಕರ್ನಾಟವು ಒಂದೇ ಆಗಿದೆ. ಅಭೇದ್ಯವಾಗಿದೆ; ಹಾಗೆಯೇ ಭಾರತ ಕೂಡಾ; ಅಂತೆಯೇ ದಕ್ಷಿಣ ದೇಶವೂ ಆಡಳಿತೆ ಅಥವಾ ರಾಜಕೀಯಗಳಲ್ಲಿ ಭಿನ್ನತೆಯಿದ್ದರೂ ಯಥಾರ್ಥವಾದರೆ ತಮಿಳು, ತೆಲುಗು, ಕನ್ನಡ ಮತ್ತು ಮಲೆಯಾಳಗಳು ಒಂದೇ ಭಾಷೆ. ಮುಂದಿನ ಜೀವನದ ಎಲ್ಲಾ ಉಪಯೋಗಕ್ಕೂ ಬೇಕಾದ ನರೋಪದ್ರವೀ ಗಹನ ವಿಷಯಗಳನ್ನು ಕಲಿಯುವದರಲ್ಲೇ ನಾವು ನಮ್ಮ ಆಯುಷ್ಯದ ಬಹಳ ವರುಷಗಳನ್ನು ವಿಶ್ವ ವಿದ್ಯಾಲಯಗಳಲ್ಲಿ ವ್ಯಯಿಸುತಿದ್ದೇವೆ. ಭಾವೀ ಧುರೀಣರಾಗಬಲ್ಲ ಯುವಕ ಯುವತಿಯರು ತಮ್ಮ ನೆರೆಯ ಮತ್ತು ಆಸುಪಾಸಿನ ಭಾಷೆಗಳನ್ನು ಬಲ್ಲವರಿರುವದು ರಾಷ್ಟ್ರೀಯ ಮತ್ತು ಸಾಮಾಜಿಕ ಪುನರ್‍ರಚನೆಗೆ ಅಗತ್ಯ.

ಶ್ರೀ. ಕೈಲಾಸಂ ಅಧ್ಯಕ್ಷ ಭಾಷಣ

ನನಗೆ ತಾವು ತೋರಿಸಿದ ಗೌರವ ನಮ್ಮ ನಾಡಿನ ನಾಟಕ, ಪಾಠಕ-ನಾಗತ್ತೆ, ಪೋಲಿ ಕಿಟ್ಟಿಗಳಿಗೆ ಸಂದ ಗೌರವ. ನಾನೋ ಬರಿ ನಿಮಿತ್ತ! ಕಲೆ ಯಾವುದನ್ನೂ ವ್ಯಾವಹಾರಿಕವಾದ್ದನ್ನು ಸಾಧಿಸಲು ಕಂಕಣ ಕಟ್ಟುವದಿಲ್ಲ. ಆನಂದವೇ ಅದರ ಗಮ್ಯ. ಉಪದೇಶ, ಸಮಾಜ ಸುಧಾರಣೆ, ರಾಜಕೀಯ ಪ್ರಚಾರ—ಯಾವುದೂ ಅದರ ಕೆಲಸವಲ್ಲ. ಯಾವುದೋ ಅವ್ಯಕ್ತ ರೀತಿಯಲ್ಲಿ ಅವೆಲ್ಲವೂ ಸಾಹಿತ್ಯದಿಂದ ಆಗಬಹುದು; ಆಗುತ್ತಲೇ ಇದೆ. ರಾಮಾಯಣದಿಂದ ಏಕದಾರ ವ್ರತ, ಸತ್ಯಸಂಧತೆ, ಭ್ರಾತೃಪ್ರೇಮ, ಪರದಾರ ವಿಮುಖತೆಗಳ ಪಾಠ ಓದುವವರ ಮನಸ್ಸಿನಲ್ಲಿ ಮಿಂಚಿನ ಹಾಗೆ ಹೊಳೆದುಬರಬಹುದು. ಆದರೆ ವಾಲ್ಮೀಕಿಯ ಉದ್ದೇಶ ಆ ಪಾಠ ಕಲಿಸುವದಲ್ಲ. ಅದಕ್ಕಾಗಿ ಇಷ್ಟು ದೊಡ್ಡ ಮಹಾ ಕಾವ್ಯ ಬರೆಯಬೇಕಾಗಿರಲಿಲ್ಲ. ತನ್ನ ಅಭಿರುಚಿಗೆ ಅಪ್ರತಿಮ ವಿಲಕ್ಷಣ ಎಂದು ಕಂಡುಬಂದ ಕೆಲವು ಪಾತ್ರಗಳನ್ನು ಸೃಷ್ಟಿಮಾಡಿ ಆದಿಕವಿ ಅದಕ್ಕೆ ಜೀವ ತುಂಬಿದ. ಅದ್ದರಿಂದ ಸತ್ಯಸಂಧನಲ್ಲದವನಿಗೂ ರಾಮ ಬೇಕು; ಅತಿ ಕಾಮಿಯಾದವನಿಗೂ ರಾಮಾಯಣ ಇಷ್ಟ; ಬಹು ಪತ್ನೀಕನಿಗೂ ಅಷ್ಟೆ.

ಕಲೆಯು ಅವತಾರ ಮಾಡಿಸಿದ ಪಾತ್ರಗಳು ಎಷ್ಟೆಷ್ಟು ಅಪ್ರತಿಮವಾದರೆ ಆ ಕಲೆಯೂ ಅಷ್ಟಷ್ಟು ಶ್ರೇಷ್ಠವಾಗುತ್ತದೆ. ಹಾಗಲ್ಲದೆ ಅಧಮ ಪಾತ್ರಗಳನ್ನು ರೂಪಿಸಿದರೆ—ಆ ಕಾವ್ಯ ಪುರಾತನವಿರಲಿ, ಆಧುನಾತನವಿರಲಿ — ಕಾವ್ಯ ಊನವಾಗಿ ಕಾವ್ಯೋದ್ದೇಶವಾದ ಆನಂದಾನುಭವಕ್ಕೇ ವಿಘ್ನವಾಗುತ್ತದೆ. ಇದಕ್ಕೆ ಯಾರ ಸಮರ್ಥನೆಯೂ ಬೇಡ. ಕಾಲಕ್ರಮದಲ್ಲಿ ಆಯಾ ಗ್ರಂಥಗಳಿಗೆ ಸಿಕ್ಕುವ ಮನ್ನಣೆಯೇ ಸಮರ್ಥನೆ. ಜನರ ಜೀವನದ ರಸಭಾವದ ಬೀಜ ಕವಿಯ ಅನುಭೂತಿಯ ಬಸಿರಿನಲ್ಲಿ ನಿಂತು, ಮಾಗಿ ಹೊರಹೊಮ್ಮಿದಾಗ ಅದು ಹೊಸ ಬದುಕು, ಹೊಸಸೃಷ್ಟಿ. ಬದುಕಿನಲ್ಲಿ ಮಸುಕು ಮಸುಕಾಗಿ ಕಾಣಬರುವ ಜನ ನಾಟಕದಲ್ಲಿ ಕಾವ್ಯದಲ್ಲಿ ನಿಚ್ಚಳವಾಗಿ ಮೈತುಂಬಿಕೊಂಡು ಬರುತ್ತಾರೆ. ಜನರ ಮಾತಿನಲ್ಲಿ, ಅಲ್ಲಿ ಇಲ್ಲಿ ಆಗ ಈಗ ಬಿಡಿಬಿಡಿಯಾಗಿ ಕೇಳಿ ಬರುವ ಒಂದು ಬಗೆಯ ವಿಲಕ್ಷಣ ಧಾಟಿ ಕಾವ್ಯದಲ್ಲಿ ನೂಲಿನಂತೆ ನೀಳಕ್ಕೂ ಸೂತುಕೊಂಡು ಬರುತ್ತದೆ. ಅವರಿವರಲ್ಲಿ ಸೂಕ್ಷ್ಮವಾಗಿ ಕಾಣುವ ಗುಣಹೀನತೆ ಒಟ್ಟಿಗೆ ಹೊಸೆದುಕೊಂಡು ಹುರಿಯಾಗಿ ಹಾವಿನಂತೆ ಹೆಡೆಯೆತ್ತುತ್ತದೆ. ಆಗ ಕಾಣುವ ಗುಣಸಂಪನ್ನತೆ ಒತ್ತಟ್ಟಿಗೆ ಸೇರಿ ವ್ಯಕ್ತವಾಗುತ್ತದೆ ಮೈಯೊಳಗಿನ ರೋಗಾಣು ಬರೀ

(ಏನೇ ಪುಟ ನೋಡಿರಿ)



Approved firm by the Govt. of Mysore
Certified by the Agent of the Govt. of Cylone Indian.

"New Year Greetings".

While wishing all our patrons and friends a Happy and Prosperous NEW YEAR, we take this opportunity to thank them for their co-operation and helpful spirit which has enabled us to serve them.

We look forward to more opportunities that will bring us closer in the coming year and strengthen the existing ties.

ESTD 1906.

CANARA BANK LIMITED

(Incorporated in British India liability of Members Limited.)

ಕ. ಸಾ. ಸಮ್ಮೇಲನದ ಮದ್ರಾಸ್ ಅಧಿವೇಶನ

೧೯ನೇ ಕನ್ನಡ ಸಾಹಿತ್ಯ ಸಮ್ಮೇಲನವು ದಶಂಬರ ತಾ. 26, 27, 28ರಲ್ಲಿ ಇದೀಗ ಮೊದಲ ಬಾರಿ ಮದ್ರಾಸಿನಲ್ಲಿ ಜರಗಿತು. ಮಾನ್ಯ ಡಾ. ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯು ಏರ್ಪಡಿಸಿದ್ದ ವ್ಯವಸ್ಥೆಗಳು ತೃಪ್ತಿಕರವಿದ್ದುವು. ಕರ್ನಾಟಕದ ಸರ್ವಕಡೆಗಳಿಂದ ಪ್ರತಿನಿಧಿಗಳೂ ಪ್ರೇಕ್ಷಕರೂ ಆಗಮಿಸಿದ್ದರು ಮದ್ರಾಸ್ ನಾಗರಿಕರೂ ನೆರೆದಿದ್ದರು. ಸುಮಾರು ಸಾವಿರ ಮಂದಿ ಸ್ತ್ರೀಪುರುಷರಿಂದ ಸಭೆ ರಂಜಿಸುತಿತ್ತು. ಸಾಧಾರಣ 500ಮಂದಿ ಪ್ರತಿನಿಧಿಗಳು ಹಾಜರಿದ್ದರು. ಇವರಲ್ಲಿ ಅರೆವಾಸಿ ಮೈಸೂರವರು. ಆ ಪೈಕಿ 50ಮಂದಿ ಮಹಿಳೆಯರು. ಪತ್ರಿಕಾ ಪ್ರತಿನಿಧಿಗಳಾಗಿಯೂ ಇಬ್ಬರು ಮಹಿಳೆಯರಿದ್ದರು. ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ಇಂತಹ ಪರಿಮಾಣದಲ್ಲಿ ಸ್ತ್ರೀಸಹಕಾರ ಈ ಮೊದಲು ದೊರೆತಿರಲಿಲ್ಲ. ಪ್ರಸಿದ್ಧ ಕನ್ನಡ ಸಾಹಿತಿಗಳಲ್ಲಿ ಹೆಚ್ಚಿನವರು ಆಗಮಿಸಿದ್ದರು. ಕಟುವಿಮರ್ಶಕನಿಂದಾದರೂ ಶಹಭಾಸ್ ಪಡೆಯುವ ರೀತಿಯಲ್ಲಿ ಸಮ್ಮೇಲನ ಸರ್ವವಿಧದಿಂದಲೂ ಯಶಸ್ವಿಯಾಯಿತು.

ಮೊದಲನೇ ದಿನ

ಮದ್ರಾಸ್ ನಗರದ ಪುರಸವಾಲ್ಕಮಿನಲ್ಲಿರುವ ಸರ್. ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲಿನ ವಿಶಾಲ ಸಭಾಭವನವೇ ಸಮ್ಮೇಲನ ಸ್ಥಳ. ತಾ. 26ನೇ ಮುಂಜಾನೆ ಸಮ್ಮೇಲನಾಧ್ಯಕ್ಷರ ಮೆರವಣಿಗೆ ಪ್ರಮುಖರನ್ನು ಮುಂದಿಟ್ಟುಕೊಂಡು ದಾಸಭವನದಿಂದ ಹೊರಟು ಸಮ್ಮೇಲನರಂಗಕ್ಕೆ ಬಂದು ಮುಟ್ಟಿತು. ಅಲ್ಲಿಯ ಪಟಾಂಗಣದಲ್ಲಿ ಅಧ್ಯಕ್ಷ ಕೈಲಾಸಂ ಸ್ವಯಂ ಸೇವಕರ 'ಗಾರ್ಡ್ ಓಫ್ ಓನರ್' ಸ್ವೀಕರಿಸಿ ಕನ್ನಡ ಬಾವುಟವನ್ನೇರಿಸಿದರು. ಐದೇ ಮಿನಿಟುಗಳಲ್ಲಿ ಜಯಕಾರಗಳ ನಡುವೆ ಉದ್ಘಾಟಕ ರಾಜಾಜಿಯು ಆಗ... ರಾಜಾಜಿಗೆ ಕೈಲಾಸಂ ದಂಡಪ್ರಣಾಮ ಮಾಡಿದರು. ಕುಮಾರಿ ಪಿ. ಜಯವತಿ ದೇವಿ ಪ್ರಾರ್ಥನೆ ಮತ್ತು ಸ್ವಾಗತ ಪದ್ಯ ಹಾಡಿದರು, ಬಳಿಕ ಡಾ| ಯು. ರಾಮರಾಯರ ಸ್ವಾಗತ ಭಾಷಣವಾಯಿತು. ಶುಭಾಶಯ ಸಂದೇಶಗಳನ್ನು ಪ್ರಧಾನ ಕಾರ್ಯದರ್ಶಿಗಳೋದಿದ ಮೇಲೆ ರಾಜಾಜಿ ಸಮ್ಮೇಲನವನ್ನು ತೆರೆದರು. ಅವರ ಬಾಯಿಯಿಂದ ಹೊರಬಿದ್ದ ಪ್ರಥಮ ಕನ್ನಡ ಶಬ್ದವೇ ಸಭಿಕರಲ್ಲಿ ಹರ್ಷೋದ್ರೇಕವುಂಟು ಮಾಡಿ ಕರತಾಡನವೆಬ್ಬಿಸಿತು. ನಾಲ್ಕೈದು ವಾಕ್ಯಗಳನ್ನು ಓದಿದ ಮೇಲೊಮ್ಮೆ 'ಸುಮಾರಾಗಿದೆಯೋ?' ಎಂದು ರಾಜಾಜಿ ಪ್ರಶ್ನಿಸಿದರು. 'ಚೆನ್ನಾಗಿದೆ; ಚೆನ್ನಾಗಿದೆ. ಸಾಗಲಿ' ಎಂದು ಸಭೆ ಏಕಕಂಠದಿಂದ ಪ್ರೋತ್ಸಾಹಿಸಿತು.

ಅಧ್ಯಕ್ಷ ಶ್ರೀ ತ್ಯಾಗರಾಜ ಪರಮಶಿವ ಕೈಲಾಸಂ

ಇವರ ಪರಿಚಯವನ್ನು ಸಮ್ಮೇಲನದ ಉಪಾಧ್ಯಕ್ಷ ಮಾಸ್ತಿಯವರು ಸರಸ ವಾಣಿಯಲ್ಲಿ ಮಾಡಿಕೊಟ್ಟರು. 'ಕೈಲಾಸಂ ಗುರುತ ನಾನು ಮಾಡಿಕೊಡಬೇಕಾಗಿಲ್ಲ. ಆ ಪರಿಚಿತನನ್ನು ಹಿಡಿದು ನಿಲ್ಲಿಸಿ 'ಲೋ ನೋಡು ನನ್ನನ್ನು' ಎನ್ನುವ ಧಿಟ್ಟತನ ಕೈಲಾಸಂರದು. ಅವರನ್ನು ಹಿಡಿದು ತರುವದು ಕಷ್ಟ. ಹೋದ ಸಲ ತಂಬೇಕೆಂದರೆ ಕೈಯಿಂದ ನುಸುಳಿ ಹೋದರು. ಈ ಸಲ ಜುಲುಮೆಯಿಂದ ತಂದಿದ್ದೇವೆ. ಹಗ್ಗ ಮಾತ್ರ ಕಟ್ಟಿಲ್ಲ ಇವರು ಪುಸ್ತಕ ಬರೆದಿದಾರೆ; ಬಣ್ಣ ಬಳೆದಿದಾರೆ; ವೇಷಹಾಕಿದಾರೆ-ಕೈಲಾಸಂರದು ಸರ್ವ ವಿಧದ ಸೇವೆ'— ಎಂದರು. ಆ ಮೇಲೆ ಸ್ವಾಗತಾಧ್ಯಕ್ಷರಿಂದ ಬಿದ್ದ ಪುಷ್ಪಹಾರಾಲಂಕೃತ ಕೈಲಾಸಂ ಕಂಠ ಕನ್ನಡ ವಾಣಿಯನ್ನು ನಿನದಿಸಿತು. 40ಮಿನಿಟುಗಳ ತನಕ ಅಧ್ಯಕ್ಷ ಭಾಷಣವನ್ನು ಕೇಳುತಿದ್ದ ಸಭೆಗೆ ಅದರ ಚುಚ್ಚು ಹಾಸ್ಯದಿಂದ ಆಗಾಗ 'ಕಿಚುಕುಳಿ' ಯಾಗುತಿತ್ತು 'ಕೊಂಬೆಯ ಮೇಲೆ ಕುಳಿತು ಜನರ ನಿತ್ಯ ವ್ಯವಹಾರಗಳನ್ನು ಕಂಡು ಅದನ್ನೇ ನಾಟಕಗಳ ಮೂಲಕ ಯಥಾವತ್ ಅಣಕಿಸುವ ಮಂಗ ನಾನು' ಎಂದರು ಕೈಲಾಸಂ. ಆಂಧ್ರ ಮಹಾ ಸಭೆಯ ಪರವಾಗಿ ಶ್ರೀ. ಕೆ. ಆರ್. ಕೋಟೇಶ್ವರರು ಸಮ್ಮೇಲನವನ್ನು ಸ್ವಾಗತಿಸಿದರು. ಒಂದು ವಿಷಯ ನಿಯಾಮಕ ಸಮಿತಿಯ ರಚನೆಯೊಂದಿಗೆ ಆ ದಿನದ ಅಧಿವೇಶನ ಮುಗಿಯಿತು.

ಪ್ರದರ್ಶನ

ಅಂದು ಅಪರಾಹ್ನ ಸಮ್ಮೇಲನದ ಪ್ರದರ್ಶನವು ಶ್ರೀ ಕೈಲಾಸಂರಿಂದ ತೆರೆಯಲ್ಪಟ್ಟಿತು. ವರ್ತಮಾನ ಪತ್ರಿಕೆ ಮತ್ತು ಪಹಿಗಳು, ಗ್ರಂಥಗಳು, ಚಿತ್ರ, ತೈಲಚಿತ್ರ, ಕೈಗಾರಿಕೆಗಳು—ಇತ್ಯಾದಿಗಳಿಂದ ಪ್ರದರ್ಶನವು ಕರ್ನಾಟಕದ ಕಲಾ ಭಂಡಾರವಾಗಿ ರಾಜಿಸುತಿತ್ತು.

ಮಹಿಳಾ ಸಮ್ಮೇಲನ

ಅಂದೇ ಅಪರಾಹ್ನ ಶ್ರೀಮತಿ ಟಿ. ಸರ್ವಮಂಗಳಾಂಬ ವೀರ ಮಲ್ಲಪ್ಪ, ಇವರ ಅಧ್ಯಕ್ಷತೆಯಲ್ಲಿ ಕನ್ನಡ ಮಹಿಳಾ ಸಮ್ಮೇಲನ ನಡೆಯಿತು. ಶ್ರೀಮಂದಾಕಿನಿ ಬಾಯಿಯವರು ಸ್ವಾಗತ ಭಾಷಣವಿತ್ತರು. ಅಧ್ಯಕ್ಷೆಯರು ಸುಶಿಕ್ಷಿತ ಕನ್ನಡಿತಿಯರಲ್ಲಿರುವ ಸ್ವಭಾಷಾ ದ್ರೋಹವನ್ನು ಖಂಡಿಸಿ ಮಾತೃಭಾಷೆಯನ್ನೇ ಎಲ್ಲಾ ಸಂದರ್ಭಗಳಲ್ಲೂ ಆಡತಕ್ಕದ್ದೆಂದರು. ಹಲವರ ಭಾಷಣ, ಗಾಯನ, ಮತ್ತು ಕವಿತಾ ವಾಚನಗಳು ನಡೆದವು.

ಎರಡನೇ ದಿನ

ತಾ. 27ನೇ ಮುಂಜಾನೆಯ ಸಮ್ಮೇಲನವು ಪ್ರಥಮಾರ್ಧ ಡಾ| ಯು. ರಾಮರಾವ್ ಮತ್ತು ಕೊನೆಯರ್ಧ ಶ್ರೀ. ಕೈಲಾಸಂ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಆಧುನಿಕ ಕವಿತಾ ವಾಚನಗಳೇ ಅಂದಿನ ಮುಖ್ಯ ಕಾರ್ಯಗಳಾಗಿದ್ದುವು. ಶ್ರೀ ಪುಟ್ಟಪ್ಪನವರ ಕವಿತೆಗಳನ್ನು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಶ್ರೀಗಳಾದ ಭೂಪಾಲಂ, ವ್ಯಾಸರಾವ್, ಶಂಭು ಭಟ್ಟ, ದೊಡ್ಡಣ್ಣ ಗೌಡ, ಕುಮಾರಿ ಶಾರದಾ ಮತ್ತಿತರರು ಕಿರಿಗವನ, ನೀಳ್ಗವಿತೆ, ಲಾವಣಿ ಇತ್ಯಾದಿಗಳನ್ನು ಹಾಡಿದರು. ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಕರ್ನಾಟಕ ಏಕೀಕರಣದ ಕುರಿತು ಬೋಧಪ್ರದ ಭಾಷಣವಿತ್ತರು.

ಬರೆಹಗಾರರ ಸಮ್ಮೇಲನ

ಅಂದು ಅಪರಾಹ್ನ ಪ್ರೊಫೆಸರ್ ಎಸ್. ವಿ. ಪಲ್ಯಾಡರ ಅಧ್ಯಕ್ಷತೆಯಲ್ಲಿ ಕನ್ನಡ ಲೇಖಕರ ಸಭೆ ಸೇರಿತು. ಶ್ರೀ ದೊಡ್ಡಣ್ಣಗೌಡರ ಪ್ರಾರ್ಥನೆಯಾಯಿತು. ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಅಧ್ಯಕ್ಷರ ಪರಿಚಯಮಾಡಿಕೊಟ್ಟ ಮೇಲೆ ಅಧ್ಯಕ್ಷರು ಅನುಭವ ಪೂರ್ಣ ಅಮೋಘ ಭಾಷಣವಿತ್ತರು. ಸಾಹಿತ್ಯದ ಬಹುಮುಖತ್ವವನ್ನು ಉದಾಹರಣೆಗಳೊಡನೆ ವರ್ಣಿಸಿ 'ಜೀವನವನ್ನು ಯಥಾವತ್ತಾಗಿ ಪ್ರತಿಬಿಂಬಿಸುವದೇ ಸಾಹಿತ್ಯದ ಸರಿಯಾದ ಗುರಿ' ಎಂದರು. 'ಉದ್ವೇಗದಾಯಿ ಅಥವಾ ಪ್ರಚಾರರೂಪಿ ಬರೆಹಗಳು ಸಾಹಿತ್ಯವಾಗಲಾರವು' ಎಂದು ಅವರ ಅಭಿಪ್ರಾಯ. ಪಂಡಿತ ಶ್ರೀ. ಯು. ಸೀತಾರಾಮಾಚಾರ್ ಮತ್ತು ಶ್ರೀ ಕಡೆಂಗೋಡ್ಲು ಇವರು 'ಸಾಹಿತ್ಯದಲ್ಲಿ ಶುದ್ಧತೆ' ಯ ಕುರಿತು ಉಪನ್ಯಸಿಸಿದ ಮೇಲೆ ಗುರು ಬಸವಯ್ಯನವರ ಸಂಗೀತ, ಕುಮಾರಿಯು. ಮೀರಾರ ಮಣಿಪುರ ನೃತ್ಯಗಳು ನಡೆದುವು.

ಶ್ರೀ ಕುಲಕರ್ಣಿಯವರಿಂದ ಸತ್ಕಾರ.

ಅಂದು ರಾತ್ರಿ ತನ್ನ ನೃತ್ಯ ಭಾರತಿ ಮತ್ತು ಕರ್ನಾಟಕ ಸೇವಾ ಸಂಘದ ಪರವಾಗಿ ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು ಸಮ್ಮೇಲನದ ಪ್ರತಿನಿಧಿಗಳಿಗೆ ತನ್ನ 'ಅರುಣಗಿರಿ ಬಾಲ್ಲೆಟ್'ನಲ್ಲಿ ಸತ್ಕಾರ ಕೂಟವೇರ್ಪಡಿಸಿದ್ದರು. ಕ. ಸೇ. ಸಂಘದ ಅಧ್ಯಕ್ಷ ಶ್ರೀ. ವಿ. ಎನ್. ಕುಡ್ವ ಐ. ಸಿ. ಎಸ್. ಇವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ವರದಿ ವಾಚನ ನಡೆಯಿತು. ಶ್ರೀ. ಕುಲಕರ್ಣಿಯವರು ತನ್ನ ನರ್ತನ ಮತ್ತು ಔತಣ ಸತ್ಕಾರಗಳಿಂದ ಅತಿಥಿಗಳನ್ನು ತಣಿಸಿದರು.

ಮೂರನೇ ದಿನ

ತಾ. 28ನೇ ಅಪರಾಹ್ನ ಸಮ್ಮೇಲನದ ಕೊನೆಯ ಅಧಿವೇಶನ ಜರಗಿತು. ಕರ್ನಾಟಕ ಭಾಷೆ, ಸಾಹಿತ್ಯ, ಸಂಸ್ಕೃತಿ, ಪ್ರಾಂತ್ಯಕ್ಕೆ ಸಂಬಂಧಿಸಿದ ೧೭ ಗೊತ್ತುವಳಿಗಳನ್ನು ಮಾಡಲಾಯಿತು. ಅಧ್ಯಕ್ಷ ಕೈಲಾಸಂ ತನ್ನ ಸಮಾರೋಪ ಭಾಷಣದಲ್ಲಿ ಕನ್ನಡಿಗರ ಜಾಗೃತ ಬುದ್ಧಿ ಸದಾಕಾಲ ಕಾರ್ಯರಂಗದಲ್ಲಿ ಕಂಡುಬರಲಿ ಎಂದು ಹಾರೈಸಿ, ಸ್ವಾಗತ ಸಮಿತಿಯ ಸುವ್ಯವಸ್ಥೆಗಾಗಿ ಧನ್ಯವಾದವಿತ್ತರು. ಮುಂದಿನ ಸಮ್ಮೇಲನಕ್ಕೆ ಮಂಡ್ಯ ಮತ್ತು ಹರಪನ ಹಳ್ಳಿಯವರಿಂದ ಆಮಂತ್ರಣ ಬಂದಿದೆ. ರಾತ್ರಿ ಡಾ| ಯು. ರಾಮರಾಯರು ಸಮ್ಮೇಲನದ ಸುಮಾರು 500 ಮಂದಿ ಪ್ರತಿನಿಧಿಗಳಿಗೂ ಸತ್ಕಾರ ಕೂಟವೇರ್ಪಡಿಸಿ ವಿದಾಯ ವಂದನೆ ಸಲ್ಲಿಸಿದರು.

NOTICE

ಕಾಸ್ರಗೋಡು ಡಿ. ಮು. ಕೋರ್ಟಿನಲ್ಲಿ

O. S. 86/1945

R. I. A. No 688/1945

K. ಬುಂಮುಂಡು —ವಾದಿ

ಮತ್ತು

ಪಳಿಕೋಟೆ ಮುಹಂಮದ ಬ್ಯಾರಿ ಕೂಡಾ 6 ಜನರು —ಪ್ರತಿವಾದಿಗಳು

ಮೇಲಿನ ದಾವೆಯು ವಾದಿಗೆ ಸಿಕ್ಕತಕ್ಕ ಅಶ ... ಪಾರ್ಥವಗೋಸ್ಕರ ತಂದಿರುತ್ತಾ 2ನೇ ಪ್ರತಿವಾದಿ K. N. ಜೈನದ್ದಿನ್, 3ನೇ ಪ್ರತಿವಾದಿ ಮಹಂಮದ ಬ್ಯಾ, ಮೊಗ್ರಾಲ, ಕೂಡಾ 1 ರಿಂದ 3ನೇ ಪ್ರತಿವಾದಿಯರ ಮೇಲೆ ಸದರೀ ದಾವೆಯಲ್ಲಿ ಅವರ ಸ್ವಂತ ನೆಲೆಯಲ್ಲಿಯೂ ಅವರ ತಂದಾಟನ ಪ್ರತಿನಿಧಿಯ ನೆಲೆಯಲ್ಲಿಯೂ ಈ ವ್ಯಾಜ್ಯವನ್ನು ಕರುಪರೆ ವಾದಿಗೆ ಕೋರ್ಟಿನಿಂದ ಪರ್ಮಿಶನ್ ಕೊಟ್ಟಿರುತ್ತಾ, ಸದ್ರಿ ವ್ಯಾಜ್ಯವನ್ನು ತನ್ನಿಗೆ ಬರುವ ತಾರೀಕು 18 1 1946ಕ್ಕೆ ಇಡಲಾಗಿಯದೆ ಎಂಬ ಸಂಗ್ತಿ ಈ ಮೂಲಕ ಅವರ ತರವಾಡಿನ ಬಾಕಿಯೆಲ್ಲಾ ಮೆಂಬರರಿಗೆ ತಿಳಿಸೋಣಾಗಿಯದೆ.

Kasaragod, 27-12-1945 } **B. Amrith Rao,** B.A. L.L.B. Vakil for Plaintiff

ಕಳೆದ ೧೭ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur **B. S. Sawkar,** B.A. L.L.B., *Chairman.*

A. S. Kini, *Managing Director.*

ಯುನೈಟೆಡ್ ಕರ್ನಾಟಕ

ಇನ್ಸುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ

THE UNITED KARNATAK INSURANCE Co LTD DHARWAR

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ—

Organising Office:— Court Road, UDIPI.

AGAINST DIABETES

&

all its dreadful results

Consult Specialists:

Dr. Alvas' Research Institute, FAJIR

S. KANARA.

ಉಪನ್ಯಾಸ

೧೯ನೇ ಕನ್ನಡ ಸಾಹಿತ್ಯ ಸಮ್ಮೇಲನ

(೩ನೇ ಪುಟದಿಂದ ಮುಂದುವರಿದುದು.)

ಕಣ್ಣಿಗೆ ಕಾಣುವುದಿಲ್ಲ. ವೈದ್ಯರು ಅದನ್ನೇ ಭೂತಗನ್ನಡಿ ಅಡಿಯಲ್ಲಿಟ್ಟರೆ ಆಗ ಅದು ಬೃಹತ್ತಾಗಿ ಕಾಣಿಸುತ್ತದೆ. ನಮ್ಮ ಗುಣಾವಗುಣ, ಸತ್ಯಾಸತ್ಯ ವ್ಯವಹಾರದಲ್ಲಿ ಅಣುವಿನಂತೆ. ಕಾವ್ಯದ ಭೂತಗನ್ನಡಿಯಲ್ಲಿ ಬೃಹದ್ರೂಪಿ ಹಾಗಲ್ಲದೆ ಕಾವ್ಯ ಸೃಷ್ಟಿ ಗಿರಣಿಯ ನೂಲಿನ ಹಾಗೆ ಬರೀ ತತ್ತ್ವರೂಪಿ ಆದರೆ ವಿಕಾಸಕ್ಕೇ ಕೊಡಲಿ ಪೆಟ್ಟು ಬೀಳುತ್ತದೆ. ಜಡ ಸೃಷ್ಟಿಯಲ್ಲೂ ಇದೇ ರೀತಿ.

ಇಷ್ಟುದಿನ ಕೇಳಿ ಬಾರದೆ ಇದ್ದ ಲೋಕದ ದುಃಖ ಸಂಕಟ ಈಗ ಕಿವಿ ಸೀಳುವ ಹಾಗೆ ಕೇಳಬರುತ್ತಿವೆ. ಭಕ್ತಿಗಾಗಿ ಕಣ್ಣಪ್ಪ ಕಣ್ಣು ಕೊಟ್ಟಂತೆ ಈಗ ಇನ್ನಾವುದೋ ಧ್ಯೇಯಕ್ಕಾಗಿ ತರುಣರು ಪ್ರಾಣ ಒಪ್ಪಿಸುತ್ತಿದ್ದಾರೆ. ಇಷ್ಟು ಕಾಲ ಬಡಾಯಿ ಮಾಡಿದ ಸಂಸ್ಥೆ ತತ್ವ ಸಂಪ್ರದಾಯ ಈಗ ಸೋತು ಜಯಲಿಗೆ ಬಿದ್ದಿವೆ. ಒಂದು ನಾಗರೀಕತೆ ನಮ್ಮ ಕಣ್ಣು ಮುಂದೆಯೇ ಪಾಳುಬೀಳುತ್ತಿದೆ, ಇನ್ನೊಂದು ಬೆಳೆಯುತ್ತಿದೆ. ಅದರಲ್ಲಿ ಸರ್ವ ಸಮಾನತೆ ಮುಖ್ಯ ಸೂತ್ರ. ಇದಕ್ಕೆಲ್ಲ ಹಿರಿಯರು ವಿಮುಖರಾಗಿದ್ದುಕೊಂಡು ಪ್ರಾಚೀನ ಗಾದೆಗಳಲ್ಲೇ ಮುಳುಗಿದಾರೆಂದೂ ಗತವೈಭವ ಸ್ಮರಣ-ಅನುಸರಣಗಳಲ್ಲೇ ಇದ್ದಾರೆಂದು—ಕಿರಿಯರು ಆಕ್ಷೇಪಿಸುತ್ತಿದ್ದಾರೆ. ಇದರಿಂದ ಅಪಕ್ವಾನುಭವದ ಅಸಂಪೂರ್ಣ ಚೇತನದ ಎಳೆಯರು ಸಾಹಿತ್ಯಕ್ರಾಂತಿಗೆ ಕೈಹಾಕಿ ಹೀಚು ಮಿಡಿಗಳನ್ನು ತಂದು ಬಾಯಿ ರುಚಿಯನ್ನೇ ಕೆಡಿಸುತ್ತಿದ್ದಾರೆಂದೂ ಕೇಳಿದ್ದೇನೆ. ಹೊಸದು ಎಂಬುದು ನಮ್ಮನ್ನು ಹೆದರಿಸಬೇಕಾಗಿಲ್ಲ. ಹಳತೆಲ್ಲವೂ ಕಹಿಯೇ ಅಲ್ಲ. ಅದನ್ನೂ ಇದನ್ನೂ ಧಾರಾಳವಾಗಿ ಬಳಸಿಕೊಂಡೇ ನನ್ನ ಕೆಲಸವನ್ನು ನಾನು ಮಾಡಿದ್ದೇನೆ. ಲೋಕದಲ್ಲಿ ನಿಜವಾಗಿಯೂ ಹೊಸತು ಯಾವುದು? ಹಳತು ಯಾವುದು? ಸರ್ವಜ್ಞನ ಪದ್ಯ ಎಂದಿಗೆ ಹಳೆಯದಾಗಬೇಕು? ಹಳತನ್ನೂ ಹೊಸತನ್ನೂ ಸರಿಯಾಗಿ ಬೆರೆಸುತ್ತ ಹೋಗುವುದೇ ಪ್ರಗತಿಯ ಲಕ್ಷಣ. ಯಾವುದೂ ಅತಿ ಆಗಬಾರದು. ನಾಟಕದ ತುಂಬಾ ಶ್ರಮಜೀವಿಗಳನ್ನು ತುಂಬಿಸಿ, ಅವರಿಂದ ಸಡ್ಡು ಹೊಡೆಸಿದರೂ ನಿಟ್ಟುಸಿರು ಬಿಡಿಸಿದರೂ ನಾಟಕ ಆನಂದದಾಯಿ ಆಗುವುದಿಲ್ಲ. ಅಥವಾ ಚಮಕೀ ಅಂಗಡೀ ಸುರುವಾಲು ಶೇರಾಜೀ ರುಮಾಲುಗಳ ರಾಜರನ್ನು ತಂದು ಕುಣಿಸಿದರೂ ಫಲವಿಲ್ಲ

ಈ ಕನ್ನಡ ಪ್ರಾಂತವನ್ನು ಕಟ್ಟಬೇಕೆನ್ನುವುದೇಕೆ? ಇದರಂತೆ ತಮಿಳು ತೆಲುಗು ಕೇರಳ ಮಹಾರಾಷ್ಟ್ರ ಪ್ರಾಂತಗಳೂ ಆಗಲಿ ಎಂದಲ್ಲವೆ? ದಕ್ಷಿಣ ದೇಶದ ನಾಲ್ಕು ಪ್ರಾಂತಗಳೂ ನಾಲ್ಕು ಭುಜದಂತೆ, ಚತುರಂಗ ಬಲದಂತೆ, ಏಕವಾಗಿ ಐಕ್ಯಮತದಿಂದ ವರ್ತಿಸಬೇಕೆಂದಲ್ಲವೆ? ಇಲ್ಲಿ ಪರಸ್ಪರ ವೈಷಮ್ಯಕ್ಕಾಗಿಯೆ? ತಮಿಳೇನು? ತೆಲುಗೇನು? ಮಲೆಯಾಳವೇನು? ಕನ್ನಡಕ್ಕೆ ಅಣ್ಣತಮ್ಮ. ಎಲ್ಲವೂ ದ್ರಾವಿಡ ಭಾಷೆಯೇ. ಒಂದು ಅಕ್ಷರ ಬದಲಾದರೆ ಕನ್ನಡ ಶಬ್ದ ತೆಲುಗು ಶಬ್ದವಾಯಿತು. ಇನ್ನೊಂದು ಅಕ್ಷರ ಬದಲಾದರೆ ತಮಿಳಾಯಿತು. ಕನ್ನಡ-ತೆಲುಗುಗಳಿಗೆ ಬೇರೆ ಬೇರೆ ಲಿಪಿಯಿಲ್ಲ. ಎರಡೂ ಒಂದೇ. ಕೇರಳ ವರ್ಣಮಾಲೆ ಕನ್ನಡ ಗೀರ್ವಾಣಕ್ಕೆ ಸಮೀಪವಾಗಿದೆ. ಇನ್ನು ಆಚಾರ ವ್ಯವಹಾರ, ಧರ್ಮ ದೈವ ಋಣಾನುಬಂಧ—ಎಲ್ಲದರಲ್ಲೂ ಈ ದಾಕ್ಷಿಣಾತ್ಯರಲ್ಲಿ ಅಂಥ ಪ್ರಖರ ಭೇದವಿಲ್ಲ. ನಾವು ಕರ್ನಾಟಕರು ಎಲ್ಲ ದ್ರಾವಿಡ ಸಂಪ್ರದಾಯಕ್ಕೂ ಒಕ್ಕಲು; ಎಲ್ಲ ದ್ರಾವಿಡ ಭಾಷೆಗೂ ಆಶ್ರಯದಾತರು. ತೆಲುಗು ತಮಿಳು ಕೇರಳ ಪ್ರಾಂತಗಳಲ್ಲಿ ಕಾಣದ ಭಾಷಾತೀತವಾದ ಕರ್ನಾಟಕತ್ವ ನಮ್ಮಲ್ಲಿ ಹಿಂದಿನಿಂದಲೂ ಬೆಳೆದು ಬಂದಿದೆ. ಅದು ಕರ್ನಾಟಕದ ವೈಶಿಷ್ಟ್ಯ. ಈಗಿನ ಪ್ರಾಂತೀಕರಣದ ರಭಸದಲ್ಲಿ ಆ ವೈಶಿಷ್ಟ್ಯವನ್ನು ಅಲ್ಲಗಳೆಯಬಾರದು. ಈ ಭಾಷಾವಾರು ಭೇದ ಭಾವನೆ ನಮ್ಮ ರಾಜಕೀಯದ ದುಷ್ಫಲ. ಅಖಂಡ ಭಾರತದ ನಿರ್ಮಾಣಕ್ಕೆ ಮುಂಚೆ ನಮ್ಮ ನಮ್ಮ ಪ್ರಾಂತೀಯ ದ್ವೇಷ ದಮನವಾಗಬೇಕು. ಒಳಗೂ ಹೊರಗೂ ಎಲ್ಲರೊಡನೆ ಸಮರಸವಾಗಿ ನಡೆವ ನಾವು ಕರ್ನಾಟಕರು ಉಳಿದ ದಾಕ್ಷಿಣಾತ್ಯರಿಗೆ ಮೇಲುಪಂಗ್ತಿಯಾಗಿರೋಣ. ದಾಕ್ಷಿಣಾತ್ಯರೆಲ್ಲ ಒಂದಾಗಿ ಉತ್ತರಾದಿಯವರಿಗೆ ಮೇಲುಪಂಗ್ತಿಯಾಗೋಣ. ನಮ್ಮ ನೆರೆಯವರನ್ನು ಬಿಟ್ಟು ನಮಗೆ ಪ್ರಾಂತ ಬಂದರೂ ಕಣ್ಣೀರು, ನಮಗೆ ಇಲ್ಲದೆ ಅವರಿಗೆ ಬಂದರೂ ಕಣ್ಣೀರು. ಎಲ್ಲರಿಗೂ ಒಂದೇ ಮೋಕ್ಷ. ಇದು ಸಮಷ್ಟಿ ರಾಜಕೀಯ.

These enterprises of young men of Mangalore are worth your notice:

1 "The Badavara Bandhu'
2 The Badavara Bandhu Printing Press, Ltd.
3 Sri Narayan Guru Press
4 Sri Narayan Guru Bank Ltd
5 The Badavara Bandhu Orphanage Trust.
6 My Stores
7 The South Kanara Fish Industries, Ltd.
8 The Karnataka Theatres, Ltd
9 Janasons, Ltd.
10 The Vijaya Stores, Ltd, etc. etc.

PATRONISE INDIAN INDUSTRY

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945.

ಉಡುಪಿ

ಹೊಸವರುಷದ ಸತ್ಕಾರ ಕೂಟ

ತಾ. 1ರಲ್ಲು ಸಂಜೆ ಶ್ರೀ ರಾಮಕೃಷ್ಣ ಹೊಟೇಲಿನಲ್ಲಿ ದಿ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪರೇಶನಿನ ಆಶ್ರಯದಲ್ಲಿ ನಡೆಯಿತು. ವಯೋವೃದ್ಧರಾದ ಶ್ರೀ ಕೆ. ಪದ್ಮನಾಭ ಬಾಳಿಗರನ್ನು ಹೊಸವರುಷದ ಆರಂಭದ ಸಂತೋಷಕೂಟದಲ್ಲಿ ಟೀಪಾರ್ಟಿ ಸತ್ಕಾರದಿಂದ ಗೌರವಿಸಲಾಯಿತು. ಶ್ರೀ ಎಮ್. ಆರ್. ಭಟ್ಟರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಕೊರ್ಪರೇಶನಿನ ಕಾರ್ಯಕಲಾಪಗಳ ವಿವರಗಳನ್ನೊಳಗೊಂಡ ವರದಿಯನ್ನು ಶ್ರೀ. ಟಿ. ರಮೇಶ ಪೈಗಳು ಸಭೆಯ ಮುಂದಿರಿಸಿದರು. ಶ್ರೀಗಳಾದ ಯು. ಎ. ಪೈ, ಎಫ್ ಯಚ್. ಶಿಡೆಯರ್, ಎಚ್. ಎಸ್. ಮುಸ್ಸೇಸ್, ಆರ್. ಆರ್. ಕುಂಜೂರು ಮೊದಲಾದವರು ಮಾತನಾಡಿದರು. ಶ್ರೀ ಜನಾರ್ದನ ಅಳ್ವೆಯವರು ಧನ್ಯವಾದಗಳನ್ನರ್ಪಿಸಿದರು.

ಆಯುರ್ವೇದದ ಅಧಿಕಾರ— ಈ ವಿಷಯದಲ್ಲಿ ಡಾ। ಗೋಪಾಲಕೃಷ್ಣರಾಯರು ಕಳೆದ ಗುರುವಾರ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಉಡುಪಿ ಪತ್ರಿಕೋದ್ಯೋಗಿ ಸಂಘದ ಸಭೆಯಲ್ಲಿ ಭಾಷಣವಿತ್ತರು. ಶ್ರೀ ಟಿ. ಎಸ್. ಕೇಳು ನಂಬಿಯಾರ್ ಜನಪ್ರೀತ ವೈದ್ಯರವರು ಅಗ್ರಾಸನ ವಹಿಸಿ ಮಹಾಜನರು ಆಯುರ್ವೇದ ವೈದ್ಯರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿ ವಿನಂತಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಎಚ್. ಸೆಟ್ಟರು ಭಾಷಣಗಾರರ ಪರಿಚಯವನ್ನು ಮಾಡಿಕೊಟ್ಟರು. ಶ್ರೀ ಯು. ಎಸ್. ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಅಂತರಂಗ ಆಯುರ್ವೇದ ವಿಶೇಷಾಂಕದ ಉದ್ಘಾಟನೆ— ಕೀರ್ತಿಶೇಷ ಪಂಡಿತ ತಾರಾನಾಥರಿಗೆ ಅರ್ಪಿಸಲ್ಪಟ್ಟ ಅಂತರಂಗ ಆಯುರ್ವೇದ ವಿಶೇಷಾಂಕದ ಉದ್ಘಾಟನಾ ಸಮಾರಂಭವು ಕಳೆದ ತಾ 29ರಲ್ಲು ಶ್ರೀಮತಿ ಸುಮತಿ ಬಾಯಿ ತಾರಾನಾಥ, ಬಿ. [illegible] ಶ್ರೀ ಕಡೆಕಾರು ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ನೆರವೇರಿಸಲ್ಪಟ್ಟಿತು. ಡಾ। ಗೋಪಾಲಕೃಷ್ಣ ರಾವ್, ಧಾರವಾಡ, ಡಾ। ಡಿ. ಕೆ. ಭಾರದ್ವಾಜ್, ಬೆಂಗಳೂರು ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು.

ಕಲಾವೃಂದ—ಸಂಸ್ಕೃತ ಕಾಲೇಜಿನ ವಾರ್ಷಿಕ ಪರೀಕ್ಷೆಯ ಸಂಬಂಧವಾಗಿ ಕಲಾವೃಂದದವರು ತಮ್ಮ ಕಾರ್ಯಾಲಯದಲ್ಲಿ ಇದೇ ತಾ 23ನೇ ರಾತ್ರಿ ಸಂಸ್ಕೃತ ಮತ್ತು ಕನ್ನಡ ಏಕಾಂಕ ನಾಟಕಗಳನ್ನು ಉತ್ತಮ ರೀತಿಯಿಂದ ಅಭಿನಯಿಸಿದರು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯುಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕ್ಠಿಣರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ಥ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. U.) Tollygunge, Calcutta,

ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಆ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ.ಕ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ—ಹೆರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—0. ಪೋಸ್ಟ ಚಾರ್ಜ ೧೦ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

To Greet You:-

For the past
REMEMBRANCE
For the present
KIND THOUGHTS
For the future
GOOD WISHES.

From
The Canara Banking Corporation Limited.
(Incorporated in British India, with limited Liability.)
Estd: 1906
Head Office: **UDIPI**, South Kanara.

ನವಯುಗ

ಉಡುಪಿ, ಗುರುವಾರ, ೩-೧-'೪೬

೧೯೪೬

ನಡಂಹಿತ ಕಾಲ ಸಮುದ್ರದಲ್ಲಿ ಮತ್ತೊಂದು ಮಹಾ ತೆರೆಯುರುಳಿಹೋಯಿತು; ಹೊಸತೆದ್ದು ಬಂದಿದೆ. 'ವರುಷ ನಿಲ್ಲುವದಿಲ್ಲ'. ನಿಲ್ಲುತಿದ್ದರೆ ಅದರೊಂದಿಗೆ ಪ್ರಪಂಚವೇ ಸ್ತಬ್ಧವಾಗುತಿತ್ತು. ಇದರಿಂದಾಗಿ ಹೊಸ ವರುಷದ ಜನನಕ್ಕಾನಂದಪಡುವಂತೆ ಅಪಾರ ಮಹಾತ್ಮೆಯ ವರುಷವೊಂದು ಸತ್ತಿತೆಂದು ದುಃಖ ಸೂಚನೆಯಿಲ್ಲ. ಒಂದೊಮ್ಮೆಗೆ ಆ ಪದ್ಧತಿಯಿರುತಿದ್ದರೂ ಕೂಡಾ ೧೯೪೫ ಕಳೆಯಿತು–ಮಾಡಲಿದ್ದುದನ್ನು ಮಾಡದೆಯೇ ಸಂದಿತು–ಎಂದು ದುಃಖಿಸಲೆಡೆಯಿಲ್ಲ. ೧೯೪೫ ಸಾರ್ಥಕವೆನಿಸಿದೆ; ಅದು ಚರಿತ್ರಾರ್ಹ ಘಟನೆಗಳನ್ನು ನಿರ್ಮಿಸಿ ಸಂದಿದೆ. ಲೋಕ ಯುದ್ಧದ ಪಶ್ಚಿಮಾರ್ಧ, ಪೂರ್ವಾರ್ಧ ಇವೆರಡನ್ನೂ ಮುಗಿಸಿದ ಇಸವಿಯದು. 1939ಮತ್ತು1941 ಇವೆರಡು ವರುಷಗಳು ಆರಂಭಿಸಿದ್ದ ಅಪರಾಧಗಳನ್ನೂ ಮುಕ್ತಾಯಗೊಳಿಸಿದ ವರುಷವದು. ಜರ್ಮನಿ, ಜಾಪಾನ್ ಯುದ್ಧವೆರಡ[illegible] ಶಾಂತಿಯನ್ನಾದರೂ ಸ್ಥಾಪಿಸಿದ ಕೀರ್ತಿ ೧೯೪೫ಕ್ಕೆ ಸಲಬೇಕು. ಪ್ರಾಯಶಃ ಈ ಶತಮಾನದ ಬೇರಾವ ಇಸವಿಯೂ ಇಂತಹ ಮಹತ್ತನ್ನು ಸಾಧಿಸಿರಲಿಲ್ಲ. ಆದ್ದರಿಂದ ಕಳೆದ ವರುಷಕ್ಕೆ ಸಾಮೂಹಿಕವಾಗಿ ಇಡೀ ಪ್ರಪಂಚದ ಕೃತಜ್ಞತೆ ಸಲಬೇಕು.

ಅಂತೆಯೇ ಹೊಸ ವರುಷವನ್ನು ಶುಭಾಶಯದೊಡನೆ ಸ್ವಾಗತಿಸಬೇಕಾಗಿದೆ. ೧೯೪೫ ಕಸ ಝಾಡಿಸುವ ಕೆಲಸವನ್ನೇನೋ ಮಾಡಿದೆ; ಆದರೆ ಆ ಕಸಕೆಸರುಗಳನ್ನು ಹೆಚ್ಚಾಗಿ ಏಸ್ಯಾ ಖಂಡದತ್ತ ದೂಡಿಹೋದಂತಿದೆ. ಇಡಿಯ ಏಸ್ಯಾವಿಂದು ಅತೃಪ್ತಿ, ಉದ್ವೇಗಗಳಿಂದ ಕುದಿಯುತ್ತಿದೆ. ಎಲ್ಲೆಲ್ಲೂ ನಿರಾಶೆ,ನಿಟ್ಟುಸಿರುಗಳೇ! ಚೀನಾ, ಪರ್ಶಿಯಾ, ಜಾವಾಗಳಂತೂ ರಣರಂಗಗಳಾಗಿವೆ; ಅರಬ ಸ್ಥಾನವು ಯುದ್ಧ ಸಾನ್ನಿಸ್ಥಿತಿಯಲ್ಲಿದೆ. ಹಿಂದುಸ್ಥಾನದ ಸ್ಥಿತಿಯನ್ನು ಹಾಗೆಯೇ ಕರೆಯಲಾಗುವದಿಲ್ಲ. ಇಕ್ಕಡೆಗಳ ಗುಂಡೆಸೆತ ವಿಲ್ಲದುದನ್ನು ಯುದ್ಧವೆನ್ನುವ ಸಂಪ್ರದಾಯವಿಲ್ಲ. ಆದರೆ ಹಿಂದುಸ್ಥಾನವು ತನ್ನ ಸ್ವಾತಂತ್ರ್ಯ ಹೋರಾಟಕ್ಕೊಂದು ನವೀನ ಹಾದಿ ಕಂಡುಕೊಂಡಂತೆ, ಅದಕ್ಕೊಂದು ಹೊಸ ಹೆಸರಿಟ್ಟಿದೆ—'ಸತ್ಯಾಗ್ರಹ' ಅಥವಾ 'ಸ್ವಾತಂತ್ರ್ಯ ಸಮರ.' ಸ್ಥಳ ಕಾಲ ಪ್ರಾಮುಖ್ಯತೆಯಲ್ಲಿ ಇಲ್ಲಿಯ ಹೋರಾಟವಂತೂ ಎಲ್ಲಕ್ಕಿಂತ ದೊಡ್ಡದು. ಆದ್ದರಿಂದ ಏಸ್ಯಾಖಂಡಕ್ಕೆ—ಅದರಲ್ಲೂ ಭಾರತದ ಮಟ್ಟಿಗೆ—೧೯೪೬ ಇದಿರೊಡ್ಡಿರುವ ಸಮಸ್ಯೆಗಳು ಹಿಂದಿಗಿಂತಲೂ ದೊಡ್ಡವು. ೧೯೪೫ ಬರುವಾಗ, ಇದ್ದ ಲೋಕ ವಿಪತ್ತಿನ ನಿವಾರಣೆಗೊಂದು ಹಾದಿ ಕಾಣುತಿತ್ತು; ೧೯೪೬ ಬರುವಾಗ ತನ್ನ ತಲೆಯ ಮೇಲೆ ಬಿದ್ದಿರುವ ಗಂಡಾಂತರಗಳನ್ನಿಳಿಸಿಕೊಳ್ಳುವದು ಹೇಗೆಂಬುದೇ ಏಷ್ಯಾನರಿಗೆ—ಮುಖ್ಯವಾಗಿ ಭಾರತೀಯರಿಗೆ—ಹೊಳೆಯದು. ೧೯೪೬ ನಮ್ಮ ಪಾಲಿಗೆ ವಿಶೇಷ ಹೊಣೆ ಹೊರಿಸಿಕೊಂಡುಬಂದ ವರುಷ.

ಆರ್ಥಿಕ, ವ್ಯವಹಾರಿಕ, ಸಾಮಾಜಿಕ ಪುನರ್ರಚನೆಗಳು–ಯುದ್ಧೋತ್ತರ ಯೋಜನೆಗಳು–ಸಾವು–ಹುಟ್ಟಿನ ಈ ಸಂಧಿಕಾಲದಲ್ಲಿ ಭರದಿಂದ ಸಾಗಬೇಕಾಗಿತ್ತು; ಇರಬೇಕಾದಷ್ಟು ರಭಸ ಎಲ್ಲಿಯೂ ಕಂಡು ಬರುವದಿಲ್ಲ. ಇಂಗ್ಲಾಂಡಿನ ಜನತೆ, ತಮ್ಮ ಸರಕಾರವನ್ನು ಬದಲಾಯಿಸಿಕೊಳ್ಳುವ ಮೂಲಕ ಈ ನವರಚನಾಕಾಂಕ್ಷೆಯನ್ನು ಪ್ರದರ್ಶಿಸಿತು. ಪ್ರತಿಯೊಂದು ರಾಷ್ಟ್ರದ ಜನತೆ ತಮ್ಮ ನಿತ್ಯಜೀವನದಲ್ಲಿ ಈ ಕನಸನ್ನೇ ಕಾಣುತ್ತಿದೆ. ಆದರೆ ಎಲ್ಲಿಯೂ ಜನಸಾಮಾನ್ಯರ ಸ್ಥಿತಿ ಸುಧಾರಣೆ ತೃಪ್ತಿಕರವಾಗಿ ನಡೆದಿಲ್ಲ; ಅದಕ್ಕೊಂದು ಭದ್ರವಾದ ಅಸ್ತಿವಾರ ಕೂಡಾ ಹಾಕಲ್ಪಟ್ಟಿಲ್ಲ. ಯಥಾರ್ಥವಾದರೆ ಲೋಕದ ಇಂದಿನ ಪರಿಸ್ಥಿತಿ ದಂಗುಬಡಿಸುವಂತಹದು. ಸಾಮ್ರಾಜ್ಯ ಮತ್ತುಧನಲಾಲಸೆಯ, ಬಿಗಿತ- ಮಾನವನ ನೆನಪು ಶಕ್ತಿಯ ಶೂನ್ಯತೆ-ಜನಸಾಮಾನ್ಯರ ಅಸಹಾಯ ಸ್ಥಿತಿಯ ನಿಜರೂಪ-ಈಗ ಕಂಡು ಬರುವಷ್ಟು ಬೇರೆಂದಿಗೂ ಗೋಚರಿಸದು. ಮಿಲಿಯಾವಧಿ ಜೀವಗಳನ್ನಾಹುತಿ ಪಡೆದು ಲೋಕದ ಆ ತುದಿಯಿಂದೀ ತುದಿ ವರೆಗಿನ ಧನ, ದೇಹ, ಮೆದುಳು ಶಕ್ತಿಗಳನ್ನೆಲ್ಲಾ ಸೂರೆಗೊಂಡು, ಕನಿಷ್ಠ ಪಕ್ಷ ಮುಂದಿನ 50ವರುಷಗಳ ವರೆಗಾದರೂ ಪ್ರತಿಯೊಬ್ಬ ಮಾನವನ ನಿತ್ಯ ಜೀವನದಲ್ಲಿ ತನ್ನ ಮೊಹರು ಬೀಳುವಂತೆ ಮಾಡಿಹೋದ ಜಾಗತಿಕ ಮಹಾಯುದ್ಧವು ಯಾವ ಹೊಸ ಪಾಠವನ್ನೂ ಕಲಿಸದೆ ಹೋಗಿದೆ. ಕೆಲವು ದುಶ್ಶಕ್ತಿಗಳನ್ನು ಅಳಿಸಿ, ಮತ್ತೆ ಕೆಲವು ದುಶ್ಶಕ್ತಿಗಳನ್ನು ಬೆಳೆಸಿದ ಒಂದು ಪಕ್ಷಪಾತವನ್ನು ಬಿಟ್ಟರೆ, ಬೇರಾವ ಬದಲಾವಣೆಯನ್ನೂ ಮಾಡದೆ ಹೋಗಿದೆ ಈ ಯುದ್ಧದಂತಹ ಒಂದು ದುಸ್ವಪ್ನವು ಶಕುನ ಭಕ್ತನೊಬ್ಬನಿಗೊಂದು ರಾತ್ರಿ ಬೀಳುತಿದ್ದರೆ,ಮರುದಿನ ಮುಂಜಾನೆ ಅವನು ನಡಿಸುವ ಶಾಂತಿ ಹೋಮದಂತಹ ಒಂದು ಪರಿಹಾರವನ್ನಾದರೂ ಲೋಕವಿಂದು ಕೈಕೊಂಡಿಲ್ಲವೆಂಬುದು ನಿಜಕ್ಕೂ ಒಂದು ಕೌತುಕ. ೧೯೪೬. ಹೊಸತೇನನ್ನಾದರೂ ತರಬಹುದೆ? 'ಭಾರತದ ಭವಿಷ್ಯವೇನು?' ಎಂಬುದನ್ನು ಕೊನೆಯ ಬಾರಿ ನಿರ್ಧರಿಸುವ ವರುಷವಿದು. ಎಲ್ಲವೂ ಅನಿಶ್ಚಿತವಾಗಿಯೇ ಇದೆ. ೧೯೪೬ ಅದನ್ನು ನಿಶ್ಚಯಿಸಲಿ; ಜನ ಸಾಮಾನ್ಯರ ಅಭ್ಯುದಯವನ್ನು ಸಾಧಿಸಿಕೊಡಲಿ; ಸ್ವಾತಂತ್ರ್ಯ ಧ್ವಜವನ್ನು ಎಲ್ಲೆಲ್ಲೂ ಹಾರಿಸಲಿ! ಧನಿಕ—ದರಿದ್ರ, ಧನಿ—ದಾಸ, ಮೇಲು—ಕೀಳು ವರ್ಗ ಬೇಧಗಳನ್ನು ನಿವಾರಿಸಲಿ! ಹೊಸ ವರುಷವು ಸರ್ವರಿಗೂ ಶುಭದಾಯಿಯಾಗಲಿ.

ತ್ರಿರಾಷ್ಟ್ರೀಯ ಒಪ್ಪಂದ

ಮೋಸ್ಕೋ ಸಮ್ಮೇಲನಾಂತ್ಯ.

ಮೋಸ್ಕೋದಲ್ಲಿ ಹಲವು ದಿನಗಳಿಂದ ನೆರೆದ ತ್ರಿರಾಷ್ಟ್ರೀಯ ವಿದೇಶ ಮಂತ್ರಿಗಳ ಸಭೆಯು ಕೆಲವು ಪ್ರಾಮುಖ್ಯ ಒಪ್ಪಂದಗಳನ್ನು ಮಾಡಿಕೊಂಡು ಮುಗಿದಿದೆ. ಲಂಡನಿನ ವಿದೇಶ ಸಚಿವ ಸಭೆಗೊಂದಲದಲ್ಲಿ ಪರ್ಯವಸಾನಗೊಂಡಂದಿನಿಂದ ಕದಡಿ ಹೋಗಿದ್ದ ವಾತಾವರಣವನ್ನು ಮೋಸ್ಕೋ ಸಮ್ಮೇಲನ ಸ್ವಚ್ಛಗೊಳಿಸಿ ಶಾಂತಿಯ ಭರವಸೆಯನ್ನು ಮೊಳೆಯಿಸಿದೆ

ಭದ್ರತಾ ಕೌನ್ಸಿಲಿನ ಸ್ವಾಧೀನಕ್ಕೆ ಆಟಂ ಬೋಂಬು

ಸಮ್ಮೇಲನದ ಅತಿ ಪ್ರಾಮುಖ್ಯ ನಿರ್ಧಾರವೆಂದರೆ ಆಟಂ ಶಕ್ತಿಯ ಅಧಿಕಾರವು ಸಂಯುಕ್ತ ರಾಷ್ಟ್ರಗಳ ಕಮಿಶನೊಂದರ ಕೈಯಲ್ಲಿರಬೇಕೆಂಬುದೇ. ಇದು ರಶ್ಯಾದ ಮಹಾ ವಿಜಯವೆಂಬುದು ನಿಸ್ಸಂದೇಹ. ಆಟಂ ಗುಟ್ಟನ್ನು ಕೊಡಲಾರೆವೆಂದು ತೊಡೆ ತಟ್ಟಿಕೊಳ್ಳುತಿದ್ದ ಅಮೇರಿಕ, ಇಂಗ್ಲಾಂಡುಗಳು ಈಗ ಹಾದಿಗೆ ಬಂದಿವೆ. ಈ ಆಟೋಮಿಕ್ ಕಮಿಶನ್ ಆಟಂ ಬೋಂಬಿನಂತಹ ಸಾಮೂಹಿಕ ವಿಧ್ವಂಸನೋಪಕರಣಗಳ ರದ್ದತಿ, ಹತೋಟಿ, ಇತ್ಯಾದಿಗಳನ್ನು ತಕ್ಷಂಕೆಯಲ್ಲಿಟ್ಟುಕೊಂಡು ನಡಿಸಬೇಕು. ಅದು ಜಾಗತಿಕ ಸಂಘದ ಭದ್ರತಾ ಕೌನ್ಸಿಲಿಗೆಹೊಣೆಯಾಗಿರಬೇಕು.

ಜಾಪಾನಿನ ಮೇಲಧಿಕಾರವೂ ಜತೆಯಲ್ಲಿ

ಇದು ವರೆಗೆ ಅಮೇರಿಕಾನರ ಏಕಾಧಿಕಾರದಲ್ಲಿದ್ದ ಜಾಪಾನಿನ ಮೇಲ್ವಿಚಾರಣೆಗಾಗಿ ಯೂ ರಶ್ಯಾ, ಬ್ರಿಟನ್, ಅಮೇರಿಕ, ಚೀನಾ, ಫ್ರಾನ್ಸ್, ನೆದರ್‌ಲೇಂಡ್ಸ್, ಕೆನಡಾ ಆಸ್ಟ್ರೇಲಿಯ, ನ್ಯೂಜಿಲೇಂಡ್, ಹಿಂದುಸ್ಥಾನ, ಫಿಲಿಪ್ಪಾಯಿನ್ಸ್‌ಗಳ ಸಂಯುಕ್ತ ಕಮಿಶನೊಂದರ ನೇಮಕವಾಗಿದೆ. ಇದೂ ರಶ್ಯದ ವಾದಕ್ಕೆ ದೊರೆತ ಮತ್ತೊಂದು ಪ್ರಾಮುಖ್ಯ ವಿಜಯ 'ಇದು ವರೆಗೆ ದೂರ ಪ್ರಾಚ್ಯ ಸಲಹೆಗಾರ ಮಂಡಲ' ಎಂಬ ಸಂಯುಕ್ತ ಸೂಚನಾ ಸಭೆ ಮಾತ್ರವಿತ್ತು. ಈಗ ಸಂಬಂಧಪಟ್ಟ ಎಲ್ಲಾ ರಾಷ್ಟ್ರಗಳ ಕಾರ್ಯಕಾರೀ ಸಮಿತಿಯನ್ನುಳ್ಳ 'ದೂರ ಪ್ರಾಚ್ಯ ಕಮಿಶನ್' ನಿರ್ಮಾಣವಾಗಿದೆ.

ಕೊರಿಯದ ಆಡಳಿತ

ಜಗಳದೊಂದು ಪೀಠವಾಗಿದ್ದ ಕೊರಿಯದ ಆಡಳಿತೆಯ ಕುರಿತೂ ಒಪ್ಪಂದವಾಗಿದೆ. ಈ ಒಪ್ಪಂದಾನುಸಾರ ಕೊರಿಯದಲ್ಲಿ ತಾತ್ಕಾಲಿಕ ಪ್ರಜಾಪ್ರಭುತ್ವದ ಸ್ವತಂತ್ರ ಸರಕಾರವನ್ನು ಸ್ಥಾಪಿಸಬೇಕು. ಈ ಕಾರ್ಯವನ್ನು ಸಾಧಿಸುವದಕ್ಕಾಗಿ ದಕ್ಷಿಣ ಕೊರಿಯಕ್ಕೆ ಅಮೇರಿಕನ್ ಪ್ರತಿನಿಧಿಗಳನ್ನೂ ಉತ್ತರ ಕೊರಿಯಕ್ಕೆ ರಶ್ಯದ ಪ್ರತಿನಿಧಿಗಳನ್ನೂ ಸೇರಿಸಿ ಪ್ರತ್ಯೇಕ ಕಮಿಶನುಗಳ ನೇಮಕವಾಗಬೇಕು ಎಂದು ತೀರ್ಮಾನವಾಗಿದೆ. ಇದು ವರೆಗೆ ಅಮೇರಿಕಾಂಗ್ಲೊ ಸರಕಾರಗಳು ಒಪ್ಪಿಕೊಳ್ಳದ ರುಮೇನಿಯಾ ಮತ್ತು ಬಲ್ಗೇರಿಯಾ ಸರಕಾರ

ನೋಟೀಸು

ಶ್ರೀ ಹಿರಿಅಡಕ ಮಹತೋಬಾರ ಶ್ರೀವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿ

ಯ ಸಲುವಾಗಿ ಟಿಕೇಟುಗಳ ಮೂಲಕ ತಾ. 23—1—46 ಕ್ಕೆ ಜರಗಿಸಬೇಕಾಗಿದ್ದ ಜೋಡಾಟವನ್ನು ಎಂಟರ್ಟೈನ್‌ಮೆಂಟ್ ಟೇಕ್ಸಿನ ತೊಂದ್ರೆಯಿಂದಾಗಿ ರದ್ದುಮಾಡಿಯದೆ.

ಅಂತೂ ತಾ. 6—2—46ಕ್ಕೆ ಪ್ರಚಂಡ

ಜೋಡಾಟ ಮಾಡಿಸುವದಾಗಿ

ನಿಶ್ಚೈಸಿರುತ್ತದೆ.

ಎಲ್ಲರಿಗೂ ಸುಸ್ವಾಗತವಿದೆ.

ಎ. ಎಂ. ನಾಗಣ್ಣ ಹೆಗ್ಡೆ,
ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್; ಮೇನೇಜಿಂಗ್ ಟ್ರಸ್ಟಿ–
ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, ಹಿರಿಯಡ್ಕ, ದ. ಕನ್ನಡ.

...ನೆಗೆ ...ಪ್ಪಿಗೆ ಕೊಡುವ ವ್ಯವಸ್ಥೆಯೂ ಆಗಿದೆ. ಚೀನಾ, ಪರ್ಶಿಯಗಳಲ್ಲಿ ತಮ್ಮೊಳಗೆ ಬಿದ್ದಿರುವ ಘರ್ಷಣೆಗಳ ಕುರಿತು ರಶ್ಯ ಮತ್ತು ಅಮೇರಿಕನ್ ಮಂತ್ರಿಗಳು ಪರ್ಯಾಲೋಚಿಸಿಕೊಂಡರೆಂದೂ ತೀರ್ಮಾನವಾಗದಿದ್ದರೂ ಮುಂದಕ್ಕದು ಸಾಮಾನ್ಯ ವ್ಯವಹಾರ ಮೂಲಕ ಸಾಧಿಸಲ್ಪಡುವ ಹಂಚಿಕೆ ಹಾಕಿದ್ದಾರೆಂದೂ ತಿಳಿದು ಬರುತ್ತದೆ. ಇಂಡೋನೇಶಿಯದ ಪ್ರಸ್ತಾಪವೇ ಬಂದಿಲ್ಲ!

ಒಪ್ಪಂದದ ಪ್ರತಿಕ್ರಿಯೆ.

ಇಂಗ್ಲಾಂಡು, ಅಮೇರಿಕ, ರಶ್ಯಗಳೊಳಗಾದ ಈ ಒಪ್ಪಂದದಿಂದ ಸಾಮಾನ್ಯತಃ ಎಲ್ಲೆಲ್ಲೂ ಸಮಾಧಾನದುಸಿರು ಹೊರಡುತ್ತಿದೆಯಾದರೂ ಜಾಪಾನ್ ಮತ್ತು ಅಟಂ ಬೋಂಬುಗಳ ತೀರ್ಮಾನದ ಕುರಿತು ಅಮೇರಿಕ, ಇಂಗ್ಲಾಂಡುಗಳಿಂದ ಟೀಕೆ ಕೇಳಿಬರುತ್ತಿದೆ. ರಶ್ಯದ ಕೈ ಮೇಲಾಯಿತೆಂಬ ದೂರುಗಳೆದ್ದಿವೆ. ಜಾವಾದಲ್ಲಿ ಇಂಡೋನೇಶಿಯರ ಸ್ವಾತಂತ್ರ್ಯ ಸಮರವನ್ನು ಹತ್ತಿಕ್ಕಲು ಅಲ್ಲಿ ಅಮಾನುಷ ಹಾವಳಿ ಮಾಡುತ್ತಿರುವ ಬ್ರಿಟಿಷ್ ಸೇನೆಗಳ ಕೃತ್ಯಕ್ಕೆ ಹತೋಟಿಯಿಲ್ಲದುದು ಸರ್ವತ್ರ ಖಂಡನೆಗೊಳಗಾಗಿದೆ. ಕೊರಿಯದ ಆಡಳಿತೆ ವ್ಯವಸ್ಥೆಗಾಗಿ ಐದು ವರುಷಗಳ ಕಮಿಶನ್ ನೇಮಿಸಿದುದು ತಮ್ಮ ಸ್ವಾತಂತ್ರ್ಯಾಪಹಾರದ ಯತ್ನವೆಂದು ಕೊರಿಯಾನರು ಮುಷ್ಕರ, ಪ್ರದರ್ಶನಗಳನ್ನು ನಡಿಸುತ್ತಿದ್ದಾರೆ; ಅಮೇರಿಕನರ ಮೇಲೆ ಇಟ್ಟಿಗೆ, ಕಲ್ಲುಗಳನ್ನೆಸೆಯಹತ್ತಿರುವುದರಿಂದ ಅಲ್ಲಿಯ ಸ್ಥಿತಿ ವಿಷಮವಾಗಿದೆ.

ತಿದ್ದುಪಡಿ ಸೂಚನೆ- ಕಳೆದ ತಾ. 23ರಲ್ಲಿ ಮೂಲ್ಕಿಯಲ್ಲಿ ಜರಗಿದ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯಲ್ಲಿ ಮಂಜೂರಾದ ಸದಸ್ಯತನದ ವರ್ಗಣಿಯನ್ನು ಒಂದು ರೂಪಾಯಿಗೆ ಇಳಿಸುವ ಠರಾವನ್ನು ತಂದವರು ಶ್ರೀ. ಎ. ಕೃಷ್ಣ ಶೆಟ್ಟರು ಎಂದು ತಿದ್ದಿಕೊಳ್ಳಬೇಕಾಗಿದೆ. (ಸಂ. ಸ.)

1000's SAVED
MARGARET'S
FITS CURE
Stops children's fits in 3 minutes.
Ask your chemist for a box
Sole Agents
BRIGHTSTAR AGENCIES,
Hospital Rd., Udipi, S. K.

ಆಜಾದ್ ಹಿಂದ್ ತ್ರಿನಾಯಕರ ಮೇಲೆ ತಪ್ಪು ಸ್ಥಾಪನೆ.

ಕೆಪ್ಟನ್ ಶಾನವಾಜ್, ಕೆಪ್ಟನ್ ಸೆಹ್ಗಲ್, ಕೆಪ್ಟನ್ ಧಿಲ್ಲೋನರ ಮೇಲಿನ ಕೆಂಪುಕೋಟೆ ಮೊಕದ್ದಮೆಯಲ್ಲಿ ಆರೋಪಿ ಮತ್ತು ಸರಕಾರೀ ವಕೀಲರಾದ ಶ್ರೀ| ಭುಲಾಭಾಯಿ ಹಾಗೂ ಸರ್ ನೋಶಿರ್ವಾನರ [illegible]ವಾದ ಪ್ರತಿವಾದಗಳು ಮುಗಿದು ಮುಂದುವರಿಸಲ್ಪಟ್ಟಂತೆ, ತಾ. 29ರಲ್ಲಿ ಜಡ್ಜ್ ಎಡ್ವೊಕೇಟರಿಂದ ಕರ್ನಲ್ ಕೆರಿನರ ಸಮಾರೋಪ ನಡೆಯಿತು. ನ್ಯಾಯಸ್ಥಾನಕ್ಕೆ ಇಕ್ಕಡೆಯ ವಾದಗಳ ಕಾನೂನು ಮತ್ತು ವಿಷಯಗಳ ಸಾರ ನಿರೂಪಣೆಯನ್ನು ಕರ್ನಲ್ ಕೆರಿನರು 3¼ ಘಂಟೆ ಮಾಡಿ, ಕ್ರಮಬದ್ಧವಾದ ತೀರ್ಮಾನದ ಹೊಣೆಯನ್ನು ಕೋರ್ಟಿಗೆ ಬಿಟ್ಟರು ಕೋರ್ಟು ತನ್ನ ನಿರ್ಧಾರ ಹುಡುಕಲು ತಾ. 31ಕ್ಕೆ ಮುಂದುವರಿಯಿತು.

ಮೂವರೂ ಅಪರಾಧಿಗಳು!

ತಾ. 31ರಲ್ಲಿ ಕೋರ್ಟು ಮಾರ್ಶಲ್ 20 ಮಿನಿಟು ಸೇರಿದು ಮೂವರು ಆರೋಪಿಗಳೂ ಒಂದು ಅಥವಾ ಹೆಚ್ಚಿನ 'ಚಾರ್ಜ'ಗಳ ಮೇಲೆ ಅಪರಾಧಿಗಳೆಂಬ ತನ್ನ ಶೋಧನೆಯನ್ನು ಸೂಚಿಸಿತು. ಕೋರ್ಟು ಮಾರ್ಶಲ್ ಕ್ರಮದಂತೆ ಆರೋಪಿಗಳು ಅಪರಾಧಿಗಳೆಂಬ ನಿರ್ಧಾರಕ್ಕೆ ಬಂದಮೇಲೆ ತಾವು ವಿಧಿಸತಕ್ಕ ಶಿಕ್ಷೆಯೆಂತಹದಿರಬೇಕೆಂಬುದನ್ನು ನಿರ್ಧರಿಸುವ ಮೊದಲು ಆರೋಪಿಗಳ ದಾಖಲೆಗಳು ಮತ್ತು ಗುಣನಡತೆಗಳನ್ನು ಪರ್ಯಾಲೋಚಿಸುವದಿದೆ. ಆಗ ಆರೋಪಿಗಳಾಗಲೀ ಅವರ ವಕೀಲರಾಗಲೀ ಕಡಿಮೆ ಶಿಕ್ಷೆ ಕೊಡುವಂತೆ ಕೋರ್ಟನ್ನು ವಿನಂತಿಸಿಕೊಳ್ಳಬಹುದು. ಆ ಮೇಲೆ ಕೋರ್ಟು ಗುಪ್ತವಾಗಿ ಪರ್ಯಾಲೋಚನೆ ನಡಿಸಿ ಶಿಕ್ಷೆ ವಿಧಿಸಬೇಕು. ಆ ಶಿಕ್ಷೆಯನ್ನಾದರೂ ಆಗಲೇ ಬಹಿರಂಗಪಡಿಸುವಂತಿಲ್ಲ; ಅದು ಅಷ್ಟಕ್ಕೇ ಸಿಂಧುವಾಗುವದೂ ಇಲ್ಲ. ಕೊನೆಯ ಅಧಿಕಾರಿಯು (ಆಜಾದ್ ಹಿಂದ್ ಆರೋಪಿಗಳೆಲ್ಲರ ಮಟ್ಟಿಗೂ ಇಲ್ಲಿಯ ಕೊನೆಯ ಅಧಿಕಾರಿಯೆಂದರೆ ಭಾರತದ ಕಮಾಂಡರ್-ಇನ್-ಚೀಫ್ ಜನರಲ್ ಆಚಿನ್‌ಲೆಕ್) ಅದನ್ನು ದೃಢೀಕರಿಸಿದಾಗಲೇ ಅದಕ್ಕೆ ಅಸ್ತಿತ್ವ ಬರುವದು; ಮತ್ತದು ಪ್ರಕಟಿಸಲ್ಪಡುವದು. ವಿಚಾರಣೆಯ ಎಲ್ಲಾ ರಿಕಾರ್ಡು ಸಮೇತ ತೀರ್ಮಾನವನ್ನು ಜಡ್ಜ್ ಎಡ್ವೊಕೇಟರು, ದೃಢೀಕರಣಾಧಿಕಾರಿಯ ಕಾನೂನು ಸಲಹೆಗಾರರಿಗೊಪ್ಪಿಸಬೇಕು ಅವರದರಲ್ಲಿ ಕಾನುನೂಬದ್ಧವಾಗಿರುವ ಸರಿತಪ್ಪುಗಳನ್ನು ದೃಢೀಕರಣಾಧಿಕಾರಿಗೆ ನಿವೇದಿಸಿಕೊಳ್ಳಬೇಕು. ಆ ಮೇಲೆ ಆ ಮುಖ್ಯಾಧಿಕಾರಧಾರಿಯು ಕೊನೆಯ ನಿರ್ಧಾರವಮಾಡಬೇಕು. ಕೋರ್ಟು ಮಾರ್ಶಲ್ ಶಿಕ್ಷೆಯನ್ನು ಹೆಚ್ಚಿಸುವ ಅಧಿಕಾರ ಇವರಿಗಿಲ್ಲ. ಆದರೆ ತಗ್ಗಿಸಬಹುದು; ಮೃದುಗೊಳಿಸಬಹುದು; ಪೂರ್ಣ ರದ್ದತಿ ಕೊಡುವ ಹಕ್ಕೂ ಇದೆ.

ಅಪರಾಧಿಗಳ ಯೋಗ್ಯತೆ

ಪದ್ಧತಿಗನುಸಾರವಾಗಿ ಅಪರಾಧಿಗಳ ಗುಣನಡತೆಯನ್ನು ನಿವೇದಿಸಿಕೊಳ್ಳಲು ಕೋರ್ಟು ಪ್ರಾರಂಭದಲ್ಲೇ ಜಡ್ಜ್ ಎಡ್ವೊಕೇಟರು ಮಿಲಿಟರಿ ಪ್ರೊಸಿಕ್ಯೂಟರ್ ಕರ್ನಲ್ ವಾಲ್ಶರನ್ನು ಕರೆದಾಗಲೇ ತಪ್ಪು ಸ್ಥಾಪನೆಯಾಗಿದೆ ಎಂಬುದು ಊಹಿಸಲ್ಪಟ್ಟಿತು. ಕರ್ನಲ್ ವಾಲ್ಶರು ಆರೋಪಿಗಳ ಪರಿಚಯವನ್ನು ಈ ಕೆಳಗಿನಂತೆ ಉಲ್ಲೇಖಿಸಿದರು ಕೆಪ್ಟನ್ ಶಾನವಾಜ್:-ಪ್ರಾಯ 31 ವರುಷ 11 ತಿಂಗಳು. 9 ವರುಷ 11 ತಿಂಗಳೂ ಹಿಂದೀ ಸರಕಾರೀ ಸೇನೆಯಲ್ಲಿ ಆದ್ಯಂತವಾಗಿ ಕಮಿಶನ್‌ಧಾರಿ ಅಧಿಕಾರಿಯಾಗಿದ್ದ. 5 ವರುಷ 1 ತಿಂಗಳು ಕೆಪ್ಟನ್ ಆಗಿದ್ದ. ಈ ವಿಚಾರಣೆಯೊಂದನ್ನು ಬಿಟ್ಟರೆ ಆತನ ಸಾಮಾನ್ಯ ಗುಣನಡತೆಗಳೆಲ್ಲಾ ಅತ್ಯುತ್ತಮ. ಸೇನಾಪದಕಗಳು ಅಥವಾ ಬಹುಮಾನಗಳನ್ನು ಪಡೆದವನಲ್ಲ. ಈ ಮೊದಲು ಯಾವ ಶಿಕ್ಷೆಯನ್ನೂ ಪಡೆದವನಲ್ಲ. ಕೆಪ್ಟನ್ ಸೆಹ್ಗಲ್:— ಪ್ರಾಯ 28 ವರುಷ 11 ತಿಂಗಳು. ಹಿಂದೀ ಸೇನೆಯಲ್ಲಿ ಕಮಿಶನ್‌ಧಾರಿ ಅಧಿಕಾರಿಯಾಗಿಯೂ, 5 ವರುಷ ಕೆಪ್ಟನನಾಗಿಯೂ ಕೆಲಸಮಾಡಿದ್ದ. ಮಿಲಿಟರಿ ಪದಕ ಯಾನೆ ಬಹುಮಾನ ಪಡೆದುದಿಲ್ಲ ಗುಣನಡತೆ ಅತ್ಯುತ್ತಮ. ಹಿಂದಾದ ಶಿಕ್ಷೆಯೂ ಆಗಿಲ್ಲ. ಲೆಫ್ಟನೆಂಟ್ ಧಿಲ್ಲೋನ್:-ಪ್ರಾಯ 30 ವರುಷ 9 ತಿಂಗಳು. 5 ವರುಷ 9 ತಿಂಗಳು ಹಿಂದೀ ಸೇನೋದ್ಯೋಗಿ. 4 ವರುಷ 3 ತಿಂಗಳು ಲೆಫ್ಟನೆಂಟ್ ಆಗಿದ್ದ. ಸೇನಾಪದಕ ಅಥವಾ ಬಹುಮಾನಗಳು ದೊರೆತಿಲ್ಲ ಈ ಮೊದಲು ಶಿಕ್ಷೆಯಾದುದೂ ಇಲ್ಲ, ಗುಣನಡತೆ ಅತ್ಯುತ್ತಮ.

ವಿಚಾರಣೆಯ ಕೊನೆಯ ಸೊಲ್ಲು

ಕರ್ನಲ್ ವಾಲ್ಶರ ಹೇಳಿಕೆಯಾದೊಡನೆ ಅವರಿಗೆ 'ಅಡ್ಡ ಸವಾಲಿದೆಯೇ?' ಎಂದು ಜಡ್ಜ್ ಎಡ್ವೊಕೇಟರು ಆರೋಪಿ ವಕೀಲರನ್ನು ವಿಚಾರಿಸಿದರು. ಶ್ರೀ. ದೇಸಾಯಿಗಳ ಗೈರುಹಾಜರಿಯಲ್ಲಿ ಶ್ರೀ. ಸೋನಿನ್ ಅವರು ಇಲ್ಲವೆಂದರು. ಕೊನೆಗೆ ಕೋರ್ಟಿಗೇನಾದರೂ ಹೇಳಿಕೊಳ್ಳುವಿರಾ? ಎಂದು ಆರೋಪಿ ವಕೀಲರನ್ನು ಮತ್ತು ಪ್ರತಿಯೊಬ್ಬ ಆರೋಪಿಯನ್ನೂ ಜಡ್ಜ್ ಎಡ್ವೊಕೇಟರು ಪ್ರಶ್ನಿಸಿದರು. ಎಲ್ಲರಿಂದಲೂ 'ಇಲ್ಲ' ಉತ್ತರ ಬಂತು. ಕೊನೆಗೆ ಕೋರ್ಟು ಅಧ್ಯಕ್ಷ ಮೇಜರ್ ಜನರಲ್ ಬ್ಲಕ್ಸ್‌ಲಾಂಡರು ವಿಚಾರಣೆಯನ್ನು ಮುಗಿಸುತ್ತಾ "ಶಿಕ್ಷೆಯ ಪರ್ಯಾಲೋಚನೆಗಾಗಿ ಕೋರ್ಟು ಈಗ ಮುಗಿಯಿತು. ಶೋಧನೆಗಳು ಮತ್ತು ಶಿಕ್ಷೆಯ ತೀರ್ಮಾನವು ದೃಢೀಕರಣ ಪಡೆಯತಕ್ಕಂಥವುಗಳಿರುವುದರಿಂದ ಕೆಲವು ದಿನಗಳ ನಂತರ-ಒಂದು ವಾರದೊಳಗೆಂಬ ಆಶೆಯಿದೆ-ಪ್ರಕಟಿಸಲ್ಪಡುವವು. ಬಹಿರಂಗ ವಿಚಾರಣೆಯನ್ನು ಈ ಮೂಲಕ ಮುಕ್ತಾಯಪಡಿಸಲಾಗಿದೆ"-ಎಂದರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ
ತಾರೀಕು 7-1-19[illegible]ಂದ
ಭಕ್ತ ಹನುಮಾನ್
N. V. ಚಲಿಪ್ಪ, ನಾಗಮ್ಮ, ಶಾಂತಾ.
ಬರುವುದು.—
ಕನ್ನಡ ಪ್ರಹ್ಲಾದ.

ದಿನಕ್ಕೊಂದು ನಗೆ; ಆರೋಗ್ಯದ ಬಗೆ.
ನಗುವಿನೊಂದಿಗೆ ವಿಚಾರದ ಕಿಡಿಯೂ ಬೆಳಗಬೇಕೆ?
ಹಾಗಿದ್ದರೆ
ವಿಷ್ಣುವಿನ ದಶಾಪರಾಧಗಳು
ಅರ್ಥಾತ್ ದಶಾವತಾರಗಳು.
ಎಂಬ ದಶಾವತಾರಗಳ ಕುರಿತಾದ ವಿಡಂಬನ ಗ್ರಂಥವನ್ನೋದಿರಿ.
ಕರ್ನಾಟಕದ ಪ್ರಸಿದ್ಧ ವಿಡಂಬನಕಾರರಾದ
ಶ್ರೀ. ಎಂ. ವಿ ಹೆಗ್ಡೆಯವರ ಕೃತಿ.
ಬೆಲೆ 0-12-0
ಪ್ರತಿಗಳಿಗೆ ಉಡುಪಿಯ ಕಿರಿಯರ ಪ್ರಪಂಚಕ್ಕಾಗಲಿ, ನವಭಾರತ ಪುಸ್ತಕ ಭಂಡಾರಕ್ಕಾಗಲಿ
ಬರೆದು ತರಿಸಿಕೊಳ್ಳಬಹುದು.

೩೪ನೇ ಅಖಿಲ ಆಯುರ್ವೇದ ಕಾಂಗ್ರೆಸ್, ಮಣಿಪಾಲ.

ಶಿಕ್ಷ ಸಮ್ಮೇಲನದ ಅಧ್ಯಕ್ಷ
ಪಂ। ಪುರುಷೋತ್ತಮ ಸಖಾರಾಮ್ ಶಾಸ್ತ್ರಿ ಹಿರ್ಲೇಕರ್.

ಫಾರ್ಮೆಸಿ ಪರಿಷತ್ತಿನ ಅಧ್ಯಕ್ಷ
ವೈದ್ಯ ನಾನಾ ಸಾಹೇಬ್ ಪುರಾಣಿಕ್.

ಕುಮಾರ ಭೃತ್ಯ ಸಂಭಾಷಾ ಪರಿಷತ್ತಿನ ಅಧ್ಯಕ್ಷೆ
ಶ್ರೀಮತಿ ಸುಮತಿ ತಾರಾನಾಥ್, ಬಿ. ಎ. ಎಲ್. ಟಿ.

ದಶಂಬರ 28

ಕಾಂಗ್ರೆಸ್ ಸಮ್ಮೇಳನದ ಚಪ್ಪರಕ್ಕೆ ತಾರಾವಿಹಾರ ನಗರವೆಂದು ತಾ 28ರಲ್ಲು ಪೂರ್ವಾಹ್ನ ಹೆಸರಿಡಲಾಯಿತು ಈ ಸಮಯದಲ್ಲೇ ಕೀರ್ತಿಶೇಷ ಪಂಡಿತ ತಾರಾನಾಥರ ಭಾವಚಿತ್ರವನ್ನು ಶ್ರೀ ಎಚ್. ಎಸ್. ಹುಸ್ಸೇನ್ ಸಾಹೇಬ್ ಬಹದ್ದೂರ್ ಅವರು ಅನಾವರಣಮಾಡಿದರು.

ಇದಕ್ಕೆ ಸಂಬಂಧಪಟ್ಟ ವಸ್ತುಪ್ರದರ್ಶನದ ಉದ್ಘಾಟನಾ ಸಮಾರಂಭವು ಶ್ರೀ ನಟರಾಜ ಶಾಸ್ತ್ರಿಯವರ ನೇತೃತ್ವದಲ್ಲಿ ಮಧ್ಯಾಹ್ನ ಜರಗಿತು. ಬ್ರಹ್ಮಶ್ರೀ ಪಾಣಾಜೆ ಪಂಡಿತ ಶಂಕರನಾರಾಯಣ ಭಟ್ಟರ ಪರವಾಗಿ ಡಾ ಪಿ। ಎಸ್। ಈಶ್ವರ ಭಟ್ ವಿರಲ್, ಅವರು ಹಲವು ಉಪಯುಕ್ತ ಸಲಹೆಗಳನ್ನೊ [illegible] ಣವನ್ನೋದಿದರು. ಆಯುರ್ವೇದದ ಏಳಿಗೆಗೆ ಇಂತಹ ವಸ್ತು ಪ್ರದರ್ಶನಗಳು ಅತ್ಯಾವಶ್ಯಕವೆಂಬುದನ್ನು ಅಧ್ಯಕ್ಷರಾದ ಶ್ರೀ ಶಾಸ್ತ್ರಿಗಳು ಒತ್ತಿಹೇಳಿದರು.

ವಸ್ತು ಪ್ರದರ್ಶನದ ಉದ್ಘಾಟನೆಯು ಮುಗಿದ ಬಳಿಕ ಭಿಷಗ್‌ರತ್ನ ಎ। ಲಕ್ಷ್ಮೀಪತಿಯವರು ಯೋಗ ವ್ಯಾಯಾಮ ಸಂಭಾಷಾ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿ ವ್ಯಾಯಾಮ, ಅಂಗಸಾಧನ ಇವುಗಳನ್ನು ವಿವರಿಸಿ ಆಯುರ್ವೇದದಲ್ಲಿ ಇವುಗಳಿಗಿರುವ ಸ್ಥಾನಮಾನಾದಿಗಳನ್ನು ವರ್ಣಿಸಿದರು. ರಾತ್ರಿ ವಿದ್ಯಾಪೀಠ ಮತ್ತು ಮಹಾಮಂಡಲದ ಸಭೆಗಳು ಜರಗಿದವು.

ದಶಂಬರ 29

ತಾ 29ರಲ್ಲು ಪೂರ್ವಾಹ್ನ ಅಖಿಲ ಭಾರತ ಆಯುರ್ವೇದ [illegible] ಗಳ ಸಮ್ಮೇಳನವು ಕವಿರಾಜ ಆಶುತೋಷ ಮಜುಮ್ದಾರ ಅಧ್ಯಕ್ಷತೆಯಲ್ಲಿ ಜರಗಿತು ಸಂಜೆ ಮಹಾ ಅಧಿವೇಶನವು ಪ್ರಾರಂಭವಾಯಿತು. ಶ್ರೀ। ಎ। ಲಕ್ಷ್ಮೀನಾರಾಯಣ ರಾಯರು ಸ್ವಾಗತ ಭಾಷಣವನ್ನೋದಿದರು. ಶ್ರೀ ಶೀರೂರು ಮಠದ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರು ಅಧಿವೇಶನದ ಉದ್ಘಾಟನೆಯನ್ನು ನೆರವೇರಿಸಿದರು ಅದಾಗಿ ಕವಿರಾಜ ಮಣೀಂದ್ರ ಕುಮಾರ ಮುಖರ್ಜಿಯವರ ಅಧ್ಯಕ್ಷ ಭಾಷಣವಾಯಿತು ಮಹಾ ಅಧಿವೇಶನಕ್ಕೆ ಶ್ರೇಯಸ್ಸನ್ನು ಕೋರಿ ಬಂದ ತಂತಿ, ಪತ್ರಗಳು ಸಹ ಓದಲಾದುವು ತದನಂತರ ಶಿಕ್ಷ ಸಮ್ಮೇಳನ ನಡಯಿತು ಮಂಗಳೂರಿನ ಲಾರ್ಡ್ ಬಿಶೋಪರು ಉದ್ಘಾಟನಾ ಸಮಾರಂಭವನ್ನು ಪೂರೈಸಿದರು ವೈದ್ಯಭೂಷಣ ಎಮ್. ವಿ ಶಾಸ್ತ್ರಿಗಳು ಸ್ವಾಗತ ಭಾಷಣ ಮಾಡಿದರು ರಾತ್ರಿ ವಿಷಯ ನಿಯಾಮಕ ಸಭೆಯು ಸೇರಿತು.

ದಶಂಬರ 30

ತಾ. 30ರಲ್ಲು ಪೂರ್ವಾಹ್ನ ಶ್ರೀ। ಗಂಗಾಧರ ವಿಷ್ಣು ಪುರಾಣಿಕರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಆಯುರ್ವೇದ ವಿದ್ಯಾಪೀಠ ಸ್ನಾತಕ ಸಮ್ಮೇಳನ ಜರಗಿತು. ಕುಮಾರಭೃತ್ಯ ಸಂಭಾಷಾ ಸಮ್ಮೇಳನವು ವೈದ್ಯಗುರು ಶ್ರೀಮತಿ ಸುಮತಿ ತಾರಾನಾಥರ ಅಧ್ಯಕ್ಷತೆಯಲ್ಲೂ ಕಾಯಚಿಕಿತ್ಸಾ ಸಂಭಾಷಾ ಪರಿಷತ್ತು ವೈದ್ಯಗುರು ಆರ್. ಕೆ. ವಲ್ವೇಕರ್‌ರವರ ನೇತೃತ್ವದಲ್ಲೂ ಜರಗಿತು ಸಂಗ್ ದರ್ಶನ ಸಂಭಾಷಾ ಮತ್ತು ಶಲ್ಯಶಾಲಕ್ಯ ಚಿಕಿತ್ಸಾ ಸಂಭಾಷಾ ಪರಿಷತ್ತುಗಳು ಆಯುರ್ವೇದ ವಿದ್ವಾನ್ ನಂಜುಂಡ ಸ್ವಾಮಿ ಮತ್ತು ಶ್ರೀ. ಸುಬ್ರಹ್ಮಣ್ಯ ಶಾಸ್ತ್ರಿಗಳವರ ನಾಯಕತ್ವದಲ್ಲಿ ಅನುಕ್ರಮವಾಗಿ ಜರಗಿದವು.

ದಶಂಬರ 31

ತಾ 31ರಲ್ಲು ಬೆಳಗ್ಗೆ ಧನ್ವಂತರಿ ಧ್ವಜಾರೋಹಣವಾದ ಬಳಿಕ ಕರ್ನಾಟಕ ಆಯುರ್ವೇದ ಮಂಡಲದ ಸ್ಥಾಯಿ ಸಮಿತಿಯ ಸಭೆಯು ಶ್ರೀ. ಪಿ. ಎನ್. ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿ ಕರ್ನಾಟಕ ಪ್ರಾಂತಿಕ ಆಯುರ್ವೇದ ಪರಿಷತ್ತನ್ನು ಬರುವ ದಶಂಬರ ತಿಂಗಳಲ್ಲಿ ಗದಗಿನಲ್ಲಿ ಜರಗಿಸಬೇಕೆಂದು ನಿರ್ಧಾರವಾಯಿತು. ಆ ಬಳಿಕ ಅಖಿಲ ಭಾರತ ಆಯುರ್ವೇದ ಫಾರ್ಮಸಿ ಕಾನ್ಫರೆನ್ಸು ಜರಗಿತು. ದೇಶೀಯ ಔಷಧಿಗಳಿಗೆ ವಿದೇಶಿ ನಾಮಕರಣ ಮಾಡಿ ಬಿಲ್ಲೆಗಳನ್ನು ಹಚ್ಚಕೂಡದೆಂಬ ಗೊತ್ತುವಳಿಯಾಯಿತು. ಮಧ್ಯಾಹ್ನ ವನಸ್ಪತಿ ಎಲೆ, ಬೇರು ಮೊದಲಾದುವುಗಳ ಮಹತ್ವವನ್ನು ಸ್ಪಷ್ಟಪಡಿಸುವ ವನಸ್ಪತಿ ಸಂಭಾಷಾ ಕೂಟವು ಜರಗಿತು ಶ್ರೀ. ಎಮ್. ಎಸ್. ಕೃಷ್ಣ ಅಯ್ಯಂಗಾರ್, ಮೈಸೂರು ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರು ಹರಿಜನರು ಕಂಡುಹಿಡಿದ ಅತ್ಯಮೂಲ್ಯ ಬೇರುನಾರುಗಳ ಮಹತ್ವವನ್ನು ಪ್ರತ್ಯಕ್ಷ ಪ್ರದರ್ಶಿಸಿ ಅವು ಎಂತಹ ಘನರೋಗಗಳನ್ನೂ ಗುಣಪಡಿಸುತ್ತವೆ ಎಂಬುದನ್ನು ವಿವರಿಸಿ ಭಾಷಣವಿತ್ತರು.

ಸಂಜೆ ಮಹಾಧಿವೇಶನವು ಆರಂಭವಾಗಿ ನಿರ್ಣಯಗಳ ಪರಿಶೀಲನೆಗಾರಂಭವಾಯಿತು ಮಹಾ ಮಂಡಲದ ಕಲವು ನ್ಯೂನತೆಗಳು ಸಭೆಯ ಮುಂದೆ ಬರಲಾಗಿ ಅಧ್ಯಕ್ಷರು ಅವಕ್ಕೆ ಸಮರ್ಪಕ ಉತ್ತರವಿತ್ತರು. ಯೂನಿವರ್ಸಿಟಿ ಮತ್ತು ಇತರ ಸಂಸ್ಥೆಗಳು ಅಪೇಕ್ಷಿಸಿದಲ್ಲಿ ಆಯುರ್ವೇದದ ಮಹತ್ವದ ಕುರಿತು ಭಾಷಣಗಳ ಏರ್ಪಾಡು ಮಾಡುವುದು, ಕಲ್ಕತ್ತಾ ಮತ್ತಿತರ ಸ್ಥಳಗಳಲ್ಲಿ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಯೋಗ ಮಾಡಿದುದರ ನಿಷೇಧ ಸೂಚಿಸುವ, ಐ ಎನ್ ಎ ಆರೋಪಿಗಳ ಬಿಡುಗಡೆಯ ಬಗ್ಗೆ ವಿನಂತಿಸುವ, ಅಖಿಲ ಭಾರತ ಆಯುರ್ವೇದ ಮಹಾ ಮಂಡಲದ ಕೃಷಿಡಿಯನ್ನು ತಯಾರಿಸುವ; ಮಲಯಾ ದೇಶಕ್ಕೆ ಆಯುರ್ವೇದ ವೈದ್ಯ ಮಂಡಳಿಯನ್ನು ಕಳುಹಿಸಿ ತನ್ಮೂಲಕ ಅಲ್ಲಿಯ ಜನರ ಸಂಕಷ್ಟಗಳನ್ನು ಪರಿಹಾರ ಮಾಡಬೇಕೆನ್ನುವ, ಪ್ರಾಂತಿಕ ಚುನಾವಣೆಯಲ್ಲಿ ವೈದ್ಯರನ್ನು ಚುನಾಯಿಸಬೇಕೆನ್ನುವ; ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆನ್ನುವ, ಸರ್ವ ಜನತೆಯಲ್ಲೂ ಆಯುರ್ವೇದ ರುಚಿಯನ್ನುಂಟುಮಾಡಬೇಕೆನ್ನುವ, ವಿದ್ಯಾ ಪಾಠಪುಸ್ತಕಗಳಲ್ಲಿ ಆಯುರ್ವೇದವನ್ನು ಸೇರಿಸಬೇಕೆನ್ನುವ ಇತ್ಯಾದಿ ನಿರ್ಣಯಗಳು ಪಾಸಾದುವು ಮಳಬಾರು ಮತ್ತು ಕರ್ನಾಟಕ ವೈದ್ಯರಪರವಾಗಿ ಶ್ರೀಗಳಾದ ಕೇಳು ನಂಬಿಯಾರ್, ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಡಿ. ಕೆ. ಭಾರದ್ವಾಜ, ಪಾರ್ಥ ನಾರಾಯಣ ಪಂಡಿತ್ ಮತ್ತು ಪರಮಶಿವ ಪಿಳ್ಳೆಯವರು ಕೂಡಿ ಔಷಧ ತಯಾರಿಕೆಯಲ್ಲಿ ಒಮ್ಮತದ ಪರಿಮಾಣ ಮಿತಿಯನ್ನು ಸೂಚಿಸಿ ಒಂದು ವರದಿಯನ್ನು ಮಹಾಮಂಡಲಕ್ಕೆ ಕಳುಹಿಸುವರೆ ನಿರ್ಣಯವಾಯಿತು ಉಡುಪಿಯಲ್ಲೊಂದು ಆಯುರ್ವೇದ ಮಹಾ ವಿದ್ಯಾಲಯವನ್ನು ಸ್ಥಾಪಿಸಬೇಕಾಗಿಯೂ ತತ್ಸಂಬಂಧ ಮುಂದಿನ ಕಾರ್ಯಕ್ರಮವನ್ನು ಕೈಕೊಳ್ಳುವರೆ ಒಂದು ಕಮಿಟಿಯ ರಚನೆಯೂ ಆಯಿತು ಸಾಂಡೂರು ಸಂಸ್ಥಾನದ ರಾಜರ ಸೂಚನೆಯಂತೆ ಅನುಕೂಲ ವಾತಾವರಣವಿದ್ದರೆ ಮಹಾ ಮಂಡಲದ ವಿಶೇಷ ಅಧಿವೇಶನವನ್ನು ಸಾಂಡೂರಲ್ಲಿ ಸೇರಿಸಬೇಕೆಂದಾಯಿತು. ಮುಂದಿನ ವಾರ್ಷಿಕ ಆಯುರ್ವೇದ ಮಹಾ ಸಮ್ಮೇಲನವು ಖಾನಪುರದಲ್ಲಿ ಕೂಡತಕ್ಕದ್ದೆಂದು ನಿರ್ಧಾರವಾಯಿತು ಹೊಸ ವರುಷದ ಕಾರ್ಯಕಾರೀ ಮಂಡಳಿಯ ರಚನೆಯಾಗಿ ಅತಿಥಿ ಅಭ್ಯಾಗತರೊಳಗೆ ಪರಸ್ಪರ ಔಪಚಾರಿಕ ಧನ್ಯವಾದಗಳ ಘೋಷಣೆಗಳಿಂದ ಮಣಿಪಾಲದ ಮಹಾಮಂಡಳದ ಮಹಾ ಅಧಿವೇಶನವು ಕೊನೆಗೊಂಡಿತು ಈ ಅಧಿವೇಶನದ ಯಶಸ್ಸಿಗೆ ಕಾರ್ಯದರ್ಶಿಗಳಾದ ಶ್ರೀ. ಎಮ್ ಆರ್ ಭಟ್ಟರೂ ಜೊತೆಗೋಲಾಗಿ ನಿಂತ ಶ್ರೀ ಯು. ಎ ಪೈ ಮತ್ತು ಡಾ॥ ಮಾಧವ ಪೈಗಳೂ ಅಭಿನಂದನೀಯರೇ ಸರಿ

CHAMPAE'S

Snow & Cestrex

(SoleDistributers for (India.)

Prop: K. G. NAYAK,
Santhekatte, UDIPI, S K.

ಮೂಲ್ಕಿಯಲ್ಲಿ ವಿವಿಧ ಸಮಾರಂಭಗಳು

ಪ್ರದರ್ಶನ ಉದ್ಘಾಟನಾ ಸಮಾರಂಭ ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ ಆಶ್ರಯದಲ್ಲಿ ಕೃಷಿ, ಕೈಗಾರಿಕೆ ವಸ್ತುಗಳ ಪ್ರದರ್ಶನವನ್ನು ತಾ. 21ರಲ್ಲಿ ಜಿಲ್ಲಾ ಕಲೆಕ್ಟರ್ ರಾವ್ ಬಹದೂರ್ ಪಿ. ರಾಮದಾಸ್ ಅವರು ತೆರೆದರು. ರಾವ್ ಸಾಹೇಬ್ ಪಿ. ಆರ್. ಆರ್. ಪುಂಜರು ಎಸೋಸಿಯೇಶನಿನ ಪರವಾಗಿ ವರದಿಯನ್ನೊಪ್ಪಿಸಿದರು. ಶ್ರೀ ಎಮ್. ಆರ್. ಪುಂಜರು ಸುಸ್ವಾಗತ ಭಾಷಣ ಮಾಡಿದರು. ಮೂಲ್ಕಿಯ ಗ್ರಾಮಾಭಿವೃದ್ಧಿ ಕಾರ್ಯಕರ್ತರ ಸಾಹಸವನ್ನು ಜಿಲ್ಲಾ ಕಲೆಕ್ಟರರು ಪ್ರಶಂಶಿಸಿ ಮಾತನಾಡಿದರು. ರಾತ್ರಿ ಯಕ್ಷಗಾನ ತಾಳಮದ್ದಳೆ ನಡೆಯಿತು.

ಸ್ಪೋರ್ಟ್ಸ್ ಡೆ-ಸಮಾರಂಭವು ತಾ. 22ರಲ್ಲಿ ಶ್ರೀ ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ರಾತ್ರಿ ದಶಾವತಾರ ಆಟ ಪ್ರದರ್ಶನವಾಯಿತು.

ಭಾವಚಿತ್ರ ಅನಾವರಣ— ಸಿ. ಪಿ. ಸಿ. ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಾದ ಶ್ರೀ ವಿ. ಎಸ್. ಕುಡ್ವರ ಭಾವಚಿತ್ರ ಅನಾವರಣ ಸಮಾರಂಭವನ್ನು ಮೂಲ್ಕಿ ಕ್ಲಬ್ಬಿನಲ್ಲಿ ಶ್ರೀ ಎ. ಬಿ. ಶೆಟ್ಟರು ನೆರವೇರಿಸಿದರು.

ಶಂಕುಸ್ಥಾಪನೆ—ಮೂಲ್ಕಿ ಆಸ್ಪತ್ರೆಯಲ್ಲಿ ರೋಗಿಗಳು ಉಳಕೊಳ್ಳುವ ಹಾಗೂ ಶುಶ್ರೂಷೆಹೊಂದುವ ಕೊಠಡಿಗಳ ವಾರ್ಡ್ ಕಟ್ಟಡದ ಶಂಕು ಸ್ಥಾಪನೆಯನ್ನು ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಎ. ಲಕ್ಷ್ಮೀನಾರಾಯಣರಾಯರು ಮಹಾಜನ ಸಮುದಾಯದ ಮುಂದೆ ನೆರವೇರಿಸಿದರು.

ಬಸ್ರೂರು— ಸ್ಥಳೀಯ ಪದ್ಮಸಾಲಿ ವೈಶ್ಯ ಸಮಾಜ ಸೇವಾ ಸಂಘದ ಪ್ರಥಮ ವಾರ್ಷಿಕೋತ್ಸವವು 30-12-45ರಲ್ಲಿ ಶ್ರೀ ಮಿಜಾರು ವಾಮನ ಶೆಟ್ಟಿಗಾರ್, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಬಹು ವಿಜ್ರಂಭಣೆಯಿಂದ ಜರಗಿತು. ಜಿಲ್ಲೆಯ ಎಲ್ಲಾ ಪದ್ಮಸಾಲಿ ಸಂಘಗಳೂ ತಮ್ಮ ಸದಸ್ಯರನ್ನು ಕಳುಹಿಸಿ ಪ್ರೋತ್ಸಾಹಿಸಿರುವವು.

ಪ್ರಕಟಣೆ

ದ. ಕ. ಜಿಲ್ಲಾ ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ.
(ರಿಜಿಸ್ಟರ್ಡ್)

ಈ ಸಂಘಕ್ಕೆ, ನಾವು ಮುಂಬಯಿಯಲ್ಲಿ ಧನ ಸಂಗ್ರಹ ಮಾಡುವಾಗ ಶ್ರೀಗಳಾದ ಶಿರ್ವ ಮಾಧವ ಶ್ಯಾನುಭಾಗರು, ಪಾದೂರು ಕೃಷ್ಣ ಸೆಟ್ರು, ಮುಡುಂಬು ಉಜ್ಜಣ್ಣ ಸೆಟ್ರು, ಸೂಡ ವೀರಪ್ಪ ಸೆಟ್ರು, ಮಾರ್ಜೆ ಸೇಸ ಸೆಟ್ರು, ಸಾಂತೂರು ರಾಜು ಸೆಟ್ರು, ಕಲ್ಲಟ್ಟೆ ವಿಠಲ ಸೆಟ್ರು, ಮಜಲಬೆಟ್ಟು ಬೀಡು ವಾಬ ಸೆಟ್ರು, ಸ್ಯಾಮರ್ಜಿದ ಮನೆ ವಾಸು ಸೆಟ್ರು, ಕುತ್ಯಾರು ಮುದನ ಸೆಟ್ರು, ಕುತ್ಯಾರು ನಂಜಪ್ಪ ಸೆಟ್ರು, ಅಡ್ವೆ ಸರ್ವ ಸೆಟ್ರು, ಕೆ. ಪಿ ಮುದ್ದಣ್ಣ ಸೆಟ್ರು ಮೊದಲಾದ ಮಹನೀಯರು ನಮಗೆ ತಮ್ಮ ತನುಮನಧನವನ್ನಿತ್ತು ಸಹಾಯಮಾಡಿ, ನಮ್ಮ ಕೆಲಸವನ್ನು ಒಳ್ಳೆಯ ರೀತಿಯಾಗಿ ನೆರವೇರಿಸುದಕ್ಕೆ, ನಾವು ಸಂಘದ ಪರವಾಗಿ ನಮ್ಮ ಹೃತ್ಪೂರ್ವಕ ಅಭಿವಂದನೆಯನ್ನು ಅರ್ಪಿಸುತ್ತೇವೆ. ಇವರಲ್ಲದೆ ಇತರ ಎಲ್ಲಾ ಮಹನೀಯರಿಗೂ ನಮ್ಮ ಧನ್ಯವಾದಗಳು.

ಇದೇ ರೀತಿಯಲ್ಲಿ ಪ್ರೋತ್ಸಾಹವಿತ್ತು, ವಿದ್ಯಾಸೇವೆಯನ್ನು ನಮ್ಮ ಕೈಯಿಂದ ಮಾಡಿಸಬೇಕಾಗಿ ವಿನಂತಿ.

ಕೆ. ಮುದ್ದು ಸೆಟ್ಟಿ,
President

K. Yellappa Shetty.
Treasurer

K. Nagappa Shetty.
Member

B. N Vidyawardhaka Sangha,
(Regd.) SHIRVA.

ಉಡುಪಿ

ಯಕ್ಷಗಾನ ಕಲಾ ಸಂಘದ-ಮಾಸಿಕ 'ತಾಳಮದ್ದಳೆ' ಸಮಾರಂಭವು ತಾ. 30ರಲ್ಲಿ ಶ್ರೀಮಹಿಷಮರ್ದಿನಿ? ಅನಂತೇಶ್ವರ ದೇವಳದ ಚಾವಡಿಯಲ್ಲಿ ಜರಗಿತು. ಪ್ರಸಂಗ ಅಂಗದ ಸಂಧಾನ. ಕಾರ್ಯದರ್ಶಿ ಶ್ರೀ ನಾರಾಯಣ ಶೆಟ್ಟರ ಹಾಡುವಿಕೆ, ಶ್ರೀ ಎಸ್. ಸುಬ್ರಾಯರ ಮೃದಂಗ ಮತ್ತು ಶ್ರೀಗಳಾದ ಪಿ ದೇಜುಸೆಟ್ಟಿ, ವಿದ್ವಾನ್ ಕಾಡಪ್ಪಯ್ಯ, ಪಿ.ಸೀನಸೆಟ್ಟಿ, ಎಸ್ ಗಣಪಯ್ಯ ಸೆಟ್ಟಿ, ಎಸ್ ಶ್ರೀನಿವಾಸ ಪಂಡಿತ್, ಎ. ಓರಿಯಣ್ಣ ಸೆಟ್ಟಿ ಮೊದಲಾದವರಿಂದ ಅರ್ಥ ವಿವರಣೆಗಳಾದುವು. ಸಂಘದ ಪರವಾಗಿ ಶ್ರೀ. ಪೊಳ್ಳ ದೇಜು ಸೆಟ್ಟರು ವಿಜ್ಞಾಪನಾ ಭಾಷಣ ನಿತ್ತ ಮೇಲೆ ಶಾಲಾ ಡಿ. ಇನ್ಸ್‌ಪೆಕ್ಟರ್ ಶ್ರೀ ಸಂಜೀವಭಟ್ಟರು ಧನ್ಯವಾದಗಳ ಮೂಲಕ ಸಂಘದ ಕಲಾ ಸೇವೆಗೆ ಬೆಂಬಲವೀಯಬೇಕೆಂದು ವಿನಂತಿಸಿಕೊಂಡರು ಇದೇ ತಾ. 2ನೇ ರಾತ್ರಿ ಆದಿಉಡುಪಿಯಲ್ಲಿ ಸಂಘದವರಿಂದ ವಿಶೇಷ ಯಕ್ಷಗಾನ ಸೇವೆ ಜರಗಲಿದೆ.

ಉಡುಪಿಯ **ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನವರು** ನವ್ಯವರ್ಷಕೊಂದು ನವಯೋಜನೆಯನ್ನು ಹಳ್ಳಿಗಳವರಲ್ಲಿ ಸ್ವಾವಲಂಬನ, ಸ್ವಸ್ಥ್ಯ, ಸ್ವಪ್ರಯತ್ನದ್ಧಾರ ಬುದ್ಧಿ, ಮಿತವ್ಯಯ ಶೀಲ, ಧನಸಂಚಯ ಬಲವು ಇವನ್ನು ಉತ್ತೇಜಿಸಿ ಗ್ರಾಮೋನ್ನತಿಯನ್ನು ಸಾಧಿಸುವ ಪ್ರಚಾರ ಕಾರ್ಯ ಮತ್ತು ಸುಲಭ ವ್ಯವಹಾರದ ಕಾರ್ಯಕ್ರಮ, ರೀತಿನೀತಿಗಳನ್ನೊಳಗೊಂಡ ಈ **ರೂರಲ್-ಬೇಂಕಿಂಗ್ ಸ್ಕೀಮ್**ನ್ನು ಯೋಚಿಸಿ, ಆರಂಭಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕಾಣಿಕೆಯಾಗಿ ಮುಂದಿಟ್ಟಿರುತ್ತಾರೆ. ಈ ಯೋಜನೆಯ ಪ್ರಚಾರ ಪ್ರಯೋಗಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳನ್ನು 1946ನೇ ವರ್ಷದಲ್ಲಿ ವ್ಯಯಿಸುವ ನಿರ್ಧಾರ ಮಾಡಿರುತ್ತಾ, ಹಳ್ಳಿಗಳ ಉತ್ಸಾಹಿಗಳು ತಮ್ಮ ಪ್ರಧಾನ ಉದ್ಯೋಗದೊಂದಿಗೆ ಈ ಯೋಜನೆಯ ನಿಶ್ಚಿತ ಪ್ರತಿಫಲವುಳ್ಳ ಪ್ರಚಾರ ಕಾರ್ಯವನ್ನು ಉಪವೃತ್ತಿಯನ್ನಾಗಿಟ್ಟುಕೊಂಡು ಗ್ರಾಮೋದ್ಧಾರ ಸೇವೆಯೊಡನೆ ತಂತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಲಾಗುವ ಸೌಕರ್ಯವನ್ನು ಸಾಮಾನ್ಯ ಒಡುಬರದ ಬಲ್ಲವರ್ರ್ಯಾದೂ ಪ್ರಾಮಾಣಿಕ, ಉತ್ಸಾಹಿಗಳಿದರೆ ಪ್ರಚಾರಕರಾಗ ಬಹುದಾದ ಸೌಲಭ್ಯ [illegible] ನಿರ್ವಾಹಕರೂ [illegible] ಜಿಂಗ್ ಡ್ಯಾರೆಕ್ಟರರೂ ಆಗಿರುವ **ಡಾ. ಟಿ ಮಾಧವ ಪೈ**ಗಳವರು ದೊರಕಿಸಿಕೊಟ್ಟಿರುತ್ತಾರೆ ಮೇಲಾಗಿ ಈ ಮುಂಚೆ ತನ್ನ ಹುದ್ದೆಯ ನಿಮಿತ್ತ ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ನಮ್ಮ ಜಿಲ್ಲೆಯ ಹಳ್ಳಿಗಳನ್ನು ಮೇಲ್ಮೇಲೆ ಸಂಚಾರ ಮಾಡುತ್ತಲಿದ್ದು ಗ್ರಾಮಗಳ ಹಾಗೂ ಹಳ್ಳಿ ಜನರ ಸಂಪೂರ್ಣ ಬಳಕೆ ಅರಿವು ಅನುಭವವುಳ್ಳವರಾದ ಖಾನ್ ಸಾಹೇಬ್ ಎಚ್. ಎಸ್. ಹುಸೇನ್ ಸಾಹೇಬ್ ಬಹದೂರರವರು ಈ ರೂರಲ್ ಬೇಂಕಿಂಗಿನ ಡೆವಲೆಪ್‌ಮೆಂಟ್ ಆಫೀಸರರಾಗಿ ನೇಮಕವನ್ನು ಪಡೆದಿರುತ್ತಾರೆ.

ಶ್ರೀ ಟಿ. ಎನ್. ಕೇಳು ನಂಬಿಯಾರರ ನರ್ಸಿಂಗ್ ಹೋಮಿನ ಶಂಕುಸ್ಥಾಪನೆಯು ಜನವರಿ ತಾ 1ರಲ್ಲಿ ಬೆಳಗ್ಗೆ 8½ ತಾಸಿಗೆ ಬ್ರಹ್ಮಗಿರಿಯಲ್ಲಿ ಜರಗಿತು. ಅಖಿಲ ಭಾರತ ಆಯುರ್ವೇದ ಕಾಂಗ್ರೆಸಿನ ಅಧ್ಯಕ್ಷರಾದ ಮಹೇಂದ್ರ ಕುಮಾರ್ ಮುಖರ್ಜಿಯವರು ನರ್ಸಿಂಗ್ ಹೋಮಿನ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸಿ ಕೊಡಬೇಕಾಗಿ ಪಂಡಿತ ಕುಮಾರನ್ ನಂಬಿಯಾರರು ವಿನಂತಿಸಿಕೊಂಡರು. ಇಂತಹ ನರ್ಸಿಂಗ್ ಹೋಮುಗಳು ಇಂಡಿಯಾದಲ್ಲೆಲ್ಲಾ ಹೆಚ್ಚು ಹೆಚ್ಚಾಗಿ ಸ್ಥಾಪಿಸಲ್ಪಡುವಂತಾಗಬೇಕೆಂದು ತನ್ನ ಆಸೆಯನ್ನು ಸೂಚಿಸಿ ತಾನು ಇಂದು ಶಂಕುಸ್ಥಾಪನೆಮಾಡುವ ನರ್ಸಿಂಗ್ ಹೋಮ್ ಜನಪ್ರೀತವಾಗಿ ಪರಿಣಮಿಸಿ ಬಡಜನರಿಗೆ ನೆರವಾಗಲೆಂದು ಕೋರಿ ಶ್ರೀ ಮುಖರ್ಜಿಯವರು ಶಂಕುಸ್ಥಾಪನೆ ಮಾಡಿದರು ಭೂತ ಪೂರ್ವ ಸ್ವದೇಶಿ? ಸಂಸ್ಥೆಯ ಗವರ್ನಿಂಗ್ ಡ್ಯಾರೆಕ್ಟರರಾದ ಶ್ರೀ ಗಂಗಾಧರ ವಿಷ್ಣು ಪುರಾಣಿಕರು ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿ ಶ್ರೀ ಮುಖರ್ಜಿಯವರ ಮಾತುಗಳನ್ನು ಪುಷ್ಟೀಕರಿಸಿ ಶ್ರೀ ನಂಬಿಯಾರರ ಉದ್ಯಮ ಇತರರಿಗೆ ಮಾರ್ಗದರ್ಶಕವಾಗಿದೆಯೆಂದೂ ಅಂತೆಯೇ ಉಡುಪಿಯಲ್ಲಿ ಆಯುರ್ವೇದ ಕಾಲೇಜು ಕೂಡಾ ಬೇಗನೆ ಸ್ಥಾಪಿಸುವಂತಾಗಲೆಂದೂ ಕೋರಿದರು. ನರ್ಸಿಂಗ್ ಹೋಮ್, ಆಯುರ್ವೇದ ಕಾಲೇಜು ಇವುಗಳಿಗೆ ಬೇಕಾಗುವ ಹಣವನ್ನು ಸಂಗ್ರಹಿಸುವಲ್ಲಿ ತಾನು ಪ್ರಮುಖ ಭಾಗವನ್ನು ವಹಿಸುವೆನೆಂದು ಡಾ। ಮಾಧವ ಪೈಗಳು ಭರವಸೆಕೊಟ್ಟರು. ಶ್ರೀಮತಿ ಸುಮುತಿಬಾಯಿ ಶಾರದಾಪ್ಪ, ಎಮ್ ಆರ್ ಭಟ್, ಪಿ ಎಸ್. ಪಂಡಿತ್, ಪುರುಷೋತ್ತಮ ಸದಾಶಿವ ಶಾಸ್ತ್ರಿ ಪಿಳ್ಳೆ?ಶರ್ ಮೊದಲಾದವರ ಕಾಲೋಚಿತ ಭಾಷಣಗಳಾದುವು ಮಾನ್ಯ ಅತಿಥಿಗಳಿಗೆ ಶ್ರೀ ಕೇಳು ನಂಬಿಯಾರರು ಪುಷ್ಪಹಾರಗಳನ್ನರ್ಪಿಸಿದರು. ಶ್ರೀ ಕಣ್ಣನ್ ನಂಬಿಯಾರರು ಧನ್ಯವಾದಗಳನ್ನರ್ಪಿಸಿದರು. ಸಭಾರಂಭದ ಪೂರ್ವದಲ್ಲಿ ಟೀಪಾರ್ಟಿ ಸತ್ಕಾರವಿತ್ತು.

ಪ್ರಕಟಣೆ.

ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ, ಪಡುಬಿದ್ರಿ

ಈ ಶಾಲಾ 45ನೇ ಇಸವಿಯ ವರ್ಷಾವಧಿ ಪರೀಕ್ಷೆಯನ್ನು (Annual Inspection) ಮಾನ್ಯ ಉಡುಪಿ ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರವರಾದ ಶ್ರೀ. ಕೆ. ಸಂಜೀವ ಭಟ್, ಯಮ್.ಎ.ಎಲ್.ಟಿ - ಇವರು ಜರಗಿಸಿ, ಜಿಲ್ಲಾ ಬೋರ್ಡಿನ ಆಡಳಿತಕ್ಕೊಳಪಟ್ಟ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಇದೊಂದು ದೊಡ್ಡ ಶಾಲೆಯಾಗಿದೆಯೆಂದೂ, ನಿಪುಣರಾದ ಕಾರ್ಯಸಮರ್ಥ ಮುಖ್ಯೋಪಾಧ್ಯಾಯರೂ, ಯೋಗ್ಯರಾದ ಸಹೋದ್ಯೋಗಿಗಳೂ ಅನ್ಯೋನ್ಯ ಪ್ರೇಮದಿಂದಿದ್ದು ಉತ್ತಮ ರೀತಿಯ ಶಿಕ್ಷಣವೀಯುತ್ತ ಊರ ಮಹನೀಯರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಸಂಪೂರ್ಣ ಸಹಕಾರ ಪಡೆದು, ಸುಮಾರು 180 ವಿದ್ಯಾರ್ಥಿಗಳಿಗೆ ಬೇಕಾಗುವಷ್ಟು ಶಾಲಾ ಕಟ್ಟಡವನ್ನು ವಿಸ್ತರಿಸುವ ಕಾರ್ಯಕ್ಕೆ ಕೈಹಚ್ಚಿ, ಭರದಿಂದ ಈ ಕೆಲಸವನ್ನು ಸಾಗಿಸುತ್ತಲಿರುವುದು ಶ್ಲಾಘನೀಯವೆಂದೂ, ತಮ್ಮ ರೇಂಜಿನ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಇದೊಂದು ಅತ್ಯುಚ್ಚ ಶ್ರೇಣಿಯ ಶಾಲೆಯೆನ್ನಿಸಿದುದಕ್ಕೆ ತುಂಬಾ ಸಂತೋಷಪಡಬೇಕಾಗಿದೆಯೆಂದೂ ಮುಂತಾಗಿ ಅನುಕೂಲ್ಯಾಭಿಪ್ರಾಯಗಳನ್ನಿತ್ತಿರುವರು.

ಈ ಶಾಲಾ ಕಟ್ಟಡ ವಿಸ್ತರಣಾ ಫಂಡಿಗೆ ಈ ತನಕ ಧನಸಹಾಯವಿತ್ತ ವಿದ್ಯಾಭಿಮಾನಿಗಳಾದ ಆಯ್ಕ ಮಹನೀಯರಿಗೆ ವಿಸ್ತರಣಾ ಕಮಿಟಿಯು ಅಭಿವಂದನೆಗಳನ್ನಿತ್ತು ಕೊಡುಗೈಯ ಮಹಾಶಯರು ಇದೇ ರೀತಿ ಪ್ರೋತ್ಸಾಹಿಸಬೇಕಾಗಿ ಕೇಳಿಕೊಂಡು, ಧನಸಹಾಯವಿತ್ತವರ ಹೆಸರುಗಳನ್ನಿಲ್ಲಿ ಕೊಡಲಾಗಿದೆ. ಇದೇ ಪ್ರಕಾರ ಪ್ರೋತ್ಸಾಹಿಸಿದವರೆಲ್ಲರ ಹೆಸರುಗಳನ್ನೂ ಕ್ರಮವಾಗಿ ಪ್ರಕಟಿಸಲಿರುವುದಾಗಿಯೂ ಕಮಿಟಿಯು ಈ ಮೂಲಕ ಅವಗಾಹನೆಗೆ ತಂದಿರುತ್ತದೆ.

M. G. Prabhu,
Postmaster & Secretary.

ಕಟ್ಟಡ ವಿಸ್ತರಣಾ ಫಂಡಿಗೆ ಧನಸಹಾಯವಿತ್ತವರ ಹೆಸರು ವ ವಿಳಾಸ	ಕೊಟ್ಟ ಮೊಬಲಗು ರೂ - ಆ - ಪೈ
1 ಶ್ರೀ ಯಚ್ ದಾಸಗಡಿಯಾರ್. ಸೆಕ್ರೆಟರಿ, ರೋಟರಿ ಸ್ಟೇಟ್ ಎಸೋಸಿಯೇಶನ್, ಪಡುಬಿದ್ರಿ	925 - 8 -0
2 ಶ್ರೀ ಕಟ್ಪಾಡಿಕಾರ್ ಬ್ರದರ್ಸ್, ಸಾಹುಕಾರರು ಮತ್ತು ಜಮೀನ್ದಾರರು, ಪಡುಬಿದ್ರಿ	451—0 0
3 ಶ್ರೀ ವಾಮನ ಅನಂತಯ್ಯ ಜಮೀನ್ದಾರ್, ಪಡುಬಿದ್ರಿ	155 5 -5
4 ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಹಾಯಕರು, ಪಡುಬಿದ್ರಿ.	119--0 -0
5 ಶ್ರೀ ಶ್ರೀನಿವಾಸ ಮಂಜುನಾಥ ಶಾನುಭಾಗರು ಸಾಹುಕಾರ್, ಪಡುಬಿದ್ರಿ.	108—0—0
6 ಶ್ರೀ ಪಿ. ಕೆ. ಸೀತಾರಾಮಯ್ಯ, ಪಡುಬಿದ್ರಿ.	105 —5 5
7 ಶ್ರೀ ಯಚ್ ದಾಸಗಡಿಯಾರ್, ಸಾಹುಕಾರರು, ಪಡುಬಿದ್ರಿ.	105 0—0
8 ಶ್ರೀ ಪ್ಯಾ. ಬಾಬ ಬೆಲ್ಚಡ, ಪೋಸ್ಟ್‌ಮೆನ್, ಪಡುಬಿದ್ರಿ	105—0 - 0
9 ಶ್ರೀ ಯಸ್. ಕೃಷ್ಣರಾವ್ ಪೂಂಜ, ಮೋಡರ್ನ್ ಲೋಜ್. ಊಟಕನ್ನಡ.	101 -0—0
10 ಶ್ರೀ ಪಿ. ಕೆ ನೊಜ ಪೂಜಾರಿ, ಜವುಳಿ ಸಾಹುಕಾರ್, ಪಡುಬಿದ್ರಿ.	101—0 —0
11 ಶ್ರೀ ಸಿ ರಾಮರಾವ್, ಅಧ್ಯಾಪಕರು ಮತ್ತು ಜಮೀನ್ದಾರ್, ಪಾದೆಬೆಟ್ಟು.	55 —0 0
12 ಶ್ರೀ ಕೆ ಪಾಂಡುರಂಗ ಲಕ್ಷ್ಮಣ ಕಾಮತ್. ಹೊಗೆಸೊಪ್ಪು ವ್ಯಾಪಾರಿ ಪಡುಬಿದ್ರಿ	51- -0 - 0
13 ಶ್ರೀ ಡಾಕ್ಟರ್ ಯಚ್ ಯಚ್ ಗಡಿಯಾರ್, ಪಡುಬಿದ್ರಿ.	35 -0 —0
14 ಶ್ರೀ ಪೈಲ್ ಜನಾರ್ಧನಯ್ಯ, ಸಾಹುಕಾರ್, ಪಡುಬಿದ್ರಿ.	30—0—0
15 ಶ್ರೀ ನರಸಿಂಹ ಗಣಪತಿ ಶಾನುಭಾಗ ಮತ್ತು ಸಹೋದರರು, ಪಡುಬಿದ್ರಿ.	25 4 0
16 ಶ್ರೀ ಪಿ. ರಾಮದಾಸ ಪೈ ಮತ್ತು ಸಹೋದರರು, ಪಡುಬಿದ್ರಿ	25 - 0 - 0
17 ಶ್ರೀ ಕೆ ಅನಂತರಾಯ ಪ್ರಭು, ಸಾಹುಕಾರ್, ಪಡುಬಿದ್ರಿ.	25 — 0 0

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಹಕರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ದಕ್ಷಿಣ ಕನ್ನಡ

ಮಂಗಳೂರು

ನಗರದ ಹಸುಗೆ ಸರಬರಾಜು ಮಾಡುವವರ ಮೂಲಕ ತಮ್ಮ ಸ್ವಂತ ಉಪಯೋಗದ ಅಕ್ಕಿಯನ್ನು (ಪೂರ್ಣ ಅಥವಾ ಅಂಶ) ಮನೆಗೆ ತರಿಸಿಕೊಂಡ ಳ ದಿನಗಳೊಳಗಾಗಿ, ಬರಹ ಮೂಲಕ ಈ ವಿಷಯವನ್ನು ರೇಶನ್ ಅಧಿಕಾರಿಗಳಿಗೆ ತಿಳಿಸುವುದಲ್ಲದೆ, ತಮ್ಮ ಹಸುಗೆ ಕಾರ್ಡಿನಲ್ಲಿಯೂ ಪಠಾ ಬರೆಸಿಕೊಳ್ಳಬೇಕು; ಭತ್ತವನ್ನು ತರಿಸಿಕೊಳ್ಳುವವರೂ ಈ ನಿಯಮವನ್ನು ಪಾಲಿಸತಕ್ಕದ್ದು; ಇದಕ್ಕೆ ತಪ್ಪಿದರೆ ಪ್ರೊಸೆಕ್ಯೂಶನ್ ಮಾಡಲಾದೀತು—ಎಂದು ರೇಶನಿಂಗ್ ಅಧಿಕಾರಿಗಳು ತಿಳಿಸುತ್ತಾರೆ.

ಬರ್ಮ ಪ್ರದೇಶದಿಂದ ಈ ತಾಲೂಕಿನ ಗ್ರಾಮಕ್ಕೆ ಬಂದು ನೆಲಸಿದ ಹಿಂದುಸ್ಥಾನದ ಜನರು ತಿರುಗಿ ಬರ್ಮ ದೇಶಕ್ಕೆ ಹೋಗಲು ಇಚ್ಛಿಸುವುದಾದರೆ ಅವರನ್ನು ಗುರ್ತಿಸಲು ಅನುಕೂಲವಾಗುವಂತೆ ಇಬ್ಬರು ಮರ್ಯಾದಸ್ಥರ ಸರ್ಟಿಫಿಕೇಟು ಸಮೇತ ತಾ. ೨-೧-೪೭ರಿಂದ ೧೫-೧-೪೭ರ ಒಳಗೆ ಆಫೀಸು ಸಮಯ ಪೂರ್ವಾಹ್ನ ೧೦-೩೦ ಗಂಟೆಯಿಂದ ೪ ಗಂಟೆ ವರೆಗೆ ಮಂಗಳೂರು ತಾಲೂಕು ಆಫೀಸಿನಲ್ಲಿ ತಹಸಿಲ್ದಾರರ ಅಥವಾ ಡಿ। ತಹಸಿಲ್ದಾರರ ಬಳಿ ದ್ವಿಪ್ರತಿ ಅರ್ಜಿಗಳನ್ನು ಬರೆದು ಕೊಟ್ಟು ಗುರುತಿನ ಕಾರ್ಡು ಪಡಕೊಳ್ಳಬಹುದು—ಎಂದು ಪ್ರಕಟಿಸಲಾಗಿದೆ.

ಕೆನರಾ ಹೈಸ್ಕೂಲಿನ ವಾರ್ಷಿಕೋತ್ಸವವು ಜಿಲ್ಲಾ ಕಲೆಕ್ಟರ್ ರಾ. ಬ. ಪಿ. ರಾಮದಾಸರ ಅಧ್ಯಕ್ಷತೆಯಲ್ಲಿ ತಾ ೨೪ರಂದು ಜರಗಿತು ಶ್ರೀಯುಃ ಪ್ರಾರ್ಥನೆಯನ್ನು ಶ್ರೀಮತಿ ಮನೋರಮಾ ಬಾಯಿ ಎಸ್. ನಾಯಕರು ಮಾಡಿದ ಬಳಿಕ, ಶಾಲೆಯ ಮತ್ತು ಇದರ ಶಾಖಾ ರೂಪವಾದ ಉರ್ವದ ಶಾಲೆಯ ವರದಿಗಳನ್ನು ಆಯಾ ಶಾಲೆಯ ಮುಖ್ಯೋಪಾಧ್ಯಾಯರು ಓದಿದರು.

ಮದ್ರಾಸ್ ನ್ಯಾಯ ವಿಧಾಯಕ ಸಭೆಯ ಸದಸ್ಯತನಕ್ಕೆ ಕಾಂಗ್ರೆಸ್ ಕಡೆಯ ನಾಮಕರಣವನ್ನು ಬಯಸಿ, ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದವರ ಹೊರತು ಈ ಕೆಳಗಿನ ಮಹನೀಯರೂ ಕರ್ನಾಟಕ ಪ್ರಾಂತೀಯ ಪಾರ್ಲಿಮೆಂಟರಿ ಸಮಿತಿಗೆ ತಮ್ಮ ಅರ್ಜಿಗಳನ್ನು ಕಳುಹಿಸಿರುವರಾಗಿ ತಿಳಿದುಬರುತ್ತದೆ. ಶ್ರೀಗಳಾದ ರಾಘವನ್ ನಂಬಿಯಾರ್ (ಪುತ್ತೂರು ಡಿವಿಜನ್) ಯು. ಸಿ. ಯಸ್. ಭಟ್, ಜಾರ್ಕಳ ನಾಗಣ್ಣ ಹೆಗ್ಡೆ (ಗೂರು ಅಥವಾ ಕುಂದಾಪುರ ಸರ್ಕಲ್) ಮಿ। ಎಲ್. ಸಿ. ಪಾಯಸ್ (ಕ್ರೈಸ್ತರ ಸ್ಥಾನಕ್ಕೆ) ಎಂ. ರಾಮಚಂದ್ರ (ಹರಿಜನರ ಸ್ಥಾನಕ್ಕೆ)

ಪ್ರಕಾಶ ಕೊಟಿದ ಆಶ್ರಯದಲ್ಲಿ ತಾ. ೨೩ರಂದು, ಶ್ರೀ। ಸುಜೀರ್ ಗೋವಿಂದ ನಾಯಕರ 'ಅರುಣೋದಯ' ಎಂಬ ಪುಸ್ತಕದ ವಿಮರ್ಶೆಯಾಯಿತು. ಶ್ರೀ। ಕೆ. ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು. ತಾ. ೬ ೧-೪೭ ರಂದು ಶ್ರೀ. ಅ. ನ. ಕೃಷ್ಣರಾಯರ 'ಸಾಹಿತ್ಯರತ್ನದ' ವಿಮರ್ಶೆ ನಡೆಯಲಿದೆ.

ಜಿಲ್ಲಾ ಹೋಟೆಲ್ ಮಾಲಕರ ಸಂಘದ ಪ್ರಥಮ ವಾರ್ಷಿಕ ಸಭೆಯು ತಾರೀಕು ೨೩ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಶ್ರೀ। ಎಂ. ರಾಮಚಂದ್ರರಾವ್ ವರದಿಯನ್ನೋದಿದರು. ಈ ಸಂಘಕ್ಕೆ ನಾನಾ ರೀತಿಯ ಸೇವೆ ಸಲ್ಲಿಸಿದ ಆಫೀಸ್ ಮೆನೇಜರ್ ಶ್ರೀ। ಐ. ವಿ. ರಾಮರಾಯರಿಗೆ, ಸಂಘದ ಪರವಾಗಿ ಅಧ್ಯಕ್ಷರ ಕೈಯಿಂದ ಸುಮಾರು ೧೨೫ ರೂ. ಬೆಲೆ ಬಾಳುವ ಒಂದು ಕೈ ಗಡಿಯಾರವನ್ನೂ ರೂ. ೫೦ರ ಒಂದು ಥೈಲಿಯನ್ನೂ ಒಪ್ಪಿಸಲಾಯಿತು ಶ್ರೀ। ರಾಮರಾಯರು ವಂದನಾ ಪೂರ್ವಕವಾಗಿ ಇದನ್ನು ಸ್ವೀಕರಿಸಿ, ಸಂಘದ ಮುಂದಿನ ವರ್ಷದ ಕಾರ್ಯಕ್ರಮವನ್ನು ಸೂಚಿಸುತ್ತ, 'ಹೋಟೆಲ್ ಕೆಲಸಗಾರರಿಗೂ ವಾರಕ್ಕೊಂದು ದಿನದ ರಜೆಯನ್ನು ಕೊಡುವ ವ್ಯವಸ್ಥೆಯನ್ನು ಈ ಸಂಘ ಮಾಡಿದೆ ಎಂದರು. ಶ್ರೀಗಳಾದ ಎಸ್. ನರ್ಸಪ್ಪಯ್ಯ, ಬಿ. ಅಪ್ಪಯ್ಯ, ನಾರಾಯಣ ಶೆಟ್ಟಿ ಮೊದಲಾದವರು ಸಂಘದ ಏಳಿಗೆಯ ಕುರಿತು ಭಾಷಣವಿತ್ತರು

ಜಿಲ್ಲಾ ನೇಕಾರರ ಸಂಘದ ಆಶ್ರಯದಲ್ಲಿ ತಾ. ೧೩ರಂದು ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀ। ಬಿ ವಿ ಕಕ್ಕಿಲ್ಲಾಯರು ಅಧ್ಯಕ್ಷತೆ ವಹಿಸಿದ್ದರು. ಕಳೆದ ೩ ತಿಂಗಳಿಂದ ನಮ್ಮ ಜಿಲ್ಲೆಗೆ ನೂಲು ಸರಿಯಾಗಿ ಬಾರದೆ ನೇಕಾರರು ನೂರುಗಟ್ಟಲೆಯಾಗಿ ನಿರುದ್ಯೋಗಿಗಳಾಗುತ್ತಿದ್ದಾರೆ. ಈ ಅವ್ಯವಸ್ಥೆಯನ್ನು ಸರಿಪಡಿಸಬೇಕೆನ್ನುತ್ತ ಮಿ। ಸಿಂಪ್ಸನ್ ಸೋನ್ಸ್, ದಾಸಪ್ಪ ಮೊದಲಾದವರು ಮಾತನಾಡಿದರು.

ಜಿಲ್ಲಾ ಪಿರಿಯಾಡಿಕಲ್ ಪರಿಷತ್ತು ಕಳೆದ ತಾ ೧೭ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಕಲೆಕ್ಟರರ ಪರ್ಸನಲ್ ಎಸಿಸ್ಟೆಂಟ್, ಆರ್. ಡಿ. ಓ. ಕೃಷಿ, ವಿದ್ಯಾ, ಮತ್ತು ಇಂಜಿನಿಯರಿಂಗ್ ಇಲಾಖೆಯ ಜಿಲ್ಲಾಧಿಕಾರಿಗಳು, ಪೋಲೀಸ್ ಸುಪರಿಂಟೆಂಡೆಂಟರೇ ಮೊದಲಾದವರು ಹಾಜರಿದ್ದರು. ಸಭೆಯಲ್ಲಿ ಈ ನಿರ್ಣಯಗಳಾದುವು:—ಕಾಸರಗೋಡಿನ ಬಂಗಲೆ ಬೆಟ್ಟದಲ್ಲಿ ಸಾರ್ವಜನಿಕ ಜುಮ್ನಾಸಿಯಂ ಒಂದನ್ನು ರಚಿಸಲಾಗುವುದು; ಮಂಗಳೂರಿನ ಪದವು ಅಥವಾ ಕೇಂದ್ರ ಮೈದಾನಿನಲ್ಲಿಯೂ ಇಂತಹ ಒಂದು ಜುಮ್ನಾಸಿಯಂ ರಚಿಸಲಾಗುವುದು. ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಹೊಸ ರಸ್ತೆ ಕಡಿಯುವ, ಬಾವಿ ತೋಡಿಸುವ ವಿಚಾರಗಳೂ ಪರ್ಯಾಲೋಚಿಸಲ್ಪಟ್ಟವು.

ಪ್ರಾಂತೀಯ ಎಲ್. ಐ. ಯಂ. ಪರಿಷತ್ತು ತಾ. ೨೬-೨೭ರಲ್ಲಿ ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಜರಗಿತು. ತಾ. ೨೬ರಂದು ಮುಂಜಾನೆ ೯॥ ಗಂಟೆಗೆ ಡಾ॥ ಎಸ್. ಪಿ. ಭಟ್ಟರು ತಮ್ಮ ಸ್ವಾಗತ ಭಾಷಣವನ್ನಿತ್ತ ಬಳಿಕ, ಕೇಂದ್ರ ನ್ಯಾಯವಿಧಾಯಕ ಸಭಾ ಸದಸ್ಯರಾದ ಶ್ರೀ। ಎ. ಕರುಣಾಕರ ಮೆನೋನ್ ಅವರು ಸಮ್ಮೇಲನದ ಸಾಮಾನ್ಯ ಅಧಿವೇಶನದ ಉದ್ಘಾಟನೆಯನ್ನು ನೆರವೇರಿಸುತ್ತ, ತಾವು ವೈದ್ಯರಲ್ಲದಿದ್ದರೂ ಈ ಸಮ್ಮೇಲನದ ಆರಂಭೋತ್ಸವವನ್ನು ನೆರವೇರಿಸಲು ಆಹ್ವಾನಿಸಿದುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು. 'ಆಯುರ್ವೇದ ಶಾಸ್ತ್ರದಲ್ಲಿ ಪರಿಶೋಧನೆಗಳಾಗಬೇಕು; ಇದಕ್ಕೆ ಸರಕಾರದ ನೆರವು ಅಗತ್ಯ. ಪ್ರಕೃತದ ಸರಕಾರಕ್ಕೆ ಎಲ್ಲೋಪತಿ ಪದ್ಧತಿಯ ಮೇಲೆಯೆ ಹೆಚ್ಚು ನಚ್ಚು ಅಲವು. ಆಯುರ್ವೇದವು ಬೆಳೆಯಬೇಕಾದರೆ ರಾಷ್ಟ್ರೀಯ ಸರಕಾರ ಸ್ಥಾಪಿಸಲ್ಪಡಬೇಕು' ಎಂದರು. ಸಮ್ಮೇಲನಕ್ಕೆ ಶ್ರೇಯಸ್ಸನ್ನು ಕೋರಿ, ಕೊಚ್ಚಿ ಮಹಾರಾಜರ ಕಾರ್ಯದರ್ಶಿ, ತಿರುವಾಂಕೂರಿನ ದಿವಾನ್ ರಾಮಸ್ವಾಮಿ ಅಯ್ಯರ್, ಮೈಸೂರಿನ ದಿವಾನರು, ಮದ್ರಾಸಿನ ಮೇಯರರು, ಡಾ। ಯು. ಕೃಷ್ಣರಾಯರೇ ಮೊದಲಾದವರಿಂದ ಬಂದಿದ್ದ ಸಂದೇಶಗಳು ಓದಲ್ಪಟ್ಟವು. ಆ ಬಳಿಕ ಸಾಮಾನ್ಯ ಅಧಿವೇಶನದ ಅಧ್ಯಕ್ಷರಾದ ಬೆಜವಾಡದ ಡಾ। ಸೂರ್ಯನಾರಾಯಣ ರಾಯರು ತಮ್ಮ ಭಾಷಣವನ್ನೀಯುತ್ತ 'ಎಲ್ಲೋಪತಿಗೆ ಸಿಗುತ್ತಿರುವ ರಾಜಾಶ್ರಯವು ಇಂದು ಆಯುರ್ವೇದಕ್ಕೂ ಸಿಗುತ್ತಿದ್ದರೆ ಆಯುರ್ವೇದವು ಜನತೆಗೆ ಅಪಾರ ಸೇವೆಯನ್ನು ಸಲಿಸುತ್ತಿತ್ತೆಂದರು. ಸಂಜೆ ವೈದ್ಯರತ್ನ ಕೆಪ್ಟನ್ ಶ್ರೀನಿವಾಸ ಮೂರ್ತಿ ಅವರು ವೈಜ್ಞಾನಿಕ ಅಧಿವೇಶನದ ಉದ್ಘಾಟನೆಯನ್ನು ನೆರವೇರಿಸಿದರು; ಶ್ರೀ। ಪರಾಂಕುಶಂ ಅವರು ಈ ಅಧಿವೇಶನದ ಅಧ್ಯಕ್ಷರಾಗಿ ಬಂದಿದ್ದರು

ಗಂಗಯ ಸ್ಮಾರಕ ಫಂಡು, ಮುಂಬಾಯಿ—ಈ ಸಂಸ್ಥೆಯ ೧೯೪೭ನೇ ಇಸವಿಯ ಹೊಸ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರನ್ನು ಆರಿಸಲಾಗಿಯದೆ. ೧. ಶ್ರೀಗಳಾದ ದತ್ತ. ಯಸ್. ಸುವರ್ಣರು (ಅಧ್ಯಕ್ಷರು) ೨. ಲಕ್ಷ್ಮಣ. ವೈ. ಸುವರ್ಣರು (ಗೌ. ಜೊ. ಕಾರ್ಯದರ್ಶಿಯವರು) ೩. ಬಾಬು ಟಿ. ಸಾಲ್ಯಾನರು (ಕೋಶಾಧಿಕಾರಿಗಳು) ೫. ರಾಜು. ಕೆ. ಶ್ರೀಯಾನರು. ೫. ಸುಂದರ. ಯಸ್. ಮೆಂಡನರು. ೬. ಕೃಷ್ಣಪ್ಪ. ಎ. ಬಂಗೇರರು ಸದಸ್ಯರು ಎಂದು ಕಾರ್ಯದರ್ಶಿಯವರು ಸೂಚಿಸುತ್ತಾರೆ.

BANK WITH THE LARGEST CONNECTIONS ON THE WEST COAST.

OFFERS:- EFFICIENT, PROMPT & COURTEOUS SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd.

ESTD 1925

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ — ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,

Balmatta Road, Mangalore.

ಬೇಕಾಗಿದ್ದಾರೆ

ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಟ್ರಾಕ್ಟರರೂ ಕೂಲಿಯಾಳುಗಳನ್ನು ಒದಗಿಸಿ ಕೊಡೇವವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗ ಉತ್ಕೃಷ್ಟ ಸವಲತ್ತುಗಳು ಕೊಡಲಾಗುವುದು.

ಇಂದೇ ಬರೆಯಿರಿ.—

ಬಾಕ್ಸ್ ನಂಬ್ರ 5, c/o 'ನವಯುಗ'

ಉಡುಪಿ, (ದ. ಕ.)

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಚುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲ ೧ಕ್ಕೆ ೫ರೂ. **ಪೋಸ್ಟ ಖಾರ್ಚ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧ, ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ. ಹೆಚ್ಚಿನ ವಿವರಗಳಿಗೆ

ಅಷ್ಟೂರು ವಾಸುದೇವ ಉಡುಪ

ಸಂಪಾದಕ

ಶ್ರೀ ರವಿಪ್ರಸಾದ ಜ್ಯೋತಿಷಾಲಯ

ಕೊಯಂಬುತ್ತೂರು

(೨ನೇ ಪುಟದಿಂದ ಮುಂದುವರಿದುದು)

ನಮ್ಮ ಪ್ರಾಂತೀಯ ಅಂಗ ಸಂಸ್ಥೆಗಳಿಗೆ. ಈ ಕೆಳಗಿನ ಕಾರ್ಯಕ್ರಮವನ್ನು ಸೂಚಿಸಲು ನಾನು ಬಯಸುತ್ತೇನೆ:—

೧. ಪ್ರತಿ ಮಂಡಲದ ಪೂರ್ಣ ವ್ಯವಸ್ಥೆ ಮತ್ತು ಆ ಬಗ್ಗೆ ಅಧಿಕಾಧಿಕ ಸಂಖ್ಯೆಯಲ್ಲಿ ಸದಸ್ಯರನ್ನು ಕೂಡಿಸುವುದು

೨ ಪ್ರಾಂತೀಯ ಮಹಾ ಮಂಡಲವು ಶಕ್ತಿ ಬಲಶಾಲಿಯಾದ ಸಂಸ್ಥೆಯಾಗುವಂತೆ ಅದಕ್ಕೆ ಯೋಗ್ಯರೂ, ಸಮರ್ಥರೂ, ಆದ ಪ್ರತಿನಿಧಿಗಳನ್ನೇ ಚುನಾಯಿಸುವುದು. ಅಂತೆಯೇ ಸಮರ್ಥ ಸದಸ್ಯರಿಗೆ ವಿಶೇಷ ಹಾಗೂ ಅಸಾಮಾನ್ಯ ಸದಸ್ಯತ್ವವನ್ನು ಸ್ವೀಕರಿಸುವಂತೆ ಒತ್ತಾಯಪಡಿಸುವುದು.

೩. ಜನಸಾಮಾನ್ಯರಲ್ಲಿ ಆಯುರ್ವೇದೀಯ ಕ್ಷೇಮ ಪಾಲನ ತತ್ವಗಳನ್ನು ಪ್ರಚುರ ನಡಿಸುವುದು ಮತ್ತು ತನ್ಮೂಲಕ, 'ಆಯುರ್ವೇದ ಸದಾಚಾರ' 'ಸ್ವಾಸ್ಥ್ಯ ವೃತ್ತ'ಗಳ ಅರಿವನ್ನುಂಟುಮಾಡುವುದು. ಪ್ರದರ್ಶನಗಳಲ್ಲಿ ಆಯುರ್ವೇದ ಪ್ರಚಾರಕ್ಕಾಗಿಯೇ ಪ್ರತ್ಯೇಕ ವಿಭಾಗಗಳನ್ನು ರಚಿಸುವುದು.

೪. ಆಯುರ್ವೇದಕ್ಕೆ ನಷ್ಟವಾಗಿರುವ ಗ್ರಂಥಗಳ ಸ್ಪಷ್ಟೀಕರಣದ ಬಗ್ಗೆ ಸಂಘ ಮತ್ತು 'ತದ್ವೈದ್ಯ ಸಂಭಾಷಾ'ಗಳನ್ನು ಕರೆಯುವುದು.

೫. ಆಯುರ್ವೇದವನ್ನು ಪರಿಸಲಿಚ್ಛಿಸುವ ವಿದ್ಯಾರ್ಥಿಗಳು ಸಂಸ್ಕೃತ ವ್ಯಾಕರಣ, ಸಾಹಿತ್ಯ, ಮತ್ತು ತತ್ವ ಜ್ಞಾನವನ್ನು ಕಲಿಯುವಂತೆ ಅವರನ್ನು ಪ್ರೋತ್ಸಾಹಿಸುವುದು.

೬. ಆಯುರ್ವೇದ ಶಾಸ್ತ್ರ. ಮತ್ತು ಅದರ ಶಾಸ್ತ್ರೀಯ ತತ್ವಗಳ ಪ್ರಸಾರ ಕಾರ್ಯದಲ್ಲಿ. ಇತರರು ನಮಗೆ ಮಾಡಬಹುದಾದ ನಿಂದೆ, ಅಪಪ್ರಚಾರ, ಮತ್ತು ನಾಶಕಾರಿ ಟೀಕೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಇದಿರಿಸುವುದು.

೭. ಆಯುರ್ವೇದ ಕಾಂಗ್ರೆಸಿನ ಇತಿಹಾಸ, ಉದ್ದೇಶ, ಧ್ಯೇಯಗಳು ಮತ್ತು ಅದು ಸಾಧಿಸಿದ ಸಂಗತಿಯನ್ನೂ ಸರ್ವ ಜನರಿಗೆ ತಿಳಿಸುವುದು, ಅಲ್ಲದೆ ಅಖಿಲ ಭಾರತ ಆಯುರ್ವೇದ ವಿದ್ಯಾಪೀಠದ ಪರೀಕ್ಷೆಗಳಿಗೆ ಅದನ್ನು ಮುಂದಿ ಕುಳಿತುಕೊಳ್ಳುವಂತೆ ಪ್ರಯತ್ನಿಸುವುದು.

೮. ಅಖಿಲ ಭಾರತ ಆಯುರ್ವೇದ ವಿದ್ಯಾಪೀಠದ ಅಂಗ ಸಂಸ್ಥೆಗಳಾಗಿ ಸಂಸ್ಕೃತ ಶಾಲೆ, ಕಾಲೇಜುಗಳೇ ಮುಂತಾದ ಕೇಂದ್ರಗಳ ಸ್ಥಾಪನೆ.

೯. ಆಯುರ್ವೇದ ಧರ್ಮಾರ್ಥ ಚಿಕಿತ್ಸಾಲಯಗಳನ್ನು ಅಲ್ಲಲ್ಲಿ ತೆರೆದು ಆಯುರ್ವೇದದ ನಿಜವಾದ ಧ್ಯೇಯವಾದ 'ನಾತ್ಮಾರ್ಥಂ ನಾಪಿ ಕಾಮಾರ್ಥಮಥ ಭೂತದಯಾಂ ಪ್ರತಿ' ಎಂಬ ನಿಸ್ವಾರ್ಥ ಸೇವೆಯನ್ನು ಸಾಧಿಸುವುದು.

೧೦. ನ್ಯಾಯವಿಧಾಯಕ ಸಭೆಗಳು, ಮುನಿಸಿಪಾಲಿಟಿಗಳು, ಲೋಕಲ್ ಬೋರ್ಡುಗಳೇ ಮುಂತಾದ ಸಾರ್ವಜನಿಕ ಸಂಸ್ಥೆಗಳ ಸದಸ್ಯರ ಚುನಾವಣೆಯಲ್ಲಿ ನಿಜವಾದ ಆಯುರ್ವೇದ ಪ್ರೇಮಿಗಳಾದ ಉಮೇದ್ವಾರರಿಗೆ ಬೆಂಬಲ ಕೊಡುವುದು ಮತ್ತು ತಾವು ಸತತ ಆಯುರ್ವೇದದ ಪ್ರಚಾರಕ್ಕಾಗಿ ಪ್ರಯತ್ನಿಸುವೆವೆಂಬ ಬಹಿರಂಗ ಪ್ರತಿಜ್ಞೆಯನ್ನು ಪಡೆದುಕೊಂಡು, ಅವರ ಸಹಾಯದಿಂದ ಆಯುರ್ವೇದ ಹಿತಸಾಧನೆಯನ್ನು ಮಾಡುವುದು.

೧೧ ಇಂತಹ ಚುನಾವಣೆಗಳಿಗೆ ಸಾಧ್ಯವಿರುವಲ್ಲೆಲ್ಲಾ ಆಯುರ್ವೇದ ವೃತ್ತಿಯಲ್ಲಿರುವವರನ್ನೇ ಉಮೇದ್ವಾರರನ್ನಾಗಿ ನಿಲ್ಲಿಸಿ, ಅವರು ಜಯಶಾಲಿಗಳಾಗುವಂತೆ ಸರ್ವ ಬಗೆಯ ಪ್ರಯತ್ನಗಳನ್ನು ಮಾಡುವುದು.

೧೨ ಸಾಧ್ಯವಾದಷ್ಟು ಮಟ್ಟಿಗೆ, ದೇಶದಲ್ಲಿರುವ ಎಲ್ಲ ಪ್ರಗತಿಪರ ಸಂಸ್ಥೆಗಳು ಮತ್ತು ಜನಹಿತಕಾರಿ ಚಳವಳಗಳೊಂದಿಗೆ ಸಂಬಂಧವನ್ನಿಟ್ಟುಕೊಳ್ಳುವುದು.

೧೩. ಆಯುರ್ವೇದಕ್ಕೆ ಸಮ್ಮಂಧಿಸಿದ ಎಲ್ಲರಲ್ಲಿ ದೃಢವಾದ ಐಕ್ಯವುಂಟಾಗುವಂತೆ ವೈಯಕ್ತಿಕ ಹಾಗೂ ಸಾಮೂಹಿಕ ಪ್ರಯತ್ನಗಳನ್ನು ಮಾಡುವುದು.

೧೪ ಆಜ್ಞೆ, ಶಿಸ್ತುಗಳ ಪಾಲನೆ ಮತ್ತು ಕರ್ತವ್ಯನಿಷ್ಠೆಯ ಕುರಿತು ಎಲ್ಲರಲ್ಲಿ ಜಾಗೃತಿಯನ್ನುಂಟುಮಾಡಲು ಎಲ್ಲ ಉಪಾಯಗಳನ್ನೂ ಕೈಕೊಳ್ಳುವುದು.

೧೫. ಪ್ರಾಂತೀಯ ಮಹಾಮಂಡಲವು ಮಾತೃಸಂಸ್ಥೆಯ ವಿರೋಧ ದುಷ್ಟರು ಹಾಗೂ ಕುಹಕಿಗಳು ಮಾಡಬಹುದಾದ ಕುತಂತ್ರಗಳ ಕಡೆಗೆ ವೈಯಕ್ತಿಕ ಮತ್ತು ಸಾಮೂಹಿಕ ದೃಷ್ಟಿಯನ್ನಿಟ್ಟು ಎಚ್ಚರಿಕೆಯಿಂದಿರುವುದು.

೧೬. ಪ್ರಾಂತದಲ್ಲಾದ ಪ್ರಗತಿಯನ್ನು ಆಗಾಗ ಮಾತೃ ಸಂಸ್ಥೆಗೆ ವರದಿರೂಪದಲ್ಲಿ ತಿಳಿಸುವುದು.

೧೭. ಎಲ್ಲ ಚಟುವಟಿಕೆಗಳನ್ನು ಪತ್ರಿಕೆಗಳಲ್ಲಿ ಸರ್ವತ್ರ ಜಾಹೀರುಪಡಿಸುವುದು.

೧೮ ಪ್ರಾಂತೀಯ ಮಂಡಲದ ಅಂಗವಾಗಿ ಒಂದು ಪತ್ರಿಕೆಯನ್ನು ಹೊರಡಿಸುವುದು

೧೯. ಅಖಿಲ ಭಾರತ ಆಯುರ್ವೇದ ಕಾಂಗ್ರೆಸಿನ ವಾರ್ಷಿಕ ಅಧಿವೇಶನಗಳಲ್ಲಿ ಅಧಿಕ ಸಂಖ್ಯೆಯಲ್ಲಿ, ಪ್ರಾತಿನಿಧಿಕವಾಗಿ ಭಾಗ ವಹಿಸುವುದು.

೨೦. ಪ್ರಾಂತೀಯ ಸರಕಾರಗಳಿಂದ ರಚಿತವಾದ ಆಯುರ್ವೇದ ಬೋರ್ಡುಗಳನ್ನು ಸಂಪೂರ್ಣ ಆಯುರ್ವೇದೀಕರಿಸುವಂತೆ ಚಳವಳನ್ನು ಹೂಡುವುದು

ಆಯುರ್ವೇದದ ಉನ್ನತಿಯು ಭಾರತ ಮಾತೆಯ ಬಂಧ ವಿಮೋಚನಾ ಕಾರ್ಯಕ್ಕೆ, ತುಂಬ ಅನುಕೂಲವಾಗುವುದು. ಈ ವಿಷಯದಲ್ಲಿ, ನಮ್ಮ ಮೇಲಿರುವ ಹೊಣೆಗಾರಿಕೆಯನ್ನು ಮರೆಯಬಾರದು. ಚರಿತ್ರೆಯಲ್ಲಿ ನಡೆದ ದುರಂತವನ್ನು ಹೇಳಿಯ ಕತೆಯೊಂದು ಅಲಕ್ಷಿಸಲಾಗದು. ಅಂದಿನ ವೈದ್ಯರು ಮತ್ತು ಹಕೀಮರು [illegible] ಕ್ಕೆ ಇಳಿದಿದ್ದರೆಂದರೆ ಅವರಿಗೆ ಮೊಗಲ ಚಕ್ರವರ್ತಿಯ ಪ್ರೀತಿಯ ಮಗಳಿಗಾದ ಸುಡುವಿಕೆಯ ಗಾಯಗಳನ್ನು ಗುಣಪಡಿಸಲಿಕ್ಕೂ ಸಾಧ್ಯವಾಗ[illegible] ಹೋಯಿತು. ಆಂಗ್ಲ ವೈದ್ಯನಿಗೆ ಈ ಸಂದರ್ಭ ದೊರಕಿತು. 'ಮಗಳನ್ನು ಗುಣಪಡಿಸಿದುದಕ್ಕೆ ಯಾವ ಪ್ರತಿಫಲವನ್ನು ಅಪೇಕ್ಷಿಸುತ್ತಿ?' ಎಂದು ಕೇಳಿದುದಕ್ಕೆ ಪ್ರತ್ಯುತ್ತರವಾಗಿ ದೇಶಾಭಿಮಾನಿಯಾದ ಆ ವೈದ್ಯನು ಈಸ್ಟ್ ಇಂಡಿಯಾ ಕಂಪೆನಿಗೆ ಭಾರತದೊಂದಿಗೆ ವ್ಯಾಪಾರವನ್ನು ನಡೆಯಿಸಲು ಫರ್ಮಾನು ಮತ್ತು ಭಾರತದಲ್ಲಿ ಕೋಠಿಗಳನ್ನು ಕಟ್ಟಿಸಿ, ಸೈನಿಕರನ್ನಿಡಲು ಅನುಮತಿ ಕೊಡಿರೆಂದು ಕೇಳಿದನು. ಆ ದುರ್ದಿನದಿಂದಲೇ, ಭಾರತದ ದಾಸ್ಯವು ಪ್ರಾರಂಭವಾಯಿತೆನ್ನಬಹುದು. ಈ ಕತೆಯಿಂದ ತಿಳಿದು ಬರುವ ಆಯುರ್ವೇದದ ಮೇಲಿನ ಹೊಣೆಗಾರಿಕೆಯನ್ನೂ, ಆಂಗ್ಲ ವೈದ್ಯನ ನಿಸ್ವಾರ್ಥ ದೇಶಾಭಿಮಾನವನ್ನೂ ನಾವು ಮರೆಯಲಾಗದು. ಪ್ರಾಚೀನ ಭಾರತದ ಕೀರ್ತಿಗೆ ಭಾರತೀಯ ಚಿಕಿತ್ಸಾಕ್ರಮವೂ ಬಹುಮಟ್ಟಿಗೆ ಕಾರಣವಾಗಿತ್ತು. ನಮ್ಮ ಪ್ರಾಚೀನ ಸಂಪ್ರದಾಯಗಳನ್ನು ಸ್ಮರಣೆಯಲ್ಲಿಟ್ಟುಕೊಂಡು, ಹಿಂದಿನಷ್ಟೇ ವೈಭವಶಾಲಿಯಾದ ಭವಿತವ್ಯವನ್ನು ನಿರ್ಮಿಸೋಣ. ಆಯುರ್ವೇದವು ಕಳೆದು ಹೋದ ತನ್ನ ವೈಭವವನ್ನು ಮರಳಿ ಪಡೆದಾಗ ತಾನೆ ಭಾರತ ಮಾತೆಯ ಸುಪುತ್ರರು, ಆರೋಗ್ಯ, ಸುಖ, ಶಾಂತಿ, ಸಮೃದ್ಧಿಗಳಿಂದ ಬಾಳುವದು ನಿಶ್ಚಿತ

ಜೈ ಹಿಂದ್.



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾಚಾರ್ಯ,
ರಥಬೀದಿ, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾನಷ್ಟ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗು ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನತಾ ಸ್ಟೋರ್ಸ್, ಕೆಮಿಸ್ಟ್ಸ್, ಬಿ. ಬಿ. ಸಿ. ಮಾಟುಂಗಾ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 405/45

ಕಾಮಾಕ್ಷಿ ಯಾನೆ ರುಕ್ಮಿಣಿ ಅಮ್ಮ
—ವಾದಿಳು.

ಮತ್ತು

1 ಯಬ್ಬಿ ಯಾಬ್ರಾಹಿಮ ಯಸಾಕನ ಮಗ, 2 ಅಮಿನಾ ಹಸನನ ಹೆಂಡ್ತಿ, 3 ಗೂರ್ಟ ವಾಮನ ನೇಮಪ್ಪ ಪೈ, 4 ವೆಂಕಟಾ-ಮಂಜ ಹೆಂಗ್ಸಿನ ಮಗ.

1 2-4ನೇಯವರು ನಂಬ್ರ 1ನೇ ಶೀರೂರು ಗ್ರಾಮದಲ್ಲಿರುವರು.

ವಾದಿಳು ಪ್ರತಿವಾದಿರ ಮೇಲೆ ಮಾಡಿದ ಕೇಸಿ ಜಾಕಿ ತಾರೆಯು ತಾ 10 1-1946ಕ್ಕೆ ತಸ್ಲಿಗೆ ಯಿಟ್ಟಿವೆ ಎಂತಲೂ ಆ ದಿವಸ ಪ್ರತಿವಾದಿರು ಹಾಜ್ರಿ ಆಗಲಿಕ್ಕೆ ತಪ್ಪಿದ್ರೆ ಅವರ ಪರೋಕ್ಷದಲ್ಲಿ ದಾವೆಯು ಮುಂದಿನ ತಸ್ಲಿ ನಡೆಯುವುದೆಂದು 1-2 4ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

ತಾ.29-12-45 ಕುಂದಾಪುರ.
G. Sanjiva Rao,
Pleader for pltf.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2	ಸಾಮುದ್ರಿಕ ಶಾಸ್ತ್ರ	0	8	0
3.	ಬಾಲ ರಾಮಾಯಣ	0	5	0
4.	ಸುಕನಾ ಚರಿತ್ರೆ	0	5	0
5.	ಕೊಳಲು ಕೃಷ್ಣ	0	8	0
6.	ಗುರುಪೀಠಗಳ ಅವನತಿ	0	8	0
7.	ದ್ವೈತಮತ ಖಂಡನೆ	0	6	0
8.	ಧರ್ಮಸಂಕಟ	0	4	0
9	ಪೂರೂರವ	0	8	0
10.	ನಿಶ್ಚಯ ಜ್ಞಾನ	0	8	0
11	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gauthama the Buddha	0	8	0
16.	ಪ್ರಾರ್ಥನೆ	0	2	0
17.	ಹಿಂದೀ ಪಹಲಿ ಪೋಥಿ	0	2	0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)	0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ರರಂಜನ ಭವನ, **ಉಡುಪಿ.**

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣ ರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರ	0	4	0
ಅಲಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮದ್ ಮಾಳತ್ತ್ ಮದ್ ಮಾಯಿ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	0	2	0
ಮಿತ್ಯ ನಾರಾಯಣ ಕತೆ	0	1	0
ಪಕ್ಕಿ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದು ವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: **2—8—0.** **ದಪ್ಪವಾದ ಹೊದಿಕೆಯುಳ್ಳದ್ದು:**

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ರರಂಜನ ಭವನ, ಉಡುಪಿ.

ಬೆಲೆ: **3—0—0**

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ರರಂಜನ್ ಭವನ, ಉಡ್ಪಿ

Edited, Printed & Published by K. H. Shetty at the Navayuga Press, Udipi, S. India.

Regd No. M. 3618. **SILVER JUBILEE YEAR.** ರಜತೋತ್ಸವದ ವರ್ಷ. **Estd. 1921** ಸ್ಥಾಪನೆ.

ಅಂತರಂಗ

ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA
ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ಗ್ರಾಮ್ಯೀಯ ವಾರಪತ್ರಿಕೆ. [Vol. 25
ವಾರ ೧೯] Founder: **SRI A. B. SHETTY.** [No. 19

ಉಡುಪಿ ● **10—1—1946** ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

REGD.

ಅಮೃತಾಂಜನ.
ತಲೆವೇದನೆ, ಶೀತ, ನೆಗಡಿ, ಉಳುಕು ... ಮೂಗು, ಹಲ್ಲು ... ನೋವುಗಳು ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಜಂತುಗಳು ಕಡಿದ ಒಳ್ಳೆ ಮಾತ್ರ ಮೊದಲ ಎಲ್ಲಾ ರೋಗಗಳಿಗೆ ಸಿದ್ಧ.
ಸಕಲ ಊರುಗಳಲ್ಲಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

THE CANARA MUTUAL ASSURANCE COMPANY, LTD.,
(UDIPI, S. India.)

Good Wishes

We thank all our Policy-holders, Agents, Medical Examiners and well-wishers for their co-operation and wish them a happy, peaceful and prosperous life in the NEW YEAR.

B. Vaikunta Baliga,
Chairman
BOARD OF DIRECTORS

150 ಪುಟಗಳು! ಬಣ್ಣಬಣ್ಣದ ಚಿತ್ರ!

ಕನ್ನಡ ಪತ್ರಿಕಾಪ್ರಪಂಚದಲ್ಲಿ ಪ್ರಥಮ ಪ್ರಯತ್ನ!

‘ಅಂತರಂಗ’ದ
ಆಯುರ್ವೇದ ಸಮ್ಮೇಲನಾಂಕ

ಅಖಿಲಭಾರತ ಖ್ಯಾತಿಯ ಲೇಖಕ ವರ್ಗ!

ಕನ್ನಡಿಗರಿಗೆ ಈ ವರೆಗೆ ಯಾರೂ ಅರ್ಪಿಸದ ಹೊಸ ವರ್ಷದ ಹೊಸ ಮಾದರಿಯ ಕಾಣಿಕೆ.

ಪ್ರತಿ ಡಾಕ್ಟರ, ವೈದ್ಯರಷ್ಟೇ ಅಲ್ಲ-ಪ್ರತಿಯೊಬ್ಬ ಕನ್ನಡಿಗನೂ ಸಂಗ್ರಹಿಸತಕ್ಕ ಅತ್ಯಮೂಲ್ಯ ಸಂಚಿಕೆ.

ಇಷ್ಟಿದ್ದರೂ ಬೆಲೆ ಬರೇ 1—0—0 ಮಾತ್ರ.

ಮೆನೇಜರ್, ‘ಅಂತರಂಗ’ ವಾರಪತ್ರಿಕೆ, ಉಡುಪಿ, ದ.ಕ.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ,
ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,
ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA

“BHUVANENDRA’
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

‘ಭುವನೇಂದ್ರ’
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 400ದ 8ಬೊಟ್ಟು, ಸಣ್ಣಮಕ್ಕಳಿಗೆ 100ದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣ್ಯೆ, ರಥಬೀದಿ; ಡಾ। ಸಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಙ್ಕಲ್; ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank
at
KANHANGAD
on 17-11-1945, by
Sri B. Appaswamy Chetty, B. A., R. D. O., Puttur

A branch of the Bank will be opened at MERCARA shortly.

The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಒಂದು ತಿರುಗೆ ಮುರುಗೆ.

ಸ್ವದೇಶೀ ಸರಕಾರವಿರುತ್ತಿದ್ದರೆ—

'ಆದಾಯ ಹಿಂದು ಸೂರೆಖೋರ' ವಿಚಾರಣೆ

—ವಿಶೇಷ ಹೆವ್ಯಾಗಾರನಿಂದ—

(೧೯೪೫ನೇ ದಶಂಬರ್ ತಾ. ೧೩ರ ಸಂಚಿಕೆಯಿಂದ ಮುಂದುವರಿದುದು.)

ಮೇಲಿನ ಜನರಾಳು ಬಹಳ ಲಂಡರ ಅಧ್ಯಕ್ಷತೆಯ ಕೋರ್ಟು ಮಾರ್ಶಲ್‌ನ ಮುಂದ ದುಭಾಷಾ ಚಂದ್ ಮೋಸರ ಆದಾಯ ಹಿಂದು ಸೂರೆಖೋರದ ಹಣವಜಾ, ಸೈ-ಗಾಳ, ಇಲ್ಲನ್ನುವವರು ಆರೋಪಿಗಳಾಗಿರುವ-ನಿಜ ಬಹದೂರ, ಲಾಭಬಾಯಿ ದೋಷಾಯಿ,ಆಸೆಪ್ರೋಲಿ, ಜನಾಹಾರನೆಗಳು ಮುಂತಾದವರು ಆರೋಪೀ ವಕೀಲರಾಗಿ ಕುಳಿತ–ಸರಕಾರೀ ವಕೀಲರಾಗಿ ಹೆಡ್ಡುಕಾಟು ಜನರಾಳು ವ್ಯವಹರಿಸಿದ-ಮೊಕದ್ದಮೆಯಲ್ಲಿ ಮೊದಲನೇ ಡಿಫೆನ್ಸ್ ಸಾಕ್ಷಿ ಜಿಲ್ಲಾ ಕಲ್ಲಿಟ್ಟರ್ ಏ.ಕೆ. ಕನಿಕರ್ ಸಾಹೇಬನಿಗೆ ಸರಕಾರೀ ವಕೀಲರ ಅಡ್ಡ ಸವಾಲು. (ಸಾಕ್ಷ್ಯದ ಪೂರ್ವಾರ್ಧ ತಾ ೧೩-೧೨-೪೫ರ ಸಂಚಿಕೆಯಲ್ಲಿ ಬಂದಿದೆ)

ಸ. ವ—ಕಲ್ಲಿಟ್ಟವರೇ, ನಿಮ್ಮ ಆಕ್ಷೇಪದ ಸ್ಪಷ್ಟೀಕರಣ ಕೇಳುತ್ತೇನೆ. ಆ ಆಕ್ಷೇಪವು ದುಭಾಷ್ ಚಂದ್ & ಕೋರಿಂದ ಸಹಾಯ ಪಡೆದಿರುವಿರಾ ಎಂಬ ನನ್ನ ಪ್ರಶ್ನೆಗೋ? ಅಥವಾ ಅಂತಹ ಸಹಾಯ ಪಡೆಯುವದಕ್ಕೋ?

ಕಲ್ಲಿಟ್ಟರ್—ನ ನ ನಾ-....ಎರಡಕ್ಕೂ.

ಸ. ವ—ಇರಲಿ. ನೀವೀಗ ಆರೋಪಿಗಳು ನಿರಪರಾಧಿಗಳೆಂದಿಷ್ಟೇ ಹೇಳಿದ್ದಲ್ಲ; ಸರಕಾರದ ಸಹಾಯಕರು ಎನ್ನುವುದರೊಂದಿಗೆ ವಿಶಾಲ ಮನೋವೃತ್ತಿಯವರು, ಪರೋಪಕಾರಿಗಳು ಎಂದೂ ಹೇಳಿದಿರಿ. ಖಾಸಗೀ ಪರಿಚಯವಿಲ್ಲದೇನೇ ನೀವಿಷ್ಟೆಲ್ಲಾ ಶಿಫಾರಸು ಕೊಟ್ಟಿರಾ?

ಕಲ್ಲಿಟ್ಟರ್—ನಾನು ಮೊದಲೇ ಹೇಳಿದ್ದಂತೆ, ಸರಕಾರದ ಬಹುಮಾನ, ಪದಕ ಇತ್ಯಾದಿಗಳನ್ನು ಅವರಿಗೆ ಕೊಡುವ ಸಂದರ್ಭಗಳು ನನಗೆ ಬಂದಿದ್ದುದರಿಂದ ಅಷ್ಟು ಖಾಸಗೀ ಪರಿಚಯವಿತ್ತು.

ಸ. ವ—ನೂತನ ಶೋಧ! ಸಭೆ ಸಮಾರಂಭಗಳ ಚಟುವಟಿಕೆಗಳಿಂದ ಖಾಸಗೀ ಗುಣ ನಡತೆಯನ್ನು ತಿಳಿಯಲಾಗುತ್ತದೆಂಬ ಹೊಸಾನುಭವ ಕೋರ್ಟಿಗಾದಂತಾಯಿತು. ಇರಲಿ, ಅಂತೆಯೇ ಈ ಮೂವರು ಆರೋಪಿಗಳ ಖಾಸಗೀ ಪರಿಚಯ ನಿಮಗಿದೆಯ?

ಕಲ್ಲಿಟ್ಟರ್—ಇಲ್ಲ.

ಸ. ವ--ಇವರು ಕಳ್ಳ ಸಂತೆ ವ್ಯಾಪಾರ ನಡಿಸತಕ್ಕವರಲ್ಲವೆಂದು ನೀವು ಹೇಳಲಾರಿರಿ?

ಕಲ್ಲಿಟ್ಟರ್—ಇಲ್ಲ. ಆದರೆ ಆದಾಯ ಹಿಂದು...........

ಸ ವ—ಅದು ಅನಗತ್ಯ. ಆ ಪ್ರಶ್ನೆ ನಾನು ಕೇಳಿಲ್ಲ. ನೀವು ಈ ಜಿಲ್ಲೆಗೆ ಎಷ್ಟು ವರುಷ ಕಲ್ಲಿಟ್ಟರ್ ಆಗಿದ್ದಿರಿ?

ಕಲ್ಲಿಟ್ಟರ್—ಸುಮಾರು ಮೂರು ವರುಷ.

ಸ. ವ—ಲೋಕ ಯುದ್ಧಾರಂಭದ ಮೊದಲು, ಅಥವಾ ಆರಂಭವಾಗಿ ಒಂದು ವರುಷದ ವರೆಗೆ ಆರೋಪೀ ಪಂಗಡಿಗರು ತೀರಾ ಸಾಮಾನ್ಯ ಸ್ಥಿತಿಯಲ್ಲಿದ್ದರೆಂಬುದು ನಿಮಗೆ ಗೊತ್ತಿದೆಯೇ?

ಕಲ್ಲಿಟ್ಟರ್—ಇಲ್ಲ.

ಸ. ವ—ಅದನ್ನು ತಿಳಿದುಕೊಳ್ಳಲು ನೀವು ಪ್ರಯತ್ನಿಸಿದ್ದೂ ಇಲ್ಲ?

ಕಲ್ಲಿಟ್ಟರ್—ಇಲ್ಲ.

ಸ. ವ—ಯಾಕಿಲ್ಲ?

ಕಲ್ಲಿಟ್ಟರ್—ಅದು ನನ್ನ ಕೆಲಸವಲ್ಲ.

ಸ ವ—ಅವರೆಲ್ಲಾ ಯುದ್ಧಾರಂಭವಾದ ಮೇಲೆ ನಡಿಸಿದ ಕಳ್ಳ ವ್ಯಾಪಾರದ ಹಣದಿಂದಲೇ ಶ್ರೀಮಂತರಾದರೆಂದು ನಾನು ಆಧಾರವಾಗಿ ಹೇಳುತ್ತೇನೆ. ಜಿಲ್ಲಾ ಕಲ್ಲಿಟ್ಟರ್ ಆಗಿದ್ದ ನೀವು ಈ ವ್ಯತ್ಯಾಸವನ್ನು ತಿಳಿದು ಕೊಳ್ಳುವದು ಅಗತ್ಯವಿತ್ತೆಂಬುದು ಈಗಲಾದರೂ ನಿಮಗೆ ಹೊಳೆಯಿತೇ?

ಕಲ್ಲಿಟ್ಟರ್—ಇಲ್ಲ, ಇಲ್ಲ, ಇಲ್ಲ.

ಸ. ವ—ಕಲ್ಲಿಟ್ಟವರೇ, ಸಿಟ್ಟಾಗಬೇಡಿ. ಬಡತನದಲ್ಲಿದ್ದವರು ಒಮ್ಮೆಯೇ ಮಿಲಿಯಾಧೀಶರಾಗುವಾಗ, ಅದೂ ಎಲ್ಲಕ್ಕೂ ಕಂಟ್ರೋಲ್ ಇದ್ದು, ಜಿಲ್ಲೆಯ ಮಟ್ಟಿಗೆ ಅದರ ಮುಖ್ಯಾಧಿಕಾರ ನಿಮ್ಮದಾಗಿರುವಾಗ ವ್ಯಾಪಾರದಿಂದಲೇ ಬಡವರಾಗಿದ್ದ ಇವರು ಮಿಲಿಯಾಧೀಶರಾಗುವಾಗ, ಕಲ್ಲಿಟ್ಟರ್ ಆಗಿದ್ದ ನೀವು ಈ ವ್ಯತ್ಯಾಸ ಹೇಗಾಯಿತೆಂಬುದನ್ನು ತನಿಖಿ ಮಾಡುವ ಅಗತ್ಯವಿರಲಿಲ್ಲವೆ?

ಕಲ್ಲಿಟ್ಟ. ... ಅದು ನನ್ನ ಅಧಿಕಾರದ ಅವಧಿಯಲ್ಲಾದ ವ್ಯತ್ಯಾಸವಲ್ಲ. ನೀವೀ ಪ್ರಶ್ನೆ ಕೇಳಬೇಕಾದುದು ನನ್ನ ಪೂರ್ವಾಧಿಕಾರಿಗೆ.

ಸ. ವ—ಸರಿ. ಹಾಗಾದರೆ ಆರೋಪಿಗಳು ಯುದ್ಧಾವಧಿಯಲ್ಲಿ ಕಳ್ಳ ವ್ಯಾಪಾರದಿಂದಲೇ ಅಕಸ್ಮಾತ್ ಧನಿಕರಾದರೆಂದು ನಾನು ಸೂಚಿಸಿದರೆ ನೀವು ಆಕ್ಷೇಪಿಸುವದಿಲ್ಲ?

ಕಲ್ಲಿಟ್ಟರ್—ಅದು ನನಗೆ ಸಂಬಂಧಿಸಿರುವ ವಿಷಯವೇ ಅಲ್ಲ.

ಸ. ವ—ನಿಮಗಲ್ಲವಾದರೂ ಈ ಮೊಕದ್ದಮೆಗೆ ಸಂಬಂಧಿಸಿದ ವಿಷಯ. ಅದು ಇದ್ದಂತೆ ಇರಲಿ. ಲೆಕ್ಕ ತಪಾಸಣೆ ಮತ್ತು ಮೇಲ್ತನಿಖಿ ನಡೆಸಿ ನೋಡಿದಾಗ ಆರೋಪೀ ಪಂಗಡಿಗರ ವ್ಯಾಪಾರಗಳಲ್ಲಿ ತಪ್ಪಾವುದೂ ಕಂಡುಬಂದಿಲ್ಲವೆಂದು ನೀವು ಹೇಳಿದಿರಿ. ನೀವು ಸ್ವತಃ ತನಿಖಿ ನಡಿಸಿರುವಿರಾ?

ಕಲ್ಲಿಟ್ಟರ್—ಇಲ್ಲ. ಆಯಾಯಾ ಇಲಾಖೆಯ ಸಂಬಂಧಪಟ್ಟ ನೌಕರರೇ ಆಗಾಗ ತನಿಖಿ ನಡಿಸಿದ್ದರು.

ಸ. ವ—ಆ ತನಿಖಿಯೆಂದರೆ ಆರೋಪೀ ಕಂಪೆನಿಯೊಪ್ಪಿಸಿದ ಲೆಕ್ಕ ಪತ್ರಗಳ ತನಿಖಿ ಮಾತ್ರ.

ಕಲ್ಲಿಟ್ಟರ್—ಮತ್ತು ಅವರಲ್ಲಿ ದಾಸ್ತಾನಿದ್ದ ಮಾಲುಗಳ ತನಿಖಿ ಕೂಡಾ.

ಸ ವ—ಅಂತೂ ಆರೋಪಿಗಳು ತೋರಿಸಿದ ಲೆಕ್ಕಪತ್ರ ಸಾಮಾನು ಮತ್ತು ಎಲ್ಲವೂ ಎಂದಿಟ್ಟುಕೊಳ್ಳ-ಸರಿಯೋ ತಪ್ಪೋ ಎಂಬುದನ್ನು ಕ್ರಮ ತಪ್ಪದೆ ತನಿಖಿ ನಡಿಸಿದ್ದರು, ಅಲ್ಲವೆ?

ಕಲ್ಲಿಟ್ಟರ್—ಹೌದು.

ಸ. ವ—ಈ ಲೆಕ್ಕ ಪತ್ರ ಅಥವಾ ಸಾಮಾನುಗಳ ಹಾಜರಿಯಲ್ಲಿ ಯಾವ ವಂಚನೆಯೂ ನಡೆಯಲು ಸಾಧ್ಯವಿರಲಿಲ್ಲವೆಂದು ನೀವು ಪ್ರಮಾಣ ಪೂರ್ವಕ ಹೇಳಬಲ್ಲಿರಾ?

ಕಲ್ಲಿಟ್ಟರ್—ನನ್ನ ತಿಳುವಳಿಕೆಯ ಮಟ್ಟಿಗೆ ಏನೊಂದು ಫೋರ್ಜರಿಯೂ ಆಗಿಲ್ಲವೆಂದು ಹೇಳ ಬಲ್ಲೆ.

ಸ. ವ—ನಿಮಗೆ ವ್ಯಾಪಾರದ ಸ್ವಂತಾನುಭವವೇನಾದರೂ ಇದೆಯೆ?

ಕಲ್ಲಿಟ್ಟರ್—ಇಲ್ಲ.

ಸ- ವ—ತನಿಖೀ ನಡಿಸಿದ ಇತರ ಅಧಿಕಾರಿಗಳಲ್ಲಿ ಯಾರಿಗಾದರೂ ಇತ್ತೆ?

ಕಲ್ಲಿಟ್ಟರ್—ಇರಲು ಸಾಧ್ಯವಿಲ್ಲ.

ಸ. ವ—ನಿಮ್ಮ ಈಗಿನ ಉದ್ಯೋಗ.

ಕಲ್ಲಿಟ್ಟರ್—ಏನೂ ಇಲ್ಲ.

ಸ. ವ— ಪೆನ್ಶನಿಂದಲೇ ಜೀವನವೆ?

ಕಲ್ಲಿಟ್ಟರ್—ಬೇಂಕಿನಲ್ಲಿರುವ ಹಣದ ಬಡ್ಡಿ ಮತ್ತು ಆಸ್ತಿ ಹುಟ್ಟುವಳಿಯೂ ಇದೆ.

ಸ. ವ—ಅವುಗಳ ಒಟ್ಟು ಉತ್ಪತ್ತಿಯ ಅಂದಾಜು ಹೇಳಬಹುದೆ?

ಕಲ್ಲಿಟ್ಟರ್—ವರುಷಕ್ಕೆ ಸುಮಾರು 13 ಸಾವಿರ.

ಸ. ವ—ಇಷ್ಟು ವರುಷಾದಾಯವಿರುವ ಮೂಲ ಸಂಪತ್ತನ್ನು ನೀವು ಹೇಗೆ ಗಳಿಸಿದ್ದಿರಿ?

ಕಲ್ಲಿಟ್ಟರ್—ನನ್ನ ಸಂಬಳದಿಂದ.

ಸ. ವ—ನಿಮಗಿದ್ದ ಸಂಬಳ..........

ಜಡ್ಜ್— ಪ್ರಶ್ನೆ ಅನಗತ್ಯ. ಅವೆಲ್ಲಾ ವಿಷಯಗಳು ಸಾಕ್ಷಿಗಾರನ ಹೇಳಿಕೆಯ ಆದಿಯಲ್ಲೇ ಬಂದಿವೆ.

ಸ. ವ—ಸರಿ, ಅಷ್ಟೆ.

೨ನೇ ಡಿ. ಸಾ. ಊರ ಶನಿಭೋಗನ ಹೇಳಿಕೆ

ಗ್ರಾಮಾಧಿಕಾರಿ (ಪಟೇಲ್) ಮತ್ತು ನಾನು ಆರೋಪಿಗಳ ಕಾರ್ಖಾನೆ, ಅಂಗಡಿ, ಇತ್ಯಾದಿಗಳಿಗೆ ಆಗಾಗ ಭೇಟಿ ಕೊಟ್ಟದ್ದೆವು. ತನಿಖಿ ನಡೆಸಿದ್ದೆವು. ಸಾಮಾನುಗಳ ಧಾರಣೆ, ಧೋರಣೆ ಅಥವಾ ಆಮದು ... ಷ್ಟುಗಳಲ್ಲಿ ಯಾವೊಂದು ವಂಚನೆಯೂ ನಡೆಯುತ್ತಿರಲಿಲ್ಲ. ಪ್ರೊಸಿಕ್ಯೂಶನಿನ ಪ... ಸಾಕ್ಷ್ಯವಿತ್ತ ನಾಗ, ಸೇಸಿ ಮೊದಲಾದವರು ಒಮ್ಮೆಯೂ ಆರೋಪಿಗಳ ಅಂಗಡಿಗೆ ಬಂದದ್ದನ್ನು ನಾನು ನೋಡಲಿಲ್ಲ. ದುಭಾಷಾ ಚಂದ ಮೋಸ ಮತ್ತು ಆದಾಯ ಹಿಂದು ಸೂರೆಖೋರರಾದ ಸರ್ವರೂ ದೇವರ ಮೇಲೆ ಭಕ್ತಿಯುಳ್ಳವರಿದ್ದು, ಧರ್ಮ ಸತ್ಯಗಳ ಉಪಾಸಕರಾಗಿದ್ದರು. ಗ್ರಾಮಾಧಿಕಾರಿ ಮತ್ತು ನಾನು ಒಟ್ಟೊಟ್ಟಿಗೆಯೂ ಪ್ರತ್ಯಪ್ರತ್ಯೇಕವಾಗಿಯೂ ಹಲವು ಬಾರಿ ಆರೋಪಿಗಳ ವ್ಯಾಪಾರದ ತನಿಖಿ ನಡೆಸಿದಾಗ ಒಂದೇ ಒಂದು ಹಿಡಿ ಅಕ್ಕಿ ಹೆಚ್ಚಿಗೆಯಾಗಲೀ ಕಡಿಮೆಯಾಗಲೀ ಇದ್ದುದಿಲ್ಲ. ಎಲ್ಲಾ ಸಾಮಾನುಗಳೂ ಅಧಿಕಾರವೆಷ್ಟಿತ್ತೋ ಅಷ್ಟು ಮಾತ್ರ ಇದ್ದುವು.

(೧೧ನೇ ಪುಟ ನೋಡಿರಿ)

ಬೇಕಾಗಿದ್ದಾರೆ

ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಟ್ರಾಕ್ಟರರೂ ಕೂಲಿಯಾಳುಗಳನ್ನು ಒದಗಿಸಿ ಕೊಡೇವವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗೆ ಉತ್ಕೃಷ್ಟ ಸವಲತ್ತುಗಳು ಕೊಡಲಾಗುವುದು.

ಇಂದೇ ಬರೆಯಿರಿ—

ಬಾಕ್ಸ್ ನಂಬ್ರ 5, c/o 'ನವಯುಗ'
ಉಡುಪಿ, (ದ. ಕ.)

"New Year Greetings".

While wishing all our patrons and friends a Happy and Prosperous NEW YEAR, we take this opportunity to thank them for their co-operation and helpful spirit which has enabled us to serve them.

We look forward to more opportunities that will bring us closer in the coming year and strengthen the existing ties.

ESTD. 1906.

CANARA BANK LIMITED

(Incorporated in British India. liability of Members Limited.)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಪಾರ್ಲಿಮೆಂಟಿನ ಶಿಷ್ಟಮಂಡಲದ ಆಗಮನ.

ಅದರಲ್ಲಿರುವ ಜನ ಮತ್ತು ಅವರ ಮುಂದಿನ ಹಾದಿ.

ಪೂರ್ವ ನಿಶ್ಚಯದಂತೆ ಬ್ರಿಟನಿನ ಸರ್ವ ಪಕ್ಷಗಳ ಒಂಭತ್ತು ಮಂದಿ ಪಾರ್ಲಿಮೆಂಟ್ ಸದಸ್ಯರುಳ್ಳ 'ಹಿತಚಿಂತಕ ಶಿಷ್ಟಮಂಡಲ'ವು ಜನವರಿ ತಾ. 2ರಲ್ಲಿ ಲಂಡನಿನಲ್ಲಿ ವಿಮಾನ ಹತ್ತಿ 5ರಲ್ಲಿ ಕರಾಚಿಗೆ ಬಂದಿಳಿದಿದೆ. ಅಲ್ಲಿ ಅಧಿಕಾರಿಗಳಿಂದ ಸ್ವಾಗತ ಪಡೆದು ಅವರೆಲ್ಲಾ ನವ ದಿಲ್ಲಿಗೆ ಪ್ರಯಾಣ ಮಾಡಿ ವೈಸರಾಯೀ ವೇವೆಲರ ಆತಿಥ್ಯದಲ್ಲಿದ್ದಾರೆ. ಇದು ಸ್ವೇಚ್ಛಾ ವಿಹಾರಿ ಮಂಡಲ ಸರಕಾರದ ಅಂಗವಾಗಿ—ಸರಕಾರಕ್ಕೆ ಹೊಣೆಯಾಗಿ—ಸಂಚರಿಸುವದಿಲ್ಲ. ಅದರ ಅಭಿಪ್ರಾಯಗಳಿಗೆ ಅಧಿಕಾರದ ಮೊಹರು ಬೀಳುವಂತಿಲ್ಲ. ಭಾರತ ಸಂಚಾರ ಮುಗಿಸಿ ಹೋದ ಮೇಲೆ ಸರಕಾರಕ್ಕೊಂದು ವರದಿ ಯೊಪ್ಪಿಸಬೇಕೆಂಬ ನಿರ್ಬಂಧ ಕೂಡಾ ಇವರಿಗಿಲ್ಲ. ಮೇಲಾಗಿ ಅದರ ಸದಸ್ಯರಲ್ಲಿ ಏಕಧೋರಣೆ, ಏಕಾಭಿಪ್ರಾಯವಿಲ್ಲ. ಇಂತಹ ಸ್ವತಂತ್ರ ಸಮಿತಿ ಭಾರತದ ಸರ್ವ ಪಕ್ಷಗಳ ನಾಯಕರನ್ನೂ, ಸ್ಥಳಗಳನ್ನೂ ಸಂದರ್ಶಿಸಲಿದೆ. ಇಲ್ಲಿಯ ಜನಜೀವನವನ್ನು ಸಾಧ್ಯವಿದ್ದಷ್ಟು ಪರೀಕ್ಷಿಸಲಿದೆ. ಇದು ಸರಕಾರೀ ಸಮಿತಿಯಲ್ಲವಾದರೂ ಪಾರ್ಲಿಮೆಂಟಿನ ರಾಯಭಾರಿ. ಆದ್ದರಿಂದ ಸಮಿತಿಯ ಅಭಿಪ್ರಾಯಗಳಿಗೆ ಲಂಡನಿನಲ್ಲಿ ವಿಶೇಷ ಬೆಲೆ ಬರುವದು ಖಂಡಿತ. ಭಾರತದ ಸ್ವಾತಂತ್ರ್ಯ ಪ್ರಶ್ನೆಗೆ ಕರಿಬಣ್ಣ ಬಳಿಯುವ ಅಥವಾ ಕಾಲವಿಳಂಬ ಮಾಡುವ ಕಪಟ ನಾಟಕವಿದು, ಎಂದು ಹಿಂದೀಯರಲ್ಲಿ ಈ ಕುರಿತು ಅಸಮಾಧಾನವಿದೆ. ಈ ನವ ಗ್ರಹಗಳ ಸ್ಥೂಲ ಪರಿಚಯ:—

ರೋಬರ್ಟ್ ರಿಚಾರ್ಡ್ಸ್

ಇವರು ಮಂಡಲದ ನಾಯಕ. ಈ ಮೊದಲೊಮ್ಮೆ ಲೇಬರ್ ಸರಕಾರವಿದ್ದಾಗ ಭಾರತದ ಉಪಕಾರ್ಯದರ್ಶಿಯಾಗಿದ್ದರು. ಬ್ರಿಟನಿನ ವಿಶ್ವವಿದ್ಯಾಲಯವೊಂದರ ಲೆಕ್ಚರರ್. 'ಎಲ್ಲಾ ಹೊಸತನ್ನೂ ಪ್ರತ್ಯಕ್ಷವಾಗಿ ಕಾಣುವೆವು. ಇಂಗ್ಲಂಡು ಮತ್ತು ಭಾರತಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ವಿಶೇಷ ಆತುರದಿಂದ ನೋಡುವೆವು. ಎಲ್ಲ ಪ್ರಮುಖರನ್ನೂ ಸಂಧಿಸಿ ಸ್ನೇಹಸೌಹಾರ್ದತೆಯಿಂದ ವಿಷಯ ವಿಮರ್ಶೆ ನಡಿಸುವೆವು. ನಾವು ಒಟ್ಟಿಗೆ ಮತ್ತು ವ್ಯಕ್ತಿಶಃ ಸ್ವತಂತ್ರರಿದ್ದೇವೆ'—ಎಂದಿದ್ದಾರೆ.

ಲೋರ್ಡ್ ಚೋರ್ಲೇ

ಇತ್ತೀಚೆಗೆ ಲೋರ್ಡ್ ಹುದ್ದೆಗೇರಿದ ಕೂಲಿಗಾರ ಸದಸ್ಯರಿವರು. ಆ ಮೊದಲು ಪ್ರೊಫೆಸರ್ ರೋಬರ್ಟ್ ಸಾಮುವೇಲ್ ತೇದೋರ್ ಚೋರ್ಲೇ ಆಗಿದ್ದರು. ವಿದೇಶ ಕಚೇರಿ, ಕೂಲಿಗಾರ ಮಂತ್ರಿಯ ಆಫೀಸು, ನಾಗರಿಕ ರಕ್ಷಣಾಲಯ, ಇತ್ಯಾದಿ ಹಲವು ರಂಗಗಳಲ್ಲಿ ಕೆಲಸ ಮಾಡಿ ಅನುಭವವಿದ್ದವರು. ಪ್ರಧಾನಿ ಅಟ್ಲೀಯವರ ಖಾಸಗೀ ಮನೆಯ ನೆರೆಮನೆಯವರು. ಒಳ್ಳೇ ಚತುರ.

ಮಿಸೆಸ್ ನಿಕೋಲ್

ಈ ಸಮಿತಿಯಲ್ಲಿರುವ ಓರ್ವ ಮಹಿಳೆಯೆಂದರೆ ಇವರೇ. ಶ್ರೀಮತಿ ಮೂರಿಯಲ್ ವಾಲ್‌ಹೆಡ್ ನಿಕೋಲ್ ಒಂದು ಕಾಲದಲ್ಲಿ ಮಹಿಳಾ ಮತದಾನದ ಹಕ್ಕಿಗಾಗಿ ಕಾದಾಡಿ ಹೆಸರು ಪಡೆದವರು. ಪಾರ್ಲಿಮೆಂಟಿನ ಸ್ವತಂತ್ರ ಲೇಬರ್ ಪಕ್ಷದ ಸುಪ್ರಸಿದ್ಧ ಸದಸ್ಯರಾಗಿದ್ದ ಸಂದ ಆರ್. ಸಿ. ವಾಲ್‌ಹೆಡ್ಡರ ಪುತ್ರಿ. ಈಗ ಈಕೆ ಪಾರ್ಲಿಮೆಂಟಿನ ಲೇಬರ್ ಸದಸ್ಯೆ. ಹಿಂದೂಸ್ಥಾನಕ್ಕೆ ಹೋಗುವದೆಂಬ ಸಂತೋಷದಿಂದ, ಸ್ವರ ಹಾವ ಭಾವಗಳೆಲ್ಲಾ ಬೇರೆಯಾಗಿವೆ. ಈ ಸಂದರ್ಶನವು ಅವರ ದೀರ್ಘ ಕಾಲದ ಬಯಕೆಯಾಗಿತ್ತಂತೆ. "ಮುಖ್ಯತಃ ನನ್ನ ಬಯಕೆ ಹಿಂದೀ ಧುರೀಣರ ಭೇಟಿ ಮಾಡುವದು; ಅಲ್ಲಿಯ ಮಹಿಳಾ ಸಮಸ್ಯೆಗಳನ್ನು ಅರಿತು ಕೊಳ್ಳುವದು" ಎಂದಿದ್ದಾರೆ. ಕರಾಚಿ ವಿಮಾನ ನಿಲ್ದಾಣದಲ್ಲಿ ಶ್ರೀಮತಿ ಅಗತಾ ಹೆರಿಸನರು ಇವರನ್ನಾಲಂಗಿಸಿ ಹೃದಯ ಸ್ಪರ್ಶಿ ಸ್ವಾಗತವಿತ್ತಿದ್ದರು.

ಆರ್. ಸೋರೆನ್ಸನ್.

ಹಿಂದೂಸ್ಥಾನವನ್ನು ನೋಡಬೇಕೆಂಬ ಬಯಕೆ ಇವರಿಗಿದ್ದಂತೆಯೇ, ಇವರನ್ನು ನೋಡಿದಂತಾದೀತೆಂಬ ಆಸೆ ಹಿಂದೀಯರಿಗೂ ಇತ್ತು. ರೆವರೆಂಡ್ ರೆಜಿನಾಲ್ಡ್ ಸೋರೆನ್ಸನರೆಂದರೆ ಪಾರ್ಲಿಮೆಂಟಿನ ಒಂದು ಸೀಟನ್ನು ಹಲವು ವರುಷಗಳಿಂದ ಕಾಯಮಾಗಿ ಅನುಭವಿಸುತ್ತಾ ಬಂದವರು. ಸುಮಾರು 15 ವರುಷಗಳಿಂದ ಹಿಂದೀ ಪ್ರಶ್ನೆಯೇ ಅವರ ಮುಖ್ಯ ಮನೋವೃತ್ತಿಯಾಗಿತ್ತು. ಅಮೆರ್ಶಿ ಕಾಲದಲ್ಲಿ ಭಾರತ ಸಂಬಂಧದ ಸವಾಲುಗಳನ್ನು ಛಡಾಯಿಸಿ ಭಾರತ ಕಾರ್ಯದರ್ಶಿಯ ತಲೆ ಕರಡು ಮಾಡುತಿದ್ದ ಮನುಷ್ಯ ಈತ. ಭಾರತ ರಾಷ್ಟ್ರೀಯತೆಯೊಡನೆ ಪೂರ್ಣ ಸಹಾನುಭೂತಿಯಿರುವ ಬ್ರಿಟಿಷರಲ್ಲಿ ಸೋರೆನ್ಸನರೊಬ್ಬರು. ನೋಡುವದಕ್ಕೆ ತೆಳು; ತಾರುಣ್ಯದ ಛಾಯೆಯಿನ್ನೂ ಇದೆ; ಬಹಳ ಚುರುಕಿನ ಮನುಷ್ಯ. ಗಾಂಧಿ, ನೆಹರು, ಜಿನ್ನರಂತೆಯೇ ಕೆಲಸಗಾರ, ವ್ಯಾಪಾರಿ, ವಿದ್ಯಾರ್ಥಿ, ಮಹಿಳಾ ಪ್ರಮುಖರನ್ನೂ ಕಂಡು ಮಾತಾಡುತ್ತೇನೆ ಎನ್ನುತ್ತಾರೆ.

ಎ. ಜಿ. ಬೊಟ್ಟೋಮ್ಲೆ.

ಇವರು ಪಾರ್ಲಿಮೆಂಟಿಗೆ ಹೊಸಬರು. ಕೂಲಿಗಾರ ಪಕ್ಷದವರು. ಆದರೆ ಭಾರತದ ಕಡೆಗೆ ಗಾಢ ಲಕ್ಷ್ಯವನ್ನು ಕೊಡುತ್ತಾ ಬಂದವರು ಎಲ್ಡರ್‌ಮೇನ್ ಬೊಟ್ಟೊಮ್ಲೆ ಒಳ್ಳೆ ಸಂಘಟನಾ ಶಕ್ತಿಯುಳ್ಳ ಮನುಷ್ಯ. 'ನೇಶನಲ್ ಯೂನಿಯನ್ ಪಬ್ಲಿಕ್ ಎಂಪ್ಲೋಯೀಸ್' ಸಂಸ್ಥೆಯ ಲಂಡನ್ ಸಂಘಟನಾ ಕರ್ತರಿವರೇ. ಪ್ರಾಯ 38. ಹಿಂದುಸ್ಥಾನಕ್ಕೆ ಬಂದು ಇಲ್ಲಿಯ ಧುರೀಣರೊಡನೆ ಚರ್ಚಿಸುವ ಉಮೇದಿನಿಂದ ನಾಲ್ಕಿಂಚು ಬೆಳೆದಂತಾಗಿದ್ದಾರೆ

ಗೋಡ್‌ಫ್ರೇ ನಿಕೋಲ್‌ಸನ್

ಇವರು ಕನ್ಸರ್ವೇಟಿವ್ ಎಂ. ಪಿ. ಈ ಮೊದಲು ಹಿಂದುಸ್ಥಾನದಲ್ಲಿದ್ದು ಪರಿಚಯ ಪಡೆದವರು. ಇತ್ತೀಚೆಗೆ ಕನ್ಸರ್ವೇಟಿವ್ ಪಕ್ಷವು ರಚಿಸಿಕೊಂಡಿರುವ 'ಭಾರತ ಕಮಿಟಿ'ಯ ಓರ್ವ ಸದಸ್ಯ. 'ಹಿಂದುಸ್ಥಾನದ ಇತ್ತೀಚೆಗಿನ ಸ್ಥಿತಿಗತಿ ಇಂಗ್ಲಂಡಿನಲ್ಲಿರುವ ನಮ್ಮ ಬುದ್ಧಿಗೇನೂ ಸೋಂಕಿಲ್ಲವೆಂಬ ಜ್ಞಾನವಿದ್ದುಕೊಂಡೇ ನಾವು ಭಾರತದಲ್ಲಿ ಪರ್ಯಾಲೋಚನಾ ಪ್ರವೃತ್ತರಾಗುವೆವು' ಎಂದಿದ್ದಾರೆ.

ಡಬ್ಲ್ಯು ವ್ಯಾಟ್

ಈ ಸಮಿತಿಯಲ್ಲಿರುವ ಅತ್ಯಂತ ಎಳೆಯ ಸದಸ್ಯನೆಂದರೆ ಮೇಜರ್ ವುಡ್ರೋವ್ ವ್ಯಾಟ್. ಇವರ ಪ್ರಾಯ 26 ವರುಷ, ಯುರೋಪು ಪುನರಾಕ್ರಮಣದಲ್ಲಿ ಭಾಗವಹಿಸಿ ಹೆಸರು ಪಡೆದವರಿವರು. ಪಾರ್ಲಿಮೆಂಟಿಗಾರಿಸಲ್ಪಟ್ಟಂದಿನಿಂದ ಭಾರತ ಕಾರ್ಯದರ್ಶಿಗೆ ತೀಕ್ಷ್ಣ ಪ್ರಶ್ನೆಗಳನ್ನು ಕೇಳುವದರಲ್ಲಿ ಯಾವಾಗಲೂ ಮುಂದಿದ್ದವರು. 'ಬ್ರಿಟನು ಮತ್ತು ಭಾರತಗಳ ಸಾಮಾನ್ಯ ಜನರೊಳಗೆ ಭಿನ್ನಮತವಿಲ್ಲ. ನಮ್ಮೀ ಭೇಟಿಯು ಆಡಳಿತೆಯ ಎರಡು ಕಡೆಯ ದ್ವಾರಗಳಿಗೂ ಎಣ್ಣೆ ಸವರಿ ಮೇಲ್ಮಟ್ಟದಲ್ಲಿ ಚಲಿಸುವಂತೆ ಮಾಡುವದೆಂಬ ಅನಿಸಿದ" ಎಂದಿದ್ದಾರೆ.

ಎ. ಆರ್ ಡಬ್ಲ್ಯು. ಲೋ

ಮತ್ತೊಬ್ಬ ಸೋಲ್ಜರ್ ಸದಸ್ಯ—ಅಂತೆಯೇ ಯುವಕನೆಂದರೆ ಬ್ರಿಗೇಡಿಯರ್ ಎ ಆರ್. ಡಬ್ಲ್ಯು. ಲೋ. ಇವರು ಸುಪ್ರಸಿದ್ಧರಾಗಿದ್ದ ಲೋರ್ಡ್ ಅಟ್ಕಿನರ ಮೊಮ್ಮಗ ಪ್ರಾಯ 31ರ ಲೋ ಬ್ಯಾರಿಸ್ಟರ್ ಆಗಿದ್ದು ಗ್ರೀಸ್ ಮತ್ತು ಪಶ್ಚಿಮ ರಂಗಗಳಲ್ಲಿ ಹೋರಾಡಿದವರು. ಪ್ರಥಮ ಬಾರಿ ಭಾರತದ ಭೇಟಿ. ಭಾರೀ ಆಶೆ ಕಟ್ಟಿಕೊಂಡು ಬಂದಿದ್ದಾರೆ.

ಅರ್ಲ್ ಓಫ್ ಮನ್ಸ್ಟರ್.

ಹಿಂದುಸ್ಥಾನದ ಪರಿಚಯ ತನಗಿದ್ದು, ತನ್ನ ಗುರುತವನ್ನು ಹಿಂದುಸ್ಥಾನಕ್ಕೆ ಮಾಡಿಸಿದ್ದ ಯೌವನದ ಹುಮ್ಮಸ್ಸಿನ ಸದಸ್ಯರಿವರು. ಚರ್ಚಿಲ್ಲರ ಸಮ್ಮಿಶ್ರ ಮಂತ್ರಿ ಮಂಡಲದಲ್ಲಿ ಭಾರತದ ಉಪಕಾರ್ಯದರ್ಶಿಯಾಗಿದ್ದರು. ಅಂತೆಯೇ ಇಲ್ಲಿರುವ ಸೇನೆಗಳ ಯೋಗ ಕ್ಷೇಮ ವಿಚಾರಣೆಗಾಗಿ ಇತ್ತೀಚೆಗೆ ಹಿಂದುಸ್ಥಾನದಲ್ಲಿ ಸಂಚರಿಸಿಯೂ ಹೋಗಿದ್ದರು. ಈ ಬಾರಿ ಹೊಸಾವತಾರ ಧರಿಸಿ ಬಂದಿದ್ದಾರೆ.

ತಲೆಗೊಂದು ಅಭಿಪ್ರಾಯ.—ಅಂತರ್ಯಕ್ಕೊಂದರಂತೆ ಅಭಿರುಚಿ—ಇರುವವರ ತಂಡವಿದು. ಲಂಡನಿನಿಂದ ಹೊರಡುವಾಗ ಮತ್ತು ಲಂಡನಿಗೆ ಮುಟ್ಟುವಾಗ ಒಟ್ಟಿಗಿರಬೇಕೆಂಬೊಂದು ನಿರ್ಧಾರದ ಹೊರತು, ಬೇರಾವ ನಿಯಮಗಳ ಕಟ್ಟೂ ಇವರನ್ನು ಬಿಗಿದಿಲ್ಲ. ಲೋರ್ಡ್ ವೇವೆಲರು ತನಗಾಗಿ ನಿರ್ಧರಿಸಿದ್ದ ಸಂಚಾರ ಕಾರ್ಯಕ್ರಮಗಳನ್ನು ರದ್ದು ಪಡಿಸಿಕೊಂಡು ಇವರ ಸನ್ಮಾನಕ್ಕಾಗಿ ನವದಿಲ್ಲಿಯಲ್ಲೇ ನಿಂತಿದ್ದಾರೆ. ಒಂದೆರಡು ವಾರ ದಿಲ್ಲಿಯಲ್ಲುಳಿದು ಈ ತಂಡವು ಎರಡು ಅಥವಾ ಮೂರು ಗುಂಪಾಗಿ ವಿಂಗಡಿಸಲ್ಪಟ್ಟು ಉತ್ತರ ಭಾರತದ ಬೇರೆ ಬೇರೆ ಕಡೆಗಳಿಗೆ ಭೇಟಿ ಕೊಡುತ್ತಾ ಬೊಂಬಾಯಿಯಲ್ಲಿ ಮತ್ತೊಮ್ಮೆ ಒಟ್ಟಾಗುವರು. ಅಲ್ಲಿ ಪುನಃ ಒಡೆದು ದಕ್ಷಿಣ ಭಾ

(೪ನೇ ಪುಟ ನೋಡಿರಿ)

NOTICE

In the matter of the Indcin Companies Act.

In the matter of the Canara Forest and Farms Limited (In Liquidation). Notice to the creditors and share-holders of the Company under Sec. 209. G. to attend the General Meeting:

Please take notice that there will be a General Meeting of the Creditors and Share-holders of the said Company on Sunday the 3rd February, 1946 at 12 A. M. at the Office of the Liquidator at Karkal, South Kanara District, as required under Section 209 G. of the Indian Companies Act. All the creditors and share-holders of the said Company are requested to attend.

Karkal, 3-1-'46. N. M. Adyanthaya, LIQUIDATOR.

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur B. S. Sawkar, B.A. L.L. B., Chairman.

A. S. Kini, Managing Director.

ಯುನೈಟೆಡ್ ಕರ್ನಾಟಕ ಇನ್ಸುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ

THE UNITED KARNATAK INSURANCE Co. LTD. DHARWAR

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ—

Organising Office:— Court Road, UDIPI.

ಆಜಾದ್ ಹಿಂದ್ ತ್ರಿನಾಯಕರ ಬಿಡುಗಡೆ.

ಎಲ್ಲೆಲ್ಲೂ ಸಮಾಧಾನ, ಸಂತೋಷ, ಶ್ಲಾಘನೆ!

ಆಜಾದ್ ಹಿಂದ್ ತ್ರಿಮೂರ್ತಿಗಳ— ಕೆಪ್ಟನ್ ಶಾನವಾಜ್, ಕೆಪ್ಟನ್ ಸೆಹ್ಗಲ್ ಲೆಫ್ಟನೆಂಟ್ ಧಿಲ್ಲೋನರ—ಮೇಲೆ ಕೋರ್ಟ್ ಮಾರ್ಶಲ್ ಕರಿನೀರಿನ ಶಿಕ್ಷೆ ವಿಧಿಸಿದ್ದನ್ನು ಭಾರತದ ಸರ್ವ ಸೇನಾನಿ ಜನರಲ್ ಆಚಿನ್‌ಲೆಕರು ಪೂರ್ತಿ ಕ್ಷಮಿಸಿ ಮೂವರನ್ನೂ ಇದೇ ತಾ. ೩ರಲ್ಲಿ ಬಿಡುಗಡೆ ಮಾಡಿದ್ದಾರೆ. ಈ ಅನಿರೀಕ್ಷಿತ ಶುಭ ಸಮಾಚಾರವು ಆನಂದದಲೆಗಳಂತೆ ಬಡಿದು ಹಿಮಾಲಯದಿಂದ ಕನ್ಯಾ ಕುಮಾರಿಯ ವರೆಗಿನ ಸರ್ವರನ್ನೂ ಸಂತೋಷ ಸಮುದ್ರದಲ್ಲಿ ಮುಳುಗಿಸಿದೆ. ಜನರಲ್ ಆಚಿನ್‌ಲೆಕರ ಔದಾರ್ಯ—ಶ್ರೀ. ಭುಲಾಭಾಯಿ ದೇಸಾಯಿಗಳ ವಾದ ಪ್ರತಿಭೆ—ನೆಹರು ಮೊದಲಾದ ಕಾಂಗ್ರೆಸ್ ಪ್ರಮುಖರ ಪ್ರಾಣಾವಧಿ ಪ್ರಯತ್ನ-ಸರ್. ನೋಶಿರ್ವಾನ್, ಜಡ್ಜ್ ಎಡ್ವೋಕೇಟರರು ವಹಿಸಿದ್ದ ಮೃದು ಧೋರಣೆ-ಎಲ್ಲಕ್ಕಿಂತ ಹೆಚ್ಚಾಗಿ ಇಡೀ ರಾಷ್ಟ್ರವು ಕಣ್ಣೀರು, ಕೆನ್ನೀರು ಸುರಿಸಿ ಪ್ರದರ್ಶಿಸಿದ ಹೃದಯ-ಇವೆಲ್ಲವುಗಳ ಮೇಲೀಗ ಕೃತಜ್ಞತೆಯ ಮುಕುಟವೇರಿದೆ. ಒಂದು ಮಹಾರುದ್ರ ನಾಟಕವು ಸುಖಪರ್ಯವಸಾಯಿಯಾಯಿತು. ದೇಶವೀಗ ಉಳಿದ ಆಜಾದ್ ಹಿಂದ್ ಸೇನಾನಿಗಳ ಬಿಡುಗಡೆಯನ್ನು ಆತುರದಿಂದ ನಿರೀಕ್ಷಿಸುತ್ತಿದೆ.

ಸರಕಾರೀ ಪ್ರಕಟಣೆ

ಈ ಸಂಬಂಧವಾಗಿ ನವದಿಲ್ಲಿಯಿಂದ ಹೊರಟ ಸರಕಾರೀ ಪ್ರಕಟಣೆಯ ಸಾರಾಂಶ ಹೀಗಿದೆ:—ಮೂವರು ಆರೋಪಿಗಳೂ ಚಕ್ರವರ್ತಿಗಳ ಮೇಲೆ ಯುದ್ಧ ಹೂಡಿದ ಆಪಾದನೆಗೊಳಗಾಗಿದ್ದರು. ಅಂತೆಯೇ ಲೆಫ್ಟನೆಂಟ್ ಧಿಲ್ಲೋನನ ಮೇಲೆ ಕೊಲೆಮಾಡಿದ ಆರೋಪವೂ ಉಳಿದ ಇಬ್ಬರ ಮೇಲೆ ಕೊಲೆಗೆ ಪ್ರೋತ್ಸಾಹಕೊಟ್ಟ ಆಪಾದನೆಯೂ ಇದ್ದಿತು. ವಿಚಾರಣೆಯಿಂದ ಕೋರ್ಟು ಹೊಂದಿದ ತೀರ್ಮಾನದಂತೆ ಚಕ್ರವರ್ತಿಗಳ ವಿರುದ್ಧ ಯುದ್ಧಸಾರಿದ ತಕ್ಸೀರು ಮೂವರ ಮೇಲೂ ಸಿದ್ಧವಾಗಿದೆ. ಕೊಲೆಮಾ... ಮತ್ತು ಪ್ರೋತ್ಸಾಹಿಸಿದ ಆರೋಪದಿಂದ ಧಿಲ್ಲೋನ್ ಮತ್ತು ಸೆಹ್ಗಲರು ಮುಕ್ತರಾಗಿದ್ದಾರೆ. ಶಾನವಾಜರ ಮೇಲಂತೂ ಕೊಲೆಗೆ ಪ್ರೇರಿಸಿದ ಆರೋಪಕೂಡ ಸಿದ್ಧವಾಗಿದೆ ಮತ್ತು ಕೋರ್ಟು ಮಾರ್ಶಲ್ ಶಿಕ್ಷೆಯನ್ನು ಕಾಯಂ ಪಡಿಸುವ ಅಧಿಕಾರವುಳ್ಳ ಜನರಲ್ ಆಚಿನ್‌ಲೆಕರು ಆ ವಿಚಾರಣೆಗಳೆಲ್ಲಾ ಕ್ರಮ ಕಾನೂನುಬದ್ಧವಾಗಿ ಸರಿಯಿವೆ ಎಂದೂ ಅಸ್ತಿತ್ವ ಕೊಟ್ಟಿದ್ದಾರೆ. ಹೀಗೆ ಎಲ್ಲವೂ ಕ್ರಮಬದ್ಧವಾಗಿದ್ದು, ಚಕ್ರವರ್ತಿ ಸರಕಾರದ ವಿರುದ್ಧ ಯುದ್ಧಹೂಡಿದ ಮಹಾಪರಾಧವು ಮೂವರ ಮೇಲೂ ಸ್ಥಿರಗೊಳಿಸಲ್ಪಟ್ಟಿದ್ದರೂ, ಸೆಹ್ಗಲ್ ಧಿಲ್ಲೋನರು ಕೊಲೆಯ ಆರೋಪದಿಂದ ಬಿಡುಗಡೆಗೊಂಡಿದ್ದರೂ ಶಾನವಾಜರಮೇಲೆ ಅದೂ ಖಾತ್ರಿಯಾಗಿ ಅವರ ತಕ್ಸೀರು ಭಯಂಕರದ್ದಿದ್ದರೂ, ಧೃಢೀಕರಣಾಧಿಕಾರಿಯು ಸದ್ಯದ ಪರಿಸ್ಥಿತಿಯನ್ನು ಗಮನಿಸಿ ಮೂವರನ್ನೂ ಸಮಾನವಾಗಿ ಕ್ಷಮಿಸಿ ಬಿಡುಗಡೆ ಮಾಡಲು ನಿರ್ಧರಿಸಿದ್ದಾರೆ. ಆದರೆ *ಸೇನೆಯ ಅಧಿಕಾರಿಗಳಾಗಲೀ ಸೋಲ್ಜರರಾಗಲೀ ಚಕ್ರವರ್ತಿ ಸರಕಾರದ ವಿಧೇಯತಾ ಪ್ರತಿಜ್ಞೆಯನ್ನು ಭಂಗಿಸಿ ವಿರುದ್ಧ ಯುದ್ಧ ಹೂಡುವದೆಂಬುದು ಎಲ್ಲಾ ಸಂದರ್ಭಗಳಲ್ಲೂ ಅತಿ ಮಹತ್ವದ ಅಪರಾಧವಾದ್ದರಿಂದ, ಈಗ ಇರುವ ಅಥವಾ ಮುಂಬರುವ ಕಾಯಿದೇ ಬದ್ಧ ಸರಕಾರಗಳ ಭದ್ರತೆಯ ದೃಷ್ಟಿಯಿಂದ ಈ ಮೂವರು ಆರೋಪಿಗಳನ್ನೂ ಸೇನೆಯಿಂದ ತೆಗೆದು ಹಾಕುವ ಮತ್ತು ಅವರ ಸಂಬಳ ಭತ್ತೆ ಇತ್ಯಾದಿಗಳನ್ನು ರದ್ದುಪಡಿಸುವ ಕೋರ್ಟು ಮಾರ್ಶಲ್ ತೀರ್ಮಾನವನ್ನು ಕಾಯಂ ಮಾಡಿದ್ದಾರೆ.

ಇದು ಯಾರ ವಿಜಯ?

ಸ್ವಾತಂತ್ರ್ಯ ಹವೆ ಸೇದಿದೊಡನೆ ಆ ತ್ರಿನಾಯಕರ ಬಾಯಿಯಿಂದ ಹೊರಟ ಪ್ರಥಮ ಮಾತಿನಂತೆ ನಿಜಕ್ಕೂ 'ಇದು ರಾಷ್ಟ್ರದ ವಿಜಯ'. ಅಖಿಲ ರಾಷ್ಟ್ರದ ಆಗ್ರಹದ ಬೇಡಿಕೆಯೇ ಆಜಾದ್ ಹಿಂದ್ ನಾಯಕರನ್ನು ಬಿಡಿಸಿತು. ಅದಕ್ಕೆರಡನೆಯದಾಗಿ ಶ್ರೀ ಭುಲಾಭಾಯಿ ದೇಸಾಯಿಗಳ ಅಸಾಮಾನ್ಯ ವಾಗ್ಪ್ರತಿಭೆಯು ವಿಜಯ ಪಥವನ್ನು ತೆರೆಯಿತು. ಮೂರನೆಯದಾಗಿ ಸರಕಾರೀ ವಕೀಲ ಸರ್. ಎನ್. ಪಿ. ಇಂಜಿನೀಯರರನ್ನೂ ಜಡ್ಜ್ ಎಡ್ವೋಕೇಟರನ್ನೂ ಸ್ಮರಿಸಬೇಕು. ಸರ್. ಇಂಜಿನೀಯರರು ತನ್ನ ವಾದ ಸಮರ್ಥನೆಯ ಮುಷ್ಕರವನ್ನೆಲ್ಲಿಯೂ ಹಿಡಿಯದೆ ಶುದ್ಧ ನ್ಯಾಯ ಪಕ್ಷಪಾತಿಯಂತೆ ವಾದಿಸಿದ್ದರು. ಆರೋಪಿಗಳಿಗೆ ದೇಶಭಕ್ತಿಯೊಂದೇ ಪ್ರೇರಣೆಯಾಗಿತ್ತೆಂಬುದನ್ನು ಸೌಹಾರ್ದತೆಯೊಡನೆ ಕಂಠೋಕ್ತವಾಗಿ ಒಪ್ಪಿಕೊಂಡಿದ್ದರು. ಜಡ್ಜ್ ಎಡ್ವೋಕೇಟರಾದರೂ ತನ್ನ ಸಾರ ನಿರೂಪಣೆಯಲ್ಲಿ ಶಿಕ್ಷೆಯನ್ನು ರಿಯಾಯತಿಯಿಂದ ವಿಧಿಸುವದು ಅಗತ್ಯವೆಂಬುದನ್ನು ಒತ್ತಿ ಸೂಚಿಸಿದ್ದರು. ನಾಲ್ಕನೆಯದಾಗಿ ಆರೋಪಿಗಳ ವ್ಯಕ್ತಿಗತ: ಗುಣ ನಡತೆಗಳು ಅತ್ಯುತ್ತಮವಿದ್ದುವು. ಅಂತೆಯೇ 'ಇದು ರಾಷ್ಟ್ರ ಯಜ್ಞ' ಎಂಬ ಭಾವನೆಗೊಂದು ಪ್ರತ್ಯಕ್ಷ ರೂಪವನ್ನು ಪ್ರಥಮತ: ಕೊಟ್ಟವರು ನೆಹರುಗಳು; ಸುಭಾಸ್ ಮತ್ತು ಆಜಾದ್ ಹಿಂದ್ ಹೋರಾಟಗಳನ್ನು ಬಹಿರಂಗವಾಗಿ-ಕಣ್ಣೀರಿನೊಡನೆ-ನೆಹರುಗಳು ಶ್ಲಾಘಿಸಲಾರಂಭಿಸದಿರುತಿದ್ದರೆ ಇಂತಹ ಜನಜಾಗ್ರತಿಗೆ ಬೇಕಾಗಿದ್ದ ಮೂಲ ಧೈರ್ಯವು ಯಾರಿಗೂ ಇರುತ್ತಿರಲಿಲ್ಲ. ಮೇಲಾಗಿ ಕೆಂಪು ಕೋಟೆ ವಿಚಾರಣೆ ನಡೆಯುತಿದ್ದಾಗಲೇ ನೆಹರುಗಳು ಜನರಲ್ ಆಚಿನ್‌ಲೆಕರೊಡನೆ ಗುಪ್ತ ಸಂಭಾಷಣೆಯನ್ನೂ ನಡೆಸಿದ್ದರು. ಗಾಂಧಿ, ಆಜಾದ್, ನೆಹರು, ಪಟೇಲರು ಲೋರ್ಡ್ ವೇವೆಲರೊಡನೆ ಸಂಭಾಷಿಸಿದಾಗಲೂ ಈ ಪ್ರಸ್ತಾಪ ಬಂದಿರಬೇಕು. ದೇಶದ ಕಡೆಯಿಂದ ನೆಹರುಗಳು ಮಾಡಿದಂತಹ ಕಾರ್ಯವು ಸರಕಾರೀ ಕಡೆಯಿಂದ ಗುಪ್ತವಾಗಿ ವೈಸರಾಯರಿಂದ ಆಗಿರಬೇಕು. ಹೀಗೆ ಎಲ್ಲವೂ ಅನುಕೂಲವಾದುವು. ಹಿಂದೀ ರಾಜ್ಯ ಘಟನೆಯ ರಂಗ ತಯಾರಿ, ಪಾರ್ಲಿಮೆಂಟರಿ ಸಮಿತಿಯ ಆಗಮನಕ್ಕನುಕೂಲತೆ ಇತ್ಯಾದಿ ಆವಶ್ಯಕತೆಗಳೂ ಮುಂದೆ ಬಂದುವು. ಆಜಾದ್ ಹಿಂದ್ ತ್ರಿನಾಯಕರು ಬಿಡುಗಡೆಗೊಂಡರು.

ಅನಿರೀಕ್ಷಿತ ಬಿಡುಗಡೆಯ ಅಪೂರ್ವಾನಂದ

ಜನವರಿ ತಾ. ೩, ಅಪರಾಹ್ನ 5 ಘಂಟೆ ಕಳೆಯುತ್ತದೆನ್ನುವಾಗಲೇ ಸೇನಾ ಲೋರಿಯೊಂದು ನವದಿಲ್ಲಿಯ ಆಜಾದ್ ಹಿಂದ್ ಕೈದಿ ಶಿಬಿರಕ್ಕೆ ಬಂತು. ಅದು ಶುಭಸಂದೇಶಗಳನ್ನು ತುಂಬಿಕೊಂಡಿದ್ದಿತೆಂಬುದನ್ನು ಆಗ ಯಾರೂ ಊಹಿಸಿರಲಿಲ್ಲ. ವಿಚಾರಣೆಯ ತೀರ್ಮಾನಗಳನ್ನು ತಿಳಿಸಲು ಬಂದ ಸೈನಿಕಾಧಿಕಾರಿಯು 'ದಿಲ್ಲಿಯಲ್ಲಿ ನಿಮಗಾರಾದರೂ ಸ್ನೇಹಿತರಿದ್ದಾರೆಯೆ?' ಎಂದು ಆ ತ್ರಿಮೂರ್ತಿಗಳನ್ನು ಪ್ರಥಮತಃ ವಿಚಾರಿಸಿದ. ಕೋರ್ಟು ವಿಧಿಸಿದ ಜೀವಾವಧಿ ಸಜೆಯನ್ನೂ ಭಾರತ ಸೇನಾನಿಯು ಮೂವರನ್ನೂ ಕ್ಷಮಿಸಿರುವರೆಂಬುದನ್ನೂ ತಿಳಿಸಿದಾಗ ಬಿಡುಗಡೆಯಾಗುವೆವೆಂಬ ಅರ್ಥವನ್ನು ಶಾನವಾಜ್, ಸೆಹ್ಗಲ್ ಅಥವಾ ಧಿಲ್ಲೋನರು ಕಟ್ಟಿಕೊಳ್ಳಲಿಲ್ಲ. ಶಿಕ್ಷೆಯನ್ನು ಕಡಿಮೆ ಮಾಡಿರಬಹುದೆಂದು ಭಾವಿಸಿಕೊಂಡರು. 'ಬಿಟ್ಟುಬಿಡುವ ಆಜ್ಞೆಯಾಗಿದೆ' ಎಂದು ತಿಳಿಸಿದಾಗ ಅವರು ಅಕಸ್ಮಾತ್ ಪರಿವರ್ತನೆಗೊಂಡರು. ಆದರೂ ಸಂದೇಹ ಹೋಗಲೊಲ್ಲದು. "ಬಿಡುಗಡೆಯೇ! ನಮಗೆ ಮುಂದೇನು ಬಗೆದಿದೆ"? ಎಂದು ಅವರಲ್ಲೊಬ್ಬರು ಪ್ರಶ್ನಿಸಿದರು. ತಮ್ಮನ್ನು ಬಿಟ್ಟ ಬೆನ್ನಲ್ಲೇ ಭಾರತ ರಕ್ಷಣಾ ಶಾಸನದನ್ವಯ ಪುನಃ ದಸ್ತಗಿರಿ ಮಾಡಬ

(೨ನೇ ಪುಟದಿಂದ)

ಗದ ಸಂಚಾರ ಮುಗಿಸಿ ಮದ್ರಾಸಿನಲ್ಲಿ ಮತ್ತೊಮ್ಮೆ ಕೂಡುವರು. ಅಲ್ಲಿಂದ ಪ್ರಾಯಶಃ ವಿಮಾನ ಹತ್ತಿ ಕಲ್ಕತ್ತೆಗೆ ಪ್ರಯಾಣ. ಆ ಮೇಲೆ ದಿಲ್ಲಿಗೆ ತೆರಳಿ ಮತ್ತೊಮ್ಮೆ ವೈಸರಾಯರ ಆತಿಥ್ಯ. ಅಲ್ಲಿಂದ ಸೀದು ಲಂಡನಿಗೆ ಹಾರುವರು ಈ ಕಾರ್ಯಕ್ರಮಗಳು ಈಗಿನ ನಿಶ್ಚಯದಂತೆ ಆರು ವಾರ ಮಾತ್ರ. ಇವರಿಂದ ಬೇರೇನೂ ಅಲ್ಲವಾದರೂ ಪತ್ರಿಕೆಗಳಿಗಿನ್ನು ಕೆಲವು ವಾರಗಳಿಗಾಗುವ ಸುದ್ದಿಗಳು ದೊರಕುವದೊಂದು ನಿಶ್ಚಯ! ಮನಸೇಚ್ಛೆ ವ್ಯಾಪರಿಸುವ ಸ್ವಾತಂತ್ರ್ಯ ಪಡೆದವರಿರುವರು—ಅವರಲ್ಲೂ ಭಾರತಕ್ಕೆಬಂದ ಬ್ರಿಟಿಷರಾದ್ದರಿಂದ. ಖಂಡನೆ, ಪ್ರತಿವಾದಗಳಿಗಾಸ್ಪದವಿರುವ ಹೊಸ ಶೋಧಗಳನ್ನು ಹೊರಗೆಡಹದಿರಲಾರರು!

The Pangal Nayak Bank Limited.

(Incorporated in 1920.)

Registered Office Court Road, UDIPI.

Sub Offices at— **Udipi, Mangalore, Katapadi, Kanhangad, Kinnigoli, Nileshwar and Surathkal,** South Canara.

SEASON DEPOSITS

For 3, 4 & 5 months at a special rate of interest are accepted at all the above offices.

All kinds of up-to-date Banking service is provided promptly.

Please call for particulars of Business.

Dated the 5th January 1945.

AGAINST DIABETES

&

all its dreadful results

Consult Specialists:

Dr. Alvas' Research Institute, FAJIR

S. KANARA.

ಬಂಟ್ಸ್ ಮಿಲಿಟ್ರಿ ಕ್ಲಬ್,

ಕುಂದಾಪುರ.

ಶುಚಿ ಬಿಸಿ ರುಚಿ

ನವೀನ ವ್ಯವಸ್ಥೆ! ನವನಾಗರಿಕತೆಯ ತಯಾರಿ!!

ಆಧುನಿಕ ರೀತಿಯ ಊಟಉಪಚಾರ!!!

ಒಮ್ಮೆ ಸಂದರ್ಶಿಸಿದಲ್ಲಿ ಎಂದೆಂದಿಗೂ ಮರೆಯಲಾರದ ಸಂಗತಿ.

ಕೋಳಿ ಬಿರಿಯಾನಿಯು ನಮ್ಮ ಒಂದು 'ಸ್ಪೆಸಲಿಟಿ'.

ಹೊರಗಿನ ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವದು.

ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ.

ಪ್ರೊ:— ವಿ. ಕೃಷ್ಣಪ್ಪ ಸೆಟ್ಟಿ.

BUNTS MILITARY CLUB,

COONDAPOOR, S. K.

ರಾಷ್ಟ್ರದಲ್ಲೆಲ್ಲಾ 'ಜೈ ಹಿಂದ್' ಸಂತೋಷ!

ಹುದೆಂದೋ, ಯಾವುದಾದರೊಂದು ದಿಗ್ಬಂಧನಾಲಯದಲ್ಲಿಡಬಹುದೆಂದೋ ಅವರು ಊಹಿಸಿದ್ದರು. ಇವರನ್ನು ಬೀಳ್ಕೊಳ್ಳುವಾಗ ಅಲ್ಲಿದ್ದ ಕೈದಿಬಂಧುಗಳು ಕಣ್ಣೀರುತುಂಬಿದ್ದರು; ಯಾವುದೋ ಬೇರೊಂದು ಜೈಲಿಗೆ ತಮ್ಮ ಅನುಯಾಯಿಗಳನ್ನೊಯ್ಯುವರೆಂದೇ ಅವರ ನಂಬಿಕೆ. ಸೆಹ್ಗಲನ ಕುಟುಂಬಿಕರು ಹಿಂದಿನ ರಾತ್ರಿ ಭೇಟಿಕೊಟ್ಟು ಇನ್ನು ಹಲವು ವರುಷ ತಾವವನ ಮುಖ ನೋಡಲಾರೆವೆಂಬ ಕಳವಳದೊಡನೆ ಹೋಗಿದ್ದರು. ಬಿಡುಗಡೆಯಾದೊಡನೆ ಮೂವರೂ ಆನಂದೋದ್ವೇಗದಿಂದ ಮೋಟಾರು ಹತ್ತಿ ಹಳೇ ಡಿಲ್ಲಿಯಲ್ಲಿರುವ ತಮ್ಮೊಬ್ಬ ಮಿತ್ರನ ಮನೆಗೆ ಹೋಗಿ ಅಲ್ಲಿಂದ ಧನ್ಯವಾದ ಕೊಡಲು ಮಿ. ಅಸಫ್ ಅಲಿಗಳ ಮನೆಗೆ ಕಾರಿನಲ್ಲಿ ಧಾವಿಸಿದರು. ಈ ಅವಧಿಯಲ್ಲಿ ಬಿಡುಗಡೆಯ ವಾರ್ತೆ ಮಿಂಚು ವೇಗದಿಂದ ಹಬ್ಬಿದುದರಿಂದ ಆನಂದದಿಂದ ಹುಚ್ಚೆಗಟ್ಟಿದ ಜನಸಂದೋಹ ಆಸಫ್ ಅಲಿ ಮನೆಯ ಬಿಕ್ಕಟ್ಟಿನ ಓಣಿಯಲ್ಲಿ ನೆರೆದು 'ಜೈಹಿಂದ್' 'ಇಂಕ್ವಿಲಾಬ್ ಝಿಂದಾಬಾದ್' ಘೋಷವೆಬ್ಬಿಸಹತ್ತಿತು. ಅಲಿಗಳ ಮನೆಯಿಂದ ಆ ಶ್ರೀನಾಯಕರು ಕಾರು ಹತ್ತಿದಾಗ ಜನತಂಡವಿತ್ತ ಸ್ವಾಗತವು ಅವರ್ಣನೀಯ. ಕೆಲವರು ಆನಂದಭಾಷ್ಪಗಳೊಡನೆ ಗಾಢಾಲಿಂಗನ ಕೊಟ್ಟರು; ಇನ್ನು ಕೆಲವರು ಮಣಿಗಂಟು ಮುರಿಯುವಂತೆ ಕೈ ಕುಲುಕಿದರು; ಕಾರಿನ ಮಾಡಿನ ಮೇಲೆ ಮೂವರನ್ನೂ ಒತ್ತಾಯದಿಂದೇರಿಸಿ ದರ್ಶನ ಪಡೆದರು; ಪುಷ್ಪಹಾರಗಳು ಮತ್ತು ಸಿಹಿಫಲಗಳ ರಾಶಿ ರಾಶಿಗಳೇ ಸುರಿಯಲಾರಂಭಿಸಿದುವು. ಸಂತೋಷದೋಡಾಟ, ಆನಂದ ಕೋಲಾಹಲಗಳಿಂದ ಇಡೀ ಡಿಲ್ಲಿಯೇ ಧುಮುಧುಮಿಸಹತ್ತಿತು.

ರಾಷ್ಟ್ರದ ವಿಜಯ

"ನಮ್ಮ ಬಿಡುಗಡೆಯು ರಾಷ್ಟ್ರಕ್ಕಾದ ವಿಜಯ. ನಮ್ಮೀ ಪ್ರಾಣ ಭಾರತ ಸ್ವಾತಂತ್ರ್ಯಕ್ಕೆ ಮೀಸಲು ಎಂದು ನಾವು ನೇತಾಜಿಗೆ ಭಾಷೆ ಕೊಟ್ಟಿದ್ದೆವು. ಆ ಶಪಥ ಮುಂದಕ್ಕೂ ಇದೆ. ನಮ್ಮ ನಾಯಕರು ಮತ್ತು ದೇಶಬಾಂಧವರಿಗೆ ನಾವೆಷ್ಟು ಋಣಿಗಳಿದ್ದೇವೆಂಬುದನ್ನು ವರ್ಣಿಸಲು ಶಬ್ದಗಳು ಸಾಲವು. ನಾವೊಂದು ಸರಿಯಾದ ತತ್ವಕ್ಕಾಗಿ–ಭಾರತ ಸ್ವಾತಂತ್ರ್ಯಕ್ಕಾಗಿ–ಹೋರಾಡಿದ್ದೆವು. ಯುದ್ಧದಲ್ಲಿ ಯಾರು ಗೆಲ್ಲುವರೆಂಬುದನ್ನು ನಾವು ಲೆಕ್ಕಿಸಿರಲಿಲ್ಲ. ಆಕ್ಸಿಸ್ ರಾಷ್ಟ್ರಗಳ ಸೋಲು ನಿಶ್ಚಯವಾದ ಮೇಲೂ ನಮ್ಮ ಹೋರಾಟವನ್ನು ಸಾಗಿಸಿದ್ದೆವು ಈಗ ನೆಹರು ಮತ್ತು ಅಜಾದರ ಮುಂದೆ ಹಾಜರಾಗುವೆವು. ಹಿಂದೂ ಮುಸ್ಲಿಮ್ ಐಕ್ಯತೆಯೇ ಮುಂದಿನ ನನ್ನ ಕಾರ್ಯ. ಜೈ ಹಿಂದ್" ಎಂಬ ಪ್ರಥಮ ಸಂದೇಶವು ಅವರಿಂದ ದೊರೆಯಿತು. ಧಿಲ್ಲೋನರು ಡಿಲ್ಲಿಯಲ್ಲೇ ಇದ್ದ ತನ್ನ ಪತ್ನಿಯ ಭೇಟಿಗೆ ಧಾವಿಸಿದರು. ಈ ಧೀರ ಯುವತಿ ಪ್ರತಿ ದಿನವೂ ಸೈಕಲ್ ಹತ್ತಿ ವಿಚಾರಣೆಯ ವೇಳೆ ಕೆಂಪು ಕೋಟೆಯಲ್ಲಿ ಪ್ರೇಕ್ಷಕರ ನಡುವೆ ಕುಳಿತಿರುವಳು— ತನ್ನ ಗಂಡ ಕೋರ್ಟಿಗೆ ಬರುವಾಗ ಹೋಗುವಾಗ, ಅಥವಾ ಊಟದ ವಿರಾಮದ ವೇಳೆ ಎದ್ದಾಗ, ನಗೆ ಬೀರಿ ಕೈ ಬೀಸಿ ಪ್ರೇಮ ಸೂಚಿಸುವ ಸಂಪ್ರದಾಯವಿತ್ತು. ಆ ದಿನ ಇಬ್ಬರೂ ಸ್ವತಂತ್ರ ವಾತಾವರಣದಲ್ಲಿ ಒಟ್ಟಾದರು.

ಸ್ವಾಗತ ಸಭೆಯಲ್ಲಿ

ಡಿಲ್ಲಿ ಕಾಂಗ್ರೆಸ್ ಕಮಿಟಿಯವರು ಡಿಲ್ಲಿಯ ಗಾಂಧೀ ಮೈದಾನಿನಲ್ಲಿ ಮಹಾ ಸ್ವಾಗತ ಸಭೆಯೇರ್ಪಡಿಸಿದ್ದರು. ಮಿ. ಅಸಫ್ ಅಲಿ ಅಧ್ಯಕ್ಷತೆ ವಹಿಸಿದ್ದರು. ಧಿಲ್ಲೋನ್ ಪತ್ನಿ ಮತ್ತು ಮೂವರ ಹಲವು ಸಂಬಂಧಿಕರೂ ಹಾಜರಿದ್ದರು. ಇಂತಹ ಪ್ರಚಂಡ ಸಭೆಯನ್ನು ಡಿಲ್ಲಿ ಆ ವರೆಗೆ ಕಂಡಿರಲಿಲ್ಲ. ಜನರ ನೂಗ್ಗಾಟದಿಂದಾಗಿ ಧ್ವನಿವಾಹಕ ಯಂತ್ರಗಳು ಪೂರ್ತಿ ಹಾಳಾದುವು. ಸಭಾಂತ್ಯದಲ್ಲಿ ಒಂದು ಡಜನಿಗೂ ಮಿಕ್ಕಿದ ಮಂದಿ ಮೂರ್ಛೆ ಬಿದ್ದರು. ಅವರಲ್ಲಿ ಶ್ರೀಮತಿ ಧಿಲ್ಲೋನರೊಬ್ಬರು. ಅವರನ್ನು ಕಾರಿನಲ್ಲಿ ಹೊರಗೊಯ್ದು ಉಪಚರಿಸಿದ ಮೇಲೆ ಸ್ಮೃತಿ ಬಂತು. ಸಿಡಿಮದ್ದುಗಳ ಹಾರಾಟವು ಶ್ರೀನಾಯಕರ ಆಗಮನವನ್ನು ಸೂಚಿಸಿದೊಡನೆ ಸಭೆಯೆಬ್ಬಿಸಿದ 'ಅಝಾದ್ ಹಿಂದ್ ಫೌಜ್ ಝಿಂದಾಬಾದ್' 'ಹಮಾರ ನಾರಾ ಜೈ ಹಿಂದ್' ಘೋಷಗಳು ನಾಲ್ದೆಸೆಗಳಲ್ಲಿ ಪ್ರತಿಧ್ವನಿಸಿದುವು. ಸೇನಾ ಪೋಷಾಕಿನಲ್ಲಿದ್ದ ಶ್ರೀನಾಯಕರು ಪ್ರಚಂಡ ಕರತಾಡನಗಳ ನಡುವೆ ತಮ್ಮ ವೀರ ಸಂದೇಶವಿತ್ತರು—

ಶಾನವಾಜ್—"ನಾನೀಗ ನಿಮಗೆ—ನನ್ನ ದೇಶ ಬಾಂಧವರಿಗೆ—ಅಭಿನಂದನೆ ಮತ್ತು ಕೃತಜ್ಞತೆ ಸಲ್ಲಿಸಲು ಬಂದಿದ್ದೇನೆ. ನಮ್ಮ ಪ್ರಾಣವುಳಿಸಿದಿರೆಂದು ಧನ್ಯವಾದಗಳಲ್ಲ; ಭಾರತೀಯರ ಭಾವನೆಯಿದಿರು ಆ ಸರ್ವಶಕ್ತ ಬ್ರಿಟಿಷ್ ಸರಕಾರ ದೊಗ್ಗಾಲೂರಿದುದಕ್ಕಾಗಿಯೇ ಈ ಅಭಿನಂದನೆ. ನಮ್ಮನ್ನು ಗೌರವಿಸುವ ಮೂಲಕ ನೀವು ನಮ್ಮ ಪ್ರೀತಿಯ ನೇತಾಜೀ ಸುಭಾಸ್ ಚಂದ್ರ ಬೋಸರನ್ನು ಗೌರವಿಸಿದ್ದೀರಿ. ನಾವು ಭಾರತದ ಹೊರಗೆ ಶಸ್ತ್ರ, ಮದ್ದುಗುಂಡುಗಳಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದೆವು. ಇನ್ನು ಅದೇ ಪವಿತ್ರ ಧ್ಯೇಯಕ್ಕಾಗಿ ಆ ಹೋರಾಟವನ್ನು ಅಹಿಂಸಾತ್ಮಕವಾಗಿ ಸಾಗಿಸುವೆವು ನಾನು ಮತ್ತು ನನ್ನ ಅನುಯಾಯಿಗಳು ಮುಂದಿನ ಡಿಲ್ಲಿ ಕಾಂಗ್ರೆಸ್ ಅಧಿವೇಶನದ ವ್ಯವಸ್ಥೆಗೆ ಸಹಾಯಕರಾಗಿ ದುಡಿಯಲಿರುವೆವು. ಬ್ರಿಟಿಷ್ ಸೈನಿಕರಾಗಿ ನಾವು ಸಿಂಗಾಪುರಕ್ಕೆ ಹೋದಾಗ, ಬರ್ಮೀಯರು, ಚೀನೀಯರು, ಮಲಯಿಗಳು ಹಾಗೂ ಥಾಯಿಗಳಿಂದ ನಮಗೆ ದ್ವೇಷ ತಿರಸ್ಕಾರ ದೊರೆತಿತ್ತು. ನಾವು ಸ್ವತಃ ಬ್ರಿಟಿಷ್ ಗುಲಾಮರಾಗಿರುವದಲ್ಲದೆ ಪೂರ್ವ ಏಸ್ಯದ ಬೇರೆ ರಾಷ್ಟ್ರಗಳೂ ಬ್ರಿಟಿಷ್ ಗುಲಾಮರಾಗುವಂತೆ ಮಾಡುತಿದ್ದೇವೆಂದೇ ನಮಗೆ ಅವರ ಧಿಕ್ಕಾರ. ಬೋಸರ ನಾಯಕತ್ವದ ಹಿಂದೀ ರಾಷ್ಟ್ರೀಯ ಸೇನೆಗೆ ಭಾರತದ ಮತ್ತು ಅಂತೆಯೇ ಇಡೀ ಜಗತ್ತಿನ ಸ್ವಾತಂತ್ರ್ಯ ಸಾಧನೆಯ ಧ್ಯೇಯವಿದೆ. ನಾವು ಚಿನ್ ಪರ್ವತ ವಲಯಗಳಲ್ಲಿ ಅನ್ನಾಹಾರವಿಲ್ಲದೆ ಹುಲ್ಲು ತಿಂದು ಹೋರಾಡುತಿದ್ದಾಗ, ತಮ್ಮ ಕಡೆಗೆ ಸೇರಿದರೆ ಸರ್ವಾನುಕೂಲತೆಯೊದಗಿಸುವೆವೆಂದು ಬ್ರಿಟಿಷರಿಂದ ಕರೆ ಬಂದಿತ್ತು. ಆದರೆ ನಾವು ಸ್ವಾತಂತ್ರ್ಯದ ಹುಲ್ಲನ್ನು ಮೇಯುತ್ತೇವಲ್ಲದೆ ಗುಲಾಮಗಿರಿಯ ರೊಟ್ಟಿಬಿಸ್ಕೀಟು ಜಗಿಯಲಾರೆವೆಂದು ಉತ್ತರ ಕೊಟ್ಟೆವು. ಕೊಹಿಮಾ ರಂಗದಲ್ಲಿ ಹೋರಾಡಿ ನಾವು ಹಿಂದೆಗೆಯಬೇಕಾದಾಗ ನಮ್ಮ ಓರ್ವ ಯೋಧ ಜಖಂಗೊಂಡು ನೆಲ ಹಿಡಿದಿದ್ದ. ಅವನು ನನ್ನನ್ನು ಹತ್ತಿರಕ್ಕೆ ಕರೆದು ಹೇಳಿದ:—"ನಾನು ಸರಿಯಾಗಿ ಹೋರಾಡಿದೆನೆಂದು ನೇತಾಜಿಗೆ ತಿಳಿಸಿ ಬಿಡಿ. ಮತ್ತು ನಾನು ಸ್ವದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದೇನಾದ್ದರಿಂದ ಸಂತೋಷದಿಂದ ಸಾಯುತ್ತೇನೆಂದೂ ಹೇಳಿಬಿಡಿ". ದೇಶ ಸ್ವಾತಂತ್ರ್ಯಕ್ಕಾಗಿ ಒಗ್ಗಟ್ಟಿನಿಂದ ಹೋರಾಡೋಣ. ನಮ್ಮ ಪಾಳಯದಲ್ಲಿ ಜಾತಿಭೇದದ ಛಾಯೆ ಕೂಡಾ ನುಸುಳಿರಲಿಲ್ಲ. ಇನ್ನೂ ಬಂಧನದಲ್ಲಿರುವ ಬಂಧುಗಳ ಬಿಡುಗಡೆಗಾಗಿ ಹೋರಾಡಿರಿ."

ಸೆಹ್ಗಲ್—"ನಮ್ಮ ದೇಹದಲ್ಲೊಂದು ಹನಿರಕ್ತವಿರುವ ವರೆಗೆ ಭಾರತ ಸ್ವಾತಂತ್ರ್ಯಕ್ಕಾಗಿ ಕಾದಾಡುವೆವೆಂದು ನಾವು ನೇತಾಜಿಗೆ ಭಾಷೆ ಕೊಟ್ಟಿದ್ದೆವು. ಅದನ್ನು ಮುಂದೊತ್ತುವೆವು. ನಮ್ಮ ಬಿಡುಗಡೆಗಾಗಿ ಹೋರಾಡಿದ ಎಲ್ಲರಿಗೂ ಧನ್ಯವಾದಗಳು"

ಧಿಲ್ಲೋನ್—"ಈ ಗೌರವಕ್ಕೆ ನಾವು ಅರ್ಹರಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಬರ್ಮ, ಮಲಯ, ಅಸ್ಸಾಮುಗಳ ಕಾಡುಗಳಲ್ಲಿ ಪ್ರಾಣಕೊಟ್ಟ ಯೋಧರ ಸ್ಮರಣೆಮಾಡಿರಿ ನಮ್ಮ ಪ್ರತಿಜ್ಞೆ ಬಾಕಿಯುಳಿದಿದೆ. ಅಜಾದ್ ಹಿಂದ್ ಮಾದರಿ ನಿಮ್ಮ ಮುಂದಿದೆ. ಅದನ್ನು ಎಲ್ಲರೂ ಅನುಕರಿಸೋಣ"

ಎಲ್ಲೆಲ್ಲೂ ಹೃದಯ ಸ್ಪರ್ಶೀ ಸಂಭ್ರಮ

ಮೂವರು ಶ್ರೀನಾಯಕರೂ ಮರುದಿನ ತಮ್ಮೂರಾದ ಲಾಹೋರಿಗೆ ತೆರಳಿ ಅತಿ ದೊಡ್ಡ ಸ್ವಾಗತ ಪಡೆದರು. ಶಾನವಾಜರು ಡಿಲ್ಲಿಯ ಜಮ್ಮಾ ಮಸೀದಿಯಲ್ಲಿ "ಸ್ವಾತಂತ್ರ್ಯಕ್ಕಾಗಿ ಇತರ ಸಮಾಜಗಳೊಡನೆ ಸೇರಿ ಹೋರಾಡಿರಿ" ಎಂದು 10000 ಮುಸ್ಲೀಮರನ್ನು ಹುರಿದುಂಬಿಸಿದ್ದರು. ಲಾಹೋರಿನಲ್ಲಂತೂ ಜನರಿಗೆ ಸಂತೋಷದ ಅಮಲು, ಯಾಕೆ, ಹುಚ್ಚೇ ಹಿಡಿದಂತಿತ್ತು. ಧುರೀಣರೆಲ್ಲಾ ಆನಂದ ಪುಳಕಿತರಾಗಿದ್ದಾರೆ. ಮುಖ್ಯವಾಗಿ ಭುಲಾಭಾಯಿ ಮತ್ತು ನೆಹರುಗಳಿಗೆ ಅಭಿನಂದನೆಗಳು ಬಂದಿವೆ. ದೇಶವಿಡೀ ಸಂತೋಷ ಸಮಾರಂಭಗಳು ನಡೆಯುತ್ತಿವೆ.

ತಿದ್ದುಪಡಿ--ಕಳೆದ ವಾರದ ಸಂಚಿಕೆಯಲ್ಲಿ ಮದ್ರಾಸಿನಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಣ ಮತ್ತು ವರದಿಯಲ್ಲಿ '೧೯ನೇ ಅಧಿವೇಶನ' ಎಂದು ತಪ್ಪಾಗಿ ಬಿದ್ದಿದೆ. ಅದು '೨೯ನೇ ಅಧಿವೇಶನ' ಎಂದಾಗಬೇಕು. —ಸಂ. ನ.

ಪಡುಬಿದ್ರಿ ಖಾದಿ ಕೇಂದ್ರ:— ಶ್ರೀ ಕರಿಯಣ್ಣ ಶೆಟ್ಟರು ಸ್ವಾವಲಂಬನದ ಆದರ್ಶ ಕ್ರಮವನ್ನು ತನ್ನ ಮನೆಮಂದಿ ಮಕ್ಕಳಲ್ಲಿ ಪ್ರಥಮ ತೋರ್ಪಡಿಸಿ ಊರಲ್ಲಿ ಸುಮಾರು 50ಕ್ಕೂ ಮಿಕ್ಕಿದ ಮನೆಗಳಲ್ಲೂ ನೂಲುವ ಉದ್ಯಮಿಗಳನ್ನಾಗಿ ಮಾಡಿರುವರು. ಚಿಕ್ಕ ಮಕ್ಕಳು ಕೂಡಾ ಸಮಯವನ್ನು ಹಾಳು ಮಾಡದೆ ನೂಲುತ್ತಿದ್ದಾರೆ. ನೂಲುವ ಸೂಕ್ಷ್ಮ ಉಪಕರಣಗಳನ್ನು ಒದಗಿಸಿಕೊಂಡು ತರತರದ ಖಾದಿವಸ್ತ್ರಗಳನ್ನು ತಯಾರಿಸಿ ನಿರುದ್ಯೋಗಿ ಹಳ್ಳಿಗರಿಗೆ ಮಾರ್ಗದರ್ಶಿಗಳಾಗಿದ್ದಾರೆ ಎಂದು ಶ್ರೀ ಪಿ. ಅಂತಯ್ಯ ಶೆಟ್ಟರು ಬರೆಯುತ್ತಾರೆ.

BANK WITH THE LARGEST CONNECTIONS ON THE WEST COAST.

OFFERS:-
EFFICIENT,
PROMPT &
COURTEOUS
SERVICE OF EVERY TYPE

OPEN AN ACCOUNT
with
The Canara Industrial & Banking Syndicate Ltd.
ESTD. 1925

Badavara Bandhu Group Enterprises
Editors, Printers, Publishers, Bankers, Merchants, Fish Dealers, Motion Picture Producers, Exhibitors, Benefactors, Property Dealers, Provision Dealers, etc, etc
THROUGH
their associated concerns
1 "The Badavara Bandhu"
2 The Badavara Bandhu Printing Press, Ltd.
3 Sri Narayan Guru Press
4 Sri Narayan Guru Bank Ltd.
5 The South Kanara Fish Industries, Ltd.
6 The Karnataka Theatres, Ltd.
7 Janasons, Ltd.
8 The Badavara Bandhu Colonies
9 The Badavara Bandhu Orphanage Trus
10 My Stores
11 The Vijaya Stores, Ltd
12 The Badavara Bandhu Hosieries
13 The West Coast Ice Factory
Head Offices
— MANGALORE, SOUTH INDIA —
Telegraphic address
1. BADAVARABANDHU
2. MONEY
Post Box No. 110

To Greet You:-

For the post
REMEMBRANCE
For the present
KIND THOUGHTS
For the future
GOOD WISHES.

From

The Canara Banking Corporation Limited.

(Incorporated in British India, with limited Liability.)
Estd: 1906
Head Office: **UDIPI**, South Kanara.

ಉಡುಪಿ, ಗುರುವಾರ, ೧೦-೧-'೪೬.

ಪ್ರಾಂತಿಕ ಎಸೆಂಬ್ಲಿ ಉಮೇದ್ವಾರಿಗಳು

ಕೇಂದ್ರ ಎಸೆಂಬ್ಲಿ ಚುನಾವಣೆಗಳೀಗ ಮುಗಿದು ಪ್ರಾಂತಿಕ ಎಸೆಂಬ್ಲಿ ಚುನಾವಣೆಗಳ ಸಿದ್ಧತೆಗಳಾಗುತ್ತಿವೆ. 'ಹಿಂದಿನದು ಆಕಾಶಕ್ಕೆಲ್ಲ ಹಾರಿಸಿದ ಗುಂಡು; ಮುಂದಿನದು ಗುರಿಯಿಟ್ಟು ಗುಂಡೆಸೆತ' ಎಂದರೆ ಪೂರ್ತಿ ಅಸಂಬದ್ಧವಾಗಲಾರದು. ಕೇಂದ್ರದಲ್ಲಿರುವ ಅಲ್ಪಾಧಿಕಾರವೂ ಪ್ರಜಾಪ್ರತಿನಿಧಿಗಳಿಗೆ ಹೊಣೆಯಾಗಿಲ್ಲ; ಪ್ರಾಂತ್ಯಗಳ ಅರ್ಧಾಧಿಕಾರವಾದರೂ ಎಸೆಂಬ್ಲಿ ಸದಸ್ಯರ ಜವಾಬ್ದಾರಿಗೊಳಪಟ್ಟಿದೆ. ಭಾವೀ ರಾಜ್ಯಾಂಗ ರಚನೆಯಲ್ಲಿ ಕೇಂದ್ರ ಎಸೆಂಬ್ಲಿಗಿಂತ ಹೆಚ್ಚಲ್ಲವಾದರೆ ಅಷ್ಟೇ ಪ್ರಾಮುಖ್ಯ ಭಾಗವನ್ನು ಪ್ರತಿಯೊಂದು ಪ್ರಾಂತಿಕ ಎಸೆಂಬ್ಲಿ ವಹಿಸಲಿದೆ—ಅಥವಾ ಹಾಗೆಂದು ಈಗ ಭಾವಿಸಲಾಗಿದೆ. ಇನ್ನು ಕೇಂದ್ರದ ಮತಾಧಿಕಾರ ಕೆಲವು ಮಂದಿಗೆ ಮಾತ್ರ ವಿದ್ದರೆ ಪ್ರಾಂತಿಕ ಮತಾಧಿಕಾರ ಹಲವರಿಗಿದೆ. ಬರೆಹ ಬ [illegible] ದಾಖಲು ಮಾಡಿಸಿದವರೆಲ್ಲಾ ಮತದಾರರೇ. ಆದ್ದರಿಂದ ಮುಂಬರುವ ಪ್ರಾಂತಿಕ ಚುನಾವಣೆಗಳ ಕಡೆಗೆ ವಿಶೇಷ ಲಕ್ಷ್ಯಬಿದ್ದಿರುವದು ಸ್ವಾಭಾವಿಕ. ಮದ್ರಾಸ್ ಪ್ರಾಂತಿಕ ಚುನಾವಣೆಗಳ ದಿನ ನಿಶ್ಚಯವಾಗಿಲ್ಲ; ಮತದಾರಪಟ್ಟಿಗಳ ಕೊನೆಯ ಪ್ರಕಟಣೆಯಾದ ಮೇಲೆ ನೇಮಕ, ಚುನಾವಣೆ ಇತ್ಯಾದಿಗಳ ಅವಧಿ, ದಿನಗಳನ್ನು ತಿಳಿಸಲಾಗುವದೆಂದು ಸರಕಾರೀ ಪ್ರಕಟಣೆಯಿದೆ. ಚುನಾವಣೆಯ ದಿನ ಎಪ್ರಿಲ್ ಅಂತ್ಯಭಾಗಕ್ಕೆ ಬೀಳುವದು ಸಂಭವನೀಯ. ಆದರೆ ಉಮೇದ್ವಾರಿಗಳು ಇಷ್ಟರಲ್ಲೇ ತಯಾರಾಗಬೇಕಾದುದು ಸಹಜ. ಅದಕ್ಕನುಗುಣವಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಕಾಂಗ್ರೆಸ್ ಉಮೇದ್ವಾರಿಗಳ ಅರ್ಜಿಗಳನ್ನು ಆಹ್ವಾನಿಸಿದ್ದಿತು. ಮುಂಬಾಯಿ ಪ್ರಾಂತ್ಯದ ಮಟ್ಟಿಗೆ ಕಳೆದ ದಶಂಬರಾಂತ್ಯದ ವರೆಗೂ ಮದ್ರಾಸ್ ಪ್ರಾಂತ್ಯದ ಮಟ್ಟಿಗೆ ಇದೇ 7ರ ವರೆಗೂ ಅರ್ಜಿ ಸ್ವೀಕಾರದ ಅವಧಿ ಕೊಟ್ಟಿದ್ದಿತು. ಈಗ ಆ ಬೋರ್ಡು ಯಾರಾರನ್ನು ಪಕ್ಷಸ್ವೀಕಾರ ಮಾಡಿಕೊಳ್ಳಬಹುದೆಂಬ ಪರ್ಯಾಲೋಚನೆಯಲ್ಲಿರಬಹುದು. ಅಥವಾ ನೇಮಕಾಧಿಕಾರವುಳ್ಳ ಕೇಂದ್ರ ಪಾರ್ಲಿಮೆಂಟರಿ ಸಮಿತಿಗೆ ತನ್ನ ಶಿಫಾರಸುಗಳನ್ನು ಕಳುಹಿಸಿರಬಹುದು. ಹೇಗಿದ್ದರೂ ಇಷ್ಟರೊಳಗೊಂದು ತೀರ್ಮಾನವಾಗಿರಲಾರದೆಂಬ ಭರವಸೆಯಿಂದ ಇಲ್ಲಿ ಒಂದೆರಡು ಮಾತುಗಳನ್ನಾಡಬೇಕಾಗಿದೆ.

ಕಾಂಗ್ರೆಸಿಗರಾಗುವದು ಕ್ಷೇಮಕರವಲ್ಲ; ಆದರೆ ಕಾಂಗ್ರೆಸ್ ಉಮೇದ್ವಾರಿಗಳಾಗುವದು ನಿಜಕ್ಕೂ ಹಿತಕರ. ಒಮ್ಮೆ ಶಿಸ್ತುಘಾತ ಪಡೆದಂದಿನಿಂದ ಮೊನ್ನೆಯ ವರೆಗೂ ಕಾಂಗ್ರೆಸಿನ ಮೇಲೆ ಉರಿ ಕಾರುತ್ತಿದ್ದ ಡಾ। ಖರೆ–ಕಳೆದ ಮೂರು ವರುಷಗಳಲ್ಲಿ ಕಾಂಗ್ರೆಸ್ ಮಾಡಿದ್ದೆಲ್ಲಾ ತಪ್ಪಾಗಿ ಕಾಣುತ್ತಿದ್ದ ರಾಜಾಜಿ, ಇಂಥವರಿಗೆಲ್ಲಾ ಈಗ ಕಾಂಗ್ರೆಸ್ ಭಕ್ತರಾಗುವ ಬಯಕೆಯಾಗಿರುವಾಗ ಮಿಕ್ಕವರ ಮಾತು ಅಸಗತ್ಯ. ದಕ್ಷಿಣ ಕನ್ನಡ ಜಿಲ್ಲೆಯ ಸ್ಥಾನಗಳಲ್ಲಿ ಒಂದೊಂದಕ್ಕೆರಡೆರಡು, ಮೂರು ಮೂರರಂತೆ ಉಮೇದ್ವಾರೀ ಅರ್ಜಿಗಳು ಹೋಗಿರುವುದರಲ್ಲಿ ಸೋಜಿಗವಿಲ್ಲ. ಆ ಉಮೇದ್ವಾರಿಗಳ ಒಂದು ಪಟ್ಟಿಯನ್ನು ತೆಗೆದರೆ ಸಾಮಾನ್ಯ ದಕ್ಷಿಣ ಕನ್ನಡಿಗನೊಬ್ಬನ ನೆನವು ಶಕ್ತಿ ಪರೀಕ್ಷೆಯ 'ಪ್ರಶ್ನೆ ಪಟ್ಟಿ'ಯೇ ಆಗಬಹುದು. ಈ ಪೈಕಿ ತಮಗಾಲುಗಬಹುದು–ಎಂಬುದನ್ನು ಜಿಲ್ಲೆಯ ಮತದಾರರು ಹೇಳಬಲ್ಲರು; ಧಾರವಾಡದಲ್ಲಿರುವ ಕ. ಪ್ರಾ. ಕಾಂ. ಸಮಿತಿಯು ಹೇಳಬಲ್ಲುದೆ? ನಮಗನುಮಾನವಿದೆ. ಇಂತಿಂತಹ ಸೂತ್ರಗಳನ್ನಾಧರಿಸಿ ಉಮೇದ್ವಾರರನ್ನಾರಿಸಿರಿ ಎಂದು ಸೂಚಿಸುವ ಅಗತ್ಯವಿಲ್ಲ. ಕಾಂಗ್ರೆಸ್ ಉಮೇದ್ವಾರಿಗಳಾಗುವವರ ಯೋಗ್ಯತೆಯನ್ನಳೆಯುವಮಾನ ಕಾಂಗ್ರೆಸ್ ಸಮಿತಿಯ ಕೈಯಿಂದ ಕಳೆದು ಹೋಗಿರಲಾರದು ಆದರೆ ಆ ಯೋಗ್ಯತೆಯಿದ್ದವರೇ ಸ್ಥಾನಕ್ಕೊಬ್ಬನಿಗಿಂತ ಹೆಚ್ಚಿಗೆ ಇರುವಾಗ ಪಾರ್ಲಿಮೆಂಟರಿ ಬೋರ್ಡಿನ ಆಳತೆ ಮತ್ತೆ ಯಾವುದರಿಂದ, ಎಂಬುದೆ. ಈಗಿನ ಪ್ರಶ್ನೆ. ನಮ್ಮ ಅಭಿಪ್ರಾಯದಲ್ಲಿ ಜನಮತ ಯಾರ ಕಡೆಗಿದೆ ಎಂಬೊಂದೇ ತೂಕ ಮಾಡಿ ನಿರ್ಧರಿಸಬೇಕಾದ ವಿಷಯವಿದು. ಎಲ್ಲಾ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಉಮೇದ್ವಾರಿಗಳು ಒಂದೆಡೆಯಲ್ಲಿ ಕಲೆತು ವಿಚಾರ ವಿನಿಮಯ ನಡೆಸುತಿದ್ದರೆ ಇಲ್ಲಿಯೇ ಆ ನಿರ್ಧಾರವಾಗುತ್ತಿತ್ತು. ಇನ್ನು ಪ್ರಾಂತಿಕ ಸಮಿತಿಯಾದರೂ ಈ ವಿಧಾನವನ್ನೇ ಅಂಗೀಕರಿಸಬೇಕು; ವಿಷಯವು ಅಲ್ಲಿಂದ ಮೇಲಿನ ರಂಗಕ್ಕೆ ಹೋಗಿದ್ದರೆ ಅದರೊಂದಿಗೆ ಜನಮತವನ್ನರಿತು ತೀರ್ಮಾನಿಸುವ ಈ ಹೊಣೆಯೂ ಕೇಂದ್ರ ಸಮಿತಿಯ ಬಳಿಗೆ ಹೋಗಿದೆ. ಕ. ಪ್ರಾಂ. ಸಮಿತಿಯ ಅಧ್ಯಕ್ಷರು ಮೊನ್ನೆ ತಾನೇ ಮಂಗಳೂರಿಗೆ ಬಂದಿದ್ದರು. ಆದರೆ ಉಮೇದ್ವಾರೀ ಉಮೇದುವಾರರ ಮತ್ತು ಕೆಲವು ಕಾರ್ಯಕರ್ತರ ಅಭಿಪ್ರಾಯವನ್ನಲ್ಲದೆ ಜನಮತವನ್ನರಿಯಲು ಅವರು ಪ್ರಯತ್ನಿಸಿದಂತೆ ಕಂಡುಬರುವದಿಲ್ಲ. ಜಿಲ್ಲೆಯ ಜನತೆಯ ಅಭಿಪ್ರಾಯವೆಲ್ಲಾ ಅಲ್ಲಿಯೇ ಸೆರೆ ಸಿಕ್ಕಿದೆ ಎಂದು ಅವರು ಭಾವಿಸಿಕೊಂಡಿದ್ದರೆ ಅದು ತಪ್ಪು; ಕಾಂಗ್ರೆಸ್ ಬಿಲ್ಲೆ ತೊಡಿಸಿ ನಿಲ್ಲಿಸಿದ ಗೊಂಬೆಯೂ ಪ್ರತಿನಿಧಿಯಾಗುತ್ತದೆ ಎಂಬ ಆತ್ಮ ವಿಶ್ವಾಸದಿಂದ ವರ್ತಿಸಿದರೆ ಅದು ಜಿಲ್ಲೆಯ ಜನತೆಗೆ ಮಾಡುವ ಅಪಮಾನ. ತುಸು ಸೂಕ್ಷ್ಮ ವಿಚಾರ ವಿಮರ್ಶೆ ನಡಿಸಿ—ಅಗತ್ಯವಿದ್ದ ಕೆಲವೆಡೆಗಳಲ್ಲಿ ಸಂಚರಿಸಿ—ಜನರ ಒಲವೆತ್ತ ಹರಿದಿದೆ ಎಂಬುದನ್ನು ಸುಲಭದಲ್ಲಿ ತಿಳಿದುಕೊಳ್ಳಬಹುದು; ಧುರೀಣರೆನ್ನಿಸುವವರ ಅಭಿಪ್ರಾಯ ಮಡುವೆಷ್ಟುಬಳವಿದೆ-ಅದರಡಿಯಲ್ಲಿ ಎಂತಹ ನೆಗಳಿದೆ ಎಂಬುದನ್ನು ತಿಳಿಯುವದಕ್ಕಿಂತ ಸುಲಭದಲ್ಲಿ ಇದನ್ನರಿಯಬಹುದು ಆದ್ದರಿಂದ ಪ್ರಾಂತಿಕ ಸಮಿತಿ ಅಥವಾ ಕೇಂದ್ರ ಸಮಿತಿಯು ಈ ಮೂಲ ನ್ಯಾಯವನ್ನು ಕಡೆಗಣಿಸದಿರಲಿ ಎಂದು ಜನತೆಯ ಪರವಾಗಿ ವಿನಂತಿ ಮತ್ತು ಕರ್ತವ್ಯ ಜಾಗ್ರತಿಯ ಎಚ್ಚರಿಕೆ ನಮ್ಮದು.

ಉಡುಪಿ.

ಶ್ರೀ ಶೃಂಗೇರಿ ಶ್ರೀ ಮಠದ ಧರ್ಮಾಧಿಕಾರಿಗಳು—ಪ್ರಧಾನ ಧರ್ಮಾಧಿಕಾರಿ ಬ್ರಹ್ಮಶ್ರೀ ವಿದ್ವಾನ್ ಕೆ. ಶೇಷಶಾಸ್ತ್ರಿಗಳವರು ಉಡುಪಿಗೆ ದಯಮಾಡಿಸಿ ಶ್ರೀ ವೆಂಕೋಬಾಚಾರ್ಯರವರ ಏರ್ಪಾಡಿನಲ್ಲಿ ಶ್ರೀಮಠದ ಶಿಷ್ಯ ಭಕ್ತಜನರ ಧಾರ್ಮಿಕ ವಿಚಾರಕ್ಕಾಗಿ ಪಡುಪೇಟೆ ಶ್ರೀ ಶ್ರೀನಿವಾಸ ಉಪಾಧ್ಯಾಯರವರ ಮನೆಯಲ್ಲಿ ಮೊಕ್ಕಾಂ ಮಾಡಿರುತ್ತಾರೆ. ಶ್ರೀ ಮಠದ ಶಿಷ್ಯರು ಭಕ್ತರು ಬಂದು ಶ್ರೀ ಶಾರದಾಂಬಾ ಸಂದರ್ಶನಮಾಡಿ ಪ್ರಸಾದವನ್ನು ತೆಗೆದುಕೊಳ್ಳಬೇಕೆಂದೂ, ತಮಗೆ ಬೇಕಾದ ಜಾತಿಮತ ಧರ್ಮ ವಿಷಯವನ್ನು ಕೇಳಿ ತಿಳಿದುಕೊಂಡು ವ್ಯವಸ್ಥೆ ಮಾಡಿಕೊಳ್ಳಬಹುದೆಂದೂ ತಿಳಿಸುತ್ತಾರೆ.

ಸಂಗೀತ ಕಚೇರಿ—ಉಚ್ಚಿಲ ಶ್ರೀ ಮಹಲಿಂಗೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಮೈಸೂರು ಸಂಗೀತ ವಿದ್ವಾನ್ 'ಗಾನಕಲಾನಿಧಿ' B.S. ರಾಜಐಯ್ಯಂಗಾರರವರು ತಾ. 15–I–1946ನೇ ಮಂಗಳವಾರ ಸಂಜೆ 5-30ಕ್ಕೆ ತಮ್ಮ ಪಕ್ಕವಾದ್ಯದೊಡನೆ ಒಂದು ಸಂಗೀತ ಕಚೇರಿಯನ್ನು ಉಡ್ಪಿ ಪೀಪಲ್ಸ್ ಹೋಲ್, ಬೋರ್ಡು ಹ್ಯಾಸ್ಕೂಲಿನಲ್ಲಿ ನಡಿಸುವುದಾಗಿ ಒಪ್ಪಿದ್ದಾರೆಂದು ಉಚ್ಚಿಲ ವೆಂಕಟ್ರಾಯರು ತಿಳಿಸುತ್ತಾರೆ.

ಮೂಲ್ಕಿ:—ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಪ್ರತಿಮೆ ಪ್ರತಿಷ್ಠಾ ದಿನಾಚರಣೆಯು ಮೂಲ್ಕಿ ಛರಿ ಕಂಟ್ರಾಕ್ಟರ್ ಶ್ರೀ ಕೆ. ರಂಗನವರ ಅಧ್ಯಕ್ಷತೆಯಲ್ಲಿ ತಾ. 3ರಲ್ಲು ಬಹು ವಿಜೃಂಭಣೆಯಿಂದ ಜರಗಿತು. ನಿಯೋಜಿತ ಅಧ್ಯಕ್ಷರನ್ನು ಬ್ಯಾಂಡು ಘೋಷದ ಮೆರವಣಿಗೆಯಿಂದ ಕರತಂದ ಮೇಲೆ ಸಂಘದ ಉಪಾಧ್ಯಕ್ಷರಾದ ಕೆ. ವಿಟ್ಟಪ್ಪ, ಬಿ.ಎ ಯಲ್.ಟಿ, ಯವರ ಸೂಚನೆ ಮತ್ತು ಶ್ರೀ. ಯು. ಬಿ. ಅನಂತಯ್ಯನವರ ಅನುಮೋದನೆ ಮೇರೆ ಅಧ್ಯಕ್ಷರು ಸಭಾಸ್ಥಾನವನ್ನಲಂಕರಿಸಲು ಸಂಘದ ಅಧ್ಯಕ್ಷರಾದ ಶ್ರೀ ಕೆ. ಶಿವಪ್ಪನವರು ಅಧ್ಯಕ್ಷರಿಗೆ ಪುಷ್ಪಹಾರ ಹಾಕಿ ಗೌರವಿಸಲು ಬಾಲಿಕೆಯರಿಂದ ಶ್ರೀ ದೇವತಾ ಪ್ರಾರ್ಥನೆಯಾದ ಮೇಲೆ ಶ್ರೀಗುರು ಪೂಜೆಯಾದ ನಂತರ ಸಂಘದ ಗೌ. ಕಾರ್ಯದರ್ಶಿಯವರು ಶ್ರೀಗುರು ಪ್ರತಿಷ್ಠಾ ದಿನಾಚರಣೆಯ ಸಂಕ್ಷಿಪ್ತ ವರದಿಯನ್ನಿತ್ತರು. ಶ್ರೀ ಮಂಗಳೂರು ಜಾರಪ್ಪನವರೂ ವಕೀಲ್ ಶ್ರೀ ಜಿ. ಗಂಗಾಧರ ವಾಸರವರೂ ಶ್ರೀಗುರು ಜನ್ಮಕಥೆಯನ್ನು ವಿವರಿಸಿದರು. ನಂತರ ಹಲವು ಮಹನೀಯರುಗಳಿಂದ ಬಂದ ಸಂದೇಶಗಳನ್ನು ಓದಿಹೇಳಿದ ಮೇಲೆ ಶ್ರೀಗಳಾದ ಮೋಹನ ಸುವರ್ಣರು, ಬಿ. ಆರ್. ಕರ್ಕೇರರು, ಯಂ. ಆರ್. ಪೂಂಜರು, ಯಂ. ವೆಂಕಪ್ಪಯ್ಯನವರು ಕಾಲೋಚಿತವಾದ ಉತ್ತಮ ಭಾಷಣಗಳನ್ನಿತ್ತ ಮೇಲೆ ಹಲವು ಮಹನೀಯರು ಶ್ರೀಗುರು ಸ್ಮಾರಕನಿಧಿಗೆ ಧನಸಹಾಯವನ್ನಿತ್ತರು. ಕಟಪಾಡಿ ಶ್ರೀ ನಾರಾಯಣ ಗುರು ಸೇವಾ ಸಮಿತಿಯ ಪ್ರತಿನಿಧಿಗಳು ಸಂಘದ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಸೂತನಾಡಿದ ಮೇಲೆ ಸಭಾಧ್ಯಕ್ಷರು ತಮ್ಮ ಅಮೂಲ್ಯ ಚಿಕ್ಕ ಭಾಷಣ ಮಾಡಿದರು.

ಇನ್ನಂಜೆ—ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನದ ಹೊಸ ಕಟ್ಟೋಣವನ್ನು ತೆರೆಯುವ ಸಮಾರಂಭವು ತಾ. 20–I–46 ನೇ ರವಿವಾರ ಮಧ್ಯಾಹ್ನ 2-58ಕ್ಕೆ ಶ್ರೀ ಕೆ. ಸದಾನಂದ ಹೆಗ್ಡೆಯವರಿಂದ ನಡೆಸಲ್ಪಡುವುದೆಂದು ಅಧ್ಯಕ್ಷ ಶ್ರೀ ಕೆ. ಸೀತಾರಾಮ ಘೋರೆಬಲ್ಲಾಳರು ತಿಳಿಸುತ್ತಾರೆ.

ಹರಿಯೊಳ ಸಮಾಜ ಸುಧಾರಕ ಸಂಘ-(ವಾಕರ್ನಾರು ಮೋಬಳಿ)ದ ಮಹಾಸಭೆಯು ತಾ. 3–I–46ರಲ್ಲಿ ಉಚ್ಚಿಲ ಎಲಿಮೆಂಟರಿ ಶಾಲೆಯಲ್ಲಿ ಮೌಲಾನಾ ಷಾ। ಎಫ್. ಎಚ್. ಒಡೆಯರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ನೋಟೀಸು

ಶ್ರೀ ಹಿರಿಅಡಕ ಮಹತೋಬಾರ ಶ್ರೀವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿ

ಯ ಸಲುವಾಗಿ ಟಿಕೇಟುಗಳ ಮೂಲಕ ತಾ. 23—1—46 ಕ್ಕೆ ಜರಗಿಸಬೇಕಾಗಿದ್ದ ಜೋಡಾಟವನ್ನು ಎಂಟರ್ಟೈನ್ ಮೆಂಟ್ ಟೇಕ್ಸಿನ ತೊಂದ್ರೆಯಿಂದಾಗಿ ರದ್ದು ಮಾಡಿಯದೆ

ಅಂತೂ ತಾ. **6—2—46**ಕ್ಕೆ ಪ್ರಚಂಡ

ಜೋಡಾಟ ಮಾಡಿಸುವದಾಗಿ

ನಿಶ್ಚೈಸಿರುತ್ತದೆ.

ಎಲ್ಲರಿಗೂ ಸುಸ್ವಾಗತವಿದೆ.

ಎ. ಎಂ. ನಾಗಣ್ಣ ಹೆಗ್ಡೆ,

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್; ಮೆನೇಜಿಂಗ್ ಟ್ರಸ್ಟಿ–
ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, **ಹಿರಿಯಡ್ಕ**, ದ. ಕನ್ನಡ.

ಚುನಾಯಿತ ಕೇಂದ್ರ ಎಸೆಂಬ್ಲಿ

ಈ ಬಾರಿ ಚುನಾಯಿಸಲ್ಪಟ್ಟ ಕೇಂದ್ರ ಎಸೆಂಬ್ಲಿಯಲ್ಲಿ ಅತಿ ದೊಡ್ಡ ಪಕ್ಷವೆಂದರೆ ಕಾಂಗ್ರೆಸ್. ಚುನಾಯಿಸಲ್ಪಡಬೇಕಾಗಿದ್ದ ಸದಸ್ಯರ ಸಂಖ್ಯೆ 102 ಆ ಪೈಕಿ ಸುಮಾರು 60 ಸ್ಥಾನಗಳು ಕಾಂಗ್ರೆಸಿಗೆ ದೊರೆತಿವೆ ಕಳೆದ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಸದಸ್ಯರ ಸಂಖ್ಯೆ 44ಕ್ಕಿಂತ ಹೆಚ್ಚಿಗಿರಲಿಲ್ಲ. ಮುಸ್ಲಿಂ ಸ್ಥಾನಗಳಲ್ಲಿ ಅತ್ಯಧಿಕವನ್ನು—ಸುಮಾರು 30ಕ್ಕೆ ಮಿಕ್ಕಿ—ಮುಸ್ಲಿಂ ಲೀಗ್ ಗೆದ್ದಿದೆ ಉಳಿದ ಚುನಾಯಿತ ಮುಸ್ಲಿಂ ಸದಸ್ಯರೆಂದರೆ ಇಬ್ಬರು ಮೂವರು ಮಾತ್ರ. ಹಿಂದೂ, ಮುಸ್ಲಿಂ, ಕ್ರೈಸ್ತ ಇತ್ಯಾದಿ ಸರ್ವ ಜಾತಿಗಳಿಗೆ ಬೆರಕೆಯ ಮತದಾರ ಕ್ಷೇತ್ರಗಳಿದ್ದುದು ಇಡೀ ದೇಶದಲ್ಲಿ ಮೂರು ಮಾತ್ರ. ಆ ಮೂರುಸ್ಥಾನಗಳನ್ನೂ ಕಾಂಗ್ರೆಸ್ ಗೆದ್ದಿದೆ. ಮುಸ್ಲಿಂ ಲೀಗು ಇಲ್ಲಿ ತನ್ನ ಉಮೇದ್ವಾರಗಳನ್ನೇ ನಿಲ್ಲಿಸಿರಲಿಲ್ಲ. ಕಾಂಗ್ರೆಸ್ ಗೆದ್ದ ಅರೆವಾಸಿ ಸ್ಥಾನಗಳು ಸ್ಪರ್ಧೆಯಿಲ್ಲದೇನೇ ದೊರೆತಿದ್ದುವು. ಚುನಾವಣೆಯ 102 ಸ್ಥಾನಗಳಲ್ಲಿ 8 ಸ್ಥಾನಗಳು ಯುರೋಪಿಯನ್ ಮತ್ತು ಅಂತಹ ಇತರರ ಪಾಲಿನವು.

ನಾಮಕರಣಗಳು

ಸುಮಾರು 12 ಮಂದಿಯನ್ನು ವೈಸರಾಯರು ಕೇಂದ್ರ ಎಸೆಂಬ್ಲಿಗೆ ನೇಮಿಸಿಕೊಂಡಿದ್ದಾರೆ. ರಾವ್ ಬಹದೂರು ಶಿವರಾಜ್, ಶ್ರೀಮತಿ ಮಣಿಬೆನ್ ಮುಲ್ಜಿ, ಸರ್. ಕವಾಸ್ಜಿ ಜಹಾಂಗೀರ್ ಮೊದಲಾದವರಿದ್ದಾರೆ. ಇನ್ನೈದುಮಂದಿಯನ್ನು ಬೇರೆ ನೇಮಿಸಿಕೊಳ್ಳಲಿದ್ದಾರೆ. ಡಾ। ಅಂಬೇಡ್ಕರ್, ಡಾ। ಖರೆ, ಸರ್. ಕೃಷ್ಣಮಾಚಾರ್ ಮೊದಲಾದವರು ಎಸೆಂಬ್ಲಿ ಅಥವಾ ಕೌನ್ಸಿಲ್ ಓಫ್ ಸ್ಟೇಟಿಗೆ ನೇಮಕ ಪಡೆದಿದ್ದಾರೆ.

ಬಜೆಟ್ ಅಧಿವೇಶನ.

ಕೇಂದ್ರ ಎಸೆಂಬ್ಲಿಯ ಬಜೆಟ್ ಅಧಿವೇಶನವು ಫೆಬ್ರುವರಿ ಆದಿಯಲ್ಲಿ ಸೇರಲಿದೆ. ಆ ಮೊದಲೇ ಕಾಂಗ್ರೆಸ್, ಲೀಗ್ ಪಕ್ಷಗಳ ಸದಸ್ಯರು ತಂತಮ್ಮ ನಾಯಕ, ಉಪನಾಯಕರುಗಳನ್ನು ಆರಿಸಿಕೊಳ್ಳಲಿದ್ದಾರೆ. ಪ್ರಥಮತಃ ಎಸೆಂಬ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗಳಾಗಬೇಕು. ಕಾಂಗ್ರೆಸು ಇವೆರಡು ಸ್ಥಾನಗಳಿಗೂ ತನ್ನ ಉಮೇದ್ವಾರಗಳನ್ನು ನಿಲ್ಲಿಸುವ ಸಂಭವವಿದೆ. ಕಾಂಗ್ರೆಸ್ ಪಕ್ಷ ನಾಯಕತ್ವವು ಮಿ. ಆಸಫ್ ಆಲಿ ಮತ್ತು ಶರತ್‌ಚಂದ್ರ ಬೋಸರಲ್ಲೊ

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O S. No. 813/1944

ಸುಬ್ಬಣ ಪೈ —ವಾದಿ

ಮತ್ತು

ಅಪ್ಪಯ್ಯ ಆಳ್ವ ಕೂಡಾ—ಪ್ರತಿವಾದಿಯು.

ಇವರೊಳಗೆ.

ಮೇಲ್ಕಂಡ ವ್ಯಾಜ್ಯದ 1ನೇ ಪ್ರತಿವಾದಿಯಾದ ಅಪ್ಪಯ್ಯ ಆಳ್ವರು ತಾರೀಕು 26 10-1944ರಲ್ಲು ತನ್ನ ಹೆಂಡತಿಯ ಹೆಸರಿಗೆ ಆಸ್ತಿ ಪರಾಧೀನ ಮಾಡಿದ್ದನ್ನು ರದ್ದು ಪಡಿಸುವರೆ ಎಲ್ಲಾ ಸಾಲಗಾರರ ಪ್ರಯೋಜನದ ಬಗ್ಗೆ ವಾದಿಯು ವಾಕ್ಲುಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 10 1-46ಕ್ಕೆ ಯಾ ಆನಂತ್ರ ಕರಾ ತಕ್ಕಿಗಿಡುವ ಸಂಗ್ತಿ ಅಂಥಾ ಸಾಲಗಾರರಿಗೂ ವ ಇತರರಿಗೂ ಕೂಡಾ ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು } K. Rama Kamath,
ತಾ. 4-1-1946 } Advocate for Plaintiff

ದೇಶ—ವಿದೇಶ

ಬ್ಬನದಾಗಬಹುದು ಮೊದಲನೆಯವರೇ ಗೊತ್ತಾಗುವದು ಸಂಭವನೀಯ. ಈ ಬಜೆಟ್ ಅಧಿವೇಶನಕ್ಕೆ ಬೇರೆ ಬೇರೆ ಸದಸ್ಯರಿಂದ ಇಷ್ಟರಲ್ಲೇ 21 ನಿಲುವಳಿ ಸೂಚನೆಗಳು, 30 ಠರಾವುಗಳು, ಸುಮಾರು 61 ಪ್ರಶ್ನೆಗಳು ಬಂದಿವೆ.

ವೇವೆಲ್—ಜಿನ್ನಾ ಸಂಭಾಷಣೆ

ತಾ. ೫ರಲ್ಲಿ ವೈಸರಾಯರಿಂದ ಆಮಂತ್ರಿಸಲ್ಪಟ್ಟ ಮಿ. ಜಿನ್ನರು ಲೋರ್ಡ್ ವೇವೆಲರೊಡನೆ ಖಾಸಗೀ ಸಂಭಾಷಣೆ ನಡೆಸಿದರು. ಕಳೆದ ತಿಂಗಳಲ್ಲಿ ವೈಸರಾಯರು ಗಾಂಧಿಜೀಯೊಡನೆ ಕಲ್ಕತ್ತದಲ್ಲಿ ಸಂಭಾಷಿಸಿದ್ದರು. ಮುಂದಿನ ಕೇಂದ್ರ ಎಸೆಂಬ್ಲಿ ಅಧಿವೇಶನದ ಸಮಯ ಇತರ ಪಕ್ಷ ಪ್ರಮುಖರೊಡನೆಯೂ ವೈಸರಾಯೀ ಸಂಭಾಷಣೆ ನಡೆಯಲಿರುವದೆಂದು ತಿಳಿದು ಬರುತ್ತದೆ. ಭಾರತದ ಭಾವೀ ರಾಜ್ಯ ಘಟನೆಯ ಕುರಿತು ಲೋರ್ಡ್ ವೇವೆಲರು ಈಗಲೇ ನಿಧಾನವಾಗಿ ಚರ್ಚಾ ಪೀಠಿಕೆಯಾರಂಭಿಸಿದಂತಿದೆ.

ಸೇನಾ ತರಬೇತಿ ಮತ್ತು ಅಹಿಂಸೆ.

"ಎಲ್ಲರೂ ಸೇನಾ ತರಬೇತಿ ಪಡೆಯಬೇಕು. ಗಾಂಧಿಜೀಯ ಅಹಿಂಸಾ ವೃತ್ತಿ ಸಬಲರದು ಹೊರತು ದುರ್ಬಲರದಲ್ಲ, ಸೇನಾ ಶಿಕ್ಷಣ ಪಡೆದ ಮಾತ್ರಕ್ಕೆ ಸೈನಿಕರಾಗಬೇಕೆಂದಿಲ್ಲ" ಎಂದು ಶರಚ್ಚಂದ್ರಬೋಸರ ಹೇಳಿಕೆ. "ಸೇನಾ ತರಬೇತಿಯೆಂಬುದು ಶಿಸ್ತಿನ ಮಟ್ಟಿಗೆ ಮಾತ್ರವಾದರೆ ಆಕ್ಷೇಪವಿಲ್ಲ. ಶಸ್ತ್ರ ಮತ್ತು ಕೊಲೆಯ ತರಬೇತಿಯೆಂದಾದರೆ ಅದು ಅಹಿಂಸೆಗೆ ವಿರೋಧ. ಕೊಲ್ಲದೇನೇ ಸಾಯಲು ತಯಾರಾಗುವ ತರಬೇತಿಯೇ ಅಹಿಂಸಾ ಯೋಧತ್ವ"ಎಂದು ಗಾಂಧಿಜೀ ಅದನ್ನು ಉತ್ತರಿಸಿದ್ದಾರೆ.

ವಿದೇಶ ವಾರ್ತೆಗಳು.

ಟರ್ಕಿಯ, ಕಾರ್ಸ್ ಮತ್ತು ಅರ್ದಹಾನ್ ಗಡಿ ಪ್ರಾಂತ್ಯಗಳು ರಶ್ಯದ ಹಕ್ಕಿನವೆಂಬ ಇಬ್ಬರು ಜೋರ್ಜಿಯನ್ ಪ್ರೊಫೆಸರರ ಖಂಡ ತುಂಡ ಲೇಖನಗಳನ್ನು ರಶ್ಯನ್ ಪತ್ರಿಕೆಗಳು ವಿಶೇಷ ಪ್ರಾಮುಖ್ಯತೆ ಕೊಟ್ಟು ಪ್ರಕಟಿಸಿದ್ದುವು. ಆ ಬೇಡಿಕೆಯನ್ನು ಧಿಕ್ಕರಿಸಿ ಟರ್ಕಿಯ ಪ್ರಧಾನಿ ಡಾ। ಸರಜೋಗ್ಲು ಭಾಷಣವಿತ್ತಿದ್ದಾರೆ.

ಇಜಿಪ್ಟಿನ ಮಾಜೀ ಅರ್ಥಮಂತ್ರಿ ವಾಫ್ದಿಸ್ಟ್ ಪಕ್ಷದ ಅಮಿನ್ ಒಸ್ಮಾನ್ ಪಾಶಾರನ್ನು, ಯಾರೋ ಗುಂಡಿಟ್ಟು ಕೊಂದಿದ್ದಾರೆ.

ಈಜಿಪ್ಟಿನಲ್ಲಿರುವ ಬ್ರಿಟಿಷ್ ಸೇನೆಗಳನ್ನು ಹಿಂದೆಗೆಯಬೇಕೆಂದು ರಶ್ಯವು ಕೇಳಿರುವದೆಂದು ತಿಳಿದು ಬರುತ್ತದೆ.

ಹಲವು ವಾರಗಳ ಸಂಧಾನ ಪ್ರಯತ್ನದ ಬಳಿಕ ಚೀನದ ಚಿಯಾಂಗ್ ಕೈಶೇಕ್ ಸರಕಾರ ಮತ್ತು ಕಮ್ಯೂನಿಸ್ಟರು ರಾಜಿ ಮಾಡಿಕೊಳ್ಳುವ ಒಪ್ಪಂದಕ್ಕೆ ಬಂದಿದ್ದಾರೆ. ಅಮೇರಿಕನ್ ರಾಯಭಾರಿ ಮತ್ತು ಚೈನದ ಇತ್ತಂಡದ ಪ್ರತಿನಿಧಿಗಳು ಇದೇ ಗುರುವಾರ ಸೇರುವಾಗಲೇ ಅಲ್ಲಿಯ ಅಂತರ್ಯುದ್ಧವು ಮುಕ್ತಾಯವಾಗಲಿದೆ.

ಇಂಡೋಚೀನದ ಸ್ವಾತಂತ್ರ್ಯ ಸಮರವೂ ಬ್ರಿಟಿಷ್ ಸೈನಿಕರ ವಿಪರೀತಾಚರಣೆಗಳೂ, ಈ ನಡುವೆ ಸಂಧಿ ಪ್ರಯತ್ನಗಳೂ ಯಥಾವಿಧಿ ಸಾಗಿವೆ.

ಶ್ರೀ. 'ಶ್ರೀ'ಯವರ ಇಹ ಯಾತ್ರೆ ಮುಗಿಯಿತು!

ಶ್ರೀ. ಬಿ. ಎಂ. ಶ್ರೀಕಂಠಯ್ಯನವರು ಇದೇ ತಾ. ೫ರಲ್ಲಿ ಧಾರವಾಡದಲ್ಲಿ ದಿವಂಗತರಾದರೆಂಬ ಶೋಕ ವಾರ್ತೆ ಬಂದಿದೆ. ಹಿರಿಯ ಕನ್ನಡ ಸಾಹಿತಿಗಳಲ್ಲಿ 'ಶ್ರೀ'ಯವರ ಹೆಸರು ಮೊದಲ ಸ್ಥಾನದಲ್ಲಿತ್ತು. ಅವರ ಗೀತಗಳು, ಲೇಖನಗಳು, ವ್ಯಾಖ್ಯಾನಗಳು ಕನ್ನಡಿಗರ ಅಚ್ಚುಮೆಚ್ಚಿನವಾಗಿದ್ದುವು. ಶ್ರೀ ಇವರು ಹಲವು ವರುಷ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದು, ಕನ್ನಡ ನುಡಿ, ನಾಡು, ಸಂಸ್ಕೃತಿಗಾಗಿ ಅವಿಶ್ರಾಂತವಾಗಿ ದುಡಿದಿದ್ದರು. ಪರಿಷತ್ತಿನ ಛತ್ರ ಛಾಯೆಯು ಅಖಿಲ ಕರ್ನಾಟಕದ ಮೂಲೆ ಮೂಲೆಗೂ ವ್ಯಾಪಿಸುವಂತೆ ಅದನ್ನು ಎತ್ತಿ ಹಿಡಿದಿದ್ದರು. ಅವರಲ್ಲಿದ್ದ ಸರ್ವತೋಮುಖ ಪ್ರತಿಭೆಗೆ, ಸ್ಥಾನಮಾನ, ನಯವಿನಯ, ವಿಶಾಲ ಮನೋವೃತ್ತಿಯೂ ಜತೆಗೂಡಿದ್ದುದರಿಂದ ಅಧುನಿಕ ಕರ್ನಾಟಕದ 'ಶ್ರೀ' ಅನ್ನಿಸಿದ್ದರು. ಹಿರಿಯ ಕನ್ನಡಿಗ ಅಂತೆಯೇ ಮಾದರಿ ಕನ್ನಡಿಗನಾಗಿದ್ದರು. ಕೆಲವು ವರುಷಗಳಿಂದ ಧಾರವಾಡದ ಕಲಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಅವರು ಇತ್ತೀಚೆಗೆ ರಕ್ತದೊತ್ತಡದಿಂದ ಹಾಸಿಗೆ ಹಿಡಿದಿದ್ದರಂತೆ. ತಾ. ೫ನೇ, ಮಧ್ಯಾಹ್ನ ಅಕಸ್ಮಾತ್ ಕೊನೆಯುಸಿರೆಳೆದರು. ತನ್ನ ೬೨ನೇ, ಪ್ರಾಯದಲ್ಲಿ ಲೋಕಬಿಟ್ಟರು. ಶ್ರೀಯವರ ಸ್ಮಶಾನ ಯಾತ್ರೆಯಲ್ಲಿ ಆ ಭಾಗದ ಕನ್ನಡ ಪ್ರಮುಖರೆಲ್ಲಾ ಹಾಜರಿದ್ದು ದುಃಖಾಶ್ರು ಸುರಿಸಿದ್ದರು. ಇದು ಕರ್ನಾಟಕಕ್ಕೆ ತುಂಬಿ ಬರಲಾರದ ನಷ್ಟ. ಇನ್ನು 'ಶ್ರೀ' ಆತ್ಮವು ಕನ್ನಡಿಗರಿಗೆ ಮಾರ್ಗದರ್ಶಿಯಾಗಲಿ!

ಉಡುಪಿ.

ಎಕೆಡೆಮಿ ಓಫ್ ಜನರಲ್ ಎಜ್ಯುಕೇಶನ್—ಇದರ ವಾರ್ಷಿಕ ಮಹಾಸಭೆಯು ತಾ. ೬ರಲ್ಲಿ ಮುಕುಂದ ನಿವಾಸದಲ್ಲಿ ಶ್ರೀ. ಕೆ. ಗುರುರಾಜರಾಯರ ಅಧ್ಯಕ್ಷತೆಯಲ್ಲಿ ಜರಗಿ, ವರದಿ, ಗವರ್ನಿಂಗ್ ಬೋಡಿ ಚುನಾವಣೆ ಮೊದಲಾದ ಕಾರ್ಯಕ್ರಮಗಳು ಜರಗಿದುವು. ರಿಜಿಸ್ಟ್ರಾರ್ ಡಾ। ಟಿ. ಮಾಧವ ಪೈಗಳು ಮುಂದಿನ ಕಾರ್ಯ ಯೋಜನೆಯನ್ನು ವಿಚಾರಪತ್ತಾಗಿ ವಿವರಿಸಿದರು. ಶ್ರೀ. ಓ. ಅನಂತ ಪೈಗಳು ಧನ್ಯವಾದಗಳನ್ನಿತ್ತರು.

ಜಯಕರ್ನಾಟಕ ನಾಟಕ ಮಂಡಳಿ—ಯವರು ಉಡುಪಿಯಲ್ಲಿ ಮೊಕ್ಕಾಂ ಮಾಡಿದ್ದು ತಾ. ೮ರಿಂದ ತಮ್ಮ ಅನೇಕ ನಾಟಕ ಪ್ರಯೋಗಗಳನ್ನು ಮಾಡುತ್ತಿರುವರು. ಪ್ರಾರಂಭದ 'ಚಿತ್ರಾಂಗದ' ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿರುವುದು.

ಉತ್ಸವ—ಶ್ರೀ. ಟಿ. ರಮಾನಾಥ ಪೈ ಮತ್ತು ಮಂಗಡಿಗರು ತಾ 1ರಿಂದ ಶ್ರೀ ಕೃಷ್ಣ ಮಠದಲ್ಲಿ ಸಪ್ತೋತ್ಸವಗಳ ಸೇವೆ ಸಲ್ಲಿಸಿದರು. ತಾ. ೮ರಿಂದ ವಾಡಿಕೆಯಂತೆ ರಥೋತ್ಸವ ಪ್ರಾರಂಭವಾಗಿರುವುದು. ತಾ. 13ಕ್ಕೆ ಮಕರ ಸಂಕ್ರಾಂತಿ ಜಾತ್ರೆ

ಪರ್ಯಾಯ—ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರ ಪರ್ಯಾಯೋತ್ಸವವು ತಾ 17ನೇ ಪ್ರಾತಃಕಾಲ ಜರಗಲಿರುವುದು

ಶ್ರೀ ಕೊ. ಶಿವರಾಮಕಾರಂತರು—ಸಾಹಿತ್ಯದ ವಿವಿಧ ರೂಪಗಳ ಕುರಿತು ತಾ. 8ರಲ್ಲಿ ಕರ್ನಾಟಕ ಸಂಘದವರು ಏರ್ಪಡಿಸಿದ ಪರ್ಯಾಯ ಸಂಬಂಧೀ ಕಾರ್ಯಕಲಾಪದ ಮೊದಲ ಭಾಷಣವಿತ್ತರು. ಸಭಾರಂಭದಲ್ಲಿ ಶ್ರೀ ಬಿ. ಯಂ ಶ್ರೀಕಂಠಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಶ್ರೀ ಕವಿಶಾಲು ರಾಜಗೋಪಾಲಕೃಷ್ಣರಾಯರು ದಿವಂಗತರ ಸಾಹಿತ್ಯ ಸೇವೆಯನ್ನು ವಿವರಿಸಿದರು ಶ್ರೀ. ಬಿ. ವಿ. ಕೆದಿಲಾಯರು ಧನ್ಯವಾದಗಳನ್ನಿತ್ತರು. ಮರುದಿನ ಶೃಂಗೇರಿ ಶ್ರೀ. ರಾಮಕೃಷ್ಣ ಶಾಸ್ತ್ರಿಗಳಿಂದ 'ಉತ್ತರಗೋಗ್ರಹಣ' ಹರಿಕಥೆ ನಡೆಯಿತು.

ಶ್ರೀ. ಹೊಳ್ಳರ ಭಾಷಣ—ತಾ 8ನೇ ಅಪರಾಹ್ನ ಉಡುಪಿ ನೇಕಾರ ಸಂಘದ ಕಾರ್ಯಾಲಯದಿಂದ ಕೆಲಸಗಾರರ ಮೆರವಣಿಗೆ ಹೊರಟು ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರಿತು. ಶ್ರೀ ಶಂಕರನಾರಾಯಣ ಹೊಳ್ಳರು, ನೂಲಿನ ಅಭಾವದಿಂದ ಹುಟ್ಟಿರುವ ನೇಕಾರರ ನಿರುದ್ಯೋಗ ಸಮಸ್ಯೆ, ಕೆಲಸಗಾರರ ಬೋನಸ್ ಬೇಡಿಕೆ ಮತ್ತು ನಿಯೋಜಿತ ಮುಷ್ಕರದ ಕುರಿತು ಸ್ಫೂರ್ತಿದಾಯಕ ಭಾಷಣವಿತ್ತರು.

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.

ವಾರ್ಷಿಕ ಚಂದಾ ರೂ 4-8-0

ಅರ್ಧ ವರ್ಷಕ್ಕೆ ರೂ-2-8-0

ಮಾದರಿ ಸಂಚಿಕೆಗೆ ಬರೆಯಿರಿ.

ಮೆನೇಜರ್ ನವಯುಗ, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 10—1—1946ರಿಂದ

ಯಂ. ವಿ. ರಾಜಮ್ಮ, ಕುಮಾರಿ ಚಂದ್ರಮ್ಮ,

ಶ್ರೀನಿವಾಸ ಮೂರ್ತಿ ಮೊದಲಾದವರು ನಟಿಸಿರುವ

ಪ್ರಹ್ಲಾದ (ಕನ್ನಡ)

ಅನಂತರ—

ನೋಡಲು ಮರೆಯದಿರಿ—

ರಣಜಿತ್‌ನವರ

ಶಂಕರ್ ಪಾರ್ವತಿ.

ದ. ಕ. ಮಜೂರರ ಬೇಡಿಕೆಗಳು

ನ್ಯಾಯದಾನವಾಗದಿದ್ದರೆ ಮುಷ್ಕರ ನಿಶ್ಚಯ.

ಜಿಲ್ಲಾ ಮಜೂರರ ಕೇಂದ್ರ ಸಮಿತಿಯ ಸಭೆ— ತಾ. 30-12-45ನೇ ಬೆಳಗ್ಗೆ 11 ಘಂಟೆಗೆ ರಘುನಾಥಯ್ಯ ಸ್ಮಾರಕ ಸದನದಲ್ಲಿ ಶ್ರೀ. ಕೆ. ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಸಭೆ ಜರಗಿತು. ಕಾರ್ಯದರ್ಶಿಗಳಾದ ಶ್ರೀ. ಬಿ. ವಿ. ಕಕ್ಕಿಲ್ಲಾಯರು ಕೌನ್ಸಿಲಿನ ಚಟುವಟಿಕೆಗಳ ವರದಿಯನ್ನು ಒಪ್ಪಿಸಿದ ಮೇಲೆ, ಸಮರ ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ಎನ್. ಹೊಳ್ಳರು ಸಮಿತಿಯು ನಡೆಸಿದ ಕಾರ್ಯಕಲಾಪಗಳನ್ನು ವಿವರಿಸಿದರು. ಮಧುರೆಯಲ್ಲಿ ಜರಗಿದ ಮದ್ರಾಸ್ ಪ್ರಾಂತಿಕ ಟ್ರೇಡ್ ಯೂನಿಯನ್ ಕೋಂಗ್ರೆಸ್ಸಿನ ವಾರ್ಷಿಕಾಧಿವೇಶನಕ್ಕೆ ಜಿಲ್ಲೆಯಿಂದ ಪ್ರತಿನಿಧಿಗಳಾಗಿ ತೆರಳಿದ್ದ ಶ್ರೀ. ಶಾಂತಾರಾಮ ಪೈ ಅವರು ಸಮ್ಮೇಳನದ ಕುರಿತು ವರದಿಯನ್ನಿತ್ತರು.

ಜಿಲ್ಲೆಯಲ್ಲೆಲ್ಲ ತೀಕ್ಷ್ಣವಾಗಿರುವ ನೂಲಿನ ಅಭಾವವನ್ನು ನಿವಾರಿಸಲು ಚಳವಳ ನಡೆಸಲು ಕೌನ್ಸಿಲು ಶ್ರೀ. ಶಾಂತಾರಾಮ ಪೈ, ಶ್ರೀ ದಾಸಪ್ಪ (ಮಂಗಳೂರು) ಶ್ರೀ. ಬಿ. ಕೆ. ಶೆಟ್ಟಿಗಾರ (ಉಡುಪಿ) ಮತ್ತು ಶ್ರೀ. ಕುಂಞಪ್ಪ (ಕಾಂಞಂಗಾಡು) ಇವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು. ಮತ್ತು ತಾ. 7-1-46ರಂದು ಜಿಲ್ಲೆಯ ನಾನಾ ಕಡೆಗಳಲ್ಲಿ "ನಿರುದ್ಯೋಗಿ ನೇಕಾರರ ದಿನ" ಆಚರಿಸಬೇಕೆಂದು ನಿರ್ಧರಿಸಲಾಯಿತು; ಮದ್ರಾಸ್ ಪ್ರಾಂತಿಕ ಟೆಕ್ಸ್‌ಟಾಯಿಲ್ ಕಮಿಶನರರನ್ನು ಕಾಣಲು ಮದ್ರಾಸ್ ಪ್ರಾಂತಿಕ ಟ್ರೇಡ್ ಯೂನಿಯನ್ ಕೋಂಗ್ರೆಸ್ಸು ಕಳುಹಿಸಲಿರುವ ಶಿಷ್ಟ ಮಂಡಲದಲ್ಲಿ ಈ ಜಿಲ್ಲೆಯ ಪರವಾಗಿ ಇರಲು ಶ್ರೀ. ಬಿ. ವಿ. ಕಕ್ಕಿಲ್ಲಾಯರನ್ನು ಕೌನ್ಸಿಲು ಚುನಾಯಿಸಿತು.

ಬೀಡಿ ಕೈಗಾರಿಕೆಯ ಸ್ಥಿತಿ ಗತಿಗಳನ್ನು ಅಭ್ಯಸಿಸಿ, ಜನವರಿ ಅಂತ್ಯದೊಳಗೆ ಜಿಲ್ಲಾ ಬೀಡಿ ಮಜೂರರ ಸಮ್ಮೇಳನವೊಂದನ್ನು ಜರಗಿಸಿ ಜಿಲ್ಲಾ ಸಂಘಟನೆಯೊಂದನ್ನು ರಚಿಸಲು ಕೌನ್ಸಿಲು ತೀರ್ಮಾನಿಸಿ ಆ ಬಗ್ಗೆ ಪೂರ್ವಸಿದ್ಧತೆಗಳನ್ನು ಮಾಡಲು ಶ್ರೀ. ಚೆನ್ನಯ್ಯ (ಮಂಗಳೂರು ಬೀಡಿ ಲೇಬರ್ ಯೂನಿಯನ್ ಕಾರ್ಯದರ್ಶಿ) ಶ್ರೀ. ಕೇಶವ ಕಾಮತ್, ಶ್ರೀ. ಸಿ. ಕೆ. ಗೋವಿಂದನ್ ಮತ್ತು ಶ್ರೀ. ಎಂ. ಮಂಜು ಇವರನ್ನೊಳಗೊಂಡ ಸಮಿತಿಯೊಂದು ರಚಿಸಲ್ಪಟ್ಟಿತು.

ರೈಲ್ವೆ ಮಜೂರರಿಗೆ ಹಾಳು ಅಕ್ಕಿ ಒದಗಿಸಿದ ಬಗ್ಗೆ ಖಂಡನೆಯೇ ಮೊದಲಾದ ಠರಾವುಗಳು ಮಂಜೂರಾಗಿ ಸಭೆ ಮುಕ್ತಾಯವಾಯಿತು.

'ಸಮರ ಸಮಿತಿ'ಗಳ ಸಮ್ಮೇಳನ- ಮಂಗಳೂರಿನ ಹಂಚು, ಬೀಡಿ ಮತ್ತು ನೇಯ್ಗೆ ಕಾರ್ಖಾನೆಗಳಲ್ಲಿ ರಚಿಸಲ್ಪಟ್ಟಿರುವ ಎಲ್ಲ 'ಸಮರ ಸಮಿತಿ'ಗಳ ಸಮ್ಮೇಳನವು ತಾ. 30-12-45ನೇ ಅಪರಾಹ್ನ 4 ಘಂಟೆಗೆ ರಘುನಾಥಯ್ಯ ಸ್ಮಾರಕ ಸದನದಲ್ಲಿ ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ಒಂದು ವರ್ಷದಿಂದ ಹಂಚು, ಬೀಡಿ ಮತ್ತು ನೇಯ್ಗೆ ಕಾರ್ಖಾನೆಗಳ ಮಾಲಿಕರಲ್ಲಿ ಮಜೂರರು ಕೇಳುತ್ತಿರುವ ಬೋನಸ್ಸು ಮತ್ತಿತರ ಕೇಳಿಕೆಗಳನ್ನು ಪಡೆಯಲು ಬೇರೆಲ್ಲಾ ಮಾರ್ಗಗಳೂ ನಿಷ್ಫಲವಾಗಿ ಇನ್ನು ಉಳಿದಿರುವ ಒಂದೇ ಒಂದು ದಾರಿಯಾದ ಮುಷ್ಕರವನ್ನು ಅನುಸರಿಸುವ ಆವಶ್ಯಕತೆಯನ್ನು ವಿಚಾರಿಸುವುದು. ಸಮ್ಮೇಳನದ ಉದ್ದೇಶವಾಗಿತ್ತು.

ಮಾಲಿಕರ ಕಾಬರಣ ಧೋರಣೆಯನ್ನು ಕಂಡು ಸಭೆ ಖೇದಪಡುತ್ತದೆ. ಮುಷ್ಕರ ಹೂಡಲು ಮಜೂರ ವರ್ಗವು ನಿರ್ಬಂಧಿತವಾಗಿದೆ; ಅನಿವಾರ್ಯವಾಗಿ ಮಜೂರರು ಅನುಸರಿಸಬೇಕಾಗಿರುವ ಮುಷ್ಕರದ ಎಲ್ಲ ಕಷ್ಟನಷ್ಟಗಳ ಹೊಣೆಗಾರಿಕೆಯೂ ಸರಕಾರದ್ದೂ ಮಾಲಿಕರದ್ದೂ ಆಗಿದೆ; ತಾ. 5-1-46ರ ಮುಂಚಿತವಾಗಿ ಮಜೂರರ ಮತಗಣನೆ ಮಾಡಿ ಸಂಬಂಧಪಟ್ಟ ಮಾಲಿಕರಿಗೂ, ಮಾಲಿಕರ ಸಂಘಗಳಿಗೂ ಸರಕಾರಕ್ಕೂ ಮುಷ್ಕರದ ನೋಟೀಸು ಕೊಡಲು ಸಭೆಯು ತೀರ್ಮಾನಿಸುತ್ತದೆ. ಮತ್ತು ಮುಷ್ಕರಕ್ಕೆ ಬೆಂಬಲ ಕೊಡಬೇಕೆಂದು ಮಹಾ ಜನರನ್ನು ಕೇಳಿಕೊಳ್ಳುವ ಠರಾವನ್ನು ಶ್ರೀ. ಕಕ್ಕಿಲ್ಲಾಯರು ಸಭೆಯ ಮುಂದಿಡಲು ಸರ್ವಾನುಮತದಿಂದ ಮಂಜೂರಾಯಿತು.

ತಾ. 30-12-45ರಂದು ಜರಗಿದ ಸಮರ ಸಮಿತಿಗಳ ಸಮ್ಮೇಳನದಲ್ಲಾದ 'ಮಜೂರರ ಬೋನಸ್ಸು ಮತ್ತು ಇತರ ಕೇಳಿಕೆಗಳನ್ನು ಸಂಪಾದಿಸುವುದಕ್ಕಾಗಿ ಮುಷ್ಕರ ನಡೆಸಬೇಕು' ಎಂಬ ನಿರ್ಧಾರವನ್ನು ಮಜೂರ ವರ್ಗಕ್ಕೆ ಹಾಗೂ ಮಾನ್ಯ ಮಹಾ ಜನರಿಗೆ ತಿಳಿಸುವ ಬಗ್ಗೆ ತಾ. 31-12-45ರಂದು ಸಂಜೆ ಶ್ರೀ. ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು.

ಯುದ್ಧದ ಆರು ವರ್ಷ ಕಾಲ ಅವಿಶ್ರಾಂತವಾಗಿ ದುಡಿದು ಮಿತಿಮೀರಿ ಏರಿದ್ದ ಬೆಲೆಯ ದಾಮಾಶೆಯಲ್ಲಿ ಹೆಚ್ಚದೆ ಕಡಿಮೆ ಬೀಳುವ ಮಜೂರಿಯಿಂದ ಹೊಟ್ಟೆ ತುಂಬ ಗಂಜಿ ಕುಡಿಯಲು ಸಾಧ್ಯವಾಗದೆ ಕಷ್ಟಕ್ಕೀಡಾಗಿ ಹಲವು ಬಗೆ ಪೀಡೆಗೊಳಗಾದ ಮಜೂರ ವರ್ಗವು ತಮ್ಮ ಬೋನಸ್ಸೇ ಮೊದಲಾದ ಹಲವು ಕೇಳಿಕೆಗಳನ್ನು ಮಾಲಿಕರಿಗೂ ಸರಕಾರಕ್ಕೂ ತಿಳಿಸಿ ಅದನ್ನು ಶಾಂತರೀತಿಯಲ್ಲಿ ಸುಮಾರು ಒಂದು ವರ್ಷದಿಂದ ಚಳವಳನಡೆಸಿದ್ದಾರೆ. ಆದರೂ ಮಾಲಿಕರಾಗಲೀ ಸರಕಾರವಾಗಲೀ ಮಜೂರರ ನ್ಯಾಯದ ಕಡೆ ಲಕ್ಷ್ಯವಿತ್ತಿಲ್ಲ. ಈ ಸ್ಥಿತಿಯಲ್ಲಿ ಮಜೂರರ ನ್ಯಾಯ ಸಂಪಾದನೆಗಾಗಿ ಅವರ ಕೊನೆಯ ಆಯುಧವಾದ ಮುಷ್ಕರವನ್ನು ಹೂಡಲು ನಿರ್ಧರಿಸಲಾಗಿದೆ. ಆ ಬಗ್ಗೆ ಮಾಲಿಕರಿಗೂ ಸರಕಾರಕ್ಕೂ ನೋಟೀಸು ಕೊಡಲಾದೀತು. ಸಮಾಜದ ಜೀವಾಳದಂತಿರುವ ಮಜೂರ ವರ್ಗವು ತಮ್ಮ ನ್ಯಾಯಕ್ಕಾಗಿ ಹೋರಾಡುವರು. ಊರಿನ ಕೆಲವೇ ಮಾಲಿಕರಿಂದ ಕೂಡಿದ ನಮ್ಮೂರು ಮಾಲಿಕ ವರ್ಗದಿಂದ ಊರಿನ ಹಲವು ಜನ ಸಮುದಾಯವವರಾದ ಮಜೂರ ವರ್ಗಕ್ಕೆ ನ್ಯಾಯವನ್ನು ದೊರಕಿಸಿ ಕೊಡುವುದು ನ್ಯಾಯಪ್ರಿಯರಾದ ಊರಿನವರ ಧರ್ಮವಿದೆ. ಮಜೂರರು ತಮ್ಮ ನ್ಯಾಯವನ್ನು ಸಂಪಾದಿಸಿಕೊಳ್ಳಲು ಬೇರೆ ದಾರಿಯಿಲ್ಲದೆ ಸಮರ ಸಾರಿದ್ದಾರೆ. ಊರಿನವರೆಲ್ಲ ಮಜೂರರ ಈ ಧರ್ಮ ಯುದ್ಧದಲ್ಲಿ ಸಂಪೂರ್ಣ ಸಹಾಯ ಸಹಕಾರವನ್ನಿತ್ತು ನ್ಯಾಯವನ್ನು ಕಾಯ್ದುಕೊಡಬೇಕೆಂದು ಕೇಳಿಕೊಂಡು ಶ್ರೀಗಳಾದ ಕೇಶವ ಕಾಮತ್, ಸೋನ್ಸ್, ದಾಸಪ್ಪ, ಅಂತಪ್ಪ, ಅಡ್ಯಂತಾಯ, ಶಾಂತಾರಾಮ್ ಪೈ, ಎಸ್. ಎನ್. ಹೊಳ್ಳ ಮೊದಲಾದವರು ಭಾಷಣವಿತ್ತರು. ತಾ 19-1-46ರ ವರೆಗಿನ ಕಾರ್ಯಕ್ರಮವನ್ನು ಶ್ರೀ ಕಕ್ಕಿಲ್ಲಾಯರು ವಿವರಿಸಿದರು.

ಉಡುಪಿಯ ಸಮರ್ಥನೆ- ಮಜೂರ ಸಂಘಗಳ ನ್ಯಾಯಬದ್ಧ ಬೇಡಿಕೆಗಳಿಗೆ ಇಡೀ ಜಿಲ್ಲೆಯ ಶ್ರಮಜೀವಿಗಳೆಲ್ಲರ ಸಹಕಾರ ಮತ್ತು ನ್ಯಾಯ ಪಕ್ಷಪಾತಿಗಳ ಬೆಂಬಲ ದೊರೆಯುತ್ತಿದೆ. ಉಡುಪಿಯಲ್ಲಿ ತಾ 7ನೇ ಅಪರಾಹ್ನ ಗಾಂಧೀ ಮೈದಾನಿನಲ್ಲಿ ನಿರುದ್ಯೋಗಿ ನೇಕಾರ ದಿನಾಚರಣೆಗಾಗಿ ಉಡುಪಿ ನೇಕಾರ ಸಂಘದ ಪರವಾಗಿ ಶ್ರೀ. ಎಂ. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ನೂಲಿನ ಅಭಾವ, ಮಾಲಿಕರ ಅಸಡ್ಡೆ ಮತ್ತು ಅಧಿಕಾರ ಲಾಲಸೆ, ಮಂಗಳೂರಿನ ಮಜೂರ ಬೇಡಿಕೆ ಮತ್ತು ನಿಯೋಜಿತ ಮುಷ್ಕರಕ್ಕೆ ಸಹಾನುಭೂತಿ ಇತ್ಯಾದಿಗಳನ್ನು ವಿವರಿಸಿ, ದ. ಕ. ನೇಕಾರ ಸಂಘದ ಅಧ್ಯಕ್ಷ ಶ್ರೀ. ಸೋನ್ಸರೂ, ಶ್ರೀ. ಕೆ. ರಾಘವನರೂ ಭಾಷಣವಿತ್ತರು. ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಲಾಗಿದೆ.

ಮಂಗಳೂರು.

ಶ್ರೀ ಎಂ. ಜಿ. ಪಾಟೀಲರ ಆಗಮನ— ಕರ್ನಾಟಕ ಪ್ರಾಂತೀಯ ಪಾರ್ಲಿಮೆಂಟರಿ ಸಮಿತಿಯ ಅಧ್ಯಕ್ಷರಾದ ಶ್ರೀ. ಎಂ. ಜಿ. ಪಾಟೀಲರು ಕಳೆದ ತಾ. ೩ರಂದು ಮಂಗಳೂರಿಗೆ ಆಗಮಿಸಿದರು ಮರುದಿನ ಸ್ಥಳೀಯ ಸಿ. ಸಿ. ಸಿ. ಆಫೀಸಿನಲ್ಲಿ ಶ್ರೀ. ಶ್ರೀನಿವಾಸ ಮಲ್ಯರು ಪಾಟೀಲರಿಗೊಂದು ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀಗಳಾದ ಕಾರಂತ, ಎ. ಬಿ. ಶೆಟ್ಟಿ, ಡಾ। ಮಲ್ಯ, ಯು. ಸಿ. ಯಸ್. ಭಟ್, ಉಮೇಶರಾವ್, ಎಲ್. ಸಿ. ಪಾಯಸ್, ದಾಮೋದರ ಬಾಳಿಗ, ಕೆ. ಈಶ್ವರ ಮೊದಲಾದ ಕಾಂಗ್ರೆಸ್ ಉಮೇದ್ವಾರರುಗಳು ಮುಂದೆ ಬಂದಿರುವ ಹುರಿಯಾಳುಗಳೆಲ್ಲ ಈ ಸಮಾರಂಭಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ। ಸದಾನಂದ ಹೆಗ್ಡೆ ಅವರು ಮಾತನಾಡುತ್ತ 'ಕರ್ನಾಟಕ ಏಕೀಕರಣಕ್ಕೆ ಬೆಂಬಲಕೊಡುವವರನ್ನೇ ಉಮೇದ್ವಾರರಾಗಿ ಆರಿಸಬೇಕು' ಎಂದು ವಿನಂತಿಸಿಕೊಂಡರು. ಶ್ರೀಗಳಾದ ಕೆ. ಕೆ. ಶೆಟ್ಟಿ, ಎಂ. ಡಿ. ಅಧಿಕಾರಿ, ಶ್ರೀಮತಿ ಮೇರಿ ಬ್ರಿಟೊ ಮೊದಲಾದವರೂ ಈ ಸಂದರ್ಭದಲ್ಲಿ ಮಾತನಾಡಿದರು.

ಕೆನರಾ ಚೇಂಬರ್ ಒಫ್ ಕಾಮರ್ಸ್ ಇದರ ವಾರ್ಷಿಕೋತ್ಸವವು ತಾ. ೩ರಂದು ಕೇಂದ್ರ ನ್ಯಾಯವಿಧಾಯಕ ಸಭಾ ಸದಸ್ಯರಾದ ಶ್ರೀ। ಎ. ಕರುಣಾಕರ ಮೆನೋನರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯಾಪಾರ ಮತ್ತು ರಾಜನೀತಿಗಳಿಗೆ ಬಾಂಧವ್ಯವಿದೆ; ಅವುಗಳು ಜತೆಯಾಗಿ ಸಾಗಿದರೆ ದೇಶದ ಸ್ವಾತಂತ್ರ್ಯಕ್ಕೆ ಉಪಕಾರವಿದೆ—ಎನ್ನುತ್ತ 'ಪಾರ್ಲಿಮೆಂಟರಿ ಶಿಷ್ಟಮಂಡಲಿಯಿಂದ ನಮಗೇನೂ ಪ್ರಯೋಜನವಾಗುವಂತಿಲ್ಲ' ಎಂದು—ಅಧ್ಯಕ್ಷರು ತಮ್ಮ ಭಾಷಣದಲ್ಲಿ ನುಡಿದರು.

ಹೊಟೇಲು ನೌಕರರಿಗೆ ರಜೆ— ನಗರದ ಹೊಟೇಲು ನೌಕರರಿಗೆ ವಾರಕ್ಕೊಂದು ದಿನ ರಜೆಕೊಡುವ ವ್ಯವಸ್ಥೆಯನ್ನು ಈ ತಿಂಗಳಿಂದ ಆರಂಭಿಸಲಾಗಿದೆ. ಕೆಲವು ಹೊಟೆಲುಗಳು ಆದಿತ್ಯವಾರ, ಇನ್ನು ಕೆಲವು ಸೋಮವಾರ ಹೀಗೆ ಸರತಿಯಿಂದ ವಾರಕ್ಕೊಮ್ಮೆ ಮುಚ್ಚಲ್ಪಡುವುವು.

ಮಿ। ಜಿನ್ನರ ಜನ್ಮ ದಿನವು— ಸ್ಥಳೀಯ ಮುಸ್ಲಿಂ ವಿದ್ಯಾರ್ಥಿ ಫೆಡರೇಶನಿನ ಆಶ್ರಯದಲ್ಲಿ ಕಳೆದ ತಾ. ೨೬ರಂದು ಆಚರಿಸಲ್ಪಟ್ಟಿತು. ಖಾನ್ ಸಾಹೇಬ್ ಶಿಮ್ನಾಡರು ಅಧ್ಯಕ್ಷತೆ ವಹಿಸಿದ್ದರು.

ಅಜಾದ್ ಸೇನೆಗೆ ಸೇರಿದ್ದ ನಮ್ಮ ಜಿಲ್ಲೆಯವರಾದ ಶ್ರೀಗಳಾದ ರಾಮಯ್ಯ ಮತ್ತು ದೇವಪ್ಪನೆಂಬವರು ಲಕ್ನೋ ಅಜಾದ್ ಹಿಂದ್ ಕೈದಿ ಶಿಬಿರದಿಂದ ಬಿಡುಗಡೆಹೊಂದಿ ಇತ್ತೀಚೆಗೆ ಊರಿಗೆ ಮರಳಿದ್ದಾರೆ.

ನೋಟೀಸು

ಉಡ್ಪಿ ಪ್ರಿನ್ಸಿಪಾಲ್

ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 78/1945

1 ಕೆ. ಸುಬ್ರಾಯ ಶ್ಯಾನುಭಾಗ—ಕಟ್ಪಾಡಿ ಮುಕುಂದ ಶ್ಯಾನುಭಾಗರ ಮಗ. 2 ಚಂದ್ರಭಾಗಿ ಯಾನೆ ಅಮ್ಮಣಿ ಅಮ್ಮ. ಕಟ್ಪಾಡಿ ಮುಕುಂದ ಶ್ಯಾನುಭಾಗರ ವಿಧವೆ—ಉಡ್ಪಿ ಮುನ್ಸಿಪಾಲಿಟಿಯ ಅಂಬ್ಲಪಾಡಿ ವಾರ್ಡಿನಲ್ಲಿರುವವರು—ಅರ್ಜಿದಾರರು.

ಯಿ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ:—

1ನೇ ಅರ್ಜಿದಾರನ ತಂದೆ ವ 2ನೇ ಅರ್ಜಿದಾರಳ ಗಂಡ ಸದ್ರಿ ಅಂಬ್ಲಪಾಡಿ ವಾರ್ಡಿನಲ್ಲಿ ತಾ. 7-9-1945ರಲ್ಲಿ ಮೃತಪಟ್ಟ ಕೆ. ಮುಕುಂದ ಶ್ಯಾನುಭಾಗರು "The Bombay Life Assurance Co., Ltd., Bombay" ಯಿ ಕಂಪೆನಿಯಲ್ಲಿ ಪಡದ ನಂಬ್ರ 100062ನೇ ಪೊಲಿಸಿ ಬಾಬ್ತು ಬರತಕ್ಕ ರೂಪ್ಯಾ 1000/- ವಸೂಲು ಮಾಡುವದೆ ಅರ್ಜಿದಾರರಗೋಸ್ಕರ 1ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ದಾಖಲ್ಮಾಡಿದ ಸದ್ರಿ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾ. 8-2-1946ಕ್ಕೆ ತನ್ಕಿಗೆ ಯಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವ್ಸ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳಬೇಕಾಗಿ ಯಿ ಮೂಲಕ ಸರ್ವ ಜನರಿಗೆ ತಿಳಿಯಪಡಿಸೋಣಾಗುತ್ತದೆ.

H. Ramanath Pai,
Advocate for Petitioners.

Udipi, South Kanara,
Dated 5-1-1946.

ದಿನಕ್ಕೊಂದು ನಗೆ; ಆರೋಗ್ಯದ ಬಗೆ.

ನಗುವಿನೊಂದಿಗೆ ವಿಚಾರದ ಕಿಡಿಯೂ ಬೆಳಗಬೇಕೆ?

ಹಾಗಿದ್ದರೆ

ವಿಷ್ಣುವಿನ ದಶಾಪರಾಧಗಳು

ಅರ್ಥಾತ್ ದಶಾವತಾರಗಳು.

ಎಂಬ ದಶಾವತಾರಗಳ ಕುರಿತಾದ ವಿಡಂಬನ ಗ್ರಂಥವನ್ನೋದಿರಿ.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರರಾದ

ಶ್ರೀ. ಎಂ. ವಿ ಹೆಗ್ಡೆಯವರ ಕೃತಿ.

ಬೆಲೆ 0—12—0

ಪ್ರಸಿದ್ಧ ಸಾಹಿತಿಗಳಾದ

ಶ್ರೀ. ಯಸ್. ವೆಂಕಟರಾಜರ

ಆಕಾಶಗಂಗೆ

೨೦ ಕತೆಗಳ ಸಂಗ್ರಹ.

ಬೆಲೆ ರೂ. 1—12—0

ಪ್ರತಿಗಳಿಗೆ ಉಡುಪಿ ಕಿರಿಯರ ಪ್ರಪಂಚಕ್ಕಾಗಲಿ, ನವಭಾರತ ಪುಸ್ತಕ ಭಂಡಾರಕ್ಕಾಗಲಿ ಬರೆದು ತರಿಸಿಕೊಳ್ಳಬಹುದು.

ದಕ್ಷಿಣ ಕನ್ನಡ

ಫಲಿಮಾರು–ತಾ 30-12-1945ರಲ್ಲಿ ಫಲಿಮಾರು ಬೋ॥ ಹಾ॥ ಎ॥ ಶಾಲೆಯಲ್ಲಿ ಫಲಿಮಾರು ಕಟ್ಟದ ನೀರಾಶ್ರಯದ ಫಲಿಮಾರು, ಇನ್ನ, ಬಳ್ಕುಂಜೆ, ಕರ್ನಿರ, ಅತಿಕಾರಿ ಬೆಟ್ಟು ಗ್ರಾಮಗಳ ರೈತರು. A. N. ಶೀತಾರಾಮಾಚಾರ್ ಎಡ್ವೋಕೇಟ್ ಕಾರ್ಕಳ ಇವರ ನೇತೃತ್ವದಲ್ಲಿ ಸುಮಾರು 200 ಜನಕ್ಕೆ ಮಿಕ್ಕಿದ ಜನರು ಸಭೆ ಸೇರಿ ಶ್ರೀ ಫಲಿಮಾರು ಮಠದ ಜನರಲ್ ಏಜಂಟ್ M. ಶ್ರೀನಿವಾಸ ಪೆಜತ್ತಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಹಾಲಿಕ್ಕೆ ಹೊಳೆಗೆ ಫಲಿಮಾರು ಕಟ್ಟದಿಂದ ಮೇಲ್ಗಡೆ ಮುಂಡ್ಕೂರು ಗ್ರಾಮದಲ್ಲಿ ಮುಂಡುಕೂರಿನ ಕೆಲವರು ಕಟ್ಟಿದ ಕಟ್ಟವು ಗೈರ್ ಮಾಮೂಲಾದ್ದು ಅವರ ಸ್ವತಂತ್ರಕ್ಕೆ ಮಿಕ್ಕಿದ್ದು. ಸದ್ರಿ ಕಟ್ಟವು ಫಲಿಮಾರು ಕಟ್ಟದ ನೀರಾಶ್ರಯದ ವರ್ಗದಾರರಿಗೆ ಹಾನಿಕರದ್ದು. ಮತ್ತು ನಷ್ಟಕರದ್ದು, ಎಂತ ಸರ್ವಾನುಮತದಿಂದ ನಿರ್ಣಯಿಸಿ ಮುಂದಿನ ಕಾರ್ಯಕ್ರಮವನ್ನು ಕೈಕೊಳ್ಳುವ ಬಗ್ಗೆ ಶ್ರೀಗಳಾದ ಫಲಿಮಾರು ಮಠದ ಜನರಲ್ ಏಜಂಟರು ಯಂ. ಶ್ರೀನಿವಾಸ ಪೆಜತ್ತಾಯರು, ಶೀರೂರು ಮಠದ ಏಜಂಟರು ಕೆ. ರಾಜ ಭಟ್ರು, ಇನ್ನ ಮಠದ ಕಡೆಯಿಂದ ಮುಖ್ಯಪ್ರಾಣಾಚಾರ್ಯರು. ಬಂಗ್ಲೆ ಸೀತಾರಾಮ ಕೆನ್ನಿತ್ತಾಯರು. ಕರ್ನಿರೆ ರಾಮಣ್ಣ ಸೆಟ್ರು. ಕವತಾರು ಎಲ್ಲಪ್ಪ ಆಜಿಲರು. ಡಾಕ್ಟರ್ ರ್‍ಯಾಮ ಶೆಟ್ರು. ಬಳ್ಕುಂಜೆ ರುಕ್ಕ ಸೆಟ್ರು. ಬಲ್ಲದ ಹರಾರಿ ಮುದ್ದಣ್ಣ ಸೆಟ್ರು. ಪಡುಪಣಗುತ್ತು ರಾಮಣ್ಣ ಸೆಟ್ರು. ಫಲಿಮಾರು ಮೇಗಿನಮನೆ ಮಹಾಬಲ ಸೆಟ್ರು. ಮೂಡು ಫಲಿಮಾರು ಕೃಷ್ಣ ಸೈಗಳು––ಹೀಗೆ 12ಜನರ ಕಾರ್ಯ ನಿರ್ವಾಹಕ ಮಂಡಳಿಯನ್ನು ಏರ್ಪಡಿಸಿ ಸಬಾಧ್ಯಕ್ಷರಿಗೂ ವಕೀಲ ಮಹಾಶಯರಿಗೂ ಸಭೆಯ ಪರವಾಗಿ ಹೆಡ್ಮಾಸ್ತರ್ ಕೆ. ವೆಂಕಟ್ರಾಯ ಸೈಗಳು ಧನ್ಯವಾದಗಳನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ಕಾಪು–ಶಾಲಾ ಕಟ್ಟಡ ನಿಧಿಗೆ ಹಣವನ್ನು ಶೇಖರಿಸುವರೆ ಶ್ರೀಗಳಾದ ಶಾನಾರ್ದ್, ಕೇಶವ ರಾವ್, ಪಟೇಲ್ ಅನಂದರಾಯ ರ್‍ಯಾನಭಾಗ, ಕೃಷ್ಣಾಚಾರ್, ಡಾ॥ ರಾಮಣ್ಣ ಸೆಟ್ಟಿ, ಜಿಲ್ಲಾ ಬೋರ್ಡು ಉಪಾಧ್ಯಕ್ಷ ಮಹಾಲಿಂಗ ಸೆಟ್ಟಿ, ಡಾ॥ ವಿಠಲ ಸೆಟ್ಟಿ, ಡಾ॥ ಬೇಕಲ್ ಮೊದಲಾದ ಅಧ್ಯ ಮಹನೀಯರ ಕಮಿಟಿಯು ಸ್ಥಾಪಿತವಾಗಿದೆ. ಕಾಪು ಬೀಡಿನ ಬಲ್ಲಾಳರು ಏನೂರು, ಶ್ರೀ ಉಳಿಯಾರು ಗೋಳಿ ಮೆಣ್ಣ ಸೆಟ್ರು ಒನೂರೆ ಐವತ್ತು ಹಾಗೂ ಇನ್ನಿತರರ ಹಣ ಸಹಾಯದಿಂದಾಗಿ ಈಗಾಗಲೇ ರೂಪ್ಯಾ 2100 ಸಂಗ್ರಹವಾಗಿರುತ್ತದೆ. ದಿನೇದಿನೇ ಅಭಿವೃದ್ಧಿ ಹೊಂದುತ್ತಿರುವ ಹಾ॥ ಎ॥ ಶಾಲೆಗೆ ಕಟ್ಟಡ ವಿಸ್ತರಣೆಯು ಅತ್ಯಾವಶ್ಯವಾದುದರಿಂದ ಮಹಾ ಜನರು ಶಕ್ತಿ ಮೀರಿ ಧನ ಸಹಾಯ ಮಾಡಬೇಕಾಗಿಯೂ ಇನೇ ಶಾಲೆಯ ಹ್ಯಾಸ್ಮಾಟಾಗಿ ಗ್ರಾಮಸ್ಥರೆ ಮಗ್ಗಳಿಗ ಯೋಗ್ಯ ಶಿಕ್ಷಣ . . ಗನೆ ಸಿಗುವಂತಾಗಲೆಂದೂ ಕೋರಿ ಒರ್ವ ಬಾತ್ಮಿದಾರರು ತನ್ನ ಹಿಂದಾದ ಆಸೆಯನ್ನು ಜಾಹೀರುಪಡಿಸುತ್ತಾರೆ.

ಅಲೆವೂರು ಸುಭೋಧಿನಿ ಶಾಲಾ ಸುವರ್ಣ ಮಹೋತ್ಸವವು– ಕಳೆದ ತಾ 29ರಿಂದ 31ರ ತನಕ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲಾಯಿತು. ಪ್ರಾರಂಭ ದಿನದಲ್ಲಿ ಪೂರ್ವಾಹ್ನ ದೇವತಾ ಪ್ರಾರ್ಥನೆ, ಪುರ ಮೆರವಣಿಗೆ, ಮಕ್ಕಳಿಗೆ ತಿಂಡಿ ಹಂಚೋಣ ರಾತ್ರಿ ಯಕ್ಷಗಾನ ಕಾಲಕ್ಷೇಪಗಳಿದ್ದುವು. ಮರುದಿನ ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳಿದ್ದುವು. ಕೊನೆಯ ದಿನ ಶಾಲೆಗೋಸ್ಕರ ನೂತನವಾಗಿ ಶ್ರೀ. ಕೆ. ಶಂಕರರಾಯರಿಂದ ಕಟ್ಟಿಸಿಕೊಡಲ್ಪಟ್ಟ ವಿದ್ಯಾಮಂದಿರ ಪ್ರವೇಶೋತ್ಸವವು ಜರಗಿತು. ಆ ಬಳಿಕ ಶ್ರೀ. ಪಿ. ರಾಮಚಂದ್ರರಾಯರು ಶ್ರೀ ರಂಗರಾಯರ ಭಾವ ಚಿತ್ರ ಅನಾವರಣವನ್ನು ಮಾಡಿದರು. ತದನಂತರ ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಸುವರ್ಣ ಮಹೋತ್ಸವ ಸಭೆಯು ಜರಗಿತು. ಶಾಲಾ ಮೆನೇಜರ್ ಶ್ರೀ ಅಚ್ಚಣ್ಣ ಸೆಟ್ಟರು ಶಾಲೆಯು ಸ್ಥಾಪಿತವಾದಂದಿನಿಂದ ಈ ವರೆಗಿನ ವರದಿಯನ್ನೋದಿದರು. ಶ್ರೀಗಳಾದ ಮುಖ್ಯಪ್ರಾಣ ತಂತ್ರಿ, ಬದರಿ ನಾರಾಯಣಾಚಾರ್ಯ ವಿಠಲ ಸೆಟ್ಟಿ ಮೊದಲಾದವರು ಭಾಷಣ ಮಾಡಿದರು. ಪ್ರಾಥಮಿಕ ಶಾಲೆಯು ಹಾ॥ ಎಲಿಮೆಂಟರಿ ಶಾಲೆಯಾಗಬೇಕಾಗಿದೆಯೆಂದೂ ಆ ಬಗ್ಗೆ ಅಧಿಕಾರಿಗಳು ಸಹಾನುಭೂತಿಯನ್ನು ತೋರಿಸಿ ಗ್ರಾಮಾಭ್ಯುದಯವನ್ನು ಮಾಡಿದ್ದಲ್ಲಿ ಹಾ॥ ಎ॥ ಶಾಲೆಗೆ ಗ್ರಾಮಸ್ಥರು ಒಂದುಸಾವಿರ ರೂಪಾಯಿಯನ್ನು ಸಂಗ್ರಹಿಸಿ ಕೊಡುವರಾಗಿಯೂ ಶ್ರೀ. ಯು. ಕೃಷ್ಣ ಭಟ್ಟರು ತಿಳಿಸಿದರು. ಶ್ರೀ ಶಾಂತಿ ವಿರಚಿತ ಕಾಳಿದಾಸ ನಾಟಕಾಭಿನಯವು ಅಧ್ಯಕ್ಷರ ಮತ್ತು ಸರ್ವ . . . . . . ಮೆನೇಜರ್ ಶ್ರೀ ಅಚ್ಚಣ್ಣ ಸೆಟ್ಟರ . . . . ನ್ಯವಾದಾರ್ಪಣೆಯೊಂದಿಗೆ ಸುವರ್ಣ ಮಹೋತ್ಸವವು ಅತ್ಯಂತ ಜಯಶೀಲವಾಗಿ ಕೊನೆಗೊಂಡಿತು.

ಕೆಮ್ಮಣ್ಣು—ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಪಡುತೋನ್ಸೆ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲೆಗೆ ಅತ್ಯವಶ್ಯಕವಾಗಿರುವ ಕಟ್ಟಡದ ವಿಸ್ತೀರ್ಣದ ಸಹಾಯಾರ್ಥವಾಗಿ ಇಲ್ಲಿಯ ವಿದ್ಯಾವರ್ಧಕ ಸಂಘದವರು 'ಉಡುಪಿ ಶ್ರೀಕೃಷ್ಣ ಮಾರುತೀ ನಾಟಕ ಸಂಘ'ದವರ ಮೂಲಕ ಕಳೆದ ತಾರೀಕು 27 ಮತ್ತು 29ರಲ್ಲಿ ಉತ್ಕೃಷ್ಟ ನಾಟಕಾಭಿನಯ ಮಾಡಿಸಿ ಅತ್ಯುತ್ಸಾಹದಿಂದ ಸಂಗ್ರಹಿಸಿದ ರೂಪಾಯಿ 1188-0-0ರ ನಿಧಿಯನ್ನು ಮೇಲ್ಕಾಣಿಸಿದ ಉದ್ದೇಶದ ವಿನಿಯೋಗಾರ್ಥವಾಗಿ ತನಗೆ ಒಪ್ಪಿಸಿರುತ್ತಾರೆ. ವಿದ್ಯಾಭಿಮಾನಿಗಳಾಗಿ ಧರ್ಮ ಸೇವಾ ದೃಷ್ಟಿಯಿಂದ ಇಂತಹ ಶ್ಲಾಘನೀಯವಾದ ಕಾರ್ಯದಲ್ಲಿ ಪ್ರವರ್ತಿಸಿ ಯಶಸ್ವಿಯಾದ ವಿದ್ಯಾವರ್ಧಕ ಸಂಘದ ಅಜೀವ ಸದಸ್ಯರಿಗೂ ಅವರೊಡನೆ ಪ್ರತ್ಯಕ್ಷ ಪರೋಕ್ಷವಾಗಿ ತಮ್ಮ ತನುಮನ ಧನಗಳಿಂದ ನರವಾದ ಊರ ಮತ್ತು ಪರಸ್ಥಳದ ಮಹನೀಯರೆಲ್ಲರಿಗೂ ಈ ಮೂಲಕ ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇನೆಂದೂ ತನಗೆ ಒಪ್ಪಿಸಲ್ಪಟ್ಟ ನಿಧಿಯು ಶೀಘ್ರದಲ್ಲೇ ಕಟ್ಟಡದ ವಿಸ್ತರಣಕ್ಕೆ ಸಂಪೂರ್ಣವಾಗಿ ವಿನಿಯೋಗಿಸಲ್ಪಡುವುದೆಂದೂ ಇಂತಹ ಧರ್ಮ ಕಾರ್ಯದಲ್ಲಿ ಸಹಕರಿಸಿದ ಸಕಲರಿಗೂ ದೇವರು ಪರಮಾನುಗ್ರಹವನ್ನು ದಯಪಾಲಿಸಲೆಂದೂ ಶಾಲಾ ಮೆನೇಜರ್ ಶ್ರೀ. ಟಿ. ಕೆ. ಶೇಷಪ್ಪಯ್ಯನವರು ಪ್ರಾರ್ಥಿಸುತ್ತಾರೆ.

ಪಡುಬಿದ್ರಿ—ಕೆಲವು ಕಾಲದಿಂದ ಜೀರ್ಣವಸ್ಥೆಯಲ್ಲಿದ್ದ ಶ್ರೀ ಮಹಲಿಂಗೇಶ್ವರ ದೇವಸ್ಥಾನದ ಕೆಲವು ಭಾಗಗಳನ್ನು ಪುನರುದ್ಧಾರ ಕಾರ್ಯವನ್ನು ಸ್ಥಳೀಕ ಮಹನೀಯರೂ ಹಾಗೂ ಜೋಯಿಂಟ್ ಮೊಕ್ತೇಸರರೂ ಆದ ಶ್ರೀ ಬಿಂಡಿಟ್ಟು . . . . . . ನವರು ವಹಿಸಿರುವುದು ಸ್ತುತ್ಯಾರ್ಹವಾಗಿದೆ. ಊಸ ಧ್ವಜಸ್ತಂಭ-ಅದಕ್ಕೆ ತಾಮ್ರ ಮಡ್ಯಾಸುವುದೇ ಮೊದಲಾದ ಸುಮಾರು ವೆಚ್ಚವನ್ನು ಶ್ರೀ ಎಲ್. ಶ್ರೀನಿವಾಸರಾಯರು ವಹಿಸಿಕೊಂಡಿರುವರಲ್ಲದೆ ಅದಕ್ಕೆ ಬೇಕಾದ ಉತ್ತಮ ಮರವನ್ನು ಪಡುಬಿದ್ರೆ ಪಲಿಜ ಶ್ರೀ ಕುಂಡ ಮಂಜಯ ಹೆಗ್ಡೆಯವರು ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರುವರು.

ಬ್ರಹ್ಮಾವರ–ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಹಿಂದುಸ್ಥಾನ ಸ್ಕೌಟ್ ಧ್ವಜಾರೋಹಣ ಸಮಾರಂಭವು ತಾ. 3-1-46 ರಲ್ಲಿ ಶ್ರೀ ಕೆ. ಅರ್ ಸೈಗಳವರಿಂದ ನೆರವೇರಿಸಲ್ಪಟ್ಟಿತು. ಸದ್ರಿ ಶಾಲೆಯ ಮಾರುತಿ ಶಿರೂರು ವೀರರ ಮತ್ತು ಮೀರಾ ಬುಲ್‌ಬುಲ್ಸ್‌ಗಳ ಘೋಷ, ನರ್ತನ ಆಟಗಳಿದ್ದುವು. ಸದ್ರಿ ಶಾಲೆಯ ಕಬ್ ಮಾಸ್ತರರಾದ ಶ್ರೀ. ಬಿ. ಎಮ್. ಸೆಟ್ರು ಸ್ಕೌಟ್ ಧ್ವಜದ ಕುರಿತು ಕೆಲವು ಮಾತುಗಳನ್ನು ಹೇಳಿದರು ಶ್ರೀ K. R. ಸೈಗಳವರ ಸಂದರ್ಭೋಚಿತ ಭಾಷಣಾನಂತರ ಧನ್ಯವಾದವನ್ನರ್ಪಿಸಲು, ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಈ ತಿಂಗಳ ಕೊನೆಯಲ್ಲಿ ಸ್ಕೌಟ್ ಪ್ಯಾಕ್ ಕಮಿಟಿಯನ್ನು ಕೂಡಾ ನಿರ್ಮಿಸುವುದೆಂತ ನಿಶ್ಚಯವಾಯಿತು.

ಶ್ರೀ. ಹೇರಿಕುದ್ರು ತಿಮ್ಮಪ್ಪ ಶೆಟ್ರು ತಮ್ಮ 77ನೆ ವಯಸ್ಸಿನಲ್ಲಿ ತಾ. 4 I 46ನೇ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ತಮ್ಮ ಕುಟುಂಬದವರನ್ನೂ ಹೆಂಡತಿ ಮಕ್ಕಳನ್ನೂ ಸಮಾನ ರೀತಿಯಲ್ಲಿ ನೋಡಿಕೊಂಡು ತುಂಬಾ ಸಹಾಯಮಾಡಿರುತ್ತಾರೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ.

ಕುಂದಾಪುರ–ಜಿಲ್ಲಾ ಬೋರ್ಡ್ ಶಾಲಾ ಸಮಿತಿಯವರಿಂದ ತಾ 29-12 1945 ರಲ್ಲಿ 'ಕೃಷ್ಣ ಸಂಧಾನ' ಯಕ್ಷಗಾನ ಮಹೋತ್ಸವವು ಡಾಕ್ಟರ್ ಎನ್. ಎಸ್. ಭಟ್ಟರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಭಾಗವತರು:-1 ಚೇರ್ಕಾಡಿ ಶಿವರಾಮ ಹೆಗ್ಡೇರು, 2. ಕಳ್ಳೂರು ಶೀನಪ್ಪ ಹೆಗ್ಡೇರು. ಮೃದಂಗ ವಾದಕರು: 1 ತೋನ್ಸ ನಾಬ್ಲ ಶೆಟ್ರು. 2 ಮಾಸ್ತರ್ ಪರ್ಕಳ. ಧರ್ಮರಾಜ, ಸಂಜೀವ ಶೆಟ್ರು ಪುರೋಹಿತ..ಅರ್ದಿ ಮಂಜೈ ಶೆಟ್ರು. ಕೌರವ. ಶೀರೂರ್ ಹಿರಿಯಣ್ಣ ಸೆಟ್ರು. ಅರ್ಜುನ: ಎಚ್. ರಾಮಣ್ಣ ಶೆಟ್ರು. ಕೃಷ್ಣ:-ಶಿವಪುರ ಪಂಡಿತರು. ಬಲರಾಮ..ಹಿಲಿಯಾಣ ಮುತ್ತಣ್ಣ ಶೆಟ್ರು. ಭೀಮ: ಶೀರೂರ್ ನಾಗಯ್ಯ ಶೆಟ್ರು. ದ್ರೌಪದಿ: ಬೇಳೂರ್ ರಾಮಣ್ಣ ಶೆಟ್ರು.

ನಿರೀಕ್ಷಣೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು.
ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು.

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ,
ಇವರು

'ಮುಕ್ತಿ'

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯಲ್ಲಿ
ಬೇಗನೇ ಪ್ರದರ್ಶಿಸಲಿರುವರು.

ಲೇಖಕರು, ನಿರ್ಮಾಣಕರು ಮತ್ತು ನಿರ್ದೇಶಕರು:—
ಶ್ರೀ. ಯು. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇದೊಂದು ನವೀನ ಪ್ರಯೋಗ. ಕನ್ನಡಿಗರಿಗೆ ಇದೊಂದು ಸುಸಂಧಿ. ನವೀನ ಪಾತ್ರವರ್ಗದವರು ಕರ್ನಾಟಕ ರಂಗಭೂಮಿಯ ಕಳೆಯನ್ನು ಹೆಚ್ಚಿಸಿ, ತನ್ಮೂಲಕ ಕಲಾಸೇವೆಯನ್ನು ಮಾಡಲಿರುವರು.

ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡಕೊಳ್ಳಿರಿ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧॥ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ್, ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬರಮಡಿ ಸ್ಟೋರ್ಸ್. ದಾವಣಗೇರಿ:—ದಾವಣಗೇರಿ ಪ್ರೆಸ್ಸ್, ಆರ್ ಎಲ್. ಕಮಲದಾಸ, ಕೆಮಿಸ್ಟ್, ಹಾವೇರಿ ಬ್ಯಾಡಗಿ.

Ayurveda Oushadalaya, GADAG CITY.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,
F. D. s. (A. E) Tollygunge, Calcutta
ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ದೇವಸ್ಥಾನದಿಂದ ಪ್ರಕಟಣೆ

ಇದೇ ಬರುವ 1946ನೇ ಇಸವಿಯ ಮಾಸು ತಾರೀಕು 9ರಲ್ಲು ಶ್ರೀ ಮೂಕಾಂಬಿಕಾ ದೇವಳ ಸನ್ನಿಧಿಯಲ್ಲಿ ಅಷ್ಟಬಂಧ ಕಲಶ ಮಹೋತ್ಸವವನ್ನು ನೆರವೇರಿಸುವದೆಂತ ಶ್ರೀ ದೇವಳ ಮೊಕ್ತೇಸರರು ನಿಶ್ಚಯಿಸಿದ ಪ್ರಯುಕ್ತ ಸದ್ರಿ ಕೆಲಸಕ್ಕೆ ಹೇರಳ ಹಣ ಬೇಕಾದ್ದರಿಂದ ಮೊಕ್ತೆಸರರ ಪರವಾಗಿ ಎಕ್ಸಿಕ್ಯುಟಿವ್ ಆಫೀಸರನಾದ ನಾನು ಈ ಮೂಲಕ ಸರ್ವ ಭಕ್ತಾದಿಗಳಿಗೂ ತಮ್ಮ ಯಥಾಶಕ್ತಿ ಹಣ ಸಹಾಯ ಮಾಡಬೇಕಾಗಿ ಕೋರುತ್ತೇನೆ. ಹಣವನ್ನು ಕಳುಹಿಸುವವರು ದೇವಳ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ. ಎಡ್ತರೆ ಮಂಜಯ್ಯ ಶೆಟ್ರು, ಎಡ್ವೋಕೇಟ್, ಕುಂದಾಪುರ, ಕಲಶ ಫಂಡಿನ ಕೋಶಾಧಿಕಾರಿಯಾದ ಇವರಿಗೆ ಹಣವನ್ನು ಕಳುಹಿಸಬಹುದು. ಅಥವಾ ಶ್ರೀ ದೇವಳ ಎಕ್ಸಿಕ್ಯುಟಿವ್ ಆಫೀಸರ್ ಸಿ ಎಚ್. ಶೆಟ್ಟಿ ಇವರಿಗೆ ಕಳುಹಿಸಬಹುದೆಂದು ಇಂಗಿತ ಸರ್ವ ಭಕ್ತಾದಿಗಳಿಗೂ ಈ ಮೂಲಕ ತಿಳಿಸಿಯದೆ.

C. H. SHETTY,
E. O.

ರಾಷ್ಟ್ರಲಿಪಿ–ಸಮಸ್ಯೆ

ರಾಷ್ಟ್ರದ ಏಕೀಕರಣಕ್ಕೆ ರಾಷ್ಟ್ರಭಾಷೆಯ ಆವಶ್ಯಕತೆ ಎಷ್ಟಿದೆಯೆಂಬುದು ಎಲ್ಲರೂ ತಿಳಿದ ವಿಷಯ. ರಾಷ್ಟ್ರದ ಅಂತಃಪ್ರಾಂತೀಯ ವ್ಯವಹಾರಗಳನ್ನು ಸಾಗಿಸುವುದಕ್ಕಾಗಿ ರಾಷ್ಟ್ರಭಾಷೆಯು ಬೇಕೇಬೇಕು. ಮಕ್ಕಳಿಗೆ ಪ್ರಾರಂಭಿಕ ಶಿಕ್ಷಣವನ್ನು ಅವರ ಪ್ರಾಂತೀಯ ಭಾಷೆಯಲ್ಲಿ ಕೊಡಬೇಕು. ಮಾಧ್ಯಮಿಕ ಶಿಕ್ಷಣದಲ್ಲಿ ರಾಷ್ಟ್ರಭಾಷೆಗೆ ಸ್ಥಾನವಿರಬೇಕು. ಅನಂತರದ ಉಚ್ಚ ಶಿಕ್ಷಣದಲ್ಲಿ ವಿಶ್ವ ಸಾಹಿತ್ಯಕ್ಕೆ ಸಂಬಂಧಪಟ್ಟ ಯಾವ ಭಾಷೆಯನ್ನು ಬೇಕಾದರೂ ಅವರು ಕಲಿಯಬಹುದೆಂಬ ವಿಚಾರಗಳು ಬಹುಮಟ್ಟಿಗೆ ಮಾನ್ಯವಾಗಿವೆ. ಈ ದೃಷ್ಟಿಯಿಂದಲೇ 1938ರಲ್ಲಿ ಕಾಂಗ್ರೆಸ್ ಸರಕಾರವು ಅಧಿಕಾರದಲ್ಲಿರುವಾಗ ಮಾಧ್ಯಮಿಕ ಶಾಲೆಗಳಲ್ಲಿ ರಾಷ್ಟ್ರಭಾಷೆಯಾದ ಹಿಂದುಸ್ಥಾನಿಯ ಪ್ರವೇಶವನ್ನು ಮಾಡಿಸಿತು. ಪ್ರಾಂತೀಯ ಭಾಷೆಗೂ ಪ್ರಾಧಾನ್ಯವು ಕೊಡಲಾಯಿತು

ಹಿಂದುಸ್ತಾನಿಯನ್ನು ರಾಷ್ಟ್ರಭಾಷೆಯಾಗಿ ಕಾಂಗ್ರೆಸ್ಸು ಸ್ವೀಕರಿಸಿದ ನಂತರ ಅದರ ಪ್ರಚಾರವು ಮುಖ್ಯತಃ 'ಹಿಂದೀ ಸಾಹಿತ್ಯ ಸಮ್ಮೇಲನ, ಪ್ರಯಾಗ'ದ ನೇತೃತ್ವದಲ್ಲಿ ನಡೆಯತೊಡಗಿತು. ಸಮ್ಮೇಲನದ ನೇತೃತ್ವದಲ್ಲಿ 1918ರಲ್ಲಿ 'ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ'ಯು ಸ್ಥಾಪಿತವಾಯಿತು ಆಗ ಹಿಂದಿಯೆಂದರೆ ಹಿಂದಿ–ಹಿಂದುಸ್ತಾನಿ ಅಥವಾ ಇದಿ ಹಿಂದುಸ್ಥಾನದ ರಾಷ್ಟ್ರಭಾಷೆಯೆಂದೇ ಅರ್ಥಮಾಡಲಾಗಿತ್ತು. ಹಿಂದುಸ್ತಾನಿ ಮತ್ತು ಹಿಂದಿ ಇವು ಎರಡು ಭಾಷೆಗಳೆಂದು ತಿಳಿಯಲ್ಪಡಲಿಲ್ಲ. ಆದುದರಿಂದ ಸಭೆಗೆ ಹಿಂದುಸ್ತಾನಿ ಪ್ರಚಾರ ಸಭೆಯೆಂದು ನಾಮಕರಣ ಮಾಡುವ ಬದಲು ಹಿಂದಿ ಪ್ರಚಾರ ಸಭೆಯೆಂದು ಹೆಸರಿಡಲಾಯಿತು. ತನ್ನ ನೀತಿ ಪರಿವರ್ತನೆಯಿಂದ ಹಿಂದಿಸಾಹಿತ್ಯ ಸಮ್ಮೇಲನವು ಬೇರೆಯಾದಂದಿನಿಂದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯು ಸ್ವತಂತ್ರವಾಗಿ ಪ್ರಚಾರ ಮಾಡತೊಡಗಿತು. ಸಭೆಯು ಪ್ರಚಾರಮಾಡುವ ಭಾಷೆಯು ಹಿಂದುಸ್ತಾನಿಯೆಂಬುದು ಸಭೆಯ ಪುಸ್ತಕಗಳನ್ನು ನೋಡಿದರೆ ತಿಳಿಯದಿರದು

ಕಾಂಗ್ರೆಸ್ಸು ರಾಷ್ಟ್ರಭಾಷೆಯಾಗಿ ಸ್ವೀಕರಿಸಿದ ಹಿಂದುಸ್ತಾನಿಯ ವಿವರಣೆ ಹೀಗಿದೆ—ಹಿಂದುಸ್ತಾನಿಯು ಉತ್ತರ ಹಿಂದುಸ್ಥಾನದ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಹಿಂದುಗಳೂ ಮುಸಲ್ಮಾನರೂ ಮಾತಾಡುವ ಭಾಷೆ. ಇದನ್ನು ದೇವನಾಗರಿ ಮತ್ತು ಫಾರಸಿ ಎರಡೂ ಲಿಪಿಗಳಲ್ಲಿ ಬರೆಯುತ್ತಾರೆ. ಈಗ ಬಳಕೆಯಲ್ಲಿರುವ ಹಿಂದಿ ಉರ್ದು ಎಂಬ ಹೆಸರುಗಳು ಹಿಂದುಸ್ತಾನಿಯ ಸಾಹಿತ್ಯಕ ರೂಪಗಳು.

ಹಿಂದಿ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಅಧಿಕವಾಗಿವೆ. ಉರ್ದು ಭಾಷೆಯಲ್ಲಿ ಅರಬಿ ಫಾರಸಿ ಶಬ್ದಗಳು ಅಧಿಕ ಹಿಂದಿಯು ಹಿಂದುಗಳ ಸಾಹಿತ್ಯಿಕ ಭಾಷೆ; ಉರ್ದು ಮುಸಲ್ಮಾನರ ಸಾಹಿತ್ಯಿಕ ಭಾಷೆ. ಹಿಂದುಸ್ತಾನಿಯು ಎಲ್ಲಾ ಜನರೂ ಮಾತಾಡುವ ಭಾಷೆ.

ಹಿಂದುಗಳ ಭಾಷೆಯಾದ ಹಿಂದಿಯನ್ನು ಮುಸಲ್ಮಾನರು ಕಲಿಯಬಾರದೆಂದೂ ಮುಸಲ್ಮಾನರ ಉರ್ದುವನ್ನು ಹಿಂದುಗಳು ಕಲಿಯಬಾರದೆಂದೂ ಹೇಳುವವರು ಕೆಲವರಿದ್ದಾರೆ. ಇದು ಸಂಕುಚಿತ ವಿಚಾರ. ಮಾತಾಡುವ ಭಾಷೆ ಹಿಂದುಗಳದೂ ಮುಸಲ್ಮಾನರದೂ ಒಂದೆ. ಸಾಹಿತ್ಯಿಕ ಭಾಷೆ ಮಾತ್ರ ಬೇರೆ ಬೇರೆ. ನಾಗರಿ ಲಿಪಿಯಲ್ಲಿ ಬರೆದುದೆಲ್ಲಾ ಹಿಂದಿಯೆಂತಲೂ ಫಾರಸಿ ಲಿಪಿಯಲ್ಲಿ ಬರೆದುದೆಲ್ಲಾ ಉರ್ದುವೆಂತಲೂ ತಿಳಿಯುವುದರಲ್ಲಿ ಅರ್ಥವಿಲ್ಲ. ಮಾತಾಡುವ ಭಾಷೆಯಲ್ಲಿ ಹಿಂದು ಮುಸಲ್ಮಾನರಿಗೆ ಭೇದವೆಂದರೆ ಲಿಪಿಭೇದ ಮಾತ್ರ. ಯಾವ ಭಾಷೆಯನ್ನು ಯಾವ ಲಿಪಿಯಲ್ಲಿ ಬೇಕಾದರೂ ಬರೆಯಬಹುದು. ಕನ್ನಡ ಲಿಪಿಯಲ್ಲಿ ಬರೆದ ಸಂಸ್ಕೃತವು ಸಂಸ್ಕೃತವೇ ಅಲ್ಲದೆ ಕನ್ನಡವಾಗುವುದಿಲ್ಲ. ಅದರಂತೆ ನಾಗರಿ ಮತ್ತು ಫಾರಸಿ ಲಿಪಿಯಲ್ಲಿ ಬರೆದ ಹಿಂದುಸ್ತಾನಿ ಭಾಷೆಯೂ ಒಂದೆ.

ಮೊದಲಿಂದಲೂ ಹಿಂದಿಯು ಹಿಂದುಗಳ ಭಾಷೆಯೆಂದಾಗಲೀ ಉರ್ದು ಮುಸಲ್ಮಾನರ ಭಾಷೆಯೆಂದಾಗಲೀ ನಡೆದುಬಂದಿಲ್ಲ. ಲಿಪಿಭೇದವು ಆ ಕಾಲದಲ್ಲೇ ಇದ್ದಿತಾದರೂ ಆಗ ಯಾವ ಜಗಳವೂ ಇರಲಿಲ್ಲ. ಪ್ರೇಮಚಂದ, ಸುದರ್ಶನ, 'ಉಗ್ರ' ಮುಂತಾದ ಹಿಂದಿ ಲೇಖಕರು ಉರ್ದುವಿನಲ್ಲಿ ಅಪಾರ ಪಾಂಡಿತ್ಯವುಳ್ಳವರು. ಅಂತೆಯೇ ಜಾಯಸಿ, ಉಸ್ಮಾನ ... ಮುಂತಾದ ಮುಸಲ್ಮಾನರು ಹಿಂದಿಯಲ್ಲಿ ಅಪಾರ ಪಾಂಡಿತ್ಯವುಳ್ಳವರಾಗಿದ್ದರು. ಹಿಂದುಸ್ತಾನಿ ಭಾಷೆಯು ದೇವಾಲಯ, ಮಸೀದಿ ಮತ್ತು ವೇದ, ಕುರಾನು ಎಂಬ ಭೇದವಿಲ್ಲದೆ ಎಲ್ಲಾ ಕಡೆಗಳಲ್ಲಿಯೂ ನಲಿದಾಡಿಕೊಂಡಿತ್ತು.

ಲಿಪಿಭೇದಕ್ಕೆ ಸಾಂಪ್ರದಾಯಿಕ ಯಾ ಜಾತೀಯ ಮಹತ್ವ ಕೊಡುವುದು ಸರಿಯಲ್ಲ. ಸ್ವತಂತ್ರತೆಯ ತರಂಗಗಳು ಮತ ಸಂಪ್ರದಾಯಕ್ಕೆ ಮಹತ್ವವಿಲ್ಲವೆಂಬುದನ್ನು ನಮಗೆ ಕಲಿಸಿವೆ. ದಾಸ್ಯತೆಯ ಶೃಂಖಲೆಯು ಹಿಂದೂ ಮಹಮ್ಮದೀಯರದು ಒಂದೇ. ಹಿಂದುಗಳೂ ಮುಸಲ್ಮಾನರೂ ಇದೀ ದೇಶದಲ್ಲಿದ್ದು ಜೀವಿಸಬೇಕು. ಅವರೆಲ್ಲರೂ ಒಟ್ಟಾಗಿ ಹೋರಾಡಬೇಕು. ರಾಷ್ಟ್ರಸೇವಕರಿಗೆ ಜಾತಿಯಿಲ್ಲ; ಮತವಿಲ್ಲ; ಸಾಂಪ್ರದಾಯವಿಲ್ಲ. ಅವರು ರಾಷ್ಟ್ರಕ್ಕಾಗಿ ತಮ್ಮ ವ್ಯಕ್ತಿಗತ ಅಥವಾ ಜಾತಿಗತ ಸ್ವಾರ್ಥವನ್ನು ತ್ಯಾಗ ಮಾಡಲಿಕ್ಕೇ ಬೇಕು. ಹೀಗಿರುವಾಗ ಲಿಪಿಯಂತಹ ಅಲ್ಪ ಪ್ರಶ್ನೆಯನ್ನು ಮುಂದಿಟ್ಟು ಜಗಳಾಡುವುದು ಸರಿಯಲ್ಲ. ರಾಷ್ಟ್ರಭಾಷೆಯನ್ನು ಇತ್ತೀಚೆಗೆ ಮಹಾತ್ಮರು ವಿವರಿಸಿದ ಮೇರೆಗೆ ಎರಡೂ ಲಿಪಿಗಳಲ್ಲಿ ಕಲಿತು ರಾಷ್ಟ್ರೀಯ ಐಕ್ಯಕ್ಕೆ ನೆರವಾಗುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ.

ಮಹಾತ್ಮರ ರಾಷ್ಟ್ರಭಾಷೆಯ ಸಂಬಂಧವಾದ ವಿಚಾರ—'ರಾಷ್ಟ್ರಭಾಷೆಯನ್ನರಿತವರಾದ ನಾವು ಅದನ್ನು ಎರಡೂ ಲಿಪಿಗಳಲ್ಲಿ ಬರೆಯಲೂ ಭಾಷೆಯನ್ನು ಎರಡೂ ಶೈಲಿಗಳಲ್ಲಿ ಮಾತಾಡಲೂ ಸಮರ್ಥರಾದರೆ ಮಾತ್ರ ಅದು ನಿಜವಾದ ಹಿಂದುಸ್ತಾನಿಯಾಗುವುದು.'

(ಹಿಂದುಸ್ತಾನಿಯ ಅನುವಾದ.)

A. R. Navada,
Hindi Organiser

ಪ್ರಕಟಣೆ

ದ. ಕ. ಜಿಲ್ಲಾ ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ.

(ರಿಜಿಸ್ಟರ್ಡ್)

ಈ ಸಂಘಕ್ಕೆ ... ವು ಮುಂಬಯಿಯಲ್ಲಿ ಧನ ಸಂಗ್ರಹ ಮಾಡುವಾಗ ಶ್ರೀಗಳಾದ ಶಿರ್ವ ಮಾಧವ ಶ್ಯಾನುಭಾಗರು, ಪಾದೂರು ಕೃಷ್ಣ ಸೆಟ್ರು, ಮಡುಂಬು ಉಜ್ಜಣ್ಣ ಸೆಟ್ರು, ಸೂಡ ವೀರಪ್ಪ ಸೆಟ್ರು, ಮಾರ್ಪ ಸೇಸ ಸೆಟ್ರು, ಸಾಂತೂರು ರಾಜು ಸೆಟ್ರು, ಕಲ್ಲಟ್ಟೆ ನಿರಲ ಸೆಟ್ರು, ಮಡಲಬೆಟ್ಟು ಬೀಡು ದಾಬ ಸೆಟ್ರು, ಸ್ಯಾರ್ಪದೆ ಮನೆ ವಾಸು ಸೆಟ್ರು. ಕುತ್ಯಾರು ... ತನ ಸೆಟ್ರು, ಕುತ್ಯಾರು ನಂದ್ಯಪ್ಪ ಸೆಟ್ರು, ... ನರ್ಸ ಸೆಟ್ರು, ಕೆ. ಪಿ ಮುದ್ದಣ್ಣ ಸೆಟ್ರು ಮೊದಲಾದ ಮಹನೀಯರು ನಮಗೆ ತಮ್ಮ ತನುಮನಧನವನ್ನಿತ್ತು ಸಹಾಯಮಾಡಿ, ನಮ್ಮ ಕೆಲಸವನ್ನು ಒಳ್ಳೆಯ ರೀತಿಯಾಗಿ ನೆರವೇರಿಸಿದುದಕ್ಕೆ, ನಾವು ಸಂಘದ ಪರವಾಗಿ ನಮ್ಮ ಹೃತ್ಪೂರ್ವಕ ಅಭಿವಂದನೆಯನ್ನು ... ಸುತ್ತೇವೆ ಇವರಲ್ಲದೆ ಇತರ ಎಲ್ಲ ಮಹನೀಯರಿಗೂ ನಮ್ಮ ಧನ್ಯವಾದಗಳು.

... ರೀತಿಯಲ್ಲಿ ಪ್ರೋತ್ಸಾಹವಿತ್ತು, ವಿದ್ಯಾಸೇವೆಯನ್ನು ನಮ್ಮ ಕೈಯಿಂದ ಮಾಡಿಸಬೇಕಾಗಿ ವಿನಂತಿ.

ಕೆ. ಮುದ್ದು ಸೆಟ್ಟಿ,
President,
K. Yellappa Shetty.
Treasurer.
K. Nagappa Shetty.
Member.
B: N. Vidyawardhaka Sangha,
(Regd.) SHIRVA.



Approved firm by the Govt. of Mysore
Certified by the Agent of the Govt. of Cylone indian.

CHAMPAE'S
Snow & Castrex
(Sole Distributers for (India.)
Prop: K. G. NAYAK,
Santhekatte, UDIPI, S. K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. **1-8-0** ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. **2/-**
ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ಇಂದ್ರಭವನ ಕಾಫಿ ಹೋಟೆಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ – ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಧಾತುಪುಷ್ಟಿ ಲೇಹ
ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ
ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)
ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.
ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)
ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.
ರಾತ್ತಲ್ 1ರ 10-0-0, ½ ರಾತ್ತಲ್ 5-4-0, ¼ ರಾತ್ತಲ್ 2-12-0.
ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು
ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾರೆಂಟಿ ಬರದಲ್ಲಿ ರೋಗಿಗಳಿಗೆ ತಕ್ಕುದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

(ಆಕೇ ಪುಟದಿಂದ ಮುಂದುವರಿದುದು)

ಸರಕಾರೀ ವಕೀಲರ ಅಡ್ಡ ಸವಾಲು

ಸ ವ—ಊರ ಶನಿಭೋಗರೇ; ಇಂದಿಗೆ ಮೂರೇ ದಿನಗಳಿಗೆ ಹಿಂದೆ ರೂಪಾಯಿ 750ಕ್ಕೆ ನೀವೊಂದು ಆಸ್ತಿಯನ್ನು ಅಡವಿಗೆ ಹಿಡಿದಿರಾ?

ಶನಿ—ಹೌದು.

ಸ. ವ—ಆ ಹಣವು ಅದು ವರೆಗೆ ನಿಮ್ಮ ಪೆಟ್ಟಿಗೆಯಲ್ಲೇ ಇತ್ತೋ, ಬೇಂಕಿನಿಂದ ತೆಗೆದಿರಾ, ಸಾಲಮಾಡಿದಿರಾ, ಅಥವಾ ಕಾಣಿಕೆಯಾಗಿ ಬಂತೇ ಎಂಬುದನ್ನೊಮ್ಮೆ ಹೇಳಿ ಬಿಡುವಿರಾ?

ಶನಿ—ಅದು...ಅ ಅ ಅ....ನನ್ನ........

ಸ. ವ—ಗಾಬರಿಯಾಗಬೇಡಿ ಶನಿಭೋಗರೇ. ಇದು ಲೆಕ್ಕಾಚಾರದ ಮಾತಾದ್ದರಿಂದ ಕೋರ್ಟಿನಲ್ಲಿ ಸತ್ಯವನ್ನೇ ಆಡುವದು ವಾಸಿ. ಸಾಕ್ಷಿಗಾರರಾದ ನಿಮಗೆ ನೈತ್ರಿ ಕಾಣಿಕೆಯಾಗಿ ಆದಾಯ ಹಿಂದು ಸೂರೆಖೋರರಿಂದ ಅದು ಬಂದಿತಲ್ಲವೆ?

ಭುಲಾಭಾಯಿ ದೇಸಾಯಿ—ನಾನೀ ಪ್ರಶ್ನೆಯನ್ನು ಆಕ್ಷೇಪಿಸುತ್ತೇನೆ. ಇದು ಆರೋಪ ಹೊರತು ಅಡ್ಡ ಸವಾಲಲ್ಲ.

ಜಡ್ಜ—ಆ 750 ರೂಪಾಯಿ ನಿಮಗೆಲ್ಲಿಂದ ಬಂತು?

ಶನಿಭೋಗ—ಅದು ನನ್ನ ಹಣವೇ.

ಸ. ವ—ಅದು ಹೌದು, ನಿಮ್ಮ ಹಣವೇ! ನಿಮ್ಮದಾಗುವ ಮೊದಲು ಅದು ಯಾರ ಹಣವಾಗಿತ್ತು—ಎಂದು ನಾನು ಕೇಳುತ್ತೇನೆ.

ಭುಲಾಭಾಯಿ—ಅದನ್ನು ಸಾಕ್ಷಿಗಾರ ಉತ್ತರಿಸಬೇಕಾಗಿಲ್ಲ.

ಸ.ವ—ಇರಲಿ. ನಿಮ್ಮ ಸಂಬಳವೆಷ್ಟು?

ಶನಿ—18 ರೂಪಾಯಿ.

ಸ. ವ—ಮನೆಯಲ್ಲೆಷ್ಟು ಜನರಿದ್ದೀರಿ?

ಶನಿ—ನಾಲ್ಕು ಮಂದಿ ಪ್ರಾಯಸ್ಥರು; ಏಳು ಮಕ್ಕಳು.

ಸ. ವ—ಬೇರೇನಾದರೂ ಉಪವೃತ್ತಿಯಿದೆಯೆ?

ಶನಿ—ಒಂದು ತೋಟವಿದೆ. ಮತ್ತು ಗದ್ದೆ ಸಾಗುವಳಿ ಮಾಡಿಸುತ್ತೇನೆ.

ಸ. ವ—ಅವುಗಳ ಒಟ್ಟು ಉತ್ಪತ್ತಿ ವರುಷಕ್ಕೊಂದು 150 ರೂಪಾಯಿಯೊಳಗೆ; ಅಲ್ಲವೆ?

ಶನಿ—ಹೌದು.

ಸ. ವ—ಶನಿಭೋಗರೇ; ನಿಮಗೂ ಗ್ರಾಮಧಿಕ್ಕಾರಿಗೂ ಸ್ನೇಹಾಚಾರವಿದೆ. ಉಂಟಲ್ಲ?

ಶನಿ—ಹೌದು.

ಸ. ವ—ಊರ ಧಿಕ್ಕಾರಿ ಯಾನೆ ಗ್ರಾಮ ಪಟೇಲ್‌ರಿಗೆ ಪ್ರತಿಯೊಂದು ಕಾರ್ಯಕ್ಕೂ ನಿಮ್ಮ ಸಲಹೆ ಬೇಕು.

ಶನಿ—ಹೂಂ, ಹೌದು. ಕೆಲವೊಮ್ಮೆ ಆಲೋಚನೆ ಹೇಳಬೇಕಾಗುತ್ತದೆ.

ಸ. ವ—ನಿಮ್ಮಿಂದ ಆಧಿ... ಧಿಕ್ಕಾರಿಯಿಂದಾಗಬೇಕಾದ ಪ್ರತಿಯೊಂದು ಸಹಾಯಕ್ಕೂ ಊರವರು ನಿಮ್ಮ ಆಶ್ರಯ ಪಡೆಯುವದಗತ್ಯ.

ಶನಿ—ಹಾಗಲ್ಲ; ಊರಿಗುಪಕಾರ ಮಾಡುವದು ನನ್ನ ಕರ್ತವ್ಯ.

ಸ. ವ—ನಿಜ. ಹಾಗೆಯೇ ಅದಕ್ಕೆ ಪ್ರತಿಯಾಗಿ ನಿಮಗುಪಕಾರ ಮಾಡುವದು ಊರವರ ಕರ್ತವ್ಯ. ಈ ಕರ್ತವ್ಯಾನುಸಾರವಾಗಿ ನಿಮಗೆ ಊರ ಮನೆ ಮನೆಗಳಿಂದೇನಾದರೂ ಮುಯ್ಯಿ, ಕಾಣಿಕೆ ಅಥವಾ ಸಹಾಯ ದೊರೆಯುವ ಸಂಪ್ರದಾಯವಿದೆಯೆ?

ಶನಿ—ಹಾಗಂದರೆ? ಹಾಗೇನೂ ನಾನು ಪಡಕೊಳ್ಳುವದಿಲ್ಲ.

ಸ. ವ—ನಿಮ್ಮ ಮಾತಿರಲಿ; ಊರವರು ಅದನ್ನು ಕೊಡುವ ಸಂಪ್ರದಾಯವಿಟ್ಟುಕೊಂಡಿದ್ದಾರೆಯೆ?

ಶನಿ—ನನಗೆ ಗೊತ್ತಿಲ್ಲ.

ಸ. ವ—ಗೊತ್ತಿಲ್ಲ? ನಿಮ್ಮ ಊರಲ್ಲಿ ಮದುವೆ, ಉಪನಯನ, ರಾಶಿಪೂಜೆ, ಇತ್ಯಾದಿಗಳು ನಡೆದರೆ ಮುಯ್ಯಿ ಇಡುವದು, ಹೊರೆ, ಸಾಮಾನು ಇತ್ಯಾದಿ ಸಹಾಯ ಸಲ್ಲಿಸುವ ಸಂಪ್ರದಾಯವೇ ಇಲ್ಲವೆ?

ಶನಿ—ಅದುಂಟು.

ಸ. ವ—ಊರ ಉಪಕಾರಿಯಾಗಿದ್ದವನೊಬ್ಬನಿಗೆ ಕಷ್ಟ ಕಾಲದಲ್ಲಿ ಸಹಾಯ ಸಲ್ಲಿಸುವ ಕ್ರಮವೂ ಇದೆಯಷ್ಟೆ?

ಶನಿ—ಅದೂ ಇದೆ.

ಸ. ವ—ಈ ಮಟ್ಟಿಗೆ ಉದಾರಿಗಳಾಗಿದ್ದ ಆದಾಯ ಹಿಂದು ಸೂರೆಖೋರರಿಂದ ಅಂತಹ ಸಹಾಯ ನಿಮಗೆ ಬಹಳವಾಗಿದೆ?

ಶನಿ—ಆಗಿರಬಹುದು.

ಸ. ವ—ಅದೆಷ್ಟು, ಹೇಗೆಂಬುದನ್ನು ಹೇಳಲು ನೀವೀಗ ತಯಾರಿಲ್ಲ?

ಶನಿ—ಇಲ್ಲ.

ಸ ವ—ಇರಲಿ; ನೀವು ಮತ್ತು ಊರ ಧಿಕ್ಕಾರಿ ಆಗಾಗ ಆರೋಪಿಗಳ ಅಂಗಡಿ ಕನಿಷ್ಠಿ ನಡಿಸಿದ್ದುಂಟಷ್ಟೆ. ಹಾಗೆ ಸಂದರ್ಶಿಸಿದುದಕ್ಕೇನಾದರೂ ದಾಖಲೆಯಿದೆಯೆ?

ಶನಿ—ಇಲ್ಲ. ಅದನ್ನು ನೋಡಿದವರಿದ್ದಾರೆ.

ಸ. ವ—ಯುದ್ಧಾರಂಭದ ಮೊದಲು ಆದಾಯ ಹಿಂದು ಸೂರೆಖೋರರು ಬಡತನದಲ್ಲಿದ್ದಾಗಲೂ ನೀವು ಊರ ಶನಿಭೋಗರಾಗಿದ್ದಿರಿ.

ಶನಿ—ಹೌದು.

ಸ. ವ—ಅವರು ಫಕ್ಕನೇ ಮಿಲಿಯಾಧೀಶರಾದುದು ಹೇಗೆ ಎಂಬುದರ ಗುಟ್ಟು ನಿಮಗೇನಾದರೂ ಗೊತ್ತಿದೆಯೆ?

ಶನಿ—ದೇವರು ಕಣ್ಣು ತೆರೆದು ನೋಡಿದರೆ........

ಸ. ವ—ತತ್ವವಾಗಿರಲಿ ಶನಿಭೋಗರೇ; ದೇವರು ಕಣ್ಣು ತೆರೆದು ನೋಡುವದು, ಗ್ರಾಮ ಧಿಕ್ಕಾರಿಗಳು ಕಣ್ಣು ಮುಚ್ಚಿಕೊಳ್ಳುವದು ಒತ್ತಟ್ಟಿಗಿರಲಿ. ಅವರು ಫಕ್ಕನೇ ಧನಿಕರಾದುದಕ್ಕೆ ಪ್ರತ್ಯಕ್ಷ ಕಾರಣವೇನಾದರೂ ನಿಮಗೆ ಗೊತ್ತುಂಟೆ?

ಶನಿ—ಇಲ್ಲ; ಅವರಿಗೆಲ್ಲಿಯೋ ನಿಧಿ ಸಿಕ್ಕಿರಬಹುದೆಂದು ಜನ ಹೇಳುತ್ತಾರೆ.

ಸ ವ—ಹಾಗೆ ಯಾರಿಗಾದರೂ ನಿಧಿಯೋ ಕೊಪ್ಪರಿಗೆಯೋ ಸಿಕ್ಕಿದರೆ ಸರಕಾರದ ಹಕ್ಕಿನ ಬಗ್ಗೆ ಅದನ್ನು ತಪಾಸಣೆ ನಡಿಸುವದು ನಿಮ್ಮ ಕರ್ತವ್ಯವಾಗಿರಲಿಲ್ಲವೆ?

ಶನಿ—ಅಂತಹದೇನೂ ನಮ್ಮ ತಿಳುವಳಿಕೆಗೆ ಬಂದಿಲ್ಲ. ಬೇರೆ ಊರಿಗೆ ಹೋದಲ್ಲಿ ಕೊಪ್ಪರಿಗೆ ಸಿಕ್ಕಿದ್ದರೆ?

ಸ. ವ—ಒಂದೋ ಕೊಪ್ಪರಿಗೆ ಸಿಕ್ಕಿರಬೇಕು, ಇಲ್ಲವೇ ಒಂದಕ್ಕಿಪ್ಪತ್ತು ಮುನಾಫೆಯಿಟ್ಟು ಮಾರಿರಬೇಕು, ಹೊರತು ಹೀಗೆ ಆಕಸ್ಮಾತ್ ಧನಿಕರಾಗುವದು ಅಸಾಧ್ಯವೆಂಬುದನ್ನು ಲೆಕ್ಕ ಅಳತೆ ಬಲ್ಲ ನೀವು ಒಪ್ಪುತ್ತೀರಿ?

ಶನಿ—ಹೌದು.

ಲಾಭಭಾಯಿಯ ಮರು ಸವಾಲು

ಲಾಭಭಾಯಿ—ಕೊಪ್ಪರಿಗೆ ದೊರೆಯುವದು ಅಥವಾ ಕಳ್ಳ ವ್ಯಾಪಾರದಿಂದ ಶ್ರೀಮಂತರಾಗಲು ಸಾಧ್ಯವಿದ್ದಂತೆಯೇ ಕಾಯಿದೇಬದ್ಧ ಲಾಭಾಂಶವುಳ್ಳ ವ್ಯಾಪಾರವು ವಿಶೇಷವಾಗಿ ನಡೆದರೆ ಧನಿಕರಾಗಲು ಸಾಧ್ಯವಿಲ್ಲವೆ?

ಶನಿ—ಇದೆ.

ಲಾಭಭಾಯಿ—ಆದಾಯ ಹಿಂದು ಸೂರೆಖೋರರಿಗೆ ಒಂದು ಕ್ಷಣವೂ ಬಿಡುವಿಲ್ಲದಷ್ಟು ವಿಶೇಷ ವ್ಯಾಪಾರವಿತ್ತು, ಅಲ್ಲವೆ?

ಶನಿ—ಹೌದು.

೩ನೇ ಡಿಫೆನ್ಸ್ ಸಾಕ್ಷಿಗಾರನಾದ ಗ್ರಾಮ ಧಿಕ್ಕಾರಿಯನ್ನು ಕರೆದಾಗ, ಶನಿಭೋಗರ ಸಾಕ್ಷ್ಯದ ನಂತರ ಇದು ಅನಗತ್ಯವೆಂದು ಕೋರ್ಟು ತೀರ್ಮಾನಿಸಿತು. ೪ನೇ ಸಾಕ್ಷಿ ಸಾವುಗಾರ ಸರ್ವಭಂಜಕಯ್ಯ ಕ್ಷಯ ಪೀಡಿತ(ಹಣದಲ್ಲೋ ದೇಹದಲ್ಲೋ ಎಂಬ ವಿವರವಿಲ್ಲ) ನಾಗಿದ್ದಾನೆಂದು ಡಾಕ್ಟರರ ಸರ್ಟಿಫಿಕೇಟು ಹಾಜರಾಯಿತು. 5—6—7—8ನೇ ಸಾಕ್ಷಿದಾರರಾದ ಕುಳವಾರು ಚಂಚಲಮ್ಮ, ಕಂಟ್ರಾಕ್ಟರ್ ಕಾಲಸಿದ್ಧ, ಮನಿ(ಹಣ)ಗಾರ ಮರ್ದನ ರಾವ್, ತಿನಸು ಫೇಕ್ಟರಿ (ಇನ್ಸ್ಪೆಕ್ಟರ್) ತಗಣೇಕಾರರ ಸಾಕ್ಷ್ಯಗಳನ್ನು ಡಿಫೆನ್ಸ್ ವಕೀಲರೇ ಬೇಡವೆಂದರು. ಅಲ್ಲಿಗೆ ಡಿಫೆನ್ಸ್ ವಿಚಾರಣೆ ಮುಗಿಯಿತು.

(ಪಕ್ಷದೆಯ 'ಪಿಯರಿಂಗ್' ಮತ್ತು 'ಜಜ್ಜ್‌ಮೆಂಟ್' ಮುಂದಿನ ವಾರ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

1000's SAVED

MARGARET'S

FITS CURE

Stops children's fits in 3 minutes.

Ask your chemist for a box.

Sole Agents.-

BRIGHTSTAR AGENCIES,

Hospital Rd, Udipi, S. K.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.

ಹೆಚ್ಚಿನ ವಿವರಗಳಿಗೆ

ಅತ್ತೂರು ವಾಸುದೇವ ಉಡುಪ

ಸಂಪಾದಕ

ಶ್ರೀ ರವಿಪ್ರಸಾದ ಜ್ಯೋತಿಷಾಲಯ

ಕೊಯಂಬತ್ತೂರು

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ನೀತಿಧರ್ಮ	0	6	0
2	ಸಾಮುದ್ರಿಕ ಶಾಸ್ತ್ರ	0	8	0
3	ಬಾಲ ರಾಮಾಯಣ	0	5	0
4	ಸುಕನಾ ಚರಿತ್ರೆ	0	5	0
5	ಕೊಳಲು ಕೃಷ್ಣ	0	8	0
6	ಗುರುಪೀಠಗಳ ಅವನತಿ	0	8	0
7	ದ್ವೈತಮತ ಖಂಡನೆ	0	6	0
8	ಧರ್ಮಸಂಕಟ	0	4	0
9	ಪ್ರೂರೂರವ	0	8	0
10	ನಿಶ್ಚಯ ಜ್ಞಾನ	0	8	0
11	ವಿದ್ಯಾರಣ್ಯ ಕಾವ್ಯಂ	1	0	0
12	ಚಂದ್ರಗುಪ್ತ ಚಕ್ರವರ್ತಿ	1	0	0
13	ಸ್ವದೇಶಿ	0	4	0
14	ಹರಿಜನ ಸೇವೆ	0	4	0
15	Gauthama the Buddha	0	8	0
16	ಪ್ರಾರ್ಥನೆ	0	2	0
17	ಹಿಂದೀ ಪಹಲಿ ಪೋತಿ	0	2	0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣ ಭಾಷಾ ಪುರಾಣಗ್ರಂಥ)	0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮದ್ಮಾಳತ್ತ್ ಮದ್ಮಾಯೆ	0	4	0
ಜನಮುರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	0	2	0
ಮಿತ್ತ್ಯ ನಾರಾಯಣ ಕತೆ	0	1	0
ಸತೀ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹುಟ್ಟಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದು ವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಛಾಯಾಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2-8-0. **ದಪ್ಪವಾದ ಹೊದಿಕೆಯುಳ್ಳದ್ದು:**

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, ಉಡುಪಿ.

ಬೆಲೆ: 3-0-0

(ದಪ್ಪವಾದ ಹೊದಿಕೆಯುಳ್ಳದ್ದು)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ

ನವಭಾರತ ಬುಕ್ ಡಿಪೊ, ಉಡುಪಿ

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ 3?] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ 30] Founder: SRI A. B. SHETTY. [No. 20

ಉಡುಪಿ • 17—1—1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ, ತಲೆನೋವು, ಶೀತ, ನೋವು, ಉಳುಕು, ಕತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌ ಷಧ, ಜಳುಕಿಲ್ಲ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE CANARA MUTUAL ASSURANCE COMPANY, LTD.,

(UDIPI, S. India.)

Good Wishes

We thank all our Policy-holders, Agents, Medical Examiners and well-wishers for their co-operation and wish them a happy, peaceful and prosperous life in the NEW YEAR.

B. Vaikunta Baliga,
Chairman.
BOARD OF DIRECTORS.

ಲಲಿತಕಲಾ ಕರ್ನಾಟಕ ಸಂಗೀತ ಸಭಾ, ಮುಂಬಯಿ

ಇವರು

ಶ್ರೀ ವಿಷ್ಣುಮೂರ್ತಿ ದೇವಾಲಯ, ಕೆಮುತ್ತೂರು (ಉಡುಪಿ)

ಇದರ ಸಹಾಯಾರ್ಥವಾಗಿ

ಸತೀ ಬೃಂದಾದೇವಿ

ಎಂಬ ನವರಸಭರಿತವಾದ ಪೌರಾಣಿಕ ಕನ್ನಡ ನಾಟಕವನ್ನು ಇದೇ ಬರುವ ತಾ. 8-2-46ನೇ ಶುಕ್ರವಾರ ರಾತ್ರಿ ಘಂ. 8-30ಕ್ಕೆ ಕಲ್ಬಾದೇವಿ ರೋಡಿನಲ್ಲಿರುವ **ಭಾಂಗವಾಡಿ ಥಿಯೇಟರಿನಲ್ಲಿ** ಅಭಿನಯಿಸುವರು.

ಶ್ರೀಮತಿ ಆನಂದಿ ಬಾಯಿ, ಗಂಗೊಳ್ಳಿ

ಇವರು 'ಬೃಂದಾದೇವಿ'ಯ ಪಾತ್ರವನ್ನು ವಹಿಸುವರು.

ಕನ್ನಡ ಬಂಧುಭಗಿನಿಯರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಪಿ. ಆರ್. ಬೋಳಾರ್, ಬಿ.ಎ., ದಿಗ್ದರ್ಶಕರು, ಲ. ಕ. ಸ. ಸಭಾ.

ಬಿ. ಆರ್. ಕಾರ್ಕಳ್, ರಂಗಭೂಮಿ ವ್ಯವಸ್ಥಾಪಕರು ಲ. ಕ. ಸ. ಸಭಾ.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA

"BHUVANE??RA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್ — **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.**

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ANNOUNCEMENT

We have pleasure to announce the opening of a branch of the Bank at

KANHANGAD

on 17-11-1945, by

Sri B. Appaswamy Chetty, B. A., R. D. O., Puttur.

A branch of the Bank will be opened at MERCARA shortly.

The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಒಂದು ತಿರುಗ ಮುರುಗ.

ಸ್ವದೇಶೀ ಸರಕಾರವಿರುತಿದ್ದರೆ—

‘ಆದಾಯ ಹಿಂಡು ಸೂರೆಖೋರ’ ವಿಚಾರಣೆ

—ವಿಶೇಷ ಹೆಮ್ಮೆಗಾರನಿಂದ—

(ಕಳೆದ ಸಂಚಿಕೆಯಿಂದ ಮುಂದುವರಿದುದು.)

> ಸದ್ಯ ಇಡೀ ಪ್ರಪಂಚದಲ್ಲೇ ಇರುವ ಒಂದು ಭ್ರಮೆಯನ್ನು ಅಣಕಿಸುವ ಕಲ್ಪನಾ ಕತೆಯಿದು. ಯುದ್ಧದ ಪರಿಣಾಮವಾಗಿ ಲೋಕದ ಪ್ರತಿಯೊಂದು ರಾಷ್ಟ್ರದಲ್ಲೂ ಒಂದು ಬಲವಾದ ಆತುರ ಕಂಡುಬರುತ್ತಿದೆ. ವಿದೇಶೀ ಸರಕಾರದ ಬದಲು ಸ್ವದೇಶೀ ಸರಕಾರ ಬರಲಿ ಎಂಬುದೇ ಆ ಆಶೆ. ಆದರೆ ಇದು ಮೊದಲ ಕಾರ್ಯ ಮಾತ್ರ; ಅದೇ ಸರ್ವಸ್ವವಲ್ಲ. ಸ್ವದೇಶೀ ಸರಕಾರ ಬಂದು ಅಲ್ಲಿಗೇ ಪೂರ್ಣವಿರಾಮ ಬಿದ್ದರೆ ಜನಜೀವನದಲ್ಲಾವ ಬದಲಾವಣೆಯೂ ಆಗದು; ಬಡತನ, ಬರ, ಸೂರೆಸುಲಿಗೆಗಳು ನಿಲ್ಲಬೇಕಾದರೆ ಸಾಮಾಜಿಕ ಪುನರ್ರಚನೆಯಾಗಿ ಸರ್ವಸಮಾನತೆ ಸ್ಥಾಪಿಸಲ್ಪಡಬೇಕು ಎಂಬ ಮೂಲತತ್ವವನ್ನು ಪ್ರಪಂಚ ಮರೆತಂತಿದೆ. ಈ ಜಾಗತಿಕ ಜಾಡ್ಯವನ್ನು ಅಣಕಿಸುವದಕ್ಕಾಗಿ ಬರಿಯ ‘ಸ್ವದೇಶೀ ಸರಕಾರವಿರುತಿದ್ದರೆ .....’ ಹೇಗಾಗುತಿತ್ತು ಎಂಬುದನ್ನಿಲ್ಲಿ ವ್ಯಂಗ್ಯವಾಗಿ ಕಲ್ಪಿಸಲಾಗಿದೆ. ‘ಮೇಲಿನ ಜನರಾಳು’ (ಶ್ರೀಮಂತರ ಒಳಗಿನವ; ಸ್ವಭಾವತಃ ‘ಬಹಳ ಲಂಡ’)ಗಳ ಕೈಗೇನೇ ತೀರ್ಮಾನಾಧಿಕಾರ ಹೋಗುತ್ತದೆ—ಹೆಡ್ಡುಕಾಟು ಜನರಾಳು’ (ಬಡಜನ ಸೇವಕ) ಗಳ ವಾದವು ಗುರಿಮುಟ್ಟುವದು ಕಷ್ಟವಾಗುತ್ತದೆ. ಇದೇ ರೀತಿ ಈ ಲೇಖನಮಾಲೆಯಲ್ಲಿ ಬಂದ ಎಲ್ಲಾ ಹೆಸರುಗಳೂ ಗುಣಸೂಚಕಗಳು (ಪ್ರತಿಯೊಂದು ರಾಷ್ಟ್ರದಲ್ಲಿರುವ ಸಂಪ್ರದಾಯಬದ್ಧ ಅಧಿಕಾರೀ ಹಾಗೂ ವ್ಯಕ್ತಿಗತ ಚಿತ್ತವೃತ್ತಿಯ ಪ್ರತಿರೂಪಗಳು) ಹೊರತು ಬೇರಾರಿಗೂ ಯಾವುದಕ್ಕೂ ಸಂಬಂಧಿಸಿದುವಲ್ಲ.

ಲಾಭಬಾಯಿ ದೋಷಾಯಿಗಳ ವಾದ (ಹೇರಿಂಗ್)

ಇದು ಒಂದು ಅಸಾಮಾನ್ಯ ಮೊಕದ್ದಮೆಯಾಗಿದ್ದು ನಿಮ್ಮ—ನ್ಯಾಯಾಧೀಶರುಗಳೇ ತಮ್ಮ—ಜವಾಬ್ದಾರಿಯು ಅತಿ ಮಹತ್ವದ್ದಿದೆಯೆಂಬುದನ್ನು ನಾನು ಪ್ರಥಮತಃ ನಿವೇದಿಸಿಕೊಳ್ಳಬೇಕಾಗಿದೆ. ಈ ಮೊಕದ್ದಮೆಯು ಊರೂರುಗಳಲ್ಲಿ ಎಬ್ಬಿಸಿರುವ ದೈನಿಕ ಪ್ರತಿಕ್ರಿಯೆಗಳು ಕೋರ್ಟಿನ ಲಕ್ಷ್ಯಕ್ಕೆ ಬಾರದಿರಲು ಸಾಧ್ಯವಿಲ್ಲ. ಆದರೆ ನ್ಯಾಯಾಧೀಶರೇ—ತಾವದನ್ನು ಪೂರ್ತಿ ಅಲಕ್ಷ್ಯಿಸಿ—ತಮ್ಮ ನ್ಯಾಯ ವಿಚಾರಣಾ ಸರಹದ್ದಿನೊಳಗೆ ಅಂತಹ ಸುದ್ದಿಗಳೇ ಸುಳಿದಿಲ್ಲವೆಂಬಂತೆ ಸಂಪೂರ್ಣ ನಿರ್ಲಿಪ್ತರಾಗಿ—ತಮ್ಮ ಮುಂದೆ ಬಂದಿರುವ ಸಾಕ್ಷ್ಯಪುರಾವೆಗಳನ್ನಷ್ಟೇ ಗಮನಿಸಿ ತೀರ್ಮಾನ ಕೊಡಲು ಬದ್ಧರಿದ್ದೀರಿ ಎಂಬುದನ್ನು ನಾನು ನೆನಪು ಮಾಡುವ ಅಗತ್ಯವಿಲ್ಲ.

ನ್ಯಾಯಾಧೀಶರೇ, ತಮ್ಮ ನ್ಯಾಯಶೋಧ ಶಕ್ತಿಯ ಪ್ರಜ್ವಲತೆಗಾಗಿ ಇಡೀ ಮೊಕದ್ದಮೆಯಲ್ಲಿ ಜೀವಾಳವಾಗಿ ಸೇರಿರುವ ಒಂದು ಅಂಶವನ್ನು ಪ್ರಥಮತಃ ನಿವೇದಿಸಿಕೊಳ್ಳುತ್ತೇನೆ. ಇಲ್ಲಿ ಒಂದು ತಪ್ಪು ಮಾಡಿದ ವಿಚಾರಣೆ ಬಂದಿದ್ದರೆ — ಕ್ರಮ ಕಾನೂನುಬದ್ಧವಾಗಿ ತಪ್ಪು ಎಂದೊಪ್ಪುವ ಕಾರ್ಯವೊಂದು ತನಿಖೆಗೆ ಬಂದಿದ್ದರೆ—ನಿಜಕ್ಕೂ ಸಾಕ್ಷಿ ಪುರಾವೆಗಳ ಆಧಾರದಿಂದೊಂದು ತೀರ್ಮಾನ ಕೊಡುವದು ಕೋರ್ಟಿನ ಕರ್ತವ್ಯವಾಗುತಿತ್ತು. ಆದರೆ ಇಲ್ಲಿ—ಕೋರ್ಟಿಗೇನೇ ವೇದ್ಯವಿರುವಂತೆ, ವಿಚಾರಣೆಗೊಳಗಾಗಿರುವದು ಒಂದು ‘ತಪ್ಪು’ ಅಲ್ಲ; ಒಂದು ತತ್ವ. ಮೂವರು ಆರೋಪಿಗಳ ಮೇಲೂ ವ್ಯಕ್ತಿಗತ ಅಪಾದನೆಗಳಾವುವೂ ಮುಂದೆ ಬಂದಿಲ್ಲವೆಂಬುದನ್ನು ಕೋರ್ಟು ಲಕ್ಷ್ಯದಲ್ಲಿಡಬೇಕು. ‘ಆದಾಯ ಹಿಂಡು ಸೂರೆಖೋರ’ ತಂಡವನ್ನು ಆರೋಪಿಸಿ, ಅವರ ಪರವಾಗಿ ಆಜ್ಞಾಧಾರಿಗಳಾದ ಈ ಮೂವರನ್ನು ಕೋರ್ಟಿಗೆಳೆಯಲಾಗಿದೆ. ಆದಾಯ ಹಿಂಡು ಸೂರೆಖೋರವು ಬೇಕಾಯಿದೇಶೀರ ಸಂಸ್ಥೆಯಾಗಿತ್ತೆ? ರಾಜದ್ರೋಹಿ ಸಂಸ್ಥೆಯಾಗಿತ್ತೆ? ಎಂಬುದೇ ಇಲ್ಲಿ [illegible] ವಿಚಾರಿತಕ್ಕ ವಿಷಯ. ಬಹುಮಾನ ಪಟ್ಟ ಹಿಂದಿನ ಸರಕಾರದ ಆಡಳಿತೆಯ ವೇಳೆಯಲ್ಲಿ ನಡೆದಿದ್ದ ಒಂದು ವಿಷಯವನ್ನು ಹೊಸ ಸರಕಾರದ ಕಾಲದಲ್ಲಿ ತನಿಖೆ ನಡೆಸುವಾಗ ಆ ಕಾಲದಲ್ಲಿದ್ದ ಕಾನೂನು ಕ್ರಮಗಳನ್ನೇ ಕೋರ್ಟು ಆಧರಿಸಬೇಕಾಗಿದೆ. ಆಗಿನ ಪರಿಸ್ಥಿತಿಯಲ್ಲಿ ಆದಾಯ ಹಿಂಡು ಸೂರೆಖೋರರು ಆಗಿನ ಸರಕಾರಕ್ಕೆ ವಿಶೇಷ ಸಹಾಯ ಸಲ್ಲಿಸಿದ್ದರೆಂಬುದು ಸಂದೇಹಾತೀತವಾಗಿ ಸಾಕ್ಷಿ ಪುರಾವೆಗಳಿಂದ ಸಿದ್ಧವಾಗಿದೆ. ಈ ಕುರಿತು ಪ್ರೊಸಿಕ್ಯೂಶನ್ ಕೂಡಾ ಆಕ್ಷೇಪಿಸಿಲ್ಲ. ಹೊಸ ಸರಕಾರ ಬಂದೊಡನೆ ಹಿಂದಿನ ಸರಕಾರ ವಜಾ ಆಗುತ್ತದಾದರೂ, ಅದುವರೆಗಿನ ಆ ಹಳೇ ಸರಕಾರದ ಅಸ್ತಿತ್ವವನ್ನು ಈಗಿನ ಸರಕಾರವು ಒಪ್ಪಿಕೊಳ್ಳಲು ಬದ್ಧವಿದೆ. ಸರಕಾರದೊಂದಿಗೆ ಲೋಕ ಬದಲಾವಣೆಯಾಗುವದಿಲ್ಲ. ಸಂಪತ್ತು, ಸ್ಥಾನ ಮಾನಾದಿ ಸರ್ವವೂ ಇದ್ದಂತೆ ಇರುತ್ತವೆ; ಯಾವ ಸರಕಾರ ಬಂದರೂ ಅವುಗಳನ್ನು ಒಪ್ಪಿಕೊಳ್ಳಬೇಕಾಗಿದೆ. ಆದ್ದರಿಂದ ನ್ಯಾಯಾಧೀಶರೇ—ಆದಾಯ ಹಿಂಡು ಸೂರೆಖೋರರನ್ನು ಆಗಿನ ಸರಕಾರವು ಸಹಾಯಕರೆಂದು ಭಾವಿಸಿದ್ದಂತೆಯೇ ಈಗಿನ ಸರಕಾರವೂ ಸಹಾಯಕರೆಂದೇ ಭಾವಿಸಲು ಬದ್ಧವಿದೆ. ಮೊದಲಾಗಿ ಕೋರ್ಟಿನ ಲಕ್ಷ್ಯದಲ್ಲಿರಬೇಕಾದ ಈ ವಿಷಯವನ್ನು ಒತ್ತಿ ಹೇಳುತ್ತೇನೆ.

ಪ್ರೊಸಿಕ್ಯೂಶನ ಇಡೀ ರುಜುವಾತುಗಳ ಸಾರವೆಂದರೆ ಆದಾಯ ಹಿಂಡುಗಳು ಲಾಭಾಂಶಪಟ್ಟ ವ್ಯಾಪಾರ ನಡಿಸಿ ಹಣ ಗಳಿಸಿದ್ದರೆಂಬುದು. ಒಂದು ತತ್ವದ ತೀರ್ಮಾನವಾಗಬೇಕಾದುದು ಈ ಭಾಗದಲ್ಲಿಯೇ. ಅಂತರ್ರಾಷ್ಟ್ರೀಯ ಪದ್ಧತಿಯಂತೆ ತಂತಮ್ಮ ಸ್ವಾರ್ಥಕ್ಕಾಗಿ ವ್ಯಾಪಾರ ಮಾಡುವದು ಅಪರಾಧವಲ್ಲ. ಸಂಘಟನೆಗೊಂಡ ವ್ಯಾಪಾರೀ ಸಂಸ್ಥೆಯೊಂದು ಶಕ್ತಿ, ಚಾತುರ್ಯ ಮತ್ತು ಸರ್ವ ವಿಧದ ಬುದ್ಧಿವಂತಿಕೆಯಿಂದ ತನ್ನ ಲಾಭ ಸಾಧನೆಮಾಡಿಕೊಳ್ಳುವದು ಅಂತರ್ರಾಷ್ಟ್ರೀಯ ಕಾಯಿದೆ ಮತ್ತು ಪದ್ಧತಿಗನುಸಾರವಾಗಿಯೇ ಇದೆ. ಮಾನವನ ಈ ಜನ್ಮಸಿದ್ಧ ಹಕ್ಕನ್ನು ಅಂತರ್ರಾಷ್ಟ್ರೀಯ ಶಾಸನ ಮತ್ತು ಪ್ರತಿಯೊಂದು ರಾಷ್ಟ್ರದ ಸರಕಾರವೊಪ್ಪಿಕೊಳ್ಳದಿರುತ್ತಿದ್ದರೆ — ನಾನು ನಿವೇದಿಸಿಕೊಳ್ಳುತ್ತೇನೆ—ಲೋಕದಲ್ಲಿ ಇಂದಿನ ವೈವಿಧ್ಯವಿರುತಿತ್ತೆ? ನುಹಾ ಮಹಾದ್ಭುತಗಳನ್ನು ಸಾಧಿಸುತ್ತಿರುವ ಮಿಲಿಯಾಧೀಶರು, ಹತ್ತಿಪ್ಪತ್ತು ಅಂತಸ್ತಿನ ಮಾಳಿಗೆಗಳು, ಪ್ರಪಂಚ ವ್ಯಾಪೀ ವ್ಯಾಪಾರೀ ಸಂಸ್ಥೆಗಳು, ಅಷ್ಟೇ ಯಾಕೆ, ಇಂದಿನ ಸಾಮ್ರಾಜ್ಯಗಳು—ಅಂತೂ ಲೋಕದ ಮುಖ್ಯ ಮೇಲ್ಭಾಗ ಮತ್ತು ಅತೀ ಸುಂದರ ಭಾಗವೇ ಇರುತಿತ್ತೇ ಎಂದು ನಾನು ನಿವೇದಿಸಿಕೊಳ್ಳುತ್ತೇನೆ. ಇಡೀ ಪ್ರಪಂಚವೇ ಮರುಭೂಮಿಯಾಗುತಿತ್ತು. ಆದ್ದರಿಂದ ಲಾಭೋದ್ದೇಶವಿರುವದು—ಅದರ ಸಾಧನೆಗಾಗಿ ಸರ್ವವಿಧದ ಬುದ್ಧಿವಂತಿಕೆಗಳನ್ನು ಪ್ರಯೋಗಿಸುವದು—ಅಂತರ್ರಾಷ್ಟ್ರೀಯ ಪದ್ಧತಿಗೂ ಶಾಸನಕ್ಕೂ ಅನುಗುಣವಾಗಿಯೇ ಇದೆ.

ಸಾನೀಗ ಆ ಮೇಲಿನ ಅಂಶವನ್ನು—ಪ್ರಾಯಶಃ ಈ ಮೊಕದ್ದಮೆಯಲ್ಲಿ ಇಕ್ಕಡೆಯ ಭಿನ್ನತೆಗಾಸ್ಪದವಿತ್ತಿರುವ ಮುಖ್ಯ ಭಾಗವನ್ನು—ಎತ್ತಿಕೊಳ್ಳುತ್ತೇನೆ. ಆಗಿನ ಸರಕಾರವು ಅಂದಿನ ಯುದ್ಧ ವಾತಾವರಣಕ್ಕನುಗುಣವಾಗಿ ಸಾಮಾನು ಮಾರಾಟದ ಧಾರಣೆ ಘೋಷಣೆಗಳಿಗೆ ನಿಯಂತ್ರಣಗಳನ್ನು ವಿಧಿಸಿತೆಂದೂ ಆರೋಪೀ ತಂಡವು ಆ ಶಾಸನಗಳಿಗೆ ವಿರುದ್ಧವಾಗಿ ವಿಶೇಷ ಬೆಲೆಗೆ ಮಾರಿ ಕಳ್ಳ ಸಂತೆ ನಡಿಸಿದ್ದರೆಂದೂ ಹಣ ಗಳಿಸುವದೇ ಅವರ ಉದ್ದೇಶವಾಗಿತ್ತೆಂದು ಪ್ರೊಸಿಕ್ಯೂಶನಿನ ಪರವಾಗಿ ಆರೋಪಿಸಲಾಗಿದೆ. ಜಿಲ್ಲಾ ಕಲೆಕ್ಟರ್, ಗ್ರಾಮ ಶನಿಭೋಗರಂತಹ ಆ ಸಂಬಂಧದ ಹೊಣೆಗಾರರಾಗಿದ್ದ ಆಗಿನ ಸರಕಾರೀ ಅಧಿಕಾರಿಗಳ ಹೇಳಿಕೆಗಳು ಈ ಅಪಾದನೆ ಪೂರ್ಣ ನಿರಾಧಾರವಾದುದೆಂಬುದನ್ನು ಸಿದ್ಧಪಡಿಸಿವೆ. ಇಲ್ಲೊಂದು ವಿಶೇಷ ಚಿತ್ರವನ್ನು ಕೋರ್ಟಿನ ಶೋಧನಾ ಚಕ್ಷುವಿನ ಮುಂದೆ ಹಿಡಿಯಲು ನಾನಿಚ್ಛಿಸುತ್ತೇನೆ. ಕಳ್ಳ ವ್ಯಾಪಾರವನ್ನು ಪ್ರತಿಬಂಧಿಸುವ ಶಾಸನಗಳನ್ನು ತಂದ ಆಗಿನ ಸರಕಾರದ ಮೇಲೆಯೇ ಕಳ್ಳ ವ್ಯಾಪಾರವನ್ನು ಪ್ರತಿಬಂಧಿಸುವ ಮತ್ತು ಕಳ್ಳವ್ಯಾಪಾರಿಗಳನ್ನು ಶಿಕ್ಷಿಸುವ ಹೊಣೆಗಾರಿಕೆಯಿತ್ತು. ಹಾಗಿದ್ದರೂ ಪ್ರೊಸಿಕ್ಯೂಶನಿನ ಆರೋಪದಂತೆ ಆ ಕಾಲದಲ್ಲಿ ಕಳ್ಳ ವ್ಯಾಪಾರ ನಡೆದದ್ದು ನಿಜವಾದರೆ, ಆಗಿನ ಸರಕಾರವೇ ಆರೋಪಿಯಾಗಬೇಕಿತ್ತು ಹೊರತು ಇವರಲ್ಲ. ತನ್ನ ಪೂರ್ವಿಕ ಸರಕಾರವನ್ನೇ ವಿಚಾರಿಸುವ ಅಧಿಕಾರ ಆ ಮೇಲಿನ ಸರಕಾರಕ್ಕೆ ಕಾನೂನು ಬದ್ಧವಾಗಿ ಇದೆಯೆ? ಆದ್ದರಿಂದ ಈ ಅಪಾದನೆಯನ್ನು ವಿಚಾರಿಸುವದು ಕೋರ್ಟಿನ ಅಧಿಕಾರ ಕ್ಷೇತ್ರಕ್ಕೆ ಹೊರಗಿನದೆಂಬದನ್ನು ಒತ್ತಿ ಹೇಳುತ್ತೇನೆ. ಈ ಮೊಕದ್ದಮೆಯ ಮಟ್ಟಿಗಂತೂ ಅಂತಹ ಕಳ್ಳ ವ್ಯಾಪಾರವೇ ನಡೆದಿಲ್ಲವೆಂಬುದನ್ನು ಆಗಿನ ಸರಕಾರದ ಅಧಿಕಾರಿಗಳೇ ಸ್ಪಷ್ಟಪಡಿಸಿರುವಾಗ ಈ ಆರೋಪ ಅಕ್ರಮವೆಂಬುದರೊಂದಿಗೆ ಅಬದ್ಧವೆಂಬುದೂ ಪೂರ್ಣ ರುಜುವಾಗಿದೆ.

ನ್ಯಾಯಾಧೀಶರೇ—ಕೊನೆಯದಾಗಿ ನನ್ನ ನಿವೇದನೆಯಿಷ್ಟೆ. ಪ್ರೊಸಿಕ್ಯೂಶನಿನ ಆಪಾದನೆಯೇ ಈ ರೀತಿ ನಿರಾಧಾರವಾಗಿ, ಆ ದೃಷ್ಟಿಯಿಂದಲೇ ಆರೋಪಿಗಳು ಪೂರ್ಣ ನಿರಪರಾಧಿಗಳೆಂಬುದು ಸಿದ್ಧವಾಗಿದೆ. ಅದಕ್ಕೆ ಕೊಡಬೇಕಾದ ಸ್ಥಾನವನ್ನು ಕೋರ್ಟು ಕೊಡುತ್ತದೆಂಬ ನ್ಯಾಯ ಬದ್ಧ ನಿರೀಕ್ಷೆಯನ್ನು ಒಮ್ಮೆಗೆ ಒಂದೆಡೆ ಮುಚ್ಚಿಟ್ಟು ಬಿಡೋಣ. ಪ್ರೊಸಿಕ್ಯೂಶನಿನ ಆರೋಪವೆಲ್ಲಾ ಸಿದ್ಧವಾಗುತಿದ್ದರೆ ಹೇಗೆ ಎಂಬುದನ್ನಿಲ್ಲಿ ಕೇವಲ ವಾದಕ್ಕಾಗಿ ಪರ್ಯಾಲೋಚಿಸೋಣ. ಧಾರಣೆ ನಿಯಂತ್ರಣ ಶಾಸನವು ಆಗಿನ ಸರಕಾರದ ಯುದ್ಧಾವಧಿಯಲ್ಲಿ

1000's SAVED
MARGARET'S
FITS CURE
Stops children's fits in 3 minutes.
Ask your chemist for a box.
Sole Agents.-
BRIGHTSTAR AGENCIES,
Hospital Rd., Udipi, S. K.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ — ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಬೇಕಾಗಿದ್ದಾರೆ
ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಟ್ರಾಕ್ಟರರೂ ಕೂಲಿಯಾಳುಗಳನ್ನು ಒದಗಿಸಿಕೊಡುವವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗೆ ಉತ್ಕೃಷ್ಟ ಸವಲತ್ತುಗಳು ಕೊಡಲಾಗುವುದು.
ಇಂದೇ ಬರೆಯಿರಿ—
ಬಾಕ್ಸ್ ನಂಬ್ರ 5. c/o ‘ನವಯುಗ’
ಉಡುಪಿ, (ದ. ಕ.)

ಹೊರತು ಮೊಬಲಿಗಲ್ಲ, ಯುದ್ಧಾಪೇಕ್ಷೆತೆಗಾಗಿ ಜ್ಯಾರಿಗೆ ಬಂದಿದ್ದ ಶಾಸನವದು ಎಂಬುದು ಖಂಡಿತ. ಆರೋಪೀ ಕಂಪೆನಿಯು ಆಗಿನ ಸರಕಾರಕ್ಕೆ ತನ್ನ ಶಕ್ತಿ ಮೀರಿ ಸಹಾಯ ಸಲ್ಲಿಸಿ ಈ ಯುದ್ಧಾವಶ್ಯತೆಯನ್ನು ಪೂರೈಸಿ ಕೊಟ್ಟಿದ್ದಿತೆಂಬುದಕ್ಕೆ ಪ್ರೊಸಿಕ್ಯೂಶನ್ ಕೂಡಾ ಆಕ್ಷೇಪಿಸಿಲ್ಲ. ಹಾಗಂದರೆ ಪ್ರೊಸಿಕ್ಯೂಶನ್ ವಾದದಂತೆಯೇ ಅಂದಿನ ಶಾಸನದ ಬರವಣಿಗೆಗಳಿಗೆ ಆರೋಪೀ ಕಂಪೆನಿಯು ವಿರುದ್ಧ ವರ್ತಿಸಿದ್ದರೂ, ಆ ಶಾಸನದ ಉದ್ದೇಶಕ್ಕದು ನೆರವಾಗಿದೆ. ಕೋರ್ಟು ಪರಾಂಬರಿಸಬೇಕು—ಈ ಮೊಕದ್ದಮೆಯ ಜೀನಾಳವೇ ಹೀಗಿರುವಾಗ ಆಗಿನ ಸರಕಾರಕ್ಕೆ ಸಂದರ್ಭವೊದಗುತ್ತಿದ್ದರೆ, ಈ ಯುದ್ಧಾವಶ್ಯಕತೆಗಳ ಉದ್ದೇಶ ಸಾಧನೆಗಾಗಿಅದು ಒಂದು ವಿಶೇಷ ಶಾಸನವನ್ನೇ ಜಾರಿಗೆ ತಂದು 'ವ್ಯಾಪಾರಿಗಳು ತಮ್ಮ ಕುಶಾಗ್ರಮತಿಯನ್ನು ಪೂರ್ಣ ಪ್ರಯೋಗಿಸಿ, ಆದಷ್ಟು ಹಣ ಸಂಗ್ರಹಿಸಿ, ಸರಕಾರದ ಯುದ್ಧಕಾರ್ಯಕ್ಕೆ ಸಹಾಯವೀಯಬೇಕು' ಎಂದು ವಿಧಿಸುವದು ಸಂಭವನೀಯವಾಗಿತ್ತೆಂದು ಕಾಣುವದಿಲ್ಲವೇ? ಅಂತಹ ಪರಿಸ್ಥಿತಿಯೋ ಅವಕಾಶವೋ ಆಗಿನ ಸರಕಾರಕ್ಕೆ ಬಾರದಿರಬಹುದು; ಅಥವಾ ಅಜ್ಞ ಜನರಿಂದ ಬರುವ ಅಪವಾದಕ್ಕಂಜಿ ಆ ಸರಕಾರವು ಇಂತಹ ಶಾಸನ ಜ್ಯಾರಿಗೆ ತರಲು ಹಿಂಜರಿದಿರಬಹುದು. ಸತ್ಕಾರ್ಯ ಸಾಧನೆಗೆ ಶಾಸನವೇ ಬರಬೇಕೆಂದಿಲ್ಲವೆಂಬ ಉಪಕಾರ ಬುದ್ಧಿಯಿಂದ, ಕಾನೂನಿಲ್ಲದಿದ್ದರೂ ಅಂತಹ ಕಾರ್ಯವನ್ನು ತಾನಾಗಿ ಮಾಡಿ ಸರಕಾರಕ್ಕೆ ಉಪಕಾರ ಸಲ್ಲಿಸಿದ್ದ ಆದಾಯ ಹಿಂಡು ಸೂರೆಖೋರರು ಅಪರಾಧಿಗಳಾಗುವರೇ? ಇವೆಲ್ಲಾ ವಿಷಯಗಳನ್ನು ಗಮನಿಸಿ ಈ ಮೊಕದ್ದಮೆಯಿಂದ ಸ್ಪಷ್ಟವಾಗುವ ನ್ಯಾಯವನ್ನು ಕೋರ್ಟು ಎತ್ತಿ ಹಿಡಿಯತಕ್ಕದ್ದೆಂದೂ ಆರೋಪಿಗಳನ್ನು ಬಿಡುಗಡೆ ಮಾಡಬೇಕೆಂದೂ ನಿವೇದಿಸಿಕೊಳ್ಳುತ್ತೇನೆ.

ಹೆಡ್ಡುಕಾಟು ಜನರಾಳುವಿನ ಪ್ರತಿವಾದ

ಇದೊಂದು ಅಸಾಮಾನ್ಯ ಮೊಕದ್ದಮೆಯಿದ್ದರೂ, ಆಪಾದನೆಯಲ್ಲಿ ನಮೂದಿಸಲ್ಪಟ್ಟ ಅಂಶಗಳೆಲ್ಲಾ ವಿಚಾರಣೆಯಲ್ಲಿ ಸ್ವತಃ ಸಿದ್ಧವಾಗಿರುವದರಿಂದ—ನ್ಯಾಯಾಧೀಶರೇ—ನಾನು ನನ್ನ ವಾದಕ್ಕಾಗಿ ಕೋರ್ಟಿನ ಬಹಳ ಸಮಯವನ್ನು ತೆಗೆಯಲಿಚ್ಛಿಸುವದಿಲ್ಲ. ಡಿಫೆನ್ಸ್ ವಕೀಲರು ಮುಂದೊಡ್ಡಿದ ಕಾನೂನು ಕಟ್ಟಳೆಗಳ ಕೆಲವು ನವ ಶೋಧನೆಗಳನ್ನೆತ್ತಿಕೊಳ್ಳುವ ಮೊದಲು ಆಪಾದನೆಯಲ್ಲಿ ಕಾಣಿಸಿದ ಅಂಶಗಳೆಲ್ಲಾ ಹೇಗೆ ರುಜುಗೊಳಿಸಲ್ಪಟ್ಟಿವೆ ಎಂಬ ಕುರಿತು ಒಂದೆರಡು ಮಾತುಗಳನ್ನು ನಿವೇದಿಸಿಕೊಳ್ಳುವದು ನನ್ನ ಕರ್ತವ್ಯವಾಗಿದೆ. ಆಗಿನ ಸರಕಾರವು ಸರ್ವ ಸಾಮಾಗ್ರಿಗಳ ವ್ಯಾಪಾರದ ಮಟ್ಟಿಗೆ ನಿಯಂತ್ರಣ ಶಾಸನಗಳನ್ನು ಜಾರಿಗೆ ತಂದಿದ್ದಿತೆಂಬುದು ನಿಸ್ಸಂದೇಹ ಮತ್ತು ನಿರಾಕ್ಷೇಪಣೀಯ ವಿಷಯ. ಆರೋಪೀ ಕಂಪೆನಿಯು ಅವುಗಳನ್ನು ಸ್ಪಷ್ಟವಾಗಿ ಮತ್ತು ನಿರ್ಭೀತಿಯಿಂದ ಉಲ್ಲಂಘಿಸಿದ್ದಿತೆಂಬುದನ್ನು ಅಡ್ಡಸವಾಲುಗಳ ಬಿಸಿಗೊಳಿಯದಿರಲ್ಲೂ ಕೋರ್ಟಿನ ಮುಂದಿನ ಸಾಕ್ಷ್ಯಗಳು ಸರಿಯಾಗಿ ಸಿದ್ಧಪಡಿಸಿವೆ. ಇಂತಹ ಕಳ್ಳ ವ್ಯಾಪಾರದಿಂದ ದೊರೆತ ಹೇರಳ ಲಾಭದ ಗಣ್ಯ ಅಂಶವೊಂದನ್ನು ಸರಕಾರಕ್ಕೆ ... ಸಹಾಯ...ಗಿ ಸಲ್ಲಿಸಿ ಆರೋಪಿ ಪಂಗಡಿಗರು ತಮ್ಮೀ ಕೃತ್ಯಕ್ಕೆ ಸರಕಾರದ ಮೌನ ಸಮ್ಮತಿಯನ್ನು ಪಡೆದಿದ್ದರೆಂಬುದು ಕೋರ್ಟಿನ ಮುಂದೆ ಬಂದ ಸಾಕ್ಷಿ ಪುರಾವೆಗಳಿಂದಲೇ ಸಿದ್ಧವಾಗಿದೆ. ಕೋರ್ಟು ಪರಾಂಬರಿಸಬೇಕು—ಸರ್ವಾಧಿಕಾರವಿದ್ದ ಜಿಲ್ಲಾ ಕಲೆಕ್ಟರ್ ತನ್ನ ಹೇಳಿಕೆಯಲ್ಲಿ, ತನ್ನ ನೌಕರರು ಆರೋಪಿಗಳು ಹಾಜರು ಪಡಿಸಿದ್ದ ಲೆಕ್ಕಪತ್ರ, ಸಾಮಾನುಗಳ ತಪಶೀಲುಗಳನ್ನು ಮಾತ್ರ ತನಿಖೆನಡೆಸಿದ್ದೆಂಬುದನ್ನು ಒಪ್ಪಿದ್ದಾರೆ. ಡಿಫೆನ್ಸ್ ಬೇಡಿಕೆಯಂತೆ ಸಮ್ಮನ್ಸ್ ಆಗಿದ್ದ ಏಳೆಂಟು ಮಂದಿಯಲ್ಲಿ ಇಬ್ಬರನ್ನು ಮಾತ್ರ ಡಿಫೆನ್ಸ್ ಕಡೆಯವರು ವಾಗ್ಮೂಲ ಮಾಡಿಸಿದುದೂ, ಆ ಎರಡರಲ್ಲೊಬ್ಬನಾದ ಊರ ಶನಿಭೋಗನು ತನ್ನನ್ನೇ ತಾನು ಡಿಫೆಂಡ್ ಮಾಡಿಕೊಳ್ಳಲಾರದೆ, ಕೊನೆಯಲ್ಲಿ ನಿಧಿ ಅಥವಾ ಕಳ್ಳ ವ್ಯಾಪಾರದಿಂದಲ್ಲದೆ ಆರೋಪಿಗಳು ಅಕಸ್ಮಾತ್ ಧನಿಕರಾಗುವದಸಾಧ್ಯವೆಂಬುದನ್ನೊಪ್ಪಿದುದೂ (ಲಾಭಬಾಯಿ—ವಿಶೇಷ ವ್ಯಾಪಾರದಿಂದ ಧನಿಕರಾಗಬಹುದೆಂಬುದನ್ನೂ ಸಾಕ್ಷಿಗಾರ ಒಪ್ಪಿದ್ದಾನೆ, ಹೆಡ್ಡುಕಾಟು ಜನರಾಳು—ಎಲ್ಲಾ ಸಾಮಾನುಗಳಿಗೂ ಕಂಟ್ರೋಲ್ ಇದ್ದ ಆ ಕಾಲದಲ್ಲಿ ವಿಶೇಷ ವ್ಯಾಪಾರವೇ ಅಸಾಧ್ಯವಾಗಿತ್ತು.) ಜಿಲ್ಲಾ ಕಲೆಕ್ಟರರ ಸಾಕ್ಷ್ಯದ, ... ಮೇಲೆ ಆಗಿನ ಸರಕಾರ... ನೆಂಬುಗೆಯೊಂದನ್ನಲ್ಲದೆ ಬೇರಾವುದನ್ನೂ ಸೂಚಿಸದಿರುವದೂ ಆಪಾದನೆಗಳನ್ನು ಇನ್ನಷ್ಟು ...ಪಡಿಸಿ ಪ್ರೊಸಿಕ್ಯೂಶನಿನ ವಾದಕ್ಕೆ ಸಮರ್ಥನೆಯಾಗಿವೆ. ಎಲ್ಲಕ್ಕಿಂತ ಪ್ರಥಮವಾದ ಮತ್ತು ಪ್ರಾಮುಖ್ಯವಾದ ಸಾಕ್ಷ್ಯವೆಂದರೆ ಆರೋಪೀ ಪಂಗಡಿಗರ ಸ್ಥಿತಿ ಪರಿವರ್ತನೆ. ಸಾಮಾನ್ಯ ತಿಳುವಳಿಕೆಯ ಕ್ಷೇತ್ರದೊಳಗೂ ಪ್ರಶ್ನೆಯಾಗಿ ಏಳುವ ಒಂದು ವಿಷಯವೆಂದರೆ ಯುದ್ಧಕ್ಕೆ ಮೊದಲು—ಅಥವಾ ಯುದ್ಧಾರಂಭವಾಗಿ ಸುಮಾರು ಒಂದು ವರುಷದ ಪರ್ಯಂತರ ಸಾಮಾನ್ಯ ಸ್ಥಿತಿಯಲ್ಲಿದ್ದ ಆಪಾದಿತ ಪಂಗಡದವರು ಆ ಮೇಲೆ ಥಕ್ಕನೇ ಕುಬೇರರಾದುದು ಹೇಗೆ, ಎಂಬುದೇ. ಈ ಆಕಸ್ಮಿಕ ಶ್ರೀಮಂತಿಕೆಗೆ, ಆಪಾದನೆಯಲ್ಲಿರುವಂತೆ ಮತ್ತು ಕೋರ್ಟಿನಲ್ಲಿ ಸಾಕಾದ ಸಾಕ್ಷ್ಯಗಳಿಂದ ರುಜುಗೊಳಿಸಲ್ಪಟ್ಟಂತೆ ಒಂದಕ್ಕೆ ಇಮ್ಮಡಿಯಿಂದ ಹಿಡಿದು ಇಪ್ಪತ್ತುಪಾಲಿನ ವರೆಗೂ ಅಧಿಕ ಲಾಭಾಂಶವಿಟ್ಟು, ಕಳ್ಳ ವ್ಯಾಪಾರ ಮಾಡಿದ್ದೇ ಕಾರಣ. ಇದಕ್ಕಿಂತ ಭಿನ್ನವಾದ ನ್ಯಾಯಬದ್ಧ ಕಾರಣವೇನಾದರೂ ಇರುತಿದ್ದರೆ, ಆ ಸಂಬಂಧದ ದಾಖಲೆಗಳನ್ನೋ ಸಾಕ್ಷ್ಯಗಳನ್ನೋ ಹಾಜರುಪಡಿಸಿ ಆರೋಪ... ಗೆಲ್ಲುವದು ಸುಲಭವಿತ್ತು. ಕೋರ್ಟು ಅವಲೋಕಿಸಬೇಕು... ...ನಿಗಿರುವ ಇದೊಂದು ಮೌನ ...ತು ಮತ್ತು ಡಿಫೆನ್ಸಿಗೆ ಅದಕ್ಕೆ ಪ್ರತಿಯಾಗಿ ಏನೊಂದೂ ಇಲ್ಲದಿರುವದು ಸತ್ಯಸ್ಥಿತಿಯನ್ನು ಕನ್ನಡಿಯಂತೆ ಪ್ರತಿಬಿಂಬಿಸುವದಿಲ್ಲವೆ? ಈ ಸ್ಪಷ್ಟ ತಿಳುವಳಿಕೆಯು ಈಗ ನಮ್ಮನ್ನು—ಅಪರಾಧವನ್ನು ಹತ್ತಿಕ್ಕುವ ಜವಾಬ್ದಾರಿ ಹೊತ್ತಿದ್ದ ಆಗಿನ ಸರಕಾರವೇಕೆ ಅದನ್ನು ಸಹಿಸಿದ್ದಿತು, ಎಂಬ ಡಿಫೆನ್ಸಿನ ವಾದ ರಂಗಕ್ಕೆ ತರುತ್ತದೆ. ನಿಜ—ನ್ಯಾಯಾಧೀಶರೇ—ನಿಜ. ಮೊದಲನೇ ಡಿ. ಡಬ್ಲ್ಯುವಿಗಿದ್ದ ಸಂಬಳ ಮತ್ತು ಆತನ ಉಳಿತಾಯವು ಕೋರ್ಟಿನ ಪರಾಂಬರಿಕೆಯಲ್ಲಿದೆ ಎಂದು ನಾನು ನಂಬುತ್ತೇನೆ. ಅಂತೆಯೇ ಎರಡನೇ ಡಿ. ಡಬ್ಲ್ಯುವಿನ ಸ್ಥಿತಿಗತಿ ಮತ್ತು ಆತನ ಹೇಳಿಕೆಯ ಒಳಧ್ವನಿಯು ಕೋರ್ಟಿನ ನ್ಯಾಯ ಶೋಧನಾತುರಕ್ಕೊಳಗಾಗದಿರದು. ಈ ವಸ್ತುಸ್ಥಿತಿಯನ್ನವಲಂಬಿಸಿ, ನನ್ನ ಮಾತಿನ ವಿಶೇಷತ್ವದ ಪೂರ್ಣ ಜ್ಞಾನ ಮತ್ತು ಆ ಮೂಲಕ ನನ್ನ ಮೇಲೆ ಬೀಳುವ ಜವಾಬ್ದಾರಿಯ ತಿಳುವಳಿಕೆಯಿದ್ದೇ ಕೋರ್ಟಿನ ಮುಂದೆ

(೧೧ನೇ ಪುಟ ನೋಡಿರಿ)

ಮಣಿಪಾಲದಲ್ಲಿ ಈಗತಾನೆ ಜಯಶೀಲವಾಗಿ ಜರಗಿದ 34ನೇ ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ಸುಸಂದರ್ಭದಲ್ಲಿ ಪ್ರಕಟಿಸಲ್ಪಟ್ಟ ಅಂತರಂಗದ ವಿಶೇಷ ಸಂಚಿಕೆ.

ಅಂತರಂಗ
ಆಯುರ್ವೇದ ಸಮ್ಮೇಲನಾಂಕ

ಪುಟಗಳು **150** ಬೆಲೆ ರೂ. **1—0—0**

ಆಯುರ್ವೇದಾಭಿಮಾನಿಗಳಾದ ಪ್ರತಿಯೊಬ್ಬರೂ ಓದತಕ್ಕ ಅಪೂರ್ವ ಸಂಚಿಕೆ

ವೈದ್ಯರೂ ಹೆಂಗಸರೂ ಅತ್ಯವಶ್ಯಕವಾಗಿ ಓದಬೇಕಾದುದು.

ಡಾ. ಸುಶೀಲಾ ನಾಯರ್, ಸೇವಾಗ್ರಾಮ, ಡಾ. ಜಿ. ಸುಮತಿಬಾಯಿ ... ಬೆಂಗಳೂರು, ಕವಿರಾಜ ... ದಿಲ್ಲಿ. ಶ್ರೀ. ... ಲಕ್ಷ್ಮೀನಾರಾಯಣ ರಾವ್, ಬಿ. ಎ. ಬಿ. ಎಲ್., ಶ್ರೀ. ... ಶ್ರೀ. ... ಶ್ರೀ ... ಉಡುಪಿ. ಕವಿರಾಜ್ ... ಕಲ್ಕತ್ತಾ ... ಉಡುಪಿ, ವೈದ್ಯ ... ಬಾಗಲಕೋಟೆ, ವೈದ್ಯ ... ವೈದ್ಯಗುರು ... ಭಾರದ್ವಾಜ ಬೆಂಗಳೂರು, ... ವೈದ್ಯ ... ಶಾಸ್ತ್ರಿ ಬೆಂಗಳೂರು, ವೈದ್ಯ ವಿನಾಯಕ ... ವೈದ್ಯ ... ಶ್ರೀ ಕೆ. ಸಿ. ... ಶೆಟ್ಟಿ ... ಆಯುರ್ವೇದ ಭೂಷಣ ... ಶಾಸ್ತ್ರಿ ... ತುಂಗಭದ್ರ, ಆಯುರ್ವೇದತೀರ್ಥ ... ಬಿಜಾಪುರ, ... ವೈದ್ಯ ... ಶಂಕರನಾರಾಯಣ ಭಟ್, ಮೊದಲಾದವರ

ಲೇಖನಗಳಿವೆ! ಭಾಷಣಗಳಿವೆ!! ಚಿತ್ರಗಳಿವೆ!!!

ಪ್ರತಿ ಮನೆಯಲ್ಲೂ ಇರಲೇಬೇಕಾದ ಅಮೂಲ್ಯ ಕೈಗನ್ನಡಿ.

ರೂ 1—0—0 ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಮೆನೇಜರ್, ಅಂತರಂಗ ಆಫೀಸು, ಉಡುಪಿ.

ವಕೀಲ್ ಭುಲಾಭಾಯಿ



ಎಲ್ಲಾ ವಿಧದ ಯೋಗ್ಯತೆ ಒಬ್ಬನಲ್ಲೇ ಇರುವದು ಅಸಾಧ್ಯ. ಒಂದು ಸ್ವತಂತ್ರ ರಾಷ್ಟ್ರ ನಿರ್ಮಾಣವಾಗಬೇಕಾದರೆ ಅದಕ್ಕೆ ಮಾರ್ಗದರ್ಶಿಮಂಡಲವೊಂದಿರಬೇಕು. ಆ ಗುಂಪು ಸರ್ವ ವಿಧದ ಯೋಗ್ಯತೆಯುಳ್ಳದ್ದಾಗಿರಬೇಕು. ಒಂದೊಂದು ಶಕ್ತಿ ಒಬ್ಬೊಬ್ಬನಲ್ಲಿ ವಿಶೇಷವಿರುವದರಿಂದ ಅಂತಹ ಎಲ್ಲರೂ ಬೆರೆತ ಎಲ್ಲಾ ವಿಧದ ಶಕ್ತಿಯ ಕೇಂದ್ರೀಕೃತ ಮಂಡಲಿ ಆದಾಗಿರಬೇಕು. ಇಂದು ಕಾಂಗ್ರೆಸ್ ಅಂತಹ ಸರ್ವ ಶಕ್ತಿ ಸಂಪನ್ನ ಸಮಿತಿಯಾಗಿದೆ. ಅದರಲ್ಲಿ ಭುಲಾಭಾಯಿಗಳೊಬ್ಬರು-ಅಂತಹ ಯೋಗ್ಯತೆಯುಳ್ಳ ಜನ ಅವರೊಬ್ಬರೇ.

ಮಹಾತ್ಮಾ ಗಾಂಧಿಯವರ ಅವಶ್ಯಕತೆ ಇಂದು ಇರುವಷ್ಟು ಭಾರತ ಸ್ವತಂತ್ರವಾದ ಮೇಲಿರಲಾರದು; ಸ್ವತಂತ್ರ ಭಾರತದಲ್ಲಿ ನೆಹರುಗಳ ಇಂದಿನ ಸ್ಥಾನವು ಖಂಡಿತವಾಗಿಯೂ ಉಳಿಯದು. ಅವರಾಗ ಅಮೇರಿಕದಲ್ಲಿ ಭಾಷಣ ಪ್ರವಾಸ ಕೈಗೊಂಡಾರು; ಅಥವಾ ಪುಸ್ತಕ ಬರೆದು ಕುಳಿತುಕೊಳ್ಳಬೇಕಾಗಿ ಬರಬಹುದು ವಲ್ಲಭಾಯಿಗಳ ಕಾರ್ಯಶಕ್ತಿ ಇಂದೂ ಬೇಕು ಮುಂದೆಕ್ಕೂ ಬೇಕು. ಆದರೆ ಮುಂದಿನ ಪ್ರಜಾಪ್ರಭುತ್ವವನ್ನು ಆಜ್ಞಾಪಿಸುವ ಬದಲಿಗೆ ಅದರ [illegible]ಧಾರಿಯಾಗಿರಲು ಅವರು ತಯಾರಿದ್ದರೆ ಮಾತ್ರ. [illegible]ಯ [illegible]ಧವರು ಈ ಕಾಲಕ್ಕೆ — ಇಂದಿನ [illegible]ಟಕ್ಕೆ - ಕೇಳಿಸಿದವರಲ್ಲವಾದರೂ ಮುಂದಿನ ಆಡಳಿತೆಗೆ ಬೇಕಾದವರು. ಭುಲಾಭಾಯಿ ದೇಸಾಯಿಗಳೂ ಹಾಗೆಯೇ ಎಂಬ ಭಾವನೆಯಿತ್ತು. ಆದರೆ ಅವರು ಇಂದಿನ ಮತ್ತು ಮುಂದಿನ, ಎರಡು ಭಾರತಕ್ಕೂ ಅನಿವಾರ್ಯವೆಂಬುದು ಈಗ ಖಚಿತವಾಗಿದೆ. ಮೊದಲನೇ ಅಜಾದ್‌ಹಿಂದ್ ವಿಚಾರಣೆಯಲ್ಲಿ ವಕೀಲ್ ಶ್ರೀ. ಭುಲಾಭಾಯಿಗಳಿಲ್ಲದಿರುತಿದ್ದರೆ?

ಆಧುನಿಕ ಭಾರತದಲ್ಲಿಯೂ ಒಂದು ಅಟಂ ಶಕ್ತಿಯಿದೆಯಾದರೆ, ಅದು ರಾಜಕೀಯರಂಗದಲ್ಲಿ ನೆಹರು ವಾಣಿ—ನಾದರಂಗದಲ್ಲಿ ಭುಲಾಭಾಯಿ ನಾದ.

ನವದಿಲ್ಲಿಯ ಕೆಂಪು ಕೋಟೆ ಮಾಳಿಗೆಯಲ್ಲಿ ನಿಂತುಕೊಂಡು ದಾಸ್ಯಜನಾಂಗಕ್ಕೆ ಯುದ್ಧ ಹೂಡುವ ಹಕ್ಕಿದೆ ಎಂಬುದಕ್ಕೆ ಅಂತರಾಷ್ಟ್ರೀಯ ಶಾಸನಗಳೊಪ್ಪಿರುವದನ್ನು ಪ್ರಶ್ನೆಗಳಗಷ್ಟೇ ಅಲ್ಲ, ಸಂದೇಹಕ್ಕೂ ಆಸ್ಪದವಿಲ್ಲದಂತೆ ಮುಂದಟ್ಟು ಮಾಡುತ್ತಾ ಕೊನೆಗೆ ಕುಗ್ಗದ ಧ್ವನಿಯಲ್ಲಿ "ದಾಸ್ಯ ಜನಾಂಗಗಳಿಗೆ ಸ್ವಾತಂತ್ರ್ಯ ಸಾಧನೆಗಾಗಿ ಯುದ್ಧ ಹೂಡುವ ಹಕ್ಕಿಲ್ಲವೆಂದಾದರೆ ಲೋಕದ ಯಾವ ಗುಲಾಮ ರಾಷ್ಟ್ರವೂ ಸ್ವತಂತ್ರವಾಗುವದು ಅಸಾಧ್ಯವೇ ಸರಿ" ಎಂದ ಶ್ರೀ. ದೇಸಾಯಿಗಳ ಮಾತು ಕೋರ್ಟು ಮಾರ್ಶಲ್ ನ್ಯಾಯಾಧೀಶರುಗಳ ಮತ್ತು ಜನರಲ್ ಅಚಿನ್‌ಲೆಖರ ಹೃದಯಕ್ಕೆ ನಾಟಿರಬೇಕು. ಆ ಜ್ಞಾನದಾಯಿ ನೋವು ಇನ್ನೂ ಮಾಸದೆ ಅಧಿಕಾರಿಗಳಿಂದ ಮುಂದಿನ ಸತ್ಕಾರ್ಯಗಳನ್ನೂ ಮಾಡಿಸಲು ಅಲ್ಲಿ ಉಳಿದಿರಬೇಕು.

ಕೆಂಪು ಕೋಟೆ ವಿಚಾರಣೆಯಂತಹದೊಂದು ಆಧುನಿಕ ಭಾರತದಲ್ಲಿ ಈ ಮೊದಲೆಂದೂ ನಡೆದಿರಲಿಲ್ಲ. ಹಿಂದೀ ಸ್ವತಂತ್ರ ರಾಜರ ಆಳ್ವಿಕೆಯ ವೇಳೆಯಲ್ಲಿ ಮತ್ತು ಭಾರತವು ಬ್ರಿಟಿಷರಾಧೀನವಾಗುವ ಆ ಸಂಧಿ ಕಾಲದಲ್ಲಿ ಇಂತಹ ಚರಿತ್ರಾರ್ಹ ವಿಚಾರಣೆಗಳಾದುದಿರಬಹುದು. ಆದರೆ ಆಧುನಿಕ ರಾಜಕೀಯ ರಂಗದಲ್ಲಿ ಸ್ವಾತಂತ್ರ್ಯ ದೃಷ್ಟಿಯಿಂದಲೂ ಕಾನೂನು ದೃಷ್ಟಿಯಿಂದಲೂ ಕೆಂಪುಕೋಟೆ ತನಖಿಯಷ್ಟು ಪ್ರಾಮುಖ್ಯತೆಯಿದ್ದ ಮತ್ತೊಂದು ಮೊಕದ್ದಮೆಯಿಲ್ಲ. ಈ ಅತಿ ಪ್ರಾಮುಖ್ಯ ಮೊಕದ್ದಮೆಗೆ ಅಸಾಮಾನ್ಯ ವಕೀಲರು ಬೇಕಾದರು; ನಮ್ಮಲ್ಲಿ ವಕೀಲ್ ಭುಲಾಭಾಯಿಗಳಿದ್ದರು.

ಭಾರತದ ರಾಜಕೀಯ ಪ್ರಮುಖರಲ್ಲಿ ಹತ್ತಕ್ಕೊಂಭತ್ತು ಮಂದಿ ವಕೀಲರೇ. ಅವರಲ್ಲೂ ಹೆಚ್ಚಿನವರು ಬ್ಯಾರಿಸ್ಟರರು. ಶ್ರೀ ಭುಲಾಭಾಯಿ ದೇಸಾಯಿ ಬ್ಯಾರಿಸ್ಟರ್ ಅಲ್ಲ; ಎಡ್ವೊಕೇಟ್ ಮಾತ್ರ. ಆದರೆ ಓರ್ವ ವಕೀಲನಲ್ಲಿರಬೇಕಾದ ಗುಣ ಮತ್ತು ಕಾಯಿದೇ ಅನುಭವ ಮತ್ತು ಚಾತುರ್ಯ, ಇವುಗಳ ಪರಮಾವಧಿ ಭುಲಾಭಾಯಿಗಳಲ್ಲಿ ಕೇಂದ್ರೀಕೃತವಾಗಿದೆ. ಕೆಂಪು ಕೋಟೆಯ ಪ್ರಥಮ ವಿಚಾರಣೆಯ ವೇಳೆ ಕೇವಲ ಒಂದೇ ಬಾರಿ ಶ್ರೀದೇಸಾಯಿಗಳು ಗೈರು ಹಾಜರಿದ್ದರು. ಆಗ ಸರಕಾರೀ ಕಡೆಯ ಸಾಕ್ಷಿಗಾರನೊಬ್ಬನಿಗೆ ಅಡ್ಡ ಸವಾಲು ಹಾಕುವ ಸಂದರ್ಭ ಮಿ. ಆಸಫ್ ಅಲಿಗಳಿಗೊದಗಿದ್ದಿತು. ಆವರು ಸವಾಲಿಗಾರಂಭಿಸಿ ಐದೇ ಮಿನಿಟಾಗುವುದರೊಳಗೆ ಎಡ್ವೊಕೇಟ್ ಜನರಲ್ ಸರ್. ನೋಶೀರ್ವಾನರೊಡನೆ ವಾಕ್ಕಲಹ ಹೂಡಬೇಕಾಗಿ ಬಂತು. ಇಂತಹ ವಾಗ್ಯುದ್ಧವನ್ನು ಭುಲಾಭಾಯಿಗಳೂ ಹೂಡಿದ್ದರು. ಹಾಗೆಯೇ ಪ್ರತಿಯೊಂದು ಸಂದರ್ಭದಲ್ಲೂ ವಿಜಯಿಯಾಗಿದ್ದರು. ಆದರೆ ಆದುವಕೀಲೀ ವಾಗ್ಯುದ್ಧ. ಮಿ.ಆಸಫ್ ಅಲಿಗಳು ಸರ್. ನೋಶೀರ್ವಾನರೊಡನೆ ನಡೆಸಿದುದು ಅಭಿಮಾನದ ಪ್ರಶ್ನೆಯನ್ನೆತ್ತಿಕೊಂಡು ಯೋಧ ಕಾಳಗವನ್ನೇ. ಕೋರ್ಟಿನಲ್ಲಿರುವಾಗ ನೀವು ಕೇಂದ್ರ ಎಸೆಂಬ್ಲಿಯ ಪ್ರಬಲ ಪಕ್ಷವೊಂದರ ನಾಯಕ ಘನ ವ್ಯಕ್ತಿ ಭುಲಾಭಾಯಿಯನ್ನು ಕಾಣಲಾರಿರಿ; ಬೊಂಬಾಯಿಯ ಉದಾರಿ ಶ್ರೀಮಂತ ಮಾನಧನ ಭುಲಾಭಾಯಿಯನ್ನೂ ಕಾಣಲಾರಿರಿ; ರಾಷ್ಟ್ರದ ಮುಖಂಡರಲ್ಲೊಬ್ಬನಾದ ಧೀರ ಭುಲಾಭಾಯಿಯನ್ನೂ ಕಾಣಲಾರಿರಿ. ಅಲ್ಲಿರುವದು ಅವಧಾನ ಚಿತ್ತದ—ಇಡೀ ವಿಷಯದಂತೆಯೇ ಪ್ರತಿಯೊಂದಕ್ಷರವನ್ನೂ ಕೆದಕಿ ಶೋಧಿಸುತ್ತಿರುವ ಗೃಧ್ರನೋಟದ-ಇದಿರುಕಡೆಯ ವಾದವೊಂದನ್ನು ಬಿಟ್ಟು ಬೇರೆಲ್ಲರ ಮತ್ತು ಎಲ್ಲದರ ಮೇಲೂ ಒಲವು ಪ್ರದರ್ಶಿಸುತ್ತಿರುವ ವಕೀಲ ಭುಲಾಭಾಯಿ.

ಕೆಂಪು ಕೋಟೆ ವಿಚಾರಣೆಯಲ್ಲಿ ಭುಲಾಭಾಯಿಗಳು ಸಾಧಿಸಿದ ಕಾರ್ಯ ಮತ್ತೊಬ್ಬರಿಂದಾಗುವಂತಹದಲ್ಲ. ಆದರಲ್ಲಿ ಸಾಮಾನ್ಯ ಮೊಕದ್ದಮೆ ಅಥವಾ ವ್ಯವಹರಣೆಗಳಂತೆ ಉಂಟು—ಇಲ್ಲ, ಕೊಟ್ಟಿದ್ದೇನೆ—ಪಡೆದಿಲ್ಲ ಎಂಬಂಥಹ ವಿರುದ್ಧ ವಾದಗಳಿದ್ದುದಷ್ಟೇ ಅಲ್ಲ. ಒಂದು ರಾಜಕೀಯ ತತ್ವ ಅದರಲ್ಲಿ ಜೀವಾಳವಾಗಿ ಸೇರಿತ್ತು. ಕಾನೂನುಗಳ ಕಲಮುಗಳ-ಮತ್ತು ಕೋರ್ಟಿನ ಮರ್ಮ ಮಾತ್ರವರಿತ ಎಷ್ಟೇ ಪ್ರಸಿದ್ಧ ವಕೀಲನಿಗಾದರೂ ಗುಟ್ಟು ದೊರೆಯದ ವಿಷಯವಿದು. ಅಂತೆಯೇ ಆ ರಾಜಕೀಯ ಮರ್ಮವನ್ನು ಅರಿತ ಒಬ್ಬ ತಜ್ಞ ರಾಜಕಾರಣಿಯ ಅಂಕೆಗೂ ಅದು ಒಳಗಾಗದಂತೆ ಅಂತರಾಷ್ಟ್ರೀಯ ಹಾಗೂ ದೇಶೀಯ ಕಾನೂನುಕಟ್ಟಳೆಗಳೂ ಅದರೊಳಗೆ ಸುತ್ತುಹಾಕಿ ಸುರುಳಿಗಟ್ಟಿ ಸೇರಿ ಹೋಗಿದ್ದುವು. ಇವೆರಡೂ ಉಳ್ಳಅಪರೂಪವ್ಯಕ್ತಿಗಳಲ್ಲಿ ಬೇರಾರಾದರೂ ವಕೀಲರಾಗಿ ವ್ಯವಹರಿಸುತಿದ್ದರೂ, ಅಜಾದ್‌ಹಿಂದ್ ವಿಚಾರಣೆಗೆ ತಕ್ಕ ತೇಜಸ್ಸು ಅಲ್ಲಿ ಕಾಣುತ್ತಿರಲಿಲ್ಲ; ಅಂತಹ ಪ್ರಭೆ ಹುಟ್ಟಿಸುವದು ರಾಜಕೀಯ ಮತ್ತು ಕಾನೂನುಗಳಲ್ಲಿ ಪಾಂಡಿತ್ಯವಿರುವಂತೆಯೇ ಅನನ್ಯ ಪ್ರತಿಭೆಯೂ ಉಳ್ಳ ಭುಲಾಭಾಯಿ ದೇಸಾಯಿಗಳಿಂದ ಮಾತ್ರ ಸಾಧ್ಯವಿತ್ತು. ಅಲ್ಲಿರುವಾಗ ಸುಭಾಷ್ಚಂದ್ರರಿದ್ದರು; ಇಲ್ಲಿ ಬಂದಾಗ ಭುಲಾಭಾಯಿಗಳಿದ್ದರು. ಆದ್ದರಿಂದಲೇ ಅಜಾದ್ ಹಿಂದ್‌ಚಳವಳಿಕ್ಕೆ ಇಂದಿನ ಸ್ಥಾನಮಾನ ದೊರೆಯಿತು.

ಶ್ರೀ. ಭುಲಾಭಾಯಿ ದೇಸಾಯಿ ಪ್ರಥಮತಃ ವಕೀಲ. ವಕೀಲನೆಂದು ಮೊದಲಾಗಿ ಹೇಳಿದ ಮೇಲೆ ಮತ್ತೆ ಕಾಂಗ್ರೆಸ್ ನಾಯಕನೆನ್ನಿ, ಎಸೆಂಬ್ಲಿ ಪ್ರಮುಖನೆನ್ನಿ, ಪ್ರಸಿದ್ಧ ಭಾಷಣಕಾರನೆನ್ನಿ, ಉದಾರಿ, ಘನವಂತ ಶ್ರೀಮಂತ ಇತ್ಯಾದಿ ಇತ್ಯಾದಿ ಸಹಸ್ರನಾಮ ಪಠನಮಾಡಬಹುದು. ಸಿಮ್ಲಾ ಸಮ್ಮೇಲನದ ಕಾಲದಲ್ಲಿ ಸಿಂಧಿನ ಅಲ್ಲಾಭಕ್ಷ್ (ರಾಷ್ಟ್ರೀಯ ಮುಸಲ್ಮಾನ್ ನಾಯಕ) ಕೊಲೆಯ ಆರೋಪಕ್ಕೊಳಗಾದ ದೊಡ್ಡ ಜಮೀನ್ದಾರ್ ಮಿ. ಖುರ್ರೋ (ಮುಸ್ಲಿಂ ಲೀಗ್)ಇವರ ಪರ ವಕಾಲತ್ ವಹಿಸಲು ರೂ. 60 ಸಾವಿರದ ರುಸುಮಿಗೊಪ್ಪಿದ್ದರು. ಕಂಡಾಯ ತಗ್ಗಿಸಬೇಕೆಂದು ಹಿಂದೊಮ್ಮೆ ಸರ್ದಾರ್ ಪಟೇಲರ ನಾಯಕತ್ವದಲ್ಲಿ ನಡೆದ ಬಾರ್ಡೋಲಿ ಕರನಿರಾಕರಣಾ ಚಳವಳಿ ವಿಜಯಿಯಾಗಿ ಸಂಧಾನ ಸಮಿತಿ ರಚನೆಗೊಂಡಾಗ ಭುಲಾಭಾಯಿಗಳ ವಕೀಲೀ ಅನುಭವದಿಂದಾಗಿಯೇ ಗುಜರಾತಿನ ರೈತರಕೆಲಸಕ್ಕೆಗೂಡಿತ್ತು. ಈಬಾರಿ ಸುಭಾಸ್ ಸೈನಿಕರನ್ನು ರಕ್ಷಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ಧರಿಸಿ ಮೊದಲನೇ ಡಿಫೆನ್ಸ್ ವಕೀಲರಾಗಿ,ಆದೂ ಚಿಕ್ಕಾಸು ಪ್ರತಿಫಲವಿಲ್ಲವೆಂಬ ಶರ್ತಹಾಕಿ ಭುಲಾಭಾಯಿಗಳನ್ನು ನೇಮಿಸಿತು; ಅಥವಾ ಭುಲಾಭಾಯಿಗಳದ್ವಾರಾದ್ದರಿಂದಲೇ ಡಿಫೆಂಡ್ ಮಾಡಬಹುದೆಂಬ ಧೈರ್ಯ ವಹಿಸಿತು. ಇಲ್ಲವಾದರೆ ರಾಷ್ಟ್ರ ಸ್ವಾತಂತ್ರ್ಯದ ಮೂಲ ಪ್ರಶ್ನೆಗೆ ಧಕ್ಕೆ ಬಿದ್ದು ಆರೋಪಿಗಳ ನಿರಪರಾಧಿತ್ವವಷ್ಟೇ ಖಾತ್ರಿಯಾಗುವದು ಕಾಂಗ್ರೆಸಿನಂತೆಯೇ ರಾಷ್ಟ್ರಕ್ಕೂ ಸ್ವತಃ ಆರೋಪಿಕಳಿಗೂ ಬೇಕಾಗಿತ್ತು. ಆವೆರಡನ್ನೂ ಸಾಧಿಸಬಲ್ಲ—ಸಾಮಾನ್ಯ ನಿರೀಕ್ಷೆಗೆ ಮೀರಿದ ರೀತಿಯಲ್ಲಿ ಸಾಧಿಸಬಲ್ಲ-ಮೆದುಳು ಭಂಡವಾಳ ಭುಲಾಭಾಯಿಗಳಲ್ಲಿ ಮಾತ್ರವಿತ್ತು. ಇಲ್ಲಿ ತಪ್ಪೇನಾದರೂ ನಡೆದಿದ್ದರೆ ಈ ವಕಾಲತಿಗಾಗಿ ಯಾವ ರುಸುಮನ್ನೂ ಭುಲಾಭಾಯಿಗಳಿಗೆ ಕೊಡದಿದ್ದುದೊಂದೇ. ಕೊಡುತ್ತಿದ್ದರೆ ಆ ದಕ್ಷಿಣೆಯ ಮೊತ್ತವನ್ನು ತನ್ನ ಜೇಬಿನಿಂದ ಹಾಕಿ ಅಜಾದ್ ಹಿಂದ್ ರಕ್ಷಣಾ ನಿಧಿಗೆ ವಕೀಲ್ ದೇಸಾಯಿಗಳೀಯುತಿದ್ದರು. ಕಾಂಗ್ರೆಸಿಗಾದ ನಷ್ಟವೆಂದರೆ ಇದೊಂದೇ! ಮಿಕ್ಕೆಲ್ಲಾ ಕಡೆಯಿಂದ ಕೆಂಪುಕೋಟೆ ವಿಚಾರಣೆಯಲ್ಲಿ ಭುಲಾಭಾಯಿಗಳಿಂದಾದುದು ರಾಷ್ಟ್ರಕ್ಕೆ ಲಾಭ ಮಾತ್ರ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ [illegible]ಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುವು.

The Moolky Bank Ltd.,
Moolky, S. K.

"New Year Greetings".

While wishing all our patrons and friends a Happy and Prosperous NEW YEAR, we take this opportunity to thank them for their co-operation and helpful spirit which has enabled us to serve them.

We look forward to more opportunities that will bring us closer in the coming year and strengthen the existing ties.

ESTD. 1906.

CANARA BANK LIMITED
(Incorporated in British India. liability of Members Limited.)

ಸಂಕ ಮುರಿದಲ್ಲೇ ಸ್ನಾನ— ಸಾವು!

ಕಲ್ಕತ್ತಕ್ಕೆ ಸುಮಾರು 46 ಮೈಲು ದೂರದ ಡೈಮಂಡ್ ಬಂದರದಲ್ಲಿ ಇದೇ ತಾ. 12ರಲ್ಲಿ ಶೋಕನೀಯ ಘಟನೆ ನಡೆಯಿತು. ತಾ. 14ನೇ ಮಕರ ಸಂಕ್ರಾಂತಿಯಲ್ಲಿ ಗಂಗಾಸ್ನಾನ ಮಾಡಲು ಸಾಗರ್ ದ್ವೀಪಗಳಿಗೆ ಹೋಗುವದಕ್ಕಾಗಿ ಪದ್ಧತಿಯಂತೆ ಇಡೀ ಬಂಗಾಳದಿಂದ ಯಾತ್ರಿಕರು ಬಂದಿದ್ದರು. ಅವರನ್ನೊಯ್ಯುವ ಹಡಗಕ್ಕೆ ಹತ್ತಲು ನದಿಗೆ ತಾತ್ಕಾಲಿಕವಾಗಿ ರಚಿಸಿದ್ದ ನೀಟ ನಿಲ್ದಾಣಗಳಲ್ಲಿ ಹೋಗುತ್ತಿದ್ದಾಗ ತಾ.12ನೇ ಮುಂಜಾನೆ ಅಂತಹ ಒಂದು ಕಟ್ಟೆ ಮುರಿದು ಎಲ್ಲರೂ ನೀರಿಗೆ ಬಿದ್ದು 10-12 ಮಂದಿ ಮಡಿದು ಎಷ್ಟೋ ಮಂದಿ ಜಖಂಗೊಂಡರು ಅದಕ್ಕಿಂತ ಭಯಂಕರ ಘಟನೆ ಅಂದೇ ಅಪರಾಹ್ನ ಮತ್ತೊಂದು ಬಾರಿ ನಡೆಯಿತು. ಮೊದಲಿನದಕ್ಕಿಂತ ಉದ್ದ ಹಾಗೂ ಅಗಲವಿದ್ದ ಮತ್ತೊಂದು ಕಟ್ಟೆಯೂ ಮುರಿದು, ಅದಂ ಭಾರವಾದ ತೊಲೆಗಳಡಿಯಲ್ಲೇ ಹಲವರು ನಜ್ಜುಗುಜ್ಜಾದರು. ಹಲವರ ಹೆಣಗಳು ದೊರೆತುವು. ಯಾತ್ರಿಕರಲ್ಲಿ ಹೆಂಗಸರು ಮತ್ತು ಮುದುಕರೇ ಅಧಿಕ ಸಂಖ್ಯಾಕರಿದ್ದರು. ಸರಿಯಾದ ವಾರ್ತೆ ಬಂದಿಲ್ಲವಾದರೂ ಪ್ರಥಮ ಶೋಧಕ್ಕೆ ದೊರೆತಂತೆ 150 ಮಂದಿ ಮಡಿದು 80 ಮಂದಿ ಜಖಂಗೊಂಡಿದ್ದಾರೆ.

ಸೋಲ್ಜರರ ಭಯಂಕರ ಅತ್ಯಾಚಾರ

ಬಂಗಾಳದ ಚಿತ್ತಗಾಂಗಿನ ಬಳಿಯ ಸಾತಯಾರಿ ಎಂಬ ಹಳ್ಳಿಯಲ್ಲಿ ಕಳದ ತಾ 7ನೇ ರಾತ್ರಿ ಸೈನಿಕರು ಮಾಡಿರುವ ಭೀಕರ ಅತ್ಯಾಚಾರಗಳ ರೋಮಾಂಚಕರ ವಾರ್ತೆ ಬಂದಿದೆ ಅಂದು ಅಪರಾಹ್ನ ಮೂವರು ಸೋಲ್ಜರರು ಓರ್ವ ಹೆಂಗುಸನ್ನೆಳೆದುಕೊಂಡು ಹೋಗುತ್ತಿದ್ದಾಗ ಹಳ್ಳಿಗರು ಅವರನ್ನು ಬಡಿದೋಡಿಸಿದರು; ಬೆನ್ನಲ್ಲೇ ಆರು ಮಂದಿ ಸೋಲ್ಜರರು ಬಂದರೂ ಅವರನ್ನೂ ಹಿಮ್ಮೆಟ್ಟಿಸಲಾಯಿತು. ರಾತ್ರಿ ಸುಮಾರು 300 ಮಂದಿ ಸೈನಿಕರು ಮದ್ದಾನೆ ಹಿಂಡಿನಂತೆ ಹಳ್ಳಿಗೆ ನುಗ್ಗಿ, ಸಿಕ್ಕಿ ಸಿಕ್ಕಿದವರಿಗೆ ಹೊಡೆದು,ಸುಮಾರು 56 ಮನೆಗಳಿಗೆ ಪೆಟ್ರೋಲು ಸುರಿದು ಬೆಂಕಿ ಹಚ್ಚಿ.ಮಹಿಳೆಯರ ಮೇಲೆ ಅತ್ಯಾಚಾರ ಮಾಡಿ ನರರಾಕ್ಷಸರಂತೆ ಇಡೀ ಊರನ್ನೇ ಧೂಳೀಪಟ ಮಾಡಿಬಂದರೆಂಬ ವಾರ್ತೆಯು ಹಾಹಾಕಾರವನ್ನೆಬ್ಬಿಸಿದೆ.ರೂ. 15000ಬೆಲೆಯ ಸೊತ್ತುಗಳನ್ನವರು ಲುಟಾಯಿಸಿರುವರೆಂದೂ ಒಟ್ಟಿಗೆ ರೂ.2ಲಕ್ಷ ನಷ್ಟವಾಗಿರಬಹುದೆಂದೂ ಊಹಿಸಲ್ಪಟ್ಟಿದೆ. ಒಬ್ಬನನ್ನು ಉಂ

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಯೆಮೂಂದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,
F. D. S. (A. E.) Tollygunge, Calcutta
ಸ್ಟಾಕಿಸ್ಟ್: ತಾ ಕಂಪೆನಿ, ಮಂಗಳೂರು

ಆಗಬಾರದವು ಆಗಿಹೋದುವು

ಯುವ ಬೆಂಕಿಗೆಸೆದು ಜೀವಂತ ದಹನ ಮಾಡಿದರಲ್ಲದೆ ಬೇರೆ ಮೂವರು ಹಳ್ಳಿಗರೂ ಮಡಿದರು. ಹಲವರು ಜಖಂಗೊಂಡಿದ್ದಾರೆ. 13 ಮಂದಿ ಆಸ್ಪತ್ರೆ ಸೇರಿದ್ದಾರೆ. ಶ್ರೀಮತಿ ನೆಲ್ಲಿ ಸೆನ್‌ಗುಪ್ತರು ಕಾಂಗ್ರೆಸ್ ಕಮಿಟಿಗೂ, ಕಾಂಗ್ರೆಸ್ ಕಮಿಟಿಯು ಸ್ವತ: ಬಂದು ವಿಚಾರಿಸುವಂತೆ ಗಾಂಧಿಜೀಗೂ ವರದಿ ಮಾಡಿದ್ದಾರೆ. ಗಾಂಧಿಜೀ ಆತುರಗೊಂಡು ಕಾಂಗ್ರೆಸ್ ಕಮಿಟಿಯಿಂದ ವಿವರ ಕೇಳಿದ್ದಾರೆ. ಅತ್ಯಾಚಾರೀ ಸೈನಿಕರು 'ನಾಗರಿಕ ಮಂಚೂಣಿ ವಿಭಾಗ'ದವರೆಂದು ತಿಳಿದುಬಂದಿದೆ.

ಜಿನ್ನರು ರಕ್ತ ಕೇಳುವ ದಿನವಿದೆ!

ಇದೇ ತಾ. 11ರಲ್ಲಿ ರಾಷ್ಟ್ರದ ಹಲವೆಡೆಗಳಲ್ಲಿ ಮಿ. ಜಿನ್ನರ ಸೂಚನೆಯಂತೆ ಮುಸ್ಲಿಂ ಲೀಗ್‌ನವರು 'ವಿಜಯ ದಿನ' ಆಚರಿಸಿದ್ದರು. ಈ ಅವಧಿಯು ಮುಸ್ಲಿಂ ಶಾಸ್ತ್ರಾನುಸಾರವಾಗಿ ದುಃಖದ ದಿನಗಳಾದುದರಿಂದ ಧರ್ಮಾಭಿಮಾನಿ ಮುಸಲ್ಮಾನರಾರೂ ಈ ಮಹದನ್ಯಾಯಮಾಡಬಾರದೆಂದು ಬೊಂಬಾಯಿ ಚುನಾವಣೆಯಲ್ಲಿ ಮಿ. ಜಿನ್ನರಿಗಿದಿರಾಗಿ ನಿಂತು ಸೋತಿದ್ದ ಸೇಟ್ ಹುಸೇನ್‌ಭಾಯಿ ಲಾಲ್ಜಿಯವರ ಪ್ರತಿಭಟನೆಯಿದ್ದಿತು. ನವಡಿಲ್ಲಿಯ 50 ಸಾವಿರ ಜನರ ಸಭೆಯಲ್ಲಿ ಮಿ. ಜಿನ್ನರು ಭಾಷಣ ಮಾಡುತ್ತಾ ಮುಸಲ್ಮಾನರು ಸಶಕ್ತ, ಸುಸಂಘಟಿತ ಮತ್ತು ದೃಢ ಶಪಥಧಾರೀ ರಾಷ್ಟ್ರವಾಗಿದ್ದಾರೆ' ಎಂದರು. "ಮುಸಲ್ಮಾನರು ಪಾಕಿಸ್ತಾನಕ್ಕಾಗಿ ತಮ್ಮ ರಕ್ತ ಸುರಿಸುವದಕ್ಕೂ ತಯಾರಿದ್ದಾರೆ ಆದರೆ ಆ ಸಮಯವನ್ನೂ ಬಂದಿಲ್ಲ. ಈಗ ನಾವು ಚುನಾವಣೆಗಳಿಗಿಳಿದಿದ್ದೇವೆ. ಆದ್ದರಿಂದ ಮುಸಲ್ಮಾನರು ಈಗ ರಕ್ತ ಸುರಿಸಬಾರದೆಂದು ನಾನು ಅಪೇಕ್ಷಿಸುತ್ತೇನೆ. ಆದರ ಬದಲಿಗೆ ಪಾಕಿಸ್ತಾನ್ ಮತ್ತು ಮುಸ್ಲಿಂ ಲೀಗಿಗೆ ಮತ ಮಾತ್ರ ಕೊಟ್ಟರೆ ಸಾಕೆನ್ನುತ್ತೇನೆ. ರಕ್ತ ಸುರಿಸುವ ಸಮಯ ಬರುವಾಗ ನಾವದಕ್ಕೆ ತಯಾರಿದ್ದೇವೆ. ಪಾಕಿಸ್ತಾನವು ನಮ್ಮ ಜೀವನ—ಮರಣದ ಪ್ರಶ್ನೆ. ಇದರಲ್ಲಿ ಪೂರ್ಣ ವಿಜಯಗಳಾದ ಹೊರತು ನಾವು ವಿರಮಿಸುವಂತಿಲ್ಲ" ಎಂದು ಸ್ಫೂರ್ತಿದಾಯಕ ಭಾಷಣವಿತ್ತರು. ಕೇಂದ್ರ ಎಸೆಂಬ್ಲಿ ಚುನಾವಣೆಗಳಲ್ಲಿ ಲೀಗ್ ವಿಜಯಯಾದ ಕುರಿತು ಆಚರಿಸಲ್ಪಟ್ಟ ದೇಶವ್ಯಾಪೀ ಮುಸ್ಲಿಂ ಲೀಗ್ ಮಹೋತ್ಸವವಿದು.

ಕಳೆದ ೧೭ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur **B. S. Sawkar,** B.A. LL.B., *Chairman* — **A. S. Kini,** *Managing Director.*

ಯುನೈಟೆಡ್ ಕರ್ನಾಟಕ ಇನ್ಸುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ

THE UNITED KARNATAK INSURANCE Co. Ltd. DHARWAR

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ-

Oranising Office:- **Court Road, UDIPI.**

—ಮಕ್ಕಳನ್ನು ಹಡೆಯುವುದು ಸಾಕು—

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೦ಆಣೆ.

ಮಾಲಕರು:—ದಾಲಪ್ಪಾ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ತುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲಬಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ರೋಗಿ ಪಟ್ಟಿಯಲ್ಲಿರುವ ಧುರೀಣರು

...ಗ್ರೆಸ್ ಕಾರ್ಯಕಾರೀ ಸಮಿತಿಯ ಹೆಚ್ಚಿನ ಸದಸ್ಯರು ಒಂದಲ್ಲೊಂದು ರೋಗ ಪೀಡಿತರಾಗಿಯೇ ಇದ್ದಾರೆ. ಇದಕ್ಕೆ ಬಹಳ ವರ್ಷಗ ಬಂಧನವಾಸವೇ ಕಾರಣ. ಕೇಂದ್ರ ಪಾರ್ಲಿಮೆಂಟರಿ ಸಮಿತಿ—ಕಾಂಗ್ರೆಸ್ ಕಾರ್ಯಕಾರಿ ಸಮಿತಿ-ಮತ್ತಿತರ ಕೇಂದ್ರ ಪರ್ಯಾಲೋಚನಾ ಸಭೆಗಳ 'ಕೋರಮ್' ತಗ್ಗಿಸಿಕೊಳ್ಳಬೇಕೆಂಬಷ್ಟು ಧುರೀಣರ ಅಸ್ವಸ್ಥತೆಯು ಹೆಚ್ಚುತ್ತಿದೆ. ಬಾಬು ರಾಜೇಂದ್ರ ಪ್ರಸಾದರ ಉಬ್ಬಸ ರೋಗ ಇತ್ತೀಚೆಗೆ ಪರಮಾವಧಿಗೆ ಮುಟ್ಟಿ ಹೇರಳ ಪೆನಿಸಿಲಿನ್ ಪ್ರಯೋಗದ ನಂತರ ಈಗ ತಾನೇ ಅವರು ಸ್ವಲ್ಪ ಸುಧಾರಿಸಿದ್ದಾರೆ. ಮಹಾ ರಥದಂತೆ ಕಾಣುತ್ತಿದ್ದ ಮೌಲಾನಾ ಅಜಾದರ ದಪ್ಪ ಎಲುಬುಗಳ ಬಲದಿಂದ ಹಿಂದಿನ ಆಕಾರ ಮಾತ್ರವಾಗಿದ್ದಾರೆ. ಲಾಹೋರಿನ ತನ್ನ ತಂಗಿಯ ಮನೆಗೆ ಹೋಗಿದ್ದ ಸರೋಜಿನಿ ದೇವಿಯನ್ನು ಪತ್ರಿಕಾ ಪ್ರತಿನಿಧಿ ಭೇಟಿಯಾದಾಗ ಈಸೀಚೆಯರಿನಲ್ಲಿ ಬಿದ್ದಿದ್ದ ಶ್ರೀಮತಿಯವರು "ನನ್ನನ್ನು ಉಪದ್ರವಿಸಬೇಡಿ. ನಾನು ರೋಗಿ ಪಟ್ಟಿಯಲ್ಲಿದ್ದು ಈಗ ತಾನೇ ಹಾಸಿಗೆ ಬಿಟ್ಟು ಬಂದಿದ್ದೇನೆ. ಮತ್ತೊಮ್ಮೆ ಅಲ್ಲಿಗೆ ದಾಖಲಾಗಲಿದ್ದೇನೆ" ಎಂದರು. ಡಾ! ಶ್ಯಾಮ ಪ್ರಸಾದ ಮುಖರ್ಜಿಯವರ ಆರೋಗ್ಯ ನೊನ್ನೆ ತಾನೇ ಮತ್ತೊಮ್ಮೆ ಕೆಟ್ಟು ಆತುರಕ್ಕೀಡು ಮಾಡಿದೆ. ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಹಾಸಿಗೆ ಹಿಡಿದಿದ್ದಾರೆ ಹೀಗೆ ಪ್ರಾಯಸ್ಥ ಧುರೀಣರೆಲ್ಲಾ 'ನೀರಿಗೆ ಬಾಗಿದ ಮರಗಳು', ಅಂತೆಯೇ 'ತೂತು ಬಿದ್ದ ಮರಗಳು' ಆಗಿ ಸಮಯ ದೂಡುತ್ತಿರುವಂತಿದೆ.

WANTED.

Wanted Two Higher Grade Trained Teachers of either sex for the Kutpady Aided Ele. School for permanent Vacancy.

Apply—

Rev. Fr S. C Lewis,
Udyavara P. O.

'ಬಹದೂರ'

ಕಬ್ಬಿನ ಗಾಣಗಳು

ಗಟ್ಟಿಮುಟ್ಟಾದ ರಚನೆ,

ಉತ್ತಮದರ್ಜೆಯ ಕೈಗಾರಿಕೆ

ಕ್ರಯ ರೂ **430/-**

ಬ್ರಿಟಿಷ್ ಇಂಡಿಯಾ ಎಂಜಿನಿಯರಿಂಗ್ ಕಂ.ಬೊಂಬಾಯಿ 10

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Canara Banking Corporation Limited.

(Incorporated in British India, with limited Liability.)

Estd: 1906

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... 2½%

6 months ... 2¾%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೧೭-೧-'೪೬

ಪರಿಕ್ಷ್ಪಿ ಸಮಿತಿ

ಭಾರತಕ್ಕಾಗಮಿಸಿರುವ ಪಾರ್ಲಿಮೆಂಟರಿ ಶಿಷ್ಟ ಮಂಡಲವು ಥಿಲ್ಲಿ ಮತ್ತು ಪಂಜಾಬು ಸಂಚಾರವನ್ನು ಮುಗಿಸಿ, ಮಧ್ಯ ಭಾರತ, ಬೊಂಬಾಯಿ, ಮದ್ರಾಸ್ ಕಡೆಗೆ ಯಾತ್ರೆ ಮಾಡಲಿದೆ. ಜಿನ್ನ, ನೆಹರು, ಆಸಫ್ ಅಲಿ ಮೊದಲಾದ ಧುರೀಣರ ಭೇಟಿಯನ್ನು ಇಷ್ಟರಲ್ಲೇ ಮುಗಿಸಿದೆ; ನಾಯಕ ಬಿಲ್ಲೆ ತೊಟ್ಟವರಲ್ಲಿ ಯಾರನ್ನು ಬಿಡುವ ಇಚ್ಛೆಯೂ ಈ ಸಮಿತಿಗಿಲ್ಲವಾದ್ದರಿಂದ ಎಲ್ಲರೂ ಸಂಭಾಷಣಾ ಸಿದ್ಧತೆಯಲ್ಲಿರುವಂತಿದೆ. ಒಂದೆರಡು ಹಳ್ಳಿಗಳನ್ನೂ ಸಂದರ್ಶಿಸಿ, ರಾಜಕೀಯ ಶಿಶುಗಳಂತಿರುವ ಗ್ರಾಮಸ್ಥರಿಗೆ ತಕ್ಕಂತೆ ಮೊದಲ ಪಾಠದ ಪ್ರಶ್ನೆಗಳನ್ನು ಕೇಳಿ ಉತ್ತರಪಡೆದಿದ್ದಾರೆ. ಅಂತೂ ಪಾರ್ಲಿಮೆಂಟ್ ಸದಸ್ಯರ ಶಿಷ್ಟ ಮಂಡಲವು ಥಿಲ್ಲಿಯಿಂದಾರಂಭಿಸಿ ಹಳ್ಳಿಯ ವರೆಗೆ, ನಾಯಕನಿಂದಾರಂಭಿಸಿ ಅನಕ್ಷರೀ ಹಳ್ಳಿಗನ ವರೆಗೆ ಎಲ್ಲವನ್ನೂ, ಎಲ್ಲರನ್ನೂ ಅಧ್ಯಾಪಕನಂತೆ, ಅಥವಾ ಡಾಕ್ಟರನಂತೆ ಪ್ರಶ್ನಿಸುವ ಪರೀಕ್ಷಿಸುವ ಘನಸ್ಥಾನವಿಲ್ಲ... ಸ್ವಾರಸ್ಯವೆಂದರೆ ಹಿಂದುಸ್ಥಾನದಲ್ಲಿ ತಮಗ ಪ್ರಿಯವಾದುದಾವುದನ್ನೂ ಈ ಸಮಿತಿಯವರು ಕಾಣುವ ಸಂಭವವಿಲ್ಲ. ಮಿ. ಜಿನ್ನರ ಅಭಿಪ್ರಾಯವು ಅವರನ್ನು ಮೋಹಿಸಿದೆ; ಪಂಡಿತ ನೆಹರುಗಳಿಂದದೊರೆತ ಆಲೋಚನೆಯೂ ಹರ್ಷಪುಳಕವನ್ನುಂಟುಮಾಡಿದೆ, ಹಳ್ಳಿಗರು ಕೊಟ್ಟ ಅಭಿಪ್ರಾಯ ಅಮೂಲ್ಯವೆಂದಿದ್ದಾರೆ; ಥಿಲ್ಲಿಯಲ್ಲಿ ಪಡೆದ ಅನುಭವವೂ ಅಮೋಘವೆನ್ನುತ್ತಾರೆ. ರಾಜಕೀಯ, ಸಾಮಾಜಿಕ ಅಭಿಪ್ರಾಯಗಳ ಮಟ್ಟಿಗೆ ಹಿಂದೀಯರೊಳಗೆ ಉತ್ತರ-ದಕ್ಷಿಣ ಧ್ರುವಗಳಷ್ಟು ಅಂತರವಿದೆ ಎಂದು ಬ್ರಿಟಿಷರು ಬಲವಾಗಿ ಪ್ರಚಾರ ಮಾಡುತ್ತಿದ್ದರೂ ಈ ಸಮಿತಿಗೆ ಅವೆಲ್ಲಾ ಏಕ ಪ್ರಕಾರ ಆನಂದವೊಂದನ್ನೇ ಕೊಟ್ಟವೆ. ಇಂತಹ ಮಧುರಭಾವ ಪ್ರದರ್ಶನವು ಸಭ್ಯರ ಲಕ್ಷಣವೆಂಬುದು ನಿಜ; ಈ ಸಮಿತಿಯು ಸಂಚಾರೀ ಸಭ್ಯರ ಕೂಟ ಮಾತ್ರವೆಂದು ಪ್ರಕಟಿಸಲ್ಪಟ್ಟಿರುವುದೂ ನಿಜ. ಇವು ಮಾತ್ರ ನಿಜವೆಂದಾದರೆ ಹಿಂದೀ ಧುರೀಣರು ಅವರ ಭೇಟಿಗೆ ಇಷ್ಟೊಂದು ಬೆಲೆಕೊಡಬೇಕೆಂದಿಲ್ಲ; ಅವರಿದಿರು ಪರಸ ಸಂಭಾಷಣೆಗಲ್ಲದೆ ಯಾವ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದಿಲ್ಲ. ಈಲಕ್ಷ್ಯೇಕ್ಷ ಪಕ್ಕಾಗಿ ಬಂದವರನ್ನು ವಿವಿಧ ವಿನೋದಾವಳಿಗಳಿಂದ ರಮಿಸಲು ನಮ್ಮ ಗಾಂಧಿ, ನೆಹರು, ಜಿನ್ನರಂತಹ ಪ್ರಮುಖರು ಪಾತ್ರ ವಹಿಸುವುದು ಭಾರತಕ್ಕೆ ಭೂಷಣವಲ್ಲ. ದೇಶದ ಪರಿಸ್ಥಿತಿಯನ್ನು ಪ್ರತ್ಯಕ್ಷ ಕಂಡು ಮುಂದಟ್ಟು ಮಾಡಿಕೊಂಡು ತಮ್ಮ ನ್ಯಾಯ ಬುದ್ಧಿಗೆ ಸರಿಯೆಂದು ತೋರಿದ್ದನ್ನು ಬ್ರಿಟಿಷ್ ಸರಕಾರದಿಂದ ಮಾಡಿಸುವೆವೆಂಬ ಆತ್ಮ ವಿಶ್ವಾಸ ಈ ಸಮಿತಿಯವರಿಗಿದ್ದರೆ, ಅವರು ಚಿತ್ತಗಾಂಗ್ ಬಳಿಯ ಹಳ್ಳಿಯಲ್ಲಿ ನಡೆದ ಸೈನಿಕ ಅತ್ಯಾಚಾರಗಳನ್ನು ಆಗತ್ಯ ಕಾಣಬೇಕು. ಆಗೋಸ್ಟು ಗಲಭೆಯ ದುರಂತಗಳು ನಡೆದ ಕಡೆ ಭೇಟಿ ಕೊಟ್ಟು ಪರೀಕ್ಷಿಸಬೇಕು. ಆದರೆ ಈ ಸುಖ ಪ್ರವಾಸಿಕರು ಮನಸ್ಸಿಗಂತಹ ಕಹಿಯನ್ನು ಹಚ್ಚಿಕೊಳ್ಳಲು ಬಂದವರಲ್ಲವೆಂಬಂತೆ ಕಾಣುತ್ತದೆ. ಅಂತರ್ಯಾತ: ವಿನೋದಗೊಳ್ಳುತ್ತಾ, ಬಾಯಿಯಲ್ಲಿ ಆನಂದಗೊಂಡೆವೆಂದು ಹೇಳಲಾಗುವಂತಹವನ್ನೇ ಅವರು ಕಾಣುತ್ತಾ ಹೋಗುವಂತಿದೆ! ಇಂತಹ ಲಗು ಬುದ್ಧಿಯ ಬ್ರಿಟಿಷ್ ಅತಿಥಿಗಳನ್ನು ಸತ್ಕರಿಸಿ ದಣಿದ ದೇಶ ಹಿಂದುಸ್ಥಾನ. ಬ್ರಿಟಿಷರು ತಮ್ಮ ಆ ದುಶ್ಚಟವನ್ನು ಇನ್ನೂ ಬಿಟ್ಟಿಲ್ಲ; ಹಿಂದೀಯರಾದರೂ ಅಂಥವರ ಆಗಮನಕ್ಕೆ ಪ್ರಾಮುಖ್ಯತೆ ಕೊಡುವ ತಮ್ಮ ಚಾಳಿಯನ್ನು ಇನ್ನಾದರೂ ಬಿಡಬಾರದೇಕೆ?

ಮಜೂರರ ಬೇಡಿಕೆಗಳು

ಮೂರು ತಿಂಗಳ ಬೋನಸ್ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಕಾದು ನೋಡಿ ಬೇಸತ್ತ ಮಂಗಳೂರಿನ ಹೆಂಚು, ನೇಯಿಗೆ ಇತ್ಯಾದಿ ಸುಮಾರು 28 ಕಾರ್ಖಾನೆಗಳ ಮಜೂರರು ಇದೇ ತಾ. 20ರೊಳಗೆ ತಮ್ಮ ಕೇಳಿಕೆ ಮಾನ್ಯವಾಗದಿದ್ದರೆ ಮುಷ್ಕರ ಹೂಡುವೆವೆಂದು ಕೊನೆಯ ನೋಟೀಸು ಕೊಟ್ಟಿದ್ದಾರೆ. ಮಂಗಳೂರಿನ ಸುಮಾರು 3 ಸಾವಿರದಿಂದ 5 ಸಾವಿರದ ವರೆಗಿನ ಕೆಲಸಗಾರರು ಈ ರೀತಿ ಕಠಿಣ ಕಾರ್ಯರಂಗಕ್ಕಿಳಿಯುವಾಗ ಜಿಲ್ಲೆಯ ಇತರ ಮಜೂರರು ಹಿಂಜರಿದು ನಿಂತು ತಮ್ಮ ಬಂಧುಗಳನ್ನು ಆಳಕ್ಕಿಳಿಸಿದ ಅಪವಾದ ಹೊರಲಾರರು. ಆಗ ಪರಿಸ್ಥಿತಿ ವಿಷಮಗಾಂಭೀರ್ಯ. ಇಕ್ಕಡೆಯ ವರ ವಾದ ವಿಮರ್ಶೆ ಮಾಡುವ ಹೊಣೆಯನ್ನು ನಾವಿಲ್ಲಿ ವಹಿಸುವದಿಲ್ಲ; ಜಿಲ್ಲೆಯ ಜನ ಪ್ರಮುಖರೇ ಆ ಹೊಣೆ ಹೊರತಕ್ಕದ್ದೆಂದು ಸೂಚಿಸದಿದ್ದರೆ ಮಾತ್ರ ನಾವು ಕರ್ತವ್ಯಬಾಹಿರರಾದಂತಾಗುವದು. ದುರ್ದೈವವಶಾತ್ ನಮ್ಮ ಜಿಲ್ಲೆಯ ಸಾರ್ವಜನಿಕ ಮುಂದಾಳುಗಳಲ್ಲಿ ಹೆಚ್ಚಿನವರು ಮಜೂರ-ವ್ಯಾಪಾರಕ ಪಂಗಡಗಳ ಪೈಕಿ ಯಾವ ಪಕ್ಷಕ್ಕೂ ಸೇರಿದವರಲ್ಲ. ಇಂತಹ ಜಗಳಗಳಲ್ಲಿ ಪಂಚಾಯಿತದಾರರಾಗಬಲ್ಲ ಸ್ಥಾನದಲ್ಲೇ ಅವರಿದ್ದಾರೆ. ಅದಕ್ಕನುಗುಣವಾದ ಪರಿಸ್ಥಿತಿಯೂ ಈಗ ನಿರ್ಮಾಣಗೊಂಡಿದೆ. ಜನತೆಯ ಜೀವನಾವಶ್ಯಕ ಸಾಮಾಗ್ರಿಗಳ ನಿರ್ಮಾಣ ಕ್ಷೇತ್ರದಲ್ಲಾಗುವ ಮುಷ್ಕರವು ಮಜೂರರನ್ನು ಮತ್ತು ಪ್ಯಾಲಕರನ್ನು ಮಾತ್ರ ಬಾಧಿಸುವಂತಹದಲ್ಲ. ಅದರ ದುಷ್ಪರಿಣಾಮವು ಜನಜೀವನದಲ್ಲಾಗದೆ ಹೋಗದು. ಆದ್ದರಿಂದ ಇಲ್ಲೀಗ ಪ್ರಥಮತಃ ಪರೀಕ್ಷೆಗೊಳಗಾಗಿರುವದು ಜನ ಪ್ರಮುಖರ ಸ್ವಕಾರ್ಯನಿಷ್ಠೆಯೆಂದು ನಮಗನ್ನಿಸುತ್ತಿದೆ ಸಂಧಾನಾತೀತವಾದ ಜಗಳವೊಂದನ್ನು ಪ್ರಪಂಚವಿದು ವರೆಗೆ ನಿರ್ಮಿಸಿಲ್ಲ. ಅದರಲ್ಲೂ ಮಂಗಳೂರಿನ ನಿಯೋಜಿತ ಮುಷ್ಕರವು ಮುಂದಾಳುಗಳ ನಾಮ ಮಾತ್ರ ಪ್ರಯತ್ನದಿಂದ ಬಗೆಹರಿಯುವಂತಹದೆಂಬ ಆಶೆ ಕಾಣುತ್ತಿದೆ. ಆದ್ದರಿಂದ ಜಿಲ್ಲೆಯ ಪ್ರಮುಖರು ಈ ಗಂಭೀರ ಪರಿಸ್ಥಿತಿಯ ಕಡೆಗೆ ಗಮನಕೊಟ್ಟು, ತಮ್ಮಲ್ಲಿರಬಹುದಾದ ತಾತ್ಸಾರ ಅಥವಾ ಅಸಡ್ಡೆಯನ್ನು ಬದಿಗೊತ್ತಿ ಸಮಯ ಮೀರುವ ಮೊದಲೇ ಸಂಧಾನ ಸಾಧಿಸುವರೆಂದು ನಂಬುತ್ತೇವೆ.

ಶ್ರೀ. ಭೂಪಾಳಂ ಚಂದ್ರಶೇಖರ ಅಯ್ಯರ್—ಮೈಸೂರು ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀಯುತರು ದ. ಕ. ಜಿಲ್ಲಾ ಹಿಂದೂ ಸಭಾಧಿವೇಶನಕ್ಕಾಗಿ ಉಡುಪಿಗೆ ಬಂದಿದ್ದು ತಾ. 15ನೇ ಅಪರಾಹ್ನ ರಥಬೀದಿಯ ಸಭೆಯಲ್ಲಿ ಹಿಂದೂ ಸಂಘಟನೆಯ ಕುರಿತು ಸ್ಫೂರ್ತಿದಾಯಕ ಭಾಷಣವಿತ್ತರು.

ಪರ್ಕಳ:—ತಾ. 2-2-46ನೇ ಶನಿವಾರ ರಾತ್ರೆ ಹೆರ್ಗ ಗ್ರಾಮದ ಪರ್ಕಳದಲ್ಲಿ ಶ್ರೀ ಮಂದಾರ್ತಿ ಮತ್ತು ಶ್ರೀ ಅಮೃತೇಶ್ವರಿ ಮೇಳದವರ ಪ್ರಚಂಡ ಜೋಡಾಟವು ನಡೆಯಲಿರುವುದು. ಎಲ್ಲರಿಗೂ ಸ್ವಾಗತವಿದೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರತಿನಿಧಿ ಚುನಾವಣಾ ಖಾತೆಯ ಪ್ರಕಟಣೆ.

ರಿಟರ್ನಿಂಗ್ ಆಫೀಸರರ ನೇಮಕ

1946ನೇ ಜನವರಿ ತಾ. 6ರಲ್ಲಿ ಸೇರಿದ ಕ. ಪ್ರಾಂ. ಕಾಂ. ಕಾರ್ಯಕಾರೀ ಸಮಿತಿಯು, ಪ್ರಾಂತಿಕ ಪ್ರತಿನಿಧಿ ಚುನಾವಣೆ ಸಂಬಂಧದ ಸೂಚನೆಗಳನ್ನೀಯುವದಕ್ಕೂ ಜಿಲ್ಲಾ ರಿಟರ್ನಿಂಗ್ ಆಫೀಸರರುಗಳನ್ನು ನೇಮಿಸುವದಕ್ಕೂ ಅಧಿಕಾರಕೊಟ್ಟಂತೆ ಈ ಕೆಳಗಿನ ಮಹನೀಯರನ್ನು ಕೆಳಗಡೆ ಕಾಣಿಸಿದ ಸ್ಥಳಗಳಿಗಾಗಿ ರಿಟರ್ನಿಂಗ್ ಆಫೀಸರರಾಗಿ ನೇಮಿಸುತ್ತೇನೆ.

ಧಾರವಾಡ ಜಿಲ್ಲೆ—ಶ್ರೀ. ಆರ್. ಎಸ್. ಹುಕ್ಕೇರಿಕರ್, ಧಾರವಾಡ. ಬೆಳ್ಗಾಂವ್ ಜಿಲ್ಲೆ ಶ್ರೀ. ಬಸವಣ್ಣಪ್ಪ ಸಂಬಾರಗಿ C/o ಜಿಲ್ಲಾ ಕಾಂಗ್ರೆಸ್ ಕಮಿಟಿ, ಬೆಳ್ಗಾಂವ್. ಬಿಜಾಪುರ ಜಿಲ್ಲೆ—ಶ್ರೀ ಮಹಾರುದ್ರಪ್ಪಾ ಪಟ್ಟಣಸೆಟ್ಟಿ C/o ಜಿಲ್ಲಾ ಕಾಂಗ್ರೆಸ್ ಕಮಿಟಿ, ಬಿಜಾಪುರ. ಉತ್ತರ ಕನ್ನಡ ಜಿಲ್ಲೆ—ಶ್ರೀ. ಎಲ್. ಎಸ್. ನಾಯಕ್, ಎಂ. ಎ., ಪ್ಲೀಡರ್, ಕುಮಟಾ. ದಕ್ಷಿಣ ಕನ್ನಡ ಜಿಲ್ಲೆ—ಶ್ರೀ. ಎಚ್. ನಾರಾಯಣರಾವ್, C/o ಜಿಲ್ಲಾ ಕಾಂಗ್ರೆಸ್ ಕಮಿಟಿ ಮಂಗಳೂರು.-ಬಳ್ಳಾರಿ ಜಿಲ್ಲೆ—ಶ್ರೀ. ಎಚ್. ರಾಘವೇಂದ್ರ ರಾವ್, ವಕೀಲ್, ಹೊಸಪೇಟೆ. ಕೊಡಗು ಜಿಲ್ಲೆ—ಶ್ರೀ. ಸಿ. ಎ. ಮಂದಣ್ಣ, ಎಡ್ವೊಕೇಟ್. ಮರ್ಕರಾ. ಮೈಸೂರು ಸಂಸ್ಥಾನದ ಜಿಲ್ಲೆಗಳಿಗೂ ಬೆಂಗಳೂರು ಕೆಂಟೋನ್ಮೆಂಟಿಗೂ ರಿಟರ್ನಿಂಗ್ ಆಫೀಸರರನ್ನು ನೇಮಿಸುವ ಅಧಿಕಾರವನ್ನು ಮೈಸೂರು ಸಂಸ್ಥಾನಿಕ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ. ಎಚ್. ಕೆ. ವೀರಣ್ಣ ಗೌಡರಿಗೆ ಕೊಟ್ಟಿದ್ದೇನೆ.

ಹನುಮಂತಪ್ಪ ಅಂಚಿ,
ಪ್ರ. ಕಾರ್ಯದರ್ಶಿ,
ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ.

ನೋಟೀಸು

ಶ್ರೀ ಹಿರಿಅಡಕ ಮಹತೋಬಾರ ಶ್ರೀವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿಗೆ

ಭಕ್ತ ವೃಂದದವರೂ ಸ್ಥಳಾಭಿಮಾನಿಗಳೂ ಪ್ರೋತ್ಸಾಹವ ಬೆಂಬಲವನ್ನಿತ್ತು ಶ್ರೀಶಾನುಗ್ರಹಕ್ಕೆ ಪಾತ್ರರಾಗುವಂತೆ ಅಪೇಕ್ಷಿಸುತ್ತೇನೆ.

ಎ. ಎಂ. ನಾಗಣ್ಣ ಹೆಗ್ಡೆ,
ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್; ಮೆನೇಜಿಂಗ್ ಟ್ರಸ್ಟಿ-
ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, ಹಿರಿಯಡ್ಕ, ದ. ಕನ್ನಡ.

ವಿ. ಸೂ:—

ತಾ. **6—2—46**ಕ್ಕೆ

ಪ್ರಚಂಡ ಜೋಡಾಟ ಮಾಡಿಸುವದಾಗಿ ನಿಶ್ಚಯಿಸಿರುತ್ತದೆ. ಧರ್ಮಾರ್ಥ ಪ್ರವೇಶ.

ಎಲ್ಲರಿಗೂ ಸುಸ್ವಾಗತವಿದೆ.

ನೋಟೀಸು.

ಮಹಾ ಜನರಲ್ಲಿ ವಿನಂತಿ—

ಉಡ್ಪಿ ತಾಲ್ಲೂಕು ಮೂಡನಿಡಂಬೂರು ಗ್ರಾಮಕ್ಕೆ ಸೇರಿದ ನೆಲ್ಲಿಕಟ್ಟೆ ಯಾನೆ ಸಂತೆಕಟ್ಟೆ ಶ್ರೀ ಸಾವಿರಾಳ ಧೂಮಾವತಿಯ ಕಟ್ಟೋಣ ಜೀರ್ಣೋದ್ಧಾರದ ಕೆಲಸವು ಊರ ಮ ಪರಗ್ರಾಮಸ್ಥರ ಸಹಾಯದಿಂದ ಸಂಪೂರ್ಣವಾಗಿರುವುದರಿಂದ ಆ ಬಗ್ಗೆ ಸಪ್ರ ಕಟ್ಟೋಣದ ಪ್ರವೇಶವು ಇದೇ ಬರುವ ತಾ. 21—1—45 ಮತ್ತು 22—1—46ಕ್ಕೆ ಉಡ್ಪಿ ತಾಲ್ಲೂಕು ಮೂಡನಿಡಂಬೂರು ಗ್ರಾಮದ ಪಟೇಲರ ಅಧ್ಯಕ್ಷತೆಯಲ್ಲಿ ನೆರವೇರುವುದಕ್ಕೆ ನಿಶ್ಚಯಿಸಿರುತ್ತದೆ. ಆ ಬಗ್ಗೆ ಊರ ಮ ಪರವೂರಿನ ಯಾವತ್ತು ಭಕ್ತಜನರು ಸದ್ರಿ ಕೆಲಸಕ್ಕೆ ದಯಮಾಡಿ ಬಂದು ಅದರಲ್ಲಿ ಭಾಗವಹಿಸಿ ಸದ್ರಿ ಕೆಲಸವನ್ನು ಕಾಂಗಗೊಳಿಸಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

ಮೂಡನಿಡಂಬೂರು ಗ್ರಾಮಸ್ಥರು.

ಕಳ್ಳಸಂತೆಯ ಹಣಕ್ಕೊಂದು ಹೊಡೆತ!

ರೂ. ೫೦೦ ಮತ್ತು ಮೇಲಿನ ನೋಟುಗಳು ಹಿಂದೆಗೆದುಕೊಳ್ಳಲ್ಪಟ್ಟುವು.

ಕರೆನ್ಸಿ ನೋಟುಗಳ ಸಂಬಂಧವಾಗಿ ಇದೇ ತಾ 12ರಲ್ಲಿ 2 ಪ್ರಾಮುಖ್ಯ ಓರ್ಡಿನೆನ್ಸುಗಳನ್ನು ಹಿಂದೀ ಸರಕಾರ ಹೊರಡಿಸಿದೆ. ಬೇಂಕುಗಳು ಮತ್ತು ಟ್ರೆಜರಿಗಳು ತಮ್ಮಲ್ಲಿ ಜಮೆಯಿರುವ ರೂ. 100ರ ಮೇಲಿನ ಎಲ್ಲಾ ಕರೆನ್ಸಿ ನೋಟುಗಳ ನಿರೂಪಣೆ ಕೊಡತಕ್ಕದ್ದೆಂಬುದು ಮೊದಲನೆಯದು. ರೂ. 500, 1000 ಮತ್ತು 10000ಗಳ ನೋಟುಗಳು ಇದೇ ತಾ. 12ರಿಂದ ಕಾಯಿದೇಬದ್ಧ ಮರುಪಾವತಿಗೆ ಸಿಂಧುವಲ್ಲ ಎಂಬುದು ಎರಡನೆಯದು. ಈ ಸಂಬಂಧದ ಸರಕಾರೀ ಪ್ರಕಟಣೆಯಲ್ಲಿದೆ: "ಕಳ್ಳಸಂತೆ ವಹಿವಾಟುಗಳ ನಿಧಿಗಳ ಬಹ್ವಂಶ ಇಂತಹ ದೊಡ್ಡ ಸಂಖ್ಯೆಯ ನೋಟುಗಳ ರೂಪದಲ್ಲಿಡಲ್ಪಟ್ಟಿದೆಯೆಂದು ನಂಬಲಾಗಿದೆ ಸಾರ್ವಜನಿಕ ಹಿತಸಾಧನೆಗೆ ಶತ್ರುಗಳಾಗಿರುವವರ ಮೇಲೆ ಕಾರ್ಯಾಚರಣೆ ಕೈಕೊಳ್ಳಬೇಕೆಂದು ಮೇಲಿಂದ ಮೇಲೆ ಸಾರ್ವಜನಿಕರ ಒತ್ತಾಯವಿರುವುದು ಸರಕಾರದ ಲಕ್ಷ್ಯದಲ್ಲಿದೆ. ಇಂತಹ ವಹಿವಾಟುಗಳನ್ನು ಸರಕಾರದ, ವಿಶೇಷವಾಗಿ ಕಂದಾಯಾಧಿಕಾರಿಗಳ ತಿಳುವಳಿಕೆಗೆ ತಂದು ಸರಕಾರವೂ ಸಾರ್ವಜನಿಕರೂ ಗಣ್ಯ ಪ್ರಯೋಜನದ ಪರಿಣಾಮ ಹೊಂದುವ ಉದ್ದೇಶದಿಂದ ಈ ಓರ್ಡಿನೆನ್ಸನ್ನು ತರಲಾಗಿದೆ. ಸಾಮಾನ್ಯ ಸಭ್ಯ ನಾಗರಿಕರಿಗೆ ಇದರಿಂದ ವಿಶೇಷ ಅನಾನುಕೂಲತೆಯಾಗಲೀ ತೊಂದರೆಯಾಗಲೀ ಆಗಲಾರದೆಂದು ಸರಕಾರಕ್ಕೆ ಸಮಾಧಾನವಿದೆ".

ಓರ್ಡಿನೆನ್ಸಿನ ವಿಧಿ ವಿಧಾನಗಳು

ತಾ. 12-1-1946ರಿಂದ ರೂಪಾಯಿ 500, 1000 ಮತ್ತು 10000ಗಳ ನೋಟುಗಳನ್ನು ಪಡಕೊಳ್ಳುವದಾಗಲೀ ಟ್ರಾನ್ಸ್ಫರ್ ಮಾಡುವದಾಗಲೀ ನಿಷೇಧಿಸಲ್ಪಟ್ಟಿದೆ. 100 ರೂಪಾಯಿಗಳ ನೋಟಿಗೆ ಈ ಬಹಿಷ್ಕಾರವಿಲ್ಲ. ಹೀಗೆ ಅಸಿಂಧುಗೊಳಿಸಲ್ಪಟ್ಟ ನೋಟುಗಳನ್ನು ಬೇಂಕುಗಳೂ ಟ್ರೆಜರಿಗಳೂ ರಿಜರ್ವ್ ಬೇಂಕಿಗೆ ಕಳುಹಿಸಿ, ಪ್ರತಿಯಾಗಿ ಅಷ್ಟೇ ಮೌಲ್ಯದ ನೂರರ ನೋಟುಗಳನ್ನು ಪಡೆಯಬಹುದು. ಆದರೆ ಹಾಗೆ ಕಳುಹಿಸುವಾಗ 'ಬೇಂಕ್ ನೋಟ್ಸ್ ಓರ್ಡಿನೆನ್ಸ್'ನ IVನೇ ಕಲಮಿನನ್ವಯ ಆ ನೋಟುಗಳನ್ನು ಜಮೆ ಪಡೆಯುವಾಗ ಪಡಕೊಂಡಿದ್ದ ವಿವರಗಳ ಒಂದು ಪ್ರತಿಯನ್ನೂ ಅದರೊಟ್ಟಿಗೆ ಕಳುಹಿಸತಕ್ಕದ್ದು. ಖಾಸಗೀ ವ್ಯಕ್ತಿಗಳಲ್ಲಿ ಈ ಅಧಿಕ ನಂಬ್ರದ ನೋಟುಗಳಿದ್ದಲ್ಲಿ ಅವರದನ್ನು ಹೆಸರು, ವಿಳಾಸ, ಸ್ಥಾನ, ಸಂಪಾದನೆ, ವ್ಯಾಪಾರ, ಉದ್ಯೋಗ, ಉತ್ಪತ್ತಿ ಮತ್ತು ಆ ನೋಟುಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ನಮೂದಿಸಿ ಈ ಪ್ರಕಟಣೆಯಾದ 10 ದಿನಗಳೊಳಗೆ ರಿಜರ್ವ್ ಬೇಂಕ್, ಯಾವುದಾದರೊಂದು ಶೆಡ್ಯೂಲ್ ಬೇಂಕು, ಅಥವಾ ಟ್ರೆಜರಿಗೆ ಬದಲಾಯಿಸಲು ತಂದೊಪ್ಪಿಸಬಹುದು ಜತೆಯಲ್ಲೇ ಯೋಗ್ಯ ಅಧಿಕಾರಿಗಳ ಪರಿಚಯ ಶಿಫಾರಸನ್ನು ಇಡತಕ್ಕದ್ದೆಂಬ ನಿಯಮವಿದೆ. ಸರಿಯಾದ ಕಾರಣದಿಂದ ಹಾಜರಾಗಲು ಅಸಾಧ್ಯವಾದವರು ಮೇಲಿನ ಶರ್ತಗಳಿಗೆ ಕುಂದು ಬಾರದಂತೆ 14 ದಿನಗಳೊಳಗೆ ಟಪ್ಪಾಲು ದ್ವಾರಾ ರಿಜರ್ವ್ ಬೇಂಕಿಗೆ ಕಳುಹಿಸಬಹುದು. ಹೀಗೆ ನೋಟು ಮುರಿಯಿಸುವವರು ಬೇರೆ ಬೇಂಕುಗಳಿಗೂ ಇಂತಹ ಬೇರೆ ನೋಟುಗಳನ್ನು ಕಳುಹಿಸಿದ್ದಿದ್ದರೆ, ಅಥವಾ ಬೇರೆ ದಿನಗಳಲ್ಲಿ ಕಳುಹಿದ್ದಿದ್ದರೆ ಅವೆಲ್ಲಾ ವಿವರಗಳನ್ನೂ ಅರ್ಜಿಯಲ್ಲಿ ಕಾಣಿಸಬೇಕು. ಅರ್ಜಿಮಾಡುವ ನೋಟಿನ ಮೊತ್ತ 10 ಲಕ್ಷಕ್ಕೆ ಮಿಕ್ಕಿದ್ದರೆ ರಿಜರ್ವ್ ಬೇಂಕಿಗೇ ನೇ ಕಳುಹಬೇಕು. ಈ ಓರ್ಡಿನೆನ್ಸ್ ನಿಯಮಗಳಿಗೆ ಯಾವುದೇ ರೀತಿಯಿಂದ ತಪ್ಪಿದರೆ ಮೂರು ವರುಷಗಳ ವರೆಗೆ ಶಿಕ್ಷೆ ಅಥವಾ ಜುಲ್ಮಾನೆ ಇಲ್ಲವೇ ಅವೆರಡನ್ನೂ ವಿಧಿಸಲಾಗುವದು.

ಪ್ರಥಮ ಓರ್ಡಿನೆನ್ಸ್‌ನ ಪ್ರತಿಕ್ರಿಯೆ

ಗವರ್ನರ್ ಜನರಲರು ಆಕಸ್ಮಾತ್ ಜಾರಿಗೆ ತಂದ ಈ ಹೊಸ ಓರ್ಡಿನೆನ್ಸ್‌ಗಳ ಪೈಕಿ ಮೊದಲನೆಯದರ ವಾರ್ತೆಯೇ ತಾ. 12ರಲ್ಲಿ ಬೊಂಬಾಯಿಯಲ್ಲೆಲ್ಲಾ ದಿಗಿಲನ್ನೆಬ್ಬಿಸಿತು. ಆದರ ಸ್ಪಷ್ಟಾರ್ಥ ತಿಳಿಯದ ಹಲವರು ಮುಂಜಾನೆ 10ಘಂಟೆಗೇನೇ ಬೇಂಕುಗಳಿಗೆ ಧಾವಿಸಿ ತಮ್ಮ ಹಣವನ್ನು ಮರಳಿ ಪಡೆಯಲೆತ್ನಿಸಿದರು. ಆದರೆ ಸರಕಾರವು ಇಂತಹ ಗಲಿಬಿಲಿಯನ್ನು ನಿರೀಕ್ಷಿಸಿ ತಾ 14ನೇ ಸೋಮವಾರವನ್ನು ಬೇಂಕ್ ರಜಾ ದಿನವಾಗಿ ಅದರೊಂದಿಗೇನೇ ಜಾಹೀರು ಮಾಡಿದ್ದಿತಾದ್ದರಿಂದ ಅವರೆಲ್ಲಾ ನಿರಾಶೆಗೊಂಡರು. ಬೊಂಬಾಯಿಯಲ್ಲಿ ನಡೆಯುತಿದ್ದ 'ಮಹಾಲಕ್ಷ್ಮೀ ರೇಸ್'ನಲ್ಲಿ ರೂ. ನೂರಕ್ಕಿಂತ ಹೆಚ್ಚಿನಂಕೆಯ ಒಂದು ನೋಟನ್ನು ಮಾತ್ರ ಪಣವಾಗಿ ಪಡಕೊಳ್ಳಲಾಗುವದೆಂದು ಸಂಬಂಧಪಟ್ಟವರು ಪ್ರಕಟಿಸಿದುದರಿಂದ ಹಲವರು ತಮ್ಮ ನೆಚ್ಚಿನ ಕುದುರೆಗಳ ಪರವಾಗಿ ಜೂಜು ಕಟ್ಟಲಾರದೆ ನಿರಾಶೆಗೊಂಡರು. ಅತಿ ಪ್ರಾಮುಖ್ಯವಾದ ಹಾಗೂ ಕಾಳ ಸಂತೆಯ ಶ್ರೀಮಂತರನ್ನು ಹತ್ತಿಕ್ಕುವದಕ್ಕಾಗಿ ಅಂದೇ ಜಾರಿಗೆ ತಂದ ಎರಡನೇ ಓರ್ಡಿನೆನ್ಸು ದೇಶದ ಶ್ರೀಮಂತ ವರ್ಗದಲ್ಲೆಲ್ಲಾ ತಳಮಳವೆಬ್ಬಿಸದಿರದು.

ಜಾಗತಿಕ ಎಸೆಂಬ್ಲಿ ಸಭೆ

ಸಂಯುಕ್ತ ರಾಷ್ಟ್ರಗಳ ಶಾಂತಿ ಸಂಸ್ಥೆಯ ಮಹಾ ಸಭೆಯು ಲಂಡನಿನ ಪ್ರಸಿದ್ಧ ವೆಸ್ಟ್ ಮಿನಿಸ್ಟರ್ ಭವನದಲ್ಲಿ ತಾ. 10ರಿಂದ ಆರಂಭವಾಗಿದೆ. ಇಡೀ ಜಗತ್ತಿನ 51 ರಾಷ್ಟ್ರಗಳ ಪ್ರತಿನಿಧಿಗಳು ಹಾಜರಿದ್ದಾರೆ ಬ್ರಿಟಿಷ್ ಪ್ರಧಾನಿ ಅಟ್ಲೀಯವರು ತನ್ನ ಸ್ವಾಗತ ಭಾಷಣದಲ್ಲಿ ಅನಿವಾರ್ಯವಾದ ಶಾಂತಿ ಸ್ಥಾಪನೆಯನ್ನು ಒತ್ತಿ ಹೇಳಿ ಲೋಕದ ಜನರೇ ತಮ್ಮ ಪ್ರತಿನಿಧಿಗಳ ಮೂಲಕ ತಮ್ಮ ಜೀವನ್ಮರಣ ಪ್ರಶ್ನೆಯ ತೀರ್ಮಾನ ಹುಡುಕಬೇಕೆಂದರು. ಎಸೆಂಬ್ಲಿ ಅಧ್ಯಕ್ಷ ಸ್ಥಾನಕ್ಕೆ ರಶ್ಯವು ಅನಿರೀಕ್ಷಿತವಾಗಿ ಸೂಚಿಸಿದ ನೋರ್ವೆಯ ವಿದೇಶ ಮಂತ್ರಿ ಪರಾಭವಗೊಂಡು ಬೆಲ್ಜಿಯನ್ ವಿದೇಶಮಂತ್ರಿ ಎಮ್. ಸ್ಪಾಕರು ಚುನಾಯಿಸಲ್ಪಟ್ಟಿದ್ದಾರೆ ಏಳು ಉಪಾಧ್ಯಕ್ಷ ಸ್ಥಾನಗಳ ಪೈಕಿ ಒಂದನ್ನು ಹಿಂದುಸ್ಥಾನದ ಪ್ರತಿನಿಧಿಗಳಿಗೆ ಕೊಡಲು ಬಯಸಿದಾಗ ಹಿಂದೀ ಪ್ರತಿನಿಧಿಗಳು ಅದನ್ನು ಧಿಕ್ಕರಿಸಿದ್ದಾರೆ. ಈ ಜಾಗತಿಕ ಸಂಸ್ಥೆಯ ಒಳಭಾಗಗಳಾಗಿ ಹಲವು ಉಪ ಸಂಸ್ಥೆಗಳಿವೆ. ಆ ಪೈಕಿ ಎಲ್ಲಕ್ಕಿಂತ ಮುಖ್ಯ ಮತ್ತು ಎಲ್ಲದರ ಸಾರಸೂಸೀ ಸಮಿತಿಯೆಂದರೆ ಭದ್ರತಾ ಕೌನ್ಸಿಲು ಅದರಲ್ಲಿ ಹಿಂದೀ ಪ್ರತಿನಿಧಿಗಳಿಗೆ ಸ್ಥಾನ ದೊರೆತಿಲ್ಲ.'

ಭಾರತ ಸ್ಥಿತಿ

ಇಡೀ ಭಾರತದಲ್ಲಿ ಪ್ರಾಂತಿಕ ಚುನಾವಣೋದ್ವೇಗ ಹರಡಿದೆ. ಅಖಿಲ ಭಾರತ ಕಾಂಗ್ರೆಸಿನ ಮಹಾಧಿವೇಶನವನ್ನು ಬರುವ ಮಾರ್ಚ ಅಥವಾ ಎಪ್ರಿಲಿನಲ್ಲಿ ಢಿಲ್ಲಿಯಲ್ಲಿ ನಡೆಯಿಸುವ ನಿರ್ಧಾರವಾಗಿದ್ದರೂ ಆಗ ಎಸೆಂಬ್ಲಿ ಚುನಾವಣೆ ಮತ್ತು ಕಾಂಗ್ರೆಸ್ ಚುನಾವಣೆಗಳ ಕಾರ್ಯಾವಸರವಿರುವದರಿಂದಲೂ ಆ ವೇಳೆ ಢಿಲ್ಲಿಯ ಹವಾಮಾನ ಅಸಹನೀಯವಾಗುವದರಿಂದಲೂ ದೇಶವ್ಯಾಪೀ ಅಪೇಕ್ಷೆಯಂತೆ ಬೊಂಬಾಯಿಯಲ್ಲಿ ಮಹಾಧಿವೇಶನ ನೆರೆಯುವ ಸಂಭವವಿದೆ.

ನೋಟೀಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 76/45

ಅಕ್ಕಮ್ಮ ಶೆಟ್ತಿ— ಅರ್ಜಿದಾರಳು.

ಮತ್ತು

ಸದಾಶಿವಶೆಟ್ಟಿ ಕೂಡಾ— ಎದುರು.

ಅರ್ಜಿದಾರಳ ಮಗ ಇತ್ತಲಾಗೆ ಮೃತಪಟ್ಟ ವಿಠಲಶೆಟ್ಟಿ ಬಾಬ್ತು ದಿ ಕೆನಡಾ ಮ್ಯೂಚುವಲ್ ಎಸ್ಯೂರೆನ್ಸ್ ಕಂಪೆನಿ' ಬಾಬ್ತು ನಂಬ್ರ 176 ಮತ್ತು 464ನೇ ಪೋಲಿಸಿಗಳ ಬಾಬ್ತು ಬರತಕ್ಕ ಐವೇಜು ವಸೂಲು ಮಾಡುವರೆ ಅರ್ಜಿದಾರಳು ತನ್ನ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿಕೊಟ್ಟ ಮೇಲ್ಕಂಡ ಅರ್ಜಿಯು ತಾ. 5-2-46ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಬಾಬಿನಲ್ಲಿ ಆಕ್ಷೇಪಿಸುವವರಿದ್ದರೆ ಸದ್ರಿ ದಿವಸ ಸದ್ರಿ ಕೋರ್ಟಿನ ಮುಂದೆ 10ಗಂಟೆಗೆ ಹಾಜರಾಗಿ ತಮ್ಮ ಆಕ್ಷೇಪಣೆ ದಾಕ್ಲು ಮಾಡತಕ್ಕದ್ದೆಂತಲೂ, ತಪ್ಪಿದ್ರೆ ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವದೆಂತಲೂ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗಿದೆ.

Udipi 15-1-46 } T. Ganapayya Shetty. ಅರ್ಜಿದಾರಳ ಕಡೆ ವಕೀಲ್.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು **16—1—1946**ರಿಂದ

ರಣಜಿತ್ ಚಿತ್ರಗಳಲ್ಲೊಂದು ನವೀನ ಕಲಾಕೃತಿ

ಪುರಾಣದ ಪರಮಶ್ರೇಷ್ಠ ಕಥಾಭಾಗ

ಶಂಕರ ಪಾರ್ವತಿ

ಅರುಣ ಮತ್ತು ಸಾಧನಾ ಭೋಸ್.

ಬರುವ ಚಿತ್ರ—

ಮಿನರ್ವದ ಉಲ್ಟಿ ಗಂಗಾ.

ಬಂಟ್ಸ್ ಮಿಲಿಟ್ರಿ ಕ್ಲಬ್,

ಕುಂದಾಪುರ.

ಶುಚಿ ಬಿಸಿ ರುಚಿ

ನವೀನ ವ್ಯವಸ್ಥೆ! ನವನಾಗರಿಕತೆಯ ತಯಾರಿ!!

ಆಧುನಿಕ ರೀತಿಯ ಊಟೋಪಚಾರ!!!

ಒಮ್ಮೆ ಸಂದರ್ಶಿಸಿದಲ್ಲಿ ಎಂದೆಂದಿಗೂ ಮರೆಯಲಾರದ ಸಂಗತಿ.

ಕೋಳಿ ಬಿರಿಯಾನಿಯು ನಮ್ಮ ಒಂದು 'ಸ್ಪೆಶಲಿಟಿ'.

ಹೊರಗಿನ ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವದು.

ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ

ಪ್ರೊ:— ವಿ. ಕೃಷ್ಣಪ್ಪ ಶೆಟ್ಟಿ.

BUNTS MILITARY CLUB,

COONDAPOOR, S. K.



Approved firm by the Govt. of Mysore

Certified by the Agent of the Govt. of Cylone Indian.

ಉಡುಪಿ.

ಮೈಸೂರು ದಿವಾನರ ಆಗಮನ, ಸಂಭ್ರಮದ ಸ್ವಾಗತ—ಮೈಸೂರು ಸಂಸ್ಥಾನದ ದಿವಾನರಾದ ಶ್ರೀ ಎಸ್. ಮಾಧವ ರಾವ್, ಸಿ. ಐ. ಇ. ಅವರು ತಾ. ೧೩ರಲ್ಲು ಉಡುಪಿಗೆ ಚಿತ್ತೈಸಿದರು. ಕುಂಜಿಬೆಟ್ಟಿನಲ್ಲಿ ಸಂಭ್ರಮದ ಸ್ವಾಗತವಿತ್ತು, ಬಿರುದಾವಳಿಗಳಿಂದ ಕರತರಲಾಯಿತು. ಸಂಜೆ ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಮಠದ ಕಡೆಯಿಂದ ಇತರ ಸ್ವಾಮಿಗಳವರ ಕೂಡುವಿಕೆಯಿಂದ ಅವರಿಗೆ ರಜತ ತಟ್ಟೆಯಲ್ಲಿ ಮಾನಪತ್ರವೀಯಲಾಯಿತು. ದಿವಾನರು ಯೋಗ್ಯ ಉತ್ತರವಿತ್ತು ಶ್ರೀಪಾದಂಗಳವರಿಂದ ಆಶೀರ್ವಾದ ಪಡೆದರು. ಭಾವಚಿತ್ರ ತೆಗೆಯಲಾಗಿದೆ.

ಶ್ರೀ ಪಿ ಎ. ಪೈ ಸಹೋದರರ ಸತ್ಕಾರ— ತಾ. 14ನೆ ಸೋಮವಾರ ಸಂಜೆ ಮುಕುಂದ ನಿವಾಸದಲ್ಲಿ ಶ್ರೀ ಪಿ. ಎ. ಪೈ ಸಹೋದರರಿಂದ ಅವರ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಮತ್ತಿತರ ಸಂಸ್ಥೆಗಳ ಪರವಾಗಿ ದಿವಾನರಿಗೊಂದು ಟೀಪಾರ್ಟಿ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಡಾ। ಮಾಧವ ಪೈಗಳವರು ತಮ್ಮ ಸಂಸ್ಥೆಗಳ ಕಡೆಯಿಂದ ಬೆಳ್ಳಿಯ ತಟ್ಟೆಯಲ್ಲಿ ಮಾನಪತ್ರವೊಂದನ್ನು ದಿವಾನರಿಗೆ ಅರ್ಪಿಸಿದರು. ಅದರಲ್ಲಿ ತಮ್ಮ ಸಂಸ್ಥೆಗಳಿಗೆ ಮೈಸೂರು ಸರಕಾರವಿತ್ತ ಸಹಕಾರಕ್ಕಾಗಿ ಕೃತಜ್ಞತೆ, ಮಲೆನಾಡಿನಲ್ಲಿರುವ ದ. ಕ. ಜಿಲ್ಲೆಯ ಕೂಲಿಯಾಳುಗಳಿಗೆ ಸಿಗಬೇಕಾದ ಅನುಕೂಲತೆಗಳು, ದ. ಕನ್ನಡದ ಮತ್ತು ಮೈಸೂರಿನ ವ್ಯಾಪಾರ ಉದ್ಯಮವು ಬೆಳೆಯಲವಕಾಶವಾಗುವಂತೆ ಶಿವಮೊಗ್ಗ-ಮಲ್ಪೆ ರೈಲ್ವೆ ಆರಂಭಿಸುವ ನಿರ್ಧಾರವು, ಹಾಗೆಯೇ ಆಗುಂಬೆ ಘಾಟಿಯ ದುರಸ್ತಿ ವಿಚಾರಾದಿಗಳು ಸಂದರ್ಭೋಚಿತವಾಗಿ ಸೂಚಿಸಲಾಗಿದ್ದುವು. ದಿವಾನರು ಪಿ. ಎ. ಪೈ ಸಹೋದರರ ಸತ್ಕಾರ ಮತ್ತು ಉದ್ಯಮಶೀಲತೆಯನ್ನು ಶ್ಲಾಘಿಸಿ, ಆಗುಂಬೆ ಘಾಟಿ ರಸ್ತೆಯ ದುರಸ್ತಿಯನ್ನು ಬೇಗನೇ ಕೈಕೊಳ್ಳಲಾಗುವುದೆಂದರು. ಗ್ರೂಪ್ ಫೋಟೋ, ಶ್ರೀ। ಯು. ಎ. ಪೈಗಳಿಂದ ಪುಷ್ಪಹಾರಾರ್ಪಣೆ, ಶ್ರೀ। ಅನಂತಪೈಗಳ ಧನ್ಯವಾದಾರ್ಪಣೆಯೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗೊಂಡಿತು. ಆರಂಭದಲ್ಲಿ ಚಿಕ್ಕ ಬಾಲಿಕೆಯರು 'ನಮ್ಮ ಕನ್ನಡನಾಡು' ಎಂಬ ಹಾಡನ್ನು ಸುಶ್ರಾವ್ಯವಾಗಿ ಹಾಡಿದ್ದರು.

ಶ್ರೀ ಕೊಚ್ಚಿಕಾರ್ ಬ್ರದರ್ಸರ ಸತ್ಕಾರ—ಸಂಜೆ ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಪರವಾಗಿ ಬೊಂಬೆ ಲ್ಯಾಬ್ ಕಟ್ಟಡದ ಮಹಡಿಯಲ್ಲಿ ರಾತ್ರಿ 7½ ಗಂಟೆಗೆ ಕೊಚ್ಚಿಕಾರ್ ಬಂಧುಗಳು ದಿವಾನರಿಗೆ ಟೀಪಾರ್ಟಿ ಸತ್ಕಾರವನ್ನಿತ್ತರು. ಮಾನಪತ್ರವನ್ನು ಶ್ರೀ ಕೆ. ನರಸಿಂಹ ಪೈಗಳವರು ಓದಿದರು. ಅದರಲ್ಲಿ ಮೈಸೂರು ಸರಕಾರದಿಂದ ತಮಗೆ ದೊರೆತ ಸಹಕಾರಕ್ಕಾಗಿ ಧನ್ಯವಾದಾರ್ಪಣೆ, ಮೈಸೂರು ದಕ್ಷಿಣ ಕನ್ನಡಕ್ಕೆ ರೈಲ್ವೆ ಜೋಡಣೆ, ಜೋಗ್ ವರ್ಕ್ಸ್‌ನಿಂದ ಇಲ್ಲಿಗೆ ವಿದ್ಯುತ್ ಕೊಡುವ ಯೋಜನೆ ಮೊದಲಾದುವು ಸೂಚಿಸಲ್ಪಟ್ಟಿದ್ದುವು. ದಿವಾನರು ಉತ್ತರಕೊಡುತ್ತ ಉಡುಪಿಯ ಜನರ ಉದಾರಬುದ್ಧಿ, ತರುಣರ ಕರ್ತೃತ್ವಶಕ್ತಿ ಮೊದಲಾದುವನ್ನು ಪ್ರಶಂಸಿಸಿ ಸೂಚನೆಗಳನ್ನು ಗಮನಿಸಲಾಗುವುದೆಂದರು. ಆ ಬಳಿಕ ಗ್ರೂಪ್ ಫೋಟೋ ತೆಗೆಯಲಾಯಿತು.

ಬೋರ್ಡ್ ರೂಮಿನಲ್ಲಿಯೂ ಮಧ್ಯಾಹ್ನ 4ಗಂಟೆಗೆ ದಿವಾನರಿಗೆ ಉಪಾಹಾರ ಸತ್ಕಾರವೀಯಲಾಗಿತ್ತು.

ಮುನಿಸಿಪಲ್ ಎಮರ್ಜೆಂಟ್ ಸಭೆಯು ತಾ. ೧೨ರಲ್ಲು ಸಂಜೆ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ದಿವಾನರಿಗೆ ಮಾನಪತ್ರವೀಯುವ ಕುರಿತು ಮಾತುಕತೆಗಳಾದುವು. ಹಿಂದೆಯೂ ಎಷ್ಟೋ ಮಂದಿ ಉಡುಪಿಗೆ ಬಂದಾಗ ಮಾನಪತ್ರವೀಯಲಿಲ್ಲವೇಕೆ? ಕಾಸು ಬಿಚ್ಚುವವರಾರು? ಎಂಬ ಪ್ರಶ್ನೆಗಳೆದ್ದು ವಿಷಯ ಹಿಂದೆ ಬಿತ್ತು.

ಕರ್ನಾಟಕ ಸಂಘದ ಪರ್ಯಾಯೋತ್ಸವ ಕಾರ್ಯಕ್ರಮಗಳು ತಾ. 8ರಿಂದಾರಂಭಿಸಿದುದು 17ರ ವರೆಗೆ ಪ್ರತಿದಿನ ಅಪರಾಹ್ನ ಜರಗುತ್ತಿವೆ. ಕವಿತಾವಾಚನ, ಕೊಳಲು, ಗಾಯನ, ಹರಿಕಥೆ, ಭಾಷಣ ಇತ್ಯಾದಿ ವಿವಿಧ ಕಾರ್ಯಕಲಾಪಗಳು ನಡೆದಿವೆ. ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಶೇಷಶಾಸ್ತ್ರಿ, ಶ್ರೀಗಳಾದ ಕು. ಹರಿದಾಸ, ಕೆ. ವಿಟ್ಠಲ ಶೆಣೈ, ಶ್ರೀಪದ ಬಲ್ಲಾಳ, ಸದಾಶಿವ ಶೆಟ್ಟಿ, ನಂಜುಂಡಸ್ವಾಮಿ, ಎಸ್. ಎಸ್. ಕಿಲ್ಲೆ ಮತ್ತು ಶ್ರೀಮತಿ ಎಸ್ ಲೀಲಾಬಾಯಿ ಮೊದಲಾದವರಿಂದ ಭಾಷಣ, ಕವಿತಾವಾಚನ ಇತ್ಯಾದಿಗಳು ನಡೆದವು.

ಸಂಘದ ಕಾರ್ಯಕಾರೀ ಸಮಿತಿಯು ಈ ಅವಧಿಯಲ್ಲಿ ಸಭೆಸೇರಿ ಸಂಘಕ್ಕೊಂದು ಸ್ವಂತ ಕಟ್ಟಡ ರಚಿಸಲು ಪ್ರತಿಯೊಬ್ಬ ಸಮಿತಿ ಸದಸ್ಯರು ಕೊನೆಯ ಪಕ್ಷ ರೂ. 500ರಷ್ಟಾದರೂ ಸಂಗ್ರಹಿಸತಕ್ಕದೆಂದು ಠರಾಯಿಸಿದೆ.

ಕರ್ನಾಟಕ ಪ್ರಾಂತಿಕ ಬ್ಯಾಂಕರುಗಳ ಸಮ್ಮೇಳನ-ವೊಂದನ್ನು ಮಂಗಳೂರಲ್ಲಿ ಜರಗಿಸುವ ಕುರಿತು ಪ್ರಯತ್ನ, ವ್ಯವಸ್ಥೆಗಳಾಗುತ್ತಿವೆ ಎಂದು ತಿಳಿದು ಬರುತ್ತದೆ.

ಸುಭಾಷ್ ಜಯಂತಿ-ಯನ್ನು ಇದೇ ತಾ 23ಕ್ಕೆ ಜಿಲ್ಲಾ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಆಚರಿಸುವ ಮತ್ತು ಅದೇ ದಿನ ಐ. ಎನ್. ಎ. ಯೋಧರನ್ನು ಸ್ವಾಗತಿಸಿ ಅವರಿಗೆ ಧನ ಸಹಾಯವನ್ನೀಯುವ ನಿರ್ಧಾರವು ವಿದ್ಯಾರ್ಥಿ ಸಂಘದಲ್ಲಾಗಿದೆ.

ಇನ್ನಂಜೆ-ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನದ ಹೊಸ ಕಟ್ಟೋಣದ ಪ್ರವೇಶವು ತಾ 20ಕ್ಕೆ ಜರಗುವುದಷ್ಟೆ. ಅದೇ ದಿನ ರಾತ್ರಿ 9 ಗಂಟೆಯಿಂದ ಉಡುಪಿ ಯಕ್ಷಗಾನ ಕಲಾ ಮಂಡಲಿಯವರಿಂದ 'ಕರ್ಣಪರ್ವ' ಯಕ್ಷಗಾನ ಕಾಲಕ್ಷೇಪ ನಡೆಯಲಿದೆ.

ಮುಂಬಯಿಯಲ್ಲಿ ಅ. ಕ. ಏಕೀಕರಣ ಸಮ್ಮೇಳನವು-ಇದೇ ತಾ 19 ಮತ್ತು 20ರಲ್ಲಿ ಜರಗುವುದು. ಸರದಾರ ವಲ್ಲಭಭಾಯಿ ಪಟೇಲರು ಉದ್ಘಾಟಕರು, ಶ್ರೀ. ಬಿ. ಜಿ. ಖೇರ್ ಅಧ್ಯಕ್ಷರು, ಶ್ರೀ. ಜಹಗೀರದಾರ ರಂಗಾಚಾರ್ಯರು ಸ್ವಾಗತಾಧ್ಯಕ್ಷರು. ಮೊದಲ ದಿನ ಸುಂದರಾಬಾಯಿ ಸಭಾ ಮಂದಿರದಲ್ಲಿ, ಎರಡನೆ ದಿನ [illegible] ಸಭಾಸದನದಲ್ಲಿ.

NOTICE

To

The Karnataka Chemical & Pharmaceutical Works, Ltd., UDIPI.

Certain moveable properties belonging to you were got attached in R. E. P. No. 259/1942 in execution of the Decree in O. S. No. 567/1937 on the file of the District Munsiff of Udipi for realisation of the decree amount. That the moveables thus attached were entrusted to our custody on behalf of the Canara Banking Corporation Ltd., by the bailiff of the Court who went for attachment of the said moveables on furnishing a security bond on 25 4 1942. Out of the aforesaid moveables, the 1st six items of the inventory have been sold subsequently in R. E. P. No 160/1944 of the Decree in O. S No. 38/1943 on the file of the said Court and the remaining items are still in our custody at great inconvinience and costs

You were aware that the Decree in O. S. No. 561 1937 has been fully certified by receipt of the amount due under the decree and satisfaction has been recorded by the Court on 21-8-1943 and that therefore ac[illegible] attachment ceases and you are entitled to take back of the moveables that are with us and it is regreted that you have not hitherto taken any steps to get back the remaining moveables from us.

Subsequently, the 1st of us on behalf of the Canara Banking Corporation Ltd., filed a petition in R. E. A. No. 180/1945 in R. E. P. No. 259/1942 praying that the Court may be pleased to cancel the security bond dated 25-4-1942 executed by us and to take back delivery of the moveables that remain unsold. The court has on 24-10-1945 ordered that the Security Bond executed by us be cancelled as there was no point in keeping the security bond alive.

Subsequently on 3-12-1945 on our behalf, our lawyer issued a postal registered notice to you, calling upon you to remove the moveables that are in our custody The notice has been returned unserved with an endorsement that the office of your concern is remaining closed.

This is to intimate to you that in case you do not remove the moveables by 20—1—1946 the moveables that are in our custody will be sold by public auction.

Please also note that none of us will be liable for your acts of misfeasance.

UDIPI
Dated 5-1-1946

1. (Sd.) V. R. Kamath (General Manager)
2. (Sd.) K. Nagesh Kamath (Agent at Udipi)
3. (Sd.) K Keshava Bhat.

CHAMPAE'S

Snow & Castrex

(Sole Distributers for (India.)

Prop: K. G. NAYAK,

Santhekatte, UDIPI, S. K.

AGAINST DIABETES

&

all its dreadful results

Consult Specialists:

Dr. Alvas' Research Institute, FAJIR

S. KANARA.

SITUATION VACANT

"Applications are invited up to 25-1-1946 from Secondary grade trained women teachers for appointment in a leave vacancy lasting for about two months, on a pay of Rs. 25/- per mensum plus the usual dearness allowance which is at present Rs. 16/- per month".

Municipal Office, Udipi,
Dated 8—1—1946.

T. Harischandra Rao,
Commissioner,
Udipi Municipality, Udipi.

Badavara Bandhu Group Enterprises

Editors, Printers, Publishers, Bankers, Merchants, Fish Dealers, Motion Picture Producers, Exhibitors, Benefactors, Property Dealers, Provision Dealers, etc, etc

THROUGH

—their associated concerns—

1 "The Badavara Bandhu"
2 The Badavara Bandhu Printing Press, Ltd.
3 Sri Narayan Guru Press
4 Sri Narayan Guru Bank Ltd.
5 The South Kanara Fish Industries, Ltd.
6 The Karnataka Theatres, Ltd.
7 Janasons, Ltd.
8 The Badavara Bandhu Colonies
9 The Badavara Bandhu Orphanage Tru.
10 My Stores
11 The Vijaya Stores, Ltd.
12 The Badavara Bandhu Hosieries
13 The West Coast Ice Fac ory

Head Offices:

MANGALORE, SOUTH INDIA

Telegraphic address:
1. BADAVARABANDHU
2. MONEY

Post Box No. 110

ಮಂಗಳೂರು

ಶ್ರೀ ಬಿ. ಯಂ. ಶ್ರೀಕಂಠಯ್ಯನವರ ನಿಧನದ ಸಲುವಾಗಿ ಸಂತಾಪಸೂಚಿಸುವ ಸಭೆಯೊಂದು ತಾ. ೧೧ರಂದು ಸ್ಥಳೀಯ ಥಿಯೋಸೊಫಿಕಲ್ ಲಾಜಿನಲ್ಲಿ ಸೇರಿತು. ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಮಾತನಾಡುತ್ತ ಶ್ರೀಯುವರ ಸಾಹಿತ್ಯ ಸೇವೆಯನ್ನು ವಿವರಿಸಿದರು. ಮೊನ್ನೆ ತಾನೆ ಮದ್ರಾಸಿನಲ್ಲಿ ಜರಗಿದ ಸಾಹಿತ್ಯ ಸಮ್ಮೇಳನಕ್ಕೆ ಶ್ರೀಯುವರು ಕಳುಹಿದ್ದ ಹಾರೈಕೆಯನ್ನು ಓದಿ ವಿವರಿಸಿದರು. ಶ್ರೀ ಕೆ. ಆರ್. ಆಚಾರ್ಯರು ಮಾತನಾಡುತ್ತ ಪ್ರೊಫೆಸರ್ ಶ್ರೀಕಂಠಯ್ಯನವರ ಶಿಷ್ಯರಾಗಿ ತಾವಿದ್ದ ಹಳೆಯ ದಿನಗಳನ್ನು ನೆನಸಿಕೊಂಡರು. ಶ್ರೀ. ಕಡಂಗೋಡ್ಲು ಶಂಕರ ಭಟ್ಟರು ಮಾತನಾಡುತ್ತ, ಶ್ರೀಯುವರ ಬಹುಮುಖ ಸಾಹಿತ್ಯಸೇವೆ, ಅವರ ಪ್ರತಿಭೆ, ವ್ಯಕ್ತಿತ್ವ ಇವುಗಳನ್ನು ವಿವರಿಸಿದರು. ಶ್ರೀ ಹುರುಳಿ ಭೀಮರಾಯರು ಕನ್ನಡದ ಅಮೂಲ್ಯ ರತ್ನ ಒಂದು ಕಣ್ಮರೆಯಾಯಿತು-ಎಂದರು ಶ್ರೀ ಮಂಜೇಶ್ವರ ಗೋವಿಂದ ಪೈಗಳು ಕಳುಹಿದ್ದ ಸಂದೇಶವು ಈ ಸಂದರ್ಭದಲ್ಲಿ ಓದಲ್ಪಟ್ಟಿತು. ಕನ್ನಡದ ಕುಲಗುರುಗಳೆನಿಸಿದ ಶ್ರೀಯುವರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವು ಮಾನ್ಯವಾಗಿ ಸಭೆ ಚದರಿತು.

ಬೆಂಕಿಯ ಪ್ರಕೋಪ— ಮಣ್ಣಗುಡ್ಡೆ ಸಮೀಪ ಬರ್ಕೆಬೈಲಿನಲ್ಲಿ ಹುಲ್ಲು ಛಾವಣಿಯ ಮನೆಯೊಂದಕ್ಕೆ ತಾ. ೭ರಂದು ಬೆಂಕಿ ತಗಲಿ ಪೂರ್ಣವಾಗಿ ಸುಟ್ಟುಹೋಯಿತೆಂದು ತಿಳಿದು ಬರುತ್ತದೆ.

ನೀರಿನ ಬುಗ್ಗೆಯೊಂದು ಜಪ್ಪು ಮಹಾಕಾಳಿ ಪಡ್ಪು ಎಂಬಲ್ಲಿಯ ಒಂದು ಮನೆಯ ಅಂಗಳದಲ್ಲಿ ತಾ. ೭ರಂದು ಸ್ವಯಂಪ್ರೇರಿತವಾಗಿ ೨ ನಿಮಿಷಗಳ ತನಕ ಮೇಲಕ್ಕೆ ಹಾರಿ ಆ ಮೇಲೆ ನಿಂತಿತು.

ಪ್ಲೇಗಿನಿಂದಾಗಿ ತಾ. ೫ಕ್ಕೆ ಅಂತ್ಯವಾದ ವಾರದಲ್ಲಿ ಒಬ್ಬರು ಮಡಿದಿದ್ದಾರೆ; ಇಲಿಗಳ ನಾಶಕ್ಕೆ ಆರಂಭವಾಗಿದೆ. ಸುಮಾರು ೧೦ ಸಾವಿರ ಮಂದಿಗೆ ಇಷ್ಟರಲ್ಲಿಯೇ ಟಾಕು ಚುಚ್ಚಲಾಗಿದೆ.

ಶ್ರೀ ಸಿದ್ಧನಾಥ ಪಂತರು ಹಿಂದೀ ಪ್ರಚಾರ ಸಭೆಯ ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾದ ಶ್ರೀಯುತರು ತಾ. ೬ರಂದು ಬೆಳಿಗ್ಗೆ ಶ್ರೀ ಎಂ. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿದ ಹಿಂದೀ ವಿದ್ಯಾರ್ಥಿಗಳ ಸಭೆಯಲ್ಲಿ ಮಾತನಾಡುತ್ತ 'ಹಿಂದಿಯು ರಾಷ್ಟ್ರಾಭಿಮಾನದ ಪ್ರವೇಶದ್ವಾರ' ಎಂದರು. ಅದೇ ದಿನ ಸಂಜೆ ಶ್ರೀ ಪಂತರು ಸ್ಥಳೀಯ ಹಿಂದೀ ಕಾರ್ಯಕರ್ತರ ಸಭೆ ಜರಗಿಸಿ ವಿಚಾರ ವಿನಿಮಯ ನಡೆಸಿದರು.

ಮುಷ್ಕರದ ನೋಟೀಸು ನಗರದ ೧೭ ಹಂಚಿನ ಮತ್ತು ೧೧ ನೇಯ್ಗೆ ಕಾರ್ಖಾನೆಗಳ ಮಜೂರರು, ೩ ತಿಂಗಳ ಬೋನಸ್ ಸಿಗಬೇಕೆಂಬಿತ್ಯಾದಿ ೧೪ ಕೇಳಿಕೆಗಳನ್ನೊಳಗೊಂಡ ಮನವಿಯೊಂದನ್ನು ಒಪ್ಪಿಸಿದ್ದಾರೆ. ಇದೇ ತಾ. ೨೦ರೊಳಗೆ ಈ ಮನವಿಯನ್ನು ಮಾನಿಸದಿದ್ದರೆ ಮುಷ್ಕರ ಹೂಡುವುದಾಗಿಯೂ ತಿಳಿಸಿದ್ದಾರೆ. ೧೯೪೪ನೆಯ ಸಪ್ಟಂಬರದಿಂದಲೆ ಈ ಕೇಳಿಕೆಗಳನ್ನು ಮಜೂರರು ಮುಂದಿಟ್ಟಿದ್ದರೂ, ಈ ತನಕ ಅವು ಮಾನ್ಯವಾಗದಿದ್ದದರಿಂದ ಈ ಕೊನೆಯ ನೋಟೀಸನ್ನು ಕೊಡಬೇಕಾಯಿತೆಂದು ಹೇಳಲಾಗಿದೆ ಮುಷ್ಕರವು ಆರಂಭವಾದರೆ ಸುಮಾರು ೩ ಸಾವಿರ ಕೆಲಸಗಾರರ ಮತ್ತವರ ಕುಟುಂಬದ ಮೇಲೆ ಅದರ ಪರಿಣಾಮವಾಗುವುದು.

[illegible] ವಿವಿಧ ವಿನೋದಾವಳಿ–ಮಹಿಳಾ ಸೇವಾಶ್ರಮದ ಅನಾಥಾಲಯದ ಸಹಾಯಾರ್ಥವಾಗಿ ತಾ 19-1-46ಕ್ಕೆ ಗವರ್ನಮೆಂಟ್ ಕಾಲೇಜ್ ಹೋಲಿನಲ್ಲಿ ಆಶ್ರಮದ ವಿದ್ಯಾರ್ಥಿನಿಯರಿಂದ ನರ್ತನ ಮತ್ತು ಇತರ ವಿವಿಧ ವಿನೋದಾವಳಿಗಳ ಪ್ರದರ್ಶನವೊಂದು ನಡೆಯಲಿರುವುದು. ಇದರ ನೃತ್ಯ ತರಬೇತಿಗಾಗಿ ಬೊಂಬಾಯಿಯಿಂದ ನಾಟ್ಯ ಪ್ರವೀಣ ಶ್ರೀ. ಕೆ. ಕೆ. ಶೆಟ್ಟರು (ಉದಯ ಶಂಕರರ ಶಿಷ್ಯ) ಆಮಂತ್ರಿಸಲ್ಪಟ್ಟಿರುವರು. 'ಮೀರಾಬಾಯಿ' ಎಂಬ ನೃತ್ಯ ನಾಟಕವು ವಿಶಿಷ್ಟ ರೀತಿಯಲ್ಲಿ ಪ್ರದರ್ಶಿಸಲ್ಪಡಲಿರುವುದೆಂದು ತಿಳಿದುಬರುತ್ತದೆ.

ಕಾರ್ಕಳ–ಮಿಲಿಟರಿಗೆ ಸೇರಿದವರ ಕುಟುಂಬದವರಿಗೆ ಸತ್ಕಾರ ಕೂಟವು ಡಿಸ್ಟ್ರಿಕ್ಟ ಮುನ್ಸಿಫರಾದ ಶ್ರೀ. ಬಿ. ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಬಾಲ ಬಾಲಕಿಯರ ಪ್ರಾರ್ಥನೆ, ಸದಾಶಿವರಾವ್ ಕಾರ್ಟೆಯವರ ಗಾಯನ, ಮಿಶ್ಯನ್ ಶಾಲಾ ಬಾಲಿಕೆಯರ ಲೆಜಿಮ್, ನರ್ತನ, ಸೋಲ್ಜರ್ಸ್ ಬೋರ್ಡ ಸೆಕ್ರೆಟರಿ ಶ್ರೀ. ರಾಮಪ್ಪನವರ ಹಾಗೂ ರೆ। ಫಾ। ಎ. ಜೆ. ಎಫ್, ಕುಲಾಸೊ ಮತ್ತು ಸಭಿಕರ ಭಾಷಣ, ಅಧ್ಯಕ್ಷರ ಕಾಲೋಚಿತ ಭಾಷಣ, ತಹಸಿಲ್ದಾರ ಶ್ರೀ. ಬಿ ನಾರಾಯಣ ರಾವ್ ಬಿ. ಎ.ರವರ ಧನ್ಯವಾದ ಸಮರ್ಪಣೆ, ಕೂಡಿದ ಸಭಿಕರೆಲ್ಲರಿಗೆ ಟೀಪಾರ್ಟಿ ಸತ್ಕಾರ ಮೊದಲಾದುವುಗಳಿಂದ ಜರಗಿತು.

ಇನ್ಸ್‌ಪೆಕ್ಟರ್ ಆಫ್ ಪೋಲೀಸ್ [illegible] ಟಿಪ್ರೀಲರವರು–ಇಲ್ಲಿ ಬಂದು ಸ್ಥಳೀಯ ಕಾಗ್ದ ವ್ಯಾಪಾರಿಗಳಿಗೆ ಸಲಹೆಗಳನ್ನು ಕೊಟ್ಟು ಉಡುಪಿಗೆ ತೆರಳಿದರು.

ಬೈಲೂರು—ಇದೇ ತಾ. 12ರಲ್ಲಿ ಬೈಲೂರು ಕೇಂದ್ರದ ಅಧ್ಯಾಪಕರ ಮಾಸಿಕಸಭೆಯು ಶ್ರೀ ಡಿ. ಡಿ. ಅಡ್ವಾಲ್‌ರವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಎಂ. ಅನಂತಪ್ಪ ಕಿಣಿಯವರ ಮಾದರಿಪಾಠ, ಶ್ರೀ ಎಂ. ಅಪ್ಪುರಾಯರ ಪ್ರತ್ಯಕ್ಷಪಾಠ, ಶ್ರೀ ಅಚ್ಯುತ ಪೂಜಾರಿಗಳ ಭಾಷಣವಾದ ಬಳಿಕ ಅಧ್ಯಕ್ಷರಿಂದ I.N.A. ಕೈದಿಗಳ ಬಿಡುಗಡೆ ಬಗ್ಗೆ ಸಂತೋಷ ಸೂಚಿಸುವ, ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್. ಸುಬ್ಬರಾಯರ ಧರ್ಮಪತ್ನಿಯವರು ತಾ. 1-1-46ರಲ್ಲಿ ಅಕಾಲ ಮರಣಪಟ್ಟ ಬಗ್ಗೆ, ಪ್ರಿನ್ಸಿಪಾಲ್ ಬಿ. ಯಂ. ಶ್ರೀಕಂಠಯ್ಯನವರು ಅಕಾಲ ಮೃತ್ಯುವಶವಾದ ಬಗ್ಗೆ ದುಃಖ ಸೂಚಿಸುವ ಠರಾವುಗಳು ಸಭೆಯ ಮುಂದಿಡಲ್ಪಟ್ಟು ಮಂಜೂರಾದುವು.

ಕಾಸರಗೋಡು-ಕರ್ನಾಟಕ ಸಂಗೀತಾಭಿವರ್ಧಕ ಸಂಘದ ವಾರ್ಷಿಕೋತ್ಸವವನ್ನು ಜನವರಿ ತಾ. ೬ರಂದು ನೆರಳಾಲಿನ ನವಜೀವನ ಹೈಸ್ಕೂಲಿನಲ್ಲಿ ಜರಗಿಸಲಾಯಿತು. ಅಂದಿನ ಸಭೆಗೆ ಸಂಗೀತ ವಿದ್ವಾನ್, ಶ್ರೀಯುತ ಯಚ್. ಶ್ರೀನಿವಾಸ ಉಡುಪರವರು ಅಧ್ಯಕ್ಷರಾಗಿದ್ದರು. ಗತವರ್ಷದ ವರದಿಯನ್ನು ಕಾರ್ಯದರ್ಶಿಯವರು ವಿವರಿಸಿದರು. ಶ್ರೀಯುತ ಸಿ. ಯಚ್. ಸುಬ್ರಾಯ ಶಾಸ್ತ್ರಿಗಳು ಸಾಹಿತ್ಯ ವಿದ್ವಾನ್ ಮೈಸೂರು ಇವರು ಸಂಗೀತಕಲಾ ವಿಷಯವನ್ನು ಸರಿಯಾಗಿ ವಿವರಿಸಿ ತಿಳಿಯಪಡಿಸಿದ್ದಲ್ಲದೆ ಪ್ರಚಾರಕ್ಕೆ ಬೇಕಾದ ಅನೇಕ ವಿಷಯಗಳನ್ನು ವ್ಯಕ್ತಪಡಿಸಿದರು. ಸಭಿಕರಲ್ಲಿ ಕೆಲವರು ಮುಂದೆಬಂದು ಭಾಷಣವಿತ್ತರು ಅನಂತರ ಶ್ರೀ ಯವ್. ಗೋವಿಂದ ನಂಬಿಯಾರರ ಹಾಡುವಿಕೆ, ಶ್ರೀ ಯವ್. ಪದ್ಮನಾಭ ನರಳಾಯರಿಂದ ಫಿಡ್ಲುವಾದನ, ಶ್ರೀ ಸಿ. ಮಾಧವ ಮೆನೋನರ ಮೃದಂಗವಾದನದೊಂದಿಗೆ ಸಂಗೀತಕಚೇರಿ ನಡೆಯಿತು. ಅಧ್ಯಕ್ಷರು ತಕ್ಕ ಭಾಷಣವನ್ನಿತ್ತರು. ಈ ವರ್ಷದ ಆಡಳಿತೆ ಕಮಿಟಿಗೆ ಗತವರ್ಷದ ಅಧ್ಯಕ್ಷ ಕಾರ್ಯದರ್ಶಿಯವರನ್ನೇ ನಿರ್ಣಯಿಸಲಾಯಿತು.

BANK WITH THE LARGEST CONNECTIONS ON THE WEST COAST.

OFFERS:-
EFFICIENT,
PROMPT &
COURTEOUS

SERVICE OF EVERY TYPE

OPEN AN ACCOUNT
with
The Canara Industrial & Banking Syndicate Ltd.
ESTD 1925

The Pangal Nayak Bank Limited.
(Incorporated in 1920.)
Registered Office Court Road, UDIPI.
Sub Offices at— **Udipi, Mangalore, Katapadi, Kanhangad, Kinnigoli, Nileshwar and Surathkal**, South Canara.

SEASON DEPOSITS
For 3, 4 & 5 months at a special rate of interest are accepted at all the above offices.

All kinds of up-to-date Banking service is provided promptly.

Please call for particulars of Business

Dated the 5th January 1915.

ಧಾತುಪುಷ್ಟಿ ಲೇಹ
ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ
ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)
ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.
ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು. ಕಸ್ತೂರಿ ಮಿಶ್ರಿತವಾದದ್ದು)
ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.
ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು
ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, [illegible] ರೋಗಕ್ಕೆ ತಕ್ಕದಾದ ಔಷಧ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ. (2) ಬೊಂಬಾಯಿ ಏಜೆಂಟರು:- ಪುಷ್ಪಲತ್ ಸ್ಟೋರ್ಸ್, ಕೆಮಿಸ್ಟ್ 183, ಸುರಾಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್‌ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—
ಉಡುಪಿ ಪಂಚಾಂಗಂ
ವ್ಯಯ ಸಂ॥ 1946-'47.
ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.
ಹೆಚ್ಚಿನ ವಿವರಗಳಿಗೆ
ಆತ್ರಾಡಿ ವಾಸುದೇವ ಉಡುಪ
ಸಂಪಾದಕ
ಶ್ರೀ ರವಿಪ್ರಸಾದ ಜ್ಯೋತಿಷಾಲಯ
ಕೊಯಂಬುತ್ತೂರು

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 1-8-0 ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ದಕ್ಷಿಣ ಕನ್ನಡ

ಕಾಸರಗೋಡು- ಪೊಳಲಿ ಶ್ರೀ ರಾಜರಾಜೇಶ್ವರಿ ಕ್ಷೇತ್ರದ ಪಡು ದೇವಸ್ಥಾನ ಜೀರ್ಣೋದ್ಧಾರ ನಿಧಿಗೆ ಪರಿವ್ರಾಸ ಶ್ರೀ ಗೋಪಾಲಕೃಷ್ಣ ಭಟ್ಟರು ಸ್ಥಳೀಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ, ಶ್ರೀ ಪೊಳಲಿ ಮಹಾತ್ಮೆ ಎಂಬ ಕಥಾನಕವನ್ನು ನಿರೂಪಿಸಿದ್ದಲ್ಲದೆ, ಕಟ್ಟೆಯಲ್ಲಿ ಬಂದ ಕಾಣಿಕೆ ಹಾಗೂ ಮಂತಿಗೆಯಿಂದ ಕೂಡಿದ ರೂ. 73--8—0ನ್ನು ಶ್ರೀ ರಾಜರಾಜೇಶ್ವರೀ ಭಕ್ತರಲ್ಲೊಬ್ಬರಾದ ಶ್ರೀ ಕೊಳ್ಯೂರು ತಿಮ್ಮಪ್ಪಯ್ಯನವರಿಗೆ ಕವಿರಾಜ ಡಾ। ಕೆ. ಟಿ. ಅಳ್ವರವರ ಮುಖಾಂತರ ಒಪ್ಪಿಸಿರುವರು. ಇಂತಹ ಪವಿತ್ರ ಕಾರ್ಯಗಳಿಗೆ ನೆರವಾದ ಪರಿವ್ರಾಸರ ಮತ್ತು ಊರ ಮಹನೀಯರ ಈ ಕೃತ್ಯವು ಸ್ತುತ್ಯವೂ, ಆದರ್ಶವೂ ಆಗಿದೆ

ವಿಟ್ಲ- ತಾ 14 12 45ರಲ್ಲಿ ಇಲ್ಲಿರುವ ಮಹಾ ಜನರ ಕೂಡುವಿಕೆಯಿಂದ, ಒಂದು ಸಭೆ ಸೇರಿ ಶ್ರೀ ಪಂಚಲಿಂಗೇಶ್ವರ ಪ್ರಸಾದಿಕ ವಿಟ್ಠಲ ರುಕುಮಾಯಿ ಭಜನಾ ಮಂಡಲಿಯನ್ನು ಸ್ಥಾಪಿಸಲಾಯ್ತು. ಈ ಸಂಘಕ್ಕೆ ಶ್ರೀ. ಯಚ್. ಲಕ್ಷ್ಮೀನಾರಾಯಣ ಕೆದಿಲಾಯರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೃಷ್ಣ ಕೆದಿಲಾಯರನ್ನು ಕಾರ್ಯದರ್ಶಿಗಳನ್ನಾಗಿಯೂ ಇನ್ನು ಹತ್ತು ಮಂದಿ ಸದಸ್ಯರನ್ನುಸಂಬರರನ್ನಾಗಿಯೂ ಆರಿಸಲಾಯಿತು. ಮೇಲಿನ ತಾರೀಕಿನ ಬಳಿಕ ಪ್ರತಿ ತಿಂಗಳುಗಳ ಶುದ್ಧ ಏಕಾದಶಿ ದಿನ ಕೀರ್ತನ ಯುಕ್ತವಾದ ಭಜನೆಯು ನಡೆಯುತ್ತದೆ. ಈ ಸಂಘವು ಸುಸೂತ್ರವಾಗಿ ನಡೆಯಲಿಕ್ಕೆ ಸಂಘದ ಕಾರ್ಯದರ್ಶಿಯ ಹಸ್ತ ವಂತಿಗೆ ಮಹನೀಯರು ಕೊಟ್ಟರೆ ವಸೂಲು ಪಡಿಯಲು ನಿಶ್ಚಯಿಸಿರುತ್ತದೆ.

ಪುತ್ತೂರು-ಶ್ರೀ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟಿ, ವೈದ್ಯ ವಿಶಾರದ, ಪಾಣಾಜೆ, ಇವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭವು ತಾ 20-1-46ಕ್ಕೆ ಪುತ್ತೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ. ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಡಿ. ಎ. ತಹಶಿಲ್ದಾರ್, ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಪಡುಭಾಂಡೇಶ್ವರ, ಮಲ್ಪೆ- ಮದರಾಸಿನ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ ಕಂಪೆನಿಯ ಸೀನಿಯರ್ ಇನ್ಸಪೆಕ್ಟರ್ ಡಾ। ಕೆ. ನಾರಾಯಣರಾಯರು ಗತ ವರುಷದ ತನ್ನ ಬಿಸಿನೆಸ್ಸಿನಲ್ಲಿ ಉಚ್ಚ ಸ್ಥಾನವನ್ನು ಸಂಪಾದಿಸಿದ ಶ್ರೀಗಳಾದ ಪಿ. ರಂಗರಾಯ, ಮತ್ತು ಮಕ್ಕಳು ಇವರಿಗೆ ಬಂಗಾರದ ಪದಕವನ್ನು ತಾ 9-1-146ರಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಹಸ್ತದಿಂದ ಕೊಡಿಸಿದರು. ಈ ಸಮಾರಂಭದೊಡನೆ ಶ್ರೀ ದೇವಸ್ಥಾನದಲ್ಲಿ ಸೇವೆಗಳೂ ಹರಿಕಥಾ ಕಾಲಕ್ಷೇಪವೂ ಇದ್ದು ಮಹಾಜನರು ತುಂಬಾ ನೆರೆದಿದ್ದರು.

ಮೂಲ್ಕಿ—ಮೂಲ್ಕಿ ಗ್ರಾಮಾಭಿವೃದ್ಧಿ ಪರವಾದ ರೈತರು ಕಾರ್ನಾಡಿನಲ್ಲಿ ಕೂಡಿಬಂದ 23ನೇ ಸಭೆಯಲ್ಲಿ ಮೂಲ್ಕಿಯ ಶಾಂಭವಿ ಹೊಳೆಗೆ ಮುಂಡ್ಕೂರಲ್ಲಿ ಕಟ್ಟ ಹಾಕಿದುದರ ಪರಿಣಾಮವನ್ನು ನೋಡಿ ತಿಳಿಯುವಂತೆ ತಾ. 3-2-46ನೇ ಆದಿತ್ಯವಾರ ಸಾಯಂಕಾಲ ಘಂಟೆ 3ಕ್ಕೆ ಫಲಿಮಾರಿನಲ್ಲಿ ಸಭೆಕೂಡಿ ಬರುವುದಾಗಿ ನಿಶ್ಚಯಿಸಿರುತ್ತಾರೆ. ಇದಕ್ಕೆ ಎಲ್ಲಾ ಸೆಂಟರಿನ ರೈತರು ಬಹು ಸಂಖ್ಯೆಯಿಂದ ಬರಬೇಕಾಗಿ ಗ್ರಾಮಾಭಿವೃದ್ಧಿ ಕಮಿಟಿಯ ಸಕ್ರೆಟರಿ ಶ್ರೀ, ಎಮ್. ಆರ್. ಪೂಂಜರು ವಿನಂತಿಸುತ್ತಾರೆ.

ಮುಂಬಾಯಿಯಲ್ಲಿ ಕನ್ನಡ ನಾಟಕ—ತಾ. 28-12 ,45ರಲ್ಲಿ ಭಾಂಗವಾಡಿ ಥಿಯೇಟರಿನಲ್ಲಿ ಮಾಸ್ಟರ್ ದೇವಾಡಿಗಾರ್ ಮತ್ತು ಪಾರ್ಟಿಯವರು ಶ್ರೀ. ಯಮ್. ನಾರಾಯಣರಾಯರಿಂದ ಬರೆಯಲ್ಪಟ್ಟ "ವಿಷಮ ಜೀವನ" ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿದರು. ನಾಟಕಾಂತ್ಯದಲ್ಲಿ ಶ್ರೀ. ಪಿ. ಯಮ್ ಕೋಡಿಕಲ್ ಇವರು ಇಂತಹ ಆಧುನಿಕ ಕಥಾವಸ್ತುಗಳಿಂದ ಕೂಡಿದ ಸಾಮಾಜಿಕ ನಾಟಕಗಳೇ ಹೆಚ್ಚು ಹೆಚ್ಚಾಗಿ ಅಭಿನಯಿಸಲ್ಪಡುವುದರಿಂದ ಕನ್ನಡ ರಂಗಭೂಮಿಗೆ ಕಳೆಯೇರುವುದೆಂಬ ತಾತ್ಪರ್ಯದ ಭಾಷಣವೀಯುತ್ತಾ, ಇದರಲ್ಲಿ ಸಹಕರಿಸಿದವರೆಲ್ಲರಿಗೆ ಮಾಸ್ಟರ್ ದೇವಾಡಿಗಾರರ ಪರವಾಗಿ ಧನ್ಯವಾದವನ್ನರ್ಪಿಸಿದರು. ಇಲ್ಲಿನ ಕಟಾವು ಮಕಾನ್ಜಿ ಮಿಲ್ಲಿನ ಸ್ಪಿನ್ನಿಂಗ್ ಮಾಸ್ತರರಾದ ಶ್ರೀ. ನಾರಾಯಣವಿ. ಉಳ್ಳಾಲ್ ಇವರು ತನ್ನ ತಂದೆಯವರಾದ ದಿವಂಗತ ಉಳ್ಳಾಲ್ ವೆಂಕಪ್ಪ ಇವರ ಸ್ಮರಣಾರ್ಥವಾಗಿ ಬೆಳ್ಳಿಯ ಕಪ್ಪೊಂದನ್ನು ಮಾಸ್ಟರ್ ದೇವಾಡಿಗಾರರಿಗೆ ಕೊಟ್ಟು ಬಹುಮಾನಿಸಿದರು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 1/1946.

ವ್ಯಾನರಾ ವಾಸುದೇವ-ಕ್ಷೇಮ ಚಿಂತಕ ಮಾವ ವಾಸುದೇವ ಲಕ್ಷ್ಮೀನಾರಾಯಣ ಭಟ್ಟ

ಅರ್ಜಿದಾರ.

ಮತ್ತು

ಅನಂತಕೃಷ್ಣ ಸಾಮಗ --ಎದುರಿ.

ಮ್ಯಾನರನ ತಂದೆ ಈಗ ಮೃತಪಟ್ಟಿರುವ ಕೃಷ್ಣ ಸಾಮಗರು ಟ್ರಾವಂಕೂರು ಗವರ್ನಮೆಂಟ್ ಟ್ರೆಜರಿ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಟ್ರಾವಂಕೂರು ರೂಪ್ಯಾ 253-18-6 ನ್ನು, ಮ್ಯಾನರನ ಕಡೆಯಿಂದ ಆತನ ಗಾರ್ಡಿಯನ್ ಎ ಕ್ಷೇಮ ಚಿಂತಕನಾದ ಆತನ ಮಾತಾಮಹ ಲಕ್ಷ್ಮೀನಾರಾಯಣ ಭಟ್ಟರು ಪಡೆಯುವಂತೆ ಸಾರ್ಟಿಫಿಕೇಟು ಕೊಡಿಸಬೇಕಾಗಿ ಮ್ಯಾನರನ ಕಡೆಯಿಂದ ದಾಕ್ಲು ಮಾಡಿರುವ ಮೇಲ್ಕಾಣಿಸಿದ ಅರ್ಜಿಯು ತನ್ನ ಬಗ್ಗೆ ತಾ 31 1-1946ಕ್ಕೆ ಉಡುಪಿ ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿಟ್ಟಿರುತ್ತದೆ. ಆಕ್ಷೇಪ ಉಳ್ಳವರು ಸದ್ರಿ ತಾರೀಕಿಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ-ಜಾಹೀರು ಮಾಡಿಕೊಳ್ಳಬಹುದು.

T. Venkappa Hegde.

ಅರ್ಜಿದಾರನ ಕಡೆ ವಕೀಲ್.

ಉಡುಪಿ }
15 1-1946 }

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S No. 433/1945

[illegible] ಮಿನೇಜಸ್

ಪ್ರತಿವಾದಿ - ಮಂಜುನಾಥ ಶ್ಯಾನುಭಾಗ ಬಿನ್ ವರ್ಧ ನರಸಿಂಹ ಶ್ಯಾನುಭಾಗರ ಮಗ ಕಾರ್ಕಳ ಕಸಬೆಯಲ್ಲಿ ವಾಸೀಸುಮಾರು ಮನೆ ನಂಬ್ರ 1136 ಮನೆಯಲ್ಲಿರುವವರು.

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಪ್ರತಿವಾದಿಯು ಕುಂದಾಪುರ ಕಸಬೆಯಲ್ಲಿರುವ R. T. X. ಫೆರ್ನಾಂಡಿಸರಿಗೆ ತಾರೀಕು 7 11-1944ರಲ್ಲಿ ರೂ 500-0-0ಕ್ಕೆ ಬರೆದು ಕೊಟ್ಟ ಡಿಮಾಂಡು ನೋಟಿನ ಬಾಬ್ತು ಹಣ ಬಡ್ಡಿಯಲ್ಲಿ ವಸೂಲು ಕೊಟ್ಟದ್ದು ಹೋಗ್ಯಾ ಬಾಕಿ ಹಣ ಬಡ್ಡಿಯನ್ನು ವಸೂಲು ಮಾಡುವ ಹಕ್ಕನ್ನು ವಾದಿಯು ನ್ಯಾಯವಾದ ಪ್ರತಿಫಲ ಕೊಟ್ಟು ವಾದಿಯು ಟ್ರಾನ್ಸ್ಫರ್ ಪಡೆದು, ಆ ಹಣದ ಬಗ್ಗೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುತ್ತಾನೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದರೆ, ತಾರೀಕು 2-2-1946ನೇ ದಿವಸ ಪೂರ್ವಾಹ್ನ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಏಕಪಾರ್ಟಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the court)

K. Raghunath Shenai

ವಾದಿಯ ಕಡೆ ವಕೀಲರು.

ಕುಂದಾಪುರ }
13-1-1946 }

ನಿರೀಕ್ಷಣೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು.
ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು.

ನ್ಯೂ ಕರ್ಣಾಟಕ ಥಿಯೇಟರ್ಸ್ ಮುಂಬಯಿ,

ಇವರು

'ಮುಕ್ತಿ'

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯಲ್ಲಿ ಬೇಗನೇ ಪ್ರದರ್ಶಿಸಲಿರುವರು.

ಲೇಖಕರು:-ನಿರ್ಮಾಣಕರು ಮತ್ತು ನಿರ್ದೇಶಕರು:—

ಶ್ರೀ ಯು. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇದೊಂದು ನವೀನ ಪ್ರಯೋಗ. ಕನ್ನಡಿಗರಿಗೆ ಇದೊಂದು ಸುಸಂಧಿ. ನವೀನ ಪಾತ್ರವರ್ಗದವರು ಕರ್ನಾಟಕ ರಂಗಭೂಮಿಯ ಕಳೆಯನ್ನು ಹೆಚ್ಚಿಸಿ, ತನ್ಮೂಲಕ ಕಲಾಸೇವೆಯನ್ನು ಮಾಡಲಿರುವರು.

ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡಕೊಳ್ಳಿರಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಥೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ಮಣು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

ದಿನಕ್ಕೊಂದು ನಗೆ; ಆರೋಗ್ಯದ ಬಗೆ.

ನಗುವಿನೊಂದಿಗೆ ವಿಚಾರದ ಕಿಡಿಯೂ ಬೇಳಗಬೇಕೆ?

ಹಾಗಿದ್ದರೆ

ವಿಷ್ಣುವಿನ ದಶಾಪರಾಧಗಳು

ಅರ್ಥಾತ್ ದಶಾವತಾರಗಳು.

ಎಂಬ ದಶಾವತಾರಗಳ ಕುರಿತಾದ ವಿಡಂಬನ ಗ್ರಂಥವನ್ನೋದಿರಿ.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರರಾದ

ಶ್ರೀ. ಎಂ. ವಿ ಹೆಗ್ಡೆಯವರ ಕೃತಿ.

ಬೆಲೆ 0—12—0

ಪ್ರಸಿದ್ಧ ಸಾಹಿತಿಗಳಾದ

ಶ್ರೀ. ಯಸ್. ವೆಂಕಟರಾಜರ

ಆಕಾಶಗಂಗೆ

೨೦ ಕತೆಗಳ ಸಂಗ್ರಹ.

ಬೆಲೆ ರೂ. 1—12—0

ಪ್ರತಿಗಳಿಗೆ ಉಡುಪಿ ಕಿನ್ನಿಯರ ಪ್ರಪಂಚಕ್ಕಾಗಲಿ, ನವಭಾರತ ಪುಸ್ತಕ ಭಂಡಾರಕ್ಕಾಗಲಿ ಬರೆದು ತರಿಸಿಕೊಳ್ಳಬಹುದು.

(೩ನೇ ಪುಟದಿಂದ ಮುಂದುವರಿದುದು)

ನಿವೇದಿಸಿಕೊಳ್ಳುತಿದ್ದೇನೆ—ಆಗಿನ ಅಧಿಕಾರಿಗಳೆಲ್ಲಾ ಸಾರ್ವಜನಿಕವಾಗಿ ಸರಕಾರಕ್ಕೂ ಖಾಸಗಿಯಾಗಿ ತಮಗೂ ಆದಾಯ ಹಿಂಡು ಸೂರೆಖೋರರಿಂದ ಸಹಾಯ ಪಡಕೊಂಡು ಅದಕ್ಕೆ ಪ್ರತಿಫಲವಾಗಿ ಅವರ ಕಳ್ಳ ವ್ಯಾಪಾರವನ್ನು ಅಲಕ್ಷಿಸುವ ಸಹಾಯ ಸಲ್ಲಿಸಿದ್ದರು.

ಹಾಗಿದ್ದರೆ ಆಗಿನ ಸರಕಾರವನ್ನೇ ಆರೋಪಿಯಾಗಿ ಗಣಿಸಬೇಕಿತ್ತಲ್ಲವೆ? ಹಿಂದಿನ ಸರಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಕಾನೂನು ಬದ್ಧ ಅಧಿಕಾರ ಇಂದಿನ ಸರಕಾರಕ್ಕಿದೆಯೇ? ಎಂದು ಡಿಫೆನ್ಸ್ ಪರವಾಗಿ ವಾದಿಸಲಾಗಿದೆ. ಇಲ್ಲಿ ನಾನು ನಿವೇದಿಸಿಕೊಳ್ಳುವದಿಷ್ಟೆ. ಅಪರಾಧವು ಎಲ್ಲಿದ್ದರೂ ಅಪರಾಧವೇ. ತಪ್ಪು ನಡೆದರೆ ಸರಕಾರದ ಮೇಲೆಯೇ ಮಾನನಷ್ಟ, ಪರಿಹಾರದ್ರವ್ಯ ಕೇಳಿ ದಾವೆ ದಾಖಲಾಗುವದಿಲ್ಲವೆ? ಅಂದಿನ ಸರಕಾರವನ್ನು ಈಗ ಅಪರಾಧಿ ಸ್ಥಾನಕ್ಕೆ ಕರೆದಿಲ್ಲವಾದರೆ ಅದು ಕಾನೂನಿಲ್ಲವೆಂಬುದರಿಂದಲ್ಲ-ಆ ಸರಕಾರವೇ ಈಗ ಇಲ್ಲವಾದ್ದರಿಂದ.ಒಬ್ಬನು ಒಂದು ಸೋಮವಾರ ಕೊಲೆಮಾಡಿ ಶನಿವಾರ ಸಾಯುತ್ತಾನಾದರೆ ಮರುಸೋಮವಾರ ಅವನು ಅಪರಾಧಿ ಸ್ಥಾನಕ್ಕೆ ಬರಲಾರ ಲೋಕದಿಂದಲೇ ಬಿಡುಗಡೆಗೊಂಡ ಅವನು ಕೊಲೆಯ ಶಿಕ್ಷೆಯಿಂದ ಸ್ವಾಭಾವಿಕ ಬಿಡುಗಡೆ ಪಡೆದಿದ್ದಾನೆ ಅಲ್ಲಿಂದ ಅವನನ್ನು ದಸ್ತಗಿರಿಮಾಡಿ ತರಲಿಲ್ಲವೇಕೆ ಎಂದು ಪ್ರಶ್ನಿಸುವಷ್ಟು, ಅಥವಾ ಆ ಕಾರ್ಯಭಾರದ ಹೊಣೆ ಹೊರುವಷ್ಟು ನನ್ನ ನುರಿತ ಮಿತ್ರರು ಮುಂದುವರಿಯಲಾರರೆಂದು ನಾನು ನಂಬುತ್ತೇನೆ (ಕೋರ್ಟಿನಲ್ಲಿ ನಗು). ಡಿಫೆನ್ಸ್ ವಕೀಲರೆಂದಂತೆ ನಿಜಕ್ಕೂ ಆರೋಪೀ ಸ್ಥಾನದಲ್ಲಿ ನಿಲ್ಲಬೇಕಾಗಿದ್ದ ಅಂದಿನ ಸರಕಾರವು ಆ ಅಪರಾಧಕ್ಕೆ ಪ್ರಕೃತಿಸಹಜ ಶಿಕ್ಷೆಯಾಗಿ ನಾಶ ಹೊಂದಿದೆಯಾದ್ದರಿಂದ ಈಗ ಆ ಪ್ರಶ್ನೆಯೇ ಅಸಂಗತವೆಂದು ನನ್ನ ನಿವೇದನೆ. ಆದರೆ ಒಬ್ಬ ಕೊಲೆಗಾರ ಮಡಿದ ಮಾತ್ರಕ್ಕೆ ಅವನ ಪ್ರೇರಣೆಯಿಂದ ಕೊಲೆಗೆ ಸಹಾಯ ಮಾಡಿದ್ದ ಇತರ ಅಪರಾಧಿಗಳು ಜೀವದಲ್ಲಿದ್ದರೆ ಅವರನ್ನು ಆ ಕಾರಣಕ್ಕಾಗಿ ವಿನಾಯತಿ ಪಡಿಸಬೇಕೆಂಬ ಕಾನೂನಿಲ್ಲ. ಅದರಂತೆ ಆ ಸರಕಾರವಿಲ್ಲದಿದ್ದರೂ, ಅದರ ಪ್ರತ್ಯಕ್ಷ ಸಹಾಯ ಅಥವಾ ಮೌನ ಸಮ್ಮತಿಯಿಂದ ಕಳ್ಳ ವ್ಯಾಪಾರ ನಡಿಸಿದ್ದ ಆರೋಪಿಗಳು ತಕ್ಕ ಪ್ರಾಯಶ್ಚಿತ್ತಕ್ಕೊಳಗಾಗಲು ಬದ್ಧರಿದ್ದಾರೆ. ಕಳ್ಳ ವ್ಯಾಪಾರದ ಶಿಕ್ಷೆಗೆ ಅವಧಿ ಬಾಧೆಯೆಂಬುದಿಲ್ಲವಾದ್ದರಿಂದ ಈ ಮೊಕದ್ದಮೆಯು ಕಾನೂನು ಬದ್ಧವಿದೆ.

ಪ್ರತಿಯೊಂದು ವ್ಯವಸ್ಥಿತ ಸಂಸ್ಥೆ ಅಥವಾ ವ್ಯಕ್ತಿಗೆ ತಂತಮ್ಮ ಲಾಭಸಾಧನೆ ಮಾಡಿಕೊಳ್ಳುವ ಹಕ್ಕಿದೆ ಎಂಬುದಕ್ಕೂ, ಅದಕ್ಕಾಗಿ ಸರ್ವ ವಿಧದ ಚಾತುರ್ಯ ಪ್ರದರ್ಶನವೂ ಕ್ರಮಬದ್ಧವಾಗಿದೆ ಎಂಬುದಕ್ಕೂ ಅಂತರರಾಷ್ಟ್ರೀಯ ಕ್ರಮ ಕಾಯಿದೆಗಳ ಒಪ್ಪಿಗೆಯಿದೆ ಎಂಬುದು ಡಿಫೆನ್ಸ್‌ವಾದ. ಈ ವಾದವು ಸದ್ಯದ ಮೊಕದ್ದಮೆಯ ಕ್ಷೇತ್ರದಿಂದ ಸಂಪೂರ್ಣ ಹೊರಗಿನದು. ಇದು ಒಂದು ರಾಜ್ಯಾಂಗ ರಚನೆ ಅಥವಾ ಸಮಾಜರಚನೆಯ ವೇಳೆ ಮುಂದೆ ಬರಬೇಕಾದ ವಿಷಯ ಹೊರತು, ನಿಶ್ಚಯಿಸಲ್ಪಟ್ಟ ಒಂದು ಸರಕಾರದ ನಿಶ್ಚಿತ ಕಾನೂನಿಗನುಸಾರವಾಗಿ ಮುಂದೆ ಬಂದ ಇಂತಹ ಒಂದು ಮೊಕದ್ದಮೆಗದು ಅಗಾವಾಗುವದಿಲ್ಲ. ಸಮತಾವಾದಿ ರಷ್ಯದ ಕಾನೂನನ್ನು ಆಧರಿಸಿ ಇಲ್ಲಿ ಈ ಅಪಾದನೆಗಳನ್ನು ಹೂಡಿದ್ದಲ್ಲ. ಆ ಕಾಲದ ನಿಯಂತ್ರಣ ಶಾಸನ, ಅತಿ ಲಾಭ ನಿರೋಧಕ ಶಾಸನ ಮತ್ತು ಇಂದಿನ ದೇಹ ರಕ್ಷಣಾ ಶಾಸನ ಹಾಗೂ ಮಾಸುಪತ್ರ ಪರಿಪಾಲನಾ ಕಾಯಿದೆಯನ್ವಯ ಆರೋಪಿಗಳು ಅಪರಾಧಿತರಾಗಿದ್ದಾರೆ. ಇಡಿಯ ಮೊಕದ್ದಮೆಯಿಂದ ಸಿದ್ಧವಾಗುತ್ತಿರುವಂತೆ ಹಾಗೂ ಡಿಫೆನ್ಸ್ ವಾದವೇ ಜ್ಞಾಪಕ ಕೊಟ್ಟಂತೆ ಸಮತಾವಾದಿ ಶಾಸನಗಳ ಮೇಲೆಯೇ ಸರ್ವರ ಹಿತಕಾರೀ ಜನತಾ ಸರಕಾರ ನಿಂತಿರಬೇಕೆಂಬುದು ಖಂಡಿತವಾಗುತ್ತಿದ್ದರೂ ಅದು ಇಲ್ಲಿಯ ನನ್ನ ವಾದ ಕ್ಷೇತ್ರದಿಂದ ಹೊರಗಿನದಾದ್ದರಿಂದ, ಅಲಾಹಿದಾ ಬಿಟ್ಟು, ಇಲ್ಲಿ ಸರ್ವ ವಿಧದಿಂದಲೂ ಖಾತ್ರಿಗೊಳಿಸಲ್ಪಟ್ಟಿರುವ ಆರೋಪಿಗಳ ಮಹಾಪರಾಧಗಳಿಗಾಗಿ ಕೋರ್ಟು ಪರಮಾವಧಿ ಶಿಕ್ಷೆಯೀಯತಕ್ಕದ್ದೆಂದು ನಿವೇದಿಸಿಕೊಳ್ಳುತ್ತೇನೆ.

ಕೋರ್ಟು ತೀರ್ಮಾನ

ಈ ಮೊಕದ್ದಮೆಯು ವರ್ತಮಾನ ಕಾಲದಂತೆಯೇ ಭೂತ, ಭವಿಷತ್ಕಾಲಗಳಿಗೂ ಲಗಾವಾಗುವಂತಹದಿರುವದರಿಂದ ಅಸಾಮಾನ್ಯ ಹಾಗೂ ವಿಶೇಷತರದ ಮೊಕದ್ದಮೆಯಿದೆ. ಪ್ರೊಸಿಕ್ಯೂಶನ್ ಪರವಾದ ಸಾಕ್ಷ್ಯ ದಾಖಲಾತುಗಳೆಲ್ಲಾ ಅತ್ಯಂತ ಸ್ಪಷ್ಟವಿದ್ದು ಅಪಾದನೆಗಳು ನಿಸ್ಸಂದೇಹವಾಗಿ ಸಿದ್ಧಗೊಳಿಸಲ್ಪಟ್ಟಿವೆ. ಡಿಫೆನ್ಸ್ ಪರ ಸಾಕ್ಷ್ಯವಿತ್ತ ಇಬ್ಬರು ಜವಾಬ್ದಾರ ವ್ಯಕ್ತಿಗಳೂ ತಾವೂ ಆರೋಪಿಗಳಾಗಲು ಯೋಗ್ಯರೆಂಬುದಕ್ಕಿಂತ ಹೆಚ್ಚಿನದೇನನ್ನೂ ತಿಳಿಸಲಸಮರ್ಥರಾಗಿರುವದು ಗಣನೀಯ ವಿಷಯ. ಈ ರೀತಿ ಪ್ರೊಸಿಕ್ಯೂಶನ್ ವಾದಗಳೆಲ್ಲಾ ಸ್ವತಃ ಸಿದ್ಧವಾಗುತ್ತಿದ್ದು, ಕೇವಲ ಗಲಿಬಿಲಿಯನ್ನಲ್ಲದ ಬೇರೇನುದನ್ನೂ ಕೋರ್ಟಿನ ಮುಂದೆ ಪ್ರದರ್ಶಿಸಲಾಗದೆ ಹೋದ ಡಿಫೆನ್ಸು ತಳಮಳದೊಡನೆ ತನ್ನ ಅಪರಾಧ ಒಪ್ಪಿಕೊಂಡಂತಾಗಿದೆ ಎಂಬುದು ಶೋಧಿಸಲ್ಪಟ್ಟಿದೆ.

ಶಿಕ್ಷೆ ವಿಧಿಸುವಾಗ, ಅಪರಾಧಿಗಳ ಸ್ಥಾನ, ಮಾನ ಮತ್ತು ಅಂದಿನ ಸನ್ನಿವೇಶ ಸಂದರ್ಭಗಳನ್ನು ಅವಗಾಹನೆಗೆ ತಂದುಕೊಳ್ಳುವುದು ಕೋರ್ಟಿನ ಕರ್ತವ್ಯವಿದೆ. ಇಲ್ಲೀಗ ಅಪರಾಧವು ಈ ಮೂವರು ಆರೋಪಿಗಳು, ಮತ್ತವರು ಸೇರಿರುವ ಆದಾಯ ಹಿಂಡು ಸೂರೆಖೋರ ವರ್ಗದ ಮೇಲೆಮಾತ್ರ ಸಿದ್ಧವಾಗಿರುವದಲ್ಲ, ಅಂದಿನ ಅಧಿಕಾರಿಗಳು ಮತ್ತು ಸರಕಾರದ ಮೇಲೆಯೂ ಸಿದ್ಧವಾಗಿದೆ. ಈ ಅಪರಾಧಕ್ಕೆ ಶಿಕ್ಷೆಯಾಗಿಯೇ ಅಂದಿನ ಸರಕಾರ ಎಜ ... ವಾದವನ್ನು ಕೋರ್ಟು ಒಪ್ಪಿಕೊಳ್ಳುವ ಮೊದಲು ಇಂದಿನ ಸರಕಾರದ ಹೇಳಿಕೆಯನ್ನು ಪಡಕೊಳ್ಳುವ ಅಗತ್ಯವಿದೆ ಒಂದು ಸರಕಾರದ ಸ್ಥಾನದಲ್ಲಿ ಅದಕ್ಕಿಂತ ಪೂರ್ತಿ ಭಿನ್ನವಾದ ಮತ್ತೊಂದು ಸರಕಾರ ಬಂದರೂ ಹಿಂದಿನ ಸರಕಾರದ ಕೃತ್ಯಗಳನ್ನು ಉತ್ತರಿಸುವ ವಾರೀಸು ಹಕ್ಕು ಇಂದಿನ ಸರಕಾರದ್ದೇ ಇದೆ. ಒಂದು ಆಸ್ತಿಯ ದುಂದುಗಾರ ಪಟ್ಟಾದಾರನು ಮಡಿದು ಮಿತವ್ಯಯಿ ವಾರೀಸ್ದಾರಗೆ ಪಟ್ಟಿ ಬಂದರೆ ಸ್ವಭಾವ, ಧೋರಣೆ, ಆಯವ್ಯಯ ಪಟ್ಟಿಯಲ್ಲಿ ಕೂಡಾ ಹೆಚ್ಚು ಕಡಿಮೆಯಾಗಬಹುದು; ಆದರೆ ಆಸ್ತಿ ಸಂಬಂಧದ ಎಲ್ಲಾ ಸಾಲಮೂಲಗಳಿಗೂ, ಪಟ್ಟಾದಾರನಾಗಿ ಹಿಂದಿನವನು ಮಾಡಿದ್ದೆಲ್ಲಕ್ಕೂ ಇಂದಿನವನೂ ಹೊಣೆಗಾರನಾಗುತ್ತಾನೆ. ಈ ದೃಷ್ಟಿಯಿಂದ ಈ ಮೊಕದ್ದಮೆ ಹೂಡಿರುವ ಇಂದಿನ ಸರಕಾರವೇ ಅದರಲ್ಲಿರುವ ಅಪಾದನೆಗಳಿಗೂ ಉತ್ತರಕೊಡಲು ಬದ್ಧವಿದೆ. ಆದ್ದರಿಂದ ಈ ಮೊಕದ್ದಮೆಯ ಫಲಿತಾಂಶವು ಅತ್ಯಂತ ವಿಲಕ್ಷಣವಾಗಿ ಕಾಣುತ್ತಿದೆ. ಹಿಂದಿನ ವಿದೇಶಿ ಸರಕಾರವು ತನ್ನ ಪೂರ್ವಜನಲ್ಲವೆಂದೂ ತಾನು ದೇಶದ ಜನತೆಯ ವಾರಸ್ದಾರ ಹೊರತು ಅಂದಿನ ವಿದೇಶೀ ಸರಕಾರದ ಸಂತಾನವಲ್ಲವೆಂದೂ, ಅಂದಿನ ಸರಕಾರವು ಅಪರಾಧಿಯೆಂದು ತಾನೊಪ್ಪುತ್ತೇನೆಂದೂ ಇಂದಿನ ಸರಕಾರ ಹೇಳುತ್ತದಾದರೆ ಹೇಗೆ—ಎಂಬುದನ್ನು ಆ ಮೇಲೆ ವಿಚಾರಿಸಬೇಕಾಗಿದೆ. ಈಗಿನ ಸರಕಾರವು ಹಾಗನ್ನುವ ಮೊದಲು ಆ ಸರಕಾರವನ್ನಿದಿರಿಸಿದ ಸಮಸ್ಯೆ ತನ್ನನ್ನೇ ಇದಿರಿಸಿದಲ್ಲಿ ತಾನು ಹೇಗೆ ವರ್ತಿಸುತ್ತಿದ್ದೆನೆಂಬ ವಿಧಾನವನ್ನು ನಿರೂಪಿಸಲು ಬದ್ಧವಿರಬೇಕು. ತನ್ನ ಮೇಲೆ ಹೇರಲ್ಪಟ್ಟ ಯುದ್ಧವೊಂದರ ವೆಚ್ಚಕ್ಕಾಗಿ ಇಂತಹ ವಿಧಾನಗಳನ್ನಲ್ಲದೆ ಯಾವ ಸರಕಾರವಾದರೂ ಬೇರೇನು ಮಾಡಲು ಸಾಧ್ಯವಿದೆ? ಯುದ್ಧಕಾಲದ ಶಾಸನಗಳೇ ಯುದ್ಧಪೂರ್ವದ ಶಾಸನಗಳಿಗೆ ವಿರುದ್ಧವಿದ್ದುವೆಂದ ಮೇಲೆ ಆ ಶಾಸನಗಳೇ ಶಾಸನಭಂಗ ಮಾಡಿದ್ದುವು. ಯಾಕಾಗಿ? ಯುದ್ಧಾವಶ್ಯತೆಗಾಗಿ. ಅಂದಮೇಲೆ, ಯುದ್ಧಾವಶ್ಯತೆಯನ್ನು ಪೂರೈಸುವ ಸಹಾಯ ಅಪಾದಿತರಿಂದಾಗಿದೆ ಎಂಬುದ. ಇಕ್ಕಡೆಯವರಿಂದಲೂ ಒಪ್ಪಲ್ಪಟ್ಟಿರುವಾಗ ಯುದ್ಧಕಾಲದ ಶಾಸನಗಳೆಂಬಾದನ್ನೇ ಅಪರಾಧ ಆರೋಪಿಗಳಿಂದಾದುದು ಎಂಬುದನ್ನೂ ಒಪ್ಪಬೇಕು ಇಂತಹ ಆವಶ್ಯಕತೆಯನ್ನು ನಿರ್ಮಿಸಿದ ಯುದ್ಧವೊಂದೇ ಅಪರಾಧಿಯೆಂಬ ಶೋಧವಾಗುತ್ತದೆ. ಅಂತಹ ಯುದ್ಧ ನಿರ್ಮಾಪಕರಾದ ಹಿಟ್ಲರ್, ಮುಸಲನಿ ಮತ್ತು ಟೋಜೋ ನಾತ್ರವರ ಪಕ್ಷದವರು ಹೊರತು ಬೇರಾರ ಮೇಲೂ ಅಪರಾಧ ... ವಿಲ್ಲ. ಆದ್ದರಿಂದ ಪ್ರೊಸಿಕ್ಯೂಶನ್ ತನ್ನೀ ಅಪಾದನೆಗಳನ್ನು ನ್ಯೂರೆಂಬರ್ಗ ಕೋರ್ಟಿಗೆ ಹಾಜರುಪಡಿಸಲು ಒಯಸುತ್ತದಾದರೆ ಈ ಮೂಲಕ ಅದನ್ನು ಸರ್ಟಿಫೈ ಮಾಡುತ್ತಾ, ಅಪರಾಧದ ಹೊಣೆಯು ಎಲ್ಲಿತ್ತೋ ಅಲ್ಲಿಯೇ ವಿಚಾರಣೆ ನಡೆಯುವ ಅನುಕೂಲತೆಯೊದಗಿಸಲಿಚ್ಛಿಸುತ್ತೇವೆ. ಈ ಮೊಕದ್ದಮೆಯ ಮುಖ್ಯಾಂಶವನ್ನು ತೀರ್ಮಾನಿಸಿದ ಮೇಲೆ, ಈ ಕೋರ್ಟಿನ ಮುಂದಿರುವ ಅಪಾದಿತರ ಮೇಲೆ ಉಳಿಯುವ ಅಪಾದನೆಯೆಂದರೆ ಅವರೆಲ್ಲಾ ತಮಗೆ ಮತ್ತು ತಮ್ಮ ವಂಶಪಾರಂಪರ್ಯಕ್ಕೆ ಸಾಕಾಗುವಷ್ಟು ಧನವನ್ನು ಕೂಡಿಟ್ಟಿರುವದ್ದರಿಂದ ಇನ್ನು ವ್ಯಾಪಾರ ನಡಿಸುವ ಆವಶ್ಯಕತೆಯಿಲ್ಲವೆಂಬುದೊಂದೇ ಇದನ್ನಾಧರಿಸಿ ಆರೋಪಿ ಪಂಗಡಿಗರೆಲ್ಲರಿಗೂ ಅನ್ವಯಿಸಬೇಕೆಂಬ ಸೂಚನೆಯೊಡನೆ ಅಪಾದಿತರಿಗೆ ಜೀವಾವಧಿ ದಂಡೆ ವಿಧಿಸಿದ್ದೇವೆ.

ತಿದ್ದುಪಡಿ—ಕಳದ ಸಂಚಿಕೆಯ 'ಆದಾಯ ಹಿಂಡು ...' ಶಿರೋನಾಮೆಯಲ್ಲಿ ಕೆಲವೆಡೆ ಅಕ್ಷರ ಪ್ರಮಾದಗಳಾಗಿವೆ. ಅವುಗಳಲ್ಲಿ 'ಭಾಲಾಬಾಯಿ' ಎಂದು ಬಿದ್ದಿರುವ ಕಡೆಗಳಲ್ಲಿ 'ಲಾಭಬಾಯಿ' ಎಂದು ತಿದ್ದಿ ಓದಬೇಕಾಗಿ ವಿನಂತಿ

ದಮ್ಮಿಗ್ಗೆ ಕೇಳೋ ಕೇಳು

"ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ"

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದಮುಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೀರಾ ನಿಲ್ಲುವದು, ಹೊಟ್ಟೆ ಹಸಿವಾಗುವದು, ಪಚನಶಕ್ತಿಯು ತಿದ್ದುವದು; ಶ್ವಾಸಕೋಶಗಳು ಗಟ್ಟಿಯಾಗುವವು. ಆ ಮೇಲೆ ದಮ್ಮು ತಿರುಗಿ ಸ್ವಲ್ಪವೇ ಸಿಗುವದಿಲ್ಲ.

ದಮ್ಮು, ತೀವು, ಜೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತ ಶ್ವಾಸಹಾರೀ ಪ್ಲೇನ (ನೀಲಿ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಾರ್ಬೊನೇಟ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

... ಕ್ರಮವಾಗಿ ರೂ. ... ಮತ್ತು ...

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪ್ರಾವಿನ್ಶಿಯಲ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್ ಕಂ, ಮೈಸೂರು.

ಮುಂಬಯಿ ಸೋಲ ಏಜಂಟರು

ವನಮಾಲೀ ಭಿಕಾ ಮತ್ತು ಕಂಪನಿ.

ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ..



PUROHIT SHWAS-HARI

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅನೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಆ ಔಷಧಿನ ಬಾಟ್ಲಿಗಳು ಹೆಚ್ಚು ಕಡಿಮೆ ಆರದಿವಸಗಳಿಗೆ ಬರುವವು, ಆದರೆ ಕೇವಲ ೪ ಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೮ **ಕೊಡಿಯಾಲಬೈಲು, ದ. ಕ.**

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ನೀತಿಧರ್ಮ	...	...	0	6	0
2.	ಸಾಮುದ್ರಿಕ ಶಾಸ್ತ್ರ	....	...	0	8	0
3.	ಬಾಲ ರಾಮಾಯಣ	....	....	0	5	0
4.	ಸುಕನಾ ಚರಿತ್ರೆ	....	....	0	5	0
5.	ಕೊಳಲು ಕೃಷ್ಣ	...	....	0	8	0
6.	ಗುರುಪೀರಗಳ ಅವನತಿ	....	....	0	8	0
7.	ದ್ವೈತಮತ ಖಂಡನೆ	....	....	0	6	0
8.	ಧರ್ಮಸಂಕಟ	....	....	0	4	0
9.	ಪೂರೂರವ	....	....	0	8	0
10.	ನಿಶ್ಚಯ ಜ್ಞಾನ	...	...	0	8	0
11.	ವಿದ್ಯಾರಣ್ಯ ಕಾವ್ಯಂ	....	....	1	0	0
12.	ಚಂದ್ರಗುಪ್ತ ಚಕ್ರವರ್ತಿ	....	....	1	0	0
13.	ಸ್ವದೇಶಿ	....	....	0	4	0
14.	ಹರಿಜನ ಸೇವೆ	....	....	0	4	0
15.	Gauthama the Buddha		....	0	8	0
16.	ಪ್ರಾರ್ಥನೆ	....	....	0	2	0
17.	ಹಿಂದೀ ಪಹಲಿ ಪೋತಿ	....	....	0	2	0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)			0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	....	....	1	0	0
ಕೃಷ್ಣ ರಾಜಿ ಪರ್ಸಂಗೊ	....	....	1	0	0
ತುಳುವಾಲ ಬಲಿಯೇಂದ್ರ	....	....	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು		....	0	8	0
ಕಾನಿಗೆ	....	....	0	8	0
ತುಳು ವ್ಯಾಕರಣ	....	....	1	0	0
ಮದ್‌ಮಾಳತ್ತ್ ಮದ್‌ಮಾಯೆ		....	0	4	0
ಜನಮರ್ಲ್	....	....	0	12	0
ತುಳು ಪದ್ಯಮಾಲಿಕೆ	....	....	0	2	0
ಬಂಗಾರ್ದಂಗಿದ ಕತೆ	....	....	0	2	0
ಮಿತ್ಯ ನಾರಾಯಣ ಕತೆ	....	....	0	1	0
ಸತೀ ಕಮಲೆ	....	....	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: **2-8-0.** ದಪ್ಪನಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, **ಉಡುಪಿ.**

ಬೆಲೆ: **3-0-0**

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪ್ಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ನವಯುಗ

NAVAYUGA

ವರ್ಷ ೨೫ ವಾರ ೨೧] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder: SRI A. B. SHETTY. [Vol. 25 No. 21

ಉಡುಪಿ ● **24—1—1946** ● ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ, ತಲೆನೋವು, ಶೀತ, ನೆಗಡಿ, ಉಳುಕು, ಗಂಟುಗಳ ನೋವು, ಸ್ನಾಯುಗಳ ಬಾಧೆ ಮೊದಲಾದ ರೋಗಗಳನ್ನು ಶೀಘ್ರವಾಗಿ ಗುಣಪಡಿಸುವುದು.

REGD.

ಸಪ್ತ ಪ.ಉಚಿತ್ತ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE CANARA MUTUAL ASSURANCE COMPANY, LTD.,

(UDIPI, S. India.)

Good Wishes

We thank all our Policy-holders, Agents, Medical Examiners and well-wishers for their co-operation and wish them a happy, peaceful and prosperous life in the NEW YEAR.

B. Vaikunta Baliga,

Chairman.

BOARD OF DIRECTORS.

ಲಲಿತಕಲಾ ಕರ್ನಾಟಕ ಸಂಗೀತ ಸಭಾ, ಮುಂಬಯಿ

ಇವರು

ಶ್ರೀ ವಿಷ್ಣುಮೂರ್ತಿ ದೇವಾಲಯ, ಕೆಮ್ಮಣ್ಣು (ಉಡುಪಿ)

ಇದರ ಸಹಾಯಾರ್ಥವಾಗಿ

ಸತೀ ಬೃಂದಾದೇವಿ

ಎಂಬ ನವರಸಭರಿತವಾದ ಪೌರಾಣಿಕ ಕನ್ನಡ ನಾಟಕವನ್ನು ಇದೇ ಬರುವ ತಾ. **8-2-46**ನೇ ಶುಕ್ರವಾರ ರಾತ್ರಿ ಘಂ. 8-30ಕ್ಕೆ ಕಲ್ಬಾದೇವಿ ರೋಡಿನಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸುವರು.

ಶ್ರೀಮತಿ ಆನಂದಿ ಬಾಯಿ, ಗಂಗೊಳ್ಳಿ

ಇವರು 'ಬೃಂದಾದೇವಿ'ಯ ಪಾತ್ರವನ್ನು ವಹಿಸುವರು.

ಕನ್ನಡ ಬಂಧುಭಗಿನಿಯರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಪಿ. ಆರ್. ಬೋಳಾರ್, ಬಿ. ಎ.,	ಬಿ. ಆರ್. ಕಾರ್ಕಳ್,
ದಿಗ್ದರ್ಶಕರು	ರಂಗಭೂಮಿ ವ್ಯವಸ್ಥಾಪಕರು
ಲ. ಕ. ಸ. ಸಭಾ.	ಲ. ಕ. ಸ. ಸಭಾ.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ANNOUNCEMENT

We have pleasure to announce the opening of a branch of the Bank at

KANHANGAD

on 17-11-1945, by

Sri B. Appaswamy Chetty, B. A., R. D. O, Puttur

A branch of the Bank will be opened at MERCARA shortly.

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

★ ನೇತಾಜಿಗೇನು ಹಿಡಿಯಿತು— ★

ಅಂತ್ಯವೋ ಐವತ್ತೋ ?

ಒಂದು ಜನವರಿ ತಾ 16ರಲ್ಲಿ ಸುಭಾಸ್ಚಂದ್ರ ಬೋಸರು ಭಾರತದಿಂದ ಕಾಣೆಯಾಗಿದ್ದರು. ಅದಕ್ಕೂ 45 ವರುಷ ಹಿಂದಿನ ಒಂದು ಜನವರಿಯ 23ರಲ್ಲಿ ಸುಭಾಸ್ಚಂದ್ರರು ಹುಟ್ಟಿದ್ದರು. 1946ನೇ ಜನವರಿ 16 ಬರುವಾಗ ಸುಭಾಸರು ಕಾಣೆಯಾಗಿ 5 ವರುಷ, ಜನವರಿ 23 ಬರುವಾಗ ಸುಭಾಸರು ಹುಟ್ಟಿ 50 ವರುಷ. ಜನವರಿ ತಾ. 16ರಿಂದ 23ರ ವರೆಗಿನ ವಾರದ ಆ ತುದಿ ಮತ್ತು ಈ ತುದಿ ಬೋಸ್ ದಿನಗಳು. ಅವರು ಹುಟ್ಟಿದುದು ಸರ್ವ ವಿಧದಿಂದ ಸಾರ್ಥಕವಾಗಿದೆ. ಕಾಣೆಯಾದುದೂ ಒಂದು ವಿಧದಿಂದ ಸಾರ್ಥಕವಾಗಿದೆ. ಇವೆರಡು ಸಾರ್ಥಕ್ಯಗಳಿಗೆ ಸ್ಪಷ್ಟವೆಂದರೆ ಉಳಿದ ಭಾರತೀಯರು ಅನ್ಯರುಗಳ ಸ್ಮರಣಾರ್ಥ ಹುಟ್ಟಿನ [illegible] ಬೇರೆ ಸಾರ್ಥಕ ಕಾರ್ಯ ಸಾಧಿಸುತ್ತಿರುವುದೇ ಕಂಡುಬರುವದಿಲ್ಲ. ಅಂತಹ ಸಾರ್ಥಕ ಜೀವಿ ಸುಭಾಷ್!

ಅದ್ಭುತ ವ್ಯಕ್ತಿ

ಬಾಬು ಸುಭಾಸ್ಚಂದ್ರರು ನಿಜಕ್ಕೂ ಪೂರ್ವ 'ವ್ಯಕ್ತಿ'. ಅವರಲ್ಲಿದ್ದ ವಿಶಿಷ್ಟ ವ್ಯಕ್ತಿತ್ವವು ದೃಢತೆಯು ವ್ಯಕ್ತಿಗೆ ಗಾಂಧೀ ವ್ಯಕ್ತಿತ್ವಕ್ಕೆ ಸಮಾನ ಆಕಾರ ಕೊಟ್ಟಿದ್ದರೂ ಗಾಂಧಿಜೀ ತನ್ನ ಅಭಿಪ್ರಾಯ ಬದಲಾಯಿಸುವದಿಲ್ಲ, ಸುಭಾಸರೂ ಆದಿಯಿಂದ ಅಂತ್ಯದ ವರೆಗೂ ಹಾಗೆ. ಭಾರತ ರಾಜಕೀಯಾಕಾಶದಲ್ಲಿ ನೆಹರು ಸ್ವಪ್ರಭೆಯುಳ್ಳ ತಾರೆ, ಆದರೆ ಸುತ್ತಾಟವೆಲ್ಲ ಗಾಂಧೀ ಗ್ರಹದ ಪರಿಧಿಯಲ್ಲೇ. ವಲ್ಲಭಭಾಯಿ, ರಾಜೇಂದ್ರರಂತೂ ಗಾಂಧೀ ಛಾಯೆಗಳೇ. ರಾಜಾಜಿಯಲ್ಲಿ ತನ್ನತನವಿದೆ. ಆದರೆ ಗಾಂಧೀ ಪ್ರಕಾಶ ಬೀಳದೆ ಹೋದರೆ ಸಾಕಷ್ಟು ಸ್ವಪ್ರಭೆಯಿಲ್ಲ. ವ್ಯಕ್ತಿ ವೈಶಿಷ್ಟ್ಯ ಮತ್ತು ಅದಕ್ಕನುಗುಣವಾದ ಪ್ರಭಾವ, ಎರಡೂ ಉಳ್ಳ ಪೂರ್ವ ರಾಷ್ಟ್ರಪುರುಷನೆಂದರೆ ಸುಭಾಸ್ ಚಂದ್ರ [illegible] ಸ್ವಾಗತ ಕರೆಯೊಂದಕ್ಕಲ್ಲದೆ, ಬೇರಾವ ಆಜ್ಞೆಗೂ-ಅದು ಸರಕಾರದ್ದಿರಲಿ, ರಾಷ್ಟ್ರಸಭೆಯದ್ದಿರಲಿ— ಹೊಂದಿಕೊಳ್ಳುವವರು ಸುಭಾಸರಲ್ಲ. ಆದ್ದರಿಂದಲೇ ಅವರು ಸರಕಾರದ ಕಣ್ಣಿಗಂತೂ ಸದಾಕಾಲ ಕಾಸರಕನ ಕೋಲೇ, ಕೆಲವೊಮ್ಮೆ ಕಾಂಗ್ರೆಸ್ ಪ್ರಮುಖರ ದೃಷ್ಟಿಗೂ ಕಣ್ಣಿನ ಕಡ್ಡಿಯಾಗಿ ತೋರಿದ್ದರು.

ಚತುರ್ವರ್ಣ ಜೀವನ

ಬಾಬೂ ಸುಭಾಸರ ಜೀವನವು ನಾಲ್ಕಂಕಗಳ ಮಹಾ ಗ್ರಂಥ, ಕ್ರಾಂತಿಯ ಚತುರ್ವೇದಗಳು. 1921ರ ವರೆಗಿನ ಮೊದಲಿನ ಅಧ್ಯಾಯವನ್ನು ಮುಂದಿನ ಅಧ್ಯಾಯಗಳಿಂದ ವಿಂಗಡಿಸಿಟ್ಟಲ್ಲಿ ಅದು ಮುಂಟಿತನವಿದ್ದ ಶ್ರೀಮಂತ ಪುತ್ರನೊಬ್ಬನ ಕತೆಯನ್ನಿಸಬಹುದು. ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ಬಿಳಿ [illegible] ಗ ಹೊಡೆದು, ಹೇಳದೆ ಕೇಳದೆ ಕಾಲೇಜು ಬಿಟ್ಟು, ಯಾತ್ರಾರ್ಥಿಯಾಗಿ ಸಂಚರಿಸಿ, ಕೊನೆಗೆ ಸಪ್ಪಾರಿಗೆ ಬಂದು 'ಐ ಸಿ ಎಸ್' ಪರೀಕ್ಷೆಗೆ ಕುಳಿತ ದಾಖಲೆ ಅದು 1921ರಲ್ಲೇ ಕ್ರಾಂತಿರೂಪಿ ಸುಭಾಸರ ಜನನ. ಅಂದಿನಿಂದ ತ್ರಿಪುರ ಕಾಂಗ್ರೆಸ್ ಅಧ್ಯಕ್ಷ

ಸಾಗುವ ವರೆಗಿನ ಸುಭಾಸ್ ಚೇರಿಯೇ ಈ ಅವಧಿಯಲ್ಲಿ 10 ಸಲ ಕಾರಾಗ್ರಹವಾಸ, ತರುಣರ ಆದರ್ಶ, ರಾಷ್ಟ್ರ ಗೌರವ, ರಾಷ್ಟ್ರಪತಿ ಅವರು ಯುವಕರ ತಲೆ ನಾಟಗಳನ್ನು ಬಿಸಿಯೇರಿಸಲೂ ಬಲ್ಲರು, ಸಂಘಟನಲೂ ಬಲ್ಲರು ಎಂದು ನಿಪುಣಂದಾ ಬ್ರಿಟಿಷರಂತು ಕೊಂಡರು 'ಸುಭಾಸರು ಅದ್ಭುತ ಸಂಘಟನಾ ಶಕ್ತಿಯುಳ್ಳ ಮನುಷ್ಯ' ಎಂದು ೧೯೨೪—೨೫ರಲ್ಲಿ, ಸುಮಾರು ೨೭—೨೮ ವರುಷ ಪ್ರಾಯದಲ್ಲಿದ್ದ ಈ ಎಳೇ ಸಿಂಹವನ್ನು ಆಗಿನ ಭಾರತ ಮಂತ್ರಿ ಬರ್ಕನ್‌ಹೆಡ್ ಅರಿತಿದ್ದರು. ಭಾರತೀಯರು ಈ ಮಾತನ್ನಾಡಬೇಕಾದರೆ ೧೯೩೮ರ ವರೆಗೆ ಕಾಯಬೇಕಾಯಿತು. ರವೀಂದ್ರನಾಥ ಠಾಗೋರರಲ್ಲಿದ್ದ ಕವಿತಾ ಶಕ್ತಿಯ ಸ್ವರಿತಂತೆಯೇ, ಸುಭಾಸರಲ್ಲಿದ್ದ ಕ್ರಾಂತಿ ಶಕ್ತಿಯನ್ನೂ ಭಾರತೀಯರಿಗಿಂತ ಮೊದಲು ಕಂಡುಕೊಂಡವರು ಬ್ರಿಟಿಷರೇ. ಹಂಗು, ದಾಕ್ಷಿಣ್ಯ, ಆಸೆ ಅಂಜಿಕೆಗೆ ಕಟ್ಟುಬೀಳುವ ಮನುಷ್ಯನ ಸಂಬಂಧ ಕಡಿಕೊಂಡರೆ ಮನಸ್ಸೆಂಬುದು ಒಂದು ಪರಿಶುದ್ಧ ವಸ್ತು. ಮನುಷ್ಯನದಲ್ಲದ ಮನಸ್ಸಿಗೆ 'ತಪ್ಪು-ಸರಿ'ಗಳ ಹೊರತು ಲಾಭ ನಷ್ಟ, ಆನಂದ ದುಃಖಗಳ ಪರಿಚಯವಿರುವಂತಿಲ್ಲ. ಸುಭಾಸ್ ಮನುಷ್ಯನಲ್ಲ-ಒಂದು ಮನಸ್ಸು! ಆದ್ದರಿಂದ ತನಗೆ ಸರಿ ಕಂಡಂತೆ ತ್ರಿಪುರ ಕಾಂಗ್ರೆಸಿನ ನಂತರ ಗಾಂಧಿಜೀಯಾರಂಭಿಸಿ ಎಲ್ಲಾ ಗಾಂಧಿ ಭಕ್ತ ಪ್ರಮುಖರಿಗೂ ಇದಿರುವಾದಿಯಾದರು ಕೊನೆಗೆ ಕಾಂಗ್ರೆಸ್ ಶಿಕ್ಷೆಗೂ ಒಳಗಾದರು

ಕ್ರಾಂತಿ ಭೈರವ

ಆದರೆ ಅದು ಅಜೇಯ ಹೃದಯ. ರಾಷ್ಟ್ರವನ್ನು ಮುನ್ನಡೆಸಲು ಹುಟ್ಟಿದವನು ರಾಷ್ಟ್ರದ ಮನ್ನಣೆಯನ್ನು ಆಧರಿಸಿರಲಾರ. ಇಂದೇಕೋ ಅಂದಿನ ಸ್ಮರಣೆಮಾಡಬಾರದೆಂಬ ನಿರ್ಬಂಧವನ್ನು ಎಲ್ಲಾ ಪ್ರಮುಖರೂ ತಮಗೆ ತಾವೇ ಹಾಕಿಕೊಂಡಂತಿದೆ. ಆ ಘಟನೆಯೇನೋ ಸ್ಮರಣೆಗರ್ಹವಾದುದಲ್ಲ, ಆದರೆ ಗುಲಾಮ ಮನೋವೃತ್ತಿಯ ಭಾರತೀಯರ ಅಂದಿನ ನಟನೆ? ನಮ್ಮ ಮನೋದಾರ್ಢ್ಯಕ್ಕಾಗಿ ಅದರ ನೆನಪು ಬೇಡವೇ? ಗಾಂಧಿಜೀಯ ಹಿಂಬಾಲಕರಾದ ಎಲ್ಲಾ ಪ್ರಮುಖರ ವಿನಂತಿಯನ್ನೂ ಅಲಕ್ಷಿಸಿ ರಾಷ್ಟ್ರವೆಂದು ಮತ್ತೊಮ್ಮೆ ಸುಭಾಸರನ್ನು ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಿದ್ದೇ ತಡ, ಗಾಂಧಿಜೀ ಬಾಯಿಬಿಟ್ಟರು-'ಈ ಸೋಲು ನನ್ನದು' ಇವೆರಡು ಅಂಶರಗಳ ನಡುವಿನ ಅವಧಿಯಲ್ಲಿ ಸುಭಾಸರಾವ ತಪ್ಪನ್ನೂ ಮಾಡಿದ್ದಿಲ್ಲ, ಆದರೂ ರಾಷ್ಟ್ರಕ್ಕೆ ಸುಭಾಸರು ಅಪರಾಧಿಯಾಗಿ ಕಾಣಹತ್ತಿದರು. ಇಂತಹ ಚಂಚಲಬುದ್ಧಿಯ-ಆತ್ಮಕ್ಕೂ ಅನುಯಾಯಿತ್ವದ ಪರದೆಯೊಳಿದುಕೊಂಡಿರುವ-ತನ್ನ ದೇಶಬಾಂಧವರ ಮೇಲೆ ಸುಭಾಸರ ಕನಿಕರ ಹೆಚ್ಚಿತು. ಅವರಿಗೆ ಕೀರ್ತಿ ಬೇಕಾಗಿರಲಿಲ್ಲ, ಆದ್ದರಿಂದ ತನ್ನಲ್ಲಿ ಜಿಗುಪ್ಸೆ ಪಟ್ಟವರ ಮೇಲೆ ಅವರಿಗೆ ದ್ವೇಷವೊಳೆಯಲಿಲ್ಲ 'ಪಾಪ'! ಅನ್ನಿಸಿತು. ಅವರ ಕಾರ್ಯದಕ್ಷತೆಯ ಪರೀಕ್ಷಾಕಾಲ ಬಂದಂತಾಯಿತು ಅದರಲ್ಲೂ ಅವರು ಸೋಲಲಿಲ್ಲ.

ಯುದ್ಧಾರಂಭದೊಡನೆ—

ಸುಭಾಸ್ ಜೀವನದ ಮೂರನೇ ಅಂಕ ಆರಂಭವಾಯಿತು. ಗಾಂಧಿಜೀಯ ಕಣ್ಮುಂದೆ ಲಂಡನಿನ ಕಟ್ಟಡಗಳು ಧ್ವಂಸವಾಗುವ ಚಿತ್ರ ಬಂದು ನೀರು ತುಂಬಿತು, ಸುಭಾಸರ ದೃಷ್ಟಿಯ ಮುಂದೆ ಭಾರತದ ಭವಿಷದ್ರೂಪ ಹೊಳೆದು ಅದು ವಿಶಾಲಗೊಂಡಿತು. ಬೋಸರ ಬಿಲ ಗೊತ್ತಿದ್ದ ಸರಕಾರವು ಅವರನ್ನು ೧೧ನೇ ಬಾರಿ ಕಾರಾ

(೧೧ನೇ ಪುಟ ನೋಡಿರಿ)

AGAINST DIABETES
&
all its dreadful results
Consult Specialists
Dr. Alvas' Research Institute, FAJIR
S. KANARA

ಇಂದ್ರಭವನ ಕಾಫಿ ಹೊಟೇಲ್.
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು - ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ ಉತ್ತಮ ಉಪಚಾರ
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

1000's SAVED
MARGARET'S
FITS CURE
Stops children's fits in 3 minutes
Ask your chemist for a box
Sole Agents
BRIGHTSTAR AGENCIES,
Hospital Rd Udipi, S. K.

ಕರ್ನಾಟಕ ಏಕೀಕರಣ ಸಮೀಪಿಸಿದೆ.

ಬೊಂಬಾಯಿ ಸಮ್ಮೇಳನದಲ್ಲಿ ಸರ್ದಾರರ ಭಾಷಣ.



ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನವು ಜನವರಿ ತಾ. 19ರಲ್ಲಿ ಬೊಂಬಾಯಿಯಲ್ಲಿ ಸೇರಿತು. ಬೊಂಬಾಯಿಯ ಮಾಜಿ ಪ್ರಧಾನಿ ಶ್ರೀ ಬಿ. ಜಿ. ಖೇರರು ಅಧ್ಯಕ್ಷತೆ ವಹಿಸಿದ್ದರು. ಸರ್ದಾರ್ ವಲ್ಲಭಾಯಿ ಪಟೇಲರು ಸಮ್ಮೇಳನವನ್ನು ಉದ್ಘಾಟಿಸಿದರು. ಕೇಂದ್ರ ಪಾರ್ಲಿಮೆಂಟರೀ ಬೋರ್ಡಿನ ಕಾರ್ಯಕಲಾಪಗಳಿಗಾಗಿ ಸರ್ದಾರರು ದಿಲ್ಲಿಗೆ ಹೋಗಿದ್ದುದರಿಂದ ಅವರು ತನ್ನ ಭಾಷಣವನ್ನು ಬರೆದು ಕಳುಹಿದ್ದರು.

ಸರ್ದಾರರ ಭಾಷಣ

ತಾವು ಅಧಿಕ ಸಂಖ್ಯೆಯಲ್ಲಿರುವ ಭಾಗಗಳನ್ನೆಲ್ಲಾ ಒಂದುಗೂಡಿಸಿ ಒಂದು ವಿಶಿಷ್ಟ ಪ್ರಾಂತ್ಯರಚಿಸಬೇಕೆಂಬ ಸರ್ವ ಕನ್ನಡಿಗರ ಬಯಕೆಗೆ ತನ್ನ ಸಂಪೂರ್ಣ ಸಹಾನುಭೂತಿ, ಪೂರ್ಣಾನುಮೋದನೆಯಿದೆಯೆಂಬುದನ್ನು ಸ್ಪಷ್ಟ ವಾಣಿಯಲ್ಲಿ ಭಾಷಣಾರಂಭದಲ್ಲೇ ಸರ್ದಾರರು ಸೂಚಿಸಿದ್ದರು- "ಸ್ವತಂತ್ರ ಭಾರತವು ಪ್ರಥಮತಃ ಮಾಡಲಿರುವ ಒಂದು ಕಾರ್ಯವೆಂದರೆ, ಈ ರಾಷ್ಟ್ರದ ಭಾಷಾವಾರು ಘಟನೆ... ಮೇಲೆ ಬ್ರಿಟಿಷರು ಹಾಕಿರುವ ಇಂದಿನ ತೊಡಕುಗಳನ್ನು ನಿವಾರಿಸುವದೇ. ಸದ್ಯದ ಪ್ರಾಂತ್ಯ ವಿಭಾಗಗಳು ನ್ಯಾಯವಾದ ಯಾವುದೊಂದು ಮಟ್ಟವನ್ನೂ ಆಧರಿಸಿಲ್ಲವೆಂಬುದು ಸರ್ವ ಶ್ರುತವಿದೆ. ಚರಿತ್ರೆ, ಭೂಸ್ಥಿತಿ, ಆರ್ಥಿಕ ಅಥವಾ ಭಾಷಾವಾರು ಕಾರಣಗಳಲ್ಲಾವುದೂ ಇಲ್ಲದೇನೆ ಮಾಡಿಟ್ಟ ಗಡಿನಿರ್ಣಯಗಳಿವು. ಭಾರತದಲ್ಲಿ ಬ್ರಿಟಿಷ್ ಅಧಿಕಾರವೆಂಬುದು ಆಕಸ್ಮಾತ್ತಾಗಿ ಹಾಗೂ ಶೀಘ್ರಗತಿಯಿಂದ ಬೆಳೆಯ ಹತ್ತಿದಾಗ, ಜನತೆಯ ಹಿತಸಂಬಂಧದ ಕಡೆಗೆ ಎಳ್ಳಷ್ಟು ಲಕ್ಷ್ಯ ಕೊಡದೆ ಪ್ರಾಂತ್ಯ ನಿರ್ಮಾಣಗಳಾಗಿಬಿಟ್ಟವು. ಆದರಲ್ಲಿ ಜನರ ಅಭಿಪ್ರಾಯ ಸೇರುವದಂತೂ ಮತ್ತಷ್ಟು ದೂರ ಉಳಿದಿತ್ತು. ಶುದ್ಧ ಸಂಕುಚಿತ ಆಡಳಿತೆಯ ದೃಷ್ಟಿಯಿಂದ ಕೂಡಾ ಈ ವಿಧಾನವು ಜಯಶೀಲವಾಗಿಲ್ಲ. ಪ್ರಾಂತ್ಯಗಳ ರಚನೆಯ ಈ ಆಕಸ್ಮಿಕ ಅವಘಡಕ್ಕೆ ಬಲಿಯಾದ ಕನ್ನಡ ಜನಾಂಗ ಅಂಗವಿಚ್ಛೇದ ಪಡೆದು ಛಿನ್ನಭಿನ್ನವಾಯಿತು. ಇತರ ಹಲವು ಪ್ರಾಂತ್ಯಗಳೂ ಈ ದುರದೃಷ್ಟಕ್ಕೆ ಬಲಿಯಾದವು. ಈ ದುರ್ಗತಿಯಿಂದಾಗಿ ಸಂಬಂಧಪಟ್ಟ ಪ್ರಾಂತ್ಯಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕಾಭಿವೃದ್ಧಿಗೆ ತಡೆಬಿದ್ದುದು ಸಹಜವೇ. ಆದ್ದರಿಂದ ಪ್ರಾಂತ್ಯಗಳ ಪುನರ್ರಚನೆಯಾಗಬೇಕು — ಜನತಾಭಿಪ್ರಾಯಕ್ಕನುಸಾರವಾಗಿ ಭಾಷಾವಾರು ಭಾಗಗಳ ಏಕೀಕರಣವಾಗಬೇಕು—ಎಂಬುದು ಈ ಪ್ರಶ್ನೆಯ ಕಡೆಗೆ ರವಷ್ಟು ಲಕ್ಷ್ಯಹರಿಸಿದ ಸಕಲರಿಂದಲೂ ಒಪ್ಪಲ್ಪಟ್ಟ ವಿಷಯ."

ಪ್ರಭಾವಶಾಲಿ ಕರ್ನಾಟಕ

"ಕರ್ನಾಟಕದ ಗತ ಕಾಲ ಅವೋಘವಾದುದು. ಆರನೇ ಶತಮಾನದಿಂದಾರಂಭಿಸಿ ಹದಿನಾರನೇ ಶತಮಾನದ ವರೆಗಿನ ಅದರ ಚರಿತ್ರೆ ಉಜ್ವಲವಾದುದು ಅದರ ವಿಜಯೀ ರಾಜರು ದೂರದೂರದ ವರೆಗೂ, ದೊಡ್ಡದೊಡ್ಡ ವಿಜಯ ಸಂಪಾದಿಸಿದ್ದರು. ಅದರ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ಭಾರತದ ಸಂಸ್ಕೃತ ಭಂಡಾರದ ಗಣ್ಯಾಂಶವಾಗಿ ಸೇರಿದ್ದುವು. ಈ ದಿನವಾದರೋ ಕನ್ನಡ ಮಾತಾಡುವವರೆಲ್ಲರ ಭಾಷೆ ಮತ್ತು ಸಂಸ್ಕೃತಿ ಒಂದೇ. ಆಡಳಿತೆಯ ಏಕೀಕರಣಕ್ಕಾಗಿ 1907ರಿಂದಲೂ ಅವರು ಹೋರಾಡುತಿದ್ದಾರೆ ಆದರೆ ಪರದೇಶೀ ಆಳರಸರ ಮರ್ಜಿ ನಿಮಗೆ ಗೊತ್ತಿದ್ದದ್ದೇ. ಈ ದೇಶದ ಜನರ ಹಿತದೃಷ್ಟಿಯಲ್ಲಿ ಅತಿ ಮುಖ್ಯವಿರುವದನ್ನು ಕಾಣುವದಾಗಲೀ, ಅತ್ಯಗತ್ಯವಿರುವದನ್ನು ಮಾಡುವದಾಗಲೀ ಅವರಿಂದ ಆಗದೇ ಆಗದು ಸಂಯುಕ್ತ ಕರ್ನಾಟಕದ ವಿನಹಾ ರಾಷ್ಟ್ರೀಯ ಘಟನೆಗಳಲ್ಲಿ ಕನ್ನಡಿಗರು ತಮ್ಮ ನ್ಯಾಯಬದ್ಧ ಸ್ಥಾನ ಸಂಪಾದಿಸುವದಸಾಧ್ಯವೆಂಬುದನ್ನು ಮೇಲಿಂದ ಮೇಲೆ ಅವರ ಕಿವಿಗಳೊಳಗೆ ಧ್ವನಿಸಲಾಗಿದೆ 1921ರಲ್ಲೇ ಕಾಂಗ್ರೆಸಿನ 'ಪೇಟೆಂಟ್' ಆದುದಕ್ಕೆ ಬ್ರಿಟಿಷ್ ಸರಕಾರವು ಇಂದು ಕೂಡಾ ಕೇವಲ ತಾತ್ವಿಕ ಸಮ್ಮತಿಯನ್ನಾ ಕೊಟ್ಟಿಲ್ಲ"

ಸಬಲ ಮತ್ತು ಸವಿನಯ ಬೇಡಿಕೆ

"ನಿಮ್ಮ ವಾದವು ಸಬಲವಾದುದು. ಬರಿಯ ಬ್ರಿಟಿಷ್ ಕರ್ನಾಟಕ ಕ್ಷೇತ್ರವೇ ಜನ ಸಂಖ್ಯೆ ಮತ್ತು ವಿಸ್ತಾರದಲ್ಲಿ ಮೈಸೂರು ಸಂಸ್ಥಾನಕ್ಕಿಂತ ದೊಡ್ಡದಿದೆ. ಅದು ಸಿಂಧ್ ಪ್ರಾಂತ್ಯದ ಇಮ್ಮಡಿ ಮತ್ತು ವಾಯುವ್ಯ ಗಡಿನಾಡು ಪ್ರಾಂತ್ಯದ ಮುಮ್ಮಡಿ ಜನಸಂಖ್ಯೆಯುಳ್ಳದ್ದಿದೆ. ಅದು ಕೂಗಿನ 20 ಪಾಲಷ್ಟು ವಿಸ್ತಾರ ಮತ್ತು 40 ಪಾಲಷ್ಟು ಜನ ಸಂಖ್ಯೆಯಿರುವ ಪ್ರಾಂತ್ಯವಾಗುವದು. ಮೈಸೂರು ಮತ್ತು ಹೈದರಾಬಾದಿನ ದೊಡ್ಡ ಭಾಗಗಳು ಕನ್ನಡಿಗರ ನೆಲೆಗಳಾಗಿವೆ. ನಾವೀ ಭಾಗಗಳನ್ನೂ ತೆಗೆದುಕೊಂಡಲ್ಲಿ ಕರ್ನಾಟಕ ಪ್ರಾಂತ್ಯವು ಭಾರತದೊಂದು ಮಹತ್ವಾದ ಭಾಷಾವಾರು ಅಂಗವಾಗುವದು. ನಿಮ್ಮ ಸದ್ಯದ ಬೇಡಿಕೆ ಉಚಿತವಾದುದೆಂದು ನಾನು ನೆನಸುತ್ತೇನೆ. ಕರ್ನಾಟಕ ಏಕೀಕರಣವಾಗಬೇಕೆನ್ನುವಾಗ ಪ್ರಕೃತ ಆಶ್ರಿತ ರಾಜ್ಯಗಳಿಗೆ ಸಂಬಂಧಿಸಿದ ಭಾಗಗಳನ್ನು ಸ್ಪರ್ಶಿಸಲು ನೀವಿಚ್ಛಿಸುವದಿಲ್ಲ ಬ್ರಿಟಿಷ್ ಹಿಂದುಸ್ಥಾನದ ಕ್ಷೇತ್ರಗಳನ್ನಷ್ಟೇ ಒಂದುಗೂಡಿಸುವದರಲ್ಲಿ ನಿಮ್ಮ ಚಟುವಟಿಕೆಗಳನ್ನು ಕೇಂದ್ರೀಕರಿಸಲಿಚ್ಛಿಸಿದ್ದೀರಿ. ಇದು ಯೋಗ್ಯವಾದ ತಿದ್ದುಪಡಿ ಘಟನೆಯಿದೆ. ಇನ್ನೂ ಇದರಿಂದೇನನ್ನಾದರೂ ವಿನಾಯಿತಿಪಡಿಸುವದು ಅಸಾಧ್ಯ. ಆದರೆ ಈ ಪುನರ್ಘಟನೆ ಯಾದರೋ ಇಡಿಯ ಭಾರತವು ಸ್ವತಂತ್ರವಾಗುವದನ್ನು ಆಧರಿಸಿಕೊಂಡಿದೆ. ವಿದೇಶೀ ಆಡಳಿತೆಯಿರುವ ವರೆಗೆ ಯಾವ ಪುನರ್ಘಟನೆಯನ್ನು ಹೊಂದುವದೂ ಸಾಧ್ಯವಿಲ್ಲ; ಮತ್ತದು ಹೊಂದಲರ್ಹವಾದುದೂ ಅಲ್ಲ.'

ಕ್ಷಿಪ್ರದಲ್ಲೇ ಬಯಕೆ ನೆರವೇರಲಿದೆ!

"ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕವು ಮುಖ್ಯ ಪಾತ್ರ ವಹಿಸಿದೆ. ಮತ್ತು ಸ್ವತಂತ್ರ ಭಾರತವು ತನ್ನ ಪ್ರಥಮ ಕರ್ತವ್ಯಗಳಲ್ಲೊಂದಾಗಿ ಭಾಷಾವಾರು ಪ್ರಾಂತ್ಯ ರಚನೆ ಮಾಡಿ, ಬ್ರಿಟಿಷ್ ಆಳ್ವಿಕೆಯು ದೇಶದ ಭಾಷಾನ್ವಯ ಭಾಗಗಳನ್ನು ತುಂಡರಿಸಿ ಹಾಕಿರುವ ತೊಡಕನ್ನು ನಿವಾರಿಸುವದೆಂಬ ಕುರಿತು ನನಗೆ ಅನುಮಾನವಿಲ್ಲ. ಭಾರತವು ಶೀಘ್ರಾಭಿವೃದ್ಧಿ ಹೊಂದಬೇಕಾದರೆ, ಅದರ ಭಾಷಾವಾರು ಭಾಗಗಳೆಲ್ಲಾ ಪ್ರಾಂತ್ಯಗಳಾಗಿ ಪುನರ್ಘಟನೆ ಹೊಂದಿ ರಾಷ್ಟ್ರದ ಅಂಗಗಳಾಗಿ ರಾಜಿಸಲೇಬೇಕು ಕಾಂಗ್ರೆಸು 1920ನೇ ನಾಗಪುರ ಅಧಿವೇಶನದಲ್ಲಿ ತನ್ನ ಘಟನೆಯನ್ನು ಈ ರೀತಿ ರೂಪಿಸಿಕೊಂಡುದರಿಂದಲೇ ಅದಿಂತಹ ವಿಶಾಲ ಮತ್ತು ಸಶಕ್ತ ಸಂಸ್ಥೆಯಾಗಿದೆ. ಭಾಷಾನುಗುಣವಾಗಿ ಪ್ರಾಂತ್ಯಗಳನ್ನು ವಿಂಗಡಿಸುವದೇ ಅದರ ಪ್ರಥಮಕಾರ್ಯವಾಗಿತ್ತು. ಹಿಂದುಸ್ಥಾನವೀಗ ಸ್ವಾತಂತ್ರ್ಯದ ಕಡೆಗೆ ಶೀಘ್ರಗತಿಯಿಂದ ಧಾವಿಸುತ್ತಿದೆ ಲೋಕದ ಸ್ವತಂತ್ರ ರಾಷ್ಟ್ರಗಳ ಸಂಗತಿಯಲ್ಲಿ ಅದು ತನ್ನ ಹಕ್ಕಿನ ಸ್ಥಾನಗಳಿಸಲು ಇನ್ನು ವಿಳಂಬವಾಗದು. ಹರಿಹಂಚಾಗಿ ಬಿದ್ದಿರುವ ಕನ್ನಡ ಪ್ರದೇಶಗಳ ಸ್ಥಾನದಲ್ಲಿ ಒಂದು ಏಕೀಕೃತ ಕರ್ನಾಟಕ ಉದಯವಾಗುವದದನ್ನು ಕಾಣಲು ನೀವಿನ್ನು ದೀರ್ಘಾವಧಿ ಕಾಯಬೇಕಿಲ್ಲವೆಂದು ನಾನು ಆಶ್ವಾಸನೆ ಕೊಡುತ್ತೇನೆ. ಆ ಕರ್ನಾಟಕವು ತನ್ನ ಪ್ರಾಂತಿಕ ಸರಕಾರ, ತನ್ನ ವಿಶ್ವವಿದ್ಯಾಲಯ ಮತ್ತು ತನ್ನದೇ ಆದ ಗೌರವದಾಯೀ ಪ್ರಾಂತಿಕ ಜೀವನ ಉಳ್ಳದ್ದಾಗುವದು".

ಶ್ರೀ. ಖೇರರ ಬೋಧನೆ

ಬೊಂಬಾಯಿಯ ಏಕೀಕರಣ ಸಮ್ಮೇಳನದ ಸ್ವಾಗತಾಧ್ಯಕ್ಷರಾದ ಜಹಗೀರ್ದಾರ್ ರಂಗಾಚಾರ್ಯರು ಸ್ವಾಗತ ಭಾಷಣ ಮಾಡುತ್ತಾ "ಸ್ವತಂತ್ರ ಭಾರತದಲ್ಲಿ ಒಂದು ಸ್ವತಂತ್ರ ಕರ್ನಾಟವನ್ನು ನಿರ್ಮಿಸುವದೇ ನಮ್ಮ ಧ್ಯೇಯ' ಎಂದರು. ಏಕೀಕೃತ ಕರ್ನಾಟಕದ ಚಿತ್ರವನ್ನು ಮುಂದಿಡುತ್ತಾ ಶ್ರೀ. ಜಾಗೀರ್ದಾರರು 'ಬ್ರಿಟಿಷ್ ಕರ್ನಾಟಕ, ಮೈಸೂರು ಸಂಸ್ಥಾನ, ಹೈದರಾಬಾದಿನ ನಾಲ್ಕು ಜಿಲ್ಲೆಗಳು, ಕೊಲ್ಹಾಪುರದ ಕೆಲವು ಭಾಗಗಳು ಮತ್ತು ಕೆಲವು ತುಂಡು ಮರಾಠಾ ಸಂಸ್ಥಾನಗಳು ಸೇರಿದ ಕರ್ನಾಟಕವು ಸಂಯುಕ್ತ ಭಾ

WANTED.

Wanted Two Higher Grade Trained Teachers of either sex for the Kutpady Aided Ele. School for permanent Vacancy

Apply—

Rev Fr. S. C. Lewis,
Udyavara P. O.

CANARA BANK LIMITED
Estd. 1906
(Incorporated in British India, liability of Members Limited)

SEASON DEPOSITS.

of Rs. 10000 - and over in multiples of Rs. 1000 - and *maturing within 30th September 1946 are now accepted* at the following rates:—

3 months	2¼%
4 to 5 months	2½
6 to 9 months ...	2¾%

Rates for Season Deposits of less than Rs. 10000 - with a minimum of Rs. 1000/- and in multiples of Rs. 500/- may be ascertained on application to our nearest branch

'ಬಹದೂರ'
ಕಬ್ಬಿನ ಗಾಣಗಳು
ಗಟ್ಟಿಮುಟ್ಟಾದ ರಚನೆ,
ಉತ್ತಮದರ್ಜೆಯ ಕೈಗಾರಿಕೆ
ಕ್ರಯ ರೂ 430 -
ಬ್ರಿಟಿಷ್ ಇಂಡಿಯ ಎಂಜಿನಿಯರಿಂಗ್ ಕಂ. ಬೊಂಬಾಯಿ 10

ರತದ ಒಂದು ಉಪಾಂಗವಾಗಲಿದೆ' ಎಂದರು. ಆ ಮೇಲೆ ಶ್ರೀ. ಖೇರರ ಅಧ್ಯಕ್ಷ ಭಾಷಣ. "ನಿಮ್ಮ ಮೊದಲ ಹೋರಾಟವು ಭಾರತ ಸ್ವಾತಂತ್ರ್ಯಕ್ಕಾಗಿ ಇರಬೇಕು; ಆ ಮೇಲೆ ಕರ್ನಾಟಕದ ಏಕೀಕರಣ ಬರಬೇಕು" ಎಂದವರ ಬೋಧನೆ. "ಕರ್ನಾಟಕ ಏಕೀಕರಣದ ಬೇಡಿಕೆಯ ಸಾಫಲ್ಯವು ಭಾರತದ ಸ್ವರಾಜ್ಯ ಸಾಧನೆಯ ನಮ್ಮ ಕಾರ್ಯಗಳು ಸಫಲವಾಗುವದನ್ನೇ ಆಧರಿಸಿದೆ" ಎಂದರು.

ಕೆಲವು ಸಮಸ್ಯೆಗಳು

"ಹತ್ತು ಮಿಲಿಯಕ್ಕೂ ಮಿಕ್ಕಿರುವ ಕನ್ನಡ ಜನತೆಗೊಂದು ಪ್ರತ್ಯೇಕ ಪ್ರಾಂತ್ಯಬೇಕೆನ್ನುವ ಬೇಡಿಕೆಗೆ ನನ್ನ ಪೂರ್ಣಾನುಮೋದನೆಯಿದೆ. ಜನಾಂಗವನ್ನು ಏಕೀಕರಿಸುವದರಲ್ಲಿ ಭಾಷೆಯು ಒಂದು ಅತ್ಯಂತ ಪ್ರಭಾವಶಾಲಿ ಉಪಕರಣವೆಂಬುದು ನಿಸ್ಸಂದೇಹ. ಆದರೆ ಇತರ ವಿಷಯಗಳೂ ಇವೆ. ಸ್ಥಳವಾರು ಸಮಸ್ಯೆಗಳು, ಆರ್ಥಿಕ ಭದ್ರತೆ, ಅಂತೆಯೇ ಹಿಂದೀ ಸಂಸ್ಥಾನಗಳು ಇತ್ಯಾದಿ. ಹೇಗಿದ್ದರೂ ಭಾಷಾವಾರಾಗಿ ಪ್ರಾಂತ್ಯಗಳ ಪುನರ್ರಚನೆಯಾಗಬೇಕೆಂಬ ಮೂಲಭೂತ ವಿಧಾನವು ಕಾಂಗ್ರೆಸ್ಸಿನಿಂದ ಅಂಗೀಕೃತವಾಗಿದೆ. ಆದ್ದರಿಂದ ಈ ಪುನರ್ರಚನಾ ಕಾರ್ಯವು ಸಹಜವಾಗಿ ಸ್ವತಂತ್ರ ಭಾರತದ ಸ್ವರಾಜ್ಯ ಸರಕಾರದಿಂದ ತೀರ್ಮಾನ ಪಡೆಯಬೇಕಾದ ಒಂದು ಪ್ರಮುಖ್ಯ ವಿಷಯ. ಭಾರತಕ್ಕೊಂದು ಹೊಸ ರಾಜ್ಯ ಘಟನೆ ಬಂದೊಡನೆ ಕನ್ನಡಿಗರಿರುವ ಸಂಸ್ಥಾನಗಳ ಸಮಸ್ಯೆಯು ತೀರ್ಮಾನ ಹೊಂದುವಂತಿಲ್ಲವೆಂಬುದು ಸ್ವತಃ ಸಿದ್ಧ. ಆದರೆ ಬ್ರಿಟಿಷ್ ಕರ್ನಾಟಕದ ಭಾಗಗಳನ್ನು ಒಂದುಗೂಡಿಸುವದು ಕಷ್ಟವೇನೂ ಅಲ್ಲ" ಎನ್ನುತ್ತಾ ಶ್ರೀ ಖೇರರು ದೇಶದ ರಾಜಕೀಯ ಬಿಕ್ಕಟ್ಟು ತೊಲಗಿ ಸ್ವತಂತ್ರ ಸರಕಾರ ಬಂದೊಡನೆ ಈ ಪ್ರಶ್ನೆಯ ಕಡೆಗೆ ವಿಶೇಷ ಲಕ್ಷ್ಯ ಬೀಳುವದೆಂದರು 'ಅಂಗ ರಕ್ಷಣೆಗಿಂತ ದೇಹ ರಕ್ಷಣೆ ಹೆಚ್ಚಿನದು' ಎಂಬುದನ್ನು ಒತ್ತಿ ಹೇಳುತ್ತಾ ಸಂಕುಚಿತ ಪ್ರಾಂತ್ಯಾಭಿಮಾನದಿಂದ ರಾಷ್ಟ್ರ ಸ್ವಾತಂತ್ರ್ಯದ ಕಡೆಗೆ ಅಲಕ್ಷ್ಯವಿಡಬಾರದೆಂದೂ, ರಾಷ್ಟ್ರಭಾಷೆಯಾದ ಹಿಂದುಸ್ಥಾನಿಯ ಅಭ್ಯಾಸವಿರಬೇಕೆಂದೂ ಎಚ್ಚರಿಸಿದರು. "ಬರಿಯ ಉತ್ಸಾಹ ಮಾತ್ರದಿಂದ ಏಕೀಕರಣವಾಗದು; ಕಾರ್ಯಸಾಧನೆಗೆ ಚಾತುರ್ಯ ಹಾಗೂ ಅವಿಶ್ರಾಂತವಾಗಿ ದುಡಿಯಬಲ್ಲ ಸಂಸ್ಥೆಯಿರಬೇಕು." ಎಂದು ಕೊನೆಯಲ್ಲಿ ಖೇರರ ಉಪದೇಶ.

ಅಧಿಕ ಸಂಖ್ಯೆಯ ನೋಟುಗಳ ಮೇಲೆ ಆಟಂ ಬೋಂಬು!

ಜನವರಿ ತಾ. ೨೬ರ ವರೆಗೆ ಜಾತಕ ಕೊಟ್ಟು ವಟಾಯಿಸಬಹುದು— ಆ ಮೇಲದು ಕಾಗದ ಚೂರು!

ರೂಪಾಯಿ 500ರ ಮತ್ತು ಅದಕ್ಕಿಂತ ಹೆಚ್ಚಿನ ಕರೆನ್ಸಿ ನೋಟುಗಳನ್ನು ಇದೇ ಜನವರಿ ತಾ. 12ರಿಂದ ಅಸಿಂಧುಗೊಳಿಸಿ, ಅಂದಿನಿಂದ ಹತ್ತು ದಿನಗಳ ಒಳಗೆ, ಆ ಸಂಬಂಧದ ಸರ್ವ ವಿವರಗಳನ್ನು ಕಾಣಿಸಿದ ಪರಿಚಯ ಪತ್ರ (ಯೋಗ್ಯ ಅಧಿಕಾರಿಗಳ ಸಹಿ ಸಮೇತ)ದೊಂದಿಗೆ ಅಂತಹ ನೋಟುಗಳನ್ನು ಶೆಡ್ಯೂಲ್ಡ್ ಬೇಂಕ್ ಅಥವಾ ರಿಜರ್ವ್ ಬೇಂಕಿಗೆ ಮುಟ್ಟಿಸಿ ವಟಾಯಿಸಬಹುದೆಂಬ ಸರಕಾರದ ವಿಶೇಷ ಶಾಸನವು ದೇಶದ ಹಣಕಾಸುಗಳ ಕ್ಷೇತ್ರದಲ್ಲೊಂದು ದೊಡ್ಡ ಸುಂಟರ ಗಾಳಿಯಾಗಿ ಪರಿಣಮಿಸಿದೆ. ಈ ಗಾಳಿಯಲ್ಲಿ ಅಧಿಕ ನಂಬ್ರದ ನೋಟುಗಳು ತರಗೆಲೆಗಳಂತೆ ಹಾರಾಡ ಹತ್ತಿವೆ! ಬೊಂಬಾಯಿ, ಡಿಲ್ಲಿ, ಕಲ್ಕತ್ತಾ, ಕರಾಚಿ, ಬಿಹಾರ್, ಮದ್ರಾಸ್, ಮತ್ತೆಲ್ಲಾ ದೊಡ್ಡ ನಗರಗಳಿಂದ ಕೇಳಿ ಬರುತ್ತಿರುವ ಗೊಂದಲವು ಅಷ್ಟಿಷ್ಟಲ್ಲ. ಸಂದು ಮೂಲೆಯ ಹಳ್ಳಿಪಳ್ಳಿಗಳಲ್ಲೂ ಮಹಾ ರಂಪಾಟ ನಡೆದಿದೆ. ನಂಬ್ರ ತಾರತಮ್ಯವನ್ನು ಮರೆತು ನೋಟುಗಳ ಜಾತಿಯ ಮೇಲೆಯೇ ಜನತೆಗೆ ಅವಿಶ್ವಾಸ ಹುಟ್ಟಿದೆ. ಅಧಿಕ ಸಂಖ್ಯೆಯ ನೋಟುಗಳು ನಿಜ ಮೌಲ್ಯದ ಮುಕ್ಕಾಲು, ಅರ್ಧ, ಕಾಲಂಶಗಳಿಗೆ ಕಳ್ಳ ಸಂತೆಯಲ್ಲಿ ಮಾರಾಟಕ್ಕೆ ಬಿದ್ದಿವೆ; ಆದರೂ ಅವುಗಳನ್ನು ಮೂಸುವವರು ದೊರೆಯುವದಿಲ್ಲ! ಕೆಲವಂತೂ ಅಗ್ನಿನಾರಾಯಣನಿಗಾಹುತಿಯಾಗ ಹತ್ತಿವೆ; ಹಲವು ಕಳ್ಳ ವ್ಯಾಪಾರಿಗಳು ನೋಟುಯಾಗ ಮಾಡಿ ದೋಷಮುಕ್ತರಾಗಲು ಬಗೆದಂತಿದೆ. ಇದೇ ತಾ. 18ರಲ್ಲಿ ಹಿಂದೀ ಸರಕಾರವು ಮತ್ತೊಂದು ಪ್ರಕಟಣೆ ಹೊರಡಿಸಿ ರಿಜರ್ವ್ ಬೇಂಕ್, ಶೆಡ್ಯೂಲ್ಡ್ ಬೇಂಕ್‌ಗಳು ಮತ್ತು ಟ್ರೆಜರಿಗಳು ನೋಟುಗಳನ್ನು ಪಡಕೊಳ್ಳುವ ಅವಧಿಯನ್ನು ಜನವರಿ ತಾ. 26 ವರೆಗೆ ಮುಂದುವರಿಸಿದೆ.

ಸಿಡಿಲಿನಂತಹ ಹೊಡೆತ

ನೋಟು ರದ್ದತಿ ವಿಶೇಷ ಶಾಸನವನ್ನು ಹಿಂದೀ ಸರಕಾರವು ಪೂರ್ವ ಸೂಚನೆಯೇನನ್ನೂ ಕೊಡದೆ ಜನವರಿ ತಾ. 12ರಲ್ಲಿ ಅಕಸ್ಮಾತ್ ಜ್ಯಾರಿಗೆ ತಂದು ತಾ 12ನೇ ಶನಿವಾರ ಮತ್ತು ತಾ. 14ನೇ ಸೋಮವಾರವನ್ನೂ ಬೇಂಕ್ ರಜಾದಿನವಾಗಿ ಜಾಹೀರುಮಾಡಿದುದರಿಂದ, ನೋಟುಗಳ ಸುತ್ತ ಬೇಲಿ ಕಟ್ಟಿ ಬೇಟೆಯಾಡಿದಂತಾಗಿದೆ. ಜನತೆಯನ್ನೂ ಕರಕಂದಾಯಗಳನ್ನೂ ವಂಚಿಸಿ, ಕಳ್ಳ ವ್ಯಾಪಾರಗಳಿಂದ ಗಳಿಸಿದ ಹೇರಳ ಹಣವನ್ನು ಅಧಿಕಾಂಕೆಯ ನೋಟುಗಳ ರೂಪದಿಂದ ಜಮಾಯಿಸಿಟ್ಟುಕೊಂಡವರ ಮೇಲೆ ಹೊಡಿದ ಬ್ರಹ್ಮಾಸ್ತ್ರವಿದು. ಇದರಿಂದ ಎಲ್ಲಾ ಕಳ್ಳ ವ್ಯಾಪಾರಗಳ ಶುದ್ಧೀಕರಣವಾಗುವದಸಾಧ್ಯವಾದರೂ ಅಧಿಕ ಸಂಖ್ಯಾಕರ ಅನ್ಯಾಯಕ್ಕೆ ಪ್ರತಿಫಲ ದೊರೆಯಬಹುದು. ಹಣದ ಮೊತ್ತ ಹೆಚ್ಚಿದಂತೆ ಅವು ದೊಡ್ಡ ಅಂಕೆಯ ನೋಟುಗಳ ರೂಪ ತಾಳುವದು ಸ್ವಾಭಾವಿಕ; ಜಮೆಯಿಡುವವರಂತೂ ತಮ್ಮ ಹಣವನ್ನು ಪ್ರಯತ್ನಪೂರ್ವಕ ಅಂತಹ ನೋಟುಗಳನ್ನಾಗಿ ಮಾರ್ಪಡಿಸಿಟ್ಟುಕೊಳ್ಳುವದಿದೆ. ಇಂದಿನ ವಿಶೇಷ ಶಾಸನವು ಈ ಅತ್ಯಾಸೆಗೆ ಮೇಲಾದ ಅರ್ಧಚಂದ್ರ ಪ್ರಯೋಗ. ವಂಚನಾ ಸಾಮರ್ಥ್ಯವು ಎಲ್ಲಕ್ಕಿಂತ ಹೆಚ್ಚಿನದೆಂಬುದೂ, ಅದು ತನ್ನ ವಧೆಗಾಗಿ ಹುಟ್ಟುವ ವಿಶೇಷ ಶಾಸನಗಳನ್ನೂ ವಂಚಿಸಬಲ್ಲದೆಂಬುದೂ ಅನುಭವಸಿದ್ಧ ಮಾತು. ಆದರೆ ಈ ಶಾಸನವು ವಂಚನಾತೀತವಾದುದು. ಮಿಕ್ಕ ಸಾಮಾನುಗಳ ನಿಯಂತ್ರಣಾಜ್ಞೆಯನ್ನು ವಂಚಿಸಿ ಕಳ್ಳ ವ್ಯಾಪಾರ ನಡಿಸಿದಂತೆ ನೋಟುಗಳ ಕಳ್ಳ ವ್ಯಾಪಾರ ನಡಿಸುವ ಹಾದಿ ಪೂರ್ತಿ ಮುಚ್ಚಿದೆ. ವಾಸ್ತವಿಕವಾಗಿ ಇದೇ ತಾ. 12ರಿಂದ ಸರಕಾರ ತೋರಿಸಿದ ಒಂದೇ ಒಂದು ಹಾದಿಯಿಂದಲ್ಲದೆ ಬೇರಾವ ಕಡೆಗೆ ಹೋದರೂ 500–1000-10000ರೂ.ಗಳ ನೋಟುಗಳು ಕಾಗದದ ತುಂಡುಗಳಾಗಿ ಮಾರ್ಪಟ್ಟಿವೆ. ಇದೇ ತಾ. 26ರ ವರೆಗೆ ಅವುಗಳಿಗೆ ಬೆಲೆ ಕೊಡುವ ಒಂದೇ ಒಂದು ಇಲಾಖೆಯೆಂದರೆ ಟ್ರೆಜರಿ, ಶೆಡ್ಯೂಲ್ಡ್ ಬೇಂಕುಗಳು ಮತ್ತು ರಿಜರ್ವ್ ಬೇಂಕ್ ಶಾಖೆಗಳು ಮಾತ್ರ. ಬೇಂಕುಗಳು [illegible] ಕೊಡಬೇಕಾದರೆ ಆ ನೋಟುಗಳನ್ನು ಮಾತ್ರ ಕೊಟ್ಟರೆ ಸಾಲದು. ಅವು ತನ್ನಲ್ಲಿ ಹೇಗೆ ಜಮೆಯಾದುವು; ತಾನು ಯಾರು, ತನ್ನ ಉತ್ಪತ್ತಿಯೆಷ್ಟು, ಎಂಬ ಎಲ್ಲಾ ವಿಚಾರಗಳನ್ನೂ ಚಾಚೂ ತಪ್ಪದೆ ಒಪ್ಪಿಸಬೇಕು. ಒಬ್ಬ ಮನುಷ್ಯ ತನ್ನ ಕ್ರಮಬದ್ಧ ವ್ಯಾಪಾರ, ಉದ್ಯೋಗ ಅಥವಾ ಉತ್ಪತ್ತಿಯಿಂದ ಉಳಿಸಿದ್ದ ಹಣ ಅದಾಗಿದ್ದರೆ-ಹಾಗೆಂದು ಸಿದ್ಧವಾದರೆ–ಅವನ ಮಟ್ಟಿಗೆ ಪ್ರಸಿದ್ಧ ಪತ್ರ ಬರೆದು ಅಧಿಕಾರಿಗಳ ಸಾಕ್ಷಿ ಪಡೆದು ವಟಾಯಿಸುವ ಪ್ರಯಾಸವೊಂದೇ ವಿನಹಾ

The Pangal Nayak Bank Limited.

(Incorporated in 1920)

Registered Office Court Road, UDIPI.

Sub Offices at— **Udipi, Mangalore, Katapadi, Kanhangad, Kinnigoli, Nileshwar and Surathkal,** South Canara.

SEASON DEPOSITS

For 3, 4 & 5 months at a special rate of interest are accepted at all the above offices.

All kinds of up-to-date Banking service is provided promptly.

Please call for particulars of Busmess.

Dated the 5th January 1946.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. [illegible] ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜ ೧-೪-೦.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕವಲದಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕ್ಷಮಿಸಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

[illegible] Tollygunge, Calcutta

ಸ್ಟಾಕಿಸ್ಟ್: [illegible] ಕಂಪೆನಿ, ಮಂಗಳೂರು

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ರೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ನೋಟು ರದ್ದತಿಯ ಕೋಲಾಹಲ!

ಬೇರಾವ ಹಾನಿಯೂ ಇಲ್ಲ. ಬದಲಿಗೆ ಆ ಹಣವು ಅಕ್ರಮವಾದುದಿದ್ದರೆ—ಹಾಗೆಂದೇ ಸಿದ್ಧವಾದರೆ—ಆ ನೋಟು ಮತ್ತು ಅದರೊಂದಿಗಾತ ಇಟ್ಟ ಪ್ರಸಿದ್ಧಪತ್ರಿಕೆಯೇ ಅವನ ಮೇಲಿನ 'ಚಾರ್ಜ್ ಶೀಟ್'ಆಗಿ ಆತನನ್ನು ಶಿಕ್ಷೆ, ದಂಡನೆಗೀಡುಮಾಡಬಹುದು; ಅದಕ್ಕೆ ತಕ್ಕ ಆದಾಯ ತೆರಿಗೆಯನ್ನೂ ಹೇರಬಹುದು. ಹೀಗೆ ಬೇಂಕುಗಳಿಗೊಪ್ಪಿಸುವ ಬದಲು1000ದ ನೋಟನ್ನು 500ಕ್ಕೆನ್ನೊಬ್ಬನಿಗೆ ಮಾರಿದ—ಆತ ಮತ್ತೊಬ್ಬನಿಗೆ ವರ್ಗಾಯಿಸಿದ—ಹೀಗೆಲ್ಲಾ ಆಗಿ ಆ ನೋಟು ಎಷ್ಟು ದೂರ ಹೋದರೂ ಅದಕ್ಕೆ ಬೆಲೆ ಬರಬೇಕಾದರೆ ಇದೇ ತಾ. 26ರ ಒಳಗೆ ಒಂದಲ್ಲೊಂದು ಬೇಂಕಿಗೆ ತನ್ನ ಜಾತಕದೊಂದಿಗೆ ಅದು ಹಾಜರಾಗಲೇಬೇಕು. ಅಂದಮೇಲೆ ಈ ವಿಶೇಷ ಶಾಸನವನ್ನ ವಂಚಿಸುವದಾದರೂ ಹೇಗೆ?

೩೦೦ ಕೋಟಿ ರೂ. ನೋಟುಗಳು ತಲೆ ಮರೆಸಿಕೊಂಡಿವೆ!

ಹಿಂದುಸ್ಥಾನದಲ್ಲಿ ವಹಿವಾಟಿಗೆ ಬಿದ್ದಿರುವ ಕರೆನ್ಸಿ ನೋಟುಗಳೆಂದರೆ 1220 ಕೋಟಿ ರೂಪಾಯಿಗಳಷ್ಟು. ಆ ಪೈಕಿ ಸುಮಾರು 200ರಿಂದ 300 ಕೋಟಿ ರೂ.ಗಳ ವರೆಗಿನ 500ರ ಮತ್ತದಕ್ಕೂ ಹೆಚ್ಚಿನ ಸಂಖ್ಯೆಯ ನೋಟುಗಳು ತಲೆ ಮರೆಸಿಕೊಂಡಿದ್ದುವಂತೆ. ಆದಾಯ ಮತ್ತು ವಿಶೇಷ ಲಾಭದ ತೆರಿಗೆಗಳಿಂದ ತಪ್ಪಿಸಿಕೊಳ್ಳುವದಕ್ಕಾಗಿಯೇ ಈ ಗುಪ್ತಗಾಮಿತ್ವ. ಬೊಂಬಾಯಿಯೊಂದರಲ್ಲೇ ಸುಮಾರು 30 ಕೋಟಿ ರೂ.ಗಳ ನೋಟುಗಳು ಅಂತರ್ಗಾಮಿಯಾಗಿವೆ. ಇವೆಲ್ಲವನ್ನೂ ಇಂದಿನ ವಿಶೇಷ ಶಾಸನವು ಬೆಳಕಿಗೆ ತರಲಿದೆ. ಇಂತಹ ಕಳ್ಳ ಹಣವಿರುವವರೆಂದರೆ ಮುಖ್ಯವಾಗಿ ಬಟ್ಟೆಬರೆ ಮತ್ತು ಆಹಾರ ವಸ್ತುಗಳ ವ್ಯಾಪಾರಿಗಳಂತೆ. ಎರಡನೆಯದಾಗಿ ಸರಕಾರೀ ಅಧಿಕಾರಿಗಳು. ಇವರೆಲ್ಲಾ ತಮ್ಮ ನೋಟುಗಳೊಂದಿಗೆ ಜಾತಕವನ್ನೊಪ್ಪಿಸಿ, ದಂಡನೆಗೊಳಗಾಗುವ ಬದಲಿಗೆ ತಮ್ಮಲ್ಲಿರುವ ನೋಟುಗಳನ್ನು ಸುಟ್ಟುಬಿಡಬಹುದೆಂದೂ ಸುಮಾರು 5 ಕೋಟಿ ರೂ. ಮೌಲ್ಯದ ನೋಟುಗಳು ಹೀಗೆ ಬೂದಿಯಾಗುವದು ಸಂಭವನೀಯವೆಂದೂ ಊಹಿಸಲಾಗಿದೆ. ಇಂತಹ ಕೃತ್ಯಗಳು ದೊಡ್ಡ ತಕ್ಸೀರುಗಳೇ ಮಾತ್ರವಲ್ಲದೆ ಸಿಜ. ಮೌಲ್ಯಕ್ಕೆ ಕಡಿಮೆಗೆ ಕರೆನ್ಸಿ ನೋಟುಗಳ ಕೊಡಕೊಂಡ ನಡಿಸುವವರು ದೇಶ ರಕ್ಷಣಾ ಶಾಸನದನ್ವಯ ಅಪರಾಧಿಗಳಾಗುವರೆಂದೂ ಅಂಥವರು 5 ವರುಷಗಳ ವರೆಗಿನ ಶಿಕ್ಷೆಗೆ ಗುರಿಯಾಗುವರೆಂದೂ ಸರಕಾರವು ಸಂದರ್ಭಕ್ಕೆ ತಕ್ಕಂತೆ ಎಚ್ಚರಿಕೆ ಕೊಟ್ಟಿದೆ. 100 ರೂ. ನೋಟುಗಳೂ ಬೇಕಾಯಿದೇಶೀರವಾಗಿರುವವೆಂದೋ, ಆಗಲಿರುವವೆಂದೋ ಸರ್ವತ್ರ ವಾರ್ತೆ ಹಬ್ಬಿ ಜನತೆಯಲ್ಲಿ ವಿಶೇಷ ಗಲಿಬಿಲಿಯೆದ್ದಿರುವದರಿಂದ ಸರಕಾರವು ಇದನ್ನು ಸ್ಪಷ್ಟ ವಾಣಿಯಲ್ಲಿ ಅಲ್ಲಗಳೆದು ನೂರು ರೂಪಾಯಿ ನೋಟುಗಳಿಗಾವ ತೊಂದರೆಯೂ ಇಲ್ಲವೆಂದು ಪ್ರಸಿದ್ಧಿಸಿದೆ.

ಕೂಲಂಕುಶ ಶೋಧ

ನೋಟುಗಳೊಡನೆ ತುಂಬಿ ಕೊಡಬೇಕಾದ ಪ್ರಸಿದ್ಧ ಪತ್ರಿಕೆಯ ... ಪ್ರತಿಗಳನ್ನು ರಿಜರ್ವ್ ಬೇಂಕ್ ಧರ್ಮಾರ್ಥ ವಿತರಣೆ ಮಾಡುತ್ತಿದೆ ಇದೇ ಮಾದರಿಯ ಪ್ರತಿಗಳನ್ನು ಸ್ವತಃ ತಯಾರಿಸಿಯೂ ಭರ್ತಿಮಾಡಿ ಕೊಡಬಹುದು. ಈ ಪತ್ರಿಕೆಯಲ್ಲಿ 20 ವಿಷಯಗಳ ವಿವರ ಕೇಳಲಾಗಿದೆ. ಆ ನೋಟು ಮತ್ತು ನೋಟು ಪಾಲನ ಸಂಬಂಧವು ಈ ಜಾತಕದಲ್ಲಿ ಸ್ಪಷ್ಟವಾಗಿ ಕಾಣಬೇಕು. ಕೆಳಗಡೆ ಪೋಲಿಸ್ ಇನ್ಸ್ಪೆಕ್ಟರರಿಗಿಂತ ಕಡಿಮೆ ಹುದ್ದೆಯಲ್ಲಿರದ ಅಧಿಕಾರಿಗಳು ಸರ್ಟಿಫೈ ಮಾಡಿ ಸಹಿ ಹಾಕಬೇಕು ತಾ. 12ರಲ್ಲಿ ಒಡೆದ ಈ ವಿಶೇಷ ಶಾಸನಾ ಸಿಡಿಲಿನಿಂದ ಪ್ರಥಮತಃ ಜನರೆಲ್ಲಾ ಕಕ್ಕಾವಿಕ್ಕಿಯಾದರು. ಹೆಚ್ಚಿನವರಿಗೆ ಅದರ ಸರಿಯಾದ ಅರ್ಥವಾಗಲಿಲ್ಲ; ಮುಂದೆ ಏನೆಲ್ಲಾ ಬರಲಿದೆ ಎಂಬುದೂ ಗೊತ್ತಾಗಲಿಲ್ಲ. ತಮ್ಮ ಸರ್ವಸ್ವಕ್ಕೂ ಬೆಂಕಿಬಿತ್ತೆಂಬ ಏಕಮಾತ್ರ ಅರ್ಥಕಟ್ಟಿಕೊಂಡು ಮೊದಲಿನ ಒಂದೆರಡು ದಿನಗಳಲ್ಲಿ ದೇಶದ ಅದ್ಯಂತ ನಡೆದ ಗೊಂದಲವು ಅವರ್ಣನೀಯ. ಅದರ ಬೆನ್ನಲ್ಲಿ ಅತ್ತಿತ್ತ ಓಡಾಡಿ ಆಲೋಚನೆ ಪಡೆಯುವದು—ಪ್ರಸಿದ್ಧ ಪತ್ರಿಕೆಗಳನ್ನು ಪಡೆದುಕೊಂಡು ತುಂಬಿಸಿಕೊಡುವದು—ಬೇಂಕು ದ್ವಾರಗಳಲ್ಲಿ ಕಾಯುವದು—ಇತ್ಯಾದಿ ಆತುರ, ಅವಸರಗಳ ಚಟುವಟಿಕೆಗಳಾರಂಭವಾಗಿದೆ. ಅರ್ಜಿ ಪ್ರತಿಗಳಿಗೆ ಬರುವ ಬೇಡಿಕೆಯು ಅಸಹನೀಯವಾಗಿ ರಿಜರ್ವ್‌ಬೇಂಕ್ ಶಾಖೆಗಳು ಸಾಕಷ್ಟನ್ನು ಸರಬರಾಯಿ ಪಡಿಸಲಾರದೆ ಹೋಗಿವೆ. ಕೆಲವರು ಈ ಧರ್ಮಾರ್ಥ ಪ್ರತಿಗಳನ್ನು ಪಡೆಕೊಂಡು ಮಾರಾಟಮಾಡುತ್ತಿರುವರೆಂದು ತಿಳಿದುಬಂದಿದೆ. ಶೆಡ್ಯೂಲ್ಡ್ ಬೇಂಕ್ ಅಥವಾ ಟ್ರೆಜರಿಗಳಲ್ಲಿ ... ಪರಾರು ಅರ್ಜಿಗಳಿಗೆ ಪ್ರತಿಫಲ ದೊರೆಯುವದಿಲ್ಲವೆಂದೂ, ಆ ಮೌಲ್ಯಕ್ಕಾಗಿ ಅವರು ತಿಂಗಳುಗಟ್ಟಲೆ ಕಾಯಬೇಕಾಗಬಹುದೆಂದೂ ತಿಳಿದುಬಂದಿದೆ. ಅರ್ಜಿಪತ್ರಗಳ ಶೋಧನೆ ನಡೆಸಲು ದೀರ್ಘಾವಧಿ ಹಿಡಿಯಬಹುದಾದರೂ ಅವುಗಳ ಬರೆವಣಿಗೆ ಸರಿಯಾಗಿದ್ದಲ್ಲಿ ಶೆಡ್ಯೂಲ್ಡ್ ಬೇಂಕುಗಳು ಅಥವಾ ಟ್ರೆಜರಿಗಳು ನೋಟುಗಳ ಮೌಲ್ಯವನ್ನು ಪಾವತಿ ಮಾಡಬಹುದೆಂದೂ, ದೋಷಗಳಿದ್ದರೆ ಕೂಡಲೇ ಅರ್ಜಿದಾರರಿಂದ ತಿದ್ದಿಸಿಕೊಳ್ಳಬಹುದೆಂದೂ, ಕೊನೆಗೂ ತಪ್ಪಾಗಿದ್ದರೆ ಅಂಥವುಗಳನ್ನು ತಿರಸ್ಕರಿಸಿ, ಕಾರಣಗಳನ್ನು ಕೇಂದ್ರ ಸರಕಾರಕ್ಕೆ ತಿಳಿಸತಕ್ಕದ್ದೆಂದೂ ಸರಕಾರವು ಈ ಕುರಿತು ಆಜ್ಞೆ ಹೊರಡಿಸಿದೆ ಹಿಂದೀ ಸರಕಾರವು ಆಶ್ರಿತ ಸಂಸ್ಥಾನಗಳೊಡನೆ ಪರ್ಯಾಲೋಚಿಸಿಯೇ ಈ ಶಾಸನ ಹೊರಡಿಸಿದ್ದಿತು. ಮೈಸೂರು, ತಿರುವಾಂಕೂರು ಮತ್ತು ಇತರ ದೇಶೀ ಸಂಸ್ಥಾನಗಳ ಸರಕಾರಗಳೂ ಇಂತಹ ಶಾಸನ ಸಿದ್ಧ ಮಾಡುತ್ತಿವೆ. ಹೈದರಾಬಾದಿನ ನಿಜಾಮ ಸರಕಾರವು ಮಾತ್ರ, ಯಾವ ಕರೆನ್ಸಿ ನೋಟನ್ನಾದರೂ ರದ್ದುಪಡಿಸುವ ಬಯಕೆ ತನಗಿಲ್ಲವೆಂದು ಪ್ರಕಟಿಸಿದೆ.

ಮಹಾ ಗೊಂದಲ

ಈ ಕರೆನ್ಸಿ ನೋಟು ರದ್ದತಿಯ ಪರಿಣಾಮವಾಗಿ ದೊಡ್ಡ ನಗರಗಳ ಮಾರ್ಕೆಟುಗಳಲ್ಲಾ ಅಡಿಮೇಲಾದಂತಿವೆ. ಎಷ್ಟೇ ಬೆಲೆ ಗಾದರೂ ಅಧಿಕ ನಂಬ್ರದ ನೋಟುಗಳನ್ನು ಕೊಟ್ಟು ಭಂಗಾರ, ವಜ್ರ ಮುಂತಾದುವುಗಳನ್ನು ಪಡಕೊಳ್ಳಲು ಕೆಲವರು ಒದ್ದಾಡಿದರು ಕಲ್ಕತ್ತಾ, ಮೊದಲಾದ ಕಡೆ ನೋಟುಗಳ ಕಳ್ಳ ಸಂತೆಯೇ ಏರ್ಪಾಡಾಗಿ 1000 ರೂ. ಗಳ ನೋಟುಗಳು 800–700, ಕೊನೆಕೊನೆಗೆ 500-400 -300ಕ್ಕೂ ಮಾರಾಟವಾಗಹತ್ತಿದುವು. ಆ ಮೇಲೆ ಅಂತಹ ಗಿರಾಕಿಗಳೂ ದೊರೆಯಲಿಲ್ಲ. ಹಲವು ದಲ್ಲಾಲಿಗಳೂ ಈ ಹೊಸ ಮಧ್ಯಸ್ಥಿಕೆಯಿಂದ ಹೇರಳ ಹಣಗಳಿಸುವಂತಾಯಿತು ರಿಜರ್ವ್ ಬೇಂಕ್, ಶೆಡ್ಯೂಲ್ಡ್ ಬೇಂಕ್, ಟ್ರೆಜರಿಗಳ ದ್ವಾರಗಳೊಳಗೆ ಅರ್ಜಿ ಫೋರ್ಮು ಮತ್ತು ನೋಟುಗಳ ಪುಸ್ತಕವೊಂದಿಗೆ ಇರುವೇ ಸಾಲಿನಂತೆ ಜನರು ನುಗ್ಗುತಿದ್ದಾರೆ, ರಿಜರ್ವ್ ಬೇಂಕುಗಳು ರಾತ್ರಿ ವರೆಗೂ, ಆದಿತ್ಯವಾರವೂ ಕೆಲಸ ಮಾಡಬೇಕಾಗಿ ಬಂದಿದೆ ಆಶ್ಚರ್ಯವೆಂದರೆ ಸಾಮಾನ್ಯ ಜನರ ಮಾತಂತಿರಲಿ, ಕೆಲವು ಕಡೆಯ ಬೇಂಕು

(೩ನೇ ಪುಟ ನೋಡಿರಿ)

BANK WITH THE LARGEST CONNECTIONS ON THE WEST COAST.

OFFERS:-
EFFICIENT
PROMPT &
COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD 19..

ಧರ್ಮ ಸಹಾಯಾರ್ಥ ನಾಟಕಾಭಿನಯ

ಕೆಮ್ಮಣ್ಣು ಹಾ- ಎಲಿಮೆಂಟರಿ ಶಾಲಾಭವನ ವಿಸ್ತರಣಕ್ಕಾಗಿ
ಸಿದ್ಧಾಪುರ ಜಯಕರ್ನಾಟಕ ಮಂಡಲಿಯವರಿಂದ-ಅವರ ಉಡುಪಿಯ ಥಿಯೇಟರಿನಲ್ಲಿ ಫೆಬ್ರವರಿ ತಾ. 4 ಸೋಮವಾರ ರಾತ್ರೆ 9-30ಕ್ಕೆ

ಚಿತ್ರಯ ಚಂದ್ರ ಅಥವಾ ಜಾಂಬವತಿ ಕಲ್ಯಾಣ

ವಿದ್ಯಾಭಿಮಾನಿಗಳಾದ ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.
ಪಿ. ರಾಮರಾವ್, ಕಾರ್ಯದರ್ಶಿ,
ಶಾಲಾ ಹಳೆಯ ವಿದ್ಯಾರ್ಥಿ ಸಂಘ, ಕೆಮ್ಮಣ್ಣು

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur B. S. Sawkar, B.A. L.L. B., Chairman.
A. S. Kini, Managing Director.

ಯುನೈಟೆಡ್ ಕರ್ನಾಟಕ ಇನ್ಸುರೆನ್ಸ್ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co. Ltd. DHARWAR

ಹೆಚ್ಚಿನ ಮಾಹಿತಿಗೆ ಬರೆಯಿರಿ-
Organising Office: Court Road, UDIPI.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 1-8-0 ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ 2-
ಹೆಚ್ಚಿನ ವಿವರಕ್ಕೆ ಬರೆಯಿರಿ
ಬಾಲಚಂದ್ರ ಆಫೀಸು, ಉಡುಪಿ

The Canara Banking Corporation Limited.
(Incorporated in British India, with limited Liability)
Estd: 1906
Head Office: **UDIPI**, South Kanara.
SEASON DEPOSITS
for Rs 10,000 and above are now accepted at all Offices of the Corporation at the following rates
3—4 months ... 2¼%
6 months ... 2½%
These deposits will however not be accepted to run beyond 31-8-1946.
With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೨೪-೧-'೪೬.

ಸ್ವಾತಂತ್ರ್ಯ ದಿನ.

ಪದ್ಧತಿಯಂತೆ ಹಿಂದೀಯರು ಮತ್ತೊಮ್ಮೆ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಉಚ್ಚರಿಸಬೇಕಾದ ದಿನ ಇದೇ ತಾ. 26ನೇ ಶನಿವಾರ. 1929ರ ಲಾಹೋರು ಕಾಂಗ್ರೆಸಿನಲ್ಲಿ ಪೂರ್ಣ ಸ್ವಾತಂತ್ರ್ಯ ಧ್ಯೇಯವು ಮಾನಿಸಲ್ಪಟ್ಟಂದಿನಿಂದ ಜನವರಿ ತಾ. 26ನ್ನು ರಾಷ್ಟ್ರವು ಸ್ವಾತಂತ್ರ್ಯದಿನವಾಗಿ ಆಚರಿಸುತ್ತಾ ಬಂದಿದೆ. ಅಂದು ಪ್ರತಿಯೊಬ್ಬ ಭಾರತೀಯನೂ ಸ್ವಾತಂತ್ರ್ಯ ಪ್ರತಿಜ್ಞಾಧಾರಿಯಾಗಬೇಕು—ವರುಷದಲ್ಲೊಂದು ದಿನವನ್ನಾದರೂ ಈ ಜನ್ಮಸಿದ್ಧ ಹಕ್ಕಿನ ಸ್ಮರಣೆಗಾಗಿ ಮೀಸಲಿಡಬೇಕು. ನಾಡದು ಶನಿವಾರಕ್ಕೆ ಈ ತಪಸ್ಸಿಗೆ ಹದಿನಾರು ವರುಷಗಳಾಗುವವು; ಇಡೀ ರಾಷ್ಟ್ರವು ಏಕಕಂಠದಿಂದ ಹದಿನಾರು ಬಾರಿ ಸ್ವಾತಂತ್ರ್ಯ ಮಂತ್ರೋಚ್ಚಾರ ಮಾಡಿದಂತಾಗುವದು. ಈ ದೀರ್ಘಾವಧಿಯಲ್ಲಿ ಲೋಕದ ಎಷ್ಟೋ ಸಂಕಟಗಳುರುಳಿವೆ; ಹಲವು ರಾಷ್ಟ್ರಗಳ ಸ್ವಾತಂತ್ರ್ಯ ಸಾಧನೆಯಾಗಿದೆ. ಇನ್ನು ಕೆಲವುಗಳ ಸ್ವಾತಂತ್ರ್ಯ [illegible] ಪೂರ್ವ ಮಹಾಯುದ್ಧವೊಂದು ಜರಗಿ ನಾಲ್ಕೈದು ವರುಷಗಳ ಅವಧಿಯಲ್ಲಿ ಶತಮಾನಗಳ ಕ್ರಾಂತಿಯನ್ನು ಸಾಧಿಸಿದೆ. ಆದರೆ ಭಾರತವು ಮಾತ್ರ ಇದ್ದಂತೆ ಇದೆ; 1930ರಲ್ಲಿ ಪ್ರದರ್ಶಿಸಿದ್ದ ಬಯಕೆಯನ್ನೇ 1946ರಲ್ಲೂ ಪ್ರದರ್ಶಿಸುವಂತಹ ಸ್ಥಿತಿಯಲ್ಲಿದೆ. ಇದು ಹೆಗ್ಗಳಿಕೆ ಪಡುವ ವಿಷಯವಲ್ಲ. ನಾವು ಈ ಬಾರಿಯೂ ಇದೊಂದು ಘೋಷಣವೆಂಬಂತೆ ಸ್ವಾತಂತ್ರ್ಯ ಘೋಷಣೆ ಮಾಡಲಾಗುವದಿಲ್ಲ. ಸ್ವಾತಂತ್ರ್ಯವೇ ನಮ್ಮದಾಗಿರಬೇಕಾಗಿದ್ದ ಕಾಲದಲ್ಲಿ, ಅದರ ಉಚ್ಚಾರ ಮಾತ್ರ ನಮ್ಮದಾಗಿದೆ ಎಂದು ಲಜ್ಜೆ ಪಡಬೇಕು; ಹರಸೆಗೆ ನಿಲ್ಲುವಾಗ, ಸ್ವಾತಂತ್ರ್ಯ ಸಾಧನೆಯ ಸುವರ್ಣ ಸಂದರ್ಭವನ್ನು ಕಳಕೊಂಡ ಅಪರಾಧಿಗಳೆಂದು ನಮ್ಮ ಅಂತಸ್ಸಾಕ್ಷಿ ನಮ್ಮನ್ನೇ ಚುಚ್ಚುತ್ತಿರಬೇಕು. ಸ್ವಾತಂತ್ರ್ಯದಿನವೆಂಬುದು ವಾರ್ಷಿಕ ಹಬ್ಬಗಳ ಪಂಕ್ತಿಯಲ್ಲಿ ಸೇರಿ ಶಾಶ್ವತವಾಗಿ ನಿಲ್ಲುವಂತಹುದಲ್ಲ. ಅದರ ಸ್ಥಾನವನ್ನು 'ವಿಜಯ ದಿನ' ಆಕ್ರಮಿಸಬೇಕು. ಈ ಬಾರಿಯ ಪ್ರತಿಜ್ಞೆಯಲ್ಲಿ ಆ ಬಯಕೆಯೂ ಸೇರಿ ಬರಲಿ. ಮುಂದಿನ ವರುಷ 'ಸ್ವಾತಂತ್ರ್ಯ ಸ್ವಾಗತ ದಿನ' ಅಥವಾ 'ವಿಜಯ ದಿನ'ವನ್ನೇ ಆಚರಿಸುವೆವೆಂಬ ದೃಢ ಸಂಕಲ್ಪವಿರಲಿ. ಇದೇ ಕೊನೆಯ ಪ್ರತಿಜ್ಞಾದಿನವೆಂದು ಭಾವಿಸಿ ಪ್ರತಿಯೊಬ್ಬ ಹಿಂದೀಯನೂ ಅದನ್ನು ತ್ರಿಕರಣ ಪೂರ್ವಕವಾಗಿ ಆಚರಿಸಲಿ.

ಕರೆನ್ಸಿ ನೋಟುಗಳ ಹೊಸ ಶಾಸನ

500 ಮತ್ತದರ ಮೇಲಿನ ರೂಪಾಯಿ ನೋಟುಗಳನ್ನು ಅಸಿಂಧುಗೊಳಿಸಿದ ಹಿಂದೀ ಸರಕಾರದ ಚಾತುರ್ಯ ಮತ್ತು ಉಪೇರ ಇವೆರಡೂ ಹೆಚ್ಚಿನವರ ಶ್ಲಾಘನೆಗೊಳಗಾಗಿವೆ. ಇಂತಹ ಶಾಸನವು ಇಂಗ್ಲೆಂಡು ಮತ್ತು ಆಸ್ಟ್ರೇಲಿಯಗಳಲ್ಲೂ ಈ ಮೊದಲೇ ಜ್ಯಾರಿಗೆ ಬಂದಿತ್ತು. ಯುದ್ಧಾವಧಿಯಲ್ಲಿ ಪ್ರತಿಯೊಂದು ರಾಷ್ಟ್ರದಲ್ಲೂ ಅಧಿಕ ಸಂಖ್ಯೆಯಲ್ಲಿ ನಿರ್ಮಾಣಗೊಂಡಿದ್ದ ಸೇನೆಯೆಂದರೆ 'ಲಾಭಕೋರ ಸಬ್ ಮೆರೀನ ದಳ'! ಬ್ರಿಟನಿನ ವ್ಯಾಪಾರಿಗಳು ಮತ್ತು ಉದ್ಯೋಗಿಗಳು ತಮ್ಮ ಪಾಪಪೂರಿತ ಉಳಿತಾಯವನ್ನು ಅಧಿಕ ಸಂಖ್ಯೆಯ ನೋಟುಗಳ ರೂಪದಿಂದ ಅಡಗಿಸಿಟ್ಟು, ಪ್ರೋಜರಿ ಆದಾಯ ಲೆಕ್ಕ ಮೊಪ್ಪಿಸಿ, ಕರಕಂದಾಯಗಳಿಂದ ತಪ್ಪಿಸಿಕೊಳ್ಳುತಿದ್ದಾರೆಂಬುದು ಅಲ್ಲಿಯ ಸರಕಾರದ ಲಕ್ಷ್ಯಕ್ಕೆ ಬಂದೊಡನೆ 1943ರಲ್ಲಿ ಅದು ದೊಡ್ಡ ನಂಬ್ರದ ನೋಟುಗಳನ್ನು ಹಿಂದೆಗೆದು ಕೊಂಡಿತು. ಆದರೆ ಇಲ್ಲಿ ಹಾಕಿರುವಂತಹ ನಿರ್ಬಂಧಗಳಲ್ಲಾವುದೂ ಅಲ್ಲಿರಲಿಲ್ಲ. ಅಂತಹ ನೋಟುಗಳಿದ್ದವರು ಒಂದು ತಿಂಗಳೊಳಗೆ ತಮಗನುಕೂಲವಿದ್ದಂತೆ ಬದಲಾಯಿಸಿಕೊಳ್ಳುವ ಅವಕಾಶವಿದ್ದಿತು. ಇಲ್ಲಿ ಇಂದು ಜ್ಯಾರಿಗೆ ಬಂದಿರುವ ಕ್ರಮವು ಇಂಗ್ಲೆಂಡಿನ ಅಂದಿನ ಶಾಸನಕ್ಕಿಂತ ಎರಡು ರೀತಿಯಲ್ಲಿ ಭಿನ್ನವಿದೆ. ಮೊದಲನೆಯದಾಗಿ ಕಳ್ಳಸಂತೆಯ ಹಾವಳಿಯಿಂದ ಸಾಮಾನ್ಯರು ಅಪಮೃತ್ಯುವಿಗೀಡಾಗುತ್ತಿದ್ದಾಗ ಇಡೀ ದೇಶ ಬೊಬ್ಬೆ ಹೊಡೆದರೂ ಇಲ್ಲಿಯ ಸರಕಾರವು ಆ ಕಾಲದಲ್ಲಿ ಉದ್ದೇಶಪೂರ್ವಕ ಕಣ್ಣುಮುಚ್ಚಿಕೊಂಡಿದ್ದಿತು. ಬಹುಶಃ ತಾನು ಯುದ್ಧಾಸಕ್ತಿನಲ್ಲಿರುವಾಗ ಈ ಪಾಪಪೂರಿತ ಶ್ರೀಮಂತರ ನಿಷ್ಠುರಕ್ಕೊಳಗಾಗುವ ಹೊಸ ವಿಪತ್ತನ್ನು ಸ್ವಾಗತಿಸದೆ ಅವರಿಂದಾದಷ್ಟು ಸಹಾಯ ಪಡೆಯುವ ಅನುಕೂಲ ನೀತಿಯನ್ನೇ ಸರಕಾರವು ಆಶ್ರಯಿಸಿರಬೇಕು. ಎರಡನೆಯದಾಗಿ ಇಂಗ್ಲೆಂಡಿನ ಶಾಸನವು ಈ ನೋಟುಗಳ ಬದಲಾವಣೆಗಾವ ಷರ್ತವನ್ನೂ ಹಾಕದಿರುವಾಗ ಹಿಂದುಸ್ಥಾನದ ಶಾಸನವು ಉಗ್ರ ಷರ್ತಗಳನ್ನು ಹೇರಿ ನೋಟಿದ್ದವರನ್ನೆಲ್ಲಾ ದಿಗಿಲುಗೊಳಿಸಿದೆ. ಹೀಗೆ ಎದೆ ಕಳಕೊಂಡವರಲ್ಲಿ ಬಹುಸಂಖ್ಯಾಕರು ಕಳ್ಳ ವ್ಯಾಪಾರಿಗಳೇ ಇರಬಹುದು; ಅಂಥವರ ಮೇಲೆ ಯಾರೂ ಕನಿಕರಪಡಲಾರರು. ಆದರೆ, ಹಲವರು—ಹೆಚ್ಚಾಗಿ ಮಹಿಳೆಯರು—ತಮ್ಮ ಇಡೀ ಜೀವಮಾನದ ನ್ಯಾಯಬದ್ಧ ಉಳಿತಾಯವನ್ನೋ, ಹಕ್ಕು ಪ್ರಕಾರ ಬಂದ ನಿಧಿಯನ್ನೋ 500 ಅಥವಾ 1000ಗಳ ಒಂದೆರಡು ನೋಟುಗಳನ್ನಾಗಿ ಮಾರ್ಪಡಿಸಿಕೊಂಡು ಇಟ್ಟಿರಬಹುದು. ತಮ್ಮ ನೋಟುಗಳೊಂದಿಗೆ ಇಂಥವರೊಪ್ಪಿಸುವ ಪ್ರಸಿದ್ಧ ಪತ್ರಿಕೆಯೇ ಇವರನ್ನು ರಕ್ಷಿಸಬೇಕು—ಎಂದು ಕಾನೂನು ನಿಷ್ಠೆಯೊಂದನ್ನೇ ಅಧಿಕಾರಿಗಳು ಪ್ರದರ್ಶಿಸಿದರೆ ಕೆಲವು ಕಾರಣಗಳಿಂದ ಈ ನಿರಪರಾಧಿಗಳ ಸರ್ವನಾಶವಾಗಬಹುದು. ಈ ನಿರ್ದೋಷಿಗಳ ಸ್ಥಿತಿಗತಿ, ಜ್ಞಾನದ ಮಿತಿಯನ್ನು ಗಮನಿಸಿ. ಅವರಿಟ್ಟಿಗೆ ಔದಾರ್ಯದಿಂದ ವರ್ತಿಸಿ, ಲಾಭಕೋರರ ಜೇಬಿಗೆ ಮಾತ್ರ ಈ ಕತ್ತರಿಯನ್ನು ಪ್ರಯೋಗಿಸಿದರೆ, ಸರಕಾರವು ಮಾಡಿದ ಪಾಪದೊಂದು ಅಂಶವಾದರೂ ಈ ಪುಣ್ಯಕಾರ್ಯದಿಂದ ವಜಾಪಟ್ಟೀತೆಂದು ನಮಗನ್ನಿಸುತ್ತದೆ. ಕಳ್ಳಸಂತೆಯ ಹಾವಳಿ ಮಿತಿ ಮೀರಿದ್ದ 1943—44ರಲ್ಲಿ ಸರಕಾರ ಮತ್ತು ಲಾಭಕೋರರು ಒಂದೇ ಪಂಕ್ತಿಯಲ್ಲಿದ್ದ ಆ ಕಹಿ ಸ್ಮರಣೆಯು ಮಾಸುವಂತಹದಲ್ಲವಾದರೂ, ಆ ಸ್ವಕಾರ್ಯ ಸಾಧಕ ಪಂಗಡಗಳಲ್ಲಿ ಒಂದರ ಮೇಲೆ ಇನ್ನೊಂದು ಬೀಳುವ ದೃಶ್ಯವನ್ನು ಈ ಕೊನೆಯ ಭಾಗದಲ್ಲಾದರೂ ಜನ ಸಾಮಾನ್ಯರು ಕಾಣುವಂತಾದುದು ಸಮಾಧಾನಕರ.

ಮೈಸೂರು—ದ. ಕನ್ನಡ ಸಂಬಂಧ

ಕಳೆದವಾರ ಉಡುಪಿಗಾಗಮಿಸಿದ್ದ ಮೈಸೂರು ದಿವಾನರಿಗೆ ತಮ್ಮೆಲ್ಲಾ ಸಂಸ್ಥೆಗಳ ಪರವಾಗಿ ಡಾ। ಮಾಧವ ಪೈಗಳೊಪ್ಪಿಸಿದ ಮಾನಪತ್ರದಲ್ಲಿದ್ದ ಕೆಲವು ಗಣ್ಯವಿಚಾರಗಳು ಮೈಸೂರು ಸರಕಾರಕ್ಕೆ ಕರ್ತವ್ಯ ಜ್ಞಾಪಕ ಕೊಡುವಂತಹವಿವೆ. ಮೈಸೂರಿನ ಗಟ್ಟಪ್ರದೇಶದ ತೋಟಗಳ ದುಡಿಮೆಯು ಹೆಚ್ಚಾಗಿ ದಕ್ಷಿಣ ಕನ್ನಡದ ಕೂಲಿಗಳಿಂದಲೇ. ಈ ಸಂಬಂಧವು ಹಲವು ತಲೆಮಾರುಗಳದ್ದಾಗಿದೆ. 'ತೋಟದಾಳು'ಗಳ ಜೀವನವು ತೀರಾ ಅಸಹನೀಯವಿದೆ; ಅವನ್ನು ಮಾನವ ಸಹಜ ಮಟ್ಟಕ್ಕೆ ತರುವ ಪ್ರಯತ್ನವು ಯಾವ ಕಡೆಯಿಂದಲೂ ನಡೆದಿಲ್ಲ. ಸಾಲ ಮತ್ತು ಜ್ವರ, ಇವೆರಡು ಈ ಕೂಲಿಗಳ ಇಡೀ ಆಯುಷ್ಯಕ್ಕಂಟಿರುವ ಕೀಟಗಳು. ಅಂಥವರಿಗೆ ಸೌಕರ್ಯವೊದಗಿಸಬೇಕೆಂಬುದನ್ನು ಮೈಸೂರು ದಿವಾನರಿಗೆ ಮಾನಪತ್ರವು ನೆನಪು ಕೊಟ್ಟುದು ಸಮಯೋಚಿತವಿದೆ. ಅಂತೆಯೇ ಆಗುಂಬೆ ಘಾಟಿಯನ್ನು ದುರಸ್ತಿಮಾಡಬೇಕು, ಮೈಸೂರು-ಮಲ್ಪೆ ರೈಲ್ವೆಯ ಏರ್ಪಾಡುಮಾಡಬೇಕು ಎಂಬ ವಿನಂತಿಯು ಮೈಸೂರು ಮತ್ತು ದಕ್ಷಿಣ ಕನ್ನಡ, ಇವೆರಡರ ದೀರ್ಘಕಾಲದ ಬಯಕೆಯ ಪ್ರತಿಧ್ವನಿ. ಪಶ್ಚಿಮ ಕರಾವಳಿಯಲ್ಲೊಂದು ಬಂದರ ಸಂಪಾದಿಸಬೇಕೆಂದು ಕಳೆದ 70 ವರುಷಗಳಿಂದ ಮೈಸೂರು ಸರಕಾರ ಒದ್ದಾಡುತ್ತಿದೆ. ಆ ಕುರಿತು ಮದ್ರಾಸ್, ಬೊಂಬಾಯಿ, ಮತ್ತು ಹಿಂದೀ ಸರಕಾರಗಳನ್ನು ಸಮಜಾಯಿಸಲು ಹಲವು ಬಾರಿ ಪ್ರಯತ್ನಿಸಿದೆ. ಮೈಸೂರಿನಲ್ಲಿ ಇತ್ತೀಚೆಗಾಗಿರುವ ರೈಲ್ವೇ ಅಭಿವೃದ್ಧಿಯೂ ದಕ್ಷಿಣ ಕನ್ನಡದೊಡನೆ ಬೆಳೆದು ಬಂದಿರುವ ಅದರ ಸಂಬಂಧವೂ, ಮೈಸೂರು-ಮಲ್ಪೆ ರೈಲ್ವೆಯ ಆವಶ್ಯಕತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಹೀಗಾಗಿ ಸದ್ಯ ಸ್ಥಿತಿಯಲ್ಲಿ ಈ ಬೇಡಿಕೆಗಳು ಸಾಫಲ್ಯ ಹೊಂದುವದು ಇಕ್ಕಡೆಗೂ ಆಗತ್ಯ ಮತ್ತು ಅನಿವಾರ್ಯವಾದ್ದರಿಂದ, ಈ ಸಂಬಂಧದ ಕಾರ್ಯಾರಂಭವಾಗುವದನ್ನು ನಿರೀಕ್ಷಿಸುತಿದ್ದೇವೆ.

ನೋಟೀಸು

ಶ್ರೀ ಹಿರಿಅಡಕ ಮಹತೋಬಾರ ಶ್ರೀವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿಗೆ

ಭಕ್ತ ವೃಂದದವರೂ ಸ್ಥಳಾಭಿಮಾನಿಗಳೂ ಪ್ರೋತ್ಸಾಹ ವ ಬೆಂಬಲವನ್ನಿತ್ತು ಶ್ರೀಶಾನುಗ್ರಹಕ್ಕೆ ಪಾತ್ರರಾಗುವಂತೆ ಅಪೇಕ್ಷಿಸುತ್ತೇನೆ.

ಎ. ಎಂ. ನಾಗಣ್ಣ ಹೆಗ್ಡೆ,
ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್; ಮೆನೇಜಿಂಗ್ ಟ್ರಸ್ಟಿ
ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ. ಹಿರಿಯಡ್ಕ, ದ. ಕನ್ನಡ.

ವಿ. ಸೂ:—

ತಾ. 6—2—46ಕ್ಕೆ
ಪ್ರಚಂಡ ಜೋಡಾಟ ಮಾಡಿಸುವದಾಗಿ ನಿಶ್ಚಯಿಸಿರುತ್ತದೆ. ಧರ್ಮಾರ್ಥ ಪ್ರವೇಶ.
ಎಲ್ಲರಿಗೂ ಸುಸ್ವಾಗತವಿದೆ.

(ಸನೇ ಪುಟದಿಂದ ಮುಂದುವರಿದುದು.)

ಗಳು ಕೂಡಾ ರೂ. 100ರ ನೋಟಿಗೂ ಚಿಲ್ಲರೆ ಕೊಡಲು ನಿರಾಕರಿಸಿವೆ. ಕೇಂದ್ರ ಎಸೆಂಬ್ಲಿಗೆ ಈ ಸಂಬಂಧವಾಗಿ ಎರಡು ನಿಲುವಳಿ ಸೂಚನೆಗಳ ನೋಟೀಸು ಹೋಗಿದೆ. ಈ ಶಾಸನದ ವಾರ್ತೆ ಕೇಳಿದೊಡನೆ ಪಂಜಾಬಿನ 40 ವರುಷ ಪ್ರಾಯದ ಓರ್ವ ಮಹಿಳೆ ಹೃದಯಸ್ತಂಭನಗೊಂಡು ಮಡಿದಳು. ಅವಳ ಹಸ್ತ 100000 ರೂಪಾಯಿಗಳು 1000ದ ನೋಟುಗಳ ರೂಪದಲ್ಲೇ ಇದ್ದುವಂತೆ. ನೈನಿತಾಲ್ ಜಿಲ್ಲೆಯ ಒಬ್ಬ ದೊಡ್ಡ ವ್ಯಾಪಾರಿ ಬೇಂ

ಕಿನ ಬಾಗಿಲಲ್ಲೇ ಹೃದಯ ಕ್ರಿಯಾನಿಂತು ಹತನಾದ. ಅವನೊಡನೆ 1000 ರೂ ಗಳ ನೋಟುಗಳು ಹತ್ತಕ್ಕಿಂತಲೂ ಹೆಚ್ಚಿದ್ದುವೆಂದೂ ಅರ್ಜಿ ಸಮೇತ ಬೇಂಕಿಗೆ ಬಂದವನು ಅಲ್ಲಿಯೇ ಮಡಿದನೆಂದೂ ತಿಳಿದು ಬರುತ್ತದೆ. ಬೊಂಬಾಯಿಯ ಜೆ. ಎಮ್. ಡ'ಸೋಜಾ ಎಂಬವರ ಪರವಾಗಿ ಶ್ರೀ. ಕೆ. ಎಮ್. ಮುನ್ಶಿಯವರು ರಿಜರ್ವ್ ಬೇಂಕಿನ ವಿರುದ್ಧವಾಗಿ ಬೊಂಬಾಯಿ ಹೈಕೋರ್ಟಿನಲ್ಲಿ ಅರ್ಜಿ ದಾಖಲ್ಮಾಡಿದ್ದಾರೆ. 1000 ರೂ ಗಳ 40 ನೋಟುಗಳನ್ನು ಹಿಡಿದುಕೊಂಡು ಕಳ್ಳ ಸಂತೆ ಮಾರಾಟಕ್ಕೆ ಹೊರಟಿದ್ದ ಢಿಲ್ಲಿಯ ಮಿಲಿಯಾಧಿಪ ಬಿನೋದಲಾಲ್ ಎಂಬವನ ಮೇಲೆ ಮೊಕದ್ದಮೆ ನಡೆದಿದೆ. ರೂ. 1000ದ ನೋಟನ್ನು ಪೋರ್ಜರಿ ವ್ಯಾಪಾರ ಮಾಡಲು ಹೊರಟಿದ್ದ ರಾವಲ್ಪಿಂಡಿಯ ನಾನಕ್ ಸಿಂಗ್ ಎಂಬವನ ದಸ್ತಗಿರಿಯಾಗಿದೆ. ದೇಶದ ಹಲವೆಡೆ ಪೋಲಿಸ್ ಶೋಧಗಳು ನಡೆದಿವೆ.

ತಜ್ಞರ ಅಭಿಪ್ರಾಯ

ಕಳ್ಳ ವ್ಯಾಪಾರಿಗಳ ಮೇಲೆ ಸರಕಾರವು ಈ ರೀತಿ ಗದೆ ಬೀಸಿದುದನ್ನು ಜನಹಿತಾಕಾಂಕ್ಷಿಗಳೆಲ್ಲಾ ಶ್ಲಾಘಿಸುತಿದ್ದಾರೆ. ಆದರೆ ನಿರಪರಾಧಿಗಳಾದ ಮಧ್ಯಮವರ್ಗದವರೂ ಅನ್ಯಾಯಕ್ಕೀಡಾಗದಂತೆ ವಿಶೇಷ ಜಾಗರೂಕತೆವಹಿಸಬೇಕಾದ ಆವಶ್ಯಕತೆಯನ್ನು ಎಲ್ಲರೂ ಒತ್ತಿ ಹೇಳುತ್ತಿದ್ದಾರೆ. ತಮ್ಮ ಜೀವನದ ಸಂಪಾದನೆಯನ್ನೋ ಹಕ್ಕು ಪ್ರಕಾರ ಬಂದ ಹಣವನ್ನೋ ಅಧಿಕ ಸಂಖ್ಯೆಯ ಕೆಲವೇ ನೋಟುಗಳ ರೂಪದಿಂದ ಕೂಡಿಸಿಡುವ ಅಭ್ಯಾಸ ಮಹಿಳೆಯರಲ್ಲಿ ಅಧಿಕವಿದೆ. ಅಂತಹ ಹಲವು ನಿರಪರಾಧಿಗಳು ಸರಿಯಾದ ವಿವರ ಕೊಡುವದಸಾಧ್ಯವಾಗಲೂ ಬಹುದು. ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ಉದಾರತೆಯಿಂದ ವರ್ತಿಸುವದು ಅತ್ಯವಶ್ಯ. ನೋಟುಗಳಲ್ಲಿ ಒತ್ತಲ್ಪಟ್ಟಿರುವ 'ಹಿಡಿದುಕೊಂಡು ಬಂದವನ ಬೇಡಿಕೆಯಂತೆ ಸಂದಾಯಿಸುವ ಆಶ್ವಾಸನೆಯಿದೆ' (Promise to pay bearer on demand) ಎಂಬ ವಾಕ್ಯವನ್ನು ಆಧರಿಸಿ ಅಂತಹ ಸುಮಾರು 50ಮಿಲಿಯ ರೂಪಾಯಿ ನೋಟುಗಳಿದ್ದ ಒಂದು ತಂಡದ ಪರವಾಗಿ ಶ್ರೀ. ಭುಲಾಭಾಯಿ ದೇಸಾಯಿಗಳು ದಾವೆ ಹೂಡುವರೆಂಬ ವಾರ್ತೆಯಿತ್ತು. "ನನ್ನ ಪರವಾಗಿತ್ತರ ಒತ್ತಾಯ ಬಿದ್ದ ವಿನಹ ನಾನು ಹಾಗೆ ಮಾಡುವಂತಿಲ್ಲ" ಎಂದು ಈಗ ದೇಸಾಯಿಗಳೆಂದಿದ್ದಾರೆ. ಕಳ್ಳ ಹಣಕ್ಕೆ ಬಿದ್ದ ಈ ಹೊಡೆತದಿಂದ ವ್ಯಕ್ತಿಶಃ ಭುಲಾಭಾಯಿಗಳಿಗೆ ಆನಂದವಾಗಿದೆ. "ಇದರಿಂದ ಮಧ್ಯಮ ಮತ್ತು ಅದಕ್ಕೂ ಕೆಳಗಿನ ವರ್ಗದವರಿಗೆ ಹಾನಿ ಪೀಳಬಹುದು" ಎಂದು ಬಾಬು ರಾಜೇಂದ್ರ ಪ್ರಸಾದರೆಚ್ಚರಿಸಿದ್ದಾರೆ. "ಲಾಭಖೋರರ ಆಟ ನಿಲ್ಲಿಸುವದು ಸಂತೋಷ. ಆದರೆ ಹಿಂದೀ ಸ್ತ್ರೀಯರಿಗೆ ಅನ್ಯಾಯವಾಗಬಹುದು" ಎಂದು 'ಇಂಡಿಯನ್ ಚೇಂಬರ್ ಓಫ್ ಕಾಮರ್ಸ್'ನ ಅಧ್ಯಕ್ಷ ಸರ್. ಗೋಯೆಂಕರೆಂದಿದ್ದಾರೆ. ಹೆಚ್ಚಿನ ರಾಷ್ಟ್ರ ಪ್ರಮುಖರೂ ಜನಸಾಮಾನ್ಯರೂ ಈ ಶಾಸನವನ್ನು ಅಂತರ್ಯತಃ ಸ್ವಾಗತಿಸಿದ್ದಾರೆ. ಲಾಭಖೋರ ಜಗತ್ತಿನಲ್ಲಿ ಮಾತ್ರ ಪ್ರತ್ಯಕ್ಷ ಪ್ರಳಯವೇ ಎದ್ದಿದೆ.

[illegible] 1 1 ೧೮ನೇ ಸಂಜೆ ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡಿನವರು ಇಲ್ಲಿಗೆ ಬಂದಿದ್ದ ಬೊಂಬೇ ಲೈಫ್ ಇನ್ಸೂರೆನ್ಸ್ ಕಂಪೆನಿಯ ಡೈರಕ್ಟರರುಗಳಾದ ಶ್ರೀ। ಪಿಂಗಳಿ ವೆಂಕಟರಾಮರೆಡ್ಡಿ, ಹೈದರಾಬಾದ್ ಸ್ಟೇಟಿನ ದೇಶಮುಖ್, ಸುಜೀರ್ ಪುಂಡಲೀಕ ನಾಯಕ್ ಇವರಿಗೂ ಮೆನೇಜರ್ ಮತ್ತು ಸೆಕ್ರೆಟರಿ ಶ್ರೀ। ಕೆ. ಬಾಲಸುಬ್ರಹ್ಮಣ್ಯರವರಿಗೂ ಡಾ। ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಭೋಜನ ಸತ್ಕಾರವಿತ್ತು ಗೌರವಿಸಿದರು. ಸುಮಾರು 100 ಜನರು ಆಮಂತ್ರಿಸಲ್ಪಟ್ಟಿದ್ದ ಅತಿಥಿಗಳ ಆಗಮನವಾದೊಡನೆ ಗ್ರೂಪ್ ಫೋಟೋ ತೆಗೆಯಲಾಯಿತು. ಸತ್ಕಾರದ ವ್ಯವಸ್ಥೆ ಮಾಡಿದ ಶ್ರೀ। ಬಿ. ಪಿ. ಕೊಚ್ಚಿಕಾರ್ B Com, ರವರು ಪರಿಚಯಾತ್ಮಕ ಭಾಷಣ ಮಾಡಿದ ಮೇಲೆ ಶ್ರೀಗಳಾದ ಜಿ. ಪಪ್ಪಯ್ಯ ಶೆಟ್ಟಿ, ಕೆ. ಸಂಜೀವ ಕಾಮತರು ಮಾತನಾಡಿದರು. ಅಧ್ಯಕ್ಷರ ಭಾಷಣವಾದೊಡನೆ ಶ್ರೀ। ಬಾಲಸುಬ್ರಹ್ಮಣ್ಯರು ಕಂಪೆನಿಯ ಅಭಿವೃದ್ಧಿಗೆ ಶ್ರೀ। ಕೊಚ್ಚಿಕಾರ್ ಬ್ರದರ್ಸರು ವಹಿಸಿದ ಭಾಗ ಮೊದಲಾದುವನ್ನು ವಿವರಿಸಿದರು. ಧನ್ಯವಾದಗಳೊಂದಿಗೆ ಸಮಾರಂಭವು ಸಮಾಪ್ತಿಯಾಯಿತು.

ಕಬ್ಬಿಣ ಮತ್ತು ಉಕ್ಕು ಅನೇಕ್ಕ ಸುಸ ಕೈಗಾರಿಕೆ ಉದ್ಯಮಿಗಳು ತಮಗೆ ಬೇಕಾಗುವ ಸಲಕರಣಗಳ ಮಾಹಿತಿ ಸಮೇತ (ಜನರಿಗೆ ಬೇಕಾಗುವ ಸಾಮಾನುಗಳನ್ನು ತಯಾರಿಸಿ ಕೊಡುವರೆ ಬೇಕಾಗುವ ಕಬ್ಬಿಣ ಮತ್ತು ಉಕ್ಕು ಸಾಮಗ್ರಿಯಲ್ಲದು ದನ್ನು [illegible] ಪೇರಿಮಾಡಲು ಹಾಗೂ ಹೊಸತನ್ನು ಹಾಕಲು ಹೊಸ ಯಂತ್ರಗಳಿಗೆ ಬೇಕಾಗುವ ಕಬ್ಬಿಣ ಮತ್ತು ಉಕ್ಕು) ಫೆಬ್ರವರಿ ತಾ 10 ರೊಳಗಾಗಿ ಕಲ್ಲಿಕೋಟೆಯ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಆಫೀಸರರಿಗೆ ಅರ್ಜಿ ಮಾಡಬೇಕಾಗಿ ಸಪ್ಲೈ ಆಫೀಸರರ ಪ್ರಕಟಣೆಯು ಹೊರಟಿದೆ.

ಮಂಗಳೂರಲ್ಲಿ ಸಂಗೀತ ಕಚೇರಿ ಗಣಪತಿಹೈಸ್ಕೂಲು ಹೋಲಿನಲ್ಲಿ ಉಳ್ಳಾಲ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ನಿಧಿಗಾಗಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸಂಗೀತ ವಿದ್ವಾನ್. ಪಿ. ಎಸ್ ರಾಜಯ್ಯಂಗಾರ್ ಬೆಂಗಳೂರು, ವಿದ್ವಾನ್ ಗೋವಿಂದಸ್ವಾಮಿ ಪಿಟಲ್ ಬೆಂಗಳೂರು, ವಿದ್ವಾನ್ ಪುಟ್ಟಾಚಾರ್ಯ ಮೃದಂಗ ಸಹಿತ ಕಚೇರಿ ನಡೆಯಿತು. ಕೊನೆಯಲ್ಲಿ ಉಳ್ಳಾಲ ವೆಂಕಟ್ರಾಯರು ಧನ್ಯವಾದಗಳನ್ನರ್ಪಿಸಿದರು.

ಉಚಿತ

'ಅಂತರಂಗ' ವಾರಪತ್ರಿಕೆಗೆ ಈ ತಿಂಗಳಾಂತ್ಯದೊಳಗೆ ಚಂದಾದಾರರಾಗುವವರಿಗೆ 'ಆಯುರ್ವೇದ ಸಮ್ಮೇಲನಾಂಕ'ವು ಉಚಿತವಾಗಿ ಕೊಡಲ್ಪಡುವುದು

ಅಂತರಂಗಕ್ಕೆ ವಾರ್ಷಿಕ ಚಂದಾ

ರೂ 4—8—0

ಮೆನೇಜರ್, ಅಂತರಂಗ, ಉಡುಪಿ

ದೇಶ-ವಿದೇಶ

ಮಹಾತ್ಮಾ ಗಾಂಧಿ

ಇದೇ ತಾ 21ರಲ್ಲಿ ಮದ್ರಾಸಿಗೆ ಬಂದು ಮುಟ್ಟಿ ಅತ್ಯುತ್ಸಾಹದ ಸ್ವಾಗತ ಪಡೆದಿದ್ದಾರೆ. ಅವರ ಹಾದಿಯ ಇಕ್ಕಡೆಗಳಲ್ಲೂ ಅಪಾರ ಜನಸಂದಣಿ ನೆರೆದಿತ್ತು. ಮದ್ರಾಸಿನ ಕಾರ್ಯಕ್ರಮಗಳನ್ನು ಮುಗಿಸಿ ಮಧುರಾ ಮತ್ತು ಪಳನಿಗಳನ್ನು ಸಂದರ್ಶಿಸಿ, ಪುನಃ ಮದ್ರಾಸಿಗೆ ಬಂದು ಅಲ್ಲಿಂದ ಫೆಬ್ರವರಿ 6ಕ್ಕೆ ವಾರ್ಧಾಕ್ಕೆ ಹೊರಡುವರು.

ಕೇಂದ್ರ ಎಸೆಂಬ್ಲಿಯು

ಮೊದಲನೇ ಸಭೆ ಹಾಗೂ ಬಜೆಟ್ ಅಧಿವೇಶನವು ತಾ. 21ರಲ್ಲಿ ನವಡಿಲ್ಲಿಯಲ್ಲಾರಂಭವಾಗಿದೆ. ಅಧ್ಯಕ್ಷ ಚುನಾವಣೆಯಾಗುವವರೆಗೆ ಸರ್. ಕವಾಸ್ಜಿ ಜಹಾಂಗೀರರು ಅಧ್ಯಕ್ಷ ಪೀಠಾರೂಢರಾಗಿರುವರು. ಬಿಳಿ ಟೋಪಿಯ, ಕಾಂಗ್ರೆಸ್ ಪಕ್ಷೀಯರೂ, ಜಿನ್ನಾ ಟೋಪಿಯೆಂದು ಹೆಸರಾದ ಕಪ್ಪು ಫರ್ ಟೋಪಿಯ ಲೀಗ್ ಸದಸ್ಯರೂ ಸಭೆಯ ಮುಖ್ಯಾಂಗಗಳಾಗಿ ರಾಜಿಸುತಿದ್ದರು. ಎಲ್ಲಾ ಸದಸ್ಯರೂ ಪ್ರಮಾಣ ಬದ್ಧರಾದರು.

ಅಧಿವೇಶನದ ಕಾರ್ಯಗಳು.

ಈ ಸಾರಿಯ ಕೇಂದ್ರ ಎಸೆಂಬ್ಲಿ ಸಭೆಯ ಮುಂದೆ ಹಲವು ಪ್ರಾಮುಖ್ಯ ಕಾರ್ಯಕ್ರಮಗಳಿವೆ. ಜಾವಾದಲ್ಲಿ ಅತಿರೇಕ ವರ್ತನೆ, ಹೊಸ ಕರೆನ್ಸಿ ನೋಟು ಶಾಸನ, ನೆಹರುಗಳ ಜಾವಾ ಆಗಮನಕ್ಕೆ ಆಕ್ಷೇಪ, ಭಾರತ ರಾಷ್ಟ್ರೀಯ ಸೇನೆ, ಇತ್ಯಾದಿಗಳ ಕುರಿತು ಹಲವು ನಿಲುವಳಿ ಸೂಚನೆಗಳು ಬಂದಿವೆ.

ಕಾಂಗ್ರೆಸ್ ಪಕ್ಷ ನಾಯಕ

ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷ ನಾಯಕನಾಗಿ ಶ್ರೀ. ಶರಚ್ಚಂದ್ರ ಬೋಸರೂ, ಉಪನಾಯಕನಾಗಿ ಮಿ. ಆಸಫ್ ಅಲಿಗಳೂ ಆರಿಸಲ್ಪಟ್ಟಿದ್ದಾರೆ. ಪಕ್ಷದ ಚೀಫ್ ವಿಪ್ ಆಗಿ ಶ್ರೀ. ಸತ್ಯನಾರಾಯಣ [illegible] ಇತರ ಮೂವರು ವ್ಹಿಪ್‌ಗಳಾಗಿ ಸರ್ದಾರ ಜೋಗೇಂದ್ರ [illegible] ಹರಿ ಚೌಧರಿ, ಮತ್ತು [illegible] ನೇಮಕಗೊಂಡಿದ್ದಾರೆ. ಲೀಗ್ ಪಕ್ಷಕ್ಕೆ ಮಿ. ಜಿನ್ನರು ನಾಯಕರಾಗಿಯೂ ಮಿ ಲಿಯಾಖತ್ ಅಲೀಖಾನರು ಉಪನಾಯಕನಾಗಿಯೂ ಇರುವರು. ಎಸೆಂಬ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಒಂದೆರಡು ದಿನಗಳೊಳಗೆ ನಡೆಯಲಿದೆ.

ಪಾರ್ಲಿಮೆಂಟರೀ ಶಿಷ್ಟ ಮಂಡಲ

ಈಗ ಬೊಂಬಾಯಿಗೆ ಆಗಮಿಸಿದೆ. ಗಡಿನಾಡಿಗೆ ಭೇಟಿಕೊಟ್ಟು ಅಲ್ಲಿಯ ಕಾಂಗ್ರೆಸ್ ಮತ್ತಿತರ ಮುಖಂಡರೊಡನೆ ಸಂಭಾಷಿಸಿರುವರು. ಗಾಂಧಿಜೀ ಮದ್ರಾಸಿನಲ್ಲಿರುವಾಗಲೇ ಮದ್ರಾಸಿಗೆ ಬಂದು ಗಾಂಧಿಜಿ ಮತ್ತು ರಾಜಾಜಿಯೊಂದಿಗೆ ಸಂಭಾಷಿಸುವರೆಂದು ತಿಳಿದು ಬರುತ್ತದೆ. ಮಂಡಲಿಯ ಇಬ್ಬರು ಸದಸ್ಯರು ನೈಜಾಮರಾಗಿ [illegible] ಇಲ್ಲಿಯ ಪ್ರಮುಖರೊಡನೆ ಚರ್ಚಿಸಲಾರಂಭಿಸಿದ್ದಾರೆ.

ಡಿಗೋಲೆಯರ ರಾಜೀನಾಮೆ

ಫ್ರೆಂಚ್ ಸರಕಾರದ ಪ್ರಮುಖನಾದ ಜನರಲ್ ಡಿಗೋಲೆಯವರು ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಸೇನಾ ಸಂಬಂಧದ ಪ್ರಶ್ನೆಗಳ ಕುರಿತು ಮಂತ್ರಿಮಂಡಲಕ್ಕೂ ಅವರಿಗೂ ಭಿನ್ನಾಭಿಪ್ರಾಯ ಹುಟ್ಟಿದುದೇ ಇದಕ್ಕೆ ಕಾರಣ.

ಅಮೇರಿಕದಲ್ಲಿ ಮಹಾ ಮುಷ್ಕರ

ಅಮೇರಿಕದ ಚರಿತ್ರೆಯಲ್ಲೇ ದೊಡ್ಡದಾದ ಸುಮಾರು 2000000ಲಕ್ಷ ಉಕ್ಕಿನ ಕೆಲಸಗಾರರ ಮುಷ್ಕರವು ಇದೇ ತಾ21 ರಿಂದ ಆರಂಭವಾಗಿದೆ. ಇದು ಇಡೀ ಅಮೇರಿಕದ ಸಂಘಟಿತ ಕೆಲಸಗಾರರ 1/7ನೇ ಅಂಶವಂತೆ. ಸರಕಾರವು ರಾಜಿಯು ಅಸಿಬಿಟ್ಟಿದ.

ಸಂಯುಕ್ತ ರಾಷ್ಟ್ರಗಳ ಎಸೆಂಬ್ಲಿ.

ಲಂಡನಿನಲ್ಲಿ ನಡೆಯುತ್ತಿರುವ ಜಾಗತಿಕ ಎಸೆಂಬ್ಲಿಯಲ್ಲಿ ಇರಾನಿನಾಡಳಿತೆಯೊಳಗೆ ರಶ್ಯದ ಕೈವಾಡ ಬಿದ್ದ ಸಮಸ್ಯೆಯೇ ಚರ್ಚೆಗೊಳಗಾಗಿದೆ. ಜಾವಾದ ಸ್ವಾತಂತ್ರ್ಯ ಸಮರವು ನೆನೆಗುದಿಗೆ ಬಿದ್ದಂತಾಗಿದೆ. ಹೊಲ್ಲೆಂಡ್ ಪ್ರತಿನಿಧಿ ವೋನ್ ಮೂಕನ ಮೇಲೆ ಹೊಲ್ಲೆಂಡ್ ಸರಕಾರದ ವಿಶ್ವಾಸ ಕೆಟ್ಟಿದೆ. ಆ ಕುರಿತು ತನಿಖೆ ನಡೆಸಲು ಅಲ್ಲಿಂದ ಶೋಧನಾ ಸಮಿತಿ ಹೊರಡಲಿದೆ.

ಮಂಗಳೂರು ಮುಷ್ಕರ-ವ್ಯಾಲಕ ಮಜೂರರೊಳಗೆ ಯಾವತರದ ಒಪ್ಪಂದದ ಇತ್ಯರ್ಥವಾಗದಿದ್ದುದರಿಂದ ತಾ 21ರಿಂದ 22 ಹಂಚು ಕಾರ್ಖಾನೆಗಳ ಕೆಲಸಗಾರರು ಮುಷ್ಕರ ಹೂಡಿರುವರಾಗಿ ತಿಳಿದುಬರುತ್ತದೆ.

ತಿದ್ದು ಪಡಿ:—ಕಳೆದ ವಾರ ಈ ಸಂಚಿಕೆಯಲ್ಲಿ ಪ್ರಕಟವಾದ 'ಮುಕ್ತಿ' ನಾಟಕದ ಜಾಹೀರಾತಿನಲ್ಲಿ ಲೇಖಕರು, ನಿರ್ಮಾಣಕರು, ಮತ್ತು ನಿರ್ದೇಶಕರು ಶ್ರೀ. ಯು. ಎಸ್ ಶೆಟ್ಟಿ, ಎಂದು ತಪ್ಪಾಗಿ ಪ್ರಕಟವಾಗಿದೆ. ಅದು ಯು. ಎಸ್. ಶೆಟ್ಟಿ ಎಂದಾಗಬೇಕು

ಸಂ. ಪ.

ತಾರೀಕು 22—1—46ರಿಂದ

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಕೊಲೇಜ್ ಫಂಡಿನ ಸಹಾಯಾರ್ಥವಾಗಿ

ಮಿನರ್ವಾದವರ—

ಉಲ್ಟಿ ಗಂಗಾ

ಉಮೀರ್‌ಭಾ, ಸಾದಿಕ್ ಅಲೀ ಪರೇರಾ ಮೊದಲಾ.

ಬರುವ ಚಿತ್ರ—

ಕೆಸಾಬ್ಲಾಂಕಾ



Approved firm by the Govt. of Mysor
Certified by the Agent of the Govt. of Cylone Indian.

ಉಡುಪಿ.

ಪರ್ಯಾಯ ಮಹೋತ್ಸವ— ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರ ಪರ್ಯಾಯ ಮಹೋತ್ಸವವು ತಾ 17ರಲ್ಲು ಮುಂಜಾನೆ ಜರಗಿತು. ಶ್ರೀ ಶ್ರೀಗಳವರು ಸಂಪ್ರದಾಯ ಪ್ರಕಾರ ಇತರ ಸ್ವಾಮಿಗಳವರೊಂದಿಗೆ ಜೋಡುಕಟ್ಟೆಯಿಂದ ಮೆರವಣಿಗೆಯಲ್ಲಿ ಬಂದು ಬಡಗುಮಾಳಿಗೆಯ ಅಲಂಕೃತವಾದ ಭವನದಲ್ಲಿ ಪರ್ಯಾಯ ದರ್ಬಾರನ್ನು ಮಾಡಿದರು. ಈ ಸಂದರ್ಭದಲ್ಲಿ ಭಕ್ತ ವೃಂದದ ಪರ್ಯಾಯ ಪಟ್ಟಿ ಕಾಣಿಕೆ, ಸಂಸ್ಕೃತ ಕಾಲೇಜಿನ ಹಾಗೂ ಕನ್ನಡ ಸಂಘದ ಮಾನಪತ್ರಗಳು ನೂತನ ಪರ್ಯಾಯ ಪೀಠಾಧಿಪತಿಗಳಿಗೆ ಅರ್ಪಿಸಲಾಯಿತು. ಶ್ರೀಗಳಿಂದ ಎಚ್. ಎಸ್. ದೊಡ್ಡೇರಿ, ಎಚ್. ಎಸ್. ಕಲ್ಲೆ, ಮೂರ್ತಿ ಮೊದಲಾದವರ ಸಂದರ್ಭೋಚಿತ ಭಾಷಣಗಳಾದ ಬಳಿಕ ಸಭಿಕರಿಗೆ ಹಣ್ಣು ಹಂಪಲು ವಿತರಣೆಯಾಯಿತು. ಸಂಧ್ಯಾ ಸಮಯ ಜನ ಸಂತರ್ಪಣೆ, ರಾತ್ರಿ ಉತ್ಸವ, ರಥೋತ್ಸವ ಇತ್ಯಾದಿ ಕಾರ್ಯಕ್ರಮಗಳಿಂದ ಪರ್ಯಾಯ ಮಹೋತ್ಸವವು ಯಶಸ್ವಿಯಾಗಿ ಜರಗಿತು.

ದ. ಕ. ಜಿಲ್ಲಾ ಚಿತ್ರಕಲಾಸಮಾಜ ದವರು ಸಂಘದ ಕಾರ್ಯದರ್ಶಿ ಚಿತ್ರಕಲಾ ಪ್ರವೀಣ ಶ್ರೀ ಗಣಪತಿರಾಯರ ಮೂಲಕ ತಮ್ಮ ಗುರುವರ್ಯರಾದ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಶ್ರೀ ಶಾಸ್ತ್ರಿಗಳಿಗೆ ಮಾನಪತ್ರವನ್ನಿತ್ತು ಗೌರವಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ವಾಸುದೇವರಾಯ ವಹಿಸಿದ್ದರು. ಶಿಷ್ಯ ವೃಂದಕ್ಕೆ ಗುರುವರರಿಂದ ದೊರೆಯಬೇಕಾದ ಸಹಕಾರ, ಪ್ರೋತ್ಸಾಹಗಳು ಮಾನಪತ್ರದಲ್ಲಿ ಸೂಚಿಸಲಾಗಿತ್ತು.

ಸಂಗೀತ ಕಚೇರಿ—ತಾ 14-1-46ರಲ್ಲಿ ಉಚ್ಚಿಲ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೋಸ್ಕರ, ಸಂಗೀತ ವಿದ್ವಾನ್ ಶ್ರೀ. ಬಿ. ಎಸ್. ರಾಜಯ್ಯಂಗಾರ್ (ಮೈಸೂರು) ಇವರ ಸಂಗೀತ ಕಚೇರಿಯು ಪಕ್ಕ ವಾದ್ಯದೊಡನೆ ಪೀಪಲ್ಸ್ ಹಾಲಿನಲ್ಲಿ ಶ್ರೀ. ಅದೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂತ್ಯದಲ್ಲಿ 'ಕರ್ನಾಟಕ ಗಾನ ಕೋಕಿಲ' ಎಂಬ ಬಿರುದನ್ನು ಕೊಡಲಾಯಿತು. ವ್ಯವಸ್ಥಾಪಕರಾದ ಶ್ರೀ ಉಚ್ಚಿಲ ವೆಂಕಟರಾಯರು ಧನ್ಯವಾದಗಳನ್ನಿತ್ತರು.

ಜಯಕರ್ನಾಟಕ ನಾಟ್ಯ ಸಂಘ- ಸಿದ್ಧಾಪುರ, ಇವರು ಸ್ಥಳೀಯ ಮುನಿಸಿಪಲ್ ಹೈಸ್ಕೂಲ್ ಗರ್ಲ್ಸ ಹಾಸ್ಟೆಲ್ ಕಟ್ಟಡದ ಸಹಾಯಾರ್ಥವಾಗಿ 'ಬದತನದ ಭೂತ' ವೆಂಬ ನಾಟಕವನ್ನು ಶನಿವಾರ ರಾತ್ರಿ ಅಭಿನಯಿಸಿದರು.

ಕರ್ನಾಟಕ ಸಂಘ-ಇದರ ನೇತೃತ್ವದಲ್ಲಿ ಜರಗಿಸಲ್ಪಟ್ಟ ಸಪ್ತಾಹಿಕ ಕಾರ್ಯಕ್ರಮಗಳಲ್ಲಿ ಕೊನೆಯ ದಿನ ಶ್ರೀ. ಎಸ್. ಎಸ್. ಕಿಲ್ಲೆಯವರು 'ಕನಕದಾಸರೂ ಹರಿಭಕ್ತಿ ಸಾರವೂ' ಎಂಬ ವಿಷಯದಲ್ಲಿ ಸುಧೀರ್ಘ ಭಾಷಣವಿತ್ತರು.

ಮಜೂರರ ಸಭೆ—ಮಂಗಳೂರಿನ ಕೆಲಸಗಾರರ ನಿಯೋಜಿತ ಮುಷ್ಕರ ಇತ್ಯಾದಿಗಳ ಸಂಬಂಧವಾಗಿ ಉಡುಪಿಯ ಬೀಡಿ ಮತ್ತು ನೇಯಿಗೆ ಕೆಲಸಗಾರರ ಸಂಘಗಳ ಕಡೆಯಿಂದ ಇದೇ ತಾ.16ನೇ ಆದಿತ್ಯವಾರ ಮಜೂರರ ಮೆರವಣಿಗೆ ಮತ್ತು ರಥಬೀದಿಯಲ್ಲಿ ಸಾರ್ವಜನಿಕ ಸಭೆಜರಗಿ ಭಾಷಣಗಳಾದುವು.

"ರಂಗಭೂಮಿ"ನಾಟಕದ ಕುರಿತು-- ತಾರೀಕು 4ನೇ ಜನವರಿ 1946ರ "ಕಂಠೀರವ" ಪತ್ರಿಕೆಯಲ್ಲಿನ ಪತ್ರವ್ಯವಹಾರವನ್ನು ಕಂಡಮೇಲೆ ಈ ವಿಷಯವನ್ನು ತಿಳಿಯಪಡಿಸುವ ಆಗತ್ಯವು ನನಗೆ ಕಂಡುಬಂದಿದೆ. "ಅಭಿನಯಕಾರರ ದೌರ್ಬಲ್ಯದಿಂದ ನಾಟಕಕಾರರ ಅವಹೇಳನವಾಗುತಿದೆ ಎಂಬುದು ಆದರಿಂದ ಸ್ಪಷ್ಟವಾಗುತಿದೆ. ಆ ಕಾರಣ ನಾಟಕದ ಕೊಲೆಯಾಗಬಾರದೆಂಬ ಹಿತದೃಷ್ಟಿಯಿಂದ ಇನ್ನು ಮುಂದಕ್ಕೆ "ರಂಗ ಭೂಮಿ" ನಾಟಕವನ್ನು ಅಭಿನಯಿಸುವ ಯಾವ ಮಹನೀಯರಾದರೂ ನಾಟಕಕಾರರ ಅಥವಾ ಪ್ರಕಾಶಕರ (ಕಿರಿಯರ ಪ್ರಪಂಚ, ಉಡುಪಿ.) ಸಲಹೆಯೊಂದಿಗೆ ಅದರ ಉದ್ದೇಶದ ಅರಿವು ಮಾಡಿಕೊಂಡು ನಾಟ್ಯಸೇವೆಯನ್ನು ಸಲಿಸಬೇಕೆಂಬ ವಿಚಾರವನ್ನು ಈ ಮೂಲಕ ಒತ್ತಿ ಹೇಳಲಿರುವೆನು. ಇದರಿಂದ ಆ ನಾಟಕದ ಸದುದ್ದೇಶವು ಸಾಧಿಸಿದಂತಾಗಿ ಜನತಾ ರಂಗಭೂಮಿಯು ಬೆಳೆಯಬಹುದೆಂಬುದು ನನ್ನ ಭರವಸೆ.

ಯಸ್ ವೆಂಕಟರಾಜ.

ಹರಿಜನ ಸೇವಕ ಸಂಘ, ಉಡುಪಿ

ಇವರ ಮಹಾಸಭೆಯು ಇದೇ ತಾ 26ನೇ ಶನಿವಾರ ಸಂಜೆ 5 30ಕ್ಕೆ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಜರಗಲಿರುವುದೆಂದೂ ಆದಕ್ಕೆ ಸಂಘದ ಸದಸ್ಯರೆಲ್ಲರೂ ದಯಮಾಡಿ ತಪ್ಪದೆ ಬರಬೇಕೆಂದೂ ಜಿಲ್ಲಾ ಹರಿಜನ ಸೇವಕ ಶ್ರೀ ಎಸ್. ಎಸ್. ಕಿಲ್ಲೆಯವರು ವಿನಂತಿಸುತ್ತಾರೆ.

ಮಣಿಪಾಲ—ಇಲ್ಲಿಯ ನೇಕಾರರ ಸಭೆಯೊಂದು ತಾ 16-1-46ರಲ್ಲಿ ಮಣಿಪಾಲದಲ್ಲಿ ಶ್ರೀ. ಪಿ. ಶ್ರೀನಿವಾಸಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ಸಭೆಯ ಉದ್ದೇಶವನ್ನು ವಿವರಿಸಿ ದೇಶದ ಮತ್ತು ಕೆಲಸಗಾರರ ಉತ್ಪಾದನಗೂ, ಸ್ವಾತಂತ್ರ್ಯಕ್ಕೂ ಹೋರಾಡುತ್ತಿರುವ ದೇಶದ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸಿನ ಧ್ಯೇಯಕ್ಕನುಸಾರವಾಗಿ ಕೆಲಸಗಾರರ ಒಂದು ಸಂಘವನ್ನು ಸ್ಥಾಪಿಸಿ, ಧನಿ ಮತ್ತು ಕೆಲಸಗಾರರು ಸೌಹಾರ್ದದಿಂದ ವರ್ತಿಸುವದರಿಂದಲೇ ಮಾಲಕರ ಮತ್ತು ಕೆಲಸಗಾರರ ಏಳಿಗೆಯೊಂದೂ ಮತ್ತು ಕಾಂಗ್ರೆಸಿನ ಧ್ಯೇಯವೇ ತಮ್ಮ ಧ್ಯೇಯವಾಗಿರಬೇಕೆಂದೂ ಹೇಳಿದರು. ಅನಂತರ ಶ್ರೀ. ಎ. ಜಿ. ಆಲ್ವೆಯವರು ಸಂಘದ ಉದ್ದೇಶ ಮತ್ತು ನಿಯಮಗಳನ್ನು ವಿವರಿಸುತ್ತಾ ಸಂಘವು ಕೆಲಸಗಾರರಿಗೆ ಧರ್ಮಾರ್ಥ ಚಿಕಿತ್ಸೆ, ಮಕ್ಕಳವಿದ್ಯಾಭ್ಯಾಸ, ಕುಟುಂಬದ ಬಾಣಂತಿತನದ ವೆಚ್ಚ ಮೊದಲಾದ ಇತರ ಜೀವನೋಪಯುಕ್ತ ಸೌಕರ್ಯಗಳನ್ನು ಕಲ್ಪಿಸಿಕೊಡುವುದೆಂದು ಹೇಳಿದ ಮೇಲೆ "ಮಣಿಪಾಲ ನೇಕಾರರ ಸಂಘ"ವೆಂಬ ಹೆಸರಿನ ಸಂಘ ಸ್ಥಾಪನೆಯಾಗಿ ಸಭೆ ಚದರಿತು.

ಪುತ್ತೂರು—ಕವಿಭೂಷಣ ಶ್ರೀ ಕೆ. ಪಿ. ವೆಂಕಪ್ಪಶೆಟ್ಟರ ಷಷ್ಟ್ಯಬ್ದ ಪೂರ್ತಿ ಆಚರಣಾ ಸಮಾರಂಭವು ಸ್ಥಳೀಯ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ವಠಾರದಲ್ಲಿ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿ ಬಿ. ಎ. ತಹಸಿಲ್ದಾರ್, ಇವರ ಅಧ್ಯಕ್ಷತೆಯಲ್ಲಿ ತಾ. 21ರಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಶೆಟ್ರ ಕಾರ್ಯಚಟುವಟಿಕೆಗಳ ಕುರಿತು ಶ್ರೀಗಳಾದ ಎಚ್. ಗಣಪತಿರಾವ್, ಶಂಭು ಶರ್ಮ, ಡಾ। ಕೃಷ್ಣಭಟ್ಟ, ಮೌಲನಾ ಎಫ್. ಎಚ್. ಒಡೆಯರ್ ಹಾಗೂ ಶ್ರೀ ಚತ್ರಪ್ಪ ರೈ ಇವರ ಅಭಿನಂದನಾಪರವಾದ ಭಾಷಣಗಳಾದುವು. ಪ್ರಾರಂಭದಲ್ಲಿ ನೆರೆದ ಸಭಿಕರೆಲ್ಲರಿಗೂ ಫಲಾಹಾರದ ಏರ್ಪಾಡು ನಡೆದಿತ್ತು. ಸಭಾಧ್ಯಕ್ಷರ ಸಮಯೋಚಿತ ಭಾಷಣದೊಡನೆ ಸಭಾಂತ್ಯವಾಯಿತು.

ಇನ್ನಂಜೆ—ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನದ ಉದ್ಘಾಟನೆಯು ತಾ. 20-1-46ರಲ್ಲಿ ಶ್ರೀ। ಕೆ. ಸದಾನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರನ್ನು ಮೆರವಣಿಗೆಯಿಂದ ಕರೆತರಲಾಯಿತು. ಶ್ರೀ। ಸೀತಾರಾಮ ಭೋರೆಬಲ್ಲಾಳರು ಸ್ವಾಗತಭಾಷಣ ಮಾಡಿದರು. ಶ್ರೀ। ಕುರುಕಾಲು ಗಣಪಯ್ಯ ಶೆಟ್ಟರು ವಿದ್ಯಾರ್ಥಿ ಭವನದ ವರದಿಯನ್ನು ಒಪ್ಪಿಸಿ, ಮುಂದಣ ಕಾರ್ಯಯೋಜನೆಯನ್ನು ಪ್ರಸ್ತಾಪಿಸಿದರು. ಸಮಾರಂಭಕ್ಕೆ ಸಭಿಕರಲ್ಲಿ ಹಲವರು ಶುಭವನ್ನು ಕೋರಿ ಮಾತನಾಡಿದರು. ಶ್ರೀ। ಬಿ. ಕೆ. ಬಾಬುಶೆಟ್ಟಿಯವರು ಕೃತಜ್ಞತೆಯನ್ನರ್ಪಿಸಿದರು. ಅಧ್ಯಕ್ಷ ಶ್ರೀ। ಸದಾನಂದ ಹೆಗ್ಡೆಯವರು ತಮ್ಮ ಭಾಷಣದಲ್ಲಿ ಹಲವು ಉತ್ತಮ ಸಲಹೆ ಸೂಚನೆಗಳನ್ನಿತ್ತರು. ರಾತ್ರಿ ಉಡುಪಿಯ ಯಕ್ಷಗಾನ ಕಲಾ ಸಮಿತಿಯವರು ಉತ್ತಮ ರೀತಿಯಲ್ಲಿ "ಕರ್ಣಪರ್ವ" ಯಕ್ಷಗಾನ ಸೇವೆ ನಡೆಸಿದರು.

"ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ"

ಪುರೋಹಿತ ಶ್ವಾಸಹಾರಿ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ಗುಣಮುಖ ಇದ್ದ ಅದನ್ನು ಬೇರುಸಹಿತ ಕಿತ್ತು ನಿರ್ಮೂಲನ ಮಾಡುವದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ಕಡಿಮೆಯಾಗುವದು, ಹೊಟ್ಟೆ ದಸನ ಗುಣವು, ಪಚನಶಕ್ತಿಯೂ ಹೆಚ್ಚುವದು; ಶ್ವಾಸನಳಿಗಳು ಗಟ್ಟಿಯಾಗುವವು. ಈ ಮೇಲೆ ದಮ್ಮು ಮರಳಿ ಬರುವದಿಲ್ಲ.

ದಮ್ಮು, ಕೆಮ್ಮು, ಬೆನ್ನು ನೋವು, ಗಂಟಲು ಕೆರೆತ, ಕಫ ಇವುಗಳಿಗೆ ಪುರೋಹಿತ ಶ್ವಾಸಹಾರಿ ಪ್ಲೇನ (ಪ್ಲೇನ್) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಧಿಕ ಉಷ್ಣತೆಯ ಬಳಲಿಕೆ ತಮ್ಮ ದಮ್ಮು ಕಂಪೌಂಡ (ಕಂಪೌಂಡ್) ತೆಗೆದುಕೊಳ್ಳಬೇಕು.

ಎಲ್ಲ ದೊಡ್ಡ ಔಷಧಿ ಅಂಗಡಿಗಳಲ್ಲಿ ದೊರೆಯುವದು.

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಪುರೋಹಿತ ಫೊಮ್ಪರ್ ಸ್ಟೋರ್ಸ್ ಮಂಗಳೂರು, ಕೊಲ್ಹಾಪುರ, ಮೈಸೂರು.

ಮುಂಬಯಿ ಸೋಲ ಏಜಂಟರು:

ವನಮಾಲೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

ಬಂಟ್ಸ್ ಮಿಲಿಟ್ರಿ ಕ್ಲಬ್,

ಕುಂದಾಪುರ.

ರುಚಿ ಬಿಸಿ ರುಚಿ

ನವೀನ ವ್ಯವಸ್ಥೆ! ನವನಾಗರಿಕತೆಯ ತಯಾರಿ!!

ಆಧುನಿಕ ರೀತಿಯ ಊಟೋಪಚಾರ!!!

ಒಮ್ಮೆ ಸಂದರ್ಶಿಸಿದಲ್ಲಿ ಎಂದೆಂದಿಗೂ ಮರೆಯಲಾರದ ಸಂಗತಿ.

ಕೋಳಿ ಬಿರಿಯಾನಿಯು ನಮ್ಮ ಒಂದು 'ಸ್ಪೆಶೆಲಿಟಿ'.

ಹೊರಗಿನ ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವದು.

ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ.

ಪ್ರೊ:— ವಿ. ಕೃಷ್ಣಪ್ಪ ಸೆಟ್ಟಿ.

BUNTS MILITARY CLUB,

COONDAPOOR, S. K.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಲಕ್ಷಿಸಿ ತಯಾರಿಸಲ್ಪಟ್ಟ ಅನೋಖಾ ಹಾಗೂ ಮಧುರವಾದ ಎಸ್. ಯಿಸಿ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಆ ಔಷಧಿ ಉಪಯೋಗಗಳು ಹೆಚ್ಚು ಕಡಿಮೆ ಎಂದಿನವರೆಗೂ ಬರುವವು. ಅಂದರೆ ಕೇವಲ ೧ ಡಬ್ಬಾಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

NOTICE BY SUBSTITUTED-SERVICE

In the Court of the District Munsiff of Mangalore.

Original Suit No. 243/1945.

Between: —

Laxminarayana Pejathaya
-Plaintiff.

and

Narahari Rao & Others
—Defendants

To· Defts. 8, 11 & 12 only-

D8· Mukhyaprana S/o K· Ananthayya, C/o P. Babu Rao, Laxmi Cafe Coffee club, Cadapa.

D11· Gangadhara S/o K· Ananthayya, resides at Mangalore Street, Karnataka Book Stall No 3· Bombay.

D12· K· Ananthayya son of Subba Rao, resides at Vyasa Amba Bhavan, Bangalore Street, Bellary Town.

Please take notice that the abovenamed plaintiff has instituted a suit against you for recovery of mortgage amount of Rs. 551-8-0 as per mortgage deed dated 7-7-1939, and the same stands posted to 5-2-1946 for your appearance. If you fail to appear on the above-date the said suit will be decided in your absence.

Mangalore, 17-1-1946 } B. V. Krishnayya, Advocate for Plaintiff.

ಕರ್ನಾಟಕ ಪ್ರಾಂತ್ಯದ ಆವಶ್ಯಕತೆ

ಕರ್ನಾಟಕಕ್ಕೊಂದು ಪ್ರತ್ಯೇಕ ಪ್ರಾಂತ್ಯ ರಚನೆಯಾಗಬೇಕೆಂಬುದು ಕನ್ನಡಿಗರ ದೀರ್ಘ ಕಾಲದ ಬಯಕೆ. ಸುಮಾರು ನೂರು ವರುಷಗಳಿಂದ ಅದಕ್ಕಾಗಿ ಚಳವಳ ನಡೆಯುತ್ತಿದೆ. ಆದರೆ ಇದುವರೆಗೆ ಸಾಗಿದ ಪಥದ ಮೇಲಿಂದ ಹೇಳುವದಾದರೆ ಅದರಲ್ಲಿ ಸಾಕಷ್ಟು ಶಕ್ತಿ ಇದ್ದಂತೆ ತೋರುವದಿಲ್ಲ. ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿರುವ ಕರ್ನಾಟಕ ಜಿಲ್ಲೆಗಳನ್ನು ಒಂದುಗೂಡಿಸಿ ಒಂದು ಪ್ರತ್ಯೇಕ ಬ್ರಿಟಿಷ್ ಕರ್ನಾಟಕದ ನಿರ್ಮಾಣವಾಗಬೇಕೆಂಬುದು ಹಲವು ಕಾರಣಗಳ ಮೇಲಿಂದ ಅತ್ಯಾವಶ್ಯಕವಿರುವಾಗ ಕರ್ನಾಟಕದ ಈ ಕೂಗು ಅರಣ್ಯರೋದನವಾಗಿರುವದು ದುರ್ದೈವವೇ ಸರಿ.

ಕೆಲವು ಜಿಲ್ಲೆಗಳು ಬೊಂಬಾಯಿ ಪ್ರಾಂತ್ಯದಲ್ಲಿ, ಇನ್ನು ಕೆಲವು ಮದ್ರಾಸ್ ಪ್ರಾಂತ್ಯದಲ್ಲಿ ವಿಂಗಡಿಸಲ್ಪಟ್ಟು ಬಿದ್ದಿರುವ ಕರ್ನಾಟಕವು ಆ ಎರಡರಿಂದಲೂ ಮಲತಾಯಿಯ ಆರೈಕೆ ಪಡೆಯುವ ದುರ್ದಸೆಗೊಳಗಾಗಿದೆ. ಇವೆರಡರ ರಾಜಧಾನಿಗಳೂ ಪರಸ್ಪರ ಸಂಬಂಧಪಟ್ಟ ಜಿಲ್ಲೆಗಳಿಗೆ 300ರಿಂದ 600 ಮೈಲುಗಳಷ್ಟು ದೂರದಲ್ಲಿವೆ. 175 ಮಂದಿ ಸದಸ್ಯರುಳ್ಳ ಬೊಂಬಾಯಿ ಎಸೆಂಬ್ಲಿಯಲ್ಲಿ ಕನ್ನಡಿಗರಿರುವದು 32 ಮಂದಿ; 215 ಮೆಂಬರರುಳ್ಳ ಮದ್ರಾಸ್ ಎಸೆಂಬ್ಲಿಯಲ್ಲಿ ಕನ್ನಡಿಗ ಸದಸ್ಯರ ಸಂಖ್ಯೆ 16. ಈ ಸದಸ್ಯರು ಒಂದೊಮ್ಮೆಗೆ ಬೊಬ್ಬೆ ಹೊಡೆದರೂ ಈ ಅಲ್ಪ ಸಂಖ್ಯಾಕರ ಕ್ಷೀಣ ಸ್ವರಗಳು ಆ ಎಸೆಂಬ್ಲಿಗಳಲ್ಲಿ ಕೇಳಿಬರುವದಾದರೂ ಹೇಗೆ?

ಇವೆರಡು ಸರಕಾರಗಳ ಯುದ್ಧೋತ್ತರ ಯೋಜನೆಗಳಲ್ಲಾದರೂ ಕರ್ನಾಟಕದಲ್ಲಿ ಅಗತ್ಯವಿರುವ, ವೈದ್ಯಕೀಯ, ಪಶು ಸಂಬಂಧಿಕ, ಇಂಜಿನೀಯರಿಂಗ್ ಅಥವಾ ಬೇಸಾಯ ಕಾಲೇಜುಗಳನ್ನು ತೆರೆಯುವ ಇಲ್ಲವೇ ಹೈಡ್ರೋ ಎಲೆಕ್ಟ್ರಿಕ್ ಯೋಜನೆಗಳನ್ನು ಕೈಕೊಳ್ಳುವ ಯಾವುದೊಂದು ಸೂಚನೆಯೂ ಕಂಡುಬರುವದಿಲ್ಲ. ಕರ್ನಾಟಕದಲ್ಲಿ ಭೌಗೋಲಿಕ ಸೌಕರ್ಯಗಳು ಹಲವಿವೆ. ಆದರೆ ಭಟ್ಕಳ ಅಥವಾ ಮಲ್ಪೆಯ ಪ್ರಕೃತಿಸಿದ್ಧ ಮಹಾ ಬಂದರಗಳನ್ನು ಸುಧಾರಿಸುವ ಯೋಜನೆ ಯಾರಿಗಾದರೂ ಹೊಳೆದುದಿದೆಯೆ? ಬೇಸಾಯ ಸುಧಾರಣೆಗೆ ಅನಿವಾರ್ಯವಿರುವ ನೀರಾವರಿ ಕಟ್ಟೆಗಳ ಮತ್ತು ಅಣೆಕಟ್ಟುಗಳ ರಚನೆಯ ಆವಶ್ಯಕತೆಯನ್ನು ಮನಗಾಣಲು ಕಿರುಬೆರಳೆತ್ತಿದವರಿದ್ದಾರೆಯೆ? ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಸುಮಾರು 3000 ಎಕ್ರೆ ಭೂಮಿಯನ್ನು [illegible] ಮಾಡಲಾಗುವ 3 ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ತಯಾರಿಸಿ 12 ತಿಂಗಳ ಹಿಂದೆಯೇ ನಾನು ಒಪ್ಪಿಸಿದ್ದೆ. ಅದು ಇಷ್ಟರ ವರೆಗೆ ಬೆಳಕನ್ನೇ ಕಂಡಿಲ್ಲ.

ಮಧ್ವಾಚಾರ್ಯರು, ರಾಮಾನುಜಾಚಾರ್ಯರು, ಶಂಕರಾಚಾರ್ಯರಂಥವರ ಬೋಧನೆಗಳ ನೆಲ್ದಾಣವಾಗಿದ್ದ ಭೂಮಿ-ಕೀರ್ತಿ ಚಿರಂಜೀವಿಗಳಾದ ರನ್ನ, ಪೊನ್ನ, ಪಂಪ, ಲಕ್ಷ್ಮೀಶರಂಥಾ ಕವಿಪುಂಗವರನ್ನು ಹೆತ್ತ ಭೂಮಿ-ಅದಿಂದು ಎಂತಹ ಹೀನಾಯಮಾನ ಸ್ಥಿತಿಯಲ್ಲಿದೆಯೆಂದರೆ ತನ್ನದೆಂದು ಹೇಳಲಾಗುವ ಒಂದು ವಿಶ್ವವಿದ್ಯಾಲಯ ಕೂಡಾ ಅದಕ್ಕಿಲ್ಲ.

ಬೊಂಬಾಯಿ ಪ್ರಾಂತಿಕ ಟ್ರೇಡ್ ಯೂನಿಯನಿನ ಪ್ರಧಾನ ಕಾರ್ಯದರ್ಶಿ ಶ್ರೀ ದಿನಕರ ದೇಸಾಯಿಯವರಿಗೆ ಕರ್ನಾಟಕವು ಅತ್ಯಂತ ಋಣಿಯಾಗಿರಬೇಕು. ಅವರು, ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸರೊಡನೆ ಇತ್ತೀಚೆಗೆ ನಡೆಸಿದ್ದ ಸಂಭಾಷಣೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಆವಶ್ಯಕತೆಯನ್ನೂ, ಕನ್ನಡ ಜಿಲ್ಲೆಗಳು ಬೊಂಬಾಯಿ, ಮದ್ರಾಸ್, ಕೂರ್ಗ್‌ಗಳೊಳಗೆ ವಿಂಗಡಿಸಲ್ಪಟ್ಟು ಯಾವ ಕಡೆಯಿಂದಲೂ ಅವುಗಳಿಗೆ ನ್ಯಾಯ ದೊರೆಯದಿರುವದನ್ನೂ ಮನಗಾಣಿಸಿದ್ದರು. ತುಲನೆ ಮಾಡುವದಾದರೆ ಕರ್ನಾಟಕವು ವಿಸ್ತಾರದಲ್ಲಾಗಲೀ ಆರ್ಥಿಕ ಅನುಕೂಲತೆಯಲ್ಲಾಗಲೀ ಹೆಚ್ಚಿನ ಸ್ವತಂತ್ರ ಸಂಸ್ಥಾನ ಅಥವಾ ರಾಷ್ಟ್ರಗಳಿಗೆ ಹಿಂದಿಲ್ಲ. ಬ್ರಿಟಿಷ್ ಕರ್ನಾಟಕ ಪ್ರಾಂತ್ಯವು ಸ್ಕಾಟ್ಲೇಂಡಿಗಿಂತ ನೂರು ಪಾಲಷ್ಟು ದೊಡ್ಡದಿದೆ, ಬೆಲ್ಜಿಯಮಿನಷ್ಟೇ ಇದ್ದು ಇಂಗ್ಲಾಂಡಿನ ಸರೀ ಅರ್ಧದಷ್ಟಿದೆ. ಇನ್ನು ಅದರ ಉತ್ಪತ್ತಿಯ ಮಾತು ಈ ಪ್ರಾಂತ್ಯದ ಉತ್ಪತ್ತಿಯು ಕಾಶ್ಮೀರ, ತಿರುವಾಂಕೂರು, ಕೊಚ್ಚಿ ಮತ್ತು ಬಿಕಾನೀರಿನಂತಹ ಕೆಲವು ಸಂಸ್ಥಾನಗಳ ಉತ್ಪತ್ತಿಗಿಂತ ಹೆಚ್ಚಾಗುವದೆಂದು ಅಂದಾಜು ಮಾಡಲ್ಪಟ್ಟಿದೆ. ಇನ್ನು ಬ್ರಿಟಿಷ್ ಭಾರತದ ಪ್ರಾಂತ್ಯಗಳಾದ ಒರಿಸ್ಸಾ, ಸಿಂಧ್ ಅಥವಾ ಅಸ್ಸಾಮಿಗಿಂತ ಕರ್ನಾಟಕವು ಯಾವ ವಿಧದಲ್ಲೂ ಸಣ್ಣದಲ್ಲ.

ಬ್ರಿಟಿಷ್ ಪಾರ್ಲಿಮೆಂಟರೀ ಶಿಷ್ಟ ಮಂಡಲವು ಈ ತಿಂಗಳ ನಾಲ್ಕನೇ ವಾರದಲ್ಲಿ ಮದ್ರಾಸಿಗೆ ಬರಲಿದೆ. ಕರ್ನಾಟಕದ ಮುಖಂಡರು, ಮುಖ್ಯವಾಗಿ ಕರ್ನಾಟಕ ಏಕೀಕರಣ ನಾಯಕನೆಂದು ಪ್ರಸಿದ್ಧರಾದ ನಮ್ಮ ಶ್ರೀ ಮಾನ್ ಜನರಾಜ ಹೆಗ್ಡೆಯವರು, ಈ ಸುಸಂದರ್ಭವನ್ನು ಕಳಕೊಳ್ಳದೆ ಒಂದು ಡೆಪ್ಯುಟೇಶನ್ ಕೊಂಡುಹೋಗಿ, ಕ್ಷಿಪ್ರದಲ್ಲಿ ಹಾಗೂ ಅನಿವಾರ್ಯವಾಗಿ ಆಗಲೇಬೇಕಾದ ಕರ್ನಾಟಕ ಪ್ರಾಂತ್ಯ ರಚನೆಯ ಆವಶ್ಯಕತೆಯನ್ನು ಪಾರ್ಲಿಮೆಂಟರೀ ಸಮಿತಿಯವರಿಗೆ ಮುಂದಿಟ್ಟು ಮಾಡಲಾರರೆ?

—ಬಿ. ಸುಬ್ಬಣ್ಣ ಶೆಟ್ಟಿ,
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜತೆ ಕಾರ್ಯದರ್ಶಿ ಮತ್ತು ಕ. ಪ್ರಾಂ. ಕಾಂಗ್ರೆಸ್ ಕಮಿಟಿ ಸದಸ್ಯ.

ನಗರಸುದ್ದಿ

ಸೀಮೆಎಣ್ಣೆಯ ದರವು ಇದೇ ತಾ ೧ರಿಂದ ನಗರದೊಳಗೆ ಬಾಟ್ಲಿಗೆ ೦-೩-೦ ಯಂತಲೂ, ಹಳ್ಳಿಗೆ ಹರಡಿದ ನಗರದ ಹೊರವಲಯದಲ್ಲಿ ಬಾಟ್ಲಿಗೆ ೦-೩-೩ ಯೂ ಇರಬೇಕೆಂದು ಕಲೆಕ್ಟರರು ವಿಧಿಸಿದ್ದಾರೆ. ಅಂಗಡಿಗಳಿಗೆ ೧ ಬಾಟ್ಲಿಗಿಂತ ಜಾಸ್ತಿ ಸಿಗುವವರಿಗೆ ತುಸು ಕಡಿತವಿದೆ.

ಮಜೂರರ ಸಭೆ ತಾ. ೧೩ರಂದು ನಗರದ ಹಂಚು ಮತ್ತು ನೇಯಿಗೆ ಕಾರ್ಖಾನೆಗಳ ಮಜೂರರ ಸಭೆಯೊಂದು ಶ್ರೀ ಎಸ್ ಎಸ್ ಮೊಳ್ಯರ ಅಧ್ಯಕ್ಷತೆಯಲ್ಲಿ ನೆರೆತು ಪ್ರಾಂತೀಯ ಟ್ರೇಡ್ ಯೂನಿಯನ್ ಸಂಘದ ಕಾರ್ಯದರ್ಶಿಗಳು ಕೇರಳದ ಕೃಷ್ಣ ಪಿಳ್ಳೆ ಅವರು ಭಾಷಣವಿತ್ತರು. ಶ್ರೀಮತಿ ಮೋಜೆ ಪ್ರಿಟೊ ಅವರು ಮಾತನಾಡಿದರು. ೩ ತಿಂಗಳ ಬೋನಸ್ ಮೊದಲಾದ ಕೇಳಿಕೆಗಳನ್ನೊಳಗೊಂಡ ಮಜೂರರ ಕೇಳಿಕೆಗಳನ್ನು ವಿವರಿಸಲಾಯಿತು. ತಾ ೧೮ರಂದು ಮಾಲಕರಿಗೊಪ್ಪಿಸಿದ ಕೇಳಿಕೆಗಳನ್ನು ಮನ್ನಿಸದಿದ್ದರೆ ಇದೇ ತಾ ೨೦ರಿಂದ ನಗರದ ಹಂಚಿನ ಹಾಗೂ ಮಗ್ಗದ ಮಜೂರರು ಮುಷ್ಕರ ಹೂಡಲು ಪ್ರಥಸಂಕಲ್ಪ ಮಾಡಿದಂತೆ ತೋರುತ್ತಿದೆ.

ಕೆ ಎಂ ಎಸ್ ಸುಧಾರಕ ಸಂಘದ ಸಹಾಯಾರ್ಥವಾಗಿ ಏರ್ಪಟ್ಟ "ಬ್ಲಾಕ್ ಪ್ಯಾಲೆ" ಎಂಬ ಸಾಮಾಜಿಕ ನಾಟಕವು ಶ್ರೀಮಾನ್ ಎಮ್ ಬಿ ಶಂಕರ ರಾವ್, ಬಿ ಎ, ಡಿಸ್ಟ್ರಿಕ್ಟ್ ಸಕ್ಷೆಸ್ ಮತ್ತು ಡಿಸ್ಟ್ರಿಕ್ಟ್ ರೇಶನಿಂಗ್ [illegible] ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಶ್ರೀ ಹು ಬೀಮರಾಯರು ಸಂಘದ ಪರವಾಗಿ ಅಧ್ಯಕ್ಷರನ್ನು ಅಧ್ಯಕ್ಷಸ್ಥಾನ ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. ಹಾರವನ್ನರ್ಪಿಸಿದ ಮೇಲೆ—ಅಧ್ಯಕ್ಷರು, ಕನ್ನಡ ಭಾಷೆ ಮತ್ತು ಸಂಗೀತದ ಕುರಿತು ಮಾತನಾಡಿ ಸುಧಾರಕ ಸಂಘದ ಸಹಾಯಾರ್ಥವಾಗಿ ಏರ್ಪಟ್ಟ ಈ ನಾಟಕವು ಯಶಸ್ವಿಯಾಗುವಂತೆ ಹರಸಿದರು. ಆ ಮೇಲೆ ನಾಟಕವು ಅಭಿನಯಿಸಲ್ಪಟ್ಟಿತು.

ಜಿಲ್ಲಾ ಬೋರ್ಡ್ ಮೀಟಿಂಗ್—ನಮ್ಮ ಜಿಲ್ಲಾ ಬೋರ್ಡ್ ಸ್ಪೆಶಲ್ ಮೀಟಿಂಗು ಇದೇ ಬರುವ ತಾ ೩೧ರಲ್ಲಿ ಬೆಳಿಗ್ಗೆ ಗಂಟೆ ೧೧ ಕ್ಕೆ ಅವರ ಕಾರ್ಯಾಲಯದಲ್ಲಿ ಜರಗುವುದಾಗಿದೆ.

ಅಂಚೆವಾಹಕರ ಮತ್ತು ಕಡಿಮೆ ಸಂಬಳದ ಸಿಬಂಧಿಯವರ ಸಭೆ-ತಾ. 25 1 1946ನೇ ಶುಕ್ರವಾರ ಗಂಟೆ 5 30 ಕ್ಕೆ ಹಂಪನ್‌ಕಟ್ಟೆಯಲ್ಲಿರುವ ಸಂಸಾರ ಆಫೀಸಿನಲ್ಲಿ ಸ್ಪೆಶಲ್ ಮೀಟಿಂಗ್ ಜರಗಿಸಲ್ಪಡುವುದರಿಂದ ಸಂಘದ ಎಲ್ಲಾ ಮೆಂಬರರು ಹಾಜರಿರಬೇಕಾಗಿ ವಿನಂತಿ. 26ನೇ ಸ್ವಾತಂತ್ರ್ಯ ದಿನ ಹತ್ತು ನೆಲ್ಲೂರು ಮುಖ್ಯ ಠರಾವುಗಳು ಪಾಸು ಮಾಡುವುದು. ಮತ್ತು ಅಖಿಲ ಭಾರತ ಸಂಘದ ಅಂಚೆವಾಹಕರ ಮಜದೂರ ಎಂಬ ಪತ್ರಿಕೆಯನ್ನು ಹೊರಡಿಸುವದು ಮತ್ತು ಇತರ ಸಂಗತಿಗಳು ಸಭೆಯ ಮುಂದೆ ಬರುವವು.

ಮುಷ್ಕರಗಳ ಕುರಿತು ಕೊಂಗ್ರೆಸಿಗರ ಸಲಹೆ—ಮುಷ್ಕರಗಳ ಕುರಿತು ಸ್ವದೇಶಾಭಿಮಾನಿ'ಯ ಬಾತ್ಮೀದಾರರು ಸ್ಥಳೀಯ ಪ್ರಮುಖ ಕೊಂಗ್ರೆಸ್ ಮುಖಂಡರನ್ನು ಭೇಟಿಯಾದಾಗ ಅವರು "ಮುಷ್ಕರಗಳು ಈ ಹಮುವಾಹಿನ ಮಜೂರ ಸಂಘದವರ ದರಿಯ ಸೋಲ ಮಾಡಲ್ಪಟ್ಟರೆ ಯಶಸ್ವಿಯಾಗುವವು. ನಮ್ಮ ಊರಿನ ಮಜೂರರಿಗೆ ಈಗ ಹೆಚ್ಚು ಕಡಿಮೆ ಯುದ್ಧ ಪೂರ್ವಕ್ಕಿಂತ ನಾಲ್ಕು ಪಾಲಷ್ಟು ಹೆಚ್ಚು ದೊರೆಯುತ್ತದೆ. ಅವರ ಸಂಸಾರ ಜೀವನವು ಈಗಿನಷ್ಟು ತೃಪ್ತಿಕರವಾಗಿ ಎಂದೂ ನಡೆದುದಿಲ್ಲ. ಇಂತಹ ಮುಷ್ಕರದಿಂದ ಮಜೂರ ಜೀವನದ ನಯವಾದ ಮತ್ತು ಒಂದು ತೃಪ್ತಿಕರ ಮಟ್ಟಕ್ಕೆ ಮುಟ್ಟಿದ ಪರಿಸ್ಥಿತಿಯನ್ನು ಕೆಡಿಸಿಬಿಟ್ಟಂತಾಗುವುದೇ ಹೊರತು ಬೇರೇನೂ ಆಗಲಾರದು. [illegible] ಮುಷ್ಕರವಾದರೇನು [illegible] ಮು ಪ್ರಶ್ನಿಸಲ್ಪಟ್ಟಾಗ ಅವರು [illegible]

[illegible] (ಸ್ವದೇಶಾಭಿಮಾನಿ)

[illegible] ಸಮ್ಮೇಳನಕ್ಕೆ ಪ್ರತಿನಿಧಿ [illegible]

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1 —12—0

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ 5—8—0, ½ ಪೌಂಡು ರೂ 3—0—0

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0 ½ ರಾತ್ಲು 5-4-0, ¼ ರಾತ್ಲು 2 12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್. —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ [illegible] ರೋಗಕ್ಕೆ ತಕ್ಕಂತಹ ಔಷಧಿ ರವಾನಿಸಲಾಗುವದು. (1) ಉಡುಪಿ ಏಜಂಟರು — [illegible] ಬಾಳ್ ಡಿಪೊ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 193 [illegible] ರೋಡ್ ಜಿ ಐ ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಪಡು ತೋನ್ಸೆ–ಇಲ್ಲಿಯ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದ ಸಹಾಯಾರ್ಥವಾಗಿ ಈಗ ಕಾನ್ಪೂರಲಿನಲ್ಲಿರುವ ಶ್ರೀ. ಟಿ. ರಾಜಗೋಪಾಲಾಚಾರ್ಯರು ರುಪಾಯಿ 100-0-0ನ್ನು ದಾನವಾಗಿತ್ತಿರುವುದು ಸ್ತುತ್ಯಾರ್ಹವಾದುದು.

ಮೂಲ್ಕಿ–ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಪರಿಷತ್ತು ಸಂಬಂಧ ಏರ್ಪಡಿಸಿದ ಸ್ವಾಗತ ಕಮಿಟಿಗೆ ಧನ ಸಹಾಯವಿತ್ತ ಮಹನೀಯರುಗಳ ಹೆಸರು ಮತ್ತು ಮೊಬಲಗು ಮುಂದುವರಿಸಿದುದು. ಕುಡೆತ್ತೂರು ಗುತ್ತು ಮಹಾಬಲ ಸೆಟ್ರು ರೂ 25, ಮೂಲ್ಕಿ ಚಂದಯ್ಯ ಸೆಟ್ರು ರೂ 25, ನಡಿಸಾಲು ಹೊಸಮನೆ ಬಾಬು ಸೆಟ್ರು ರೂ 25, ಮೂಲ್ಕಿ ಪಡುಮನೆ ಮಂಜಯ್ಯ ಸೆಟ್ರು ರೂ 25, ಕುಬೆವೂರು ದೊಡ್ಡಮನೆ ಶಂಕರ ಸೆಟ್ರು ರೂ 25, ಕೆ. ಕೃಷ್ಣ ಸೆಟ್ರು Joint I. J. of Police Madras ರೂ 25, ಮೂಲ್ಕಿ ದೊಡ್ಡಮನೆ ಪುಷ್ಪಾಪತಿ ಕೆ ಸೆಟ್ರು, ರೂ 25, ಮೂಲ್ಕಿ ಸಣ್ಣ ಮನೆ ದೊಂಬ ಸೆಟ್ರು ರೂ 25, ದೆಪ್ಪುಣಿ ಗುತ್ತು ದಾಸು ಸೆಟ್ರು ರೂ 25, ಕಡಂದಲೆ ನಾರಾಯಣ ಸೆಟ್ರು ರೂ 25, ಡಾಕ್ಟರ್ ಟಿ. ಎನ್. ಕೆ. ನಂಬಿಯಾರ ಫಲಿಮಾರು ರೂ 25, ಕೊಟ್ರಪಾಡಿ ಅನಂತ ಸೆಟ್ರು ರೂ 25, ಮೂಲ್ಕಿ ಹೊಸಮನೆ ಸುಂದರರಾಮ ಸೆಟ್ರು ರೂ. 25, ಜುಮ್ಲಾ ರೂ 325-0-0. ಈ ಮುಂಚಿನ ವಸೂಲಿ 880-0-0. ಇಲ್ಲರೆ ವಸೂಲಿ 472–0—0, ಒಟ್ಟು ಜುಮ್ಲಾ 1677 –0—0.

ಸೂಡ–ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ಹೆತ್ತವರ ಕೂಟದ ಸಭೆಯು ತಾ 18-1-46ರಲ್ಲಿ ಶ್ರೀ. ಯಸ್. ಶಾಮರಾಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಮಕ್ಕಳ ವಿವಿಧ ಚಟುವಟಿಕೆ, ಇನಾಂ ಹಂಚೋಣ, ಉಪಹಾರ, ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ಅಲೆವೂರು–ಅಲೆವೂರು ಸುಬೋಧಿನಿ ಶಾಲೆಗೋಸ್ಕರ ಧರ್ಮಾರ್ಥ ಕಟ್ಟಡ ಕಟ್ಟಿಸಿ ಕೊಟ್ಟವರು ಕೆ. ..ಜರಾಯರೆಂದು ತಾ. 10ರ ಸಂಚಿಕೆಯಲ್ಲಿ ತಪ್ಪಾಗಿ ಪ್ರಕಟವಾಗಿದೆ. ಅದು ಕೆ. ರಂಗರಾಯರೆಂದಾಗಬೇಕು. ಹಳೆ ವಿದ್ಯಾರ್ಥಿ ಶ್ರೀ. ಎ. ಲಕ್ಷ್ಮೀನಾರಾಯಣ ಭಟ್ಟ B A, L.T. ಇವರು ಶಾಲಾಭ್ಯುದಯ ಭಾಷಣ ಮಾಡಿದ್ದರು. ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಹುಬ್ಬಳ್ಳಿ

ಪ್ರಕಟನೆ

ಕಾಂಗ್ರೆಸ್ ಚುನಾವಣೆ ಪಂಚಮಂಡಲ

ಪ್ರಾಂತಿಕ ಚುನಾವಣೆ ಪಂಚಮಂಡಲದ ಸಭೆಯು ಹುಬ್ಬಳ್ಳಿಯ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಕಚೇರಿಯಲ್ಲಿ ಶ್ರೀ ಎ. ದಾಮೋದರ ಪೈ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಉಳಿದ ಇಬ್ಬರು ಸದಸ್ಯರಾದ ಶ್ರೀ। ಸಿ. ವ್ಹಿ. ಓಕೇಮರ ಹಾಗೂ ಶ್ರೀ। ಗುರುರಾವ ವಾಳ್ವೇಕರ ಇವರು ಹಾಜರಿದ್ದರು.

ಪ್ರಾಂತಿಕ ಚುನಾವಣೆ ಪಂಚಮಂಡಲದ ಕಚೇರಿಯು ಶ್ರೀ। ದಾಮೋದರಪೈ ಇವರ ಕಡೆ ಇರಬೇಕೆಂದು ಗೊತ್ತಾಯಿತು (ವಿಳಾಸ). ಅಧ್ಯಕ್ಷ ಶ್ರೀಯುತ ಎ. ದಾಮೋದರ ಪೈ, ಬಿ.ಎ.ಬಿ.ಎಲ್, ಕ್ಯಾನರಾ ಹ್ಯಾಸ್ಕೂಲ ರೋಡ, ಮಂಗಳೂರ.

ಮೈಸೂರು ಸಂಸ್ಥಾನ ಮತ್ತು ಬೆಂಗಳೂರ ದಂಡು ವಿಭಾಗಗಳಿಗೆ ಜಿಲ್ಲಾ ಪಂಚ ಮಂಡಲಗಳನ್ನು ನೇಮಿಸಲು ಅಧ್ಯಕ್ಷ ಶ್ರೀ. ಎ.ದಾಮೋದರ ಪೈಯವರಿಗೆ ಅಧಿಕಾರ ಕೊಡಲಾಯಿತು. ಮತ್ತು ಈ ಕಳಗಿನಂತೆ ಜಿಲ್ಲಾ ಪಂಚ ಮಂಡಲಗಳು ನೇಮಿಸಲ್ಪಟ್ಟವು.

1 ಬೆಳಗಾವಿ ಜಿಲ್ಲಾ ೧. ಬಿ.ಎನ್.ದಾತಾರ, ಎಮ್.ಎ. ಎಲ್.ಎಲ್.ಬಿ, ಬೆಳಗಾವ (ಕಾರ್ಯವಾಹಕರು) ೨ ಶ್ರೀ। ಸಿ. ಎಸ್. ತುಪಾಕಿ, ಹುಕ್ಕೇರಿ. ೩. ಶ್ರೀ।ಎಮ್.ಎಸ್. ಹೊಸಮನಿ ಮಾನಪುರ.

2. ಧಾರವಾಡ ಜಿಲ್ಲಾ ೧. ಶ್ರೀ। ಕೆ. ಎ. ವೆಂಕಟರಾಮಯ್ಯ, ಎ. ಬಿ. ಎಸ್ ಎ. ಹುಬ್ಬಳ್ಳಿ, (ಕಾರ್ಯವಾಹಕರು) ೨. ಶ್ರೀ।ವಿ.ಜಿ. ಜಮಖಂಡಿ, ಎಮ್. ಎ. ಎಲ್.ಎಲ್. ಬಿ. ಧಾರವಾಡ ೩. ಶ್ರೀ। ಸಿ. ಎಸ್. ಹುಲಕೋಟಿ, ವಕೀಲ, ಗದಗ.

3. ಬಳ್ಳಾರಿ ಜಿಲ್ಲಾ ೧. ಶ್ರೀ। ರಾಮತರುಪ್ಪ ಎಜಮಾನ ಬಳ್ಳಾರಿ(ಕಾರ್ಯವಾಹಕರು) ೨. ಶ್ರೀ। ಚನ್ನಪ್ಪ ಚಿಲ್ಲದ ಹೊಸಪೇಟೆ. ೩. ಶ್ರೀ. ಶಿರಸಪ್ಪ ಇಜಾರಿ ಹರಪನಹಳ್ಳಿ.

4. ಉತ್ತರಕನ್ನಡ ಜಿಲ್ಲಾ ೧. ಶ್ರೀ। ಎಸ್. ಕೆ. ಕಲ್ಲಾಪೂರ, ವಕೀಲರು ಹೊನ್ನಾವರ(ಕಾರ್ಯವಾಹಕರು) ೨. ಶ್ರೀ। ಎನ್. ಜಿ. ನಾಡಕರಣಿ, ಬಿ. ಎಜಿ. ಅಂಕೋಲಾ ೩. ಡಾ। ಡಿ. ಎಮ್. ನಾಡಕರ್ಣಿ, ಅಂಕೋಲಾ

5. ವಿಜಾಪುರ ಜಿಲ್ಲಾ ೧. ಶ್ರೀ ಅಪ್ಪ ಅನಂತಾಚಾರ್ಯ, ವಿಜಾಪೂರ (ಕಾರ್ಯವಾಹಕರು) ೨. ಶ್ರೀ। ಬಿ. ಎಮ್. ಪಟ್ಟಣಶೆಟ್ಟಿ, ರಾಂತಿಸದನ, ವಿಜಾಪೂರ ೩ ಶ್ರೀ। ಮುರಿಗೆಯ್ಯಾ ಜಂಗಿನ ಬಾಗಲಕೋಟ

6. ದಕ್ಷಿಣಕನ್ನಡ ಜಿಲ್ಲಾ ಶ್ರೀ। ಎಮ್. ಮಾಧವಪ್ರಭು ವಕೀಲ, ಮಂಗಳೂರ.

7. ಕೊಡಗು ಜಿಲ್ಲಾ ೧. ಶ್ರೀ। ಸಿ. ವಿ ನಾರಾಯಣ ವಕೀಲ ಮಡಿಕೇರಿ

ಚನಬಸಪ್ಪ ಅಂಬಲಿ,
ಪ್ರ। ಕಾರ್ಯದರ್ಶಿ
ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಮುಂಬೈಯಲ್ಲಿ ತಾ. 8-2-46 ರಲ್ಲಿ ಅಭಿನಯಿಸಲ್ಪಡುವ 'ಸತೀ ಬೃಂದಾದೇವಿ' ನಾಟಕದಲ್ಲಿ ನಾಯಿಕೆಯ ಪಾತ್ರ ವಹಿಸಲಿರುವ ಸಂಗೀತ ಮತ್ತು ನಾಟಕಾಭಿನಯನದಲ್ಲಿ ಪ್ರಸಿದ್ಧರಾದ

ಶ್ರೀಮತಿ ಆನಂದಿ ಬಾಯಿ

ಗಂಗೊಳ್ಳಿಯವರು.

ನಿರೀಕ್ಷಣೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು.
ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು.

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ,
ಇವರು

'ಮುಕ್ತಿ'

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯಲ್ಲಿ ಬೇಗನೇ ಪ್ರದರ್ಶಿಸಲಿರುವರು.

ಲೇಖಕರು:-ನಿರ್ಮಾಣಕರು ಮತ್ತು ನಿರ್ದೇಶಕರು:—
ಶ್ರೀ ಯು. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇದೊಂದು ನವೀನ ಪ್ರಯೋಗ. ಕನ್ನಡಿಗರಿಗೆ ಇದೊಂದು ಸುಸಂಧಿ. ನವೀನ ಪಾತ್ರವರ್ಗದವರು ಕರ್ನಾಟಕ ರಂಗಭೂಮಿಯ ಕಳೆಯನ್ನು ಹೆಚ್ಚಿಸಿ, ತನ್ಮೂಲಕ ಕಲಾಸೇವೆಯನ್ನು ಮಾಡಲಿರುವರು.

ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡಕೊಳ್ಳಿರಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya. GADAG.

ಪ್ರಕಟಣೆ

ಉಡುಪಿ ಡಿ. ಮು. ಕೋರ್ಟನಲ್ಲಿ

O. P. No. 2/1946.

1. ನರಸಿಂಹ. 2. ರಾಮದಾಸ. ಮ್ಯಾನರು, ಜನಾರ್ಧನ ಅಪ್ರ ಉಕ್ಕ

ಕ್ಷೇಮಚಿಂತಕ-ದೊಡ್ಡತಂದೆ ಪುಟ್ಟಂಣಯಾನೆ ವೆಂಕಟ್ರಮಣ ತಂತ್ರಿ-ಉಡ್ಪಿ ತಾಲೂಕು ನಂಜೂರು ಗ್ರಾಮ —ಅರ್ಜಿದಾರರು.

ಯೀಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ:—

ಮ್ಯಾನರ ಅರ್ಜಿದಾರ್ರ ತಂದೆ ಪಿ. ಜನಾರ್ಧನ ತಂತ್ರಿಯು The Bombay Life Assurance co Ltd ಯೀ ಯಿನ್ಸೂರು ಕಂಪ್ನಿಯಲ್ಲಿಪಡೆದ N os 59243 ಮತ್ತು 39774ನೆಯ ಪೊಲಿಸಿಗಳ ಬಾಬ್ತು ರು. 640/-ಸದ್ರಿ ಜನಾರ್ಧನ ತಂತ್ರಿಯು ಸ್ವರ್ಗಸ್ಥನಾದ್ದರಿಂದ ಯೀತನ ವಾರಿಸದಾರರಾದ ತಮಗೆ ವಸೂಲು ಮಾಡುವರೆ ಸಕ್ಸೆಶನ್ ಸರ್ಟಿಫಿಕೇಟು ಕೊಡ್ಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ 1 2-46ಕ್ಕೆ ಯಿಟ್ಟಿದೆ. ಆಕ್ಷೇಪ ಹೇಳತಕ್ಕವರು ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಜ್ಯಾಹೀರು ...ಬೇಕ್ಕೆಂದು ಯೀ ಮೂಲಕ ಪ್ರಕಟಿಸೋಣಾಗಿಯದೆ.

B/o of the Court.
U. B. Krishna Rao.
Advocate for Petitioners.

ಉಡ್ಪಿ 17.1 46

NOTICE

In the Court of the Dt Munsif of Mangalore

S. C. No. 109/45

Between:
Shamu Masjid —Plaintiff
&
Upendra Prabu & others
—Defendants.

To
1st Deft-Upendra Prabhu son of Kotekar Manjunatha Prabhu, residing in Vitobha Temple Street, Mangalore town.

Please take notice that the Plaintiff abovenamed file the above suit against you and others for recovery of arrears of rent due to the Plaintiff and the same is posted to 31-1-1946 for your appearance. If you fail to appear on that date the said suit will be decided in your absence

By order of the Court

Mangalore, 18-1-1946 (Sd.) **K Babu Rao,**
Advocate for Plaintiff

(೨ನೇ ಪುಟದಿಂದ ಮುಂದುವರಿದುದು.)

ಗ್ರಹದಲ್ಲಿಟ್ಟಿತು; ಅಥವಾ ಗಾಢ ಯೋಚನೆಗೆ ಏಕಾಂತಗ್ರಹದ ಅನುಕೂಲತೆಯೊದಗಿಸಿತು. ಅಲ್ಲಿಯ ಅಹರ್ನಿಶಿಚಿಂತನೆಯ ಫಲವಾಗಿ ತಾನೀ ಸಂದರ್ಭದಲ್ಲಿ ಹೊರಗಿರಲೇಬೇಕೆಂಬ ನಿರ್ಧಾರಕ್ಕೆ ಬಂದರು ಸುಭಾಸ್. ಹೊರಗಿನ ಸಮರ ದಳ್ಳುರಿ ಈ ಕೇಸರಿಯನ್ನು ಕರೆಯುತಿತ್ತು; ಆದರೆ ಪಂಜರದ ಬಾಗಿಲು ತೆರೆಯಲೊಲ್ಲದು. ಸರಿ. ಸುಭಾಸ್ ಉಪವಾಸ ಕುಳಿತರು, ಉಪಾಯ ಹೂಡಿದರು; ಅವರಲ್ಲಿ ಜೀವನ ವೈರಾಗ್ಯ ಮೂಡಿದಂತೆ ತೋರಿತು. ಮೂಡಬಾರದೆ? ಸಿವಿಲ್ ಸರ್ವಿಸಿನಲ್ಲಿರಬೇಕಾದ ಮನುಷ್ಯ ರಾಷ್ಟ್ರಕ್ಕಾಗಿ ತನ್ನ ಸರ್ವ ತ್ಯಾಗ ಮಾಡಿ—ಅವಿವಾಹಿತನಾಗಿ ಅಹರ್ನಿಶಿ ದುಡಿದು—ಸಂಪಾದಿಸಿದುದೇನನ್ನು? ಬಾಡಿಗೆಯಿಲ್ಲದ, ಬಾಗಿಲೂ ಇಲ್ಲದ ಮನೆಯನ್ನು ಮಾತ್ರ! ಅತ್ತ ಕಾಂಗ್ರೆಸ್ ಪ್ರಮುಖರಿಗೂ ಬೇಡವಾಗಿದ್ದಾನೆ; ಇತ್ತ ಸರಕಾರಕ್ಕಂತೂ ಸತಾಯಿಸಿ ಸತಾಯಿಸಿ ಕೊಲ್ಲುವಷ್ಟು ದ್ವೇಷವಿದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ಉತ್ತಮ ಕಾದಂಬರಿಯ ಧೀರೋದಾತ್ತ ನಾಯಕನಲ್ಲಿ ಕೂಡಾ ವೈರಾಗ್ಯವೇ ಮೊಳೆಯಬೇಕು. ಸುಭಾಸರಿಗೆ ಹಾಗಾಯಿತೆಂದೇ ಸರಕಾರ ಭಾವಿಸಿತು. ಉಪವಾಸದ ಎಂಟನೇ ದಿನದಲ್ಲಿ ಅವರನ್ನು ಬಿಡುಗಡೆ ಮಾಡಿತು. ಸುಭಾಸರಿಂತಹ ಸುಲಭ ವಿಜಯವನ್ನು ನಿರೀಕ್ಷಿಸಿರಲಿಲ್ಲ. ಜತೀಂದ್ರನಾಥದಾಸರಂತೆ ತನ್ನ ಆತ್ಮವೊಂದೇ ಜೈಲಿನಿಂದ ಬಿಡುಗಡೆ ಪಡೆಯಬಹುದೆಂದೂ ಅವರಿಗೆ ತೋರಿದ್ದಿತು. ಆದರೆ ಯುದ್ಧ ಕಾಲದಲ್ಲಿ ಅಂತಹದು ಬೇಡವೆಂದು ಸರಕಾರ ಭಾವಿಸಿರಬೇಕು; ವೈರಾಗ್ಯ ಬಂದವನು ಎಲ್ಲಿದ್ದರೇನು ಎಂಬ ಧೈರ್ಯವೂ ಅದಕ್ಕೆ ಬಂದಿರಬೇಕು. ಅದು ಈ ಬಾಬುವನ್ನು ಬಿಟ್ಟುಬಿಟ್ಟಿತು

ಮಾರ್ಜಾಲ ಸನ್ಯಾಸ

ಸುಭಾಸರು ಜೈಲಿನಿಂದ ಹೊರಡುವಾಗ ಉಪವಾಸಿಯಾಗಿದ್ದರು; ಹೊರಟೊಡನೆ ಸನ್ಯಾಸಿಯಾದರು. ಕಲ್ಕತ್ತೆಯ [illegible] ಗೃಹದೊಂದು ಕೋಣೆಯಲ್ಲಿ ಬಾಗಿಲು ಹಾಕಿ ಕುಳಿತುಬಿಟ್ಟರು. ಒಬ್ಬ ಚಾಕರನ ಹೊರತು ಬೇರಾರಿಗೂ ಅಲ್ಲಿ ಪ್ರವೇಶವಿರಲಿಲ್ಲ. ಹೊರಗಡೆ ಸರಕಾರವು ಸರ್ಪ ಕಾವಲನ್ನಿರಿಸಿದ್ದಿತು. ಸುಮಾರು 10-12 ದಿನಗಳು ಹೀಗೆಯೇ ಕಳೆದುವು. ಜನವರಿ ತಾ. 17ನೇ ಮುಂಜಾನೆ ನೋಡುವಾಗ ಸುಭಾಸರ ಕೋಣೆ ಖಾಲಿ! ಎಲ್ಲಿ ಹೋದರು, ಏನಾದರು? ಯಾರೂ ಅರಿಯರು. ಆತ್ಮಶಾಂತಿಯನ್ನು ಹುಡುಕಿಕೊಂಡು ಹಿಮಾಲಯಕ್ಕೆ ಹೋಗಿರಬೇಕು; ಅರವಿಂದರನ್ನು ಹುಡುಕಿಕೊಂಡು ಪಾಂಡಿಚೇರಿಗೆ ಹೋಗಿರಬೇಕು, ಎಂದಲ್ಲದೆ ರಾಷ್ಟ್ರಸ್ವಾತಂತ್ರ್ಯಸಾಧನೆಯನ್ನು ಹುಡುಕಿಕೊಂಡು ಜರ್ಮನಿ, ಜಪಾನುಗಳಿಗೆ ಹೋಗಿರಬೇಕೆಂಬ ಸಂದೇಹ ಯಾರಿಗೂ ಬರಲಿಲ್ಲ; ಸರಕಾರಕ್ಕೂ ಬರಲಿಲ್ಲ. ಬರ್ಲಿನಿನಿಂದ ಸುಭಾಸ್ ವಾಣಿ ಕೇಳಿ ಬಂದೊಡನೆ ಎಲ್ಲರ ಕಣ್ಣು ತೆರೆಯಿತು. ಅವರು ಹಿಂದುಸ್ಥಾನದಿಂದ ಹೊರಬಿದ್ದುದು ಹೇಗೆ ಎಂಬ ಗುಟ್ಟು ಇದುವರೆಗೂ ಹೊರಬಿದ್ದಿಲ್ಲ. ಸ್ವತಃ ಸುಭಾಸರದನ್ನು ಯಾರೊಬ್ಬನಿಗೂ ಹೇಳಲಿಲ್ಲ. ಒಂದು ವಾರ್ತೆ ಹೀಗಿದೆ. ತನ್ನ ಏಕಾಂತವಾಸದ ಕೋಣೆಯಿಂದ 1941ನೇ ಜನವರಿ ತಾ. 16ನೇ ಮಧ್ಯರಾತ್ರಿ ಸುಭಾಸರು ಹೊರಬಿದ್ದರು. ಕಾಬೂಲೀ ವೇಷ ಹಾಕಿಕೊಂಡು ಪೇಶಾವರಕ್ಕೆ ಹೋಗಿ ಮುಟ್ಟಿದರು. ಈ ಕಾಬೂಲಿಯ ಗಡ್ಡ, ಪಾಯಿಜಾಮಾ, ಟೋಪಿ, ಕೋಟುಗಳನ್ನು ಕಂಡರೆ ಹಿಂದೀ ಸರಕಾರದ ಗುಪ್ತಚಾರರ ಮಾತಂತಿರಲಿ—ಕಾಬೂಲೀ ತಜ್ಞರಿಗೆ ಕೂಡಾ ಅಲ್ಲವೆನ್ನಲಾಗುತ್ತಿರಲಿಲ್ಲ. ಆದರೆ ಒಂದು ಕೊರತೆಯಿತ್ತು. ಕಾಬೂಲಿ ಭಾಷೆ ಬರುತಿದ್ದಿಲ್ಲ; ಮಾತಾಡಿದರೆ ಸ್ವರದ ಗುರುತ ತಿಳಿಯುವ ಅಪಾಯ ಬೇರೆಯಿತ್ತು. ಅದಕ್ಕಾಗಿ "ನನಗೆ ಕಂಠವ್ಯಾಧಿ. ಚಿಕಿತ್ಸೆಗಾಗಿ ಪರದೇಶಪ್ರಯಾಣ, ದಯವಿಟ್ಟು ಮಾತಾಡಿಸಬೇಡ" ಎಂದು ಬರೆದಿ[illegible] ಪಟ್ಟಿಯನ್ನು ಕಂಠಕ್ಕೆ ತಾಗಿಸಿಕೊಂಡಿದ್ದರಂತೆ. ಕಾಬೂಲಿಗೆ ಮುಟ್ಟಿದ ಹೊತ್ತಿನಲ್ಲಿ ಸುಭಾಸರು ಕಾಣೆಯಾದ ಸುದ್ದಿ ಹರಡಿ ಸರ್ವತ್ರ ಶೋಧ ನಡೆದಿತ್ತು. ಈ ಕಾಬೂಲಿಯು ಅಥವಾ ಸ್ವಾತಂತ್ರ್ಯಕ್ಕಾಗಿ ಏನನ್ನು ಮಾಡುವದಕ್ಕೂ 'ಕಬೂಲಿ'ಯ ಮೇಲೆ ಅಲ್ಲಿದ್ದ ಬ್ರಿಟಿಷ್ ಗೂಢಚಾರರಿಗೆ ಸಂದೇಹ ಬಂತು. ಈತನನ್ನು ಹಿಡಿದು ಎರಡು ಮೂರು ದಿನ ಸ್ವಾಧೀನದಲ್ಲಿಟ್ಟು ಕೊಂಡಿದ್ದರು. ಒಂದು ದಿನ ರಾತ್ರಿ ಇವರು ಕಿಟಕಿಯಿಂದ ಮೆಲ್ಲನೆ ನುಸುಳಿ ಅಲ್ಲಿದ್ದ ಜರ್ಮನಿ ಪ್ರತಿನಿಧಿಗಳೊಡನೆ ಸೇರಿಕೊಂಡು ಜರ್ಮನಿಗೆ ಬಂದು ಮುಟ್ಟಿದರು. ಆ ಮೇಲೆ ಅವರು ಸಾಧಿಸಿದ ಅದ್ಭುತಗಳು ಸರ್ವಶ್ರುತ.

ಇದೇ ತಾ. 23ನೇ ಬುಧವಾರ ನೇತಾಜೀ ಬೋಸರಿಗೆ 50ನೇ ವರುಷ ಹಿಡಿಯುತ್ತದೆ. ನಿಜಕ್ಕೂ ಹಿಡಿಯುತ್ತದೆಯೆ? ಅಥವಾ 49ನೇ ವರುಷದಲ್ಲೇ ಎಲ್ಲವೂ ಮುಗಿದಿದೆಯೆ? ಇಲ್ಲ; ಅವರಿಗೆ 50 ಹಿಡಿಯುತ್ತದೆಂದೇ ನಾವು ಭಾವಿಸಬೇಕು. ನಮಗೆ ಅವರೇ ಹೇಳಿಕೊಟ್ಟ ಪಾಠವಿದು-"ನೀವು ಸ್ವತಂತ್ರರೆಂದೇ ಭಾವಿಸಿಕೊಳ್ಳಿ" ಸರಿ. ಹಾಗೆಯೇ 'ಸುಭಾಸರು ಜೀವಂತರೆಂದೇ ಭಾವಿಸಿಕೊಳ್ಳಿ'. ಜನವರಿ ತಾ. 23 ನೇತಾಜೀಯವರ 50ನೇ ಜನ್ಮೋತ್ಸವವೆಂಬ [illegible] ರಕವಾಗಿ ಗುಲಾಮತ್ವದ ಮುಸುಕನ್ನು ಝಾಡಿಸಿ ತಳ್ಳಿ!

ಜೈ ಹಿಂದ್!

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತವೆ.

ಹೆಚ್ಚಿನ ವಿವರಗಳಿಗೆ

ಅತ್ತೂರು ವಾಸುದೇವ ಉಡುಪ

ಸಂಪಾದಕ

ಶ್ರೀ ರವಿಪ್ರಸಾದ ಜ್ಯೋತಿಷಾಲಯ

ಕೊಡವೂರು [illegible]

CHAMPAES

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ವೈದ್ಯರೂ ಹೆಂಗಸರೂ ಅತ್ಯವಶ್ಯಕವಾಗಿ ಓದಬೇಕಾದುದು.

ಮಣಿಪಾಲದಲ್ಲಿ ಈಗತಾನೆ ಜಯಶೀಲವಾಗಿ ಜರಗಿದ 34ನೇ ಅಖಿಲ ಭಾರತ ಆಯುರ್ವೇದ ಕಾಂಗ್ರೆಸಿನ ಸುಸಂದರ್ಭದಲ್ಲಿ ಪ್ರಕಟಿಸಲ್ಪಟ್ಟ ಅಂತರಂಗದ ವಿಶೇಷ ಸಂಚಿಕೆ.

ಅಂತರಂಗ

ಆಯುರ್ವೇದ ಸಮ್ಮೇಲನಾಂಕ

ಪುಟಗಳು 150 **ಬೆಲೆ ರೂ. 1-0-0**

ಆಯುರ್ವೇದಾಭಿಮಾನಿಗಳಾದ ಪ್ರತಿಯೊಬ್ಬರೂ ಓದತಕ್ಕ ಅಪೂರ್ವ ಸಂಚಿಕೆ

ಡಾ. [illegible], ಡಾ. [illegible], ಶ್ರೀ [illegible], ಶ್ರೀ [illegible] ಉಡುಪಿ, [illegible] ಉಡುಪಿ, [illegible] ಮಧ್ವಾಚಾರ್ಯ [illegible], ಡಾ. [illegible] ಬೆಂಗಳೂರು, [illegible] ಶ್ರೀ [illegible] ಆಯುರ್ವೇದ [illegible] ...

ಲೇಖನಗಳಿವೆ! ಭಾಷಣಗಳಿವೆ!! ಚಿತ್ರಗಳಿವೆ!!!

ಪ್ರತಿ ಮನೆಯಲ್ಲೂ ಇರಲೇಬೇಕಾದ ಅಮೂಲ್ಯ ಕೈಗನ್ನಡಿ.

ರೂ 1-0-0 ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಮೆನೇಜರ್, ಅಂತರಂಗ ಆಫೀಸು, ಉಡುಪಿ.

ಬೇಕಾಗಿದ್ದಾರೆ

ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಟ್ರಾಕ್ಟರರೂ ಕೂಲಿಯಾಳುಗಳನ್ನು ಒದಗಿಸಿ ಕೊಡುವವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗೆ ಉತ್ಕೃಷ್ಟ ಸವಲತ್ತುಗಳು ಕೊಡಲಾಗುವುದು.

ಇಂದೇ ಬರೆಯಿರಿ.—

ಬಾಕ್ಸ್ ನಂಬ್ರ 5, c/o 'ನವಯುಗ'

ಉಡುಪಿ, (ದ. ಕ.)

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2.	ಸಾಮುದ್ರಿಕ ಶಾಸ್ತ್ರ	0	8	0
3.	ಬಾಲ ರಾಮಾಯಣ	0	5	0
4.	ಸುಕನಾ ಚರಿತ್ರೆ	0	5	0
5.	ಕೊಳಲು ಕೃಷ್ಣ	0	8	0
6.	ಗುರುಪೀಠಗಳ ಅವನತಿ	0	8	0
7.	ದ್ವೈತಮತ ಖಂಡನೆ	0	6	0
8.	ಧರ್ಮಸಂಕಟ	0	4	0
9.	ಪೂರೂರವ	0	8	0
10.	ಸಿಶ್ವಯ ಜ್ಞಾನ	0	8	0
11.	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13.	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gauthama the Buddha	0	8	0
16.	ಪ್ರಾರ್ಥನೆ	0	2	0
17.	ಹಿಂದೀ ಪಹಿಲಿ ಪೋಥಿ	0	2	0
18.	ಹರಿಶ್ಚಂದ್ರ ಳಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)	0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣ ರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರೆ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮದ್‌ಮೋಳಿತ್ತ್ ಮದ್‌ಮಾಯೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	0	2	0
ಮಿತ್ಯ ನಾರಾಯಣ ಕತೆ	0	1	0
ಸತೀ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. **ದಪ್ಪವಾದ ಹೊದಿಕೆಯುಳ್ಳದ್ದು:**

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, **ಉಡುಪಿ.**

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪಿ. ಎ. ಪೈ ಬ್ರದರ್ಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.
ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ಗಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ ೨೨] Founder SRI A. B. SHETTY. [No. 22
ಉಡುಪಿ ● 31—1—1946 ● ಮಂಗಳೂರು
ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ, ತಲೆನೋವು, ಶೀತ, ವೇದನೆ, ಉಳುಕು, ಸೆಳೆತ, ಘುಟ, [illegible] ಎಗಸೋಣ, ಗಾಯಗಳು ಬಾತು ಕೊಳ್ಳುವುದು, [illegible] ರೋಗಗಳಿಗೂ ಸಿದ್ಧ. [illegible]

REGD.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

THE CANARA MUTUAL ASSURANCE COMPANY, LTD.,
(UDIPI, S. India.)

Good Wishes

We thank all our Policy-holders, Agents, Medical Examiners and well-wishers for their co-operation and wish them a happy, peaceful and prosperous life in the NEW YEAR.

B. Vaikunta Baliga,
Chairman
BOARD OF DIRECTORS

ಲಲಿತಕಲಾ ಕರ್ನಾಟಕ ಸಂಗೀತ ಸಭಾ, ಮುಂಬಯಿ
ಇವರ
ಶ್ರೀ ವಿಷ್ಣುಮೂರ್ತಿ ದೇವಾಲಯ, ಕೆಮುತ್ತೂರು (ಉಡುಪಿ)
ಇದರ ಸಹಾಯಾರ್ಥವಾಗಿ

ಸತೀ ಬೃಂದಾದೇವಿ

ಎಂಬ ನವರಸಭರಿತವಾದ ಪೌರಾಣಿಕ ಕನ್ನಡ ನಾಟಕವನ್ನು ಇದೇ ಬರುವ ತಾ **8-2-46**ನೇ ಶುಕ್ರವಾರ ರಾತ್ರಿ ಘಂ. 8-30ಕ್ಕೆ ಕಲ್ಬಾದೇವಿ ರೋಡಿನಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸುವರು.

ಶ್ರೀಮತಿ ಆನಂದಿ ಬಾಯಿ, ಗಂಗೊಳ್ಳಿ
ಇವರು 'ಬೃಂದಾದೇವಿ'ಯ ಪಾತ್ರವನ್ನು ವಹಿಸುವರು.

ಕನ್ನಡ ಬಂಧುಭಗಿನಿಯರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ

ಪಿ. ಆರ್. ಬೋಳಾರ್, ಬಿ.ಎ.,	ಬಿ. ಆರ್. ಕಾರ್ಕಳ್
ದಿಗ್ದರ್ಶಕರು,	ರಂಗಭೂಮಿ ವ್ಯವಸ್ಥಾಪಕರು
ಲ. ಕ. ಸ. ಸಭಾ	ಲ. ಕ. ಸ. ಸಭಾ

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ತ್ರಿವೆಂಡ್ರಮ್, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA

"BHUVANENDRA"
CHANDRAMAS Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4೦ರಿಂದ 8 ಬೊಟ್ಟು, ಸಣ್ಣಮಕ್ಕಳಿಗೆ 1೦ರಿಂದ 2೦ ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ॥ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ॥ ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ॥ ಕೆ. ಶೇಷಗಿರಿ ಪೈ, L.I.M., ಡಾ॥ ವೆಂಕಟರಾವ್, ಕೊರಂಗ್ರಪಾಡಿ; ನವಭಾರತ ಬುಕ್ ಡಿಪೊ

ANNOUNCEMENT

We have pleasure to announce the opening of a branch of the Bank

at

MERCARA

ON 23-1-1946.

The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಅರನೆ ಹುಟ್ಟುಹಬ್ಬದ ಕಾರ್ಯಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಕೇಂದ್ರ ಎಸೆಂಬ್ಲಿ

ಹೊಸ ಕೇಂದ್ರ ಎಸೆಂಬ್ಲಿ ಜನವರಿ ತಾ. 21ರಲ್ಲಿ ನವದೆಹಲಿಯಲ್ಲಿ ಆರಂಭವಾಯಿತು; ದೀರ್ಘಾವಧಿ ತರಬೇತಿ ಹಾಗೂ ಬಹುಕಾಲದ ನಿರೀಕ್ಷೆಯ ಈ ನಾಟಕದ ಮೊದಲ ಪರದೆಯೆತ್ತಿದಾಗ ಅಲ್ಲಿ ಕಂಡು ಬಂದ ದೃಶ್ಯವು ನಿಜಕ್ಕೂ ಮನೋಹರವಿದ್ದಿತು. ಅಂದು ಪೂರ್ವಾಹ್ನ 11 ಹೊಡೆಯುವ ಮೊದಲೇ ನಾಯಕ ಶರಚ್ಚಂದ್ರ ಬೋಸ್ ಮತ್ತು ಉಪನಾಯಕ ಆಸಫ್ ಅಲಿಗಳ ನೇತೃತ್ವದಲ್ಲಿ ಬಿಳೀ ಟೋಪಿಯ ಕಾಂಗ್ರೆಸ್ ಸದಸ್ಯರ ಸಾಲು ಎಸೆಂಬ್ಲಿ ಭವನ ಪ್ರವೇಶಿಸಿತು. ಇದಿರು ಕಡೆಯ ಮೂರು 'ಬ್ಲೋಕು'ಗಳಲ್ಲಿ ಕಾಂಗ್ರೆಸ್ ಸದಸ್ಯರೇ ತುಂಬಿ ಕೊಂಡರು. ಅಧ್ಯಕ್ಷ ಚುನಾವಣೆಯಾಗುವ ವರೆಗೆ ಗವರ್ನರ್ ಜನರಲರಿಂದ ತಾತ್ಕಾಲಿಕ ನೇಮಕ ಪಡೆದ ಸರ್. ಕವಾಸ್ಜಿ ಜಹಾಂಗೀರರು ಅಗ್ರಪೀಠದಲ್ಲಿ ರಾಜಿಸಿದ್ದರು. ಪ್ರಮಾಣವಿಧಿ ಸ್ವೀಕಾರ ಕಾರ್ಯಕ್ರಮವು ಜಾರೀರಾದ ಮೇಲೆಯೇ ಮುಸ್ಲಿಂ ಲೀಗ್ ಪಕ್ಷೀಯರ ಪ್ರವೇಶ. ಜಿನ್ನರ ನಾಯಕತ್ವ; ಲಿಯಾಖತ್ ಅಲೀ ಖಾನರ ಉಪನಾಯಕತ್ವದಲ್ಲಿ ಈ ಮೊದಲು ಖಾಲಿಯಾಗಿದ್ದ ಹಾಗೂ ರಾಷ್ಟ್ರೀಯ ಪಕ್ಷೀಯರದಾಗಿದ್ದ ಬ್ಲೋಕುಗಳಲ್ಲಿ ಲೀಗ್ ಪಕ್ಷೀಯರು ತುಂಬಿ ಕೊಂಡರು. ಅದೊಂದು ವರ್ಣಮಯ ಚಿತ್ರ. ಬಿಳಿ ತಲೆಯಿಂದ ರಾಜಿಸುತ್ತಿದ್ದ ಕಾಂಗ್ರೆಸಿಗರ ಪಕ್ಕದಲ್ಲೇ ಲೀಗ್ ಚಿಹ್ನೆಯಾದ ಕಪ್ಪು ಫರ್ ಟೋಪಿಗಳಿಂದ ಲೀಗ್‌ವಾಲರು ಮೆರೆದಿದ್ದರು. ಪ್ರತಿಯೊಬ್ಬ ಸದಸ್ಯನ ಕೋಟಿಗೂ ಜಿನ್ನರ ಭಾವಚಿತ್ರವುಳ್ಳ ಗುಬ್ಬಿ. ಇದಕ್ಕೆ ಅಪವಾದವೆಂದರೆ ಯಾವ ಕಟ್ಟುನಿಟ್ಟಿಗೂ ಒಳಗಾಗದ ಸಿದ್ದಿಕಿಯವರು ಮಾತ್ರ. ಅವರು ಕೆಂಪು ಟೋಪಿ ಧರಿಸಿಕೊಂಡು ಜಿನ್ನಾ ಗುಬ್ಬಿ ಸಿಕ್ಕಿಸದೇನೇ ಕುಳಿತಿದ್ದರು.

ಕಾಂಗ್ರೆಸ್ ಪಕ್ಷದ ನಾಯಕ
ಶ್ರೀ. ಶರಚ್ಚಂದ್ರ ಬೋಸ್.

ಮೋಹಕ ದೃಶ್ಯಗಳು

ಹೊಸ ಎಸೆಂಬ್ಲಿಯ ಉದ್ಘಾಟನಾ ಸಮಾರಂಭ ಕಾಣಲು ಪ್ರೇಕ್ಷಕರು ಗೆಲರಿ ತುಂಬಾ ನೆರೆದಿದ್ದರು. ಗಣ್ಯರೆಂದರೆ ಕುಮಾರಿ ಜಿನ್ನಾ ಮತ್ತು ಶ್ರೀಮತಿ ನಾಯಿಡುಗಳು. ವಿದೇಶೀ ಪ್ರೇಕ್ಷಕರು ಬಹುಮಂದಿ ಬಂದಿದ್ದರು. ಪ್ರಾಯಶಃ ಪ್ರೇಕ್ಷಕರು ಕಾಂಗ್ರೆಸ್ ಮತ್ತು ಲೀಗ್ ಪಕ್ಷೀಯರ ಸ್ನೇಹ ಭಾವವನ್ನು ಕಂಡು ಆಶ್ಚರ್ಯಗೊಂಡಿರಬೇಕು. ಕಾಂಗ್ರೆಸ್ ಮತ್ತು ಲೀಗ್‌ವಾಲರೊಳಗೆ ಟೋಪಿ ಭೇದ ಹೊರತು ಮೆದುಳು ಭಿನ್ನತೆಯೇ ಇಲ್ಲವೆಂಬಂತೆ ಇಕ್ಕಡೆಯವರೂ ಅತ್ಯಂತ ಸಲುಗೆಯಿಂದ ಸರಸವಾಡುತ್ತಿದ್ದುದನ್ನು ಅಲ್ಲಿ ಕಾಣಬಹುದಾಗಿತ್ತು. ಅಲ್ಪ ಸಂಖ್ಯಾಕರಾದ ಯುರೋಪಿಯನ್ ಪಕ್ಷ ಮತ್ತು ಸ್ವತಂತ್ರ ಸದಸ್ಯರಿಗೂ ಭೇದ ಭಾವದ ಅರಿವಾಗದಂತೆ ಅಲ್ಲಿಯ ವಾತಾವರಣವು ಪೂರ್ತಿ ಸ್ನೇಹಮಯವಾಗಿತ್ತು. ಪ್ರಥಮತಃ ವೈಸರಾಯ ಕೌನ್ಸಿಲ್ ಸದಸ್ಯರು ಪ್ರಮಾಣ ಬದ್ಧರಾದರು. ಅನಧಿಕಾರೀ ಸದಸ್ಯರ ಪೈಕಿ ಪ್ರತಿಜ್ಞಾ ಸ್ವೀಕಾರದ ಮೊದಲ ಮರ್ಯಾದೆ ಪಡೆದವರು, ಮದ್ರಾಸಿನ ಶ್ರೀಮತಿ ಸ್ವಾಮಿನಾಥನ್. ಪ್ರಮಾಣ ಸ್ವೀಕಾರದ ಪ್ರಥಮ ಕಾರ್ಯವೇ ಬೋಧಪ್ರದವಾಗಿತ್ತು. ಕೆಪ್ಟನ್ ಲಕ್ಷ್ಮಿಯ ಮಾತೆ ಸ್ವಾಮಿನಾಥನ್ ಪ್ರಮಾಣ ಬದ್ಧರಾಗಲು ಅಧ್ಯಕ್ಷ ಪೀಠದ ಮುಂಭಾಗಕ್ಕೆ ನಡೆದಾಗ ಸಭೆಯು ಕರತಾಡನಗಳಿಂದ ಅವರನ್ನು ಪ್ರೋತ್ಸಾಹಿಸಿತು. ಮಿ. ಜಿನ್ನರಿಗೆ ಆಶ್ಚರ್ಯ ಮತ್ತು ಆನಂದವಾಗಿರಬೇಕು—ತನ್ನ ಪ್ರತಿಜ್ಞಾ ಸ್ವೀಕಾರವನ್ನು ಕಾಂಗ್ರೆಸಿಗರೂ ಕರತಾಡನಗಳಿಂದ ಸ್ವಾಗತಿಸಿದುದನ್ನು ಕಂಡು. ಮಾತ್ರವಲ್ಲ, ಜಿನ್ನರು ಪ್ರತಿಜ್ಞಾಧಾರಿಯಾಗಿ ಸ್ವಸ್ಥಾನಕ್ಕೆ ಬಂದೊಡನೆ ಶ್ರೀ ಶರಚ್ಚಂದ್ರ ಬೋಸರೂ, ಆಸಫ್ ಅಲಿಗಳೂ, ಗಡದ್ದಾಗಿ ಅ [illegible] ಯಾಮಿನ್ ಖಾನರು ಇಲ್ಲಿಯೂ ತನ್ನ ಪ್ರಾವೀಣ್ಯ ಪ್ರದರ್ಶಿಸದೆ ಬಿಡಲಿಲ್ಲ. ದೀರ್ಘ ಕಾಲದಿಂದ ಎಸೆಂಬ್ಲಿ ಸದಸ್ಯರಾಗಿದ್ದ ಈ ಸಾಹೇಬರಿಗೆ ಪ್ರತಿಜ್ಞಾ ಮಂತ್ರಗಳೆಲ್ಲಾ ಬಾಯಿಪಾಠ ಬರುತಿದ್ದುದರಿಂದ ಮುಂಗಡೆಯಲ್ಲಾವ ಪ್ರತಿಯನ್ನೂ ಇಟ್ಟುಕೊಳ್ಳದೇನೇ ಅಕ್ಷರ ತಪ್ಪದೆ ಉಚ್ಚರಿಸಿ ಬಿಟ್ಟರು. ಇಷ್ಟೆಲ್ಲಾ ಸಂತೋಷಗಳ ನಡುವೆ ಸಂಕೋಚದ ವಿಷಯಗಳೆರಡಿದ್ದುವು. ಸ್ವತಂತ್ರ ಸದಸ್ಯರಾದ ಸರ್ದಾರ್ ಮಂಗಲ ಸಿಂಗರ ಎಡತೋಳು ಮುರಿದಿದ್ದುದರಿಂದ ಅವರು ಮರಗೈಯನ್ನು ಧರಿಸಿ ಬಂದಿದ್ದರು. ಬಂಗಾಳದ ಮಹಾ ಜನಸಭೆಯ ಪ್ರತಿನಿಧಿ ಶ್ರೀ. ಆನಂದ ಮೋಹನ್ ಪೊದ್ದಾರರು ಕಾಹಿಲೆಯಲ್ಲಿದ್ದುದರಿಂದ ಅವರನ್ನು ಸಭೆಗೆ ಹೊತ್ತು ತರಬೇಕಾಯಿತು. ಪೊದ್ದಾರರು ಪ್ರತಿಜ್ಞಾ ಸ್ವೀಕಾರವನ್ನೂ ತನ್ನ ಆಸನದ ಬಳಿಯಲ್ಲೇ ಮಾಡಿದರು.

ಹೊಸ ಎಸೆಂಬ್ಲಿ- ಹೊಸಬರ ಎಸೆಂಬ್ಲಿ

ಈ ಬಾರಿಯ ಎಸೆಂಬ್ಲಿಯ ಅಧಿಕ ಸಂಖ್ಯಾಕರು ಅಲ್ಲಿಗೆ ಹೊಸಬರೇ. ಕಾಂಗ್ರೆಸ್ ಪಕ್ಷದ ನಾಯಕ ಶ್ರೀ. ಶರಚ್ಚಂದ್ರ ಬೋಸರೇ ಕೇಂದ್ರ ಎಸೆಂಬ್ಲಿಗೆ ಹೊಸಬರು, ಬಂಗಾಳಾ ಎಸೆಂಬ್ಲಿಯ ದೀರ್ಘಕಾಲದ ಅನುಭವವಿದ್ದವರೇನೋ ನಿಜವಾದರೂ ಶ್ರೀ. ಭುಲಾಭಾಯಿಗಳ ಘನತೆ, ಸಮತೋಲನಾ ಬುದ್ಧಿ ಮತ್ತು ವಿದ್ವತ್ತು ಆಸ್ಥಾನದಲ್ಲಿ ಗೋಚರಿಸೀತೇ ಎಂಬ ಕುರಿತು ಹಲವರಿಗೆ ಸಂದೇಹವಿದೆ. ಬ್ಯಾರಿಸ್ಟರ್ ಶರಚ್ಚಂದ್ರ ಅಸಾಧಾರಣ ವಾಗ್ಚತುರ; ಎದೆಗಾರ; ಮತ್ತು ಬಹಿರಂಗವಾದಿ ಮನುಷ್ಯ. ಆವೇಗಕ್ಕೊಳಗಾದಾಗ ತೂಕ ತಪ್ಪಬಾರದೆಂಬ ಜಾಗ್ರತೆ ವಹಿಸದ ಉಗ್ರವಾದಿ; ಅಂತೆಯೇ ಮಿ. ಆಸಫ್ ಅಲಿಗಳು. ಇದು ಎಸೆಂಬ್ಲಿಯ ಹಳೇ ಹದ್ದುಗಳಲ್ಲೊಂದು. ಅಲಿಗಳದು ದೊಡ್ಡ ಮನೆತನ; ಕಲಾಪೂರ್ಣ ಪ್ರತಿಭಾಸಂಪನ್ನ ಜೀವನ ಕವಿ ರವೀಂದ್ರರ ಶಿಷ್ಯರಿವರು. ವಾಗ್ಮಿತೆಯಲ್ಲಿ ಹೆಸರು ಹೋದವರು. ಆದರೂ ಸಂಧರ್ಭ ಬಂದಾಗಲೆಲ್ಲಾ ಒಡೆದು ತೋರುವಂತಹ ವಿಶೇಷ ಹೆಗ್ಗಳಿಕೆಯುಳ್ಳ ಮನುಷ್ಯ. ಒಟ್ಟಿನಲ್ಲಿ ಈ ಬಾರಿಯ ಕಾಂಗ್ರೆಸ್ ನಾಯಕ ಮತ್ತು ಉಪನಾಯಕ, ಇಬ್ಬರೂ ಪರಿಪಕ್ವ ಜಾಣ್ಮೆಯ ಬದಲಿಗೆ ಪ್ರಭಾವ ತೋರಿಸಬೇಕೆಂಬ ಹುಮ್ಮಸ್ಸಿರುವವರೇ. ಸದ್ಯಸ್ಥಿತಿಯಲ್ಲಿ ಇಂಥವರೇ ಬೇಕೆಂದು ಕಾಂಗ್ರೆಸ್ ನಾಯಕರು ಬಯಸಿರಬಹುದು. ಹೆಚ್ಚಿನ ಸದಸ್ಯರು ಎಸೆಂಬ್ಲಿಗೆ ಮಾತ್ರ ಹೊಸಬರು; ಹೊರಗಿನ ಸಾರ್ವಜನಿಕ ರಂಗದಲ್ಲಿ ಎಲ್ಲರೂ ಪ್ರಸಿದ್ಧರೇ. ಆದ್ದರಿಂದ ಈ ಹೊಸತನವು ಎಸೆಂಬ್ಲಿ ಕಾರ್ಯಕಲಾಪಗಳಲ್ಲಿ ಕೊರತೆಗಳನ್ನು ನಿರ್ಮಿಸುವ ಸಂಭವವಿಲ್ಲ. ಲೀಗ್ ಪಕ್ಷದ ಸದಸ್ಯರಲ್ಲಿ ಬಹುಸಂಖ್ಯೆಯವು ಹೊಸ ಮುಖಗಳಾದರೂ ನಾಯಕ ಉಪನಾಯಕರು ಹಳಬರೇ. 'ಇಲ್ಲದೆ ಹೋದರಲ್ಲಾ' ಎಂದು ಭುಲಾಭಾಯಿಗಳ ನಂತರ ನೆನಪಿಗೆ ಬರುವವರೆಂದರೆ ಶ್ರೀ. ಎನ್. ಎಮ್. ಜೋಶಿಯವರು. ಹಿಂದಿನ ಎಸೆಂಬ್ಲಿ

ಲೀಗ್ ಪಕ್ಷದ ನಾಯಕ
ಮಿ. ಮುಹಮ್ಮದಾಲಿ ಜಿನ್ನಾ.

ಅಧ್ಯಕ್ಷರಾಗಿದ್ದ ಸರ್. ಅಬ್ದುಲ್ ರಹಿಮಾನರೇ ಈ ಬಾರಿ ಇಲ್ಲ. ಇದೊಂದು ವಿಶೇಷ ಗೈರು ಹಾಜರಿ. ಬ್ರಿಟನಿನಲ್ಲಾದರೆ ಪಾರ್ಲಿಮೆಂಟ್ ಅಧ್ಯಕ್ಷನನ್ನು ಪ್ರತಿಸ್ಪರ್ಧಿಯಿಲ್ಲದೇನೇ ಆರಿಸಿ ಕಳುಹಿಸುವ ಸಂಪ್ರದಾಯ

ಈ ಬಾರಿಯ ದೊಡ್ಡ ಬಾಯಿಗಳು

ಹಿಂದೊಮ್ಮೆ ಎಸೆಂಬ್ಲಿ ಭೇಟಿ ಪಡೆದಿದ್ದವನೊಬ್ಬನು ಇಂದು ಅದನ್ನು ಸಂದರ್ಶಿಸಿ 'ಇದೂ ಅದೂ ಒಂದೇ' ಎನ್ನುವಂತೆ ಅಂದಿನ ಕೆಲವು ಮಹಾಸಿರಂಗಿಗಳು ಇಂದೂ ನಿಂತಿವೆ. ಆ ಪೈಕಿ ಆಸಫ್ ಅಲಿ, ಶ್ರೀ ಪ್ರಕಾಶ್, ನಿಯೋಗಿ, ಮನು ಸುಬೇದಾರ್, ಪ್ರೊ. ರಂಗಾ, ಜಿನ್ನಾ, ಲಿಯಾಖತ್ ಅಲೀಖಾನ್ ಮೊದಲಾದವರು ಮುಖ್ಯರು. ಕಳೆದ ಎಸೆಂಬ್ಲಿಯ ಅವಧಿಯಲ್ಲಿ ಮಿ. ಜಿನ್ನರ ಮುಖ ಬಹುಬಾರಿ ಕಂಡು ಬರಲಿಲ್ಲ. ಅಲ್ಲಿಗಿಂತ ಮಹತ್ವದ ಕಾರ್ಯರಂಗಗಳು ಸದಾಕಾಲ ಅವರನ್ನು ಕಾದಿದ್ದುವು. ಆದರೆ ಲಿಯಾಖತ್ ಅಲಿಖಾನರ ತಲೆಯಲ್ಲಿ ಅಂತಹ ಕಿರೀಟವಿಲ್ಲವಾದರೂ, ಹಗಲು ಜಿನ್ನರು ಹೊತ್ತ ಭಾರ ಹೊರುವಷ್ಟು ಬಲಶಾಲಿಯೇ ಇವೆ. ಶರಚ್ಚಂದ್ರ, ಆಸಫ್ ಅಲಿಗಳು ಗೈರುಹಾಜರಾಗುವರೆಂದು ಬಯಸಿದರೂ ಅವರ ಉತ್ಸಾಹ ಅವರನ್ನು ಹಿಂದೆ ನಿಲ್ಲಲು ಬಿಡುವಂತಿಲ್ಲ. ಅಂತೂ ಈ ಬಾರಿಯ ಎಸೆಂಬ್ಲಿಯಲ್ಲಿ ಕೊರತೆಯೇನೂ ಕಂಡು ಬರಲಾರದು. ಜಾರಿಸಿಕೊಳ್ಳುವದರಲ್ಲಿ, ಝಾಡಿಸಿ ತಳ್ಳುವುದರಲ್ಲಿ ಅತಿ ಪ್ರವೀಣರಾದ ಸರ್. ಜೆಂಘಾಲರಂತಹ ಸರಕಾರೀ ಸದಸ್ಯರಿದ್ದಾರೆ. ಇವರ ಮಾಯಾ ಬಲ್ಲವರನ್ನು ಹರಾಜಿಗಿಡಬಲ್ಲ ಮಂತ್ರವಾದಿ ದಳವೊಂದು ಕಾಂಗ್ರೆಸ್ ಮತ್ತು ಲೀಗ್ ಪ್ರಮುಖರ ಐಕ್ಯತೆಯಿಂದ ನಿರ್ಮಾಣಗೊಳ್ಳಬಹುದು.

'ಬಹದೂರ'
ಕಬ್ಬಿನ ಗಾಣಗಳು
ಗಟ್ಟಿಮುಟ್ಟಾದ ರಚನೆ,
ಉತ್ತಮದರ್ಜೆಯ ಕೈಗಾರಿಕೆ
ಕ್ರಯ ರೂ. 430/-
ಬ್ರಿಟಿಷ್ ಇಂಡಿಯ
ಎಂಜನಿಯರಿಂಗ್ ಕಂ.
ಬೊಂಬಾಯಿ 10.

CANARA BANK LIMITED
Estd: 1906
(Incorporated in British India, liability of Members Limited)
SEASON DEPOSITS.
of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	....	2½%
6 to 9 months	....	2¾%

Rates for Season Deposits of less than Rs 10000/- with a minimum of Rs. 1000/- and in multiples of Rs. 500/- may be ascertained on application to our nearest branch.

ಬೊಂಬಾಯಿಯಲ್ಲಿ ಗುಂಡು ಹಾರಾಟ.

ನೇತಾಜೀ ಸುಭಾಸರ ಹುಟ್ಟು ಹಬ್ಬದ ಕೋಲಾಹಲ.

ಜನವರಿ ತಾ. 23ರಲ್ಲಿ ದೇಶದ ಎಲ್ಲಾ ಕಡೆಗಳಲ್ಲೂ ನೇತಾಜೀ ಸುಭಾಸ್ ಬೋಸ್ ಜನ್ಮದಿನಾಚರಣೆ ನಡೆಯಿತು. ಕೆಲವು ಕಡೆಗಳಲ್ಲಿ ಲಾಠೀ ಚಾರ್ಜ್, ದಸ್ತಗಿರಿ, ಗುಂಡು ಹಾರಾಟಗಳೂ ನಡೆದಿವೆ. ಬೊಂಬಾಯಿಯಲ್ಲಂತೂ ಎರಡು ಮೂರು ದಿನ ಜನತಂಡ ಮತ್ತು ಪೋಲೀಸರೊಳಗೆ ತೀವ್ರ ಸ್ಪರ್ಧೆ ನಡೆಯಿತು. ಜನರ ಮೇಲೆ ಕಣ್ಣೀರ ಹೊಗೆ, ಲಾಠಿ ಮತ್ತು ಗುಂಡು ಪ್ರಯೋಗ ನಡೆದು ಹಲವರು ಮಡಿದರು; ಇನ್ನೆಷ್ಟೋ ಮಂದಿ ಜಖಂಗೊಂಡರು. ಈ ಅತಿರೇಕಾಚರಣೆಗಳ ವಾರ್ತೆಯು ರಾಷ್ಟ್ರದ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸಿ ಹಾಹಾಕಾರವನ್ನೆಬ್ಬಿಸಿದೆ.

ತಾ 23ರಲ್ಲಿ

ಬೊಂಬಾಯಿಯ ನೇತಾಜೀ ಬೋಸ್ ದಿನಾಚರಣಾ ಸಮಿತಿಯ ಕಾರ್ಯಕ್ರಮದಂತೆ ಹೊರಡಲಿದ್ದ ಮೆರವಣಿಗೆಗಳು ಭೆಂಡಿ ಬಝಾರ್ ಮತ್ತಿತರ ಮುಸಲ್ಮಾನ್ ವಲಯಗಳಲ್ಲಿ ಸಂಚರಿಸಬಾರದೆಂದು ಪೋಲಿಸ್ ಕಮಿಶನರರು ಬಹಿಷ್ಕಾರ ಹಾಕಿದ್ದರು. ತಾ. 23ನೇ ಮುಂಜಾನೆ ನಿಶ್ಚಯದಂತೆ ಚೌಪಾಟೀ ಮೈಲದಂಡದಿಂದ ಸಾವಿರಾರು ಮಂದಿಯಿದ್ದ ಮೆರವಣಿಗೆ ಹೊರಟಿತು ಭೆಂಡಿ ಬಝಾರನ್ನೇ ಗುರಿಯಾಗಿಟ್ಟುಕೊಂಡ ಈ ಮೆರವಣಿಗೆ ಸ್ಯಾಂಡ್‌ಹರ್ಸ್ಟ್ ರಸ್ತೆ' ಮತ್ತು 'ವಿಟ್ಠಲ ಭಾಯಿ ಪಟೇಲ್ ರಸ್ತೆ' ಕೂಡುವಲ್ಲಿಯ ಪ್ರಾರ್ಥನಾ ಸಮಾಜದ ಬಳಿಗೆ ಬಂದಾಗ ಪೋಲೀಸ್ ಪಡೆಯೊಂದಿಗೆ ಕಮಿಶನರರು ಬಂದದನ್ನು ತಡೆದರು. ಮೆರವಣಿಗೆ ತನ್ನ ಹಾದಿ ಬದಲಾಯಿಸಲೊಪ್ಪಲಿಲ್ಲ; ಪೋಲೀಸರು ಕೋಟೆಕಟ್ಟಿ ನಿಂತು ಬಿಟ್ಟರು. ಮೆರವಣಿಗೆಯ ಜನ ರಸ್ತೆಯಲ್ಲೇ ಬಹಳ ಹೊತ್ತು ಮುಷ್ಕರ ಹಿಡಿದು ಕುಳಿತು ಬಿಟ್ಟಿತು. ಪೋಲಿಸ್ ಕಮಿಶನರರು ಕೊನೆಯ ಎಚ್ಚರಿಕೆ ಕೊಟ್ಟು 'ಕಣ್ಣೀರ ಹಬೆ'ಯನ್ನು ಪ್ರಯೋಗಿಸ ಹತ್ತಿದೊಡನೆ ಜನರಲ್ಲಿ ಹೆಚ್ಚಿನವರು ತಬ್ಬಿಬ್ಬಾಗಿ ಚದರಿದರು. ಆಗ ಆಸುಪಾಸಿನ ಕಟ್ಟಡ ಮತ್ತು ಗಲ್ಲಿಗಳಿಂದ ಪೋಲೀಸರ ಮೇಲೆ ಕಲ್ಲುಗಳು ಬಿದ್ದುವೆಂದು ತಿಳಿದು ಬರುತ್ತದೆ ಪೋಲೀಸರು ಎಲ್ಲರ ಮೇಲೂ ಲಾಠೀ ಚಾರ್ಜ್ ಮಾಡಿದರು.

ಉಗ್ರ ತಿಕ್ಕಾಟ

ಮೆರವಣಿಗೆಯ ಮುಂಚೂಣಿ ದಳವಾಗಿ ಸುಭಾಸ್ ಚಿತ್ರದೊಂದಿಗೆ ಹೊರಟಿದ್ದ ಸುಮಾರು 30 ಮಂದಿ ಮಹಿಳೆಯರು ಮಾತ್ರ ಪೋಲಿಸರ 'ಕಣ್ಣೀರ ಹಬೆ'ಯನ್ನೂ ಗಣಿಸದೆ ಕುಳಿತಿದ್ದರು. ಅಕ್ಕಪಕ್ಕದ ಉಪ್ಪರಿಗೆಗಳಲ್ಲಿದ್ದವರು ಬಾಲ್ದಿ ಬಾಲ್ದಿ ನೀರು ಸುರಿದು ಮಹಿಳೆಯರ ಮೇಲೆ ಹೊಗೆಯ ಪರಿಣಾಮವಾಗದಂತೆ ಮಾಡುತಿದ್ದರು ಹೀಗೆಯೇ ನಡೆಯುತಿದ್ದಾಗ ಸುಮಾರು ಮುನ್ನೂರು ಮಂದಿ ಇಂಡೋನೇಶಿಯರ ಒಂದು ಮೆರವಣಿಗೆ ಇವರನ್ನು ಕೂಡಿಕೊಳ್ಳಲು ಬಂತು. ಪೋಲಿಸರು ಅವರನ್ನು ಸುತ್ತುಗಟ್ಟಿ ಅಡ್ಡ ಹಾದಿ ಹಿಡಿಸಿದರು. ಅಲ್ಲಲ್ಲಿಂದ ಸಣ್ಣ ಪುಟ್ಟ ದಳಗಳು ಹೊರಡ ಹತ್ತಿದುವು. ನಿಷೇಧಿತ ಸ್ಥಳದೊಳಗೆ ನುಗ್ಗಲು ಪ್ರಯತ್ನಿಸಿ ಪೋಲೀಸರಿಂದ ಚೆದರಿಸಲ್ಪಟ್ಟುವು. ಈ ಕಣ್ಣುಮುಚ್ಚಾಲೆ ಬಾರಿ ಬಾರಿಗೂ ನಡೆಯ ಹತ್ತಿತು ಕೊನೆಕೊನೆಗೆ ಸಹನೆ ತಪ್ಪಿದ ಪೋಲೀಸರು ಎಲ್ಲಾ ಕಡೆಗೂ 'ಕಣ್ಣೀರ ಊಗಿ' ಸುರಿಸಿದ್ದಲ್ಲದೆ ಜನರನ್ನು ಓಣಿ, ಗಲ್ಲಿ, ಮನೆಯೊಳಕ್ಕೂ ಓಡಿಸಿ ಓಡಿಸಿ ಹೊಡೆದರು. ಸಹಿಸಲಾರದೆ ಜನರೂ ಕಲ್ಲು, ಸೋಡಾ ಬಾಟ್ಲಿಗಳನ್ನು ಎಸೆಯ ಹತ್ತಿದ್ದರಿಂದ ಪೋಲಿಸಗಾ ಮೇಲೆ ಗುಂಡು ಹಾರಿಸಿದರು ಆ ದಿನ ಹಿಡೀ ಹಲವು ಸಲ ಗೋಳಿಬಾರು ನಡೆಯಿತು. ಪರಿಣಾಮವಾಗಿ 10 ಮಂದಿ ಮಡಿದರೆಂದೂ, ಗುಂಡು ಬಿದ್ದು ಆಸ್ಪತ್ರೆ ಸೇರಿದವರ ಸಂಖ್ಯೆ ನೂರನ್ನು ಸಮೀಪಿಸಬಹುದೆಂದೂ ವಾರ್ತೆಯಿದೆ. ಉರಿ ಹಬೆಯಿಂದ ಆಘಾತಗೊಂಡು ಆಸ್ಪತ್ರೆಯ ಮತ್ತು ಖಾಸಗೀ ಚಿಕಿತ್ಸೆಗೊಳಗಾದವರು ನೂರಾರು ಮಂದಿ. ಪೋಲಿಸ್ ಅಸಿಸ್ಟೆಂಟ್ ಕಮಿಶನರರಿಗೆ ಸೋಡಾ ಬಾಟ್ಲಿಯ ಘಾಯವಾಗಿದೆ.

ತಾ. 24ರಲ್ಲಿ

ಹಿಂದಿನ ದಿನ ಶಾಂತವಿದ್ದ ಗಿರ್ಗಾಂವ್ ರಸ್ತೆಯಲ್ಲಿ ಈ ದಿನ ಮಹಾಗೊಂದಲಕ್ಕಾರಂಭವಾಯಿತು. ಉದ್ರೇಕಿತ ಜನತಂಡವು ಟ್ರಾಮು ಮತ್ತು ಇತರ ವಾಹನಗಳನ್ನು ತಡೆಗಟ್ಟಿ ಗಲಭೆ ಮಾಡಹತ್ತಿತು. ಕೊನೆಕೊನೆಗೆ ಟ್ರಾಮುಗಳಿಗೆ ಬೆಂಕಿ ಹಚ್ಚಿದ್ದಲ್ಲದೆ, ನಂದಿಸಲು ಬಂದ ನೀರು ವಾಹನಗಳ ಮೇಲೆ ಕಲ್ಲುಗಳು ಬಿದ್ದುವು. ಪೋಲೀಸರು ಈ ದಿನ ಪುನಃ ಬಾರಿ ಬಾರಿಗೂ ಲಾಠೀ ಚಾರ್ಜು ಮತ್ತು ಗುಂಡು ಹಾರಾಟ ನಡಿಸಿದರು. ಸತ್ತವರ ಶವ ಮೆರವಣಿಗೆ, ಸಶಸ್ತ್ರ ಪೋಲಿಸರ ಧಾಳಿ, ಜನರ ನುಗ್ಗಾಟಗಳಿಂದ ನಗರವಿಡೀ ದಂಗು ಬಡೆದಿತ್ತು. ಕೆಲವು ಭಾಗಗಳಂತೂ ಪ್ರತ್ಯಕ್ಷ ರಣರಂಗವಾಗಿ ಮಾರ್ಪಡಿಸಿದ್ದುವು. ಹಲವು ಅಂಗಡಿಗಳೂ ಲೂಟಾಯಿಸಲ್ಪಟ್ಟವು. ಪೋಲಿಸರಲ್ಲಿ ಕೆಲವರಿಗೆ ಕಲ್ಲು ಮತ್ತು ಸೋಡಾ ಬಾಟ್ಲಿ ಹೊಡೆತಗಳ ಜಖಮುಗಳಾಗಿವೆ. ತಾ 23 ಮತ್ತು 24ರಲ್ಲಿ ಸುಮಾರು 170000 ಗಿರಣಿ ಕೆಲಸಗಾರರು ಮುಷ್ಕರ ಹಿಡಿದಿದ್ದರು. ಈ ದಿನ ಮಧ್ಯಾಹ್ನದಿಂದ ಸಂಜೆ 7 ಘಂಟೆಯ ವರೆಗೆ ಧೋಬಿ ತಲಾವಿನಿಂದ ಒಪೆರಾ ಭವನದ ವರೆಗಿನ ಸುಮಾರು ಒಂದೂಕಾಲು "ಮೈಲುದ್ದದ ಗಿರ್ಗಾಂವ್ ರಸ್ತೆಯಲ್ಲೇ ಪೋಲಿಸರು 100 ಬಾರಿ ಗುಂಡು ಹಾರಿಸಿದ್ದರೆಂದು ತಿಳಿದು ಬರುತ್ತದೆ.

ತಾ. 25ರಲ್ಲಿ

ಮುಂಜಾನೆ ಎಲ್ಲವೂ ಶಾಂತವಿತ್ತು. ಬಸ್ಸು, ಟ್ರಾಮುಗಳು ನಿರಾತಂಕವಾಗಿ ತಿರುಗಹತ್ತಿದ್ದುವು. ಶಾಲಾ ಕಾಲೇಜುಗಳೂ ತುಂಬಿದ್ದುವು. ಕಾಂಗ್ರೆಸ್ ಹರತಾಳ ಘೋಷಿಸಿದೆ ಎಂಬ ಗಾಳಿ ಸುದ್ದಿಯನ್ನು ಅಲ್ಲಗಳೆದು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಪಾಟೀಲರು ಎಲ್ಲರೂ ಬಾಗಿಲು ತೆರೆ"ವಂತೆ ವಿಜ್ಞಾಪಿಸಿಕೊಂಡುದರಿಂದ ಅಂಗಡಿಗಳೆಲ್ಲಾ ತೆರೆಯಲ್ಪಟ್ಟಿದ್ದುವು ಆದರೀ ಶಾಂತಿ ಅಲ್ಪಾಯುಷ್ಯದ್ದಾಯಿತು ಪುಂಡರ ತಂಡವೊಂದು ಕಲ್ಬಾದೇವಿ ರಸ್ತೆ ಮತ್ತು ಪ್ರಿನ್ಸೆಸ್ ಸ್ಟ್ರೀಟಿನ ಅಂಗಡಿ ದರೋಡೆಗಾರಂಭಿಸಿತು. ಒಂದು ಧಾನ್ಯದಂಗಡಿಯ ಬಾಗಿಲೊಡೆದು ಸಾಮಾನೆಲ್ಲಾ ಸೂರೆಯಾಯಿತು. ಪಾನೀಯದಂಗಡಿಯೊಂದನ್ನು ಲುಟಾಯಿಸಿ ಸುಮಾರು 2 ಸಾವಿರ ಸೋಡಾ ಬಾಟ್ಲಿಗಳನ್ನೊಯ್ದರೆಂಬ ವಾರ್ತೆ ಪೋಲೀಸರನ್ನು ಹೆದರಿಸಿತು. ಪುನಃ ಪೋಲೀಸರಿಂದ ಕಣ್ಣೀರ ಹಬೆ, ಲಾಠಿ, ಗುಂಡು ಪ್ರಯೋಗಗಳಿಗಾರಂಭ. ಈ ದಿನವೂ ಪ್ರಾಣ ಸೊತ್ತು ಹಾನಿಗಳಾದುವು. ಪೋಲಿಸ್ ಕಮಿಶನರರು ರಾತ್ರಿ 9 ಘಂಟೆಯಿಂದ ಮುಂಜಾನೆ 6 ಘಂಟೆಯ ವರೆಗೆ ಕರ್ಫ್ಯೂ ಆಜ್ಞೆ ಜ್ಯಾರಿಗೆ ತಂದರು. ಈ ಶಾಸನವು ಗಲಭೆಯ ಕ್ಷೇತ್ರಗಳಾದ ಕಲ್ಬಾದೇವಿ ರಸ್ತೆ, ಗಿರ್ಗಾಂವ್ ರಸ್ತೆ, ಭಟ್ವಾಡಿ ರಸ್ತೆ, ಫಲ್ಕ್‌ಲ್ಯಾಂಡ್ ರಸ್ತೆ ಮತ್ತು ಕೇಶವ ಬೀದಿಯ ಮಟ್ಟಿಗೆ ಮಾತ್ರ. ಈ ದಿನವೂ ಪೋಲೀಸರು ಏಳು ಬಾರಿ ಗುಂಡು ಹಾರಿಸಬೇಕಾಯಿತು, ಕರ್ಫ್ಯೂ ಆಜ್ಞೆಯೊಂದಿಗೆ ಯಾವ ಆಯುಧವನ್ನೂ ಧರಿಸಬಾರದು— ಐದ ಮಂದಿಗಿಂತ ಹೆಚ್ಚಿಗೆ ಸೇರಬಾರದು-ಎಂಬ ನಿಷೇಧವೂ ಬಂದಿತ್ತು. ತಾ 26ರಂದ ಪರಿಸ್ಥಿತಿ ಹತೋಟಿಗೆ ಬಂದಂತೆ ಕಾಣುತ್ತಿದೆ. ಸುಮಾರು 25000 ಮಂದಿಯುಳ್ಳ ಕಾಂಗ್ರೆಸ್ ಸ್ವಯಂಸೇವಕರು ಮತ್ತು ಕೆಲಸಗಾರರ ಒಂದು 'ಶಾಂತಿ ದಳ'ವನ್ನು ಬೊಂಬಾಯಿ ಕಾಂಗ್ರೆಸ್ ಕಮಿಟಿ ರಚಿಸಿದೆ. ಈ ದಳವು ಪ್ರತಿಯೊಂದು ಗೊಂದಲ ಪ್ರದೇಶದಲ್ಲೂ ಹಾಜರಿದ್ದುದರಿಂದ ಪುಂಡರ ಆಟ ನಡೆಯುತಿಲ್ಲ.

ಗೊಂದಲದ ಪ್ರತಿಕ್ರಿಯೆ

ಬೊಂಬಾಯಿ ಅತಿರೇಕದ ಪರಿಣಾಮವು ಮೂಲೆಮೂಲೆಗೂ ಬಡಿದಂತಿದೆ. ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಪೋಲಿಸ್ ಜುಲುಮನ್ನು ಖಂಡಿಸಿ ಸಾರ್ವಜನಿಕ ವಿಚಾರಣೆಯಾಗಬೇಕೆಂದಿದ್ದಾರೆ. ತಾ. 23ರಲ್ಲಿ ಬೊಂಬಾಯಿಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ. ಭುಲಾಭಾಯಿಯವರು ಉಜ್ವಲ ಭಾಷಣವಿತ್ತು "ನೇತಾಜಿ ಬೋಸರು ಸತ್ತಿರಬಹುದು ಆದರೆ ಅವರ ಸ್ಫೂರ್ತಿಯು ಚಿರಂಜೀವಿಯಾಗಿರುವದು. ಪೋಲೀಸ್ ಅತ್ಯಾಚಾರ ಮತ್ತು ಬಾಂಬುಗಳಿಂದ ಕೂಡಾ ಅವುಗಳನ್ನು ದಮನಿಸಲು ಸಾಧ್ಯವಿಲ್ಲ" ಎಂದರು. ಕೆಂಪುಕೋಟೆಯ ತ್ರಿನಾಯಕರಲ್ಲೊಬ್ಬರಾದ ಶ್ರೀ. ಧಿಲ್ಲೋನರು ಆ ಸಭೆಯು ಶಿಸ್ತಿನಿಂದಿರಬೇಕೆಂದು ವಿಜ್ಞಾಪಿಸಿಕೊಂಡರು. ಬೊಂಬಾಯಿ ಮೆರವಣಿಗೆಯವರು ಮುಸ್ಲಿಂ ಲೀಗಿನವರೊಡನೆ ಮೊದಲೇ ಒಪ್ಪಂದ ಮಾಡಿಕೊಂಡಿದ್ದರೆಂದೂ, ಮುಸ್ಲಿಂ ವಲಯಗಳಿಗೆ ಮೆರವಣಿಗೆ ಹೋದರೆ ಗಲಭೆಯಾಗುವದೆಂಬ ಸರಕಾರದ ವಾದವು ನಿರಾಧಾರವೆಂದೂ ತಿಳಿದುಬರುತ್ತದೆ. ಬೊಂಬಾಯಿ ಅತ್ಯಾಚಾರವನ್ನು ಖಂಡಿಸಿ ದೇಶದಲ್ಲೆಲ್ಲಾ ನಿಷೇಧ ಸಭೆಗಳು ನಡೆದಿವೆ. ಮದ್ರಾಸಿನಲ್ಲಿ ವಿದ್ಯಾರ್ಥಿಗಳ ನಿಷೇಧ ಮೆರವಣಿಗೆಯು, ಪಾರ್ಲಿಮೆಂಟರೀ ಶಿಷ್ಟ ಮಂಡಲವು ರಾಜಾಜಿಯೊಡನೆ ಸಂಭಾಷಿಸುತ್ತಿದ್ದ ಕಟ್ಟಡದೆದಿರು ಮಹಾ ಪ್ರದರ್ಶನ ನಡೆಸಿತು. ಕೇಂದ್ರ ಎಸೆಂಬ್ಲಿಗೆ ಬೊಂಬಾಯಿ ಗಲಭೆಗಾಗಿ ನಿಲುವಳಿ ಸೂಚನೆ ಬಂದಿದೆ. ಪಾರ್ಲಿಮೆಂಟಿನಲ್ಲಿ ಈ ಕುರಿತು ಪ್ರಶ್ನೆ ಬಂದಾಗ 'ಅಧಿಕೃತ ವರದಿ ಬಂದಿಲ್ಲ'ವೆಂದು ಭಾರತದ ಉಪಕಾರ್ಯದರ್ಶಿ ಹೆಂಡರ್ಸನರಂದಿದ್ದಾರೆ. ಪೋಲೀಸರ ಗುಂಡೆಸೆತವನ್ನು ಪಂಡಿತ ನೆಹರುಗಳು ತೀವ್ರವಾಗಿ ಖಂಡಿಸಿದ್ದಾರೆ. ಗಾಂಧಿಜೀ ಬೊಂಬಾಯಿ ಹಿಂಸೆಗಾಗಿ ಮನನೊಂದಿದ್ದಾರೆ.

1000's SAVED
MARGARET'S
FITS CURE
Stops children's fits in 3 minutes.
Ask your chemist for a box
Sole Agents :
BRIGHTSTAR AGENCIES,
Hospital Rd., Udipi, S. K.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

CHAMPAE'S
Snow & Castrex
(Sole Distributors for India.)
Prop. K. G. NAYAK,
Santhekatte, UDIPI, S. K.

ದ. ಕ. ಜಿಲ್ಲೆಯ ಅಧಿಕ ಸಂಖ್ಯಾಕ ಸಮಾಜಕ್ಕೆ ಎಸೆಂಬ್ಲಿ ಸ್ಥಾನವೇಕಿಲ್ಲ?

(ಓರ್ವ 'ನಿಷ್ಪಕ್ಷಪಾತಿ'ಯಿಂದ)

ಮದ್ರಾಸ್ ಎಸೆಂಬ್ಲಿ ಚುನಾವಣೆಯ ದಿನ ನಿಶ್ಚಯವಾಗಿಲ್ಲವಾದರೂ ಮಾರ್ಚ ಅಂತ್ಯದೊಳಗೆ ಚುನಾವಣೆ ನಡೆಯುವದು ಸಂಭವನೀಯವೆಂದು ಸರಕಾರದ ಪ್ರಕಟಣೆಯಿದೆ. ಉಮೇದ್ವಾರಗಳು ಈಗಲೇ ಸಿದ್ಧರಾಗಬೇಕಾದುದು ಸ್ವಾಭಾವಿಕ. ಅಂತೆಯೇ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡು ದಕ್ಷಿಣ ಕನ್ನಡ ಜಿಲ್ಲೆಯ ಎಸೆಂಬ್ಲಿ ಸ್ಥಾನಗಳಿಗೆ ತನ್ನ ಪಕ್ಷದ ಉಮೇದ್ವಾರಗಳನ್ನು ಇಷ್ಟರಲ್ಲೇ ನಿಶ್ಚಯಿಸಿರುವ ವಾರ್ತೆ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಕಾಂಗ್ರೆಸ್ ಬಿಲ್ಲೆ ತೊಟ್ಟವರೇ ಚುನಾವಣಾ ವಿಜಯಿಗಳೆಂಬುದು ಈಗಲೇ ಸ್ವತಃ ಸಿದ್ಧವಾಗಿರುವ ವಿಷಯ. ಸ್ವಾತಂತ್ರ್ಯದ ಗುರಿ ಮತ್ತು ಜನಹಿತಾಕಾಂಕ್ಷೆಯುಳ್ಳ ಕಾಂಗ್ರೆಸ್ಸೇ ಗೆಲ್ಲಬೇಕೆಂಬುದು ಜಿಲ್ಲೆಯ ಜನತೆಯ ಉತ್ಕಟೇಚ್ಛೆ. ಹೀಗಿರುವಾಗ ಚುನಾವಣೆಯಲ್ಲಿ ಏನೊಂದೂ ಪಕ್ಷಪಾತ ಅಥವಾ ಅನ್ಯಾಯ ನಡೆಯದಂತೆ ನೋಡುವ ಜವಾಬ್ದಾರಿಯು ಉಮೇದ್ವಾರಗಳನ್ನು ನೇಮಿಸುವ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನದ್ದಿದೆ. ಕಾಂಗ್ರೆಸಿನ ಸೂತ್ರಧಾರಿಗಳು ಈ ಬಾರಿ ಆ ಹೊಣೆಯನ್ನು ನಿರ್ವಂಚನೆಯಿಂದ ನಿರ್ವಹಿಸಿರುವರೇ? ಜಿಲ್ಲೆಯ ಅಧಿಕ ಸಂಖ್ಯಾಕರ ಅಂತರಂಗದಲ್ಲಿ ಕೊರೆಯುತ್ತಿರುವ ಕೆಲವು ವಿಷಯಗಳನ್ನು ನಾನಿಲ್ಲಿ ಸ್ಪಷ್ಟವಾಗಿ ಮುಂದಿಡಲಿಚ್ಛಿಸುತ್ತೇನೆ. ಸಂಬಂಧಪಟ್ಟವರು ಈ ಕುರಿತು ನಿರ್ವಿಕಾರ ಬುದ್ಧಿಯ ಪರಿಶೀಲನೆ ನಡಿಸಿ, ಅಧಿಕ ಸಂಖ್ಯಾಕರಿಗೆ ನ್ಯಾಯದಾನ ಮಾಡುವರೆಂದು ನಂಬುತ್ತೇನೆ.

ಬಿಲ್ಲವರಿಗೇಕೆ ಸ್ಥಾನವಿಲ್ಲ?

ಮುಸಲ್ಮಾನ್ ಮತ್ತು ಕ್ರಿಶ್ಚಿಯನರಿಗೆ ಪ್ರತ್ಯೇಕಿಸಿಟ್ಟಿರುವ ಸ್ಥಾನಗಳನ್ನು ಬಿಟ್ಟೇ ದಕ್ಷಿಣ ಕನ್ನಡ ಜಿಲ್ಲೆಯ ಸಾಮಾನ್ಯ ಮತದಾರ ಕ್ಷೇತ್ರಗಳಿಗೆ ನಾಲ್ಕು ಸ್ಥಾನಗಳಿವೆ-ಪುತ್ತೂರು ಡಿವಿಜನ್, ಕುಂದಾಪುರ ಡಿವಿಜನ್ ಮಂಗಳೂರು ತಾಲೂಕು ಮತ್ತು ಕುಂದಾಪುರ ಡಿವಿಜನಿನ ಹರಿಜನ ಸ್ಥಾನ. ಈ ನಾಲ್ಕು ಸ್ಥಾನಗಳ ಪೈಕಿ ದಿವಂಗತ ಶ್ರೀ. ಬಿ. ವಿ ಬಾಳಿಗರ ಸ್ಥಾನಕ್ಕೆ ಅನಿವಾರ್ಯವಾಗಿ ಕಾಂಗ್ರೆಸ್ ಹೊಸಬರನ್ನು ನೇಮಿಸಬೇಕಾಯಿತು. ಉಳಿದ ಮೂರು ಸ್ಥಾನಗಳಿಗೂ 1935ರಲ್ಲಿ ನೇಮಿಸಿ,ಆರಿಸಿ,ಕಳುಹಿಸಿದವರನ್ನೇ1946 ರಲ್ಲೂ ಕಾಂಗ್ರೆಸ್ ನೇಮಿಸಿದೆ. ಎಲ್ಲರೂ ಮಂಗಳೂರಿನವರೇ. ತಮ್ಮ ಪ್ರತಿನಿಧಿಯಾಗಿ ಅಂದೂ ಇಂದೂ ಪರಸ್ಥಳದವರನ್ನೇ ಎರವಿಗೆ ತರಬೇಕಾದ ದುಸ್ಥಿತಿ ತಮ್ಮದೆಂದು ಪುತ್ತೂರು, ಕುಂದಾಪುರ ಡಿವಿಜನಿನವರು ಪಶ್ಚಾತ್ತಾಪ ಪಡುವದು ಅಸ್ವಾಭಾವಿಕವಲ್ಲ. ಆದರೂ ತತ್ತ್ವ, ಯೋಗ್ಯತೆಗಳನ್ನಾಧರಿಸಿ ಈ ನೇಮಕಗಳಾಗಿದ್ದರೆ ಸ್ಥಳಾಭಿಮಾನವನ್ನು ಮರೆತುಬಿಡಬಹುದು. ಇಲ್ಲಿ ಕಾಂಗ್ರೆಸ್ ಅಂಗೀಕರಿಸಿರುವದು ಜಾತೀವಾರು ಪ್ರಾತಿನಿಧ್ಯವನ್ನು ಮಾತ್ರ. ದಕ್ಷಿಣ ಕನ್ನಡದಲ್ಲಿರುವ ಜಾತಿಗಳ ಪೈಕಿ 1935ರಲ್ಲೂ, ಈ ಸಲವೂ ಎಸೆಂಬ್ಲಿ ಸ್ಥಾನಗಳನ್ನು ಹಂಚಿದುದು ಶಿವಳ್ಳಿ ಬ್ರಾಹ್ಮಣರಿಗೊಂದು, ಗೌಡ ಸಾರಸ್ವತ ಬ್ರಾಹ್ಮಣರಿಗೊಂದು, ಬಂಟರಿಗೊಂದು—ಹೀಗೆ ಮೂರೇ ಜಾತಿಗಳಿಗೆ! ತನ್ನ ತತ್ವೈಕ್ಯನುಸಾರವಾಗಿ ಜಾತಿಭೇದವನ್ನು ಅಲಕ್ಷ್ಯಿಸಿ ಯೋಗ್ಯತೆಯೊಂದನ್ನೇ ಕಾಂಗ್ರೆಸ್ ಗಣಿಸುತ್ತಿದ್ದರೆ ಆಕ್ಷೇಪಕ್ಕೆಡೆಯಿಲ್ಲ. ಆದರೆ ಕಾಂಗ್ರೆಸು ಒಂದು ನೀತಿ ಅಥವಾ ವ್ಯಕ್ತಿಯ ಯೋಗ್ಯತೆಯ ಮಟ್ಟವನ್ನು ಆಧರಿಸದೆ ಜಾತೀಯ ತತ್ವವನ್ನೇ ಅವಲಂಬಿಸಿದೆ. ಕಳೆದ ಬಾರಿ ದೇಶಭಕ್ತ ಕಾರ್ನಾಡು ಸದಾಶಿವರಾಯರಿಗೆ ಸ್ಥಾನ ದೊರೆಯದೆ ಹೋದುದು ಈ ಕಾರಣದಿಂದಲೇ. ಜನರಲ್ಲಿ ಜಾತೀಯ ಭಾವನೆ ಹಬ್ಬಿರುವಾಗ ಜಾತೀವಾರು ನೇಮಕ ಮಾಡದೆ ಉಪಾಯವಿಲ್ಲ ಎಂದು ಕಾಂಗ್ರೆಸ್ ಸೂತ್ರಧಾರಿಗಳನ್ನುತ್ತಾರಾದರೆ ಅದಕ್ಕೊಪ್ಪಿಗೆ ಕೊಡೋಣ. ಇದಾದರೂ ನಿಷ್ಪಕ್ಷಪಾತವಾಗಿ ನಡೆಯುವದು ಬೇಡವೆ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಿಕ್ಕೆಲ್ಲಾ ಸಮಾಜಗಳಿಗಿಂತ ಅಧಿಕ ಸಂಖ್ಯೆಯಲ್ಲಿರುವವರು ಬಿಲ್ಲವರು. ಸಂಖ್ಯೆಯಲ್ಲಿ ಪ್ರಥಮ ಸ್ಥಾನ ಅವರಿಗೆ; ಈ ಕುರಿತು ಸಂದೇಹವಿದ್ದವರು ಖಾನೇಶುಮಾರಿಯನ್ನೊಮ್ಮೆ ನೋಡಲಿ. ಬಿಲ್ಲವ ಸಮಾಜವೀಗ ವಿದ್ಯೆ, ಉದ್ಯೋಗ,ವ್ಯಾಪಾರ ವ್ಯವಹಾರ ಮತ್ತು ಸಂಸ್ಥೆ ಸಂಘಟನೆಗಳಲ್ಲೂ ಮುಂದುವರಿದಿದೆ. ಈಗ ಪ್ರಾತಿನಿಧ್ಯ ಪಡೆದ ಸಮಾಜಗಳಷ್ಟು ಈ ಸಮಾಜ ಮುಂದುವರಿದಿಲ್ಲವೆಂದರೂ,ಹರಿಜನರಿಗೊಂದುಸ್ಥಾನವಿರುವಾಗಈ ಕಾರಣದಿಂದಬಿಲ್ಲವರಿಗೊಂದುಸ್ಥಾನಕೊಡದಿರಲಾದೀತೆ? ಆದರೂ ಅವರಲ್ಲೊಬ್ಬನನ್ನು ಏಕೆ ನೇಮಿಸಲಿಲ್ಲ? ಈ ನಂ.೧ನೇಸಮಾಜಕ್ಕೆ1935ರಲ್ಲೂಸ್ಥಾನಕೊಡಲಿಲ್ಲ-ಆ ಮೇಲಿನ11ವರ್ಷಗಳ ನಂತರ ನಡೆಯುವ ಚುನಾವಣೆಯಲ್ಲೂ ಪ್ರಾತಿನಿಧ್ಯವಿಲ್ಲವೆಂದರೆ ಇದು ಅಧಿಕ ಸಂಖ್ಯಾಕರನ್ನು ಪೂರ್ತಿ ಮರೆತು ಬಿಟ್ಟ ಮಹಾಪರಾಧವಲ್ಲವೆ? ಎಸೆಂಬ್ಲಿಯ ಮೂರು ಸ್ಥಾನಗಳನ್ನು ಮೂರೇ ಜಾತಿಯ ವಾರೀಸುಹಕ್ಕಾಗಿ ಇಡುವದಕ್ಕಿಂತ ಈ ಬಾರಿಯಾದರೂ ಒಂದು ಸ್ಥಾನವನ್ನು ಬಿಲ್ಲವರಿಗೇಕೆ ಕೊಡಬಾರದು? ಮಿ. ಜಿನ್ನರ ಪಾಕಿಸ್ತಾನ್ ಬೇಡಿಕೆಯು ನಮಗೀಗ ಅಸಹನೀಯವಾಗಿದೆ. ಆದರೆ ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ, ಪ್ರಬಲ ಸಮಾಜವೊಂದನ್ನು ಶಾಶ್ವತವಾಗಿ ಕಡೆಗಣಿಸುತ್ತಾ ಬಂದಲ್ಲಿ ಅದು ಜಿಗುಪ್ಸೆಗೊಂಡು ಪ್ರತೀಕಾರಕ್ಕೆ ತೊಡಗಿ ಕೊನೆಗೆ ಅಂತಹ ಪ್ರತ್ಯೇಕತೆಗೆ ಪ್ರಯತ್ನಿಸುವುದು ಸ್ವಾಭಾವಿಕವೆಂದು ಕಾಣದಿರದು. ಇದೀ ಜಿಲ್ಲೆಯಲ್ಲಿ ಅಗ್ರಗಣ್ಯ ಸಂಖ್ಯಾಸ್ಥಾನದಲ್ಲಿರುವ ತಮಗೆ ಸುಮಾರು ಹದಿನಾರು ವರುಷಗಳ ವರೆಗೆ ಒಂದು ಎಸೆಂಬ್ಲಿ ಸ್ಥಾನವನ್ನೂ ಕಾಂಗ್ರೆಸ್ ಕೊಟ್ಟಿಲ್ಲವೆಂಬ ಪಶ್ಚಾತ್ತಾಪವು ಬಿಲ್ಲವ ಸಮಾಜದಲ್ಲಿ ಎಷ್ಟಿರಬಹುದು ಎಂಬುದನ್ನು ಸಂಬಂಧಪಟ್ಟವರು ಊಹಿಸಬೇಕು; ಅದೂ ತಮ್ಮ ಕಣ್ಣೆದಿರಲ್ಲಿ ತಮಗಿಂತ ಅಲ್ಪಸಂಖ್ಯಾಕರು ಸ್ಥಾನಮಾನಗಳನ್ನು ಅನುಭೋಗಿಸುತ್ತಿರುವಾಗ—ತಾವಿನ್ನೂ ಪ್ರಾತಿನಿಧ್ಯ ಪಡೆಯುವ ಮಾನವಸಹಜ ಮಟ್ಟಕ್ಕೆ ಬಂದಿಲ್ಲವೆಂಬಂತೆ ತಮ್ಮನ್ನವರು ಅಪ್ರತ್ಯಕ್ಷವಾಗಿ ಹಂಗಿಸುತ್ತಿರುವಾಗ—ಈ ಪಕ್ಷಪಾತವು ಬಿಲ್ಲವ ಸಮಾಜಕ್ಕೆ ಅಸಹನೀಯವಾಗುವದು ಸಹಜವಲ್ಲವೆ? ಈಗ ಕೂಡಾ ಕಾಲ ವಿಳಂಬವಾಗಿಲ್ಲ. ನಾಮಪತ್ರವೊಪ್ಪಿಸುವ ದಿನ ಹಿಂದಿದೆ. ಕಾಂಗ್ರೆಸ್ ಅಧಿಕಾರಿಗಳು ಇನ್ನಾದರೂ ತಪ್ಪನ್ನು ತಿದ್ದಿಕೊಂಡು ಅಧಿಕ ಸಂಖ್ಯಾಕರಿಗೆ ನ್ಯಾಯ ದಾನ ಮಾಡುವರೆಂಬ ನಿರೀಕ್ಷೆಯಿಂದ ಈ ವಾದವನ್ನು ಮುಂದಿಡಲಾಗಿದೆ.

ಜಾತಿ ಪ್ರಾತಿನಿಧ್ಯದ ಬದಲಿಗೆ ಜನತಾ ಪ್ರಾತಿನಿಧ್ಯವನ್ನೇ ಗಣಿಸಿ ಯೋಗ್ಯತೆಯ ಮೇಲಿಂದ ಉಮೇದ್ವಾರಗಳನ್ನು ನೇಮಿಸುವದು ಉತ್ತಮ. ಅದು ಅಸಾಧ್ಯವಾಗುವ ಸಂದರ್ಭದಲ್ಲಿ ಅನಿವಾರ್ಯವಾಗಿ ಕೊಡುವ ಜಾತೀಯ ಪ್ರಾತಿನಿಧ್ಯ ಮಧ್ಯಮ; ಜಾತೀ ಪಕ್ಷಪಾತತೆಯಂತೂ ಎಂತಹ ಸಂದರ್ಭದಲ್ಲಾದರೂ ಅಧಮಾಧಮ! ಮುಸಲ್ಮಾನರಿಗೆ ಪ್ರತ್ಯೇಕ ಮತದಾನ ಹಕ್ಕನ್ನೂ ಕ್ರಿಶ್ಚಿಯನ್ ಮತ್ತು ಹರಿಜನರಿಗೆ ಪ್ರತ್ಯೇಕ ಸ್ಥಾನಗಳ ಹಕ್ಕನ್ನೂ ಸರಕಾರವೇ ಕೊಟ್ಟಿದೆ. ಹಿಂದುಗಳೊಳಗಿನ ಜಾತಿಗಳಿಗೆ ಕಾಂಗ್ರೆಸ್ ತನ್ನ ನೇಮಕಗಳ ಮೂಲಕ ಪ್ರಾತಿನಿಧ್ಯ ಕೊಡುತ್ತಿದೆ. ಅಂತೂ ನಮ್ಮಲ್ಲೀಗ ಜಾತೀವಾರು ಪ್ರಾತಿನಿಧ್ಯವೇ ಇರುವಾಗ ಒಂದು ಪ್ರಮುಖ ಸಮಾಜಕ್ಕೆ ದೀರ್ಘಾವಧಿ ಸ್ಥಾನವಿಲ್ಲದಿರುವದೆಂದರೆ, ಅದರಲ್ಲೂ ಈ ಅನ್ಯಾಯವು ಕಾಂಗ್ರೆಸಿನಿಂದಾಗುವದೆಂದರೆ ನಿಜಕ್ಕೂ ಶೋಚನೀಯ!

ಇನ್ನೊಂದು ವಿಷಯ. ಎಸೆಂಬ್ಲಿಗೆ ಹೋಗುವ ಕಾಂಗ್ರೆಸ್ ಪ್ರತಿನಿಧಿಗಳ ಮೇಲೆ ಸ್ಥಳೀಯ ಅಭಿವೃದ್ಧಿ ಸಾಧಿಸುವ ಪ್ರತ್ಯೇಕ ಹೊಣೆಯೊಂದಿದೆ. ರಾಷ್ಟ್ರ ಹಿತವ

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧ್ರವೂ ಶುದ್ಧ ಪಂಚಾಂಗವೆಂದರೆ—
ಉಡುಪಿ ಪಂಚಾಂಗಂ
ವ್ಯಯ ಸಂ॥ 1946-'47.
'ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.
ಬೆಲೆ 0-4-0; Postage extra.
ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು.

UNITED WE
Offer free SERVICE IN INSURANCE.
Give full SECURITY FOR YOUR MONEY.
Guarantee PROMPT SETTLEMENT OF CLAIMS.
R[illegible] BAHADUR B. S. Sawkar, B.A., LL.B — Chairman
A. S. Kini, Managing Director
THE UNITED KARNATAKA INSURANCE CO., LTD.
H. O. DHARWAR. ESTD 1929.
Insure with or Represent us.
For Particulars apply - ORGANISING OFFICE, COURT ROAD, UDIPI.
Or
M. N. Bhandary & Co., Sp. Agents, Kodialbail, Mangalore.

The Pangal Nayak Bank Limited.
(Incorporated in 1920.)
Registered Office, Court Road, UDIPI.
Sub-Offices at— Udipi, Mangalore, Katapadi, Kanhangad, Kinnigoli, Nileshwar and Surathkal, South Canara.
SEASON DEPOSITS for THREE & FOUR months at a special rate of interest are accepted at all the above offices.
All kinds of up-to-date Banking service is provided promptly.
Please call for particulars of business.
Dated the 5th January 1946.

AGAINST DIABETES
&
all its dreadful results
Consult Specialists:
Dr. Alvas' Research Institute, FAJIR
S. KANARA.

ನ್ನೇ ಅಡಿಗಲ್ಲಾಗಿ ಇಟ್ಟುಕೊಂಡಿರುವ ಕಾಂಗ್ರೆಸ್ ಕಾರ್ಯಕ್ರಮಗಳ ವಿಧೇಯತೆ ಮಾತ್ರವಿದ್ದರೆ ಅವರು ಕೇವಲ ಕಾಂಗ್ರೆಸ್ ಪ್ರತಿನಿಧಿಗಳಾದಾರು—ದಕ್ಷಿಣ ಕನ್ನಡದ ಪ್ರತಿನಿಧಿಗಳನ್ನಿಸಲಾರರು! ಕಾಂಗ್ರೆಸ್ ಸೂತ್ರಗಳೊಂದಿಗೆ ಜಿಲ್ಲೆಯ ಅಭಿವೃದ್ಧಿಯನ್ನೂ ಸಾಧಿಸಿದರೆ ಮಾತ್ರ ಅವರು 'ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಸದಸ್ಯ'ರಾದಾರು. ಉಮೇದ್ವಾರಿಗಳಲ್ಲಿ ಈ ಯೋಗ್ಯತೆ ಮತ್ತು ಆಕಾಂಕ್ಷೆಯಿರಬೇಕು. ನೇಮಕಾಧಿಕಾರವುಳ್ಳ ಮತ್ತು ಮುಂದೆ ಸಲಹೆ ಕೊಡುವ ಸ್ಥಾನದಲ್ಲಿ ನಿಲ್ಲಲಿರುವ ಕಾಂಗ್ರೆಸ್ ಸಮಿತಿಗಳು ಇದನ್ನೂ ಗಮನಿಸಬೇಕು. ನಿದರ್ಶನಕ್ಕಾಗಿ ಮಂಗಳೂರು-ಮಲ್ಪೆ ರೈಲ್ವೇ ಲೈನು, ಮಲ್ಪೆ ಬಂದರದ ಅಭಿವೃದ್ಧಿ ಮೊದಲಾದ ಈ ಜಿಲ್ಲೆಯ ದೀರ್ಘಾವಧಿಯ ಬಯಕೆಗಳು ಇನ್ನೂ ಬಾಕಿಯಿವೆ. ಯುದ್ಧೋತ್ತರ ಪುನರ್ರಚನೆಗಳಲ್ಲಿ ಈ ಕಡೆಗೆ ಲಕ್ಷ್ಯಕೊಡುವದು ಅತ್ಯಗತ್ಯವಿತ್ತು. ಆದರೆ ಮದ್ರಾಸ್ ಪ್ರಾಂತ್ಯದ ಯುದ್ಧೋತ್ತರ ಪುನರ್ರಚನಾ ಸಮಿತಿಯಲ್ಲಿರುವ ನಮ್ಮ ಜಿಲ್ಲೆಯ ಮಾನ್ಯ ಪ್ರತಿನಿಧಿಗಳು ಈ ಬಾರಿಯ ಸಮಿತಿ ಸಭೆಯಲ್ಲೇ ಮಂಗಳೂರು-ಮಲ್ಪೆ ರೈಲ್ವೇ ಲೈನು ಅನಗತ್ಯವೆಂಬ ಅಭಿಪ್ರಾಯ ಸೂಚಿಸಿದರೆಂದು ತಿಳಿದುಬಂದಿದೆ. ಮುಖಂಡರನ್ನಿಸುವವರಿಗೆ ಇದು ಅನಗತ್ಯವನ್ನಿಸಬಹುದು. ಆದರೆ ಜಿಲ್ಲೆಯ ಮಟ್ಟಿಗೆ ಈ ಕಾರ್ಯಗಳು ಅತ್ಯಗತ್ಯ. ಇನ್ನು ಈ ಜಿಲ್ಲಾಭಿವೃದ್ಧಿ ಕಾರ್ಯಗಳನ್ನು ಸಾಧಿಸುವ ಹೊಣೆಯನ್ನು ಎಸೆಂಬ್ಲಿ ಸದಸ್ಯರೇ ಹೊರಬೇಕು. ಕೇವಲ ನ್ಯಾಯಾಕಾಂಕ್ಷೆಯಿಂದ, ನಿಷ್ಪಕ್ಷಪಾತವಾಗಿ ಮುಂದಿಟ್ಟ ಈ ಸಲಹೆಗಳಿಗೆ ಸಂಬಂಧಪಟ್ಟವರು ಯೋಗ್ಯ ಗಮನವೀಯುವರೆಂದು ನಂಬುತ್ತೇನೆ.

BANK WITH THE LARGEST CONNECTIONS ON THE WEST COAST.

OFFERS:-
EFFICIENT, PROMPT & COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD 1925

ಭಾರತದಲ್ಲಿ

ಕೇಂದ್ರ ಎಸೆಂಬ್ಲಿ ಅಧ್ಯಕ್ಷರು

ಕೇಂದ್ರ ಎಸೆಂಬ್ಲಿಯ ಅಧ್ಯಕ್ಷ ಚುನಾವಣೆಯು ತಾ. 24ರಲ್ಲಿ ನಡೆದು ಕಾಂಗ್ರೆಸ್ ಪಕ್ಷದ ಶ್ರೀ. ಜಿ. ವಿ. ಮಾವ್ಲಂಕರರಿಗೆ 66 ಮತಗಳೂ ಮುಸ್ಲಿಂ ಲೀಗ್ ಮತ್ತು ಸರಕಾರೀ ಸದಸ್ಯರ ಕಡೆಯ ಉಮೇದ್ವಾರೀ ಸರ್. ಕವಾಸ್ಜಿ ಜಹಾಂಗೀರರಿಗೆ 63 ಮತಗಳೂ ದೊರೆತು ಕಾಂಗ್ರೆಸ್ ಗೆದ್ದಿತು. ವೈಸರಾಯಿ ಕೌನ್ಸಿಲಿನ ಅಭಿವೃದ್ಧಿ ಖಾತೆಯ ಸದಸ್ಯ ಸರ್. ಅರ್ದೇಶಿರ್ ದಲಾಲರೂ, ಸರಕಾರೀ ನೇಮಿತ ಸದಸ್ಯ ಮತ್ತು ನವಾ ನಗರದ ಜಾಮ್ ಸಾಹೇಬರ ಸಹೋದರ ಲೆಫ್ಟನೆಂಟ್ ಕರ್ನಲ್ ಹಿಮ್ಮತ್ ಸಿನ್ಹಜೀಯವರೂ ಮತದಾನ ಮಾಡಲು ನಿರಾಕರಿಸಿದ್ದರು. ವೈಸರಾಯರು ಈ ಚುನಾವಣೆಯನ್ನು ಸಿಂಧುಗೊಳಿಸಿದ್ದಾರೆ.

ತೀವ್ರ ಸ್ಪರ್ಧೆ

ಈ ಬಾರಿಯ ಅಧ್ಯಕ್ಷ ಚುನಾವಣೆಯಲ್ಲಿ ಲೀಗ್ ಮತ್ತು ಸರಕಾರವೊಂದು ಕಡೆ, ಕಾಂಗ್ರೆಸ್ ಇದಿರುಕಡೆಯಾಗಿ ತೀವ್ರ ಸಮಬಲ ಸ್ಪರ್ಧೆ ನಡೆದಿತ್ತು. ಅಧ್ಯಕ್ಷತನವು ಸರ್ತಿಪ್ರಕಾರ ಹಿಂದು ಮತ್ತು ಮುಸಲ್ಮಾನರ ಹಕ್ಕಿನದಾಗಬೇಕೆಂಬುದು ಕೇಂದ್ರ ಎಸೆಂಬ್ಲಿಯ ಒಂದು ರೂಢಿ. ಅದರಂತೆ ಕಳೆದ ಬಾರಿ ಸರ್. ಅಬ್ದುಲ್ ರಹಿಮಾನರು 11 ವರುಷ ಅಧ್ಯಕ್ಷರಾಗಿದ್ದರು. ಈ ಬಾರಿ ಹಿಂದುಗಳ ಸರದಿ. ಆಗರೆ ಇತರ ಸಮಾಜಗಳಿಗೂ ಸ್ಥಾನವಿರಬೇಕೆಂಬ ಕಾರಣಕೊಟ್ಟು, ಮುಸ್ಲಿಂ ಲೀಗ್ [illegible] ಗೃಹಸ್ಥ ಸರ್. ಜಹಾಂಗೀರರಿಗೆ ಬೆಂಬಲ ಕೊಟ್ಟಿದ್ದಿತು. 'ಜೈ ಹಿಂದ್' ಜಯಘೋಷಗಳೊಡನೆ ಚುನಾವಣಾ ಫಲಿತಾಂಶ ಪ್ರಕಟವಾದೊಡನೆ ಸರಕಾರಿ, ಯುರೋಪಿಯನ್, ಮುಸ್ಲಿಂ ಲೀಗ್, ಕಾಂಗ್ರೆಸ್ ಎಂಬ ಭೇದವಿಲ್ಲದೆ ಎಲ್ಲರೂ ಅಧ್ಯಕ್ಷರನ್ನು ಅಭಿನಂದಿಸಿದರು.

ಶ್ರೀ. ಮಾವ್ಲಂಕರರು

ಗುಜರಾಥಿನವರು. ಕಳೆದ ಬಾರಿಯ ದೀರ್ಘಾಯುಷ್ಯದ ಬೊಂಬಾಯಿ ಎಸೆಂಬ್ಲಿಯ ಅಧ್ಯಕ್ಷರಾಗಿದ್ದವರು. ಅವರು ಚುನಾವಣಾ ಬಣ್ಣದ ಕಾಂಗ್ರೆಸಿಗನಲ್ಲ. 1921ರಲ್ಲಿ ವಕೀಲತ್ ಬಿಟ್ಟು ಚಳವಳದಲ್ಲಿ ಧುಮುಕಿದ್ದರು. 1930-33-34-40-41-42 ಈ ಇಸವಿಗಳಲ್ಲಿ ಶಿಕ್ಷೆ, ದಿಗ್ಬಂಧನ ಇತ್ಯಾದಿಗಳಿಗೊಳಗಾಗಿ ಜೈಲುವಾಸವನುಭವಿಸಿದ್ದರು.

ಮಹಾತ್ಮಾ ಗಾಂಧಿಯವರು

ಕಳೆದ ವಾರ ಮದ್ರಾಸಿಗೆ ಬಂದು ಅಭೂತಪೂರ್ವ ಸ್ವಾಗತಪಡೆದಿದ್ದಾರೆ. ಮದ್ರಾಸ್ ನಗರನೀಗ ಯಾತ್ರಾಸ್ಥಳದಂತಾಗಿದೆ. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಜತೋತ್ಸವದ ಅಧ್ಯಕ್ಷತೆಯನ್ನು ಗಾಂಧೀಜಿಗೆ ವಹಿಸಲಿಟ್ಟಿದ್ದರಿಂದ ಅದನ್ನು ನೆರವೇರಿಸಲಿಕ್ಕಾಗಿ ಬಂದಿದ್ದ ಗಾಂಧೀಜೀ ವಿದ್ಯಾರ್ಥಿಗಳಿಗೆ, ಕೆಲಸಗಾರರಿಗೆ, ಹರಿಜನರಿಗೆ, ವಿಶೇಷ ಉಪದೇಶಗಳನ್ನಿತ್ತು ನವಚೇತನ ನಿರ್ಮಿಸಿದ್ದಾರೆ. ಮಧುರೆ ಮತ್ತು ಪಳ್ನಿಗಳಲ್ಲಿ ಒಂದೊಂದು ದಿನದ ಕಾರ್ಯಕ್ರಮವಿರುವುದರಿಂದ ಅಲ್ಲೆಲ್ಲಾ ವಿಶೇಷ ಸಿದ್ಧತೆಗಳಾಗಿವೆ

ಗಾಂಧೀಜಿ ಟೀಕೆ

ದರ್ಶನಾಕಾಂಕ್ಷೆಯೆಂಬ [illegible] ನಿರ್ಮಿಸಿದ ತನ್ನ ಭಕ್ತ ಸಮುದಾಯದ ಶಿಸ್ತುರಹಿತ ವರ್ತನೆಯನ್ನು ಇತರ ಕಡೆಗಳಂತೆ ಮದ್ರಾಸಿನಲ್ಲಿಯೂ ಗಾಂಧಿಜೀ ಕಟು ವಾಣಿಯಿಂದ ಖಂಡಿಸಿದರು. ಹಿಂದೀ ಪ್ರಚಾರ ಸಭೆಯ ಅಧ್ಯಕ್ಷ ಭಾಷಣದಲ್ಲಿ ಎಲ್ಲರೂ ಹಿಂದುಸ್ಥಾನಿಯನ್ನು ಕಲಿಯುವಂತೆ ಒತ್ತಿ ಹೇಳಿದ್ದಾರೆ. ವಿಧಾಯಕ ಕಾರ್ಯಕ್ರಮಗಳು, ಅಸ್ಪೃಶ್ಯತೆಯ ಸಮೂಲನಾಶ, ಇತ್ಯಾದಿಗಳ ಕುರಿತು ಮಹಾತ್ಮರ ಭಾಷಣಗಳಾದುವು. ರಾಜಾಜಿ, ಮಂತ್ರಿತರ ಮದ್ರಾಸ್ ಪ್ರಮುಖರೊಡನೆಯೂ ಬೇರೆ ಬೇರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಡನೆಯೂ ಗಾಂಧೀ ಭೇಟಿ ನಡೆದಿದೆ. ಮದ್ರಾಸ್ ಗವರ್ನರರೊಡನೆಯೂ 80 ಮಿನಿಟು ಮಾತುಕತೆ ನಡೆಸಿದರು.

ಪಾರ್ಲಿಮೆಂಟರೀ ಶಿಷ್ಟ ಮಂಡಲ

ಪಾರ್ಲಿಮೆಂಟ್ ಸಮಿತಿ ಸದಸ್ಯರು ಮದ್ರಾಸಿನಲ್ಲಿ ಮಹಾತ್ಮಾ ಗಾಂಧಿಯವರೊಡನೆ ಎರಡು ಘಂಟೆಗೂ ಮಿಕ್ಕಿ ಸಂಭಾಷಿಸಿದರು. ಅಂತೆಯೇ ರಾಜಾಜಿಯೊಡನೆಯೂ ಮಾತುಕತೆ ನಡೆಸಿದರು. ಮಹಾತ್ಮಾ ಗಾಂಧಿಯವರೊಡನೆ ಅವರು ಮರುದಿನವೂ ದೀರ್ಘ ಸಂಭಾಷಣೆ ನಡೆಸಿದರು. ಗಾಂಧೀ ಸಂಭಾಷಣೆಯಲ್ಲಿ ಪ್ರತಿಯೊಬ್ಬ ಸಮಿತಿ ಸದಸ್ಯನೂ ಭಾಗವಹಿಸಿದ್ದನಂತೆ. ಈ ಮಹಾಮನುಷ್ಯನ ಮಾತುಕತೆಗಳಿಂದ ಅವರೆಲ್ಲಾ ಮೋಹಿತರಾದಂತಿದೆ. 'ಅನೋಘ ಭೇಟಿ' 'ಅಮೂಲ್ಯ ಅಭಿಪ್ರಾಯ' 'ಅಸಾಧಾರಣ ಮನುಷ್ಯ' ಎಂದು ಪ್ರತಿಯೊಬ್ಬ ಸದಸ್ಯರೂ ಗಾಂಧಿಜೀಯನ್ನು ಹೊಗಳಿದ್ದಾರೆ. ಅಂತೆಯೇ 'ಉತ್ತಮ ವರ್ಗದ ಚತುರ ನಾಗರೀಕ' ಎಂದು ರಾಜಾಜಿಯನ್ನೂ ಈ ಪಾರ್ಲಿಮೆಂಟ್ ಸದಸ್ಯರು ಶ್ಲಾಘಿಸಿದ್ದಾರೆ.

ಗಾಂಧಿಜೀಯೇನೆಂದರು?

ಮಹಾತ್ಮರು ಪಾರ್ಲಿಮೆಂಟರೀ ಸಮಿತಿಗೆ ಭಾರತದ ಭವಿಷತ್ ನಿರ್ಮಾಣದ ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಮುಂದಿಟ್ಟು ಮಾಡಿರುವರು. ಭಾರತಕ್ಕೆ ಸ್ವಾತಂತ್ರ್ಯ ಬೇಕಾಗಿದೆ; ಮೇಲಿನವನು ಕೈಕೆಳಗಿನವನಿಗೆ ಕೊಡುವ ದಾನವಾಗಿ ಹಿಂದುಸ್ಥಾನವದನ್ನು ಬಯಸುವದಿಲ್ಲ. ಸಮದರ್ಜೆಯವರೊಳಗಿನ ಕೊಡುಕೊಂಬವಾಗಿ ಅದು ಕೈಬದಲಾವಣೆ ಹೊಂದಬೇಕು. ಈ ಸ್ವಾತಂತ್ರ್ಯವನ್ನು ಬ್ರಿಟಿಷ್ ಸರಕಾರವು ಕೂಡಲೇ ಜ್ಯಾಹೀರುಮಾಡಬೇಕು. ವಿಳಂಬವಾದಲ್ಲಿ ಭಾರತದ ಪಕ್ಷ-ಪಂಗಡಗಳೊಳಗಿನ ಮತ್ತು ಭಾರತ-ಇಂಗ್ಲಾಂಡುಗಳೊಳಗಣ ವೈಷಮ್ಯ ಇನ್ನಷ್ಟು ವಿಷಮವಾಗಬಹುದು—ಎಂದು ಮುಂತಾಗಿ ಮಹಾತ್ಮರು ಈ ಶಿಷ್ಟ ಮಂಡಲಕ್ಕೆ ಮನಗಾಣಿಸಿರುವರು.

Badavara Bandhu Group Enterprises

Editors, Printers, Publishers, Bankers, Merchants, Fish Dealers, Motion Picture Producers, Exhibitors, Benefactors, Property Dealers, Provision Dealers, etc, etc

THROUGH

their associated concerns

1 The Badavara Bandhu
2 The Badavara Bandhu Printing Press, Ltd
3 Sri Narayan Guru Press
4 Sri Narayan Guru Bank Ltd.
5 The South Kanara Fish Industries, Ltd.
6 The Karnataka Theatres, Ltd
7 Janasons, Ltd.
8 The Badavara Bandhu Colonies
9 The Badavara Bandhu Orphanage Trus
10 My Stores
11 The Vijaya Stores, Ltd
12 The Badavara Bandhu Hosieries
13 The West Coast Ice Factory

Head Offices
MANGALORE, SOUTH INDIA

Telegraphic address
1. BADAVARABANDHU
2. MONEY

Post Box No 110

ನಿರೀಕ್ಷಣೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು.
ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ,
ಇವರು

'ಮುಕ್ತಿ'

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯಲ್ಲಿ ಬೇಗನೇ ಪ್ರದರ್ಶಿಸಲಿರುವರು.

ಲೇಖಕರು ನಿರ್ಮಾಣಕರು ಮತ್ತು ನಿರ್ದೇಶಕರು
ಶ್ರೀ. ಎಂ. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇನ್ನೊಂದು ನವೀನ ಪ್ರಯೋಗ [illegible] ಇದೊಂದು ಸುಸಂಧಿ [illegible] ನವೀನ ಪಾತ್ರ ವರ್ಗದವರು [illegible] ಯ ಕಳೆಯನ್ನು ಹೆಚ್ಚಿಸಿ, ತನ್ಮೂಲಕ ಕಲಾಸೇವೆ [illegible]

ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡೆಕೊಳ್ಳಿರಿ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವರು.

The Moolky Bank Ltd.,
Moolky, S. K.

The Canara Banking Corporation Limited.

(Incorporated in British India, with limited Liability.)

Estd: 1906

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... 2¼%

6 months ... 2½%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ನವಯುಗ

ಉಡುಪಿ, ಗುರುವಾರ, ೩೧-೧-'೪೬.

ಅಧಿಕಾರಿಗಳ ಅಚಾತುರ್ಯ

ಹಿಂದೂದೇಶದಲ್ಲಿ ಶಾಂತವಾತಾವರಣ ಕಂಡುಬರಬೇಕಾಗಿದ್ದ ಕಾಲವಿದು. ಕಾಯಿದೇ ಭಂಗದಂತಹ ಉಗ್ರ ಚಳವಳವಾಗಲೀ ಅವರ ಸಿದ್ಧತೆಯ ಅವಶ್ಯಕತೆಯಾಗಲೀ ಸದ್ಯಕ್ಕಿಲ್ಲ ಒದಲಿಗೆ ಒಂದು ರಾಜ್ಯಾಂಗ ರಚನಾವ್ಯವಸ್ಥೆಯ ಕಾಲವನ್ನು ರಾಷ್ಟ್ರವೀಗ ನಿರೀಕ್ಷಿಸುತ್ತಿದೆ. ಈ ನಿರೀಕ್ಷೆ ಹುಸಿಯಾಗಬಹುದು. ಆದರೆ ಭಾವೀ ಸಂಭವವನ್ನೂಹಿಸಿ ಇಂದೇ ಬೇಗುದಿಗೊಳ್ಳುವಂತಹ ದುರ್ಬಲಹೃದಯ ಹಿಂದೀಯರದಲ್ಲ. ಸಂಧಾನದಿಂದಲೇ ಸರ್ವವೂ ಸಾಧಿಸಲ್ಪಡುವದೆಂಬ ಭರವಸೆಯಿಲ್ಲದ ದೆಸೆಯಿಂದ ಅವರು ಆ ಕಡೆಗೆ ಅಸಡ್ಡೆ ತೋರಬಹುದು; ಆದರೆ ಅಷ್ಟಕ್ಕಾಗಿ ಅಶಾಂತಿ ನಿರ್ಮಿಸಲಾರರು. ಪರಿಸ್ಥಿತಿ ಹೀಗಿರುವಾಗ ಸಭೆ ಮೆರವಣಿಗೆಗಳಿಗೆ ನಿರ್ಬಂಧ, ಗೋಳೀಬಾರು, ಲಾಠಿ, ಕಣ್ಣೀರಹನಿಗಳ ಪ್ರಯೋಗಗಳಿಂದ ಶಾಂತ ವಾತಾವರಣವನ್ನು ಕೆ[illegible] ಹುರುಪು ಪೋಲೀಸರಲ್ಲೇಕೆ ಹುಟ್ಟಬೇಕೋ ಅರ್ಥವಾಗುವದಿಲ್ಲ. ಅಜಾದ್ ಹಿಂದ್ ದಿನಾಚರಣೆಗಾಗಿ ಕಲ್ಕತ್ತದಲ್ಲಿ ನಡೆದ ಗೊಂದಲದ ಧ್ವನಿ ಪೂರ್ತಿ ಅಡಗಿಲ್ಲವೆನ್ನುವಾಗಲೇ, ನೇತಾಜೀ ಸುಭಾಸ್ ಜನ್ಮ ದಿನಾಚರಣೆಯನ್ನು ನೆಪವಾಗಿಟ್ಟುಕೊಂಡು ಮೊನ್ನೆ ತಾನೇ ಬೊಂಬಾಯಿಯಲ್ಲಿ ಕೋಲಾಹಲವೆದ್ದಿದೆ ಇಂತಹ ಅತಿರೇಕಗಳು ಸಣ್ಣ ಪರಿಮಾಣದಲ್ಲಿ ರಾಷ್ಟ್ರದ ಹಲವೆಡೆಗಳಲ್ಲಿ ನಡೆದಿವೆ. 1942ನೇ ಅಗೋಸ್ಟಿನ ವಾತಾವರಣವು ದೇಶದಲ್ಲೀಗ ಇಲ್ಲವಾದರೂ ಅಂದಿನ ಪೋಲಿಸ್ ಸ್ವಭಾವ ಮಾತ್ರ ಇನ್ನೂ ನಿಂತಿದೆ ಎಂಬುದನ್ನು ಮೇಲಿನ ವಿದ್ಯಮಾನಗಳ ಸೂಕ್ಷ್ಮ ವಿಮರ್ಶೆಯಿಂದರಿಯಬಹುದು. ಇವೆಲ್ಲಾ ಗೊಂದಲಗಳಲ್ಲೊಂದು ಸಾಮ್ಯತೆಕಾಣುತ್ತಿದೆ. ನ್ಯಾಯವಾದ ಕಾರಣವೇನೂ ಇಲ್ಲದೆ, ತಮ್ಮ ಅಧಿಕಾರ ಪ್ರದರ್ಶನಕ್ಕಾಗಿಯೇ 'ಇಂತಹ ಸ್ಥಳದೊಳಗೆ ಮೆರವಣಿಗೆ ಪ್ರವೇಶಿಸಬಾರದು' ಎಂದು ಪೋಲೀಸ್ ಅಧಿಕಾರಿಗಳು ಪ್ರತಿಬಂಧಿಸುವದು-ಜನರದನ್ನು ಕಡೆಗಣಿಸಿ ಮುಂದುವರಿಯುವದು-ಪೋಲೀಸರು ಲಾಠಿ, ಕಣ್ಣೀರ ಅನಿಲ, ಗುಂಡು ಪ್ರಯೋಗ ಮಾಡುವದು—ಜನರು ಕ್ರಿಮಿ ಕೀಟಗಳಂತೆ ನಜ್ಜುಗುಜ್ಜಾಗುವದು! ಮೊನ್ನೆ ಕಲ್ಕತ್ತದಲ್ಲೂ ನಿನ್ನೆ ಬೊಂಬಾಯಿಯಲ್ಲೂ ನಡೆದುದಿಷ್ಟೆ. ಹೀಗಾಗುವದು ಅನಿವಾರ್ಯವೇ? ಬೊಂಬಾಯಿಯ ಸುಭಾಸ್ ಜನ್ಮೋತ್ಸವ ಮೆರವಣಿಗೆಯು ಮುಸಲ್ಮಾನರು ಅಧಿಕ ಸಂಖ್ಯೆಯಲ್ಲಿರುವ ಭೆಂಡಿಬಜಾರನ್ನು ಹಾದು ಹೋದರೆ (ಅಲ್ಲಿಯ ಸುಲಿಗೆಗಾಗಿ ಅದು ಹೊರಟಿರಲಿಲ್ಲ!) ಮುಸಲ್ಮಾನರದನ್ನು ತಡೆದು ಹಿಂದೂ ಮುಸ್ಲಿಂ ದಂಗೆಯೆದ್ದು ನಗರದ ಶಾಂತಿ ಭಂಗವಾಗುವದೆಂದೇ ಪೋಲೀಸ್ ಅಧಿಕಾರಿಗಳು ತಮ್ಮ ನಿಷೇಧಾಜ್ಞೆಯಲ್ಲಿ ನಮೂದಿಸಿರುವ ಕಾರಣ. ಹಲವರನ್ನು ಕೊಂದು, ನೂರಾರು ಮಂದಿಯನ್ನು ಜಖಂಗೊಳಿಸಿ, ಮಹಿಳೆಯರ ಕಣ್ಣಿಗೂ ಉರಿ ಹೊಗೆ ಹಾಕಿದುದು ಗಲಭೆಯಿರಬಾರದೆಂದು! ಮೆರವಣಿಗೆಯವರು ಮುಸ್ಲಿಂ ಲೀಗಿನವರೊಡನೆ ಮುಂದಾಗಿ ಮಾತಾಡಿಯೇ ಮುಸ್ಲಿಂ ಕ್ಷೇತ್ರದ ಕಡೆಗೆ ಮೆರವಣಿಗೆ ಹೊರಟದ್ದರೆಂದು ತಿಳಿದುಬರುತ್ತದೆ. ಅಲ್ಲದೆ ಆಸಿಯುಷ್ಟು ಮುಸಲ್ಮಾನರೇ ಇದ್ದ ಒಂದು ಸೇನೆಯ ಅಧಿಪತಿಯಾದ ಸುಭಾಸರ ಸ್ಮರಣೆ ಮಾತ್ರದಿಂದ ಮುಸಲ್ಮಾನರ ಸಹನೆ ತಪ್ಪುತ್ತದೆಂಬ ಅಧಿಕಾರಿಗಳ ತೀರ್ಮಾನವು ಕೆಪ್ಟನ್ ಶಾನವಾಜರಂಥವರಿಗೊಂದು ಕಠಿಣ ಶಿಕ್ಷೆ! ಕೇವಲ ತರ್ಕಕ್ಕಾಗಿ ಸರಕಾರದ ವಾದವನ್ನು ಒಪ್ಪಿಕೊಳ್ಳೋಣ; ಸುಭಾಸ್ ಜನ್ಮ ದಿನದ ಮೆರವಣಿಗೆ ತಮ್ಮಲ್ಲಿಗೆ ಬರುವಾಗ ಮುಸಲ್ಮಾನರು ದೊಣ್ಣೆಯಿಂದದನ್ನು ಸ್ವಾಗತಿಸುತಿದ್ದರೆಂದೇ ಊಹಿಸೋಣ. ಪೋಲೀಸರ ಗುಂಡು ಮತ್ತು ಲಾಠಿಗಳು ಅದಕ್ಕಿಂತಸಿಹಿಯಿತ್ತೆಂಬ ಸರ್ಟಿಫಿಕೇಟನ್ನು ಹೊಡೆತ ತಿಂದವರು ಕೊಡಬಲ್ಲರೆ? ಅದೂ ಹಾಗಿರಲಿ; ಇಲ್ಲಿ ಸುಭಾಸ್ ಮೆರವಣಿಗೆ ಹೊರಡುವದು ತಪ್ಪೇ-ಮುಸಲ್ಮಾನರದರ ಮೇಲೆ ಬೀಳುವದು ತಪ್ಪೆ? ಮೆರವಣಿಗೆಯ ಮೇಲೆ ಪ್ರತಿಬಂಧವಿರಲಿಲ್ಲವಾದ್ದರಿಂದ ಅದು ಕಾಯಿದೇಶೀರವಿತ್ತೆಂಬುದು ಸ್ಪಷ್ಟವಿದೆ; ಸರಕಾರಕ್ಕಾಕ್ಷೇಪವಿಲ್ಲದ ಆ ಮೆರವಣಿಗೆಯನ್ನು ಮುಸಲ್ಮಾನರಾತಂಕಿಸುತ್ತಾರಾದರೆ, ಮುಸಲ್ಮಾನರು ಹಾಗೆ ಮಾಡದಂತೆ ಪ್ರತಿಬಂಧಿಸುವದು ಸರಕಾರದ ಕರ್ತವ್ಯವಿತ್ತು. ಅಧಿಕಾರಿಗಳು ತಮ್ಮ ಅನುಮಾನಕ್ಕನುಸಾರವಾಗಿ ಮೆರವಣಿಗೆಯ [illegible] ಸಶಸ್ತ್ರ ಪೋಲೀಸರನ್ನು ಕಳುಹಿಸಿ, ಅದಾಗಲೀ, ಅದರ ಮೇಲೆ ಇತರರಾಗಲೀ ಪುಂಡಾಟಿಕೆ ನಡಿಸದಂತೆ ನೋಡುವದು ನ್ಯಾಯವಿತ್ತು. ಇಂತಹ ಸ್ಪಷ್ಟ ನ್ಯಾಯವನ್ನು ಮರೆತು, ತಿರುಗಾಮುರುಗಾ ಧೋರಣೆ ವಹಿಸಿ ಪ್ರಾಣಹಾನಿ ಮಾಡುವ ಕೃತ್ಯವು ಎಷ್ಟಕ್ಕೂ ಸಾಧುವಲ್ಲ. ದೇಶದಲ್ಲಿ ಮೇಲಿಂದ ಮೇಲೆ ನಡೆಯಹತ್ತಿರುವ ಇಂತಹ ಕೃತ್ಯಗಳಿಂದ 'ಸರಕಾರದ ನಿಶ್ಚಿತ ಧೋರಣೆಯೇ ಹೀಗಿರಬೇಕು' ಎಂಬ ಸಂದೇಹ ಬರುತ್ತದೆ. ಇದು ಶಾಂತಿಯಾಶೆಯ ನೆಲಕೆಯನ್ನೇ ಮುರಿಯುತ್ತಿದೆಯೆಂದೂ, ಸದ್ಯಸ್ಥಿತಿಯಲ್ಲಿ ಇಂತಹ ಅತಿರೇಕಗಳು ತೀರ ಶೋಚನೀಯವೆಂದೂ ಹೇಳಬೇಕಾಗಿಲ್ಲ ವಾರ್ತಹವಿಲ್ಲ.

ಮಂಗಳೂರು.

ಎಸ್ ಆರ್. ಎಸ್. ಹೋಮಿಯೋ ಹೊಸ್ಪಿಟಲ್ ದೇ ಸಮಾರಂಭವು ತಾ. 3-2-46ಕ್ಕೆ ಜಿಲ್ಲಾ ಸೆಶ್ಯನ್ ಜಡ್ಜರಾದ ಶ್ರೀ| ಕೆ. ಶ್ರೀನಿವಾಸನರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಪುತ್ತೂರು—ತಾ. 29ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ| ಕೋಟ ರಾಮಕೃಷ್ಣ ಕಾರಂತರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮಧ್ಯಾಹ್ನ ಪೇಟೆಯ ಅಂಗಡಿಗಳು ಮುಚ್ಚಲ್ಪಟ್ಟು ವರ್ತಕರೆಲ್ಲಾ ಸಭೆಯಲ್ಲಿ ಭಾಗಿಗಳಾಗಿದ್ದರು. ಸುಮಾರು 1500 ಜನರು ಸಭೆಯಲ್ಲಿ ನೆರೆದಿದ್ದರು. ಸ್ವಾತಂತ್ರ್ಯ ಪ್ರತಿಜ್ಞೆಯಾದ ನಂತರ ಶ್ರೀ| ಎಂ. ಬಿ. ನರ್ಸಪ್ಪನವರು ಧನ್ಯವಾದಗಳನ್ನಿತ್ತರು. ಬೆಳಿಗ್ಗೆ ಪ್ರಭಾತಫೇರಿ, ಮೆರವಣಿಗೆ, ಡಾ| ಬಿ. ಕೃಷ್ಣಭಟ್ಟರಿಂದ ಧ್ವಜವಂದನೆ ನಡೆದಿದ್ದವು.

ಊರ ಪ್ರಮುಖರ ತಾತ್ಕಾಲಿಕ ಚುನಾವಣಾ ಸಮಿತಿಯೊಂದು ಶ್ರೀ| ಜತ್ತಪ್ಪ ರೈಗಳ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ರಚಿಸಲ್ಪಟ್ಟಿದೆ. ಶ್ರೀ| ಕೋಟ ರಾಮಕೃಷ್ಣ ಕಾರಂತರು ಮದ್ರಾಸ್ ಎಸೆಂಬ್ಲಿಯ ತನ್ನ ಉಮೇದ್ವಾರಿಕೆಗಾಗಿ ಸಹಕಾರವನ್ನು ಕೋರಿದರು. ಶ್ರೀಗಳಾದ ಮೊಳಹಳ್ಳಿ ಶಿವರಾವ್, ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಕೆ. ರಾಮಕುಡ್ವ, ಜತ್ತಪ್ಪ ರೈ ಮೊದಲಾದವರು ಕಮಿಟಿಯಲ್ಲಿರುವರು.

ಸಂಯುಕ್ತ ಗ್ರಾಮಾಭಿವೃದ್ಧಿ ಪರಿಷತ್ತು—ಪುತ್ತೂರು ತಾಲೂಕಿನ ಕಣಿಯೂರು, ಉರುವಾಳು, ಕಳಿಯ, ನಾಯತರ್ಪು, ಬಂದಾರು, ಇಳಂತಿಲ, ಕರಾಯ, ತಣ್ಣೀರುಪಂತ ಈ ಗ್ರಾಮಗಳು ಒಟ್ಟುಸೇರಿ ಗ್ರಾಮಸ್ಥರ ಪರಿಷತ್ತು ಕಣಿಯೂರಿನಲ್ಲಿ ಶ್ರೀ| ಸವಿಾರಾಮರಾವ್ ಕೃಷಿ ಇಲಾಖೆಯ ಮುಖ್ಯಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ತಾ. 29ರಲ್ಲಿ ನೆರೆದುಬಂತು. ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ಶ್ರೀ| ಎಂ. ರಾಮಕೃಷ್ಣ ಪೂಂಜರು ನೆರವೇರಿಸುತ್ತಾ ಗ್ರಾಮಾಭಿವೃದ್ಧಿ ವಿಚಾರದಲ್ಲಿ ಚಲೋ ಭಾಷಣ ಮಾಡಿದರು. ಕೃಷಿಯ ವೃದ್ಧಿಯನ್ನು ಹೇಗೆ ಮಾಡಬಹುದೆಂಬ ವಿಚಾರದಲ್ಲಿ ಇಮೋನ್ಸ್ಟ್ರೇಟರರಾದ ಶ್ರೀ| ಎಚ್. ಮುದ್ದಣ್ಣ ಸೆಟ್ಟ್ರು, ಪಶುಪಾಲನೆ ವಿಚಾರವನ್ನೆತ್ತಿ ವೆಟರ್ನರಿ ಡಾ| ಶಿವಪ್ಪ ರೈ ಇವರೂ, ಎಲ್ಲಾ ವಿಚಾರಗಳನ್ನೆತ್ತಿ ಶ್ರೀ| ಎನ್. ಎಸ್. ಕಿಲ್ಲೆಯವರೂ ಭಾಷಣ ಮಾಡಿದರು. ಬಂದಾರು-ಉರುವಾಲು ಗ್ರಾಮಗಳಿಗೆ ಶಾಲೆ ಇಲ್ಲದರಿಂದ ಶಾಲೆಗಳನ್ನು ತೆರೆಯಬೇಕೆಂದೂ, ಕಡ್ಡಾಯ ಶಿಕ್ಷಣವನ್ನು ಜ್ಯಾರಿಗೆ ತರಬೇಕೆಂಬುವ, ಕೃಷಿ ಇಲಾಖೆಯವರು ಗೊಬ್ಬರ, ಬೀಜ ಇತ್ಯಾದಿಗಳ ಡಿಪೊ ತೆರೆಯಬೇಕೆನ್ನುವ, ರೂರಲ್ ಡಿಸ್ಪೆನ್ಸರಿ ಹಾಗೂ ಸೂಲಗಿತ್ತಿಯನ್ನು ನೇಮಿಸಬೇಕೆನ್ನುವ ಬಂದಾರು-ಕಣಿಯೂರು ಗ್ರಾಮಗಳಿಗೆ ಮಾರ್ಗವಾಗಬೇಕೆನ್ನುವ ಇತ್ಯಾದಿ ಠರಾವುಗಳು ಪಾಸಾದವು. ಅಧ್ಯಕ್ಷರ ಸಮಯೋಚಿತ ಭಾಷಣ, ಶ್ರೀ| ಕುಮಾರಯ್ಯ ಹೆಗ್ಗಡೆರ ಉಪಕಾರಸ್ಮರಣೆ ಭಾಷಣ, ರಾತ್ರಿ ಯಕ್ಷಗಾನ ಸಮಾರಂಭದೊಡನೆ ಪರಿಷತ್ತಿನ ಕಾರ್ಯಕ್ರಮ ಕೊನೆಗೊಂಡಿತು. ಸಂಯುಕ್ತ ಗ್ರಾಮಾಭಿವೃದ್ಧಿ ಬಗ್ಗೆ ೨೬ ಜನರ ಸಮಿತಿ ಒಂದು ಏರ್ಪಟ್ಟಿತು.

ಶ್ರೀ ಕ್ಷೇತ್ರ
ಹಿರಿಅಡಕ

ಮಹಾಶಯರೇ,

ತಾ. 6–2–46ನೇ ಬುಧವಾರ ರಾತ್ರಿ ಶ್ರೀ ಕ್ಷೇತ್ರದಲ್ಲಿ **ಶ್ರೀ. ಆರೂರು ಲಕ್ಷ್ಮೀನಾರಾಯಣ ರಾವ್**, ಬಿ. ಎ., ಬಿ. ಎಲ್., ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡು ದ. ಕ. ಇವರ ಅಧ್ಯಕ್ಷತೆಯಲ್ಲಿ ನಡೆಯಲಿರುವ **ಶ್ರೀ ಮನ್ಮಂದರ್ಥಿ** ಮತ್ತು **ಶ್ರೀ ಪೆರಡೂರು** ಮೇಳಗಳ **ಜೋಡಾಟಕ್ಕೆ** ತಾವು ಸರ್ವರೂ ಇಷ್ಟಮಿತ್ರರಿಂದೊಡಗೂಡಿ ಚಿತ್ತೈಸಿ, ಈ ಸಮಾರಂಭವನ್ನು ಚಂದಗಾಣಿಸಿಕೊಡಬೇಕಾಗಿ ಅಪೇಕ್ಷಿಸುವ,

A. M. Nagappa Hegde

28—1—46 ಆಡಳ್ತೆ ಮೊಕ್ತೇಸರ.

ಜೀರ್ಣೋದ್ಧಾರ ನಿಧಿಗೆ ಸಹಾಯ ಧನವನ್ನು ಆದರದಿಂದ ಸ್ವೀಕರಿಸಲಾಗುವುದು.

ಸ್ವೀಕಾರ.

ಶ್ರೀ| ಅತ್ತೂರು ಲಕ್ಷ್ಮೀನಾರಾಯಣ ಉಡುಪರಿಂದಲೂ ಶ್ರೀ| ಬದಾನಿಡಿಯೂರು ಕೃಷ್ಣದಾಸ ಭಟ್ಟರಿಂದಲೂ ಗುಣಿಸಲ್ಪಟ್ಟು ಪಂಡಿತ ಕೆ. ವೆಂಕಟರಾಮಾಚಾರ್ಯರಿಂದ ಹಾಗೂ ಶ್ರೀ ಅತ್ತೂರು ವಾಸುದೇವ ಉಡುಪರಿಂದ ಪರಿಶೋಧಿತವಾಗಿ ಶ್ರೀ ರವಿಪ್ರಸಾದ ಜ್ಯೋತಿಷಾಲಯದಿಂದ ಪ್ರಕಟಿಸಲ್ಪಟ್ಟ ವ್ಯಯ ಸಂವತ್ಸರದ **'ಉಡುಪಿ ಪಂಚಾಂಗ'**ವನ್ನು ಆದರದಿಂದ ಸ್ವೀಕರಿಸಿದ್ದೇವೆ. ಹಲವು ವರ್ಷಗಳಿಂದ ಪ್ರಸಿದ್ಧವಾಗಿರುವ, ಹಲವು ಉಪಯುಕ್ತ ಸಂಗ್ರಹಗಳಿಂದ ಕೂಡಿರುವ ಪ್ರಭಾಕರ ಪ್ರೆಸ್ಸಿನಲ್ಲಿ ಸುಂದರವಾಗಿ ಮುದ್ರಿಸಲ್ಪಟ್ಟಿರುವ ಈ ಪಂಚಾಂಗದ ಬೆಲೆ ಬರೇ ನಾಲ್ಕಾಣೆ ಮಾತ್ರ.

ಉಚಿತ

'ಅಂತರಂಗ' ವಾರಪತ್ರಿಕೆಗೆ ಫೆಬ್ರವರಿ 15ರೊಳಗೆ ಚಂದಾದಾರರಾಗುವವರಿಗೆ 'ಆಯುರ್ವೇದ ಸಮ್ಮೇಲನಾಂಕ'ವು ಉಚಿತವಾಗಿ ಕೊಡಲ್ಪಡುವುದು.

ಅಂತರಂಗಕ್ಕೆ ವಾರ್ಷಿಕ ಚಂದಾ ರೂ. 4—8—0

ಮೆನೇಜರ್, ಅಂತರಂಗ, ಉಡುಪಿ.

ವೈಸರಾಯಿೀ ಕೌನ್ಸಿಲಿನಲ್ಲಿ ಪಕ್ಷಪ್ರಮುಖರು ಸೇರುವರೆ?

ಕೇಂದ್ರ ಎಸೆಂಬ್ಲಿಯಲ್ಲಿ ಲೋರ್ಡ್ ವೇವೆಲರ ಭಾಷಣ.

ಕೇಂದ್ರ ಎಸೆಂಬ್ಲಿಯಲ್ಲಿ ಇದೇ ತಾ. 28ರಲ್ಲಿ ಪದ್ಧತಿಯಂತೆ ವೈಸರಾಯರ ಭಾಷಣ ನಡೆಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್, ಅಕಾಲಿ ಮತ್ತು ಕೆಲವು ಜಮೀನ್ದಾರರು ಗೈರು ಹಾಜರಿದ್ದರು. ಶ್ರೀಮಾವ್ಳಂಕರರು ಅಧ್ಯಕ್ಷ ಪದ್ಧತಿಯ ಗೌನು ಮತ್ತು 'ವಿಗ್' ಧರಿಸದೆ ಬಿಳಿ ಶೆರ್ವಾನಿ ಮತ್ತು ಗಾಂಧಿ ಟೋಪಿ ಧರಿಸಿ ಮಂಡಿಸಿದ್ದರು. ವೈಸರಾಯೀ ಭಾಷಣವು ಉದ್ದೇಶ ಸೂಚಕ ಮಾತ್ರವಿದ್ದು ಏಳೇ ಮಿನಿಟುಗಳಲ್ಲಿ ಮುಗಿಯುವಷ್ಟು ಚಿಕ್ಕದಿತ್ತು. ಭಾಷಣ ಮುಗಿಯಿತೆಂಬುದನ್ನರಿಯದೆ ಅಲ್ಲಿ ಹಾಜರಿದ್ದ 68 ಸದಸ್ಯರು ಕೆಲವು ಸೆಕೆಂಡಗಳ ವರೆಗೂ ನಿರೀಕ್ಷೆಯಲ್ಲೇ ಕುಳಿತಿದ್ದು ಕೊನೆಗೆ ಕರತಾಡನ ಮಾಡಿದರು.

ವೈಸರಾಯೀ ಭಾಷಣದ ಸಾರ

"ಚಕ್ರವರ್ತಿ ಸರಕಾರದ ಉದ್ದೇಶವೀಗ ಸ್ಪಷ್ಟವಾಗಿದೆ. ರಾಜಕೀಯ ನಾಯಕರನ್ನೊಳಗೊಂಡ ಒಂದು ಹೊಸ ಕಾರ್ಯಕಾರೀ ಸಮಿತಿಯ ರಚನೆ ಮತ್ತು ರಾಜ್ಯಾಂಗ ರಚನಾ ಸಂಸ್ಥೆ ಅಥವಾ ಸಮಿತಿಯೊಂದರ ರಚನೆಯನ್ನು ಆದಷ್ಟು ಬೇಗನೇ ಮಾಡಬೇಕೆಂದು ಅವರೀಗ ದೃಢ ಸಂಕಲ್ಪಮಾಡಿದ್ದಾರೆ. ಈ ಸಂಬಂಧದ ರೀತಿ ನೀತಿ ಮತ್ತು ನಮ್ಮನ್ನಿದಿರಿಸುವ ಸಂಕಷ್ಟಗಳ ಸವಿವರ ವರ್ಣನೆಗೆ ನಾನೀಗ ಹೋಗುವದಿಲ್ಲ. ಭಾರತ ಸ್ವಾತಂತ್ರ್ಯಕ್ಕೊಂದು ದಿನ ಅಥವಾ ದಿನಗಳನ್ನು ನಿರ್ಧರಿಸಿ ಹೇಳುವದೂ ವಿಹಿತವೆಂದು ನನಗನ್ನಿಸುವದಿಲ್ಲ. ವೈಟ್ ಹಾಲಿನಲ್ಲೂ ದಿಲ್ಲಿಯಲ್ಲೂ ಅವುಗಳಿಗೆ ಪ್ರಥಮ ಗುರುತ ಚೀಟಿ ಬದ್ದಿದೆ ಎಂಬ ಆಶ್ವಾಸನೆಯನ್ನು ಮಾತ್ರ ನಾನು ಕೊಡಬಲ್ಲೆ. ಈ ನಮ್ಮ ಮಹತ್ಕಾರ್ಯ ಸಾಧನೆಯಲ್ಲಿ ನಿಮ್ಮ ಸಹಕಾರ ಮತ್ತು ಸದಭಿಲಾಷೆಯನ್ನು ಕೇಳುತಿದ್ದೇನೆ

ಈ ಅಧಿವೇಶನದಲ್ಲಿ—

ನೀವು ಹಲವು ನಿಲುವಳಿ ಸೂಚನೆಗಳನ್ನು ಚರ್ಚಿಸಿದ್ದೀರಿ; ಅವುಗಳಲ್ಲಿ ಕೆಲವು ಸದ್ಯದ ಆವಶ್ಯಕ ಪ್ರಶ್ನೆಗಳೇ ಇದ್ದುವು. ಶಾಸನ ಸಭೆಯ ಮುಂದೆ ಕೆಲವು ಸೂಚನೆಗಳನ್ನು ಸರಕಾರೀ ವಕ್ತಾರರು ಮುಂದಿಡಲಿದ್ದಾರೆ. ವಿಶೇಷ ಲಕ್ಷ್ಯದಿಂದ ತಯಾರಿಸಿದ ಕೆಲವು ಪ್ರಾಮುಖ್ಯ ಹಂಚಿಕೆಗಳು ಅವುಗಳಲ್ಲಿವೆ ಎಸೆಂಬ್ಲಿ ಅವುಗಳನ್ನು ಪಾಸ್ ಮಾಡಿಕೊಂಡರೆ ಭಾರತದ ಘನತೆ ಮತ್ತು ಹಿತಾಭಿವೃದ್ಧಿಯನ್ನು ಅವು ಸಾಧಿಸಬಲ್ಲುವೆಂದು ನನ್ನಗನ್ನಿಸುತ್ತದೆ. ನಿಮ್ಮ ಮತ ಪಡೆಯುವ ಕಾರ್ಯ ಸಾಧನೆಗಾಗಿ ನಾನೀ ಮಾತನ್ನಾಡುವದಲ್ಲ. ಪ್ರತಿಯೊಂದು ಸಂದರ್ಭದಲ್ಲೂ ಸರಕಾರಕ್ಕೆ ವಿರುದ್ಧ ವೋಟು ಕೊಟ್ಟು ಪರಾಭವಗಳ ಸಂಖ್ಯೆ ಹೆಚ್ಚಿಸುವದೇ ನ್ಯಾಯವೆಂದು ನಿಮ್ಮಲ್ಲಿ ಕೆಲವರಿಗೆ ತೋರುತ್ತಿರಬಹುದು. ಇದು ನಿಮ್ಮ ರಾಜಕೀಯ ಕರ್ತವ್ಯವೆಂದೇ ನಿಮ್ಮ ಭಾವನೆಯಿದ್ದರೆ ಅದಕ್ಕೆ ನಾನೇನೂ ಹೇಳಲಾರೆ. ಭಾರತಕ್ಕೆ ನಿಜವಾಗಿ ಉಪಕಾರವಾಗಬಲ್ಲ ಶಾಸನ ನಿರ್ಮಾಣಗಳನ್ನು ಆತಂಕಿಸುವ ಅಥವಾ ವಿಳಂಬಿಸುವ ಧೋರಣೆಯು ಸಂಕುಚಿತ ದೃಷ್ಟಿಯದೆಂದಿಷ್ಟೇ ನಾನು ಹೇಳಬಹುದು. ಆದರೆ ಆ ಕುರಿತು ನಿರ್ಧರಿಸಬೇಕಾದವರು ನೀವೇ.

ಭಾಷಣಗಳಲ್ಲಿ ಸಂಯಮವಿರಲಿ!

ಆದರೆ ನಿಮ್ಮಿಂದ ನಾನೊಂದು ವಿಷಯವನ್ನು ಅಪೇಕ್ಷಿಸಬಹುದು. ಒಂದು ರಾಜಕೀಯ ಎಗ್ಸಿಕ್ಯೂಟಿವ್ ಕೌನ್ಸಿಲನ್ನು ನಿರ್ಮಿಸುವ ನನ್ನ ಸಂದರ್ಭಗಳನ್ನು ಕೆಡಿಸುವ ಯಾವ ಮಾತುಗಳನ್ನೂ ಎಸೆಂಬ್ಲಿಯ ಈ ಅಧಿವೇಶನದಲ್ಲಿ ನೀವು ಆಡಬಾರದು. ಅದು ರಾಜ್ಯಾಂಗ ರಚನೆಯ ಮೂಲ ಪ್ರಶ್ನೆಗಳ ಸಂಬಂಧದ ಒಪ್ಪಂದ ಸಾಧನೆಗೆ ಹಾನಿಕರವಿದೆ; ದೇಶದಲ್ಲಿ ಈಗಲೇ ಹಬ್ಬಿರುವ ಕಠಿಣ ಭಾವನೆಯನ್ನದು ಬೆಳೆಸಲಿದೆ. ಕೇಂದ್ರ ಎಸೆಂಬ್ಲಿ ಚುನಾವಣೆಯೇ ಸಾಕಷ್ಟು ಅಥವಾ ಸಹಿಸದಷ್ಟು ವೈರತ್ವವನ್ನು ನಿರ್ಮಿಸಿದೆ. ಇನ್ನು ಪ್ರಾಂತಿಕ ಎಸೆಂಬ್ಲಿ ಚುನಾವಣೆಗಳು ಕೂಡಾ ಅಂತಹ ಪರಿಣಾಮವನ್ನೇ ಕೊಡಬಹುದು ಈ ಬಾರಿಯ ಸಭೆಯಲ್ಲಾಗುವ ಎಲ್ಲಾ ಭಾಷಣಗಳಲ್ಲೂ ಸಂಯಮ್ಯಾಪವಿದ್ದಲ್ಲಿ ನನಗೆ ಮತ್ತು ಅಂತೆಯೇ ನಿಮ್ಮ ಪಕ್ಷ ಪ್ರಮುಖರಿಗೆ ದೊಡ್ಡ ಉಪಕಾರವಾಗುವದೆಂದು ನಾನು ನಂಬುತ್ತೇನೆ. ಎಸೆಂಬ್ಲಿಯಲ್ಲಿಯ ವಿನಾಶಕ ಕಾರ್ಯಚಾರಣೆಯು ಅವಧಿ ಮುಗಿಯುತ್ತಾ ಬಂತೆಂದು ನನ್ನ ಆಶೆ ಮತ್ತು ನಂಬಿಕೆ. ಮುಖ್ಯ ಪಕ್ಷಗಳ ಬೆಂಬಲದಿಂದ ಒಂದು ಹೊಸ ಕಾರ್ಯಕಾರೀ ಸಮಿತಿಯನ್ನು ರಚಿಸುವ ನನ್ನ ಕೆಲಸ ಗೆದ್ದರೆ, ಮುಂದಿನ ಅಧಿವೇಶನದಲ್ಲೇ ಪ್ರಾಮುಖ್ಯ ವಿಧಾಯ್ಯಕ ಕಾರ್ಯಗಳನ್ನು ಮುಂದಿಡುವ ಅತಿ ದೊಡ್ಡ ಕಾರ್ಯಭಾರ ನಿಮ್ಮ ಮೇಲೆ ಬೀಳಲಿದೆ. ಓರ್ಡಿನೆನ್ಸ್ ಮೂಲಕ ಶಾಸನ ನಿರ್ಮಾಣ ಮಾಡುವದು ನನ್ನ ಅಭಿರುಚಿಗೊಗ್ಗುವದಿಲ್ಲ. ಆದ್ದರಿಂದ ನಿಮ್ಮ ಮುಂದಿಡಲ್ಪಡುವ ಎಲ್ಲಾ ಸೂಚನೆಗಳ ಪರ್ಯಾಲೋಚನೆಯಲ್ಲಿ ಸಭೆಯು ಸಮಯ ಬೆಳೆದರೂ ಸಹಿಸಿಕೊಂಡು, ಆ ಮೂಲಕ, ಸ್ವಂತಾಧಿಕಾರ ಪ್ರಯೋಗಿಸುವ ನನ್ನ ಭಾರವನ್ನು ನೀವು ಇಳಿಸುವಿರೆಂದು ನಾನು ಬಹಳವಾಗಿ ಆಶಿಸುತ್ತೇನೆ"—ಎಂದರು ಲೋರ್ಡ್ ವೇವೆಲ್

ಪಾರ್ಲಿಮೆಂಟರೀ ಶಿಷ್ಟ ಮಂಡಲ

ವೈಸರಾಯೀ ವೇವೆಲರು ಪಾರ್ಲಿಮೆಂಟರೀ ಶಿಷ್ಟ ಮಂಡಲಕ್ಕೆ ದೊರೆತ ಸುಸ್ವಾಗತವನ್ನೂ, ಭಾರತದೊಡನೆ ಶಾಶ್ವತ ಹಾಗೂ ಶಾಂತಿಯುತ ಸಂಧಾನಮಾಡಿಕೊಳ್ಳಬೇಕೆಂಬ ಬ್ರಿಟನಿನ ಉತ್ಕಟೇಚ್ಛೆಯನ್ನು ಆ ಮಂಡಳಿಯು ಸರ್ವರಿಗೆ ಮಂದಟ್ಟುಮಾಡಿರುವ ವಿಷಯುವನ್ನು ಪ್ರಸ್ತಾಪಿಸಿದರು. "ಸದ್ಯ ನಮ್ಮೆಲ್ಲರ ಮನಸ್ಸೂ ಸದ್ಯದಲ್ಲೇ ತೀರ್ಮಾನಿಸಲ್ಪಡಲಿರುವ ದೊಡ್ಡ ದೊಡ್ಡ ರಾಜಕೀಯ ಪ್ರಶ್ನೆಗಳಲ್ಲಿ ಕೇಂದ್ರೀಕರಿಸಲ್ಪಟ್ಟಿದೆ. ನಿಮ್ಮಲ್ಲಿ ಕೆಲವರು ಹುರುಪೇರಿಸುವ ಆಸೆ ಮತ್ತು ಧಂಡಾಗಟ್ಟಿಸುವ ಹೆದರಿಕೆಗಳ ನಡುವೆ ಒಲೆದಾಡುತ್ತಿರಬಹುದು. ನನ್ನ ಮಟ್ಟಿಗೆ ನಾನು 'ಮನಸಿದ್ದಲ್ಲಿ ಮಾರ್ಗವಿದೆ' ಎಂಬ ಹಳೆಯ ಹಾಗೂ ಸರ್ವಶ್ರುತ ಗಾದೆಯನ್ನು ಆಧರಿಸಿ ಸುದೃಢ ಆಶಾವಾದಿಯಾಗಿದ್ದೇನೆ" ಎನ್ನುತ್ತಾ ಲೋರ್ಡ್ ವೇವೆಲರು ತನ್ನ ಪ್ರಚಲಿತ ಕಾರ್ಯಕಾರೀ ಸಮಿತಿಯ ಸದಸ್ಯರನ್ನು ಮುಕ್ತಕಂಠದಿಂದ ಶ್ಲಾಘಿಸಿ ಹೊಸ ರಚನೆಯಾಗುವ ವರೆಗೆ ಕಾರ್ಯ ನಿರ್ವಹಿಸಲಿರುವ ಅವರ ಬೆನ್ನು ತಟ್ಟಿದರು.

ಪ್ರಾಂತಿಕ ಚುನಾವಣೆಗಳು

ಆಸ್ಸಾಮಿನಲ್ಲಿ—ಕಾಂಗ್ರೆಸ್ ಪಕ್ಷವು ಮಿಕ್ಕೆಲ್ಲಾ ಪಕ್ಷಗಳಿಗಿಂತ ಅಧಿಕ ಸ್ಥಾನಗಳನ್ನು ಪಡೆದಿದೆ. ಅಸ್ಸಾಮ್ ಎಸೆಂಬ್ಲಿಯ 108 ಸ್ಥಾನಗಳಲ್ಲಿ ಸುಮಾರು 60ನ್ನು ಕಾಂಗ್ರೆಸ್ ಗೆದ್ದಿದೆ. ಅಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ರಚನೆಯ ಸಿದ್ಧತೆಗಳಾಗುತ್ತಿವೆ. ಮುಸ್ಲಿಂ ಸ್ಥಾನಗಳನ್ನು ಲೀಗ್ ಗೆದ್ದಿದೆ.

ಸಿಂಧಿನಲ್ಲಿ—ಮುಸ್ಲಿಂ ಲೀಗ್ ಪಕ್ಷವು ಒಂದನೆಯದಾಗಿಯೂ ಕಾಂಗ್ರೆಸ್ ಎರಡನೆಯದಾಗಿಯೂ ಜಯಸಿವೆ. ಬೆನ್ನಲ್ಲೇ ಸಾಕಷ್ಟು ಸಂಖ್ಯೆಯಲ್ಲಿ ಲೀಗೇತರ ಮುಸಲ್ಮಾನರು ಮತ್ತು ಇತರರ ಪಕ್ಷಗಳಿವೆ. ಯಾವ ಪಕ್ಷವೂ ಏಕಾಕಿಯಾಗಿ ಅಧಿಕಾರ ನಿರ್ವಹಿಸುವಷ್ಟು ಬಹುಮತ ಪಡೆದಿಲ್ಲ. ಸಮ್ಮಿಶ್ರ ಮಂತ್ರಿಮಂಡಲದ ರಚನೆಗೆ ಈ ಬಾರಿ ಕಾಂಗ್ರೆಸು ಒಪ್ಪಲಿದೆ. ಮೌಲಾನಾ ಅಜಾದ್ ಮತ್ತು ಸರ್ದಾರ್ ಪಟೇಲರು ಆ ದಶಕ್ಕಾಗಿ ಕರಾಚಿಗೆ ಹೋಗಿದ್ದಾರೆ. ಇತ್ತ ಲೀಗ್ ಪಕ್ಷವೂ ಇತರರನ್ನು ಕೂಡಿಕೊಂಡು ಅಧಿಕಾರ ವಹಿಸುವ ಆತುರದಲ್ಲಿದೆ. ಲೀಗ್‌ನ ಮಾಜಿ ಪ್ರಧಾನಿ ಸರ್. ಹಿದಯತುಲ್ಲರನ್ನು ಹಿಂದೆ ಹಾಕಬೇಕೆಂದು ಖಾನ್ ಬಹದೂರ್ ಖುರ್‍ರೋ ಇವರ ಆಶಯಿದೆ.

ಬಿಹಾರಿನಲ್ಲಿ—ಚುನಾವಣೆಯು ಭರಭರಾಟೆಯಲ್ಲಿದೆ. ಕಾಂಗ್ರೆಸಿಗೆ ಸ್ಪರ್ಧೆಯಿಲ್ಲದೇನೇ ಸುಮಾರು 47 ಸ್ಥಾನಗಳು ದೊರೆತಿದ್ದು ಕಾಂಗ್ರೆಸು ಪ್ರಬಲ ಪಕ್ಷವಾಗುವದು ನಿಸ್ಸಂದೇಹ.

ಇತರ ಪ್ರಾಂತ್ಯಗಳಲ್ಲಿ—ಪಂಜಾಬು, ಗಡಿನಾಡು, ಮಧ್ಯ ಪ್ರಾಂತ್ಯ, ಸಂಯುಕ್ತ ಪ್ರಾಂತ್ಯದಲ್ಲಿ ಚುನಾವಣಾ ರಭಸವೇರಿದೆ. ಸಂಯುಕ್ತಪ್ರಾಂತ್ಯದಲ್ಲಿ ಕಾಂಗ್ರೆಸ್ ಉಮೇದ್ವಾರಿಗಳ ನೇಮಕದ ಕುರಿತು ಅತೃಪ್ತಿಗೊಂಡ 26 ಮಂದಿ ರಾಜಕೀಯ ಕೈದಿಗಳು ನಿಷೇಧಾರ್ಥವಾಗಿ ಜೈಲಿನಲ್ಲೇ 21 ದಿನಗಳತನ್ನ ಸತ್ಯಾಗ್ರಹ ಹೂಡಿರುವರು ಬೊಂಬಾಯಿಯಲ್ಲಿ ನಾಮ ಪತ್ರ ದಾಖಲಾಗುವ ದಿನ ಸಮೀಪಿಸಿದೆ. ಮದ್ರಾಸಿನಲ್ಲಿ ಇದ.ವರೆಗೆ ದಿನ ನಿಶ್ಚಯವಾಗಿಲ್ಲ

ನೋಟೀಸು.

ಹಾಲಿ ಮೈಸೂರು ಸಿಟಿಯಲ್ಲಿರುವ ಕಟ್ಟಂಗೇರಿ ಶ್ರೀನಿವಾಸ ಹೆಬ್ಬಾರರ ಮಗ ಅನಂತಯ್ಯ ಹೆಬ್ಬಾರನು ಈ ಮೂಲಕ ಎಲ್ಲಾ ಜನರಿಗೂ ತಿಳಿಸುವದೇನಂದ್ರೆ—

ನನ್ನ ತಂದೆ ಕಟ್ಟಂಗೇರಿ ಗ್ರಾಮದಲ್ಲಿರುವ ಶ್ರೀನಿವಾಸ ಹೆಬ್ಬಾರರು ಈಗ ಸುಮಾರು 70 ವರುಷ ಪ್ರಾಯದವರಾಗಿರುತ್ತಾರೆ. ಅವರಿಗೆ ನಾನು ಕೂಡಾ ಐದು ಜನ ಗಂಡು ಮಕ್ಕಳು ಯಿರುತ್ತೇವೆ. ಆ ಪಯ್ಕಿ ನನಗೆ ವ ನನ್ನ ತಂಮ ಶೇಷಗಿರಿ ಹೆಬ್ಬಾರ ಮತ್ತು ರಾಜಗೋಪಾಲ ಹೆಬ್ಬಾರ ಯಿವರಿಗೆ ಕೂಡಾ ಪ್ರಾಯಬಂದದೆ. ನಂಮ ಕುಟುಂಬಕ್ಕೆ ಯೆಷ್ಟೂ ನಾವರೂ ಸಾಲಯಿರುವದಿಲ್ಲ. ಸಾಲಮಾಡುವ ಆಗತ್ಯ ಕೂಡಾ ಯಿರುವದಿಲ್ಲ. ಪ್ರಾಯಭರಿತರಾದ ನಾವು ಸೇರದೆ ಯಾವತ್ತೂ ಸಾಲಗಳು ಪರಾಧೀನಗಳು ನಮಗಾಗಲೀ ನಂಮ ಕುಟುಂಬಕ್ಕೆ ಆಗಲೀ ಲಗಾವಾಗತಕ್ಕದ್ದಲ್ಲವೆಂಬ ಸಂಗ್ತಿ ಯಿ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

K. Ananthaya Hebbar,
ಹಿರೇಮಗ.

ಮೊಕ್ಕಾಂ:—ಮೈಸೂರು,
ತಾ.24—1—1946

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 1—2—46ರಿಂದ

ಸರ್ವಪರಿಪೂರ್ಣತೆಯುಳ್ಳ ರಿ ಅದಾವ ಕಾಲಕ್ಕೂ ಹಿಂದುಳಿಯಲಾರದು.

ಅಂತಹ ಅದ್ವಿತೀಯವಾದ ಅಮರಕೃತಿ

ಬೊಂಬೇ ಟಾಕೀಸಿನವರ

ಕಂಗನ್

ಅಶೋಕ ಕುಮಾರ್, ಲೀಲಾ ಚಿಟ್ನಿಸ್.

ಬರುವ ಚಿತ್ರ—

ದಿಲ್‌ಲಗಿ

ಕುಮಾರ್ ಮತ್ತು ಹಂಸಾ



Approved firm by the Govt. of Mysor. Certified by the Agent of the Govt. of Cylone Indian.

ಉಡುಪಿ.

ನಗರ ಸಭೆಯು ಚಯರ್‌ಮೆನ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಗೈರಹಾಜರಿಯಲ್ಲಿ ಶ್ರೀ ನರಸಿಂಹ ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ತಾ. 27ರಲ್ಲು ಸಂಜೆ ಜರಗಿತು. ಶ್ರೀಮತಿ ಲೀಲಾಬಾಯಿ ಕಾಮತರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು. ಮುನಿಸಿಪಲ್ ಆಫೀಸು ಸಮಯವು ಬೆಳಗ್ಗೆ 10½ ಗಂಟೆಯಿಂದ ಸಂಜೆ 5 ಗಂಟೆಯ ತನಕವೂ ಶನಿವಾರ ದಿನ ಮಾತ್ರ 10½ಯಿಂದ 1½ ಗಂಟೆಯ ತನಕವೂ ಎಂದು ನಿರ್ಧರಿಸಲಾಯಿತು. ಕುಂಜಿಬೆಟ್ಟು ಆದಿದ್ರಾವಿಡ ಕೊಲನಿಯ ನಿವಾಸಿಕರು ತಮಗೆ ಪ್ರಾಪರ್ಟಿ ಟೇಕ್ಸ್ ರಿಯಾಯತಿ ಮಾಡಬೇಕೆಂದು ಸೂಚಿಸಿದ ಅರ್ಜಿ ತಿರಸ್ಕರಿಸಲಾಯಿತು ಯುದ್ಧೋತ್ತರ ರೈಲ್ವೇ ಯೋಜನೆಯಲ್ಲಿ ದ. ಕ ಜಿಲ್ಲೆಯನ್ನು ಸಹ ಸೇರಿಸಿಕೊಳ್ಳುವಂತೆ ಕೇಂದ್ರ ಸರಕಾರಕ್ಕೆ ಸೂಚಿಸಲು ಮದ್ರಾಸು ಸರಕಾರವನ್ನು ವಿನಂತಿಸಬೇಕೆನ್ನುವ ಶ್ರೀ ಆರ್. ಆರ್ ಕುಂಜೂರರ ನಿರ್ಣಯವು ಪಾಸಾಯಿತು. ಶ್ರೀ ಆರ್. ಎ ಸ್ವಾಮಿನ್ನರು ಸಭಾ ಮಧ್ಯದಲ್ಲೇ ಹೊರಟು ಹೋದುದರಿಂದ ಅವರು ಮುಂದಿಸಿದ ನಿರ್ಣಯವು ಸೂಚಕರಿಲ್ಲದೆ ಬಿದ್ದುಹೋಯಿತು ಅಜ್ಜರಕಾಡು—ಕಾಡಬೆಟ್ಟು ಓಣಿಯನ್ನು ರಸ್ತೆಯನ್ನಾಗಿ ಮಾಡಬೇಕೆನ್ನುವ ಶ್ರೀ ಎಸ್. ರಾಘವೇಂದ್ರ ಭಟ್ಟರ ಠರಾವು ಪಾಸಾಯಿತು ಶ್ರೀ ನರಸಿಂಹ ವಿಠಲ ಕಾಮತರ ಚಹಾ ಸತ್ಕಾರವಿತ್ತು

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಸೇವನದ ದಿನಾಚರಣೆಯು ತಾ. 16 2 46ಕ್ಕೆ ಡಿ. ಮುನ್ಸಿಫ್ ಡಿ ನೊರೊನ್ನರ ಅಧ್ಯಕ್ಷತೆಯಲ್ಲಿ ಜರಗಲಿದೆ

ನಾಟಕ—ಉಡುಪಿ ಯುವಕ ಸಂಘದವರು ಸಂಘದ ಸಹಾಯಾರ್ಥವಾಗಿ ತಾ. 26ರಲ್ಲಿ ಪೀಪ್‌ಲ್ಸ್ ಹೋಲಿನಲ್ಲಿ 'ಬಿ. ಎ.' ನಾಟಕವನ್ನು ಅಭಿನಯಿಸಿದರು

ಪೆಟ್ಟಾದ ಸೈನಿಕರ ಸಹಾಯಾರ್ಥವಾಗಿ ಜಯಕರ್ನಾಟಕ ನಾಟಕ ಸಂಘದವರು 'ಚಿತ್ರಾಂಗದ' ನಾಟಕವನ್ನು ತಾ. 28ರಲ್ಲಿ ಜಯಶೀಲವಾಗಿ ಅಭಿನಯಿಸಿದರು. ಸುಮಾರು ಹನ್ನೆರಡು ಸಾವಿರದಷ್ಟು ಹಣ ಸಂಗ್ರಹವಾಗಿದೆಯೆಂದೂ ನಾಟಕ ಸಂಘದವರಿಗೆ ರೂ 500/- ಮತ್ತು ಯೋಗ್ಯ ಸನ್ಮಾನವನ್ನು ಕೊಡಲಾಯಿತೆಂದೂ ತಹಸಿಲ್ದಾರ್ ಎ ಸದಾನಂದ ಶೈಗಳವರೇ ಮೊದಲಾದವರು ಹಣ ಸಂಗ್ರಹದ ಕುರಿತು ಬಹಳ ಉತ್ಸಾಹದಿಂದ ಕೆಲಸಮಾಡಿದ್ದರೆಂದೂ ತಿಳಿದುಬರುತ್ತದೆ.

ಮಜೂರರ ಚಳವಳ- ಉಡುಪಿಯ ನೇಯಿಗೆ ಮತ್ತು ಬೀಡಿ ಕೆಲಸಗಾರ ಸಂಘಗಳವರು ಇದೇ ತಾ. 28 ಮತ್ತು 29ರಲ್ಲಿ ಜಯಘೋಷಗಳೊದನೆ ನಗರ ಮೆರವಣಿಗೆ ನಡಿಸಿದರು. ಎರಡು ದಿನಗಳಲ್ಲೂ ಅಪರಾಹ್ನ ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀ. ಶಂಕರನಾರಾಯಣ ಹೊಳ್ಳರೇ ಮೊದಲಾದವರ ಸ್ಫೂರ್ತಿದಾಯಕ ಭಾಷಣಗಳಾದುವು. ನೇಯಿಗೆ ಕೆಲಸಗಾರರಿಗೆ ಮೂರು ತಿಂಗಳ ಮತ್ತು ಬೀಡಿ ಕೆಲಸಗಾರರಿಗೆ ಒಂದು ತಿಂಗಳ ಬೋನಸ್ ಸಿಗಬೇಕು; ಮಣಿಪಾಲ ನೇಯಿಗೆ ಕಾರ್ಖಾನೆಯಿಂದ ತೆಗೆದುಹಾಕಿದ ಕೆಲಸಗಾರರಿಗೆ ಪುನಃ ಕೆಲಸ ಕೊಡಬೇಕು, ಇತ್ಯಾದಿ ನಿರ್ಣಯಗಳಾದುವು

ಶ್ರೀ ಪುರಂದರದಾಸಾರ್ಯರ ಸ್ಮಾರಕೋತ್ಸವವು ಶ್ರೀಪಾದದಾಸ ಪಂಡೆಯವರ ನೇತೃತ್ವದಲ್ಲಿ ಉಡುಪಿ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ತಾ 29-1 46ರಿಂದ ತಾ. 2 2-46ರ ವರೆಗೆ ಭಜನೆ, ಉಪನ್ಯಾಸ, ಹರಿಕಥೆ ಸಂಗೀತ ಇತ್ಯಾದಿ ಕಾರ್ಯಕ್ರಮಗಳಿಂದ ಜರಗುತ್ತಿದೆ

ಮಣಿಪಾಲ:—ತಾರೀಕು 24-1-46ರಲ್ಲಿ ಉಡುಪಿಯ ನೇಕಾರ ಸಂಘದ ಕಾರ್ಯದರ್ಶಿ ಕೃಷ್ಣ ಸೆಟ್ಟಿಗಾರರು ಮಣಿಪಾಲ ಟೆಕ್ಸ್‌ಟೈಲ್ಸ್ ಕಾರ್ಖಾನೆಯ ಪರಾಲಕ್ಕೆ ಅಕ್ರಮ ಪ್ರವೇಶನಡಿಸಿ, ಕಾರ್ಖಾನೆಯ ವೀವಿಂಗ್ ಮಾಸ್ಟರ್ ಸೋನ್ಸ್ ಎಂಬವರನ್ನು ಬಲಾತ್ಕಾರದಲ್ಲಿ ಅಟಕಾಯಿಸಿ ಹೊಡೆಯಲು ಉದ್ಯುಕ್ತನಾದ ಪರಿಣಾಮವಾಗಿ ಈ ಅತ್ಯಾಚಾರಕ್ಕೆ ಮದ್ದತ್ತು ಕೊಟ್ಟು ಸಹಕರಿಸಿದ ಕಮ್ಯೂನಿಸ್ಟ್ ಕೆಲಸಗಾರರಿಬ್ಬರನ್ನು ಕಾರ್ಖಾನೆಯ ಕೆಲಸದಿಂದ ನಿವೃತ್ತಿಗೊಳಿಸಿರುವರೆಂದೂ ಮತ್ತು ಈ ಕಾರಣದಿಂದ ಉಳಿದ ಆರು ಜನ ಕಮ್ಯೂನಿಸ್ಟ್ ಕೆಲಸಗಾರರು ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವರೆಂದೂ ಕಾರ್ಖಾನೆಯ ವ್ಯವಸ್ಥಾಪಕರಿಂದ ತಿಳಿದು ಬರುತ್ತದೆ.

ಪ್ರಕಟಣೆ

ಪರ್ಕಳ—ಇದೇ ಬರುವ ತಾರೀಕು 2-2-'46ನೇ ಶನಿವಾರ ರಾತ್ರಿ ಶ್ರೀ ಮಂದರ್ತಿ ಮತ್ತು ಅಮೃತೇಶ್ವರಿ ಮೇಳದವರ ಪ್ರಚಂಡ ಜೋಡಾಟವು ಜರಗಲಿಕ್ಕಿರುವುದು. ಸರ್ವರಿಗೂ ಸುಸ್ವಾಗತವಿದೆ.

ಶ್ರೀ ಉಪ್ಪೂರು ಕೃಷ್ಣಶೆಟ್ಟರ ನಿಧನ.

ಮಂಗಳೂರಲ್ಲಿ ವಕೀಲರಾಗಿದ್ದ ಶ್ರೀ ಉಪ್ಪೂರು ಕೃಷ್ಣ ಶೆಟ್ಟರು ತಾ. 20ನೇ ರಾತ್ರಿ ಮಂಗಳೂರಲ್ಲಿ ಮೃತಪಟ್ಟರೆಂಬ ವಿಷಾದಕರ ವಾರ್ತೆಬಂದಿದೆ ಕಳೇಬರವು ಅವರ ಊರಾದ ಉಪ್ಪೂರಿಗೆ ತರಲ್ಪಟ್ಟು ದಹನಕ್ರಿಯೆ ನಡೆಯಿತು ಕಳ್ಳೂರು ಕೇಸಿನ ನಂತರ ದಿವಂಗತರ ಆರೋಗ್ಯವು ಕೆಟ್ಟದ್ದು ಇತ್ತೀಚೆಗೆ ಕ್ಷಯರೋಗ ತಗಲಿತ್ತೆಂದು ತಿಳಿದು ಬರುತ್ತದೆ, ಮೃತರ ಆತ್ಮಕ್ಕೆ ಶಾಂತಿ ಲಭಿಸಲಿ,

ಶಿರ್ವ—ಇಲ್ಲಿಯ ಜನಪ್ರಿಯರೂ ಶಾಂತ ಸ್ವಭಾವಿಯೂ, ಉದಾರಿಯೂ ಆಗಿದ್ದ ಶ್ರೀ ಎಸ್ ಶ್ಯಾಮರಾಯ ಹೆಗ್ಡೆಯವರು ಕಳೆದ ವಾರ ಹೃದಯಕ್ರಿಯೆ ನಿಂತು ನಿಧನಗೊಂಡುದು ಶೋಚನೀಯವಿದೆ. ಮೃತರ ಆತ್ಮಕ್ಕೆ ಶಾಂತಿಯಿರಲಿ.

ಶ್ರೀ ದೆಪ್ಪುಣಿ ಕೋಚಣ್ಣ ಶೆಟ್ಟರ ನಿಧನ.

ಕೂಳೂರಿನ ಸುಪ್ರಸಿದ್ಧ ಜಮೀನ್ದಾರರಲ್ಲೊಬ್ಬರಾದ ಶ್ರೀ ದೆಪ್ಪುಣಿ ಕೋಚಣ್ಣ ಶೆಟ್ಟರು ಇತ್ತೀಚೆಗೆ ಕೆಲದಿನಗಳಿಂದ ಅಸೌಖ್ಯದಿಂದಿದ್ದು ತಾ. 26ರಲ್ಲಿ ಬೆಳಗ್ಗೆ 5ಗಂಟೆಗೆ ಮೃತಪಟ್ಟಿರುವುದು ವಿಷಾದಕರವಿದೆ. ದಿವಂಗತರು ಒಂದೆ ಡಿ ಬೋರ್ಡ್ ಮೆಂಬರರಾಗಿಯೂ ಜನಸೇವೆ ಸಲ್ಲಿಸಿದ್ದರು ಮೃತರ ಆತ್ಮಕ್ಕೆ ಶಾಂತಿ ದೊರಕಲಿ.

NOTICE.

ಉಡ್ಪಿ ತಾಲೂಕು ಮೂಡುತೋನ್ಸೆ ಗ್ರಾಮದಲ್ಲಿ ಹಾಲಿ ರಜೆಯಲ್ಲಿ ಬಂದಿರುವ ಚಿನ್ನಯ್ಯ ನಾಯ್ಕರ ಮಗ ನಂಬ್ರ 12206 ಹವಾಲ್ದಾರ್ ಕ್ಲಾರ್ಕ ತೋಟಯ್ಯ ನಾಯ್ಕನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದರೆ—

ನಾನು ವ ನನ್ನ ಅಣ್ಣ ಕೃಷ್ಣನಾಯ್ಕರು ಈ ವರೆಗೆ ಅವಿಭಕ್ತ ಕುಟುಂಬದ ಮೆಂಬರರಾಗಿದ್ದರೂ ಅನೇಕ ಕಾರಣಗಳಿಂದ ಇನ್ನು ಮುಂದೆ ಅವರ ಅವಿಭಕ್ತ ಸಹೋದರನಾಗಿ ಇರುವದೇ ನನಗೆ ಕಬೂಲು ಇಲ್ಲದೆ ಇದ್ದುದರಿಂದ ನನ್ನ ಹಿಸೆ ವಗೈರೆಯನ್ನು ಕೇಳಿ ಅವರಿಗೆ ರಿಜಿಸ್ಟ್ರ ನೋಟೀಸು ಕೂಡಾ ಕೊಟ್ಟಿರುತ್ತೇನೆ. ಆದುದರಿಂದ ನಾವು ವಿಭಕ್ತರಾಗಿದ್ದೇವೆಂತ ಸರ್ವರಿಗೂ ಈ ಮೂಲಕ ತಿಳಿಸಿರುತ್ತೇನೆ. ಕುಟುಂಬದ ಯಜಮಾನನೆಂಬ ಧೋರಣೆ ಮೇಲೆ ಈ ವರೆಗೆ ಅವರು ಮಾಡಿದ ಮೋಸಕೃತ್ಯ ವ ದುರುಪಯೋಗಗಳ ಕುರಿತು ನಾನು ದಾವಾ ಮಾಡುವರೇ ಉದ್ಯುಕ್ತನಾಗಿದ್ದೇನೆ ಇನ್ನು ಮುಂದೆ ಕೂಡಾ ಅವರಿಗೆ ಯಾರಾದರೂ ಸಾಲ ವಗೈರೆ ಕೊಟ್ಟಲ್ಲಿ ಅಂತಾ ಸಾಲಗಳು ನನ್ನ ಮೇಲೆ ಯಾ ನನ್ನ ಹಿಸೆ ಮೇಲೆ ಬದ್ಧೀಕರಿಸತಕ್ಕದ್ದಲ್ಲಾ

ಉಡ್ಪಿ } Thotaya Nayak
ತಾ. 29 1-46 }

"ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ"

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದಮನಿಸದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕಮ್ಮು ತೇಕೂ ನಿಲ್ಲುವವು, ಹೊಟ್ಟೆ ಹಸನಾಗುವದು, ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿ ಕ್ರಮವಾಗಿ ರೂ.೩ ೬-೦, ೫ ೧೨ ೦ ಮತ್ತು ೧೦-೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್ ಮಂಗಳೂರು, ಟಿ.ಸಿ ನಟರಾಜನ್ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು—

ವನಮಾಲೀ ಭಿಕಾ ಮತ್ತು ಕಂಪನಿ.
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ** ರಸ, ... ಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ.—... ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಶಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಕುಂಬರಮಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5. 6 ತಿಂಗಳ ಬರ್ಥ ಕಂಟ್ರೋಲಿಗೆ ರೂ. 4|. (ವಿ. ಪಿ. 12 ಆಣೆ ಅಲಾಯಿದ)

Mrs. P. DEVEE,

P. D. S. (A. E.) Tollygunge, Calcutta

ಸ್ಟಾಕಿಸ್ಟ: ಷಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾಚಾರ್ಯ,
ರಥಬೀದಿ, ಉಡುಪಿ.

ಮಂಗಳೂರು.

ಬೋಸರ ಜಯಂತಿಯ ದಿನಾಚರಣೆ— ತಾ. 23ರಂದು ಟೌನ್ ಕಾಂಗ್ರೆಸ್ ಸಭೆಯ ಆಶ್ರಯದಲ್ಲಿ ಕೊಡಿಯಾಲ ಬೈಲಲ್ಲಿರುವ ಕಾಂಗ್ರೆಸ್ ಆಫೀಸಿನಲ್ಲಿ ಆಚರಿಸಲ್ಪಟ್ಟಿತು. ಡಾ। ಯು. ಪಿ. ಮಲ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಆರ್. ಕಾರಂತ್, ಎಫ್. ಎಚ್. ಒಡೆಯರ್, ಕೆ. ಕೆ. ಶೆಟ್ಟಿ, ಮೊದಲಾದವರು ಬೋಸರ ಸಾಹಸಮಯ ಜೀವನದ ಕುರಿತು ಮಾತನಾಡಿ ಬೋಸರೀಗ ಮಡಿದಿದ್ದಾರೆ ಎಂಬ ಸುದ್ದಿ ಹರಡಿದೆ; ಆದರೆ ಆ ಸುದ್ದಿ ಸುಳ್ಳಾಗಿ, ಅವರು ಸ್ವತಂತ್ರ ಭಾರತದ ಪ್ರಥಮ ನೇತಾಜಿಯಾಗಲೆಂದು ಹಾರೈಸೋಣ ಎಂದರು. ಸಭೆಯ ಆರಂಭದಲ್ಲಿಯೂ ಕೊನೆಯಲ್ಲಿಯೂ ಟೌನ್ ಕಾಂ. ಕಮಿಟಿಯ ಕಾರ್ಯದರ್ಶಿಗಳು ಮಧುರವಾಗಿ ರಾಷ್ಟ್ರೀಯ ಗೀತೆಗಳನ್ನು ಹಾಡಿದರು.

ಅದೇ ದಿನ ಸಂಜೆ ಮೈದಾನಿನಲ್ಲಿ ವಿದ್ಯಾರ್ಥಿಗಳ ಯೂನಿಯನ್ನಿನ ಆಶ್ರಯದಲ್ಲಿ ಬೋಸರ ಹುಟ್ಟು ಹಬ್ಬ ಆಚರಿಸುವುದಕ್ಕಾಗಿ ಸಭೆ ಜರಗಿತು. ವಿದ್ಯಾರ್ಥಿಗಳ ಮೆರವಣಿಗೆ ಬಂದು ಮೈದಾನಿನಲ್ಲಿ ಸೇರಿತು. ಡಾ। ಎಫ್. ಎಚ್. ಒಡೆಯರರ ಅಧ್ಯಕ್ಷತೆಯಲ್ಲಿ ಸಭೆ ಆರಂಭವಾಯಿತು. ಅಜಾದ್ ಹಿಂದ್ ಸೇನೆಯಲ್ಲಿ ಬೋಸರ ಅಂಗರಕ್ಷಕರಾಗಿದ್ದು ಈಗ ಬಿಡುಗಡೆ ಹೊಂದಿದ ಶ್ರೀ। ರಾಮಚಂದ್ರರವರಿಂದ ಪ್ರಾರ್ಥನೆಯಾಯಿತು. ಶ್ರೀಗಳಾದ ಕೆ. ಕೆ. ಸೆಟ್ಟಿ, ಡಾ। ಯು. ಪಿ. ಮಲ್ಯ, ಅಡಿಯೋಡಿ ಮೊದಲಾದವರ ಭಾಷಣಗಳಾದ ಮೇಲೆ ಸೈನಿಕ ಉಡುಗೆಯಲ್ಲಿದ್ದ ರಾಮಚಂದ್ರ ಅವರು ಹಿಂದಿಯಲ್ಲಿ ಮಾತನಾಡುತ್ತ ಅಜಾದ್ ಹಿಂದ್ ಸೇನೆಯ ಇತಿಹ್ಯವನ್ನೂ ಬೋಸರ ವ್ಯಕ್ತಿತ್ವವನ್ನೂ ಕುರಿತು ಮಾತನಾಡಿದರು.

ಲೆನಿನ್ ಜನ್ಮದಿನಾಚರಣೆಯು— ಸ್ಥಳೀಯ ಸೋವಿಯೆಟ್ ಮಿತ್ರರ ಎಸೋಸಿಯೇಶನಿನ ಆಶ್ರಯದಲ್ಲಿ ತಾ. 21ರಂದು ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಸ್. ಎನ್. ಹೊಳ್ಳ, ಬಿ. ವಿ. ಕಕ್ಕಿಲ್ಲಾಯ ಮೊದಲಾದವರು ಮಾತನಾಡಿದರು.

ನಗರದಲ್ಲಿ ಮುಷ್ಕರ—ಪಂಚಿನ ಮತ್ತು ನೆಯಿಗೆ ಕಾರ್ಖಾನೆಗಳ ಮಜೂರರು ಕೆಲವು ಕೇಳಿಕೆಗಳನ್ನು ಮುಂದಿಟ್ಟು ತಾ. 20ರೊಳಗೆ ಅವು ಪಾಲಿಸಲ್ಪಡದಿದ್ದರೆ ಮುಷ್ಕರ ಹೂಡುವುದಾಗಿ ನೋಟೀಸು ಕೊಟ್ಟಿದ್ದರಷ್ಟೆ. ತಾ. 21ರಂದು ಪಂಚಿನ ಕಾರ್ಖಾನೆಗಳ ಮಜೂರರು ಮುಷ್ಕರ ಆರಂಭಿಸಿದರು. ಮದ್ರಾಸಿನ ಅ. ಲೇಬರ್ ಕಮಿಶನರರು ಇಲ್ಲಿಗೆ ಬಂದು ವಿವಾದವನ್ನು ಇತ್ಯರ್ಥಿಸಲು ಒಪ್ಪಿದುದರಿಂದ ನೆಯಿಗೆ ಮಜೂರರು ಮುಷ್ಕರ ಹೂಡಲಿಲ್ಲ. ಪಂಚಿನ ಮಜೂರರ ಮುಷ್ಕರವು ತಾ. 24ರ ವರೆಗೆ ಸಾಗಿ, ಒಡಂಬಡಿಕೆಯಾಗುವ ಲಕ್ಷಣ ತೋರಿದುದರಿಂದ ತಾ. 25ರಿಂದ ಮುಷ್ಕರ ನಿಲ್ಲಿಸಲ್ಪಟ್ಟಿದೆ.

ಪ್ರಾ. ನ್ಯಾಯವಿಧಾಯಕ—ಸಭೆಗೆ ಜಿಲ್ಲೆಯಿಂದ ಕಾಂಗ್ರೆಸಿನ ಪರವಾಗಿ ಈ ಮಹಾಶಯರನ್ನು ಆರಿಸಲಾಗಿದೆ: ಪುತ್ತೂರು ಡಿವಿಜನ್—ಶ್ರೀ. ಕೆ. ಆರ್. ಕಾರಂತರು; ಮಂಗಳೂರು ಡಿವಿಜನ್ ಡಾ। ಯು. ಪಿ. ಮಲ್ಯ, ಉಡುಪಿ ಡಿವಿಜನ್ ಶ್ರೀ. ಎ. ಬಿ. ಶೆಟ್ಟಿ, ಹರಿಜನ ಸೀಟಿಗೆ ಶ್ರೀ. ಕೆ. ಈಶ್ವರ.

ಜಿಲ್ಲಾ ಬೋರ್ಡಿನ—ಸಭೆಯೊಂದು ತಾ. 24ರಂದು ಸೇರಿತು. ಅಧಮಾರು ಮಠದ ಶ್ರೀಪಾದಂಗಳವರು ತಮ್ಮ ಗುರುಗಳ ಹೆಸರಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಒಂದು ಎಂಡೋಮೆಂಟನ್ನು ಸ್ಥಾಪಿಸುವುದಕ್ಕಾಗಿ ದಾನಮಾಡಿದ ರೂ. 400 ಸ್ವೀಕರಿಸಲ್ಪಟ್ಟಿತು. ಹಿಂದುಸ್ಥಾನ್ ಸ್ಕೌಟ್ ದಳಕ್ಕೆ ರೂ. 100 ಸಹಾಯಧನವಾಗಿ ಕೊಡುವ ವಿಚಾರ ಮಾನ್ಯವಾಯಿತು. ಉಡುಪಿ ನಗರ ಸಭೆಯು ಅಲ್ಲಿಯ ಬೋರ್ಡ್ ಹೈಸ್ಕೂಲನ್ನು ನಡೆಸಲು ವಂತಿಗೆ ಕೊಡಲು ನಿರಾಕರಿಸಿ ಬರೆದ ಪತ್ರದ ವಿಚಾರವನ್ನು ಮುಂದಿನ ಸಭೆಯಲ್ಲಿ ವಿಚಾರಿಸುವುದೆಂದಾಯಿತು. ವಿಟ್ಲದ ಬಳಿಯಲ್ಲಿರುವ ಬೋಳಂತಿ ಮೊಗ್ರದಲ್ಲಿ ತೆರೆಯಲಾದ ಹೊಸ ಶಾಲೆಯನ್ನು ಅಂಗೀಕರಿಸಲಾಯಿತು.

ಮಡಿಕೇರಿಯಲ್ಲಿ ವಿಜಯಾ ಬ್ಯಾಂಕಿನ ಶಾಖೆಯು ಕಳೆದ ತಾ. ೧೭ರಲ್ಲಿ ರಾವಬಹದ್ದೂರ್ ಕೆ. ಟಿ. ಉತ್ತಪ್ಪ ಅಸಿಸ್ಟೆಂಟ್ ಕಮಿಶನರ್, ಕೊಡಗು, ಅವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಊರ ಪ್ರಮುಖ ಅಧಿಕಾರಿಗಳೇ ಮೊದಲಾದವರು ಈ ಸಮಾರಂಭಕ್ಕೆ ಆಮಂತ್ರಿಸಲ್ಪಟ್ಟಿದ್ದರು. ಪುತ್ತೂರು ತಹಶಿಲ್ದಾರ್ ಶ್ರೀ। ಪಿ. ಎಸ್. ತಿಮ್ಮಪ್ಪ ಸೆಟ್ಟರು ಸ್ವಾಗತಭಾಷಣ ಮಾಡಿದರು. ಸಭಿಕರ ಸಂದರ್ಭೋಚಿತ ಮಾತುಗಳಾದ ಬಳಿಕ ಲಘುಪಹಾರ ನಡೆಯಿತು. ಸಮಾರಂಭವು ಯಶಸ್ವಿಯಾಗಿ ಜರಗಲು ಶ್ರೀಗಳಾದ ಎನ್. ಸೋಮಣ್ಣ, ಮಲ್ಲಪ್ಪ, ಮಂಡಣ್ಣ, ಡಿ. ಆರ್. ಟಿ. ಪ್ರಾಂಜ ಮತ್ತು ಎನ್. ಜಿ. ವಿಶ್ವನಾಥ ಶೈಗಳವರು ತುಂಬಾ ಸಹಕಾರವನ್ನಿತ್ತಿದ್ದರು.

ಅಂಚೆವಾಹಕರ ಮತ್ತು ಕೆಳತರಗತಿಯ ಉದ್ಯೋಗಿಗಳ ಸಂಘದ ವಿಶೇಷ ಸಭೆಯು ಕಳೆದ ತಾ. 25ರಲ್ಲು ಶ್ರೀ। ಕೈತಾನ್ ಲೋಬೋ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಖಿಲ ಭಾರತ ಸಂಘ ಬೊಂಬಾಯಿ ಇದರ ಗೌರವ ಕಾರ್ಯದರ್ಶಿಯವರ ಸಲಹೆಯಂತೆ ಆದ ನಿರ್ಣಯಗಳನು ಮಂಜೂರು ಮಾಡಿ ಜಿಲ್ಲಾ ಮೇಲಧಿಕಾರಿಗಳಿಗೂ ಕೇಂದ್ರ ಸಂಘ ಮತ್ತು ಅಖಿಲಭಾರತ ಸಂಘಕ್ಕೂ ಕಳುಹಿಸಿಕೊಡಬೇಕೆಂದಾಯಿತು. ಅಲ್ಪಸ್ವಲ್ಪ ತುಟ್ಟಿಭತ್ತೆಯಲ್ಲದೆ ಇತರ ಯಾವ ಸಂಕಷ್ಟಗಳಿಗೂ ಸರಕಾರವು ಗಮನ ಕೊಡದಿರುವುದು ವಿಷಾದಕರವೆಂದಭಿಪ್ರಾಯವಾಯ್ತು. ಈ ಮೊದಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಒಪ್ಪಿಸಲಾದ ವಿನ್ನಪತ್ರಿಕೆಯಲ್ಲಿ ಸೂಚಿಸಿದ ಕನಿಷ್ಠ ಕೇಳಿಕೆಗಳಿಗೆ ಮನ್ನಣೆದೊರೆಯದಿದ್ದರೆ ಮದ್ರಾಸು ಸರ್ಕಾರಿನ ಅಂಚೆವಾಹಕರು ಮತ್ತು ಕೆಳ ತರಗತಿಯ ಉದ್ಯೋಗಿಗಳು ಅಖಿಲಭಾರತ ಅಂಚೆವಾಹಕರ ಮತ್ತು ಕೆಳತರಗತಿಯ ಉದ್ಯೋಗಿಗಳ ಮತ್ತು ಇತರ ಪ್ರಾಂತೀಯ ಸಂಘಗಳ ಜೊತೆಯಲ್ಲಿ ಅವರು ನಿಶ್ಚಯಿಸಬಹುದಾದ ಯಾವುದೊಂದು ಅಸಂತೋಷಕರ ಕಾರ್ಯದಲ್ಲಿ ಭಾಗವಹಿಸಲು ಸಿದ್ಧರಾಗಿರುವೆವೆಂದು ಸಭೆಯಲ್ಲಿ ಆದ ಕಂಡೋಕ್ತ ನಿರ್ಧಾರವು ಪ್ರಾಮುಖ್ಯವಾದುದು.

TENDER NOTICE

Sealed tenders will be received by the undersigned for the work of reconstructing the Katil Sri Durga Parameshwari Temple Buildings by 5 p. m. on Saturday the 23rd February 1946. The tender documents will be available in the office of the undersigned on payment of Rs. 2/- and the Drawings and specifications will also be made available there or they could be seen in the office of Sri V. M. S Rao Talithaya, A. M. I. S. E, Consulting Architect Modern Homes, Municipal office Road, Mangalore.

Estimate Rs 45,000/-

Mangalore, 19th January, 1946.

P. Sanjiva Rao, B.A., L.L.,
Advocate, Mangalore.
President, Sri Katil Durga Parameshwari Temple Renovation Fund Committee.

ಉಡಿಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

O. P. No 7/1946.

ಅರ್ಜಿದಾರ್ರು—1. U. ಲಕ್ಷ್ಮಣರಾವ 2. U. ರಾಧಾಕೃಷ್ಣ (ಮ್ಯಾನರ್) ಉಪ್ಪೂರು ಮಂಜುನಾತನ ಮಕ್ಕಳು.

ಕ್ಷೇಮ ಚಿಂತಕಳು ತ್ಯಾ 3ನೆ ಅರ್ಜಿದಾರಳು.

3. ನೇತ್ರಂಮ—ಉಪ್ಪೂರು ಮಂಜುನಾತನ ವಿಧವೆ. ಉಡ್ಪಿ ಕಸಬಾ ಕಾಡಬೆಟ್ಟು—

ಯಿ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ—

1—2ನೆ ಅರ್ಜಿದಾರರ ತಂದೆ – 3ನೆ ಅರ್ಜಿದಾರಳ ಗಂಡ – ಪ್ರೋಸ್ಪಮೋನ—ಉಪ್ಪೂರು ಮಂಜುನಾತನು ತಾ. 2–1–1946ರಲ್ಲಿ ಸ್ವರ್ಗಸ್ತನಾಗಿ – ಹಿಂದೂ ಮಿತಾಕ್ಷರಿ ಲೋ ಪ್ರಕಾರ–ಅರ್ಜಿದಾರರು ಅವನ ಪ್ರತಿನಿಧಿಗಳಾಗಿಯೂ–ವಾರ್ಸಿದಾರರಾಗಿಯೂ..ಯಿದ್ದು – ಆತನು–ದಿ ಬೊಂಬ್ಯಾ ಲ್ಯಾಫ ಯಿನ್ಸೂರೆನ್ಸ ಕಂಪ್ನಿಯಲ್ಲಿ ರೂ. 1000/–ಕ್ಕೆ ಯಿನ್ಸೂರು ಮಾಡಿದ–ನಂಬ್ರ 14804/12 7–27ನೆ ಪೊಲಿಸಿಯ ಹಣವನ್ನು ಪಡಿಯುವರೆ ಅರ್ಜಿದಾರರ ಬಗ್ಗೆ ಕುಟುಂಬದ ಯಜಮಾನನಾದ 1ನೆ ಅರ್ಜಿದಾರನ ಹೆಸರಿಗೆ ಸೆಕ್ಸೆಶಂನ್ ಸರ್ಟಿಫಿಕೇಟು ಕೊಡ್ಬೇಕಾಗಿ–ಅರ್ಜಿದಾರ್ರು ಕೊಟ್ಟ ಸದ್ರಿ ಅರ್ಜಿ ತಾ. 13–2–46ಕ್ಕೆ ತನ್ಕಿಗೆಯಿಟ್ಟಿದೆ. ಆಕ್ಷೇಪ ಹೇಳತಕ್ಕವರು–ಆ ದಿವ್ಸ ಹಗ್ಲು 10 ಗಂಟೆಗೆ–ಸ್ವತಹಾ ಯಾ ವಕೀಲರ ಮುಖಾಂತ್ರ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಯಿ ಮೂಲಕ ಪ್ರಕಟಸೋಲಾಗಿಯದೆ.

By Order of the Court.

ಉಡ್ಪಿ 28-1-46 } **Nareshimha Vittal Kamath**
Advocate for Petitioner.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲಿ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; $\frac{1}{2}$ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, $\frac{1}{2}$ ರಾತ್ಲ 5-4-0, $\frac{1}{4}$ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಫೂರ್ಟ್ಸ್ ಲರ್ ಸ್ಟೋರ್ಸ್, ಕೆಮಿಸ್ಟ್ 183, ಕುಂಭಾರವಾಗ್ ರೋಡ್, ಜಿ. ಐ. ಪಿ. ರೈಲ್ವೆ, ಚರ್ನಿ ರೋಡ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

NOTICE.

In the Court of the District Munsif of Mangalore.

O. S. No. 354/45.

Between
J. A. Puthran & others. -Plffs.
Vs.
B. Puttanna & another- Defts.

To: 2nd Deft. K. Subba Rao son of Kudru Srinivasaya, C/o Sri. Vastevacharya, Harihara Town, Mysore State.

Please take notice that the Plaintiffs above named filed the above suit for recovery of moveables etc. from 1st Deft. and the same is posted to 9.2.'46 for your appearance. If you failed to appear on that date the above suit will be decided in your absence.

(By order of Court).

(Sd). S. Venkat Rao,
Vakil for Plaintiffs.

Mangalore, 23-1-1946.

ಬೇಕಾಗಿದ್ದಾರೆ

ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಟ್ರಾಕ್ಟರರೂ ಕೂಲಿಯಾಳುಗಳನ್ನು ಒದಗಿಸಿಕೊಡೋವವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗೆ ಉತ್ಕೃಷ್ಟ ಸವಲತ್ತುಗಳು ಕೊಡಲಾಗುವುದು.

ಬರೆಯೇ ವಿಳಾಸ—

ಬಾಕ್ಸ್ ನಂಬ್ರ 5, c o 'ನವಯುಗ' ಉಡುಪಿ, (ದ. ಕ.)

ದಕ್ಷಿಣ ಕನ್ನಡ

ಕಾಪು–ಪೊಲಿಪು ಗವರ್ನಮೆಂಟ್ ಫಿಶರೀಸ್ ಶಾಲಾ ವರ್ಷಾಂತ್ಯೋತ್ಸವವು 20-1-46 ರಲ್ಲಿ ಶ್ರೀ ಕೆ. ಸಂಜೀವ ಭಟ್, ಎಂ. ಎ. ಎಲ್. ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾತಃಕಾಲ ಆಟಗಳ ಸ್ಪರ್ಧೆ ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಹಳೆ ವಿದ್ಯಾರ್ಥಿಗಳ ಸಭೆ ಮತ್ತು ತಿಂಡಿ ಹಂಚೋಣ ಕಾರ್ಯಕ್ರಮಗಳು ಸುಸೂತ್ರವಾಗಿ ಜರಗಿದುವು. ಡಾ। ರಾಮಣ್ಣ ಶೆಟ್ಟಿ, ಶ್ರೀಗಳಾದ ವಾಮನ ಪಡಿಯಾರ್, ಭೋಜರಾಜ ಶೆಟ್ಟಿ, ಡಿ. ಸಿ. ಅಮೀನ್, ಮಿಸೆಸ್ ಸಂಜೀವರಾವ್ ಇವರು ಶಾಲಾಭ್ಯುದಯದ ಕುರಿತು ಭಾಷಣವಿತ್ತರು. ಅಧ್ಯಕ್ಷರು ಶಾಲೆಯು ಹಾ. ಎ. ಶಾಲೆಯಾಗಲು ಯೋಗ್ಯವಾದುದೆಂದೂ ಊರವರು ಸಹಕರಿಸಬೇಕೆಂದೂ ಹೇಳಿದರು. ‘ಬುದ್ದಿವಾರಿದ ಮದ್ಮೆ’ ತುಳು ನಾಟಕ, ‘ರುಕ್ಮಾಂಗದ’ ಕನ್ನಡ ಸಂಗೀತ ನಾಟಕ ವಿವಿಧ ವಿನೋದಾವಳಿಗಳು ಶಾಲಾ ಬಾಲಕ, ಬಾಲಕಿಯರಿಂದ ಅಭಿನಯಿಸಲ್ಪಟ್ಟವು. ಮುಖ್ಯೋಪಾಧ್ಯಾಯರು ಕೃತಜ್ಞತೆಯನ್ನರ್ಪಿಸಿದರು.

ಮೂಲ್ಕಿ–ಸ್ಥಳೀಯ ಶ್ರೀ ಶಾರದಾ ಸಂಗೀತ ಬಾಲ ಕಲಾ ನಾಟಕ ಮಂಡಲಿಯವರು ‘ಮನೋಹರ’ ಕಟ್ಟಡದಲ್ಲಿ ‘ನಂದಕೋಲ’ ಎಂಬ ಪೌರಾಣಿಕ ನಾಟಕವನ್ನು ತಾ 2-2 1946ನೇ ಶನಿವಾರ ರಾತ್ರಿ 10 ಗಂಟೆಗೆ ಆಡಿ ತೋರಿಸುವರು.

ನಾಡ್ಪಾಲ್ (ಸೀತಾನದಿ)—ಬೋರ್ಡ್ ಶಾಲಾ ಮಕ್ಕಳ ತಿಂಗಳ ಹಬ್ಬವು ತಾ 13 1 1946ರಲ್ಲಿ ಶ್ರೀ ಎಲ್ಲಾಡಿ ಕೃಷ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮಕ್ಕಳಿಂದ ಭಜನೆಯೂ, ಜರಾಸಂಧ ವಧೆ ಮತ್ತು ಭೂತಾಳಪಾಂಡ್ಯ ನಾಟಕಗಳೂ, ಇತರ ವಿವಿಧ ವಿನೋದಾವಳಿಗಳೂ ಅಭಿನಯಿಸಲ್ಪಟ್ಟವು. ಶ್ರೀ ಎಚ್. ಗೋಪಾಲಶೆಟ್ರು, ಅಧ್ಯಕ್ಷರೂ ಮಕ್ಕಳ ಚಟುವಟಿಕೆಗಳನ್ನು ಪ್ರಶಂಶಿಸಿ ಭಾಷಣವಿತ್ತರು. ಮಕ್ಕಳಿಗೆ ಬಹುಮಾನ ಹಂಚಿದ ಮೇಲೆ, ಧನ್ಯವಾದ ಸಮರ್ಪಣೆಯಾಗಿ, ಲಘು ಫಲಾಹಾರವಾದನಂತರ ಸಭೆಯು ಮುಗಿಯಿತು.

ಕುಂದಾಪುರ–ತಾ 23 1-46ರಲ್ಲಿ ಸ್ಥಳೀಯ ‘ವಿದ್ಯಾರ್ಥಿ ಸಂಘ’ವು ಸುಭಾಸರ 50 ನೇ ಹುಟ್ಟುಹಬ್ಬವನ್ನು ಅತಿ ವಿಜೃಂಭಣೆಯಿಂದ ಆಚರಿಸಿತು ಬೆಳಿಗ್ಗೆ ಪ್ರಭಾತಫೇರಿ, ಗಾಂಧಿ ಮೈದಾನದಲ್ಲಿ ಧ್ವಜವಂದನ ಮಾಡಲ್ಪಟ್ಟಿತು. ಸಾಯಂಕಾಲ ನೇತಾಜಿ ಸುಭಾಸರ ಭಾವಚಿತ್ರದೊಂದಿಗೆ ಬೆಂಡುವಾದ್ಯದೊಂದಿಗೆ ಪ್ರಚಂಡ ಮೆರವಣಿಗೆ ನಡೆಯಿತು. ಗಾಂಧಿ ಮೈದಾನದಲ್ಲಿ ವಕೀಲ್ ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಗಳಾದ ಕೋಣಿ ಅಣ್ಣಪ್ಪ ಕಾರಂತ್, ಕೆ. ವೆಂಕಟಶೆಟ್ಟಿ, ಜಗನ್ನಾಥ ಮೂಡ್ಲಕಟ್ಟೆ ಮೊದಲಾದವರು ನೇತಾಜಿಯವರ ಗುಣಗಾನ ಮಾಡಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು. ಈ ಸಭೆಯು ಕೂಲಿಕಾರರ ಸಂಪನ್ನು ಮನ್ನಿಸಿತು.

ಇಲ್ಲಿಯ ಸರ್ಕಲ್ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ತಾ 26-1-46ರಲ್ಲು ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಜರುಗಿಸಲಾಯಿತು ಬೆಳಿಗ್ಗೆ ಪ್ರಭಾತಫೇರಿ ಮತ್ತು ಧ್ವಜವಂದನೆ, ಸೇವಾದಳದ ಕವಾಯತು, ಸಾಯಂಕಾಲ ಘಂ 5ಕ್ಕೆ ಮೆರವಣಿಗೆ, ನಂತರ ಶ್ರೀ। ಕೋಣಿ ಅಣ್ಣಪ್ಪ ಕಾರಂತರ ಅಧ್ಯಕ್ಷತೆಯಲ್ಲಿ ಗಾಂಧಿ ಮೈದಾನದಲ್ಲಿ ಸಭೆ ಜರಗಿತು. ಸಭೆಯಲ್ಲಿ ನೆರೆದವರು ಪ್ರತಿಜ್ಞೆ ತೆಗೆದುಕೊಂಡರು ಮತ್ತು ಇಲ್ಲಿಗೆ ಬಂದಿದ್ದ ನೇತಾಜಿ ಬೋಸರ ಬೋಡಿಗಾರ್ಡ್ ಆಗಿದ್ದ ಶ್ರೀ। ಪಿ ಆರ್ ರಾಮಚಂದ್ರನ್‌ರವರು I N A ಮತ್ತು ನೇತಾಜಿ ಬೋಸರ ಕುರಿತು ಭಾಷಣವಿತ್ತರು.

ಮದ್ರಾಸು

ಶ್ರೀಕೃಷ್ಣ ಮಂದಿರ ಪ್ರತಿಷ್ಠಾ ಮಹೋತ್ಸವವು ತಾ. 14-2 46ರಲ್ಲಿ ಉಡುಪಿ ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಜರಗಲಿರುವುದೆಂದೂ ಆಸ್ತಿಕ ಮಹಾಶಯರಿಗೆಲ್ಲಾ ಸುಸ್ವಾಗತವಿದೆಯೆಂದೂ ಶ್ರೀ। ಪಿ ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ತಿಳಿಸುತ್ತಾರೆ.

ಮೈಸೂರು ರಾಜಧಾನಿಯಲ್ಲಿ ಉಡುಪಿ ಶ್ರೀಕೃಷ್ಣ ಮಂದಿರ ಶಂಕುಸ್ಥಾಪನೆಯು ಕಳೆದ ತಾ. 23ರಲ್ಲು ಉಡುಪಿಯ ಫಲಿಮಾರು ಮಠದ ಶ್ರೀ ರಘುಮಾನ್ಯತೀರ್ಥ ಸ್ವಾಮಿಗಳವರಿಂದ ಮಾಡಲ್ಪಟ್ಟಿತು. ರಾಜಧಾನಿಯ ಪ್ರಮುಖ ಅಧಿಕಾರಿಗಳೂ ಇನ್ನಿತರ ಭಕ್ತವೃಂದವೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು ಮಂದಿರ ಕಮಿಟಿಯ ಅಧ್ಯಕ್ಷರಾದ ಶ್ರೀ। ಕೆ. ಸೀತಾರಾಮರಾಯರು ಸ್ವಾಮಿಗಳವರಿಗೆ ಭಿನ್ನವತ್ತಳಿಕೆಯನ್ನು ಅರ್ಪಿಸಿದರು ಮೈಸೂರು ಮಹಾರಾಜರಿಗೆ ಶ್ರೇಯಸ್ಸನ್ನು ಕೋರಿ ಮಂದಿರದ ಕಟ್ಟಡ ನಿಧಿಗೆ ಸ್ವಾಮಿಗಳವರು ರೂಪಾಯಿ 1001/ನ್ನು ದಾನವಿತ್ತರು. ಮೈಸೂರಲ್ಲಿ ನೆಲೆಸಿರುವ ದಕ್ಷಿಣ ಕನ್ನಡಿಗರಿಗೆ ಉಡುಪಿ ಶ್ರೀಕೃಷ್ಣ ಮಂದಿರದ ಆವಶ್ಯಕತೆಯನ್ನು ಸೂಚಿಸಿ ಹಲವರ ಸಂದರ್ಭೋಚಿತ ಭಾಷಣಗಳಾದುವು ನೆರೆದ ಸ್ತ್ರೀಪುರುಷರಿಗೆ ಸ್ವಾಮಿಗಳವರು ಫಲಮಂತ್ರಾಕ್ಷತೆಯನ್ನಿತ್ತು ಆಶೀರ್ವದಿಸಿದರು ಧನ್ಯವಾದಾರ್ಪಣೆಯೊಂದಿಗೆ ಶಂಕುಸ್ಥಾಪನಾ ಮಹೋತ್ಸವವು ವೈಭವದಿಂದ ಕೊನೆಗೊಂಡಿತು.

ಮದ್ರಾಸು ಪೇಪರ್ ಕಂಟ್ರೋಲರ್ ಇವರ ಪ್ರಕಟಣೆ

ಪೇಪರ್ ಇಶ್ಯೂ ಕಾರ್ಡುಗಳ ಹಾಗೂ ಪೇಪರ್ ವ್ಯಾಪಾರ ಮಾಡಲು ಅಧಿಕಾರವುಳ್ಳವರ ಲೈಸೆನ್ಸು ಅವಧಿಯು 31-3 1946ಕ್ಕೆ ಅಂತ್ಯವಾಗುತ್ತದೆ. ಅವಧಿಯನ್ನು ಊರ್ಜಿತಗೊಳಿಸಲಪೇಕ್ಷಿಸುವವರು ತಮ್ಮ ಅರ್ಜಿಗಳನ್ನು ತಾ 15-2-1946ರೊಳಗಾಗಿ ಮದ್ರಾಸು ಪೇಪರ್ ಕಂಟ್ರೋಲರರಿಗೆ ಕಳುಹಿಸತಕ್ಕದ್ದು. ಛಾಪಾ ಫಾರ್ಮುಗಳು ಇಲ್ಲದಿರುವುದರಿಂದ ಕೈ ಬರಹದ ಅರ್ಜಿಗಳಲ್ಲಿ ಈ ಕೆಳಗಿನ ಮಾಹಿತಿಗಳನ್ನು ಸೂಚಿಸಬೇಕಾಗಿದೆ. (1) ಪೇಪರ್ ಇಶ್ಯೂ ಕಾರ್ಡಿನ ನಂಬ್ರ. (2) ಜಿಲ್ಲೆ (3) ಶಾಖೆ ‘L II-B-Sectin (IV) Miscellaneous other Miscellaneous Receipts ಈ ಲೆಖ್ಖಕ್ಕೆ ರೂ 2-8 0. ಪಾವತಿ ಮಾಡಿ ರಶೀದಿಯನ್ನು ಸಹ ಕಳುಹಿಸತಕ್ಕದು. ಪೇಪರ್ ವ್ಯಾಪಾರದ ಲೈಸನ್ಸುದಾರರು ಸಹ ಲೈಸನ್ಸು ನಂಬ್ರ. ಜಿಲ್ಲೆ ಮತ್ತು ರೂಪಾಯಿ 7 8 0 ಖಜಾನೆಗೆ ಪಾವತಿ ಮಾಡಿದ ರಶೀದಿ ಸಮೇತ ತಾ 15-2-46 ರೊಳಗೆ ಅರ್ಜಿ ಕಳುಹಿಸಬೇಕಾಗಿದೆ.

ಜಿಲ್ಲಾ ಕಲೆಕ್ಟರರಿಂದ ಲೈಸೆನ್ಸು ಪಡೆದವರು ರೂಪಾಯಿ 7 8-0 ಪಾವತಿ ಮಾಡಿದ ರಶೀದಿಯೊಂದಿಗೆ ನಿಯಮಿತ ಫಾರ್ಮಿನಲ್ಲಿ ತಾ 15 2 46ರೊಳಗಾಗಿ ಅರ್ಜಿ ಮಾಡಬೇಕಾಗಿದೆ.

NOTICE.

In the Court of the District Munsif of Mangalore.

O S. No. 357/45

Between
J A Puthran & others Plaintiffs
Vs
B. Puttanna & others. Defts

To
3rd Deft K Subba Rao son of Kudru Srinivasaya, C/o Sri Vastavacharya, Harihara Town, Mysore State

Please take notice that the Plaintiffs above named have filed the above suit for recovery of possession of plaint properties and for arrears of rent etc and same is posted to 9 2-'46 for your appearance. If you fail to appear on that date the said suit will be decided in your absence

(By order of the Court)

(Sd). S. Venkat Rao,
Vakil for Plaintiffs

Mangalore, 23-1-1946.

ಉಚಿತ! ಫೆಬ್ರವರಿ 15ರೊಳಗೆ ಚಂದಾದಾರರಾಗುವವರಿಗೆ ಉಚಿತ!!

ವೈದ್ಯರೂ ಹೆಂಗಸರೂ ಅತ್ಯವಶ್ಯಕವಾಗಿ ಓದಬೇಕಾದುದು.

ಮಣಿಪಾಲದಲ್ಲಿ ಈಗತಾನೆ ಜಯಶೀಲವಾಗಿ ಜರಗಿದ 34ನೇ ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ಸುಸಂದರ್ಭದಲ್ಲಿ ಪ್ರಕಟಿಸಲ್ಪಟ್ಟ ಅಂತರಂಗದ ವಿಶೇಷ ಸಂಚಿಕೆ.

ಅಂತರಂಗ

ಆಯುರ್ವೇದ ಸಮ್ಮೇಲನಾಂಕ

ಬೆಲೆ ರೂ **1—0—0**

... 150

ಆಯುರ್ವೇದಾಭಿಮಾನಿಗಳಾದ ಪ್ರತಿಯೊಬ್ಬರೂ ಓದತಕ್ಕ ಅಪೂರ್ವ ಸಂಚಿಕೆ

ಡಾ. ಸುಶೀಲಾ ನಾಯರ್, ಸೇವಾಗ್ರಾಮ, ಡಾ. ಬಿ. ಸುಮತಿಬಾಯಿ ಶಾರದಾನಾಥ, ಬಿ ಎ ಎಲ್ ಟಿ ಬೆಂಗಳೂರು, ಕವಿರಾಜ ಆಶುತೋಷ ಮಜುಮ್ದಾರ್, ಡಿಲ್ಲಿ, ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್, ಬಿ ಎ ಬಿ ಎಲ್, ಉಡುಪಿ, ಶ್ರೀ. ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು, ಉಡುಪಿ, ಕವಿರಾಜ್ ಎಂ. ಕೆ ಮುಖರ್ಜಿ, ಕಲ್ಕತ್ತಾ ವೈದ್ಯ ಟಿ ಎಸ್ ಕೇಳು ನಂಬಿಯಾರ್, ಉಡುಪಿ, ವೈದ್ಯ ಬಿ ಶ್ರೀ ಮಧ್ವಾಚಾರ್ಯ, ಬಾಗಲಕೋಟೆ, ವೈದ್ಯ ಗುಂಡಾಚಾರ್ಯ ನವಣೂರ ಹುಬ್ಬಳ್ಳಿ, ಡಾ. ಕೆ ಎ ಶಂಕರಪಿಳ್ಳೆ ತಿರುವಾಂಕೂರು, ವೈದ್ಯಗುರು ಬಿ ಕೆ ಭಾರದ್ವಾಜ ಬೆಂಗಳೂರು, ಡಾ ಗೋಪಾಲಕೃಷ್ಣರಾವ್ ಧಾರವಾಡ, ವೈದ್ಯ ಎಂ ಮಹಾದೇವ ಶಾಸ್ತ್ರಿ ಬೆಂಗಳೂರು. ವೈದ್ಯ ವಿನಾಯಕ ರಾವ್ ಪಾಟೀಲ ತಲಗುಪ್ಪ, ವೈದ್ಯಭಾನು ಆರ್. ಬಿ ಕುಲಕರ್ಣಿ ತುಂಗಭದ್ರ, ಪಂಡಿತ ಶಿವಪ್ಪಯ್ಯ ಹರಿಹರ, ವೈದ್ಯ ಕೈ ಸು. ಭಟ್, ಚಿಕ್ಕಮಗಳೂರು, ಡಾ ಡಿ ವೆಂಕಟಗಿರಿರಾವ್, ದೊಡ್ಡಬಳ್ಳಾಪುರ, ಶ್ರೀ ಕೆ ಪಿ ವೆಂಕಪ್ಪ ಶೆಟ್ಟಿ ಪುತ್ತೂರ, ವೈದ್ಯ ಎಚ್ ಟಿ ಸುಬ್ರಹ್ಮಣ್ಯಾಚಾರ್ಯ, ಹೆಜಮಾಡಿ, ಡಾ. ಸಿ ಎ ಅಯ್ಯಂಗಾರು ಮೂಡಿಗೆರೆ, ಆಯುರ್ವೇದ ಭೂಷಣ ಎಂ. ವಿ ಶಾಸ್ತ್ರಿ ಮಂಗಳೂರು, ವೈದ್ಯಗುರು ಸ್ವಾಮಿರಾಯಾಚಾರ್ಯ, ತುಂಗಭದ್ರ, ಆಯುರ್ವೇದತೀರ್ಥ ಅನಂತಾಚಾರ್ಯ ಬಿಜಾಪುರ, ಡಾ ಪಿ ಆರ್ ರಂಗನಾಥ ನಾಯಕ್ ರಾಣೆಬೆನ್ನೂರು, ವೈದ್ಯ ಪಾಡಾವೆ ಶಂಕರನಾರಾಯಣ ಭಟ್, ಶ್ರೀ ಎಸ್. ಎಸ್. ಪಟ್ಟೇದಳ್ಳಿ, ಭದ್ರಾವತಿ, ಡಾ। ಯು ಕೃಷ್ಣ, ಮುನಿಯಾಲ್, ಶ್ರೀ ಯು ವಿ ಆಚಾರ್ಯ, ಪಂಜೆ, ಮೊದಲಾದವರ

ಲೇಖನಗಳಿವೆ! ಭಾಷಣಗಳಿವೆ!! ಚಿತ್ರಗಳಿವೆ!!!

ಪ್ರತಿ ಮನೆಯಲ್ಲೂ ಇರಲೇಬೇಕಾದ ಅಮೂಲ್ಯ ಕೈಗನ್ನಡಿ.

ರೂ **1—0—0** ಕಳಿಸಿದರ ಒಂದು ಪ್ರತಿಯನ್ನು ಕಳಿಸಲಾಗುವುದು.

ತಾ. 15-2-46ರೊಳಗೆ ರೂ 4-8-0 ಕಳುಹಿಸಿ ಚಂದಾದಾರರಾಗುವವರಿಗೆ ಈ ಸಂಚಿಕೆಯು ಉಚಿತವಾಗಿ ಕೊಡಲ್ಪಡುವುದು.

ಮೆನೆಜರ್, ಅಂತರಂಗ ಆಫೀಸು, ಉಡುಪಿ.

ಆಯುರ್ವೇದ ಕೊಂಗ್ರೆಸ್, ಮಣಿಪಾಲ ಅಧಿವೇಶನದ ವೈಶಿಷ್ಟ್ಯವೇನು?

(ಓರ್ವ ಪ್ರತಿನಿಧಿಯಿಂದ)

●

ಮಣಿಪಾಲ ಅಧಿವೇಶನವನ್ನು ಮುಗಿಸಿಕೊಂಡು, ಬಸ್ಸು ಹಿಡಿದಾಗಿನಿಂದ, ಈಗಿನವರೆಗೂ ಅದೆಷ್ಟೋ ಜನ ಆಯುರ್ವೇದ ಕೊಂಗ್ರೆಸ್ ವಿಷಯ ಕೇಳಿದ್ದೇ ಕೇಳಿದ್ದು. ನಾನೂ ಸಹ ಬಸ್ಸು ಧೂಳಿನಿಂದ ಅರಿಸೋದ ಗಂಟಲನ್ನು ಸರಿಪಡಿಸಿಕೊಂಡು, ಕೇಳಿದವರ ಕಿವಿ ಸಾಕೆನ್ನುವ ವರೆಗೆ ಹೇಳಿದ್ದೇ ಹೇಳಿದ್ದು. ನನ್ನೀ ಅಲ್ಪಾನುಭವದಿಂದ ಕಂಡುಬಂದದ್ದೇನು? ಆಯುರ್ವೇದದ ಬಗ್ಗೆ ಜನತೆಯ ಸಹಾನುಭೂತಿಯುಂಟು. ಮಣಿಪಾಲ ಅಧಿವೇಶನದ ವಿಶೇಷ ವಿವರವನ್ನು ತಿಳಿಯುವ ಕುತೂಹಲ ಉಂಟು, ಔತ್ಸುಕ್ಯವುಂಟು. ಜನ ಸಾಮಾನ್ಯದ ನಿರ್ಮಲಾಂತಃಕರಣಮಯವಾದ, ಆತುರ, ಆಕಾಂಕ್ಷೆಗಳಿಗೆ ಅನ್ನವಾಗಲೆಂದು, ಮೊನ್ನೆ ಜರುಗಿದ ನಿಖಿಲ ಭಾರತ ಆಯುರ್ವೇದ ಕೊಂಗ್ರೆಸ್‌ದ ಕರ್ನಾಟಕ ಅಧಿವೇಶನದ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ಬಿಡಿಬಿಡಿಯಾಗಿ ಬಿಡಿಸಲಾಗಿದೆ. ಪ್ರಚಾರ ಪ್ರಪಂಚದ ಪ್ರಧಾನ ಕಾರ್ಯಕರ್ತರಾದ, ಪತ್ರಿಕಾ ಸಂಪಾದಕ ಮಹಾಶಯರು, ಆಯುರ್ವೇದಾಂಗಗಳನ್ನು ಹೊರದಿಸಿ, ವೈದ್ಯ ವೃಂದದ ನೇರವಾದಾದರಕ್ಕೆ ಪಾತ್ರರಾಗಿರುವುದರಿಂದ, ಈ ಪಂಕ್ತಿಗಳನ್ನು ಪ್ರಮುಖ ಪತ್ರಿಕೆಗಳಿಗೆ, ಪ್ರಕಟನೆಗಾಗಿ ಕಳುಹಿಸುತ್ತಲಿದ್ದೇನೆ.

೧. ಅಖಿಲ ಭಾರತ ಆಯುರ್ವೇದೀಯ ಮಂಡಲದ ಮೂವತ್ತನಾಲ್ಕು ಅಧಿವೇಶನಗಳ ಪೈಕಿ, ಹೆಚ್ಚಿನಾಂಶಗಳು ಉತ್ತರ ಹಿಂದೂಸ್ಥಾನದಲ್ಲಿಯೇ ಜರುಗಿದವು. ತ್ಯಾಗಧೀರರೂ, ವೈದ್ಯ ವೀರರೂ, ದಕ್ಷಿಣ ಭಾಗದಲ್ಲಿಯೇ ಇಲ್ಲವೋ? ಸಂಘಟನಾ ಶಕ್ತಿ ಕರ್ನಾಟಕಕ್ಕೆ ಮೊಸತೋ? ಕರ್ನಾಟಕದೀ ಕುಂದು ಕೊರತೆಗಳನ್ನು ಹೋಗಲಾಡಿಸಿ, ಕನ್ನಡಪ್ಪನ ಕೀರ್ತಿ ಪತಾಕೆಯನ್ನು ಸಮಗ್ರ ಭಾರತದ ಕಣ್ಣುಗಳಿಗೆ ಕಂಗೊಳಿಸುವಂತೆ ಹೊರಡಿಸಿದ್ದು ಮಣಿಪಾಲ ಅಧಿವೇಶನವು. ಕನ್ನಡತಿಯರ ಕುವರರಿಲ್ಲದ ಕರ್ತೃತ್ವ ಶಕ್ತಿಯ ಪುಷ್ಟಿನೇ ಯೆಂದು ನೋಡಬೇಕಾದರೆ ಮಣಿಪಾಲದಂಥ ಕಾಡಿನಲ್ಲಿ (ಹಳ್ಳಿ?) ಜರುಗಿದ ಮೊನ್ನಿನ ಅಧಿವೇಶನವನ್ನು ನೋಡಬೇಕು

೨. ಅಧಿವೇಶನದ ಸಭಾ ಮಂಟಪಕ್ಕೆ "ತಾರಾನಾಥ ವಿಹಾರ"ವೆಂದು ಹೆಸರಿಟ್ಟದ್ದು ಆರಂಭದಲ್ಲಿಯೇ ದಿ। ಪಂಡಿತ ತಾರಾನಾಥರ ತೈಲ ಚಿತ್ರದ ಅನಾವರಣ ಮಾಡಿದ್ದೂ ಈ ಉತ್ಸವದ ವೈಶಿಷ್ಟ್ಯಗಳಲ್ಲೊಂದು ವೈಶಿಷ್ಟ್ಯ. ದಕ್ಷಿಣ ಕನ್ನಡದಲ್ಲಿ ಹುಟ್ಟಿ, ಉತ್ತರ ಕನ್ನಡದಲ್ಲಿ ಮೆರೆದ ಅಂತರರಾಷ್ಟ್ರೀಯ ವ್ಯಕ್ತಿಯಾಗಿ ಹೋದ, ತಾರಾನಾಥರಿಗೆ, ಕನ್ನಡಿಗರಾದ ನಾವು ಈ ಮೊದಲೇ-ಅದೆಷ್ಟೋ ದಿನಗಳ ಮೊದಲೇ-ನಮ್ಮ ಶ್ರಾದ್ಧಾನ್ವಿತ ಗೌರವಗಳನ್ನು ಸಮರ್ಪಿಸಬೇಕಾಗಿತ್ತು. ಆ ಮಹಾ ಪುರುಷರ ವೈಶಿಷ್ಟ್ಯವನ್ನು ಅವರು ಜೀವಂತವಿರುವಾಗಲೇ ಅರಿತು ಆದರಿಸದೇ ಇದ್ದುದು ಕನ್ನಡಿಗರ ದುರ್ದೈವವೇ ಅಲ್ಲವೇ? ಏನಾದರೂ ನಮ್ಮ ಕರ್ನಾಟಕದ ವಿಭೂತಿ ಪುರುಷರ ಮಹಾತ್ಮೆಯನ್ನು ಅರಿತುಕೊಂಡು, ನಿಖಿಲ ಭಾರತ ವೈದ್ಯ ವೃಂದದ ಚಿತ್ತ ಭಿತ್ತಿಗಳಲ್ಲಿ ಮೂಡುವಂತೆ ಗೌರವಿಸಿದ್ದು ನಮ್ಮ ಸದ್ಭಾಗ್ಯವೇ ಸರಿ. ವೈಶಿಷ್ಟ್ಯವೇ ಸರಿ!

೩. (ಅ) ಈ ಕೊಂಗ್ರೆಸ್ ಅಧಿವೇಶನಗಳಲ್ಲಿ ಅದೆಷ್ಟೋ ಉಪಾಧಿವೇಶನಗಳು ಜರುಗಿದವು. ಅಂತಹ ಎರಡು ಉಪಾಧಿವೇಶನಗಳಿಗೆ ವೈದ್ಯ ಗುರು-ಸುಮತೀ ತಾರಾನಾಥ B. A. L. T. ಮತ್ತು ವೈದ್ಯ ಗುರು R. K. ಪಾಕ್ಷೀಕರ್ B. A. B. S. C. ಅಧ್ಯಕ್ಷರಾಗಿದ್ದುದು ಒಂದು ವೈಶಿಷ್ಟ್ಯವೇ ಆಗಿತ್ತು. ಎಂತಹ ಕಷ್ಟ ನಷ್ಟಗಳು ಬಂದರೂ ಎದುರಿಸಿ, ತಮ್ಮ ಸುಪ್ತಶಕ್ತಿಯನ್ನು ವ್ಯಕ್ತಗೊಳಿಸಿ, ಈ ಕೊಂಗ್ರೆಸನ್ನು ದಕ್ಷಿಣದಲ್ಲಿ ಕರೆಯಿಸಿ, ಕನ್ನಡಿತಿಯ ಕೀರ್ತಿಯನ್ನು ಸಮಗ್ರ ಭಾರತದಲ್ಲಿ ಹಬ್ಬಿಸಿರುವ ಶ್ರೇಯೋಭಾಗಿಗಳಲ್ಲಿ ವೈದ್ಯಗುರು ಎಮ್. ಆರ್. ಭಟ್ಟರೂ ಒಬ್ಬ ಪ್ರಧಾನ ಪುರುಷರಾಗಿರುವುದೂ ಇಲ್ಲಿಯ ವೈಶಿಷ್ಟ್ಯವೇ. ಈ ಶ್ರೀಮಾನ್ ಭಟ್ ಮಹಾಶಯರ ಚಲ ಪ್ರತಿಮೆಯೋ ಎಂಬಂತೆ ಶ್ರೀ. ಎಸ್. ಎಚ್. ಒಡೆಯರವರು ವೈದ್ಯ ಸಂದೇಶಗಳನ್ನು ಕನ್ನಡದ ಮೂಲೆ ಮೂಲೆಗಳಲ್ಲಿಯೂ ಕೇಳಿಸುವಂತೆ ವ್ಯವಸ್ಥೆ ಕರಿಸಿ, ಈ ಅಧಿವೇಶನಕ್ಕೆ ಸಹಾಯ ಮಾಡಿದ್ದು ಉಲ್ಲೇಖನೀಯವೇ ಆಗಿದೆ. ಮತ್ತೆ ಮೇಲೆ ಹೇಳಿರುವ ನಾಲ್ಕು ಮಹಾ ವ್ಯಕ್ತಿಗಳೂ ದಿ। ತಾರಾನಾಥರ ಶಿಷ್ಯೋತ್ತಮರೆಂದು ಬೇರೆ ಹೇಳಬೇಕಾಗಿಲ್ಲ. ಇವರ ಜಂಟಿಗರಾಗಿ ಶ್ರೀಮದ್ವಿದ್ಯಾಪೀಠದ ಅಧ್ಯಾಪಕರೂ, ಸ್ನಾತಕರೂ, ವಿದ್ಯಾರ್ಥಿಗಳೂ, ಅಲ್ಲಲ್ಲಿ ಕಂಗೊಳಿಸಿ ತಾರಾನಾಥ ವಿಹಾರವಾಗಿರುವ ಅಧಿವೇಶನ ಮಂಟಪವು ಸಾರ್ಥಕವಾಯ್ತೆ ಎನ್ನುವಂತೆ ತೋರುತ್ತಲಿದ್ದುದು ಅದರ ವೈಶಿಷ್ಟ್ಯವೇ.

(ಆ) ಆಯುರ್ವೇದಾಧಿವೇಶನದಲ್ಲಿ ಸ್ತ್ರೀಯರಿಗೆ ಅಧ್ಯಕ್ಷ ಸ್ಥಾನ ದೊರೆತದು ತೀರ ವಿರಳ. ನಮ್ಮೀ ಕರ್ನಾಟಕಕ್ಕಂತು ಇದೇ ಮೊದಲನೆ ಬಾರಿ. ಯಾವ ಕ್ಷೇತ್ರವೇ ಆಗಲಿ. ಪುರುಷರಿಗೆ ಮಾತ್ರ ಮೀಸಲು ಎಂಬೀ ವಿಚಾರಕ್ಕೀಗ ಅವಕಾಶವೇ ಇಲ್ಲ. ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಶಾಸ್ತ್ರೀಯ ರಂಗಗಳಲ್ಲಿ ಸಹ ಮೇಧಾವಿನಿಯರಾದ ಸ್ತ್ರೀಯರೆಷ್ಟೋ ಮಂದಿ [illegible] ಕೆಲಸ ಮಾಡುತ್ತ, ಶಕ್ತಿ ಸ್ವರೂಪಿಣಿಯರಾಗಿ, ಶೋಭಾಯಮಾನರಾಗುತ್ತಿದ್ದಾರೆ. ಆದರೆ ಆಯುರ್ವೇದ ಕ್ಷೇತ್ರದಲ್ಲಿ ನಾವೆಷ್ಟು ಮಂದಿ ವಿದುಷಿಯರಿಗೆ ಸ್ಥಾನವಿತ್ತಿದ್ದೇವೆ? ಪುರುಷರ ಸ್ವಾರ್ಥವೋ ಇದು? ಚಿಕಿತ್ಸಾಭಾಂಡಾರವೂ ಸೇವಾ ಶುಶ್ರೂಷಾ ಸಂಪತ್ತೂ ಸ್ತ್ರೀಯರಿಗೆ ಜನ್ಮ ಸಿದ್ಧ ಹಕ್ಕು. ರೋಗಿಗಳು. ತಾಯ್ಗರುಳು ಕರಗಿ ನೀರಾಗಿ, ಆರ್ತರ ಶುಶ್ರೂಷೆಗಾಗಿ ಧಾವಿಸುತ್ತಿರುವುದನ್ನು ನಾವೆಲ್ಲೆಲ್ಲಿಯೂ ನೋಡುತ್ತಿದ್ದೇವೆ. ಜ್ಞಾನಿಯರಿಗೆ ಪ್ರೇಮ ಹೃದಯವೇ ಬುಗ್ಗೆ ತಾನೆ? ಇಂಥಾ ಹೃದಯವುಳ್ಳ ವಿದುಷಿಯರಿಗೆ, ಆಯುರ್ವೇದ ಕ್ಷೇತ್ರದಲ್ಲಿ ಇಂದಿನ ವರೆಗೂ ಸ್ಥಾನವನ್ನು ಕಲ್ಪಿಸದೇ ಇದ್ದ ಮಹಾಪರಾಧವನ್ನು ಈ ಮಣಿಪಾಲ ಅಧಿವೇಶನವು ತೊಡೆದು ಹಾಕಿ, ವೈದ್ಯ ಗುರು ಸುಮತೀ ತಾರಾನಾಥರಿಗೆ ಅಧ್ಯಕ್ಷ ಸ್ಥಾನವನ್ನು ಕೊಟ್ಟು ಮನ್ನಿಸಿದ್ದು ಒಂದು ವೈಶಿಷ್ಟ್ಯವೇ ಅಲ್ಲವೇ?

೪. ಇವರಲ್ಲಿ ಇನ್ನು ಒಂದು ವಿಶೇಷವೆಂದರೆ ಹಿಂದೂ, ಮುಸಲ್ಮಾನ್, ಕ್ರಿಶ್ಚಿಯನ್ನರು ಒಂದೇ ವೇದಿಕೆಯಲ್ಲಿ ನಿಂತುದು. ಅದರಲ್ಲಿಯೂ ಶ್ರೀ। ಶಿರೂರು ಮಠದ ಶ್ರೀಗಳವರೂ, ಮಂಗಳೂರಿನ ಬಿಷಪರೂ, ಉಡುಪಿಯ ಎಚ್. ಎಸ್ ಹುಸೇನ ಸಾಹೇಬರೂ, ಕೂಡಿ ನಿಂತುದನ್ನು, ಧನ್ವಂತರಿ ಸೇವೆಗಾಗಿ ಭುಜಕ್ಕೆ ಭುಜ ಕಟ್ಟಿ ಸೇವೆ ಮಾಡಿದ್ದನ್ನು ನಾವೆಂದಿಗೂ ಮರೆಯಲಾರೆವು. ಕ್ರಿಶ್ಚಿಯನ್ ಧರ್ಮಾಧಿಕಾರಿಗಳನ್ನೂ, ಮಠಾಧೀಶ ಶ್ರೀಪಾದಂಗಳವರನ್ನೂ, ರಾಜಕಾರಣ ತಜ್ಞರನ್ನೂ, ವಾಸಸಾಧಕ [illegible] ಆಕರ್ಷಿಸಿದ್ದು ಇದರ ಒಳಿ ಒಣಿಪಾಲದ ಅಧಿವೇಶನವೇ!

೫. ಈ ಅಧಿವೇಶನದಲ್ಲಿ ನಿಖಿಲ ಕರ್ನಾಟಕ ಆಯುರ್ವೇದ ಮಂಡಲದ ಅಧ್ಯಕ್ಷರಾದ ಶ್ರೀಮಾನ್ ಪಾರ್ಥ ನಾರಾಯಣ ಪಂಡಿತರು ಮಂಡಿಸಿದ ಠರಾವು ಮಹತ್ವ ಪೂರ್ಣವೇ ಆಗಿತ್ತು. ದೇಶಾಂತರಗಳಲ್ಲಿ ಹೆಚ್ಚಾಗಿ ಮಲಯದಲ್ಲಿ ರೋಗ ರುಜಿನೆಗಳಿಂದ ಬಳಲುವ ನಮ್ಮ ಬಂಧುಗಳಲ್ಲಿ ಚಿಕಿತ್ಸಾ ಸೇವೆಯನ್ನು ನೀಡಲು ವೈದ್ಯ ಸೇವಾ ಮಂಡಲವನ್ನು ತಯಾರಿಸಿ ಕಳುಹಿಸಬೇಕೆಂಬ ಈ ಠರಾವು ಅಪೂರ್ವವಾದುದು. ಅತ್ಯಂತ ಸ್ತುತ್ಯವಾದ ಸಂಗತಿಯಾಗಿದೆ. ಶ್ರೀಪಾರ್ಥಜೀಯವರ ಹೃದಯ ವೈಶಾಲ್ಯದ್ಯೋತಕವಾಗಿದೆ. ಅದರಿಂದ ಆಚರಣ ರಂಗಕ್ಕಿಳಿಯಬೇಕು ಮಾತ್ರ

೬. ಮಣಿಪಾಲ ಮಾತಿಗಿಂತಲೂ ಕಜದಷ್ಟು ಕೃತಿ ಲೇಸೆಂಬುದನ್ನು ನಾವಿಂದು ನೋಡಿದ್ದು ಶ್ರೀ. ಟಿ. ಎ. ಪೈ ಬಂಧುಗಳ ಮಣಿಪಾಲ ನಗರ ನಿರ್ಮಾಣದಲ್ಲಿ ಕೆಲ ವರ್ಷಗಳ ಹಿಂದೆ ಕಾಡು ಗುಡ್ಡವಾಗಿದ್ದ ಸ್ಥಳವೀಗ ಸಮಗ್ರ ಕರ್ನಾಟಕದ ಏಕೆ? ಸಮಗ್ರ ಭಾರತದ (Bank) ಬೇಂಕ ವ್ಯವಹಾರದ ಕೇಂದ್ರವಾಗಿದೆ. ಇವರ ಸಂಘಟನಾ ಶಕ್ತಿಯು ಅದ್ಭುತವಾಗಿದೆ. ನಮ್ಮ ಕನ್ನಡ ನಾಡಿನಲ್ಲಿ ಇಂತಹ ಸಂಘಟನಶೀಲರನ್ನೂ, ವ್ಯವಹಾರ ಕೋವಿದರನ್ನೂ ನಾವು ನೋಡಿದ್ದು ಈ ಮಣಿಪಾಲದಲ್ಲಿಯೇ. ಆಪಾರೋಗ್ಯಕ್ಕೆ ರೋಗ ದ್ವೇಷ ಮ್ಯಾವೇ ಕಾರಣವೆಂದು "ರೋಗಸ್ತು ದೋಷ ವೈಷಮ್ಯಂ" ಅಂತ ಆಯುರ್ವೇದ ಗ್ರಂಥಗಳು ಸಾರುತ್ತಿರುವಾಗ ಶ್ರೀ. ಪೈ ಬಂಧುಗಳು "ರೋಗಸ್ತು ಅರ್ಥ ವೈಷಮ್ಯಂ" ಹಣದ ವಿಷಮ ವಿಭಾಗವೇ ವಿರಾಟ ರೋಗಕ್ಕೆ ಕಾರಣವೆಂದು ಹೇಳಿದ್ದು ನನಗಿನ್ನೂ ಕೇಳಿಸುತ್ತಿದೆ. ಈ ಧನಿಕರ ವಿಧಾಯಕ ಮೀಮಾಂಸೆಯನ್ನು ಬರೆಯತೊಡಗಿದರೆ ಅದೊಂದು ಗ್ರಂಥವೇ ಆಗಬಹುದು. ನಮ್ಮೀ ಕನ್ನಡ ತಾಯಿಯು ಇಂಥ ಧನಿಕ ಕುವರರ [illegible] ಇನ್ನೂ ಜನಿಸಲೆಂದೇ ನಮ್ಮ ಹಾರ್ದಿಕ ಹಾರೈಕೆ.

ಕೊನೆಗೊಂದು ಮಾತು...

ಇಂತಹ ವೈಶಿಷ್ಟ್ಯಗಳುಳ್ಳ ಈ ಅಧಿವೇಶನವು ಮುಗಿಯಿತು. ಆದರೆ ಮುಂಬರುವ ಡಿಸೆಂಬರ ವರೆಗೆ ವೈದ್ಯರೂ, ವೈದ್ಯಾಭಿಮಾನಿಗಳೂ ಏನು ಮಾಡುವರು? ನಿರ್ದಿಷ್ಟ ವಿಧಾಯಕ ಕಾರ್ಯಕ್ರಮವಿಲ್ಲದೇ ಕೇವಲ ಸಂತೆ ಜಾತ್ರೆಗಳಂತೆ ಅಧಿವೇಶನವು ಜರುಗಿ, ರಭಸದಲ್ಲಿ ತೃಪ್ತಿ ಹೊಂದಿ ತೇಗಿ ಕುಳಿತರೆ ಆಗುವುದೇನು?

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಹುಬ್ಬಳ್ಳಿ— [illegible] ಕಾಂಗ್ರೆಸ್ ಮಹಾ ಅಧಿವೇಶನಕ್ಕೆ ಪ್ರತಿನಿಧಿಗಳ ಚುನಾವಣೆಯು ಬರುವ ಫೆಬ್ರವರಿ ತಾ. ೧೩ನೇ ದಿನ ಜರಗಲಿದ್ದು, ನಾಮಪತ್ರ ಕೊಡುವವರು ಇದೇ ತಾ. ೩೧ನೇ ಸಂಜೆ ೬ ಘಂಟೆಯೊಳಗಾಗಿ ಹುಬ್ಬಳ್ಳಿಯಲ್ಲಿರುವ ಪ್ರಾಂತೀಯ ಕಮಿಟಿ ಕಚೇರಿಗೆ ೧೨ ರೂ. ಠೇವು ಹಣದೊಂದಿಗೆ ನಿರ್ದಿಷ್ಟವಾದ ಫಾರ್ಮುಗಳನ್ನು ತುಂಬಿ ಒಂದು ಪ್ರತಿಯನ್ನು ನಮ್ಮ ಕಚೇರಿಗೂ ಇನ್ನೊಂದು ಪ್ರತಿಯನ್ನು ಆಯಾ ಜಿಲ್ಲೆಯ ರಿಟರ್ನಿಂಗ್ ಆಫೀಸರರ ಕಡೆಗೂ ಕಳಿಸಿ ಕೊಡಬೇಕು. ಈ ಸಂಬಂಧದ ನಿಯಮಗಳು ಮತದಾರ ಸಂಘಗಳು ಮತ್ತು ತುಂಬುವ ಫಾರ್ಮುಗಳು ಬೇಕಾದಲ್ಲಿ ೨ ಆಣೆ ಅಂಚೇ ಚೀಟು ಕಳಿಸಿದಲ್ಲಿ ನಾಮಪತ್ರದ [illegible] ನಿಯಮಗಳ ಯಾಗೂ ಮತದಾರ ಸಂಘಗಳ ಯಾದಿ ಇವೆಲ್ಲವುಗಳನ್ನೂ ಕಳಿಸಲಾಗುವುದು

ಒಂದು ಲಕ್ಷ ಜನಸಂಖ್ಯೆಯುಳ್ಳ ಸ್ಥಳದಲ್ಲಿ ಸಂಕ್ಷಿಪ್ತ [illegible] ಒಬ್ಬ ಪ್ರತಿನಿಧಿಯನ್ನು ಕಳಿಸಬಹುದು. [illegible] ಜನಗಣತಿಯ ಮೇರೆಗೆ ಕನ್ನಡದಲ್ಲಿ ಮತದಾರ ಸಂಘಗಳು ಈ ಕೆಳಗಿನಂತಿವೆ.

[illegible] ಸರ್ಕಲ್ ೧, [illegible] ಸರ್ಕಲ್ ೧, [illegible] ಸರ್ಕಲ್ ೧, [illegible] ಸರ್ಕಲ್ ೧, ಕಾರ್ಕಳ ಸರ್ಕಲ್ ೧, [illegible] ಸರ್ಕಲ್ ೧, ಬಂಟವಾಳ ಸರ್ಕಲ್ ೧, ಮಂಗಳೂರು ೧, ಮಂಗಳೂರ ತಾಲೂಕು ೧, ಪುತ್ತೂರು ತಾಲೂಕು ೧, [illegible] ೧, [illegible] ೧, [illegible] ತಾಲೂಕು ೧. [illegible] ತಾಲೂಕು ೧, [illegible]

ಕರ್ನಾಟಕದಲ್ಲಿ-ಧಾರವಾಡ ೧೦; ಬೆಳಗಾಂ ೧೦, ವಿಜಾಪುರ ೯; ಕಾರವಾರ ೪, ಬಳ್ಳಾರಿ ೭; ಕೊಡಗು ೨; ಸಂಸ್ಥಾನಗಳು [illegible]

ಪ್ರಕಟಣೆ

ಶ್ರೀ ನಾರಾಣ ಗುರುರಾಯರು ಮುದ್ರಿಸಿ ಪ್ರಕಟಿಸಿರುವ ವ್ಯಯ ಸಂವತ್ಸರದ ಪಂಚಾಂಗದಲ್ಲಿ ಸದರಿ ಪಂಚಾಂಗವು ನನ್ನಿಂದ ಪರಿಶೋಧಿಸಲ್ಪಟ್ಟಿದೆ ಎಂದಿದೆ. ಯಥಾರ್ಥವಾಗಿಯೂ ಅದು ನನ್ನಿಂದ ಪರಿಶೋಧಿತವಾಗಲಿಲ್ಲ. ಸದರಿ ಪಂಚಾಂಗದ ಗಣಿತಾದಿಗಳಲ್ಲಿ ನನ್ನ ಯಾವ ತರದ ಭಾಗವಾಗಲೀ ಇರಲಿಲ್ಲ. ಅದ್ದರಿಂದ ನನ್ನಿಂದ ಪರಿಶೋಧಿತವಾಗಿದೆ ಎಂಬ ಮಾಯ ಪತ್ರದಲ್ಲಿ ತೋರುವ ಮೇಲ್ಕಂಡ ಹೇಳಿಕೆಯನ್ನು ಯಾರೂ ನಂಬ ಕೂಡದಾಗಿದೆ.

K. Narasimha Upadhyaya

ಉಡುಪಿ } ಜ್ಯೋತಿಷ್ಯಾಧ್ಯಾಪಕ ಸಂಸ್ಕೃತ
23-1-46 } ಮಹಾ ಪಾಠಶಾಲಾ, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, [illegible] ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೋಲು. ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಮೊಟ್ಟ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಕ್ಷೀಣಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2	ಸಾಮುದ್ರಿಕ ಶಾಸ್ತ್ರ	0	8	0
3	ಬಾಲ ರಾಮಾಯಣ	0	5	0
4	ಸುಕನಾ ಚರಿತ್ರೆ	0	5	0
5.	ಕೊಳಲು ಕೃಷ್ಣ	0	8	0
6	ಗುರುಪೀಠಗಳ ಅವನತಿ	0	8	0
7	ದ್ವೈತಮತ ಖಂಡನೆ	0	6	0
8.	ಧರ್ಮಸಂಕಟ	0	4	0
9	ಪೂರೂರವ	0	8	0
10.	ನಿಶ್ಚಯ ಜ್ಞಾನ	0	8	0
11	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13.	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gauthama the Buddha	0	8	0
16.	ಪ್ರಾರ್ಥನೆ	0	2	0
17.	ಹಿಂದೀ ಪಹಲಿ ಪೋತಿ	0	2	0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)	0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, **ಉಡುಪಿ.**

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣ ರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮದ್‌ಮಾಳತ್ತ್ ಮದ್‌ಮಾಯೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	0	2	0
ಮಿತ್ಯ ನಾರಾಯಣ ಕತೆ	0	1	0
ಸತೀ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. **ದಪ್ಪವಾದ ಹೊದಿಕೆಯುಳ್ಳದ್ದು:**

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, **ಉಡುಪಿ.**

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ
ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೫ ವಾರ ೨೩ ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Vol. 25 No. 23
Founder SRI A. B. SHETTY.
ಉಡುಪಿ • 7—2—1946 • ಮಂಗಳೂರು.
ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

REGD.
ಅಮೃತಾಂಜನ.
ತಲೆವೇದನೆ, ಶೀತ, ಪೀನಸ, ಉಳುಕು ಸೆಳೆತ, ಧುಮ ಹಲ್ಲು ನೋವು ... ಗಾಯಗಳು ಚುಚ್ಚು ಕೊಯ್ತವು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧಿ, ಹುಳುಕಳ್ಳಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

TO THOSE WHO DEMAND SOMETHING BETTER IN LIFE.

In the competitive world of to-day financial backing provides valuable opportunities whether it be in the field of education, commerce or industry. You are certainly desirous that your children should have better opportunities in life.

Ambitious parents like you have found our Children's Endowment Policies suitable for that purpose

THE CANARA MUTUAL ASSURANCE COMPANY, LTD.,
Head Office - **UDIPI, (S. India.)**

ನಿರೀಕ್ಷಣೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು
ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು.
ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ,
ಇವರು
'ಮುಕ್ತಿ'
ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯಲ್ಲಿ
ಬೇಗನೇ ಪ್ರದರ್ಶಿಸಲಿರುವರು.
ಲೇಖಕರು: ನಿರ್ಮಾಣಕರು ಮತ್ತು ನಿರ್ದೇಶಕರು —
ಶ್ರೀ. ಯಂ. ಎಸ್. ಶೆಟ್ಟಿ.
ರಂಗಭೂಮಿಯ ಮೇಲೆ ಇದೊಂದು ನವೀನ ಪ್ರಯೋಗ ಕನ್ನಡಿಗರಿಗೆ ಇದೊಂದು ಸುಸಂಧಿ ನವೀನ ಪಾತ್ರವರ್ಗದವರು ಕರ್ನಾಟಕ ರಂಗಭೂಮಿಯ ಕಳೆಯನ್ನು ಹೆಚ್ಚಿಸಿ, ತನ್ಮೂಲಕ ಕಲಾಸೇವೆಯನ್ನು ಮಾಡಲಿರುವರು.
ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡಕೊಳ್ಳಿರಿ.

ಹೊಸ ವರ್ಷದ ಅಭಿನಂದನೆ
ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ,
• ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,
ನವ ವರ್ಷವು
ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —
ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಉಡುಪಿ, ಮದ್ರಾಸ್, ಬೆಂಗಳೂರು, ತ್ರಿವೇಂಡ್ರಂ, ಮಂಗಳೂರು,
ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA
"BHUVANENDRA" CHANDRAMAS "...sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.
'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಉಡುಪಿ ಸ್ಟಾಕಿಸ್ಟರು:—ಡಾ। ಸಾಯುಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ, ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M., ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ANNOUNCEMENT
We have pleasure to announce the opening of a branch of the Bank
at
MERCARA
ON 23-1-1946.
The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.
ತಾ. 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.
ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಕಾಂಗ್ರೆಸ್ ಸರಕಾರದಿಂದೇನು?

ಇದು ಫೆಬ್ರವರಿ ತಾನೆ? ಇನ್ನೊಂದು ಮೂರು ತಿಂಗಳಲ್ಲಿ-ಹೆಚ್ಚೆಂದರೆ ಮೇ ಬರುವದರೊಳಗೆ—ಮದ್ರಾಸ್ ಪ್ರಾಂತ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಆಡಳಿತೆ ಬರಲಿದೆ ಎಂದು ಜ್ಯೋತಿಶ್ಶಾಸ್ತ್ರದ ಕಾಟಳ್ಳಿಯರಿಯದವನೂ ಭವಿಷ್ಯ ಹೇಳಬಹುದು. ಈಗಿನ ಅಂದಾಜಿನಂತೆ ಮಾರ್ಚ್ ಅಂತ್ಯದೊಳಗೆ ಪ್ರಾಂತಿಕ ಚುನಾವಣೆಮುಗಿಯಬೇಕು; ಎಪ್ರಿಲ್ ಆದಿಯಲ್ಲೇ ಮಂತ್ರಿ ಮಂಡಲ ರಚನೆಯಾಗಬೇಕು. ಚುನಾವಣೆಯಲ್ಲಿ ಗೆದ್ದು ಬರುವ ಪಕ್ಷ ಕಾಂಗ್ರೆಸೆ! ಮದ್ರಾಸಿನ ಮಟ್ಟಿಗೂ ಈ ಕುರಿತು ಅನುಮಾನ ಪಡುವಂತಹ ಸ್ವಪ್ನ ಜೀವಿ ಯಾರೂ ಇರಲಾರರು. ಕೇಂದ್ರದಲ್ಲಿ ಹೊಣೆ ವಹಿಸುವದಕ್ಕೆ ಆಕ್ಷೇಪಗಳೋ ಆತಂಕಗಳೋ ಇರಬಹುದು; ಪ್ರಾಂತ್ಯಗಳ ಮಟ್ಟಿಗೆ ಅದೂ ಇಲ್ಲ. ಕಾಂಗ್ರೆಸ್ ಪ್ರಾಂತ್ಯಾಡಳಿತೆ ಸ್ವೀಕರಿಸಬೇಕೋ ಬೇಡವೋ ಎಂಬ ಪ್ರಶ್ನೆ ಈಗಿಲ್ಲ. ಈ ಬಾರಿ, ಈ ಮಟ್ಟಿಗೂ ಹೊಸ ಸೂಚನೆಯೇನಾದರೂ ಮುಂದೆ ಬಂದುದಿದೆಯೇ ಎಂದು ಜ್ಞಾಪಿಸಿಕೊಳ್ಳುವಾಗ ಒಂದು ಸ್ಮರಣೆ ಬರುತ್ತದೆ. ಎಲ್ಲಾ ಪ್ರಾಂತ್ಯಗಳಲ್ಲೂ ಹಿಂದು ಮುಸಲ್ಮಾನ್ ಪ್ರಾತಿನಿಧ್ಯವಿರುವ ಸಮ್ಮಿಶ್ರ ಮಂತ್ರಿ ಮಂಡಲ ರಚಿಸಬೇಕು ಎಂದೊಂದು ಸ್ವರ ಕೆಲವೆಡೆಗಳಿಂದ ಹೊರಟಿದೆ. ಹಾಗಾದಲ್ಲಿಯೂ ಮದ್ರಾಸಿನ ಮಟ್ಟಿಗೆ ಕಾಂಗ್ರೆಸ್ ಸಂಚಿಕೆಗೆ ಮುಸ್ಲಿಂ ಪುರವಣಿಯಿದ್ದಂತಾದೀತು ಹೊರತು ಸಮಬಲ ಮಂತ್ರಿ ಮಂಡಲವಾಗುವದು ಅಸಂಭವ. ಮೇಲಾಗಿ ಇಂತಹ ಸಮ್ಮಿಶ್ರ ಮಂತ್ರಿ ಮಂಡಲದ ರಚನೆಯಾಗಬೇಕಾದರೆ ಪ್ರಥಮತಃ ಈ ಪಕ್ಷಗಳೊಳಗೊಂದು ಒಪ್ಪಂದವಾಗಬೇಕು. ಅದು ಹೊರತು ಯಾವ ಪ್ರಾಂತ್ಯದ ಗವರ್ನರನಿಗೂ 'ಸಮ್ಮಿಶ್ರ ಮಂಡಲವಾಗಲಿ' ಎಂದಾಜ್ಞಾಪಿಸುವ ಅಧಿಕಾರವಿಲ್ಲ. ಯಾವ ಪಕ್ಷವು ಚುನಾವಣೆಯಲ್ಲಿ ಬಹುಮ[illegible] ಪಡೆಯುವದೋ ಅದನ್ನಾಮಂತ್ರಿಸಿ, ಅದರ ತಲೆಗೆ ಅಧಿಕಾರದ ಮಕುಟವಿಟ್ಟು ಕಳುಹಿಸುವದೊಂದೇ ಗವರ್ನರರ ಕರ್ತವ್ಯ. ಆದ್ದರಿಂದ ಇನ್ನು ಎರಡು ಮೂರು ತಿಂಗಳೊಳಗೆ ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ ಬರುವದು ಖಂಡಿತ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ?

ಒಂದು ಪ್ರಾಂತ್ಯದ ಆಡಳಿತೆಯು ಕೆಲವಂಶ ಕೇಂದ್ರ, ಇನ್ನು ಹಲವಂಶ ಪ್ರಾಂತಿಕ ಸರಕಾರಗಳ ಹಿಕೋಟೆಯಲ್ಲಿದೆ. ಎರಡು ಪಟ್ಟಿಗಳಿಗೆ ಸೇರಿದ ಆಸ್ತಿಯದು! ಬೇಜವಾಬ್ದಾರೀ ಕೇಂದ್ರವಿರುವಾಗ, ಜನ ಜವಾಬ್ದಾರಿಯ ಪ್ರಾಂತಿಕ ಸರಕಾರವು ತನ್ನ ಕೈಯೊಳಗಿನ ಖಾತೆಗಳ ಪೈಕಿ ಒಂದರಲ್ಲಿ ಸುಧಾರಣೆಮಾಡಬೇಕಾದರೆ ಇನ್ನೊಂದರಲ್ಲಿ ಕಡಿತಮಾಡಿಕೊಂಡೇ ಸಾಧ್ಯ. ಆದರಂತೆ ಪಾನ ನಿಷೇಧ ಜ್ಯಾರಿಗೆ ತಂದರೆ ಅಬ್ಕಾರಿ ಕಂದಾಯಕ್ಕೆ ಸೊನ್ನೆ ಸುತ್ತುತ್ತದೆ. ಮಾರಾಟದ ಕರಹೊರಿಸಿ, ತನ್ನ ಹುಟ್ಟುವಳಿಯ ಸಂಖ್ಯೆಯು ಬಲಗಡೆಗೆ ಆ ಸೊನ್ನೆಯನ್ನು ಸೇರಿಸಿದರೇನೇ ಪ್ರಾಂತಿಕ ಸರಕಾರದ ಬಾಳುವೆ ನಡೆದೀತು. ಕಳೆದ ಬಾರಿ ಕಾಂಗ್ರೆಸ್ ಸರಕಾರವು ಈ ಪದ್ಧತಿಯನ್ನಾರಂಭಿಸಿ ವರುಷ ತುಂಬುವದರೊಳಗೆ ರಾಜಿಕೊಡಬೇಕಾಗಿ ಬಂತು. ಆ ಮೇಲೆ ಬಂದ ಸಲಹೆಗಾರ ಸರಕಾರವು ಪಾನ ನಿಷೇಧವನ್ನು ರದ್ದುಪಡಿಸಿತು; ಆದರೆ ಆ ನಷ್ಟ ಭರ್ತಿಗಾಗಿ ತಂದಿದ್ದ ಮಾರಾಟದ ಕರವನ್ನು ಊರ್ಜಿತದಲ್ಲಿಟ್ಟಿತು. ತತ್ಪರಿಣಾಮವಾಗಿ 'ಇಷ್ಟನ್ನು ಮಾಡಿಟ್ಟು ಹೋದರಲ್ಲಾ' ಎಂಬ ಅಪವಾದ ಕಾಂಗ್ರೆಸಿಗರಿಗೆ ಬಂತು.

ಕಾಂಗ್ರೆಸ್ ಮಂಡಲ ಮಾಡಿದ್ದೆಷ್ಟು?

1 **ಆಸ್ತಿ ಸಂಬಂಧದ ಸುಧಾರಣೆ:-** 1908ರಲ್ಲಿ ಜ್ಯಾರಿಗೆ ಬಂದು 1936ರಲ್ಲಿ ತಿದ್ದುಪಡಿಗೊಂಡಿದ್ದ 'ಮದ್ರಾಸ್ ಆಸ್ತಿ ಭೂಮಿ ಕಾನೂನು' (Madras Estates and Land Act) ಪುನರ್ವಿಮರ್ಶೆ ನಡಿಸಲು ಕಾಂಗ್ರೆಸ್ ರೆವಿನ್ಯೂ ಮಂತ್ರಿಯ ಸೂಚನೆಯಂತೆ ಎಸೆಂಬ್ಲಿ ಮತ್ತು ಕೌನ್ಸಿಲಿನ ಒಂಭತ್ತು ಮಂದಿ ಸದಸ್ಯರಿದ್ದ ಒಂದು ಕಮಿಟಿ ನೇಮಕವಾಯಿತು. ಧನಿ-ಒಕ್ಕಲುಗಳ ಸಂಬಂಧ ಶರ್ತಗಳೂ ಈ ಕಮಿಟಿಯ ಪರ್ಯಾಲೋಚನೆಗೊಪ್ಪಿಸಲ್ಪಟ್ಟಿದ್ದುವು. ಸಮಿತಿಯು ಕನ್ನೊಂದು ವರದಿ ತಯಾರಿಸಿತು; ಅದನ್ನಾಧರಿಸಿ ಮೂಲ ಕಾನೂನಿಗೊಂದು ತಿದ್ದುಪಡಿ ಮಸೂದೆ ತಯಾರಾಗಿ ಅದು ಎಸೆಂಬ್ಲಿಯ ಮುಂದೆ ಬಂತು. ಆದರೆ ಎಣ್ಣೆ ಬರುವಾಗ ಗಾಣ ಮುರಿಯಿತು. ಅಷ್ಟರಲ್ಲೇ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಡಬೇಕಾಗಿ ಬಂದುದರಿಂದ ರೈತರ ರಕ್ಷಣೆ ಹಿಂದೆಬಿತ್ತು. ಕಾಂಗ್ರೆಸ್ ಮಂತ್ರಿಗಳು ಹೊರಡುವ ಮೊದಲೇ ಈ ತಿದ್ದುಪಡಿ ಸೂಚನೆಗಳ ಪುನರ್ತನಿಖಿ ನಡಿಸಿ, ಒಂದು ಮಸೂದೆಯ ಆಕಾರ ಕೊಡುವಂತೆ ಒಬ್ಬ ಸ್ಪೆಶ್ಯಲ್ ಅಧಿಕಾರಿಯನ್ನು ನೇಮಕ ಮಾಡಿದ್ದರು. ಆ ಪುಣ್ಯಾತ್ಮ [illegible] ಸಮಿತಿಯ ಶಿಫಾರಸುಗಳಿಗೆ ವಿರುದ್ಧಾಭಿಪ್ರಾಯಗಳನ್ನೇ ಬರೆದಿಟ್ಟನಂತೆ. ಸಾರಾಂಶವಿಷ್ಟೆ: ಕಾಂಗ್ರೆಸ್ ಮಂತ್ರಿಗಳಿಗೆ ರೈತರ ಸುಧಾರಣೇಚ್ಛೆಯಿದ್ದರೂ ಖಾಯಂ ಅಧಿಕಾರಿಗಳು ಅಂತಹ ಪ್ರಗತಿಶೀಲತೆಗೆ ವಿರೋಧವಿದ್ದರು. ಅಷ್ಟೇ ಏಕೆ? ಜಮೀನ್ದಾರರಾದ ಓರ್ವ ಮಂತ್ರಿಯೇ ಮುಖ್ಯ ಸೂಚನೆಗಳಿಗೆ ವಿರೋಧ ಟಿಪ್ಪಣಿ ಬರೆದಿದ್ದರು. ಶೀರ್ವೆಯ ಪದ್ಧತಿಯನ್ನು ಸುಧಾರಿಸಬೇಕೆನ್ನುವ ಸಂಕಲ್ಪವೂ ಚಿರಂಜೀವಿಯಾಗಿಯೇ ಉಳಿಯಿತು. ಮಾಡಲು ಸಾಧ್ಯವಾದುದೆಂದರೆ ಇಡೀ ಪ್ರಾಂತ್ಯದಲ್ಲಿ ಒಟ್ಟಿಗೆ 75 ಲಕ್ಷ ರೂಪಾಯಿ ಶೀರ್ವೆ ತಗ್ಗಿಸಿದುದೊಂದೆ. ಅದೂ ಆ ಮೇಲೆ ಉಳಿಯಲಿಲ್ಲ.

2 **ಪಾನ ನಿಷೇಧ**—ಅಬ್ಕಾರಿ ಕಾನೂನಿನಲ್ಲಿ ತಿದ್ದುಪಡಿ ಮಾಡಿಸಿಕೊಂಡು ರಾಜಾಜಿ ಮಂತ್ರಿಮಂಡಲ ಸೇಲಮಿನಲ್ಲಿ ಪಾನ ನಿಷೇಧವನ್ನು ಜ್ಯಾರಿಗೆ ತಂದಿತು. ಕೊನೆಗೆ ಉತ್ತರ ಆರ್ಕೋಟ್, ಚಿತ್ತೂರು ಮತ್ತು ಕಡಪಾ ಜಿಲ್ಲೆಗಳಿಗೂ ಅದನ್ನು ವಿಸ್ತರಿಸಿತು. ಇದರಿಂದಾಗಿ ಸರಕಾರಕ್ಕೆ ಒಂದು ಕೋಟಿ ರೂಪಾಯಿ ನಷ್ಟವೊದಗಿತು. ಈ ನಷ್ಟ ಭರ್ತಿಗಾಗಿ ಜನರಲ್ ಸೇಲ್ಸ್ ಟೇಕ್ಸನ್ನು ತರಲಾಯಿತು. ಇದರಿಂದ ಒಂದು ಕೋಟಿಗೂ ಮಿಕ್ಕಿದ ಮುನಾಫೆ ಆ ವರುಷವೇ. ಮುಂದಿನ ವರುಷಗಳಲ್ಲಿ ಮಿಕ್ಕ ಜಿಲ್ಲೆಗಳಿಗೂ ಪಾನ ನಿಷೇಧ ಹರಡಿದಂತೆ, ಈ ಮಾರಾಟ ತೆರಿಗೆಯ ಉತ್ಪತ್ತಿಯೂ ಹೆಚ್ಚುತ್ತಾ ಹೋಗಿ 1945ಕ್ಕೆ ಅದು ಸುಮಾರು 3 ಕೋಟಿಯಾಗಿದ್ದಿತು. ಆದರೆ ಆ ಮೇಲಿನ ಗವರ್ನರ್ ಸರಕಾರವು ಪಾನ ನಿಷೇಧವನ್ನು ತೆಗೆದುಹಾಕಿ ಈ ತೆರಿಗೆಯನ್ನು ಮಾತ್ರ ಖಾಯಂಪಡಿಸಿಕೊಂಡಿತು!

3 **ಸಾಲ ರಿಯಾಯತಿ ಕಾನೂನು-** ಇದ ಸಾಲಗಾರ ರೈತರ ರಕ್ಷಣೆಗಾಗಿ ಬಂದಿದ್ದ ಶಾಸನ. ಈ ಶಾಸನ ಜ್ಯಾರಿಗೆ ಬಂದಂದಿನಿಂದ 1944ನೇ ದಶಂಬರ ವರೆಗಿನ 82ತಿಂಗಳ ಅವಧಿಯಲ್ಲಿ ರಿಯಾಯತಿಗಾಗಿ 938·8ಲಕ್ಷ ರೂಪಾಯಿಯ ಸಾಲಗಳ ಕುರಿತು ಅರ್ಜಿಗಳು ಬಂದಿದ್ದುವು. ಇದು ಈ ಹೊಸ ಕಾಯಿದೆಯನ್ವಯ 448.06 ಕ್ಕೆ ಇಳಿಸಲ್ಪಟ್ಟಿತು.

4. **ಶಿಕ್ಷಣ**—ಮದ್ರಾಸ್ ಪ್ರಾಂತ್ಯದ ಶಿಕ್ಷಣ ವೆಚ್ಚವು ಭಾರತದ ಮಿಕ್ಕೆಲ್ಲಾ ಪ್ರಾಂತ್ಯಗಳಿಗಿಂತ ದೊಡ್ಡದು. ಕಾಂಗ್ರೆಸ್ ಸರಕಾರವು, ಮಹಿಳೆಯರ ಮತ್ತು ದಳಿತ ವರ್ಗದವರ ಶಿಕ್ಷಣದ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟು ಅದರ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಿದ್ದಿತು.

5. **ಗ್ರಾಮೋದ್ಯೋಗಕ್ಕೆ ಪ್ರೋತ್ಸಾಹ**—ಮನೆ ಕೈಗಾರಿಕೆ, ಗ್ರಾಮ ವೃತ್ತಿಗಳಿಗೆ,ಮುಖ್ಯವಾಗಿ ಮಗ್ಗ ಕೈಗಾರಿಕೆಗೆ ಕಾಂಗ್ರೆಸ್ ಸರಕಾರವು ವಿಶೇಷ ಪ್ರೋತ್ಸಾಹ ಕೊಟ್ಟಿತು. ಆ ಪೈಕಿ ಅಖಿಲ ಭಾರತ ಚರಕಾಸಂಘಕ್ಕೆ ರೂ. 2ಲಕ್ಷವನ್ನು ವಾರ್ಷಿಕ ಗ್ರಾಂಟಾಗಿ ಮಂಜೂರು ಮಾಡಿದ್ದಿತು.

6. **ಹರಿಜನೋದ್ಧಾರ**— ಹರಿಜನ ಹೊಸ್ಟೆಲುಗಳಿಗೆ ವಿಶೇಷ ಗ್ರೇಂಟುಗಳನ್ನು ಕೊಟ್ಟುದಲ್ಲದೆ 'ಮಲಬಾರ್ ದೇವಾಲಯ ಪ್ರವೇಶ ಮಸೂದೆ'ಯೊಂದನ್ನು ರಾಜಾಜೀ ಸರಕಾರ ಮಂಜೂರು ಮಾಡಿಕೊಂಡಿತು. ಅಂತೆಯೇ ಇಡೀ ಮದ್ರಾಸಿನಲ್ಲಿ ದೇವಾಲಯ ಪ್ರವೇಶಕ್ಕಿದ್ದ ಕಾನೂನು ಪ್ರತಿಬಂಧವನ್ನು ರದ್ದುಪಡಿಸಿ, ಸಾರ್ವಜನಿಕ ಸ್ಥಳ, ಆಫೀಸುಗಳಲ್ಲಿ ಹರಿಜನ ಪ್ರವೇಶದ ಪ್ರತಿಬಂಧಕ್ಕಿದ್ದ ಕಾನೂನು ಸೌಕರ್ಯವನ್ನು ವಜಾಪಡಿಸಿತು. ಮಧುರೆಯ ಮೀನಾಕ್ಷಿ ದೇವಾಲಯವು ಹರಿಜನರಿಗೂ ತೆರೆಯಲ್ಪಟ್ಟುದು ಇದರಿಂದಾಗಿಯೇ.

7 **ಇತರ ಕಾರ್ಯಗಳು**—ಗ್ರಾಮಗಳಲ್ಲಿ ನೀರು ಸರಬರಾಯಿ ಯೋಜನೆ;ಮದರ್ಕಾಗಿ ಕ್ರಮಶಃ 25 ಲಕ್ಷ ಮತ್ತು ವರುಷಂಪ್ರತಿ 10 ಲಕ್ಷ ರೂ.ಗಳ ಸಹಾಯಧನದ ಮಂಜೂರಾತಿ— ಧರ್ಮಾರ್ಥ ವೈದ್ಯಕೀ ಸಹಾಯದ ಸಂಘಟನೆ-- ಉದ್ಯೋಗಿಗಳ ಮೇಲೆ ಕರ ಹೇರುವ ಉದ್ದೇಶದಿಂದ ನಿರುದ್ಯೋಗಿಗಳ ಗಣನೆ ನಡಿಸಿದುದು-ಸಹಕಾರೀ ಸಂಬಂಧದ ವಿಚಾರಣಾ ಸಮಿತಿಯ ರಚನೆ---ಸಾರ್ವಜನಿಕೋಪಯುಕ್ತ ಸಂಸ್ಥೆಗಳನ್ನು ಸರಕಾರವೇ ನಡಿಸಬೇಕೆಂಬ ತೀರ್ಮಾನ, ಇತ್ಯಾದಿ ಹಲವು ಕಾರ್ಯ ವಿಧಾನಗಳನ್ನು ಮದ್ರಾಸಿನ ಕಾಂಗ್ರೆಸ್ ಸರಕಾರ ವಹಿಸಿದ್ದಿತು.

ಈ ಬಾರಿ ಹೇಗೆ?—

ಎಂದು ನೋಡುವ ಮೊದಲು 'ಈ ಬಾರಿ ಯಾರು?' ಎಂಬುದನ್ನು ನೋಡಲಿಕ್ಕಿದೆ. ಕಳೆದ ಬಾರಿ ರಾಜಾಜಿಯಿದ್ದರು. ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ ಮಾಡಿದ್ದೆಲ್ಲಾ ರಾಜಾಜಿಯ ಮೆದುಳಲ್ಲೇ ಮೂಡಿದ್ದು. ಇನ್ನೊಮ್ಮೆ ಅವರಿಗೆ ಪ್ರಧಾನಿ ಪಟ್ಟ ಕೊಡಬಾರದೆನ್ನುವವರು ಬಹಳ ಮಂದಿಯಿದ್ದಾರೆ. ರಾಜಾಜಿಯೇ ಮುಖ್ಯಮಂತ್ರಿಯಾದರೆ ಮದ್ರಾಸ್ ಪ್ರಾಂತ್ಯದ ಕಳ್ಳ ಸಾರಾಯಿ ಅಂಗಡಿಗಳು ಮುಚ್ಚಲ್ಪಡುವವು; ದೇವಾಲಯಗಳೊಳಗೆ ಕಪ್ಪು ಕಾಲುಗಳು ಕಾಣಬರುವವು; ಇನ್ನು ಸುಭಾಸ್ ಸ್ಫೂರ್ತಿಯ ಪರಿಣಾಮವಾಗಿ, ಜನತೆಯಲ್ಲಿ ಹೊಸ ಭಾವ ಮೂಡಿತೆಂದು ಗಾಂಧಿಜೀಯ ಸಂತಾಪ ಹೆಚ್ಚಿದರೆ ಸೈನಿಕ ಸಲಾಂ, ಸಮ ವಸ್ತ್ರಗಳಿಗೆ ಬಹಿಷ್ಕಾರ ಬೀಳಲೂ ಬಹುದು-ಶಾಲೆಗಳಲ್ಲಿ ಅಹಿಂಸಾ ತರಗತಿಗಾಗಿ ವಿಶೇಷ ಗ್ರಾಂಟಿನ ಏರ್ಪಾಡಾಗಲೂ ಬಹುದು! ಕಾಂಗ್ರೆಸಿನಚುನಾವಣಾ ತತ್ವಗಳು ಅತಿ ವಿಸ್ತಾರವಿವೆ. ಲೋಕದ ಎಲ್ಲಾ ಸತ್ಕಾರ್ಯಗಳೂ ಅದರಲ್ಲಿ ನಮೂದಿಸಲ್ಪಟ್ಟಿವೆ. ಆ ಪೈಕಿ ಅಧಿಕಾರಕ್ಕೆ ಬರುವವರ ಅಭಿರುಚಿ ಮತ್ತು ಸಾಧ್ಯಾಸಾಧ್ಯತೆಗಳನ್ನು ಆಧರಿಸಿ ಎಷ್ಟು ಸಾಧ್ಯವೋ ಅಷ್ಟು ಮಾತ್ರ ಕಾರ್ಯ ರೂಪದಲ್ಲಿ ಕಂಡುಬರಬೇಕು. ರಾಜಾಜೀ ಮಂತ್ರಿಯಾದರೆ ಮೇಲ್ಗಡೆ ನಮೂದಿಸದಷ್ಟೆ! ಬದಲಿಗೆ ಬಡ ಜನರ ಅಥವಾ ರೈತ ಪಕ್ಷಪಾತಿಯೊಬ್ಬ ಅಧಿಕಾರಕ್ಕೆ ಬಂದರೆ ಆಸ್ತಿ, ಬೇಂಕು, ಕಾರ್ಖಾನೆ ಮತ್ತಿತರ ಎಲ್ಲಾ ವಿಭಾಗಗಳ ರಾಷ್ಟ್ರೀಕರಣದ ಪ್ರಯತ್ನ ನಡೆಯಬಹುದು. ಈ ಪೈಕಿ ಯಾರೋ, ಯಾವುದೋ!

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಸುದ್ದಿ ಮತ್ತು ಸೂಚನೆ

ಮಹಾತ್ಮರು ಮತ್ತು ದಕ್ಷಿಣ ಭಾರತ

"ನಾನು ದಕ್ಷಿಣಕ್ಕೆ ಬಂದಷ್ಟು ಸಲವೂ ನಿಮ್ಮ ಪ್ರೀತಿ ಗೌರವ ಸಂಪಾದಿಸಿದ್ದೇನೆ. ನಾನೀಗ ಮುದುಕನಾಗುತ್ತಾ ಬಂದಿದ್ದೇನೆ; ನನ್ನ ಬುದ್ಧಿಬಲ ಕುಂದಿದೆ. ಮತ್ತು ಮೆದುಳಿಗೆ ವಿಶೇಷ ಕೆಲಸ ದೊರೆತು ಅದು ಒಣಗುತ್ತಾ ಬರುತ್ತಿದೆ. ಆದರೆ ಈಶ್ವರ ಕೃಪೆಯಿಂದ ಕರ್ತವ್ಯಪಾಲನಾ ಶಕ್ತಿ ನನ್ನಲ್ಲಿದೆ. ನನ್ನ ಕರ್ತವ್ಯವಾದರೂ ಏನು? ನನ್ನಲ್ಲಿ ಹಣವೆಂಬುದಿಲ್ಲ. ನನ್ನ ಸೇವೆಯೊಂದರ ಹೊರತು ಬೇರಾವುದೂ ನನ್ನಲ್ಲಿಲ್ಲ ಹೀಗಿದ್ದರೂ ನಿಮಗೆ ನನ್ನ ಮೇಲಿಂತಹ ಪ್ರೀತಿಯಿರುವಾಗ ಭವಿಷತ್ಕಾಲದಲ್ಲಿ ಇನ್ನೂ ಹೆಚ್ಚಾಗಿ ನಿಮ್ಮ ಸೇವೆ ಮಾಡುವ ಶಕ್ತಿಯು ದೇವರಿಂದ ನನಗೆ ದೊರೆಯಲಿ ಗೆ"—ಮದ್ರಾಸಿನ ಪ್ರಾರ್ಥನಾ ಸಭೆಗಳ ಸೈಕಿ ಕೊನೆಯದಾಗಿ ತಾ. 1ರಲ್ಲಿ ನೆರೆದ ಜನ ತಂಡಕ್ಕೆ ಗಾಂಧಿಜೀಯ ಕೃತಜ್ಞತಾ ರ್ಪಣೆ.

ಆದರೆ ಬುದ್ಧಿವಂತರ ಪ್ರಾಂತ್ಯವಾದ ಮದ್ರಾಸಿನ ದೇವರುಗಳಿಗೂ ಬುದ್ಧಿಯಿದೆ. ಗಾಂಧಿಜೀಗೆ ಇನ್ನೂ ಶಕ್ತಿ ಕೊಟ್ಟರೆ ಅದು ಹರಿಜನರ ದೇವಾಲಯ ಪ್ರವೇಶದಂತಹ ಕಾರ್ಯದಲ್ಲಿ ವಿನಿಯೋಗಿಸಲ್ಪಟ್ಟು ತಿನ್ನಲು ಕೊಟ್ಟ ರೊಟ್ಟಿ ಕೆನ್ನೆಗೆ ಬಡೆದಂತಾಗುವದೆಂದು ದೇವರುಗಳಿಗೆ ಗೊತ್ತಿದೆ!

ಗಾಂಧಿಜಿಗೆ 2 ಲಕ್ಷದ ಗುಪ್ತದಾನ

ಮಹಾತ್ಮಾ ಗಾಂಧಿಯವರು ಬಂಗಾಳಾ ಪ್ರವಾಸ ಮುಗಿಸಿ ಹೊರಟೊಡನೆ ಕಲ್ಕತ್ತದ ಒಂದು ಬೇಂಕಿನಲ್ಲಿ, ವಿಧಾಯಕ ಕಾರ್ಯಕ್ರಮಗಳ ಖರ್ಚಿಗಾಗಿ ಗಾಂಧಿಯವರ ಹೆಸರಿಗೆ ಅನಾಮಧೇಯರೊಬ್ಬರಿಂದ ರೂ. 2,07,000 ಡಿಪೋಸಿಟ್ ಕಟ್ಟಲ್ಪಟ್ಟಿತೆಂದು 'ಸ್ಟೇಟ್ಸ್‌ಮೇನ್' ಪತ್ರಿಕೆ ಪ್ರಕಟಿಸಿದೆ.

ಐನೂರು, ಸಾವಿರಗಳ ನೋಟುಗಳಲ್ಲವಷ್ಟೆ?

ಮಿ. ಹಕ್ಕರ ವಿಮರ್ಶೆ.

"ಆಸ್ಸಾಮ್ ಮತ್ತು ಸಿಂಧ್ ಪ್ರಾಂತಿಕ ಚುನಾವಣೆಗಳ ಪರಿಣಾಮದಿಂದಾಗಿ, ಸದ್ಯದಲ್ಲೇ ಪಾಕಿಸ್ತಾನವಾಗುವ ಸಂದರ್ಭವು ತಪ್ಪಿ ಹೋಗಿದೆ. ಅದ್ದರಿಂದ ಪಾಕಿಸ್ತಾನ್ ಪ್ರಶ್ನೆಯು ಮತಗಣನೆಯ ಮೂಲಕ ನಿರ್ಣಯಿಸಲ್ಪಡುವದೆಂದು ನಾನು ನಂಬಲಾರೆ. ವೋಟಿನ ಆ ಸಂದರ್ಭ ಬರುತ್ತದಾದರೆ ನಾವು ಮುಸ್ಲಿಂ ಲೀಗಿಗೆ ಮತಕೊಡಲು ತಯಾರಿದ್ದೇನೆ. ಆದರೆ ಹೀಗಾಗುವದು ಅಸಂಭವವೆಂದು ನನಗೆ ಖಚಿತವಿದೆ"—ಬಂಗಾಳದ ಮಾಜೀ ಪ್ರಧಾನ ಮಂತ್ರಿ ಮಿ. ಫಜಲುಲ್ ಹಕ್ಕರ ಅಂಬೋಣ.

ಇದು ಮುಸ್ಲಿಂ ಲೀಗಿನವರಿಗೆ ಮೊದಲೇ ಗೊತ್ತು! ಅದ್ದರಿಂದಲೇ ಅವರು ವೋಟಿನ ಮೂಲಕ ಪಾಕಿಸ್ತಾನ ಕೇಳದೆ ಅಲ್ಲಲ್ಲಿ ಲೀಗೇತರರ ಸಭೆಗಳಲ್ಲಿ ಏಟಿನ ಮೂಲಕವೇ ಪಾಕಿಸ್ತಾನ್ ಪ್ರಯತ್ನ ನಡಿಸಿರುವ ಖಾಸಗೀ ಅನುಭವ ಮಿ. ಹಕ್ಕರಿಗೂ ಈ ಬಾರಿಯ ಚುನಾವಣೆಯಲ್ಲಾಗಿದೆ ತಾನೆ?

ಹಳ್ಳಿಗರ ಐಕ್ಯಭಾವ

"ಹಿಂದುಸ್ಥಾನದ ವಿವಿಧ ರಾಜಕೀಯ ಪಕ್ಷ ಸಂಗಡಗಳು ಮತ್ತು ಸಂಸ್ಥೆಗಳು ಬೇಡುವದು ಮತ್ತು ಹೇಳುವದು ಏನೇ ಇರಲಿ-ಅಲ್ಲಿಯ ನಿಜವಾದ ಜನಸಾಮಾನ್ಯರಿಗೆ ಜಾತಿಭೇದ ಅಥವಾ ಜಾತಿ ದ್ವೇಷವೆಂಬುದು ಗೊತ್ತೇ ಇಲ್ಲ. ಭಾರತದ ಜನತೆಯಿರುವದು ಹಳ್ಳಿಗಳಲ್ಲಿ ಮತ್ತು ಸಣ್ಣ ನಗರಗಳಲ್ಲೇ. ಅವರಿಗೂ ಜಾತಿವಿಕಾರಗಳಿಗೂ ಏನೇನೂ ಸಂಬಂಧವಿಲ್ಲ. ಅವರಲ್ಲಿ ಎಷ್ಟೋ ಭಿನ್ನ ಹಾದಿಗಳು ಮತ್ತು ಕೃತಕ ಭಾವನೆಗಳಿರಬಹುದು; ಆದರೆ ಎಲ್ಲೆಲ್ಲಿಯೂ ಒಳಗಿಂದೊಳಗೆ ಐಕ್ಯತೆಯ ಒಂದು ವಿದ್ಯುತ್ಪ್ರವಾಹ ಹರಿದೇ ಇದೆ"-ಹಲವು ಹಳ್ಳಿಗರನ್ನು ಸಂದರ್ಶಿಸಿ ಪರೀಕ್ಷಿಸಿದ್ದ ಪಾರ್ಲಿಮೆಂಟರಿ ಶಿಷ್ಟ ಮಂಡಲದ ಜನಪ್ರೀತ ಸದಸ್ಯ ಮಿ. ಸೋರೆನ್ಸನರ ಮಾತು.

ಹಳ್ಳಿಗರಲ್ಲಿ ತೀರಾ ಅಜ್ಞಾನವಿದೆ ಎಂಬುದನ್ನು ಮಿ ಜಿನ್ನರೂ ಒಪ್ಪುತ್ತಾರೆ!

ಬರ್ಮಾ ಸರಕಾರದ ಭಯ

ಪಂಡಿತ ನೆಹರುಗಳು ಬರ್ಮ ಮತ್ತು ಮಲಯಕ್ಕೆ ಹೋಗಲು ಪಾಸ್‌ಪೋರ್ಟಿಗಾಗಿ ಭಾರತ ಸರಕಾರಕ್ಕೆ ಬರೆಕೊಂಡಿದ್ದರು. ಆ ಕುರಿತು ಸರಕಾರವು ಮೌನವಾಗಿದ್ದುದರಿಂದ ಈ ಬಾರಿಯ ಕೇಂದ್ರ ಎಸೆಂಬ್ಲಿಯ ಮುಂದೆ ದಿವಾನ್ ಚಮನ ಲಾಲರು ತಂದ ನಿಲುವಳಿ ಸೂಚನೆಯು ನಿಯಮ ಬಾಹಿರವೆಂದು ತೆಗೆದು ಹಾಕಲ್ಪಟ್ಟಿತು. ಮಲಯದ ಮಿಲಿಟರಿ ಸರಕಾರವು ನೆಹರು ಆಗಮನಕ್ಕೆ ಆಕ್ಷೇಪ ಸೂಚಿಸಲಿಲ್ಲವಾದರೂ ಬರ್ಮಾ ಸರಕಾರ ಮಾತ್ರ ವಿರೋಧವಿದ್ದಿತೆಂದು ಈ ಸಂದರ್ಭದಲ್ಲಿ ಸರಕಾರೀ ಸದಸ್ಯರು ವಿವರಿಸಿದರು

ನೆಹರುಗಳು ಸುಭಾಸರ ಉತ್ತರಾಧಿಯಾಗಿ ಬರುತಿದ್ದಾರೇನೋ ಎಂಬ ಸಂದೇಹ ಬರ್ಮಾ ಸರಕಾರಕ್ಕೆ ಬಂದಿರಬೇಕು.

ರೇವಾ ಮಹಾ ರಾಜರ ಮಕುಟ ಭಂಗ

ರೇವಾ ಸಂಸ್ಥಾನದ ಮಹಾ ರಾಜರನ್ನು ಸಿಂಹಾಸನದಿಂದ ತಳ್ಳಿ ಅವರ ಪುತ್ರನನ್ನು ವೈಸರಾಯರು ಗಾದಿಗೇರಿಸಿದ್ದಾರೆ. ಮಹಾರಾಜರ ಮೇಲೆ 1942ರಲ್ಲೇ ಪ್ರಬಲಾರೋಪಗಳು ಬಂದಿದ್ದುವು. ಅವುಗಳ ವಿಚಾರಣೆಗಾಗಿ ಆಗಿನ ಗವರ್ನರ್ ಜನರಲರು ನೇಮಿಸಿದ್ದ ಸಮಿತಿಯು ಕೆಲವು ಶರ್ತಗಳ ಅನ್ವಯ ಇರುವದಾದರೆ ಮಹಾ ರಾಜರು ರಾಜ್ಯ ಪ್ರವೇಶಿಸಬಹುದೆಂದು ವರದಿ ಮಾಡಿದ್ದನ್ನು ಮಹಾರಾಜರೊಪ್ಪಿದ್ದರು. ಈ ಶರ್ತಗಳಂತೆ ಎಲ್ಲಾ ರಾಜ್ಯಭಾರವೂ ಅಲ್ಲಿಯ ಕೌನ್ಸಿಲಿನ ನಿರ್ಧಾರಕ್ಕೊಳಪಟ್ಟು ನಡೆಯಬೇಕಿತ್ತು. ಆದರೆ ಮಹಾರಾಜರು ಈ ಬಾರಿಯ ದಸರಾ ಸಂದರ್ಭದಲ್ಲಿ ಕೌನ್ಸಿಲಿಗೆ ತಿಳಿಸದೇನೇ ತನ್ನ ಪ್ರಜೆಗಳಿಗೆ ಜವಾಬ್ದಾರೀ ರಾಜ್ಯಭಾರವೀಯುವ ಘೋಷಣೆ ಮಾಡಿದ್ದಲ್ಲದೆ ಇತರ ವಿಧದಿಂದಲೂ ಕೌನ್ಸಿಲನ್ನು ಕಡೆಗಣಿಸಿ ಸ್ವಾಧಿಕಾರ ಚಾಲುವಮಾಡಿದ್ದರಿಂದ ಅವರನ್ನೀಗ ತಳ್ಳಿ ಹಾಕಲಾಗಿದೆ "ಪ್ರಜಾಹಿತವನ್ನು ಕಡೆಗಣಿಸುವ ಆಶ್ರಿತ ರಾಜರಿಗೆ ಹಿಂದೀ ಸರಕಾರದ ರಾಜಕೀಯ ಖಾತೆಯು ಪ್ರೋತ್ಸಾಹವಿತ್ತ ನಿದರ್ಶನಗಳಿವೆ. ಆದರೆ ಯಾವನಾದರೊಬ್ಬ ಆಶ್ರಿತನು ... ಪ್ರಗತಿಶೀಲ ಮನೋವೃತ್ತಿ ಪ್ರದರ್ಶಿಸಿದೊಡನೆ ಸರಕಾರದ ಅಂಕುಶ ತಯಾರಿರುವದು ಶೋಚನೀಯ" ಎಂದು ನೆಹರುಗಳಂದಿದ್ದಾರೆ.

ಪೂಜಾರಿ ಕೊಟ್ಟರೂ ದೇವರು ಬಿಡ!

ಬೊಂಬಾಯಿ ಪ್ರಾಂತ್ಯದ ಆಹಾರ

"ಬೊಂಬಾಯಿ ಪ್ರಾಂತ್ಯಕ್ಕೆ ವರುಷಕ್ಕೆ 15½ ಲಕ್ಷ ಟನ್ ಆಹಾರಧಾನ್ಯಗಳು ಬೇಕು. ಆ ಪೈಕಿ 6½ ಲಕ್ಷ ಟನ್ ಧಾನ್ಯ ಬೊಂಬಾಯಿಯಲ್ಲಿ ಉತ್ಪನ್ನವಾಗುತ್ತದೆ. 6ಲಕ್ಷ ಟನ್ನನ್ನು ತಾನು ರವಾನಿಸುವೆನೆಂದು ಕೇಂದ್ರ ಸರ... ಕೊಂಡಿದೆ ಮತ್ತೂ ಕಡಿಮೆ ಬೀಳುವ 2½ ಲಕ್ಷ ಟನ್ ಧಾನ್ಯಕ್ಕೇನು ಗತಿಯೆಂಬುವೇ ತೋರುವದಿಲ್ಲ. ಜಾಗ್ರತೆ-ಈಗಲೇ ಸಾಕಷ್ಟು ಆಹಾರ ಪರಿಮಾಣ ದೊರೆಯದಿರುವಾಗ ಇನ್ನೂ ರೇಶನ್ ಪರಿಮಾಣವನ್ನು ತಗ್ಗಿಸುವ ಆಲೋಚನೆಯೇನಾದರೂ ಸರಕಾರಕ್ಕಿದ್ದರೆ ಅನರ್ಥಗಳಾಗಬಹುದು"-ಕೇಂದ್ರ ಎಸೆಂಬ್ಲಿಯ ಆಹಾರ ಸಂಬಂಧ ಚರ್ಚೆಯ ವೇಳೆ ಶ್ರೀ. ಎಮ್. ಆರ್. ಮಸಾನಿಯವರ ಮಾತು.

ಆದರೆ ಸರಕಾರದ ಅಭಿಪ್ರಾಯವು ತದ್ವಿರುದ್ಧವಿರಬೇಕು; ಬೊಂಬಾಯಿಯಲ್ಲಿ ಆಗಾಗ ಏಳುತ್ತಿರುವ ಜಾತೀಯ ಗಲಭೆ, ಸುಭಾಸ್ ಜನ್ಮೋತ್ಸವ ದೊಂಬಿ, ಇತ್ಯಾದಿ ಅನರ್ಥಗಳಿಗೆ, ಸದ್ಯದ ರೇಶನ್ ಪರಿಮಾಣಾನುಸಾರವಾಗಿ ತಿಂದದ್ದು ಹೆಚ್ಚಾದುದೇ ಕಾರಣವೆಂದು ಸರಕಾರ ಶೋಧಿಸಿರಬೇಕು!

ದಕ್ಷಿಣ ಭಾರತದ ಆಹಾರ ಸ್ಥಿತಿ

ಮದ್ರಾಸ್, ಮೈಸೂರು ಮೊದಲಾದ ದಕ್ಷಿಣ ಭಾರತದ ಆಹಾರ ಪರಿಸ್ಥಿತಿಯ ಪ್ರತ್ಯಕ್ಷ ಪರಾಮರ್ಶೆ ನಡಿಸುವದಕ್ಕಾಗಿ ವೈಸರಾಯಿ ಲೋರ್ಡ್ ವೇವೆಲರು ಇದೇ ತಾ. 6ರಲ್ಲಿ ವಿಮಾನ ಹತ್ತಿ ಬೆಂಗಳೂರಿಗೆ ಬಂದು ಅಲ್ಲಿಯ ಅರಮನೆಯಲ್ಲಿ ಮದ್ರಾಸ್ ಗವರ್ನರ್, ಮೈಸೂರು ದಿವಾನ್ ಮತ್ತಿತರ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ನಡಿಸಲಿರುವರು. ಕೆಲವು ಸ್ಥಳಗಳನ್ನು ಸ್ವತಃ ಸಂದರ್ಶಿಸಲಿರುವರು. ವೈಸರಾಯರೊಂದಿಗೆ ಆಹಾರ ಸದಸ್ಯರಾದ ಸರ್. ಜೆ. ಪಿ. ಶ್ರೀವಸ್ತವರೂ ಬರಲಿದ್ದಾರೆ.

ಮೊನ್ನೆ ಆಸಫ್ ಅಲಿ, ನಿನ್ನೆ ಮಹಾತ್ಮಾ ಗಾಂಧಿ, ಇಂದು ವೈಸರಾಯಿ-ಹೀಗೆ ದಿನಕ್ಕೊಬ್ಬ ಅತಿಥಿ ಪರಿವಾರ ಸಮೇತ ಬಂದು ತಿಂದುಂಡು ಹೋದರೆ ಮತ್ತೆ ದಕ್ಷಿಣ ಭಾರತದ ಆಹಾರಸ್ಥಿತಿಯನ್ನು ನೋಡುವದೇ ಬೇಡ!

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧ್ವೀಕೃತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.

ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,

ಮಾತುಂಗಾ, ಬೊಂಬಾಯಿ.

ಇಲ್ಲಿಯೂ ಸಿಗುವದು.

UNITED

WE

Offer free SERVICE IN INSURANCE.

Give full SECURITY FOR YOUR MONEY.

Guarantee PROMPT SETTLEMENT OF CLAIMS.

RAO BAHADUR B. S. Sawkar, B.A., LL.B. Chairman

A. S. Kini. Managing Director.

THE UNITED KARNATAKA INSURANCE CO., LTD.

H. O. DHARWAR. ESTD. 1929.

Insure with or Represent us.

For Particulars apply

ORGANISING OFFICE COURT ROAD, UDIPI.

or

M. N. Bhandary & Co., Sp. Agents, Kodialbail, Mangalore.

AGAINST DIABETES

&

all its dreadful results

Consult Specialists:

Dr. Alvas' Research Institute, FAJIR

S. KANARA

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಎಕ್ಸ್‌ಟ್ರಾ ಕಂಟ್ರೋಲಿಗೆ ರೂ. 4|. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. E.) Tollygunge. Calcutta

ಸ್ಟಾಕಿಸ್ಟ್: ಸಾ ಕಂಪೆನಿ, ಮಂಗಳೂರು

ಕೇಂದ್ರ ಎಸೆಂಬ್ಲಿ ನಿರ್ಧಾರಗಳು

ನವದಿಲ್ಲಿಯಲ್ಲೀಗ ನಡೆಯುತ್ತಿರುವ ಹೊಸ ಕೇಂದ್ರ ಎಸೆಂಬ್ಲಿಯ ಪ್ರಥಮಾಧಿವೇಶನದಲ್ಲಿ ಜೀವಕಳೆ ಕಾಣುತ್ತಿದೆ. ಇದುವರೆಗಿನ ಕಾರ್ಯಕ್ರಮಗಳಲ್ಲಿ ಕಾಂಗ್ರೆಸ್ ಪಕ್ಷದ ನಿರೀಕ್ಷೆಗಳೆಲ್ಲಾ ಫಲಿಸಿವೆ. ವೈಸರಾಯರ ಚುಟುಕು ಭಾಷಣಾನಂತರ ಹಲವು ಪ್ರಾಮುಖ್ಯ ನಿರ್ಣಯಗಳು ಚರ್ಚೆಗೆ ಬಂದುವು.

ಬ್ರೆಟ್ಟನ್‌ವುಡ್ ಒಪ್ಪಂದ

ಆರ್ಥಿಕ ವ್ಯವಸ್ಥೆಗಾಗಿ ನಡೆದಿದ್ದ ಬ್ರೆಟ್ಟನ್ ವುಡ್ಡಿನ ಸಮ್ಮೇಲನದ ನಿರ್ಧಾರಾನುಸಾರವಾದ ಜಾಗತಿಕ ಬೇಂಕ್ ಅಥವಾ ನಿಧಿಯೊಡನೆ ಭಾರತವನ್ನು ಸೇರಿಸಿದ ಪ್ರಶ್ನೆಯನ್ನು ಸರಕಾರದ ಆರ್ಥಿಕ ಸದಸ್ಯ ಸರ್. ಆರ್ಚಿಬಾಲ್ಡ್ ರೌಲಾಂಡ್ಸರು ತಂದರು. ಎಸೆಂಬ್ಲಿಯ ಅಭಿಮತ ಕೇಳದೇನೇ ಭಾರತವನ್ನು ಬ್ರೆಟ್ಟನ್‌ವುಡ್ ಯೋಜನೆಯ ಪಾಲುಗಾರನಾಗಿ ಮಾಡಿದುದನ್ನು ಪ್ರಜಾಪ್ರತಿನಿಧಿ ಸದಸ್ಯರು ಖಂಡಿಸಿದರು. ಈ ಕುರಿತು ವಿಚಾರಿಸಲು 9 ಮಂದಿ ಸದಸ್ಯರ ಸಮಿತಿ ರಚನೆಯಾಗಬೇಕು—ಆ ಸಮಿತಿಯ ವರದಿ ದೊರೆಯುವ ವರೆಗೆ ಸರಕಾರವು ಈ ಸಂಬಂಧದ ಕಾರ್ಯಗಳನ್ನೆಲ್ಲಾ ಆ ಮಾನತಿಡಬೇಕು-ಎಂಬ ಕಾಂಗ್ರೆಸ್ ಪಕ್ಷದ ಸೂಚನೆಯು ಅವಿರೋಧವಾಗಿ ಮಾನ್ಯವಾಯಿತು. ಎಸೆಂಬ್ಲಿಯ ಅಭಿಮತ ಕೇಳದೇನೇ ಕಾರ್ಯಸಾಗಿಸಿದ್ದ ಸರಕಾರದ ವರ್ತನೆಯನ್ನು ಖಂಡಿಸುವ ಆ ಠರಾವಿನ ಉತ್ತರಾರ್ಧವನ್ನು ಮಾತ್ರ ಸರಕಾರಿ, ಯುರೋಪಿಯನ್ ಮತ್ತು ಮುಸ್ಲಿಂ ಲೀಗ್ ಸದಸ್ಯರು ವಿರೋಧಿಸಿದರು. 53 ಅನುಕೂಲ 53 ಪ್ರತಿಕೂಲ ಮತಗಳು ದೊರೆತಾಗ ಅಧ್ಯಕ್ಷರು ತನ್ನ ವಿಶೇಷ ಮತವನ್ನು ಠರಾವಿಗನುಕೂಲವಾಗಿ ಕೊಟ್ಟು ಮಂಜೂರು ಮಾಡಿಸಿದರು.

ಭಾರತದಲ್ಲಿರುವ ... ...

ರಾಷ್ಟ್ರದ ಆಹಾರ ಪರಿಸ್ಥಿತಿಯ ಕುರಿತು ಕೇಂದ್ರ ಎಸೆಂಬ್ಲಿಯಲ್ಲಿ ಅತಿ ಪ್ರಾಮುಖ್ಯ ಚರ್ಚೆ ನಡೆಯಿತು. ಹಿಂದೀ ಸರಕಾರದ ಆಹಾರ ಖಾತೆಯು ತನ್ನ ಅಸಡ್ಡೆ, ಅಜಾಗರೂಕತೆ ಇತ್ಯಾದಿ ಕಾರ್ಯಗಳಿಂದ ಎಷ್ಟೊಂದು ಅಪ್ರಿಯವಾಗಿದೆ ಎಂಬುದನ್ನೂ ದೇಶದ ಆಹಾರ ಬಿಕ್ಕಟ್ಟಿನ ಕುರಿತು ಸರ್ವಪಕ್ಷ ಸಂಗಡಗಳಲ್ಲೂ ಎಂತಹ ಆತುರೋದ್ವೇಗವಿದೆ ಎಂಬುದನ್ನೂ ಎಸೆಂಬ್ಲಿ ಚರ್ಚೆಯು ಮುಂದಿಟ್ಟು ಪಡಿಸಿತು. ಕಾಂಗ್ರೆಸ್, ಲೀಗ್, ಯುರೋಪಿಯನ್ ಪಕ್ಷಗಳು ಒಂದಾಗಿ ಸರಕಾರೀ ಧೋರಣೆಯನ್ನು ಖಂಡಿಸಿದುವು. ಶ್ರೀ. ಎಚ್. ಆರ್. ಮುಸಾನಿಗಳು ಆಧಾರಯುಕ್ತವಾಗಿ ಕೊಟ್ಟ ಅಮೋಘ ಭಾಷಣವು ಮಿ. ಲಾಸನರಂತಹ ಯುರೋಪಿಯನ್ ಸದಸ್ಯರಿಂದಲೂ ಶ್ಲಾಘನೆ ಪಡೆಯಿತು. ಮತ್ತೊಂದು ಉತ್ಕೃಷ್ಟ ಭಾಷಣವೆಂದರೆ ಮದ್ರಾಸಿನ ಶ್ರೀಮತಿ ಅಮ್ಮು ಸ್ವಾಮಿನಾಥನರದು. ಶ್ರೀಮತಿಯವರು ಸಾಧಾರವಾದ ನಿರರ್ಗಳ ವಾಣಿಯಲ್ಲಿ ಭಾರತದ; ಅದರಲ್ಲೂ ದಕ್ಷಿಣ ಭಾರತ ಮತ್ತು ಮಲಬಾರು ಜಿಲ್ಲೆಯ ಆಹಾರ ದುರಂತವನ್ನು ಮುಂದಿಟ್ಟಾಗುವಂತೆ ವರ್ಣಿಸಿದರು. '1898 ರ ಚರಿತ್ರಾರ್ಹ ಬರಗಾಲದಲ್ಲಾದರೂ ಪ್ರತಿಯೊಬ್ಬನ ದೈನಿಕ ಹಸುಗೆ ಒಂದೂವರೆ ಪೌಂಡಿನಷ್ಟಿತ್ತು. ಆದರೆ ಸದ್ಯ ಕೇವಲ ಒಂದು ಪೌಂಡು ಮಾತ್ರವಿದೆ. ಇನ್ನೂ ಅದನ್ನು ಕಡಿಮೆ ಮಾಡಿದರೆ ಕೊಲೆರಾ ಮೊದಲಾದ ಅಂಟು ರೋಗಗಳ ಹಾವಳಿಯೆಷ್ಟಾಗಬಹುದೆಂಬುದನ್ನು ಊಹಿಸುವದಸಾಧ್ಯ. ಮೂರು ವರುಷಗಳ ಮೊದಲು ಮಲಬಾರ್ ಬಂದರಲ್ಲೇ 50 ಸಾವಿರ ಮಂದಿ ಕೊಲೆರಾದಿಂದ ಸತ್ತಿದ್ದರು" ಎಂದು ಶ್ರೀಮತಿ ಸ್ವಾಮಿನಾಥನರಂದರು. ಸರ್ವಪಕ್ಷಗಳ ಪ್ರಮುಖರೂ ಸದ್ಯದ ಆಹಾರ ವ್ಯವಸ್ಥೆಯ ಉಗ್ರ ಖಂಡನೆ ಮಾಡಿದರು. ಇನ್ನೊಂದು ದಿನವು ಈ ಚರ್ಚೆಗಾಗಿ ಇಡಲ್ಪಟ್ಟಿದೆ.

ಇತರ ಚರ್ಚೆಗಳು

ಬರ್ಮ ಮತ್ತು ಮಲಯ ಸಂಚಾರಕ್ಕೆ ಸಮ್ಮತಿ ಯಾಚಿಸಿದ ಪಂಡಿತ ನೆಹರುಗಳ ಕುರಿತು ಹಿಂದೀ ಸರಕಾರ ವಹಿಸಿದ ಮೌನದ ಖಂಡನೆಗಾಗಿ ದಿವಾನ್ ಚಮನ್ ಲಾಲರು ತಂದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ನಿಯಮ ಬಾಹಿರಗೊಳಿಸಿದರು. ಬಹದೂರ್‌ಘಾರ್ ಶಿಬಿರದಲ್ಲಿದ್ದ ಆಜಾದ್ ಹಿಂದ್ ಕೈದಿಗಳ ಆರೈಕೆ ಸಂಬಂಧದ ನಿಲುವಳಿ ಸೂಚನೆಯು ಚರ್ಚಿಸಲ್ಪಟ್ಟಿತು. ಕಾಂಗ್ರೆಸ್ ಸದಸ್ಯರು ಸರಕಾರೀ ಧೋರಣೆಯನ್ನು ಖಂಡಿಸಿ ಮಾತಾಡಿದರು. ರೈಲುರಸ್ತೆ ಸಂಬಂಧದ ಯೋಜನೆಯ ಪರಿಶೀಲನೆಗಾಗಿ 7 ಮಂದಿ ಸದಸ್ಯರುಳ್ಳ ಸಮಿತಿ ರಚನೆಗೆ ಸರ್ವಾನುಮತಿ ದೊರೆಯಿತು. ಚಿತ್ತಗಾಂಗ್ ಬಳಿಯ ಹಳ್ಳಿಯಲ್ಲಿ ನಡೆದಿದ್ದ ಸೈನಿಕ ಅತ್ಯಾಚಾರದ ಕುರಿತು ಮತ್ತು ಡಯಮಂಡ್ ಬಂದರದ ಕಟ್ಟೆ ಮುರಿದು ನಡೆದಿದ್ದ ಅವಘಡದ ಕುರಿತು ಬಂದಿದ್ದ ಎರಡು ನಿಲುವಳಿ ಸೂಚನೆಗಳನ್ನೂ ಅಧ್ಯಕ್ಷರು ನಿಯಮಬಾಹಿರಗೊಳಿಸಿದರು. ಜರ್ಮನಿ, ಜಪಾನುಗಳಿಂದ ಪಡೆಯುವ ಯುದ್ಧನಷ್ಟ ಪರಿಹಾರ ದ್ರವ್ಯದಲ್ಲಿ ಹಿಂದುಸ್ಥಾನಕ್ಕೆ ಸೇಕಡಾ 2 ಮಾತ್ರ ದೊರೆತುದಕ್ಕೆ ಒಪ್ಪಿದ ಸರಕಾರದ ವರ್ತನೆಯನ್ನು ನಿಷೇಧಿಸುವ ಸೂಚನೆ ಬಿದ್ದು ಹೋಯಿತು. ಇದ್ದೇ ತಾ. 5ರಲ್ಲಿ ಎಸೆಂಬ್ಲಿ ಉಪಾಧ್ಯಕ್ಷರ ಚುನಾವಣೆ ನಡೆಯಲಿದೆ. ಅಕಾಲೀ ಪಕ್ಷದ ಸರ್ದಾರ್ ಮಂಗಲ ಸಿಂಗರೂ ಲೀಗ್ ಪಕ್ಷದ ಸರ್. ಯಾಮಿನ್ ಖಾನರೂ ಉಮೇದ್ವಾರರಾಗಿದ್ದಾರೆ.

ಈ ಸಂಗತಿ ಗೊತ್ತೆ?

ಚರ್ಚಿಲ್ಲರು—ಯುದ್ಧಕಾಲದಲ್ಲಿ ಪಾರ್ಲಿಮೆಂಟಿನ ಗುಪ್ತಾಧಿವೇಶನದಲ್ಲಿ ತಾನು ಮಾಡಿದ್ದ ಭಾಷಣಗಳನ್ನು ಪ್ರಕಟಿಸುವ ಅಧಿಕಾರವನ್ನು ಅಮೇರಿಕದ 'ಲೈಫ್' ಪತ್ರಿಕೆಗೆ ಮಾರಿರುವರಂತೆ. ಇದಕ್ಕಾಗಿ ಅವರಿಗೆ 12'500 ಪೌಂಡುಗಳನ್ನು 'ಲೈಫ್' ಪತ್ರಿಕೆ ತೆರಲಿದೆ. ಪಾರ್ಲಿಮೆಂಟ್ ಭಾಷಣಗಳು ಬ್ರಿಟಿಷ್ ಸಾರ್ವಜನಿಕ ಹಕ್ಕಿನವಾದ್ದರಿಂದ ಚರ್ಚಿಲ್ಲರಿಗೆ ಆ ವ್ಯಕ್ತಿಗತ ಅಧಿಕಾರವೆಲ್ಲಿಂದ ಎಂಬ ಪ್ರಶ್ನೆ ಪಾರ್ಲಿಮೆಂಟಿನಲ್ಲಿ ಬರಲಿದೆ.

ಶ್ರೀಮತಿ ಅರುಣಾ—ಅಸಫ್ ಅಲಿಯವರು 41 ತಿಂಗಳ ಅಜ್ಞಾತವಾಸಾನಂತರ, ತನ್ನ ಮೇಲಿನ ವಾರಂಟನ್ನು ಸರಕಾರವು ರದ್ದು ಪಡಿಸಿದುದನ್ನು ಕಂಡು ಇತ್ತೀಚೆಗೆ ಕಲ್ಕತ್ತದಲ್ಲಿ ಕಾಣಿಸಿಕೊಂಡು, ಪಂಡಿತ ನೆಹರುಗಳ ಅಪೇಕ್ಷೆಯಂತೆ ಅಲಹಾಬಾದಿನಲ್ಲಿ ಸ್ವಾಗತ ಪಡೆದು ದಿಲ್ಲಿಗೆ ಹೋಗಿದ್ದಾರೆ. ಅವರು ಬಿಡುಗಡೆ ಹೊಂದಿದೊಡನೆ ಪಡೆದ ಸ್ವಾಗತ ಸಂದೇಶಗಳ ಪೈಕಿ ಬೊಂಬಾಯಿಯ ಮಾಜಿ ಮೇಯರರೂ ಕಾಂಗ್ರೆಸ್ ಸಮತಾವಾದಿ ಪ್ರಮುಖರೂ ಆದ ಮಿ. ಯೂಸುಫ್ ಮೆಹರಾಲಿಯವರು ಬಿಟ್ಟ ಈ ತಂತಿ ಸ್ವಾರಸ್ಯದ್ದಿದೆ:"ಆ ನಾಗರಿಕತೆಯಿಂದ ಈ ಕಾಡು ವಾತಾವರಣಕ್ಕೆ ಸುಸ್ವಾಗತ".

ಬಾಮಾ — ಯುದ್ಧಾರಂಭದ ವೇಳೆ ಬರ್ಮದ ಪ್ರಧಾನ ಮಂತ್ರಿಯಾಗಿದ್ದು ಜಪಾನರೊಡನೆ ಸಂಧಾನ ಸಂಚು ನಡೆಸಿದ್ದರೆಂಬ ಕಾರಣದಿಂದ ಬ್ರಿಟಿಷರಿಂದ ಬಂಧನದಲ್ಲಿಡಲ್ಪಟ್ಟಿದ್ದ ಬಾಮಾರನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಗಿದೆ. 'ಬರ್ಮವು ಸ್ವಾತಂತ್ರ್ಯವಿನಹಾ ತೃಪ್ತಿಹೊಂದುವಂತಿಲ್ಲ' ಎಂದು ಅವರ ಕಂಠೋಕ್ತ ಮಾತು. 1942ರ ಸುಮಾರಿಗೆ ಅವರು ಆಗಿನ ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರೊಡನೆ ಬರ್ಮಾಸ್ವಾಯತ್ತೆಯ ಸಂಬಂಧವಾಗಿ ಮಾತುಕತೆ ನಡಿಸಲು ಹೋಗಿದ್ದಾಗ ಮಿ. ಚರ್ಚಿಲ್ಲರು ಉರಿಕಾರಿದ್ದರಂತೆ. ಚರ್ಚಿಲ್ಲರ ಮೊದಲ ಪ್ರಶ್ನೆಯೆಂದರೆ "ಬರ್ಮದಲ್ಲಾಳಿದ ಕೊನೆಯ ರಾಜನ ಕಾಲಕ್ಕಿಂತ ಬ್ರಿಟಿಷ್ ಆಳ್ವಿಕೆಯಲ್ಲಿ ಬರ್ಮೀಯರಿಗೆ ಅಧಿಕ ಸೌಕರ್ಯವಿದೆಯೋ ಇಲ್ಲವೋ?" ಎಂಬುದೇ. ಇಂತಹ ಪ್ರಶ್ನೆಯ ಹೊರತು ಬರ್ಮಕ್ಕಾವ ರಿಯಾಯತಿಯನ್ನೀಯುವ ದಕ್ಕೂ ಚರ್ಚಿಲ್ಲರೊಪ್ಪಲಿಲ್ಲವಂತೆ.

ಪ್ರಕಟಣೆ.

ಪುತ್ತೂರು ಡಿ. ಮುನ್ಸಿಫ ಕೋರ್ಟಿನಲ್ಲಿ.

ಕ್ರಮನಂಬ್ರ 289/1944

R. E. P. No. 403/1945

ಅರ್ಜಿದಾರಳು ಕಲ್ಯಾಣಿ ಯಾನೆ ಸರಸ್ವತಿ ಅಮ್ಮ—ವಾದಿ

ಯೆದ್ರಿರು ಕುಂಞ ಕೂಡಾ—ಪ್ರತಿವಾದಿರು

ಸದ್ರಿ ವ್ಯವಹರಣೆಯ ಯೆದ್ರಿರು ಕಾಸ್ರಗೋಡು ತಾಲ್ಲೂಕು ದೇಲಂಪಾಡಿ ಗ್ರಾಮದಲ್ಲಿ ಠಾವವರು, ಸೂಜ ... ಸೊಸೆ ಲಕ್ಷ್ಮಿ ವಂದು, ಯಿವಳ ಮಕ್ಕಳು 5ನೇ ಯೆದ್ರಿ ಕಾಳಿಪಂಡು, 6ನೆ ಯೆದ್ರಿ ರಾಮಣ್ಣ ಪಂ ... ಯಿವರಿಗೆ-ಮೇಲಿನ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರಳು ಡಿಕ್ರಿಗೆ ಜವಾಬ್ದಾರಿಯಿರುವ ಸ್ಥಿರ ಆಸ್ತಿಯ ಮುಖಲಗೇಣಿ ಹಕ್ಕು ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾಳೆ. ಆದುದರಿಂದ ವಿಕ್ರಯದ ಯಿಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1946ನೆ ಯಿಸವಿ ಫೆಬ್ರವರಿ ತಿಂಗಳ ತಾರೀಕು 18 ನಿಶ್ಚಯಿಸೋಣಾಗ್ಯದೆಯೆಂಬ ಯಿದರಿಂದ ಸದ್ರಿ ಯೆದ್ರಿರಿಗೆ ತಿಳಿಸೋಣಾಗುತ್ತದೆ.

ತಾರೀಕು 28ನೆ ಜನವರಿ 1946 } **K. Narayana Rai,** Advocate for Plaintiff.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚ ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಹಕರ ನಡುವೆ ಸಾಧಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

CANARA BANK LIMITED

Estd: 1906

(Incorporated in British India, liability of Members Limited)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	....	2½%
6 to 9 months	....	2¾%

Rates for Season Deposits of less than Rs 10000/- with a minimum of Rs. 1000/- and in multiples of Rs. 500/- may be ascertained on application to our nearest branch.

ಸಿಂಧಿನಲ್ಲಿ ಕಾಂಗ್ರೆಸ್ ಬೆಂಬಲದಿಂದ ಸಯ್ಯದ್ ಮಂತ್ರಿಮಂಡಲವೆ?

ಶ್ರೀ. ಮಲ್ಯ ಮತ್ತು ಶ್ರೀ. ದಿವಾಕರರ ಮೇಲೆ ಜುಲುಮೆ!

ಸಿಂಧ್ ಮುಸ್ಲಿಮ್ ಪ್ರಾಂತ್ಯ. ಮುಸ್ಲಿಂ ಲೀಗಿನ ವರ್ಚಸ್ಸೇ ಅಲ್ಲಿ ಅಧಿಕ. ಬರ್ಖಾಸ್ತಾದ ಎಸೆಂಬ್ಲಿಯಲ್ಲಿ ಸರ್. ಹಿದಯತುಲ್ಲಾರ ಪ್ರಧಾನಿತ್ವದ ಮಂತ್ರಿ ಮಂಡಲವೇ ಕೊನೆಯ ವರೆಗೆ ಅಧಿಕಾರ ನಡೆಸಿದ್ದಿತು. ಸಿಂಧ್ ಪ್ರಾಂತ್ಯದ ಆಸ್ತಿಪಾಸ್ತಿಗಳ ಅಧಿಕಾಂಶವು ಹಿಂದುಗಳದ್ದಾದರೂ ಜನ ಸಂಖ್ಯೆಯಲ್ಲಿ ಮುಸಲ್ಮಾನರೇ ಅಧಿಕ. ಸತ್ಯಾರ್ಥ ಪ್ರಕಾಶದ ಒಂದು ಅಧ್ಯಾಯಕ್ಕೆ ಬಹಿಷ್ಕಾರ ಹಾಕಿ ಇಡೀ ರಾಷ್ಟ್ರದ ಹಿಂದುಗಳ ಮನನೋಯಿಸಿ, ಎಷ್ಟೇ ಚಳವಳ ನಡೆಸಿದರೂ ಕಡೆಗಣಿಸುವಷ್ಟು ಕಟ್ಟುಗ್ರ ಮತದ್ವೇಷ ಪ್ರದರ್ಶಿಸಿದ್ದ ಮಂತ್ರಿ ಮಂಡಲ ಈವರೆಗೆ ಸಿಂಧಿನಲ್ಲಿತ್ತು. ಆದರೆ ಈ ಬಾರಿ ಕಾಂಗ್ರೆಸ್ ಪ್ರಮುಖರು ಅವಸರ ಮತ್ತು ಅತ್ಯಂತ ಚಾತುರ್ಯದಿಂದ ಕೆಲಸಮಾಡಿ, ಲೀಗ್ ಅಧಿಕಾರಕ್ಕೆ ಬಾರದಂತೆ ಸಾಧಿಸಿದ್ದಾರೆ. ಬದಲಿಗೆ ಮಿ. ಜಿ ಎಮ್. ಸಯ್ಯದ್ ಮತ್ತು ಖಾನ್ ಬಹದೂರು ಮೌಲಾ ಭಕ್ಷರ ಪಕ್ಷಗಳೊಡನೆ ಸೇರಿಕೊಂಡು ಕಾಂಗ್ರೆಸ್ ಪಕ್ಷವು ಸಮ್ಮಿಶ್ರ ಮಂತ್ರಿ ಮಂಡಲ ರಚನೆಯಾಗಲು ನೆರವಿತ್ತಿದೆ.

ಸಯ್ಯದ್ ಸರಕಾರ

ಮಿ. ಜಿ. ಎಮ್. ಸೈಯ್ಯದರು ಈ ಬಾರಿಯ ಚುನಾವಣಾರಂಭದ ವರೆಗೂ ಮುಸ್ಲಿಂ ಲೀಗಿನಲ್ಲೇ ಇದ್ದವರು. ಸಿಂಧ್ ಪ್ರಾಂತಿಕ ಲೀಗಿನ ಅಧ್ಯಕ್ಷರಾಗಿದ್ದವರು. ಎಸೆಂಬ್ಲಿ ಉಮೇದ್ವಾರಿಗಳ ನೇಮಕದ ಕುರಿತು ಲೀಗ್ ಪ್ರಧಾನಿ ಸರ್. ಗುಲಾಮ್ ಹುಸ್ಸೇನ್ ಹಿದಯತುಲ್ಲರಿಗೂ ಇವರಿಗೂ ಮತಭೇದ ಹುಟ್ಟಿ ಕೇಂದ್ರ ಲೀಗ್ ಸಮಿತಿಯು ಹಿದಯತುಲ್ಲರನ್ನೇ ಸಮರ್ಥಿಸಿದ್ದರಿಂದ ಮಿ. ಸಯ್ಯದರು ಮುಸ್ಲಿಂ ಲೀಗಿಗೆ ರಾಜೀನಾಮೆಯಿತ್ತಿದ್ದರು. 'ಪ್ರಗತಿಶೀಲ ಮುಸ್ಲಿಂ ಲೀಗ್ ಪಕ್ಷ' ಎಂಬುದನ್ನು ಸ್ಥಾಪಿಸಿಕೊಂಡು ಚುನಾವಣೆಯಲ್ಲಿ ಲೀಗನ್ನು ಸ್ಪರ್ಧಿಸಿದ್ದರು.

ಸಿಂಧ್ ಚುನಾವಣಾ ಫಲಿತಾಂಶ

ಸಿಂಧಿ ಎಸೆಂಬ್ಲಿಯಲ್ಲಿರುವ ಸದಸ್ಯರ ಒಟ್ಟು ಸಂಖ್ಯೆ 60. ಆ ಪೈಕಿ ಬಹುಸಂಖ್ಯಾಕ ಮೊದಲನೇ ಪಕ್ಷವಾಗಿ ಲೀಗ್ ಈ ಬಾರಿಯ ಚುನಾವಣೆಯಲ್ಲಿಯೂ ಗೆದ್ದಿದೆ. ಆರಿಸಿ ಬಂದ ಲೀಗ್ ಸದಸ್ಯರ ಸಂಖ್ಯೆ 27. ಕಾಂಗ್ರೆಸ್ ಪಕ್ಷವು 22 ಸ್ಥಾನಗಳನ್ನು ಪಡೆದು ಎರಡನೇ ಪ್ರಬಲ ಪಕ್ಷವಾಗಿದೆ. ಮಿ. ಸಯ್ಯದರ ಪ್ರಗತಿಶೀಲ ಲೀಗ್ ಪಕ್ಷಕ್ಕೆ ದೊರೆತಿರುವದು ನಾಲ್ಕೇ ಸ್ಥಾನಗಳು. ಅಂತೆಯೇ ಖಾನ್ ಬಹದೂರ್ ಮೌಲಾ ಭಕ್ಷರ ನಾಯಕತ್ವದ ರಾಷ್ಟ್ರೀಯ ಮುಸ್ಲಿಂ ಪಕ್ಷವೂ ನಾಲ್ಕು ಸ್ಥಾನಗಳನ್ನು ಸಂಪಾದಿಸಿದೆ. ಉಳಿದುದು ಯುರೋಪಿಯನ್ ಪಕ್ಷ. ಏಕಾಕಿಯಾಗಿ ಅಧಿಕಾರವಹಿಸುವಷ್ಟು ಅಧಿಕ ಸಂಖ್ಯೆಯಲ್ಲಿ ಯಾವಪಕ್ಷವೂ ಈ ಬಾರಿ ಗೆದ್ದು ಬಂದಿಲ್ಲ. ಹೀಗಾಗಿ ಚುನಾವಣಾ ಫಲಿತಾಂಶ ಪ್ರಕಟವಾದೊಡನೆ ಅತ್ತ ಮುಸ್ಲಿಂ ಲೀಗ್, ಇತ್ತ ಕಾಂಗ್ರೆಸ್ ಪ್ರಮುಖರು ಇತರ ಪಕ್ಷಗಳ ಬೆಂಬಲ ಸಂಪಾದನೆಗೆ ಒದ್ದಾಡಹತ್ತಿದರು. ಸಯ್ಯದ್ ಪಕ್ಷವನ್ನು ಶರ್ತ ವಿನಹ ಲೀಗಿಗೆ ಸೇರಿಸಿಕೊಳ್ಳಲು ಮಿ. ಜಿನ್ನರು ತಯಾರಿದ್ದರೆಂದೂ ತಿಳಿದು ಬಂದಿದೆ. ಸದ್ಯದ ಸಿಂಧ್ ಲೀಗ್ ಅಧ್ಯಕ್ಷ ಗಝ್ದಾರರೂ ಇತರರೂ ಸಯ್ಯದ್-ಲೀಗ್ ಐಕ್ಯಕ್ಕಾಗಿ ಬಹಳ ಒದ್ದಾಡಿದರೂ ಫಲ ಬರಲಿಲ್ಲ. ಮೇಲಾಗಿ ಸಿಂದ್ ಲೀಗ್ ಪಕ್ಷದ ನಾಯಕ ಮತ್ತು ಮಾಜೀ ಪ್ರಧಾನಿ ಸರ್, ಹಿದಯತುಲ್ಲರಿಗೂ, ಅಲ್ಲಾಭಕ್ಷ್ ಕೊಲೆ ಮೊಕದ್ದಮೆ ಪ್ರಸಿದ್ಧಿಯ ಮಿ. ಖುರ್ರೋರವರಿಗೂ ನಾಯಕತ್ವದ ಕುರಿತು ಸ್ಪರ್ಧೆಯೆದ್ದಂತಿದೆ. ಲೀಗ್ ಕಾರ್ಯದರ್ಶಿ ನವಾಬ ಝಾದಾ ಲಿಯಾಖತ್ ಅಲೀಖಾನರು ಸ್ಥಿತಿ ವಿಮರ್ಶೆಗಾಗಿ ಇದೇ ತಾ. ೪ಕ್ಕೆ ಸ್ವತಃ ಸಿಂಧಿಗೆ ಬಂದಿದ್ದಾರೆ.

ವಲ್ಲಭಾಯಿ ಸಂಘಟನೆ

ಈ ನಡುವೆ ಮಿ. ಸಯ್ಯದರೂ ರಾಷ್ಟ್ರೀಯ ಮುಸ್ಲಿಮ್ ಪಕ್ಷದ ನಾಯಕ ಮೌಲಾ ಭಕ್ಷರೂ ನವದಿಲ್ಲಿಗೆ ಧಾವಿಸಿ ಸರ್ದಾರ್ ಪಟೇಲ್ ಮತ್ತು ಮೌಲಾನಾ ಆಜಾದರೊಡನೆ ಮಾತುಕತೆ ನಡೆಸಿದರು. ಬೆನ್ನಲ್ಲೇ ಸರ್ದಾರರು ಕರಾಚಿಗೆ ಧಾವಿಸಿ ವಿಮರ್ಶೆ, ವಿಚಾರ ಮತ್ತು ಜೋಡಣೆಗಾರಂಭಿಸಿದರು. ಮೌಲಾನಾ ಆಜಾದರೂ ಸರ್ದಾರರನ್ನು ಸೇರಿಕೊಂಡು ಅಲ್ಲಿಯ ಸಮಸ್ಯೆಯೊಂದು ತೀರ್ಮಾನಕ್ಕೆ ಬಂತು. ಕಾಂಗ್ರೆಸ್, ಪ್ರಗತಿಶೀಲ ಮುಸ್ಲಿಂ ಲೀಗ್ ಮತ್ತು ರಾಷ್ಟ್ರೀಯ ಮುಸ್ಲಿಂ ಪಕ್ಷಗಳು ಒಂದುಗೂಡಲ್ಪಟ್ಟುವು. ಇವು ಸಮ್ಮಿಶ್ರಗೊಂಡ ತ್ರಿಪಕ್ಷಗಳಂತಿರದೆ ಏಕ ದೇಹವೆಂಬಂತೆ ಏಕಾಗ್ರತೆಯಿಂದಿರಬೇಕೆಂದೇ ಸಂಘಟನೆಗೊಂಡಿವೆ. ಓರ್ವ ಕಾಂಗ್ರೆಸ್ ಪ್ರಮುಖರ ಮಾತಿನಂತೆ 'ಈಜುವದಾದರೂ ಮುಳುಗುವದಾದರೂ ಒಟ್ಟಿಗೆ' ಎಂದು ಸಂಕಲ್ಪಿಸಿವೆ. ಸಯ್ಯದ್ ಮತ್ತು ಮೌಲಾ ಭಕ್ಷರು ಒಂದು ಜತೆ ಪ್ರಕಟಣೆ ಹೊರಡಿಸಿದ್ದಾರೆ.

ಇದು ಸುದೃಢವೇ?

ಇನ್ನು ಮುಸ್ಲಿಂ ಲೀಗೇನು ಮಾಡುವದೆಂಬ ಪ್ರಶ್ನೆ. 'ಏಕಾಕಿಯಾಗಿ ನಿಲ್ಲುವಷ್ಟು ಬಹುಮತವಿಲ್ಲದ ಎಲ್ಲಿಯೂ ಮಂತ್ರಿ ಮಂಡಲ ರಚಿಸದೆ ಪಾಕಿಸ್ತಾನಕ್ಕಾಗಿ ಹೋರಾಡುವ ಮುಖ್ಯ ಪ್ರಶ್ನೆಯೊಂದೇ ಲೀಗಿನ ಧೋರಣೆ'ಯೆಂದು ನವಾಬ ಝಾದಾ ಲಿಯಾಖತ್ ಆಲೀಖಾನರೆಂದಿದ್ದಾರೆ. ಲೀಗ್ ಮತ್ತು ಯುರೋಪಿಯನ್ ಪಕ್ಷಗಳೊಂದುಗೂಡುವವೆ? ಈಗ ಕಾಂಗ್ರೆಸ್ ಬೆರೆತ ಸಮ್ಮಿಶ್ರ ಪಕ್ಷವು ಸಿಂಧ್ ಎಸೆಂಬ್ಲಿಯ 60 ಸ್ಥಾನಗಳ ಸರಿ ಅರ್ಧ 30ನ್ನು ಪಡೆದಿದೆ ಇದು ಶಾಶ್ವತವೆ? ಈ ಸಮ್ಮಿಶ್ರ ಪಕ್ಷದಲ್ಲಿ ಕಾಂಗ್ರೆಸ್ ಸದಸ್ಯರು 22ಮಂದಿಯಿರುವಾಗ ನಾಲ್ಕೇ ಮಂದಿ ಮುಸ್ಲಿಂ ಸದಸ್ಯರ ನಾಯಕ ಮಿ. ಸಯ್ಯದರಿಗೇನೇ ನಾಯಕತ್ವ ಕೊಡಲಾಗಿದೆ. ಸಯ್ಯದ್ ಪ್ರಧಾನ ಮಂತ್ರಿಯಾಗಲಿರುವರು. ಮೌಲಾ ಭಕ್ಷರಿಗೆ ಕಂದಾಯ ಖಾತೆ, ಪ್ರೊ. ಮಾಲ್ಕನಿಯವರಿಗೆ ವಿದ್ಯೆ ಮತ್ತು ಸ್ಥಾನಿಕ ಸಂಸ್ಥೆಗಳು; ಮಿ. ನಿಕಾಲ್ದಾಸ್ ವಾಝಿರಾನಿಯವರಿಗೆ ಕಾನೂನು ಮತ್ತು ವ್ಯವಸ್ಥೆ ಖಾತೆಗಳನ್ನೀಯಲಾಗುವದು. ಉಳಿದ ಎರಡು ಸ್ಥಾನಗಳನ್ನು ಮುಸ್ಲಿಮರಿಗೆ ಕೊಡಲಾಗುವದು. ಅಧಿಕ ಸಂಖ್ಯಾಕ ಕಾಂಗ್ರೆಸಿಗರು ಸಯ್ಯದ್ ನಾಯಕತ್ವಕ್ಕೊಪ್ಪಿದುದು ಮುಸ್ಲಿಂ ಬಹುಮತೀಯರ ಮನನೋಯಿಸಬಾರದೆಂದೇ. ಸಯ್ಯದ್ ಪಕ್ಷಕ್ಕೂ ಲೀಗಿಗೂ ಮುಖ್ಯತಃ ಮೂರು ಮೂಲ ಭಿನ್ನಾಭಿಪ್ರಾಯಗಳಿವೆ. ಮಿ. ಸಯ್ಯದರೂ ಪಾಕಿಸ್ಥಾನಕ್ಕನುಕೂಲವಿದ್ದಾರೆ. ಆದರೆ ಪ್ರಥಮತಃ ಸ್ವತಂತ್ರ ಭಾರತ—ಆ ಮೇಲೆ ಸ್ವತಂತ್ರ ಪಾಕಿಸ್ಥಾನ ಎಂದವರ ಮತ. ಎರಡನೆಯದಾಗಿ ರಾಷ್ಟ್ರೀಯ ಮುಸಲ್ಮಾನರನ್ನು ಮುಸ್ಲಿಂ ಪ್ರತಿನಿಧಿಗಳೆಂದು ಅವರೊಪ್ಪುತ್ತಾರೆ. ಮೂರನೆಯದಾಗಿ ಪ್ರತ್ಯೇಕ ಮತದಾನ ಪದ್ಧತಿಯನ್ನು ರದ್ದುಗೊಳಿಸಿ ಸಮ್ಮಿಶ್ರ ಮತದಾನವನ್ನು ಜ್ಯಾರಿಗೆ ತರಬೇಕೆಂದು ಅವರ ಸಂಕಲ್ಪ. ರಾಷ್ಟ್ರೀಯ ಮುಸ್ಲಿಂ ಎಂ. ಎಲ್. ಎ. ಆದ ಸಿಂಧಿನ ಸರ್ದಾರ್ ದಾದನ್ ಖಾನರಿಗೆ ಯಾರೋ ಗುಂಡಿಟ್ಟು ಪರಾರಿಯಾಗಿದ್ದಾರೆ. ಖಾನರ ಕಾಲಿಗೆ ಜಖಮಾಗಿ ಆಸ್ಪತ್ರೆಯಲ್ಲಿದ್ದಾರೆ. ಈಗ ಸಂಚಾರದಲ್ಲಿರುವ ಸಿಂದ್ ಗವರ್ನರರು ಕರಾಚಿಗೆ ಮರಳಿದೊಡನೆ ಸಯ್ಯದ್ ಮಂತ್ರಿಮಂಡಲ ರಚನೆಯಾಗಬಹುದು.

ಇತರ ಪ್ರಾಂತ್ಯಗಳಲ್ಲಿ

ಅಸ್ಸಾಮಿನಲ್ಲಿ ಮಾಜೀ ಕಾಂಗ್ರೆಸ್ ಪ್ರಧಾನಿಯಾದ ಶ್ರೀ. ಗೋಪೀನಾಥ ಬಾರ್ಡೋಲಿಯವರು ಕಾಂಗ್ರೆಸ್ ಮಂತ್ರಿ ಮಂಡಲ ರಚಿಸುವ ಸಿದ್ಧತೆಯಲ್ಲಿದ್ದಾರೆ. ಗಡಿನಾಡು ಪ್ರಾಂತ್ಯದಲ್ಲಿ ಕಾಂಗ್ರೆಸಿಗೆ ಏಳು ಸ್ಥಾನಗಳು ಪ್ರತಿಸ್ಪರ್ಧೆ ವಿನಹಾ ದೊರೆತಿವೆ; ಲೀಗಿಗೆ ದೊರೆತುದು ಒಂದು ಮಾತ್ರ. ಫೆಬ್ರವರಿ 14ರೊಳಗೆ ಗಡಿನಾಡಿನ 41 ಸ್ಥಾನಗಳ ಚುನಾವಣೆ ನಡೆದು ಮುಗಿಯಲಿದೆ. ಒರಿಸ್ಸಾದಲ್ಲಿ ನಾಲ್ಕು ಸ್ಥಾನಗಳು ಅವಿರೋಧವಾಗಿ ಕಾಂಗ್ರೆಸಿಗೆ ದೊರೆತಿವೆ.

ಶ್ರೀ ಮಲ್ಯ, ಮತ್ತು ಶ್ರೀ ದಿವಾಕರರ ಮೇಲೆ ಬಿದ್ದರು!

ಕರ್ನಾಟಕ ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡು ಹುಬ್ಬಳ್ಳಿಯಲ್ಲಿ ಅಧ್ಯಕ್ಷರಾದ ಮಂಗಳೂರಿನ ಶ್ರೀ. ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಇದೇ ತಾ. 1ರಲ್ಲಿ ನೆರದಿತ್ತು. ಕೆಲವು ಕಾಂಗ್ರೆಸಿಗರು ಅಕ್ರಮ ಪ್ರವೇಶ ನಡೆಸಿ ಅಲ್ಲಿ ಪ್ರಶ್ನೆಗಳನ್ನು ಕೇಳಹತ್ತಿದರೆಂದೂ ಕೊನೆಗೆ ಅಧ್ಯಕ್ಷ ಶ್ರೀ ಯು.ಶ್ರೀನಿವಾಸಮಲ್ಯರನ್ನು ಅಲ್ಲಿಯೇ ಹಿಡಿದು ಜಗ್ಗಿ ಕುಳಿರಿಸಿ ಕಾರ್ಯದರ್ಶಿ ಶ್ರೀ. ಆರ್. ಆರ್. ದಿವಾಕರರ ತಲೆಗೊಬ್ಬರು ಕೊಡೆಯಿಂದ ಹೊಡೆದರೆಂದೂ ತಿಳಿದುಬರುತ್ತದೆ. ಆಫೀಸಿನಲ್ಲಿದ್ದ ಫೈಲುಗಳು ಮುದ್ರಿತ ಕಾಗದ ಪತ್ರಗಳನ್ನೆಲ್ಲಾ ಚೆಲ್ಲಾಪಿಲ್ಲಿ ಎಸೆದು ಅವರು ಹೊರಟು ಹೋದರು. ಬೊಂಬಾಯಿ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಚು

(೬ನೇ ಪುಟ ನೋಡಿರಿ)

Approved firm by the Gov. of Mysor. Certified by the Agent of the Gov. of Cylone Indian.

THE UDIPI BANK LIMITED.

ESTD:] NOTICE [1925

The 21st Annual Ordinary General Meeting of the Shareholders of the Bank will be held at the registered Office of the Bank at UDIPI on Sunday, 10th March, 1946 at 3 P. M. (I. S. T.) to transact the following business;—

1. To receive, consider and adopt the balance sheet as at 31-12-1945 and the Profit & loss Statement for the year ended 31-12-1945, with the Auditor's Report and the Director's 21st Annual Report.
2. To fix the rate of Dividend.
3. To elect five Directors in the place of those retiring under Articles 92, 93 & 98. All the retiring Directors are eligible for re-election.
4. To fix the Dircetors' Sitting fees for attending meetings of Directors and Committees
5. To appoint an Auditor for the year 1946 and to fix his remuneration. Last year's Auditor is eligible for re-appointment.
6. Proxy-Forms, if any, duly stamped and attested should be deposited at the registered office of the Bank at least 72 hours before the time fixed for the Meeting.

N. B:—TRANSFER BOOKS and REGISTER OF MEMBERS of the Bank will remain closed from 22nd February, 1946, to 11th March, 1946 (all days inclusive)

(By order of the Board of Directors)

Office of the Bank, UDIPI 5th February, 1946.

N. V. Prabhu.
MANAGER

The Canara Banking Corporation Limited.

(Incorporated in British India, with limited Liability)

Estd 1906

Head Office: UDIPI, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months · · 2¼%

6 months 2½%

These deposits will however not be accepted to run beyond 31-8 1946

With a net work of Branches and Agencies we offer the best of banking facilities.

ನವಯುಗ

ಉಡುಪಿ, ಗುರುವಾರ, ೭-೨-'೪೬

ರಾಷ್ಟ್ರದ ಆಹಾರ ಸ್ಥಿತಿ

ರಾಷ್ಟ್ರವು ಈ ವರುಷ ಉದರಾಗ್ನಿ ಕುಂಡವನ್ನು ಹಾದು ಮುಂದೊತ್ತುವದು ಅಸಾಧ್ಯವೆಂಬ ದುರ್ಲಕ್ಷಣ ಕಾಣುತ್ತಿದೆ ಸಾಮೂಹಿಕವಾಗಿ ಇಡೀ ರಾಷ್ಟ್ರವು ಇಂತಹ ಕೆಟ್ಟ ವರುಷವನ್ನು ಒಹುಶಃ ಇದುವರೆಗೆ ಕಂಡಿಲ್ಲ. 1943ರಲ್ಲಿ ಬಂಗಾಳವೊಂದರಲ್ಲೇ ಸುಮಾರು 30ಲಕ್ಷಮಂದಿ ಆಹಾರಾಭಾವದಿಂದ ಮಡಿದಿದ್ದರು. ಅದೇ ವರುಷ ಆಹಾರ ಕೊರತೆಯೇ ಹೇತುವಾಗಿ ಮಲಬಾರ್ ಜಿಲ್ಲೆಯೊಂದರಲ್ಲಿ 50ಸಾವಿರ ಮಂದಿ ಕೊಲೆರಕ್ಕೆ ಬಲಿಯಾಗಿದ್ದರು ಪರಕೀಯ ಸರಕಾರವೊಂದರ ಅಸಡ್ಡೆಯ ಪರಿಣಾಮವು ಜನತೆಗೆ ಮುಂದಟ್ಟಾಗಲು ಇಂತಹ ಪ್ರಳಯಗಳಿಗಿಂತ ಹೆಚ್ಚಿನದು ಬೇರಾವುದೂ ಬೇಕಾಗಿಲ್ಲ. ಆದ್ದರಿಂದ ಇನ್ನೂ ಈ ರೀತಿ ಒಂದೊಂದೇ ಕಡೆಗೆ ಬರಗಾಲದ ಭೂತ ಬಡಿಯುವ ಭಯಂಕರ ದೃಶ್ಯವು ಪ್ರಾಯಶಃ ಕಾಣ ಸಿಗಲಾರದು ಆದರೆ ಇಷ್ಟರಿಂದ ಆಹಾರ ದುಸ್ಥಿತಿ ನಿವಾರಣೆಯಾಗಿದೆ ಎಂಬ ಅರ್ಥವಲ್ಲ ಬದಲಿಗೆ ವರುಷ ಆ ದುಸ್ಥಿತಿ ಮತ್ತಷ್ಟು ಹೆಚ್ಚಿದಂತೆ ಕಾಣುತ್ತಿದೆ, ಆದರ ಮೊದಲಿನಂತೆ ಆ ಬರಗಾಲ ಕ್ಷೇತ್ರಗಳನ್ನು ಸ್ವೇಚ್ಛಾವಿಹಾರಕ್ಕೆ ಬಿಟ್ಟು ಅಲ್ಲಲ್ಲಿ ಕೊಳ್ಳೆ ಹೊಡೆಯಲು ಬಿಡದ ನಿರ್ವಸಮ ಎಲ್ಲನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ! ಅರ್ಥಾತ್ 1943ರ ಬಂಗಾಳ ಅಥವಾ ಇನ್ನೊಂದು ಕಡೆಯಲ್ಲಿ ಭಯಂಕರ ಬರಗಾಲ ಮತ್ತೊಮ್ಮೆ ಕಂಡುಬಾರದಾದರೂ, ಆ ದುರವಸ್ಥೆಯು ಇಡೀ ರಾಷ್ಟ್ರಕ್ಕೆ ಹಂಚಿಬಿದ್ದ ಪರಿಸ್ಥಿತಿ ಈ ವರುಷದಲ್ಲಿದೆ ಆಹಾರ ವ್ಯವಸ್ಥಾಧಿಕಾರಿಗಳು ಕಳೆದ ಮೂರುನಾಲ್ಕು ವರುಷಗಳ ಅನುಭವದಿಂದ ಉಪಾಯ ಹೂಡಲು ಕಲಿತಿದ್ದಾರೆ ಹೊರತು ಉಪಕಾರ ಮಾಡಲು ಕಲಿತಿಲ್ಲ ಈ ಬಾರಿಯ ಕೇಂದ್ರ ಎಸೆಂಬ್ಲಿಯು ದೇಶದ ಆಹಾರ ಪರಿಸ್ಥಿತಿಯ ಗಾಢ ಚರ್ಚೆ ನಡೆಸಿತು. ಸ-ಕಾರೀ ಧೋರಣೆಯು ಸರಕಾರೀ ಸದಸ್ಯರ ಹೊರತು ಮಿಕ್ಕೆಲ್ಲರ ಕಠಿಣ ಟೀಕೆಗೊಳಗಾಯಿತು ರಾಷ್ಟ್ರದ ಪ್ರತಿಯೊಂದು ಪ್ರಾಂತ್ಯದಲ್ಲೂ ಆಹಾರದ ಕೊರತೆ ಕಾಣುತ್ತಿದೆ. ಈ ಬಾರಿ ದಕ್ಷಿಣ ಭಾರತದ ಸ್ಥಿತಿ ಇನ್ನಷ್ಟು ನಿಕೃಷ್ಟವಾಗಿದ ಎನ್ನಬಹುದು. ಎಸೆಂಬ್ಲಿಯಲ್ಲಿ ಇಲ್ಲಿಯ ರೋದನ ಪ್ರತಿಧ್ವನಿಸದೆ ಹೋಗಿಲ್ಲ. ವೈಸರಾಯರು ಸ್ವತಃ ಬೆಂಗಳೂರಿಗೆ ಬಂದು ವಿಚಾರ ವಿಮರ್ಶೆ ನಡೆಸುತಿದ್ದಾರೆ. ಟೀಕೆ, ವಿಮರ್ಶಗಳು ಹೊಟ್ಟೆ ತುಂಬಿಸಲಾರವು; ಜನತೆಯ ಹೊಟ್ಟೆಯುರಿಯು ಅಧಿಕಾರಿಗಳ ಹೃದಯ ಕರಗಿಸಿದೊಡನೆ ಕೆಲಸವಾಗುವ ಸಾಧ್ಯತೆಯೂ ಸದ್ಯಕ್ಕಿಲ್ಲ ಸ್ವಾತಂತ್ರ್ಯ ಬರುವ ವರೆಗೆ ಸಹಿಸಿಕೊಳ್ಳಲಾಗುವ ಆಪತ್ತೂ ಇದಲ್ಲ. ಒಟ್ಟಿನ ಮೇಲೆ ರಾಷ್ಟ್ರವು ತನಗೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಉತ್ಪತ್ತಿ ಮಾಡಿಲ್ಲ. ಪ್ರತಿಯೊಂದು ಪ್ರಾಂತ್ಯ ಮತ್ತು ಪ್ರಾಂತ್ಯದೊಳಗಿನ ಪ್ರತಿಯೊಂದು ಜಿಲ್ಲೆಯ ಮಟ್ಟಿಗೆ 'ತನ್ನದೇ ತನಗೆ' ಎಂಬ ಮೂಲ ಸೂತ್ರವನ್ನು ಅಧಿಕಾರಿಗಳಂಗೀಕರಿಸಿದ್ದಾರೆ. ಕಡಿಮೆ ಬೀಳುವ ಕಡೆಗಳಿಗೆ ಇತರ ಕಡೆಗಳಿಂದ ಸರಬರಾಯಿ ಮಾಡುವ ವ್ಯವಸ್ಥೆ ಎರಡನೆಯದು ಆದರೆ ಹೆಚ್ಚಿನ ಕಡೆಗಳಲ್ಲಿ ಆಹಾರದ ಕೊರತೆಯಿರುವಾಗ, ಅವುಗಳಿಗೆ ಸಾಕಾಗುವಷ್ಟನ್ನು ಪೂರೈಸುವಷ್ಟು ಅಧಿಕೋತ್ಪತ್ತಿಯಾಗಿರುವ ಪ್ರಾಂತ್ಯಗಳು ಕಡಿಮೆ. ಆದ್ದರಿಂದ ಹೊರ ದೇಶಗಳಿಂದ ಆಹಾರ ಸರಬರಾಯಿಯಾದ ವಿನಹ ಹಿಂದುಸ್ಥಾನಕ್ಕೆ ಈ ಬಾರಿ ಉಳಿಗಾಲವಿಲ್ಲ ಎಂಬಂತೆ ಕಾಣುತ್ತಿದೆ. ಕೆನಡಾ, ಆಸ್ಟ್ರೇಲಿಯಾ ಮೊದಲಾದ ಕಡೆಗಳಿಂದ ಸಹಾಯಬಂದಿದೆ, ಇನ್ನೂ ಬರುವ ಭರವಸೆಯಿದೆ. ಆದರೆ ಈ ... ಸಾಕಾಗಲಾರದೆಂಬ ಸಂದೇಹವು ಸರ್ವರನ್ನೂ ಪೀಡಿಸುತ್ತಿದೆ ಅಂದ ಮೇಲೆ ಈ ಆಪತ್ತಿಗೆ ಬೇರೇನು ಪರಿಹಾರ?

ಮಾತ್ರವಲ್ಲ, ಉತ್ಪತ್ತಿಯೇ ಸಾಕಾಗುವಷ್ಟಿಲ್ಲದಿರುವಾಗ ಸರಕಾರವನ್ನೇಕೆ ದೂರಬೇಕು?ಎಂಬ ಪ್ರಶ್ನೆಯೂ ಬರಬಹುದು. ಕಾರಣವಿದೆ. ಸರಕಾರವು ಆಹಾರ ಪ್ರಶ್ನೆಯ ಕಡೆಗೆ ಸರ್ವ ಪ್ರಥಮ ಲಕ್ಷ್ಯಗೊಟ್ಟು ಮುಂಜಾಗ್ರತೆಯಿಂದ ವರ್ತಿಸುತಿದ್ದರೆ ನಿಜಕ್ಕೂ ಆಹಾರದ ಕೊರತೆಯೇಳದಂತೆ ಮಾಡಲು ಸಾಧ್ಯವಿತ್ತು. ನಿದರ್ಶನಕ್ಕಾಗಿ ದಕ್ಷಿಣ ಕನ್ನಡದ ಪರಿಸ್ಥಿತಿಯನ್ನೆತ್ತಿಕೊಳ್ಳಬಹುದು. ಹಿಂದಿನ ಒಂದೆರಡು ವರುಷಗಳ ಅನುಭವ ಬಲದಿಂದ, ಕಳೆದ ವರುಷ ಸರಕಾರವು ಸಕಾಲದಲ್ಲಿ ಕಣ್ಣು ತೆರೆದಿದ್ದರೆ ದ. ಕ. ಜಿಲ್ಲೆಯ ಎಷ್ಟೋ ಸ್ಥಳಗಳಲ್ಲಿ ... ಗಾವಳ್ಳಿಯಾಗುತಿತ್ತು. ವಿಶೇಷವಾಗಿ ಜಿಲ್ಲೆಯ ಪೂರ್ವ ಭಾಗದಲ್ಲಿ ಬೇಸಾಯ ಯೋಗ್ಯವಾದ ಸಾವಿರಾರು ಎಕ್ರೆ ಸ್ಥಳಗಳು ಈ ಬಾರಿಯೂ ಬಂಜರು ಬಿದ್ದಿವೆ. ಮಾತ್ರವಲ್ಲ, ನೀರಾವರಿ ಸೌಕರ್ಯವಿಲ್ಲದೆ ದ್ವಿತೀಯ ಮತ್ತು ತೃತೀಯ ಬೆಳೆಯಾಗದೆ ಉಳಿದಿರುವ ಕ್ಷೇತ್ರಗಳು ಅಗಣಿತ. ಮದ್ರಾಸ್ ಪ್ರಾಂತ್ಯದಲ್ಲಿದ್ದ ಬಿರುಗಾಳಿ ಮತ್ತು ಮಳೆಯ ಅಭಾವದಿಂದಾಗಿರುವ ಹಾನಿಯನ್ನಷ್ಟೇ ಸರಕಾರವು ಜ್ಞಾಪಿಸುತ್ತಿದೆಯಲ್ಲದೆ, ತನ್ನ ಅಸಡ್ಡೆಯಿಂದಾಗಿರುವ ಈ ಅನಾಹುತವು ಇನ್ನೂ ಅದಕ್ಕೆ ನೆನಪಾಗಿಲ್ಲ ಇನ್ನು ಬಕೊಂದು ಪರಿಹಾರವಾಗಿ ಹಸುಗೇ ಪರಿಮಾಣವನ್ನು ಮತ್ತೂ ತಗ್ಗಿಸುವ ಯೋಚನೆಯು ಅಧಿಕಾರಿಗಳ ಮೆದುಳಿಗೆ ಹೊಳೆದಂತಿದೆ. ಇದುವರೆಗೆ ಜನತೆಯ ಅರ್ಧ ಹೊಟ್ಟೆಯ ಜವಾಬ್ದಾರಿಯನ್ನು ಮಾತ್ರ ಹೊತ್ತಿದ್ದ ಸರಕಾರವು ಇನ್ನು ಅದರಲ್ಲೂ ಕೆಲವಂಶವನ್ನು ಬಿಟ್ಟುಕೊಡಲು ಮನಸ್ಸು ಮಾಡಿದೆ! ಇದು ಅತ್ಯಂತ ಖಂಡನೀಯ ರೇಶನ್ ಪರಿಮಾಣವನ್ನು ತಗ್ಗಿಸಿದ ಕುರಿತು ಕಾಂಗ್ರೆಸ್, ಲೀಗ್, ಹಿಂದೂಸಭಾ, ಕಮ್ಯೂನಿಸ್ಟರೊಂದಾಗಿ ಸುಮಾರು 0 ಸಾವಿರ ಜನರು ಅರ್ಧ ಚಪಾತಿಗಳೊಂದಿಗೆ ಲಕ್ನೋದಲ್ಲಿ ನಡೆಸಿದ ಮೆರವಣಿಗೆಯ ದೃಶ್ಯವು ಸರಕಾರದ ದೃಷ್ಟಿಯಿಂದ ಮಾಸಿ ಹೋಗದಿರಲಿ, ಅಂತೆಯೇ ಮುಕ್ಕಾಲು ಪಾಲು ಅನ್ನಕೋಶ ಖಾಲಿ ಬಿದ್ದ ಜನತೆಯು ವಾಂತಿಭೇದಿ ಮೊದಲಾದ ಅಂಟುರೋಗಗಳಿಗೆ ತುತ್ತಾಗಿ ಹುಳಗಳಂತೆ ಸಾಯಲಿರುವ ಚಿತ್ರವೂ ಅದರ ಕಣ್ಣು ಮುಂದ ಬರಲಿ. ಆದರೆ ಇಷ್ಟಕ್ಕಾಗಿ ಗಲಿಬಿಲಿಗೊಂಡು ಧಾನ್ಯೋತ್ಪತ್ತಿ ಮಾಡುವ ರೈತರ ಮೇಲೆ ಧಾಳಿ ನಡಿಸುವ ಆಟವು ಇಷ್ಟರಲ್ಲೇ ಮಿತಿ ಮೀರಿ ಮೃತ್ಯುಧಾಳಿಯ ಸ್ವರೂಪಕ್ಕೆ ಬಂದಿದೆ ಎಂಬುದು ಮುಂದಾಗಿ ನೆನಪಿರಲಿ. ಆದ್ದರಿಂದ ತಾತ್ಕಾಲಿಕ ಶಮನವಾಗಿ, ಹೊರದೇಶಗಳಿಂದಲೇ ಸಾಕಷ್ಟು ಆಹಾರ ಸರಬರಾಯಿ ಪಡಿಸಿಕೊಳ್ಳುವ ಒಂದೇ ಒಂದು ಹಾದಿ ಕಾಣುತ್ತಿದೆ. ಈ ಕುರಿತು ಹಿಂದೀ ಸರಕಾರವು ಇಂಡಿಯಾ ಆಫೀಸನ್ನೂ ಅದು ಬ್ರಿಟಿಷ್ ಸರಕಾರವನ್ನೂ, ಬ್ರಿಟಿಷ್ ಸರಕಾರವು ಸಂಬಂಧಪಟ್ಟ ರಾಷ್ಟ್ರಗಳನ್ನೂ ಒತ್ತಾಯ ಪಡಿಸಿ, ಭಾರತಕ್ಕೆ ಕೂಡಲೇ ಧಾನ್ಯ ಸರಬರಾಯಿಯಾಗುವದೆಂದು ನಿರೀಕ್ಷಿಸಬಹುದೆ?

ಜಿಲ್ಲೆಯ ಕೃಷಿಕರ ದುರವಸ್ಥೆಯು ಕೃಷಿಕರಿಂದಲೇ ನಿವಾರಣೆಯಾಗಬೇಕು.

ಕೃಷಿಕ ಬಂಧುಗಳೇ

ನಮ್ಮ ಜಿಲ್ಲೆಯ ಕೃಷಿಕರೆಂದರೆ ಪ್ರಿಮ ಜೀವನದ ಪಶುಗಳೆಂಬ ಭಾವನೆಯನ್ನಿಟ್ಟುಕೊಂಡು ಅಧಿಕಾರಿಗಳು ನಾನಾ ತರದ ಕಷ್ಟ ಯಾತನೆಗಳನ್ನು ತಂದೊಡ್ಡುತಿದ್ದಾರೆ ಕಾರಣ ಕೃಷಿಕರು ಹಳ್ಳಿಯ ಅನಾಗರಿಕರು, ಅವಿದ್ಯಾವಂತರು, ಅಧೈರ್ಯವಂತರ ಸಮುದಾಯವಾಗಿದೆ. ದಿನದ 24 ಗಂಟೆಗಳ ಕಾಲ ದುಡಿದು ಪಟ್ಟಣದ ನಾಗರಿಕ ಜನಾಂಗದ ಸುಖ ಸಂಪತ್ತಿಗಾಗಿ ಅರ್ಪಿಸಿ, ರಾಗಿ, ಗೋದಿ, ಹುರುಳಿ ಮೊದಲಾದ ಧಾನ್ಯಗಳನ್ನು ತಿಂದು ಪಶುಗಳಂತೆ ಜೀವಿಸಬೇಕಾಗಿಯದೆ ನಾವು ನಮ್ಮವರನ್ನು ಸುಂಸಿ ಭೂಮಿಯಲ್ಲಿ ಬೆಳೆಯುವುದು ಬೇಡುದನ್ನು ಒಂದು ತಿಂಗಳ ಜೀವನಕ್ಕೂ ಇಟ್ಟುಕೊಳ್ಳುವ ಅಧಿಕಾರವಿಲ್ಲ ಅಧಿಕಾರಿಗಳ ಮುಂದೆ ಕೈ ಕಟ್ಟಿ ನಮ್ಮ ಜೀವನಕ್ಕೆ ಬೇಡುತ್ತಾ ದಿನವಿಡೀ ನಿಲ್ಲಬೇಕು ಮನೆಯಲ್ಲಿದ್ದುದನ್ನು ಕೊಂಡುಹೋಗುವುದಲ್ಲದೆ ಮನೆಯನ್ನು ಕೂಡಾ ಹೊಕ್ಕು ಹುಡುಕುವ ಅಧಿಕಾರಿಗಳ ಪರಿಯಾಯವಾಗಿಯದೆ, ಬಿಸಿಲು, ಮಳೆ, ಚಳಿ ಎಂದೆಣಿಸದೆ ಬೆಳೆಯನ್ನು ಬೆಳೆಯುವುದು. ಕಡವು ಆಗುತ್ತಲೇ ಕೃಷಿಕನು ಕಳ್ಳನಾಗುತ್ತಾನೆ! ಅಪನಂಬಿಗಸ್ಥನಾಗುತ್ತಾನೆ! ಭತ್ತ ಬೆಳೆದವನಿಗೆ ಅಕ್ಕಿ ಮಾಡುವ ಅವಕಾಶವಿಲ್ಲ ಬೆಳೆದುದೆಲ್ಲವನ್ನೂ ಅರ್ಪಿಸಿದರೂ ಮತ್ತೂ ತಂದುಕೊಡಬೇಕು ಇದು ಕೃಷಿಕರಲ್ಲಿರುವ ಅಧೈರ್ಯದ ಪರಿಣಾಮವು. ಇಂದು ಕೃಷಿಕನ ಮನೆಯಲ್ಲಿ ಬಾವಿಯ ನೀರು ಒಣ ಹುಲ್ಲು ಮಾತ್ರ ಉಳಿದಿದೆ ಮುಂದಿನ ಬೆಳೆಯ ಬೀಜವೇ ಜನರ ಆಹಾರವಾಗಿ ಉಪಯೋಗಿಸುವ ಸಂದರ್ಭವೂ ಕಾಣುತ್ತಲಿದೆ, ಕೃಷಿಕರು ಈ ರೀತಿಯಿಂದ ಕಷ್ಟಯಾತನೆ ಪಡಬೇಕೆಂಬ ಶಾಸನಗಳಿರಲಿಕ್ಕಿಲ್ಲ ದೇವರು ಪ್ರಮ ಜೀವಿಗಳೆಂದು ಸೃಷ್ಟಿಸಿರಲಿಕ್ಕಿಲ್ಲ. ಕೃಷಿಕರಲ್ಲಿ ಜಾಗ್ರತೆಯೂ ಸಂಘಟನೆಯೂ ಐಕ್ಯತೆಯೂ ಇಲ್ಲದಿರುವುದೇ ಈ ಕಷ್ಟಕ್ಕೆ ಮುಖ್ಯ ಕಾರಣವಾಗಿಯದೆ ನಾವು ಇಡೀ ಜಿಲ್ಲೆಯ ಕೃಷಿಕರು ಒಂದಾಗಬೇಕು. ನಮ್ಮಲ್ಲಿ ಜಾಗ್ರತಿಯೂ ಸಂಘಟನೆಯೂ ಉಂಟಾಗುವಂತೆ ತಕ್ಕ ಕಾರ್ಯ ಕೈಗೊಳ್ಳಬೇಕು ಕೃಷಿಕರ ಇಂದಿನ ದುರವಸ್ಥೆಗಳು ಕೃಷಿಕರಿಂದಲೇ ನಿವಾರಣೆಯಾಗಬೇಕು. ಪ್ರತಿ ತಾಲೂಕುಗಳಲ್ಲಿ ಕೃಷಿಕರ ಸಂಘಗಳನ್ನು ರಚಿಸಬೇಕು ಪ್ರತಿ ಗ್ರಾಮಗಳಲ್ಲೂ ಕೃಷಿಕರಿಗೆ ಬೇಕಾದ ಸಲಹೆತ್ತುಗಳನ್ನು ಕೇಳಬೇಕು. ಕಾರ್ಯಕ್ರಮ ಕೈಗೊಳ್ಳುವರೆ ಕಾರ್ಯಕರ್ತರಾಗಿ ಮುಂದೆ ಬರಲಿಚ್ಛಿಸುವವರು ತಾ 10 2 46ರ ಒಳಗೆ ವಿಳಾಸ ಸಹಿತ ಪತ್ರವ್ಯವಹಾರ ನಡೆಸಬೇಕಾಗಿ ಕೃಷಿಕ ಬಂಧುಗಳಲ್ಲಿ ನನ್ನ ಆಗ್ರಹದ ವಿಜ್ಞಾಪನೆ

ಬಿ ಅಂತಯ್ಯ ಶೆಟ್ಟಿ, ಬ್ರಹ್ಮಾವರ, ದ.ಕ

(೫ನೇ ಪುಟದಿಂದ)

ಗಾಂಧಿಜಿಲ್ಲೆಗೆ ಶಿಫಾರಸು ಮಾಡಿದ ಕಾಂಗ್ರೆಸ್ ಉಮೇದ್ವಾರಿಗಳ ಕುರಿತಾದ ಅತೃಪ್ತಿಯೇ ಈ ಗಲಭೆಗೆ ಕಾರಣವೆಂದು ತಿಳಿದು ಬಂದಿದೆ ಶ್ರೀ. ದಿವಾಕರರ ಮೇಲೆ ಕೈ ಮಾಡಿದ್ದನ್ನು ಕರ್ನಾಟಕದ ಎಲ್ಲಾ ಪ್ರಮುಖರೂ ನಿಷೇಧಿಸಿದ್ದಾರೆ ಅಲ್ಲಲ್ಲಿ ನಿಷೇಧ ಸಭೆಗಳು ಜರಗಿ ಶ್ರೀ ದಿವಾಕರರಂತಹ, ಸರ್ವಮಾನ್ಯ ಸಜ್ಜನನಿಗಾದ ಅನ್ಯಾಯವನ್ನು ಖಂಡಿಸಿವೆ.

PRESS-NOTE

In order to encourage the plantation of tamarind trees, the Government have sanctioned a grant of Rs 200/- for distribution to the ryots in this District. Those intending to raise tamarind plantaions are advised to apply urgently to the District Collector for allotment

---

ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ದೇವಸ್ಥಾನದಿಂದ ಪ್ರಕಟಣೆ

ಇದೇ ಬರುವ 1946ನೇ ಇಸವಿಯ ಜೂನು ತಾರೀಕು 9ರಲ್ಲು ಶ್ರೀ ಮೂಕಾಂಬಿಕಾ ದೇವಳ ಸಂನಿಧಿಯಲ್ಲಿ ಅಷ್ಟಬಂಧ ಕಲಶ ಮಹೋತ್ಸವವನ್ನು ನೆರವೇರಿಸುವದೆಂತ ಶ್ರೀ ದೇವಳ ಮೊಕ್ತೇಸರರು ನಿಶ್ಚಯಿಸಿದ ಪ್ರಯುಕ್ತ ಸದ್ರಿ ಕೆಲಸಕ್ಕೆ ಹೇರಳ ಹಣ ಬೇಕಾದ್ದರಿಂದ ಮೊಕ್ತೇಸರರ ಪರವಾಗಿ ಎಕ್ಸಿಕ್ಯುಟಿವ್ ಆಫೀಸರನಾದ ನಾನು ಈ ಮೂಲಕ ಸರ್ವ ಭಕ್ತಾದಿಗಳಿಗೂ ತಮ್ಮ ಯಥಾನುಶಕ್ತಿ ಹಣ ಸಹಾಯ ಮಾಡಬೇಕಾಗಿ ಕೋರುತ್ತೇನೆ ಹಣವನ್ನು ಕಳುಹಿಸುವವರು ದೇವಳ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಎಡ್ತರೆ ಮಂಜಯ್ಯ ಶೆಟ್ರು, ಎಡ್ವೊಕೇಟ್, ಕುಂದಾಪುರ, ಕಲಶ ಫಂಡಿನ ಕೋಶಾಧಿಕಾರಿಯಾದ ಇವರಿಗೆ ಹಣವನ್ನು ಕಳುಹಿಸಬಹುದು. ಅಥವಾ ಶ್ರೀ ದೇವಳ ಎಕ್ಸಿಕ್ಯುಟಿವ್ ಆಫೀಸರ್ ಸಿ ಎಚ್ ಶೆಟ್ಟಿ ಇವರಿಗೆ ಕಳುಹಿಸಬಹುದೆಂಬ ಸಂಗ್ತಿ ಸರ್ವ ಭಕ್ತಾದಿಗಳಿಗೂ ಈ ಮೂಲಕ ತಿಳಿಸಿಯದೆ

C. H. SHETTY, E. O

ರಶ್ಯ ಮತ್ತು ಬ್ರಿಟನ್ ಅಮೇರಿಕಗಳೊಳಗೆ ಮನಸ್ತಾಪ

ಮದ್ರಾಸಿನಲ್ಲಿ ಗಾಂಧೀಜಿ

ಸುಮಾರು ಎರಡು ವಾರ ಮದ್ರಾಸಿನಲ್ಲಿದ್ದು ಹಿಂದೀ ಪ್ರಚಾರ ಸಭೆಯ ರಜತೋತ್ಸವದ ಅಧ್ಯಕ್ಷತೆ ವಹಿಸಿ, ಹರಿಜನೋದ್ಧಾರ, ಗ್ರಾಮಕೈಗಾರಿಕೆ, ಪಾನ ನಿಷೇಧ, ವಿಧಾಯಕ ಕಾರ್ಯಕ್ರಮ ಇತ್ಯಾದಿಗಳ ಕುರಿತು ಅಮೋಘ ಉಪದೇಶಗಳನ್ನಿತ್ತು ಮದ್ರಾಸಿನ ಶ್ರೀ. ಸುಬ್ಬಯರ 'ಮಂಗಲ ಭವನ'ವನ್ನು ಸುಪ್ರಸಿದ್ಧ ದೇವಾಲಯದಷ್ಟು ಪವಿತ್ರಗೊಳಿಸಿದ ಗಾಂಧೀಜೀಯವರು ತಾ. 1ನೇ ರಾತ್ರಿ ಮಧುರೆಗೆ ಹೊರಟು ಹೋದರು. ಅವರು ಹೊರಟಿದ್ದ ಸ್ಪೆಶ್ಯಲ್ ಟ್ರೈನಿನಲ್ಲಿ ರಸ್ತೇ ಬದಿಯ ದರ್ಶನಾಕಾಂಕ್ಷಿಗಳಿಗೆ ಭಾಷಣವೀಯಲು ನಿಲ್ದಾಣದ ಏರ್ಪಾಡಾಗಿತ್ತು. ಮಧುರೆಯಲ್ಲಿ ಮೀನಾಕ್ಷಿ ದೇವಾಲಯವನ್ನು ಪ್ರಥಮ ಬಾರಿ ಸಂದರ್ಶಿಸಿ, ಅಲ್ಲಿಂದ ಪಳ್ನಿಯ ಪರ್ವತ ದೇವಾಲಯಕ್ಕೂ ಭೇಟಿಕೊಟ್ಟು ಪೂಜೆ, ಪ್ರಸಾದ ಪಡೆದರು. ದಾರಿಯುದ್ದಕ್ಕೂ ಲಕ್ಷಾವಧಿ ಜನರು ದರ್ಶನಕ್ಕಾಗಿ ನೆರೆದಿದ್ದರು. ಗಾಂಧೀಜೀಯನ್ನು ಆಕರ್ಷಿಸಿದುದೆಂದರೆ ಈ ಕಡೆಯ ಹಳ್ಳಿಗರಲ್ಲಿದ್ದ ಅಪೂರ್ವ ಶಿಸ್ತು ವಿಧೇಯತೆ. ಎಲ್ಲೆಲ್ಲಿಯೂ ಅಪಾರ ಜನಸಮುದ್ರವೇ ನೆರೆದಿದ್ದಿತಾದರೂ, ಹೋದಲ್ಲೆಲ್ಲಾ ಪಾದಸ್ಪರ್ಶಕ್ಕಾಗಿ ಮೇಲಾಟ ನಡೆದಿದ್ದರೂ ಜನರೆಲ್ಲಾ ಅತ್ಯಂತ ಶಾಂತಿ ಮತ್ತು ವ್ಯವಸ್ಥೆಯಿಂದ ವರ್ತಿಸಿದ್ದರು. ತನ್ನ ದಕ್ಷಿಣ ಭಾರತ ಸಂಚಾರದಲ್ಲಿ ಗಾಂಧಿಜೀ ಹಲವು ಅಮೂಲ್ಯಾನುಭವಗಳನ್ನು ಪಡೆದಿದ್ದಾರೆ. ಮದ್ರಾಸ್ ನಗರವು ಈ ಅವಧಿಯಲ್ಲಿ ಒಂದು ಮಹಾ ಯಾತ್ರಾಸ್ಥಳದಂತಿತ್ತು.

ರಶ್ಯಾ-ಬ್ರಿಟನ್ ವಾಗ್ವಾದ

ಲಂಡನಿನಲ್ಲಿ ನಡೆಯುತ್ತಿರುವ ಅಂತರ್ರಾಷ್ಟ್ರೀಯ ಭದ್ರತಾ ಕೌನ್ಸಿಲಿನ ಸಭೆಯಲ್ಲಿ ರಶ್ಯನ್ ಪ್ರತಿನಿಧಿಗಳ ನಾಯಕ ಎಮ್. ವಿಶಿನ್‌ಸ್ಕಿಯವರಿಗೂ ಬ್ರಿಟನಿನ ವಿದೇಶ ಮಂತ್ರಿ ಮಿ. ಬೆವಿನರಿಗೂ ತೀವ್ರ ವಾಗ್ವಾದ ನಡೆಯಿತು. ಗ್ರೀಸಿನಲ್ಲಿರುವ ಬ್ರಿಟಿಷ್ ಸೇನೆಗಳನ್ನು ಹಿಂದೆಗೆಯಬೇಕೆಂದೇ ವಿಶಿನ್‌ಸ್ಕಿಯ ವಾದ. "ಗ್ರೀಸಿನಲ್ಲಿ ಬಹಳಯಂ ಅನಾಹುತ ನಡೆದಿದೆ. ಅಲ್ಲಿರುವ ಬ್ರಿಟಿಷ್ ಸೇನೆಗಳನ್ನು ನಿಶ್ಶರ್ತವಾಗಿ ಕೂಡಲೇ ಹಿಂತೆಗೆಯಬೇಕು. ಒಂದು ಕಾಲದಲ್ಲಿ ಜರ್ಮನರನ್ನು ಓಡಿಸಲು ಗ್ರೀಸಿನಲ್ಲಿ ಬ್ರಿಟಿಷ್ ಸೇನೆಯಿರುವದಕ್ಕೆ ರಶ್ಯವು ಒಪ್ಪಿದ್ದುದು ನಿಜ. ಈಗ ಯುದ್ಧ ಮುಗಿದಿದೆ. ಇಲ್ಲಿ ಬ್ರಿಟಿಷ್ ಸೇನೆ ಇರುವದರಿಂದಾಗಿಯೇ ಆಂತರಿಕ ಶಾಂತಿಗೆ ಅಪಾಯ ತಟ್ಟಿದೆ" ಎಂದು ಆವೇಶಪೂರ್ಣವಾಗಿ ಖಂಡತುಂಡ ಮಾತುಗಳಿಂದ ರಶ್ಯನ್ ಪ್ರತಿನಿಧಿಯಾಡಿದ ಮಿ. ಬೆವಿನರದಕ್ಕೆ ಕಟುವಾಣಿಯ ಉತ್ತರ ಕೊಟ್ಟರು. 'ಗ್ರೀಕ್ ಸರಕಾರದ ಆಮಂತ್ರಣದಿಂದಲೇ ಬ್ರಿಟಿಷ್ ಸೇನೆ ಗ್ರೀಸಿನಲ್ಲಿದೆ. ಬ್ರಿಟಿಷರು ಲೋಕ ಶಾಂತಿ ಕೆಡಿಸುವ ಧೋರಣೆ ಇಟ್ಟುಕೊಂಡಿಲ್ಲ. ಆದರೆ ರಶ್ಯದ ಕಮ್ಯೂನಿಸ್ಟರು ಪ್ರತಿಯೊಂದು ದೇಶದಲ್ಲೂ ಅಪ ಪ್ರಚಾರ ಮಾಡುತಿದ್ದಾರೆ. ತಮ್ಮೊಳಗೆ ಮೈತ್ರಿಯೇ ಇಲ್ಲವೆಂಬಂತೆ ಬ್ರಿಟಿಷ್ ಧೋರಣೆಯ ಕುರಿತು ಮೋಸ್ಕೋದಿಂದ ಖಂಡನೀಯ ಅಪ ಪ್ರಚಾರ ನಡೆದಿದೆ" ಎಂದು ಮಿ. ಬೆವಿನರ ಮೇಜಿಗೆ ಬಡಿದು ಆಕ್ರೋಶದಿಂದ ಮಾತಾಡಿದರು. ನೋರ್ವೆಯ ವಿದೇಶ ಮಂತ್ರಿಯಾಗಿದ್ದ ಡಾ। ಟ್ರಿಗ್ವೇ ಲೀಯವರು ಜಾಗತಿಕ ಸಂಘದ ಮುಖ್ಯ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟಿದ್ದಾರೆ.

ಕೇಂದ್ರ ಎಸೆಂಬ್ಲಿಯಲ್ಲಿ

'ಹತ್ತೀ ನೂಲಿನ ಗಿರಣಿಗಳು ತಾವು ತಯಾರಿಸುವ ನೂಲಿನ ಕ್ಕಿ ನ್ನಾದರೂ ಕೈಮಗ್ಗಗಳ ಉಪಯೋಗಕ್ಕೆ ಕೊಡಬೇಕು. ಒಂದು ವರುಷದ ವರೆಗೆ ನೂಲನ್ನು ಹೊರ ದೇಶಗಳಿಗೆ ಕಳುಹಿಸುವದು ನಿಷೇಧಿಸಲ್ಪಡಬೇಕು-ಈ ನಿಯಮಗಳಿಗೆ ವೈಸರಾಯೀ ಕೌನ್ಸಿಲು ಕಾನೂನಿನ ರೂಪ ಕೊಡಬೇಕು' ಎಂದು ಶಿಫಾರಸು ಮಾಡುವ ನಿರ್ಣಯವು ಕೇಂದ್ರ ಎಸೆಂಬ್ಲಿಯಲ್ಲಾಗಿದೆ. ಈ ಸಂದರ್ಭದಲ್ಲಿ ಲೀಗ್ ಸದಸ್ಯರಾದ ಅಹಮ್ಮದ್ ಜಾಫರರು ಬರೆದು ತಂದ ಭಾಷಣವನ್ನೋದುತಿದ್ದಾಗ "ಸಭೆಯ ಸಾಮಾನ್ಯ ಪದ್ಧತಿಯಂತೆ ತಯಾರಿಸಿ ತಂದ ಭಾಷಣವನ್ನೋದುವದಲ್ಲ. ಹಾಗೆ ಮಾಡಿದರೆ ಚರ್ಚೆಯ ಸ್ವಾರಸ್ಯ ಕೆಡುತ್ತದೆ. ಮೆಂಬರರು ಎಲ್ಲರಿಗೂ ಅರ್ಥವಾಗುವಂತೆ ನಿಧಾನವಾಗಿ ಓದಲಿ" ಎಂದು ಅಧ್ಯಕ್ಷ ಮಾಲ್ವಂಕರರೆಂದರು. ಮತ್ತೊಬ್ಬ ಲೀಗ್ ಸದಸ್ಯರಾದ ಮಿ. ಅಬ್ದುಲ್ ರಹಿಮಾನ್ ಸಿದ್ದಿಕಿಯವರು ಅಧ್ಯಕ್ಷರನ್ನು ಕುರಿತು "ನೀವು ಆ ದಿನ ವಿರೋಧೀ ಪಕ್ಷದ ನಾಯಕರು ಬರೆದು ತಂದಿದ್ದ ಸುದೀರ್ಘ ಭಾಷಣವನ್ನು ಓದಲು ಬಿಟ್ಟಿದ್ದಿರಿ; ಈ ಸದಸ್ಯರನ್ನು ಆಕ್ಷೇಪಿಸುತ್ತೀರಿ" ಎಂದರು. "ಅಧ್ಯಕ್ಷರು ಪಕ್ಷಪಾತ ಮಾಡಿದರೆನ್ನುವದು ತಪ್ಪು" ಎಂದು ಅಧ್ಯಕ್ಷರೆಂದರು. ಆದರೆ ಸಿದ್ದಿಕಿಯವರು ಅದನ್ನೇ ಒತ್ತಿಒತ್ತಿ ಹೇಳಿದ್ದರಿಂದ "ಟೀಕೆಯನ್ನು ಹಿಂದೆಗೆಯಬೇಕು, ಇಲ್ಲವೇ ಹೊರನಡೆಯಬೇಕು" ಎಂದು ಅಧ್ಯಕ್ಷರ ಆಜ್ಞೆಯಾದಾಗ "ನಾನು ಸಂತೋಷದಿಂದ ಹೊರನಡೆಯುತ್ತೇನೆ" ಎನ್ನುತ್ತಾ ಮಿ ಸಿದ್ದಿಕಿಯವರು ಹೊರಟು ಹೋದರು.

ಆಂಗ್ಲೋ ಅಮೇರಿಕಾನರ ಮೇಲೆ ರಶ್ಯದ ಟೀಕೆ

ಪೆಲಸ್ತೈನಿನಲ್ಲಿ ಯೆಹೂದಿಗಳ ಪ್ರವೇಶ ಮಾಡುವ ಕುರಿತು ಆಂಗ್ಲೋ ಅಮೇರಿಕಾನರು ನೇಮಿಸಿದ ವಿಚಾರಣಾಸಮಿತಿಯನ್ನು ರಶ್ಯನ್ ಪತ್ರಿಕೆಗಳು ಬಹಿರಂಗವಾಗಿ ಖಂಡಿಸಿ ಅರಬರ ಬೇಡಿಕೆಯನ್ನು ಸಮರ್ಥಿಸುತ್ತಿವೆ. ಇಂಡೋನೇಶಿಯಾದ ಒಳಾಡಳಿತೆಯಲ್ಲಿ ಕೈ ಹಾಕಿರುವದನ್ನೂ ಮಧ್ಯ ಪೂರ್ವದ ಬ್ರಿಟಿಷ್ ಕಾರ್ಯಕಲಾಪಗಳನ್ನೂ ರಶ್ಯಾನರು ಇದೀಗ ಹೊಸತಾಗಿ ಟೀಕಿಸಹತ್ತಿದ್ದಾರೆ. ಇರಾನಿನ ರಶ್ಯನ್ ಧೋರಣೆಯನ್ನು ಬ್ರಿಟಿಷರು ಖಂಡಿಸುತಿದ್ದಾರೆ. ಟರ್ಕಿ ಮತ್ತಿತರ ಮಧ್ಯ ಪೂರ್ವ ರಾಷ್ಟ್ರಗಳಲ್ಲಿ ರಶ್ಯಾ ಮತ್ತು ಬ್ರಿಟನ್ ಅಮೇರಿಕಗಳೊಳಗೇಳಬಹುದಾದ ಘರ್ಷಣೆಯ ಪೂರ್ವ ಚಿಹ್ನೆಯಿದು ಎಂಬಂತೆ ಕಾಣುತ್ತಿದೆ.

ಪುತ್ತೂರು:—ಸ್ಥಳೀಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ಜಿಲ್ಲೆಯ ಸುಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಇದೇ ಬರುವ ತಾ23ನೇ ಶನಿವಾರ ರಾತ್ರಿ 9-30ಕ್ಕೆ ಸುಭದ್ರಾ ಕಲ್ಯಾಣವೆಂಬ ಕಥೆಯ ಯಕ್ಷಗಾನ ತಾಳಮದ್ದಳೆ ಸಮಾರಂಭವು ಜರಗಲಿರುವುದು. ಎಲ್ಲಾ ವಿದ್ಯಾಭಿಮಾನಿಗಳು ತಮ್ಮತಮ್ಮ ಶಕ್ತ್ಯಾನುಸಾರ ಧನ ಸಹಾಯ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸಲಾಗಿಯದೆ ಎಂದು ವಿದ್ಯಾರ್ಥಿ ಭವನದ ಅಧ್ಯಕ್ಷರಾದ ವಕೀಲ ಶ್ರೀ ಬೆಳ್ಳಿಪಾಡಿ ರಾಮ ರೈಗಳು ತಿಳಿಸುತ್ತಾರೆ.

ದಿಗಂಬರ ಜೈನಗುರುಗಳ ಆಗಮನ—ಕಳೆದ ತಾ 3ನೇ ಆದಿತ್ಯವಾರ ಸಾ। 5 ಗಂಟೆಸಮಯಕ್ಕೆ ಇಲ್ಲಿಯ ಜೈನಬಸದಿಗೆ ಇಬ್ಬರು ದಿಗಂಬರ ಜೈನಗುರುಗಳು ಆಗಮಿಸಿದರು. ಸ್ಥಳೀಯ ಜೈನ ಸಾಧುಗಳು ಬಿರುದಾವಳಿ, ವಾದ್ಯ ಘೋಷದೊಡನೆ ಬರಮಾಡಿಕೊಂಡರು. ತಾ 4 ಮತ್ತು 5ರಲ್ಲಿ ಧಾರ್ಮಿಕ ವಿಷಯದಲ್ಲಿ ಭಾಷಣಗಳು ನಡೆದವು.

ಉಡುಪಿ.

ಮಣಿಪಾಲ ಟೆಕ್ಸ್‌ಟೈಲ್ ಮಾಲಕರಿಗೆ ಉತ್ತರ—ಮಣಿಪಾಲ ಟೆಕ್ಸ್‌ಟೈಲ್ ಮಾಲಕರದೊಂದು ಪ್ರಕಟಣೆಯನ್ನು ತಮ್ಮ ಪತ್ರಿಕೆಯ ತಾ. 31-1-46ನೇ ಸಂಚಿಕೆಯಲ್ಲಿ ನೋಡಿದೆ. ನೇಕಾರ ಮಜೂರ ಸಂಘದ ಕಾರ್ಯದರ್ಶಿಯಾಗಿ ನಾನು ಇದು ಮೊದಲು ಎಷ್ಟೋಸಲ ಮಣಿಪಾಲಕ್ಕೆ ಹೋಗಿರುದು ಇದೆ. ಆ ಫೇಕ್ಟರಿಯಲ್ಲಿ ದ. ಕ. ಜಿಲ್ಲಾ ನೇಕಾರ ಮಜೂರ ಸಂಘದ ಉಡುಪಿ ಶಾಖೆಯಲ್ಲಿ ಸದಸ್ಯರಾಗಿರುವ 37 ನೇಕಾರರಿದ್ದಾರೆ. ಅವರೊಡನೆ ಆಗಾಗ ಸಂಘದ ವಿಚಾರ ಮಾತನಾಡಲು ಹೋಗುವ ರೂಢಿ ಇದ್ದರೂ ಮಾಲಕರ ಅಪ್ಪಣೆ ವಿನಹ ನಾನು ಇಷ್ಟರ ವರೆಗೆ ಫೇಕ್ಟರಿ ಒಳಗೆ ಹೋದುದಿಲ್ಲ. ಇತ್ತೀಚೆಗೆ ಅಲ್ಲಿನ ವೀವಿಂಗ್ ಮಾಸ್ಟರ್, ಇಸ್ರಾಯೇಲ್ ಸೋನ್ಸ್ ಎಂಬವರು ಅಲ್ಲಿನ ಕೆಲಸಗಾರನೊಬ್ಬನಿಗೆ ಹೊಡೆದರೆಂಬ, ಹಾಗೂ ಫೇಕ್ಟರಿಯೊಳಗೆ ನಡೆವ ಅನೇಕ ಕಿರುಕುಳಗಳ ಕುರಿತು ಸಂಘಕ್ಕೆ ಬಂದಿದ್ದ ರಿಪೋರ್ಟುಗಳ ವಿಚಾರವಾಗಿ ಸಂಘದ ಸದಸ್ಯರನ್ನು ಕಂಡು ಮಾತಾಡಲು ನಾನು ಅತ್ತ ಹೋಗಿದ್ದೆ. ವೀವಿಂಗ್ ಮಾಸ್ಟರನ್ನು ನಾನು ದಾರಿಯಲ್ಲೇ ಸಂಧಿಸಿ ಹೊಡೆತ ತಿಂದ ಕೆಲಸಗಾರನನ್ನು ಹೊಡೆದ ವಿಚಾರ ಅವರೊಡನೆ ಮಾತುಕತೆಯಾಡಿದೆ. ಹೊಡೆವ ಅಧಿಕಾರ ತನಗಿದೆಎಂದು ಶ್ರೀ ಸೋನ್ಸರು ಹೇಳಿದ್ದು ಅಂತಹ 'ಅಧಿಕಾರವು' ಕಾನೂನು ಪ್ರಕಾರ ಶಿಕ್ಷಾರ್ಹವಿದೆಯೆಂದು ನಾನು ಅವರಿಗೆ ಉತ್ತರ ಕೊಟ್ಟದ್ದೂ ಇದೆ. ಆದರೆ ಅಕ್ರಮ ಪ್ರವೇಶ ಅಥವಾ ಅಟಕಾಯಿಸುವಿಕೆಯ ವಿಚಾರ ನನಗೇನೂ ಗೊತ್ತಿಲ್ಲ. ಅಂತಹದೇನಾದರೂ ನನ್ನಿಂದಾಗಿ ಹೋಗಿದ್ದರೆ ನನ್ನನ್ನು ಮಾಲಕರು ಅಂದೇ ಪೋಲೀಸರ ವಶ ಒಪ್ಪಿಸಿಬಿಡುತ್ತಿದ್ದರು. ಈ ಘಟನೆ ನಡೆದ ಅನಂತರ ಇಬ್ಬರು ಕೆಲಸಗಾರರನ್ನು ವಿನಾಕಾರಣ ಮಾಲಿಕರುಕೆಲಸದಿಂದ ತೆಗೆದುಹಾಕಿದುದು ಡಿಸ್ಮಿಸ್ ಮಾಡಲ್ಪಟ್ಟವರನ್ನು ಪುನಃ ಕೆಲಸಕ್ಕೆ ಮಾಲಕರು ತೆಗೆದುಕೊಳ್ಳುವ ವರೆಗೆ ತಾವು ದುಡಿಯೆವೆಂದು ಇನ್ನು ಕೆಲವು ಕೆಲಸಗಾರರು ಹೊರನಿಂತುದು ನನಗೆ ಗೊತ್ತು. ಈ ವಿಚಾರ ಪಂಚಾಯತಿಗೆ ಪ್ರಯತ್ನ ಮುರಿದು ಬಿದ್ದು ಈಗ ಕೆಲಸಗಾರರು ನ್ಯಾಯಕ್ಕಾಗಿ ನ್ಯಾಯ ಬದ್ಧ ಚಳವಳವನ್ನು ಪ್ರಾರಂಭಿಸಿದ್ದಾರೆ ಎಂಬುದು ಊರಿನವರಿಗೇ ಗೊತ್ತು. ನನ್ನೊಡನೆ ಶ್ರೀ। ಸೋನ್ಸ್‌ರು ಮಾತಾಡುತ್ತಿದ್ದಾಗ ಅನೇಕ ಮಂದಿ ಕೆಲಸಗಾರರು ಅಲ್ಲಿದ್ದರು. ಆದರೆ ಅಪರ ಪ್ರಕಾ 'ಇಬ್ಬರ ಮೇಲೆ ಮಾತ್ರ ಮುದ್ದತ್ತಿನ ಆರೋಪ ಹಾಕಿ ಮಾಲಕರು ಕೆಲಸದಿಂದ ಡಿಸ್‌ಮಿಸ್ ಮಾಡಿದ್ದಾರೆ. ಇವರು ಆಶ್ಚರ್ಯ' ಆ ಇಬ್ಬರೂ ಅವರೊಡನೆ ಸಹಾನುಭೂತಿಗೋಸ್ಕರ ಹೊರಬಂದ ಇನ್ನಿತರರೂ ದ. ಕ. ಜಿಲ್ಲಾ ನೇಕಾರರ ಸಂಘದ ಉಡುಪಿ ಶಾಖೆಯ ಸದಸ್ಯರಿದ್ದಾರೆ. ಅವರಲ್ಲಿ ಯಾರೊಬ್ಬರೂ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಲ್ಲವೆಂದು ನನಗೆ ಗೊತ್ತಿದೆ. ಕೆಲಸಗಾರರ ಈ ಮೂಲ ಭೂತ ಸ್ವಾತಂತ್ರ್ಯವನ್ನು ಸದೆಬಡಿಯುವ ಪ್ರಯತ್ನವು ಮಣಿಪಾಲ ಟೆಕ್ಸ್‌ಟೈಲ್ ಮಾಲಕರು ಮತ್ತು ಅವರ ಕೈಯಾಳ್ಗಳಿಂದ ಹಲವು ರೀತಿಯಲ್ಲಿ ನಡೆಯುತ್ತಿರುವದೂ ಅದಕ್ಕಾಗಿಯೇ ಇಂತಹ ಅಪ ಪ್ರಚಾರ ಮತ್ತು ಆರೋಪ ಮಾಡುವದೂ ನ್ಯಾಯವೂ ಅಲ್ಲ ಘನತೆಯೂ ಅಲ್ಲ. ಕೆಲಸಗಾರರನ್ನು ವಿನಾಕಾರಣ ನೋಟೀಸು ಸಹ ಕೊಡದ ಡಿಸ್‌ಮಿಸ್ ಮಾಡಿದ ತಮ್ಮ ತಪ್ಪನ್ನು ಮರೆಮಾಡುವದಕ್ಕಾಗಿ, ಕೆಲಸಗಾರರ ಮೇಲೂ ಮಜೂರ ಸಂಘಟನಾಕಾರ್ಯಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಮಣಿಯುತ್ತಿರುವ ಕಮ್ಯೂನಿಸ್ಟ್ ಪಾರ್ಟಿಯ ಮೇಲೂ ಇಲ್ಲಸಲ್ಲದ ಆರೋಪ ಹೊರಿಸಿರುವದು ಶೋಚನೀಯವಿದೆ"

ಬಿ ಕೃಷ್ಣಪ್ಪ ಸಟ್ಟಿಗಾರ್
ಕಾರ್ಯದರ್ಶಿ ದ. ಕ ಜಿಲ್ಲಾ ನೇಕಾರರ ಸಂಘ ಉಡುಪಿ ಶಾಖೆ Regd 103 ಉಡುಪಿ

ನೂತನ ಸಂವತ್ಸರದ
(1946-1947)
ಶ್ರೀಪತಿ ಪಂಚಾಂಗ
ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.
ಬೆಲೆ 0—5—0.
ವಿಳಾಸ:-
ಶ್ರೀಪತಿ ನರಸಿಂಹ ಅಡಿಗ,
ಬೀಳೂರು ಗ್ರಾಮ, ಪೋಸ್ಟ್ ಕೋಟ.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
7 ತಾರೀಕು —2—46ರಿಂದ
ಪ್ರಗತಿ ಚಿತ್ರ
★ ದಿಲ್ಲಗೀ ★
ಕುಮಾರ್, ಶ್ಯಾಮಾ, ಆಗಾ, ಗುಲಾಬ್.
ಬರುವ ಚಿತ್ರ—
ಶರಾರತ್
ಕಿಶೋರ್ ಸಾಹು, ಪ್ರತಿಮಾದಾಸ್ ಗುಪ್ತಾ, ಬೆನರ್ಜೀ.

ಉಡುಪಿ.

ಟೀಚರ್ಸ್ ಕೋಪರೇಟಿವ್ ಸೊಸೈಟಿಯ ಪ್ರಸಿಡೆಂಟ್ ಶ್ರೀ. ಯು. ವೆಂಕಟ್ರಾಯರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗಲಿರುವ ಕಾರಣ ಅವರನ್ನು ಬೀಳ್ಕೊಡಲು ಕಳೆದ ಆದಿತ್ಯವಾರ ಮುನಿಸಿಪಲ್ ಮ್ಯೆನ್ ಶಾಲೆಯಲ್ಲಿ ಸಂಘದ ಸದಸ್ಯರು ಸತ್ಕಾರ ಕೂಟವನ್ನೇರ್ಪಡಿಸಿ ಶ್ರೀಯುತರಿಗೆ ಮಾನ ಪತ್ರವಿತ್ತು ಬೆಳ್ಳಿಯ ಕಪ್ಪನ್ನು ಉಡುಗೊರೆಯಿತ್ತರು.

ಕ್ರಿಶ್ಚಿಯನ್ ಹೈಸ್ಕೂಲಿನ ಸ್ಕೂಲ್ ಡೇ ಸಮಾರಂಭವು ಇದೇ ತಾ. 8 ಮತ್ತು 9 ನೇ ಸಂಜೆ 5-40 ಮತ್ತು 6 ಗಂಟೆಗೆ ಡಿ. ಮುನ್ಸಿಫ್ ಡಿ. ನೊರೋನ್ಹರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು.

ನಾಟಕಾಭಿನಯ—ಸ್ಥಳೀಯ ನಾಟ್ಯಕೂಟದವರು 'ಕಾಯಿದೆಭಂಗ' ಎಂಬ ನಾಟಕವನ್ನು ತಾ. 3ರಲ್ಲಿ ಡಾ। ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಮಣಿಪಾಲ ಎಕಡೆಮಿಯ ಸಹಾಯಾರ್ಥವಾಗಿ ಜಯಕರ್ನಾಟಕ ನಾಟ್ಯ ಸಂಘದವರ ರಂಗಭೂಮಿಯಲ್ಲಿ ಅಭಿನಯಿಸಿದರು. ಸುಮಾರು 700-ರಷ್ಟು ಸಂಗ್ರಹವಾಗಿರುವುದೆಂದು ತಿಳಿದು ಬರುತ್ತದೆ.

ಮಜೂರರ ಚಳವಳಿ-ಉಡುಪಿ ನೇಯಿಗೆ ಮತ್ತು ಬೀಡಿ ಕೆಲಸಗಾರರ ಚಳವಳಿಯು ಪ್ರಕಾರ ಸಾಗಿದೆ. "ಮೂರು ತಿಂಗಳ ಬೋನಸ್' ಮತ್ತು ಮಣಿಪಾಲ ಟೆಕ್ಸ್ಟೈಲಿನಿಂದ ತೆಗೆದು ಹಾಕಿದ ಕೆಲಸಗಾರರನ್ನು ಪುನಃ ಸೇರಿಸಿ ಕೊಳ್ಳಬೇಕೆಂಬ ಬೇಡಿಕೆಗಾಗಿ ಬುಧವಾರ ಶ್ರೀ ಎನ್. ಎಸ್. ಹೊಳ್ಳರ ಮತ್ತು ಶುಕ್ರವಾರ ಶ್ರೀ. ಬಿ. ಬಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಮೆರವಣಿಗೆಗಳಾದುವು.

ತಿದ್ದುಪಡಿ—ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಮಣಿಪಾಲದ ಸುದ್ದಿಯಲ್ಲಿಯ ತಾ. 24 1-46 ಎಂಬುದು ತಾ. 23-1 46 ಎಂದಾಗಬೇಕೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮಣಿಪಾಲ- ಕಳೆದ ತಾ. 23-1-46 ರಲ್ಲಿ ಉಡುಪಿಯ ನೇಕಾರರ ಸಂಘದ ಕಾರ್ಯದರ್ಶಿಗಳು ಸ್ಥಳೀಯ ಕಾರ್ಖಾನೆಯ ಆವರಣಕ್ಕೆ ಅಕ್ರಮ ಪ್ರವೇಶ ನಡಿಸಿ ಟೆಕ್ಸ್ಟೈಲ್ಸ್ ವೀವಿಂಗ್ ಮಾಸ್ತರ ಸುಪರ್ವೈಸರನ್ನು ಆಟಕಾಯಿಸಿ ಹೊಡೆಯಲು ಹೋದ ಕೃತ್ಯವನ್ನು ಮಣಿಪಾಲ ನೇಕಾರರ ಸಂಘವು ತೀವ್ರವಾಗಿ ಖಂಡಿಸುತ್ತದೆಂದೂ ಉಡುಪಿಯ ನೇಕಾರರು ಸತ್ಯಾಸತ್ಯವನ್ನು ಪರಿಶೀಲಿಸದೆ ಸ್ಥಳೀಯ ನೇಕಾರರನ್ನು ದೂಷಿಸಿ, ಸಂಘವನ್ನು ದ್ರೋಹಿಸಿ, ಸಭೆಗೂಡಿಸಿ ಮಾಡಿರುವ ಅಪಪ್ರಚಾರವನ್ನು ಈ ಸಂಘವು ಖಂಡಿಸುವದು ಮಾತ್ರವಲ್ಲದೆ ನಿಷೇಧಿಸುತ್ತದೆ ಎಂದೂ ಮಣಿಪಾಲ ನೇಕಾರರ ಸಂಘದ ಕಾರ್ಯದರ್ಶಿ ಶ್ರೀ. ಆರ್. ಎಸ್. ಪಡಿಯಾರರು ಬರೆಯುತ್ತಾರೆ.

BANK WITH THE LARGEST CONNECTIONS ON THE WEST COAST

OFFERS:-

EFFICIENT, PROMPT & COURTEOUS

SERVICE OF EVERY TYPE

OPEN AN ACCOUNT

with

The Canara Industrial & Banking Syndicate Ltd.

ESTD 1925

ಮಂಗಳೂರು.

ಬರೆಹಗಾರನ ಹಕ್ಕು ಕರ್ತವ್ಯ:- "ಸಾಹಿತಿ ತಾನು ಅನುಭವಿಸಿದ ದುಃಖ, ಸಂತೋಷ, ಆಕ್ರೋಶದಿಂದಾಗಿ, ಅವನಲ್ಲುಂಟಾದ ಬಲವಾದ ರಾಗವನ್ನೇ ಮಾತಿನಲ್ಲಿಳಿಸಬೇಕು" ಎಂದು ಶ್ರೀ। ಕೋಟ ಶಿವರಾಮ ಕಾರಂತರು ತಾ. ೨ರಂದು ಮಂಗಳೂರಿನ ಗಣಪತಿ ಹ್ಯಾಸ್ಕೂಲಿನ ವಠಾರದಲ್ಲಿ ಜರಗಿದ ಪ್ರಕಾಶ ಕೂಟದ ವಾರ್ಷಿಕೋತ್ಸವದ ಅಧ್ಯಕ್ಷರಾದಾಗ ತನ್ನ ಭಾಷಣದಲ್ಲಿ ಹೇಳಿದರು. ಸಭಾರಂಭದಲ್ಲಿ ಪ್ರಾರ್ಥನೆಯಾದೊಡನೆ ಕೂಟದ ಅಧ್ಯಕ್ಷರಾದ ಶ್ರೀ। ಕೆ. ಕೃಷ್ಣರಾಯರು ಪ್ರಕಾಶ ಕೂಟದ ಚಟುವಟಿಕೆಯನ್ನು ತಿಳಿಸಿ, ಅಧ್ಯಕ್ಷರನ್ನೂ ಸಭಿಕರನ್ನೂ ಸ್ವಾಗತಿಸಿದರು. ಶ್ರೀ। ಪಿ. ಕೆ. ನಾರಾಯಣರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿಗಳಾದ ಬೇಲಗದ್ದೆ ಗೋಪಾಲಕೃಷ್ಣ ಅವರು ಕೂಟದ ವರದಿ ಓದಿದ ಮೇಲೆ ಶ್ರೀಗಳಾದ ಬೇಲಗದ್ದೆ ಅಪ್ಪಯ್ಯ, ಎಂ. ವೆಂಕಟೇಶ ಪ್ರಭು, ಕಾರ್ಯಪಳ್ಳಿ ರಾಮಕೃಷ್ಣ ಶೆಟ್ಟಿ ಮತ್ತು ಸಾಂತಯ್ಯ ಭಟ್ಟರುಗಳು ಮಾತನಾಡಿದರು. ಶ್ರೀ। ರಾಮಕೃಷ್ಣ ಶೆಟ್ಟರು ಕನ್ನಡ ಬರೆಹಗಾರನ ಇಂದಿನ ಪರಿಸ್ಥಿತಿಯನ್ನೂ, ಬರೆಹಗಾರರಿಂದ ಕನ್ನಡಮ್ಮನ ಸೇವೆ ಮಾಡಿಸುವ ಪ್ರಕಾಶಕರ ರೀತಿ ನೀತಿಗಳನ್ನೂ ತಿಳಿಸಿದರು.

ಶ್ರೀ ಕಾರಂತರು

"ಶ್ರೀಯುತ ಶೆಟ್ಟರು ಹೇಳಿದಂತೆ ಕನ್ನಡ ಬರೆಹಗಾರನಿಗೆ ಪ್ರೋತ್ಸಾಹವಿಲ್ಲ. ಬರೆದವರಿಗೆ ದುಡ್ಡು ಕೊಡಬೇಕೆಂಬ ದುರ್ಬುದ್ಧಿಯಿಲ್ಲದಿರುವುದು ಕನ್ನಡ ಪ್ರಕಾಶಕರಲ್ಲಿ ಮಾತ್ರವಲ್ಲ; ಎಲ್ಲಾ ಪ್ರಕಾಶಕರಲ್ಲೂ ಆ ಬುದ್ಧಿ ಬಂದಿಲ್ಲ. ದೊಡ್ಡ ಪತ್ರಿಕೆಗಳಲ್ಲಿ ಪತ್ರಿಕೋದ್ಯೋಗಿಯಾಗಿ ಒಬ್ಬೊಬ್ಬರು ಹಣಸಂಪಾದಿಸಬಹುದು. ಇಲ್ಲವೇ ಟಾಗೋರರಂತಹ ಸಾಹಿತಿಯಾಗಿ ಹಣ ಸಂಗ್ರಹಿಸಿರಬಹುದಲ್ಲದೆ ಸಾಮಾನ್ಯ ಬರೆಹಗಾರ ಬರೆಹದಿಂದಲೇ ಜೀವನ ಸಾಗಿಸುವುದು ಕಷ್ಟವೆಂದರು.

"೧೯೨೦ರಿಂದ ೧೯೪೫ರ ವರೆಗಿನ ಈ ೨೫ ವರ್ಷಗಳ ನನ್ನ ಕನ್ನಡದ ಅನುಭವದಿಂದ ಹೇಳುವುದಾದರೆ ನಾವಿಂದು ಆಶಾಜನಕ ವಾತಾವರಣದಲ್ಲಿದ್ದೇವೆ. ಇಂದು ಕೆಲವು ಮಂದಿಗಾದರೂ ಓದುವ ಬುದ್ಧಿ ಬಂದಿದೆ. ಅವರಲ್ಲಿ ಕೆಲವರಿಗಾದರೂ ದುಡ್ಡು ಕೊಟ್ಟು ಓದುವ ಬುದ್ಧಿ ಬಂದಿದೆ. ಬರೆಹಗಾರನು ಓದುಗರು ತನ್ನ ಬರೆಹ ಓದುವಂತೆ ಮಾಡಬೇಕು. ಆ ಕಾರ್ಯವನ್ನು ಬರೆಹಗಾರನಿಂದು ಮಾಡಿದ್ದಾನೆಯೇ?" ಎಂದು ಕೇಳಿ ತನ್ನ ಬರೆಹಗಳಿಂದ ಪತ್ರಿಕೆಯ ಮ್ಹಾಲಕರು ಪತ್ರಿಕೆ ನಡಿಸುತ್ತಾರೆಂಬ ಭಾವನೆ ಬೇಡವೆಂದರು.

"ತನ್ನ ಹಕ್ಕು ಬಾಧ್ಯತೆಗಾಗಿ ಮಾತನಾಡುವ ಸಾಹಿತಿ ತನ್ನ ಕರ್ತವ್ಯವನ್ನೂ ತಿಳಿದಿರಬೇಕು. ಸಾಹಿತ್ಯವೆಂದರೆ ಹೃದಯದ ಒಂದು ರಾಗ ವಿಶೇಷ. ಒಂದು ಅನುಭವದ ಪ್ರತಿಕ್ರಿಯೆ, ನಿಮ್ಮ ದುಃಖದ, ರೋಷದ, ಹರ್ಷದ ರಸಾವೇಶದ್ದು ಮಾತಿನಲ್ಲಿಳಿಯಬೇಕು. ಎಲ್ಲಕ್ಕೂ ಮಿಗಿಲಾದುದು ತನ್ನ ಅನುಭವ. ನದಿಯ ಕುರಿತು, ಸೂರ್ಯಾಸ್ತದ ಕುರಿತು ಬರೆದ ಕವಿ, ಆ ನದಿಯಿಂದ, ಆ ಸೂರ್ಯಾಸ್ತದಿಂದ ಯಾವ ಸುಖವುಂಡಿದ್ದಾನೆಂಬುದನ್ನೂ ಯೋಚಿಸಬೇಡವೇ?" ಎಂದು ಹೇಳಿದ ಮೇಲೆ ವಿಮರ್ಶಕನು ಕವಿಯ ತತ್ವವನ್ನು ಒಪ್ಪಿಕೊಂಡು ತನ್ನ ಬಂಡವಾಳವನ್ನು ತಿಳಿದುಕೊಂಡು ವಿಮರ್ಶಿಸಬೇಕು. ವಿಮರ್ಶೆಯ ರೀತಿ, ನೀತಿ, ಶಾಸ್ತ್ರಗಳನ್ನೂ ಅರಿತಿರಬೇಕೆಂದು ಹೇಳಿ, 'ಸಾಹಿತ್ಯದಲ್ಲಿ ಅನುಭವ, ಅಭ್ಯಾಸ ಮುಖ್ಯವಲ್ಲದೆ ಇದರಲ್ಲಿ ಯಾವ ಅಮ್ಮನ ಸೇವೆಯೂ ಇಲ್ಲ'ವೆಂದರು.

ಆ ಮೇಲೆ ಕವನವಾಚನ, ನಾಟಕ ಮುಂತಾದ ಕಾರ್ಯಕ್ರಮಗಳಿಂದ ಕಾರ್ಯಕ್ರಮವು ಕೊನೆಗಂಡಿತು.

ಗ. ಕ. ದಾ. ಬ್ರಾ. ವಿದ್ಯಾರ್ಥಿ ಭವನದ ವಾರ್ಷಿಕೋತ್ಸವ-ವು ತಾ 3 ರಲ್ಲಿ ಶ್ರೀ। ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಪ್ರಾತಃಕಾಲದಲ್ಲಿ ಬಂದ ಅತಿಥಿ ಹಾಗೂ ಭವನದಲ್ಲಿಯ ಸಕಲ ನಿವಾಸಿಗಳಿಗೂ ಉಪಾಹಾರ ವ್ಯವಸ್ಥೆಯನ್ನು ಮಾಡಲಾಗಿತ್ತು.

ಸಾಯಂಕಾಲ ಗಂಟೆ ೫-೩೦ಕ್ಕೆ ಸಮಾರಂಭದ ಕಾರ್ಯವು ಪ್ರಾರಂಭಿಸಲ್ಪಟ್ಟು ಮೊದಲಿಗೆ ಪ್ರಾರ್ಥನೆಯಾದ ಬಳಿಕ ಶ್ರೀ। ಕೆ. ರಾಮಕೃಷ್ಣ ಭಟ್ಟರು ಸ್ವಾಗತ ಭಾಷಣವನ್ನು ಮಾಡಿದರು. ಸಂಘದ ಕಾರ್ಯದರ್ಶಿ ಶ್ರೀ। ಸುಬ್ರಹ್ಮಣ್ಯ ಭಟ್ಟರು, ಗತವರ್ಷದಲ್ಲಿಯ ಈ ಸಂಘದ ಚಟುವಟಿಕೆಗಳ ವರದಿಯನ್ನು ಓದಿದರು. ಬಳಿಕ ಶ್ರೀ। ರಾಘವೇಂದ್ರರಾಯರವರಿಂದ ಸ್ವಸ್ತಿ ವಾಚನ, ಶ್ರೀ। ಕಕ್ಕಿಲ್ಲಾಯರವರಿಂದ ಈ ಸ್ವಸ್ತಿ ವಾಚನಕ್ಕೆ ಉತ್ತರಿಸುವ ಭಾಷಣಗಳು ನಡೆದುವು. ಶ್ರೀಗಳಾದ ಎಮ್. ಎಸ್. ಅಧಿಕಾರಿ ಮತ್ತು ರಾಮರಾವ್ ಅವರುಗಳು ವಿದ್ಯಾರ್ಥಿಗಳಿಗೆ ಕೆಲವು ಹಿತೋಕ್ತಿಯ ಮಾತುಗಳನ್ನಾಡಿದರು. ಬಳಿಕ ಭವನದ ವಾರ್ಡನ್‌ರಾದ ಶ್ರೀ। ಬಿ. ವಿ. ಕೃಷ್ಣಯ್ಯನವರ ಭಾಷಣವಾಯಿತು. ಅಧ್ಯಕ್ಷರಾದ ಶ್ರೀ ಶಿವರಾಮ ಕಾರಂತರು ವಿದ್ಯಾರ್ಥಿಗಳು ರಾಜಕೀಯ ಸಮಸ್ಯೆಯನ್ನು ಮೊದಲು ಕೂಲಂಕುಶವಾಗಿ ಅರಿತುಕೊಳ್ಳಬೇಕು ಎಂದು ದೀರ್ಘ ಭಾಷಣ ಮಾಡಿದರು.

The Pangal Nayak Bank Limited.

(Incorporated in 1920.)

Registered Office. Court Road, UDIPI.

Sub-Offices at— **Udipi, Mangalore, Katapadi, Kanhangad, Kinnigoli, Nileshwar and Suratkal**, South Canara.

SEASON DEPOSITS for THREE & FOUR

months at a special rate of interest are accepted at all the above offices.

All kinds of up-to-date Banking service is provided promptly.

Please call for particulars of business

Dated the 5th January 1946.

ವನಸ್ಪತಿ ತುಪ್ಪ ಕಳ್ಳಸಂತೆಯಲ್ಲಿ ಸರ್ವಥಾ ಕೊಂಡುಕೊಳ್ಳಬೇಡಿರಿ.

ಕಾರಣ ನಮ್ಮಲ್ಲಿ **ಶಕ್ತಿವರ್ಧಕ ತೈಲವು** ಯಥೇಚ್ಛವಿದೆ. ಈ ತೈಲದ ಉಪಯೋಗದಿಂದ ನರೆತ ಕೂದಲು ಕಪ್ಪಾಗುವುದು. ಮಾತ್ರವಲ್ಲದೆ ಕೂದಲು ಉದುರುವುದನ್ನು ತಡೆಗಟ್ಟಿ ಕೂದಲು ರಾಶಿಯನ್ನೆ ಬೆಳೆಸುವುದು. ವಾತಕ್ಕೆ ರಾಮಬಾಣದಂತಿರುವುದು.

ಡಿಸ್ಟ್ರಿಬ್ಯೂಟರ್ಸ್‌ರೊಡನೆ ಹೆಚ್ಚಿನ ಮಾಹಿತಿ ಪಡೆಯಿರಿ

ಸ್ವದೇಶಿ ವನಸ್ಪತಿ ಮೆನ್ಯುಫೆಕ್ಚರಿಂಗ್ ಲಿಮಿಟೆಡ್,

ಪ್ರೊಸ್ಪೆಕ್ಟ್ ಚೇಂಬರ್ಸ್, ಹೊರ್ನ್ಬಿ ರೋಡು, ಫೋರ್ಟ್ ಬೊಂಬಾಯಿ.

ವನಸ್ಪತಿ ತುಪ್ಪ, ಸಾಬೂನು, ಶೋಂಡ್ರಿ ಚಿಪ್ಸ್, ಬಮ್ಮಾ ಮೇಣಬತ್ತಿಗಳು, ಇತ್ಯಾದಿ ಇತ್ಯಾದಿಯನ್ನೇ ಸದಾ ಸರ್ವದಾ ಉಪಯೋಗಿಸಿರಿ

SWADESHI VANASPATHI MANUFACTURING LTD,

Prospect Chambers, Hornby Road, FORT BOMBAY.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಆ ಬಿನ್ನನ ಬಾಟ್ಲುಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ಬಾಟ್ಲುಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ. ಕ.**

THE UDIPI BANK LIMITED.

(ESTD. 1925)

NOTICE

Application having been received from Mr. K. Jagannatha Nayak, son of Mr. K. Subbanna Nayak, Manager, Modern Higher Elementary School, Udipi, for issue of 3 duplicate share-certificates in lieu of the original ones numbered 1575 to 1577 (all inclusive) alleging that the original share-certificates have been lost or mislaid, it is hereby notified that duplicates will be issued to the above-named applicant unless objections in writing are lodged at the registered office of the Bank at Udipi on or before 17th March, 1946.

Office of the Bank, UDIPI. Dated 5th Febry, 46. } (Sd.) ... Prabhu, MANAGER.

ಮಂಗಳೂರು.

ಅಡಿಕೆ ಸುಂಕ ನಿಷೇಧ:—ಕೆನರಾ ಚೇಂಬರ್ ಒಫ್ ಕಾಮರ್ಸಿನ ಸಭೆಯೊಂದು ತಾ. ೩೧ರಂದು ಜ. ಮಹಮ್ಮದ್ ಶೇಟರ ಅಧ್ಯಕ್ಷತೆಯಲ್ಲಿ ನೆರೆದಾಗ ಚೇಂಬರಿನ ಕಾರ್ಯದರ್ಶಿಗಳಾದ ಉಮಾನಾಥ ಭಂಡಾರಿ ಅವರು ಅಡಿಕೆಯ ಮೇಲಿನ ಅಬ್ಕಾರಿ ಸುಂಕವನ್ನು ಒಂತೆಗೆಯಬೇಕೆಂಬ ಠರಾವನ್ನು ಸಭೆಯ ಮುಂದಿಟ್ಟರು. ಆಮಂತ್ರಿತರಾಗಿ ಸಭೆಗೆ ಬಂದಿದ್ದ ಶ್ರೀ ಜಿ. ಕೆ. ಗೋವಿಂದ ಭಟ್ಟರು ಮಾತನಾಡುತ್ತ ದೇಶೀಯ ಅಡಿಕೆಯ ಮೇಲೆ ಸರಕಾರ ಹೊರಿಸಿರುವ ಅಬ್ಕಾರಿ ಸುಂಕ, ವಿದೇಶಿ ಅಡಿಕೆಗಳ ಮೇಲಿನ ಆಯಾತ ಸುಂಕ ಇತ್ಯಾದಿಗಳ ಕುರಿತು ಮಾತನಾಡಿದರು. ಠರಾವು ಮಾನ್ಯವಾಗಿ ಕೇಂದ್ರ ಸರಕಾರದ ಅರ್ಥಸಚಿವರಿಗೂ, ಸೆಂಟ್ರಲ್ ಬೋರ್ಡ್ ಆಫ್ ರೆವಿನ್ಯೂ ಇದರ ಕಾರ್ಯದರ್ಶಿಗಳಿಗೂ, ಪ್ರಾಂತೀಯ ಸೆಂಟ್ರಲ್ ಎಕ್ಸೈಸ್ ಕಲೆಕ್ಟರರಿಗೂ ಅದರ ಪ್ರತಿಯನ್ನು ಕಳುಹಲಾಯಿತು. ಕೆನರಾ ಚೇಂಬರ್ ಒಫ್ ಕಾಮರ್ಸ್, ಕೃಷಿಕರ ಭಂಡಸಾಲೆ ಮತ್ತು ವರ್ತಕ ವ್ಯವಸಾಯ ಸಂಘದವರು ಪ್ರತ್ಯಪ್ರತ್ಯೇಕವಾಗಿ ತಂತಿಗಳನ್ನೂ ಕೇಂದ್ರ ಅರ್ಥಸಚಿವರಿಗೆ ಕಳುಹಿಸಿ ಸುಂಕವನ್ನು ನಿಷೇಧಿಸಿವೆ.

ಅಡಿಕೆ ವ್ಯವಸಾಯದ ಕೇಂದ್ರಗಳಲ್ಲೆಲ್ಲ ಸುಂಕ ನಿಷೇಧ ದಿನವು ಆಚರಿಸಲ್ಪಟ್ಟಿತು.

ಹಸುಗೆಯ ಪ್ರಕಟಣೆ ಭೂಮಾಲಿಕರಿಗೆ ಕೊಡತಕ್ಕ ಗೇಣಿಯಿಂದ ಭೂಮಾಲಿಕರಿಗೆ ಉಳಿಕೆಯಾದರೂ ಭತ್ತ ಅಥವಾ ಅಕ್ಕಿಯನ್ನು ಸ್ಟೋರಿಗೆ ಹಾಕಲು ರೇಶನ್ ಕಾನೂನು ಪ್ರಕಾರ ಹುಕುಂ ಕೊಟ್ಟರುತ್ತ, ಅದನ್ನು ಅಥವಾ ಅದರ ಯಾವ ಅಂಶವನ್ನಾದರೂ ಭೂಸ್ವಾಮಿಕರು ಒಕ್ಕಲುಗಳಿಂದ ನಗದಿ ಗೇಣಿ ಪಡಕೊಂಡು ಅಕ್ಕಿ ಅಥವಾ ಭತ್ತವನ್ನು ಒಕ್ಕಲುಗಳಿಗೆ ಉಪಯೋಗಿಸಲಿಕ್ಕೆ ಬಿಟ್ಟರೆ ಅದು ತಪ್ಪಾಗುತ್ತದೆ. ಅಂಥಾ ಭತ್ತ ಅಥವಾ ಅಕ್ಕಿಯು ಮಾರಾಟವಾಗಿದೆ ಎಂಬ ತಪ್ಪನ್ನು ಹೊರಿಸಿ ಭೂಸ್ವಾಮಿಕರ ಮೇಲೆ ಪ್ರೊಸಿಕ್ಯೂಶನ್ ವ್ಯವಹರಣೆ ನಡಿಸಲಾದೀತು. ಒಕ್ಕಲುಗಳು ಧಾನ್ಯ ಉಳಿಕೆಯನ್ನು ಸ್ಟೋರಿಗೆ ಕೊಡದೆ ಬೇರೆ ವಿಧವಾಗಿ ಉಪಯೋಗಿಸಿದರೆ ಅವರ ಮೇಲೆ ಪ್ರೊಸಿಕ್ಯೂಶನ್ ವ್ಯವಹರಣೆ ನಡಿಸಲಾದೀತು—ಎಂದು ಹಸುಗೆ ಅಧಿಕಾರಿಗಳು ಪ್ರಕಟಿಸುತ್ತಾರೆ.

ಹಸುಗೆ ಅಂಗಡಿಗಳಿಗೆ ಆದಿತ್ಯವಾರ ಇಡೀ ದಿನ ರಜೆ ಸರಕಾರವು ಇತ್ತೀಚೆಗೆ ಜಾರಿಗೆ ತಂದಿರುವ ವಾರಕ್ಕೊಂದು ದಿನ ರಜೆ ಎಂಬ ಶಾಸನದಂತೆ ಮಂಗಳೂರು ಮುನಿಸಿಪಾಲಿಟಿ ಒಳಗಿನ ಎಲ್ಲಾ ಹಸುಗೆ ಅಂಗಡಿಗಳು ಆದಿತ್ಯವಾರ ಇಡೀ ದಿವಸ ಮುಚ್ಚಲ್ಪಡುವವು ಎಂದು ಹಸುಗೆ ಅಧಿಕಾರಿಗಳು ಪ್ರಕಟಿಸುತ್ತಾರೆ.

ನಗರದಲ್ಲಿ ಪ್ಲೇಗು—ಜನರಿಗೆ ತಗಲದಿದ್ದರೂ, ಅಲ್ಲಲ್ಲಿ ಇಲಿಗಳು ಬೀಳುತ್ತಿವೆ; ಹಳನೀರಿನಲ್ಲೊಂದೆಡೆ ಬಿದ್ದ ಇಲಿಯು ಪ್ಲೇಗಿನ ಇಲಿ ಎಂದು ಗೊತ್ತಾಗಿದೆ.

ಕರ್ನಾಟಕ ಸಂಘ ಸ್ಥಾಪನೆಗಾಗಿ ಉಡುಪಿಯ ಶ್ರೀ ರಾಜಗೋಪಾಲ ಕೃಷ್ಣರಾಯರು ಮಂಗಳೂರಿಗೆ ಬಂದಿದ್ದು, ತಾ. ೨೬ರಂದು ಥಿಯೊಸಾಫಿಕಲ್ ಲಾಜಿನಲ್ಲಿ ಕನ್ನಡಾಭಿಮಾನಿಗಳ ಸಭೆಯೊಂದು ಶ್ರೀ ಕೆ ಆರ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿದಾಗ ಸಾಹಿತ್ಯ ಪರಿಷತ್ತಿನ ಪ್ರಾಂತೀಯ ಸಮಿತಿ ಮತ್ತಿತರ ಸಾಹಿತ್ಯಕ ಕೂಟಗಳಿರುವುದರಿಂದ ಕರ್ನಾಟಕ ಸಂಘ ಸ್ಥಾಪನೆಯ ಅವಶ್ಯಕತೆ ಇದೆಯೇ? ಎಂದು ಚರ್ಚಿಸಲ್ಪಟ್ಟಿತು. ಕೊನೆಗೆ ತಕ್ಕಷ್ಟು ಪ್ರೋತ್ಸಾಹ ದೊರೆತರೆ ಸ್ಥಾಪಿಸುವುದೆಂದಾಗಿ, ಶ್ರೀ ಕೆ ಕೃಷ್ಣರಾಯರಿಗೆ ಸದಸ್ಯರನ್ನು ಸೇರಿಸುವ ಅಧಿಕಾರವನ್ನು ಕೊಡಲಾಯಿತು.

ಅಕ್ಕಿ ಒಪ್ಪಿಸುವ ಆಖೈರು ತಾರೀಕು—ಸ್ಟೋರುಗಳಿಗೆ ಪ್ರಥಮ ಬೆಳೆಯ ಕೊನೆಯ ಕಂತಿನ ಅಕ್ಕಿಯನ್ನು ಒಪ್ಪಿಸುವ ... 15 2 '46ರ ... ಕಲೆಕ್ಟರರು ಮುಂದರಿಸಿರುತ್ತಾರೆ. ನಂತರ ಒಪ್ಪಿಸಲಾಗುವ ಅಕ್ಕಿಗೆ ... ದಂಡ ಹಾಕಲಾಗುವುದೆಂದು ಸಹ ಸೂಚಿಸಿರುತ್ತಾರೆ.

ಪ್ರತಿನಿಧಿ ಚುನಾವಣೆ ಮುಂದೆ ಬಿತ್ತು—ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ತಮ್ಮ 25ನೆಯ ತಾರೀಖಿನ ಪಂಪತ್ರದಲ್ಲಿ ಪ್ರತಿನಿಧಿ ಚುನಾವಣೆ ಮುಂದೆ ಬಿದ್ದ ಬಗ್ಗೆ ಬರೆದಿರುವರು. ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನ ಕೂಡುವ ಸ್ಥಳ ಹಾಗೂ ವೇಳೆ ನಿಶ್ಚಿತವಾಗಿಲ್ಲವಾದ್ದರಿಂದ ಕಾಂಗ್ರೆಸ ವರ್ಕಿಂಗ ಕಮಿಟಿಯವರು ನಿಶ್ಚಯಿಸುವರು. ಪ್ರತಿನಿಧಿ ಚುನಾವಣೆ ಮೊದಲಿನ ವೇಳಾಪತ್ರಿಕೆಯಂತೆ 13-2-1946ನೇ ದಿವಸ ಜರಗಬೇಕಾಗಿದ್ದು ಈಗ 23-3-1946ರ ವರೆಗೆ ಮುಂದುವರಿಸಿರುತ್ತಾರೆ. ಹೊಸದಾಗಿ ಪ್ರಸಿದ್ಧಿಸಿದ ವೇಳಾಪತ್ರಿಕೆಯು ಈ ಕೆಳಗಿನಂತೆ ಇರುತ್ತದೆ. ಅಖಿಲ ಭಾರತ ಕಾಂಗ್ರೆಸ ಕಮಿಟಿಗೆ ಸದಸ್ಯರ ಯಾದಿಯನ್ನು ಒಪ್ಪಿಸುವದು 15-2 46 ಪ್ರತಿನಿಧಿಗಳ ಚುನಾವಣೆ 23 3-46 ಚುನಾಯಿತ ಪ್ರತಿನಿಧಿಗಳ ಯಾದಿಯನ್ನು ಅಖಿಲ ಭಾರತ ಕಾಂಗ್ರೆಸ ಕಮಿಟಿಗೆ ಕಳಿಸುವದು 4-4-46. ಅಧ್ಯಕ್ಷರ ಆಯ್ಕೆಗಾಗಿ ಹೆಸರುಗಳನ್ನು ಸೂಚಿಸುವದು 9-4-46 ಅಧ್ಯಕ್ಷ ಸ್ಥಾನಕ್ಕೆ ಬಂದ ಹೆಸರುಗಳನ್ನು ಪ್ರಸಿದ್ಧಿಸುವದು 11 4 46 ಅಧ್ಯಕ್ಷರನ್ನು ಆರಿಸಲು ಮತ್ತು ಅಖಿಲ ಭಾರತ ಕಾಂಗ್ರೆಸ ಸದಸ್ಯರನ್ನು ಆರಿಸಲು ಪ್ರಾಂತದಲ್ಲಿ ಪ್ರತಿನಿಧಿಗಳ ಸಭೆ 26-4 46

ಮದ್ರಾಸು

ಆಂಧ್ರ, ತಮಿಳುನಾಡುಗಳ ರೇಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯ ಪರವಾಗಿ ಶ್ರೀಗಳಾದ ಎ ಕೆ ಪಿಳ್ಳೈ, ಕೆ. ಎಸ್ ಶೆಟ್ಟಿ, ಜಿ. ಎಸ್ ... ಗಳವರು ಕೆನಡಾದ ಹೊಟೆಲಿನಲ್ಲಿ ಪ್ರಿಟಿಶ್ ನಿಯೋಗದವರನ್ನು ಭೇಟಿಯಿತ್ತು ತ... ...ಗಳನ್ನೊಳಗೊಂಡ ... ಒಪ್ಪಿಸಿದರು.

ಗಾಂಧಿಜಿ ಕೂಡೆ ಮಾತುಕತೆ—ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ... ದರ್ಶಿಯವರಾದ ಶ್ರೀ. ಬಿ ಸುಬ್ಬಣ್ಣ ಶೆಟ್ಟರು ಗಾಂಧಿಜಿಯವರನ್ನು ಭೇಟಿಮಾಡಿ ಅನಾಥರ ರಕ್ಷಣೆ, ಅಂಗಹೀನರಾದವರ ಆರೈಕೆ, ಕ್ಷಯರೋಗಾದಿಗಳಿಗೆ ತುತ್ತಾದವರ ಬಗ್ಗೆ ಕಾಂಗ್ರೆಸು ಏನಾ ಕೊಡಬೇಕಾಗಿ ಸೂಚಿಸಿದರು. ಹಳ್ಳಿಗಳಲ್ಲಿ ಬಡಜನರಿಗೆ ಸರಾಗವಾಗಿ ದೇಶೀಯ ಔಷಧಗಳು ಸಿಕ್ಕುವುದು ಕಷ್ಟಸಾಧ್ಯವಾಗಿದೆ. ಈ ಭಾಗದಲ್ಲಿ ದೇಶೀಯ ಔಷಧಗಳಿಗೆ ಕಾಂಗ್ರೆಸು ಹಾಗೂ ಮಹಾನುಭಾವರು ಬೆಂಬಲಕೊಡಬೇಕಾಗಿದೆ. ಸೇವಾಗ್ರಾಮದಲ್ಲಿ ರಿಸರ್ಚ್ ಲಿಬೊರೇಟರಿ ಸ್ಥಾಪನೆಯಾಗಬೇಕು. ಮದ್ಯಪಾನ ನಿಷೇಧ ಚಳವಳಕ್ಕಿಂತ ಮೇಲೆ ಸೂಚಿಸಿದ ವಿಷಯಗಳು ಅತೀ ಮಹತ್ವದೆಂದು ಒತ್ತಿಹೇಳಿದರು. ಶ್ರೀ ಶೆಟ್ಟರು ಕೊಟ್ಟ ಸೂಚನೆಗಳನ್ನು ಗಾಂಧಿಜಿಯವರು ನೋಟುಮಾಡಿಕೊಂಡು ಆ ವಿಷಯದಲ್ಲಿ ತಕ್ಕ ವ್ಯವಸ್ಥೆ ಮಾಡಲೆತ್ನಿಸಲಾಗುವುದೆಂದು ಉತ್ತರವಿತ್ತರು. ಕಾಂಗ್ರೆಸ್ ವಿಧಾಯಕ ಕಾರ್ಯಕ್ರಮದಲ್ಲಿ ಮದ್ಯಪಾನ ನಿಷೇಧವು ಅತೀ ಮಹತ್ವದ್ದಿರುವುದರಿಂದ ಅದರ ಪ್ರಾಮುಖ್ಯತೆಯನ್ನು ಕಡಿಮೆಮಾಡಲು ನಾನು ತಯಾರಿಲ್ಲವೆಂದು ಗಾಂಧಿಜಿಯವರು ಹೇಳಿದರು.

ಕುಂದಾಪುರ—ಹರಿಜನ ಸೀಟಿನ ನಾಮಪತ್ರ ಮತ್ತು ಅದರ ಪರಿಶೀಲನೆಯ ಸುದ್ದಿಯು ಈ ಸಂಚಿಕೆಯ ಇನ್ನೊಂದೆಡೆಯಲ್ಲಿ ಪ್ರಕಟವಾಗಿದೆ. ಕಾಂಗ್ರೆಸ್ ಉಮೇದ್ವಾರರ ಹೆಸರು ಲಿಸ್ಟಿನಲ್ಲಿದ್ದುದರಿಂದ ನಾಮಪತ್ರ ಪರಿಶೀಲನೆಯು ಫೆಡರೇಶನಿನ ಉಮೇದ್ವಾರರಿಗೆ ಸರಿಕಾಣದೆ ಅವರು ಹೊರನಡೆದರೆಂದೂ ಆ ಕಾರಣಕ್ಕಾಗಿಯೇ ಇಬ್ಬರು ಮಾತ್ರ ಕಡ್ಡಾ ಉಮೇದ್ವಾರಿಕೆಯನ್ನು ಹಿಂದೆಗೆದರು ವರೆಂದೂ, ಈ ಕುರಿತು ಸರಕಾರಕ್ಕೆ ತಂತಿ ಕಳಿಸಲಾಗಿದೆಯೆಂದೂ, ಅದೇ ರಾತ್ರಿ ಗಂಗೊಳ್ಳಿಯಲ್ಲಿ ಹಿಂದುಳಿದ ಜಾತಿಯವರ ಈ ಕುರಿತಾದ ನಿಷೇಧ ಸಭೆ ಜರಗಿತೆಂದೂ ಫೆಡರೇಶನಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮುದ್ರಾಡಿ—ತಾ 23 1 46ರಲ್ಲಿ ಶ್ರೀ ನೇತಾಜಿ ಸುಭಾಸ ಚಂದ್ರ ಬೋಸರ ಜನ್ಮ ದಿನಾಚರಣೆಯು ಶ್ರೀ ಯಂ ವಾದಿರಾಜ ಕಲ್ಕೂರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರೂ, ಅಧ್ಯಕ್ಷರೂ ಶ್ರೀ ಸುಭಾಸರ ಜೀವನ ಚರಿತ್ರೆಯನ್ನು ವಿವರಿಸಿದರು. ಶ್ರೀ ಬೋಸರ ಸ್ಮಾರಕವಾಗಿ ಇಲ್ಲಿ ಒಂದು ಕಾಂಗ್ರೆಸ್ ಭವನವನ್ನು ಕಟ್ಟಿಸಬೇಕೆಂದು ನಿರ್ಣಯಿಸಲಾಯಿತು. ತಾ 26 1 46ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಮೂಲ್ಕಿ—ಒಪ್ಪಕಾದ ಶ್ರೀ ವೆಂಕಟರಮಣ ದೇವಾಲಯದಲ್ಲಿ ಕಳೆದ ಆಗೋಸ್ತು ತಾ 22ಕ್ಕೆ ಪ್ರಾರಂಭವಾಗಿ ಎಡೆಬಿಡದೆ ನಡೆಯುತ್ತಿದ್ದ ಶ್ರೀ ಮುಷ್ಕಾಲ್ಕಿಕೆ ರಾಮಾಯಣದ ಪ್ರವಚನದ ಮಂಗಳ ಮಹೋತ್ಸವವು, ಇದೇ ತಾ 2ರಲ್ಲಿ ಸಂಭ್ರಮದಿಂದ ಜರಗಿತು. ಪ್ರವಚನಕಾರರಾದ ಶ್ರೀ ನಿಡ್ಡೋಡಿ ಗುರುರಾಜ ಭಟ್ಟರು ಪ್ರತಿದಿನವೂ ಅತ್ಯಾದರದಿಂದ ಬಂದು ಉತ್ತೇಜನವನ್ನಿತ್ತ ಪ್ರೋತ್ಸಾಹಕ ಸಮುದಾಯಕ್ಕೆ ಧನ್ಯವಾದಗಳನ್ನರ್ಪಿಸಿದರು. ಶ್ರೀ ವಿದ್ವಾನ್ ಸುರತ್ಕಲ್ ಸುಬ್ಬರಾಯರು, ಪ್ರವಚನಕಾರರ ಈ ನಿಷ್ಕಾಮ ಕರ್ಮವನ್ನು ಅಭಿನಂದಿಸಿ, ಶ್ರೀ ರಾಮನ ಲೋಕಾದರ್ಶನಾದ ಸದ್ಗುಣಗಳನ್ನು ವರ್ಣಿಸಿ ಭಾಷಣವಿತ್ತರು.

NOTICE.

In the Court of the District Munsif of Puttur.

Original Suit No 263 of 1945

Koraga Gowda and 7 others -Plaintiffs

Vs.

Manku Gowda and 7 others -Defendants

Notice is hereby given to the 8th Defendant M. Ramachandra Shanbhogue, son of Narayana Shanbhogue residing in Manjeshwar of Hosabettu village, Kasargod Taluk, that the Plaintiffs have instituted the above suit for partition of plaint properties into three equal shares and delivery of one such share to Plaintiffs 1 to 7 and the 8th Plaintiff be put in possession of one such share with regard to good and bad soil and also prayed for mesne profits, costs of suit etc., and the same stands posted to 19 2-1946 You are hereby informed that in case you have any objection, you must file your statement before the above Court on the said date at 10 A. M. Failing which you will be declared exparte and the suit will be decided in your absence.

(By order of Court.)

(Sd.) P. Krishna Bhat,
Vakil for Plaintiffs

Puttur,
19-1-1946.

TENDER NOTICE

Sealed tenders will be received by the undersigned for the work of reconstructing the K... Sri Durga Parameshwari Temple Buildings by 5 p. m. on Saturday the 23rd February 1946 The tender documents will be available in the office of the undersigned on payment of Rs. 2/- and the Drawings and specifications will also be made available there or they could be seen in the office of Sri V. M. S Rao Talithaya, A. M. I. S. E, Consulting Architect Modern Homes, Municipal office Road, Mangalore

Estimate Rs 45,000/-

Mangalore,
19th January, 1946.

P. Sanjiva Rao, B.A., B.L.,
Advocate, Mangalore.
President, Sri Katil Durga Parameshwari Temple Renovation Fund Committee.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತೆಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀದಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧-೦-೦

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಘಾರ್ಮಸಿ, -ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಬೆಳಗಾವಿಯಲ್ಲಿ —ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ನಾಮೆಂ, ಬ್ಯಾಡಗಿ

Ayurveda Oushadalaya, GADAG CITY

1000's SAVED

MARGARET'S

FITS CURE

Stops children's fits in 3 minutes.

Ask your chemist for a box.

Sole Agents:

BRIGHTSTAR AGENCIES,
Hospital Rd., Udipi, S. K.

ದಕ್ಷಿಣ ಕನ್ನಡ.

ಕಿನ್ನಿಕಂಬಳ—ಎಂದಿನಂತೆ ಈ ವರ್ಷವೂ ಸ್ಥಳೀಯ ಶ್ರೀ ರಾಧಾಕೃಷ್ಣ ಯುವಕ ಭಜನಾ ಸಂಘದ ವಾರ್ಷಿಕ ವರ್ಧಂತಿಯು ರಾವ್ ಸಾಹೇಬ್ ಪಿ. ಯಸ್. ಭಂಡಾರ್ಕಾರ್, ಬಿ. ಎ. ಎಲ್. ಎಲ್. ಬಿ., ಇವರ ಸನ್ನಾಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರುಗಿತು. ಸುಮಾರು ಒಂದು ಸಾವಿರಕ್ಕೆ ಮೇಲ್ಪಟ್ಟು ಜನ ಸಂದಣಿಯು ನೆರೆದಿತ್ತು. ಅನೇ ದಿನ ಸದ್ರಿ ಸಂಘವು ನವೀನವಾಗಿ ನಿರ್ಮಿಸಿದ ಕೃಷ್ಣಾ ಮಂದಿರದ ಉದ್ಘಾಟನಾ ಸಮಾರಂಭವನ್ನು ಶ್ರೀ. ರಾಮರಾವ್ ಬಾಗ್ಲೋಡಿಯವರ ದಿವ್ಯಹಸ್ತದಿಂದ ನೆರವೇರಿಸಲ್ಪಟ್ಟಿತು. ವರ್ಧಂತಿ ಆರಂಭದಲ್ಲಿ ಸಂಘದ ಅಧ್ಯಕ್ಷರಾದ ಡಾ। ಕಡೆಂಗೋಡ್ಲು ರಾಮ ಭಟ್ಟರು ವರದಿವಾಚನ ಮಾಡಿದರು. ಸಭಿಕರ ಭಾಷಣವಾದ ನಂತರ ಅಧ್ಯಕ್ಷರು ಸಂಘವು ಕೈಕೊಂಡ ಹಿಂದೂ ಸಮಾಜ ಸುಧಾರಣೆ ಕಾರ್ಯವನ್ನು ಪ್ರಶಂಸಿಸಿ ಭಾಷಣವಿತ್ತರು. ಮರುದಿನ ಶ್ರೀ. ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳಿಂದ “ಮಂಡೋದರಿ ನೀತಿ” ಎಂಬ ವಾಚನವು ಬಹು ಸೊಗಸಾದ ರೀತಿಯಲ್ಲಿ ನಡೆದಿತ್ತು.

ಇನ್ನಂಜೆ—ತಾ 16-2 1946ನೇ ಶನಿವಾರ ಸಾಯಂ ಗಂಟೆ 6ಕ್ಕೆ ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ಡಾ। ಎನ್. ಎಸ್. ಹರ್ಡಿಕರ್, ಹುಬ್ಬಳ್ಳಿ, ಇವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು.

ಮಲ್ಪೆ—ಕಡ್ಡಾಯ ಶಿಕ್ಷಣದ ಪ್ರಾರಂಭೋತ್ಸವದ ಸಲುವಾಗಿ, ಮಲ್ಪೆಯ ಊರ ಮಹನೀಯರುಗಳ ಉದಾರಾಶ್ರಯದಿಂದ ತಾ. 26 1-46ರಲ್ಲು ಆ ಕೇಂದ್ರದ ಎಲ್ಲಾ ಶಾಲೆಗಳ ಮಕ್ಕಳಿಗೆ ಲಡ್ಡು ಹಂಚಲಾಯಿತು. ಸುಮಾರು 1500 ಮಕ್ಕಳು ಕಡ್ಡಾಯ ಶಿಕ್ಷಣ ಪ್ರಚಾರದ ಕುರಿತು ಜಯಘೋಷವನ್ನು ಮಾಡುತ್ತಾ, ಕಲ್ಮಾಡಿಯಿಂದ ವಡಭಾಂಡೇಶ್ವರದ ವರೆಗೆ ಮೆರವಣಿಗೆ ಹೋದರು. ಸಂಜೆ ಮಲ್ಪೆ ಕೇಂದ್ರದಲ್ಲಿ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಊರ ವಿದ್ಯಾಭಿಮಾನಿಗಳ ಕಡ್ಡಾಯ ಶಿಕ್ಷಣ ಪ್ರಚಾರದ ಭಾಷಣಗಳೊಂದಿಗೆ ಸಮಾರಂಭವು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು.

ಸೋಮೇಶ್ವರ—ಸೋಮೇಶ್ವರ ಬೋರ್ಡ್ ಎಲಿಮೆಂಟರಿ ಶಾಲಾ ಮಕ್ಕಳ ಹೆತ್ತವರ ಕೂಟವು ತಾ. 28-1 46ರಲ್ಲಿ ಶ್ರೀ. ಶೇಷಪ್ಪ ಶೆಟ್ಟಿ ಪ್ಲೇಗ್ ಇನ್ಸ್‌ಪೆಕ್ಟರ್ ಸೋಮೇಶ್ವರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ನೆರೆ ಶಾಲಾ ವಿದ್ಯಾರ್ಥಿಗಳು ವಿವಿಧ ವಿನೋದಾವಳಿಗಳನ್ನು ತೋರಿಸಿದರು. ‘ಸತ್ಯ ಹರಿಶ್ಚಂದ್ರ’ ಎಂಬ ಕನ್ನಡ ಪ್ರಹಸನವನ್ನು ಅಭಿನಯಿಸಿದರು. ಶ್ರೀ ರಾಮಕೃಷ್ಣ ಹೆಬ್ಬಾರರು ಶಾಲಾ ಅಭಿವೃದ್ಧಿಯ ಕುರಿತು ಭಾಷಣ ಮಾಡಿದರು. ಶಾಲಾ ಮಕ್ಕಳಿಗೆ, ಶ್ರೀಯುತ ನರಸಿಂಹ ಭಕ್ತರಿಂದ ಅಲ್ಲದೆ ವಿಟ್ಠಲ ಶೆಣೈಯವರುಗಳಿಂದ ತಿಂಡಿ ಬಾಳೆಹಣ್ಣು ಹಂಚಲ್ಪಟ್ಟಿತು.

ಕುಂದಾಪುರ—ಮದ್ರಾಸು ಪ್ರಾಂತಿಕ ಎಸೆಂಬ್ಲಿಯ ಬಗ್ಗೆ ಕುಂದಾಪುರ ಸರ್ಕಲಿನಿಂದ ಆರಿಸಬೇಕಾದ ಒಂದು ಹರಿಜನ ಸೀಟಿಗೆ ಕಾಂಗ್ರೆಸು ಉಮೇದ್ವಾರರಾಗಿ ಶ್ರೀ. ಈಶ್ವರನವರೂ ಇವರ ಎದುರಾಳಾಗಿ ಹರಿಜನ ಫೆಡರೇಶನಿನ ಪತಿಯಿಂದ ನಾಲ್ಕು ಜನರೂ ತಾ. 29-1-44ರಲ್ಲಿ ನಾಮಿನೇಶನು ದಾಖಲು ಮಾಡಿರುವರು. ನೊಮಿನೇಶನು ಅರ್ಜಿಗಳನ್ನು ಪರಿಶೋಧಿಸಿ ಮಂಜೂರು ಮಾಡುವ ತಾ. 21-1-46 ಆಗಿತ್ತು. ಕಾಂಗ್ರೆಸು ಉಮೇದ್ವಾರರಾದ ಶ್ರೀ. ಕೆ. ಈಶ್ವರನವರ ಪರವಾಗಿ ಕುಂದಾಪುರದ ಎಡ್ವೊಕೇಟ್ ಎಸ್. ಎಸ್. ಕೊಳ್ಕೆಬೈಲು ಇವರು ಆಕ್ಷೇಪಣೆ ತನಡಿಸಿ ವಾದಿಸಿ ಎದುರಾಳಿಗಳಲ್ಲೊಬ್ಬರಾದ ಕೆ. ಎಸ್. ಕರ್ಕೇರರ ನೊಮಿನೇಶನು ಕಾಯಿದೆ ವಿರುದ್ಧವಾದುದೆಂದು ತೆಗೆದು ಹಾಕುವಂತೆ ಮಾಡಿ ಪ್ರೈಮರಿ ಚುನಾವಣೆಯ ಗೊಂದಲವನ್ನು ತಪ್ಪಿಸಿದರು.

ಮಂಗಳೂರು ವಿದ್ಯಾರ್ಥಿ ಸಂಘ—ಫೆಬ್ರವರಿ ತಿಂಗಳ ಎರಡನೆಯ ವಾರದಲ್ಲಿ, ಏಳನೆಯ ದಕ್ಷಿಣ ಕನ್ನಡ ವಿದ್ಯಾರ್ಥಿ ಸಮ್ಮೇಳನವನ್ನು ಮಂಗಳೂರಿನಲ್ಲಿ ಜರಗಿಸಲು ನಿಶ್ಚಯಿಸಿದೆ. ಈ ಸಮ್ಮೇಳನದ ಉದ್ದೇಶವು ಜಿಲ್ಲೆಯ ಸಕಲ ವಿದ್ಯಾರ್ಥಿಗಳಲ್ಲಿ ಪರಸ್ಪರ ಆತ್ಮೀಯತೆ ಹಾಗೂ ಐಕ್ಯವನ್ನು ಅಭಿವೃದ್ಧಿಗೊಳಿಸುವುದಾಗಿದೆ. ಜಿಲ್ಲೆಯ ಹಾಗೂ ದೇಶದ ವಿದ್ಯಾರ್ಥಿ ಬಂಧುಗಳಲ್ಲಿ ಸಾಂಸ್ಕೃತಿಕ ಸಹಾಯ ಸಹಕಾರವನ್ನು ಹೆಚ್ಚುಗೊಳಿಸಲು, ಎಲ್ಲ ವಿದ್ಯಾರ್ಥಿಗಳನ್ನೆದುರಿಸುವ ಸಮಸ್ಯೆಗಳನ್ನು ಅಭ್ಯಸಿಸಲು, ವಿದ್ಯಾರ್ಥಿಗಳ ಹಕ್ಕು ಬಾಧ್ಯತೆಗಳನ್ನು ಸಂರಕ್ಷಿಸಲು, ದೇಶದ ಉನ್ನತಿಗೆ ಹಾನಿಕರವಾದ ಸಮಸ್ಯೆಗಳ ವಿಷಯದಲ್ಲಿ ವಿದ್ಯಾರ್ಥಿಗಳ ಸುಪ್ತ ಚೇತನವನ್ನು ಜಾಗೃತಗೊಳಿಸಿ, ಅವರನ್ನು ಭಾವೀ ಸ್ವತಂತ್ರ ಹಿಂದೂಸ್ಥಾನದ ಉತ್ತಮ ಹಾಗೂ ಕರ್ತವ್ಯಪರ ಪ್ರಜೆಗಳನ್ನಾಗಿ ಮಾಡಿ, ಸಾಮಾಜಿಕ, ಹಾಗು ರಾಜಕೀಯ ನ್ಯಾಯ ನಿಯಮಗಳುಳ್ಳ ಸಮಾಜದ ಆಧಾರಸ್ತಂಭರನ್ನಾಗಿ ಮಾಡಲು, ಮತ್ತು ಕೊನೆಯದಾಗಿ ಗುರು ಶಿಷ್ಯರೊಳಗೆ ಪರಸ್ಪರ ಆದರವು ಸದಾ ನೆಲೆಗೊಳ್ಳುವಂತೆ ಆಗಲು ಸಹಾಯವಾಗುವಂತೆ ಒಂದು ಜಿಲ್ಲಾ ವಿದ್ಯಾರ್ಥಿ ಸಂಸ್ಥೆಯನ್ನು ಸ್ಥಾಪಿಸುವುದೂ ಈ ಸಮ್ಮೇಲನದ ಉದ್ದೇಶವಾಗಿದೆ. ಈ ಸಮ್ಮೇಳನವು ಮೂರು ವರ್ಷಗಳ ನಂತರ ಪುನಃ ಇಡಿಯ ಜಿಲ್ಲೆಯ ವಿದ್ಯಾರ್ಥಿಗಳನ್ನು ಒಂದುಗೂಡಿಸಲು ಯತ್ನಿಸುತ್ತಿದೆ. ಆದುದರಿಂದ ಈ ಸಮ್ಮೇಳನ ಯಶಸ್ವಿಯಾಗುವಂತೆ, ಜಿಲ್ಲೆಯ ವಿದ್ಯಾರ್ಥಿ ಬಂಧುಗಳೂ, ಮಹಾಜನರೂ, ಸಹಕಾರ ಸ್ಫೂರ್ತಿಯನ್ನೀಯಬೇಕಾಗಿ ವ್ಯವಸ್ಥಾಪಕರು ವಿನಂತಿಸಿಕೊಳ್ಳುತ್ತಾರೆ.

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲಾ ಉಡ್ಪಿ ತಾಲೋಕು ಬನ್ನಾಡಿ ಗ್ರಾಮದ ಕಂಬಳಗದ್ದೆ ಮನೆಯಲ್ಲಿರುವ ಕೃಷ್ಣಮ್ಮ ಸೆಡ್ತಿಯರ ಮಕ್ಕಳು. 1ನೇ ಗೋವಿಂದ ಹೆಗ್ಡೆ, 2ನೇ ಲಿಂಗಮ್ಮ ಸೆಡ್ತಿ, 3ನೇ ಲಚ್ಚುಮ್ಮ ಸೆಡ್ತಿ, ಈ ಮೂರು ಜನರು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ—

ನಾವು ಅಳಿಯಸಂತಾನ ಕಟ್ಟಿನ ಅವಿಭಕ್ತ ಕುಟುಂಬಿಕರಾಗಿದ್ದೇವೆ. ಕೆಲವು ವರ್ಷಗಳಿಂದ ಮೇಲೆ ಕಾಣುವ ಕೃಷ್ಣಮ್ಮ ಸೆಡ್ತಿಯರು ನಮ್ಮ ಅಡಳ್ತೆದಾರರಾಗಿ ಕುಟುಂಬವನ್ನು ನಡೆಸಿಕೊಂಡು ಬರುತ್ತಾ ಇದ್ದಾರೆ—ಇಷ್ಟರವರೆಗೆ ಕುಟುಂಬಾರ್ಥ ಜೀವನಕ್ಕಾಗಿ ಸದ್ರಿ ಆಡಳ್ತೆದಾರರು ಯಾವತರದ ಸಾಲಸೂಲಗಳನ್ನು ಮಾಡಿರುವದಿಲ್ಲ. ಆದರೆ ನಮ್ಮ ಪೈಕಿ ಮೇಲ್ಕಾಣುವ 3ನೇ ಲಚ್ಚುಮ್ಮ ಸೆಡ್ತಿ ಲಗ್ನದ ಗರ್ಜಿನ ಬಗ್ಗೆ ಸದ್ರಿ ಬನ್ನಾಡಿ ಸುಬ್ಬಣ್ಣ ಹೆಗ್ಡೆಯರಿಗೆ ರೂಪಾಯಿ 110/-ಕ್ಕೆ ಒಂದುನೂರ ಹತ್ತಕ್ಕೆ ನಮ್ಮ ಪೈಕಿ ಸದ್ರಿ ಆಡಳ್ತೆದಾರ ಕೃಷ್ಣಮ್ಮ ಸೆಡ್ತಿ 1 ಸದ್ರಿಯವರ ಮಕ್ಕಳು ಅಬ್ಬಕ್ಕ ಸೆಡ್ತಿ 1 ಗೋವಿಂದ ಹೆಗ್ಡೆ 1 ಕೂಡಾ ಮೂರು ಜನರು ಡಿ. ನೋಟು ಬರಕೊಟ್ಟಿರುತ್ತಾರೆ. ಅಲ್ಲದೆ ಸದ್ರಿ ಆಡಳ್ತೆದಾರರು ಒಬ್ಬರೆ ಸ್ವತಾಹಾ ತಾಲೋಕು ಮಜ್ಕೂರು ಸೈಬ್ರಾಡಿ ಗ್ರಾಮದಲ್ಲಿರುವ ನಾರಾತೂರುಮನೆ ಶೀನಪ್ಪ ಶೆಟ್ರಿಗೆ ರೂಪಾಯಿ150/- ಒಂದುನೂರ ಐವತ್ತಕ್ಕೆ ಡಿ. ನೋಟು ಬರಕೊಟ್ಟಿರುವರಲ್ಲದೆ ಬೇರೆ ಯಾವತರದ ಸಾಲಗಳು ಇರುವುದಿಲ್ಲ— ಈಗ ಸದ್ರಿ ಆಡಳ್ತೆದಾರ್ ಕೃಷ್ಣಮ್ಮ ಸೆಡ್ತಿಯರು ಬೇರೆಯವರ ಮರ್ಬೋಧನೆಗೆ ಒಳಪಟ್ಟು ಕುಟುಂಬದ ಮೇಲೆ ಹೊರಿಸುವದಕ್ಕಾಗಿ ಬಿನಾಮಿ ನೋಟು ಬರಕೊಟ್ಟು ಸಾಲಮಾಡುವ ಸಂಭವ ಕಾಣುತ್ತದೆ. ಹಾಗೆ ಅವರು ಯಾವತರದ ಸಾಲಗಳನ್ನು ಮಾಡುವವಾದರೂ ಅದಕ್ಕೆ ನಾವಾಗಲೀ ನಮ್ಮ ಇಡೀ ಕುಟುಂಬವಾಗಲೀ ಬದ್ಧರಾಗಿರುವುದಿಲ್ಲ. ಮಾತ್ರವಲ್ಲದೆ ಕುಟುಂಬಾರ್ಥದ ಸ್ಥಿರಚರ ಸೊತ್ತುಗಳು ಹೊಣೆಯಾಗತಕ್ಕದ್ದಲ್ಲ_ಎಂಬ ಸಂಗ್ತಿ ಸರ್ವರೂ ತಿಳಿದಿರಬೇಕು.

ಗೋವಿಂದ ಹೆಗ್ಡೆ ರುಜು.

● ಈ ಹೆಬ್ಬೆಟ್ಟಿನ ಗುರುತು ಲಿಂಗಮ್ಮ ಶೆಡ್ತಿ ರುಜು.

● ಈ ಹೆಬ್ಬೆಟ್ಟಿನ ಗುರುತು ಲಚ್ಚುಮ್ಮ ಶೆಡ್ತಿ ರುಜು.

ಹಿಲಿಯಾಣ ಗ್ರಾಮದ ಮುಂಡ್ಲಬೆಟ್ಟು ಮಹಲಿಂಗ ಹೆಗ್ಡೆ ಆಳಿಯ ಮಹಾಬಲ ಶೆಟ್ಟಿ ಸಾಕ್ಷಿ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸೇವನೆ ಮಾಡಿದಾಗಲೇ ಕೆಮ್ಮು ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

[illegible] ಬಾಟ್ಲಿನ ಕ್ರಮವಾಗಿ ರೂ.[illegible] ಮತ್ತು [illegible]

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು.—

ವನಮಾಲೀ ಭೀಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

PUROHIT SHWAS-HARI

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ಸಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಇತರ ಸಂಗ್ತಿ ಬರದಲ್ಲಿ ರೋಗಗಳಿಗೆ ತಕ್ಕಾದ ಔಷಧ ರವಾನಿಸಲಡುವುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಗಿರ್ಗಾಂವ್ ಬ್ಯಾಕ್ ರೋಡ್, ಜಿ. ಪಿ. ಪಿ. ರೈಲ್ವೆ, ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

‘ಬಹದೂರ’

ಕಬ್ಬಿನ ಗಾಣಗಳು



ಗಟ್ಟಿಮುಟ್ಟಾದ ರಚನೆ,
ಉತ್ತಮದರ್ಜೆಯ ಕೈಗಾರಿಕೆ

ಕ್ರಯ ರೂ. 430/-

ಬ್ರಿಟಿಷ್ ಇಂಡಿಯ ಎಂಜನಿಯರಿಂಗ್ ಕಂ.
ಬೊಂಬಾಯಿ 10.

ಸನ್ನಿಯ ಸನ್ನಿವೇಶ

ಲೇಖಕರು:—

ಡಾ। ಪಿ. ಯಸ್. ಈಶ್ವರ ಭಟ್ಟರು, L. I. M. ವಿಟ್ಲ, ದ. ಕ.

(ಆರಂಭಿಕ, ಔಷಧಾಸ್ತ್ರಗಳ ಅಭ್ಯವಸ್ಥೆಯೇ ಇಂದಿನ ಬಾಲ ಮರಣಗಳ ಬಹುಮಟ್ಟಿನ ಹೇತುವಾಗಿ ತೋರುವುದರಿಂದ ಆ ಕುರಿತು ಒಂದಿಷ್ಟು ವಿಷಯ ವಿವೇಚನೆ ಬಲ್ಲವರು ಅಲ್ಲಗಳೆವ ರೀತಿಯಾದರೂ, ಎಲ್ಲರೂ ಓದಿ ಅನುಭವ ಸಂಗ್ರಹಿಸಲೆನ್ನುವ ಆಶೆಯಿಂದ ಕತೆ ರೂಪದಲ್ಲೇ ಬರೆಯುವ ಪ್ರಯತ್ನಕ್ಕಿಳಿದೆನು. ವಾಚಕರು ಇದನ್ನು ಕಟ್ಟುಕತೆಯಂತೆ ಓದಿ ಎಸೆಯದೆ-ಮದ್ದುಗಳನ್ನು ಸಂದರ್ಭಗಳಲ್ಲಿ ಉಪಯೋಗಿಸಿ ತಣಿಯಲೆಂದು ಕೋರಿಕೆ—(ಲೇ.)

ಶ್ಯಾಮನಿಗೆ ಕಳೆದ ಕೃಷ್ಣಾಷ್ಟಮಿಗೆ ಎರಡು ತುಂಬಿ ಈಗ ನಡಿಯುವುದು ಮೂರನೇ ವರ್ಷ. ಶ್ಯಾಮನು ಕೃಷ್ಣರಾಯರ ಪ್ರಥಮ ಪುತ್ರ. ಕೈಯಲ್ಲಿ ಕಡುಗೋಲು ಹಿಡಿದು ತಿರುಗುವ ಕೃಷ್ಣನಷ್ಟೇ ದಿವ್ಯ ಸುಂದರ ಕುಮಾರ. ರೂಪಿಗೆ ತಕ್ಕುದಾದ ಗುಣ, ಅವನನ್ನು ಕಂಡರೆ ಒಮ್ಮೆ ಒಟ ತಬ್ಬಿಕೊಳ್ಳೋಣವೆಂಬ ಮನಸ್ಸು ಆದಾರಿಗೂ ಆಗದಿರದು. ಆದೇಕೆ, ಮೊನ್ನೆ ಹನ್ನೆರಡು ವರ್ಷದ "ನೇಶನಲ್ ಸರ್ಟಿಫಿಕೇಟು" ರೂ 50-ರದ್ದು ಸಾಲದು. ರೂ. ನೂರರದ್ದಾದರೂ ತಗೊಳ್ಳಲೇಬೇಕೆಂದು ಕೃಷ್ಣರಾಯರನ್ನು ಒತ್ತಾಯಿಸುತ್ತಿದ್ದ ತಹಶೀಲ್ದಾರರೂ ಕೂಡಾ ಶ್ಯಾಮನ "ಬಾವಾ ಮ! ಕಾಪಿ ಕುಡಿಯುವ" ಎಂಬ ಮಧುರ ವಾಣಿಯಿಂದಲೇ ಸಂತೃಪ್ತರಾಗಿ ಸುಮ್ಮನೆ ಹೋಗಿದ್ದರೆಂದ ಬಳಿಕ ಮಗುವಿನ ಮನೋಜ್ಞತ್ವವನ್ನು ಬೇರೆ ಹೊಗಳಬೇಕಾಗಿಲ್ಲ.

ಶ್ಯಾಮನು ಎಷ್ಟು ಚುರುಕು ಬುದ್ಧಿಯವನೋ ಅಷ್ಟೇ ಹಟ ಮಾರಿ ಕೂಡಾ. ಅಮ್ಮನನ್ನು ಕಾಫಿ ತಿಂಡಿಗಳಿಗಾಗಿ ಬಹಳ ಕಾಡುವುದುಂಟು. ಆಗ ಏನಾದರೂ ಒದಗಿಸದಿದ್ದರೆ ಅಮ್ಮನನ್ನು ಕದಲದಂತೆ ಕಾಲಿಗೇ ಗಂಟುಬೀಳುವನು. ನೆಲದಲ್ಲಿ ಬಿದ್ದು ಅಳುವನು. ಅವನನ್ನು ತಣಿಸುವುದಕ್ಕೆ ಏನೂ ಸಿಗದಿದ್ದರೂ ಒಂದು ತುಂಡು ಬೆಲ್ಲವನ್ನಾದರೂ ಕೊಟ್ಟು ತೀರಬೇಕು ಸುಬ್ಬಮ್ಮ. ಇಂದಿಗೆ ಲೆಕ್ಕ ಮಾಡಿ ಒಂದು ತಿಂಗಳ ಹಿಂದೆ ಶ್ಯಾಮನು ಅವನ ತಂಗಿ 3 ತಿಂಗಳ ಸರೋಜಳನ್ನು ಮಲಗಿಸಿದ ನೀರ 'ಟಬ್ಬಿ'ನಲ್ಲಿ "ಗ್ಲೂಕೋಸ್ ಬಿಸ್ಕೀಟ್" ಹಿಡಕೊಂಡು ಕುಳಿತಿದ್ದಾಗ ಪಕ್ಕನೆ ಮನೆ ನಾಯಿ ಕೈಗೆ ಬಾಯಿ ಹಾಕಿ ಹೆದರಿಸಿದ ಮೇಲೆ ಅಂದೇ ರಾತ್ರಿ ಶ್ಯಾಮನಿಗೆ 103·F ಗೆ ಕಡಮೆಯಾಗದ ಜ್ವರ ಬಂದಿತ್ತು. ತಾಯಿ ತಂದೆಯವರು ಬೆಳಗು ತನಕ ಬೆಳಕಿಟ್ಟು ಕುಳಿತೇ ಕಾಲಕ್ಷೇಪ. "ಶಿವ" ಎಂದೂ ಕಣ್ಣು ಮುಚ್ಚಲಿಲ್ಲ. ಮಗುವು ಕ್ಷಣ ಕಾಲ ಕಳುಸದಂತೆ ಮಲಗಿಕೊಂಡು ಕ್ಷಣಕ್ಕೊಮ್ಮೆ 'ಅಮ್ಮ ಗುಮ್ಮ'ನೆಂದು ಬೆಚ್ಚಿ ಬೀಳುತ್ತಿತ್ತು. ಸುಬ್ಬಮ್ಮನ ಎದೆಗೆ ಆಗ ಸಾವಿರ ಚೇಳು ಕಡಿದಷ್ಟು ವ್ಯಥೆಯಾಗುತ್ತಿತ್ತು. "ದೇವರೇ! ನಮ್ಮ ಪ್ರೇಮದರಗಿಣಿಯನ್ನು ಉಳಿಸು. ಮನೆಯ ದೀಪ ದೇವರು ಮಾಡಿ ಎನ್ನನ್ನು ಶೋಕಾಂಧಕಾರದಲ್ಲಿ ಕೆಡಹುವ ಸಾಹಸ ಬೇಡ"ನೆಂದು ಪರಮಾತ್ಮನನ್ನು ತ್ರಿಕರಣ ಶುದ್ಧಿಯಿಂದ ಕೇಳಿಕೊಳ್ಳುತ್ತಿದ್ದಳು. ಸುಬ್ಬಮ್ಮನು ಮಿಡಿವ ಕಣ್ಣೀರ ಒರತೆಯನ್ನು ಸೆರಗ ತುದಿಯಿಂದ ಆಗಾಗ ಒರಸಿಕೊಳ್ಳುತ್ತಲೂ ಮಗುವಿಗೆ ಎಚ್ಚತ್ತಾಗ ಬಾರ್ಲಿ ನೀರನ್ನು ಒಂದೊಂದು ಚಮಚ ಕೊಡುತ್ತಲೂ ಇರುವ ಅಲ್ಲಿನ ಆಗಿನ ಪರಿಸ್ಥಿತಿ ಹೆತ್ತೊಡಲ ಸಂಕಟವನ್ನು ಚಿತ್ರಿಸಿ ತೋರಿಸುವಂತಿತ್ತು. ಕೆಲವೊಂದು ಸಲ ಮಗುವು ಎಂತೋ ಮೂರೋ ಚಮಚ ನೀರು ಒಂದೇ ಸವನೆ ಕುಡಿಯುತ್ತಿದ್ದರೂ ಕೆಲವು ಸಲ ಬೇಡವೆಂದು ಮುಖ ತಿರುಗಿಸುತ್ತಿತ್ತು. ಮಗುವಿನ ಹೊಟ್ಟೆ ತಲೆ ಮುಟ್ಟಿದರೆ ಬತ್ತಿ ಅರಳುವಷ್ಟು ಜ್ವರದ ಬೇಗೆ ಇದ್ದರೂ ಕೈಕಾಲುಗಳು ಮಾತ್ರ ತಂಣಗೇ ಇದ್ದುವು. ನೆರೆಮನೆಯ ದೊಡ್ಡಪಜ್ಜಿ ಬಂದವಳು ಭಯತದ್ದಕ್ಕೆ ಕುರುದಿ ನೀರಿಗೆ ನೆಣೆ ಸುಳಿದು ಹಾಕಿದಳು. ಹಾಮುಕ್ಕ ಬಂದವಳು ದೃಷ್ಟಿಯಾಗಿರಬಹುದೆಂದು ಸಾಸಿವೆ ಕಾಳು ಉಪ್ಪು ತಲೆಗೆ ಸುಳಿದು ಒಲೆಗೆ ಹಾಕಿದಳು. ಜ್ವರವು ಏನೂ ಕಡಮೆಯಾಗಲಿಲ್ಲ. ಮೂರು ದಿನಗಳಾದರೂ ಒಂದೇ ಸವನೆ ಕಾಯುವುದಲ್ಲದೆ ಬಂದ ಜ್ವರವು ಬಿಡಲೊಲ್ಲದು. ಸಾಲದುದಕ್ಕೆ ಉಸಿರಾಟವು ಕಷ್ಟವಾಗಿ ಉಬ್ಬಸ ಕೆಮ್ಮು ಆರಂಭವಾದುವು. ಕೆಮ್ಮುವಾಗ ಬಾಯಿಗೆ ಸ್ವಲ್ಪ ಕಫ ಬಂದರೂ ಮಗುವು ಅದನ್ನುಗುಳದೆ ಅಲ್ಲಿಗೇ ನುಂಗುತ್ತಿದೆ. ಕೃಷ್ಣರಾಯರು ತಡ ಮಾಡದೆ ನಾಲ್ಕನೇ ದಿನವೇ ದೊಡ್ಡ ಪಟ್ಟಣಕ್ಕೆ ಹೋಗಿ ಒಬ್ಬ ಡಾಕ್ಟರರನ್ನು ಕರೆದೇ ತಂದರು. ಡಾಕ್ಟರರ ಡಿಗ್ರಿಯು 103·5·F ಜ್ವರ ಕಾಣಿಸಿತು. ಅವರು ಸ್ಟೆತಸ್ಕೋಪನ್ನು ಅಲ್ಲಿ ಇಲ್ಲಿ ಎದೆ ಬೆನ್ನುಗಳಲ್ಲಿಟ್ಟು ಪರೀಕ್ಷಿಸಿ ಬ್ರೊಂಕೊ ನಿಮೋನಿಯ (Bronchopneumonia) ಎಂಬ ಹೆಸರೆತ್ತಿ ಮಗುವಿನ ಕೈಗೆ ಒಂದು ಇಂಜಕ್ಷನನ್ನು ಕೊಟ್ಟು, ಕುಡಿವ ಮಿಶ್ರಣಕ್ಕೆ ಕುಪ್ಪಿ ಕಳುಹುವಂತೆ ಸೂಚಿಸಿ, ಚೆನ್ನಾದ ಜಾಗ್ರತೆಯಲ್ಲಿರುವಂತೆ ಹೇಳಿ ಹೋದರು.

ಜ್ವರವು ಏಕ ಪ್ರಕಾರ ಆರೇಳು ದಿನ ಕಾಯ್ದುಕೊಂಡಿತು. ಮಗುವಿನ ತುಟಿ ಅರಿ ಬಾಯಾರಿಕೆ ಹೆಚ್ಚುತ್ತಾ ಹೋಯಿತು. ಡಾಕ್ಟರರನ್ನು ವಿಚಾರಿಸಿದರೆ ಇಂಜಕ್ಷನು, ಸೇಕ, ಮಿಶ್ರಣ ಬದಲಾಯಿಸುವಿಕೆ ಇವುಗಳಿಂದಲೇ ಸಮಜಾಯಿಸಿ, ಅದರ ಅವಧಿ ಹೋರತು ಕಡಮೆ ಬಾರದೆನ್ನುತ್ತಾರೆ. ಎಂಟನೇ ದಿನ ಜ್ವರವೇನೊ ಸ್ವಲ್ಪ ಕಡಮೆಯಾಯಿತು. ಆದರೆ ಆ ಮರಂಕೆಯಂತೆ ಸ್ವಲ್ಪ ಹೊರಕಿತಿಗೆ ಆರಂಭವಾಗಿ ಅದರ ಮಾರನೆ ದಿನ ಕಾಲಿನಲ್ಲಿಯೂ ಮುಖದಲ್ಲಿಯೂ ಸ್ವಲ್ಪ ನೀರಿನಂತೆ ದಪ್ಪನೆ ಕಾಣಿಸಿಕೊಂಡಿತು. ಮಗುವು, ಒಂದೇ ಸವನೆ ಬಾಯಾರಿಕೆ ಮಾತ್ರ ಕೇಳುತ್ತಿದೆ. ಏನು ತಂದರೂ ಬಾಯಾರಿಕೆಗೆ ಎನ್ನದೆ ಕುಡಿಯಲೊಲ್ಲದು. ಕೃಷ್ಣರಾಯರಿಗೆ ಒಟ್ಟು ಗಾಬರಿ. ಡಾಕ್ಟರರ ಮದ್ದನ್ನು ಇನ್ನು ಮುಂದುವರಿಸಲು ... ಗೆ ನೆಮ್ಮದಿ ಸಾಲದಾಯಿತು. ಹಲವರು ಹಲವು ವಿಧ ಹೇಳುತ್ತಾರೆ. ಕೆಲವರು 'ಲಿವರಾ'ಗಿರಬಹುದು. ಜನ್ಮಿಯ ಕಡೆಯವರಿಗೆ ತೋರಿಸಿದರೆ ಒಳ್ಳೆತಾಗಬಹುದೆನ್ನುತ್ತಾರೆ. ಅಂತೂ ಊರೂರು ತಿರುಗಿ ಉಪಯೋಗ ಬರದಿದ್ದರೂ ಕಡೆಗೆ ಆಯುರ್ವೇದ ರೀತ್ಯಾ ಶಾಸ್ತ್ರೀಯ ಚಿಕಿತ್ಸಾ ಕ್ರಮವು ಕೃಷ್ಣರಾಯರ ಮನಸ್ಸಿನ ಹೊರೆಯನ್ನು ತುಸು ಇಳಿಸಿತು.

ಚಿಕ್ಕ ಮಕ್ಕಳಿಗೆ ಮೂತ್ರದಲ್ಲಿ ಹುಡಿ (Phosphates) ಹೋಗುವ ರೋಗವಿದ್ದರೆ ಅದು ಪ್ರತಿ ತಾಯಂದಿರೂ ಅವಶ್ಯ ಗಮನಿಸಬೇಕಾದ ಸಂಗತಿ. ಆ ಮಕ್ಕಳ ಮೂತ್ರಕ್ಕೆ ಒಂದು ತರದ ವಾಸನೆಯಿರುತ್ತದೆ. ಮೂತ್ರವನ್ನು ನೆಲದಲ್ಲಿ ಆರಬಿಟ್ಟರೆ ಆ ಸ್ಥಳವು ಬೆಳ್ಳಗೆ ಹೊಳೆಯುತ್ತದೆ. ಆಯುರ್ವೇದ ಶಾಸ್ತ್ರಜ್ಞರು ಈ ರೋಗಕ್ಕೆ 'ಪೂಯು' ವೆಂದೆನ್ನುವರು. "ಪೂಯಂ ಮಾರುತ ಪಿತ್ತಳ್" (ಅಷ್ಟಾಂಗ. ಶಾರೀರ) ಎಂಬಂತೆ ಸಂದುಷ್ಟ ಪಿತ್ತವು ರಕ್ತವನ್ನು ದೂಷಿಸಿ ಈ ರೋಗವನ್ನು ತರುತ್ತದೆ. ಕಫತರಗಳಾದ ಆಹಾರ ದೋಷದಿಂದ ಈ ರೋಗವಿರುವ ಮಕ್ಕಳಿಗೆ ಹೊಟ್ಟೆಹುಳ(ಎರೆ) ಜಾಸ್ತಿಯಾಗಿ ತುಂಬುವುದರಿಂದ ಅವರಿಗೆ ನಾಲ್ಕು ತಿಂಗಳಿಗೊಮ್ಮೆ ಎರೆಹುಳದ ಔಷಧಕೊಟ್ಟರೂ ಜಾಸ್ತಿಯಾಗಲಾರದು. ಹಾಗೆ ಎರೆಗೆ ಕೊಡದಿದ್ದಲ್ಲಿ ಹೊಟ್ಟೆಹುಳ ತುಂಬಿದ ಹಾಗೇ ಮಕ್ಕಳು ಹೆಚ್ಚು ಆಸರಕ್ಕೆ ಕುಡಿಯಲು ಕಾಡುವುದನ್ನು ತಾಯಂದಿರು ಕಾಣಬಹುದು. ಈ ಸಂದರ್ಭದಲ್ಲಿ ಕೆಲವು ಮನೆ ಮುದುಕಿಯರು ಕಾಮಾಲೆ ರೋಗವೆಂದು ತಲೆಗೆ ಬೆಣ್ಣೆ ತಿಕ್ಕಲು ಉಪದೇಶಿಸುವರು. ಕೆಲವೊಂದು ಸಲ ಮಕ್ಕಳ ಪೂಯರೋಗಕ್ಕೆ ಈ ತರದ ಸ್ನೇಹ ವಿಧಾನವು ಒಳ್ಳೆತಾಗುವುದಿದೆ. ಪೂಯರೋಗದ ಮಕ್ಕಳು ಬಚ್ಚುತ್ತಾ ... ದ ಹಾಗೆ, ಗಣಲೆಗಳು (Enlargment of glands) ಕಂಡುಬಂದರೆ, ರೋಗವು ದಾಖಾಗತವಾಯಿತೆಂದು ತಿಳಿಯಬೇಕು. ಇದರ ಜೊತೆಗೆ ಹೊಟ್ಟೆಹುಳದ ಪ್ರಭಾವವು ಜಾಸ್ತಿಯಾದಲ್ಲಿ ಜ್ವರಕ್ಕೆ ಆರಂಭವಾಗುತ್ತದೆ. ಎರೆಹುಳಗಳ ತತ್ತಿಗಳು (Larvac) ಶ್ವಾಸಕೋಶಗಳನ್ನು ತಲಪಿದರೆ, ಉಬ್ಬಸ ಕೆಮ್ಮು ಇತ್ಯಾದಿ ಸುರುವಾಗುತ್ತದೆ. ಇದುವೇ "ಕಫ ಪ್ರಸೇಕ" ಈ ರೋಗವು ಮತ್ತೂ ಉಪೇಕ್ಷೆ ಮಾಡಲ್ಪಟ್ಟರೆ ಕೈಕಾಲು ಮುಖಗಳು ಊದಿಕೊಳ್ಳುತ್ತವೆ. ಈ ತರಗತಿಯಲ್ಲಿ ವೈದ್ಯ ಶಾಸ್ತ್ರಜ್ಞರು 'ಶೋಫ'ವೆಂಬ ಹೆಸರಿಡುವರು. ಸಾಮಾನ್ಯ ಶೋಫಕ್ಕೂ ಇದಕ್ಕೂ ಇರುವ ಅಭ್ಯಂತರವೆಂದರೆ ಇದು ಕಫಪ್ರಗ್ರಾ... ... ... ನವನ್ನು ತೋರುಬಿಟ್ಟಿನಿಂದ ಅಮುಕಿದರೆ "ತಗ್ಗು" ನಿಲ್ಲುವುದಿಲ್ಲ. ಈ ಸಂದರ್ಭದಲ್ಲಿ ಕಫವನ್ನು ನೀರಾಗಿಸಿ ಮೂತ್ರ ಮಾಡಿಬಿಡಬೇಕೇ ಹೊರತು, ಕೇವಲ ನೀರಿಗೆ (ಶೋಫ) ಹೇಳಿರುವ ಮೂತ್ರಳ ಔಷಧ ಕೊಡುವುದು ಶಾಸ್ತ್ರೀಯ ರೀತ್ಯಾ ಅಷ್ಟು ಸಮಂಜಸವಲ್ಲ. ವಿರೇಚನ ಔಷಧ ಕೊಡುವುದು ಇನ್ನಷ್ಟು ವಿರೋಧಕ್ಕೇ ತರುತ್ತಿದೆ.

ಶ್ಯಾಮನಿಗೆ ಮಾಡಿದ ಚಿಕಿತ್ಸಾಕ್ರಮ

ಲೇಪಕ್ಕೆ:—

(1) ಅಂಗಡಿಯಲ್ಲಿ ದೊರೆಯುವ ಕಡುಗರೋಹಿಣಿಯನ್ನು ಬಯಲ ಕರೆಯಲ್ಲಿ ಧಾರಾಳ ಬೆಳೆದು ಸಿಗಬಲ್ಲ ಚಿಕ್ಕ ಎಲೆಗಳುಳ್ಳ "ಸಹದೇವಿ" ಎನ್ನುವ ಚಿಕ್ಕ ಸಸಿಗಳ ಸಮೂಲಜಜ್ಜಿ ತೆಗೆದ ಸ್ವರಸದಲ್ಲಿ ತೇದು ಬಿಸಿಮಾಡಿ, ಬಾತುಕೊಂಡಿರುವ ತಂಣಗಿರುವ, ಕೈಕಾಲುಗಳಿಗೆ ಬಿಸಿಬಿಸಿ ಲೇಪ.

ಹೊಟ್ಟೆಗೆ:—

(2) ಇಲಿಕಿವಿ ಗಿಡ (ಸಂ. ಆಖುಕರ್ಣ) ಸಮೂಲ, ವಿಡಾಲರಿ (ವಾಯುವಿಳಂಗದ ಬೀಜ) ಬೆಳ್ಳುಳ್ಳಿ ಈ ಮೂರಕ್ಕೆ ಎರಡೆರಡು ಪೈ ತೂಕಪ್ರಕಾರ ತೆಗೆದು ಸ್ವಲ್ಪ ಜಜ್ಜಿ ನಾಲ್ಕು ಕುಡ್ತೆ(24ozs) ನೀರಲ್ಲಿ ಕಷಾಯವಿರಿಸಿ ಮಂದಾಗ್ನಿಯಲ್ಲಿ ಬತ್ತಿಸಿ ಅರ್ಧಕುಡ್ತೆಗೆ (3 ozs) ನಿಲ್ಲಿಸಿ ಆರಳು ಮಾಡಿದ ಹಿಂಗು ಉದಿ ನಸ್ಯ ಕಷಾಯಕ್ಕೆ "ಮೇಲ್ಹೊಡಿ" (ಪ್ರಕ್ಷೇಪ) ಸೇರಿಸಿ ಕಾಲು ಕಾಲು ಕುಡ್ತೆ (1½ ಔನ್ಸು) ದಿನಕ್ಕೆ ಎರಡು ಸಲ ಸೇವನೆ.

ಪಥ್ಯಾಪಥ್ಯ:—

(3) ಬಾಯಾರಿಕೆಗೆ ಬಾರ್ಲಿ ನೀರು; ಆಹಾರ—ಆಡಿನ ಕಾಯಿಸಿದ ಹಾಲು ಹೊರತು ಬೇರೇನೂ ಆಗದು.

ಮಗುವು ದಿನದಿಂದ ದಿನಕ್ಕೆ ಗುಣವಾಗುತ್ತಾ ಆರುದಿನಗಳಲ್ಲಿ ನೀರೆಲ್ಲ ಆರಿತು. ಈಗ ಕೃಷ್ಣರಾಯ ಸುಬ್ಬಮ್ಮನವರ ಆನಂದಕ್ಕೆ ಪಾರವೇ ಇಲ್ಲ. ಮಗುವು ಗುಣವಾದ ಮೇಲೆ ಅವಕ್ಕೆ ಹುಳದ ಔಷಧ ಕೊಡಲ್ಪಟ್ಟಿತು. ಎರೆಹುಳ ಲೆಕ್ಕ ಮಾಡಿದರೆ 92 ಇದ್ದುವು.

ವಿ. ಸೂ:—ಈ ಕತೆಯು ವಾಚಕರಿಗೆ ಮೆಚ್ಚಿದರೆ ಮುಂದೆ ವಿಷಮಜ್ವರ, ಲಿವರು (Infantile hepatic cirrhosis) ಮೊದಲಾದ ರೋಗಗಳ ಆಯುರ್ವೇದ ರೀತ್ಯಾ ಪರಿಚಯ ಮಾಡಲಿರುವೆವು.

NOTICE.

ಉಡುಪಿ ತಾಲೂಕು ಮೂಡುತೋನ್ಸೆ ಗ್ರಾಮದಲ್ಲಿ ಹಾಲಿ ರವೆಯಲ್ಲಿ ಬಂದಿರುವ ಚನ್ನಯ್ಯ ನಾಯ್ಕರ ಮಗ ನಂಬ್ರ 12206 ಪಸಾಲ್ದಾರ್ ಕ್ಲಾರ್ಕ ತೋಟಯ್ಯ ನಾಯ್ಕನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದರೆ:—

ನಾನು ವ ನನ್ನ ಅಣ್ಣ ಕೃಷ್ಣನಾಯ್ಕರು ಈ ವರೆಗೆ ಅವಿಭಕ್ತ ಕುಟುಂಬದ ಮೆಂಬರರಾಗಿದ್ದರೂ ಅನೇಕ ಕಾರಣಗಳಿಂದ ಇನ್ನು ಮುಂದೆ ಅವರ ಅವಿಭಕ್ತ ಸಹೋದರನಾಗಿ ಇರುವದೇ ನನಗೆ ಕಬೂಲು ಇಲ್ಲದೆ ಯಿದ್ದದರಿಂದ ನನ್ನ ಹಿಸೆ ವಗೈರೆಯನ್ನು ಕೇಳಿ ಅವರಿಗೆ ರಿಜಿಸ್ಟ್ರಿ ನೋಟೀಸು ಕೂಡಾ ಕೊಟ್ಟಿರುತ್ತೇನೆ. ಆದುದರಿಂದ ನಾವು ವಿಭಕ್ತರಾಗಿದ್ದೇವೆಂತ ಸರ್ವರಿಗೂ ಯಿ ಮೂಲಕ ತಿಳಿಸಿರುತ್ತೇನೆ. ಕುಟುಂಬದ ಯಜಮಾನನೆಂಬ ಧೋರಣೆ ಮೇಲೆ ಈ ವರೆಗೆ ಅವರು ಮಾಡಿದ ಮೋಸ ಕೃತ್ಯ ವ ದುರುಪಯೋಗಗಳ ಕುರಿತು ನಾನು ದಾವಾ ಮಾಡುವದೇ ಉದ್ಯುಕ್ತನಾಗಿದ್ದೇನೆ. ಇನ್ನು ಮುಂದೆ ಕೂಡಾ ಅವರಿಗೆ ಯಾರಾದರೂ ಸಾಲ ವಗೈರೆ ಕೊಟ್ಟಲ್ಲಿ ಅಂತಾ ಸಾಲಗಳು ನನ್ನ ಮೇಲೆ ಯಾ ನನ್ನ ಹಿಸೆ ಮೇಲೆ ಬದ್ಧೀಕರಿಸತಕ್ಕದ್ದಲ್ಲಾ.

ಉಡುಪಿ.
ತಾ.29-1-46 } **Thotaya Nayak.**

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇಳು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿಗೆ ೧ ಕ್ಕೆ ೫ ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೇಸ್. ಪತ್ರವ್ಯವಹಾರ ಮಾತಕತ್ತ ಮೂಲಕರ ವಿಳಾಸ.

ಶಿವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya. GADAG.

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2.	ಸಾಮುದ್ರಿಕ ಶಾಸ್ತ್ರ	0	8	0
3.	ಬಾಲ ರಾಮಾಯಣ	0	5	0
4.	ಸುಕನ್ಯಾ ಚರಿತ್ರೆ	0'	5	0
5.	ಕೊಳಲು ಕೃಷ್ಣ	0	8	0
6.	ಗುರುಪೀಠಗಳ ಅವನತಿ	0	8	0
7.	ದ್ವೈತಮತ ಖಂಡನೆ	0	6	0
8.	ಧರ್ಮಸಂಕಟ	0	4	0
9.	ಪೂರೂರವ	0	8	0
10.	ನಿಶ್ಚಯ ಜ್ಞಾನ	0	8	0
11.	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13.	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gauthama the Buddha	0	8	0
16.	ಪ್ರಾರ್ಥನೆ	0	2	0
17.	ಹಿಂದೀ ಪಹಲಿ ಪೋಥಿ	0	2	0
18.	ಹರಿಶ್ಚಂದ್ರ ಆಖ್ಯಾನ (ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)	0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ರರಂಜನ ಭವನ, **ಉಡುಪಿ.**

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣ ರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗ್	0	8	0
ತುಳು ವ್ಯಾಕರಣ	1	0	0
ಮದ್‌ಮಾಳತ್ತ್ ಮದ್‌ಮಾಯೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	0	2	0
ಮಿತ್ತ್ಯ ನಾರಾಯಣ ಕತೆ	0	1	0
ಸತೀ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇ ಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. **ದಪ್ಪವಾದ ಹೊದಿಕೆಯುಳ್ಳದ್ದು:**

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ರರಂಜನ ಭವನ, **ಉಡುಪಿ.**

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೋ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ರರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR. ರಜತೋತ್ಸವದ ವರ್ಷ. **Estd. 1921** ಸ್ಥಾಪನೆ.

NAVAYUGA

ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ ೨೪] Founder: **SRI A. B. SHETTY.** [No. 24

ಉಡುಪಿ ● **14-2-1946** ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ.

ತಲೆನೋವು, ಶೀತ, ನೆಗಡಿ, ಮೈಕೈ ನೋವು, ಉಳುಕು, ಸೆಳೆತ, ಇತರ ವೇದನೆಗಳು ಮತ್ತು ಗಾಯಗಳನ್ನು ಸರಿಪಡಿಸುವುದು; ಬೇರೆ ಇತರ ಮುಖ್ಯವಾದ ಬೇನೆ ಮತ್ತು ಖಾಯಿಲೆಗಳಲ್ಲಿಯೂ ಉಪಯೋಗಿಸಬಹುದು.

REGD.

ಔಷಧ ಅಂಗಡಿಗಳಲ್ಲಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

TO THOSE WHO DEMAND SOMETHING BETTER IN LIFE.

In the competitive world of to-day financial backing provides valuable opportunities whether it be in the field of education, commerce or industry. You are certainly desirous that your children should have better opportunities in life.

Ambitious parents like you have found our Children's Endowment Policies suitable for that purpose

THE CANARA MUTUAL ASSURANCE COMPANY, LTD.,

Head Office:- **UDIPI, (S. India.)**

ನಿರೀಕ್ಷಣೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು.

ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು.

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ,

ಇವರು

'ಮುಕ್ತಿ'

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯಲ್ಲಿ

ಬೇಗನೇ ಪ್ರದರ್ಶಿಸಲಿರುವರು.

ಲೇಖಕರು: ನಿರ್ಮಾಣಕರು ಮತ್ತು ನಿರ್ದೇಶಕರು...

ಶ್ರೀ. ಯಂ. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇದೊಂದು ನವೀನ ಪ್ರಯೋಗ. ಕನ್ನಡಿಗರಿಗೆ ಇದೊಂದು ಸುಸಂಧಿ. ನವೀನ ಪಾತ್ರವರ್ಗದವರು ಕರ್ನಾಟಕ ರಂಗಭೂಮಿಯ ಕಳೆಯನ್ನು ಹೆಚ್ಚಿಸಿ, ತಮ್ಮೊಳಕೆ ಕಲಾ-ಸೇವೆಯನ್ನು ಮಾಡಲಿರುವರು.

ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡೆಕೊಳ್ಳಿರಿ.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ,

ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,

ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರೆ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ಶಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:– ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್. ಎಸ್. ಶೆಣೈ, ರಥಬೀದಿ; ಡಾ। ಸಿ. ಪಿ. ಆಚಾರ್ಯ, ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank at

MERCARA

ON 23-1-1946.

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

ಭಿನ್ನತೆಯಿದ್ದಲ್ಲೇ ಆಕರ್ಷಣೆ

'ದುಬೀಣ ಸುಧಾರಿ'ಯಿಂದ.

ಆಕೆ ಸಾಧು ಸ್ವಭಾವದ ಹುಡುಗಿ; ವಿದ್ಯಾವತಿ; ಸುಸಂಸ್ಕೃತೆ. ಅನಗತ್ಯವಾದ ಒಂದೇ ಒಂದು ಶಬ್ದ ಅವಳ ತುಟಿಗಳಿಂದ ಹೊರಟಲಾರದು. ಬೇಡವಾದ ಕಡೆಗೆ ಒಂದು ಬಾರಿಯಾದರೂ ಅವಳ ಕಾಲು ಚಲಿಸಲಾರದು. ತನ್ನ ಮನೇ ಹಿತ್ತಿಲು, ಅದಕ್ಕೊತ್ತಿರುವ ತೋಟಬಿಟ್ಟು ಹೋದವಳಲ್ಲ. ಯಾವುದೊಂದು ಗಂಡು ಮುಖವನ್ನಾದರೂ ನೋಡಿ ಆಕೆ ನಕ್ಕುದನ್ನು ಕಂಡವರಿಲ್ಲ. ಅಂತಹ ಹುಡುಗಿ ರತ್ನ. ಇವಳಿಗೆ ತಕ್ಕ ಜತೆ ಊರಲ್ಲಿ ಹಲವರಿದ್ದರು. ತಾವು ಸುಸಂಸ್ಕೃತರು; ಉತ್ತಮ ನಡತೆಯವರು; ಸಭ್ಯ ನಾಗರೀಕರು ಎಂದು ನೆನಸಿಕೊಂಡ ಯುವಕರಿದ್ದರು. ಅವರಲ್ಲಿ ಪ್ರತಿಯೊಬ್ಬರೂ ಆಕೆಯನ್ನೇ ಬಯಸಿದ್ದರು. ಬಚ್ಚ ಶುದ್ಧ ಬುಚ್ಚ. ಬೇಡವಾದ್ದನ್ನೇ ಆಡುವವ; ಮಾಡುವವ. ರತ್ನಳ ಮನೆ ಸುತ್ತಲೂ ಆಗಾಗ ಅವನ ಸಂಚಾರ ಇದು ಅವನ ಪೋಲಿಗಿರಿ ಹೊರತು ರತ್ನಳ ಪ್ರೇಮಸೂರೆಯೆಂದು ಯಾರೂ ಭಾವಿಸಿರಲಿಲ್ಲ. ಸಾಧ್ಯವೇ? ರತ್ನನಂತಹ ಹುಡುಗಿ ಈ ಬುಚ್ಚನಿಗೆ ಒಲಿಯುವದುಂಟೆ? ಆದರೆ 'ಮೇಲ್ದರ್ಜೆ'ಯ ತರುಣರು ಅತ್ತ ಸುಳಿದಾಗಲೆಲ್ಲಾ ರತ್ನಳ ಜಡೆಯನ್ನು ಮಾತ್ರ ಕಂಡು ಬಂದಿದ್ದಾರೆ. ಆದರೆ ಬಚ್ಚನ ಸಂಬಂಧ ಆಕೆಯೊಡನೆ ದೃಷ್ಟಿಯುದ್ಧ, ಭೇಟಿ, ಮಾತುಕತೆ, ಜತೆ ಸಂಚಾರವಾಗಿ ಬೆಳೆದು ಈಗ ಆ ಹುಡುಗಿ ನಿಸ್ಸಂಕೋಚವಾಗಿ ಅವನನ್ನು ತನ್ನವನನ್ನಾಗಿಮಾಡಿಕೊಂಡಿದ್ದಾಳೆ. ಸದ್ಯ ಬಚ್ಚ ಸಂಭಾವಿತನಾಗಿದ್ದಾನೆ. ಮೊದಲು ತಾವು ಸಂಭಾವಿತರೆಂದು ಭಾವಿಸಿಟ್ಟ ತರುಣರೆಲ್ಲಾ ಈಗ ಘಟಿಂಗರಂತೆ ವರ್ತಿಸಹತ್ತಿದ್ದಾರೆ.

೦೦ ೦೦ ೦೦

ತ್ರೋರ, ಉದ್ದ ಬೆಳೆದ ಹೆಂಗುಸು ಸುಬ್ಬಿ. ಆಕೆಯ ಗಂಡ ತೀರಾ ಬಡಕಲು. ಮನೆಯಲ್ಲಿ ಗಂಡ ಮಲಗಿರುವಾಗ ಹೆಂಡತಿ ಅಲ್ಲೇ ಕಾಲಬುಡದಲ್ಲಿ ಕುಳಿತಿದ್ದರೆ ಗುಡಾಣವಿಟ್ಟು, ಒಲೆಗೊಂದು ಕಟ್ಟಿಗೆ ಕಂಡನ್ನೊಡ್ಡಿದಂತೆ ಕಾಣುತ್ತದೆ. ಆದ್ದರಿಂದ ಅವಳ ಮೇಲೆ ಎಲ್ಲರಿಗೂ ಕನಿಕರ. ಆರೆ ಹೊಟ್ಟೆಯಲ್ಲಿರುವವರನ್ನು ಕಂಡರಿಷ್ಟು ಕೊರಗೋ ಹಾಗೆ. ಪಾಪ; ಅವಳ ಜೀವನದಲ್ಲಾವ ಸುಖವೂ ಇರಲಾರದೆಂದೇ ಆ ಕಡೆಯ ಗಂಡಸರ ತರ್ಕ. ಅಲ್ಲಿಯವರ ಮಾತುಕತೆಗಳನ್ನೆಲ್ಲಾ ಬರೆದುಕೊಳ್ಳುವವರಿರುತ್ತಿದ್ದರೆ. 'ವಿಷಮ ದಾಂಪತ್ಯ'ದ ದುಷ್ಪರಿಣಾಮಗಳನ್ನು ಚಿತ್ರಿಸುವ ಹಲವು ಕೃತಿಗಳಾಗುತ್ತಿದ್ದುವು. ಸುಬ್ಬಿಗುಪಕಾರ ಮಾಡುವ ಮನಸ್ಸು ಹಲವು ಗಂಡಸರಿಗೆ ಮೊಳೆತಿತ್ತು. ತಮ್ಮ ಸಿದ್ಧತೆಯನ್ನವರು ಆಕೆಗೆ ಹಲವು ವಿಧದಿಂದ ಸೂಚಿಸಿದ್ದರು. ಆದರೆ ಅತೃಪ್ತಿಯಿದ್ದುದ ಇಂಥವರ ಮನಸ್ಸಿನಲ್ಲೇ ಹೊರತು ಸುಬ್ಬಿಯಲ್ಲಲ್ಲ. ಆಕೆ ತನ್ನ ಒಣ ಕಡ್ಡಿಯಂತಹ ಗಂಡನಿಂದ ಸುಖಕ್ಕೆ ಉಬ್ಬಿಯೇ ಹಾಗೆ ದಪ್ಪ ಬೆಳೆದಿದ್ದಾಳೆ ಎಂಬಂತಿದ್ದಳು. ತೂಕ,ಅಥವಾ ಅಳತೆಯಲ್ಲಿ ಅಂತಹ ಇಪ್ಪತ್ತು ದೇಹಗಳನ್ನು ಹಾಕಿ ಓವರ್ ಸುಬ್ಬಿಯಾಗಬೇಕು. ಆದರೆ ಸುಬ್ಬಿಯ ಇದಿರಲ್ಲಿ ಆ ವಾಮನ ವಿಶ್ವಾಕಾರ ತಾಳುತ್ತಾನೇನೋ. ಆಕೆ, ತನ್ನನ್ನು ಸಂತೈಸಲು ಬರುವ ಇತರರನ್ನು ಕಣ್ಣೆತ್ತಿ ನೋಡುವದು ಹಾಗಿರಲಿ; ತನ್ನ ಗಂಡನೆಲ್ಲಿಯಾದರೂ ಬೇರೆಯವರ ಸಹಾಯಕ್ಕೆ ಹೋಗುತ್ತಾನೇನೋ ಎಂಬ ಭೀತಿಯಿಂದ ಅವನನ್ನೇ ಕಾಯುತಿದ್ದಾಳೆ!

೦೦ ೦೦ ೦೦

ಊರ ಜಾತ್ರೆ. ಭರತ ನಾಟ್ಯ ಪ್ರವೀಣರೊಬ್ಬರು ಬೇಸರ ಕಳೆಯುವದಕ್ಕಾಗಿ ಮಿತ್ರರೊಂದಿಗೆ ಸೇರಿ ಜಾತ್ರೆಗೆ ಹೊರಟಿದ್ದರು. ಅಲ್ಲಿಯ ಬಯಲಿನಲ್ಲಿ ಪದ್ಧತಿಯಂತೆ ಕೊರಗರ ಡೋಲು ಸೇವೆ ನಡೆದಿತ್ತು. ದೊಡ್ಡ, ಸಣ್ಣ ಡೋಲುಗಳನ್ನು ಕೆಲವರು ಬಾರಿಸುತ್ತಿದ್ದರು; ಒಬ್ಬ ಕೊಳಲೂದುತಿದ್ದ. ಸುಮಾರು ಹತ್ತುಹದಿನೈದು ಮಂದಿ ಸಣ್ಣದೊಡ್ಡ ಕೊರಗರು ಆ ಡೋಲು ಮತ್ತು ಕೊಳಲಿಗನುಗುಣವಾಗಿ ಕುಣಿಯುತಿದ್ದರು. ಅವರ ನಡುವೆ ಇಬ್ಬರು-ಮೂವರು ಕೊರಪಳುಗಳು. ಭರತನಾಟ್ಯ ಪ್ರವೀಣರಿದ್ದ ಗುಂಪು ಆ ಹಾದಿಯಿಂದ ಬರುತ್ತಿತ್ತು. ಜತೆಯಲ್ಲಿದ್ದ ಮಿತ್ರರಿಗೆ ನಾಚಿಕೆಯಾಯಿತು. ಕೊರಗರ ಕುಣಿತವನ್ನು ಕಂಡು ಆ ಕಲಾವಿದರೆಲ್ಲಿಯಾದರೂ 'ಇದು ಕಾಡು ಜನರ ಊರು' ಎಂದು ನೆನಸಿಕೊಳ್ಳುವರೇನೋ ಎಂದು ಅವರ ಭೀತಿ. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. 'ಅದು ನಮ್ಮೂರ ಒಂದು ಕೊಳಕು ಭಾಗವಷ್ಟೆ' ಎಂಬಂತೆ ಆ ಅತಿಥಿಕಲಾವಿದರೊಡನೆ ಕ್ಷಮೆ ಕೇಳುವ ಭಂಗಿಯಲ್ಲಿ ಅವರೆಲ್ಲಾ "ಮುಂದೆ ಹೋಗುವ" ಎಂದರು. ಆದರೆ ಆ ನಾಟ್ಯ ನಿಪುಣನಿಗೆ ಕಾಲು ಬಾರದು, ಅವರು ಅಲ್ಲೇ ನಿಂತರು. ಉತ್ಸವದ ಬೇಂಡುವಾಲಗಗಳ ಗದ್ದಲವಾವುದೂ ಅವರನ್ನು ಆಕರ್ಷಿಸಲಿಲ್ಲ. ಕೊರಗರ ನಾಟ್ಯ ಮುಗಿಯುವ ವರೆಗೂ ಅವರೆಲ್ಲಾ ಅಲ್ಲಿಯೇ. ಡೋಲು-ಕೊಳಲಿನ ತಾಳಕ್ಕನುಸಾರವಾಗಿ ನಿಂತಲ್ಲೇ ಈ ನರ್ತನಪಟು ಮೈಯೊಲೆಯುವದು—ಹೆಜ್ಜೆ ಯಾಡಿಸುವದು-ಕಂಡು ಬರುತಿತ್ತು. ಅಲ್ಲಿಂದ ಹೊರಡುವಾಗ ತಕ್ಕಮಟ್ಟಿಗೆ ಆ ಭರತ ನಾಟ್ಯಕಾರನಿಗೆ ಕೊರಗ ನಾಟ್ಯದ ಅಭ್ಯಾಸವೂ ಆಗಿತ್ತು.

೦೦ ೦೦ ೦೦

ಪುಷ್ಪ ಬಹಳ ಮುದ್ದಾಗಿ ಬೆಳೆದ ಹುಡುಗಿ. ತಂದೆ ಹೇರಳ ಇದ್ದವ. ಒಬ್ಬಳೇ ಮಗಳು. ವಿಶೇಷ ಅಕ್ಕರೆಯಿಂದ ಸಾಕಿ ಆಕೆಯನ್ನು ಬೆಳೆಸಿದ್ದರು. ಮುದ್ದಣನಿಗೆ ಅಲ್ಲಿಗೆ ಬಂದು ಹೋಗುವ ಸ್ವಾತಂತ್ರ್ಯವಿತ್ತು. ಪುಷ್ಪನ ತಂದೆತಾಯಿಗಳೆದಿರಲ್ಲಿ ಪುಷ್ಪನೊಡನೆ ಬೇಕಾದನ್ನು ಸಲುಗೆಯ ಮಾತಾಡುವ ಅಧಿಕಾರ ಅವನಿಗಿತ್ತು. ಬರಬರುತ್ತಾ ಆಕೆಯೊಡನೆ ಅತ ಚೇಷ್ಟೆಗೂ ಆರಂಭಿಸಿದ. ಆಕೆಯೆಲ್ಲಿಯಾದರೂ ತಂದೆತಾಯಿಗಳೆದಿರು ಮುದ್ದಣನನ್ನು ಜರೆಯುತಿದ್ದರೆ ಅಂದಿನಿಂದಲೇ ಅವನಿಗೆ ಮನೆಗೆ ಬಹಿಷ್ಕಾರ ಬೀಳುತಿತ್ತು. ಆದರೆ ಪುಷ್ಪನಿಂದ ಅಂತಹ ಅನ್ಯಾಯವಾಗಲಿಲ್ಲ. ಮುದ್ದಣ ಏನೇ ಮಾತಾಡಿದರೂ ಪುಷ್ಪನಿಗದು ಬೇಡವಾದ ಲಕ್ಷಣಕಾಣುತ್ತಿರಲಿಲ್ಲ;

(೧೧ನೇ ಪುಟ ನೋಡಿರಿ)

ಅಂತರಂಗ ಆಯುರ್ವೇದ ಸಂಚಿಕೆಯ

ಕುರಿತು ಪತ್ರಿಕೆಗಳ ಕೆಲವು ಅಭಿಪ್ರಾಯಗಳು.

. ...ಈ ವಿಶೇಷಾಂಕದಲ್ಲಿ ಕರ್ನಾಟಕದ ಪ್ರಮುಖ ಆಯುರ್ವೇದ ವಿದ್ವಾಂಸರ ಆಯುರ್ವೇದಕ್ಕೆ ಸಂಬಂಧಪಟ್ಟ ಉಪಯುಕ್ತ ಲೇಖನಗಳು ತುಂಬಿವೆ. ಈಗ ಕಾಲಗತಿಗೆ ಕಟ್ಟುಬಿದ್ದು ಇಳಿಗಾಲ ಕಂಡಿರುವ ಆಯುರ್ವೇದದ ನಿಜವಾದ ಮಹತಿಯನ್ನು ಕಾಣಲು ಇದು ಬಹಳ ಸಹಾಯ ಮಾಡುವದು.

—ಕರ್ಮವೀರ,
ಹುಬ್ಬಳ್ಳಿ, ೪-೨-೪೭.

......ಈ ವಿಶೇಷ ಸಂಚಿಕೆಯಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದ ಮೂವತ್ತಕ್ಕೆ ಮಿಕ್ಕ ವಿದ್ವತ್ಪೂರ್ಣ ಲೇಖನಗಳಿವೆ. ಲೇಖನಗಳನ್ನು ಬರೆದ ವೈದ್ಯ ಮಹನೀಯರು ಅಖಿಲಭಾರತದಲ್ಲಿಯೂ, ಕರ್ನಾಟಕದಲ್ಲಿಯೂ ಕೀರ್ತಿ ಪಡೆದವರಾಗಿದ್ದಾರೆ. ಆಯುರ್ವೇದಾಭ್ಯಾಸಿಗಳಿಗೆ ಮಾತ್ರವಲ್ಲದೆ ಸಾಮಾನ್ಯ ಜನರೂ ಅಗತ್ಯ ಓದಬೇಕಾದ ವಿಶೇಷ ಸಂಚಿಕೆ.

—ರಾಷ್ಟ್ರಬಂಧು,
ಮಂಗಳೂರು, ೧೩-೧-೪೭.

....ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅ. ಭಾ. ಆಯುರ್ವೇದ ಮಹಾಸಮ್ಮೇಲನವು ಪ್ರಥಮಬಾರಿ ಜರಗುವ ಸಂದರ್ಭದಲ್ಲಿ, 'ಅಂತರಂಗ'ದವರು ಹೊರಡಿಸಿದ ಈ ವಿಶೇಷಾಂಕಕ್ಕಾಗಿ ಅವರನ್ನು ಅಭಿನಂದಿಸುವೆವು. ಆಯುರ್ವೇದಕ್ಕೆ ಸಂಬಂಧಿಸಿದ ಲೇಖನಗಳನ್ನೇ ಸಂಗ್ರಹಿಸಿ, ಕನ್ನಡ ಲೇಖಕರಿಗೆ ಪ್ರಾಮುಖ್ಯತೆಯಿತ್ತು, ಕನ್ನಡಿಗರೂ ನಮ್ಮ ಜಿಲ್ಲೆಯವರೂ ಆಗಿದ್ದ ಪಂಡಿತ ತಾರಾನಾಥರ ಸ್ಮಾರಕವಾಗಿ ಇದನ್ನರ್ಪಿಸಿದುದು ಯಥಾರ್ಥವಿದೆ. ಆಯುರ್ವೇದಕ್ಕೆ ಮೀಸಲಾಗಿಟ್ಟ ವಿಶೇಷಾಂಕವು ನಮ್ಮ ಜಿಲ್ಲೆಯಲ್ಲಿ ಇದೇ ಮೊದಲನೆಯದು. ಪ್ರತಿಯೊಬ್ಬನೂ ಅತ್ಯವಶ್ಯವಾಗಿ ಸಂಗ್ರಹಿಸಬೇಕಾದ ಕಾಣಿಕೆ.

—ಪ್ರಭಾತ,
ಮಂಗಳೂರು, ೨೧-೧-೪೭.

......ಈ ಸಂಚಿಕೆಯು ಸರ್ವಾಂಗ ಸುಂದರವಾಗಿದ್ದು ಸರ್ವರಿಗೂ ಸಂಗ್ರಾಹ್ಯವಾಗಿದೆ. ಬಹಿರಂಗವು ಆಕರ್ಷಕವಿದ್ದು, ಅಂತರಂಗವು ತಜ್ಞರ ಬರಹಗಳಿಂದ ತುಂಬಿದೆ.

—ನಿರ್ಭಯ,
ಬೆಳಗಾಂ, ೨೪-೧-೪೭.

..... ಈ ವಿಶೇಷ ಸಂಚಿಕೆಯು ಬಣ್ಣದ ಮುಖಪೃಷ್ಠದಿಂದಲೂ, ಶ್ರೀ ಧನ್ವಂತರಿಯ ಬಣ್ಣದ ಮೋಹಕ ಛಾಯಚಿತ್ರದಿಂದಲೂ ಹಾಗು ಕೆಲವು ಆಯುರ್ವೇದ ಲೇಖಕರ ಪಡಿಯಚ್ಚುಗಳಿಂದಲೂ ಅಂದವಾಗಿದ್ದು, ಕಟ್ಟು ಚಂದವಾಗಿದೆ. ಜ್ಞಾನ ಸಮುದ್ರದಲ್ಲಿ ಸ್ವೇಚ್ಛೆಯಾಗಿ ವಿಹರಿಸುತ್ತಿದ್ದ ಕೇವಲ ಸಾಹಿತ್ಯರಸವನ್ನು ಆಸ್ವಾದಿಸುತ್ತಿದ್ದ 'ಅಂತರಂಗ'ವು ಈಗ ಬುಡದ ವರೆಗೂ ಮುಳುಗಿ 'ಆಯುರ್ವೇದ ರತ್ನ'ವನ್ನು ಮೇಲಕ್ಕೆ ತಂದು ಜಗತ್ತಿಗೆ ಪ್ರದರ್ಶಿಸಲು ಯತ್ನಿಸುತ್ತಿದೆ. ಇದು ನಿಜವಾಗಿಯೂ ಅಭಿನಂದನೀಯವಾದುದು- ಒಟ್ಟಿನಲ್ಲಿ ವೈದ್ಯ ಡಾಕ್ಟರಿಗಷ್ಟೇ ಅಲ್ಲದೆ ಎಲ್ಲರಿಗೂ ಈ ವಿಷಯವು ಗೊತ್ತಿರುವದು ಅತ್ಯಾವಶ್ಯಕವಿರುವುದರಿಂದ ಈ ಸಂಚಿಕೆಯು ವಾಚನೀಯವಾಗಿದೆ.

—ಸಂದೇಶ,
ಬೆಳಗಾಂ, ೧೪-೧-೪೭.

. 'ಅಂತರಂಗ'ದ ಧ್ಯೇಯ ಉತ್ತಮ್ಯಾರ್ಗವಾದುದು ನಮ್ಮ ಪುರಾತನ ಪ್ರಸಿದ್ಧವಾದ ವೈದ್ಯಕೀಯ ಮಾರ್ಗ—ಆಯುರ್ವೇದ. ಅದರ ಮಹತ್ವವನ್ನರಿತು ಪ್ರಗತಿಯನ್ನು ಕೋರಿ ಅಖಿಲ ಭಾರತ ಆಯುರ್ವೇದ ಮಹಾ ಸಮ್ಮೇಳನವನ್ನು ಪ್ರತಿ ವರ್ಷವೂ ನಡೆಸುತ್ತಿರುವರು. ...ಈ ವಿಶೇಷಾಂಕವನ್ನು ಪಂಡಿತ ತಾರಾನಾಥರಿಗೆ ಕಾಣಿಕೆಯಾಗಿ ಅರ್ಪಿಸಿದ್ದಾರೆ. ನಮ್ಮಲ್ಲಿ ಇಂಥ ವಿಶೇಷಾಂಕಗಳು ಅಪರೂಪ. ಸಂಪಾದಕರ ಸಾಹಸಕಾರ್ಯ ಸರ್ವದಾ ಶ್ಲಾಘನೀಯವಾದುದು. ಅಂತರಂಗ ಎಲ್ಲರ ಅಂತರಂಗವನ್ನೂ ಮುಟ್ಟಿ ತಣಿಸುವುದೆಂದು ನಂಬಿ ಅವರಿಂದ ಬರಮಾಡಿಕೊಳ್ಳುತ್ತೇವೆ.

—ವಿಕಟವಿನೋದಿನಿ,
ಬೆಂಗಳೂರು, ೨-೨-೪೭.

. ಈ ವಿಶೇಷಾಂಕದಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದ ಉತ್ತಮ ವಿದ್ವತ್ಪೂರ್ಣ ಲೇಖನಗಳಿವೆ, ಆಯುರ್ವೇದ ಸರ್ವಾಂಗಗಳ ಮೇಲೆಯೂ ಅಖಿಲ ಭಾರತ ಹಾಗೂ ಕರ್ನಾಟಕದಲ್ಲಿ ಕೀರ್ತಿಪಡೆದ ಲೇಖಕರಿಂದ ಲೇಖನಗಳಿದ್ದು, ಎಲ್ಲ ಕನ್ನಡಿಗರು ಓದಿ ಸಂಗ್ರಹಿಸಿ ಇಡಬೇಕಾದ ಸಂಚಿಕೆ.

—ವಿವೇಕಾಭ್ಯುದಯ,
ಮಂಗಳೂರು, ೨೦-೧-೪೭.

ಲೇಖನ, ಭಾಷಣ, ಚಿತ್ರಗಳಿಂದೊಡಗೂಡಿರುವ ಅಪೂರ್ವ ಸಂಚಿಕೆ.

150 ಪುಟಗಳು. .... ಬೆಲೆ ರೂ. 1—0—0

ರೂ. 1—4—0ನ್ನು ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿ ಮಾಡಿ ಕಳಿಸಲಾಗುವುದು.

ಈ ತಿಂಗಳಾಂತ್ಯದೊಳಗೆ ರೂ. **4—8—0** ಕಳುಹಿಸಿ 'ಅಂತರಂಗ' ವಾರಪತ್ರಿಕೆಗೆ ಚಂದಾದಾರರಾಗುವವರಿಗೆ **ಈ ಸಂಚಿಕೆ ಉಚಿತ.**

ಮೆನೇಜರ್, ಅಂತರಂಗ ಆಫೀಸು, ಉಡುಪಿ.

ಸ್ವಾತಂತ್ರ್ಯ ಬೇಡಿಕೆಯಲ್ಲಿ ಹಿಂದೀಯರು ಏಕಮತದಲ್ಲಿದ್ದಾರೆ.

ಪಾರ್ಲಿಮೆಂಟರೀ ಸಮಿತಿಯ ಅಭಿಪ್ರಾಯ

ಭಾರತದಲ್ಲಿ ಐದು ವಾರ ಸಂಚರಿಸಿ, ನಿರ್ಲಿಪ್ತಬುದ್ಧಿಯಿಂದ ಸಾಧ್ಯವಿದ್ದಷ್ಟು ಸಂಗತಿಗಳ ವಿಮರ್ಶೆ ನಡೆಸಿ, ಪ್ರತ್ಯಕ್ಷ ಪರಾಂಬರಿಸಿ, ಕಣ್ಣಾರೆ ಕಂಡು ಅನುಭವ ಮಾಡಿಕೊಂಡ ಬ್ರಿಟಿಷ್ ಪಾರ್ಲಿಮೆಂಟಿನ ಶಿಷ್ಟಮಂಡಲವು ಒಂದು ಸರ್ವ ಸಮ್ಮತಿಯ ನಿರ್ಧಾರಕ್ಕೀಗ ಬಂದಿದೆ. 'ಹಿಂದುಸ್ಥಾನವು ಕೂಡಲೇ ಸ್ವತಂತ್ರವಾಗಬೇಕು-ಪಕ್ಷ ಭೇದಗಳು ಬಹಳವಿದ್ದರೂ, ದೇಶವು ಸ್ವತಂತ್ರವಾಗಬೇಕೆನ್ನುವ ಬೇಡಿಕೆಯಲ್ಲಿರುವ ಏಕಾಭಿಪ್ರಾಯದಿದಿರಲ್ಲಿ ಅಂತಹ ಭೇದನಾವುದೂ ಉಳಿದಿಲ್ಲ'-ಎಂಬುದೇ ಆ ಮಂಡಲಿಯ ಸ್ವತಂತ್ರ ಹಾಗೂ ನ್ಯಾಯಬದ್ಧ ಶೋಧನೆ. ಅವರು ಈಗ ತಾನೇ ಇಂಗ್ಲಾಂಡಿಗೆ ಹಾರಲಿದ್ದಾರೆ. ನವಡಿಲ್ಲಿಯಲ್ಲಿ ಒಟ್ಟಿಗೆ ಕಲೆತು ತಾವು ಬ್ರಿಟಿಷ್ ಸರಕಾರಕ್ಕೊಪ್ಪಿಸಬೇಕಾದ ವರದಿಯ ಕುರಿತು ಪರ್ಯಾಲೋಚನೆ ನಡಿಸಿದ್ದಾರೆ. ಶಿಷ್ಟ ಮಂಡಲದ ವರದಿ ಚಿಕ್ಕದಿದ್ದು ಅದರಲ್ಲಿ ಭಾರತದ ಸಮಸ್ಯೆಯನ್ನು ಬಿಡಿಸಲಾಗುವ ಸೂಚನೆಗಳು ಬಂದಿವೆ. ಒಂದು ತಾರೀಕು ನಿಶ್ಚಯಿಸಿ, ಅದರೊಳಗೆ ಭಾರತಕ್ಕೆ ಪೂರ್ಣ ಸ್ವತಂತ್ರ್ಯವೆಂದು ಬ್ರಿಟಿಷ್ ಸರಕಾರ ಜಾಹೀರುನಾಮೆ ಹೊರಡಿಸಬೇಕಲ್ಲದೆ ಬೇರಾವುದೂ ಪರಿಣಾಮಕಾರಿಯಾಗುವಂತಿಲ್ಲವೆಂಬ ಕುರಿತು ಸಮಿತಿಯ ಹೆಚ್ಚಿನವರಲ್ಲಿ ಏಕಾಭಿಪ್ರಾಯವಿದೆ. ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರಕಾರ ಮತ್ತು ಒಂದು ರಾಜ್ಯಾಂಗ ರಚನಾಸಭೆಯನ್ನು ರಚಿಸುವ ಅಧಿಕಾರವನ್ನು ವೈಸರಾಯರಿಗೀಯಬೇಕೆಂದು ಈ ಸಮಿತಿಯು ಬ್ರಿಟಿಷ್ ಸರಕಾರಕ್ಕೆ ಶಿಫಾರಸುಮಾಡಲಿದೆ. ದೇಶ ರಕ್ಷಣೆ ಮತ್ತು ಇತರ ಸಂಬಂಧಗಳ ಕುರಿತು ಇಂಗ್ಲಾಂಡು-ಭಾರತಗಳೊಳಗೆ ಮೈತ್ರಿ ಒಡಂಬಡಿಕೆ ಮಾಡಿಕೊಂಡರಾಯಿತೆಂದೂ ಅವರು ಸಲಹೆಕೊಡಲಿದ್ದಾರೆ.

ವಿದಾಯ ಮಾತುಕತೆ

ಈ ಪಾರ್ಲಿಮೆಂಟ್ ಸದಸ್ಯರು ಲಂಡನಿಗೆ ಹಿಂದಿರುಗುವ ಪೂರ್ವದಲ್ಲಿ ಪತ್ರಿಕಾ ಪ್ರತಿನಿಧಿಗಳು ನವಡಿಲ್ಲಿಯಲ್ಲಿ ಸುತ್ತುಗಟ್ಟಿ ಅವರಲ್ಲಿ ಪ್ರತಿಯೊಬ್ಬನಿಂದಲೂ ವಿದಾಯಾಭಿಪ್ರಾಯ ಕೇಳಿದರು. ಸಮಿತಿ ನಾಯಕ ಮಿ. ರಿಚಾರ್ಡ್ಸ್ ಹೇಳಿದರು.—"ಚುನಾವಣೆಯ ಕಾಲದಲ್ಲೇ ನಾವಿಲ್ಲಿ ಇದ್ದುದರಿಂದ, ಪ್ರತಿಯೊಂದು ಪಕ್ಷಕ್ಕೂ ಸಮ್ಮತಿಯಿರುವ ಒಂದು ಪ್ರಶ್ನೆಯ ಕುರಿತು ದೇಶದ ಭಾವನೆಯನ್ನರಿಯಲು ಅನುಕೂಲವಾಯಿತು. ನಿಮ್ಮೊಳಗೆ ಗಾಢಭಿನ್ನತೆಗಳೇನೋ ಇವೆ. ಆದರೆ ಸ್ವಾಯತ್ತೆಯನ್ನು ಸಂಪಾದಿಸಬೇಕೆನ್ನುವ-ನನ್ನ ನಮ್ರಾಭಿಪ್ರಾಯದಂತೆ ನಿಜಕ್ಕೂ ನ್ಯಾಯಬದ್ಧವಿದ್ದ-ಆತುರದ ಐಕ್ಯತೆಯಿದಿರಲ್ಲಿ ಅವೆಲ್ಲಾ ಮಾಯವಾಗುತ್ತವೆ. ಈ ಜಟಿಲ ಪ್ರಶ್ನೆಯ ಸಂಬಂಧವಾಗಿ ಹಲವು ಅಭಿಪ್ರಾಯಗಳಿವೆ. ಆದರೆ ಒಂದು ವಿಷಯವು ನಮಗೆಲ್ಲರಿಗೂ ಮನವರಿಕೆಯಾಗಿದೆ. ಹೇಗೂ ಕಟ್ಟಕಡೆಗೆ ಭಾರತವು ರಾಜಕೀಯ ಮಾನುಷತ್ವವನ್ನಾದರೂ ಗಳಿಸಿದೆ—ಆದ್ದರಿಂದ ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಪಂಗ್ತಿಯಲ್ಲಿ ಒಂದು ಸ್ಥಾನ ಸಂಪಾದಿಸಬಲ್ಲೆನೆಂಬ ಭಾರತದ ಭರವಸೆಯನ್ನು ಪೂರೈಸಿಕೊಡುವದು ಬ್ರಿಟನಿನ ಕರ್ತವ್ಯವೆಂದು ನಾನೆಣಿಸುತ್ತೇನೆ". ಭಾರತದಲ್ಲಿರುವ ತನ್ನ ದೇಶಬಾಂಧವರು ಬೆಕ್ಕಿಗೆ ಜೇರೆ ಬಿಡಾರವೆಂಬಂತಿರುವದನ್ನು ಮಿ. ರಿಚಾರ್ಡ್ಸ್ ಖಂಡಿಸಿದರು.

ಈ ವರುಷವೇ ಸ್ವಾತಂತ್ರ್ಯ

"ಹಿಂದುಸ್ಥಾನವು ಈ ವರುಷವೇ ಸ್ವತಂತ್ರವಾಗುವದೆಂದು ನಾನೆಣಿಸುತ್ತೇನೆ. ಇದಕ್ಕೊಂದು ತಿದ್ದುಪಡಿ ಸೂಚಿಸುವದು ದರಿಷ್ಟೆ:-ಈ ವರುಷದಲ್ಲೇ ಅದು ಸ್ವತಂತ್ರವಾಗದೆ ಹೋದರೆ, ಆಚೀ ಸಮೀಪದ ಅವಧಿಯಲ್ಲೇ ಪೂರ್ಣ ಸ್ವಾತಂತ್ರ್ಯದ ಗುರಿ ಸೇರಲಾಗುವ ಹಾದಿಯಲ್ಲಿ ಅದು ಬಲವಾದ ಹೆಜ್ಜೆಯನ್ನಾದರೂ ಊರಬೇಕು. "ಹಿಂದೀಯರು ತನ್ನೊಳಗೇ ಒಮ್ಮತದಿಂದಿಲ್ಲ; ಆದ್ದರಿಂದ ನಾವೇ ಅವರನ್ನು ಆಳಬೇಕು" ಎಂಬಂತಹ ಪ್ರಶ್ನೆಗಳಿಗೆ ಇನ್ನು ಸ್ಥಾನವಿಲ್ಲ"-ಎಂದು ಮೇಜರ್ ವ್ಯಾಟರ ಸ್ಪಷ್ಟ ವಾಣಿ. "ಭಾರತದ ಸ್ವಾಧಿಕಾರಕ್ಕಾವುದೂ ಅಡ್ಡ ಬರಕೂಡದೆಂಬುದೇ ನನ್ನ ಖಂಡಿತಾಭಿಪ್ರಾಯ" ಎಂಬ ಮಿ. ನಿಕೋಲ್ಸನರು. ಭಾರತಕ್ಕೆ ಸ್ವಾತಂತ್ರ್ಯದಾನವಾಗುವದು ಅತ್ಯಗತ್ಯವೆಂಬುದನ್ನು ನಾನೊಪ್ಪುತ್ತೇನೆ. ಭಾರತ ರಾಜಕೀಯದಲ್ಲಿ ಜಾತೀಯತೆಯು ಮುಖ್ಯ ಪ್ರಶ್ನೆ. ಆದರೆ ನಾನೋರ್ವ ಟ್ರೇಡ್ ಯೂನಿಯನಿಸ್ಟ. ನಾನೆನ್ನುತ್ತೇನೆ-ನೀವು ಯಾವವೇ ತೀರ್ಮಾನ ಮಾಡಿಕೊಂಡರೂ ಅದು ಕೆಲಸಗಾರನ ತೀರ್ಮಾನವಂತಿಲ್ಲ. ಕೆಲಸಗಾರನು ತನ್ನ ಹೋರಾಟವನ್ನು ಆ ಮೇಲೂ ಸಾಗಿಸಬೇಕಾಗುವದು ನೀವೇನೋ ಸ್ವಾತಂತ್ರ್ಯ ಸಂಪಾದಿಸಬಲ್ಲಿರಿ; ಆದರೆ ಕೆಲಸಗಾರರನ್ನು ತಮ್ಮ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಸಂಘಟಿಸದೆ ಬಿಟ್ಟರೆ ಪರಾಭವ ಗೊಳ್ಳುವಿರಿ. ನನ್ನ ಅಭಿಪ್ರಾಯದಲ್ಲಿ ಆರ್ಥಿಕ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯದಷ್ಟೇ ಮುಖ್ಯವಾದುದು"-ಎಂದು ಮಿ. ಬೊಟ್ಟೊಮ್ಲೆಯ ಮಾತು.

ಪಾಕಿಸ್ಥಾನದ ಅಪಾಯ

ಈ ಸಂದರ್ಭದಲ್ಲಿ ಭಾರತದ ಮಿತ್ರನೆಂದು ಪ್ರಸಿದ್ಧರಾಗಿರುವ ಮಿ. ಸೋರೆನ್ಸನರೆಂದರು: "ಬೇರೆ ವಿಷಯಗಳಲ್ಲಿ ಪಾಕಿಸ್ತಾನ್ ಪರಾಮರ್ಶೆ ಹೇಗೂ ಇರಲಿ; ಇಲ್ಲಿ ಕ್ರೈಸ್ತರು, ಯಹೂದಿಗಳು, ಪಾರ್ಸಿಗಳು, ಮುಸಲ್ಮಾನರು, ಹಿಂದುಗಳು ಇದ್ದಾರಾದ್ದರಿಂದ ಅವರೆಲ್ಲಾ ಒಂದೊಂದು ಪ್ರತ್ಯೇಕ ರಾಷ್ಟ್ರವಾಗುತ್ತಾರೆಂಬ ವಾದಕ್ಕೆ ಮಾತ್ರ ನಾನೊಪ್ಪಲಾರೆ. ಸ್ವಾಶಿ ಇಸ್ಲಾಮಿಗೆ ಮತಾಂತರಗೊಂಡು ಇಂಗ್ಲಾಂಡಿಗೆ ಮರಳುತ್ತೇನೆನ್ನೋಣ. ಅಷ್ಟು ಮಾತ್ರಕ್ಕಾಗಿ ಅಲ್ಲಿ ನಾನು ನನ್ನ ಇಸ್ಲಾಮ್ ಬಂಧುಗಳಿಗೆ ಪ್ರತ್ಯೇಕ ದ್ವೀಪಬೇಕೆಂದು ಚಳವಳ ಹೂಡಬಲ್ಲೆನೇ?ಒಂದು ಮತವನ್ನಾಧರಿಸಿ ಪಾಕಿಸ್ತಾನ್ ನಿರ್ಮಿಸುವದು ಅತ್ಯಂತ ಅಪಾಯಕರ ಯಾಕೆಂದರೆ ಅದು 'ಅಂತೆಕಂತೆ' ವಾರ್ತೆಗಳ ಬೇಟೆಗೆಡೆ ಕೊಟ್ಟು ಭಯಸಂದೇಶಗಳನ್ನು ನಿರ್ಮಿಸಿ, ಒಂದು ರೀತಿಯ ಸರ್ವಾಧಿಕಾರಿತ್ವದಲ್ಲಿ ಪರಿಣಮಿಸಲಿದೆ. ಪಾಕಿಸ್ತಾನ್ ಮತ್ತು ಹಿಂದುಸ್ತಾನ್ ಹೋರಾಟದ ಕುರಿತು ಸಡಿಲು ಮಾತುಗಳನ್ನು ಬೆಳಸಬೇಡಿರೆಂದು ನಾನು ಭಾರತೀಯರನ್ನು ವಿನಂತಿಸಿಕೊಳ್ಳುತ್ತೇನೆ". ಓರ್ವ ಪತ್ರಿಕಾ ಪ್ರತಿನಿಧಿ ಶಿಷ್ಟಮಂಡಲಿಯವರನ್ನು ಮರ್ಮಿಕವಾಗಿ ಪ್ರಶ್ನಿಸಿದ; "ನೀವು ಬ್ರಿಟಿಷ್ ಸರಕಾರಕ್ಕೆ ಈ ಕೆಳಗಿನ ಮೂರರಲ್ಲಿ ಯಾವುದನ್ನು ಶಿಫಾರಸು ಮಾಡಲಿರುವಿರಿ—ಒಂದು 'ಕ್ವಿಟ್ ಇಂಡಿಯಾ' ಅಥವಾ ಭಾರತದಿಂದ ವಿದಾಯ, ಎರಡನೆಯದು 'ಭಾರತದಿಂದ ವಿದಾಯ ಆದರೆ ಅದನ್ನು ವಿಭಾಗ', ಮೂರನೆಯದು 'ಸಾಧ್ಯವಿದ್ದಷ್ಟು ಸಮಯ ಸಾಧಿಸಿ ನಿಲ್ಲುವದು'. ಈ ಪ್ರಶ್ನೆಗೆ ಸಮಿತಿ ನಾಯಕ ರಿಚಾರ್ಡ್ಸರು ನೇರವಾದ ಉತ್ತರ ಕೊಡದೆ "ನಾನೆಂದರೆ ಪಾರ್ಲಿಮೆಂಟರೀ ಸಮಿತಿ; ಅನಧಿಕಾರಿಗಳು. ನಾವು ಮುಂದಿಡುವ ನ್ಯಾಯಬದ್ಧ ವರದಿಯನ್ನೂ ಇತರ ಸುದ್ದಿಗಳನ್ನೂ ಸಂಗ್ರಹಿಸಿ ಈ ಪ್ರಶ್ನೆಯನ್ನು ಉತ್ತರಿಸಬೇಕು ಬ್ರಿಟಿಷ್ ಸರಕಾರವೇ" ಎಂದರು.

ಸಾಮಾಜಿಕ ಸ್ಥಿತಿಗತಿ

"ನಾನು ಭಾರತದಲ್ಲಿ ಹಲವು ಸುಂದರ ದೃಶ್ಯಗಳನ್ನು ಕಂಡಿದ್ದೇನೆ. ಆದರೆ ಕಲ್ಕತ್ತದ ನಾರುಗಿರಣಿಗಳ ಸುತ್ತು ವಲಯದಲ್ಲಿರುವಂಥಾ ಕೊಳಕು ಮತ್ತು ಭಯಂಕರ ನೋಟವನ್ನು ನಾನೆಲ್ಲಿಯೂ ಇದಕ್ಕೆ ಪರಿಗೆ ಕಂಡದ್ದಿಲ್ಲ. ಲೋಕದ ಯಾವ ಕಡೆಯ ಯಾವ ನಾಗರಿಕತೆಗಾದರೂ ಇದೊಂದು ಅಘಾತ' ಎಂದ ಸ್ತ್ರೀ ಸದಸ್ಯೆ ಮಿಸೆಸ್ ನಿಕೋಲಸರ ಮಾತು. ಭಾರತದಲ್ಲಿರುವ ಕಲ್ಲಿದ್ದಲ ಗಣಿಗಳ ಕೆಲಸಗಾರರ ಕುರಿತು "ಇದ್ದಲ ಗಣಿಯ ಎಲ್ಲಾ ಕೆಲಸವನ್ನೂ ನಿಲ್ಲಿಸಿಬಿಡಬೇಕು ಎಂಬ ಬರ್ನಾರ್ಡ್ ಶಾರ ಅಭಿಪ್ರಾಯವೇ ನನಗೊಪ್ಪಿಗೆ" ಎಂದಿದ್ದಾರೆ ಶ್ರೀಮತಿ ನಿಕೋಲಸ್. "ಭಾರತದ ಶಿಕ್ಷಣ ಪದ್ಧತಿಯು ಅಪಕೀರ್ತಿದಾಯಕವೇ ಸರಿ. ಹುಡುಗಿಯ ಶಿಕ್ಷಣ ಪದ್ಧತಿಯಿಲ್ಲಿಲ್ಲ" ಎನ್ನುತ್ತಾ ಮಹಿಳೆಯರಿಂದ ಒಬ್ಬೇ ಕೆಲಸವಾಗಿದೆ ಎಂದು ಈ ಬ್ರಿಟಿಷ್ ಮಹಿಳೆ ಶಿಫಾರಸಿತ್ತಿದ್ದಾಳೆ. ಇಂಗ್ಲಾಂಡು ಮತ್ತು ಭಾರತಗಳೊಳಗೆ ಸ್ನೇಹ ಸಂಬಂಧ ವೃದ್ಧಿಯಾಗುವ ಭರವಸೆಯನ್ನು ಭಾರತದ ಮಾಜೀ ಉಪಕಾರ್ಯದರ್ಶಿ ಲೋರ್ಡ್ ಮನ್ಸ್ಟರರೂ ಸೂಚಿಸಿದರು. ಲೋರ್ಡ್ ಚೋರ್ಲೆ ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿರುವ ಅಸ್ಪೃಶ್ಯತೆಗಾಗಿ ಆಶ್ಚರ್ಯ ವ್ಯಕ್ತಪಡಿಸಿದರು. ದೇಶದ ಆಹಾರ ಪರಿಸ್ಥಿತಿಯ ಕುರಿತು ಎಲ್ಲಾ ಸದಸ್ಯರೂ ಆತಂಕ ಪ್ರದರ್ಶಿಸಿದರು.

ಈ ಪಾರ್ಲಿಮೆಂಟ್ ಸದಸ್ಯರ ಸೂಚನೆಗಳು ಸರಕಾರಕ್ಕೆ ಆಗಿರಬಹುದಾಗಲಾಗುವವೋ, ಅಥವಾ ಇಲ್ಲ ಪದವ ಆತಿಥ್ಯಕ್ಕೆ ಪ್ರತ್ಯುಪಕಾರ ವಾಣಿ ಮಾತ್ರವಾಗುವವೋ ನೋಡಲಿಕ್ಕಿದೆ.

AGAINST DIABETES
&
all its dreadful results
Consult Specialists:
Dr. Alvas' Research Institute, FAJIR
S. KANARA.

CANARA BANK LIMITED
Estd: 1906
(Incorporated in British India. liability of Members Limited.)

SEASON DEPOSITS.

of Rs. 10000 and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	....	2½ ,,
6 to 9 months	....	2¾%

Rates for Season Deposits of less than Rs. 10000 with a minimum of Rs. 1000/- and in multiples of Rs. 500/- may be ascertained on application to our nearest branch.

ವ್ಯಯ ಸಂವತ್ಸರದ
(1946-1947)
ಶ್ರೀಪತಿ ಪಂಚಾಂಗ
ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.
ಬೆಲೆ 0—5—0.
ಪ್ರಕಾಶಕರು
ಶ್ರೀಪತಿ ನರಸಿಂಹ ಅಡಿಗ,
ಬೇಳೂರು ಗ್ರಾಮ, ಪೋಸ್ಟ್ ಕೋಟ.

ಸತ್ಯಾಹಿಂಸೆ ಮತ್ತು ರಾಜಾಜಿಯ ಮೇಲೆ ಗಾಂಧೀಜಿಯ ಅಚಲ ವಿಶ್ವಾಸ.

'ಹರಿಜನ' ಪತ್ರಿಕೆಯಲ್ಲಿ ಮಹಾತ್ಮರ ಲೇಖನ.

ಸುಮಾರು ಮೂರೂವರೆ ವರುಷಗಳ ನಂತರ ಮಹಾತ್ಮಾ ಗಾಂಧಿಯವರ 'ಹರಿಜನ' ವಾರಪತ್ರಿಕೆ ಇದೇ ತಾ. 9ರಲ್ಲಿ ಪುನಃ ಹೊರಟಿದೆ. ಅದರ ಪ್ರಥಮ ಲೇಖನದಲ್ಲಿ ಗಾಂಧಿಜೀ ಸದ್ಯದ ಒಂದು ಪ್ರಾಮುಖ್ಯ ಪ್ರಶ್ನೆಯನ್ನು ಉತ್ತರಿಸಿದ್ದಾರೆ. "ಸತ್ಯ ಮತ್ತು ಅಹಿಂಸೆಯಲ್ಲಿ ಆಟಮ್ ಬೋಂಬಿಗಿಂತಲೂ ಹೆಚ್ಚಿನ ಶಕ್ತಿಯಿದೆಯೆ? ಇಂದಿನ ಪ್ರಳಯ ಸದೃಶ ರಾಜಕೀಯ ತಬ್ಬಿಬ್ಬು ಯುಗದಲ್ಲಿ ಮೇಲಿನ ಆವಳೀ ಧರ್ಮಕ್ಕೆ ಕಟ್ಟು ಬಿದ್ದಿರಲು ಸಾಧ್ಯವೆ?" ಎಂಬ ಪ್ರಶ್ನೆಯನ್ನು ಎತ್ತಿಕೊಂಡು

'ಹರಿಜನದ ಪುನರುತ್ಥಾನ'

ಎಂಬ ತಲೆ ಬರೆಹ ಕೊಟ್ಟು ಗಾಂಧಿಜೀ ಬರೆದಿದ್ದಾರೆ:-"ಹರಿಜನದ ಪುನರಾರಂಭವೇಕೆ? ಈ ಪ್ರಶ್ನೆಯು ನನ್ನಂತೆಯೇ ಹಲವರಲ್ಲಿ ಹುಟ್ಟಿರಬಹುದು ಅದನ್ನು ಪುನಃ ಪ್ರಾರಂಭಿಸಬೇಕೆಂದು ವಿಶೇಷ ಪ್ರಯತ್ನವೇನೂ ನಡೆದುದಿಲ್ಲವೆಂದು ನಾನು ವಾಚಕರಿಗೆ ಹೇಳಬಲ್ಲೆ. ಆದರೆ ಮೇಲಿನ ಬಹಿಷ್ಕಾರವನ್ನು ತೆಗೆಯಬೇಕೆಂದು 1945ನೇ ದಶಂಬರ 3ರಲ್ಲಿ ಒಂದು ಅರ್ಜಿ ಹಾಕಲ್ಪಟ್ಟಿತು; 1946ನೇ ಜನವರಿ 10ರಲ್ಲಿ ಆ ಬಹಿಷ್ಕಾರವು ತೆಗೆಯಲ್ಪಟ್ಟಿತು. ಇಂಗ್ಲಿಷರು ಮತ್ತು ಅಮೇರಿಕಾನರ ಸಮೇತ ಹಲವು ವಾಚಕರು ಒಂದು ನಷ್ಟಕ್ಕೊಳಗಾದವರಂತೆ ದೀರ್ಘಾವಧಿಯಿಂದಿದ್ದರು. ಫೇಸಿಸ್ಟ್ ರಾಷ್ಟ್ರಗಳ ಸೋಲಿನ ಬಳಿಕಂತೂ ಅವರ ಈ ನಷ್ಟಾನುಭವ ಮತ್ತಷ್ಟು ಬಿಗಿಯಾಯಿತು. ಈ ಭಾವನೆಯ ಕಾರಣವು ಸುಸ್ಪಷ್ಟವಿದೆ. ಲೋಕದ ಮಾತನ್ನು ಬಿಟ್ಟರೂ ಭಾರತದಲ್ಲಿ ನಡೆಯುತ್ತಿರುವ ವಿವಿಧ ಘಟನೆಗಳ ಕುರಿತು, ನನ್ನ ಸತ್ಯ ಮತ್ತು ಅಹಿಂಸಾ ತತ್ವಾನುಸಾರವಾಗಿ ನನ್ನಲ್ಲುಂಟಾಗಿರುವ ಪ್ರತಿರೋಧವಾವುದೆಂಬುದನ್ನು ಅವರಿಗೆ ತಿಳಿಯಬೇಕಾಗಿತ್ತು. ಈ ಬಯಕೆಯನ್ನು ನೆರವೇರಿಸಿ ಕೊಡಬೇಕೆಂದು ನಾನು ಬಗೆದೆ.

ಸತ್ಯ ಮತ್ತು ಅಹಿಂಸೆ

ಲೋಕದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗುತ್ತಾ ಬಂದಿವೆ. ನಾನಿನ್ನೂ ನನ್ನ ಸತ್ಯ ಮತ್ತು ಅಹಿಂಸೆಯ ವಿಶ್ವಾಸಕ್ಕೇನೇ ಕಟ್ಟುಬಿದ್ದಿರಬಲ್ಲೆನೇ? ಆಟಂ ಬೋಂಬು ಅಂತಹ ನಂಬಿಕೆಯನ್ನು ಸ್ಫೋಟಗೊಳಿಸಲಿಲ್ಲವೆ? ಇಲ್ಲ; ಅದು ಹಾಗೆ ಮಾಡದಿರುವದಷ್ಟೇ ಅಲ್ಲ; ಇವೆರಡು ಅವಳೀ ತತ್ವಗಳೇ ಲೋಕದ ಅತ್ಯಂತ ಪ್ರಬಲ ಶಕ್ತಿಗಳೆಂದು ನನಗೆ ಸ್ಪಷ್ಟವಾಗಿ ಕಂಡು ಬಂದಿವೆ. ಇದರ ಸಮ್ಮುಖದಲ್ಲಿ ಆಟಂ ಬೋಂಬು ನಿರರ್ಥಕ. ಇವೆರಡು ವಿರೋಧಿ ಶಕ್ತಿಗಳೂ ಪರಸ್ಪರ ಸಂಪೂರ್ಣ ಭಿನ್ನವಾಗಿವೆ. ಒಂದು ನೈತಿಕ ಮತ್ತು ಭಾವಮಯಿಯಾದುದು; ಮತ್ತೊಂದು ದೈಹಿಕ ಮತ್ತು ಉಪಕರಣಗಳಿಂದಾದುದು. ಇವುಗಳಲ್ಲಿ ಮೊದಲನೆಯದು, ಅಂತ್ಯನೇ ಸ್ವಭಾವವಾಗಿರುವ ಎರಡನೆಯದಕ್ಕಿಂತ ನಿಜಕ್ಕೂ ಮೇಲು. ಸ್ಫೂರ್ತಿಮಯೀ ಶಕ್ತಿಯು ಪ್ರಗತಿಶೀಲವಾದುದು, ಅನಂತವಾದುದು. ಅದರ ನಿಜರೂಪ ದರ್ಶನವನ್ನು ಜಯಿಸುವಂತಹದು ಪ್ರಪಂಚದಲ್ಲೇ ಇಲ್ಲ. ಹೀಗಂದ ಮಾತ್ರಕ್ಕೆ ನಾನು ಹೊಸತೇನನ್ನೂ ಹೇಳದೆ, ವಸ್ತುಸ್ಥಿತಿಗೊಂದು ಸಾಕ್ಷ್ಯ ಮಾತ್ರ ಕೊಟ್ಟೆನೆಂಬುದನ್ನು ನಾನು ಬಲ್ಲೆ. ಮೇಲಾಗಿ ಈ ಶಕ್ತಿಯಾದರೋ ಚರ್ಮವರ್ಣದ ವ್ಯತ್ಯಾಸವಿಲ್ಲದೆ ಗಂಡಸು, ಹೆಂಗುಸು ಮತ್ತು ಮಗುವಿನಲ್ಲಿ ಕೂಡಾ ಇದೆ. ಕೆಲವರಲ್ಲದು ಸುಪ್ತವಾಗಿರಬಹುದು; ವಿವೇಕ ಪೂರ್ಣ ತರಬೇತಿ ಕೊಟ್ಟರೆ ಅದು ಎಚ್ಚರಗೊಳ್ಳಬಲ್ಲುದು. ಮಾತ್ರವಲ್ಲ, ಈ ಸತ್ಯವನ್ನು ಮನಗಂಡು ಅದಕ್ಕೊಂದು ಕಾರ್ಯರೂಪ ಕೊಡದೆ ಹೋದರೆ ಸ್ವನಾಶದಿಂದ ಪಾರಾಗುವ ಬೇರೆ ಬಗೆಯಿಲ್ಲ. ಆ ಚಿಕಿತ್ಸೆಯು, ಪ್ರತಿಯೊಬ್ಬನೂ ತನ್ನ ಅಕ್ಕಪಕ್ಕದವರ ಅನುಮೋದನೆಗಾಗಿ ಕಾಯದೆ ತನ್ನನ್ನು ತಾನೇ ತಯಾರಿಸಿಕೊಳ್ಳುವದರಲ್ಲಿದೆ. ಈ ಸತ್ಯವನ್ನೆತ್ತಿ ಹಿಡಿದು ಪ್ರದರ್ಶಿಸಲು 'ಹರಿಜನ'ವು ವಾರಂಪ್ರತಿ ಪ್ರಯತ್ನಿಸಲಿದೆ".

—(ಮುಂದಿನ ಭಾಗ ಮುಂದಿನ ಸಂಚಿಕೆಯಲ್ಲಿ)

ರಾಜಾಜಿ ನಾಯಕತ್ವ ಕಳಕೊಳ್ಳಬೇಡಿ

ಮಹಾತ್ಮಾ ಗಾಂಧಿಯವರು ರಾಜಾಜಿಯನ್ನು ಸಮರ್ಥಿಸಲು ನಡು ಬಿಗಿದಿದ್ದಾರೆ ಹಿಂದೀ ಜನತೆಯ ಮೇಲೆ ಗಾಂಧೀ ಮಾತು ಮಂತ್ರ ಶಕ್ತಿಯ ಮಾಯೆ ಬೀರುವಂತಹದು. ತನ್ನ ಆತ್ಮೀಯರ ಅಭಿವೃದ್ಧಿ ಮತ್ತು ಆಗದವರ ಅವನತಿಯನ್ನು ಅವರೀ ಬ್ರಹ್ಮಾಸ್ತ್ರದ ಬಲದಿಂದ ಇದು ವರೆಗೆ ಹಲವು ಬಾರಿ ಸಾಧಿಸಿದ್ದಾರೆ. ಈ ಬಾರಿ ಶ್ರೀ. ಸಿ. ರಾಜಗೋಪಾಲಾಚಾರ್ಯರಿಗದನ್ನು ವಜ್ರ ಕವಚವಾಗಿ ತೊಡಿಸಿ ಮಿಕ್ಕವರ ಟೀಕೆಗಳಿಂದ ರಕ್ಷಿಸಲು ಹೊರಟಿದೆ. ಅದಕ್ಕಾಗಿ 'ಹರಿಜನ'ದ ಪ್ರಥಮ ಸಂಚಿಕೆಯಲ್ಲೇ ತನ್ನ ಸಹಿಹಾಕಿ ತಮಿಳುನಾಡಿನ ಕಾಂಗ್ರೆಸಿಗರಿಗೆ ಅವರು ಮಾಡಿಕೊಂಡ ವಿನಂತಿಯಿದು:—

ಹಳೇ ಮಿತ್ರ

"ಶ್ರೀ. ರಾಜಗೋಪಾಲಾಚಾರ್ಯರು ನನ್ನ ಹಳೇ ಮಿತ್ರರಲ್ಲೊಬ್ಬರು ಮತ್ತು ನನ್ನೆಲ್ಲಾ ಮಾತುಕೃತಿಗಳ ಉತ್ತಮ ಪ್ರವಾದಿಯೆಂದು ಹೆಸರಾದವರು 1942ರಲ್ಲಿ ಅವರು ನನ್ನೊಡನೆ ಭಿನ್ನಾಭಿಪ್ರಾಯಪಟ್ಟಿದ್ದರೆಂಬುದನ್ನು ನಾನು ಬಲ್ಲೆ. ಈ ಭಿನ್ನಾಭಿಪ್ರಾಯವನ್ನು ಬಹಿರಂಗವಾಗಿ ಪ್ರಕಟಿಸಿದ ಅವರ ಎದೆಗಾರಿಕೆಗೆ ಸಂಪೂರ್ಣ ಗೌರವ ಸಲ್ಲಬೇಕು. ತನ್ನ ನಂಬಿಕೆಯಂತೆ ನಡೆಯಲು ಎಂದೂ ಹಿಂಜರಿಯದ ಅತಿದೊಡ್ಡ ಸಮಾಜ ಸುಧಾರಕರವರು. ಅವರ ರಾಜಕೀಯ ಚಾತುರ್ಯ ಮತ್ತು ಭಾವಶುದ್ಧತೆಯು ಪ್ರಶ್ನಾತೀತವಾದುದು. ಆದ್ದರಿಂದ ಅವರ ವಿರುದ್ಧವಾದ ಸಂಚುಕೂಟವೊಂದಿದೆ ಎಂಬುದರಿಂದ ನಾನು ವೇದನೆಗೊಂಡಿದ್ದೇನೆ. ಮದ್ರಾಸಿನ ಅಧಿಕಾರೀ ಕಾಂಗ್ರೆಸ್ ಸಂಸ್ಥೆಯಲ್ಲಿರುವ ಕೂಟವಿದು. ಆದರೆ ಜನತೆಯು ಅವರ ಮೇಲೆ ಭಕ್ತಿ ವಿಶ್ವಾಸದಿಂದಿದೆ. ತಮಿಳುನಾಡಿನ ಜನತೆಯ ಮೇಲೆ ಅವರಿಗೆ ವರ್ಚಸ್ಸಿಲ್ಲದೆ ಹೋಗಿದ್ದರೆ, ನಾನು ಆ ಯಾತ್ರಾ ಹಾದಿಯಲ್ಲೆಲ್ಲಾ ಅಂತಹ ಮಹತ್ವಾದ ಸಾರ್ವಜನಿಕ ಪ್ರದರ್ಶನವನ್ನು ಕಾಣುತ್ತಿದ್ದೆನೆಂದು ಭಾವಿಸಿಕೊಳ್ಳುವಷ್ಟು ನಿರರ್ಥಕನೂ ಅಲ್ಲ; ಅವಿವೇಕಿಯೂ ಅಲ್ಲ. ದಕ್ಷಿಣದ ಕಾಂಗ್ರೆಸಿಗರು ತಮಗೆ ಸರಿತೋರುವಂತೆ ಮಾಡಲಿದ್ದಾರೆ. ಆದರೆ ಸದ್ಯಸ್ಥಿತಿಯಲ್ಲಿ ರಾಜಾಜಿಯಿಂದಾಗುವಂತೆ ಬೇರಾರಿಂದಲೂ ಹೊರಲಸಾಧ್ಯವಾಗಿರುವ ರಾಜಾಜಿಯ ಅಮೂಲ್ಯ ಸೇವೆಯನ್ನು ಕಳಕೊಳ್ಳಬೇಡಿರೆಂದು ನಾನು ಅವರನ್ನು ಎಚ್ಚರಿಸದೆ ಹೋದರೆ ನನ್ನಲ್ಲಿ ಆ ಸಂಸ್ಥೆಯ ಮೇಲಿನ ಭಕ್ತಿ ಸಾಕಷ್ಟಿಲ್ಲವೆಂದಾಗುವದು".

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R. E. P. No. 348/1945
in os 30/1944

B. ಮಂಜುನಾತರಾವ್—ವಾದಿ ಅರ್ಜಿದಾರ.
ಮತ್ತು
ಸಂಕಮ್ಮ ಕೂಡಾ—ಎದ್ರಿರು.

ಎದ್ರಿರು- 1 ಸಂಕಮ್ಮ 2 ಬಾಬು ಪೂಜಾರಿ—ಪೆರ್ನೆ ಹೆಂಗ್ಸಿನ ಮಕ್ಕಳು—ಕಾರ್ಕಳ ತಾಲ್ಕು ಕೊಡಾಜೆ ಗ್ರಾಮದಲ್ಲಿರುವವರು—ಇವರಿಗೆ.

ಸದ್ರಿ ಅಮಲ್‌ಜಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಸಿರುವ ಸ್ಥಿರಾಸ್ತಿ ಏಲಂ ಕುರಿತು ಹಾಜ್ರಾದ ಇಸ್ತಿಹಾರು ಶರ್ತಗಳು ನಿರ್ಣಯಿಸಲಿಕ್ಕೆ ಇದೇ ಬರುವ ಮಾರ್ಚಿ ತಾರೀಕು 4ಕ್ಕೆ ತಕ್ಕಿಗಿಟ್ಟಿರುವದ್ರಿಂದ ಆ ಕುರಿತು ನಿಮಗೇನಾದ್ರೂ ಆಕ್ಷೇಪಗಳು ಇದ್ದಲ್ಲಿ ಆ ದಿವಸ ಬೆಳಿಗ್ಗೆ 11 ಘಂಟೆಗೆ ಸದ್ರಿ ಕೋರ್ಟಿಗೆ ಹಾಜರ್ರಾಗಿ ಜಾಹೀರು ಮಾಡುವರೆ ತಪ್ಪಿದ್ದಲ್ಲಿ ಎಕ್ಸಪಾರ್ಟಿಯಿಂದ ತೀರ್ಮಾನಿಸಲ್ಪಡುವದು ಎಂಬದಾಗಿ ಈ ಮೂಲಕ ತಿಳಿಸೋದಾಗಿಯದೆ.

B. Chidananda Rao,
Vakil for petitioner

ಪುತ್ತೂರು
6-2-1946

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಸೋಲಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,
P. D. S. (A. E.) Tollygunge, Calcutta
ಸ್ಟಾಕಿಸ್ಟ್: ಸಾ ಕಂಪೆನಿ, ಮಂಗಳೂರು

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು—

ನಾಟಕಗಳು

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	8	0
ಕಂಠಲವ	0	5	0
ವ್ಯಭಿಚಾರಿಣಿ ಯಾರು?	0	12	0
ಹೆಂಡ್ತಿ ಗಂಡನಾದರೆ!	0	4	0
ಪುರುಷ ವಧು!	0	4	0
ದೇಶಭಕ್ತ	1	4	0
ರಂಗಭೂಮಿ	0	8	0
ಸೇವಾಪಥ	0	8	0
ಪ್ರಕಾಶ	2	4	0
ಮೂರು ಪ್ರಹಸನಗಳು	0	14	0
ಆರೋಗ್ಯ ಪ್ರತಾಪ	0	12	0
ಗರ್ವಸಂಕಟ!	0	5	0
ಪಂಚಾರತಿ	0	6	0
ಪ್ರತೀಕಾರ	0	6	0
ಬಣ್ಣದ ಬೀಸಣಿಗೆ	1	4	0
ವಂಚಕ ವಧೆ	0	2	0
ಮೀರಾಬಾಯಿ	0	10	0
ಸರಸ್ವತಿ	0	12	0

ಕತೆಗಳು

ಅಂತರಂಗದ ಕತೆಗಳು	0	10	0
ನಾಡಕತೆಗಳು	0	3	0
ನಂದಾದೀಪ	0	10	0
ನಾರೀಹೃದಯ	0	14	0
ಭಾರತೀಯ ಕತೆಗಳು	0	14	0
ನಗೆ ನೋಟಗಳು	0	14	0
ಅನ್ನದೇವರು ಮತ್ತು ಇತರ ಕತೆಗಳು	1	0	0
ವಿಷ್ಣುವಿನ ದಶಾಪರಾಧಗಳು	0	12	0
ಆಕಾಶಗಂಗೆ	1	12	0
ಪ್ರೇಮಲಾಭ	0	5	0
ಪ್ರತಿಧ್ವನಿ	1	0	0
ಕಂಡೂ ಕಾಣದ ನೋಟಗಳು	0	8	0
ಆಹುತಿ ಇತ್ಯಾದಿ ಕತೆಗಳು	0	12	0
ಪ್ರೇಮ ಪ್ರಭಾವ	0	8	0
ಚಿಗುರು	0	6	0

ಕವಿತೆಗಳು

ಕಾವ್ಯ ಸಾಮ್ರಾಜ್ಯ	1	0	0
ಶ್ರೀಮುಖ	1	0	0
ಮುಗುಳು	0	3	0
ಪರಾಗ	0	9	0

ಕಾದಂಬರಿಗಳು

ಸನ್ಯಾಸಿಯ ಸೋಗಿನಲ್ಲಿ	0	8	0
ಲೋಪಾಮುದ್ರೆ	0	6	0
ವೀರಭೂಮಿ	0	2	0
ಆನಂದ ಅಥವಾ ಮನೆ ಅಳಿಯ	1	0	0
ಮುಗಿದ ಯುದ್ಧ	3	8	0

ಇತರ

ಭಾರತದಲ್ಲಿ ಜಾತಿಭೇದ	1	0	0
ಗೀತೆಯ ಕೈಗನ್ನಡಿ	0	8	0
ಸುಲಭದಲ್ಲಿ ಇಂಗ್ಲಿಷ್	1	4	0
ಬಾಲ ವಾಙ್ಮಯ	0	3	0
ಆರೋಗ್ಯ ಸಾಧನ	1	0	0
ರಾಷ್ಟ್ರ ಸಭೆಯ ಇತಿಹಾಸ	2	8	0
ಶಾಂತಿಪುರಾಣ	3	0	0
ಮಿತಸಂತತಿ	0	8	0
ಜೇನಿನ ವ್ಯವಸಾಯ	1	0	0

—ನವಭಾರತ ಪುಸ್ತಕ ಭಂಡಾರ, ಉಡುಪಿ.

೨ ಪಾವಿನ ಹಸುಗೆ ಒಂದೂವರೆ ಪಾವು ಆಗಲಿದೆ!

'ಈ ತನಕ ಪ್ರಾಯಸ್ಥರಿಗೆ ದಿನಕ್ಕೆರಡು ಪಾವಿ (ಒಂದು ಪೌಂಡು) ಸಂತೆ ಕೊಡುತಿದ್ದ ಅಕ್ಕಿ ಮತ್ತು ಗೋಧಿಯ ಹಸುಗೆಯನ್ನು ಇಡೀ ಹಿಂದುಸ್ಥಾನದಲ್ಲೇ ಒಂದೂವರೆ ಪಾವಿ (12 ಔನ್ಸ್)ಗೆ ಇಳಿಸುವ ಅಗತ್ಯವಿದೆ' ಎಂದು ಬೆಂಗಳೂರಿನಲ್ಲಿ ಇದೇ ತಾ. 8ರಲ್ಲಿ ವೈಸರಾಯರ ಅಧ್ಯಕ್ಷತೆಯಲ್ಲಿ ಸೇರಿದ ಆಹಾರ ಸಮ್ಮೇಳನವು ನಿರ್ಧರಿಸಿದೆ.

ಈ ರೇಶನ್ ಕಡಿತವು ಇಡೀ ರಾಷ್ಟ್ರದಲ್ಲಿ ಏಕ ಕಾಲದಲ್ಲಿ ಜ್ಯಾರಿಗೆ ಬರುವದು ಹಿತಕರವೆಂದು ಆ ಸಮ್ಮೇಳನವು ಅಭಿಪ್ರಾಯಪಟ್ಟಿದೆ.

'ಇನ್ನು ರೇಶನ್ ಕಾರ್ಡ ಇದ್ದವರಿಗೆ ಲ್ಲಾ ಅಕ್ಕಿ, ಗೋದಿ ಅಥವಾ ಸಜ್ಜೆ ಕೂಡಿ 1½ ಪಾವಿಗೆ ಮಿಕ್ಕದಷ್ಟು ಕೊಡಲಾಗುವದು (ಹೀಗೆ ಕಡಿಮೆಯಾದ ಅಂಶವನ್ನು ಜನರು ಗೆಣಸು ಅಥವಾ ಗೆಡ್ಡೆಗಳಿಂದ ಭರ್ತಿಮಾಡಿಕೊಳ್ಳಬಹುದು' ಎಂದು ಸಿವಿಲ್ ಸಪ್ಲೈಯ ಕಮಿಶನರ್ ಆದ ಮಿ. ಎ. ಎಫ್. ಡಿಕ್ರೂನರಂದಿದ್ದಾರೆ.

ಮದ್ರಾಸ್ ಸರಕಾರವು ಕೂಡಲೇ ಈ ಕಡಿತವನ್ನು ಜ್ಯಾರಿಗೆ ತರಲಿರುವದೆಂದೂ, ಆ ಕುರಿತು ತಕ್ಕ ವ್ಯವಸ್ಥೆಯೀಗ ನಡೆಯುತ್ತಿದೆಯೆಂದೂ ತಿಳಿದು ಬರುತ್ತದೆ.

ಆಹಾರ ಶಿಷ್ಟಮಂಡಲಿ

ಈ ವರುಷ ಹಿಂದುಸ್ಥಾನದ ಆಹಾರ ಪರಿಸ್ಥಿತಿ ಅತ್ಯಂತ ವಿಷಮವಾಗಿದ್ದು ಹೊರಗಿನಿಂದ ಅಕ್ಕಿ ಗೋಧಿ ಅಧಿಕ ಪರಿಮಾಣದಲ್ಲಿ ಬಾರದಿದ್ದರೆ ಉಳಿಗಾಲವೇ ಇಲ್ಲವೆಂಬುದು ಸಿದ್ಧವಾಗಿದೆ. ಈ ಕುರಿತು ಬ್ರಿಟನ್ ಅಮೇರಿಕಗಳನ್ನು ಒತ್ತಾಯಿಸುವದಕ್ಕಾಗಿ ಹಿಂದೀ ಸರಕಾರವು ಒಂದು ಶಿಷ್ಟಮಂಡಲವನ್ನು ಬೀಳ್ಕೊಡಲಿದೆ. ಮಂಡಲಿಯು ಇದೇ ತಾ. 15ರಲ್ಲಿ ಕರಾಚಿಯಿಂದ ಲಂಡನಿಗಾಗಿ ವಿಮಾನ ಹತ್ತಬೇಕೆಂದು ನಿಶ್ಚಯವಾಗಿದೆ. ಹಿಂದೀ ಸರಕಾರದ ಆಹಾರ ಸಚಿವ ಸರ್. ಜೆ ಪಿ ಶ್ರೀವಸ್ತವರು ಮಂಡಲಿಯ ನಾಯಕರಾಗಿರುವರಲ್ಲದೆ ಸರ್. ಎಸ್. ವಿ. ರಾಮಮೂರ್ತಿ (ಮದ್ರಾಸ್ ಗವರ್ನರರ ಸಲಹೆಗಾರ) ಸರ್. ಎಚ್ ಎಫ್. ಸ್ಕೈಟ್ (ಬೊಂಬಾಯಿ) ಶ್ರೀ. ಎನ್. ಮಾಧವರಾವ್ (ಮೈಸೂರು ದಿವಾನ್) ಸರ್. ತೇದ್ಯೋರ್ ಗ್ರೆಗೋರಿ, ಶ್ರೀ. ಗೋವಾರ್ಲಾ ಮೊದಲಾದವರಿದ್ದಾರೆ. ಶಿಷ್ಟಮಂಡಲಯಲ್ಲಿರಲು ಕಾಂಗ್ರೆಸ್ ಮತ್ತು ಲೀಗ್‌ಗಳಿಗೂ ವೈಸರಾಯರ ಆಮಂತ್ರಣ ಬಂದಿದೆ. ಲೀಗ್ ಅದಕ್ಕೊಪ್ಪಿಗೆ ಕೊಟ್ಟಿದೆಯಾದರೂ ಅಧಿಕಾರೀ ಮಂಡಲಿಯಲ್ಲಿ ಸೇರಲು ಕಾಂಗ್ರೆಸು ಸಿದ್ಧವಿಲ್ಲ. ಆದರೆ ಈ ಸಮಿತಿಯು ಲಂಡನ್ ವಾಷಿಂಗ್ಟನುಗಳಿಂದ ಮರಳಿದೊಡನೆ ವೈಸರಾಯರು ಜನಪ್ರಮುಖರನ್ನು ಸೇರಿಸಿಕೊಂಡು ತನ್ನ ಕಾರ್ಯಕಾರೀ ಸಮಿತಿಯನ್ನು ಪುನರ್ಘಟಿಸುವ ಆಶ್ವಾಸನೆ ಕೊಟ್ಟರೆ ತನ್ನ ನಿರ್ಧಾರವನ್ನು ಪುನರಾಲೋಚಿಸಬಹುದೆಂದು ಮಿ. ಆಸಫ್ ಅಲಿಯೆಂದಿದ್ದಾರೆ.

'ಬರಗಾಲವೆದ್ದರೆ ಬಂಡಾಯವೇಳಿರಿ' —ನೆಹರು.

ಟ್ರೂಮೇನರೂ ಕಣ್ಣು ತೆರೆದರು

ಭಾರತದ ಆಹಾರ ದುಸ್ಥಿತಿಯ ಕಡೆಗೆ ಇದೀಗ ಮೊದಲಬಾರಿ ಇಡೀ ಲೋಕದ ಲಕ್ಷ್ಯಹರಿದಿದೆ. ಜರ್ಮನಿ ಮೊದಲಾದ ಯುರೋಪಿನ ರಾಷ್ಟ್ರಗಳ ದುಸ್ಥಿತಿಯ ಕಡೆಗಿದ್ದಷ್ಟು ಲಕ್ಷ್ಯ ಇದುವರೆಗೆ ಭಾರತದ ಕಡೆಗಿರಲಿಲ್ಲ-ಆದರೆ ಈಗ ಬ್ರಿಟನಿನ ಪತ್ರಿಕೆಗಳೂ ಈ ಕುರಿತು ಆತುರ ಸೂಚಿಸಿವೆ. ಪಾರ್ಲಿಮೆಂಟನಲ್ಲಿ ಪ್ರಶ್ನೆಗಳೂ ಬರಲಿವೆ; ಚರ್ಚೆ ನಡೆಯಲಿದೆ. ಅಮೇರಿಕದ ಅಧ್ಯಕ್ಷ ಟ್ರೂಮೇನರು ಪತ್ರಿಕಾ ಸಮ್ಮೇಲನದ ಮುಂದೆ ಇದೀಗ ಮೊದಲ ಬಾರಿ ಹಿಂದುಸ್ಥಾನದ ಆಹಾರ ದುಸ್ಥಿತಿಯನ್ನು ಪ್ರಸ್ತಾಪಿಸಿದ್ದಾರೆ:–"ಹಿಂದುಸ್ಥಾನದ ಈ ವರ್ಷದ ಬೆಳೆಯು ಸಾಮಾನ್ಯ ಕಾಲದ ಬೆಳೆಗಿಂತ ಸೇಕಡಾ 12ರಿಂದ 15ರ ವರೆಗೂ ಕಡಿಮೆಯಾಗಿದೆ. ಸಾಮಾನ್ಯತಃ ಈ ಮೊದಲು ಬರ್ಮಾ, ಸಯಾಮ್ ಮತ್ತು ಚೀನಾಗಳಿಂದ ಅಲ್ಲಿಗೆ ಅಕ್ಕಿ ರವಾನೆಯಾಗುತಿತ್ತು. ಯುದ್ಧದಿಂದಾಗಿ ಈ ರಾಷ್ಟ್ರಗಳ ಬೆಳೆಯೂ ಹಾಳಾಗಿರುವದರಿಂದ ಆ ಸಹಾಯವೂ ನಿಂತಿದೆ. ಜಾಪಾನಿನ ಬೆಳೆಯೂ ಈ ಬಾರಿ ಸೇಕಡಾ 15ಕ್ಕಿಂತ ಕಡಿಮೆಯಾಗಿದೆ. ಈ ಮೊದಲೇ ತನಗೆ ಬೇಕಾಗುವ ಮೊತ್ತದ ಸೇಕಡಾ 15ರಷ್ಟನ್ನು ಜಾಪಾನು ಆಮದುಪಡಿಸಿಕೊಳ್ಳುತಿತ್ತು. ಲೋಕದ ಹಲವು ಕಡೆಗಳ ಆಹಾರ ದುಸ್ಥಿತಿಯು ಯುರೋಪಿಗಿಂತಲೂ ಕೆಟ್ಟದೆ" ಎಂದು ಟ್ರೂಮೇನರ ಹೇಳಿಕೆ.

ನೆಹರುಗಳ ಎಚ್ಚರಿಕೆ

ದೇಶಹಿತಚಿಂತಕರೆಲ್ಲರನ್ನೂ ದಿಗಿಲುಗೊಳಿಸಿರುವ ನಿರೀಕ್ಷಿತ ಅನ್ನಾಭಾವದ ಪ್ರಶ್ನೆಯು ಮುಂದಿನ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಮುಖ್ಯ ವಿಷಯವಾಗಲಿದೆ. ಎಲ್ಲಾ ಪ್ರಮುಖರೂ ಆತುರಸೂಚಿಸಿದ್ದಾರೆ. ಹೆಚ್ಚಿನ ಪ್ರಾಂತ್ಯಗಳ ಬೆಳೆಯು ಈ ವರ್ಷ ಮಳೆಯ ಅಭಾವ, ಬಿರುಗಾಳಿ ಮೊದಲಾದ ಅನಾಹುತಗಳಿಂದ ಹಾಳಾಗಿರುವದೇ ಇಂದಿನ ವಿಶೇಷ ಅಭಾವಕ್ಕೆ ಕಾರಣ. ಪಂಡಿತ ನೆಹರುಗಳು ಸಂಯುಕ್ತ ಪ್ರಾಂತ್ಯದ ಬಹ್ರಾಯಿಚ್‌ಎಂಬಲ್ಲಿಯ ದೊಡ್ಡ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ "ಆಹಾರ ಸ್ಥಿತಿ ಹದಗೆಟ್ಟು ಬರಗಾಲವುಂಟಾದಲ್ಲಿ ದಂಗೆಯೇಳಲಿದೆ. ಈ ದೇಶದಲ್ಲಿ ಬರಗಾಲವೆದ್ದರೆ ಜನಂದನ್ನು ಸಹಿಸಲಾರರೆಂಬುದನ್ನು ಸರಕಾರವು ತಿಳಿದಿರಲಿ. ಜನರೆಲ್ಲಾ ಮೌನವಾಗಿ ತಮ್ಮನ್ನು ತಾವು ಮೃತ್ಯುವಿಗೊಪ್ಪಿಸಿಕೊಂಡು ನೊಣಗಳಂತೆ ಸಾಯಲಾರರು. ಈ ಪ್ರಾಂತ್ಯದಲ್ಲಿ ಬರಗಾಲವೆದ್ದರೆ ಸರಕಾರದ ವಿರುದ್ಧ ಬಂಡಾಯವೇಳಿರೆಂದು ನಾನು ಜನತೆಯನ್ನು ಕೇಳಿಕೊಳ್ಳುತ್ತೇನೆ; ಸರಕಾರವು ಅದನ್ನು ಇದಿರಿಸಲು ತಯಾರಿರಲಿ" ಎಂದು ಸಮರಾಹ್ವಾನವಿತ್ತಿದ್ದಾರೆ. ಜಗತ್ತಿನಲ್ಲುಂಟಾಗಿರುವ ಆಹಾರಾಭಾವ ನಿವಾರಣೆಗೆ ಕ್ಷಿಪ್ರಕಾರ್ಯ ಕೈಕೊಳ್ಳತಕ್ಕದ್ದೆಂಬ ಠರಾವು ಲಂಡನಿನಲ್ಲಿ ನೆರೆದಿರುವ ಜಾಗತಿಕ ಸಂಘ ಒಮ್ಮುಂದೆಬಂದರೂ "ಹಿಂದುಸ್ಥಾನ ಮತ್ತು ದೂರಪ್ರಾಚ್ಯ ರಾಷ್ಟ್ರಗಳಿಗೆ ಹೆಚ್ಚಿನ ಅಕ್ಕಿ ಸರಬರಾಯಿ ಮಾಡುವ ಆಶ್ವಾಸನೆ ಕೊಡಲು ಸಾಧ್ಯವಿಲ್ಲ" ಎಂದು ಅಮೇರಿಕದ ಬೇಸಾಯ ಕಾರ್ಯದರ್ಶಿ ಮಿ. ಏಂಡರ್ಸನರಂದಿದ್ದಾರೆ.

ಪ್ರಕಟಣೆ.

ಉಡುಪಿ ತಾಲ್ಲೂಕು ಕಾಡೂರು ಗ್ರಾಮದ ಮುಂಡಾಡಿ ತೆಂಕಬೆಟ್ಟು ಕೃಷ್ಣಮ್ಮ ಸೆಡ್ತಿಯವರ ಮಗ ಮಹಾಬಲಸೆಟ್ಟಿಯು ಈ ಮೂಲಕ ತಿಳಿಯಪಡಿಸುವದೇನಂದ್ರೆ, ತಾರೀಕು 29 12 1945ರಲ್ಲು ಸ್ವರ್ಗಸ್ಥರಾದ ನನ್ನ ಮಾವ ಕಾಡೂರು ಗ್ರಾಮದ ಮುಂಡಾಡಿ ತೆಂಕಬೆಟ್ಟು ಸೂರ್ಯಣ್ಣ ಸೆಟ್ಟಿ ಬಾಬ್ತು ಕೆಲವು ಹೆಬ್ಬೆಟ್ಟು ಮುದ್ರೆಗಳನ್ನು ಸಡ್ತಿಯವರ ಮಗ ಅಂತ್ಯ ಸೆಟ್ಟಿ ಪಗ್ಗೆರೇರು ಖಾಲಿ ಕಾಗದಗಳ ಮೇಲೆ ಹಾಕಿಕೊಂಡಿರುತ್ತಾರಾಗಿ ನಾನು ಖಾತ್ರಿ ತಿಳಿದಿರುತ್ತೇನೆ. ಸದ್ರಿ ಮುದ್ರೆಗಳ ಆಧಾರದಮೇಲೆ ಕಲ್ಪಿಸಬಹುದಾದ ಯಾವತ್ತೂ ರಿಕಾರ್ಡುಗಳು ಸಿಂಧುವಾಗತಕ್ಕದ್ದಲ್ಲವೆಂತ ಸಮಸ್ತರಿಗೂ ಈ ಮೂಲಕ ತಿಳಿಯಪಡಿಸಲಾಗಿರುವದು.

ಮಹಬಲಸೆಟ್ಟಿ ರುಜು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

(34ನೇ ಅಖಿಲ ಭಾರತ ಆಯುರ್ವೇದ ಪ್ರದರ್ಶನದಲ್ಲಿ ಸುವರ್ಣ ಪದಕ ಬಹುಮಾನ ಪಡೆದಿದೆ)

ಮಾರ್ಗರೇಟಿನ

ಫಿಟ್ಸ್ ಕ್ಯೂರ್

ಮಕ್ಕಳ ಭಯಂಕರ ಬಾಲಗ್ರಹವನ್ನು ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸುವುದು

ಪ್ರತಿಯೊಂದು ಸ್ಥಳದಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ ಧಾರಾಳ ಕಮಿಷನ್ನು ಹೆಚ್ಚಿನ ಮಾಹಿತಿಗೆ ನಮಗೆ ಬರೆಯಿರಿ

BRIGHTSTAR AGENCIES,
Hospital Road, Udipi, S. K.

UNITED

WE
Offer free SERVICE IN INSURANCE
Give full SECURITY FOR YOUR MONEY
Guarantee PROMPT SETTLEMENT OF CLAIMS.

RAO BAHADUR B. S. Sawkar B A LL B
Chairman

A S Kini.
Managing Director

THE UNITED KARNATAKA INSURANCE CO., LTD.
H. O. DHARWAR. ESTD 1929.
Insure with or Represent us.
For Particulars apply
ORGANISING OFFICE COURT ROAD, UDIPI.
M N Bhondary & Co., Sp. Agents, Kodialbail, Mangalore-

BANK WITH THE LARGEST CONNECTIONS ON THE WEST COAST.

OFFERS:-
EFFICIENT
PROMPT &
COURTEOUS
SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD 1925

The Canara Banking Corporation Limited.

(Incorporated in British India, with limited Liability.)

Estd: 1906

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... 2¼%

6 months ... 2½%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೧೪-೨-'೪೬

ಒಂದೂವರೆ ಪಾವು!

ಎರಡು ಪಾವಿನ ಹಸುಗೆಯು ಇನ್ನು ಮುಂದೆ ಒಂದೂವರೆ ಪಾವಿಗಿಳಿಸಲ್ಪಡುವದೆಂಬ ಅಧಿಕೃತ ಪ್ರಕಟಣೆಯನ್ನು ಹೊರಡಿಸುವಾಗ, ತಾವು ಹಿಂದೀ ಜನ ಸಾಮಾನ್ಯರ ಹೊಟ್ಟೆಗೊಂದು ಆಟಮ್ ಬೋಂಬನ್ನು ಒಗೆದವೆಂಬ ಜ್ಞಾನವು ಅಧಿಕಾರಿಗಳಲ್ಲಿ ಮೂಡಿರಲಾರದು. ಅದು ಜನಸಾಮಾನ್ಯರಲ್ಲಿಂತಹ ಜೀವನ ವೈರಾಗ್ಯವನ್ನು ನಿರ್ಮಿಸಿದೆ ಎಂಬುದನ್ನು ತಿಳಿಯಬೇಕಾದರೆ ಹಳ್ಳಿಗಿಳಿದು ನೋಡಬೇಕು. ದಿನಕ್ಕೆರಡು ಪಾವಕ್ಕಿಯ ಹಸುಗೆ ಬಂದಾಗ ರೈತರೇ ಮೊದಲಾದ ಶ್ರಮಜೀವಿಗಳಲ್ಲೊಮ್ಮೆ ಹಾಹಾಕಾರವೆದ್ದಿತ್ತು. ದಿನವಿಡೀ ಹೊಲಗದ್ದೆಗಳಲ್ಲಿ ಮೈಮುರಿದು ದುಡಿಯುವ ಕೆಲಸಗಾರನೊಬ್ಬನ ಮೂರು ಹೊತ್ತಿನ ಊಟಕ್ಕೆ ಎರು ಪಾವಕ್ಕಿ ತೆಗೆದಿಟ್ಟರೆ ಅದರಲ್ಲಿ ಒಂದೇ ಒಂದು ಕಾಳು ಅನ್ಯಥಾ ಹೋಗದು—ಇದೊಂದು ಸಾಮಾನ್ಯ ಅಳತೆ ಅಂಥವನ ಹೊಟ್ಟೆಯ ಮೂರರಲ್ಲೊಂದಂಶ ಯುದ್ಧ ಕಾಳಿಯ ಖಡ್ಗದಿಂದ ಕತ್ತರಿಸಲ್ಪಟ್ಟಿತು: ಅದರ ದುಷ್ಪರಿಣಾಮವಾಗದಿರಲಿಲ್ಲ. ಆದರೂ ಅನಿವಾರ್ಯವಾಗಿ—ಆಪದ್ಧರ್ಮವೆಂದುಕೊಂಡು—ಎರಡು ಪಾವು ಧಾನ್ಯದಿಂದ ಜೀವ ಹಿಡಿದುಕೊಂಡಿರಲು ಜನತೆ ಅಭ್ಯಾಸಮಾಡಿದ್ದಿತು. ಇನ್ನು ಮುಂದೆ ಅದರಲ್ಲೂ ಅರೆಪಾವು ಕಡಿತ! ಜನರನ್ನು ನಿಧಾನವಾಗಿ ಕೊಲ್ಲುವ ಚಿತ್ರಹಿಂಸೆಯಿದು- ಎಂದೊಪ್ಪಿಕೊಳ್ಳಬೇಕಲ್ಲದೆ, ಅದರಿಂದಾಗಲಿರುವ ಅನಾಹುತಗಳನ್ನು ವರ್ಣಿಸುವದು ಇಲ್ಲಿ ಅಸಾಧ್ಯ-ಇನ್ನು ನಿರರ್ಥಕ! ಅನ್ನಾಹಾರಕ್ಕಿಂತ ಹೆಚ್ಚಾಗಿ ಉಪಾಹಾರವನ್ನಾಧರಿಸಿರುವ ಪೇಟೆ ಪಟ್ಟಣಗಳವರ ಮಾತು ಹೇಗಿದ್ದರೂ, ಹಳ್ಳಿಗಳ ರೈತರೇ ಮೊದಲಾದ ಶ್ರಮಜೀವಿಗಳನ್ನು ಧಾನ್ಯದಿಂದಲ್ಲ—ಪೂರ್ವ ಪುಣ್ಯದಿಂದ ಬದುಕಬೇಕು! ಕೊರಗಿಸಿ ಕೊಲ್ಲುವ ಈ ಮಹಾಪರಾಧದ ಹೊಣೆಹೊರುವವರಾರೂ ಇಲ್ಲವೆಂಬುದು ಮತ್ತಷ್ಟು ಹೊಟ್ಟೆಯುರಿಯುವ ವಿಷಯ. ಹಸುಗೇ ಕಡಿತಕ್ಕೆ ಸರಕಾರವಂತೂ ಸರಿಯಾದ ಕಾರಣವನ್ನು ಮುಂದಿಟ್ಟಿದೆ. ಇಲ್ಲಿಯ ಪೈರು ಅಕಾಲವೃಷ್ಟಿ, ಬಿರುಗಾಳಿಗಳೇ ಮೊದಲಾದ ಅನಾಹುತಗಳಿಂದ ಹಾಳಾಗಿದೆ—ಲೋಕದಲ್ಲೇ ಇರುವ ಅಭಾವ ಮತ್ತು ಆಮದು ರಫ್ತಿನ ಅನಾನುಕೂಲತೆಗಳಿಂದಾಗಿ ಹೊರಗಿನಿಂದ ಆಮದು ಬಾರದಾಗಿದೆ.—ಶೋಕ ಪೂರ್ವಕ ಈ ಕಡಿತವನ್ನೇ ತರಬೇಕಾಗಿದೆ, ಎಂದು ಸರಕಾರವನ್ನುತ್ತಿದೆ. ಅವಸರದಿಂದ ಬೆಂಗಳೂರಿನ ವರೆಗೆ ಹಾರಿ ಬಂದು, ಆಹಾರ ಸರಬರಾಯಿಯನ್ನೆಲ್ಲಾ ತಕ್ಕಡಿಯಲ್ಲಿಟ್ಟು ತೂಗಿನೋಡಿ ಸಕಾಲದಲ್ಲಿ ಈ ಸುವ್ಯವಸ್ಥೆಯನ್ನು ಮಾಡಿಸಿದ ವೈಸರಾಯಿ ಲೋರ್ಡ್ ವೇವೆಲರನ್ನಂತೂ ಅಭಿನಂದಿಸಲೇಬೇಕೇನೋ! ಮಾತ್ರವಲ್ಲ, ಅವರು ಈ ಕುರಿತು ಪಡುತ್ತಿರುವ ಆತುರ ಅಷ್ಟಿಷ್ಟಲ್ಲ. ದೇಶದ ಈ ಪ್ರಾಣಾವಧಿ ವಿಪತ್ತಿನ ಕಾಲದಲ್ಲಿ ಜನ ಪ್ರಮುಖರ ಸಹಕಾರ ಬೇಕೆಂದು ಬೆಂಗಳೂರಿನಿಂದ ಡಿಲ್ಲಿಗೆ ಮರಳಿದವರೇ ಗಾಂಧೀ ಜಿನ್ನಾರನ್ನಾಮಂತ್ರಿಸಿದ್ದಾರೆ. ಮಿ. ಜಿನ್ನರೊಡನೆ ಸಂಭಾಷಿಸಿದ್ದಾರೆ! ಗಾಂಧಿಜೀ ದೂರ ಪ್ರಯಾಣ ಮಾಡುವ ಸ್ಥಿತಿಯಲ್ಲಿಲ್ಲವೆಂಬುದನ್ನು ಕೇಳಿ ತನ್ನ ಖಾಸಗೀ ಕಾರ್ಯದರ್ಶಿಯನ್ನು ವಾರ್ಧಕ್ಕೆ ಕಳುಹಿಸಿದ್ದಾರೆ. "ಸಾವಿರಾರು ಜನರು ಮಡಿದ ಹಿಂದಿನ ಬರಗಾಲಕ್ಕಿಂತಲೂ ಕಳತೆಯದಾದ ಮಹಾ ಬರಗಾಲವು ಭಾರತವನ್ನು ಇದಿರಿಸಿದೆ" ಎಂದು ಬ್ರಿಟಿಷ್ ಮಂತ್ರಿಮಂಡಲಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆಂದೂ ವಾರ್ತೆಯಿದೆ. ಲಂಡನ್ ವಾಷಿಂಗ್ಟನ್‌ಗಳಿಗೆ ಒಂದು ಶಿಷ್ಟಮಂಡಲವನ್ನೂ ಬೀಳ್ಕೊಟ್ಟಿದ್ದಾರೆ. ಒಟ್ಟಿನ ಮೇಲೆ ಅಗ್ರಕಲಶವೇ ಅಲುಗಾಡಿ ಕಟ್ಟಿದ ಕಂಪಿಸುತ್ತಿದೆ ಎಂಬುದನ್ನು [illegible] ತೋರಿಸುತ್ತಿದೆ. ಆದರೆ ಇವಿಷ್ಟೂ ಅನಾಹುತ ಸೂಚನೆಗಳು ಹೊರತು ಶಮನಗಳಲ್ಲ. ಶಮನವಾಗಿ ಬಂದುದೆಂದರೆ ಅರೆಪಾವಕ್ಕಿ ಕಡಿತದ ಶಾಸನವೊಂದೇ!

ವಿಮರ್ಶೆ ಅಥವಾ ವ್ಯಂಗೋಕ್ತಿಯ ಪ್ರಶ್ನೆ ಇದಲ್ಲ; ಭಾರತದ ಆಹಾರ ದುಸ್ಥಿತಿಯ ಕುರಿತು ಅಧಿಕಾರಿಗಳೀಗ ಮೆದುಳು ವ್ಯಯ ಮಾಡುತಿದ್ದಾರೆಂಬುದನ್ನು ಒಪ್ಪಬೇಕು. ಆದರಿದು ಹೊತ್ತು ಮೀರಿದ ಮೇಲೆ ಆದ ಎಚ್ಚರಿಕೆ. ಹೊಣೆ ಹೊತ್ತವರು ಸಕಾಲದಲ್ಲಿ ತಮ್ಮ ಬುದ್ಧಿ ಶಕ್ತಿಯನ್ನು ವ್ಯಯಿಸುತಿದ್ದರೆ ಭಾರತವು ಇಂತಹ ವಿಪತ್ತಿಗೀಡಾಗುತ್ತಿದ್ದಿಲ್ಲವೆಂಬುದನ್ನು ಮತ್ತೊಮ್ಮೆ ಜ್ಞಾಪಕಕ್ಕೆ ತರುತ್ತೇವೆ. ಅನ್ನ ಪ್ರಶ್ನೆಯು ಜನರ ಕರುಳಿಗೆ ತಾಗುವಾಗಲೇ ಅಧಿಕಾರಿಗಳ ಮೆದುಳಿಗೆ ತಾಗಿದ ಮಾತ್ರಕ್ಕೆ ಅವರು ಕೃತಜ್ಞತೆಗರ್ಹರಾಗುವಂತಿಲ್ಲ. 'ಬರಗಾಲವೆದ್ದರೆ ಸರಕಾರದ ವಿರುದ್ಧ ಬಂಡಾಯವೇಳಿರೆಂದು ನಾನು ಜನತೆಯನ್ನು ಕೇಳಿಕೊಳ್ಳುತ್ತೇನೆ; ಅದನ್ನಿದಿರಿಸಲು ಸರಕಾರವು ತಯಾರಿರಲಿ' ಎಂದು ಪಂಡಿತ ನೆಹರುಗಳ ಬಾಯಿಂದ ಬಂದುದು ಯಾವುದೇ ಹುಚ್ಚಿನಿಂದಲ್ಲ—ಜನರ ಹೊಟ್ಟೆಯಲ್ಲದ್ದಿರುವ ಕಿಚ್ಚಿನಿಂದಲೇ! ಈ ಅರೆಪಾವಿನ ಕಡಿತಕ್ಕೆ ಮದ್ರಾಸ್ ಪ್ರಾಂತಿಕ ಸರಕಾರವು ಮಿಕ್ಕ ಕಡೆಗಳಿಗಿಂತ ಮುಂದಾಗಿದೆ. ಇದೇ ತಾ. 17 ಆದಿತ್ಯವಾರದಿಂದ ಮದ್ರಾಸ್ ಪ್ರಾಂತ್ಯದಲ್ಲೆಲ್ಲಾ ಒಂದೂವರೆ ಪಾವಿನ ಹಸುಗೆ ಜಾರಿಗೆ ಬರುವದೆಂದು ಮದ್ರಾಸ್ ಸರಕಾರ ಈಗ ತಾನೇ ಪ್ರಕಟಿಸಿದೆ. ಇದನ್ನು ಜನತೆಯ ನಿಟ್ಟುಸಿರೊಂದೇ ಸ್ವಾಗತಿಸಬೇಕಲ್ಲದೆ ಅನ್ಯಥಾ ಸೂಚಿಸಿ ಫಲವಿಲ್ಲ. ಆದರೂ ಸರಕಾರದ ಉದ್ದೇಶ ಜನರನ್ನು ಬದುಕಿಸಬೇಕೆಂದಲ್ಲವೆ? ಈ ದೃಷ್ಟಿಯಿಂದಾದರೂ ಕಾಯಕಷ್ಟಜೀವಿಗಳಾದ ರೈತರು, ಕೆಲಸಗಾರರು ಮತ್ತಿತರ ಹಳ್ಳಿಗರಿಗೆ ಈ ಕಡಿತವನ್ನು ವಿನಾಯತಿ ಪಡಿಸುವದು ಅತ್ಯಗತ್ಯವಿದೆ. ಅಂಥವರ ಪಾಲನ್ನು ಇನ್ನೂ ಕಡಿಮೆಮಾಡುವದಸಾಧ್ಯವೆಂದೂ ಶ್ರಮಜೀವಿಗಳ ಪ್ರಾಣಧಾರಣೆಯಷ್ಟೇ ಇರುವ ಇದು ವರೆಗಿನ ಹಸುಗೆಯಲ್ಲಿ ಇನ್ನು ಕೈಯಾಡಿಸುವದೂ ಅವರ ಪ್ರಾಣದೊಡನಾಟವಾಡುವದೂ ಒಂದೇ ಎಂದೂ ಸೂಚಿಸದಿರಲಾರೆವು.

ಇವರಿಗಿಂತ - - - -
- - - ಅವರೇ ವಾಸಿ.

ಅಮೇರಿಕಾಧ್ಯಕ್ಷ ಟ್ರೂಮೇನರನ್ನು ಈಗ ಪ್ರತಿಯೊಬ್ಬರೂ ಟೀಕಿಸುತಿದ್ದಾರೆಂದೂ, ಅವರನ್ನು ಮೆಚ್ಚುವವರು ಯಾರೂ ಇಲ್ಲವೆಂದೂ 'ಮೆಂಚೆಸ್ಟರ್ ಗಾರ್ಡಿಯನ್'ನ ನ್ಯೂಯೋರ್ಕ್ ಬಾತ್ಮೀದಾರ ಬರೆದಿದ್ದಾನೆ. ಪ್ರಥಮಾವಧಿಯ ಆಕರ್ಷಣೆಯೆಲ್ಲಾ ಟ್ರೂಮೇನರನ್ನು ಬಿಟ್ಟಗಲಿದೆ. ಕೆಲವು ಮುಖ್ಯ ಅಧಿಕಾರ ಸ್ಥಾನಗಳಿಗೆ ಟ್ರೂಮೇನರು ಅತಿ ಜಾಣರನ್ನು ನೇಮಿಸಿಕೊಂಡುದು ಹೆಚ್ಚಿನವರಿಗೆ ಅಸಹ್ಯವಾಗಿ ಕಂಡಿದೆ. ಪ್ರೆಸಿಡೆಂಟ್ ರೂಸವೆಲ್ಟರು ಯಾವ ಖಾತೆಯ ಅಧಿಕಾರಿಯಮೇಲೂ ಪೂರ್ಣ ಜವಾಬ್ದಾರಿಯನ್ನು ಬಿಡದೆ ಎಲ್ಲವನ್ನೂ ತನ್ನ ಅಂಕೆಯಲ್ಲೇ ಇಟ್ಟುಕೊಂಡಿದ್ದರು. ಆದರೆ ಟ್ರೂಮೇನರದು ಪೂರ್ತಿ ಭಿನ್ನಹಾದಿ. ಅವರು ಎಲ್ಲರಿಗೂ ಸ್ವೇಚ್ಛಾಧಿಕಾರವಿತ್ತಿದ್ದಾರೆ.

oo oo oo

ಈಗಿನ ಬ್ರಿಟಿಷ್ ಪ್ರಧಾನಿಯ ಕುರಿತು ಜನಾಭಿಪ್ರಾಯವು ನಿರೀಕ್ಷೆಗೆ ಮಿಕ್ಕಿ ಅನುಕೂಲವಾಗಿದೆ. ಈಗೀಗ ಬ್ರಿಟಿಷ್ ಮಂತ್ರಿಗಳ ಪೈಕಿ ಹೆಚ್ಚಿನ ಅಪಕೀರ್ತಿ ಕೇಳಿದವರು ವಿದೇಶ ಮಂತ್ರಿ ಮಿ. ಬೆವಿನರೇ. ಕೂಲಿಗಾರ ಸರಕಾರ ಸ್ಥಾಪನೆಗೊಂಡಾಗ ಮಿ. ಚರ್ಚಿಲ್ಲರಿಂದಾರಂಭಿಸಿ ಎಲ್ಲರೂ ಭರವಸೆಯಿಟ್ಟದ್ದು ಮಿ. ಬೆವಿನರ ಮೇಲೆ. ನಿಸ್ಸಾರ ಮನುಷ್ಯನೆನ್ನುತಿದ್ದುದು ಮಿ. ಅಟ್ಲಿಯವರನ್ನೇ. ಆದರೆ ಈಗೀಗ ಮಿ. ಅಟ್ಲಿಯವರ ಅಧಿನಾಯಕತ್ವವು ಶ್ಲಾಘನೆಗೂ ಮಿ. ಬೆವಿನರ 18ನೇ ಶತಮಾನದ ಧೋರಣೆಯು ಖಂಡನೆಗೂ ಪಾತ್ರವಾಗಿದ ಸ್ವಾರಸ್ಯವೆಂದರೆ ಟೋರಿ ಮಂತ್ರಿ ಮಿ. ಈಡನರೊಡನೆ ಎಂದೂ ವ್ಯಕ್ತಿ ಘರ್ಷಣೆಗಿಳಿಯದಿದ್ದ ರಶ್ಯನ್ ಪ್ರತಿನಿಧಿಗಳು ಇಂದಿನ ಸಮತಾವಾದಿ ಬೆವಿನರೊಡನೆ ಹಲವು ಬಾರಿ ವಾಗ್ಯುದ್ಧ ಹೂಡಬೇಕಾಯಿತು. ಬೆವಿನರ ಮೇಲೆ ರಶ್ಯಾನರಿಗೆ ಜಿಗುಪ್ಸೆ ಮೊಳೆತಿದೆ.

oo oo oo

ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲೋರೆನ್ಸರು ಭಾಷಣ ವೇದಿಕೆಗಾದಾರು ಹೊರತು ಅಧಿಕಾರ ಗದ್ದುಗೆಗೆ ಹೇಳಿಸಿದ ಜನವಲ್ಲ ಎಂಬ ಟೀಕೆಯೇಳಹತ್ತಿದೆ. "ಮುಂದಿನ ಕೆಲವೇ ತಿಂಗಳುಗಳೊಳಗೆ ಹಿಂದುಸ್ಥಾನದಲ್ಲಿ ನಾವೊಂದು ಮಾರುದ್ದದ ಮಹಾ ಹೆಜ್ಜೆಯಿಟ್ಟು ಸ್ವತಂತ್ರ ಜಗತ್ತಿನ ಚರಿತ್ರೆಯ ಗಡಿಕಲ್ಲಾಗಿ ರಾಜಿಸಬಲ್ಲ ಸ್ಥಾನದಲ್ಲಿ ಭಾರತವನ್ನು ನಿಲ್ಲಿಸುವೆವೆಂಬ ಆಶೆಯಿದೆ" ಎಂದು ಮೊನ್ನೆ ತಾನೇ ಹೇಳಿದ ಮಿ. ಪೆಥಿಕ್ ಲಾರೆನ್ಸರು ಈ ತನಕ ಮಿ. ಅಮೆರಿಯಷ್ಟು ಅಪ್ರಿಯರಾಗಿಲ್ಲ. ಆದರೆ ಮಿ. ಅಮೆರಿಗೆ ತಪ್ಪು ಮಾಡುವ ಶಕ್ತಿಯಿದ್ದಷ್ಟು ಲೋರ್ಡ್ ಪೆಥಿಕ್ ಲಾರೆನ್ಸರಲ್ಲಿ ತಾನು ಆಡಿದ್ದನ್ನು ಸಾಧಿಸುವ ಶಕ್ತಿಯಿಲ್ಲವೆಂದು ವಿಮರ್ಶಕರನ್ನುತಿದ್ದಾರೆ. ಆ ಮನುಷ್ಯನ ಅರ್ಥವಾದರೂ ಆಗುತಿತ್ತು. ಈಗಿನವರು ಅಷ್ಟು ಸ್ಪಷ್ಟ ವರ್ತನೆಯವರಲ್ಲನಂತೆ!

MADRAS LEGISLATIVE ASSEMBLY ELECTION
ಮದ್ರಾಸಿನ ನ್ಯಾಯವಿಧಾಯಕ ಸಭೆಗೆ ಚುನಾವಣೆ.

ಪ್ರಿಯ ಮಹಾಶಯರೇ,

ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳ ಪರವಾಗಿ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಇದೇ ಬರುವ ಮಾರ್ಚ್ ತಿಂಗಳಲ್ಲಿ ಆರಿಸಲಿಕ್ಕಿರುವ ಮೆಂಬರಿಕೆ ಸ್ಥಾನಕ್ಕೆ ಕೊಂಗ್ರೆಸ್ ಪಾರ್ಟಿಯ ಕಡೆಯಿಂದ ನಾನು ಉಮೇದ್ವಾರನಾಗಬೇಕಾಗಿ ಕರ್ಣಾಟಕ ಮತ್ತು ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ನಿರ್ಧರಿಸಿರುತ್ತಾರೆ. ಹರಿಜನರ ಸ್ಥಾನಕ್ಕೆ ಶ್ರೀ. ಕೆ. ಈಶ್ವರನವರನ್ನು ಆರಿಸಿದ್ದಾರೆ. ಅದುದರಿಂದ ತಾವು ಪ್ರೀತಿಯಿಟ್ಟು ಚುನಾವಣೆ ಕಾರ್ಯದಲ್ಲಿ ನಮಗೆ ಸಹಾಯಮಾಡಿ ಕೊಂಗ್ರೆಸ್ ಪಾರ್ಟಿಯು ನಮ್ಮ ದೇಶದ ಸಲುವಾಗಿ ಕೈಕೊಂಡಿರುವ ಸಾಧನೆಗೆ ತಮ್ಮ ಬೆಂಬಲ ಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಅತ್ತಾವರ, ಮಂಗಳೂರು.
ತಾ. 8-2-1946.

ಎ. ಬಿ. ಶೆಟ್ಟಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

The Canara Mutual Assurance Company, Limited.

(Incorporated in British India. Liability of Members Limited.)

Head Office: **UDIPI, (S. India.)**

ANNUAL REPORT FOR THE YEAR ENDING 31ST DECEMBER, 1945.

The Directors have pleasure to submit to the members their Report on the working of the Company for the eleventh financial year ending 31st December, 1945 together with the audited accounts and Balance Sheet.

NEW BUSINESS:- During the year, proposals of the aggregate value of Rs. 61,21,300/- were received. Out of these as also out of the proposals pending on hand at the beginning of the year, a business of Rs. 55,05,150/- in new policies resulted including sums reassured. The remaining proposals were either rejected or accepted on terms not agreeable to the proponents or were awaiting completion at the close of the year.

INCOME & EXPENSES:- The premium income and the income from interest and other sources amounted to Rs 8,83,833—15—0 and Rs. 49,810—5—11 respectively. Calculated as per Rule 25 of the Insurance Rules the ratio of expenses of management (inclusive of depreciation) to the premium income comes to 7·42%.

LIFE FUND:- The Life Fund at the close of the year stood at Rs. 16,24,430—2—9 in addition to the Investment Reserve Fund of Rs. 2,500/-. The net addition to the Life Fund during the year was Rs. 5,44,332—6—8.

The assets of the Company have appreciated as is indicated in the Form AA Statement attached.

The following statement indicates the progress made by the Company in recent years:-

Year	New Business (Policies issued)	Life Fund at the close of the year	Renewal expense ratio (on the basis of Rule 25 of the Insurance Rules)
1941	Rs. 11,71,500—0—0	Rs. 3,84,926—6— 1	16·01%
1943	Rs. 36,60,550—0—0	Rs. 7,40,000—5—10	10·07%
1945	Rs. 55,05,150—0—0	Rs. 16,24,430—2— 9	7·42%

DIRECTORS:- (1) Sri B. V. Baliga, (2) Dr. T. M. A. Pai, (3) Sri L. H. Prabhu & (4) Sri K. R. Shenai, retire under Article 37 and are eligible for re-election.

(1) Khan Saheb H. S. Hussain Saheb, (2) Sri M. D. Kamath and (3) Sri M. Vittal Nayak, Policyholders' Directors, retire this year under Article 35 and are eligible for re-election by the policyholders in a meeting to be duly convened hereafter.

STAFF PROVIDENT FUND:- In the course of the year, Provident Fund for the benefit of the members of the staff has been introduced and the recognition for the same has been received from the Commissioner of Income Tax, Madras.

GENERAL:- The general progress of the Company continues to be very satisfactory. Expense ratio is considerably below than that provided for in the last valuation of the Company. This is pre-eminently indicative of care, caution and efficiency exercised by the management. While being highly appreciative of the generous response during the year under report, the Directors earnestly look forward for an ever increasing support and co-operation from the insuring public as well as members.

Directors wish to place on record their sincere appreciation of the excellent services rendered by the Managing Director, Sri T. R. A. Pai. Devoted and loyal services rendered with joy and enthusiasm by the staff and field workers are highly appreciated by the management.

(By order of the Board)

Dated 20th January, 1946.

B. Vaikunta Baliga,
Chairman.

THE CANARA MUTUAL ASSURANCE COMPANY, LIMITED.

(Incorporated in British India. Liability of Members Limited.)

Head Office. **UDIPI, (S. India)**

NOTICE IS HEREBY GIVEN that the Eleventh Ordinary General Meeting of the Company will be held at the Company's Registered Office at *"Canara Mutual Building" Udipi, on Sunday the 21st day of April, 1946, at 3-30 P. M. to transact the following business*—

1. To receive and adopt the Annual Report, Audited Statement of Accounts and Balance Sheet for the year ending 31st December, 1945.
2. To elect four Directors in place of those who retire by rotation and are eligible for re-election under Article 37, viz: —

   1. Sri B. V. Baliga, 2. Dr. T. M. A. Pai, 3. Sri L. H. Prabhu, 4. Sri K. R. Shenai.

3. To appoint an Auditor or Auditors for the year 1946 and to fix the remuneration payable to him or them. The last year's Auditor Mr. K. Gopalkrishna Rao retires and is eligible for re-appointment.
4. To transact any other business which may be brought before the meeting with the permission of the Chairman.

N. B.— *If a member is unable to attend the meeting he may appoint any other member as his proxy and the instrument appointing him must be* duly stamped, signed and attested and should be in the prescribed form (Vide: Article No. 32) and should reach the Office not less than 72 hours before the time appointed for holding the meeting.

(By order of the Board)

Dated at UDIPI,
20th January, 1946.

T. R. A. Pai.
Managing Director.

The Canara Mutual Assurance Company, Limited.

BALANCE SHEET AS AT 31ST DECEMBER, 1945.

LIABILITIES		Rs. As. Ps.
Life Assurance Fund		16,24,430 2 9
Investment Reserve Fund		2,500 0 0
Estimated liability in respect of Outstanding claims, whether due or intimated		74,001 9 0
Sundry creditors for expenses		6,627 1 9
Other sums owing by the Company -		
Premiums received in advance	Rs. 4,292 6 0	
Suspense deposit ...	Rs. 24,809 15 0	29,102 5 0
		Rs. 17,36,661 2 6

ASSETS			Rs. As. Ps.
LOANS:			
On Mortgage of Property within British India ...			6,400 0 0
On Company's Policies within their Surrender Value (inclusive of advances under automatic extension provision)			31,651 13 0
On Personal Security (fully secured by Postal Insurance Policies within their Surrender Value)			1,489 4 2
INVESTMENTS:			
Deposit with Reserve Bank of India: Indian Govt. Securities.	*Face Value.*		
3½% Non-terminable	Rs. 2,20 000/-	@ cost Rs 2,12,737 8 0	
Deposit with The Comptroller, Mysore State (Under the Mysore Insurance Act)			
Indian Government 8p% Securities.	... 85,000/-	@ cost 80,589 1 0	
Mysore Government Securities.	... 60,000/-	@ cost 69,596 4 0	
On hand.			
Indian Government Securities...	6,73,100/-	@ cost 6,54,073 10 0	
Post Office 10 years' Defence Savings Certificates:	5,000/-	@ cost 5,000 0 0	
	10,43,100/-		10,21,996 7 0
Other Guaranteed & Preference Stocks & Shares of Companies incorporated in India: Of the face value of Rs. 3,68,040/-, Rs. 3,41,860/- paid @ cost			4,01,201 10 0
Other Ordinary Shares of Companies incorporated in India: of the face value of Rs. 1,21,210/-, Rs. 38,269/- paid @ cost			43,191 6 0
House Properties in India.			
Office Premises & Building @ cost less depreciation ..		27,415 0 0	
Other Property less depreciation		6,400 0 0	33,815 0 0
Outstanding Premiums (Net)			62,764 5 0
Interest, Dividends & Rents outstanding (Net) ...			13,481 0 4
Interest, Dividends & Rents accruing but not due (Net)			6,685 0 8
Cash:			
At Bankers on Deposit Account		57,500 0 0	
At Bankers on Current Account and in hand		37,712 6 2	95,212 6 2
Other Accounts:			
Office Furniture & car at cost less depreciation		10,660 0 0	
Office Library at cost less depreciation		570 0 0	
Stationery Stock at cost ...		7,512 14 2	
Deposit with U. E. S. Corporation, Ltd., ...		30 0 0	18,772 14 2
			Rs. 17,36,661 2 6

AUDITOR'S REPORT

I have examined the Balance Sheet as at 31st December, 1945, and Revenue Account for the year ended the same date, of The Canara Mutual Assurance Company, Limited, and have obtained all the information and explanations I have required; in my opinion the said Balance Sheet is drawn up in conformity with the law and exhibits a true and correct view of the Company's affairs according to the best of my information and explanations given to me and as shown by the books of the Company.

The books of account have been kept by the Company as required by section 130 of the Indian Companies Act.

I have verified the cash, Bank balances, Investments and examined the certificates from The Reserve Bank of India and The Comptroller, Mysore State, in respect of the securities held by them and am satisfied as to their correctness.

K. Gopalkrishna Rao,

Registered Accountant,

AUDITOR.

29, **Thambu Chetty Street,**
MADRAS.
Camp: UDIPI, Dated 20th January, 1946.

Dated at UDIPI, 20th January, 1946.

T. R. A. Pai, *Managing Director*

K. L. Aithala,
H. S. Hussain, *Directors.*

B. Vaikunta Baliga, *Chairman.*

THE CANARA MUTUAL ASSURANCE CO., LTD.

REVENUE ACCOUNT FOR THE YEAR ENDING 31ST DECEMBER, 1945 IN RESPECT OF LIFE INSURANCE BUSINESS WITHIN INDIA.

			Rs. As. Ps.
Claims under Policies (including provision for claims due or intimated) -			
By Death			71,400 11 0
By Maturity			3,560 0 0
Surrenders (including Surrender of Bonus) ...			9,637 10 7
Expenses of Management.-			
1. (a) Commission to Insurance Agents ...		Rs. 94,189 1 6	
(b) Allowances & Commission (other than commission included in sub-item (a) preceding) ...		,, 1,14,595 12 1	
2. Salaries (including Managing Director's remuneration. Rs. 15,000/-) ...		,, 37,467 11 4	
3. Travelling Expenses		,, 917 4 3	
4. Directors' Fees (including Travelling Expenses)		,, 9,982 8 0	
5 Auditor's Fees ...		,, 600 0 0	
6. Medical Fees (including Rs. 5,188/- paid to two Directors) ...		,, 22,170 0 0	
7 Advertisements ..		,, 6,649 12 9	
8 Printing & Stationery		,, 5,619 12 11	
9. Other Expenses of Management-			
Actuary's Fees	Rs. 130 0 0		
Contingencies	,, 583 11 7		
Bank charges	,, 81 2 0		
Light & Fan	, 435 3 7		
Postage & Telegrams	,, 3,664 7 3		
Policy & Receipt Stamps	,, 3,731 6 0		
Contribution to Staff Provident Fund	, 653 2 9	9,279 1 2	
10. Other payments:- Registration Fees ...		Rs. 468 0 0	
11 Rents for offices belonging to and occupied by the Company		971 0 0	3,02,910 0 0
Other Expenditure:-			
Depreciation On office premises and buildings		Rs. 704 0 0	
On Landed properties and buildings		,, 160 0 0	
On Furniture and car		,, 772 7 0	
On Library		,, 67 1 8	1,703 8 8
Balance of Fund at the end of the year as shown in the Balance Sheet			16,24,430 2 9
			Rs. 20,13,742 1 0

		Rs. As. Ps.
Balance of Fund at the beginning of the year ...		10,80,097 12 1
Premiums Less Re-assurances:-		
1. First Year Premiums	Rs. 2,88,282 11 0	
2. Renewal Premiums ...	,, 5,95,551 4 0	
3. Single Premiums ...	,, Nil	8,83,833 15 0
Interest, Dividends and Rents	Rs. 57,294 9 10	
Less Income Tax etc.	,, 9,338 10 11	47,955 14 11
Assignment and alteration fees		274 8 0
Profit on sale of Investments		1,579 15 0
		Rs. 20,13,742 1 0

Gross Premium written in India during the year ... Rs. 8,92,639—1—0.

Dated at UDIPI,
20th January, 1946.

T. R. A. Pai,
Managing Director.

K. L. Aithala,
H. S. Hussain,
Directors.

B. Vaikunta Baliga,
Chairman.

K. Gopalkrishna Rao,
Registered Accountant
AUDITOR.

Statement Pursuant to Section 11 (2) of Act IV of 1938.

Statement containing the names and descriptions of the persons in charge of the management of the business during the year ending 31st December, 1945.

NAME	DESCRIPTION & ADDRESS	REMARKS
BOARD OF DIRECTORS:		
CHAIRMAN:		
Sri B. Vaikunta Baliga, B.A., B.L.	Vakil, Kodiyalbail, Mangalore.	
DIRECTORS:		
Sri P. Padmanabha Rao, B.A., B.L.	Vakil, Udipi.	Policy-Holders' Director under Sec. 48 of the Ins. Act.
Sri M. Damodar Kamath, B.A., B.L.	Vakil, Udipi.	
Sri L. H. Prabhu, B.A., LL.B.	Vakil, Honavar.	
Dr. T. Madhava Pai, M.B.&B.S.	Physician & Surgeon Manipal, Udipi.	
Dr. K. L. Aithala, M.B.&B.S.	Regd. Medical Practitioner, Udipi.	
Khan Saheb H. S. Hussain Saheb, Bahadur, B.A., B.L.	Vakil, Karkala.	Policy-Holders' Director under Sec. 48 of the Ins. Act.
Sri S. M. Kini, B.Sc., B.E., M.I.E.	134, Meadows St., Fort, Bombay.	
Sri K. Raghunath Shenai, B.A.	Pleader, Coondapoor.	
Sri Manel Vittal Nayak,	General Merchant, Market Road, Mangalore.	Policy-Holders' Director under Sec. 48 of the Ins. Act.
Sri T. R. A. Pai,	Udipi.	
MANAGING DIRECTOR:		
Sri T. R. A. Pai,	Udipi.	
DEPUTY MANAGER:		
Sri U. K. Kini,	Udipi.	

FORM AA

Classified summary of the Assets in India of THE CANARA MUTUAL ASSURANCE COMPANY, LIMITED, on 31st December, 1945.

	Class of Assets	Book Value Rs. As. Ps.	Market Value Rs. As. Ps.	Remarks
1.	Govt. of India Securities	9,52,400 3 0	9,99,068 12 6	Ascertained from published quotations
2.	Indian Provincial & State Govt. Securities ..	69,596 4 0	68,662 8 0	
3.	Indian Municipal, Port & Improvement Trust Securities including Debentures ...	Nil.	...	
4.	Debentures of Indian Railways	Nil.	...	
5.	Guaranteed & Preference Shares of Indian Railways	Nil.	...	
6.	Annuities of Indian Railways	Nil.	...	
7.	Ordinary Shares of Railways in India	Nil.	...	
8.	Other Debentures of Concerns in India	Nil.	...	
9.	Other Guaranteed & Preference Shares of Concerns in India	4,01,201 10 0	4,16,625 4 0	Fair value as between a willing buyer & a willing seller
10.	Other Ordinary Shares of Concerns in India ..	43,191 6 0	43,975 1 0	
11	Loans on the Company's Policies effected in India and within their Surrender Value inclusive of advances under Automatic Extension Provision ...	31,651 13 0	..	
12.	Loans on Mortgage of Property in India ...	6,400 0 0	...	
13.	Loans on Personal Security to persons domiciled and resident in India (on Collateral Security of Postal Insurance Policies within their Surrender Value)	1,489 4 2	..	
14.	Other Loans granted in India	Nil	...	
15.	Land & House Property in India .. .	33,815 0 0	44,500 0 0	Do
16.	Cash on Deposit in Banks in India	57,500 0 0	...	
17	Cash in Hand and on Current a/c in banks in India	37,712 6 2	...	
18	Agents' Balances and outstanding premiums (outstanding premiums net)	62,764 5 0	...	
19.	Interest, dividends and rents either outstanding or accrued but not due	20,166 1 0	...	
20.	Other assets in India:—			
	(a) Office furniture & car at cost less depreciation ... Rs. 10,660 0 0			
	(b) Office Library at cost less depreciation .. Rs. 570 0 0			
	(c) Stationery Stock at cost ... Rs. 7,512 14 2			
	(d) Deposit with U. E. S. Corp. Ltd. ... Rs. 30 0 0	18,772 14 2		
	Total Rs.	17,36,661 2 6		

Dated at Udipi, 20th January, 1946. — ***T. R. A. Pai,*** *Managing Director.* — ***K. L. Aithala, H. S. Hussain,*** *Directors.* — ***B. Vaikunta Baliga,*** *Chairman.*

Certificates as required under Regulation 7 of Part I to the First Schedule of the Insurance Act, 1938.

WE HEREBY CERTIFY THAT:

The values as shown in the Balance Sheet annexed hereto of the Investments in Stocks and Shares are at cost, and the Market Values thereof shown against them have been ascertained from published quotations except of Shares of Companies in India, which have been stated at a fair value as between a willing buyer and a willing seller.

The values of all the assets shown in the annexed Balance Sheet have been reviewed as at the date of the Balance Sheet, and that in our belief the assets set forth in the Balance Sheet are shown in the aggregate, at amounts not exceeding their realisable or market values under the several headings:- "Loans", "Investments", "Outstanding Premiums", "Interest, Dividends & Rents Outstanding", "Interest, Dividends & Rents Accruing but not due", "Cash" and the several items specified under "Other accounts".

No part of the Assets of the Life Assurance Fund has been directly or indirectly applied in contravention of the provisions of the Insurance Act, (IV of) 1938 relating to the application and investment of Life Assurance Funds.

Dated at UDIPI, 20th January, 1946. — ***T. R. A. Pai,*** *Managing Director.* — ***K. L. Aithala, H. S. Hussain,*** *Directors.* — ***B. Vaikunta Baliga.*** *Chairman.*

I HEREBY CERTIFY THAT I have verified the Cash Balances and the securities relating to the Company's Loans and Investments and am satisfied as to their correctness and I further certify that no part of the Assets of the Life Assurance Fund has been directly or indirectly applied in contravention of the provisions of the Insurance Act, 1938 relating to the application and investment of Life Assurance Funds.

Dated at UDIPI, 20th January, 1946. — ***K. Gopalkrishna Rao,*** *G. D. A., R. A.,* *Auditor.*

ಮದ್ರಾಸ್ ಪ್ರಾಂತ್ಯದ ಹಸುಗೆಯಲ್ಲಿ ತಾ. ೧೭ರಿಂದ ಅರೆ ಪಾವು ಕಡಿತ!

ರೈತರಲ್ಲುಳಿದುದನ್ನೂ ಸಂಗ್ರಹಿಸಲಾಗುವುದು!

"ಇಡೀ ರಾಷ್ಟ್ರದಲ್ಲಿ ಒಂದೂವರೆ ಪಾವಿನ ಹಸುಗೆ ಜ್ಯಾರಿಯಾಗಬೇಕೆಂಬ ಹಿಂದೀ ಸರಕಾರದ ಆಹಾರ ಧೋರಣೆಗನುಸಾರವಾಗಿ ಮದ್ರಾಸ್ ಗವರ್ನರರು ಇದೇ ತಾ.11ರಲ್ಲಿ ತನ್ನ ಸಲಹೆಗಾರರ ಸಭೆಸೇರಿಸಿ ಮುಂದಿನ ಆದಿತ್ಯವಾರದಿಂದ (ತಾ.17-2-46) ಇಡೀ ಪ್ರಾಂತ್ಯದಲ್ಲದು ಜ್ಯಾರಿಗೆ ಬರತಕ್ಕದ್ದೆಂಬ ಸರ್ಕ್ಯೂಲಾರು ಹೊರಡಿಸಿದ್ದಾರೆ. ಈ ಸಂಬಂಧದ ಸರಕಾರೀ ಪ್ರಕಟಣೆಯು ಸಾರಾಂಶ ಹೀಗಿದೆ: "ಉತ್ತರ ಭಾಗಗಳಲ್ಲಿದ್ದ ಬಿರುಗಾಳಿಯ ದೆಸೆಯಿಂದಲೂ ಸಾರ್ವತ್ರಿಕ ಮಳೆಯ ಅಭಾವದಿಂದಾಗಿಯೂ ದಕ್ಷಿಣ ಹಿಂದುಸ್ಥಾನವು ಅತೀ ವಿಷಮ ಸ್ಥಿತಿಯ ಅಕ್ಕಿಯ ಅಭಾವಕ್ಕೀಡಾಗಿದೆ ಈ ಪರಿಸ್ಥಿತಿಗೆ ತಕ್ಕಂತೆ ಇಡೀ ಪ್ರಾಂತ್ಯದಲ್ಲಿ ತಾತ್ಕಾಲಿಕ ಹಸುಗೆಯನ್ನು ವಿಸ್ತರಿಸುವ ಮತ್ತು ಸಾಗುವಳೀದಾರರ ಉಳಿತಾಯದ ಅಕ್ಕಿಯನ್ನೆಲ್ಲಾ ಇನ್ನಷ್ಟು ಭರದಿಂದ ಸಂಗ್ರಹಿಸುವ ವ್ಯವಸ್ಥೆ ಮಾಡಲಾಗುವದು. ಪ್ರಾಂತ್ಯದ ವಾರ್ಷಿಕವೆಚ್ಚಕ್ಕೆ ಬೇಕಾಗುವಷ್ಟನ್ನು ಆಮದುಪಡಿಸಿಕೊಳ್ಳುವಪ್ರಯತ್ನ ಕೂಡಾ ನಡೆಯುತ್ತಿದೆ. ಆದರೆ ಲೋಕದಲ್ಲೇ ಅಭಾವವಿರುವುದರಿಂದ ಇಲ್ಲಿ ಕಡಿಮೆ ಬೀಳುವ ಎಲ್ಲಾ ಅಂಶವನ್ನೂ ತುಂಬಿಸಲಾಗುವಷ್ಟು ಸಹಾಯ ಹೊರಗಿನಿಂದ ಬರುವದು ತೀರಾ ಅಸಂಭವ. ಇಂತಹ ಅಮದಿನ ಸಮಸ್ಯೆ ರೂಪೀ ಸಹಾಯ-ವನ್ನು ನಂಬಿ ಬೇರಾವ ಪರಿಹಾರ ಕಾರ್ಯವನ್ನೂ ಕೈಕೊಳ್ಳದಿದ್ದರೆ ಅದು ಹೆಡ್ಡತನವಾಗುವದು. ಆದ್ದರಿಂದ ಹಸುಗೆಯ ಪರಿಮಾಣವನ್ನು ತಗ್ಗಿಸುವ, ಶೀಘ್ರ ಕಾರ್ಯಕ್ರಮ ಕೈಕೊಳ್ಳುವದು ಅಗತ್ಯವೆಂದು ಸರಕಾರವು ಭಾವಿಸಿದೆ. ಅಕ್ಕಿಯೇ ತಮ್ಮ ಮುಖ್ಯಾಹಾರವಾಗಿರದ ಎಲ್ಲಾ ಸಾರ್ವಜನಿಕರೂ ಅದರ ಉಪಯೋಗವನ್ನೇ ಬಿಟ್ಟುಬಿಡಬೇಕೆಂದು ಸರಕಾರವು ಕೇಳಿಕೊಳ್ಳುತ್ತದೆ. ಅಕ್ಕಿಯಂತೆಯೇ ಇತರ ವಿಧದ ಆಹಾರಗಳಲ್ಲಿಯೂ ಕಡಿತವಮಾಡಿಕೊಳ್ಳುವದರಿಂದಲೂ ಸಹಾಯವಾಗುತ್ತದಾದ್ದರಿಂದ ಜನರು ತಮ್ಮ ಒಂದೊಂದು ಊಟವನ್ನೇ ಬಿಡುವದು ಅಥವಾ ಊಟದ ಪರಿಮಾಣವನ್ನು ಕಡಿಮೆ ಮಾಡಿಕೊಳ್ಳುವದು ಅಗತ್ಯವಿದೆ. ಹೊಟೆಲು ಮತ್ತು ಕ್ಲಬ್ಬುಗಳಲ್ಲಿ ಸರ್ತಿ ಪ್ರಕಾರ ಮೂರು ಊಟ ಹಾಕುವದನ್ನು ನಿಷೇಧಿಸಿ ಸರಕಾರವು ಪ್ರತ್ಯೇಕ ಆಜ್ಞೆಗಳನ್ನು ಹೊರಡಿಸಲಿದೆ. ಸಾರ್ವಜನಿಕರು ತಮ್ಮ ಮನೆಯಲ್ಲಿಯೂ ಈ ಕ್ರಮವನ್ನು ಜ್ಯಾರಿಗೆ ತಂದು ಅಪವ್ಯಯವನ್ನು ಆದಷ್ಟು ಕಡಿಮೆ ಮಾಡಬೇಕೆಂದು ವಿಜ್ಞಾಪನೆಯಿದೆ.

ಒಬ್ಬ ಪ್ರಾಯಸ್ಥನಿಗೆ ಒಂದು ದಿನಕ್ಕೆ ಅಕ್ಕಿಯೇ ಮುಖ್ಯಾಹಾರವಾಗಿರುವ ಕಡೆಯಲ್ಲಿ ಅಕ್ಕಿ, ಗೋಧಿ ಅಥವಾ ಸಾವೆಕೂಡಿ ನಿಶ್ಚಿತ ಪರಿಮಾಣದಲ್ಲಿ ಒಟ್ಟಿಗೆ ಒಂದೂವರೆ ಪಾವಿಗೆ ಮಿಕ್ಕದಷ್ಟು ಕೊಡಲ್ಪಡುವದು. ಸಾವೆ, ಅಥವಾ ವಿಶಿಷ್ಟಹಾರಗಳ ಸಂಪ್ರದಾಯವಿದ್ದ ಕಡೆಗಳಲ್ಲೂ ಆಯಾಯ ಕಡೆಗೆ ತಕ್ಕಂತೆ ಧಾನ್ಯಗಳ ಪರಿಮಾಣದಲ್ಲಿ ವ್ಯತ್ಯಾಸವಿದ್ದರೂ ಒಟ್ಟು ಒಂದೂವರೆ ಪಾವಿನೊಳಗಿರಬೇಕು. ಸಪ್ಲಿಮೆಂಟರೀ ಹಸುಗೇ ಕಾರ್ಡು ಇದ್ದವರಿಗೆ ಹೆಚ್ಚಿಗೆಯಾಗಿ ಅರ್ಧಪಾವು ಗೋದಿ ಅಥವಾ ಸಾವೆ ಮಾತ್ರ ದೊರೆಯುವದು. ಈ ಕಡಿಮೆಬಿದ್ದ ಅಂಶವನ್ನು ಭರ್ತಿ ಮಾಡಿಕೊಳ್ಳಲಾಗುವಂತೆ ಹಸುಗೇ ಅಂಗಡಿಗಳಲ್ಲಿಯೇ ಇತರ ದವಸ ಧಾನ್ಯಗಳು ಮಾರಾಟಕ್ಕೆ ಸಿಕ್ಕುವವು. ಅವುಗಳಿಗೆ ಈ ರೇಶನ್ ಸಂಬಂಧವಿಲ್ಲ. "ಕೆಲವು ಪತ್ರಿಕೆಗಳು ರೈತರಿಂದ ಆಹಾರ ಸಂಗ್ರಹಿಸುವದರಲ್ಲಿರುವ ಕಠೋರತೆ ಸಡಿಲಾಗಬೇಕೆಂದು ವಾದಿಸುತ್ತಿರುವದು ನನ್ನ ದೃಷ್ಟಿಗೆ ಬಿದ್ದಿದೆ, ಆದರೆ, ಕಠೋರವಾಗಿ ಹಾಗೂ ಉತ್ಸಾಹಪೂರ್ವಕವಾಗಿ ಇಡೀ ಪ್ರಾಂತ್ಯದ ಸಾಗುವಳೀದಾರರಿಂದ ಉಳಿತಾಯದ ಧಾನ್ಯವನ್ನೆಲ್ಲಾ ಸಂಗ್ರಹಿಸಬೇಕಾದ ಕಾಲವಿದು. ನಾವಿನ್ನು ಹಾಗೆ ಮಾಡದೆ ಬಿಟ್ಟರೆ ಇನ್ನೊಂದು ಬಾರಿಯೂ ದೇಶದಲ್ಲಿ ಕಡಿತ ಮಾಡಬೇಕಾಗಿ ಬರುವದು ಖಂಡಿತ" ಎಂದು ಹಿಂದೀ ಸರಕಾರದ ನಾಗರಿಕ ಸರಬರಾಯಿ ಖಾತೆಯ ಕಮಿಶನರ್ ಮಿ. ಎ. ಎಫ್. ಡಬ್ಲ್ಯು ದೀಕ್ಸನ್‌ರಂದಿದ್ದಾರೆ. ಆದ್ದರಿಂದ ರೈತರು ಸರ್ವತ್ಯಾಗಕ್ಕೆ ತಯಾರಿರಬೇಕಾದ ಕಾಲ ಬಂದಿದೆ.

ಸಿಂಧಿನಲ್ಲಿ ಹಿದಯತುಲ್ಲಾ ಸರಕಾರ

ಮುಸ್ಲಿಂ ಲೀಗ್ ಪಕ್ಷದ ನಾಯಕ ಸರ್ ಗುಲಾಮ ಹುಸ್ಸೇನ್ ಹಿದಯತುಲ್ಲರನ್ನೇ ಸಿಂಧಿನ ಗವರ್ನರ್ ಸರ್. ಫ್ರಾನ್ಸಿಸ್ ಮುಡಿಯವರು ಮಂತ್ರಿಮಂಡಲ ರಚಿಸಲು ಕೇಳಿಕೊಂಡಂತೆ ಅಲ್ಲಿ ಈ ಕೆಳಗಿನ ಮಂತ್ರಿಗಳುಳ್ಳ ಸರಕಾರ ರಚನೆಯಾಗಿದೆ. ಸರ್. ಹಿದಯತುಲ್ಲಾ ಪ್ರಧಾನಮಂತ್ರಿ, ಖಾನ್ ಬಹದ್ದೂರ್ ಖುರ್ರೋ, ಪಿರ್ ಅಲ್ಲಾ ಭಕ್ಸ್, ಖಾನ್ ಬಹದೂರ್ ಮಿರ್ ಗುಲಾಮ್ ಅಲೀಖಾನ್ ತಾಲ್ಪೂರ್. ಎರಡು ಸ್ಥಾನಗಳನ್ನು ಅಲ್ಪ ಸಂಖ್ಯಾಕ ಹಿಂದೂಗಳಿಗೆಂದು ಅವಕಾಶವಿಟ್ಟು ಅದನ್ನು ತುಂಬಿಸಿಕೊಟ್ಟು ಸಹಕರಿಸಬೇಕೆಂದು ಸರ್. ಹಿದಯತುಲ್ಲರು ಕಾಂಗ್ರೆಸ್ ಪಕ್ಷವನ್ನು ಕೇಳಿಕೊಂಡಿದ್ದಾರೆ. ಕಾಂಗ್ರೆಸಿಗರು ಅದನ್ನು ನಿರಾಕರಿಸಿದ್ದಾರೆ, ಸಂಯುಕ್ತ ಪಕ್ಷವು ಸಿಂಧ್ ಗವರ್ನರ ಈ ಕ್ರಮ ವರ್ತನೆಯನ್ನು ನಿಷೇಧಿಸಿದೆ.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು 13—2—46ರಿಂದ

ಬೊಂಬೇ ಟಾಕೀಸಿನವರ

ಜ್ವಾರ್ ಭಾಟಾ

ಮೃದುಲಾ, ಶಾಮಿನಾಥ್, ಆಗಾಜಾನ್, ದಿಲೀಪ್ ಕುಮಾರ್ ಮತ್ತು ಮುಮ್ತಾಜ್ ಅಲೀ.

ಬರುವ ಚಿತ್ರ—

ಭಕ್ತ ಅಂಬರೀಶ್

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—

ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,

Balmatta Road, Mangalore.



Approved firm by the Govt. of Mrs. of
Certified by the Agent of the Govt. of
Cylone Indian.

ಮಂಗಳೂರು

ಸಭೆ—ಈ ದಿನ ಸಂಜೆ 6-30ಕ್ಕೆ ಸೆಂಟ್ರಲ್ ಮೈದಾನಿನಲ್ಲಿ ಶ್ರೀಮತಿ ಕಮಲಾದೇವಿಯರ ಅಧ್ಯಕ್ಷತೆಯಲ್ಲಿ ಜರಗುವ ಸಾರ್ವಜನಿಕ ಸಭೆಯಲ್ಲಿ ಅಖಿಲ ಭಾರತ ರಾಷ್ಟ್ರೀಯ ಸಭೆಯ ಕಾರ್ಯದರ್ಶಿ ಆಚಾರ್ಯ ಜೆ. ಬಿ. ಕೃಪಾಲಿನಿಯವರು ಭಾಷಣ ಮಾಡುವರು. ತಾ 13ರಲ್ಲಿ ಶ್ರೀ ಕೃಪಾಲಿನಿಯವರು ಜಿಲ್ಲಾ ಗ್ರಾಮ ಕೈಗಾರಿಕೆ ಸಂಘದ ಖಾದಿ ಭಂಡಾರದ ಸಂದರ್ಶನ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿದ್ಯಾರ್ಥಿಗಳ ಸಭೆಯಲ್ಲಿ, ಭಾಷಣ, ಬಿ. ಇ. ಎಂ. ಮಿಶ್ಯನ್ ಶಾಲೆ ಭಗಿನೀ ಸಮಾಜ ಮತ್ತು ಬಂಟವಾಳ ಖಾದಿ ಕೇಂದ್ರದ ಸಂದರ್ಶನೆ ಮಾಡಿದರು. ಪುತ್ತೂರು ಮತ್ತು ವಿಟ್ಲದಲ್ಲಿ ಸಾರ್ವಜನಿಕ ಭಾಷಣ ಮಾಡಿದರು.

ವಿದ್ಯಾಖಾತೆಯ ಡೈರೆಕ್ಟರ್ ಡಾ। ಎಸ್. ಆರ್. ಯು. ಸವೂರರು—ಕಳೆದ ಶನಿವಾರ ಮಂಗಳೂರಿಗೆ ಬಂದಿದ್ದು ತಾ 9ರಲ್ಲಿ ಬಿ. ಇ. ಮಿಶ್ಯನ್ ಶಾಲೆಯ ವರ್ಧಂತ್ಯುತ್ಸವದ ಅಧ್ಯಕ್ಷತೆ ವಹಿಸಿದರು ಇಲ್ಲಿ ಕೆಲದಿನವಿದ್ದು ಜಿಲ್ಲೆಯ ಕೆಲವು ಮುಖ್ಯ ಕೇಂದ್ರಗಳನ್ನು ಸಂದರ್ಶಿಸಲಿರುವರು.

ಹಂಚಿನ ಕೆಲಸಗಾರರ ಬೋನಸ್ಸಿನ ತೀರ್ಮಾನ—ಮಂಜೂರದ ಪರವಾಗಿ ಬೋನಸ್ಸಿನ ಹೊರತಾಗಿ ಮತ್ತೆಲ್ಲಾ ಕೇಳಿಕೆಗಳು ಹಿಂತೆಗೆಯಲ್ಪಟ್ಟು ಕೆಲಸಗಾರರಿಗೆ ಮೂರು ತಿಂಗಳ ಪ್ರಕೃತದ ಮೂಲ ಕೂಲಿಯಷ್ಟು (ತುಟ್ಟಿಭತ್ತೆ ಮುಂತಾದುವುಗಳ ವಿನಹ) ಬೋನಸ್ಸು ಕೊಡಬೇಕೆಂದು ಜಿಲ್ಲಾ ಕಲೆಕ್ಟರರು ನಿರ್ಧರಿಸಿರುತ್ತಾರೆ ಎಂದು ಟ್ರೇಡ್ ಯೂನಿಯನ್ ಕೌನ್ಸಿಲಿನ ಕಾರ್ಯದರ್ಶಿಗಳು ಬರೆಯುತ್ತಾರೆ.

ಉಡುಪಿ.

ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ:—ದಿ ಆಲ್ ಇಂಡಿಯಾ ಫೆಡರೇಶನ್ ಆಫ್ ಎಜ್ಯುಕೇಶನಲ್ ಎಸೋಸಿಯೇಶನ್ಸ್, ಕಾನಪೂರ—ಅವರು "ಇಂಗ್ಲೀಷ್ ಮತ್ತು ನಮ್ಮ ದೇಶಭಾಷೆಗಳಲ್ಲಿಯ ಮಕ್ಕಳ ಸಾಹಿತ್ಯಗಳ ತುಲನಾತ್ಮಕ ವಿಮರ್ಶೆ ಹಾಗೂ ಮಕ್ಕಳ ಸಾಹಿತ್ಯದ ಅಭಿವೃದ್ಧಿಯ ಕುರಿತು ಸಲಹೆಗಳು' ಎಂಬ ವಿಷಯದ ಮೇಲೆ ಏರ್ಪಡಿಸಿದ ಅಖಿಲಭಾರತ ಪ್ರಬಂಧ ಸ್ಪರ್ಧೆಯಲ್ಲಿ, ಕನ್ನಡದ ಬಗ್ಗೆ, ಉಡುಪಿಯ ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾಗಿರುವ ಶ್ರೀ ಕೆ. ವಿಟ್ಠಲ ಶೆಣೈ ಬಿ.ಎ.ಎಲ್.ಟಿ. ಅವರಿಗೆ ದ್ವಿತೀಯ ಬಹುಮಾನ ದೊರೆತಿರುವುದಾಗಿ ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ

ಮಜೂರ ಚಳವಳಿ—ನೇಕಾರರ... ದಿ ವರ್ಕ್ಸ್‌ನವರು ನೋಟೀಸು ಕೊಡದೆ ತಮ್ಮ ಫೇಕ್ಟರಿಯ ಬಾಗಿಲು ಮುಚ್ಚಿ ನೂರು ಕೆಲಸಗಾರರ ಕುಟುಂಬವನ್ನು ಉಪವಾಸ ಹಾಕಿದರೆಂದು ತಾ 12ರಲ್ಲಿ ಉಡುಪಿ ಬೀಡಿ ಮತ್ತು ನೇಯಿಗೆ ಸಂಘಗಳ ಪತಿಯಿಂದ ಸಾರ್ವಜನಿಕ ಸಭೆಯೊಂದು ಶ್ರೀ ... ಅವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ. ಎಸ್ ಎನ್ ಹೊಳ್ಳರ ಭಾಷಣವಿತ್ತು. ಈ ಸಂಬಂಧದ ಒಂದು ಠರಾವಾಯಿತು

ತಿದ್ದುಪಡಿ ತಾ 31 1 45ರ ಸಂಚಿಕೆಯಲ್ಲಿ ಶ್ರೀ. ಉಪ್ಪೂರು ಕೃಷ್ಣ ಶೆಟ್ಟರ ನಿಧನವು ತಾ 20-1-46ರಲ್ಲಿ ಎಂದು ತಪ್ಪಾಗಿ ಪ್ರಕಟವಾಗಿದೆ. ಅದು 21-1-46 ಎಂದಾಗಬೇಕು. ಅಲ್ಲದೆ ಅದೇ ಸುದ್ದಿಯಲ್ಲಿ "ಕಳ್ಳರು ಕೇಸಿನ ನಂತರ ದಿವಂಗತರ ಆರೋಗ್ಯವು ಕೆಟ್ಟಿದ್ದು..." ಎಂದು ನಮ್ಮ ವಾತ್ತಾದಾರರು ಬರೆದುದು ಆಕ್ಷೇಪಕರವೆಂದೂ ಕಳ್ಳರು ಕೇಸಿಗೂ ನಿಧನಕ್ಕೂ ಏನೇನೂ ಸಂಬಂಧವಿಲ್ಲದೆಂದೂ ಮೃತರ ಮನೆಯವರೊಬ್ಬರು ತಿಳಿಸುತ್ತಾರೆ. ನಮ್ಮ ವಾತ್ತಾದಾರರು ಅಂತಹ ಅಭಿಪ್ರಾಯದಿಂದಾಗಲಿ, ಯಾವದೇ ದುರುದ್ದೇಶದಿಂದಾಗಲೀ ಹಾಗೆ ಬರೆದುದಲ್ಲವೆನ್ನುತ್ತಾರೆ. ಅಂತೂ ಈ ಘಟನೆಗಾಗಿ ವಿಷಾದಿಸಬೇಕಾಗಿದೆ. (ಸಂ.ನ.)

ಮಂಗಳೂರು.

ನಗರದಲ್ಲಿ ಪ್ಲೇಗು—ಜನರಿಗೆ ಪ್ಲೇಗು ತಗಲಿದ ವಾರ್ತೆ ಇಲ್ಲದಿದ್ದರೂ, ಇಲಿಗಳು ಅಲ್ಲಲ್ಲಿ ಬೀಳುತ್ತಿವೆ. ಬಂದರದ ಜುಮ್ಮಾ ಮಸೀದಿ ರಸ್ತೆಯಲ್ಲಿರುವ ಮೆ। ಹರಿದಾಸ ಭಂಡಾರಿ ಮತ್ತು ಮೆ। ಕೃಷ್ಣನಾಯಕರ ಭಂಡಸಾಲೆಗಳಲ್ಲಿ ಬಿದ್ದ ಇಲಿಗಳು ಪ್ಲೇಗಿನವು ಎಂದು ಗೊತ್ತಾಗಿದೆ.

ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವು ಇದೇ ತಾ. ೧೬-೧೭ರಲ್ಲಿ ಜರಗಲಿದ್ದು ಶ್ರೀ। ಎಸ್. ಎನ್. ಬಾಟ್ಲಿವಾಲರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರಾಗಿ ಕೇಳುತ್ತೇವೆ.

ಮುಸ್ಲಿಂ ಸ್ಥಾನಗಳು—ನಮ್ಮ ಜಿಲ್ಲೆಯಿಂದ ಮದ್ರಾಸು ಪ್ರಾಂತೀಯ ನ್ಯಾಯವಿಧಾಯಕ ಸಭೆಗೆ ಎರಡು ಮುಸ್ಲಿಂ ಸ್ಥಾನಗಳಿವೆ. ಇವುಗಳಿಗೆ ಜ। ಎಚ್. ಎಸ್. ಹುಸೇನ್ ಸಾಹೇಬರನ್ನೂ, ಜ। ಚಮ್ನಾಡ್ ಸಾಹೇಬರನ್ನೂ ಲೀಗು ತನ್ನ ಪ್ರತಿನಿಧಿಗಳಾಗಿ ಆರಿಸಿದೆ.

ಪ್ರಥಮ ಚಿಕಿತ್ಸಾ– ವಿಷಯಗಳನ್ನು ಕಲಿಸುವ ತರಗತಿಗಳು ಕೆನರಾ ಹೈಸ್ಕೂಲಿನಲ್ಲಿ ಕಳೆದ ಮಂಗಳವಾರ ಶ್ರೀ। ವೆಂಕಟೇಶ ಪೈಗಳಿಂದ ಉದ್ಘಾಟಿಸಲ್ಪಟ್ಟಿತು. ತರಗತಿಗಳು ವಾರಕ್ಕೆರಡಾವರ್ತಿ ನಡೆಯುತ್ತವೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮತ್ತು ಡಾ। ಕೆ. ಎಲ್. ಕಿಣಿಯವರು ಭಾಷಣಗಳ ಮೂಲಕ ಎಲ್ಲಾ ವಿಷಯ ಕಲಿಸುತ್ತಿರುವರು.

ದ. ಕ. ಟ್ರೇಡ್ ಯೂನಿಯನಿನ ಸಭೆ–ಶ್ರೀಯುತ ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಂಘಟನೆಗೊಂಡಿರುವ ದ. ಕ. ಟ್ರೇಡ್ ಯೂನಿಯನಿನ ಬಹಿರಂಗ ಸಭೆಯು ತಾ 11ರಲ್ಲಿ ಶ್ರೀ। ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಮಿಲಾಗ್ರಿಸ್ ಚರ್ಚ್ ಹೈಸ್ಕೂಲಿನ ಅಂಗಣದಲ್ಲಿ ನಡೆಯಿತು. ಶ್ರೀಯುತ ಮಾರ್ಟಿಸ್, ಜನಾರ್ದನ ಮಲ್ಯ, ಸೋನ್ಸ್, ಮೊಂಟೇರಿಯಾ ಹಾಗೂ ಶ್ರೀಮತಿ ಬ್ರಿಟೊರವರ ಭಾಷಣಗಳು ನಡೆದುವು. ಮಾಲಕರೂ ಮಜೂರರೂ ಅನ್ಯೋನ್ಯ ಭಾವದಿಂದ ವರ್ತಿಸಿ ಅವರೆಲ್ಲರೂ ಒಂದು ಬಳಗದವರಂತೆ ಬಾಳಬೇಕು. ಮಜೂರರು ತಮಗವಶ್ಯವಾದ ಕೇಳಿಕೆಗಳನ್ನು ಮಾಲಕರೊಡನೆ ದೈನ್ಯೋಕ್ತಿಯಿಂದ ಕೇಳಿ ಪಡೆದುಕೊಳ್ಳಬೇಕು. ಬಡವರು ಧನವಂತರನ್ನು ನೋಡಿ ಅಸೂಯೆಪಡಬಾರದು; ಅಂತೆಯೇ ಧನಿಕರು ಮಜೂರರನ್ನು ತುಚ್ಛೀಕಾರ ಎಣಿಸಬಾರದು ಎಂದು ಭಾಷಣಗಾರರ ಹೇಳಿಕೆಗಳ ಮುಖ್ಯಾಂಶ.

ಅಧ್ಯಕ್ಷರು–ತಮ್ಮ ಕೇಳಿಕೆಗಳನ್ನು ಪಡೆಯಲು ಕೆಲಸಗಾರ[illegible] ಹೂಡಬಾರದು. ಇನ್ನಿತರ ಸರ್ವ ವಿಧಾನಗಳೂ ವ್ಯಯವಾದ ಬಳಿಕ ಮಾತ್ರ ಅವರು ಈ ಮುಷ್ಕರ ಕಾರ್ಯಕ್ಕೆ ತೊಡಗಬೇಕು. ಆದರೆ ಆ ಮೊದಲು ಅದಕ್ಕೆ ತಕ್ಕ ಧನ ಸಂಗ್ರಹ ಮಾಡಿಟ್ಟುಕೊಳ್ಳತಕ್ಕದ್ದು. ವಿನಹ ಬೀದಿ ಬೀದಿಗಳಲ್ಲಿ ಬೇಡಿ ಹೋಗುವುದು ವಿಹಿತವಲ್ಲ. ಮತ್ತು ಮಜೂರರು ಮಾಲಕರನ್ನು ತೆಗಳುವುದು ನಾಗರಿಕತೆಯ ಲಕ್ಷಣವಲ್ಲ. ನಮ್ಮ ಮಜೂರರ ಜೀವನ ಕ್ರಮವು ವೃದ್ಧಿಗೊಳ್ಳಬೇಕಾದರೆ ಅದು ಸ್ವತಂತ್ರ ಹಿಂದುಸ್ಥಾನದಲ್ಲಿ ಮಾತ್ರ ಸಾಧ್ಯವಾದೀತು. ಆದುದರಿಂದ ಭಾರತದ ಸ್ವಾತಂತ್ರ್ಯವನ್ನು ಪಡೆಯುವುದು ಪ್ರಥಮ ಕೆಲಸ ಎಂದರು.

ನಂತರ ಮಜೂರರ ಜೀವನ ಕ್ರಮ, ಅವರನ್ನು ಮಜೂರ ಮುಖಂಡರು ತಪ್ಪು ದಾರಿಯಲ್ಲಿ ನಡೆಯಿಸಿ ಕಷ್ಟ ಸಂಕಷ್ಟಗಳಿಗೆ ಗುರಿಮಾಡುವ ವಿಧಾನ, ಮಜೂರರು ಮಾಲಕರೊಡನೆ ಅನ್ಯೋನ್ಯ ಭಾವದಿಂದ ವರ್ತಿಸಿ ನಡೆದರೆ ಅವರಿಗೆ ದೊರಕುವ ಅನುಕೂಲತೆಗಳನ್ನು ಚಿತ್ರಿಸುವ ಒಂದು ಕೊಂಕಣಿ ಭಾಷೆಯ ನಾಟಕವು ಅಭಿನಯಿಸಲ್ಪಟ್ಟ ಬಳಿಕ ಸಭೆಯು ಕೊನೆಗೊಂಡಿತು.

ಶ್ರೀಮತಿ ಕಮಲಾದೇವಿಯವರು ತಾ 11ರಲ್ಲಿ ಮದ್ರಾಸ್ ಮೈಲಿನಲ್ಲಿ ಮಂಗಳೂರಿಗೆ ಬಂದಿಳಿದರು. ಶ್ರೀಮತಿಯವರಿಗೆ ಮಂಗಳೂರು ವಿದ್ಯಾರ್ಥಿ ಸಮ್ಮೇಳನದ ಸ್ವಾಗತ ಸಮಿತಿಯವರು ಮತ್ತು ವಿದ್ಯಾರ್ಥಿ ಸ್ವಯಂಸೇವಕ, ಸ್ವಯಂಸೇವಕಿಯರು ಹಾರವನ್ನರ್ಪಿಸಿ, 'ಜೈ ಹಿಂದ್' ಘೋಷಣೆಯೊಂದಿಗೆ ಸ್ವಾಗತವಿತ್ತರು.

ವ್ಯಾಯಾಮ ಪ್ರದರ್ಶನ– ಶಿವಾಜಿ ಫಿಸಿಕಲ್ ಕಲ್ಚರ್ ಇನ್ಸ್ಟಿಟ್ಯೂಟಿನವರು ಮದ್ರಾಸ್ ಅಂಚೆವಾಹಕರ ಮತ್ತು ಕೆಳ ತರಗತಿಯ ಉದ್ಯೋಗಿಗಳ ಮಂಗಳೂರು ಶಾಖೆಯ ಪರವಾಗಿ ರಾವ್ ಬಹದೂರ್ ಎಂ. ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ತಾ 17-2-46ಕ್ಕೆ ವಿವಿಧ ವ್ಯಾಯಾಮ ಪ್ರದರ್ಶನ ಮಾಡಲಿರುವರು.

ಶ್ರೀ ಕಾಶಿ ಮಠಾಧೀಶ್ವರರ ಆಗಮನ:—ಪೇಟೆಯ ಹತ್ತು ಸಮಸ್ತರ ಬಿನ್ನಹದಂತೆ ಶ್ರೀ ಕಾಶೀ ಮಠಾಧೀಶ್ವರರು ತಾ. 6ರಲ್ಲಿ ಮೂಲ್ಕಿಯಿಂದ ಇಲ್ಲಿಗೆ ಆಗಮಿಸಿದ್ದಾರೆ. ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರರೂ ಮೆನೇಜರರೂ ಇತರ ಹಲವು ಅಧ್ಯ ಮಹನೀಯರೂ ಅವರನ್ನು ಕರೆತಂದರು.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೮ ದಿವಸಗಳಿಗೆ ಬರುವವು. ಅಂದರೆ ಕೇವಲ ೮ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

Badavara Bandhu Group Enterprises

Editors, Printers, Publishers, Bankers, Merchants, Fish Dealers, Motion Picture Producers, Exhibitors, Benefactors, Property Dealers, Provision Dealers, etc, etc

THROUGH

their associated concerns

1 "The Badavara Bandhu"
2 The Badavara Bandhu Printing Press, Ltd.
3 Sri Narayan Guru Press
4 Sri Narayan Guru Bank L'd.
5 TheSouth Kanara Fish Industries, Ltd.
6 The Karnataka Theatres, Ltd.
7 Janasons, Ltd.
8 The Badavara Bandhu Colonies
9 The Badavara Bandhu Orphanage Trus
10 My Stores
11 The Vijaya Stores, Ltd
12 The Badavara Bandhu Hosieries
13 The West Coast Ice Fac ory

Head Offices

MANGALORE, SOUTH INDIA

Telegraphic address:
1. BADAVARABANDHU
2. MONEY

Post Box No. 110

ಉಡುಪಿ.

ಸ್ಕೂಲ್ ಡೇ ಸಮಾರಂಭ:—ಕ್ರಿಶ್ಚಿಯನ್ ಹೈಸ್ಕೂಲಿನ ಸ್ಕೂಲ್ ಡೇ ಸಮಾರಂಭವು ತಾ. 8 ಮತ್ತು 9ರಲ್ಲು ಶ್ರೀ। ಡಿ. ಸೊರೊನ್ಹಾ, ಡಿ। ಮುನ್ಸೀಫ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ। ಎ. ಎಸ್. ಕಾರಟರು ಶಾಲಾ ವರದಿಯನ್ನೋದಿದರು. ಡಾ। ಸುಂದರರಾವ ಪೈಗಳವರು ಶಾಲಾ ಸ್ವಸ್ತಿವಾಚನ ಮಾಡಿದರು. ಮಿಸೆಸ್. ಡಿ. ಸೊರೊನ್ಹಾರವರು ಬಹುಮಾನ ವಿತರಣೆ ಮಾಡಿದರು. ವಿವಿಧ ವಿನೋದಾವಳಿಗಳಿಂದ ಸ್ಕೂಲ್ ಡೇ ಸಮಾರಂಭವು ಯಶಸ್ವಿಯಾಗಿ ಮುಕ್ತಾಯವಾಯಿತು.

ಎಯಿಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಭೆಯು:—ತಾ. ೯ರಲ್ಲು ಮುನಿಸಿಪಲ್ ಮೈನ್ ಶಾಲೆಯಲ್ಲಿ ಡಾ। ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಎಯಿಡೆಡ್ ಶಾಲೆಗಳ ಗುಣದೋಷಗಳ ಕುರಿತು ಶ್ರೀ। ಪಿ. ಸಿ. ಐತಾಳರು ಭಾಷಣ ಮಾಡಿದ ತರುವಾಯ ಶಿಡ್ಡಾಯ ಶಿಕ್ಷಣ ಜ್ಯಾರಿಗೆ ತರುವ ಸರಕಾರದ ಧೋರಣೆಯನ್ನು ಸ್ವಾಗತೀಕರಿಸುವ, ಅಧ್ಯಾಪಕರಿಗೆ ಈಗ ಸಿಗುವ ಗ್ರಾಂಟಿನ ದರವನ್ನು ಏರಿಸಿ ಕನಿಷ್ಟಪಕ್ಷ ರೂಪಾಯಿ 50ರಿಂದ 100ರ ವರೆಗೆ ಸಿಗಬೇಕೆನ್ನುವ, ಸರಕಾರಿ ನೌಕರರಿಗೆ ದೊರಿಯುವ ಸ್ಕೇಲಿನಂತೆ ತುಟ್ಟಿಭತ್ತೆ ಸಿಗಬೇಕೆನ್ನುವ, ಸೆಕೆಂಡರಿ ಗ್ರೇಡ್ ಟ್ರೈನ್ಡ್ ಟೀಚರ್ಸ್ ದೊರೆಯದೆ ಇರುವ ಶಾಲೆಗಳಲ್ಲಿ ಹಾ। ಗ್ರೇಡ್ ಟ್ರೈನ್ಡ್ ಉಪಾಧ್ಯಾಯರೇ 4 ಮತ್ತು 5ನೆ ತರಗತಿಗಳಿಗೆ ಇಂಗ್ಲೀಷ್ ಕಲಿಸಲು ಹುಕುಂ ದೊರೆಯಬೇಕೆನ್ನುವ, ಶಾಲಾ ದಿನಗಳನ್ನು 180ಕೆ ಇಳಿಸಬೇಕ್ಕೆನ್ನುವ, ಹಾ। ಎ। ಶಾಲೆಗಳಲ್ಲಿ ಮೂರು ಮಂದಿ ಸೆಕೆಂಡರಿ ಟ್ರೈನ್ಡ್ ಉಪಾಧ್ಯಾಯರಿದ್ದರೆ ಮಾತ್ರ ಕನ್ನಡಪಂಡಿತರಿಗೆ ಸೆಕೆಂಡರಿ ಗ್ರೇಡ್ ಟ್ರೈನ್ಡ್ ಉಪಾಧ್ಯಾಯರ ಗ್ರಾಂಟು ಸಿಕ್ಕುವುದು ಎಂಬ ರೂಲನ್ನು ಸಡಲಿಸಬೇಕೆನ್ನುವ, ಇತ್ಯಾದಿ ಠರಾವುಗಳು ಪಾಸಾದುವು.

ಶೋಚನೀಯ ನಿಧನ ಸುಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ಧರ್ಮಪತ್ನಿ ಶ್ರೀಮತಿ ಸತ್ಯಭಾಮಾ ಅಮ್ಮನವರು ಕಳೆದ ತಾ. 31ರಲ್ಲಿ ಅಕಾಲ ನಿಧನ ಹೊಂದಿರುವುದು ವಿಷಾದವೆನಿಸುತ್ತದೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಮೃತ ರ ಬಂಧುವರ್ಗಕ್ಕುಂಟಾದ ಅಪಾರ ಶೋಕದಲ್ಲಿ ಸಹ ಸಂತಾಪವನ್ನು ಸೂಚಿಸುವೆವು.

ಶ್ರೀ ಜಯಕರ್ನಾಟಕ ನಾಟ್ಯ ಸಂಘ ಸಿದ್ದಾಪುರ ಈ ನಾಟ್ಯ ಸಂಘವು 1935ನೆ ಇಸವಿಯಲ್ಲಿ ಜನ್ಮವೆತ್ತಿ ತನ್ನ ಅಮೋಘ ನಾಟ್ಯಕಲೆಯನ್ನು ಅಖಿಲ ಕರ್ನಾಟಕದಲ್ಲಿ ಬೀರಿ ಜನ ಮೆಚ್ಚುಗೆಯನ್ನು ಪಡೆದಿರುವುದಲ್ಲದೆ ಈಗ ಎರಡು ವರ್ಷಗಳಿಂದ ದ. ಕ. ಜಿಲ್ಲೆಯಲ್ಲಿ ಸಂಚರಿಸಿ ಸಂಘಕ್ಕೆ ಬೇಕಾದ ಸೀನ್ ಸಿನರಿಗಳು ಪೋಷಾಕುಗಳನ್ನು ತಯಾರಿಸಿದೆ. ಆದರೆ ತನ್ನದೇ ಆದ ಒಂದು ವಿದ್ಯುದ್ದೀಪದ ಸೆಟ್ ಇಲ್ಲದೆ ಕಂಪೆನಿಯ ಚಟುವಟಿಕೆಗಳಿಗೆ ತಡೆಯುಂಟಾಗಿದೆ. ಉಡುಪಿಯಿಂದಲೇ ಅಭಿವೃದ್ಧಿಗೆ ಬಂದ ಈ ಸಂಘವು ಇನ್ನಷ್ಟು ಶೋಭಾಯಮಾನವಾಗುವಂತೆ ಉಡುಪಿಯ ಮಹಾಜನರು ರೂ. 10-ರಂತೆ ಸಹಾಯ ಧನವಾಗಿ ಕೊಟ್ಟು ಫ್ರೀ ಪಾಸುಗಳನ್ನು ಪಡೆದು ಪ್ರೋತ್ಸಾಹಿಸುವಂತೆ ಸಂಘದ ವ್ಯವಸ್ಥಾಪಕ ಶ್ರೀ। ಕೆ. ಸೀತಾರಾಮ ಶಾಸ್ತ್ರಿಗಳು ವಿನಂತಿ ಮಾಡಿಕೊಂಡಿದ್ದಾರೆ.



ಕುಟುಂಬದೊಳಗಿನ ಚಿಲ್ಲರೆ ಬೇನೆ

ಜವೇರಿಯನ್ ಜೀವನ ಮಿಕ್ಶ್ಚರ್

ಎಮ್. ಎಚ್. ಜವೇರಿಯನ್ ಮತ್ತು ಕಂಪನಿ ಪ್ರಿನ್ಸೆಸ್ ಸ್ಟ್ರೀಟ್ ಮುಂಬಾಯಿ ೨

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹಗಲೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಬಿರಮಾಡಿ ಸ್ಟೋರ್. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲಾಬಾಗಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

CHAMPAE'S

Snow & Castrex

(Sole Distributers for India.)

Prop: K. G. NAYAK,
Santhekatte, UDIPI, S. K.

ಭೂಮಾಲಿಕರ ಸಂಘದ ಹಾಗೂ ಅಧಿಕಾರಿಗಳ ಅವಗಾಹನೆಯ ಬಗ್ಗೆ—

(ಕುಂದಾರು ರಾಮರಾವ್)

ಈ ವರ್ಷ ಕಂತು ತಪ್ಪಿದುದರಿಂದಾಗಿ ಅಕ್ಕಿ ಮುಡಿಗೊಂದು ರೂ, ಕಳೆದು ಕೊಂಡವರು ಸುಮಾರು ನೂರಕ್ಕೆ ನಲುವತ್ತರಷ್ಟು ಮಂದಿ ಚೆನ್ನಾಗಿ ವಿಮರ್ಶಿಸಿದರೆ ಅಧಿಕ ರಿಕ್ವಿಜಿಶನಿನಿಂದಾಗಿಯೇ ಹೀಗಾದುದೆಂದು ತಿಳಿಯಬಹುದು. ರೈತರು ಈ ಬಗ್ಗೆ ಎಚ್ಚತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಕಡಿತವಾದ ಹಣವನ್ನು ಹಿಂತಿರುಗಿ ಕೊಡುವಂತೆ ಸಕಾರಣವಾಗಿ ಮನವಿ ಮಾಡಿಕೊಳ್ಳಬೇಕಾಗಿದೆ. ಕೆಲವೆಡೆಗಳಲ್ಲಿ ಆಕ್ಷೇಪಣೆಯ ಅರ್ಜಿಗಳ ತನಿಖೆ ನಡೆಸಿ ಸರಿಯಾದ ಉಳಿತಾಯವೆಷ್ಟೆಂಬುದನ್ನೂ ನಿರ್ಧರಿಸಲಾಗಿದೆ ಅದರೆ ಕಡಿತವಾದ ಹಣವನ್ನು ಹಿಂತಿರುಗಿ ಕೊಡುವಾಗ ಈ ಕೆಳಗಿನ ಸೂಚನೆಯನ್ನು ಅಧಿಕಾರಿಗಳು ಅಗತ್ಯ ಅನುಸರಿಸಬೇಕಾಗಿ ಕೇಳಿಕೊಳ್ಳುತ್ತೇನೆ

ರೈತನ ಸರಿಯಾದ ಉಳಿತಾಯದಲ್ಲಿ ಕೊಡಲಿಕ್ಕಾಗದೆ ಅವಧಿ ತಪ್ಪಿದ್ದರೆ ಪಣ ಕಡಿಮೆ ಮಾಡಿದರೆ ಅನ್ಯಾಯವಲ್ಲ ಆದರೆ ಏಳು ಮುಡಿಗೆ ಇಪ್ಪತ್ತೆಂಟು ರೂ. ಕಮ್ಮಿಯಾಗಬಾರದು' ಉದಾಹರಣೆಗಾಗಿ ಒಬ್ಬ ಒಕ್ಕಲಿಗನಿಗೆ 148 ಮು. ಭತ್ತಕ್ಕೆ ನೋಟೀಸು ಕೊಡಲಾಗಿದೆಯೆಂದಿಟ್ಟುಕೊಳ್ಳೋಣ ಆತನು ಆಕ್ಷೇಪಿಸಿದುದರಿಂದ 96 ಮು ಕೊಡಬೇಕೆಂದಾಗುತ್ತದೆ ಎಂದರೆ ಒಂದೊಂದು ಕಂತಿಗೆ ಹನ್ನೆರಡು ಮುಡಿಯಕ್ಕಿ. ಆದರೆ ವೈಯಕ್ತಿಕ ಕಾರಣದಿಂದಾಗಿ ಆತನು ಮೊದಲನೆಯ ಸಲಕ್ಕೆ ಎರಡು ಮುಡಿ ಮಾತ್ರ ಕೊಟ್ಟು ಉಳಿದ ಮೂರು ಕಂತುಗಳಿಗೆ ಸರಿಯಾಗಿ ಕೊಡುತ್ತಾನೆ ಪ್ರಥಮ ಸಲ ಕಡಿಮೆಯಾದ ಅಕ್ಕಿಯೂ ಪ್ಪಿಸುವಾಗ ಎಲ್ಲಾ ಕಂತುಗಳ ನ್ಯಾಯದ ಯೂ ಕಳೆದುಹೋಗಿರುತ್ತದೆ. ಅದ್ದರಿಂದ ಅವನಿಗೆ ಹತ್ತು ರೂ. ಕಳೆದರೆ ಸರಿಯೆಂದಾಯಿತು. ಬದಲಿಗೆ ಮೊದಲನೆಯ ಕಂತು ತಪ್ಪಿದನೆಂದು ಎರಡನೆಯ ಸಲದ ಹನ್ನೆರಡು ಮುಡಿಯಲ್ಲಿ ಹತ್ತು ರೂ. ಕಡಿತಮಾಡಿ, ಮೂರನೆಯ ಸಲ ಹಿಂದಿನದಕ್ಕೆಂದು ಮತ್ತೂ ಹತ್ತು ರೂ. ಕಳೆದು, ನಾಲ್ಕನೆಯ ಸಲ ಹಾಗೂ ಕೊನೆಗೂ ಹತ್ತತ್ತು ತೆಗೆದರೆ ಒಟ್ಟು ಅವನಿಗೆ 30+10 ರೂ. ನಷ್ಟವಾಗುತ್ತದೆ. ಇಷ್ಟರ ವರೆಗೆ ಸ್ಟೋರುಗಳಲ್ಲಿ ಬತ್ತ ಕೊಡುವಾಗ ಈ ರೀತಿಯ ಧೋರಣೆಯನ್ನನುಸರಿಸಿದ್ದಾರೆ. ಅಸಮಂಜಸವಾದ ಈ ಕ್ರಮವನ್ನು ರೈತರು ಪ್ರತಿಭಟಿಸಲೇಬೇಕು

ಇನ್ನು ರೈತನ ಆಕ್ಷೇಪಣೆಯನ್ನು ಗಮನಿಸಿ ತನಿಖೆ ನಡೆಸುವಾಗಲೂ ಕೆಲವು ಅಧಿಕಾರಿಗಳು ನ್ಯಾಯನಿಷ್ಠರಾಗುವುದಿಲ್ಲ ಹೆಚ್ಚಾಗಿ ಬೇಸಾಯಗಾರರು ಏನೂ ತಿಳಿಯದ ಹಳ್ಳಿಗರಾದ್ದರಿಂದ ಕಾನೂನಿನ ಬೆದರಿಕೆ ಹಾಕಿದೊಡನೆಯೇ ಎಷ್ಟನ್ನಾದರೂ ಕೊಡಲು ಒಪ್ಪಿಬಿಡುತ್ತಾರೆ ಅಂಥವರ ಮುಗ್ಧತೆ ಕೆಲವರ ದರ್ಪಕ್ಕೆ ನಿರಂಕುಶತನಕ್ಕೆ ದಾರಿಯಾಗಿದೆಯೆಂದು ಧೈರ್ಯವಾಗಿ ಹೇಳಬಹುದು. ಸ್ವಲ್ಪ ಸ್ವಲ್ಪ ತಿಳಿದವರು "ನಮಗೆ ಬೇಸಾಯಕ್ಕೆ ಎಕ್ರೆಗೆ ಎಷ್ಟು ಬಿಡುತ್ತೀರಿ!" ಎಂದರೆ "ಎರಡು ಯಾ ಮೂರು ಮುಡಿ ಭತ್ತ" ಎಂಬುತ್ತರವು ದೊರಕುತ್ತದೆ "ಎಕ್ರೆಗೆ ಆರು ಮುಡಿ ಅಥವಾ ನಾಲ್ಕಾದರೂ ಬಿಡಬೇಕೆಂದು ಕಲೆಕ್ಟರರು ಹೇಳಿದ್ದರಲ್ಲವೆ?" ಎಂದು ಕೇಳಿದರೆ "ನಿನಗೆ ಕಾನೂನು ಜಾಸ್ತಿ! ಸುಮ್ಮನೆ ಕುಳಿತುಕೊಳ್ಳಿ" ಎಂದು ಬಿರುಸಾಗಿಯೇ ಉತ್ತರಿಸುತ್ತಾರೆ ಸ್ವಲ್ಪ ಸಮಾಧಾನ ಹೊಂದಿದ ಮೇಲೆ "ಪತ್ರಿಕೆಗಳಲ್ಲಿ ತಪ್ಪಾಗಿ ಅಚ್ಚಾಗಿರಬಹುದು ನಮಗೆ ಮೂರು ಮುಡಿ ಭತ್ತಕ್ಕಿಂತ ಹೆಚ್ಚು ಬಿಡುವ ಅಧಿಕಾರವೇ ಇಲ್ಲ' ಎನ್ನುತ್ತಾರೆ. ನಿಜಾಂಶವು ಗೊತ್ತಿದ್ದರೂ ಅಧಿಕಾರಿಗಳ ಪ್ರತಿಭೆಗೆ ಹೆದರಿ ತೆಪ್ಪಗಿರಬೇಕಾಗುತ್ತದೆ.

ಒಟ್ಟಾರೆ ಮೊದಲನೆಯ ಬೆಳೆಯಲ್ಲಿ ರೈತನ ಉಪಯೋಗಕ್ಕೆ ಬಹಳ ಕಡಿಮೆ ಉಳಿದಿದೆ. ಸುಗ್ಗಿಯಲ್ಲಿ ನೀರಿನ ಅಭಾವದಿಂದ ಅರ್ಧಕ್ಕರ್ಧ ದೊರೆಯುವುದೂ ಕಷ್ಟ. ಮುಂದಿನ ವರ್ಷಕ್ಕೆ ಸಾಲದೆ ಜಿಲ್ಲೆಯಲ್ಲಿ ಅರೆವಾಸಿ ಭೂಮಿಯು ಬಂಜರಾದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಅಧಿಕಾರಿಗಳು ಪುನಃ ರಿಕ್ವಿಜಿಶನ್ ಮಾಡುವಾಗ ದಯೆದೋರಬೇಕಾಗಿ ವಿನಂತಿ.

ಈ ಸಂದರ್ಭದಲ್ಲಿ ಭೂಮಾಲಿಕ ಸಂಘದ ಹೊಣೆಯು ಕಡಿಮೆಯೇನೂ ಅಲ್ಲ. ಹೆಚ್ಚಾಗಿ ಕೃಷಿಕರು ಮೂಕರಾಗಿಯೇ ಇರುವುದರಿಂದ ಪ್ರತಿಯೊಂದು ಹಳ್ಳಿಯಲ್ಲಿಯೂ ಯಾರಾರಿಗೆ ಉಳಿತಾಯವನ್ನು ನಿರ್ಧರಿಸುವಲ್ಲಿ ಅನ್ಯಾಯವಾಗಿದೆ ಮತ್ತು ಅಸಹಜವಾಗಿ ಕಡಿತವಾಗಿದೆಯೆಂದು ತಿಳಿದು ಅವರ ಬಗ್ಗೆ ನ್ಯಾಯ ದೊರಕಿಸಿಕೊಡಬೇಕು ಅನ್ಯಾಯ ಹೊಂದಿದವರನ್ನು ಹುಡುಕುವುದಕ್ಕಾಗಿಯೇ ಹಲವರನ್ನು (ಹಳ್ಳಿಗಳಲ್ಲಿ ಸಾಕಷ್ಟು ಪತ್ರಿಕಾ ಪ್ರಚಾರವಿಲ್ಲದುದರಿಂದ) ಅಂಥವರ ಬಗ್ಗೆ ಸ್ಪಂದಿಸುವುದಕ್ಕೆ ಕೆಲವರನ್ನು ನಿಯೋಜಿಸಬೇಕು. ಒಬ್ಬೊಬ್ಬರಿಂದ ಏನೂ ಸಾಗುವಂತಿಲ್ಲ ಈ ಬಗ್ಗೆ ಹಣವು ಬೇಕಾದರೆ ಪ್ರಚಾರ ಕಾರ್ಯ ಪ್ರಾರಂಭಿಸಲಿ ಬೇಕಷ್ಟು ವಸೂಲಾಗುವುದರಲ್ಲಿ ಏನೂ ಸಂಶಯವಿಲ್ಲ ನಮ್ಮ ಜಿಲ್ಲೆಯಲ್ಲಿ ಒಕ್ಕಲಿಗರಿಗಾಗಿಯೇ ಪ್ರತ್ಯೇಕವಾದುದೊಂದು ಸಂಘವಿಲ್ಲದುದರಿಂದಲೂ, ಒಕ್ಕಲಿಗರ ಹಿತದಲ್ಲಿಯೇ ವರ್ಗದಾರರು ಅಡಕವಾಗಿರುವುದರಿಂದಲೂ ಅವರ ಪರವಾಗಿ ಒಡೆಯರ ಸಂಘದವರು ಹೆಣಗಲು ಹಿಂದೆ ಮುಂದೆ ನೋಡಬಾರದು. ಅಡಿಕೆ ಬೇಸಾಯಗಾರರ ಸಂಘದಂತೆಯೇ ಇದೂ ಉತ್ಸುಕತೆಯಿಂದ ಕಾರ್ಯೋನ್ಮುಖವಾಗಬಹುದೆಂದು ನಿರೀಕ್ಷಿಸಬಹುದೋ' ಅಥವಾ ಇದರಿಂದ ಏನೂ ಪ್ರಯೋಜನವಾಗುವಂತಿಲ್ಲವೆಂದು ನಿರಾಶೆಯ ನಿಟ್ಟುಸಿರು ಬಿಡಬೇಕಾಗುವುದೋ?

ನೋಟೀಸು.

ಉಡುಪಿ ತಾಲೂಕು ಆರೂರು ಗ್ರಾಮದ ಕುಂಜಾಲಲ್ಲಿರುವ ಗೋವಿಂದ ಪ್ರಭುಗಳ ಮಗ ಪುಂಡಲೀಕ ಪ್ರಭುವು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದ್ರೆ— ನನ್ನ ತಂದೆ ಮತ್ತು ನಾನು ಕೂಡಾ ಪಟ್ಟು ಸಂಪಾದಿಸಿದ ನನ್ನ ಹಕ್ಕಿನ ಆರೂರು ಗ್ರಾಮದ ಸ. ನಂಬ್ರ 70/14ನೇ ಪುಂಜ ಸೆಂಟ್ಸ್ 32ರಲ್ಲಿ ನಾವು ಕಟ್ಟಿಸಿದ ಹಂಚು ಛಾವಣಿಯ ಉಪ್ಪರಿಗೆ ಮನೆ, ಹಟ್ಟಿಕೊಟ್ಟಿಗೆ, ಮತ್ತು ತೆಂಗು, ಮಾವು, ಹಲಸು, ಸಾಗ್ವಾನಿ ವಗೈರ ಮರಮಟ್ಟುಗಳು ಕೂಡಾ ಸುಮಾರು 2000 0 0 ಕ್ರಯಬಾಳುವ ಸ್ಥಿರ ಸ್ವತ್ತನ್ನು ನನ್ನ ತಂದೆಯವರು ನನ್ನ ಸಾಲಗಾರರು ಹಿಡಿಯದಂತೆಯೂ ಅವುಗಳು ಬಹಳ ಕಾಲದ ನಂತ್ರ ನನ್ನ ಪ್ರಯೋಜನಕ್ಕೂ ಹಕ್ಕಿಗೂ ಬರುವಂತೆ ಯೇನೂ ಪ್ರತಿಫಲವಿಲ್ಲದೆ ನನ್ನ ಹೆಂಡತಿಯಾದ ಲಕ್ಷ್ಮಿ ಯಾನೆ ಕಾವೇರಿ ಎಂಬವಳ ಹೆಸರಲ್ಲಿ ಬಿನಾಮಿಯಾಗಿ ರೂ 200 0 0 ಪ್ರತಿಫಲ ಕಾಣ್ಸಿ ತಾ 4 1 1939ರಲ್ಲಿ ಕ್ರಯಚೀಟು ಮಾಡಿರುತ್ತಾರೆ ಅದರ ಸಹಿ ಆಸ್ತಿ ಕಟ್ಟೋಣ ವಗೈರೆ ನೊಪಲಾರಳ್ಳ ಈ ವರೆಗೂ ನನ್ನ ಸ್ವಾಧೀನದಲ್ಲಿಯೇ ಇರುತ್ತವೆ ಆದರೆ ನನ್ನ ಹೆಂಡತಿಯು ಮಿತ್ರಲಾಗ್ಯೆ ಬೇರೆ ಜನರ ದುಸ್ಸಹವಾಸಕ್ಕೆ ಸಿಳಪಟ್ಟು ನನ್ನ ಹೇಳಿಕೆ ಪ್ರಕಾರ ಇರದೆ ತನ್ನ ಸ್ವೇಚ್ಛೆಯಿಂದ ನಡಿಯುತ್ತಾ ಇದ್ದ ಕಾರಣದಿಂದ ನಾನು ಅವಳನ್ನು ಹೊರಗೆ ಹಾಕಿದ ನಂತ್ರ ಅವಳು ನನ್ನ ಕಟ್ಟೋಣದ ಎದುರಿನಲ್ಲಿ ಅವಳ ದುಷ್ಟ ಸಹವಾಸಿಗಳ ಸಹಾಯದಿಂದ ಬಿಡಾರ ಮಾಡಿಕೊಂಡು ಇರುವುದಲ್ಲದೆ ಅವಳ ಹೆಸರಲ್ಲಿ ನನ್ನ ಬಗ್ಗೆ ಮಾಡಿಟ್ಟ ಕ್ರಯಚೀಟಿನ ಆಧಾರದಿಂದ ಸದ್ರಿ ಸ್ಥಳ ಕಟ್ಟೋಣವನ್ನು ಬೇರೆಯವರಿಗೆ ಪರಾಧೀನಪಡಿಸುವದಾಗಿಯೂ, ಮರಮಟ್ಟುಗಳನ್ನು ಮಾರಾಟ ಮಾಡುವದಾಗಿಯೂ ಹೇಳುತ್ತಾ ಇದ್ದಾಳೆ ಮೇಲೆ ಹೇಳಿದ ಕಾರಣಗಳಿಂದ ಅವಳಿಗೆ ಯಾವ ರೀತಿಯಲ್ಲಿಯೂ ಸದ್ರಿ ಸ್ವತ್ತನ್ನು ನನ್ನ ಹಕ್ಕಿಗೆ ವಿರೋಧವಾಗಿ ಪರಭಾರೆ ಮಾಡಲಿಕ್ಕೆ ಅಧಿಕಾರವಿರುವುದಿಲ್ಲ ಈ ವಿಷಯ ತಿಳಿಯದೆ ಯಾರಾದರೂ ಅವಳ ಹೆಸರಲ್ಲಿದ್ದ ಬಿನಾಮಿ ಕ್ರಯಚೀಟಿನ ಆಧಾರದಿಂದ ಅವಳಿಂದ ಈಡು, ಅಡವು, ಕ್ರಯ ವಗೈರೆ ಯಾವ ತರದ ಪರಾಧೀನ ಮಾಡಿಕೊಂಡರೂ ಅದು ಸಿಂಧುವಾಗಲಾರದೆಂತಲ್ಲೂ ಅಂಥಾ ಅವಳ ಮೋಸದ ಕೃತ್ಯಕ್ಕೆ ಒಳಗಾಗಬಾರದೆಂತಲೂ, ಅವಳೇನಾದ್ರೂ ನನ್ನ ಹಕ್ಕಿಗೆ ವಿರೋಧವಾದ ರಿ ... ಅದು ಸರ್ವಥಾ ಸಿಂಧುವಾಗಲಾರದೆಂತಲ್ಲೂ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿದೆ

● ಈ ಎಡ ಹೆಬ್ಬೆಟ್ಟಿನ ಗುರ್ತು ಪುಂಡಲೀಕ ಪ್ರಭು ರುಜು.

ಉಡುಪಿ,
ತಾರೀಕು 10-2-1946

WANTED.

For the Alex Pai Distillery

1. **ASSISTANT DEPOT WRITERS**—for the following arrack Depots to join duty from 1-1-1946.

Qualifications: Must be men of good character, 25 to 50 years of age and able to read and write English & Kannada.

Security: Cash Deposit to be furnished in proportion to volume of business at each Depot and a personal surety for Rs 2000/-.

Pay. Rs. 20 to 30 - per month with Dearness allowance of Rs 8/- per month

Names of Depots' Udipi, Mangalore, Beltangadi, Kasaragode, Puttur, Karkala, Mudabidri, Bantwal, Sullia, Moolki, Uppinangadi, Coondapur, Vittal, Bandur, Brahmawar, Hebri, and Haladi

2. **AGENTS**— for the supply of Cashew fruit at the Distillery site commencing from 1—3—46.

ಏಜಂಟರು— ತಾ 1-3-46ರಿಂದ ಗೇರುಹಣ್ಣುಗಳನ್ನು ಸರಾಯಿ ಬಟ್ಟಿ ಇಳಿಸುವ ಕಾರ್ಖಾನೆಗೆ ಸಪ್ಲೈ ಮಾಡಲು.

3. **MAISTRIES**— for supply coolies for the following Works:

ಮೇಸ್ತ್ರಿಗಳು— ಕೆಳಗೆ ನಮೂದಿಸಿದ ಕೆಲಸಗಳಿಗೆ ಕೂಲಿ ಜನರನ್ನು ಒದಗಿಸಿ ಕೊಡಲು.

1. Destillery ಸರಾಯಿ ಬಟ್ಟಿ ಇಳಿಸುವ ಕಾರ್ಖಾನೆಗೆ
2. Tile Factory ಹಂಚು ಕಾರ್ಖಾನೆಗೆ
3. Clay Quarrying ಮಣ್ಣಿನ ಗಣಿಗೆ
4. Fuel Coupe feeling ಕಟ್ಟಿಗೆ ಒಡೆಯಲು
5. Building construction ಕಟ್ಟೋಣ ಕಟ್ಟಲಿಕ್ಕೆ
6. Agricultural Farms ಕೃಷಿ ಕ್ಷೇತ್ರಕ್ಕೆ

Wages. at rates prevailing from time to time the rate being basic wage 6 annas per day for man cooly and 4 annas per day for women cooly plus Dearness allowance of 125% of the basic wage, i. e an aggregate of 0—13—6 for a man and 0—9—0 for a woman cooly per day. Loding and fuel - provided free of charge to such coolies as are prepared to live in the cooly lines which will be provided for them Salary of the Maistry will be rupee one per day for every man cooly and 12 annas for every woman cooly who works for not less than 21 days in a month and proportionately for lesser number of days worked

ಕೂಲಿ - ಗಂಡಸರಿಗೆ ದಿನಕ್ಕೆ 0—6—0, ಹೆಂಗಸರಿಗೆ 0—4—0, ತುಟ್ಟಿ ಭತ್ತೆ ಕೂಡಿ ದಿನಕ್ಕೆ ಗಂಡಸರಿಗೆ 0—13—6, ಹೆಂಗಸರಿಗೆ 0—9—0 ಕಾರ್ಖಾನೆಯ ಕಡೆಯಿಂದ ತಯಾರಿಸಿದ ಕುಟೀರಗಳಲ್ಲಿ ವಾಸಿಸುವವಂತವರಿಗೆ ಕಟ್ಟಿಗೆ ಮತ್ತು ಬಿಡಾರ ಧರ್ಮಾರ್ಥ. ತಿಂಗಳಲ್ಲಿ 21 ದಿನಗಳಿಗೆ ಕಡಿಮೆಯಾಗದಂತೆ ಕೆಲಸ ಮಾಡುವ ಗಂಡಸು ಮೇಸ್ತ್ರಿಗೆ ದಿನಕ್ಕೆ ಒಂದು ರೂಪಾಯಿ, ಹೆಂಗಸು ಮೇಸ್ತ್ರಿಗೆ ಹನ್ನೆರಡಾಣೆ ಕಡಿಮೆ ದಿವಸ ಕೆಲಸ ಮಾಡಿದವರಿಗೆ ಅದೇ ಪ್ರಮಾಣ ಮೇಲೆ ಸಂಬಳ

Apply to

Felix Albuquerque,
Felix Wada,
MANGALORE

ಪತ್ತೆ—
ಫೆಲಿಕ್ಸ್ ಆಲ್ಬುಕರ್ಕ್,
ಫೆಲಿಕ್ಸ್ ವಾಡಾ,
ಮಂಗಳೂರು.

ದಕ್ಷಿಣ ಕನ್ನಡ.

ಮುಲ್ಕಿ ಗ್ರಾಮಾಭಿವೃದ್ಧಿ ಪದವಾದ ರೈತರ 24ನೇ ಸಭೆಯು ತಾ. 3-2-46ರಲ್ಲಿ ಫಲಿಮಾರಿನಲ್ಲಿ ಶ್ರೀ ಇನ್ನಬಗ್ಗರ ಗುತ್ತು ನರ್ಸು ಶೆಟ್ರ ಅಧ್ಯಕ್ಷತೆಯಲ್ಲಿ ಕೂಡಿಬಂತು. ದಸ್ಕತು ಕೊಟ್ಟ 88 ರೈತರಲ್ಲದೆ ಇನ್ನು ಅನೇಕರು ಹಾಜರಿದ್ದರು. ಜಿಲ್ಲಾ ಪ್ರದರ್ಶನದ ಲೆಕ್ಕವನ್ನು ಮಂಜೂರು ಮಾಡಿ, ಬರುವ ಡಿಸೆಂಬರ ತಿಂಗಳಲ್ಲಿ ಕೇಂದ್ರ ಪ್ರದರ್ಶನವನ್ನು ಮುಲ್ಕಿಯಲ್ಲಿ ಜರಗಿಸಬೇಕಾಗಿಯೂ ಎಲ್ಲಾ ಉಪಕೇಂದ್ರಗಳು ಈ ಕುರಿತು ತಯಾರಿಯಿಂದ ಸಹಕರಿಸಬೇಕಾಗಿಯೂ, ಇನ್ನಿತರರ ಸಹಕಾರ ಕೇಳಿಕೊಳ್ಳಬೇಕಾಗಿಯೂ ಗ್ರಾಮಾಭಿವೃದ್ಧಿ ಮುಂದಿನ ಯೋಜನೆಯು ಅನೇಕ ವಿಷಯಗಳಲ್ಲಿ ಪ್ರತಿ ಕೇಂದ್ರದವರು ಕೆಲವಕ್ಕೆ ಸಾಧಿಸಬೇಕಾಗಿಯೂ, ಪುತ್ತೂರು ತಾಲೂಕಿನ ಕಣಿಯೂರು ಗ್ರಾಮ ಮತ್ತೈದಿ 8 ಗ್ರಾಮಸ್ಥರು ಸಂಯುಕ್ತ ಗ್ರಾಮಾಭಿವೃದ್ಧಿ ಕೇಂದ್ರವೊಂದನ್ನು ಸ್ಥಾಪಿಸಿ ತಿಳಿಸಿದುದಕ್ಕಾಗಿ ಸಂತೋಷ ಸೂಚಿಸಿಯೂ ನಿರ್ಣಯಗಳಾದುವು.

ಮುಂಡ್ಕೂರಲ್ಲಿ ಶಾಂಭವಿ ಹೊಳೆಗೆ ಹಾಕಿದ ಕಟ್ಟದ ಕುರಿತು ಮಾತನಾಡುತ್ತಾ ಮಂಗಳೂರು ತಹಶೀಲ್ದಾರರು ತಾ.3 12 45ರಲ್ಲಿ ಫಲಿಮಾರು ಮತ್ತು ಮುಂಡ್ಕೂರು ಕಟ್ಟಗಳಿಗೆ ಸೇರಿದ ಗ್ರಾಮಸ್ಥರ ಸಭೆಕೂಡಿಸಿ ಅವರ ಒಪ್ಪಿಗೆಯಿಂದ ಮಾಡಿದ ಪ್ರೊಸಿಡಿಂಗ್ಸನ್ನು ಓದಿಹೇಳಿ, ಶಾಂಭವಿ ಹೊಳೆಯಲ್ಲಿ ಸಮೀಪದ ದೂರದಲ್ಲಿಯೇ ನಾಲ್ಕು ಕಟ್ಟಗಳಿದ್ದರೂ ಯಾವ ತರದ ಬಾಧಕ ರೈತರಿಗೆ ಇಲ್ಲವೆಂದು ಶ್ರೀ ಪಂಜದಗುತ್ತು ರಂಬು ಮಲ್ಲಿಯವರು ವಿವರಿಸಲು ಸರ್ವಾನುಮತದಿಂದ ಸಭೆಯು ಈ ಕೆಳಗಿನಂತೆ ಅಭಿಪ್ರಾಯಪಟ್ಟಿತು.

(1) ಮುಂಡ್ಕೂರು ಯಾ ಫಲಿಮಾರು ಕಟ್ಟಗಳಲ್ಲಿ ಈ ತನಕ ನೀರಿನ ತುಸ್ತಿಯು ಇಲ್ಲ. (2) ಫಲಿಮಾರು ಮುಂಡ್ಕೂರು ಕಟ್ಟಗಳಿಗೆ ಸೇರಿರುವ ಗ್ರಾಮಗಳಲ್ಲಿ ಈ ವರ್ಷದ ಕೊಳಕೆ ಗದ್ದೆಯ ಲೆಕ್ಕವನ್ನು ತೆಗಿಸುವಂತೆಯೂ ಜಿಲ್ಲಾ ಕಲೆಕ್ಟರರು ಬಂದು ಸ್ವತಹಾ ಕಟ್ಟಗಳನ್ನೂ ನೀರನ್ನೂ ನೋಡಬೇಕಾಗಿಯೂ ಕೇಳಿಕೊಳ್ಳಬೇಕು. (3) ಬರುವ 25ನೇ ಸಭೆಯು ತಾ. 17 2-46ನೇ ಆದಿತ್ಯವಾರ 3ಘಂಟೆಗೆ ಮುಂಡ್ಕೂರಲ್ಲಿ ಕೂಡಿ ಬರಬೇಕು. ಇದಕ್ಕೆ ಫಲಿಮಾರು ಮಠದ ಶ್ರೀ ಪೆಜತ್ತಾಯರು ಫಲಿಮಾರು ಕಟ್ಟಕ್ಕೆ ಸೇರಿದ ಅನೇಕ ರೈತರನ್ನು ಕೂಡಿ ಬರುವಂತೆ ಕೇಳಿಕೊಳ್ಳಬೇಕು. (4) ಮಂಗಳೂರು ತಹಶೀಲ್ದಾರರನ್ನು ಈ ಸಭೆಯು ವಂದಿಸುತ್ತದೆ.

ಗ್ರಾಮಸ್ಥರ ವಂತಿಗೆಯಿಂದ ಫಲಿಮಾರಲ್ಲಿ ಕಟ್ಟಿಸಿದ ಶಾಲಾ ಕಟ್ಟಡಕ್ಕೆ ಗ್ರಾಮಾಭಿವೃದ್ಧಿ ಫಂಡಿನಿಂದ ರೂಪಾಯಿ 25- ನ್ನು ವಂತಿಗೆಯಾಗಿ ಕೊಡಲಾಯಿತು. ಶ್ರೀ ಕಡಂದಲೆ ದೇಜು ಶೆಟ್ರು ರೂ 10, ನರ್ಸು ಶೆಟ್ರು ರೂ 5 ಗ್ರಾಮಾಭಿವೃದ್ಧಿ ಫಂಡಿಗೆ ವಂತಿಗೆ ಕೊಟ್ಟುದನ್ನು ಸ್ವೀಕರಿಸಲಾಯಿತು. ಸಭಾಕಾರ್ಯಕ್ಕೆ ಸಹಕಾರವಿತ್ತ ಶ್ರೀಗಳಾದ ಮಹಾಬಲ ಶೆಟ್ರು, ದೇಜು ಶೆಟ್ರು ಮೊದಲಾದವರನ್ನು ಅಭಿನಂದಿಸಿ ಸಭಾಂತ್ಯವಾಯಿತು.

ತಾ. 17 2 46ನೇ ಆದಿತ್ಯವಾರ ಮುಂಡ್ಕೂರಿನಲ್ಲಿ ನಡೆಯುವ ಸಭೆಗೆ ಎಲ್ಲರೂ ಬರುವಂತೆ ಈ ಮೂಲಕ ವಿನಂತಿಸಿಕೊಳ್ಳುವ

ಎಮ್. ಆರ್. ಪೂಂಜ,
ಕಾರ್ಯದರ್ಶಿ
ಗ್ರಾಮಾಭಿವೃದ್ಧಿ ಕಮಿಟಿ.

ಕೊಲೆಕಾಡಿ—ವಿದ್ಯಾಪ್ರಚಾರಿಣೀ ಹಾಯರ್ ಎಲಿಮೆಂಟರಿ ಶಾಲಾ ಹೆತ್ತವರ ಸಮಿತಿಯ ದ್ವಿತೀಯ ವಾರ್ಷಿಕ ದಿನಾಚರಣಾ ಸಮಾರಂಭವು ಶ್ರೀಮಾನ್ ಪಿ. ವಿ. ರಮಣ M A L T, ಇವರ ಅಧ್ಯಕ್ಷತೆಯಲ್ಲಿ ತಾ. 6-2-46ರಲ್ಲಿ ಸದ್ರಿ ಶಾಲೆಯಲ್ಲಿ ಜರಗಲ್ಪಟ್ಟಿತು. ಶಾಲಾ ಹುಡುಗರಿಂದ "ವಸಂತ ಮಾಧವ" ಮತ್ತು "ಚಿತ್ರಾಂಗದ" ಎಂಬ ಚಿಕ್ಕ ಪ್ರಹಸನಗಳೂ ಹುಡುಗಿಯರಿಂದ "ದೀನಬಂಧು" ಎಂಬ ಸಾಮಾಜಿಕ ನಾಟಕವೂ ಅಭಿನಯಿಸಲ್ಪಟ್ಟವು.

ಸಾಲಿಗ್ರಾಮ- ಕಾರ್ಕಡ ಶಾಲಾ ಹಳೆ ವಿದ್ಯಾರ್ಥಿ ಸಂಘವು ಕಾರ್ಕಡ ಕೇಂದ್ರಕ್ಕೊಳಪಟ್ಟ ಪ್ರೌಢ ಪ್ರಾಥಮಿಕ ಶಾಲೆಗಳೊಳಗೆ ತಾರೀಕು 9-2-46ರಲ್ಲಿ ಒಂದು ಭಾಷಣ ಸ್ಪರ್ಧೆಯನ್ನು ಕಾರ್ಕಡ ಶಾಲೆಯಲ್ಲಿ ಏರ್ಪಡಿಸಿತು. ಸ್ಪರ್ಧೆಯ ಪ್ರಥಮ ಮತ್ತು ದ್ವಿತೀಯ ಬಹುಮಾನಗಳು ಗಿಳಿಯಾರು ಶಾಲೆಗೂ ತೃತೀಯ ಬಹುಮಾನವು ಹಂಗಾರಕಟ್ಟೆ ಶಾಲೆಗೂ ದೊರೆತವು.

ಕಾಸರಗೋಡು.

ದ. ಕ. ಜಿಲ್ಲಾ ಹೊಗೆಸೊಪ್ಪಿನ ರೈತರ ಸಮ್ಮೇಲನವನ್ನು ಮಾರ್ಚಿ ತಿಂಗಳ ಕೊನೆಯ ವಾರದಲ್ಲಿ ಜರಗಿಸಬೇಕೆಂದು ನಿರ್ಣಯವಾಗಿದೆ. ಈ ಸಭೆಗೆ ಅಧ್ಯಕ್ಷರಾಗಲು ಜ। ಹಾಜಿ ಅಬ್ದುಲ್ ಸತ್ತಾರ್ ಸೇಟ್ ಇವರನ್ನೂ, ಸಮ್ಮೇಲನದ ಉದ್ಘಾಟನೆ ಮಾಡಲು ಶ್ರೀ। ಎ ಕರುಣಾಕರ ಮೆನೋನ್‌ರವರನ್ನೂ ಕರೆಯಲಾಗಿದೆ.

ಕರ್ನಾಟಕದ ಪುರಸ್ಕೃತ ಹಿಂದೀಕಾರ್ಯಕರ್ತರು

ದಕ್ಷಿಣ ಹಿಂದುಸ್ಥಾನದಲ್ಲಿ ಹಿಂದೀ ಭಾಷಾ ಪ್ರಚಾರವು ಆರಂಭವಾಗಿ ಈಗಾಗ 28ವರ್ಷಗಳು ಸಂದುಹೋದುವು. ದಕ್ಷಿಣ ಹಿಂದೀ ಪ್ರಚಾರ ಆಂದೋಲನದ ಪರಿಣಾಮವಾಗಿ ದಕ್ಷಿಣ ಹಿಂದೂಸ್ಥಾನದ ಮಿಲಿಯಾಂತರ ಜನರು ಹಿಂದೀ ಭಾಷೆಯ ವ್ಯಾವಹಾರಿಕ ಜ್ಞಾನವನ್ನು ಸಂಪಾದಿಸಿ ಏಕರಾಷ್ಟ್ರ ನಿರ್ಮಾಣದ ಪವಿತ್ರ ಕಾರ್ಯಕ್ಕೆ ಹೆಗಲು ಕೊಟ್ಟಿರು; ಅದಕ್ಕಾಗಿ ಸಾವಿರಾರು ಕಾರ್ಯಕರ್ತರು ಮುಂದೆ ಬಂದು ಈ ಕ್ಷೇತ್ರದಲ್ಲಿ ದುಡಿದರು. ಈ ಅವಧಿಯಲ್ಲಿ ಸತತವಾಗಿ ದುಡಿದು ಅತೀ ಹೆಚ್ಚಿನ ಸಫಲತೆಯನ್ನು ಸಂಪಾದಿಸಿದ ತಮಿಳು ತೆಲುಗು ಮಲಯಾಳ ಕರ್ನಾಟಕದ ಈ ನಾಲ್ಕು ಪ್ರಾಂತ್ಯಗಳ ಒಬ್ಬೊಬ್ಬ ಸಂಘಟಕ, ಪ್ರಚಾರಕ, ಸಾಹಿತ್ಯಸೇವಿ ಮತ್ತು ಸಹಾಯಕರನ್ನು ಕಳೆದ ತಿಂಗಳಾಂತ್ಯದಲ್ಲಿ ಮದ್ರಾಸಿನಲ್ಲಿ ಪರಮ ಪೂಜ್ಯ ಮಹಾತ್ಮಾಜಿಯವರ ಅಧ್ಯಕ್ಷತೆಯಲ್ಲಿ ನಡೆದ ತನ್ನ ರಜತ ಜಯಂತಿ ಮಹೋತ್ಸವ ಕಾಲದಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ವಿಶೇಷ ರೂಪದಿಂದ ತನ್ನ ವರದಿಯಲ್ಲಿ ಉಲ್ಲೇಖಿಸಿ ಸನ್ಮಾನಿಸಿತು. ಹೀಗೆ ಕರ್ನಾಟಕದಿಂದ ಸನ್ಮಾನಿತರಾದವರು—ಉತ್ತಮ ಸಂಘಟಕರು ಶ್ರೀ ಹಿರಣ್ಮಯ (ಮೈಸೂರು,) ಉತ್ತಮ ಪ್ರಚಾರಕರು ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈ (ಕಾರ್ಕಳ), ಉತ್ತಮ ಸಾಹಿತ್ಯಸೇವಿಗಳು ಶ್ರೀ. ಗುರುನಾಥ ಜೋಶಿ (ಧಾರವಾಡ) ಮತ್ತು ಉತ್ತಮ ಸಹಾಯಕರು ಶ್ರೀ. ಸಂಪದ್ಗಿರಿ ರಾವ್ (ಬೆಂಗಳೂರು) ಆಗಿದ್ದಾರ. ಇವರೆಲ್ಲರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳಿವೆ.

ಪತ್ರವ್ಯವಹಾರ

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಉದ್ಯೋಗಸ್ಥರು.

ಪ್ರಾಯಶಃ ಅಧಿಪತ್ಯದ ಹೆಚ್ಚಿನ ಜಿಲ್ಲೆಗಳಲ್ಲಿ ಗ್ರಾಮಉದ್ಯೋಗಸ್ಥರು ತಮ್ಮ ಹಕ್ಕುಭಾಧ್ಯತೆಗಳನ್ನೂ ಗೌರವವನ್ನೂ ರಕ್ಷಿಸಿಕೊಳ್ಳುವಗೋಸ್ಕರ ತಮ್ಮದೇ ಆದ ಸಂಘಗಳನ್ನು ಏರ್ಪಡಿಸಿಕೊಂಡು ಆ ಮೂಲಕ ಕೆಲವು ಮೇಲಾಧಿಕಾರಿಗಳ ತುಚ್ಛೀಕಾರ ನಡತೆಯನ್ನು ಬಯಲಿಗೆ ಎಳದು ತಮ್ಮ ಹುದ್ದೆಯ ಗೌರವವನ್ನು ಕಾಪಾಡಿಕೊಂಡು ಇರುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಇಂಥಾ ಐಕ್ಯಮತ್ಯವಿಲ್ಲದೆ ಸಂಘಟನಾ ಶಕ್ತಿಯನ್ನು ಕಳೆದುಕೊಂಡು ಮೇಲಾಧಿಕಾರಿಗಳ ಆಟದಗೊಂಬೆಗಳಂತೆ ಇರಬೇಕಾದುದು ವಿಷಾದಕರ. ಕೆಲವು ಆಫೀಸರುಗಳು ಗ್ರಾಮಉದ್ಯೋಗಸ್ಥರನ್ನು ಕುರಿಗಳಿಗಿಂತಲೂ ಕೀಳಾಗಿ ಎಣಿಸಿ ಅವರನ್ನು ದಂಡಿಸುವ ಕ್ರಮವನ್ನು ನೋಡಿದರೆ ನಾಚಿಗೆಯಾಗುವದು. ನಿಂತರೆ ಅವಮಾನ; ಕುಳಿತರೆ ಅವಮಾನ; ಅಸ್ಪೃಶ್ಯರವರೆಗೆ ಬಂದಿದೆ ಗ್ರಾಮ ಉದ್ಯೋಗಸ್ಥರ ಹೀನದೀನ ಪರಿಸ್ಥಿತಿ!

ಇನ್ನಾದರೂ ಗ್ರಾಮಉದ್ಯೋಗಸ್ಥರು ಕಣ್ಣುತೆರೆದು ಇಡೀ ಸರ್ಕಾರದ ಆಡಳಿತೆಯ ಬುನಾದಿ ಸ್ತಂಭದಂತಿರುವ ಗ್ರಾಮಉದ್ಯೋಗದ ಮರ್ಯಾದೆಯನ್ನು ಕಾಪಾಡಿಕೊಳ್ಳುವುದಕ್ಕೂ, ಕೆಲವು ಆಫೀಸರುಗಳ ಪೀಡನೆಯನ್ನು ಪ್ರತಿಭಟಿಸುವುದಕ್ಕೂ ಸಂಘಗಳನ್ನು ಪ್ರತೀ ತಾಲೂಕಿನಲ್ಲಿಯೂ ಏರ್ಪಡಿಸಿಕೊಳ್ಳುವಂತೆ ಪ್ರಯತ್ನಿಸಬೇಕಾಗಿ ಅಪೇಕ್ಷಿಸುತ್ತೇನೆ.

ಬೇಳಂಜಿ ಶೀನಪ್ಪ ಶೋಳಾರ
ಅಮಾನತಿನಲ್ಲಿರುವ ಕುಚ್ಚೂರು ಪಟೇಲ.

ಕುಚ್ಚೂರು }
5-2-1946 }

"ದ. ಕ. ಜಿಲ್ಲೆಯ ಅಧಿಕ ಸಂಖ್ಯಾಕ ಸಮಾಜಕ್ಕೆ ಎಸೆಂಬ್ಲಿ ಸ್ಥಾನವೇಕಿಲ್ಲ?"

ಎಂಬ ಲೇಖನವನ್ನು ತಾ 31-1 46ನೇ ದಿನದ ಸಂಚಿಕೆಯಲ್ಲಿ ಓದಿ ಸಂತೋಷವಾಯಿತು. ನಿಷ್ಪಕ್ಷಪಾತಿಗಳ ನಾಡಿನಲ್ಲಿ ಕುಂಜ. ಸತ್ಯವಿದ್ದಾದರೂ ಬಿಲ್ಲವರ ಮುಖಂಡರು ತಾವಾಗಿ ಎಸೆಂಬ್ಲಿ ಸ್ಥಾನಗಳನ್ನು ಆಶಿಸಿ ಮುಂದೆ ಬರದಿದ್ದ - ಕೋಂಗ್ರೆಸ್ಸಿನವರು ಬಿಲ್ಲವರಲ್ಲಿ ಕೋಂಗ್ರೆಸಿಗೆ ಸೇರಿ ರಾಷ್ಟ್ರ ಸೇವೆಗೆ ಅರ್ಹರಾಗಿ ರಾಷ್ಟ್ರ ಮುಖಂಡರೆಂದೆನಿಸಲ್ಪಟ್ಟವರು ಇಲ್ಲವೇ ಇಲ್ಲ. ಚುನಾವಣೆಗೆ ಹಣ ವೆಚ್ಚಮಾಡುವಷ್ಟು ಶಕ್ತಿವಂತರೂ ಕಡಮೆ. ಶಕ್ತಿ ಇದ್ದವರಿಗೆ ಯೋಗ್ಯತೆಯಿಲ್ಲ. ಈ ದುಃಸ್ಥಿತಿಗೆ ಬಿಲ್ಲವರೇ ಕಾರಣರು.

ಮ. ಬಾ,

ಬೊಂಬಾಯಿ. ದಿ ದೊಡ್ಡ ಯೆವರ್ಗಾಳ ಬಿಲ್ಲವರ ಯೂನಿಯನಿನ ಒಂಭತ್ತನೆಯ ವಾರ್ಷಿಕ ಮಹಾಸಭೆಯು ತಾ. 27-1 46ರಲ್ಲಿ ಶ್ರೀ। ಯನ್. ಕೆ. ಸುವರ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ವರದಿಯನ್ನು ಯೂನಿಯನಿನ ಕಾರ್ಯದರ್ಶಿಯವರು ಓದಲು ಅದು ಮಂಜೂರಾಯ್ತು. ಯೂನಿಯನಿನ ಮುಂದಾಭಿವೃದ್ಧಿಯ ಕುರಿತು ಶ್ರೀಗಳಾದ ಪಿ. ಯಸ್. ಕೋಟ್ಯಾನ್, ಎ. ಜೆ. ಸಾಲ್ಯಾನ್, ಕೆ. ಕೆ. ಪಾಲನ್, ವೈ. ಸೂರಪ್ಪ ಮತ್ತು ಅಧ್ಯಕ್ಷರು ಯೂನಿಯನಿನ ಶ್ರೇಯಸ್ಸಿನ ಕುರಿತು ಭಾಷಣವಿತ್ತರು.

The Pangal Nayak Bank Limited.
(Incorporated in 1920)
Registered Office Court Road, UDIPI.
Sub-Offices at— **Udipi, Mangalore, Katapadi, Kanhangad, Kinnigoli, Nileshwar and Suratkal,** South Canara.
SEASON DEPOSITS for THREE & FOUR
months at a special rate of interest are accepted at all the above offices.
All kinds of up-to-date Banking service is provided promptly.
Please call for particulars of business
Dated the 5th January 1946.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಬಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.
ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**
ಏಜೆಂಟರು —ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.
Ayurveda Oushadalaya. GADAG.

'ಬಹದೂರ'
ಕಬ್ಬಿನ ಗಾಣಗಳು



ಗಟ್ಟಿಮುಟ್ಟಾದ ರಚನೆ,
ಉತ್ತಮದರ್ಜೆಯ ಕೈಗಾರಿಕೆ
ಕ್ರಯ ರೂ 430/-
ಬ್ರಿಟಿಷ್ ಇಂಡಿಯ
ಎಂಜನಿಯರಿಂಗ್ ಕಂ.
ಬೊಂಬಾಯಿ 10.

(೨ನೇ ಪುಟದಿಂದ)

ಜಿಪರ ಆದು ಬೇಕಾಗಿದೆ ; ಪಾಬ ನಕ್ಕು ಸ್ಪಷ್ಟ ಚಿಹ್ನೆ ದೊರೆಯದು. ಮುದ್ದಣ ಈ ಭಾಗದಲ್ಲಿ ಮುಂದುವರಿದ. ಆದರೆ ಪುಷ್ಪ ಮಾತ್ರ ಇದ್ದಂತೆ ಇದ್ದಳು. ಅಕೆ ಮುದ್ದಾಗಿ ಬೆಳೆದ ಹುಡುಗಿ. ಬೆಲೆ ಪಡೆಯುವದನ್ನು ಮಾತ್ರ ಕಲಿತಿದ್ದಳು ಹೊರತು ಕೊಡುವದನ್ನು ತಿಳಿದವಳೇ ಅಲ್ಲ. ಪ್ರೇಮದಲ್ಲಿಯೂ ಹಾಗೆಯೇ. ಮುದ್ದಣ ತನ್ನನ್ನು ಪ್ರೀತಿಸುತ್ತಾನೆಂದು ಅವಳಿಗೆ ಗೊತ್ತು. ಆಕೆಯ ಹೃದಯವೂ ಅದು ಬೇಕೆನ್ನುತಿತ್ತು. ಆದರೆ ಪ್ರತಿಯಾಗಿ ಪ್ರೀತಿ ಪ್ರದರ್ಶನ ಮಾಡುವದೇ ಅಕೆಗರಿಯದು. ಹೀಗೆ ಒಂದೇ ಕೈಯ್ಯ್ಯತಾಡನ ಎಷ್ಟು ಬಾರಿ ನಡೆದರೂ ಶಬ್ದ ಹೊರಡದ್ದರಿಂದ ಮುದ್ದಣನ ಮನಸ್ಸಿಗೆ ಹೇಗೋ ಆಗಿರಬೇಕು. ಒಂದು ದಿನ ಪುಷ್ಪನ ತಾಯಿ ಅಡುಗೇ ಮನೆಯಲ್ಲಿದ್ದಳು. ಚಾವಡಿಯಲ್ಲಿ ಪುಷ್ಪ ಬಗ್ಗಿಕೊಂಡು ಏನನ್ನೋ ಹೆಕ್ಕುತಿದ್ದಳು. ಮುದ್ದಣನಿಗೇನಾಯಿತೋ— ಮುಷ್ಟಿ ಬಿಗಿದು ಬಲವಾಗಿ ಆಕೆಯ ಬೆನ್ನಿಗೊಂದೇಟು ಬಾರಿಸಿದ. 'ಢಬಾಲ್' ಶಬ್ದದೊಡನೆ 'ಹೆಂಕ್' ಎಂದ ಪುಷ್ಪಳ ಸ್ವರವೂ ಒಳಮನೆಯಲ್ಲಿದ್ದ ತಾಯಿಗೆ ಕೇಳಿಸಿತು. 'ಏನದು ಮಗೂ?' ಎನ್ನುತ್ತಾ ಅಕೆ ಬಾಗಿಲ ವರೆಗೆ ಬಂದಳು. 'ಏನಿಲ್ಲ ಅಮ್ಮಾ, ಅಂಗಳದಲ್ಲೇನೋ ಬಿತ್ತು' ಎಂದಳು ಪುಷ್ಪ. ಅಂದಿನಿಂದ ಮುದ್ದಣ ಒಬ್ಬನೇ ಸಿಕ್ಕಿದಾಗಲೆಲ್ಲಾ, ಪುಷ್ಪನೇ ಮೇಲ್ಬಾಯ್ದು ಬರುತ್ತಾಳೆ; ಹೊಡೆಯುತ್ತಾಳೆ; ಚಿವುಟುತ್ತಾಳೆ. ಅವನೊಂದು ಕ್ಷಣಕಾಲ ದೂರವಾಗುವದನ್ನೂ ಅಕೆ ಸಹಿಸಲಾರಳು.

೦೦ ೦೦ ೦೦

ಉಪಾಧ್ಯಾಯಿನಿ ತೀರಾ ಕುರೂಪಿ. ಈ ಕಾರಣದಿಂದಲೇ 35 ದಾಟಿದರೂ ಮದುವೆಯಾಗಿರಲಿಲ್ಲ. ಶಾಲೆಯಲ್ಲಿ ನಡೆಯುವ ಕೂಟ, ಸಮಾರಂಭಗಳಲ್ಲಾವುದಕ್ಕೂ ಅಕೆ ಹೋಗುತ್ತಿರಲಿಲ್ಲ. ಅವಳ ತರಗತಿಯ ಸಿದ್ಧ ಬಹಳ ತುಂಟ ಹುಡುಗ. ಕ್ಲಾಸಿಗೆ ಉಪಾಧ್ಯಾಯಿನಿ ಬಂದೊಡನೆ ಅಕೆಗೆ ಏನಾದರೊಂದು ವ್ಯಂಗ್ಯ ಪರಿಹಾಸ್ಯ ಅವನದ್ದೇ ಇತ್ತು. ಆದರೆ ಸಿದ್ಧನಿಗೊಂದು ಬಾರಿಯಾಗರೂ ಅಕೆ ಹೊಡೆದವಳಲ್ಲ; ಬದಲಿಗೆ ಎಂದಾದರೂ ವಿನೋದವಾಡಬೇಕೆಂದು ತೋರಿದರೆ ಅಕೆ ಸಿದ್ಧನನ್ನೇ ಕೆಣಕಿ ಮಾತನಾಡಿಸುತಿದ್ದಳು. ಪರಿಣಾಮವಾಗಿ ಸಿದ್ಧನಿಗೆ ಅವಳ ಮೇಲಿನ ಸಲುಗೆ ಹೆಚ್ಚಿತು; ಅವನ ಪರಿಹಾಸ್ಯ ದಿನದಿನಕ್ಕೆ ಹೆಚ್ಚುತ್ತಾ ಹೋಯಿತು; ಅದೇ ಪರಿಮಾಣದಲ್ಲಿ ಉಪಾಧ್ಯಾಯಿನಿಗವನ ಮೇಲೆ ಒಲವು ಹೆಚ್ಚಿತು. ಇದನ್ನು ಕಂಡ ಹುಡುಗ ಹುಡುಗಿಯರಿಗೆಲ್ಲಾ ಆಶ್ಚರ್ಯ. ಒಂದು ದಿನ ಉಪಾಧ್ಯಾಯಿನಿ ಬಾಗಿಲಲ್ಲಿ ನಿಂತಿದ್ದಳು. ಒಳಗೆ ಕ್ಲಾಸಿನಲ್ಲಿದ್ದ ಸಿದ್ಧ ಹೇಳಿದ:— "ನೋಡಿ, ನಮ್ಮ ಶಾಲೆಗೆ ದೃಷ್ಟಿ ಬೀಳಬಾರದೆಂದು ಒಂದು ಗೊಂಬೆಯನ್ನು ಬಾಗಿಲಲ್ಲಿ ನಿಲ್ಲಿಸಿದ್ದೇವೆ". ಈ ಮಾತೂ, ಅದರೊಂದಿಗೆ ಕ್ಲಾಸಿನಲ್ಲಿದ್ದ ಹುಡುಗ ಹುಡುಗಿಯರೆಲ್ಲರ ನಗೆಯೂ ಉಪಾಧ್ಯಾಯಿನಿಗೆ ಕೇಳಿಸಿತು. ಅಕೆ ಕೇಳದವಳಂತೆ ಮಾಡಿಕೊಂಡಿದ್ದಳು. ಆದರೆ ಕ್ಲಾಸಿನಲ್ಲಿದ್ದ ಹುಡುಗಿಯರಮೇಲೆ ಮಾತ್ರ ಆ ದಿನ ಮಾತು ಮಾತಿಗೂ ಸಿಟ್ಟಾಗುತಿದ್ದಳು. ಮತ್ತೊಂದು ಬಾರಿ ಕ್ಲಾಸಿಗೆ ಬಂದವಳು "ಈ ದಿನ ಯಾವ ಪಾಠ?" ಎಂದು ಪ್ರಶ್ನಿಸಿದ್ದೇ ತಡ; "ಗೂಗೆಯ ಮೇಲೆ ಪ್ರೇಮ" ಎಂದ ಸಿದ್ಧ. ಪಾಠ ಮಾಡುವ ತನ್ನನ್ನೇ ಸಿದ್ಧ ಹಾಗೆ ಸಂಬೋಧಿಸಿದ್ದೆಂದು ಆಕೆಗೆ ಗೊತ್ತಾಗಿ ನಕ್ಕಳು. ವಿದ್ಯಾರ್ಥಿಗಳಲ್ಲಿ ಹೆಚ್ಚಿನವರಿಗೆ ಅರ್ಥವಾಗಲಿಲ್ಲ. ಅರ್ಥವಾದ ಕೆಲವರಲ್ಲಿ ಸರೋಜಳನ್ನು ಬಿಟ್ಟು ಮಿಕ್ಕವರೆಲ್ಲರೂ ಹುಡುಗರು. ಈ ಜಾಣ್ಮೆಯ ಹಾಸ್ಯದಿಂದ ಸರೋಜ ಪುಸ್ತಕ ಅಡ್ಡ ಹಿಡಿದು ನಕ್ಕಳು. "ಏನು! ನಗುತ್ತೀಯಾ?" ಎನ್ನುತ್ತಾ ಉಪಾಧ್ಯಾಯಿನಿಯು ಸರೋಜನ ಕಿವಿ ಕೆಂಪಾಗುವ ವರೆಗೂ ಹಿಂಡಿದಳು. ಹೇಳಿದವ ಸಿದ್ಧ; ಹಲವು ಹುಡುಗರೂ ನಗೆಯಾಡಿದ್ದಾರೆ; ಆದರೆ ಉಪಾಧ್ಯಾಯಿನಿ ಶಿಕ್ಷಿಸಿದುದು ತನ್ನನ್ನು ಮಾತ್ರ-ಈ ಪಕ್ಷಪಾತವನ್ನು ಸಹಿಸಲಾಗದೆ ಸರೋಜ ಬಿಕ್ಕಿ ಬಿಕ್ಕಿ ಅತ್ತಳು. ಉಪಾಧ್ಯಾಯಿನಿ ಅದರ ಮೇಲೆರಡು ಬೈಗಳನ್ನು ಸರೋಜನಿಗೇನೇ ಬೈದಳು. ಕ್ಲಾಸು ಬಿಟ್ಟ ಮೇಲೆ ಸರೋಜನನ್ನು ತನ್ನ ಕೋಣೆಗೆ ಕರೆಯಿಸಿ ಉಪಾಧ್ಯಾಯಿನಿಯಂದಳು: "ಸರೂ ನಾನು ಕುರೂಪಿ; ಆದ್ದರಿಂದಲೇ ಮದುವೆಯಾಗಲಿಲ್ಲ. ನನ್ನ ಕೈಹಿಡಿಯುವ ಗಂಡು ಹುಳ ಹುಟ್ಟಿಲ್ಲ. ಸಿದ್ಧ ... ನನ್ನ ... ಹುಡುಗ. ಅವ ನನಗೆ ಪರಿಹಾಸ್ಯ ಮಾಡುವುದು ಸಹಜ; ಮಿಕ್ಕ ಹುಡುಗರು ನಗುವದೂ ಸಹಜವೇ. ಗಂಡಿನ ದೃಷ್ಟಿಗೇನೇ ನಾನು ಹಾಗೆ. ಆದರೆ ನೀನು ಹುಡುಗಿಯಲ್ಲವೆ? ನಾನು ಹೆಣ್ಣಾಗಿ ಹುಟ್ಟಿರುವುದಾದರೂ ನಿಜವಲ್ಲವೆ? ನೀವೂ ನನಗೆ ಪರಿಹಾಸ್ಯ ಮಾಡಿ ನಗುವದೇ?" ಕಡೆಕಡೆಗೆ ಉಪಾಧ್ಯಾಯಿನಿಯ ಕಂಠ ಬಿಗಿದು ಬಂತು; ಕಣ್ಣಲ್ಲಿ ನೀರು ತುಂಬಿ ಬಂತು. ಚಿಕ್ಕ ಹುಡುಗಿಯಾದರೂ ಸರೋಜನಿಗದು ಅರ್ಥವಾಗದೆ ಹೋಗಲಿಲ್ಲ.

ಶಿರ್ವ ಪಂಚಾಯ್ತ್ ಬೋರ್ಡ್ ಪ್ರೆಸಿಡೆಂಟರಿಂದಾ—

ಪ್ರಕಟಣೆ

ಶಿರ್ವ ಪಂಚಾಯ್ತ್ ಬೋರ್ಡಿಗೆ ಒಳಪಟ್ಟ ಮಂಚಕಲ್ಲು ಸಂತೆ ಮಾರ್ಕೆಟಿನಲ್ಲಿ ಮತ್ತು ದಿನಚರಿ ಮಾರ್ಕೆಟಿನಲ್ಲಿ 1946ನೇ ಇಸ್ವಿ ಎಪ್ರಿಲ್ ತಿಂಗಳ ತಾರೀಕು 1ರಿಂದ 1947ನೇ ಇಸ್ವಿ ಮಾರ್ಚ 31ನೇ ತಾರೀಕು ವರೆಗೆ, 46-47ನೇ ಒಂದು ವರ್ಷದಲ್ಲಿ ವರಿ ವಸೂಲು ಮಾಡುವ ಸ್ವತಂತ್ರವನ್ನು ಪ್ರತ್ಯೆ ಪ್ರತ್ಯೇಕವಾಗಿ ಬರುವ ತಾ. 27-2-46ನೇ ಬುಧವಾರ ದಿನ ಸಾಯಂಕಾಲ ಗಂಟೆ 4ಕ್ಕೆ ಪಂಚಾಯ್ತ್ ಬೋರ್ಡ್ ಆಫೀಸಿನ ಬಳಿ ಪ್ರೆಸಿಡೆಂಟರಿಂದ ವಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡೋಣಾಗುವುದು. ಏಲಂ ಶರ್ತ ವಗೈರೆ ಮಾಹಿತಿಗಳನ್ನು ಪಂಚಾಯ್ತ್ ಬೋರ್ಡ್ ನೋಟೀಸ್ ಬೋರ್ಡಿನಲ್ಲಿರುವ ಬಹಿರಂಗ ಪ್ರಕಟಣಾದಿಗಳನ್ನು ನೋಡಿ ತಿಳಿದುಕೊಳ್ಳಬಹುದು ಎಂಬ ಸಂಗ್ತಿ ಉಮೇದ್ವಾರ ಹಾಗು ಸರ್ವ ಜನರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

(Sd). **S. Annaya Hegde,**
President,
Panchayat Board, Shirva.

Panchayat Bd. Office,
SHIRVA, 8—2—46.

ವನಸ್ಪತಿ ತುಪ್ಪ

ಕಳ್ಳಸಂತೆಯಲ್ಲಿ ಸರ್ವಥಾ ಕೊಂಡುಕೊಳ್ಳಬೇಡಿರಿ.

ಕಾರಣ ನಮ್ಮಲ್ಲಿ ಶಕ್ತಿವರ್ಧಕ ತೈಲವು ಯಥೇಚ್ಛವಿದೆ. ಈ ತೈಲದ ಉಪಯೋಗದಿಂದ ಸರಿತ ಕೂದಲು ಕಪ್ಪಾಗುವುದು. ಮಾತ್ರವಲ್ಲದೆ ಕೂದಲು ಉದುರುವುದನ್ನು ತಡೆಗಟ್ಟಿ ಕೂದಲು ರಾಶಿಯನ್ನ ಬೆಳೆಸುವುದು. ವಾತಕ್ಕೆ ರಾಮಬಾಣದಂತಿರುವುದು.

ಡಿಸ್ಟ್ರಿಬ್ಯೂಟರ್ಸ್‌ರೊಡನೆ ಹೆಚ್ಚಿನ ಮಾಹಿತಿ ಪಡೆಯಿರಿ.

ಸ್ವದೇಶಿ ವನಸ್ಪತಿ ಮೆನ್ಯುಫೆಕ್ಚರಿಂಗ್ ಲಿಮಿಟೆಡ್,

ಪ್ರೊಸ್ಪೆಕ್ಟ್ ಚೇಂಬರ್ಸ್, ಹೊರ್ನ್ಬಿ ರೋಡು, ಫೋರ್ಟ್ ಬೊಂಬಾಯಿ.

ವನಸ್ಪತಿ ತುಪ್ಪ, ಸಾಬೂನು, ಲೋಂಡ್ರಿ ಚಿಪ್ಸ್, ಬರ್ಮಾ ಮೇಣಬತ್ತಿಗಳು, ಇತ್ಯಾದಿ ಇತ್ಯಾದಿಯನ್ನೇ ಸದಾ ಸರ್ವದಾ ಉಪಯೋಗಿಸಿರಿ.

SWADESHI VANASPATHI MANUFACTURING LTD.,
Prospect Chambers, Hornby Road, FORT BOMBAY.

ಅಖಿಲ ಕರ್ನಾಟಕದಲ್ಲಿ ಸಾಪೆಕ್ಷ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.

ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿ ಸಂಗ್ತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು - ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿಸುವ ಅದನ್ನು ಬೇರುಸಹಿತ ಕಿತ್ತು ತೆಗೆಯುವುದು. ಈ ಔಷಧ ಸಾರುವು ಮಾಡಿದಾಗಲೇ ಕೆಮ್ಮು ತೇಕೂ ನಿಲ್ಲುವವು; ದೊಟ್ಟೆ ಸಡಿಲಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩.೬.೦, ೫.೧೦.೦ ಮತ್ತು ೧೦.೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್ & ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:—

ವನಮಾಲೀ ಛಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT
SHWAS-HARI

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,
UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.
ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2	ಸಾಮುದ್ರಿಕ ಶಾಸ್ತ್ರ	0	8	0
3.	ಬಾಲ ರಾಮಾಯಣ	0	5	0
4.	ಸುಕನ್ಯಾ ಚರಿತ್ರೆ	0	5	0
5	ಕೊಳಲು ಕೃಷ್ಣ	0	8	0
6.	ಗುರುಪೀಠಗಳ ಅವನತಿ	0	8	0
7.	ದ್ವೈತಮತ ಖಂಡನೆ	0	6	0
8	ಧರ್ಮಸಂಕಟ	0	4	0
9.	ಪೂರೂರವ	0	8	0
10.	ನಿಶ್ಚಯ ಜ್ಞಾನ	0	8	0
11.	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13.	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gaathama the Buddha	0	8	0
16.	ಪ್ರಾರ್ಥನೆ	0	2	0
17.	ಹಿಂದೀ ಪಹಲಿ ಪೋತಿ	0	2	0
18.	ಹರಿಶ್ಚಂದ್ರ ಆಖ್ಯಾನ (ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)	0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, **ಉಡುಪಿ.**

ತುಳು ಪುಸ್ತಕಗಳು

ತುಳು ಸಾಹಿತ್ಯ 1	1	0	0
ಕೃಷ್ಣ ರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಪದ್‌ಮಾಳತ್ತ್ ಪುದ್‌ಮಾಯಿ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಗತೆ	0	2	0
ಮಿತ್ಯ ನಾರಾಯಣ ಕತೆ	0	1	0
ಸತೀ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.
ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. ದಪ್ಪನಾದ ಹೊದಿಕೆಯುಳ್ಳದ್ದು:

ಹಳಗನ್ನಡದ ತಿಳಿನುಡಿಯ ರಸಗಬ್ಬ
ಹಳಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, **ಉಡುಪಿ.**

ಬೆಲೆ: 3—0—0
(ದಪ್ಪನಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪಿ. ಎ. ಪೈ ಬ್ರದರ್ಸ್, ಉಡುಪಿ
ನವಭಾರತ ಬುಕ್ ಡಿಪ್ಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ನವಯುಗ

NAVAYUGA

ವರ್ಷ ೨೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ ೨೫] Founder: SRI A. B. SHETTY. [No. 25

ಉಡುಪಿ • 21—2—1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6



ಅಮೃತಾಂಜನ.
ತಲೆನೋವು, ಶೀತ, ವೇದನೆ, ಉಳುಕು ಕತ್ತರಿಗೆ, ಘಾಯ, ಹಲ್ಲು ವೇದನೆಗಳ ... ನೋವು, ಗಾಯಗಳು ... ಕೊಳ್ಳುವರು, ಜೇನು ನೊಣ ಮುಂತಾದ ಚೇಳು ಕಚ್ಚುವಿಕೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ.

REGD.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

TO THOSE WHO DEMAND SOMETHING BETTER IN LIFE.

In the competitive worl l of to-day financial backing provides valuable opportunities whether it be in the field of education, commerce or industry. You are certainly desirous that your children should have better opportunities in life.

Ambitious parents like you have found our Children's Endowment Policies suitable for that purpose.

THE CANARA MUTUAL ASSURANCE COMPANY, LTD.,
Head Office.- **UDIPI, (S. India.)**

ಪರೀಕ್ಷೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು.
ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು.

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ,
ಇವರು

'ಮುಕ್ತಿ'

ಎಂಬ **ಸಾಮಾಜಿಕ ನಾಟಕವನ್ನು** ಮುಂಬಯಿಯಲ್ಲಿ
ಬೇಗನೇ ಪ್ರದರ್ಶಿಸಲಿರುವರು.

ಲೇಖಕರು: ನಿರ್ಮಾಣಕರು ಮತ್ತು ನಿರ್ದೇಶಕರು.
ಶ್ರೀ. ಯಂ. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇದೊಂದು ನವೀನ ಪ್ರಯೋಗ. ಕನ್ನಡಿಗರಿಗೆ ಇದೊಂದು ಸುಸಂಧಿ. ನವೀನ ಪಾತ್ರವರ್ಗದವರು ಕರ್ನಾಟಕ ರಂಗಭೂಮಿಯ ಕಳೆಯನ್ನು ಹೆಚ್ಚಿಸಿ, ತನ್ಮೂಲಕ ಕಲಾಸೇವೆಯನ್ನು ಮಾಡಲಿರುವರು.

ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡೆಕೊಳ್ಳಿರಿ.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ,
ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,
ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.**

ದೊಡ್ಡವರಿಗೆ 400ರ 8 ಬೊಟ್ಟು, ಸಣ್ಣ ಮಕ್ಕಳಿಗೆ 100ರ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ
ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು.—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ, ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L. I. M., ಡಾ। ವೆಂಕಟಪತಿರಾವ್, ಕೋರ್ಟ್ಹಿಲ್, ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank at

MERCARA

ON 23-1-1946.

The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್

ಮಾನವರಾದರೇನು? ಮನೋವಿಕಾರಗಳಿವೆ-

ಒಬ್ಬನು ಪ್ರಚಲಿತ ರಾಜ್ಯಭಾರ ಪದ್ಧತಿಯ ಅಸ್ತಿವಾರವನ್ನೇ ಅಲುಗಾಡಿಸಿದ ರಾಜಕೀಯ ನಾಯಕನಿರಬಹುದು; ಸಾಮಾಜಿಕ ಹಳೇ ಕ್ರಮ ನಿಯಮಗಳನ್ನು ಅಡಿಮೇಲು ಮಾಡಿದ ಸಮಾಜ ಸುಧಾರಕನಿರಬಹುದು; ಇಡೀ ಪ್ರಪಂಚದ ಪ್ರತಿಯೊಂದು ಚಲನವಲನವೂ ತಪ್ಪೆಂದು ಭಾವಿಸಿ, ಅದನ್ನು ಬೆಂಕಿಹಚ್ಚಿ ಭಸ್ಮಮಾಡಿ ಒಂದು ಹೊಸ ಪ್ರಪಂಚವನ್ನೇ ಸೃಷ್ಟಿಸಬೇಕೆಂದು ಹೊರಟ ಕ್ರಾಂತಿಕಾರನಿರಬಹುದು — ಆದರೆ ಅವನೂ ಮನುಷ್ಯ! ಮಾನವ ಸಹಜ ವಿಕಾರಗಳು ಅವನನ್ನು ಬಿಟ್ಟಿರಲಾರವು. ಪ್ರೇಮ-ಕಾಮ, ಭಯ-ಭಕ್ತಿ ಆಚಾರ-ಆತ್ಮೀಯತೆ, ಇವೆಲ್ಲಾ ಆತನಲ್ಲೂ ಇವೆ. ತಪ್ಪು ಯೋಚನೆ ಕೊಟ್ಟಿತೆಂದು ತನ್ನ ತಲೆಯನ್ನೇ ಕಡಿದುಕೊಳ್ಳಲು ಹೊರಟ ನ್ಯಾಯ ನಿಷ್ಠುರಿಯಾದರೂ ಆ ಮೊದಲೊಮ್ಮೆ ತನ್ನಾಕೆಯ ತಲೆ ಸವರಿ, ಮಗುವನ್ನು ಮುದ್ದಿಟ್ಟು ಬಂದಾನು!

oo oo oo

ಶ್ರೀಮತಿ ಅರುಣಾ ಅಸಫಾಲಿಯವರು ಇದೇ ತಾ. 12ರಲ್ಲಿ ಗಾಂಧೀ ಭೇಟಿಗಾಗಿ ಸೇವಾಗ್ರಾಮಕ್ಕೆ ಹೋಗಿದ್ದರು. ಅಕೆ 1942ನೇ ಅಗೋಸ್ತು 9ನೇ ತಾರೀಕಿನಲ್ಲಿ ಕಾಣೆಯಾಗಿ ಮೊನ್ನೆಯ ವರೆಗೂ ಸರಕಾರೀ ವಿರುದ್ಧ ಸಬ್‌ಮೇರೀನ್ ಧಾಳಿ ನಡೆಸುತ್ತಿದ್ದವರು. ಸುಮಾರು ನಾಲ್ಕು ವರುಷಗಳ ನಂತರದ ಗಾಂಧೀ-ಅರುಣಾ ಭೇಟಿ ಇದು. ಅವರು ಸೇವಾಗ್ರಾಮಕ್ಕೆ ಬಂದಾಗ ಆಶ್ರಮದ ಅಂಗಣದಲ್ಲಿ ಸಂಜೆಯ ಸಾಮೂಹಿಕ ಪ್ರಾರ್ಥನೆ ನಡೆಸುತ್ತಿದ್ದರು ಗಾಂಧಿಜೀ. ಅರುಣಾ ಪ್ರಾರ್ಥನೆಯನ್ನು ದೂರ ನಿಂತುಕೊಂಡು ನೋಡಿದರು. ಅದು ಮುಗಿದೊಡನೆ ಓಡಿ ಹೋಗಿ ಗಾಂಧಿಜೀಯ ಪಾದಗಳನ್ನು ಗಟ್ಟಿ ಹಿಡಿದುಕೊಂಡರು. ಅವರ ಕಣ್ಣುಗಳಿಂದಿಳಿವ ಬೊಟ್ಟು ಬೊಟ್ಟು ನೀರು ಗಾಂಧಿಜೀಯ ಪಾದ ಒದ್ದೆಮಾಡಿದುದನ್ನು ಆ ತಿಂಗಳ ಬೆಳಕಿನಲ್ಲಿ ಕಾಣಲಾಗುತ್ತಿತ್ತು. ಗಾಂಧಿಜೀ ಅಲ್ಲಿಯೇ ಅವರ ಬೆನ್ನು ತಟ್ಟುತ್ತಿರುವಾಗ "ಬಾಪೂ" ಎಂದು ಭಕ್ತಿ ಮುದ್ದೆಯಾಗಿ ಹೊರಳಿಸುತ್ತಿದ್ದರು ಅರುಣಾ. "ಬೇಟೀ" ಎನ್ನುತ್ತಾ ಗಾಂಧಿಜೀ ಅವರನ್ನು ಎತ್ತಿದರು. ಎದ್ದವಳೇ ಅರುಣಾ ಬಾಪುವಿನ ಹೆಗಲ ಮೇಲೆ ತಕ್ಕೆ ಬಿದ್ದಳು. ಇಬ್ಬರಿಗೂ ಮಾತನಾಡಲು ಸ್ವರಬಾರದು. ಕೊನೆಗೆ "ನೀನು ಈ ತನಕ ಇದ್ದುದೆಲ್ಲಿ?" ಎಂದು ಗಾಂಧಿಜೀಯ ಪ್ರಶ್ನೆ. "ಅದೊಂದು ದೀರ್ಘಾದ್ಭುತ ಕಥೆ. ನಿಮ್ಮ ಗುಡಿಸಲಿನೊಳಗೆ ಹೋಗಿ ಮಾತಾಡೋಣ" ಎಂದು ಅರುಣಾನ ಉತ್ತರ. "ಅಚ್ಯುತ ಎಲ್ಲಿದ್ದಾನೆ?" ಎಂದು ಪುನಃ ಗಾಂಧಿಜೀಯ ಸವಾಲು. (ಅಗೋಸ್ತು ಗಲಭೆಯಾರಂಭದಿಂದ ತಲೆತಪ್ಪಿಸಿಕೊಂಡಿದ್ದು ಇನ್ನೂ ಕಾಣಿಸದಿರುವ ಅಚ್ಯುತ ಪಟ್ವರ್ಧನ್) "ನನಗದು ಗೊತ್ತಿಲ್ಲ" ಎಂದು ಅರುಣಾನ ಸ್ಪಷ್ಟ ಉತ್ತರ. "ನೀನು ಎಲ್ಲವನ್ನೂ ಸತ್ಯಹೇಳುವದಿಲ್ಲ. ನನ್ನಲ್ಲೇನೂ ಗುಟ್ಟು ಮಾಡಕೂಡದು" ಎಂದು ನಗುತ್ತಾ ಹೇಳಿ ಗಾಂಧಿಜೀ ಆಕೆಯನ್ನು ಕರಕೊಂಡು ಗುಡಿಸಲು ಹೊಕ್ಕರು. ಅಲ್ಲಿ 20 ಮಿನಿಟುಗಳ ವರೆಗೆ ಅರುಣಾ ತನ್ನ ಕಥೆಯನ್ನೆಲ್ಲಾ ಹೇಳಿದರು. ವಿಶೇಷ ಜಾಗರೂಕತೆಯಲ್ಲಿದ್ದ ಪೋಲೀಸರ ನಡುವಿನಿಂದಲೇ ತಾನೊಮ್ಮೆ ಜಾರಿದುದು ಬಂಗಾಳದ ಹೆಣದ ರಾಶಿಗಳ ಮಧ್ಯೆ ಒಂದೊಮ್ಮೆ ಹಾದು ಹೋದುದು.-ಇವೆಲ್ಲವನ್ನೂ ವರ್ಣಿಸಿದರು. ಕೊನೆಗೆ "ಜೈ ಪ್ರಕಾಶ್ ಮತ್ತು ರಾಮ ಮನೋಹರ ಲೋಹಿಯರು ಬಿಡುಗಡೆ ಹೊಂದುವದಾವಾಗ?" ಎಂದು ಶ್ರೀಮತಿಯ ಆತುರದ ಪ್ರಶ್ನೆ. "ಸದ್ಯದಲ್ಲಿಯೇ" ಎಂದು ಗಾಂಧಿಜೀಯ ಉತ್ತರ.

oo oo oo

ಕಳೆದ ಬಾರಿ ಬೊಂಬಾಯಿಯಲ್ಲಿ ನಡೆದಿದ್ದ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯ ಒಂದು ದೃಶ್ಯವನ್ನು ಯಾರೂ ಮರೆಯಲಾರರು. ಆಗ ತಾನೇ ಬಿಡುಗಡೆಗೊಂಡು ಬಂದಿದ್ದ ಶರತ್‌ಚಂದ್ರಬೋಸರು ವೇದಿಕೆಯಮೇಲೆ ಹತ್ತಿದೊಡನೆ ಉಕ್ಕಿನ ಮನುಷ್ಯ ಸರ್ದಾರ್ ಪಟೇಲರೆದ್ದು ಹೋಗಿ ಅವರನ್ನು ಬಿಗಿಯಾಗಿ ಆಲಂಗಿಸಿಕೊಂಡು ಬಿಟ್ಟರು. ಕೆಲವು ಮಿನಿಟುಗಳ ವರೆಗೆ ಆ ಕಟ್ಟನ್ನು ಸಡಲಿಸುವ ಶಕ್ತಿ ಈ ಪ್ರಪಂಚದಲ್ಲೇ ಇದ್ದಿರಲಿಲ್ಲವೆನ್ನಬಹುದು. ಆಲಿಂಗನದಿಂದ ಅಗಲುವಾಗ ಇಬ್ಬರ ಕಣ್ಣುಗಳಲ್ಲೂ ನೀರೊಸರುತ್ತಿತ್ತು. ಕಲ್ಲು ಹೃದಯದ ಕಲಿ ಸರ್ದಾರರತ್ತುದನ್ನು ಪ್ರಾಯಶಃ ಆ ಮೊದಲಾರೂ ಕಂಡಿರಲಾರರು. ಗಾಂಧೀಭಕ್ತರಾಗುವ ಮೊದಲೇ ಕೋರ್ಟಿನಲ್ಲೊಮ್ಮೆ 'ಹೇರಿಂಗ್'ನಲ್ಲಿದ್ದಾಗ ವಲ್ಲಭಾಯಿ ಪಟೇಲರಿಗೆ ಒಂದು ತಂತಿ ಬಂದಿತ್ತು. ಅವರು ನಡುವೆ ಅದನ್ನು ಓದಿಕೊಂಡು ಯಥಾಪ್ರಕಾರ ತನ್ನ ವಾದವನ್ನು ಮುಂದುವರಿಸಿದ್ದು ನೋಡಿದವರು, 'ಪತ್ನಿ ಹೊರಟೆನೆಂದು ತಂತಿ ಬಿಟ್ಟಿದ್ದಾಳೇನೋ' ಎಂದು ಭಾವಿಸುವಂತಿತ್ತು ಪಟೇಲರ ನಿರ್ವಿಕಾರ ವರ್ತನೆ. ಆದರೆ ವಿಚಾರಿಸುವಾಗ ಅದು ಪತ್ನಿ ಮಡಿದಳೆಂಬುದನ್ನು ತಿಳಿಸುವ ತಂತಿ! ಇಂತಹ ಮನುಷ್ಯ ಸರ್ದಾರರು ಇದೊಂದು ಸಂದರ್ಭದಲ್ಲಿ ಅತ್ತುಬಿಟ್ಟರು. ಪ್ರಾಯಶಃ ಸುಭಾಷ್‌ಚಂದ್ರಬೋಸರ ನೆನಪಾಗಿಂಬೇಕು; ಅವರು ಇಲ್ಲಿರುವಾಗ ತಾನು ತಪ್ಪಿ ನಡೆದಿದ್ದೇನೆಂಬ ಪಶ್ಚಾತ್ತಾಪ ಸರ್ದಾರರಿಗುಂಟಾಗಿರಬೇಕು.

oo oo oo

ಜವಾಹಿರಲಾಲ ನೆಹರು ಕ್ರಾಂತಿ ಭಾವನೆಯಿಂದಾಗಿಯೇ ಮಿಕ್ಕ ರಾಜಕೀಯ ಪ್ರಮುಖರಿಗಿಂತ ಹೆಚ್ಚಿನ ಗೌರವ ಸಂಪಾದಿಸಿದ್ದಾರೆ. "ಗಾಂಧಿಜೀಯಿಂದ ತನ್ನ ಪಾದ ಹಿಡಿದವರಿಗೆ ಆಶೀರ್ವಾದ ದೊರೆತರೆ ನೆಹರುಗಳಿಂದ 'ಆ-ಶಿರ-ವಧ' ಆಗಬಹುದು" ಎಂದೊಬ್ಬ ಪಂಡಿತರಂದಂತೆ ಪಾದ ಮುಟ್ಟಿ ವಿಧೇಯತೆ ಪ್ರದರ್ಶಿಸುವ ಅಂಥ ವೃತ್ತಿಯನ್ನು ಕಂಡರೆ ನೆಹರುಗಳು ಕಿಡಿಕಿಡಿಯಾಗುತ್ತಾರೆ. ಆದರೆ ಒಂದು ಸನ್ನಿವೇಶವನ್ನು ಮರೆಯಲಾಗುವದಿಲ್ಲ. ನೆಹರುಗಳ ಏಕಮಾತ್ರ ಪುತ್ರಿ ಇಂದಿರೆಗೆ ಫಿರೋಜ್ ಗಾಂಧಿಯೊಡನೆ ವಿವಾಹವಾಯಿತು. ಗಾಂಧೀ ಆಶೀರ್ವಾದ ಪಡೆಯಲು ನೆಹರು ತನ್ನ ಪುತ್ರಿಯನ್ನು ಕರಕೊಂಡುಬಂದರು. ಅಲ್ಲಿ ಬಾಪುವಿನ ಪಾದಮುಟ್ಟಿ ವಂದಿಸುವಂತೆ ಮಗಳನ್ನು ಪ್ರೇರೇಪಿಸಿ ಆಶೀರ್ವಾದ ದೊರಕಿಸಿಕೊಟ್ಟರು. ಅವರ ಮಾತೆ ಸ್ವರೂಪರಾಣಿ ನೆಹರು ಮಡಿದಾಗ ಶವದಹನಕ್ರಿಯೆ ಮತ್ತು ಉತ್ತರಕ್ರಿಯೆ ನಡೆದುದು ವೈದಿಕ ರೀತಿಯಲ್ಲೇ-ಕುಲಪುರೋಹಿತರ ಮಂತ್ರವಿಧಿಪೂರ್ವಕವೇ. ಎಲ್ಲವನ್ನೂ ನಡಿಸಿದವರು ಅವರ ಏಕಮಾತ್ರ ಗಂಡುಮಗ ಪಂಡಿತ ಜವಾಹಿರಲಾಲರೇ.

oo oo oo

(೧೧ನೇ ಪುಟ ನೋಡಿರಿ)

WANTED.

For the Alex Pai Distillery

1. **ASSISTANT DEPOT WRITERS**—for the following arrack Depots to join duty from 1-4-1946.

   Qualifications: Must be men of good character, 25 to 50 years of age and able to read and write English & Kannada.

   Security: Cosh Deposit to be furnished in proportion to volume of business at each Depot and a personal surety for Rs. 2000/-.

   Pay: Rs. 20 to 30/- per month with Dearness allowance of Rs. 8/- per month.

   Names of Depots: Udipi, Mangalore, Beltangadi, Kasargode, Puttur, Karkala, Mudabidri, Bantwal, Sullia, Moolki, Uppinangadi, Coondapur, Vittal, Baindur, Brahmawar, Hebri, and Haladi.

2. **AGENTS**- for the supply of Cashew fruit at the Distillery site commencing from 1—3—46.

   ಏಜಂಟರು- ತಾ. 1-3-46ರಿಂದ ಗೇರುಹಣ್ಣುಗಳನ್ನು ಸರಾಯಿ ಬಟ್ಟಿ ಇಳಿಸುವ ಕಾರ್ಖಾನೆಗೆ ಸಪ್ಲೈ ಮಾಡಲು.

3. **MAISTRIES**- for supply coolies for the following Works:

   ಮೇಸ್ತ್ರಿಗಳು- ಕೆಳಗೆ ನಮೂದಿಸಿದ ಕೆಲಸಗಳಿಗೆ ಕೂಲಿ ಜನರನ್ನು ಒದಗಿಸಿ ಕೊಡಲು.

   1. Destillery ಸರಾಯಿ ಭಟ್ಟಿ ಇಳಿಸುವ ಕಾರ್ಖಾನೆಗೆ
   2. Tile Factory ಹಂಚು ಕಾರ್ಖಾನೆಗೆ
   3. Clay Quarrying ಮಣ್ಣಿನ ಗಣಿಗೆ
   4. Fuel Coupe feeling ಕಟ್ಟಿಗೆ ಒಡೆಯಲು
   5. Building construction ಕಟ್ಟೋಣ ಕಟ್ಟಲಿಕ್ಕೆ
   6. Agricultural Farms ಕೃಷಿ ಕ್ಷೇತ್ರಕ್ಕೆ

   Wages: at rates prevailing from time to time the ... being basic wage 6 annas per day for man cooly and 4 annas per day for women cooly plus Dearness allowance of 125% of the basic wage, i. e. an aggregate of 0—13—6 for a man and 0—9—0 for a woman cooly per day. Loding and fuel - provided free of charge to such coolies as are prepared to live in the cooly lines which will be provided for them Salary of the Maistry will be rupee one per day for every man cooly and 12 annas for every woman cooly who works for not less than 24 days in a month and proportionately for lesser number of days worked.

   ಕೂಲಿ- ಗಂಡಸರಿಗೆ ದಿನಕ್ಕೆ 0—6—0, ಹೆಂಗಸರಿಗೆ 0—4—0, ತುಟ್ಟಿ ಭತ್ತೆ ಕೂಡಿ ದಿನಕ್ಕೆ ಗಂಡಸರಿಗೆ 0—13—6, ಹೆಂಗಸರಿಗೆ 0—9—0. ಕಾರ್ಖಾನೆಯ ಕಡೆಯಿಂದ ತಯಾರಿಸಿದ ಕುಟೀರಗಳಲ್ಲಿ ವಾಸಿಸುವವಂತಹವರಿಗೆ ಕಟ್ಟಿಗೆ ಮತ್ತು ಬಾಡಿಗೆ ಧರ್ಮಾರ್ಥ. ತಿಂಗಳಲ್ಲಿ 24 ದಿನಗಳಿಗೆ ಕಡಿಮೆಯಾಗದಂತೆ ಕೆಲಸ ಮಾಡುವ ಗಂಡಸು ಮೇಸ್ತ್ರಿಗೆ ದಿನಕ್ಕೆ ಒಂದು ರೂಪಾಯಿ, ಹೆಂಗಸು ಮೇಸ್ತ್ರಿಗೆ ಹನ್ನೆರಡಾಣೆ ಕಡಿಮೆ ದಿವಸ ಕೆಲಸ ಮಾಡಿದವರಿಗೆ ಅದೇ ದಾಮಾಷಿ ಮೇಲೆ ಸಂಬಳ.

Apply to—
Felix Albuquerque,
Felix Wada,
MANGALORE.

ಪತ್ತೆ—
ಫೆಲಿಕ್ಸ್ ಆಲ್ಬುಕರ್ಕ್,
ಫೆಲಿಕ್ಸ್ ವಾಡಾ,
ಮಂಗಳೂರು.

CHAMPAE'S
Snow & Lastrex
(Sole Distributers for India.)
Prop: K. G. NAYAK,
Santhekatte, UDIPI, S. K.

ಸರಕಾರೀ ಮತ್ತು ವ್ಯಾಪಾರೀ ಧೋರಣೆ ತಿದ್ದಬೇಕು

—ಗಾಂಧಿಜಿ.

ಆಹಾರ ಬಿಕ್ಕಟ್ಟಿನ ನಿವಾರಣೆಯಲ್ಲಿ ರಾಷ್ಟ್ರದ ಜನಪ್ರಮುಖರ ಸಹಕಾರವನ್ನು ಯಾಚಿಸಿ, ವೈಸರಾಯಿ ವೇವೆಲರು ತನ್ನ ಖಾಸಗೀ ಕಾರ್ಯದರ್ಶಿ ಜೋರ್ಜ್ ಎಬೆಲ್ಲರನ್ನು ವಾರ್ಧಾಕ್ಕೆ ಕಳುಹಿದ್ದಾಗ ಮಹಾತ್ಮಾ ಗಾಂಧಿಯವರು ಮುಂದಿಟ್ಟ ಅಭಿಪ್ರಾಯವಿದು:—

ವೈಸರಾಯರ ಆಮಂತ್ರಣ

“ಎಚ್. ಇ. ವೈಸರಾಯರ ಖಾಸಗೀ ಕಾರ್ಯದರ್ಶಿಗಳು ಆಹಾರ ಪರಿಸ್ಥಿತಿಯನ್ನು ನನ್ನ ಅನುಭವಕ್ಕೆ ತಂದಿದ್ದಾರೆ. ಸಾಕಷ್ಟು ದೀರ್ಘಾವಧಿಯ ಹಲವು ನಿಶ್ಚಿತ ಕಾರ್ಯಕ್ರಮಗಳು ಈ ಬಾರಿ ನನಗಿದ್ದುವು; ನಾನವುಗಳನ್ನು ಕಡೆಗಣಿಸುವಂತಿರಲಿಲ್ಲ. ಆದ್ದರಿಂದಲೇ ವೈಸರಾಯರ ಪ್ರಾಮುಖ್ಯ ಆಮಂತ್ರಣವು ನನಗೆ ಬಂದಾಗ, ಅವರ ಪರವಾಗಿ ಮಾತಾಡಬಲ್ಲ ಯಾರನ್ನಾದರೂ ನನ್ನಕಡೆಗೆ ಕಳುಹಿಕೊಡಿರೆಂದು ನಾನು ಕೇಳಿಕೊಂಡೆ. ಅದಕ್ಕನುಸಾರವಾಗಿ ಅವರ ಖಾಸಗೀ ಕಾರ್ಯದರ್ಶಿ ನಿನ್ನೆ ಬಂದಿದ್ದಾರೆ. ಆಹಾರ ಪರಿಸ್ಥಿತಿಯೊಂದನ್ನು ಮಾತ್ರವೇ ಅವರು ನನ್ನೆಡೆಗೆ ತಂದಿದ್ದಾರೆ. ರಾಜಕೀಯ ರಣರಂಗ ಮತ್ತು ಸರಕಾರೀ ಉದ್ದೇಶಗಳ ವಿಶ್ವಾಸ ಭಂಗದಿಂದ ಈ ಪ್ರಶ್ನೆ ಹುಟ್ಟಿಕೊಂಡಿರುವ ಕುರಿತು ನಾನು ಪ್ರಸ್ತಾಪವೆತ್ತಬಹುದೆ?

ಜವಾಬ್ದಾರೀ ಸರಕಾರಬೇಕು

ಇದು ವಿಳಂಬಿಸಲಾಗದ ವಿಷಯವಾದ್ದರಿಂದ ನನಗೆ ತೋರಿದಷ್ಟನ್ನು ನಾನಿಲ್ಲಿ ಮುಂದಿಡಲಿದ್ದೇನೆ. ಕಾಂಗ್ರೆಸ್ ಧೋರಣೆಯ ಮಟ್ಟಿಗೆ ವೈಸರಾಯರು ಅದರ ಅಧ್ಯಕ್ಷ ಮೌಲಾನಾ ಅಬ್ದುಲ್ ಕಲಮ್ ಅಜಾದರನ್ನೇ ಆಮಂತ್ರಿಸಬೇಕಾಗಿದೆ. ಸ್ವತಃ ಬರಲು ಅವರಿಗಸಾಧ್ಯವಾದಲ್ಲಿ ತನ್ನ ಪರವಾಗಿ ಬೇರೆಯವರನ್ನು ನೇಮಿಸುವಂತೆ ಅವರನ್ನು ಕೇಳಿಕೊಳ್ಳಲಿ. ನನ್ನ ವ್ಯಕ್ತಿಗತ ಅಭಿಪ್ರಾಯವೆಂದರೆ, ಸದ್ಯದ ಬೇಜವಾಬ್ದಾರಿ ಕಾರ್ಯಕಾರೀ ಮಂಡಲಿಯು ಕೂಡಲೇ ರದ್ದಾಗಿ ಅದರ ಸ್ಥಾನದಲ್ಲಿ ಕೇಂದ್ರ ಎಸೆಂಬ್ಲಿಯ ಚುನಾಯಿತ ಸದಸ್ಯರಿಂದಾರಿಸಲ್ಪಡುವ ಜವಾಬ್ದಾರೀ ಮಂಡಲಿ ಬರಬೇಕು. ಪಕ್ಷಭೇದವಿಲ್ಲದೆ ಈ ಜವಾಬ್ದಾರಿಯನ್ನು ಕೇಂದ್ರ ಎಸೆಂಬ್ಲಿಯ ಚುನಾಯಿತ ಸದಸ್ಯರು ಹೊರತಕ್ಕದ್ದೆಂದೂ ವ್ಯಕ್ತಿಶಃ ನನ್ನ ಅಭಿಪ್ರಾಯವಿದೆ. ಸರಕಾರಕ್ಕೀ ಸೂಚನೆ ಸಮ್ಮತವೋ, ಕೇಂದ್ರ ಎಸೆಂಬ್ಲಿಯ ಬೇರೆ ಬೇರೆ ಪಕ್ಷಗಳಿಗಿದು ವ್ಯವಹಾರ್ಯವೆಂದು ಕಾಣಲು ಸಾಧ್ಯವೋ ಎಂಬುದನ್ನು ನಾನು ಹೇಳಲಾರೆ. ಆದರೆ ಪ್ರತಿವಾದದ ಭೀತಿಯಿಲ್ಲದೆ ಇಷ್ಟೊಂದನ್ನು ಹೇಳಬಲ್ಲೆ—ವ್ಯಾಪಾರೀ ವರ್ಗ ಮತ್ತು ಸರಕಾರವು ಯಥಾರ್ಥ ವರ್ತನೆ ವಹಿಸಿದರೆ, ಇಷ್ಟು ದೊಡ್ಡ ರಾಷ್ಟ್ರವಾಗಿರುವ ನಾವು ಸ್ವತಃ ಒದ್ದಾಟದಲ್ಲಿರುವ ಹೊರಗಿನ ಪ್ರಪಂಚದಿಂದ ಸಹಾಯಬಾರದೆ ಹೋದರೂ ಸದ್ಯದ ಸಂಕಷ್ಟದಿಂದ ಪಾರಾಗಬಲ್ಲೆವು.

(೩೪ನೇ ಅಖಿಲ ಭಾರತ ಆಯುರ್ವೇದ ಪ್ರದರ್ಶನದಲ್ಲಿ ಸುವರ್ಣ ಪದಕ ಬಹುಮಾನ ಪಡೆದಿದೆ)

ಮಾರ್ಗರೀಟರ

ಫಿಟ್ಸ್ ಕ್ಯೂರ್

ಮಕ್ಕಳ ಭಯಂಕರ ಬಾಲಗ್ರಹವನ್ನು ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸುವುದು.

ಪ್ರತಿಯೊಂದು ಸ್ಥಳದಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ. ಧಾರಾಳ ಕಮಿಷನ್ನು. ಹೆಚ್ಚಿನ ಮಾಹಿತಿಗೆ ನಮಗೆ ಬರೆಯಿರಿ.

BRIGHTSTAR AGENCIES,
Hospital Road, Udipi, S. K.

ಭಾರತದ ಬರಗಾಲ

ಅಧಿಕಾಹಾರ ಬೆಳೆಸಬೇಕು

ಧಾನ್ಯ ಮತ್ತು ವಸ್ತ್ರವ್ಯಾಪಾರಗಾರರು ಕಳ್ಳ ದಾಸ್ತಾನಿಡಬಾರದು; ದುರಾಶಾಪೂರಿತ ನಿರೀಕ್ಷೆಯನ್ನು ಬಿಡಬೇಕು. ನೀರಿನ ಅನುಕೂಲತೆ ಇದ್ದು ಮತ್ತು ದೊರೆಯಬಲ್ಲ ಬೇಸಾಯಯೋಗ್ಯಸ್ಥಳಗಳೆಲ್ಲೆಲ್ಲಾ ಆಹಾರ ಧಾನ್ಯಗಳನ್ನು ಬೆಳೆಸಬೇಕು. ಹೂದೋಟಗಳನ್ನು ಆಹಾರ ಸಸಿ ವಲಯಗಳಾಗಿ ಮಾರ್ಪಡಿಸಬೇಕು. ಇವು ಯುದ್ಧ ಕಾಲದಲ್ಲಿ ನಡೆದಿದ್ದುವು. ಸದ್ಯದಕಾಲವು ಕೆಲವು ಮಟ್ಟಿಗೆ ಯುದ್ಧಾವಧಿಗಿಂತಲೂ ಕಳಪೆಯದಿದೆ. ದಾಸ್ತಾನಿರುವ ಧಾನ್ಯಗಳನ್ನುಉಂಡು ಮುಗಿಸುವ ಮೊದಲೇ ತೀರಾ ಜಿಪ್ರಣರಂತೆ ನಾವು ಮಿತವ್ಯಯವನ್ನು ಆಚರಣೆಯಲ್ಲಿಟ್ಟಿರಬೇಕು. ಎಲ್ಲಾ ಸಂಭ್ರಮ ಸಮಾರಾಧನೆಗಳನ್ನೂ ನಿಲ್ಲಿಸಬೇಕು. ತಮ್ಮ ಮನೇ ವೆಚ್ಚದಲ್ಲಿ ಮಿತವ್ಯಯವನ್ನಾಚರಣೆಗೆ ತರುವ ಮೂಲಕ, ಇಂದಿನ ಗಂಡಾಂತರವನ್ನು ತಪ್ಪಿಸುವ ಕಾರ್ಯದಲ್ಲಿ ಮಹಿಳೆಯರು ಅಗ್ರ ಭಾಗ ವಹಿಸಬೇಕು.

ವಸ್ತ್ರಾಭಾವವಿರುವುದು ಸುಳ್ಳು!

ಯಾವ ಬಣ್ಣದ ಸರಕಾರವೇ ಇರಲಿ, ನಮ್ಮ ನಿತ್ಯಜೀವನದ ಹತ್ತರಲ್ಲೊಂಭತ್ತು ಅಂಶವನ್ನು ಸರಕಾರದ ಸಹಾಯವಿಲ್ಲದೆಯೇ ನಾವು ಸಾಗಿಸಬಲ್ಲೆವು. ಏನೇ ಆದರೂ [illegible]ವೇಳದಂತೆ ನೋಡಬೇಕು. ವಸ್ತ್ರದ ಬರಗಾಲವೆಂಬುದು ತೀರಾ ಕೃತಕವಾದುದೆಂಬುದನ್ನು ನಾನು ಬಲ್ಲೆ. ಯಾಕಂದರೆ ಕೇವಲ ಸರಕಾರ ಮತ್ತು ಮಿಲ್ ಮಾಲಕರು ಯಥಾರ್ಥತೆ ಮತ್ತು ಚತುರತೆಯಿಂದಿದ್ದರಾಯಿತು—ವಸ್ತ್ರವಿಲ್ಲದೆ ನಮ್ಮಲ್ಲಿ ಯಾರೊಬ್ಬನೂ ಬತ್ತಲೆ ತಿರುಗಬೇಕೆಂದಿಲ್ಲ. ನಮ್ಮ ಹಳ್ಳಿಗಳಲ್ಲಿ ವಸ್ತ್ರ ತಯಾರಿಕೆಗಾಗುವಂತೆ ನಮ್ಮಲ್ಲಿ ಬೇಕಾದಷ್ಟು ಹತ್ತಿ ಇದೆ; ಕೆಲಸವಿಲ್ಲದ ಕೈಗಳಿವೆ; ಮತ್ತು ಬೇಕಷ್ಟು ಕೌಶಲ್ಯವಿದೆ.”

ಸಾವಿನೆದಿರು ಬಂಡಾಯ!

ಭಾರತದ ಆಹಾರ ಬರಗಾಲವು ಪಂಡಿತ ನೆಹರುಗಳಿಗೆ ತೀರಾ ಅಸಹನೀಯವಾಗಿದೆ. ಈ ಸ್ಥಿತಿಯನ್ನು ಶಾಂತವಾಗಿ ಸಹಿಸಿಕೊಳ್ಳಬಾರದೆಂದು ಅವರು ಜನತೆಯನ್ನು ಹುರಿದುಂಬಿಸುತ್ತಿದ್ದಾರೆ. ಈ ವಾರದಲ್ಲಿ ಅವರಿತ್ತಿದ್ದ ಒಂದೆರಡು ಭಾಷಣಗಳ ಭಾಗವನ್ನು ಇಲ್ಲಿ ಕೊಡಲಾಗಿದೆ:—

ರೈತರ ದುಸ್ಥಿತಿ!

“ಅನ್ನಾಭಾವ ಮತ್ತು ಸಂಕಟಗಳಿಗೆ ಸೌಮ್ಯವಾಗಿ ಈಡಾಗುವ ಬದಲಿಗೆ, ಇಂತಹದನ್ನು ನಿರ್ಮಿಸಿದ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಗಳ ವಿರುದ್ಧವಾಗಿ ಬಂಡಾಯವೇಳಬೇಕೆಂದು ನಾನು ಔಧದ ಹಸಿವು ಪೀಡಿತ ರೈತರಿಗುಪದೇಶಿಸಿದ್ದೇನೆ. ರೈತ ವರ್ಗದಲ್ಲೆಲ್ಲಾ ಅತೀವ ಬಡತನ ವ್ಯಾಪಿಸಿದೆ. ಅವರಲ್ಲಿರುವ ಆಹಾರಾಭಾವ ಮತ್ತು ವಸ್ತ್ರಾಭಾವ, ಅವರ ಆ ದುಃಖದಾಯೀ ಮಣ್ಣುಗುಡಿಸಲುಗಳು ಮತ್ತು ಅವರ ಮಕ್ಕಳ ಸ್ಥಿತಿ, ಇವುಗಳನ್ನೆಲ್ಲಾ ನಾನು ಕಣ್ಣಾರೆ ಕಂಡಿದ್ದೇನೆ. ಸದಾ ಕಾಲ ಮೃತ್ಯುವಿಣುಕುತ್ತಿರುವ ಜೀವನ ಶಿಲುಬೆಯದಲ್ಲಿ ಅವರು ಸಿಕ್ಕಿದಂತಿದ್ದಾರೆ. ಏನಾದರೂ ದುರ್ಘಟನೆಯೊದಗಿದಲ್ಲಿ ಅದನ್ನಿದಿರಿಸುವ ಶಕ್ತಿ ಅವರಲ್ಲಿ ಉಳಿದಿಲ್ಲ. ದೊಡ್ಡ ಸಂಖ್ಯೆಯಲ್ಲಿ ಸತ್ತು ಬೀಳುವದೊಂದೇ ರೈತರ ಪಾಲಿಗುಳಿದಿದೆ. ಎರಡು ವರುಷಗಳಿಗೆ ಮೊದಲು ಕೆಲವೇ ತಿಂಗಳುಗಳೊಳಗೆ ಮೂರೂವರೆಮಿಲಿಯ ಮಂದಿ ಬಂಗಾಳದಲ್ಲಿ ಆಹಾರಾಭಾವದಿಂದ ಸತ್ತರು.

ಸೌಮ್ಯವಾಗಿ ಸಾವಿಗೊಳಗಾಗದೆ ಇದಿರಿಸಬೇಕು

—ನೆಹರು.

ಹಲವರ ಹೆಣದಿಂದ ಕೆಲವರಿಗೆ ಹಣವೆ?

ನಾವು ಸಾಯಬೇಕಾಗಿ ಬಂದರೆ ಮನುಷ್ಯರಂತೆ ಸಾಯೋಣ; ಬಿಲದೊಳಗಿನ ಇಲಿಗಳಂತೆ ಮರಣ ಹೊಂದುವದು ಬೇಡ. ಬಂಗಾಳದಂತೆ ಈ ದುರ್ಘಟನೆಯು ಕೆಲವರಿಗೆ ಅಭಿವೃದ್ಧಿದಾಯಿಯಾಗಿರುವಾಗ ನಾವೆಂದಿಗೂ ಸಾಮೂಹಿಕ ಉಪವಾಸ ಅಥವಾ ಮರಣಕ್ಕೊಳಗಾಗಲೊಪ್ಪಲಾರೆವು. ಜನಸಮೂಹವು ಹಸಿವು ಪೀಡೆಯಿಂದ ನರಳುತ್ತಿರುವಕಾಲದಲ್ಲೇ ಕೆಲವರು ಫಲಾಹಾರ, ಪಂದ್ಯ ಮತ್ತು ತಮ್ಮೆಲ್ಲಾ ವಿಲಾಸಗಳಿಂದ ಮೆರೆದಾಡುವದನ್ನು ನಾನೊಪ್ಪಲಾರೆ. ಅಗ್ರಸ್ಥಾನಗಳಲ್ಲಿರುವ ಅಧಿಕಾರಿಗಳ ಅಸಾಮರ್ಥ್ಯ ಹಾಗೂ ದಿವಾಳಿಖೋರತನಕ್ಕೂ, ಲಾಭ ಖೋರರ ಮತ್ತು ಕಳ್ಳ ಸಂತೆಯವರ ದುಸ್ವಾರ್ಥಕ್ಕೂ ನಾವೆಂದಿಗೂ ಒಳಗಾಗಬಾರದು. ನಮ್ಮ ಹತೋಟಿಗೆ ಮೀರಿದ ಪರಿಸ್ಥಿತಿಯಿಂದೆದ್ದ ದೊಡ್ಡ ಹೊರೆಯನ್ನು ನಾವು ಹೊರಬೇಕಾಗಿ ಬಂದರೆ ಅದನ್ನು ಎಲ್ಲರೂ ಸಮಾನವಾಗಿ ಹೊರಬೇಕು. ಮತ್ತು ಈ ಅವ್ಯವಸ್ಥೆಯಾನೆ ಅದಕ್ಕಿಂತಲೂ ಕಳತೆಗೆ ಹೊಣೆಗಾರನಾದ ಸರಕಾರವು ಹೋಗಬೇಕು.

ಪುನಃ ಅದೇ ಸ್ಮರಣೆ

ಹಸಿವು ಪೀಡಿತ, ಹರಕು ವಸ್ತ್ರಾಚ್ಛಾದಿತ, ಬಡಕಲು, ಎಲುಬು ಗೂಡುಗಳಂತಿರುವ ಆ ಹಳ್ಳಿಗರ ನೆನಪು ಬಂದಾಗಲೆಲ್ಲಾ ನನ್ನ ಹೃದಯ ಬಿರಿಯುತ್ತಿದೆ. ಬಂಗಾಳದಲ್ಲಿ ರಸ್ತೆಗಳೆಲ್ಲಾ ಹಸಿವುಪೀಡಿತ ದುರ್ಮರಣಗಳ ಶವಗಳಿಂದ ತುಂಬಿದ್ದಾಗ ಬ್ರಿಟಿಷರು ಮತ್ತು ಕೆಲವು ಹಿಂದೀಯರು ದೊಡ್ಡ ಹೊಟೆಲುಗಳಲ್ಲಿ ಔತಣ ಮತ್ತು ನರ್ತನ ಮಗ್ನರಾಗಿದ್ದರು. ಧಾನ್ಯಗಳನ್ನೊಯ್ಯಲು ರೈಲು ಗಾಡಿಗಳಿರಲಿಲ್ಲ. ಆದರೆ ಅದೇ ಕಾಲದಲ್ಲಿ ಪಂದ್ಯದ ಕುದುರೆಗಳು ಕಲ್ಕತ್ತಾ ಮತ್ತಿತರ ಕಡೆಗಳಿಗೆ ಸ್ಪೆಶಲ್ ಬಂಡಿಗಳಲ್ಲಿ ಸಾಗುತಿದ್ದುವು! ಅದೊಂದು ಅಲ್ಪಾವಧಿಯಲ್ಲಿ ನಮ್ಮ ೩೦ ಲಕ್ಷ ದೇಶಬಾಂಧವರು ಹೇಗೆ ಮಡಿದಿದ್ದರೆಂಬುದನ್ನು ಸ್ಮರಿಸಿಕೊಳ್ಳಿ. ಈ ದಿನ ಬರಗಾಲದ ಅಪಾಯವು ಇಡೀ ರಾಷ್ಟ್ರವನ್ನೇ ಇದಿರಿಸಿದೆ. ಆದರೆ ದೇಶದಲ್ಲಿ ಮಿಲಿಯಾವಧಿ ಹಸಿವು ಪೀಡಿತರು ಸಾಯುತ್ತಿರುವಾಗ ಸತ್ಕಾರ ಕೂಟ ಮತ್ತು ನರ್ತನ ಕೂಟಗಳು ನಡೆಯುವದನ್ನು ಈ ಬಾರಿ ನಾವು ಸಹಿಸುವಂತಿಲ್ಲ. ಹಸಿವಿನಿಂದ ಜನರು ಸಾಯುತ್ತಾರಾದರೆ ಅವರ ಮರಣಗಳಿಗೆ ತಕ್ಕ ಪ್ರತೀಕಾರವಿದ್ದೇ ಇದೆ”.

ವಿದೇಶಗಳಿಗೆ ತೆರಳಿದ ‘ಆಹಾರ ಸಮಿತಿ’ಯನ್ನು ಸೇರಿಕೊಳ್ಳಲು ಕಾಂಗ್ರೆಸ್ ಒಪ್ಪದಿದ್ದುದರ ಕಾರಣ ಕೊಡುತ್ತಾ ಪಂಡಿತ ನೆಹರುಗಳಂದಿದ್ದಾರೆ “ಸರ್. ಜೆ. ಪಿ. ಶ್ರೀವಾಸ್ತವರಂತಹ ತೀರಾ ನಿಸ್ಪ್ರಯೋಜಕನ—ತನ್ನ ಕೃತ್ಯಗಳಿಂದ ದೇಶಕ್ಕೆ ಅವಮಾನವನ್ನೇ ಮಾಡಿದ ಮನುಷ್ಯನ—ನಾಯಕತ್ವದಲ್ಲಿರುವ ಒಂದು ಸಮಿತಿಯನ್ನು ಕಾಂಗ್ರೆಸ್ ಸೇರುವದೆಂದರೆ ಹೇಗೆ?”

UNITED

WE — Offer free SERVICE IN INSURANCE
Give full SECURITY FOR YOUR MONEY
Guarantee PROMPT SETTLEMENT OF CLAIMS.

RAO BAHADUR
B S. Sawkar, B. A., LL. B.
Chairman

A. S. Kini.
Managing Director.

THE UNITED KARNATAKA INSURANCE CO., LTD.

H. O **DHARWAR.** ESTD 1929.

Insure with or Represent us.

For particulars apply
ORGANISING OFFICE COURT ROAD, **UDIPI.**

M N Bhandary & Co., *Sp. Agents,* Kodialbail, Mangalore.

★ ಗಡಿನಾಡಿನಲ್ಲಿ ಕಾಂಗ್ರೆಸ್ ವಿಜಯ! ★

ಪಾಕಿಸ್ತಾನದ ಪ್ರಶ್ನೆಯೇ ಪ್ರಾಮುಖ್ಯವಾಗಿರುವ ಈ ಬಾರಿಯ ಚುನಾವಣೆಯಲ್ಲಿ ಗಡಿನಾಡಿನ ಫಲಿತಾಂಶದ ಕಡೆಗೆ ಸಹಜವಾಗಿ ಎಲ್ಲರ ದೃಷ್ಟಿ ಬಿದ್ದಿತ್ತು. ಹಿಮಾಲಯದೊತ್ತಿನಲ್ಲಿರುವ ಗಡಿನಾಡು ಪ್ರಾಂತ್ಯವು ಭಾರತದ ರಕ್ಷಣಾ ನಿಲ್ದಾಣವೆನ್ನಬೇಕು; ಅಲ್ಲಿಯ ಕೈಬರ್ ಕಣಿವೆಯ ಸುತ್ತುವಲಯಗಳಲ್ಲಿ ದೀರ್ಘ ಕಾಲದ ಹೋರಾಟಗಳ ಪರಿಣಾಮವಾಗಿ ಮಣ್ಣು ಪಾಲಾಗಿದ್ದ ಕಾಡುನಿವಾಸಿಗಳ ಹಾಗೂ ಬ್ರಿಟಿಷ್ ಸೋಲ್ಜರರ ಎಲುಬುಗಳನ್ನು ಈಗಲೂ ಕಾಣಬಹುದು. ನಿಬಿಡ ಗುಡ್ಡಾರಣ್ಯಗಳು ಮತ್ತು ಬಿಗು ಧೀರೋದಾತ್ತ ಸ್ವಭಾವದ ಜನರಿಂದ ತುಂಬಿರುವ ಆ ಪ್ರಾಂತ್ಯವು ಭಾರತದ ಸ್ನಾಯುಬಲ ಪೂರಿತ ಬಲಭುಜದಂತಿದೆ.

ಗಡಿನಾಡಿನ ವೈಶಿಷ್ಟ್ಯ

ಗಡಿನಾಡು ಫಲಸಮೃದ್ಧಿಯಿರುವ ಪ್ರಾಂತ್ಯ; ಪ್ರತಿಯೊಬ್ಬನೂ ಎರಡೂಟವುಣ್ಣುವ ಪ್ರಾಂತ್ಯವೆಂಬ ಹೆಸರನ್ನು ಈಗಲೂ ಉಳಿಸಿಕೊಂಡಿದೆ. ಇಲ್ಲಿಯ ಜನಸಂಖ್ಯೆ ಸುಮಾರು 30 ಲಕ್ಷ ಮಾತ್ರ (1943ರಲ್ಲಿ ಬಂಗಾಳದಲ್ಲಿ ಅನ್ನಾಭಾವದಿಂದ ಸತ್ತವರಿಗಿಂತ (35 ಲಕ್ಷ)ಲೂ ನಾಲ್ಕೈದು ಲಕ್ಷ ಕಡಿಮೆ!) ಆದರೆ ಶಕ್ತಿ ಸಾಹಸಗಳಲ್ಲಿ ಓರ್ವ ಗಡಿನಾಡಿನವ ಐದು ಮಂದಿ ಮದ್ರಾಸಿಗರಿಗೆ ಸಮಾನ. ಎಲ್ಲರೂ ಗಟ್ಟಿಮುಟ್ಟಾದ ಆಳುಗಳು; ಧೀರೋದಾತ್ತ ಪ್ರಕೃತಿಯವರು. ಪೇಶಾವರವು ಅದರ ರಾಜಧಾನಿ. ಸುಮಾರು 70 ವರುಷಗಳ ಹಿಂದಿನ ವರೆಗೂ ಅಲ್ಲೆಲ್ಲಾ ಕಾಡು ನಿವಾಸಿಗಳ ಪದ್ಧತಿಯ ಸಮತಾವಾದವೇ ಜಾರಿಯಲ್ಲಿತ್ತು. ಅವರು ಸಾಮೂಹಿಕವಾಗಿ ಆಸ್ತಿಪಾಸ್ತಿಗಳನ್ನು ಅನುಭವಿಸುತಿದ್ದರು, ಈಗ ಖಾನ್ ಗಫರ್ ಖಾನರ ಕೆಂಪಂಗೀ ದಳದ ಘೋಷಣೆಯಾದರೂ ಸುಧಾರಿತ ರೀತಿಯ ಸಮಾನತ್ವವೇ. ಅಲ್ಲೀಗ ಜಮೀನ್ದಾರರಿದ್ದಾರಾದರೂ ಜನರು ಅವರನ್ನು ಪೂರ್ವಾಗ್ರಹದಿಂದ ಭಾವಿಸಿದ್ದಾರೆ.

ಖಾನ್ ಸಹೋದರರು

1920ರಿಂದ ಇದು ವರೆಗೂ ಗಡಿನಾಡಿನ ಅನಭಿಷಿಕ್ತ ರಾಜನಾಗಿ ಜನತೆಯನ್ನು ಅಂಕಿತದಲ್ಲಿಟ್ಟುಕೊಂಡಿರುವವರೆಂದರೆ ಗಡಿನಾಡಿನ ಗಾಂಧಿಯೆಂದು ಹೆಸರಾದ ಖಾನ್ ಅಬ್ದುಲ್ ಗಫರ್ ಖಾನರು. ಸಿಂಹಸದೃಶರಾದ ಅಲ್ಲಿಯ ದರಗು ಪಠಾಣರನ್ನು ಅಹಿಂಸಾವಾದಿಗಳನ್ನಾಗಿ—ಸುಸಂಸ್ಕೃತರನ್ನಾಗಿ ಮಾರ್ಪಡಿಸಿದ ಕೀರ್ತಿ ಈ ಮನುಷ್ಯನಿಗೆ ಸಲ್ಲಬೇಕು. ದೇಶಸ್ವಾತಂತ್ರ್ಯ—ಬಡಜನಸೇವೆ—ಜಾತೀಯ ಐಕ್ಯ—ಸತ್ಯ—ಅಹಿಂಸೆ, ಇವುಗಳನ್ನೇ ತನ್ನ ಪ್ರಾಣದುಸಿರಾಗಿ ಇಟ್ಟುಕೊಂಡ ದ್ವಿತೀಯ ಮಹಾತ್ಮರಿವರು. ಜಮೀನ್ದಾರ ಕುಲದಲ್ಲಿ ಹುಟ್ಟಿದವರಾದರೂ ವೇಷ ಭೂಷಣಗಳಲ್ಲಿ ಸಾಮಾನ್ಯ ರೈತನಂತಿದ್ದಾರೆ. ಹಗಲಿರುಳು ಜನತೆಗಾಗಿ ದುಡಿಯುತ್ತಾರೆ. ದೀರ್ಘಕಾಯ ಶಾಂತ ಪ್ರಸನ್ನ ವದನದ ಗಫರ್ ಖಾನರ ದರ್ಶನದಲ್ಲೇ ಅಜೇಯ ಆಕರ್ಷಣೆಯೊಂದಿದೆ ಎಂದು ವಿದೇಶೀ ಸಂದರ್ಶಕರೆಂದಿದ್ದಾರೆ. ತಾನೇ ಕಟ್ಟಿಕೊಂಡ ಮಣ್ಣುಗುಡಿಸಲೊಂದನ್ನು ತನ್ನ ಕಾರ್ಯಾಲಯವಾಗಿ ಮಾಡಿಕೊಂಡಿದ್ದಾರೆ. ಅವರ ಸಂಸ್ಥೆಯಾದ 'ಕೆಂಪಂಗೀ ದಳ'ವೇ ಎಲ್ಲಾ ವಿಷಯಗಳಲ್ಲೂ ಗಡಿನಾಡಿನ ಮೂಲಬಲ. ಖಾನ್ ಅಬ್ದುಲ್ ಗಫರ್ ಖಾನರ ತಮ್ಮ ಡಾ। ಖಾನ್ ಸಾಹೇಬರು ಗಡಿನಾಡಿನ ಎಸೆಂಬ್ಲಿ ಕಾಂಗ್ರೆಸ್ ನಾಯಕ. ಹಿಂದಿನ ಬಾರಿ ಕಾಂಗ್ರೆಸ್ ಪ್ರಧಾನಿಯಾಗಿದ್ದವರು ಯುದ್ಧಾವಧಿಯಲ್ಲಿ ಕಾಂಗ್ರೆಸ್ ರಾಜಿಕೊಟ್ಟ ಮೇಲೆ ಅಧಿಕಾರಕ್ಕೆ ಬಂದು ದಿವಾಳಿಯೋರತನದ ಕೀರ್ತಿ ಪಡೆದಿದ್ದ ಮುಸ್ಲಿಂ ಲೀಗ್ ಮಂತ್ರಿಮಂಡಲವನ್ನು ಉರುಳಿಸಿ ಮೊನ್ನೆಯವರೆಗೂ ಅಧಿಕಾರ ನಿರ್ವಹಿಸಿದವರು.

ಗಡಿನಾಡಿನ ಕಾಂಗ್ರೆಸ್ ಪಕ್ಷದ ನಾಯಕ ಡಾ। ಖಾನ್ ಸಾಹೇಬ್ (ಕನ್ನಡಕದವರು), ಪಾರ್ಲಿಮೆಂಟರಿ ಶಿಷ್ಟಮಂಡಲಿಯೊಡನೆ ಸಂಭಾಷಿಸುತ್ತಿದ್ದಾರೆ. ಮಧ್ಯದಲ್ಲಿರುವವರು ಮಂಡಲಿಯ ನಾಯಕ ಮಿ. ನಿಕೋಲ್‌ಸನ್.

ಕಾಂಗ್ರೆಸ್—ಲೀಗ್ ಸ್ಪರ್ಧೆ

ಮಿ. ಜಿನ್ನರ ಪಾಕಿಸ್ತಾನದಲ್ಲಿ ಗಡಿನಾಡಿಗೆ ಅಗ್ರಸ್ಥಾನವಿದೆ. ಅಲ್ಲಿಯ ಜನರಲ್ಲಿ ನೇಕಡಾ 92 ಮಂದಿ ಮುಸಲ್ಮಾನರು. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಮುಸಲ್ಮಾನರಿರುವ ಪ್ರಾಂತ್ಯ ಬೇರಿಲ್ಲ. ಮೇಲಾಗಿ ಅದು ಹಿಂದುಸ್ಥಾನದ ರಕ್ಷಣಾಕೋಟೆಯಂತಿರುವ ಪ್ರಾಂತ್ಯ ಇಲ್ಲಿಯವರಿಗೇನೇ ಪಾಕಿಸ್ತಾನ ಬೇಡವೆಂದಾದರೆ ಮತ್ತಾರು ಬೆಲೆ ಕೊಟ್ಟರೂ ಅದು ಬೆಲೆ ಬಾಳುವಂತಿಲ್ಲ. ಆದ್ದರಿಂದ ಈ ಬಾರಿಯ ಚುನಾವಣೆಯಲ್ಲಿ ಲೀಗ್ ವಿಜಯ ಸಾಧಿಸಬೇಕೆಂದು ಶತಪ್ರಯತ್ನ ಮಾಡಿದ್ದಿತು. ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿದ್ದ ಮಿ. ಅಬ್ದುಲ್ ಕ್ವಯುಮ್ ಅವರಾದರೇ ಮುಸ್ಲಿಂ ಲೀಗಿಗೆ ಸೇರಿ ಗಡಿನಾಡಿನಲ್ಲಿ ಮಹಾ ರಂಪಾಟವೆಬ್ಬಿಸಿದ್ದರು. ಮಿ. ಜಿನ್ನರು ಸ್ವತಃ ಪೇಶಾವರಕ್ಕೆ ಹೋಗಿ ಅಲ್ಲಿಯ ಮುಸಲ್ಮಾನರ ಜಾತ್ಯಭಿಮಾನವನ್ನು ಕೆರಳಿಸುವ ಪ್ರಚಾರಮಾಡಿ ಬಂದಿದ್ದರು. ಗಡಿನಾಡೊಂದು ಮತಾಂತರಗೊಂಡರೆ ತಮ್ಮ ಪಾಕಿಸ್ತಾನ್ ಬೇಡಿಕೆ ಮುಕ್ಕಾಲಂಶ ಸತ್ಯವನ್ನಿಸುವದೆಂದು ಲೀಗ್ ಪ್ರಮುಖರಿಗೆ ತಿಳಿದಿತ್ತು.

ಕಾಂಗ್ರೆಸ್ ವಿಜಯ

ಆದರೆ ಕೇಂದ್ರ ಎಸೆಂಬ್ಲಿ ಸ್ಥಾನದಲ್ಲಿ ಕಾಂಗ್ರೆಸನ್ನು ಸ್ಪರ್ಧಿಸುವ ಸಾಹಸಕ್ಕೂ ಲೀಗು ಹೋಗಿರಲಿಲ್ಲ. ಈ ಬಾರಿ ಅಲ್ಲಿಯ ಪ್ರಾಂತಿಕ ಎಸೆಂಬ್ಲಿ ಚುನಾವಣೆ ನಡೆದಿದೆ. ಫಲಿತಾಂಶವು ಲೀಗಿನ ದುರಾಶೆಗೆ ಸಮಾಧಿಯಿತ್ತಿದೆ. ಅಲ್ಲಿಯ 50 ಸ್ಥಾನಗಳಲ್ಲಿ 29ನ್ನು ಕಾಂಗ್ರೆಸ್ ಇಷ್ಟರಲ್ಲೇ ಗೆದ್ದಿರುವಾಗ ಲೀಗ್ ಸಂಪಾದಿಸಿದುದು 15 ಸ್ಥಾನಗಳನ್ನು ಮಾತ್ರ. ಎರಡು ಸ್ಥಾನಗಳು ರಾಷ್ಟ್ರೀಯ ಮುಸಲ್ಮಾನರಿಗೂ ಒಂದು ಅಕಾಲಿಗಳಿಗೂ ಹೋಗಿವೆ. 36 ಮುಸಲ್ಮಾನ್ 9 ಸಾಮಾನ್ಯ (ಹಿಂದೂ) 3 ಸಿಖ್, 2 ಜಮೀನ್ದಾರ್—ಹೀಗೆ ಗಡಿನಾಡು ಎಸೆಂಬ್ಲಿಯ 50 ಸ್ಥಾನಗಳು ಹಂಚಲ್ಪಟ್ಟಿವೆ. ಆ ಪೈಕಿ ಹಿಂದುಗಳ 9 ಸ್ಥಾನಗಳೂ ಕಾಂಗ್ರೆಸಿಗೆ ದೊರೆತಿವೆ. 4 ಸ್ಥಾನಗಳ ಫಲಿತಾಂಶ ಇದು ವರೆಗೆ ಪ್ರಕಟವಾಗಿಲ್ಲ. 1 ಸಿಖ್ ಸ್ಥಾನ ಮತ್ತು 18 ಮುಸ್ಲಿಂ ಸ್ಥಾನಗಳು ಕಾಂಗ್ರೆಸಿಗೆ ದೊರೆತು, ಆದಿಷ್ಟರಲ್ಲೇ 29 ಮಂದಿ ಸದಸ್ಯರುಳ್ಳ ಪ್ರಬಲ ಪಕ್ಷವಾಗಿದೆ. ಇಬ್ಬರು ರಾಷ್ಟ್ರೀಯ ಮುಸಲ್ಮಾನರೂ ಕಾಂಗ್ರೆಸಿನ ಹಿಂಬಾಲಕರು. ಎರಡು ಜಮೀನ್ದಾರ್ ಸ್ಥಾನಗಳ ಸಮೇತ ಮುಸ್ಲಿಂ ಲೀಗ್ 15 ಮುಸ್ಲಿಂ ಸ್ಥಾನಗಳನ್ನು ಸಂಪಾದಿಸಿದೆ. "ಗಡಿನಾಡು ಪ್ರಾಂತ್ಯವು ಸದ್ಯದ ಚುನಾವಣೆಯ ಮೂಲಕ ಮುಸ್ಲಿಂ ಲೀಗ್ ಮತ್ತು ಪಾಕಿಸ್ತಾನದ ವಿರುದ್ಧ ತೀರ್ಮಾನ ಕೊಟ್ಟಿತು" ಎಂದು ಪೇಶಾವರ ಕಾಂಗ್ರೆಸ್ ಅಧ್ಯಕ್ಷ ಹಕೀಮ್ ಅಬ್ದುಲ್ ಜಲೀಲ್ ನದ್ವಿ ಅಂದಿದ್ದಾರೆ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿದ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.

'ಅಂತರಂಗ' ವಾರಪತ್ರಿಕೆಯನ್ನು ವಿಕ್ರಯಿಸಲು ಅಲ್ಲಲ್ಲಿ ನ್ಯೂಸ್ ಏಜಂಟರು ಬೇಕು.

ಶರ್ತಗಳಿಗೆ ಬರೆಯಿರಿ—
'ಅಂತರಂಗ', ಉಡುಪಿ.

ಬರಗಾಲ ನಿವಾರಣೆಗೆ ನೆರವಾಗಿರಿ!

ಲೋರ್ಡ್ ವೇವೆಲರ ಆಗ್ರಹದ ವಿನಂತಿ.

ಇದೇ ತಾ. 16ನೇ ರಾತ್ರಿ ನವದಿಲ್ಲಿಯಿಂದ ವೈಸರಾಯೀ ವೇವೆಲರು ಇಡೀ ರಾಷ್ಟ್ರಕ್ಕಿತ್ತ ಆಕಾಶವಾಣಿ ಭಾಷಣದ ಸಾರಾಂಶ:—

ಅತ್ಯಂತ ವಿಷಮ ಸ್ಥಿತಿ!

"ಭಾರತವಿಂದು ಅತ್ಯಂತ ಭೀಕರವಾದ ಆಹಾರಾಭಾವಕ್ಕೆ ಈಡಾಗಿದೆ. ಕಳೆದ ಒಕ್ಟೋಬರಿನ ಬಿರುಗಾಳಿಯಿಂದ ಬೆಳೆಗಳಿಗಾದ ಭೀಕರ ಅನಾಹುತ, ಮಳೆಯ ಅಭಾವ ಮತ್ತು ಬೆಳೆ ಹಾಳಾದುದೇ ಮುಖ್ಯ ಕಾರಣಗಳು. ಆಹಾರ ಧಾನ್ಯಗಳು ರಫ್ತಾದುದೇ ಈ ತೊಂದರೆಗೆ ಕಾರಣವೆಂಬ ಗಾಳಿ ಸುದ್ದಿಗಳನ್ನು ನಾನು ಕಂಠೋಕ್ತವಾಗಿ ಅಲ್ಲಗಳೆಯುತ್ತೇನೆ. ನಾವು ಇಲ್ಲಿಗೆ ಕೊಡಲಾಗದ ಅಥವಾ ಸುಲಭದಲ್ಲಿ ಉಪಯೋಗಿಸಲಾಗದ ಬೇರೆ ಕೆಲವಂಶ ದವಸಗಳು ಮಾತ್ರವೇ ಹೊರಗಿನವರಿಗೆ ಅತ್ಯಾವಶ್ಯವಿದ್ದುದರಿಂದ ರಫ್ತಾಗಿದ್ದುವು.

೩ ಮಿಲಿಯ ಟನ್ನಿನ ಕೊರತೆ

ಈಗ ನಮ್ಮ ಆವಶ್ಯಕತೆಗಿಂತ ಸುಮಾರು ೩ ಮಿಲಿಯ ಟನ್ ಧಾನ್ಯ ಕಡಿಮೆ ಬಿದ್ದಿದೆ. ಇಡೀ ಪ್ರಪಂಚದಲ್ಲೇ ಇರುವ ಆಹಾರಾಭಾವದಿಂದಾಗಿ ಇಷ್ಟು ದೊಡ್ಡ ಸಹಾಯವು ಹೊರಗಿನಿಂದ ಬರುವ ಆಶೆ ಇಲ್ಲ. ಲಂಡನ್ ಮತ್ತು ವಾಸಿಂಗ್ಟನ್‌ಗಳಿಂದ ಸಹಾಯ ಪಡೆಯಲು ನಾವೊಂದು ಸಮಿತಿಯನ್ನು ಕಳುಹಿಸಿಕೊಟ್ಟಿದ್ದೇವೆ. ಹೊರಗಿನ ಸಹಾಯ ಪಡೆಯಲು ನಾವು ಬಾಧ್ಯರೇ ಇದ್ದೇವೆ; ಮತ್ತು ಪ್ರಯತ್ನದಲ್ಲಿ ಏನನ್ನೂ ಬಾಕಿ ಇಡುವುದಿಲ್ಲ. ಆದರೆ ಲೋಕವೇ ಅಭಾವಕ್ಕೀಡಾಗಿರುವದು ವಸ್ತುತಃ ಸತ್ಯ. ಬರಗಾಲಕ್ಕೊಳಗಾಗಿರುವ ದೇಶ ನಮ್ಮದೊಂದೇ ಅಲ್ಲ. ಅದ್ದರಿಂದ ನಮಗೆ ಹೊರಗಿನಿಂದ ಬರುವ ಸಹಾಯಕ್ಕೊಂದು ಮಿತಿಯಿದೆ. ನಾವೇ ನಮ್ಮನ್ನು ರಕ್ಷಿಸಿಕೊಳ್ಳುವ ಪರಮಾವಧಿ ಪ್ರಯತ್ನ ಮಾಡಬೇಕಾಗಿದೆ.

ದಕ್ಷಿಣ ಭಾರತದಲ್ಲಿ ಅಭಾವ.

ದಕ್ಷಿಣ ಹಿಂದುಸ್ಥಾನದ ಹಲವು ಬರಗಾಲ ಪೀಡಿತ ಸ್ಥಳಗಳನ್ನು ನಾನು ಇತ್ತೀಚಗೆ ಸಂದರ್ಶಿಸಿದುದನ್ನು ನೀವು ಬಲ್ಲಿರಿ. ಅಲ್ಲಿಯ ವಿಶಾಲ ಸ್ಥಳಗಳು ಬೆಳೆಯೇ ಆಗದೆ ಬಂಜರು ಬಿದ್ದಿವೆ; ಇನ್ನು ದೀರ್ಘಾವಧಿಯ ವರೆಗೆ ಆಗುವ ಸಂಭವ ಕೂಡಾ ಇಲ್ಲ. ಅಲ್ಲಿಯ ಜನರಿಗೆ ಧಾನ್ಯ ಬಾರದೆ ಹೋದರೆ ಉಪವಾಸ ಬೀಳುವದೇ ಸರಿ. ವಿಶೇಷ ಕಷ್ಟಕ್ಕೊಳಗಾಗುವವರೆಂದರೆ ದುರ್ಬಲರು ಮತ್ತು ಬಡವರೇ. ನಾವವರನ್ನು ರಕ್ಷಿಸಬಲ್ಲೆವು, ಮತ್ತು ರಕ್ಷಿಸಬೇಕು. ಅದಕ್ಕಾಗಿ ಹಿಂದುಸ್ಥಾನದ ವಿಶೇಷ ಸುದೈವೀ ಭಾಗಗಳ ಹೆಚ್ಚಿನ ಅನುಕೂಲವಂತರು ಸ್ವಲ್ಪ ತ್ಯಾಗ ಮಾಡಬೇಕು; ತಮ್ಮ ಅನುಕೂಲತೆ ಮತ್ತು ಆಹಾರದ ಒಂದಂಶವನ್ನು ಅವರಿಗಾಗಿ ಬಿಡಬೇಕು. ದುರ್ದೈವವಶಾತ್ ಇಂತಹ ಬಿಕ್ಕಟ್ಟಿನ ವೇಳೆ ತ್ಯಾಗದ ಭಾಗವನ್ನು ಅನುಕೂಲತೆಗೆ ತಕ್ಕಂತೆ ಹಂಚಿ ಹಾಕಲು ಸಾಧ್ಯವಿಲ್ಲ. ಒಬ್ಬನಿಗಿಂತ ಹತ್ತು ಪಾಲು ಶ್ರೀಮಂತನಾಗಿರುವ ಮತ್ತೊಬ್ಬನು ತನ್ನ ಆಹಾರದಲ್ಲಿ ಹತ್ತು ಪಾಲು ಕಡಿತ ಮಾಡಿಕೊಳ್ಳಬೇಕೆಂದರಾಗದು. ಆದರೆ ಬೇರೆ ವಿಧಾನಗಳಿಂದ ಆತನು ಸಹಾಯ ಮಾಡಬಹುದು.

ಅನನ್ಯ ಉಪಾಯ

ಇಂದಿನ ಆಹಾರ ಬಿಕ್ಕಟ್ಟಿನಲ್ಲಿ ಎರಡು ಹಾದಿಗಳಿದ್ದುವು ದೇವರಸಾಕ್ಷಿಯಾಗಿ ಸ್ವತಃ ಕಡಿಮೆಯನ್ನಿಸಿದ್ದ ಮೊದಲಿನ ಒಂದು ಪೌಂಡು ಹಸುಗೆಯನ್ನೇ ದಾಸ್ತಾನೆಲ್ಲಾ ಮುಗಿಯುವ ವರೆಗೂ ಜ್ಯಾರಿಯಲ್ಲಿಡುವದು; ಆ ಮೇಲೆ ಹೊರಗಿನ ಸಹಾಯವನ್ನು ನಿರೀಕ್ಷಿಸುವದು; ಇದೊಂದು ಹಾದಿ. ಇಂತಹ ಹಂಚಿಕೆಯು ಮಹಾ ಅನಾಹುತಕಾರಿಯೆಂಬುದು ನಿಸ್ಸಂದೇಹ. ಮತ್ತೊಂದು ಹಾದಿಯೆಂದರೆ ನಮ್ಮ ವೆಚ್ಚದ [illegible]ಗವನ್ನು ಈಗಲೇ ಕಡಿದುಕೊಂಡು ಅಭಾವದ ಅಂಶವು ಇಡೀ ವರುಷ ಮತ್ತು ಇಡೀ ದೇಶದಲ್ಲಿ ಹಂಚಿ ಬೀಳುವಂತೆ ಮಾಡುವದು.

ಈ ಪೈಕಿ ನಿಸ್ಸಂದೇಹವಾಗಿ ಸಮಂಜಸವಾದ ಎರಡನೇ ಹಾದಿಯನ್ನೇ ನಾವು ಅಂಗೀಕರಿಸಿದ್ದೇವೆ. ಅದಕ್ಕನುಗುಣವಾಗಿ ರೇಶನಿನಲ್ಲಿ 1 ಔನ್ಸಿನ ಕಡಿತವನ್ನು ಜ್ಯಾರಿಗೆ ತಂದಿದ್ದೇವೆ. ಇದು ಸಾಕಾಗದ ಪರಿಮಾಣವೆಂಬುದನ್ನು ನಾನು ಪೂರ್ತಿ ಒಪ್ಪುತ್ತೇನೆ. ಆದರೆ ನಮ್ಮ ಸದ್ಯದ ಸಂಗ್ರಹದಲ್ಲಿ ಸಾಧ್ಯವಿರುವದಿಷ್ಟೇ. ಹೆಚ್ಚಿನ ದಾಸ್ತಾನು ದೊರೆತರೆ ನಾವಿದನ್ನು ಖಂಡಿತವಾಗಿಯೂ ಹೆಚ್ಚಿಸುವೆವು.

ನಿವಾರಣೋಪಾಯಗಳು

ಹಸುಗೆಯನ್ನು ವಿಸ್ತರಿಸುವದು-ಇಡೀ ದೇಶದ ಉಳಿತಾಯಾಂಶಗಳನ್ನೆಲ್ಲಾ ಸಂಗ್ರಹಿಸುವದು-ಅಭಾವವುಳ್ಳ ಕಡೆಗಳಿಗೆ ವಿತರಣೆ, ಇವು ಆಹಾರಾಡಳಿತೆಯ ಮುಖ್ಯ ಸೂತ್ರಗಳು. ಅಂತೆಯೇ ಅತಿದೊಡ್ಡ ಅಪಾಯಗಳೆಂದರೆ, ಕಳ್ಳದಾಸ್ತಾನು, ಕಾಳಸಂತೆ ಮತ್ತು ದುಂದು ವೆಚ್ಚ ಮಾಡಿ ತಮ್ಮ ಹಕ್ಕಿಗಿಂತ ಹೆಚ್ಚಿನದನ್ನು ಪಡೆಯಲಿಚ್ಛಿಸುವ ಮತ್ಸರಿ, ಸ್ವಾರ್ಥಿ ಜನರು; ಎರಡನೆಯದಾಗಿ ಗಾಳಿ ಸುದ್ದಿಗಳನ್ನು ಹುಟ್ಟಿಸಿ ಜನತಾವಿಶ್ವಾಸವನ್ನು ಕೆಡಿಸಿ, ಕಾಳವ್ಯಾಪಾರಕ್ಕನುಕೂಲಮಾಡಿ ಕೊಡುವ ಎದೆಗೇಡುಕರು; ಮೂರನೆಯದಾಗಿ ತಮಗೆ ಬೇಕಾದಷ್ಟಿದ್ದು ಅನ್ಯರ ಹಿತ ನೋಡಲರಿಯದ ಸೋಮಾರಿಗಳು. ನಮ್ಮಲ್ಲಿ ಪ್ರತಿಯೊಬ್ಬರೂ ತಂತಮ್ಮ ಕರ್ತವ್ಯ ಪಾಲಿಸಬೇಕು. ಪ್ರತಿಯೊಬ್ಬ ವರ್ಗದಾರ ಮತ್ತು ರೈತನು ತನ್ನ ವೆಚ್ಚವನ್ನು ತಗ್ಗಿಸಿಕೊಂಡು ಉಳಿತಾಯವನ್ನು ಸರ್ಕಾರಿಗೊಪ್ಪಿಸುವನೆಂದು ನಾನು ಆಶಿಸುತ್ತೇನೆ. ಪ್ರತಿಯೊಬ್ಬನೂ ಸಾಧ್ಯವಿದ್ದಷ್ಟು ಬಟಾಟೆ, ಗೆಣಸು ಕಾಯಿಪಲ್ಯಗಳನ್ನು ಬೆಳಸುವನೆಂದು ನಂಬುತ್ತೇನೆ. ಶ್ರೀಮಂತ ವರ್ಗವಂತೂ ತಮ್ಮೆಲ್ಲಾ ಆಹಾರವ್ಯಯವನ್ನು ಕೊನೆಯಂಶದ ವರೆಗೂ ತಗ್ಗಿಸಿಕೊಳ್ಳಬೇಕೆಂದು ನನ್ನ ಬಲವಾದ ವಿನಂತಿಯಿದೆ. ಧನಿಕರು ಮಾಂಸ, ಮೀನು, ಕಾಯಿಪಲ್ಯ, ಹಣ್ಣು ಹಂಪಲುಗಳಿಂದ ಜೀವಿಸಬಲ್ಲರು; ಆದರೆ ಬಡವರಿಗೆ ಊಟವೇ ಬೇಕು. ಊಟದ ಮನೆ, ವೈದ್ಯಕೀ ಸಹಾಯ ಇತ್ಯಾದಿಗಳ ವ್ಯವಸ್ಥೆ ಮಾಡುವ ಮೂಲಕ ನಿಮ್ಮಲ್ಲಿ ಹಲವರು ಕಾರ್ಯತಃ ಸಹಕರಿಸಬಹುದು. ಅಂಥವರು ಈ ಕುರಿತು ಸ್ಥಳೀಯ ಸರಕಾರಗಳನ್ನು ಕೇಳಿ ತಿಳಿಯಬೇಕೆನ್ನುತ್ತೇನೆ.

ಆಹಾರದ ಮಟ್ಟಿಗೆ ಪಕ್ಷಭೇದಬೇಡ

ನಮ್ಮ ಆಹಾರಾಡಳಿತೆಯು ನಿರ್ದೋಷವಾದುದೆಂದು ನಾನೆನ್ನುವದಿಲ್ಲ. ಆದರೆ ಅದು ಕಳೆದ ಎರಡು ವರುಷಗಳಲ್ಲಿ ಉತ್ತಮ ಕಾರ್ಯ ಸಾಧಿಸಿದೆ ಎಂದು ನಾನು ಹೇಳಬಲ್ಲೆ. ಆಹಾರವು ರಾಜಕೀಯ ಪಕ್ಷಭೇದದ ಪ್ರಶ್ನೆಯಾಗಿರಕೂಡದು. ಈ ಕಾಲದಲ್ಲಿ ಹಾಗಿರುವದೆಂದರೆ ಅದೊಂದು ಅವಿವೇಕವೇ ಸರಿ. ಮಿ. ಗಾಂಧಿ ಮತ್ತು ಮಿ. ಜಿನ್ನರು ಈ ಕುರಿತು ಮೇಲ್ಪಂಕ್ತಿಯಾಗಿದ್ದಾರೆ. ಆ ಆದರ್ಶವನ್ನು ಎಲ್ಲರೂ ಅನುಕರಿಸಬೇಕು. ಬಿಕ್ಕಟ್ಟನ್ನು ನಾವೆಲ್ಲಾ ಒಗ್ಗಟ್ಟಿನಿಂದ ಇದಿರಿಸೋಣ; ಸಂಕಷ್ಟವನ್ನು ಸಮಾನತೆಯಿಂದ ಅನುಭವಿಸೋಣ. ಹಾಗೆ ಮಾಡಿದಲ್ಲಿ ಗಂಡಾಂತರವಿಲ್ಲದೇನೇ ನಾವು 1946ನ್ನು ದಾಟಬಲ್ಲೆವು. ಕಳೆದ ಸುಮಾರು 6 ವರುಷಗಳಿಂದ ಹಲವು ನಿರಾಶಾಜನಕ ದೃಶ್ಯಗಳನ್ನು ಕಂಡು ಅನುಭವವುಳ್ಳ ನಾನು ಅವುಗಳ ನೋಟದಲ್ಲಿ ತೋರುವಷ್ಟು ಕೆಡುಕು ಪರಿಣಾಮದಲ್ಲಿ ಕಂಡು ಬರುವದು ಅಪರೂಪವೆಂಬುದನ್ನು ಹೇಳಬಿಡಲೆ? ಆದರೆ ನೀವು ಮಾತ್ರ, ವ್ಯವಹಾರಜ್ಞತೆ, ದೃಢಸಂಕಲ್ಪ ಮತ್ತು ಯಥಾರ್ಥತೆಯಿಂದ ನಿಮ್ಮ ಶಕ್ತಿ ಮೀರಿ ಪ್ರಯತ್ನಿಸಬೇಕು."

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವದಿಲ್ಲ -- ಮತ್ತು ಅದೊಂದು ಅವಶ್ಯಕತೆಯೂ ಇರುವದಿಲ್ಲ. [illegible]

ಜನೇರಿಯನ್ ಜೀವನ ಮಿಕ್ಶ್ಚರ್ [illegible]

ಏಜೆಂಟ್ಸ: ಜನೇರಿಯನ ಮಸ್ತಕ [illegible] ಮುಂಬಾಯಿ ೨

CANARA BANK LIMITED.

(Incorporated in British India with Limited Liability)

(ESTD. 1906)

Progress Statement correct to thousands of Rupees.

Liabilities	1944	1945	Assets	1944	1945
Capital Subscribed	29,00,000	29 00 000	Cash	55,97,000	[illegible]
Capital paid up	26,34,000	28,43,000	Govt. Securities	1,17 93,000	[illegible]45,000
Reserves	10,34,000	11,00,000	Advances to customers	1,43 36,000	[illegible]
Deposits	2,36 [illegible],000	3,50,43,000	Bills for collection & foreign Bills negotiated	18,31 000	20,5[illegible]
Due to Bankers	34,38,000	26,91,000	Landed Properties	33,000	[illegible] 000
Call deposits from Bankers	8,50,000	8,00,000	Bank Premises & Furniture & Fixtures	1,15,000	[illegible]
Branch adjustments	13,84,000	22,07,000	Other Assets	6 41 000	[illegible] 22,000
Bills for collection & foreign bills negotiated	18 31 000	20,50,000			
Other Liabilities	1,31 000	77,000			
Profit for the year	2,75,000	3,01,000			
Rs	3,40,16 000	4,71 [illegible]	Rs	[illegible]	[illegible]

BRANCHES:

Alleppey, Arsikere, Bangalore City, Belgaum, Bombay Fort, Bombay Mandvi, Bombay Girgaum, Bombay Kalabadevi Bombay Kalyan, Bantwal, Calicut, Cannanore, Chickmagalur, Cochin, Coimbatore, Coondapoor, Davangere, Dharwar, Erode Ernakulam, Gangulli, Hubli, Karkala, Kasaragod, Kumbla, Madras, Madura, Mangalore-Bunder, Mangalore-City, Mulki Payyannur, Puttur, Quilon, Salem, Secunderabad, Shimoga, Sholapur, Udipi

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... 2¼%

6 months . 2½%

These deposits will however not be accepted to run beyond 31-8 1946.

With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೨೧-೨-'೪೬

ಒಂದೇ ಹಾಡು!

ಸಧ್ಯಕ್ಕೆ ಹಿಂದುಸ್ಥಾನದಲ್ಲಿದ್ದಿರುವ ಆಹಾರಾಭಾವದ ಹಾಹಾಕಾರದಿದಿರಲ್ಲಿ ಮಿಕ್ಕೆಲ್ಲಾ ಗದ್ದಲಗಳೂ ಅಡಗಿ ಹೋಗಿವೆ. ಬ್ರಿಟಿಷ್ ವಿದೇಶ ಮಂತ್ರಿ ಬೆವಿನರಿಂದಾರಂಭಿಸಿ ಮದ್ರಾಸ್ ಗವರ್ನರ್ ಸರ್. ಆರ್ಥರ್ ಹೋಪ್ ವರೆಗಿನ ಎಲ್ಲಾ ಜವಾಬ್ದಾರೀ ಅಧಿಕಾರಿಗಳ ಬಾಯಿಯಲ್ಲೂ ಒಂದೇ ಹಾಡು! ಮಹಾತ್ಮಾ ಗಾಂಧಿಯೇ ಆದಿಯಾಗಿ ಸಾಮಾನ್ಯ ಹಾದಿಹೋಕನ ವರೆಗಿನ ಸರ್ವರ ಪ್ರಶ್ನೆಯೂ 'ಮುಂದೇನು' ಎಂಬುದೇ! ಪಂಚರಾಷ್ಟ್ರಗಳ ಪರವಾಗಿ ಲಂಡನಿನ ಜಾಗತಿಕ ಸಂಘದ ಮಹಾಧಿವೇಶನದಲ್ಲಿ ಲೋಕದ ಆಹಾರ ಬಿಕ್ಕಟ್ಟಿನ ಕುರಿತೊಂದು ಠರಾವು ತಂದು ಮಿ. ಬೆವಿನರು ಮುಂದಿಟ್ಟ ಅಂಕೆ ಸಂಖ್ಯೆಗಳ ಕಡೆಗೆ ಹಿಂದೀಯರು ಅಗತ್ಯ ಕಣ್ಣು ತೆರೆಯಬೇಕು— "ಮುಂದಿನ ಎರಡು ತಿಂಗಳುಗಳಲ್ಲಿ 1,000,000,000 ಜನರು ಬರಗಾಲಕ್ಕೆ ಒಳಗಾಗಬೇಕಾದಷ್ಟು ಅಕ್ಕಿಯ ಅಭಾವವಿದೆ." ಅಕ್ಕಿಯ ಆಹಾರವುಣ್ಣುವವರು ಏಶ್ಯಾಖಂಡದವರು ಮಾತ್ರ. ಆ ಪೈಕಿ ವಿಶೇಷಾಭಾವದ ಬೊಬ್ಬೆಯೇಳುತ್ತಿರುವದು ಭಾರತದಲ್ಲಿ. 100ಕೋಟಿ ಜನರನ್ನು ಹಸಿವು ಭೂತಕ್ಕೆ ಬಲಿಕೊಡಲಿದ್ದಾರೆ ಎನ್ನುವಾಗ ಹಿಂದುಸ್ಥಾನದ 40ಕೋಟಿ ಅದರಲ್ಲಿದ್ದೇ ತೀರಬೇಕು. ಇಂತಹ ಬಲಿಯನ್ನೇ ಬಾಳುವೆಯಾಗಿ ಮಾರ್ಪಡಿಸಿಕೊಳ್ಳಬೇಕೆಂದು ಲೋರ್ಡ್ ವೇವೆಲರು ದೇಶಕ್ಕೆ ಪ್ರೇರಣೆ ಕೊಟ್ಟಿದ್ದಾರೆ. ವೈಸರಾಯೀ ವೇವೆಲರ ವ್ಯಕ್ತಿಗತ ಯಥಾರ್ಥತೆಯ ಕುರಿತು ಯಾರೂ ಸಂದೇಹಪಡಲಾರರು. ಆದರೆ ಪ್ರಾಣೋತ್ಕ್ರಮಣ ಕಾಲಕ್ಕೆ ಒಂದು ಚಮಚಾ ಹಾಲು ಸುರಿದ ಮಾತ್ರಕ್ಕೆ ಕೊಲೆ ಪಾತಕ ಹೋಗದು.-ವಿಷಮ ಸನ್ನಿವೇಶದಲ್ಲಿ ಲೋರ್ಡ್ ವೇವೆಲರಂತಹ ಸಹೃದಯಿ ಬಂದ ಮಾತ್ರಕ್ಕೆ ಇಂದಿನ ಅನಾಹುತಕ್ಕೆ ಹೇತುವಾದ ಸರಕಾರದ ಅಸಡ್ಡೆ, ಅನಾಸಕ್ತಿಯು ಕ್ಷಮಿಸಲ್ಪಡದು. ಆದ್ದರಿಂದಲೇ ಪಂಡಿತ ನೆಹರುಗಳು ಕೆರಳಿದ್ದಾರೆ; ಬೇರೇನೂ ಆಗದ ಹೋದರೆ ಹಸಿವು ಮರಣಗಳೇ ಹಕ್ಕು ಸಾಧನೆಯ ಬಲಿದಾನಗಳಾಗಬೇಕು-ರಾಜಕೀಯ ಸಾಮಾಜಿಕ ಸುವ್ಯವಸ್ಥೆಯ ಸ್ಥಾಪನೆಗೆ ಆ ಎಲುಬುಗಳದೇ ತಳಪಾಯವಾಗಬೇಕು, ಎಂದು ಪಂಡಿತರೆನ್ನುತ್ತಿದ್ದಾರೆ. ಪರಿಸ್ಥಿತಿಯ ಶಾಖ ಗಾಂಧಿಜೀಯ ಶಾಂತ ಮೆದುಳಿಗೂ ತಟ್ಟಿದೆ: "ಈ ಗಂಡಾಂತರದ ಮೂಲ ಕಾರಣವನ್ನು ಚಿಂತಿಸುವ ಹವ್ಯಾಸ ನಮಗೆ ಬೇಡ. ಕಾರಣವೇನೇ ಇರಲಿ, ಸರಕಾರವೂ ಜನತೆಯೂ ಶಾಂತವಾಗಿ, ಧೈರ್ಯದಿಂದ ಈ ಬಿಕ್ಕಟ್ಟನ್ನು ಯೋಗ್ಯ ರೀತಿಯಿಂದ ಇದಿರಿಸದೆ ಬಿಟ್ಟಲ್ಲಿ ಅನಾಹುತವಂತೂ ಖಂಡಿತ. ಇದೊಂದು ವಿಷಯವನ್ನು ಬಿಟ್ಟು ಮಿಕ್ಕೆಲ್ಲಾ ರಂಗಗಳಲ್ಲೂ ನಾವೀ ವಿದೇಶೀ ಸರಕಾರದೊಡನೆ ಕಾದಾಡಬೇಕು. ಯುಕ್ತಕ ಸಾರ್ವಜನಿಕಾಭಿಪ್ರಾಯದ ಕುರಿತು ಸರಕಾರವು ತಾತ್ಸಾರ ಯಾನೆ ಕಲುಹೃದಯ ವಹಿಸಿದರೆ ನಾವೀ ಭಾಗದಲ್ಲಿ ಕೂಡಾ ಸರಕಾರದೊಡನೆ ಹೋರಾಡಲೇ ಬೇಕು" ಎಂದು ಗಾಂಧಿಜೀಯೆಂದಿದ್ದಾರೆ. "ಆಹಾರವನ್ನೂ ರಾಜಕೀಯ ಪಕ್ಷ ಭೇದದ ಪ್ರಶ್ನೆಯಾಗಿ ಮಾಡಬೇಡಿ" ಎಂಬ ವೈಸರಾಯರ ವಿನಂತಿ ಅನಗತ್ಯ. ಬ್ರಿಟಿಷ್ ಅಧಿಕಾರಿಗಳಿಂದ ಇಂತಹ ಬೋಧೆ ಕೇಳಿ ಸದ್ದಾರಿಗೆ ಬರಬೇಕಾದ ಪುಂಡರಾರೂ ಹಿಂದೀ ರಾಜ ಕಾರಣಿಗಳಲ್ಲಿಲ್ಲ. ನೆಹರುಗಳಂಥವರ ಸಮರಾಹ್ವಾನಗಳೇ ವೈಸರಾಯರ ಈ ಹಿತೋಪದೇಶಕ್ಕೆ ಕಾರಣವಾಗಿರಬಹುದೇ? ಹಾಗಿದ್ದರೆ ಇದು ಪಕ್ಷಭೇದದ ಪ್ರಶ್ನೆಯಾಗಿಲ್ಲವೆಂಬುದಕ್ಕೆ ಸರಕಾರದ ಹಸ್ತಕರಾದ ಸರ್. ರಾಮಸ್ವಾಮಿ ಮುದಲಿಯಾರರು ಲಂಡನಿನ ಜಾಗತಿಕ ಸಂಘದ ಅಧಿವೇಶನದಲ್ಲಾಡಿದ ಮಾತುಗಳೇ ನಿದರ್ಶನ. ಭಾರತದ ಆಹಾರಾಭಾವವನ್ನು ರೋಮಾಂಚವಾಗುವಂತೆ ಚಿತ್ರಿಸುತ್ತಾ ಸರ್. ಮುದಲಿಯಾರರೆಂದಿದ್ದರು:"ಹಿಂದುಸ್ಥಾನದಲ್ಲಿ ಅಧಿಕಾರೀ ಸಂಖ್ಯೆಯಂತೆ ಒಂದೂವರೆ ಮಿಲಿಯ ಮತ್ತು ಅನಧಿಕಾರೀ ಲೆಕ್ಕ ಪ್ರಕಾರ 3 ಮಿಲಿಯ ಮಂದಿ ಸಾಯುವಾಗ, ಈ ಭೀಕರಾವಧಿಯಲ್ಲಿ ಒಬ್ಬನೇ ಒಬ್ಬ ವಿದೇಶಿಯನಾದರೂ ಹಸಿವಿಗೀಡಾಗದಂತೆ ನೋಡಲಾಗಿತ್ತು!" ಗಾಂಧೀನೆಹರುಗಳ ವಾಣಿಗಿಂತ ಇದು ಸೌಮ್ಯವಾದುದೇ? ಆದ್ದರಿಂದ ಪಕ್ಷಭೇದವನ್ನು ಜ್ಞಾಪಿಸುವ ಪರೋಪದೇಶ ಪಾಂಡಿತ್ಯವು ಈ ಮಟ್ಟಿಗೆ ಸಲ್ಲದು. ತನ್ನ ಮೈಗಳ್ಳತನದ ದುಷ್ಪರಿಣಾಮವಾದ ಇಂದಿನ ಬರಗಾಲದ ಅವಧಿಯಲ್ಲಾದರೂ ಸರಕಾರವು ತನ್ನ ಹಿಂದಿನ ಆಲಸ್ಯದ ಚಾಳಿಯನ್ನು ಅಲ್ಲಿ ತೊಡೆಯುವಷ್ಟು ಚುರುಕುತನ, ಪರಿಶ್ರಮ, ನ್ಯಾಯಬುದ್ಧಿಯನ್ನು ಪ್ರದರ್ಶಿಸಿ, ತನ್ನ ಹೊಣೆಯನ್ನು ನಿರ್ವಹಿಸದೆ ಬಿಟ್ಟಲ್ಲಿ ಪರಿಣಾಮವು ನೆಟ್ಟಗಾಗದು.

ಉಡುಪಿ

ಜನ್ಮ ದಿನಾಚರಣೆ-ಮುಹಮ್ಮದ ಪೈಗಂಬರರ ಜನ್ಮ ದಿನಾಚರಣೆಯು ಅಂಜುಮಾನ್ ಕ್ಲಬ್ಬಿನಲ್ಲಿ ತಾ 16ರಲ್ಲು ಖಾನ್ ಸಾಹೇಬ್ ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಇಮಾಮ್ ಸಾಹೇಬರ ನವ ವ್ಯವಸ್ಥಾಪಕತ್ವದಲ್ಲಿ ಮುಸಲ್ಮಾನೇತರರೂ ಈ ಸಮಾರಂಭಕ್ಕೆ ಆಮಂತ್ರಿಸಲ್ಪಟ್ಟಿರುವರು.

ಹಾಸ್ಟೆಲ್ ಡೇ-ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಹಾಸ್ಟೆಲ್ ಡೇ ದಿನಾಚರಣೆಯು ತಾ 16ರಲ್ಲು ಮಿ. ಡಿ. ನೊರೋನ್ಹಾ, ಡಿಸ್ಟ್ರಿಕ್ಟ್ ಮುನ್ಸೀಫ್, ಉಡುಪಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಎಳೆ ಬಾಲಕಿಯರಿಂದ ಸ್ವಾಗತ ಗೀತೆ, ಪ್ರಾರ್ಥನೆಯಾದ ಬಳಿಕ ಶ್ರೀ ರವೀಂದ್ರ ಹೆಗ್ಡೆಯವರು ಹಾಸ್ಟೆಲಿನ ಕಾರ್ಯ ಕಲಾಪಗಳ ವರದಿಯನ್ನೋದಿದರು. ಶ್ರೀ ಶ್ರೀಧರ ಹೆಗ್ಡೆಯವರ ಶ್ರೇಯೋ ಭಾಷಣಕ್ಕೆ ಶ್ರೀ ಬಾಲಕೃಷ್ಣ ಸೆಟ್ಟರು ಉತ್ತರವಿತ್ತರು. ಆಟಪಾಟ ಸ್ಪರ್ಧೆಗಳಲ್ಲಿ ಮೇಲ್ಮೆಯಾದವರಿಗೆ ತದನಂತರ ಬಹುಮಾನ ಹಂಚಲಾಯಿತು. ಅಧ್ಯಕ್ಷರು ಶ್ರೇಯೋ ಭಾಷಣಗಾರರ ಕೆಲವು ಅಭಿಪ್ರಾಯಗಳನ್ನು ತಾನೊಪ್ಪೆನೆಂದು ಹೇಳಿ ಮಾಧ್ಯಮಿಕ ಶಿಕ್ಷಣ ಪಡೆದ ನಂತರ ಉಚ್ಚ ಶಿಕ್ಷಣದ ಬದಲಾಗಿ ಸ್ವತಂತ್ರ ಜೀವನೋಪಾಯದ ವೃತ್ತಿಯನ್ನು ಕೈಕೊಳ್ಳುವುದು ಲೇಸು, ಅಳಿಯ ಸಂತಾನ ಕಾನೂನಿನಲ್ಲಿ ಕೆಲವೊಂದು ಸುಧಾರಣೆಗಳಾದರೆ ಆ ತರಗತಿಗೆ ಸೇರಿದವರಿಗೆ ಕ್ಷೇಮಕರವೆಂದು ಭಾಷಣವಿತ್ತರು. ವಿವಿಧ ವಿನೋದಾವಳಿಗಳಿಂದ ಹಾಸ್ಟೆಲ್ ಡೇ ದಿನಾಚರಣೆಯು ಉತ್ಸಾಹದಿಂದ ಯಶಸ್ವಿಯಾಗಿ ಮುಕ್ತಾಯವಾಯಿತು.

ವರ್ಗಾವರ್ಗಿ-ಇಲ್ಲಿಯ ರೇಶನಿಂಗ್ ಆಫೀಸರ್ ಶ್ರೀ ಮೆನೊಕಿಯವರು ಬೆಳ್ತಂಗಡಿಯ ಡಿ. ತಹಶಿಲ್ದಾರರಾಗಿ ವರ್ಗ ಹೊಂದಿರುವುದರಿಂದ ಅವರ ಸ್ಥಾನದಲ್ಲಿ ಶ್ರೀ ಎನ್. ಬೋಕಯ್ಯ ಸೆಟ್ಟರು ಬಂದಿರುತ್ತಾರೆ.

ಶ್ರೀ ಹಿರಿಬೆಟ್ಟು ಚಂದಯ್ಯ ಹೆಗ್ಡೇರು—ತಾ 14ನ ಬೆಳಿಗ್ಗೆ ಉಡುಪಿಯಲ್ಲಿ ದೈವಾಧೀನರಾದರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಕೆಲಸಮಯ ಉಬ್ಬಸ ರೋಗಕ್ಕೆ ತುತ್ತಾಗಿ ಹಾಸಿಗೆ ಹಿಡಿದಿದ್ದರು. ಇವರು ಸಾಹಸಿಗಳೂ ಊರ ಮುಂದಾಳು ಪಂಚಾಯತದಾರರೂ ಉದಾರಿಗಳೂ ಆಗಿದ್ದರು. ದಿವಂಗತರ ಧರ್ಮಪತ್ನಿ ಶ್ರೀಮತಿ ಚಂದ್ರಬಾಗಿ ಹೆಗ್ಗಡ್ತಿ, ಜಿಲ್ಲಾ ಬೋರ್ಡು ಮೆಂಬರರು ಮತ್ತು ಅವರ ಮಕ್ಕಳು ಬಂಧುಗಳೊಡನೆ ಸಹ ಸಂತಾಪವನ್ನು ಸೂಚಿಸುವೆವು.

ಎಕೆಡಮಿ ಒಫ್ ಜನರಲ್ ಎಡ್ಯುಕೇಶನಿನ—ಗವರ್ನಿಂಗ್ ಬೋಡಿ ಸಭೆಯು ತಾ 17ರಲ್ಲು ಗಾಸರಗೋಡಿನ ಶ್ರೀ ಕೆ. ಕೆ. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಮಾಧವ ಪೈಗಳು ಈ ವರೆಗಿನ ಕಾರ್ಯಕಲಾಪಗಳನ್ನು ವಿವರಿಸಿದ ಮೇಲೆ ಆಡಳಿತೆಯ ಮಂಡಳಿಯ ಚುನಾವಣೆನಡೆಯಿತು

ಬೆಳ್ಳಿಯ ಶೀಲ್ಡು-ಮುನಿಸಿಪಲ್ ಸೌತ್ ಗರ್ಲ್ಸ್ ಸ್ಕೂಲ್ ಬಿಲ್ಡಿಂಗ್ ಸಮಿತಿಯ ಸಹಾಯಾರ್ಥವಾಗಿ ನಾಟಕವನ್ನು ಅಭಿನಯಿಸಿದ ಶ್ರೀ ಜಯಕರ್ನಾಟಕ ನಾಟ್ಯ ಸಂಘ, ಸಿದ್ದಾಪುರ-ಇವರಿಗೆ ತಾ 17ರಲ್ಲು ಒಂದು ಬೆಳ್ಳಿಯ ಶೀಲ್ಡು ಕೊಡಲಾಯಿತು. ಉಪಾಹಾರ ಸತ್ಕಾರವಾಗಿ ಶ್ರೀ ಪಿ. ಎಸ್. ಪ್ರಭುಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿತು

ಡಾ। ಹರ್ಡೀಕರರು-ತಾ 14ರಲ್ಲು ಉಡುಪಿಗೆ ಆಗಮಿಸಿ ನವಯುಗ ಕಾರ್ಯಾಲಯದಲ್ಲಿ ಪತ್ರಿಕೋದ್ಯೋಗಿಗಳಿಗೆ ಭೇಟಿಯಿತ್ತರು ಮರುದಿನ ಇನ್ನಂಜೆ ಕಡೆ ಪ್ರಯಾಣ ಬೆಳೆಸಿದರು.

ಮಣಿಪಾಲ—ಇಲ್ಲಿ ತಾ 17 1 46ರಲ್ಲು ಡಾ। ಎಮ್. ಆರ್. ಭಟ್ಟರ ಅಗ್ರಾಸನದಲ್ಲಿ ಕಾಮಿನಾಥ ಚಿಕಿತ್ಸಾ ಮಂದಿರವೆಂಬ ಆಯುರ್ವೇದ ಧರ್ಮ ಚಿಕಿತ್ಸಾಲಯವು ಸ್ಥಾಪಿಸಲ್ಪಟ್ಟಿರುತ್ತದೆ. ಶ್ರೀ. ಯು. ಎ. ಪೈಯವರು ಈ ಸಂಸ್ಥೆಗೆಬೇಕಾದ ಯಾವತ್ತೂ ಔಷಧಗಳನ್ನೂ ಉಪಕರಣಗಳನ್ನೂ ದಾನಮಾಡಿರುವರು.

ಶ್ರೀಗಳಾದ ತೋನ್ಸೆ ವಿಠಲ ಪೈ, ಕೆ. ಆನಂದ ಸೆಟ್ಟಿ, ಇಸ್ರಾಯೇಲ ಸೋನ್ಸ್ ಮೊದಲಾದವರು ಹಳ್ಳಿಗಳಲ್ಲಿ ಇಂತಹ ಚಿಕಿತ್ಸಾಲಯದ ಆವಶ್ಯಕತೆ ಹಾಗೂ ಆಯುರ್ವೇದ ಚಿಕಿತ್ಸೆಯ ಮಹತ್ವದ ಕುರಿತು ಭಾಷಣ ಮಾಡಿದರು. ಪೋಷಕರಾದ ಶ್ರೀ ಪೈಯವರು, ಊರ ಜನರೂ ಜನತೆಯೂ ಇದರ ಉಪಯೋಗವನ್ನು ಪಡೆದು, ತಕ್ಕ ಪ್ರೋತ್ಸಾಹವನ್ನಿತ್ತು ಸಹಕರಿಸಬೇಕೆಂದರು. ಲಘು ಉಪಹಾರಗಳಿಂದ ಸಮಾರಂಭವು ಕೊನೆಗಂಡಿತು.

ಕುಂದಾಪುರ ಡಿವಿಜನಿನ— ಹರಿಜನ ಸೀಟಿಗೆ ಶ್ರೀ. ಗೋಪಾಲ ಸಾಲೆನ್ನ ಮತ್ತು ಶ್ರೀ ಈಶ್ವರ ಹೇಗೆ ಇಬ್ಬರು ಉಮೇದ್ವಾರರಿರುವುದರಿಂದ ಶ್ರೀ. ಎ. ಬಿ. ಶೆಟ್ಟರು ನೊಮಿನೇಶನ್ ಹಾಕಲಿರುವ ಜನರಲ್ ಸೀಟಿಗೂ ಚುನಾವಣೆಯಾಗಬೇಕಾಗಿರುತ್ತದೆ. ಶ್ರೀ. ಎ. ಬಿ. ಶೆಟ್ಟಿ, ಮತ್ತು ಶ್ರೀ. ಕೆ. ಈಶ್ವರನವರು ಕರ್ನಾಟಕ ಮತ್ತು ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನಿಂದ ಆರಿಸಲ್ಪಟ್ಟ ಕಾಂಗ್ರೆಸ್ ಉಮೇದ್ವಾರಿಗಳು.

ನೋಟೀಸು

ಉಡ್ಪಿ ತಾಲೋಕು ಹೆಗ್ಗುಂಜೆ ಗ್ರಾಮದ ಹೆಬ್ಬಾಡಿ ಮಹಾಬಲ ಶೇರ್ವೆಗಾರನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದ್ರ, ನನ್ನ ತಾಯಿ ಹೆಬ್ಬಾಡಿ ಮಂಜಮ್ಮ ಸೆಟ್ತಿಯರು ನನ್ನ ತಂದೆ ಹಲ್ಲೂರು ಶೀನಪ್ಪ ಶೇರ್ವೆಗಾರರಿಗೆ ಕಳೆದ 1919ನೇ ಇಸ್ವಿಯಲ್ಲಿ ಬರಕೊಟ್ಟ ಟ್ರಸ್ಟ್ ಡೀಡ್ ಯಾನೆ ಅಡಳ್ತೆ ಕರಾರಿನ ಪ್ರಕಾರ ಸದ್ರಿ ಶೀನಪ್ಪ ಶೇರ್ವೆಗಾರರು ನಮ್ಮ ಕುಟುಂಬದ ಸಮಸ್ತ ಸ್ತಿರಚರ ಸೊತ್ತುಗಳ ಸ್ವಾಧೀನದಾರರಾಗಿ ಈ ವರೇಗೆ ಅಡಳ್ತೆ ನಡ್ಸಿಕೊಂಡು ಬಂದಿರುತ್ತಾರೆ. ಸದ್ರಿ ಅಡಳ್ತೆಗೆ ಸಮ್ಮಂಧಪಟ್ಟ ಆಸ್ತಿಯಲ್ಲಿ ಹೇರಾಳ ಉತ್ಪತ್ತಿ ಇದ್ದಾಗ್ಯೂ ಅದನ್ನು ಈ ವರೇಗೆ ದುರುಪಯೋಗ ಪಡ್ಸಿ ನಮ್ಮ ಕುಟುಂಬಕ್ಕೆ ಹೇರಾಳ ನಷ್ಟ ಕಷ್ಟ ಪಡ್ಸಿರುತ್ತಾರೆ. ಈ ಸಂಗ್ತಿ ತಿಳಿದು ಸದ್ರಿ ಶೀನಪ್ಪ ಶೇರ್ವೆಗಾರರ ಅಡಳ್ತೆ ರದ್ದಿನ ಕುರಿತು ನಾನು ವಾದಿಯಾಗಿ ಸಬ್ ಕೋರ್ಟು O S. No. 94/45ನೇ ವಾಜ್ಯ ದಾಕ್ಲು ಮಾಡಿರುತ್ತೇನೆ. ಸದ್ರಿ ವ್ಯಾಜ್ಯದಲ್ಲಿ ನನ್ನ ತಾಯಿ ಮಂಜಮ್ಮ ಶೆಡ್ತಿ, ಕೃಷ್ಣಪ್ಪ ಶೇರ್ವೆಗಾರ, ನಾರಾಯಣ ಶೇರ್ವೆಗಾರ ವಗೈರು ಕೂಡಾ ಪ್ರತಿವಾದಿರಾಗಿರುತ್ತಾರೆ ಸದ್ರಿ ನಂಬ್ರವು ಈಗಲೂ ತನ್ನಿಯಲ್ಲಿ ಬಾಕಿ ಇರುತ್ತದೆ ಹೀಗಿರುತ್ತಾ ಸದ್ರಿ ಶೀನಪ್ಪ ಶೇರ್ವೆಗಾರರು ಮಂಜಮ್ಮ ಶೆಟ್ತಿ ವಗೈರರ ಕೂಡುವಿಕೆಯಿಂದ ಸಾಲ ವಗೈರೆ ಮಾಡುವ ಕೆಟ್ಟ ಇರಾದೆಯಲ್ಲಿ ಇರುತ್ತಾರಾಗಿ ನಾನು ತಿಳಿಯುತ್ತೇನೆ. ಆದ್ದರಿಂದ ಹಾಗೆ ಸಾಲ ವಗೈರೆ ಮಾಡಿದ್ರೆ ಅಂಥಾ ಸಾಲವು ನಮ್ಮ ಕುಟುಂಬದ ಸ್ತಿರಚರ ಸೊತ್ತುಗಳ ಮೇಲೆ ಬದ್ದೀಕರಿಸತಕ್ಕದ್ದಲ್ಲ ಎಂಬ ಸಂಗ್ತಿ ಈ ಮೂಲಕ ಸರ್ವಜನರಿಗೆ ತಿಳಿಸಿರುತ್ತೇನೆ.

H. Mahabala Shervegar.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd., Moolky, S K.

ದೇಶ-ವಿದೇಶ

ರೈಲ್ವೇ ಆಯವ್ಯಯ

ಕೇಂದ್ರ ಎಸೆಂಬ್ಲಿಯಲ್ಲಿ ಹಿಂದೀ ಸರಕಾರದ ಯುದ್ಧ ವಾಹನ ಖಾತೆಯ ಸದಸ್ಯ ಸರ್. ಎಡ್ವರ್ಡ್ ಬೆಂಥಾಲರು ರೈಲ್ವೇ ಬಜೆಟನ್ನು ತಾ. 18ರಲ್ಲಿ ಮುಂದಿಟ್ಟಿದ್ದಾರೆ. ಚಾಲ್ತಿ ವರುಷದಲ್ಲಿ ನಿರೀಕ್ಷೆಗಿಂತ 48 ಕೋಟಿ ರೂಪಾಯಿಗಳ ಆದಾಯ ಕಡಿಮೆ ಬಿದ್ದಿದೆ. ಆದ್ದರಿಂದ ಮುಂದಿನ ವರುಷದ ಬಿನ್ ಉಳಿತಾಯವು 32 ಕೋಟಿಯಿಂದ 12 ಕೋಟಿಗೆ ತಗ್ಗಲಿದೆ. ಶಯನಸೌಕರ್ಯವೇ ಮೊದಲಾದ ಅನುಕೂಲತೆಗಳನ್ನು ಕೆಳತರಗತಿಯ ಬಂಡಿಗಳಿಗೇರ್ಪಡಿಸುವದು-ಸಾರ್ವಜನಿಕರಿಗೂ ನೌಕರರಿಗೂ ಅನುಕೂಲತೆಯೊದಗಿಸುವ ಕ್ಷೇಮ ಸಾಧಕ ನಿಧಿಯೊಂದರ ರಚನೆ-ಹೊಸತಾದ ಮತ್ತು ಯುದ್ಧಾವಧಿಯಲ್ಲಿ ಹಾಳಾದ ಲೈನು ರಚನೆಗಾಗಿ 2 ಕೋಟಿ ಮತ್ತು ಲೈನು ದುರಸ್ತಿಗಾಗಿ 20 ಕೋಟಿ ರೂ.ಗಳ ಯೋಜನೆ-ಇವೇ ಈ ಬಾರಿಯ ಬಜೆಟಿನ ಮುಖ್ಯಾಂಶಗಳು. ಪ್ರಯಾಣದ ದರವನ್ನು ತಗ್ಗಿಸುವ ಕಿತೆಯಿಲ್ಲ.

ಕಲ್ಕತ್ತೆದ ಗಲಭೆ

ಸುಭಾಸ್ ಸೇನಾಕಪ್ತನ್ ರಶೀದ್ ಅಲಿಗಾದ ಶಿಕ್ಷೆಯ ವಿರುದ್ಧ ಕಲ್ಕತ್ತೆದಲ್ಲಿ ಎರಡು ಮೂರು ದಿನ ನಡೆದು ಸುಮಾರು ೪೦ರಷ್ಟು ಮರಣ, ನೂರಾರು ಮಂದಿಗೆ ಘಾಯ, ಮಿಲಿಟರಿ ಲೋರಿ ಮತ್ತಿತರ ವಾಹನಗಳ ಹಾನಿಗೆ ಕಾರಣವಾಗಿದ್ದ ಗಲಭೆ ಯೀಗ ಶಾಂತವಾಗಿದೆ. ಈ ಕುರಿತು ಸರಕಾರವೇ ಹೆಚ್ಚಿನ ಹೊಣೆಗೆ ಬಾಧ್ಯವಿದೆಯೆಂದೂ ಗಲಭೆಗೆ ಬಲಿಯಾದ ಮೊಥೋಡಿಸ್ಟ್ ಚರ್ಚನ್ನು ಸಾರ್ವಜನಿಕರೇ ವಂತಿಗೆ ಹಾಕಿ ಕಟ್ಟಿಸಬೇಕೆಂದೂ ಮೌಲಾನಾ ಆಜಾದರೆಂದಿದ್ದಾರೆ.

ಮದ್ರಾಸ್ ಎಸೆಂಬ್ಲಿ ಚುನಾವಣೆಯ ದಿನಗಳು

ಇದೇ ಮಾರ್ಚ ತಾ. 1 ಎಲ್ಲಾ ಕ್ಷೇತ್ರಗಳ ಉಮೇದ್ವಾರಿಗಳೂ ನಾಮಪತ್ರ ದಾಖಲ್ಮಾಡಬೇಕಾದ ಕೊನೆಯ ದಿನ ಮಾರ್ಚ 4ರಲ್ಲಿ ನಾಮಪತ್ರಗಳ ಪರಿಶೀಲನೆ. ಸಾಮಾನ್ಯ ಮತದಾರ ಕ್ಷೇತ್ರಗಳ ಚುನಾವಣೆಗಳು ಮಾರ್ಚ ತಾ. 19ರಿಂದ 25ರೊಳಗೆ ನಡೆಯಲಿರುವವು. ಮಹಮ್ಮದೀಯ, ಕ್ರೈಸ್ತ ಮತ್ತು ಲೇಬರ್ ಮತದಾರ ಕ್ಷೇತ್ರಗಳ ಚುನಾವಣೆಗಳೆಲ್ಲಾ ಮಾರ್ಚ್ ತಾ. 18ರಿಂದ 23ರ ಒಳಗೆ. ಮತ ಗಣನೆಯು ಮಾರ್ಚ 23ರಿಂದ 29ರ ಒಳಗಿನ ಅವಧಿಯಲ್ಲಿ ನಡೆಯಲಿದೆ. ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ ಸ್ಥಾನಗಳಿಗೆ ಫೆಬ್ರವರಿ 22ರೊಳಗೆ ನಾಮಪತ್ರ ದಾಖಲಾಗಬೇಕು. ಮತದಾನವು ಮಾರ್ಚ್ 18ರಿಂದ 23ರ ವರೆಗೂ, ಗಣನೆಯು ಮಾರ್ಚ 25ರಿಂದ 29ರ ವರೆಗೂ ನಡೆಯಲಿದೆ. ಕೌನ್ಸಿಲಿನ ನಾಲ್ಕು ಸ್ಥಾನಗಳ ಉಪಚುನಾವಣೆಗಳ ದಿನ ಇದಕ್ಕೂ ಸ್ವಲ್ಪ ಮುಂದಿದೆ.

ಪೆಥಿಕ್ಸ್ ಲಾರೆನ್ಸ್

ಭಾರತ ಕಾರ್ಯದರ್ಶಿಯಾದ ಲೋರ್ಡ್ ಫೆಥಿಕ್ ಲಾರೆನ್ಸರೂ ಉಪಕಾರ್ಯದರ್ಶಿ ಆರ್ಥರ್ ಹೆಂಡರ್ಸನರೂ ತಮ್ಮ ಸಹಾಯಕರೊಂದಿಗೆ ಎಪ್ರಿಲ್ ತಿಂಗಳಲ್ಲಿ ಭಾರತಕ್ಕೆ ಬರಲಿದ್ದಾರೆಂದೂ, ಹಿಂದೀ ರಾಜ್ಯಾಂಗ ರಚನಾ ಸಮಸ್ಯೆಯನ್ನು ತೀರ್ಮಾನಿಸುವ ಪೂರ್ಣಾಧಿಕಾರವವರಿಗೆ ದೊರೆಯಲಿದೆಯೆಂದೂ ಸಾಧಾರವಾಗಿ ತಿಳಿದು ಬಂದಿದೆ. ಈ ಸೂಚನೆಯು ಲೋರ್ಡ್ ವೇವೆಲರಿಂದ ಹೋಗಿತ್ತು.

ಭದ್ರತಾ ಕೌನ್ಸಿಲ್

ಲಂಡನಿನಲ್ಲಿ ನೆರೆದಿರುವ ಭದ್ರತಾ ಕೌನ್ಸಿಲಿನಲ್ಲಿ ವಿದೇಶಗಳ ಒಳಾಡಳಿತೆಯಲ್ಲಿ ಕೈ ಹಾಕಿರುವ ಪ್ರಮುಖ ರಾಷ್ಟ್ರಗಳ ಸಂಬಂಧದಲ್ಲಿ ತೀವ್ರ ಚರ್ಚೆ ನಡೆದು ಭಿನ್ನಾಭಿಪ್ರಾಯಗಳು ಪ್ರಕಟವಾಗಿವೆ. ಪ್ರತಿಯೊಂದು ಸಂದರ್ಭದಲ್ಲೂ ಸಂಬಂಧಪಟ್ಟ ಪ್ರಮುಖ ರಾಷ್ಟ್ರಗಳು ತಮ್ಮ ವಿಶೇಷಾಧಿಕಾರ ಪ್ರಯೋಗಿಸಿ ಸ್ವವಾದವನ್ನೇ ರಕ್ಷಿಸಿಕೊಂಡಿವೆ.

ದ.ಕ. ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವು-ತಾ 16 ಮತ್ತು 17ರಲ್ಲು ಕೆನರಾ ಹೈಸ್ಕೂಲ್ ವಿದ್ಯಾರ್ಥಿ ನಗರದಲ್ಲಿ ಜರಗಿತು. ಪ್ರತಿನಿಧಿಗಳು ಕುಂದಾಪುರ, ಉಡುಪಿ, ಕಾರ್ಕಳ, ಮೂಲ್ಕಿ, ಬಂಟ್ವಾಳ, ಪುತ್ತೂರು, ಬದಿಯಡ್ಕ, ಕಾಸರಗೋಡು ಮೊದಲಾದ ಕಡೆಗಳಿಂದ ಬಂದಿದ್ದರು. ವಿದ್ಯಾರ್ಥಿ ಕಾಂಗ್ರೆಸ್ ಧ್ವಜವನ್ನು ಶ್ರೀ ಭಾಸ್ಕರ ರೈಗಳವರು ಅರಳಿಸುತ್ತಾ ವಿದ್ಯಾರ್ಥಿಗಳು ಭಾರತದ ಸ್ವಾತಂತ್ರ್ಯಕ್ಕಾಗಿ ವೀರ ಯೋಧರಾಗಿ ತಂತಮ್ಮ ಕರ್ತವ್ಯ ಮಾಡಬೇಕೆಂದರು. ಅಧಿವೇಶನದ ಅಧ್ಯಕ್ಷತೆಯನ್ನು ಡಾ। ಎನ್. ಎಸ್. ಹರ್ಡೀಕರ್‌ರವರು ವಹಿಸಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಮುಖಂಡರನೇಕರು ಸರ್ವತ್ಯಾಗ ಮಾಡಿದ್ದಾರೆ. ನಾಡಿನ ಜನಾಂಗದವರಾದ ವಿದ್ಯಾರ್ಥಿಗಳು ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ಮುಂದೆ ಸಾಗಬೇಕೆಂದರು. ಹಲವಾರು ನಿರ್ಣಯಗಳು ಪಾಸಾದವು. ಸರಕಾರದೊಡನೆ ಕೇಳಿಕೊಳ್ಳುವ ಮತ್ತು ಮುಖಂಡರನ್ನು ಒತ್ತಾಯಿಸುವ ನಿರ್ಣಯಗಳಾದುವು. ಆದರೆ ದ.ಕ. ಜಿಲ್ಲೆಯನ್ನು ಯಾವ ರೀತಿಯಲ್ಲಿ ವೃದ್ಧಿಪಡಿಸಲು ಸಾಧ್ಯ ಮತ್ತು ಆ ಬಗ್ಗೆ ಯಾವ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಷಯಗಳಲ್ಲಿ ಯಾವ ... ಸಲ್ಪಟ್ಟಿಲ್ಲವೆಂದು ... ಭಾಷಣದಲ್ಲಿ ಡಾ। ಹರ್ಡೀಕರರು ಹಿತೋಕ್ತಿಗಳನ್ನಿತ್ತರು.

The Canara Banking Corporation Limited.

(Incorporated in British India with limited Liability)

ESTD 1906

Head Office, UDIPI, S Kanara.

NOTICE.

The Ordinary Annual General Meeting of the Shareholders of the Corporation will be held at its Registered Office at Udipi on Sunday the 24th March, 1946 at 3P.M. to transact the following business:

1. To receive, consider and adopt the Directors' Report and the Balance Sheet as at 31-12-45 and the Profit & Loss Statement for the year 1945 with the Auditors' Certificate.
2. To declare a dividend.
3. To elect 4 Directors in place of:-
   1. Dr.U. Padmanabha Mallya, L. M. & S.
   2. Sri K. P. Seshagiri Prabhu, B. A.
   3. Mr. F. X. D. Pinto
   4. Sri B. Ananda Mallya, M. A., B. L.

   who retire by rotation but are eligible for re-election (under Articles Nos. 105, 106 & 107)
4. To appoint an Auditor or Auditors for the year 1946 and fix the amount of his or their remuneration (The last year's Auditors are eligible for re-election and are willing to accept the office.)

N. B. The Register of Members and Transfer Books of the Corporation will remain closed from 15-3-46 to 25-3-46, both days inclusive.

(By order of the Board)

Office of the Corporation UDIPI, 18th Feb.1946 | (Sd) V. R. Kamath

General Manager.

BANK WITH THE LARGEST CONNECTIONS ON THE WEST COAST.

OFFERS:-

EFFICIENT, PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd

ESTD 1925

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 22—2—46ರಿಂದ

ತಪಸ್ಸಿಗಿಂತ ಭಕ್ತಿ ಮೇಲೆಂದು ಸಾರಲು ಭಕ್ತಪರಾಧೀನನು

ಜಗತ್ತಿಗೊಂದು ಜ್ಯೋತಿಕೊಟ್ಟನು ಆ ಜ್ಯೋತಿಯೇ

ಭಕ್ತರಾಜ

(ಅಂಬರೀಷ ಚರಿತ್ರೆ)

ವಿಷ್ಣುಪಂತ್ ಪಾಗ್ನಿಸ್, ಕೌಸಲ್ಯ, ವಾಸಂತಿ, ದೀಕ್ಷಿತ್.

ಬರುವ ಚಿತ್ರ—

ಬೊಂಬೇ ಟಾಕೀಸಿನವರ ಬಸಂತ್

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ಈ ಔಷಧಿಯ ಬಾಟ್ಲಿಗಳು ಮತ್ತು ಕಡಿಮೆ ಕ್ರಯದ ಬಾಟ್ಲಿಗಳಿಗೆ ಬರುವುದು. ಅಂದರೆ ಕೇವಲ ೪ ದಿವಸಗಳಿಗೆ ಒಂದು ಬಾಣಂತಿಗೆ ಸಾಕಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು ಡಾ। ಬಿ. ಕೆ. ಶಿವರಾಮ ರಾವ್ ಕುಂಜಿಬೆಟ್ಟು, ಉಡುಪಿ.

ನೋಟೀಸು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ 1946ನೇ ಇಸ್ವಿ ಎಪ್ರೀಲು ತಾರೀಕು 1ರ ಲಾಗಾಯಿತು 1947ನೇ ಮಾರ್ಚ ತಾ 31ರ ವರೇಗಿನ ಒಂದು ವರ್ಷದ ವರೇಗೆ ಸಪ್ತಾಹದ ಮಾರ್ಕೆಟು, ದಿನವಹಿ ಮಾರ್ಕೆಟು ವಗಾಡಿ ಚಕ್ಕ ಇವುಗಳನ್ನು ವರಿ ವಸೂಲು ಮಾಡುವ ಸ್ವತಂತ್ರವನ್ನು ಇದೇ ತಿಂಗಳ ತಾ 28ಕ್ಕೆ ಅಪರಾಹ್ನ 3ಕ್ಕೆ ಕಾರ್ಕಳ ಪಂಚಾಯಿತ ಬೋರ್ಡು ಪ್ರೆಸಿಡೆಂಟರಿಂದ ಸದ್ರಿ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ.

ಎಸ್. ಹಿರಿಯಣ್ಣ ಹೆಗ್ಡೆ.

ಪ್ರೆಸಿಡೆಂಟ್.

ಕಾರ್ಕಳ ಪಂಚಾಯಿತ ಆಫೀಸು, ತಾ20-2-46

ಮುಟ್ಟುಗುಳಿಗೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— '**ಕುಮಾರಿ ಮಾತ್ರೆಗಳು**' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕ್ಲಿಷ್ಟವಾದ ಕೇಸುಗಳಿಗೆ ರೂ. 5. 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಧಿಕ.)

Mrs. D. DEVEE,

P. O. (...) Tollygunge, Calcutta.

ಸ್ಟಾಕಿಸ್ಟ್: ಸಾ ಕಂಪೆನಿ, ಮಂಗಳೂರು

ದಕ್ಷಿಣ ಕನ್ನಡ.

ಮಂಗಳೂರು-ಮೊಗವೀರ ವಿದ್ಯಾರ್ಥಿ ಸಂಘದ ೩ನೇ ವರ್ಧಂತಿಯು ತಾ. 17-2-46 ರಲ್ಲಿ 'ಜ್ಞಾನೋದಯ ಸಮಾಜ'ದಲ್ಲಿ ಶ್ರೀ. ಯು. ಕಣ್ಣಪ್ಪ, ಎಂ. ಎ.ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಲಕ್ಷ್ಮಣ ಕಾಲಿಯನ್, ಮೋನಪ್ಪ ತಿಂಗಳಾಯ, ಕೆ. ಕೃಷ್ಣ ಮರಕಾಲ, ರಘುನಾಥ ಇವರ ಭಾಷಣಗಳಾಗಿ ನಾಟಕಾದಿಗಳೊಂದಿಗೆ ಸಭಾಂತ್ಯವಾಯಿತು.

ಡಾ| ಹರ್ಡೀಕರರ ಚುನಾವಣಾ ಪ್ರಚಾರ ಕಾರ್ಯಕ್ರಮ-ತಾ 20ಕ್ಕೆ ಪಣಂಬೂರು, ಸುರತ್ಕಲ್, ಮೂಲ್ಕಿ. ತಾ 21 ಕ್ಕೆ ಮೂಡಬಿದ್ರೆ, ಕಾರ್ಕಳ, ಬೈಲೂರು, ಹಿರಿಯಡ್ಕಗಳ ಕಾರ್ಯಕ್ರಮವನ್ನು ಮುಗಿಸಿ ಅದೇ ದಿನ ಸಂಜೆ 6-30ಕ್ಕೆ ಉಡುಪಿ ರಥಬೀದಿಯಲ್ಲಿ ಸಾರ್ವಜನಿಕ ಭಾಷಣ ಮಾಡಲಿರುವರು. ತಾ 22ಕ್ಕೆ ಮಧ್ಯಾಹ್ನ 3 ಗಂಟೆಗೆ ಬ್ರಹ್ಮಾವರ, 5 ಗಂಟೆಗೆ ಕೋಟೆ, 6½ ಗಂಟೆಗೆ ಕುಂದಾಪುರದಲ್ಲಿ ಸಾರ್ವಜನಿಕ ಭಾಷಣ ಮಾಡಲಿರುವರು. ಇವರೊಡನೆ ಶ್ರೀಗಳಾದ ಎ. ಬಿ. ಶೆಟ್ಟಿ, ಶ್ರೀನಿವಾಸ ಮಲ್ಯ ಮೊದಲಾದವರು ಬರಲಿರುವರು.

ಇನ್ನಂಜೆ ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ತಾ. 23-2-46ನೇ ರಾತ್ರಿ 9-30ಕ್ಕೆ ಇನ್ನಂಜೆ ಹೈಸ್ಕೂಲಿನ ವಿದ್ಯಾರ್ಥಿಗಳು ನಾಟಕಾದಿ ವಿವಿಧ ವಿನೋದಾವಳಿಗಳನ್ನು ಶಾಲಾ ವಠಾರದಲ್ಲಿ ಪ್ರದರ್ಶಿಸಲಿರುವರು

ಮುಂಡ್ಕೂರು-ಸ್ಥಳೀಯ ಗೌಡಸಾರಸ್ವತ ವಿಠೋಬ ದೇವಸ್ಥಾನ ಊರ ಮತ್ತು ಬೊಂಬಾಯಿ ಮೊದಲಾದ ಪರವೂರ ಜನರ ಸಹಾಯದಿಂದ ಕಟ್ಟಲ್ಪಟ್ಟಿದ್ದಾದರೂ ಶ್ರೀ ಲಕ್ಷ್ಮಣ ಕಮ್ತಿಯು ಹಣ ಸಂಗ್ರಹದ ಬಗ್ಗೆ ಹೆಚ್ಚಿನ ಕಾರ್ಯ ನಿರ್ವಹಿಸಿದ್ದರೆಂದೂ 4-5 ವರ್ಷಗಳಾದರೂ ಜಮಾ ಖರ್ಚಿನ ಪಟ್ಟಿಯನ್ನು ಈ ವರೆಗೂ ಪ್ರಕಟಿಸಲಿಲ್ಲವೆಂದೂ ಇನ್ನಾದರೂ ಹಾಗೆ ಮಾಡುವುದು ನ್ಯಾಯವೆಂದೂ ಮುಂಬಯಿ ನಿವಾಸಿಕರಲ್ಲೊಬ್ಬರು ಬರೆಯುತ್ತಾರೆ.

ಬ್ರಹ್ಮಾವರ-ಕುಮ್ರಗೋಡು ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಕೆಲವರು ಹಣ ಸಂಗ್ರಹಿಸಿದ್ದರೂ ಜೀರ್ಣೋದ್ಧಾರ ಕೆಲಸವೇನನ್ನೂ ಮಾಡಿಲ್ಲವೆಂದೂ, ಇನ್ನಾದರೂ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಗ್ರಾಮಸ್ಥರಲ್ಲೊಬ್ಬರು ತಿಳಿಸುತ್ತಾರೆ.

ಮೂಳೂರು-ಇಲ್ಲಿಯ ಮಹನೀಯರಲ್ಲೊಬ್ಬರು ಪಂಚಾಯತಬೋರ್ಡ ಕಟ್ಟೋಣಕ್ಕೆಂದು ಬೊಂಬಾಯಿಯಿಂದ ಹಣ ಸಂಗ್ರಹಿಸಿ ತಂದಿದ್ದರೂ ಕಟ್ಟೋಣದ ಕೆಲಸ ಮಾಡಲಿಲ್ಲವೆಂದೂ ಮುಂಬಯಿಯ ಜನರು ಸಹಾಯ ಮಾಡುವಾಗ ಜಾಗ್ರತೆಯಿಂದಿರಬೇಕೆಂದೂ ಮಹನೀಯರೊಬ್ಬರು ಬರೆಯುತ್ತಾರೆ.

ಸೀರೂರು-ತಾ 11-2-46ರಲ್ಲಿ ಸಿಂಡಿಕೇಟ್ ಬ್ಯಾಂಕಿನ ರೂರಲ್ ಸೆಂಟರ್ ಶಾಖೆಯೊಂದರ ಉದ್ಘಾಟನಾ ಸಮಾರಂಭವು ಶ್ರೀ ದೇವೀದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು.

ಸುರತ್ಕಲ್-ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ17-2-46 ರಲ್ಲಿ ಡಾ| ಸಿ.ವಿ.ಗಿರಿ. ಎಮ್. ಇವರ ದಿ.ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಭಿನಂದನ, ವರದಿ ವಾಚನ ಮತ್ತು ಬಹುಮಾನ ವಿತರಣೆಗಳಾದ ನಂತರ ಸಭಾಧ್ಯಕ್ಷರು ಹೊಸ ಹೈಸ್ಕೂಲಿನ ಶ್ರೇಯೋಭಿವೃದ್ಧಿಯನ್ನು ಹಾರೈಸಿ ಭಾಷಣವಿತ್ತರು. ವಂದನಾರ್ಪಣವಾದ ಬಳಿಕ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅಭಿನಯ ಗೀತ, ಕನ್ನಡ ತುಳು ನಾಟಕ, ಬಯಲಾಟ ಮೊದಲಾದುವುಗಳಿಂದ ಸಭಿಕರನ್ನು ಆನಂದಗೊಳಿಸಲಾಯಿತು.

ಬ್ರಹ್ಮಾವರ-ತಾ 9-2-46ರಲ್ಲಿ ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ಶ್ರೀ ಮಾರುತಿ ಶಿಶು ವೀರರ ಮತ್ತು ವಿನಾಯಕ ಬುಲ್ ಬುಲ್ಸ್‌ಗಳ ದೀಕ್ಷಾ ಸಮಾರಂಭವು ಹಿಂದುಸ್ಥಾನ್ ಸ್ಕೌಟ್ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ಗೋಪಾಲಕೃಷ್ಣ ಪೈಗಳವರ ಅಧ್ಯಕ್ಷತೆಯಲ್ಲಿ ನೆರೆಯಿತು. ಧ್ವಜವಂದನಾನಂತರ ಸ್ಕೌಟಿಂಗಿನ ಕುರಿತಾಗಿ, ಕಬ್ ಮಾಸ್ತರಾದ ಶ್ರೀ ಬಿ. ಎಂ. ಶೆಟ್ರು, ಶ್ರೀಮತಿ ಕೃಷ್ಣಾಬಾಯಿಯವರೂ, ಬಿ. ವಿಠಲ ಶೆಟ್ರು, B. R. ಜೋಶಿಯವರೂ, Dr. N ಪೈಗಳವರೂ, P. ಮತ್ತು R.R. ಪೈಗಳವರೂ ಮಾತಾಡಿದರು ಮರಿಗಳ ಮತ್ತು ಬುಲ್ ಬುಲ್ಸ್‌ಗಳ ವಿವಿಧ ಚಟುವಟಿಕೆಗಳ ನಂತ್ರ ಅಧ್ಯಕ್ಷರು ಸುರಸವಾದ ಭಾಷಣ ಮಾಡಿದರು.

ಹಾರ್ದಳ್ಳಿ-ಶ್ರೀ ಹಿರಿಯಣ್ಣ ಶೆಟ್ರ ಪ್ರೋತ್ಸಾಹದಿಂದ ತಾ 15-2-1946ರಲ್ಲಿ ಪ್ರೇಕ್ಷಣೀಯ ಯಕ್ಷಗಾನ ಕೂಟವೊಂದು ಜರಗಿತು. ಯಕ್ಷಗಾನ ಕಲೆ ಮತ್ತು ಉಡುಪಿ ಕಲಾ ಮಂಡಳದವರ ಕಲಾ ಸೇವೆಯ ಕುರಿತು ಶ್ರೀ. ದೇಜಪ್ಪ ಶೆಟ್ಟರ ಭಾಷಣವೂ ಇತ್ತು.

ಉಡುಪಿ.

ಕಲಾವೃಂದ-ದ ನೇತೃತ್ವದಲ್ಲಿ ತಾ 8 ರಿಂದ ... ಸಪ್ತಾಹ ... ಕಾವ್ಯ ಪರೀಕ್ಷೆಗಳು ಶ್ರೀ ... . ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿದವು ತಾ 17ರಲ್ಲಿ ಕವಿ ಬೇಂದ್ರೆಯವರ ಜನ್ಮ ದಿನಾಚರಣೆಯು ಶ್ರೀ. ಪಿ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಕವಿ ಬೇಂದ್ರೆಯವರ ಕಾವ್ಯದಲ್ಲಿನ ಕೆಲವು ಹಿರಿಯ ಭಾವನೆಗಳನ್ನು ಪ್ರದರ್ಶಿಸಲಾಯಿತು.

ತಾಲೂಕುಹರಿಜನಸೇವಕಸಂಘ-ದ ಮಹಾ ಸಭೆಯು ತಾ 14ರಲ್ಲಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಶ್ರೀ. ಕೆ. ಜೆ. ಬಲ್ಲಾಳ್, ವಕೀಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯಕಲಾಪಗಳನ್ನೊಳಗೊಂಡ ವರದಿಯನ್ನು ಶ್ರೀ. ಎಸ್. ಎಸ್. ಕಿಲ್ಲೆಯವರು ಓದಿದರು. ಹರಿಜನ ಹಾಸ್ಟೆಲಿನ ಕಟ್ಟಡ ವಿಸ್ತರಣೆಯ ಕುರಿತು ತೀವ್ರ ಕಾರ್ಯಕ್ರಮ ಕೈಕೊಳ್ಳುವರೆ ನಿರ್ಧರಿಸಲಾಯಿತು. ಈ ಸಂದರ್ಭದಲ್ಲಿ ಕಟ್ಟಡಕ್ಕೆ ಬೇಕಾಗುವ ಹಂಚನ್ನು ... ಕೊಡುವೆನಾಗಿ ಶ್ರೀ. ಯು. ಎ. ಪೈಗಳವರು ವಾಗ್ದಾನ ಮಾಡಿದರು. ಬಳಿಕ ವರುಷದ ಕಾರ್ಯಕಾರೀ ಮಂಡಳಿಯ ಚುನಾವಣೆಯಾಯಿತು.

ಕಿರಿಯರಪ್ರಪಂಚದಅಕ್ರಿಯಶಳ್ಳಿ
ಇತ್ತೀಚೆಗೆ ಜರಗಿದ ಅಖಿಲ ಭಾರತ ವಿದ್ಯಾ ಪ್ರಬಂಧ ಸ್ಪರ್ಧೆಯಲ್ಲಿ ಕನ್ನಡ ಪ್ರಥಮ ಬಹುಮಾನವನ್ನು ಪಡೆದ ಬೋರ್ಡ್ ಹೈಸ್ಕೂಲ್ ಮಾಸ್ತರ್ ಶ್ರೀ. ಕೆ. ವಿ ಶೆಣೈಯವರಿಗೆ ಟೀಪಾರ್ಟಿ ಸತ್ಕಾರದಿಂದ ಗೌರವಿಸಲಾಯಿತು. ... ಸುಂದರರಾವ ಪೈಗಳವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎನ್. ಎಸ್. ಕಿಲ್ಲೆ ಮತ್ತು ಕೆ. ಎಚ್. ಶೆಟ್ಟರ ಸಂದರ್ಭೋಚಿತ ಮಾತುಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಶಾಲಾ ವರ್ಧಂತಿ-ಸೈಂಟ್ ಸಿಸಿಲೀಸ್ ಕಾನ್ವೆಂಟ್ ಹೈಸ್ಕೂಲಿನ ವರ್ಧಂತಿ ಸಮಾರಂಭವು ತಾ 15ರಲ್ಲಿ ನಗರ ಸಭಾಧ್ಯಕ್ಷ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮವು ಬಹಳ ಉದ್ದವಿತ್ತು.

ವನಸ್ಪತಿ ತುಪ್ಪ

ಕಳ್ಳಸಂತೆಯಲ್ಲಿ ಸರ್ವಥಾ ಕೊಂಡುಕೊಳ್ಳಬೇಡಿರಿ.

ಕಾರಣ ನಮ್ಮಲ್ಲಿ **ಶಕ್ತಿವರ್ಧಕ ತೈಲವು** ಯಥೇಚ್ಛವಿದೆ. ಈ ತೈಲದ ಉಪಯೋಗದಿಂದ ನರೆತ ಕೂದಲು ಕಪ್ಪಾಗುವುದು. ಮಾತ್ರವಲ್ಲದೆ ಕೂದಲು ಉದುರುವುದನ್ನು ತಡೆಗಟ್ಟಿ ಕೂದಲ ರಾಶಿಯನ್ನೆ ಬೆಳೆಸುವುದು. ವಾತಕ್ಕೆ ರಾಮಬಾಣದಂತಿರುವುದು.

ಡಿಸ್ಟ್ರಿಬ್ಯೂಟರ್ಸ್‌ರೊಡನೆ ಹೆಚ್ಚಿನ ಮಾಹಿತಿ ಪಡೆಯಿರಿ.

ಸ್ವದೇಶಿ ವನಸ್ಪತಿ ಮೆನ್ಯುಫೆಕ್ಚರಿಂಗ್ ಲಿಮಿಟೆಡ್,
ಪ್ರೊಸ್ಪೆಕ್ಟ್ ಚೇಂಬರ್ಸ್, ಹೊರ್ನ್ಬಿ ರೋಡು, ಫೋರ್ಟ ಬೊಂಬಾಯಿ.
ವನಸ್ಪತಿ ತುಪ್ಪ, ಸಾಬೂನು, ಲೋಂಡ್ರಿ ಚಿಪ್ಸ್, ಬರ್ಮಾ ಮೇಣಬತ್ತಿಗಳು, ಇತ್ಯಾದಿ ಇತ್ಯಾದಿಯನ್ನೇ ಸದಾ ಸರ್ವದಾ ಉಪಯೋಗಿಸಿರಿ.

SWADESHI VANASPATHI MANUFACTURING LTD,
Prospect Chambers Hornby Road, FORT BOMBAY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪ್ರುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-[illegible], ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿಟಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಭಾಷಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

‘ಬಹದೂರ’

ಕಬ್ಬಿನ ಗಾಣಗಳು



ಗಟ್ಟಿಮುಟ್ಟಾದ ರಚನೆ,
ಉತ್ತಮದರ್ಜೆಯ ಕೈಗಾರಿಕೆ
ಕ್ರಯ ರೂ. **430/-**

ಬ್ರಿಟಿಷ್ ಇಂಡಿಯ
ಎಂಜಿನಿಯರಿಂಗ್ ಕಂ.
ಬೊಂಬಾಯಿ 10.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ತುಂಬರಮಾಡಿ ಸ್ಟೋರ್ಸ. ದಾವಣಗೇರೆ:—ದಾವಣಗೇರಿ ಪ್ರೆಸ್ಸ್, ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಸ್ಥಳಗಳಿಂದ

ಜಿಲ್ಲಾ ಟೀಚರ್ಸ್ ಗಿಲ್ಡಿನ ಶಿಷ್ಟಮಂಡಳಿಯವರು ತಾ. ೧೦ರಂದು ಡಾ। ಸಪ್ರೂರರನ್ನು ಕಂಡು ತಮ್ಮ ಮನವಿಯೊಂದನ್ನು ಒಪ್ಪಿಸಿದರು. ಮನವಿಯಲ್ಲಿ, ನಮ್ಮ ಜಿಲ್ಲೆಯ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಗತಿಯ ಕುರಿತೂ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣಾಲಯ, ಟೆಕ್ನಿಕಲ್ ಶಾಲೆ ಇತ್ಯಾದಿಗಳ ಹೆಚ್ಚಳದ ಕುರಿತೂ ಪ್ರಸ್ತಾವಿಸಲಾಗಿತ್ತು. ಡೈರೆಕ್ಟರರು ಉತ್ತರ ಕೊಡುತ್ತ 'ಸರಕಾರದಿಂದ ಹೆಚ್ಚಿನ ಧನಸಹಾಯವನ್ನು ನಿರೀಕ್ಷಿಸಬೇಡಿರಿ. ನೀವೇ ಯತ್ನಪಟ್ಟು ಹಣ ಸಂಗ್ರಹಿಸಿದರೆ, ವಿಚಾರ ಮಾಡಲಾಗುವುದು' ಎಂದರು. ಉಡುಪಿಯಲ್ಲಿ ಕಾಲೇಜು ಸ್ಥಾಪನೆಗೆ ೧೦ ಲಕ್ಷ ರೂ.ಗಳ ಧನಸಂಚಯವಾಗಬೇಕು ಎಂದರಂತೆ.

ಕೆನರಾ ಹೈಸ್ಕೂಲಿನ ಉರ್ವದಲ್ಲಿನ ಕಟ್ಟಡದ ಶಂಕುಸ್ಥಾಪನಾ ಸಮಾರಂಭವು ತಾ. ೯ರಂದು ಡಾ। ಸಪ್ರೂರರ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಉಪಾಹಾರ ನಡೆದ ಬಳಿಕ, ರಾಷ್ಟ್ರೀಯ ಹೈಸ್ಕೂಲಿನ ಮುಖ್ಯಾಧ್ಯಾಪಕರಾದ ಶ್ರೀ। ಕೇಶವರಾಯರು, ಕೆನರಾ ಹೈಸ್ಕೂಲಿನ ಈ ವಾರ್ಷಿಕ ಸಂಕ್ಷಿಪ್ತ ವರದಿಯನ್ನೋದಿ, ಡಾ। ಸಪ್ರೂರರೊಡನೆ, ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡುವಂತೆ ವಿನಂತಿಸಿಕೊಂಡರು.

ಸಾರಸ್ವತ ವಿದ್ಯಾಭಿವೃದ್ಧಿ ಸಂಘದ ಸಹಾಯಾರ್ಥವಾಗಿ ತಾ. ೧೦ರಂದು ರಾತ್ರಿ ಗಣಪತಿ ಹೈಸ್ಕೂಲಿನಲ್ಲಿ, ಜಿಲ್ಲಾ ಕಲೆಕ್ಟರ್ ಡಾ। ಬಿ। ರಾಮದಾಸ್‌ರವರ ನೇತೃತ್ವದಲ್ಲಿ ನಾಟಕ ಒಂದನ್ನು ಆಡಲಾಯಿತು. ವಿದ್ಯಾಂಗದ ಡೈರೆಕ್ಟರರೂ ನಾಟಕಕ್ಕೆ ಆಗಮಿಸಿದ್ದರು. ಆರಂಭದಲ್ಲಿ ಶ್ರೀ। ಸೋಮಶೇಖರರಾಯರು ನಾಟಕವಾಡಿದ ಉದ್ದೇಶವನ್ನು ವಿವರಿಸುತ್ತ, ಸಾರಸ್ವತ ವರ್ಗದವರದಾದ ಈ ಶಾಲೆಗೊಂದು ವಿದ್ಯಾರ್ಥಿ ಭವನವನ್ನೂ, ಉಳ್ಳಾಲದಲ್ಲೊಂದು ಈ ಶಾಲೆಯ ಶಾಖಾರೂಪವಾದ ಹೈಸ್ಕೂಲನ್ನೂ ತೆರೆಯುವುದು ನಮ್ಮ ಉದ್ದೇಶ ಎಂದರು.

ಡಿ. ಸಿ ಮಿಶನ್ ಶಾಲೆಯ ವರ್ಧಂತಿಯು ತಾ. ೧೦ರಂದು ವಿದ್ಯಾ ಇಲಾಖೆಯ ಡೈರೆಕ್ಟರರಾದ ಡಾ। ಸಪ್ರೂರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಶ್ರೀ। ಜಿ ಸೋಮಶೇಖರ ರಾಯರು ಅಧ್ಯಕ್ಷರ ಪರಿಚಯ ಮಾಡಿಸಿಕೊಟ್ಟರು; ಮಿಶನಿನ ಸ್ಥಾಪಕರಾದ ಕುದ್ಮುಲ್ ರಂಗರಾಯರ ಕುರಿತು ಶ್ರೀ ರಾಮಚಂದ್ರನವರು ಭಾಷಣ ವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ದಿ. ರಂಗರಾಯರ ಹರಿಜನ ಸೇವೆಯನ್ನು ಕೊಂಡಾಡಿ ಸಂಸ್ಥೆಗೆ ಅಭಿವೃದ್ಧಿಯನ್ನು ಬಯಸಿದರು.

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ತಾ. ೧೨ರಂದು ಗಣಪತಿ ಹೈಸ್ಕೂಲಿನಲ್ಲಿ 'ಕನ್ನಡ ಸಂಸ್ಕೃತಿಯ ಮುನ್ನೋಟ' ಎಂಬ ವಿಷಯವನ್ನೆತ್ತಿಕೊಂಡು ಸರಸವಾದ ಭಾಷಣವನ್ನಿತ್ತರು. ತಾ. ೧೩ರಂದು ಸಂಜೆ ಸ್ಥಳೀಯ ಕನ್ನಡ ಪ್ರೇಮಿಗಳು ಥಿಯೊಸೊಫಿಕಲ್ ಲಾಜಿನಲ್ಲಿ ಶ್ರೀಯುತರಿಗೊಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಮಾಸ್ತಿ ಅವರು ಸಾಹಿತ್ಯ ಪರಿಷತ್ತನ್ನು ಬಲಪಡಿಸುವ ಕುರಿತಾಗಿ ಭಾಷಣವಿತ್ತರು.

ಶಿರ್ವ ಪಂಚಾಯತ್ ಬೋರ್ಡ್ ಪ್ರೆಸಿಡೆಂಟರಿಂದ—

ಪ್ರಕಟಣೆ

ಶಿರ್ವ ಪಂಚಾಯತ್ ಬೋರ್ಡಿಗೆ ಒಳಪಟ್ಟ ಮಂಚಕಲ್ಲು ಸಂತೆ ಮಾರ್ಕೆಟಿನಲ್ಲಿ ಮತ್ತು ಓನಬಾರಿ ಮಾರ್ಕೆಟಿನಲ್ಲಿ 1946ನೇ ಇಸ್ವಿ ಎಪ್ರಿಲ್ ತಿಂಗಳ ತಾರೀಕು 1ರಿಂದ 1947ನೇ ಇಸ್ವಿ ಮಾರ್ಚ 31ನೇ ತಾರೀಕು ವರೆಗೆ, 46 47ನೇ ಒಂದು ವರ್ಷದಲ್ಲಿ ವಸೂಲು ಮಾಡುವ ಸ್ವತಂತ್ರವನ್ನು ಪ್ರತ್ಯೆ ಪ್ರತ್ಯೇಕವಾಗಿ ಬರುವ ತಾ. 27-2-46ನೇ ಬುಧವಾರ ದಿನ ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ್ ಬೋರ್ಡ್ ಆಫೀಸಿನ ಬಳಿ ಪ್ರೆಸಿಡೆಂಟರಿಂದ ಯಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಶರ್ತ ವಗೈರೆ ಮಾಹಿತಿಗಳನ್ನು ಪಂಚಾಯತ್ ಬೋರ್ಡ್ ನೋಟೀಸ್ ಬೋರ್ಡಿನಲ್ಲಿರುವ ಬಹಿರಂಗ ಪ್ರಕಟಣಾದಿಗಳನ್ನು ನೋಡಿ ತಿಳಿದುಕೊಳ್ಳಬಹುದು ಎಂಬ ಸಂಗ್ತಿ ಉಮೇದ್ವಾರ ಹಾಗು ಸರ್ವ ಜನರಿಗೆ ಈ ಮೂಲಕ ತಿಳಿಸಲಾಗುತ್ತದೆ.

(Sd). **S. Annaya Hegde,**
President,
Panchayat Board, Shirva.

Panchayat Bd. Office
SHIRVA, 8—2—46.

ಬಂಟರ ಯಾನೆ ನಾಡವರ ಸಂಘ, ಮುಂಬಾಯಿ.

ಈ ಸಂಘದ ವಾರ್ಷಿಕ ಸಾರ್ವಜನಿಕ ಮಹಾಸಭೆಯು ತಾ 27 1-46ರಲ್ಲಿ ಪೀಪಲ್ಸ್ ಜಿಮ್ನಾ ಹೋಲಿನ ಮಹಾಡದಲ್ಲಿ ಶ್ರೀ ಮದನ್ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಆದಕ್ಕೆ ಸಂಬಳಿಗೆ ಈ ಕೆಳಗಿನ ಮೆಂಬರರು ಆರಿಸಲ್ಪಟ್ಟರು. ಶ್ರೀಗಳಾದ ಮದನ್ ಶೆಟ್ಟಿ (ಅಧ್ಯಕ್ಷರು.) ಉಪ್ಪೂರು ಕೃಷ್ಣ ಶೆಟ್ಟಿ (ಉಪಾಧ್ಯಕ್ಷರು.) ಕುತ್ಯಾರು ಶ್ಯಾಮ ಶೆಟ್ಟಿ (ಕೋಶಾಧಿಕಾರಿ.) ಎರ್ಮಾಳು ಮಹಾಲಿಂಗ ಶೆಟ್ಟಿ (ಸಹಾಯಕ ಕೋಶಾಧಿಕಾರಿ) ಎಮ್. ಶಿವಪ್ಪ ಶೆಟ್ಟಿ, (ಜನರಲ್ ಕಾರ್ಯದರ್ಶಿ) ಪ್ರತಾಪ ಚಂದ್ರ ಶೆಟ್ಟಿ, ಐಕಳ ಸಂಜೀವ ಶೆಟ್ಟಿ, ಬಿ. ದೇವದಾಸ್ ಶೆಟ್ಟಿ, ಕಾಪು ಸುಬ್ಬಯ ಶೆಟ್ಟಿ, (ಉಪಕಾರ್ಯದರ್ಶಿಗಳು.) ಎಮ್ ಶ್ರೀಧರ ಶೆಟ್ಟಿ, ಎಮ್ ದೊಂಬ ಶೆಟ್ಟಿ, ಪಾಂಗಾಳ ಮಹಾಬಲ ಶೆಟ್ಟಿ, ಎಸ್. ಸಂಜೀವ ಶೆಟ್ಟಿ, ಪಿ. ನಾರಾಯಣ ಶೆಟ್ಟಿ, ಟಿ. ಯಸ್. ಹೆಗ್ಡೆ, B.A L.L.B ಗೋವಿಂದ ಶೆಟ್ಟಿ, ಆರ್. ಆರ್. ಶೆಟ್ಟಿ, ಶೆಟ್ಟಿ, ಪಿ. ದೇವು ಶೆಟ್ಟಿ ಪಿ. ಓರಿಯಣ್ಣ ಶೆಟ್ಟಿ, ಶಿವಣ್ಣ ವಿ ಶೆಟ್ಟಿ, ವೈ. ಮುದ್ದಣ್ಣ ಶೆಟ್ಟಿ, ಎಮ್. ರಾಜು ಶೆಟ್ಟಿ, ಗುಂಡು ಆರ್. ಶೆಟ್ಟಿ, ಬಿ. ಆರ್. ಹೆಗ್ಡೆ, ಯಮ್. ಗಂಗಯ್ಯ ಶೆಟ್ಟಿ, ಕೆ. ಜಗನ್ನಾಥ ಶೆಟ್ಟಿ. ಟಿ. ವೆಂಕಟರಾಯ ಶೆಟ್ಟಿ, ವೇಣು ಯಸ್. ಶೆಟ್ಟಿ, ಎ. ವೆಂಕಪ್ಪ ಶೆಟ್ಟಿ, ಸುಬ್ಬಯ ಯಸ್ ಶೆಟ್ಟಿ, (ಮೆಂಬರರು) ಶ್ರೀ. ಕೆ. ವಿಟ್ಠಲ ಶೆಟ್ಟಿ ಸಂಘದ ಗೌರವ ಲೆಕ್ಕ ಪರಿಶೋಧಕರಾಗಿ ಆರಿಸಲ್ಪಟ್ಟರು.

ಅನಂತರ ಮುಂಬಯಿ ನಗರದಲ್ಲಿ ಕನ್ನಡ ಭಾಷೆಯನ್ನಾಡುವವರ ಸಂಖ್ಯೆಯು ಸಾಧಾರಣ ಎರಡು ಲಕ್ಷವಿರುವದರಿಂದ ನಗರದ ಕರ್ನಾಟಕ ಸಂಘಗಳ ಸಹಾಯವನ್ನು ಪಡೆದು ಈ ಸಂಘವು ಮುನಿಸಿಪಲ್ ಕೋರ್ಪರೇಶನಿನಲ್ಲಿ ಕನಿಷ್ಠ 10 ಸ್ಥಾನವನ್ನಾದರೂ ಕನ್ನಡಿಗರ ಪರವಾಗಿ ಪಡೆಯಬೇಕೆನ್ನುವ ದ. ಕ ಜಿಲ್ಲೆಯ ಬಂಟರೂ ಇತರ ಪ್ರತ್ಯೇಕರಹೂ ಈಗ ಆಚರಿಸುತ್ತಿರುವ ಅಳಿಯ ಸಂತಾನ ಕಾನೂನು ದೋಷಯುಕ್ತವಾಗಿದ್ದು ಅದರ ದುಷ್ಪರಿಣಾಮವನ್ನು ತೀವ್ರ ನಿಷೇಧಿಸುತ್ತದೆ ಹಾಗೂ ಜಾಲ್ತಿಯಲ್ಲಿರುವ ಸಂತ ಪರಂಪರೆಯ ಪದ್ಧತಿಯನ್ನು ಹೋಗಲಾಡಿಸಿ ಅದರ ಬದಲು 1925 ಇಸವಿಯ ಇಂಡಿಯನ್ ಸಕ್ಸೆಶನ್ ಆಕ್ಟು ಅನ್ವಯಿಸುವಂತೆ ಕಾನೂನು ದುರಸ್ತಿ ಮಾಡುವಂತೆ ಮದ್ರಾಸು ಮತ್ತು ಮುಂಬಯಿ ನ್ಯಾಯವಿಧಾಯಕ ಸಭೆಗಳನ್ನು ವಿನಂತಿಸುವ, ಮುಂಬಯಿಯಿಂದ ಹುಟ್ಟೂರಾದ ಕನ್ನಡ ಜಿಲ್ಲೆಗಳಿಗೆ ಹೋಗಿ ಬರಲು ವಾಹನ ಸೌಕರ್ಯಗಳು ಸಾಕಷ್ಟು ಇಲ್ಲದಿರುವುದರಿಂದ ಬೊಂಬಾಯಿಯಿಂದ ಕರಾವಳಿಯ ಮಾರ್ಗವಾಗಿ ಸ್ಟೀಮರು ಓಡಾವಳಿಯನ್ನು ಬೇಗನೆ ಪ್ರಾರಂಭಿಸುವಂತೆ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳನ್ನು ಕೇಳಿಕೊಳ್ಳುವ, ಭಾಷಾನುವಾರು ಕರ್ನಾಟಕ ಪ್ರಾಂತ ರಚನೆಯಾಗುವ ತನಕ ಆಡಳಿತ ಹಾಗೂ ಕಲಾಪ್ರವೃತ್ತಿಯಿಂದ ದ. ಕ. ಜಿಲ್ಲೆಯನ್ನು ಮುಂಬಯಿ ಪ್ರಾಂತಕ್ಕೆ ಸೇರಿಸುವಂತೆ ಕೇಂದ್ರ ಸರಕಾರವನ್ನು ವಿನಂತಿಸುವ ಠರಾವುಗಳಾದುವು.

ಶ್ರೀಗಳಾದ ರಾಮಚಂದ್ರ ರಾವ್ M.A. B [illegible] ಭಾಷಣಗಳಾದುವು. ಶ್ರೀಗಳಾದ [illegible] ಸಂಜೀವ ಶೆಟ್ಟಿ, ಬಜಾಲು ಸಂಜೀವ ಶೆಟ್ಟಿ ಹೋಟೇಲು ಮ್ಹಾಲಕರಿಗೆ ಸಂಘವು ಅಗತ್ಯಬಿದ್ದಾಗ ಸರ್ವ ಸಹಾಯ ಸಲಕರಣೆಗಳನ್ನೊದಗಿಸಿ ಕೊಡಬೇಕೆಂದರು. ಶ್ರೀ ಪಂಜೆ ದೇವು ಶೆಟ್ಟಿ ಹೋಟೇಲು ಕೆಲಸಗಾರರು ಪಡುತ್ತಿರುವ ಕಷ್ಟ ಪರಂಪರೆಗಳನ್ನು ವಿವರಿಸಿ ಈ ಬಗ್ಗೆ ಸಂಘವು ಅವಷ್ಯ ಪ್ರಯತ್ನಪಟ್ಟು ಹೋಟೇಲು ಕೆಲಸಗಾರರ ಕಷ್ಟಗಳನ್ನು ದೂರೀಕರಿಸಬೇಕೆಂದರು.

ಅಧ್ಯಕ್ಷರು ಸಂಘದ [illegible] ಯವಾಗಿಯೂ [illegible] ಯ ಅಭ್ಯುದಯಕ್ಕಾಗಿಯೂ ಸರ್ವರೂ ಅನ್ಯೋನ್ಯ ಭಾವದಿಂದ ವರ್ತಿಸಿ, ಸಂಘ ಶಕ್ತಿಯನ್ನು ಬೆಳೆಯಿಸಲು ಪ್ರತಿಯೊಬ್ಬ ಮೆಂಬರನೂ ಪ್ರಯತ್ನಿಸಬೇಕೆಂದು ದೀರ್ಘ ಭಾಷಣವಿತ್ತರು. ಧನ್ಯವಾದ, 'ವಂದೇ ಮಾತರಂ'ಗಳೊಂದಿಗೆ ಸಭಾಂತ್ಯವಾಯಿತು.

The Barkur Educational Society (Regd.)

ಬಾರಕೂರು ವಿದ್ಯಾಭಿವರ್ಧಿನಿ ಸಂಘ.

ಮಹಾಜನರಲ್ಲಿ ವಿನಂತಿ

ಬಾರಕೂರು ಇತಿಹಾಸ ಪ್ರಸಿದ್ಧವಾದ ಪಟ್ಟಣ. ಹಿಂದೆ ಇದು ಸಂಸ್ಕೃತಿಯ ತವರೂರು, ವ್ಯಾಪಾರದ ಕೇಂದ್ರ, ರಾಜರುಗಳ ಮುಖ್ಯ ಪಟ್ಟಣವಾಗಿ ಮೆರೆಯುತ್ತಿತ್ತು. ಕಾಲ ಮಹಿಮೆಯಿಂದ ಹೀನಸ್ಥಿತಿಗೆ ಬಂದು ಈಗ ಹಳ್ಳಿಗಳ ಕೇಂದ್ರವಾಗಿದೆ. ಜನಸಂದಣಿಯು ತುಂಬಾ ಇದ್ದು ವಿದ್ಯೆಯನ್ನಾಶಿಸುವ ಮಕ್ಕಳ ಸಂಖ್ಯೆಯು ಹೆಚ್ಚಿದ್ದರೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲಗಳಿಲ್ಲ. ಬಾರಕೂರಿನ ವ ಆಸುಪಾಸಿನ ಹಳ್ಳಿಗಳಲ್ಲಿ ಪ್ರಾಥಮಿಕ ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳು ಅನೇಕವಿದ್ದರೂ ಹತ್ತಿರ ಹೈಸ್ಕೂಲುಗಳಿಲ್ಲ, ವಿದ್ಯಾರ್ಥಿಗಳೆಲ್ಲಾ ಪರವೂರಿಗೇ ಹೋಗಿ ಪ್ರೌಢವಿದ್ಯಾಭ್ಯಾಸವನ್ನು ಹೊಂದಬೇಕಾಗಿದೆ ಜನರೆಲ್ಲರೂ ಆರ್ಥಿಕ ಸ್ಥಿತಿಯಲ್ಲಿ ಅನುಕೂಲರಿಲ್ಲದ್ದರಿಂದ ಹೆಚ್ಚಿನವರಿಗೆ ಇದು ಸಾಧ್ಯವಿಲ್ಲ. ಆದ್ದರಿಂದ ಬಾರಕೂರು ವ ನೆರೆಹೊರೆಯ ಅನೇಕ ಹಳ್ಳಿಪಟ್ಟಣಗಳ ಸೌಕರ್ಯಕ್ಕಾಗಿ ಕೇಂದ್ರ ಸ್ಥಳವಾದ ಬಾರಕೂರಿನಲ್ಲಿ ಒಂದು ಹೈಸ್ಕೂಲು ಅತ್ಯಗತ್ಯವಿದ್ದು ಈಗಿನ ಸ್ಥಿತಿಯಲ್ಲಿ ಜಿಲ್ಲಾ ಬೋರ್ಡು ವ ಮಾನ್ಯ ಸರಕಾರದವರು ಈ ಕೊರತೆಯನ್ನು ನೀಗಿಸುವ ಅಸಾಧ್ಯತೆಯನ್ನು ವ್ಯಕ್ತಪಡಿಸಿದ್ದರಿಂದ ಊರವರೇ ಈ ಕೊರತೆಯನ್ನು ನೀಗಿಸಲು ವಿದ್ಯಾಭಿವೃದ್ಧಿಯೇ ಮುಖ್ಯ ಧ್ಯೇಯವಾಗಿಟ್ಟುಕೊಂಡು **"The Barkur Educational Society"** ಎಂಬ ಸಂಘವನ್ನು ಸ್ಥಾಪಿಸಿ ರಿಜಿಸ್ಟ್ರಿ ಮಾಡಿರುವರು. ಹೈಸ್ಕೂಲನ್ನು ಸ್ಥಾಪಿಸುವರೆ ಅನುಮತಿ ಕೊಡಬೇಕಾಗಿ ತಾ. 8-9-1945ರಲ್ಲಿ ಮಾನ್ಯ ವಿದ್ಯಾಖಾತೆಯ ಡೈರೆಕ್ಟರವರಿಗೆ ಅರ್ಜಿಮಾಡಿದ್ದಲ್ಲದೆ ತಾ. 11-2-1946ರಲ್ಲಿ ಸಂಘದ ಕಡೆಯಿಂದ ಮಾನ್ಯ ಡೈರೆಕ್ಟರರವರನ್ನು ಡೆಪ್ಯುಟೇಶನ್ ಮೂಲಕ ಸಂದರ್ಶಿಸಿ ಬೇಡಿಕೆಗಳನ್ನು ಮುಂದಿಟ್ಟಾಗ ಮಾನ್ಯ ಡೈರೆಕ್ಟರರವರು **ಬಾರಕೂರಿಗೆ ಹೈಸ್ಕೂಲು ಅಗತ್ಯವೆಂಬ ವಿಚಾರಕ್ಕೆ ಸಮಾಧಾನಪಟ್ಟು ಹೈಸ್ಕೂಲಿಗೆ ಬೇಕಾಗುವ ಕಟ್ಟಡಗಳು ವ ಧನಸಂಗ್ರಹವನ್ನು ಒದಗಿಸಿಕೊಟ್ಟಲ್ಲಿ ಹೈಸ್ಕೂಲನ್ನು ಸ್ಥಾಪಿಸುವರೆ ಅನುಮತಿಕೊಡುವದಾಗಿಯೂ ಇದೇ ಜೂನ್ ತಿಂಗಳಿಂದ I. II. III. IVನೇ ಫೋರ್ಮುಗಳನ್ನು ತೆರೆಯುವರೆಹುಕುಂ ಕೊಡುವದಾಗಿಯೂ ಆಶ್ವಾಸನೆ ಇತ್ತಿರುತ್ತಾರೆ.**

ಹೈಸ್ಕೂಲನ್ನು ಸ್ಥಾಪಿಸಿ ಯೋಗ್ಯ ರೀತಿಯಿಂದ ನಡೆಯಿಸಿಕೊಂಡು ಹೋಗಲು ಹೇರಳ ದ್ರವ್ಯಸಂಚಯವು ಅಗತ್ಯವಿರುವದರಿಂದ ಸಂಘವು ವಿದ್ಯಾಭಿಮಾನಿಗಳಾದ ಉದಾರ ಮಹನೀಯರ ಸಹಾಯವನ್ನು ಕೋರುತ್ತದೆ. ಸಂಘದ ಸದಸ್ಯ ಚಂದಾವನ್ನು ಈ ಕೆಳಗಿನಂತೆ ನಿರ್ಣಯಿಸಿದೆ.

ಸ್ಥಾಪಕರು ರೂ 5000 - ವ ಮೇಲ್ಪಟ್ಟು ಕೊಟ್ಟವರು.
ಆಜೀವ ಸದಸ್ಯರು ರೂ. 1000/- ವ ಮೇಲ್ಪಟ್ಟು ಕೊಟ್ಟವರು.
ಗೌರವ ಸದಸ್ಯರು ರೂ. 500/- ವ ಮೇಲ್ಪಟ್ಟು ಕೊಟ್ಟವರು.
ಸದಸ್ಯರು ರೂ. 100/- ವ ಮೇಲ್ಪಟ್ಟು ಕೊಟ್ಟವರು.

ಇಷ್ಟರ ವರೆಗೆ ಸಂಘವನ್ನು ಸೇರಿದ ಸದಸ್ಯರ ಚಂದಾ ರೂ 32000 ಕ್ಕೆ ಏರಿರುತ್ತದೆ.

ಉದಾರಿಗಳಾದ ಮಹನೀಯರು ಸಂಘದ ಸದಸ್ಯರಾಗಿ ಯಾ ಸಂಘಕ್ಕೆ ತಮ್ಮ ಶಕ್ತ್ಯನುಸಾರ ಸಹಾಯ ಧನವನ್ನು ಕೊಡುವದರ ಮೂಲಕ ಸಂಘವನ್ನು ಪ್ರೋತ್ಸಾಹಿಸಿ ಸಂಘದ ಉದ್ಯಮಗಳು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ವಿನಂತಿ.

ಅಧ್ಯಕ್ಷರು:
ಶ್ರೀ. ಶ್ರೀ. ವಿದ್ಯಾಮಾನ್ಯ ತೀರ್ಥ ಸ್ವಾಮಿಯವರು, ಭಂಡಾರಕೇರಿಮಠ.
ಉಪಾಧ್ಯಕ್ಷ: ಶ್ರೀ. H. ರಾಮಣ್ಣ ಶೆಟ್ಟಿ.
Treasurer:- ಶ್ರೀ ಡಾಕ್ಟರ್ ಎ ಎಸ್. ಹೆಬ್ಬಾರ್ L. M. & S.
ಕಾರ್ಯದರ್ಶಿ ಮತ್ತು ಜೊತೆಕಾರ್ಯದರ್ಶಿ:
1. ಶ್ರೀ ಅಲ್ತಾರು ರಾಮಣ್ಣ ಶೆಟ್ಟಿ 2. ಜೋನ್ ಪಿ. ಸಿಕೇರ, Esq
ಶ್ರೀ ಮಾಧವ ಮಂಗಳ ಪೂಜಾರಿ, [illegible], [illegible] ಸಮಾಜ,
ಆಡಳಿತ ಮಂಡಳಿ ಸದಸ್ಯರು

ಸಹಾಯ ಧನವನ್ನು ಡಾಕ್ಟರ್ ಎ ಎಸ್. ಹೆಬ್ಬಾರ್, L. M. & S., ಕೋಶಾಧ್ಯಕ್ಷ, ಬಾರಕೂರು ಎಜ್ಯುಕೇಶನಲ್ ಸೊಸೈಟಿ (Regd.) ಬಾರಕೂರು ಇವರ ಹೆಸರಿಗೆ ಕಳುಹಿಸಬೇಕಾಗಿ ವಿನಂತಿ.

ಮಂಗಳೂರಲ್ಲಿ ಆಚಾರ್ಯ ಕೃಪಲಾನಿಯವರು

ತಾ. ೧೨ರಂದು ಸಂಜೆಯ ಮೈಲಿಗೆ ಮಂಗಳೂರಿಗೆ ಬಂದಿಳಿದರು. ರೈಲ್ವೆ ನಿಲ್ದಾಣದಲ್ಲಿ ಶ್ರೀಮತಿ ಕಮಲಾದೇವಿ, ಶ್ರೀಗಳಾದ ಶ್ರೀನಿವಾಸಮಲ್ಯ, ಕೆ. ಆರ್. ಕಾರಂತ, ಡಾ। ಮಲ್ಯರೇ ಮೊದಲಾದ ಮುಖಂಡರೂ ವಿದ್ಯಾರ್ಥಿಗಳೂ ಆಚಾರ್ಯರನ್ನು ಎದಿರ್ಗೊಂಡರು.

ತಾ. ೧೩ರಂದು ಮುಂಜಾನೆ, ಸ್ಥಳೀಯ ಡಿ. ಸಿ. ಮಿಶನ್ ಶಾಲೆ ಹಾಗೂ ವಿದ್ಯಾರ್ಥಿ ಭವನವನ್ನೂ, ಭಗಿನೀ ಸಮಾಜ, ಗ್ರಾಮೈಕ್ಯಗಾರಿಕೆ, ಖಾದಿ ಭಂಡಾರಗಳನ್ನೂ ಸಂದರ್ಶಿಸಿ ಸಂಜೆ ಬಂಟವಾಳದ ಅತ್ತ ಕಡೆಗೆ ತೆರಳಿದರು. ಬಂಟವಾಳ, ಪಾಣೆಮಂಗಳೂರುಗಳಲ್ಲಿ ಭಾಷಣವಿತ್ತರು. ಅಲ್ಲಿಂದ ಪುತ್ತೂರಿಗೆ ತೆರಳಿ, ಅಲ್ಲಿ ಡಾ। ಬಿ. ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ನೆರದ ದೊಡ್ಡ ಸಭೆಯ ಮುಂದೆ ಮಾತನಾಡುತ್ತ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರೇ ಪ್ರಚಂಡ ಬಹುಮತದಿಂದ ಆರಿಸಿ ಬರುವಂತೆ ಸಹಕರಿಸಬೇಕೆಂದರು. ಪುತ್ತೂರಿನಿಂದ ಹಿಂದೆ ಬರುತ್ತ ವಿಟ್ಲದಲ್ಲಿಯೂ ಭಾಷಣಕ್ಕೆ ಏರ್ಪಾಡು ನಡೆದಿತ್ತು. ಕೃಪಾಲನಿಯವರು ವಿಟ್ಲಕ್ಕೆ ತಲಪುವಾಗ ರಾತ್ರಿ ಗಂಟೆ ೯ ಕಳೆದಿದ್ದರೂ, ಜನರು ಕಾದು ಕುಳಿತಿದ್ದರು. ಅಲ್ಲಿ ಭಾಷಣವಾದ ಬಳಿಕ ಮಂಗಳೂರಿಗೆ ಬರಲಾಯಿತು.

ತಾ. ೧೪ರಂದು ಮುಂಜಾನೆ ಮೂಡಬಿದ್ರಿ ಕಾರ್ಖಾನೆಗಳನ್ನು ಸಂದರ್ಶಿಸಿದರು.

ಕಾರ್ಯಕರ್ತರ ಸಭೆ

ಸಂಜೆ ೪। ಗಂಟೆಗೆ, ಸ್ಥಳೀಯ ಥಿಯೊಸೊಫಿಕಲ್ ಲಾಜಿನಲ್ಲಿ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದು ಜರಗಿತು. ಈ ಸಭೆಗೆ, ಶ್ರೀಗಳಾದ ಎಂ. ಎಸ್. ಶ್ರೇಷ್ಠ, ಎಲ್. ಸಿ. ಪಾಯಸ್ ಮೊದಲಾದ ಕ್ರೈಸ್ತ ಬಂಧುಗಳೂ ಆಗಮಿಸಿದ್ದರು. ನೆರೆದವರಿಂದ ಕೇಳಲಾದ ಪ್ರಶ್ನೆಗಳಿಗೆ, ಕೃಪಾಲನಿ ಅವರು ಉತ್ತರವೀಯುತ್ತಿದ್ದರು. ಶ್ರೀ। ಶ್ರೇಷ್ಠರು ಮಾತನಾಡುತ್ತ 'ಈ ನಗರದ ಹಿಂದೀ ಕ್ರೈಸ್ತ ವರ್ಗದವರಾದ ನಾವು ಕೆಲವರು ಈಗ ಕಾಂಗ್ರೆಸ್ ಪಕ್ಷವನ್ನು ಸೇರಬೇಕೆಂದಿದ್ದೇವೆ. ಸೇರಬಹುದೇ?' ಎಂದು ಕೇಳಲು 'ಕಾಂಗ್ರೆಸ್ ಎಂಬುದು ನನ್ನೊಬ್ಬನ ಅಥವಾ ನಿಮ್ಮೊಬ್ಬರ ಸಂಸ್ಥೆಯಲ್ಲ. ಅದು ಅಖಿಲ ಭಾರತೀಯರ ಸಂಸ್ಥೆ. ದೇಶದ ಸ್ವಾತಂತ್ರ್ಯವನ್ನಪೇಕ್ಷಿಸುವ ಪ್ರತಿಯೊಬ್ಬ ಹಿಂದೀಯನಿಗೂ, ಆತನು ಕ್ರೈಸ್ತನಾಗಿರಲಿ, ಮುಸಲ್ಮಾನನಾಗಿರಲಿ; ಈ ಸಂಸ್ಥೆಯನ್ನು ಸೇರುವ ಹಕ್ಕು ಸದಾ ಇದೆ' ಎಂದರು. ಇನ್ನೂ ಕೆಲವು ಪ್ರಶ್ನೋತ್ತರಗಳಾದ ಬಳಿಕ ಸಭೆ ಕೊನೆಗೊಂಡಿತು.

ಸಾರ್ವಜನಿಕ ಸಭೆ

ಸಂಜೆ ೬॥ಗಂಟೆಗೆ ಕೇಂದ್ರ ಮೈದಾನಿನಲ್ಲಿ ರೇಡಿಯೊ ಪೆವಿಲಿಯನಿನ ಬಳಿ ನೆರೆದ ದೊಡ್ಡ ಸಭೆಯ ಮುಂದೆ ಮಾತನಾಡುತ್ತ 'ನಮ್ಮ ದಾಸ್ಯ ಮನೋವೃತ್ತಿ ಇನ್ನೂ ನಮ್ಮನ್ನು ಪೂರ್ಣ ತೊಲಗಿಲ್ಲ. ಗಾಂಧಿಜಿಯರಂಥವರು ಆಗಾಗ ನಮ್ಮ ಬಳಿಗೆ ಬಂದು, ನಾವು ಪ್ರಪಂಚದ ಯಾವ ಜನಾಂಗಕ್ಕೂ ಹಿಂದುಳಿದವರಲ್ಲ ಎಂಬುದನ್ನು ತೋರಿಸಿಕೊಡುತ್ತಾರೆ. ಆದರೂ ನಾವವರನ್ನು ನಂಬುವುದಿಲ್ಲ. ನಿಮ್ಮನ್ನು ನೀವು ಅರಿತುಕೊಂಡಾಗಲೆ ಸ್ವರಾಜ್ಯವು ಸಮೀಪಗತವಾಗುವುದು'—ಎನ್ನುತ್ತ ತಮ್ಮ ಭಾಷಣವನ್ನಾರಂಭಿಸಿದರು.

ಶ್ರೀಮತಿ ಕಮಲಾದೇವಿ ಅವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಬಳಿಕ, ಟೌನ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಿಂದ ಪ್ರಾರ್ಥನೆ ನಡೆಯಿತು.

'ಈ ಸುಂದರವಾದ ಊರಲ್ಲಿ ಜನಿಸಿದ ನೀವು ಭಾಗ್ಯವಂತರು. ಇಲ್ಲಿನ ತೆಂಗು ಕಂಗಿನ ಬೆಡಗು ನನ್ನನ್ನು ತುಂಬ ಆಕರ್ಷಿಸಿದೆ.' ಎನ್ನುತ್ತ ಕೃಪಾಲನಿ ಅವರು ತಮ್ಮ ಭಾಷಣವನ್ನು ಆರಂಭಿಸಿದರು. ಮುಂದುವರಿಸುತ್ತ ಭಾರತ ವರ್ಷದಲ್ಲಿ ಜನಿಸಿದ ನಾವೆಲ್ಲರೂ ಭಾಗ್ಯವಂತರೆ. ಹಿಂದೆ ನಮ್ಮ ನಾಡು ಸ್ವತಂತ್ರವಾಗಿತ್ತು. ಕ್ರಮೇಣ ಅಧಿಕಾರ ಲಾಲಸೆಯಿಂದ ಆ ಸ್ವಾತಂತ್ರ್ಯವನ್ನು ಕಳೆದುಕೊಂಡು ಅಧೋಗತಿಗಿಳಿಯಿತು. ಪುನಃ ಈ ಜನಾಂಗವನ್ನು ಉದ್ಧರಿಸಲು ಯತ್ನಿಸುತ್ತಿರುವ ಸಂಸ್ಥೆಯೆ ಕಾಂಗ್ರೆಸ್. ಮುಂದಾದರೂ ನಾವು ಎಚ್ಚರದಿಂದಿರಬೇಕು. ಪ್ರಪಂಚದ ಜನಾಂಗಗಳಿಗಿನ್ನೂ ಒಂದನ್ನು ಇನ್ನೊಂದು ಹರಿದು ತಿನ್ನುವ ಹಂಬಲ ಹೋಗಿಲ್ಲ. ಆದುದರಿಂದ ಬ್ರಿಟಿಷರು ಇಲ್ಲಿಂದ ತೊಲಗಿದ ಬಳಿಕವೂ ನಾವು ಎಚ್ಚರದಿಂದಿರಬೇಕು. ಪ್ರತಿಯೊಬ್ಬನಲ್ಲೂ ಈ ದೇಶ ತನ್ನದೆಂಬ ಭಾವನೆ ಮೂಡಬೇಕು.

'ನಾವು ಪ್ರಪಂಚದ ಯಾವ ಜನಾಂಗದವರಿಂದಲೂ ಕೀಳಲ್ಲ. ಆದರೆ, ಇಂದು ನಮ್ಮಲ್ಲಿ ಬೆಳೆದಿರುವ ದಾಸ್ಯ ಮನೋವೃತ್ತಿಯು ನಮ್ಮನ್ನೇ ನಾವು ಅರಿತುಕೊಳ್ಳದಂತೆ ಮಾಡಿದೆ. ನಾಯಿಮರಿಗಳ ಜತೆಗೆ ಬೆಳೆದ ಸಿಂಹದ ಮರಿಯಂತಾಗಿದ್ದೇವೆ ನಾವು. ಸಿಂಹ ಒಂದು ಬಂದು ನಮ್ಮ ನಿಜಸ್ಥಿತಿಯನ್ನು ತಿಳಿಸಿದರೂ ನಾವದನ್ನು ನಂಬದ ಸ್ಥಿತಿಗಿಳಿದಿದ್ದೇವೆ. ನಮ್ಮ ಹೇಯ ಪರಿಸ್ಥಿತಿಗೆ ಇಂಡೋನೇಶ್ಯದ ಒಂದೇ ನಿದರ್ಶನ ಸಾಕು. ಯಾರಿಗಾಗಿ ನಾವು ಆ ದೇಶಪ್ರೇಮಿಗಳಿಗಿದಿರಾಗಿ ಕಾದಾಡುತ್ತಿರುವುದು? ಬೇಟೆಗಾರನ ನಾಯಿಯು ಒಡೆಯನಿಗಾಗಿ ಮೃಗವನ್ನು ಕೊಂದು ತರುತ್ತದೆ, ಹಾಗೆಯೆ ಹಿಂದೀ ಸೇನೆಗಳಿಂದು ಇಂಡೋನೇಶ್ಯದಲ್ಲಿ ಉಪಯೋಗಿಸಲ್ಪಡುತ್ತಿವೆ. ಈ ಸೇನೆಗಳಿಗೆ ಸಿಗುವುದಾದರೂ ಏನು? ಬರೇ ಎಲುಬು. ಮಾಂಸವೆಲ್ಲ ಒಡೆಯನಿಗೆ. ಮಹಾತ್ಮರಂಥವರು ನಮ್ಮ ನಿಜಸ್ಥಿತಿಯನ್ನು ನಮಗೆ ತೋರಿಸಿಕೊಡಲು ಯತ್ನಿಸುತ್ತಿದ್ದಾರೆ. ಆದರೆ ಜನರಿನ್ನೂ ಅವರ ಮಾತನ್ನು ಪೂರ್ಣ ನಂಬಿಲ್ಲ.'

ರಚನಾತ್ಮಕ ಕಾರ್ಯ

ಆ ಬಳಿಕ ರಚನಾತ್ಮಕ ಕಾರ್ಯಕ್ರಮಗಳ ವಿಚಾರವಾಗಿ ಮಾತನಾಡುತ್ತ, 'ಭಾರತದಲ್ಲಿ ಒಂದು ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿದ್ದ ಬಟ್ಟೆಯ ಕೈಗಾರಿಕೆಯು ಇಂದು ನಾಶವಾಗಿದೆ. ವಿದೇಶ ಬಟ್ಟೆಗಳಿಗೆ ನಾವು ಗುಲಾಮರಾದೆವು. ಇತ್ತೀಚೆಗೆ ಯುದ್ಧದ ದೆಸೆಯಿಂದಾಗಿ ಹೊರಗಿಂದ ಬಟ್ಟೆ ಬರಲಿಲ್ಲ. ಪ್ರತಿಫಲವಾಗಿ ಬಂಗಾಳದಲ್ಲಿ ಕೆಲ ಮಂದಿ ಸ್ತ್ರೀಯರು ಮಾನ ಮುಚ್ಚಿಕೊಳ್ಳಲಾರದೆ ಆತ್ಮಹತ್ಯೆ ಮಾಡಿಕೊಂಡರು. ಎಂತಹ ಹೇಯ ಪರಿಸ್ಥಿತಿ? ಪ್ರತಿಯೊಬ್ಬ ಸ್ತ್ರೀಯೂ ಪುರುಷನೂ ಪ್ರತಿನಿತ್ಯ ದಿನಕ್ಕೊಂದು ಗಂಟೆಯಂತೆ ನೂತರೆ ಆತನಿಗೆ ಬೇಕಾಗುವಷ್ಟು ಬಟ್ಟೆ ತಯಾರಿಸಬಹುದು. ನಮ್ಮ ಈಗಿನ ಸ್ತ್ರೀಯರಿಗೆ ಗೃಹಕೃತ್ಯದ ಕೆಲಸ ಕಡಿಮೆ. ಆದರೂ ಅವರು ವಿದೇಶಿ ನೂಲುಗಳನ್ನು ತರಿಸಿ ಕಸೂತಿ ಕೆಲಸಗಳಲ್ಲಿ ತಮ್ಮ ಸಮಯ ವೆಚ್ಚ ಮಾಡುವರೇ ಹೊರತು, ಚರಕವನ್ನು ತಿರುಗಿಸಲಾರರು. ಯುದ್ಧವು ನಮಗೊಳ್ಳೇ ಪಾಠ ಕಲಿಸಿದೆ. ಇನ್ನಾದರೂ ಎಲ್ಲರೂ ನೂಲಲು ಕಲಿಯಿರಿ.

ರಾಷ್ಟ್ರಭಾಷೆ

'ಹಾಗೆಯೆ ಹಿಂದೂದೇಶಕ್ಕೆ ನಮ್ಮದೇ ಆದ ಭಾಷೆಯೊಂದು ಬೇಕು. ಅದಿಲ್ಲದಿರುವುದರಿಂದಲೆ, ನಿಮ್ಮ ದೇಶದವನೆ ಆದ ನಾನು ಪರಭಾಷೆಯಿಂದ ನಿಮ್ಮೊಡನೆ ಮಾತನಾಡಬೇಕಾಗಿದೆ.'

ಕೊನೆಗೆ ಚುನಾವಣೆಯ ಕುರಿತಾಗಿ ಮಾತನಾಡುತ್ತ, 'ದೇಶಕ್ಕಾಗಿ ಯಾರು ಅಪಾರ ಸೇವೆ ನಡೆಸಿದ್ದಾರೊ ಅವರನ್ನು ಆರಿಸಿರಿ; ಆಸುರೀ ಪಕ್ಷಗಳೂ ನಿಮ್ಮ ಓಟನ್ನೆಳೆಯಲು ಯತ್ನಿಸಬಹುದು. ಎಚ್ಚರ.'

ಅಧ್ಯಕ್ಷೆಯವರು ಆಚಾರ್ಯರ ಭಾಷಣವನ್ನು ಸಂಗ್ರಹಿಸಿ ನಾಲ್ಕು ಮಾತುಗಳನ್ನಾಡಿದ ಬಳಿಕ, ಜಿಲ್ಲಾ ಕಾಂ. ಕಮಿಟಿಯ ಕಾರ್ಯದರ್ಶಿ ಶ್ರೀ ನಾರಾಯಣ ರಾಯರು ಮಾತನಾಡುತ್ತ, ನಮ್ಮ ಜಿಲ್ಲೆಯಿಂದ ಕಾಂಗ್ರೆಸ್ ಉಮೇದ್ವಾರರಾಗಿ ನಿಂತಿರುವ ಶ್ರೀಗಳಾದ ಕೆ. ಆರ್. ಕಾರಂತ, ಡಾ। ಯು. ಪಿ. ಮಲ್ಯ, ಎ. ಬಿ. ಶೆಟ್ಟಿ, ಕೆ. ಈಶ್ವರ ಮತ್ತು ಕ್ರಿಶ್ಚನ್ ಕ್ಷೇತ್ರದಿಂದ ಈಗ ತಾನೆ ಕಾಂಗ್ರೆಸ್ ಉಮೇದ್ವಾರರಾಗಿ ಆರಿಸಲ್ಪಟ್ಟಿರುವ ಶ್ರೀ. ಎಲ್. ಸಿ. ಪಾಯಸ್ ಇವರಿಗೇನೇ ತಮ್ಮ ಮತಗಳನ್ನು ಕೊಡಬೇಕೆಂದು ವಿನಂತಿಸಿಕೊಂಡರು.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ [illegible], ಅದು ದಮ್ಮನ್ನು ಬರೇ ದುಮುಕಿಸದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುಮಾಡಿದಾಗಲೇ ಕೆಮ್ಮು ತೇಕೂ ನಿಲ್ಲುವವು; ಹೊಟ್ಟೆ ಹಸಿವಾಗುವದು, ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ರೋಗ ಮರುಕಳಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ. ಸಿ ನಟರಾಜನ್&ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.



The Pangal Nayak Bank Limited.

(Incorporated in 1920.)
Registered Office: Court Road, UDIPI.

Sub-Offices at— **Udipi, Mangalore, Katapadi, Kanhangad, Kinnigoli, Nileshwar and Suratkal,** South Canara.

SEASON DEPOSITS for THREE & FOUR
months at a special rate of interest are accepted at all the above offices.

All kinds of up-to-date Banking service is provided promptly.

[illegible] particulars of business

Dated the 5th January 1946.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ [illegible] **ಪೋಸ್ಟ ಖರ್ಚ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧವಾದ
ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.
ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು.

(೨ನೇ ಪುಟದಿಂದ ಮುಂದುವರಿದುದು)

ಭಗತಸಿಂಗನ ಹೆಸರನ್ನು ಹಿಂದೀಯರಾರೂ ಎಂದೂ ಮರೆಯುವಂತಿಲ್ಲ. ಲಾಹೋರು ಒಳಸಂಚು ಮೊಕದ್ದಮೆ, ಎಸೆಂಬ್ಲಿ ಬಾಂಬುಗಲಭೆ ಮೊದಲಾದ ಹಲವು ಆರೋಪಗಳಿಗೀಡಾಗಿದ್ದ ಉಗ್ರ ಕ್ರಾಂತಿಕಾರನಾತ. ದೇಶಸ್ವಾತಂತ್ರ್ಯ ಸಾಧನೆಗಾಗಿಯೇ ಅವಿವಾಹಿತನಾಗಿದ್ದು, ಅದೊಂದನ್ನಲ್ಲದೆ ಅನ್ಯಥಾ ಸ್ಮರಣೆಯನ್ನೇ ಅರಿಯದ ತೀಕ್ಷ್ಣಯುಧ ಆವ! ಅವನಿಗೆ ಮರಣದಂಡನೆ ವಿಧಿಸಲ್ಪಟ್ಟಿದ್ದಿತು. ಎಲ್ಲಾ ಆಶೆಯೂ ಮುಗಿದ ಮೇಲೆ ತಮ್ಮವನನ್ನು ಕೊನೆಯ ಬಾರಿ ನೋಡುವದಕ್ಕಾಗಿ ಆತನ ತಮ್ಮ ಮತ್ತು ಕುಟುಂಬಿಕರು ಬಂದುಹೋದರು. ಭಗತಸಿಂಗ ಮರುದಿನ ತಮ್ಮನಿಗೆ ಬರೆದ ಪತ್ರದಲ್ಲಿ ಹೀಗಿತ್ತು: "ತಮ್ಮಾ, ನಾನು ಸಂತೋಷದಿಂದ ಸಾಯಬಲ್ಲೆ. ಸಾಧ್ಯವಿದ್ದಷ್ಟನ್ನು ಮಾಡಿ ಸಾರ್ಥಕ ಮರಣ ಹೊಂದುವೆನೆಂಬ ಆತ್ಮತೃಪ್ತಿ ನನಗಿದೆ. ಆದರೆ ನಿನ್ನೆ ನಿನ್ನ ಮುಖವನ್ನು ಕಂಡಾಗ ನಾನು ಕಳವಳಗೊಂಡೆ. ನಿನ್ನ ಕಣ್ಣುಗಳು ತುಂಬಿಬಂದಿದ್ದುವು. ನನಗಾಗಿ ಏನೊಂದೂ ಚಿಂತೆ ಕಟ್ಟಿಕೊಳ್ಳಬೇಡ. ಶಾಂತನಾಗಿದ್ದುಕೊಂಡು ನಿನ್ನ ಕಾಲೇಜು ವಿದ್ಯಾಭ್ಯಾಸವನ್ನು ಮುಂದುವರಿಸು..."

೦೦ ೦೦ ೦೦

ಗಾಂಧಿಜೀ ಸರ್ವತ್ಯಾಗಿ ತಾನೇ? ಆಗಾಖಾನ್ ಅರಮನೆಯಲ್ಲಿದ್ದಾಗ ಅವರಿಗುಂಟಾದ ವ್ಯಕ್ತಿಗತ ದುಃಖದ ವೇಳೆ ಸಂತೈಸುವವರು ಮಹಾತ್ಮರಿಗೂ ಇತರರಂತೆಯೇ ಬೇಕಾಗಿದ್ದರು. ತನ್ನ ಪುತ್ರನಂತಿದ್ದ ಮಹದೇವ ದೇಸಾಯಿ ಮಡಿದಾಗ ಗಾಂಧಿಜೀ ದುಃಖಾವೇಗದಿಂದ ಅರೆಹುಚ್ಚರಾಗಿದ್ದರು; ಶವಕ್ಕೆ ಸ್ವತಃ ಎಣ್ಣೆ ಸವರಿ, ನೀರಿಗೆ ತನ್ನ ಕಣ್ಣೀರನ್ನೂ ಬೆರಸಿ ಹೆಣ ಮೀಯಿಸಿದ್ದರು. ಕಸ್ತೂರಿ ಬಾ ಮಡಿದಾಗಲೂ ಹಾಗೆಯೇ. ಆ ಮೇಲೂ ಅಲ್ಲಿರುವಾಗ ದಿನಂಪ್ರತಿ ಅವರಿಬ್ಬರ ಗೋರಿಗಳನ್ನು ಸಂದರ್ಶಿಸಿ ಪುಷ್ಪಹಾರ ಸಮರ್ಪಿಸುವ ನಿತ್ಯ ವಿಧಿಯನ್ನು ಆಚರಿಸಿದ್ದರು. ಅಷ್ಟಕ್ಕೇ ನಿಂತಿತೆ? ಬೇರಾವ ಕಾರ್ಯಕ್ಕೂ ಪ್ರಯೋಜನವಿಲ್ಲವಾದರೂ ಕೇವಲ ಸಂಬಂಧ ಸ್ಮರಣೆಗಾಗಿ ಬಾಪೂ ದೇಸಾಯಿಗಳ ಗೋರಿಸ್ಥಳವನ್ನು ಕ್ರಯಕ್ಕೆ ಕೊಡಬೇಕೆಂದು ಸರಕಾರದೊಡನೆ ಪತ್ರವ್ಯವಹಾರಗಳೂ ನಡೆದಿದ್ದುವು. ಪೂನೆಯ ಆಗಾಖಾನ್ ಅರಮನೆ ಸ್ವತಃ ಹಿಸ್‌ಹೈನೆಸ್ ಆಗಾಖಾನರದು. ಆದ್ದರಿಂದಲೇ ಈ ಮಾರಾಟ ಹಿಂದೆ ಬಿದ್ದುದಾಗಿರಬೇಕು. ಇದೇ ಫೆಬ್ರವರಿ 20ರಲ್ಲಿ ಪೂನದಲ್ಲಿಯೇ ಆಗಾಖಾನರು ಮಹಾತ್ಮಾಗಾಂಧಿಯವರ ಭೇಟಿ ಮಾಡಲಿದ್ದಾರೆ; ಅಲ್ಲಿ ತನ್ನ ಅರಮನೆಯನ್ನವರು ಗಾಂಧಿಜೀಗೆ ಬಹುಮಾನವಾಗಿ ಬರೆದು ಕೊಡಲಿರುವರೆಂದು ಈಗಿನ ವಾರ್ತೆ.

೦೦ ೦೦ ೦೦

ವೀರ ನರಿಮನರು ಒಂದು ಕಾಲದಲ್ಲಿ ಕಾಂಗ್ರೆಸ್ ಪ್ರಮುಖರ ಮೊದಲ ಪಂಕ್ತಿಯಲ್ಲಿ ರಾಜಿಸಿದವರು. ಬೊಂಬಾಯಿಗೆ ಸಮುದ್ರ ಭಾಗವನ್ನು ಸೇರಿಸಿ ಕಟ್ಟಿದ 'ಬ್ಯಾಕ್‌ಬೇ ಯೋಜನೆ'ಯಲ್ಲಿ ಬಿಳಿಯ ಮುಖ್ಯಾಧಿಕಾರಿಯೊಬ್ಬರು ಪಡೆದ ಲಂಚ, ನಡೆಸಿದ್ದ ಸಂಚು ಹಂಚಿಕೆಗಳನ್ನೆಲ್ಲಾ ನಿರ್ಭೀತಿಯಿಂದ ಬಯಲಿಗೆಳೆದು, ಆ ಸಂಬಂಧವಾಗಿ ಹೂಡಲ್ಪಟ್ಟ ಮೊಕದ್ದಮೆಯನ್ನೂ ಜಯಿಸಿದ್ದ ವೀರ ಪುಂಗವರು. ಆ ಕಾಲದಲ್ಲಿ ನೆಹರು ಸುಭಾಸರೊಂದಿಗೆ ನರಿಮನರ ಹೆಸರೂ ಪಠಿಸಲ್ಪಡುತ್ತಿತ್ತು. ಕಳೆದ ಬಾರಿಯ ಬೊಂಬಾಯಿ ಕಾಂಗ್ರೆಸ್ ಪ್ರಧಾನ ಮಂತ್ರಿ ಸ್ಥಾನವು ಮಿ. ನರಿಮನರಿಗೇ ಮೀಸಲೆಂದು ಸಹಜವಾಗಿ ಎಲ್ಲರೂ ನಿರೀಕ್ಷಿಸಿದ್ದರು. ಆದರೆ ಸರ್ದಾರ್ ಪಟೇಲರು ಶ್ರೀ ಖೇರರನ್ನು ಮುಂತಂದು ನರಿಮನರನ್ನು ಮೂಲೆಪಾಲು ಮಾಡಿ, ಈ ಆಕಸ್ಮಿಕ ಆಘಾತದಿಂದ ತಲೆ ತಿರುಗಿ ಕಾಂಗ್ರೆಸನ್ನೇ ಟೀಕಿಸಹತ್ತಿದ ಅವರನ್ನು ಶಿಸ್ತಿಗೆ ಬಲಿಕೊಟ್ಟ ಕಥೆ ಸರ್ವಶ್ರುತವಿದೆ. ಇದರ ಮೂಲಕಾರಣವಾಗಿ ಒಂದು ಸಂಗತಿ ಪ್ರಚಾರದಲ್ಲಿದೆ. 1935ರ ಕೇಂದ್ರ ಎಸೆಂಬ್ಲಿ ಚುನಾವಣೆಯಲ್ಲಿ ಬೊಂಬಾಯಿಯಿಂದ ನರಿಮನರನ್ನು ಉಮೇದ್ವಾರಿಯಾಗಿ ಹಾಕಬೇಕೆಂದು ಕಾಂಗ್ರೆಸಿಗರ ನಿರ್ಧಾರವಿತ್ತು. ಅದೇ ಮತದಾರ ಕ್ಷೇತ್ರದಿಂದ ಸರ್. ಕವಾಸ್ಜಿ ಜಹಾಂಗೀರರು (ಈ ಬಾರಿ ಎಸೆಂಬ್ಲಿ ಅಧ್ಯಕ್ಷ ಸ್ಥಾನಕ್ಕುಮೇದ್ವಾರಿಯಾಗಿ ಶ್ರೀ. ಮಾವ್ಳಂಕರರಿಂದ ಪರಾಜಿತರಾದವರು) ನಿಲ್ಲಲಿಚ್ಛಿಸಿದ್ದರು. ಸರ್. ಜಹಾಂಗೀರರು ನರಿಮನರಂತೆಯೇ ಪಾರ್ಸಿ. ಮೇಲಾಗಿ ಬೊಂಬಾಯಿಯ ಮಿಲಿಯಾಧಿಪರಲ್ಲೊಬ್ಬರು. ತನ್ನ ವಿಶೇಷ ವಕೀಲತ್ ಬಿಟ್ಟು ಅಸಹಕಾರ ಚಳವಳದಲ್ಲಿ ಧುಮುಕಿ ಸರ್ವವನ್ನೂ ರಾಷ್ಟ್ರೀಯ ಕಾರ್ಯದಲ್ಲಿ ವ್ಯಯಿಸುತ್ತಿದ್ದ ನರಿಮನರಿಗೆ ಆರ್ಥಿಕ ಸಹಾಯಕೊಡುತ್ತಿದ್ದವರು ಸರ್. ಜಹಾಂಗೀರರೆಂಬ ಪ್ರತೀತಿಯಿದೆ. ಆದರೆ ನರಿಮನರು ಉಮೇದ್ವಾರಿಯಾದಲ್ಲಿ ಮತ್ತೆ ಕವಾಸ್ಜಿಯವರು ಚುನಾವಣೆ ಗೆಲ್ಲುವ ಆಸೆಯಿರಲಿಲ್ಲ. ತಾನು ಕೃತಜ್ಞನಾಗಿರಬೇಕಾದ ಅವರನ್ನು ಸೋಲಿಸಲು ನರಿಮನರಿಗೆ ಮನಸ್ಸಿಲ್ಲ. ಹೀಗಾಗಿ ಅವರೊಂದು ಹಂಚಿಕೆ ಹೂಡಿ ಕೇಂದ್ರ ಎಸೆಂಬ್ಲಿ ಮತದಾರ ಪಟ್ಟಿಯಲ್ಲಿ ತನ್ನ ಹೆಸರೇ ಇಲ್ಲದಂತೆ ಮಾಡಿಕೊಂಡರೆಂಬ ಪುಕಾರಿಯಿದೆ. ನರಿಮನರು ಇಂತಹ ಯುಕ್ತಿಯಿಂದ ಕಾಂಗ್ರೆಸ್ ವಿರೋಧಿಗೊಂದು ಸ್ಥಾನ ಬಿಟ್ಟುಕೊಟ್ಟರೆಂಬ ಗುಟ್ಟು ತಿಳಿದು ಸರ್ದಾರ್ ಪಟೇಲರು ಹೀಗೆ ಪರೋಕ್ಷರೀತಿ ಪ್ರಾಯಶ್ಚಿತ್ತ ಮಾಡಿದರೆಂದೂ ವಾರ್ತೆಯುಂಟು.

ಟೆಂಡರು ನೋಟೀಸು

1—4—1946ರಿಂದ 31—3—1947ರ ವರೇಗೆ ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಆಫೀಸಿನ ಮತ್ತು ಇದರ ಶಾಖೆಯಲ್ಲಿರುವ ಇತರ ಆಫೀಸುಗಳ ಉಪಯೋಗದ ಬಗ್ಗೆ ಸ್ಟೇಶನರಿ ಸಾಮಾನುಗಳನ್ನು ಒದಗಿಸುವ ಬಗ್ಗೆ ಸೀಲ್ಡು ಟೆಂಡರುಗಳನ್ನು ಸಂ. 1946ನೇ ಇಸ್ವಿ ಫೆಬ್ರವರಿ ತಿಂಗಳ ತಾರೀಕು 25ನೇ ಸೋಮವಾರ ಅಪರಾಹ್ನ ಘಂಟೆ 5ರ ಒಳಗೆ ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರವರಿಗೆ ತಲಪುವಂತೆ ಕಳುಹಿಸಿ ಕೊಡತಕ್ಕದಂತೆ ಕೇಳಿಕೊಳ್ಳಲಾಗುತ್ತದೆ.

2. ಸ್ಟೇಶನರಿ ಸಾಮಾನುಗಳನ್ನು ಒದಗಿಸುವ ಪ್ರಿಂಟು ಮಾಡಿದ ಟೆಂಡರು ಫೋರ್ಮುಗಳನ್ನು ಮತ್ತು ಟೆಂಡರುಗಳ ಸ್ವೀಕಾರದ ಕುರಿತಾದ ಕ್ರಮ ನಿಭಂದನೆಗಳನ್ನು ಪ್ರತಿಯೊಂದು ಎರಡು ಫೋರ್ಮಿನ ಒಂದು ಸೆಟ್ಟಿಗೆ ರೂಪಾಯಿ (1-0-0) ಒಂದರಂತೆ ಕೊಟ್ಟು ಬರಹ ಮೂಲಕ ಕೇಳಿಕೊಂಡಲ್ಲಿ ಒದಗಿಸಿ ಕೊಡಲಾಗುವುದು.

3. 1946-'47ನೆ ವರ್ಷದಲ್ಲಿ ಸ್ಟೇಶನರಿ ಸಾಮಾನುಗಳನ್ನು ಒದಗಿಸುವ ಕುರಿತು ಟೆಂಡರು" ಎಂತ ಸೀಲು ಮಾಡಿದ ಲಕೋಟೆಯ ಮೇಲೆ ಬರೆದು, ಪ್ರೆಸಿಡೆಂಟ, ಡಿಸ್ಟ್ರಿಕ್ಟ್ ಬೋರ್ಡು, ದಕ್ಷಿಣಕನ್ನಡ, ಎಂತ ವಿಳಾಸ ಬರೆದು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿಗೆ ರವಾನಿಸತಕ್ಕದ್ದು. ಮೇಲೆ ಕಾಣಿಸಿದ ತಾರೀಕಿನ ಸಾಯಂಕಾಲ 5 ಘಂಟೆಯ ನಂತರ ತಲಪುವ ಟೆಂಡರುಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ. ಪ್ರತಿ ಟೆಂಡರಿಗೆ ಟೆಂಡರು ಡಿಪೋಸಿಟ್ ರೂಪಾಯಿ (50-0-0) ಐವತ್ತುಗಳನ್ನು ಈ ಬೋರ್ಡಿನ ಲೆಕ್ಕಕ್ಕೆ ಟ್ರೆಜರಿಯಲ್ಲಿ ಪಾವತಿ ಮಾಡಿದ ಚಲನು ರಶೀದಿ ಯಾ ಈ ಆಫೀಸಿನಲ್ಲಿ ಪಾವತಿ ಮಾಡಿದ ಬಗ್ಗೆ ಪಡೆದ ಮಿಸಲೇನಿಯಸ್ ರಶೀದಿಯನ್ನು ತಪ್ಪದೆ ಲಗ್ತಾ ಕರಿಸತಕ್ಕದ್ದು.

4. ಪ್ರತಿಯೊಂದು ಸಾಮಾನಿನ ಯಾ ಎಲ್ಲಾ ಸಾಮಾನುಗಳನ್ನು ಒಟ್ಟಾಗಿ ಸೇರಿಸಿ ಯಾ ಕೆಲವು ಸಾಮಾನುಗಳನ್ನು ಮಾತ್ರ ಸೇರಿಸಿ ಕಡಿಮೆ ಎಂತ ಕಂಡು ಬಂದ ಟೆಂಡರನ್ನು ಸ್ವೀಕರಿಸುವ ಅಧಿಕಾರವನ್ನು ಡಿಸ್ಟ್ರಿಕ್ಟ್ ಬೋರ್ಡು ಕಾದಿರಿಸಿಕೊಂಡಿದೆ.

5. ಯಾವ ಕಾರಣವನ್ನೂ ಕೊಡದೆ ಯಾವದಾದರೊಂದು ಯಾ ಎಲ್ಲಾ ಟೆಂಡರುಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕೂಡ ಡಿಸ್ಟ್ರಿಕ್ಟ್ ಬೋರ್ಡು ಕಾದಿರಿಸಿಕೊಂಡಿರುತ್ತದೆ.

6. ಸಾಕಷ್ಟು ಕಾರಣವಿಲ್ಲದೆ ಯಾವನಾದರೊಬ್ಬ ಟೆಂಡರನು ತನ್ನ ಟೆಂಡರನ್ನು ವಾಪಾಸು ತೆಗೆದುಕೊಂಡರೆ ಸದ್ರಿಯವನ ನಂತರದ ಟೆಂಡರುಗಳಿಗೆ ಯಾವ ಗಮನವನ್ನೂ ಕೊಡದೆ ತಿರಸ್ಕರಿಸಲಾಗುವುದು. ಮಾತ್ರವಲ್ಲದೆ ಸದ್ರಿಯವನು ಈ ಬೋರ್ಡಿನ ಲೆಕ್ಕಕ್ಕೆ ಪಾವತಿ ಮಾಡಿದ ಟೆಂಡರ ಡಿಪೋಸಿಟ್ ಹಣವನ್ನು ಸದ್ರಿಯವನಿಗೆ ವಾಪಾಸು ಕೊಡದೆ ಡಿಸ್ಟ್ರಿಕ್ಟ್ ಬೋರ್ಡು ಲೆಕ್ಕಕ್ಕೆ ಜಮೆ ತೆಗೆದುಕೊಳ್ಳಲಾಗುವುದು.

S. K District Board office,
Mangalore, dated 11-2-46

A. L. N. Rao,
President,
Dt Board, South Kanara.

AGAINST DIABETES
&
all its dreadful results
Consult Specialists:
Dr. Alvas' Research Institute, FAJIR
S KANARA

ಸಂದೇಹಗಳು ಬರುವಾಗ?

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು."
—ಮ. ಗಾಂಧಿ.

ಗೀತೆಯ ಕೈಗನ್ನಡಿ

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ **ಬೆಲೆ 0-8-0 ಮಾತ್ರ**

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಮಂದಿರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿ ಮಾಡಿ ಕಳಿಸುವರು.

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2.	ಸಾಮುದ್ರಿಕ ಶಾಸ್ತ್ರ	0	8	0
3.	ಬಾಲ ರಾಮಾಯಣ	0	5	0
4.	ಸುಕನಾ ಚರಿತ್ರೆ	0	5	0
5.	ಕೊಳಲು ಕೃಷ್ಣ	0	8	0
6.	ಗುರುಪೀಠಗಳ ಅವನತಿ	0	8	0
7.	ದ್ವೈತಮತ ಖಂಡನೆ	0	6	0
8.	ಧರ್ಮಸಂಕಟ	0	4	0
9	ಪುರೂರವ	0	8	0
10.	ನಿಶ್ಚಯ ಜ್ಞಾನ	0	8	0
11.	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13.	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gauthama the Buddha ...	0	8	0
16.	ಪ್ರಾರ್ಥನೆ	0	2	0
17.	ಹಿಂದೀ ಪಹಲಿ ಪೋಥಿ	0	2	0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)	0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ರರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾಸಿಗ್	0	8	0
ತುಳು ವ್ಯಾಕರಣ	1	0	0
ಮದ್‌ಮಾಳತ್ ಮದ್‌ಮಾಯೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಗತೆ	0	2	0
ಮಿತ್ಯ ನಾರಾಯಣ ಕತೆ	0	1	0
ಸತೀ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಸಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದು ವುದರಿಂದ ಮಾತ್ರ ಸಾಧ್ಯ

ರಾಷ್ಟ್ರಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ರರಂಜನ ಭವನ, ಉಡುಪಿ.

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಸಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ರರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೫ ವಾರ ೨೬ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder. SRI A. B. SHETTY. | Vol 25 No. 26

ಉಡುಪಿ • 28—2—1946 • ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.



ಅಮೃತಾಂಜನ.

ತಲೆನೋವು, ಶೀತ, ವೇದನೆ, ಉಳುಕು ...

REGD.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

TO THOSE WHO DEMAND SOMETHING BETTER IN LIFE.

In the competitive world of to-day financial backing provides valuable opportunities whether it be in the field of education, commerce or industry. You are certainly desirous that your children should have better opportunities in life.

Ambitious parents like you have found our Children's Endowment Policies suitable for that purpose.

THE CANARA MUTUAL ASSURANCE COMPANY, LTD.,

Head Office.- **UDIPI, (S. India.)**

ನಿರೀಕ್ಷಣೆಯ ಫಲವು ಶೀಘ್ರದಲ್ಲಿಯೇ ದೊರೆಯುವುದು.

ರಂಗಭೂಮಿಯ ಮೇಲೆ ಬೇಗನೇ ಬರಲಿರುವುದು.

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ,

ಇವರು

'ಮುಕ್ತಿ'

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯಲ್ಲಿ ಬೇಗನೇ ಪ್ರದರ್ಶಿಸಲಿರುವರು.

ಲೇಖಕರು:- ನಿರ್ಮಾಪಕರು ಮತ್ತು ನಿರ್ದೇಶಕರು

ಶ್ರೀ. ಯಂ. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇದೊಂದು ನವೀನ ಪ್ರಯೋಗ ... ಇದೊಂದು ಹೊಸದು. ನವೀನ ಪಾತ್ರವರ್ಗದವರು ... ಯ ಕಲೆಯನ್ನು ತೋರ್ಪಿಸಿ, ತಮ್ಮೊಳಿಕ ... ಮಾಡಲಿರುವರು.

ತಾರೀಕನ್ನು ಗಮನಿಸಿರಿ. ಟಿಕೇಟನ್ನು ಮೊದಲೇ ಪಡಕೊಳ್ಳಿರಿ.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ,

ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA

"BHUVANENDRA" **CHANDRAMAS**

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' **ಚಂದ್ರಮಸ್** ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪೋ.

ANNOUNCEMENT

We have pleasure to announce the opening of a branch of the Bank at

MERCARA

ON 23-1-1946.

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

ಗೃಹಿಣಿಯರ ಕರ್ತವ್ಯ

ಶ್ರೀಮತಿ ಎಸ್. ಮಾಲತಿ ದೇವಿ, ಬೆಂಗಳೂರು

ನಮ್ಮ ದೇಶದ ಅಧೋಗತಿಗೆ ಸ್ತ್ರೀ ಪುರುಷರ ಆದರಲ್ಲೂ ಮುಖ್ಯವಾಗಿ ಸ್ತ್ರೀಯರ ಅಜ್ಞಾನವೇ ಕಾರಣವೆಂದು ಹೇಳಬಹುದು ಇಷ್ಟು ವಿಶಾಲವಾದ ದೇಶದಲ್ಲಿ ಬಹಳವೆಂದರೆ ಸೇ 7 ಅಥವಾ 8 ಮಂದಿ ಓದಿದವರಿದ್ದಾರೆ ಇದರಲ್ಲಿ ಸ್ತ್ರೀಯರ ಸಂಖ್ಯೆ ಕೇವಲ ನೂರಕ್ಕೆ ಮೂರು ಇರಬಹುದು. ಅವರೂ ಕೇವಲ ಅಕ್ಷರ ಜ್ಞಾನದಿಂದ ಅಜ್ಞಾನ ದೂರವಾಗುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಪ್ರಪಂಚದ ಜ್ಞಾನವಿರುವ ಸ್ತ್ರೀಯರ ಸಂಖ್ಯೆ ಬಹಳ ಕಡಮೆ ಆಧುನಿಕ ಯುಗದ ವಿಶಾಲ ಜ್ಞಾನ ಸಾಗರದಲ್ಲಿ ಪ್ರವೇಶಮಾಡಿರುವ ಸ್ತ್ರೀಯರ ಸಂಖ್ಯೆಯಂತೂ ನಿರಾಶಾಜನಕವಾಗಿದೆ.

ತನ್ನ ಅಧಿಕಾರ ಜ್ಞಾನವಿರುವ ವ್ಯಕ್ತಿಯು ಮಾತ್ರ ತನ್ನ ಸ್ಥಿತಿಯನ್ನು ಸುಧಾರಣ ಮಾಡಿಕೊಳ್ಳಬಹುದು ಇದನ್ನು ತಿಳಿಯಲು ಜ್ಞಾನಬೇಕು

ಈಗಿನ ಸ್ತ್ರೀಯರು ಜ್ಞಾನದ ಆವಶ್ಯಕತೆಯನ್ನು ತಿಳಿಯುತ್ತಿದ್ದಾರೆ, ನಾವು ಅದನ್ನು ಹೊಂದುವುದು ಹೇಗೆ? ನಮಗೆ ಅಭಿಲಾಷೆಯಿದ್ದರೂ ಮನೆಯಲ್ಲಿ ತಡೆಯುತ್ತಾರಲ್ಲಾ? ಏನು ಮಾಡುವುದು ಎಂದು ಹಲವರ ಪ್ರಶ್ನೆ ಮನೆಯವರೆಂದರೆ ಮನೆಗಳಲ್ಲಿ ಹುಲಿಯಾಗುವ ಗಂಡಂದಿರೂ, ತಮ್ಮ ಗುಲಾಮಿಯ ದಿನಗಳನ್ನು ನೆನೆದು ಅದರ ಪ್ರತೀಕಾರವನ್ನು ಸೊಸೆಯರ ಮೇಲೆ ತೀರಿಸಿಕೊಳ್ಳುವ ನಿರ್ದಯಿಯರಾದ ಅತ್ತೆಯರೂ ವಿಧವೆಯರ ದುರ್ದಶಾಪೂರ್ಣ ಸ್ಥಿತಿಯ ಉತ್ತರದಾಯಿತ್ವವು ಹೆಂಗಸರ ಮೇಲೇ ಹಾಕಲ್ಪಡುವುದು. ಇಂತಹ ಪರಿಸ್ಥಿತಿಯಲ್ಲಿ ಸ್ತ್ರೀಯರೇನು ಮಾಡಬಲ್ಲರು? ಇದಕ್ಕೆ ಉತ್ತರವೊಂದೇ

ಆದಿಯಲ್ಲಿ ಜ್ಞಾನಾರ್ಜನೆ ಮಾಡುವ ಅಭಿಲಾಷೆಯು ಸ್ತ್ರೀಯರಲ್ಲಿ ಮೂಡಬೇಕು ಅಭಿಲಾಷೆಯಿದ್ದರೆ ಮಾರ್ಗ ದೊರೆತೇ ದೊರೆಯುವುದು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇದು ಕಠಿಣವಲ್ಲ.

ಒಂದಾನೊಂದು ಕಾಲದಲ್ಲಿ ಶ್ರವಣ ದ್ವಾರಾ ಜ್ಞಾನವು ಪ್ರಾಪ್ತವಾಗುತ್ತಿತ್ತು. ಈಗ ಪುಸ್ತಕಗಳ ಮೂಲಕ ಇದೀಗ ಅನೇಕ ಕಡೆ ಪುಸ್ತಕಾಲಯಗಳೂ circulating ಪುಸ್ತಕಾಲಯಗಳೂ ಸ್ಥಾಪಿತವಾಗಿವೆ ಆದ್ದರಿಂದ ಓದುಬರಹ ಬಾರದಿರುವ ಹೆಂಗಸರು ಮೊದಲು ಅದನ್ನು ಕಲಿಯಬೇಕು. ಗಂಡನಿಂದ, ಅಕ್ಕಪಕ್ಕದವರಿಂದ ಇಲ್ಲವೇ ಸಮಾಜಗಳಿಂದ ಕಲಿಯಬಹುದು.

ಇಂತಹ ಜ್ಞಾನತೃಷೆಯನ್ನು ಅಡಗಿಸಿಕೊಳ್ಳುವ ಕಾರಣದಿಂದ ಅತ್ತೆಗೆ ಸೊಸೆಯ ಮೇಲೆ ಕೋಪಬರಬಹುದು. ಅದನ್ನು ಸಹಿಸಲು ಸೊಸೆಯು ಸಿದ್ಧವಾಗಿರಬೇಕು

ಜನರನ್ನು ಸಮಾಧಾನಗೊಳಿಸಲು ಜನಾರ್ದನನಿಂದಲೂ ಸಾಧ್ಯವಿಲ್ಲ. ಕರ್ಕಶಳಾದ ಅತ್ತೆಯು ಅಂತಹ ಗುಂಪಿಗೆ ಸೇರಿದವಳೆಂದು ತಿಳಿಯಬೇಕು ಅತ್ತೆಯನ್ನು ಪ್ರಸನ್ನಗೊಳಿಸಲು ಜ್ಞಾನಾರ್ಜನೆಯನ್ನು ಬಿಡಬಾರದು ಜ್ಞಾನದಿಂದ ಕೇವಲ ನಮ್ಮ ಕಲ್ಯಾಣವಲ್ಲದೆ ದೇಶದ ಕಲ್ಯಾಣವಾಗುವುದು. ಆದ್ದರಿಂದ ದೇಶದ ಹಿತದೃಷ್ಟಿಯಿಂದ ಸ್ತ್ರೀಯರು ಕಷ್ಟವನ್ನಾದರೂ ಪಟ್ಟು ಈ ಉದ್ದೇಶವನ್ನು ಸಾಧಿಸಬೇಕು

ಓದು ಬರಹಬಲ್ಲ ಹೆಂಗಸರ ಕಾರ್ಯ ಸುಲಭ ಅವರು ಪುಸ್ತಕಾಲಯವನ್ನು ಉಪಯೋಗಿಸುವುದನ್ನು ಕಲಿಯಬೇಕು ಪುಸ್ತಕಾಲಯದ ಉದ್ದೇಶವು ಕೇವಲ ಕತೆ ಪುಸ್ತಕಗಳನ್ನು ಸಂಗ್ರಹಿಸುವುದಲ್ಲ ಅದರ ಪ್ರಥಮ ಕರ್ತವ್ಯವು ಜ್ಞಾನದಾಯಕ ಪುಸ್ತಕಗಳನ್ನು ಒದಗಿಸುವುದು. ಅಲ್ಲದೆ ತಮಗೆ ಯಾವ ವಿಷಯದಲ್ಲಿ ಜ್ಞಾನವು ದೊರೆಯಬೇಕೆಂಬುದನ್ನು ಹೆಂಗಸರು ಮೊದಲು ತಿಳಿಯಬೇಕು ತಾನೂ ಒಂದು ಸಾಮಾಜಿಕ ವ್ಯಕ್ತಿ ಎಂಬುದನ್ನು ತಿಳಿದುಕೊಂಡು ಅವರು ಸಾಮಾಜಿಕ ಪ್ರಶ್ನೆಗಳೊಡನೆ ಸಂಬಂಧವಿಟ್ಟುಕೊಂಡಿರುವ ನಾಗರೀಕತೆಯ ವಿಚಾರವನ್ನು ತಿಳಿಸುವ ರಾಜನೈತಿಕ ವಿಷಯಗಳನ್ನೊಳಗೊಂಡಿರುವ ಪುಸ್ತಕಗಳನ್ನು ಹೆಚ್ಚಾಗಿ ಓದಬೇಕು. ಪುಸ್ತಕಾಲಯಗಳ ಸಂಚಾಲಕರುಗಳನ್ನು ಕೇಳಿ ಇಂತಹ ಪುಸ್ತಕಗಳನ್ನು ಅವರಿಂದ ತರಿಸಿಕೊಳ್ಳಬೇಕು. ಅಲ್ಲದೆ ಪುಸ್ತಕಾಲಯಗಳ ಸಂಚಾಲಕರೂ ಈ ವಿಷಯಗಳ ಕಡೆಗೆ ಗಮನಕೊಡಬೇಕು. ಉಪನ್ಯಾಸ ಮತ್ತು ಮನೋರಂಜಕವಾದ ಪುಸ್ತಕಗಳಿಗೆ ಎರಡನೆಯ ಸ್ಥಾನಕೊಡಬೇಕು.

ಇಷ್ಟೆಲ್ಲಾ ಸ್ತ್ರೀಯರಿಗೆ ಜ್ಞಾನಾರ್ಜನೆಯ ಅಭಿಲಾಷೆ ಇದ್ದರೆ ಮಾತ್ರ ಸಾಧ್ಯ. ಆಗ ಸ್ತ್ರೀಯರೇನು ಮಾಡಬಲ್ಲರೆಂಬ ಪ್ರಶ್ನೆಯೇ ಬರುವುದಿಲ್ಲ. ಈ ಕಾಲದಲ್ಲಿ ದೇಶದ ಹಿತಕ್ಕಾಗಿ ಪ್ರತ್ಯೇಕ ವ್ಯಕ್ತಿಯೂ ಜ್ಞಾನಾರ್ಜನೆ ಮಾಡುವುದು ಆವಶ್ಯಕ ಸೋಮಾರಿತನದಿಂದ ಸ್ತ್ರೀಯರು ತಮಗೆ ಸಹಾಯ ಮಾಡಲು ಸಿದ್ಧವಾಗಿರುವ ಅನೇಕ ಸಂಸ್ಥೆಗಳಿಂದ ಉಪಯೋಗ ಪಡೆಯದೆ, ಗೃಹಕೃತ್ಯದ ತೊಂದರೆಯನ್ನು ನೆಪಮಾಡಿಕೊಂಡು ಕೆಲಸಮಾಡದೆ ಸುಮ್ಮನಿದ್ದರೆ ಆಕೆಯು ದೇಶಕ್ಕೆ ದ್ರೋಹ ಮಾಡಿದಂತಾಗುವುದಲ್ಲದೆ ದೇಶದ ದಾರಿದ್ರ್ಯ ಮತ್ತು ಕಷ್ಟಕ್ಕೆ ಹೊಣೆಯಾಗುವಳು.

ಸಾಮಾನ್ಯವಾಗಿ ವಿದ್ಯಾವತಿಯಾಗಿ ವಿವೇಕಶಾಲಿಯಾದ ಗೃಹಿಣಿಯಿದ್ದರೆ ಸಂಸಾರದಲ್ಲಿ ಎಲ್ಲರೂ ಸುಖವಾಗಿರುವರು ತನ್ನ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನಕೊಡುವಳು. ತಾಯಿಯೆ ಮಗುವಿನ ಪ್ರಥಮ ಗುರು. ಪ್ರೇಮದಿಂದ ಆತ್ಮೀಯತೆಯಿಂದ ತಾಯಿಯು ಕಲಿಸುವ ವಿದ್ಯೆ ಮಗುವಿಗೆ ಬೇಗ ಹತ್ತುವುದು ಅದಕ್ಕೆ ಓದಿನಲ್ಲಿ ಆಸಕ್ತಿ ಹುಟ್ಟುವುದು. ತಾಯಿಯ ಮೇಲ್ವಿಚಾರಣೆಯಲ್ಲಿ ಮಕ್ಕಳು ಭಯಭಕ್ತಿಯಿಂದ ಶ್ರದ್ಧೆವಹಿಸಿ ಓದುವರು. ತಾಯಿ ಅವಿದ್ಯಾವತಿಯಾದರೆ ಆಕೆಯ ಮಾತನ್ನು ಲಕ್ಷಿಸದೆ ಮಕ್ಕಳು ಮನಬಂದಂತಿರಬಹುದು. ಅಕ್ಷರಸ್ಥೆಯಾದ ಸ್ತ್ರೀ ತನ್ನ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಬೇಕಲ್ಲದೆ ಆರೋಗ್ಯ ಮಿತವ್ಯಯ

(೧೫ನೇ ಪುಟ ನೋಡಿರಿ)

THE CANARA MUTUAL ASSURANCE CO, LTD.,

(Incorporated in British India Liability of Members Limited.)

Head Office UDIPI, (S India)

NOTICE IS HEREBY GIVEN that a Meeting of the Policy holders of the above Company under Section 48 of the Insurance Act 1938 will be held at the Registered Office of the Company, Canara Mutual Building Udipi on Sunday the 21st day of July 1946 at 3 30 P M to elect three Directors on behalf of the Policy holders on the Board of Directors in place of those who retire (but are eligible for re election) at the said Meeting viz — (1) Sri M D Kamath, (2) Sri M V Nayak & (3) Khan Saheb H S Hussain Saheb

1 Applications for election as such Directors are hereby invited from eligible persons prepared to accept such office Such applications shall be sent by Registered Post to the Head Office of the Company at the above address in Udipi so as to reach it not less than 2 months before the date of the Meeting and shall be made ... in a principal language of the Province of Madras and shall contain the applicant's name and address and the numbers of and the amounts of the sums insured by the Policies by virtue of which he claims to be eligible for election

2. The qualifications for election as such Director are as follows —

(i) He must hold one or more policies of Life Insurance issued by the Company and satisfying the following requirements — (a) He must hold such policies otherwise than as assignee provided that the assignment of a policy to the person who took out the policy shall not disqualify that person from being eligible for election as a Director (b) Such policies must insure a total sum including any bonuses that may have attached to them before the date of election of not less than Rs 3 000/ and must have been in force for not less than 3 years

(ii) He must not be a Director Officer Employee or Legal or Technical Adviser of the Company or of any other insurer or an Insurance Agent or Employer of Insurance Agents

3 ATTENDANCE AT THE MEETING Every policy-holder eligible to vote who desires to attend the Meeting shall apply to the Company for a Certificate of Admission such applications to reach the Company not less than 2 months before the date of the Meeting The Company will issue such Certificate at least one month before the date of the Meeting Such Certificate if applied for by post will be sent only to the address of the Policy holder or if applied for in person will be delivered only on production of the relevant policy. Such Certificate of Admission is not transferable No Policy holder shall be admitted to the Meeting unless he produces the Certificate of Admission Only and all persons holding a policy of Life Insurance issued by the Company and having been in force at the time of the election for not less than 6 months before the date of the election shall be eligible to vote at the election

Votes for the election of the Directors may be given at the Meeting either personally or by proxy and in the manner provided in the Insurance Rules The instrument appointing a proxy shall be in writing in form IV A to the Insurance Rules under the hand of the appointer in favour of a policy holder and shall be presented at the above office of the Company not less than one month before the date of the Meeting No Policy holder shall appoint more than one proxy irrespective of the number of policies he holds A form of proxy will be supplied to any Policy holder on request

(By order of the Board of Directors)

Dated at UDIPI, 20th February, 1946

F R. A. PAI,
Managing Director

'ಬಹದೂರ'
ಕಬ್ಬಿನ ಗಾಣಗಳು



ಗಟ್ಟಿಮುಟ್ಟಾದ ರಚನೆ,
ಉತ್ತಮದರ್ಜೆಯ ಕೈಗಾರಿಕೆ
ಕ್ರಯ ರೂ 430/-
ಬ್ರಿಟಿಷ್ ಇಂಡಿಯ
ಎಂಜನಿಯರಿಂಗ್ ಕಂ.
ಬೊಂಬಾಯಿ 10

ದಮ್ಮಣ್ಣಾ ಕೇಳೋ ಕೇಳು



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೀ ಮುಚ್ಚಿಡದೆ ಅದನ್ನು ಬೇರುಸಹಿತ ಕಿತ್ತು ಹೊಗೆಯುವುದು ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೇಕೂ ನಿಲ್ಲುವವು, ಹೊಟ್ಟೆ ಹಸನಾಗುವದು, ಪಚನಕ್ರಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು ಆ ಮೇಲೆ ದಮ್ಮಿಗೆ ತಲೆಯಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯು ಮುಂತಾದ ವಿಕಾರಕ್ಕೆ ಪುರೋಹಿತ ಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತಗೆದುಕೊಳ್ಳಬೇಕು ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪಾಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ ೩-೬-೦, ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಬೆಂಗಳೂರು, ಟಿ ಸಿ ನಟರಾಜನ್ ಕೊ, ಮೈಸೂರು

ಮುಂಬಯಿ ಸೋಲ ಏಜಂಟರು –

ವನಮಾಲೀ ಭೀಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨



PUROHIT
SHWAS-HARI

(A copy of this Prospectus has been filed with the Assistant Registrar of Joint Stock Companies, Mangalore)

PROSPECTUS

The General Investment Trust, Limited.

(Incorporated under the Indian Companies Act, 1913)

AUTHORISED CAPITAL Rs 25,00,000/-
divided into 2,50,000 shares of Rs. 10/ each

PRESENT ISSUE 50,000 shares of Rs 10/ each Rs. 5,00,000/-

Of the above issue, the Directors and their friends have subscribed for 20,000 shares of the nominal value of Rs. 2,00,000/ and the remaining 30,000 shares of the nominal value of Rs. 3,00,000/- have been offered to the public for subscription.

The issue will be open for subscription until further notice.

The said shares shall be fully paid for along with the application. No allotment of shares will be made for less than 10 shares on each application.

There are no founders or management or deferred shares. Likewise there are no redeemable preference shares issued or intended to be issued.

DIRECTORS

1. B. Vaikunta Baliga Esq., B. A., B. L., Pleader, "Loretto Villa", Kodialbail, Mangalore. *CHAIRMAN*
2. Upendra Ananta Pai, Esq., Merchant, "Chitrakala Mansions", Manipal.
3. Kochikar Panduranga Pai, Esq., Director, Kochikar Bros. Ltd. "The Bombay Life Building", Udipi.
4. A. Laxminarayana Rao, Esq., B. A., B. L., Advocate, "Laxmi Nivas", Udipi.
5. T. A. Pai, Esq., B. COM. (BOM.) A. I. I. B., F. R. ECON. S. (LOND.)
General Manager The Canara Industrial & Banking Syndicate, Ltd.
"Usha" Station Road, Mahim, Bombay.

BANKERS

THE CANARA INDUSTRIAL & BANKING SYNDICATE, LTD.

LEGAL ADVISERS

1. P. Padmanabha Rao, Esq., B. A., B. L., Udipi.
2. M. D. Kamath Esq., B. A., B. L., Udipi.

AUDITOR

A. Umanatha Rao, Esq. B. A. G. D. A., R. A., DIP. (ECON.), Hill-top Bungalow, Codialbail, Mangalore.

BROKERS

1. The General Investment & Commercial Corporation Ltd., Udipi.
2. The Industrial Investment Corporation, Ltd., Mangalore.
3. J. P. Gupta Esq., B. COM., (BOM.) Member, Stock Exchange, Bombay.

REGISTERED OFFICE

Kadekar, Udipi, (South Kanara.)

OBJECTS OF THE COMPANY

1. The Company has been formed for the purpose of carrying on business as an Investment Company and for the objects set forth in the Memorandum of Association of the Company.

2. It is believed that an investor derives advantage and benefit by sharing the varied investments effected by an investment company. A mofussil investor is generally remote from the market conditions prevailing from time to time and would naturally like to seek investments through the media of such an investment company and thus become interested as a share holder in varied investments without the worry of observing from day to day the conditions of such investments. A private investor in recent times when fluctuations are wide considerably minimises his risk by reason of becoming interested in an investment company.

3. By Notification No 17 dated 9th December, 1933, the Governor General-in-Council is pleased to exempt from super-tax—

(1) So much of the income of any Investment Trust Company as is derived from dividends paid by any other company which has paid or will pay super-tax in respect of the profits out of which such dividends are paid,

provided that an investment company is

(a) A company having for its principal business the acquisition and holdings of investments in the stock, shares, bonds, debentures or debenture-stocks of other companies or in securities issued by public authority.

(b) Not a Company formed for the purpose of or engaged in, acquiring or exercising control over any other company or group of companies or enabling any other persons to acquire or exercise such control

(c) A company in which the public are substantially interested

The General Investment Trust Ltd. will satisfy all these conditions.

4. The Company is the first of its kind in this part of the country and has been sponsored by the well known Messrs. P. A. Pai Bros., and has been able to secure a Directorate amongst whom are men having a considerable experience in respect of investments as well as in trade, commerce, finance and industry, who are imbued with a spirit of subdued optimism coupled with confidence to work and see to the progress and success of the Company.

5. The Company is authorised under its objects *inter alia* to promote, underwrite and finance industries, (cottage, small scale and larger industries), undertakings and concerns and to lend assistance and co-operation to the existing industries, undertakings and concerns. The shareholders will therefore have the satisfaction of seeing that they contribute their mite in the industrialisation of the Country and the growth in its commerce and trade.

MINIMUM SUBSCRIPTION

The minimum subscription upon which the Directors will proceed to allotment and which in the opinion of the Directors must be raised out of the proceeds of this issue in order to provide for the matters referred to in Section 101 of the Indian Companies Act including the working capital is shares of the nominal value of Rs. 50,000/-

BROKERAGE

The Articles provide for payment of commission not exceeding 3% of the nominal value of the shares subscribed or to be subscribed. The Company will pay commission at the rate of one rupee for every ten shares on allotments made in respect of applications bearing recognised brokers' stamps and on all allotments made as the result of canvassing by approved or duly authorised or specially appointed agents.

No allotment of shares will be made for less than 10 shares on each application.

The following is the Article relating to commission for placing shares:—

"The Company may at any time pay a commission to any person for subscribing or agreeing to subscribe (whether absolutely or conditionally) for any shares in the company or procuring or agreeing to procure subscriptions (whether absolute or conditional) for any shares in the company, but so that if the commission shall be paid or payable out of capital, the statutory conditions and requirements shall be observed and complied with and the commission shall not exceed three per cent on the nominal amount of the shares in each case subscribed or to be subscribed."

PRELIMINARY EXPENSES

It is estimated that the preliminary expenses, incidental to the formation and floating of the Company shall not exceed Rs. 10,000/- inclusive of commission and brokerage on shares and are payable by the company. No promotion money has been or will be paid to any director or anybody.

DIRECTORS' QUALIFICATION, REMUNERATION, INTEREST AND RESTRICTIONS ON THEIR POWERS OF MANAGEMENT.

The Articles of Association provide the qualification of a Director to be the holding of at least 500 shares in the Company in his own name solely and it shall be his duty to comply with the provisions of Section 85 of the Indian Companies Act, 1913.

The remuneration of every Director shall be such sum not exceeding Rs 50/- as the Directors may fix for every meeting attended by him, besides such travelling allowance, if any, as may be determined by the Directors from time to time.

The nature and interest of every Director is to the extent of the shares he holds in the Company.

No restrictions are imposed by the Articles of Association upon the Directors of the Company in respect of their powers of management, save and except such restrictions as are imposed upon them by law and except the restrictions imposed upon them by the undermentioned regulation, viz:—

"The amount for the time being remaining undischarged of moneys borrowed or raised by the Directors for the purposes of the Company (otherwise than by the issue of share capital) shall not any time exceed, the issued share capital of the Company without the sanction of the Company in General Meeting."

Regulation no 72 in Table A in the First Schedule of the Indian Companies Act will apply with regard to the appointment of manager and his remuneration.

VOTING RIGHTS AND RESTRICTIONS ON TRANSFER OF SHARES

On a show of hands every member present in person shall have one vote. On a poll every member shall have one vote in respect of each share.

In the case of joint holders, the vote of senior who tenders a vote, whether in person or by proxy, shall be accepted to the exclusion of the votes of the other joint holders; and for this purpose, seniority shall be determined by the order in which the names stand in the register of members.

A member of unsound mind, or in respect of whom an order has been made by any Court having jurisdiction in lunacy, may vote, whether on a show of hands or on a poll, by his committee or other legal guardian and any such committee or guardian may, on a poll, vote by proxy.

No member shall be entitled to vote at any general meeting unless all calls or other sums presently payable by him in respect of shares in the company have been paid.

On a poll votes may be given either personally or by proxy; provided that no company shall vote by proxy as long as a resolution of its directors in accordance with the provisions of Section 80 of the Indian Companies Act, 1913 is in force.

Regulation No. 20, 22 & 23 in Table A in the first Schedule of the Indian Companies Act apply with regard to the transfer of shares. Fees for registration of transfer of shares shall be one anna per share, subject to a minimum of eight annas for each transfer.

GENERAL

Application will be made to the Madras Stock Exchange Association Ltd., Madras for listing the shares of the Company in the stock Exchange.

ALLOTMENT OF SHARES

Applications for shares should be made on the form accompanying this Prospectus and should be sent to the Registered Office of the Company together with the remittance of the full nominal amount of the shares. Share money will be received at par at all the offices of the Canara Industrial & Banking Syndicate, Ltd., through whom the share applications can also be forwarded.

Where no allotment is made, the deposit will be returned in full and where the number of shares allotted is less than the number applied for, the balance of the deposit will be returned. No allotment of shares will be made for less than 10 shares on a single application.

The shares, when issued will be subject to the Memorandum and Articles of Association of the Company, copies of which can be inspected at the Registered Office of the Company at any time during business hours. Every person subscribing for shares will be deemed to have full knowledge and notice of the contents thereof and to be bound by the same.

Attached to this Prospectus and forming part of it is a copy of the Memorandum of Association of the Company with the names, addresses and descriptions of the signatories thereto and the number of shares subscribed for by them respectively.

Copies of this Prospectus with forms of application for shares may be obtained from the Registered Office of the Company and the Bankers of the Company.

Dated this 23rd February, 1946.

(Sd.) B. Vaikunta Baliga.
" Upendra Anant Pai.
" K. Panduranga Pai.
" A. Lakshminarayana Rao.
" K. V. Shenoy.
under power of attorney from T. A. Pai.

The General Investment Trust, Limited.

FORM OF APPLICATION FOR SHARES.

To

THE DIRECTORS,

The General Investment Trust, Limited,

KADEKAR.

Gentlemen,

I/We request you to allot me/us   Ordinary Shares of Rs. 10/- each and I/We hereby agree to accept the same or any lesser number that you may allot to me/us subject to the Memorandum and Articles of Association of the Company and I/We authorise you to place my/our name/s on the Register of members of the Company in respect of the shares allotted to me/us.

I am/We are sending herewith Rs.   towards application and allotment money in respect of the shares at Rs. 10/- per share.

Yours faithfully,

Place:..................................

Date ....

(Usual Signature)

Name in full (In block letters)..................................

If a minor, date of birth and guardian's name in full. If an institution, name of the Manager ....

Father's/Husband's Name ....

Occupation ....

Address in full ....

ಬೊಂಬಾಯಿಯಲ್ಲಿ ಅಭೂತಪೂರ್ವ

ನೌಕಾ ಬಂಡಾಯ

೧೮೫೭ರ ಸಿಪಾಯಿ ದಂಗೆಯ ನಂತರ ಪ್ರತ್ಯಕ್ಷ ಭಾರತದಲ್ಲೇ ಸೇನಾ ಖಾತೆಯ ಹಿಂದೀಯರು ಪ್ರದರ್ಶಿಸಿದ ಸ್ವಾಭಿಮಾನ-ಅಪೂರ್ವ ಹಾಗೂ ಅದ್ಭುತ ಸಾಹಸದ ಘಟನೆ—ಎಂದರೆ ಬೊಂಬಾಯಿಯಲ್ಲಿ ಫೆಬ್ರವರಿ ತಾ. 19ರಿಂದ ಮೂರು ದಿನಗಳ ವರೆಗೆ ಬ್ರಿಟಿಷ್ ನೌಕಾ ಪಡೆಯ ಭಾರತೀಯ ಕೆಲಸಗಾರರು ನಡೆಸಿದ ಹೋರಾಟ! ಭಾರತೀಯ ಬ್ರಿಟಿಷ್ ನೌಕಾಪಡೆ (Royal Indian Navy)ಯಲ್ಲಿ ಬೇರೆ ಬೇರೆ ಉದ್ಯೋಗ ನಿರತರಾಗಿರುವ ಸುಮಾರು 20000 ಹಿಂದೀಯರು ಇದರಲ್ಲಿ ಒಂದಲ್ಲೊಂದ ವಿಧದಿಂದ ಭಾಗವಹಿಸಿದ್ದರು.

ಮಹಾ ಸ್ಫೋಟ

ಉದ್ಯೋಗ ನಿವೃತ್ತಿ, ಆಹಾರ ಸ್ಥಿತಿ, ಸಂಬಳ ಮತ್ತು ಭತ್ತೆ ಹಾಗೂ ಬ್ರಿಟಿಷ್-ಹಿಂದೀ ಭೇದ ಮೊದಲಾದುವುಗಳ ಕುರಿತು ಹಿಂದೀ ನೌಕಾ ಕೆಲಸಗಾರರು ತಮ್ಮ ಅವರ್ಣನೀಯ ಸಂಕಷ್ಟಗಳನ್ನು ಅಧಿಕಾರಿಗಳೊಡನೆ ದೂರಿಕೊಂಡಿದ್ದರು ತಾ. 19ರಲ್ಲಿ ಫ್ಲೇಗ್ ಆಫೀಸರರೊಡನೆ ಪ್ರತ್ಯಕ್ಷ ವಿಜ್ಞಾಪಿಸಿಕೊಂಡಿದ್ದರು. ಆದರೆ ಅವರ ಮನಸ್ಸಮಾಧಾನಕರ ಭರವಸೆ ದೊರೆಯಲಿಲ್ಲ. ಕೂಡಲೇ ಬೊಂಬಾಯಿ ಬಂದರದ ಸುಮಾರು ಸಾವಿರ ಕೆಲಸಗಾರರ ಕಠೋರ ಮುಷ್ಕರ ಸ್ಫೋಟವಾಯಿತು; ಅದು ಕಾಡ್ಗಿಚ್ಚಿನಂತೆ ಹಬ್ಬಿತು. ಪ್ರಥಮತಃ ತಲ್ವಾರ್ ಹಡಗದ ಕೆಲಸಗಾರರು ಚಳವಳಿ ಹೂಡಿದ್ದರಿಂದೂ, ಒಡನೆಯೇ ಫಿರೋಜ್, ಜಕ್ಟ್ಸ್, ಮೋತ್ಲಿಹಾರ್, ನಾಸಿಕ್, ಕಲಾವತಿ, ಹಿಂದ್, ನೀಲಮ್ ಮೊದಲಾದ ಹಡಗಗಳಿಗೆಲ್ಲಾ ಅದು ಹಬ್ಬಿತೆಂದೂ ತಿಳಿದು ಬರುತ್ತದೆ. ಕೊನೆಗೆ ಬೊಂಬಾಯಿಯಲ್ಲಿದ್ದ ಸುಮಾರು20 ಹಡಗಗಳ ಮತ್ತು ಧಕ್ಕೆ ಹಾಗೂ ಶಿಬಿರಗಳ ಎಲ್ಲಾ ನೌಕಾ ಕೆಲಸಗಾರರೂ ಅದರಲ್ಲಿ ಭಾಗಿಯಾಗಿದ್ದರು. ಇಡೀ ಬೊಂಬಾಯಿಯೊಮ್ಮೆ ಆತುರ, ಅಭಿಮಾನಾವೇಗಗಳಿಂದ ಕಂಪಾಯಮಾನವಾಗಿತ್ತು.

ರಾಷ್ಟ್ರವ್ಯಾಪೀ ಆಂದೋಲನ

ಬೊಂಬಾಯಿ ನೌಕಾಪಡೆಯ ಮುಷ್ಕರವು ಅನುಕ್ರಮವಾಗಿ ಕೆಲಸ ಮತ್ತು ಆಹಾರ ತ್ಯಾಗ, ಘರ್ಷಣೆ, ಆಕ್ರಮಣ ಮತ್ತು ಪ್ರತ್ಯಕ್ಷ ಹೋರಾಟವಾಗಿ ಮಿಂಚು ವೇಗದಿಂದ ಮಾರ್ಪಟ್ಟು ವಾತಾವರವು ಪ್ರಕ್ಷುಬ್ಧವಾಗೊಡನೆ ಕಲ್ಕತ್ತಾ, ಕರಾಚಿ, ಲಾಹೋರು, ಢಿಲ್ಲಿ, ವಿಶಾಖಪಟ್ಟ ಮೊದಲಾದ ಕಡೆಗಳ ನೌಕಾ ನೌಕರರೆಲ್ಲಾ ಮುಷ್ಕರ ಹೂಡಿದರು. ಎಲ್ಲಾ ಕಡೆಗಳಲ್ಲೂ ದಸ್ತಗಿರಿ, ಗುಂಡು ಹಾರಾಟಗಳು ನಡೆದುವು. ಬೊಂಬಾಯಿಯ ಕೇಂದ್ರ ಮುಷ್ಕರ ಸಮಿತಿಯು ಈ ಮಹಾಂದೋಲನದ ಸೂತ್ರಧಾರಿಯಾಗಿತ್ತು. ಅಲ್ಲಲ್ಲಿಯ ವಿಮಾನ ಖಾತೆಯ ನೌಕರರೂ ಸಹಾನುಭೂತಿ ಸೂಚಕ ಮುಷ್ಕರ ಕೈಕೊಂಡರು ಬೊಂಬಾಯಿಗೆ ಬ್ರಿಟಿಷ್ ಸೇನೆಗಳು ಹೊರಗಿನಿಂದ ಧಾವಿಸಿ ಬಂದುವು. ಎಲ್ಲೆಲ್ಲೂ ಮುಂಜಾಗ್ರತೆ ವಹಿಸಲಾಗಿತ್ತು. ಈ ಕಿಡಿಯು ದೇಶದ ಅದ್ಯಂತ ಅಲ್ಲಲ್ಲಿ ಸಿಡಿದು ಕೆಲವೆಡೆಗಳಲ್ಲಿ ದಾವಾನಲವಾಗಿ ಧಗಧಗಿಸಿದ್ದಲ್ಲದೆ ಜನತೆಯಲ್ಲೂ ಎದೆಗುದಿಯನ್ನು ನಿರ್ಮಿಸಿತು.

ಕೆಲವು ಅಪೂರ್ವ ಘಟನೆಗಳು

ತಾ. 19ರಲ್ಲಿ ಕೊಡಲಿ ಮತ್ತು ಹಾಕಿಕೋಲು ಧರಿಸಿದ್ದ ಕೆಲವು ಮುಷ್ಕರ ವೀರರು ಬೊಂಬಾಯಿಯ ರಸ್ತೆಗಳಲ್ಲಿ ಮೆರವಣಿಗೆ ನಡೆಯಿಸಿ ಬ್ರಿಟಿಷ್ ಸೋಲ್ಜರರ ಮೇಲೆ ಬಿದ್ದುದಲ್ಲದೆ ಅಲ್ಲಿಯ ಮುಖ್ಯ ಬಂಡಿ ಸಂಚಾರೀ ಕೇಂದ್ರವಾಗಿದ್ದ ಫ್ಲೋರಾ ಫೌಂಟೆನ್ ಕ್ಷೇತ್ರವನ್ನೇ ವಶಪಡಿಸಿಕೊಂಡು ನಿಂತಿದ್ದರು. ಬೊಂಬಾಯಿ ಕೋಟೆಯೊಳಗಿನ ಪಾಳಯಗಳಲ್ಲಿದ್ದ ನೌಕಾ ಕೆಲಸಗಾರರಿಗೆ ದ್ವಾರದಲ್ಲೇ ಬಲವಾದ ಮಿಲಿಟರಿ ಪಹರೆಯಿಟ್ಟು ಕಾಯಲಾಗಿತ್ತು. ತಾ. 21ರಲ್ಲಿ ಒಳಗಿದ್ದ ನೌಕಾ ಸೋಲ್ಜರರು ಮುಷ್ಕರಗಾರರನ್ನು ಸೇರಿಕೊಳ್ಳಲು ಗೇಟನ್ನೊಡೆದು ಹೊರ ನುಗ್ಗಲು ಯತ್ನಿಸಿದರೆಂದೂ ಬ್ರಿಟಿಷ್ ಸೋಲ್ಜರರು ಗುಂಡು ಹಾರಿಸಿದಾಗ, ಅವರೂ ಕಲ್ಲು ಮತ್ತು ಗುಂಡು ಹಾರಿಸಿ ತೀವ್ರ ಹೋರಾಟ ನಡೆಯಿತೆಂದೂ ವಾರ್ತೆ. ಕೆಲವು ಮುಷ್ಕರ ವೀರರು ದಸ್ತಗಿರಿಗೊಳಗಾಗಲೊಪ್ಪದೆ ಕೋಟೆಯೊಳಗಿನ ಶಸ್ತ್ರ ಸಂಗ್ರಹವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದರು. [ಹಡಗದೊಳಗಿನ ಮುಷ್ಕರ ವೀರರು 'ಜೈಹಿಂದ್' ಮತ್ತು 'ಕ್ವಿಟ್ ಇಂಡಿಯಾ ಘೋಷವೆಬ್ಬಿಸುತಿದ್ದರಲ್ಲದೆ, ಅಲ್ಲಲ್ಲಿ ಬರೆದೂ ಹಾಕಿದ್ದರು ಕೆಲವೆಡೆ ರಾಷ್ಟ್ರ ಧ್ವಜ ಹಾರಾಡುತಿತ್ತು. ದಡದಿಂದ ಬ್ರಿಟಿಷ್ ಸೋಲ್ಜರರ ಒಂದೇ ಒಂದು ಗುಂಡು ಬಂದು ಬಿದ್ದರೆ ಪ್ರತಿಯಾಗಿ ಹಾರಿಸಲು ಎಲ್ಲಾ ಹಡಗದವರೂ ತಮ್ಮ ಗನ್ನುಗಳನ್ನು ತುಂಬಿಸಿಟ್ಟು ಅಣಿಯಾಗಿದ್ದರು. ದಡದ ಪಾಳಯದ ಮುಷ್ಕರಗಾರರು ತಮ್ಮನ್ನು ಸೇರಿದೊಡನೆ ಉಳಿದ ಬ್ರಿಟಿಷ್ ದಳಗಳ ಮೇಲೆ ಗುಂಡಿನ ಮಳೆಗರೆಯುವ ಸಿದ್ಧತೆಯಾಗಿತ್ತು. ಬಿಳಿ ಆಫೀಸರರು ಹಾಗೂ ಪ್ರತಿಯೊಂದು ಬಿಳಿ ಮೊಗವು ಕೂಡಲೇ ಹಡಗ ಬಿಡತಕ್ಕದ್ದೆಂದೂ ಮುಷ್ಕರದಲ್ಲಿ ಸೇರಲಿಚ್ಛಿಸುವ ಹಿಂದೀ ಅಧಿಕಾರಿಗಳು ಹಾಗೆ ಮಾಡಬಹುದೆಂದೂ ಹಡಗಗಳಿಗೆಲ್ಲಾ ಸಂದೇಶ ಹರಡಿದ್ದಿತು.

ವಿಷಮ ಸ್ಥಿತಿಯ ಪರಮಾವಧಿ

ಸರಕಾರವೂ ಪ್ರತಿಯೊಂದು ಪಡೆ, ಮತ್ತು ಆಕ್ರಮಣ ಸ್ಥಳಗಳಲ್ಲಿ ಹಿಂದೀ

(೭ನೇ ಪುಟ ನೋಡಿರಿ.)

ಒಂದು ರಾಜಕೀಯ ಒಳನೋಟ.

ರಾಜಾಜೀ ನಾಯಕತ್ವದ ಐಂದ್ರಜಾಲ!

(‘ವಿಮರ್ಶಕ’ನಿಂದ)

ದ. ಭಾರತ ಹಿಂದುಸ್ಥಾನೀ ಪ್ರಚಾರ ಸಭೆಯ ರಜತೋತ್ಸವದ ಅಧ್ಯಕ್ಷತೆ ವಹಿಸಲು ಗಾಂಧಿಜೀ ಮದ್ರಾಸಿಗಾಗಮಿಸಿದೊಡನೆ ರಾಜಾಜೀ ವಿರುದ್ಧ ಪಕ್ಷೀಯರು ಸ್ವಾಭಾವಿಕವಾಗಿ ತಳಮಳಕ್ಕೀಡಾಗಿದ್ದರು. ಮೃತ್ಯು ಭೀತಿಯಿಂದಾಗಿಯೇ ಮರಣ ಸಂಭವಿಸುವಂತೆ, ರಾಜಾಜೀ ನಾಯಕತ್ವದ ವಿರೋಧಿಗಳ ಸಂದೇಹವೇ ಅವರನ್ನು ಸಂಕಟಕ್ಕೀಡುಮಾಡಿತೋ, ಅಥವಾ ತಾನು ಮಾಡುವ ಪ್ರತಿಯೊಂದು ಕೆಲಸದ ಹೊಣೆಯನ್ನೂ ಅನ್ಯರ ಮೇಲೆ ಹೇರುವದರಲ್ಲಿ ವಿಚಕ್ಷಣರಿರುವ ಗಾಂಧಿಜೀ ಸಂದರ್ಭ ಸಾಧಿಕೊಂಡರೋ ಹೇಳಲಾಗುವದಿಲ್ಲ-ಅಂತೂ ಅವರ ಭಯ ಸುಳ್ಳಾಗಲಿಲ್ಲ.

ರಾಜಾಜೀ ಸಂಬಂಧಿಕ

“ನಾನು ರಾಜಾಜಿಯ ನಾಯಕತ್ವವನ್ನು ಉಳಿಸಿಕೊಡಲು ಮದ್ರಾಸ್ ಪ್ರವಾಸಕೈಗೊಂಡೆನೆಂಬ ಅರ್ಥ ಸೂಚಿಸುವ ಪತ್ರವೊಂದು ಅಲ್ಲಿಯ ನಿಲ್ದಾಣವೊಂದರಲ್ಲಿ ನನ್ನ ಕೈಗೆ ಬಂತು. ನಾನು ಬಹಿರಂಗವಾದಿ. ಅದಕ್ಕಾಗಿ ಬಂದವನಲ್ಲವೇ ಅಲ್ಲ. ಆದರೆ ವ್ಯಕ್ತಿಶಃ ನನ್ನ ಅಭಿಪ್ರಾಯ ಕೇಳುವದಾದರೆ ರಾಜಾಜೀ ನಾಯಕತ್ವವನ್ನು ಕಳಕೊಳ್ಳಬೇಡಿರೆಂದು ತಮಿಳು ನಾಡಿನವರನ್ನು ಎಚ್ಚರಿಸುತ್ತೇನೆ. ಅವರಂತೆ ಆ ಹೊಣೆ ನಿರ್ವಹಿಸಬಲ್ಲವರು ಬೇರಿಲ್ಲ. ತಮಿಳು ನಾಡಿನ ಕಾಂಗ್ರೆಸ್ ಅಧಿಕಾರಿಗಳಲ್ಲಿ ಅವರ ವಿರುದ್ಧವಾದ ಕೂಟವೊಂದಿದೆ ಎಂಬುದನ್ನು ತಿಳಿದು ನಾನು ಖೇದಗೊಂಡಿದ್ದೇನೆ. ಆದರೆ ಸಾರ್ವಜನಿಕರ ನಡುವೆ ರಾಜಾಜಿಯ ಪ್ರತಿಷ್ಠೆ ಅಜೇಯವಿದೆ. ಅದು ವಿನಹಾ ನನಗೆ ಹಾದಿಗಳಲ್ಲಿ ಅಂತಹ ಪ್ರಚಂಡ ಸ್ವಾಗತ ದೊರೆಯುತ್ತಿರಲಿಲ್ಲ. ರಾಜಾಜೀ ಆದಿಯಿಂದಲೂ ನನ್ನ ತತ್ವಗಳ ಪ್ರವಾದಿ. ನಡುವೆ ಅಲ್ಪಾವಧಿಯಲ್ಲಿ ಅವರು ನನ್ನೊಡನೆ ಭಿನ್ನಾಭಿಪ್ರಾಯ ಪಟ್ಟಿದ್ದರೆಂಬುದನ್ನು ನಾನು ಬಲ್ಲೆ. ಆದರೆ ಅವರ ಆ ಧೈರ್ಯವನ್ನು ಹೊಗಳಬೇಕು” ಎಂದು ಗಾಂಧಿಜೀ ಒಂದು ಬಾಣ ಹೊಡೆದರು. ಇದು ಒಂದು ವಿಷಯ ವಿಮರ್ಶೆಯಷ್ಟೇ ಅಲ್ಲ—ಕೇವಲ ಅಭಿಪ್ರಾಯ ಸೂಚನೆಯೂ ಅಲ್ಲ-ತನ್ನ ಕೈಗೆ ಶಕ್ತಿಯಿದ್ದಷ್ಟು ಒತ್ತಿ ಒರೆದು ಕೊಟ್ಟ ಸರ್ಟಿಫಿಕೇಟು!

ಪರಿಣಾಮವೇನಾಯಿತು?

‘ವಿರುದ್ಧ ಕೂಟ’ ಎಂಬ ಶಬ್ದ ರಾಜಾಜೀ ಇದಿರುವಾದಿ ಸಂಗಡಕ್ಕೊಂದು ಆಟಂ ಬೋಂಬಾಯಿತು. ತಮಿಳುನಾಡು ಕಾಂಗ್ರೆಸ್ ಮತ್ತು ಪಾರ್ಲಿಮೆಂಟರಿ ಸಮಿತಿಯ ಅಧ್ಯಕ್ಷರಾದ ಶ್ರೀ. ಕಾಮರಾಜನಾದರರು ಅದನ್ನೋದಿದೊಡನೆ ರಾಜೀನಾಮೆ ಕೊಟ್ಟರು. ಪಶ್ಚಾತ್ತಾಪವಂತಹದು; ಪರಿಸ್ಥಿತಿಯೂ ಅಂತಹದೇ. ಸದ್ಯದ ಹಿಂದೀ ರಾಜಕೀಯದಲ್ಲಿ ಗಾಂಧೀ ಆಶೀರ್ವಾದ ದೊರೆತ ಯಾವನೇ ಆದರೂ ಮಂತ್ರ ಮಾಲಾಲಂಕೃತ ವಾಲಿಯಂತೆ ವಿರೋಧಿಯ ಅರ್ಧ ಬಲಾಪಹರಿಸಲು ಸಮರ್ಥನಾಗುತ್ತಾನೆ. ಈ ಸಂದರ್ಭವಂತೂ ಅಷ್ಟೇ ಆಗಿರಲಿಲ್ಲ. ತನ್ನ ಪದ್ಧತಿಗೆ ವಿರುದ್ಧವಾಗಿ ರಾಜಾಜಿಯನ್ನು ಸಮರ್ಥಿಸಿದ್ದಕ್ಕಿಂತಲೂ ಹೆಚ್ಚಾಗಿ ಅವರ ವಿರೋಧಿಗಳನ್ನು ಗಾಂಧಿಜೀ ಖಂಡಿಸಿದ್ದರು. ರಾಜಾಜಿಯನ್ನು ತಲೆಗೇರಿಸಿ ಕೊಂಡಿದ್ದರೂ ಸಾಕಿತ್ತು; ಶ್ರೀ. ನಾದರರ ಗುಂಪನ್ನು ನಿರ್ದಾಕ್ಷಿಣ್ಯವಾಗಿ ಪಾತಾಳಕ್ಕೆ ತುಳಿದಿದ್ದರು. ಇಂತಹ ಗಾಂಧೀ ಹೊಡೆತವನ್ನು ಸಹಿಸಿಕೊಂಡು ಕಾಂಗ್ರೆಸ್ ರಂಗದಲ್ಲಿ ಮತ್ತೆ ನಿಲ್ಲುವದಾಗದ ಮಾತು ರಾಷ್ಟ್ರ ಗೌರವ ಸುಭಾಷರಿಂದಾಗಲಿಲ್ಲ; ವೀರ ನರಿಮನರಿಂದಾಗಲಿಲ್ಲ, ಪ್ರಧಾನಿ ಖರೆಯಿಂದಾಗಲಿಲ್ಲ! ಕಾಮರಾಜ ನಾದರರಿಂದ ಸಾಧ್ಯವೆ? ಆದ್ದರಿಂದ ಹೀಗಾಗದೆ ನಿರ್ವಾಹವಿರಲಿಲ್ಲ. ಅಥವಾ ಇದು ಗಾಂಧಿಜೀ ಬಯಸಿದ್ದುದೂ ಅಲ್ಲ

ಈಗ ರಾಜಾಜೀ ವೈರಾಗ್ಯ!

ಮಹಾತ್ಮರು ತನ್ನ ವಾಗ್ಬ್ರಹ್ಮಾಸ್ತ್ರ ಪ್ರಯೋಗ ಕೌಶಲ್ಯವನ್ನು ಮತ್ತೊಮ್ಮೆ ಪ್ರದರ್ಶಿಸಿದಂತೆಯೇ ರಾಜಾಜಿಯೂ ತನ್ನ ವಿಶ್ವಾಮಿತ್ರ ವೈರಾಗ್ಯವನ್ನು ಪುನಃ ಪ್ರಕಟಿಸಿದ್ದಾರೆ. ಹಳ್ಳಿಯ ಕೋಲ ನೇಮಗಳಲ್ಲೊಂದು ಸಂಪ್ರದಾಯವಿದೆ. ಅವುಗಳ[illegible]ಮನ ‘ಗುರಿಕಾರ’ ಎಲ್ಲ ವ್ಯವಸ್ಥೆಯನ್ನೂ ಸ್ವತಃ ಮಾಡಿಸಿ, ನಿಶ್ಚಿತ ಸಮಯದಲ್ಲಿ ತನ್ನ ಮನೆಗೆ ಹೋಗಿ ಕುಳಿತುಕೊಳ್ಳುತ್ತಾನೆ. ಊರವರು ಬೇಂಡುವಾಲಗದಲ್ಲಿ ಹೋಗಿ ಅವನನ್ನು ಸಂಭ್ರಮದಿಂದ ನೇಮದ ಚಪ್ಪರಕ್ಕೆ ಕರೆತರಬೇಕು. ಮದ್ರಾಸ್ ರಾಜಕೀಯದಲ್ಲಿ ರಾಜಾಜಿಗೆ ಇಂತಹ ‘ಮರ್ಯಾದೆ’ ಸಲ್ಲುವ ಸಂಪ್ರದಾಯವಿದೆ. ಕಳೆದ ಬಾರಿಯ ಚುನಾವಣೆಯ ಮೊದಲು ಡಾ|| ಎಸ್. ಎಸ್. ರಾಜನ್ ಪ್ರಕರಣದಿಂದಾಗಿ ಆಚಾರ್ಯರು ವೈರಾಗ್ಯ ಹಿಡಿದು ಕುಳಿತಿದ್ದರು. ಅವರನ್ನಾಗ ಇದಿರುಗೊಳ್ಳುವ ಸಂಪ್ರದಾಯಪಾಲನೆ ಸತ್ಯಮೂರ್ತಿ ಮೊದಲಾದವರಿಂದಾಗಿತ್ತು. ಈ ಬಾರಿಯೂ ಹಾಗಾಗಿದೆ. ಪ್ರಾಯಶಃ ಮಹಾತ್ಮರೇ ಕರೆಯಲು ಬರಬಹುದು; ಅಥವಾ ವಲ್ಲಭಾಯಿಯವರನ್ನು ಬೀಳ್ಕೊಡಬಹುದು. ಅಂತೂ ಇದೇ ಫೆಬ್ರವರಿ ತಾ. 21ರಲ್ಲಿ ರಾಜಾಜಿಯವರು ಗಾಂಧೀಜೀಗೆ ಈ ಕೆಳಗಿನ ಪತ್ರ ಬರೆದಿರುವರೆಂದು ಪ್ರಕಟವಾಗಿದೆ:—

‘ನನ್ನನ್ನು ಬೀಳ್ಕೊಡಿ!’

“ನನ್ನ ವಿಷಯದಲ್ಲಿ ನೀವು ಜಾಹೀರಾಗಿ ಹೇಳಿದ ಮಾತು ಸಮುದ್ರ ಮಂಥನದಂತೆ ಇದ್ದ ವಿಷವೆಲ್ಲವನ್ನೂ ಮೇಲಕ್ಕೆ ತಂದಿದೆ; ನೀವೀಗ ರುದ್ರನಂತೆ ಅದನ್ನು ಪಾನಮಾಡಬೇಕಾಗಿ ಬಂದಿದೆ! ನೀವು ಹಾಗೆ ಮಾಡಬಲ್ಲಿರೆಂದು ನಾನು ಬಲ್ಲೆ. ಆದರೆ ಅದು ದೀರ್ಘಕಾಲದಿಂದ ನನ್ನಲ್ಲಿರುವ ಶಾಂತಿಯಾತುರವನ್ನು ಪ್ರತಿಭಟಿಸಲಾಗದಷ್ಟು ಒಲಗೊಳಿಸಿ ಬಿಟ್ಟಿದೆ. ಅದನ್ನಿನ್ನೂ ದಮಿಸಿಟ್ಟುಕೊಳ್ಳುವ ಶಕ್ತಿ ನನ್ನಲ್ಲೀಗ ಇಲ್ಲ. ಇಷ್ಟು ಕಾಲ ನಾನು ಎಷ್ಟೆಷ್ಟನ್ನೋ ಸಹಿಸಿಕೊಂಡೆ. ಅಪಪ್ರಚಾರಕರನ್ನು ಗಣಿಸದೇನೇ ನಾನು ಕಠಿಣ ಹೋರಾಟ ನಡೆಸುತ್ತಾ ಬಂದೆ. ಆದರೆ ಈಗ ನಾನದನ್ನು ಬಿಟ್ಟುಕೊಟ್ಟೆ.

“ಇದು ಯೋಗ್ಯವೋ?..ಎಂಬ ಪ್ರಶ್ನೆಯನ್ನು ನನಗೇನೇ ನಾನು ಹಲವು ಬಾರಿ ಕೇಳಿ ಕೊಂಡಿದ್ದೆ. ಅಲ್ಲವೆಂದೇ ನನಗನ್ನಿಸುತ್ತದೆ. ನನ್ನನ್ನಾರೂ ತಪ್ಪಾಗಿ ತಿಳಿದುಕೊಳ್ಳುವಂತಾಗಬಾರದೆಂಬ ನನ್ನ ಉತ್ಕಟೇಚ್ಛೆಯಂತೆ ನಾನು ವರ್ತಿಸಬೇಕಾಗಿದೆ. ನಿಜಕ್ಕೂ ಸಂಗತಿ ಹಾಗಲ್ಲವಾಗಿರುವಾಗ ಅಧಿಕಾರಾಕಾಂಕ್ಷೆಯಲ್ಲಿದ್ದೇನೆ ಎಂಬ ಅಪವಾದವನ್ನು ನಾನೇಕೆ ಕೇಳಬೇಕು? ನಾನದನ್ನು ಸಿದ್ಧಮಾಡಿ ತೋರಿಸಬೇಕಾಗಿದೆ. ಯಾವುದೊಂದು ಹಿತವೂ ಇರಲಾರದಾದರೂ ಕೇವಲ ಸಿದ್ಧಾಂತವೊಂದನ್ನು ಸಾಧಿಸಲಿಕ್ಕೆಯಾದರೂ ಬೇಕಾಗಿದೆ. ಈಗ ನ್ಯಾಯವಿಧಾಯಕ ಸಭೆಯ ಉಮೇದ್ವಾರಿಗಳ ಆರಿಸುವಿಕೆಯ ಕೆಲಸವೆಲ್ಲಾ ಮುಗಿದಿದೆ; ನನ್ನನ್ನು ಬೀಳ್ಕೊಡಿ.

“ನನ್ನ ಸ್ಥಾನಕ್ಕೆ (ಯುನಿವರ್ಸಿಟಿ ಸ್ಥಾನ) ಸಾಂಬ ಮೂರ್ತಿಯವರಿದ್ದಾರೆ. ಅವರಿಗೆ ಯಾವ ಸ್ಥಾನವನ್ನು ಕೊಟ್ಟಿದೂ ಇಲ್ಲ; ಅವರು ಅರ್ಜಿ ಹಾಕಿದ್ದೂ ಇಲ್ಲ. ಆಂಧ್ರದ ಸಾರ್ವಜನಿಕ ಕ್ಷೇತ್ರದಲ್ಲಿ ಕಳೆದ 25 ವರುಷಗಳಿಂದ ಅವರುಗಳಿಸಿರುವ ಸ್ಥಾನ—ಎಸೆಂಬ್ಲಿ ಸ್ಪೀಕರರಾಗಿ ಅವರು ನಡಕೊಂಡಿದ್ದ ಅವಿರೋಧವಾದ ರೀತಿನೀತಿಗಳು-ಅವರ ಶಕ್ತ್ಯುತ್ಸಾಹ, ಇವೆಲ್ಲಾ ಸುಪ್ರಸಿದ್ಧವಿವೆ. ಆದ್ದರಿಂದ ಅವರನ್ನು ಬಿಟ್ಟು ಬಿಡುವದು ತಪ್ಪು. ಯುನಿವರ್ಸಿಟಿಯ ನಾಮಕರಣದಲ್ಲಿ ನನ್ನ ಸ್ಥಾನ ಹೊಂದಲು ಅವರು ನಿಜಕ್ಕೂ ಬಾಧ್ಯರು.

“ನನ್ನೀ ವರ್ತನೆಯನ್ನು ನೀವು ಅನುಮೋದಿಸಬೇಕೆಂದೂ, ಈ ಕುರಿತು ಅಗತ್ಯವುಳ್ಳ ಕಾರ್ಯಕೈಕೊಳ್ಳುವಂತೆ ಸರ್ದಾರರಿಗಿಸಿದನ್ನೊಪ್ಪಿಸಬೇಕೆಂದೂ ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನಾಮಕರಣ ಪತ್ರಗಳು ಮಾರ್ಚ ತಾ. 1ರೊಳಗೆ ಅಧಿಕಾರೀ ದಾಖಲೆಗೆ ಸೇರಬೇಕಾಗಿದೆ. ಪ್ರೀತಿ ಸ್ಮರಣೆಗಳು”.

ಇದೆಂತಹ ಆಟ?

ಗಾಂಧಿಜೀ-ರಾಜಾಜಿಯರೊಳಗಿನ ಹೃದಯ ಮತ್ತು ಕುಟುಂಬ (ಗಾಂಧೀ ಪುತ್ರನ ಪತ್ನಿ ಆಚಾರ್ಯರ ಪುತ್ರಿ) ಸಂಬಂಧಗಳು ಸರ್ವಶ್ರುತ ವಿಷಯಗಳು. ರಾಜಾಜಿಯ ಶಕ್ತಿ, ಚಾತುರ್ಯ ಮತ್ತು ನಿಸ್ವಾರ್ಥ ಸೇವೆಯನ್ನು ಅಲ್ಲಗಳೆದವರಿಲ್ಲ. ಆದ್ದರಿಂದ ಗಾಂಧಿಜೀ ಇವುಗಳೆಲ್ಲವುದನ್ನೂ ತಮಿಳುನಾಡಿನವರ ಜ್ಞಾಪಕಕ್ಕೆ ತರುವ ಅಗತ್ಯವಿರಲಿಲ್ಲ. ವಾದರಂಗಕ್ಕೂ ಮೇಲಿನ ವಿಷಯಗಳಿಗೂ ಸಂಬಂಧವಿರಲಿಲ್ಲ. ಆದರೆ, ವಾದದ ವಿಷಯದ ಕಡೆಗೆ ಲಕ್ಷ್ಯವನ್ನೇ ಕೊಡದೆ ಅವೆರಡನ್ನೂ ಒಂದುಗೂಡಿಸುವ ಕಾರ್ಯ ಗಾಂಧಿಜೀಯಿಂದಾಗಿದೆ. ಉದ್ದೇಶ ರಾಜಾಜಿಯನ್ನು ಉಳಿಸುವದೊಂದೇ. ಅದಕ್ಕಾಗಿ, ಏನೇ ಮಾಡಿದರೂ ತನ್ನ

(೧೧ನೇ ಪುಟ ನೋಡಿರಿ)

(3ನೇ ಅಖಿಲ ಭಾರತ ಆಯುರ್ವೇದ ಪ್ರದರ್ಶನದಲ್ಲಿ ಸುವರ್ಣ ಪದಕ ಬಹುಮಾನ ಪಡೆದಿದೆ)

ಮಾರ್ಗರೇಟರ

ಫಿಟ್ಸ್ ಕ್ಯೂರ್

ಮಕ್ಕಳ ಭಯಂಕರ ಬಾಲಗ್ರಹವನ್ನ ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸುವುದು

ಪ್ರತಿಯೊಂದು ಸ್ಥಳದಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ. ಧಾರಾಳ ಕಮಿಷನ್ನು ಹೆಚ್ಚಿನ ಮಾಹಿತಿಗೆ ನಮಗೆ ಬರೆಯಿರಿ.

BRIGHTSTAR AGENCIES,
Hospital Road, Udipi, S. K.

CANARA BANK LIMITED

Estd: 1906

(Incorporated in British India, liability of Members Limited.)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	....	2½%
6 to 9 months	....	2¼%

Rates for Season Deposits of less than Rs 10000/- with a minimum of Rs 1000/- and in multiples of Rs. 500/- may be ascertained on application to our nearest branch.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-’47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.

ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,

ಮಾತುಂಗಾ, ಬೊಂಬಾಯಿ.

ಇಲ್ಲಿಯೂ ಸಿಗುವದು.

ಸೋಲ್ಜರರನ್ನು ಹಿಂದೆಗೆದು ಕೊಂಡು ಬ್ರಿಟಿಷ್ ದಳಗಳನ್ನೇ ನಿಲ್ಲಿಸಿದ್ದತು. ಈ ಬಂಡಾಯವಡಗಿಸುವ ಸೇನಾನಿಯಾಗಿ ಜನರಲ್ ಲೋಕ್‍ಹರ್ಟರು ಸರ್ವ ಸೇನಾನಿಯಿಂದ ನೇಮಕ ಹೊಂದಿ ಬೊಂಬಯಿಯಲ್ಲಿ ಕಳವ್ರೂಂದರು ನೌಕಾ ನಾಯಕ ಎಡ್ಮಿರಲ್ ಗೋಡ್‍ಫ್ರೇಯವರು ನಿಯಮ ವಿರುದ್ಧವಾಗಿ ಆಕಾಶವಾಣಿ ಭಾಷಣ ಮೂಲಕ ಮುಷ್ಕರಗಾರರನ್ನು ಬೆದರಿಸುತ್ತಾ 'ಸಂದರ್ಭ ಬಂದರೆ ಬ್ರಿಟಿಷ್ ಸಾಮ್ರಾಜ್ಯ ಸೇನಾಬಲವನ್ನೆಲ್ಲಾ ಉಪಯೋಗಿಸಿ ಈ ಬಂಡಾಯವನ್ನು ಅಡಗಿಸಲಾಗುವದು; ತಿಳಿದಿರಲಿ' ಎಂದಬ್ಬರಿಸಿದರು. 'ಇಂತಹ ಬೆದರಿಕೆಗೆ ಮನಸ್ಸು ಸಹಜ ಸ್ವಾಭಿಮಾನವಿರುವವರು ಸೊಪ್ಪು ಹಾಕುವಂತಿಲ್ಲ' ಎಂದು ಬಂಡಾಯಕೋರರು ಮತ್ತಷ್ಟು ಕೆರಳಿ ರಾಷ್ಟ್ರ ಪ್ರಮುಖರ ಲಕ್ಷ್ಯವನ್ನೇ ಕಡೆಗಳೆದರು. ಕಾಂಗ್ರೆಸ್ ಪ್ರಮುಖರೊಡನೆ ಮುಷ್ಕರ ಸಮಿತಿಯು ಹೃದ್ರಾವಕ ವಿನಂತಿ ಮಾಡಿಕೊಂಡಿತು. ಬೊಂಬಾಯಿಯು ಒಂದರ ಕ್ಷೇತ್ರದಲ್ಲಿ ಸುಮಾರು ಆರು ಘಂಟೆಗಳ ಕಾಲ ಮುಷ್ಕರಿ ಯೋಧರು ಮತ್ತು ಬ್ರಿಟಿಷ್ ಸೋಲ್ಜರರೊಳಗೆ ಜಾಡಾಜಾಡಿ ಗುಂಡೆಸೆತದ ಪ್ರತ್ಯಕ್ಷ ರೌದ್ರ ರಣವೇ ನಡೆದಿದ್ದಿತು. ಅಲ್ಲಿದ್ದ ಅಸ್ತ್ರ ಶಸ್ತ್ರ, ಮದ್ದು ಗುಂಡುಗಳು ಮುಷ್ಕರಗಾರರ ಸ್ವಾಧೀನದಲ್ಲೇ ಇದ್ದುವು, ಹಡಗುಗಳೆಲ್ಲಾ ಸ್ವಾಭಿಮಾನ, ಸ್ವಾತಂತ್ರ್ಯದ ಗೂಡುಗಳಾಗಿ ಮಾರ್ಪಟ್ಟಿದ್ದುವು. ಅಲ್ಲಿ ಕಳಕೊಂಡ ಸೊತ್ತು, ಸ್ಥಾನ, ಮಾನಗಳನ್ನು ವಿಶೇಷ ಸಾಹಸದ ಭಯಂಕರ ಯುದ್ಧವಿನಹಾ ಬ್ರಿಟಿಷರು ಮರಳಿ ಪಡೆಯುವಂತಿರಲಿಲ್ಲ

ಸಂಧಾನ ಪ್ರಯತ್ನ

ಈ ನಡುವೆ ಮುಷ್ಕರ ಸಮಿತಿಯು ಕಾಂಗ್ರೆಸ್ ಕಮಿಟಿ ಮತ್ತು ಸರ್ದಾರ್ ಪಟೇಲರನ್ನು ಸಂಧಿಸಿತು ಸುದೈವವಶಾತ್ ಬೊಂಬಾಯಿಯಲ್ಲೇ ಇದ್ದ ಸರ್ದಾರರು ಅವಸರದಿಂದ ಕಾರ್ಯೋದ್ಯುಕ್ತರಾದರು. ತಾನು ಸ್ವತಃ ಗವರ್ನರರೊಡನೆ ಮಾತುಕೂಡಿದ್ದಲ್ಲದೆ, ಢಿಲ್ಲಿಯಲ್ಲಿ ಮಿ. ಆಸಫ್ ಅಲಿಗಳ ಮೂಲಕ ಸರ್ವ ಸೇನಾನಿ ಜನರಲ್ ಆಚಿನ್ ಲೆಕರಿಗೆ ಸಂಧಾನ ಸೂಚನೆ ಕೊಟ್ಟರು. ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಆಜಾದರು ಸ್ವತಃ ಆಚಿನ್‍ಲೆಕರೊಡನೆ ಸಂಭಾಷಿಸಿದರು. ತನ್ನಿಮಿತ್ತಂದ ಶಾಂತಿ ಸ್ಥಾಪಿಸುವ ಹೊಣೆಯನ್ನು ಕಾಂಗ್ರೆಸ್ ಹೊರಲು ಸಿದ್ಧವಿದೆ; ಆದರೆ ನ್ಯಾಯದಂಗದ ಭರವಸೆ ಕೊಡಬೇಕು-ಎಂದು ಕಾಂಗ್ರೆಸಿನ ಸೂಚನೆ. ಸಹೃದಯಿಯೆಂದು ಹೆಸರಾಗಿದ್ದ ಜನರಲ್ ಆಚಿನ್‍ಲೆಕರ ಹೃದಯಕ್ಕೆ ಪರಿಸ್ಥಿತಿಯು ಬಿಸಿತಾಗಿದ್ದುದರಿಂದ ಅವರೀ ಸೂಚನೆಗೊಪ್ಪಿಗೆ ಕೊಟ್ಟರು 'ಯಾರನ್ನೂ ಶಿಕ್ಷಿಸುವ ಅಥವಾ ಪ್ರತೀಕಾರ ಮಾಡುವ ಹಾಗಿಲ್ಲ. ಮುಷ್ಕರಗಾರರ ಬೇಡಿಕೆಗಳನ್ನು ಸಹಾನುಭೂತಿಯಿಂದ ಕಂಡು ತೀರ್ಮಾನಿಸಲಾಗುವದು' ಎಂಬ ಆಶ್ವಾಸನೆ ಅಧಿಕಾರಿಗಳಿಂದ ಬಂತು. ಸರ್ದಾರ್ ಪಟೇಲರು ಮುಷ್ಕರಗಾರರಿಗೊಂದು ವಿನಂತಿ ಮಾಡಿಕೊಂಡರು. 'ನಿಮಗೆ ನ್ಯಾಯದಾನ ಮಾಡಿಸಿಕೊಡುವೆವು. ನಿಮ್ಮ ಜನ್ಮಸಿದ್ಧ ಹಕ್ಕುಗಳನ್ನು ಈಡೇರಿಸಿಕೊಡಲು ಕಾಂಗ್ರೆಸ್ ಶಕ್ತಿಯಿದ್ದಷ್ಟು ದುಡಿಯಲಿದೆ ಅಧಿಕಾರಿಗಳಿಂದ ಆ ಕುರಿತು ಆಶ್ವಾಸನೆ ದೊರಕಿದೆ ಸದ್ಯಕ್ಕೆ ಈ ದುರ್ದೈವಿ:

ಬೊಂಬಾಯಿ ಮತ್ತಿತರ ಕಡೆಗಳಲ್ಲಿ ಮಹಾ ಗೊಂದಲ!

(೫ನೇ ಪುಟದಿಂದ ಮುಂದುವರಿದುದು)

ಘಟನೆ ನಿಲ್ಲಬೇಕು. ಶಸ್ತ್ರಗಳನ್ನಿಟ್ಟು ಸಂಪ್ರದಾಯಾನುಸಾರ ಶರಣಾಗಿರಿ; ಮುಷ್ಕರ ನಿಲ್ಲಿಸಿರಿ' ಎಂಬ ಸರ್ದಾರರ ಸಂದೇಶವನ್ನು ಶಿರಸಾವಹಿಸಿ ಎಲ್ಲಾ ಮುಷ್ಕರಗಾರರೂ ತಾ. 21ನೇ ಅಪರಾಹ್ನ ಶಾಂತವಾಗಿ ಶರಣು ಬಂದರು. 'ಯಾರ ಬಲಿಗೂ ಬೀಳಬೇಡಿ; ಮುಷ್ಕರ ನಿಲ್ಲಿಸಿರಿ; ನಾನು ಸರ್ವವಿಧದ ಪ್ರಯತ್ನ ಮಾಡಲಿದ್ದೇನೆ' ಎಂದು ಮಿ. ಜಿನ್ನರು ಕಲ್ಕತ್ತದಿಂದ ಕೇಳಿಕೊಂಡಿದ್ದರು. "ಇದು ಹಿಂಸಾಕೃತ್ಯ; ಖಂಡನೀಯವಿದೆ, ಮುಷ್ಕರಗಾರರು ಈ ವಿಧಾನವನ್ನು ಬಿಡಬೇಕು. ಸರಕಾರವು ಔದಾರ್ಯದಿಂದ ವರ್ತಿಸಬೇಕು' ಎಂದು ಗಾಂಧಿಜೀ ಕೇಳಿಕೊಂಡಿದ್ದರು.

ಜನತಾ ಬಂಡಾಯ

ನೌಕಾ ಯೋಧರ ವಿಪ್ಲವ ಪೂರ್ಣ ಬಂಡಾಯವು ಸರದಾರರ ಗಂಭೀರ ಸಂದೇಶಾನುಸಾರವಾಗಿ ಅತ್ಯಂತ ಶಾಂತತೆಯಿಂದ ಕೊನೆಗೊಂಡರೂ, ಆ ಕಿಡಿ ಸಿಡಿದು ಬೊಂಬಾಯಿ ನಗರದಲ್ಲಿ ಹತ್ತಿದ ದಂಗೆ ಮಾತ್ರ ಪ್ರಳಯಾಗ್ನಿಯಾಗಿ ಪ್ರಜ್ವಲಿಸಿ, ಯಾರ ಅಂಕೆಗೂ ಸಿಗದೆ ನಾಲ್ಕೈದು ದಿನಗಳವರೆಗೆ ಮಹಾ ಅನಾಹುತವನ್ನುಂಟು ಮಾಡಿತು. 300,000 ಮಿಲ್ ಕೆಲಸಗಾರರು ನೌಕಾ ಮುಷ್ಕರಗಾರರೊಡನೆ ಸಹಾನುಭೂತಿ ಸೂಚಿಸಲು ಮುಷ್ಕರ ಹೂಡಿದ್ದರು. ಇಡೀ ನಗರವು ಕ್ರೋಧಾವೇಗಗೊಂಡಿತ್ತು. ಹರತಾಳದ ಸಿದ್ಧತೆಯನ್ನೂ, ಇತರ ಆವೇಶಪೂರಿತ ಪ್ರದರ್ಶನಗಳನ್ನೂ ಕಾಂಗ್ರೆಸಿನ 'ಶಾಂತಿ ದಳ'ದವರು ಪ್ರಾಣಾವಧಿ ಪ್ರಯತ್ನಗಳಿಂದ ಶಮನಗೊಳಿಸಿದ್ದರು. ಆದರೂ ತಾ. 21, 22, 23, 24ರ ಮತ್ತು ೨೫ರ ವರೆಗೂ ಇಡೀ ನಗರವು ಅನಾಯಕ ಸ್ಥಿತಿಯಲ್ಲಿತ್ತು ಈ ಅವಧಿಯಲ್ಲಿ ಬ್ರಿಟಿಷ್ ಸೋಲ್ಜರರು 20-30 ಬಾರಿ ಗುಂಡು ಹಾರಿಸಬೇಕಾಗಿ ಬಂದಿತ್ತು. ಆವೇಶದ ಹುಚ್ಚೇರಿದ್ದ ಜನತೆ ಮಿಲಿಟರಿ ಲೋರಿಗಳು, ಬ್ರಿಟಿಷ್ ಸೋಲ್ಜರರು ಮತ್ತು ಸರಕಾರೀ ಕಟ್ಟಡ ಸೊತ್ತುಗಳ ಮೇಲೆಲ್ಲಾ ಧಾಳಿ ನಡಿಸಿದರು; ಅಂಗಡಿಗಳನ್ನು ಲುಟಾಯಿಸಿದರು; ರೈಲು, ಬೇಂಕು ಮತ್ತಿತರ ಸರಕಾರೀ ಕಟ್ಟಡಗಳ ದರೋಡೆ ನಡೆದುದಲ್ಲದೆ ಬೆಂಕಿ ಕೊಡಲ್ಪಟ್ಟಿತು ಕರ್ಫ್ಯೂ ಆಜ್ಞೆ ಜ್ಯಾರಿಯಾಯಿತು; ಅದನ್ನು ಕಸಕ್ಕೂ ಕಡೆಯಾಗಿ ಗಣಿಸಿ ಜನ ಜಂಗುಳಿಯು ಮುಖ್ಯವಾಗಿ ಮಿಲ್ ವಲಯಗಳಲ್ಲಿ-ನಡೆಸಿದ ಅನಾಹುತವು ನಿಜಕ್ಕೂ ಅದ್ಭುತವಾದುದು ಬೊಂಬಾಯಿ ಮತ್ತು ಆಸುಪಾಸಿನ ಸುಮಾರು 50 ಚಚ್ಚೌಕ ಮೈಲು ವಿಸ್ತೀರ್ಣವು ಪ್ರತ್ಯಕ್ಷ ರಣರಂಗವಾಗಿ ಮಾರ್ಪಟ್ಟಿದ್ದಿತು ಸಶಸ್ತ್ರ ಮಿಲಿಟರಿ ಲೋರಿಗಳು, ಉಕ್ಕಿನ ಶಿರಸ್ತ್ರಾಣ ಮತ್ತು ಕೋವಿ, ಬೊಯನೆಟ್ ಧಾರಿಗಳಾದ ಬ್ರಿಟಿಷ್ ಸೋಲ್ಜರರಿಂದ ಸುತ್ತಲೂ ಉಕ್ಕಿನ ಕೋಟೆಯೇರ್ಪಾಡಾಗಿ ಅದರೊಳಗೆ ನಗರವು ಧಗಧಗಿಸುವಂತಿತ್ತು; ಕ್ರಾಂತಿ ರುದ್ರನು ಬೆಂಕಿಯುಂಗುರದ ಸರ್ಕಸ್ ಆಡುವಂತಿತ್ತು! ನಗರದೊಳಗೆ ಉಕ್ಕಿನ ತಲೆ ಭೂಷಣವಿದ್ದ ಕರೇರ ಸೋಲ್ಜರರು ಮತ್ತು ವಿವಿಧ ಸ್ಫೋಟಕೋಪಕರಣಗಳಿಂದ ತುಂಬಿದ್ದ ಸೇನಾಲೋರಿಗಳು ಎಡೆಬಿಡದೆ ಓಡಾಡುತ್ತಿದ್ದುವು ಪ್ರತಿಯೊಂದು ನಿಲ್ದಾಣ ಮತ್ತು ಸ್ಥಾನಗಳನ್ನು ಆಕ್ರಮಿಸಿಕೊಂಡು ನಿಂತಿದ್ದುವು. ತಾ 25ರಲ್ಲಿ ಪರಿಸ್ಥಿತಿ ನಿಧಾನವಾಗಿ ಶಾಂತಗೊಂಡಿದೆ; ಯಥಾಸ್ಥಿತಿಯು ಪುನಃ ಸ್ಥಾಪನೆಗೊಂಡಿದೆ ಕರ್ಫ್ಯೂ ಸಡಲಿದೆ. ನೌಕಾ ಪಡೆಯ ವ್ಯವಸ್ಥಿತ ಬಂಡಾಯದಲ್ಲಿ ಕೇವಲ 8 ಮಂದಿ ಹಿಂದೀ ಕೆಲಸಗಾರರು ಮಡಿದು 33 ಮಂದಿ ಜಖಂಗೊಂಡರೆಂದು ಸರಕಾರದ ಲೆಕ್ಕ ಬಲಿಬಿದ್ದ ಬ್ರಿಟಿಷ್ ಸೋಲ್ಜರರು ಮತ್ತು ಅಧಿಕಾರಿಗಳ ಸಂಖ್ಯೆ ಪ್ರಕಟವಾಗಿಲ್ಲ. ಆದರೆ 200ಕ್ಕೂ ಹೆಚ್ಚಿನ ಹಿಂದೀ ನೌಕಾ ಕೆಲಸಗಾರರು [illegible] ಕೋಟೆ ಪಾಳಯದ ಕಾಳಗದಲ್ಲೇ ಮಡಿದಿದ್ದರೆಂದು ಅನಧಿಕೃತ ವಾರ್ತೆ. ಕರಾಚಿಯಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚಿನ ನೌಕಾ ಕೆಲಸಗಾರರು ಮಡಿದಿರಬೇಕೆಂದು ಸರಕಾರೀ ಸದಸ್ಯರ ಊಹೆಯಿದೆ; ಆದರೆ ಬೊಂಬಾಯಿ ನಗರದ ಜನತಾ ಬಂಡಾಯದಲ್ಲಿ 270 ಮಂದಿ ಮಡಿದು 1037 ಮಂದಿ ಜಖಂಗೊಂಡರೆಂದು ಅಧಿಕೃತ ವಾರ್ತೆಯಿದೆ 50ಕ್ಕೂ ಮಿಕ್ಕಿದ ಸರಕಾರೀ ಧಾನ್ಯ ಸಂಗ್ರಹಾಲಯಗಳು ದರೋಡೆ ಅಥವಾ ಬೆಂಕಿಗಾಹುತಿಯಾದುವು. ಸುಮಾರು 500,000 ಪೌಂಡು ಧಾನ್ಯ 1,25,000 ಪೌಂಡು ಸಕ್ಕರೆ ನಾಶವಾಯಿತು. ಕಾಂಗ್ರೆಸ್ ಶಾಂತಿ ದಳದ 6 ಜನರು ಮಡಿದರು ತಾ. 25ರಿಂದ ಮಿಲ್‍ಗಳು ಪುನಃ ಪ್ರಾರಂಭಿಸಿವೆ.

ಮದ್ರಾಸಿನಲ್ಲಿ ಬಂಡಾಯ

ಬೊಂಬಾಯಿ ಮತ್ತಿತರ ಕಡೆಗಳ ಮುಷ್ಕರಗಾರರೊಡನೆ ಸಹಾನುಭೂತಿ ಸೂಚಿಸುವ ಆವೇಗದಲ್ಲಿ ಶಾಂತತೆಗೆ ಹೆಸರಾಗಿದ್ದ ಮದ್ರಾಸ್ ನಗರದಲ್ಲಿ ಕೂಡಾ ತಾ. 25ರಲ್ಲಿ ಬಂಡಾಯದ ಕಿಡಿಹಾರಿದ ವಾರ್ತೆ ಬಂದಿದೆ ಅಂದು ಶಾಲಾ ಕಾಲೇಜು ಮತ್ತು ಹೊಟೆಲು ಮುಷ್ಕರಗಾರರ ಸಮ್ಮೇಳನ 'ಇಡೀ ನಗರವು ಹರತಾಳವಾಚರಿಸಿದ್ದಿತು ಕೆಲಸಗಾರರೆಲ್ಲಾ ಸಂಪುಹೂಡಿದ್ದರು ಮುಂಜಾನೆ ಮತ್ತು ಅಪರಾಹ್ನ ಮುಖ್ಯವಾಗಿ ಯುವಕರು ಸೇರಿದ್ದ ಪ್ರಚಂಡ ಮೆರವಣಿಗೆಯು ಜೈ ಘೋಷಗಳೊಂದಿಗೆ ನಗರ ಸುತ್ತಾಡಿತು. ಸಂಜೆಯ ಪ್ರಚಂಡ, ಹಾಗೂ ಪ್ರಕೋಪೀ ಮೆರವಣಿಗೆಯವರು ಮಿಲಿಟರಿ ಲೋರಿಗಳ ಮೇಲೆ ಬಿದ್ದರೆಂದೂ, ಹಲವು ಕಡೆ ಧಾಳಿ ನಡೆದು ಕೆಲವು ಕಟ್ಟೋಣಗಳಿಗೆ ಬೆಂಕಿಕೊಡಲಾಯಿತೆಂದೂ ತಿಳಿದುಬರುತ್ತದೆ. ಹರತಾಳವಾಚರಿಸದವರ ಮೇಲೂ ಮಿಲಿಟರಿ ಹಾಗೂ ಸರಕಾರೀ ಕಟ್ಟಡಗಳ ಮೇಲೂ ಆಕ್ರಮಣ ಯತ್ನ ನಡೆದ ವಾರ್ತೆಯಿದೆ. ಶ್ರೀ ನಾಡಾರರು ಶಾಂತಿ ವಿಜ್ಞಾಪನೆ ಹೊರಡಿಸಿದ್ದಾರೆ ಇತರ ಕಾಂಗ್ರೆಸ್ ಪ್ರಮುಖರೂ ಶಾಂತಿ ಪ್ರಯತ್ನದಲ್ಲಿದ್ದಾರೆ. ಮುಷ್ಕರ ನಿಲ್ಲಿಸಲೊಪ್ಪದಿದ್ದ ಕಲ್ಕತ್ತದ ನಾವಿಕರು

(೮ನೇ ಪುಟ ನೋಡಿರಿ)

UNITED

WE

Offer free SERVICE IN INSURANCE

Give full SECURITY FOR YOUR MONEY

Guarantee PROMPT SETTLEMENT OF CLAIMS

RAO BAHADUR B. S. Sawkar, B A., LL. B Chairman

A S Kini, Managing Director

THE UNITED KARNATAKA INSURANCE CO., LTD.

H O. DHARWAR. ESTD 1929

Insure with or Represent us.

For Particulars apply

ORGANISING OFFICE COURT ROAD, UDIPI.

Or

M N Bhandary & Co., Sp. Agents, Kodialbail, Mangalore

ರತಿಸುಖ ಸಾಧನಗಳು

ಅನೇಕರು ಕೆಟ್ಟ ಸ್ತ್ರೀ ವ್ಯಾಧಿಗಳು ಅಂಟಿಕೊಂಡು ಮರಣಾಂತರವು ವ್ಯಸನಕ್ಕೆ ಗುರಿಯಾಗುವರು. ಆದರಿಂದ

ಸ್ತ್ರೀವ್ಯಾಧಿಗಳು ಯಾವುವು ಸೇರದಂತೆ ಶಾಕ್ತರುಗಳು ಈ ರಹಸ್ಯ ರಬ್ಬರ್ ಚೀಲವನ್ನು ಕಂಡು ಹಿಡಿದಿರುವರು ಈ ಚೀಲವನ್ನು ಸಂಭೋಗ ಸಮಯದಲ್ಲಿ ಉಪಯೋಗಿಸುವದರಿಂದ ಸ್ತ್ರೀಸಂಗದಲ್ಲಿ ಆನಂದವನ್ನು ಕೊಡುವುದು. ರತಿಕ್ರೀಡೆಗೆ ಆತಂಕವಿಲ್ಲ. ಮೋಹರೋಗದ ಹೆದರಿಕೆಯಿಲ್ಲ ಗರ್ಭಧರಿಸುವ ಭಯವಿಲ್ಲ.

ಗಂಡಸರ ಮರ್ತ್ಯದ ರಬ್ಬರ್ ಚೀಲ 1-8-0

ಹೆಂಗಸರ ಮರ್ತ್ಯದ ರಬ್ಬರ್ ಚೀಲ 2-8-0.

ದಿ ಮರ್ಚಂಟ್ ಟ್ರೇಡಿಂಗ್ ಕಂಪನಿ (N)

ನಂ 275/ ದಿ ಚೈನಾ ಬಜಾರು ರೋಡು 12 ಜಿ. ಟಿ. ಮದ್ರಾಸು

The Canara Banking Corporation Limited.

(Incorporated in British India, with limited Liability)

Estd. 1906

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months	...	2¼%
6 months	...	2½%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ನವಯುಗ

ಉಡುಪಿ, ಗುರುವಾರ, ೨೮-೨-'೪೬

ನೌಕಾ ಬಂಡಾಯ

ಭಾರತೀಯ ನೌಕಾ ಪಡೆಯ ಹಿಂದೀ ಕೆಲಸಗಾರರೆಬ್ಬಿಸಿದ್ದ ಬಂಡಾಯದ ಬೆಂಕಿ ಯೀಗ ಆರಿದೆ. ಅದು ಸುಖಪರ್ಯವಸಾನ ಗೊಂಡಿತೆಂಬುದೇ ಇಲ್ಲಿ ಆನಂದ ಪಡಬೇಕಾದ ವಿಷಯ. ಈ 'ಬಂಡಾಯ' ನಾವಾಂಕಿತ ಸ್ವಾಭಿಮಾನ ಪ್ರದರ್ಶನದಲ್ಲಿದ್ದ ಘನತೆಗೊಪ್ಪುವ ರೀತಿಯಲ್ಲೇ ಅದರ ಮುಕ್ತಾಯವೂ ಆಗಿದೆ. ಸರ್ದಾರ್ ಪಟೇಲರ ಮಧ್ಯಸ್ಥಿಕೆಯೊಂದಲ್ಲವಾಗಿದ್ದರೆ ಅದು ಬೇರೆ ವಿಧಾನದಿಂದ ಮುಗಿಯುತಿತ್ತು. ಬ್ರಿಟಿಷ್ ಸಾಮ್ರಾಜ್ಯದ ಅಪಾರ ಶಕ್ತಿಯಿದಿರು ಕೆಲವು ಸಾವಿರ ನೌಕಾ ಪಡೆಯವರು ಹೋರಾಡಿ ಗೆಲ್ಲುವರೆಂಬಷ್ಟು ಹುಚ್ಚಂ ರೂ ಇಲ್ಲ; ಇಡೀ ರಾಷ್ಟ್ರಕ್ಕಿದ್ದ ಸಹಾನುಭೂತಿ ಕೂಡಾ ಸದ್ಯಸ್ಥಿತಿಯಲ್ಲಿ ಸಾಮ್ರಾಜ್ಯದ ಒತ್ತಡವನ್ನು ಸಹಿಸಿ ನಿಲ್ಲುವಂತಹದಲ್ಲ. "ಅಗತ್ಯ ಬಿದ್ದರೆ ಹಿಂದೀ ಸರಕಾರವು ತನ್ನಲ್ಲಿರುವ ಅಪಾರ ಬಲಗಳನ್ನು ಉಪಯೋಗಿಸಿಯಾದರೂ ಶಿಸ್ತು ಭಂಗವನ್ನು ನಿರ್ನಾಮ ಮಾಡಿಯೇ ತೀರುವದೆಂಬುದು ನೆನಪಿರಲಿ......ಹಿಂದೀ ಸರಕಾರವು ಎಂದೆಂದಿಗೂ ಹಿಂಸೆಗೆ ಬಗ್ಗಲಾರದೆಂಬುದನ್ನು ಮತ್ತೊಮ್ಮೆ ನೆನಪುಮಾಡಲಿಚ್ಛಿಸುತ್ತೇನೆ" ಎಂದು ಈ ಸಂದರ್ಭದಲ್ಲಿ ಒತ್ತಿ ಒತ್ತಿ ಹೇಳಿದ ನೌಕಾಧಿಪ ಮಿ. ಗೋಡ್‌ಫ್ರೇಯ ಪರಮಾತು ನೌಕಾ ಮುಷ್ಕರಗಾರರಿಗೆ ಮಾತ್ರವಲ್ಲ-ಅಖಿಲ ಭಾರತೀಯರ ಸ್ಮರಣೆಯಲ್ಲುಳಿಯಬೇಕು. ಇಂತಹ ಸಂದರ್ಭಗಳಲ್ಲಿ ಕಟ್ಟಕಡೆಯ ಉಪಾಯವಾಗಿ ಬ್ರಿಟಿಷ್ ಸರಕಾರವು ಅಂಗೀಕರಿಸುವ ವಿಧಾನವಾವುದೆಂಬುದನ್ನು, ಗಡಿಬಿಡಿಯ ಹಿಂಸಾಕೃತ್ಯಗಳಲ್ಲಿ ಪ್ರವೃತ್ತರಾಗುವ ಪ್ರತಿಯೊಬ್ಬನಿಗೂ ಮುಂದಟ್ಟುವಪಾಠವಲ್ಲ ಧ್ವನಿ ಅದು! ಬೊಂಬಾಯಿಯ ನೌಕಾ ಬಂಡಾಯವು ಇಕ್ಕಡೆಯವರ ಶಕ್ತಿಪ್ರದರ್ಶನದಿಂದಲೇ ಅಂತ್ಯವಾಗಬೇಕಾಗಿ ಬಂದಿದ್ದರೆ ನಾಗುತಿತ್ತು? ಬಲಿದಾನಕ್ಕೆ ಸಿದ್ಧರಾಗಿದ್ದ ಮುಷ್ಕರಗಾರರ ಕೈಯಲ್ಲೇ ಅಲ್ಲಿಯ ಹಡಗಗಳಿದ್ದುದರಿಂದ, ಹಿಂದೀ ನೌಕಾ ಪಡೆಯೇ ನಿರ್ನಾಮವಾಗಿ ಹೋಗುತಿತ್ತು! ಇಂತಹ ದುಃಖಪರ್ಯವಸಾನಗೊಳ್ಳಲಿದ್ದ ಆ ರುದ್ರ ನಾಟಕವನ್ನ ಸರ್ದಾರರ ಪಾತ್ರವು ಸುಖಪರ್ಯವಸಾನಗೊಳಿಸಿತು. ಬ್ರಿಟಿಷ್ ವಿಮಾನ ಪಡೆಯು ಪಾಲಿಗೆ ಹೋಗಲಿದ್ದ ಒಂದು ಕಾರ್ಯವನ್ನು ಕಾಂಗ್ರೆಸ್ ನಾಯಕನೊಬ್ಬನ ಸಂದೇಶವು ಪೂರೈಸಿಕೊಟ್ಟಿತು. ಸಂಬಂಧಪಟ್ಟ ಅಧಿಕಾರಿಗಳನ್ನು-ಮುಖ್ಯವಾಗಿ ಸರ್ವ ಸೇನಾನಿ ಜನರಲ್ ಅಚಿನ್‌ಲೆಖರನ್ನು—ಈ ಸಂದರ್ಭದಲ್ಲಿ ಅಭಿನಂದಿಸಲೇ ಬೇಕು.

ಹಿಂದೀ ಹೋರಾಟ ದಳಗಳಿಗಿರುವ ನಿಯಮನಿಬಂಧನೆಗಳು ಅತ್ಯಂತ ಕಠಿಣ ಹಾಗೂ ಸಂಕುಚಿತವಾದುವಿವೆ. ಅವರು ತಮ್ಮ ಸಂಕಷ್ಟಗಳನ್ನು ನಿವೇದಿಸಿಕೊಳ್ಳಬೇಕಾದ ರೀತಿನೀತಿಗಳು ಅವುಗಳಲ್ಲಡಕವಾಗಿವೆ ಈ ಯುದ್ಧ ದಳ ಶಿಸ್ತಿಗನುಸಾರವಾಗಿ ಮುಷ್ಕರದಂತಹ ವಿಶೇಷಾಚರಣೆಗಳು ಮಹಾದ್ರೋಹಗಳಾಗಿವೆ. ಕೆಲಕಾಲದಿಂದ ವೈಮಾನಿಕ ನೌಕರರು, ಮತ್ತೀ ಬಾರಿ ನೌಕಾ ನೌಕರರು ಕೈಗೊಂಡಿದ್ದ ಮುಷ್ಕರವನ್ನು ಕ್ಷಮಿಸುವಂತಹದಾವುದೂ ಸೇನಾ ಶಿಸ್ತಿನಲ್ಲಿಲ್ಲ. ಆದರೂ ಅದನ್ನು ಕ್ಷಮಿಸುವ ಆಶ್ವಾಸನೆ ಕೊಡುವಷ್ಟು ಅಧಿಕಾರಿಗಳು ಔದಾರ್ಯ ವಹಿಸಿದುದು ಎತ್ತಿ ಹೇಳತಕ್ಕ ವಿಷಯ. ನೌಕಾ ಮುಷ್ಕರಗಾರರ ಬೇಡಿಕೆ ಕೂಡಾ ಇದೇ ರೀತಿ ಸಂಪ್ರದಾಯ ಮೀರಿದ್ದಿತೆಂಬುದನ್ನು ಮರೆಯಬಾರದು. ಆಹಾರದಲ್ಲಿ ಬದಲಾವಣೆ—ಸಂಬಳ ಮತ್ತು ಭತ್ಯೆಯಲ್ಲಿ ಸುಧಾರಣೆ-ಇಂಡೋನೇಶಿಯದ ಸ್ವಾತಂತ್ರ್ಯ ಯೋಧರ ಇದಿರಾಗಿ ಹಿಂದೀ ಸೇನೆಯನ್ನು ಉಪಯೋಗಿಸುತ್ತಿರುವದರ ಖಂಡನೆ-ಇತ್ಯಾ [illegible] ಭಿಮಾನ ಎರಡಕ್ಕೂ ಒಗ್ಗುವ ಬೇಡಿಕೆಗಳನ್ನು ಅವರು ಮುಂದಿಟ್ಟಿದ್ದರು. ಇವುಗಳಲ್ಲಿ ಕೆಲವು ಯುದ್ಧದಳಗಳ ನಿಬಂಧನೆಗಳನ್ನು ಮೀರಿವೆ ಎಂಬುದು ಸ್ಪಷ್ಟ. ರಾಷ್ಟ್ರಧ್ವಜಾರೋಹಣ ಮಾಡಿ 'ಜೈ ಹಿಂದ್' 'ಕ್ವಿಟ್ ಇಂಡಿಯಾ' ಘೋಷಗಳನ್ನೆಬ್ಬಿಸುವ ವರೆಗೂ ಕೆಲವರು ಮುಂದುವರಿದಿದ್ದರು ಭಾರತದ ಗಾಳಿಯತ್ತ ಬೀಸುತ್ತಿದೆ ಎಂಬುದನ್ನು ತೋರಿಸುವ ಚಿಹ್ನೆಗಳಲ್ಲವೇ ಇವು? ಈ ರೀತಿ ಸಂಪ್ರದಾಯ ಮೀರಿ ಹಿಂದೀ ನೌಕಾ ಪಡೆಯ ಕೆಲಸಗಾರರು ತಾವು ಹಿಂದಿನಂತೆ ಕೇವಲ ಯಂತ್ರಗಳಾಗಿಲ್ಲವೆಂಬುದನ್ನು ತೋರಿಸಿದ್ದಾರೆ; ಈ 'ಧಿಟ್ಟತನ'ವನ್ನು ಕ್ಷಮಿಸುವ ಆಶ್ವಾಸನೆಕೊಟ್ಟ ಬ್ರಿಟಿಷ್ ಅಧಿಕಾರಿಗಳು ಕೂಡಾ ತಾವೂ ಕೇವಲ ಯಂತ್ರಗಳಲ್ಲವೆಂಬುದನ್ನು ಪ್ರದರ್ಶಿಸಿದ್ದಾರೆ. ಈ ರೀತಿ ನೌಕಾ ಮುಷ್ಕರದಿಂದಾಗಿ ಹಿಂದೀ ರಾಷ್ಟ್ರೀಯ ಸ್ಫೂರ್ತಿಯು ಬಹಿಷ್ಕೃತ ಮೂಲೆಗಳಿಗೂ ವ್ಯಾಪಿಸಿದೆ ಎಂಬುದರ ಪ್ರದರ್ಶನವಾಗಿದೆ; ಅದು ಸಮ್ಮತಿಸಲ್ಪಟ್ಟಿದೆ. ಇನ್ನಿದು ಕಾರ್ಯತಃ ಫಲಿಸಲಿ; ಅಧಿಕಾರಿಗಳು ಕಾರ್ಯಸಾಧನೆಯ ಚಾತುರ್ಯ ಮಾತ್ರ ಪ್ರದರ್ಶಿಸಿದ್ದರೆಂಬ ಅಪವಾದ ಬಾರದಂತೆ ಮುಷ್ಕರಗಾರರನ್ನು ಔದಾರ್ಯದಿಂದ ನಡೆಯಿಸಿಕೊಳ್ಳಲಿ, ಎಂಬುದೇ ಈಗ ರಾಷ್ಟ್ರದ ಆಗ್ರಹದ ಬೇಡಿಕೆ. ಎರಡನೆಯದಾಗಿ ಈ ಆವೇಶ ಹಾಗೂ ಸರ್ವ ಮಾನ್ಯ ರಾಷ್ಟ್ರೀಯ ಸ್ಫೂರ್ತಿಯು ಸದ್ದಾರಿಯಲ್ಲಿ ಮುಂದೊತ್ತಿ ಅತಿ ಬೇಗನೇ ರಾಷ್ಟ್ರ ಸ್ವಾತಂತ್ರ್ಯದ ಗುರಿ ಮುಟ್ಟಲಿ ಎಂದು ಸರ್ವರ ಹಾರೈಕೆ.

(೭ನೇ ಪುಟದಿಂದ ಮುಂದುವರಿದುದು)

ತಾ. ೨೫ರಲ್ಲಿ ಮುಷ್ಕರ ಹಿಂದೆಗೆದು ಕೊಂಡರು. ಅಂತೂ ನಾವಿಕರು ಶಿಸ್ತು ಪೂರ್ವಕ ಹೂಡಿದ ಬಂಡಾಯದ ಮೂಲ ಕಿಡಿ ಶಿಸ್ತಿಗನುಸಾರವಾಗಿ ಸರ್ವೆಡೆಗಳಲ್ಲೂ ಶಾಂತವಾದರೂ, ಅದರೊಡನೆ ಸಹಾನುಭೂತಿಗಾಗಿ ಎದ್ದ ಜನತಾ ಬಂಡಾಯಗಳು ಅಲ್ಲಲ್ಲಿ ಅಂಕೆ ಮೀರಿ ಬೆಳೆದುಂತಿದೆ. ಅವೂ ಶಮನವಾಗಲೇ ಬೇಕಾದ್ದರಿಂದ ಇಷ್ಟರೊಳಗೆ ಇಡೀ ರಾಷ್ಟ್ರವು ಪೂರ್ವದ ಶಾಂತ ಸ್ಥಿತಿಗೆ ಬಂದಿದೆ ಎನ್ನಬಹುದು.

ಬಂಡಾಯದ ಪ್ರತಿಧ್ವನಿ

ಸಂಬಂಧಪಟ್ಟ ಅಧಿಕಾರಿಗಳ ಅವ್ಯವಸ್ಥೆಯಿಂದಾಗಿ ಎದ್ದ ನಾವಿಕಾಂದೋಲನದ ಸ್ಥಿತಿ ಪರ್ಯಾಲೋಚನೆಗಾಗಿ ಕೇಂದ್ರ ಎಸೆಂಬ್ಲಿಯಲ್ಲಿ ಮಿ. ಆಸಫ್ ಅಲಿಗಳ ತಂದ ನಿಲುವಳಿ ಸೂಚನೆಯು 74 ವಿರುದ್ಧ 40 ಮತಗಳಿಂದ ಪಾಸಾಗಿದೆ. ಈ ಸಂದರ್ಭದಲ್ಲಿ ಹಲವರ ಉಜ್ವಲ ಭಾಷಣಗಳಾದುವು. ವಿಚಾರಣೆ ನಡೆಯುವದೆಂದೂ ಸಾಮಾನ್ಯವಾಗಿ ಸರ್ವರಿಗೂ ಕ್ಷಮಾಪಣೆಯಿದೆಯಾದರೂ, ಪ್ರತ್ಯೇಕ ವ್ಯಕ್ತಿಗಳ ಕುರಿತು ಭರವಸೆಕೊಟ್ಟು ಸಂಬಂಧಪಟ್ಟ ಅಧಿಕಾರಿಗಳ ಕಾರ್ಯಗಳಿಗಾತಂಕವೊಡ್ಡಲು ತಾನು ತಯಾರಿಲ್ಲವೆಂದೂ ಎಸೆಂಬ್ಲಿಯಲ್ಲಿ ಯುದ್ಧಕಾರ್ಯದರ್ಶಿಗಳಂದಿದ್ದಾರೆ. ಅಮೇರಿಕ ಮತ್ತು ಫ್ರೆಂಚ್ ಪತ್ರಿಕೆಗಳು ಈ ನೌಕಾ ಬಂಡಾಯಕ್ಕೆ ವಿಶೇಷ ಪ್ರಾಮುಖ್ಯತೆ ಕೊಟ್ಟು ಪ್ರಕಟಿಸಿವೆ. 'ಚರಿತ್ರಾಪೂರ್ವ ಬಂಡಾಯ' 'ಬ್ರಿಟಿಷ್ ಸಾಮ್ರಾಜ್ಯ ಬಲದ ಅಂಕೆ ಸಡಲಿದೆ' 'ರಕ್ಷಣಾ ಖಾತೆಯಲ್ಲೂ ಆಂದೋಲನ ಬುದ್ಧಿ ಮೊಳೆತಿದೆ'—ಇತ್ಯಾದಿ ಉಜ್ವಲಾಭಿಪ್ರಾಯಗಳನ್ನು ಅಲ್ಲಿಯ ಪತ್ರಿಕೆಗಳು ಘೋಷಿಸುತ್ತಿವೆ. ಲಂಡನಿನ ಪ್ರತಿಕ್ರಿಯೆಯೇನೆಂಬುದು ಇನ್ನು ಪ್ರಕಟವಾಗಬೇಕು.

ಮದ್ರಾಸ್ ಎಸೆಂಬ್ಲಿ ಚುನಾವಣೆ-

ಪುತ್ತೂರು ಡಿವಿಜನಿನ ಜನರಲ್ ಸಮುದಾಯಕ್ಕೆ ಚುನಾವಣೆಗೆ ಕಾಂಗ್ರೆಸ್ ಪರವಾಗಿ ಉಮೇದ್ವಾರನಾಗಿ ನಿಲ್ಲಲು ನನ್ನನ್ನು ನೇಮಿಸಿದ ವಿಷಯ ತಮಗೆ ತಿಳಿದಿರಬಹುದು. ಚುನಾವಣೆ ಕೆಲಸದಲ್ಲಿ ಯಾವತ್ತೂ ಸಹಾಯವನ್ನು ತಾವು ನನಗೆ ಕೊಟ್ಟು ಕಾಂಗ್ರೆಸ್ ವಿಜಯವಾಗುವಂತೆ ಮಾಡಬೇಕಾಗಿ ಪ್ರತಿ ಒಬ್ಬರನ್ನೂ ಈ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಡಿವಿಜನಿನ ಎಲ್ಲಾ ಕಡೆಗಳಿಗೆ ಹೋಗಿ ಎಲ್ಲರನ್ನು ಸಂದರ್ಶಿಸುವುದು ಅಸಾಧ್ಯವೆಂಬುದು ಹೇಳಬೇಕಾಗಿಲ್ಲ. ಆದರೂ ನನ್ನಿಂದ ಸಾಧ್ಯವಿದ್ದಷ್ಟು ಮಟ್ಟಿಗೆ ಅಲ್ಲಲ್ಲಿ ಜನರ ಸಭೆಗಳನ್ನು ಕೂಡಿಸಿ ನಮ್ಮ ದೇಶದ ಸ್ವಾತಂತ್ರ್ಯ ಮತ್ತು ನಡೆಯಲಿಕ್ಕಿರುವ ಚುನಾವಣೆಯ ವಿಷಯ ಭಾಷಣ ಮಾಡಿ ತಮ್ಮ ಮತ ವ ಸಹಾಯವನ್ನು ಕಾಂಗ್ರೆಸಿಗೇನೇ ಕೊಡಬೇಕಾಗಿ ಕೇಳಬೇಕೆಂತ ಇರುವೆನು.

—ಕೋಟ ರಾಮಕೃಷ್ಣ ಕಾರಂತ.

ಪುತ್ತೂರು ಡಿವಿಜನಿನ ಓಟರಲ್ಲಿ

ಶ್ರೀ. ಕೋಟ ರಾಮಕೃಷ್ಣ ಕಾರಂತರ ಮದ್ರಾಸ್ ನ್ಯಾಯವಿಧಾಯಕ ಸಭೆಯ ಉಮೇದ್ವಾರಿಕೆಯನ್ನು ಸಂಪೂರ್ಣ ಸಮರ್ಥಿಸಿ ಎಲ್ಲರೂ ಅವರಿಗೆ ವೋಟನ್ನು ಕೊಟ್ಟು ಕಾಂಗ್ರೆಸ್ ಜಯಶೀಲವಾಗುವಂತೆ ಮಾಡಬೇಕಾಗಿ ಕೆಳಗೆ ಹೆಸರು ಕಾಣಿಸಿದವರ ಪ್ರಕಟಣೆಯೊಂದರಿಂದ ತಿಳಿದುಬರುತ್ತದೆ.|—ಮೊಳಹಳ್ಳಿ ಶಿವರಾವ್, ಹೊಸದುರ್ಗ ಗಣಪತಿರಾವ್, ಬೆಳ್ಳಂಗಡಿ ಚಿದಾನಂದ ರಾವ್, ಬೈಂದೂರು ಶಿವರಾಮ ಹೊಳ್ಳ, ಸಿ. ರಾಮ ಶಾಸ್ತ್ರಿ, ಬೆಳ್ಳೆ ರಾಮಚಂದ್ರರಾವ್, ಪಟೀಲ್ ಕೃಷ್ಣಭಟ್, ಅಡಿಬಾಯಿ ಸುಬ್ಬಣ್ಣಭಟ್, ಯಚ್. ಪುಂಡಲೀಕ ಭಟ್, ಕೆ. ನಾರಾಯಣ ರೈ. ಮುಂತಾದವರು.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು **3—3—46**ರಿಂದ

ಬೊಂಬೇ ಟಾಕೀಸಿನವರ

★ **"ಬಸಂತ್"** ★

ಉಲ್ಲಾಸ್, ಮುಮತಾಜ್ ಶಾಂತಿ, ಮುಮತಾಜ್ ಆಲೀ ಮೊದಲಾದವರು ನಟಿಸಿರುವರು.

ಬರುವ ಚಿತ್ರ—

?

The Pangal Nayak Bank Limited.

(Incorporated in 1920.)

Registered Office: Court Road, **UDIPI.**

Sub Offices at— **Udipi, Mangalore, Katapadi, Kanhangad, Kinnigoli, Nileshwar and Suratkal, South Canara.**

SEASON DEPOSITS for THREE & FOUR

months at a special rate of interest are accepted at all the above offices.

All kinds of up-to-date Banking service is provided promptly.

Please call for particulars of business

Dated the 5th January 1946.

ಮದ್ರಾಸ್ ಎಸೆಂಬ್ಲಿ ಚುನಾವಣಾ ದಿನಗಳು

ನಾಮಪತ್ರ ದಾಖಲಾತಿಯ ಕೊನೆಯ ದಿನವಾಗಿ ಮಾರ್ಚ ತಾ. 1ನ್ನು ನೇಮಿಸಿ ಈ ಮೊದಲೇ ಪ್ರಕಟಣೆ ಕೊಟ್ಟಿದ್ದ ಮದ್ರಾಸ್ ಸರಕಾರವು ಈಗ ಇಡೀ ಪ್ರಾಂತ್ಯದ ಬೇರೆ ಬೇರೆ ಮತದಾರ ಕ್ಷೇತ್ರಗಳ ಚುನಾವಣೆಯ ದಿನ ಮತ್ತು ಮತಗಣನೆಯ ದಿನಗಳನ್ನು ನಮೂದಿಸುವ ಒಂದು ಪಟ್ಟಿಯನ್ನು ಪ್ರಕಟಿಸಿದೆ. ಇದಕ್ಕನುಸಾರವಾಗಿ ಆಯಾಯಾ ಕ್ಷೇತ್ರಗಳಿಗೆ ಪ್ರತ್ಯಪ್ರತ್ಯೇಕ ದಿನಗಳು ನಿಶ್ಚಯವಾಗಿವೆ. ಸಾಮಾನ್ಯತಃ ಇಡೀ ಪ್ರಾಂತ್ಯದ ಚುನಾವಣೆಯು ಮಾರ್ಚ ತಾ 19ರಿಂದ ಆರಂಭಿಸಿ, ಮಾರ್ಚ ತಾ. 29ರೊಳಗೆ ಎಲ್ಲವುಗಳ ಗಣನೆಯಾಗಿ ಮುಗಿಯುವದೆನ್ನಬಹುದು

ದಕ್ಷಿಣ ಕನ್ನಡದಲ್ಲಿ

ಕುಂದಾಪುರ ಡಿವಿಜನ್—ಚುನಾವಣೆ ಅಥವಾ ಮತದಾನ ನಡೆಯುವದು ಮಾರ್ಚ ತಾ. 19ರಲ್ಲಿ. ಮತಗಣನೆಮಾಡುವದು ಮಾರ್ಚ ತಾ. 25ರಲ್ಲಿ.

ಮಂಗಳೂರು ಮತ್ತು ಪುತ್ತೂರು ಡಿವಿಜನ್—ಚುನಾವಣೆ ಅಥವಾ ಮತದಾನ ಮಾರ್ಚ 22ರಲ್ಲಿ. ಮತಗಣನೆ ಮಾರ್ಚ 27ರಲ್ಲಿ.

ದ. ಕ. ಜಿಲ್ಲೆಯವರಾದ—

ಡಾ. ಯು. ರಾಮರಾಯರು ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿಗೆ, ಮದ್ರಾಸ್ ಸಿಟಿ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಉಮೇದ್ವಾರಿಯಾಗಿ ಫೆಬ್ರವರಿ ತಾ. 22ರಲ್ಲಿ ನಾಮಪತ್ರ ದಾಖಲ್ಮಾಡಿದ್ದರು. ಪ್ರತಿಸ್ಪರ್ಧಿಗಳಿಲ್ಲದಿರುವದರಿಂದ ಅವರು ಅವಿರೋಧವಾಗಿ ಕೌನ್ಸಿಲಿಗಾರಿಸಲ್ಪಟ್ಟಿದ್ದಾರೆ.

ಇಲ್ಲಿಯವರೇ ಆದ ಶ್ರೀ. ಕೆ. ಎಸ್. ಪಟ್ಟರನ್ನು ರೇಡಿಕಲ್ ಡೆಮೊಕ್ರೆಟಿಕ್ ಪಾರ್ಟಿ (ಕಾಮ್ರೇಡ್ ರಾಯಿಗಳ ಪಕ್ಷ) ಯು ಎಸೆಂಬ್ಲಿ ಉಮೇದ್ವಾರಿಯಾಗಿ ಮದ್ರಾಸ್ ಸಿಟಿಯ ಉತ್ತರ ಭಾಗದ ಕ್ಷೇತ್ರಕ್ಕೆ ಆರಿಸಲಾಗಿದೆ ಎಂದು ಆ ಪಕ್ಷದ ಕಾರ್ಯದರ್ಶಿಯ ಪ್ರಕಟಣೆಯಲ್ಲಿದೆ.

ಅಂತೆಯೇ ದ. ಕನ್ನಡದ ಪುತ್ತೂರು ಡಿವಿಜನಿಗೆ ಶ್ರೀ ಎನ್.ಎಸ್. ಭಟ್ಟರನ್ನು ರೇಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯು ತನ್ನ ಎಸೆಂಬ್ಲಿ ಹುರಿಯಾಳಾಗಿ ನೇಮಿಸಿದೆ.

ಹೀಗಾಗಿ ಇದುವರೆಗೆ ತಿಳಿದುಬಂದಂತೆ ದಕ್ಷಿಣ ಕನ್ನಡದ ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆಯಿರುವಂತಿದೆ. ಕುಂದಾಪುರ ಡಿವಿಜನಿನ ಸಾಮಾನ್ಯ ಮತದಾರ ಕ್ಷೇತ್ರಕ್ಕೆ ಎರಡು ಸ್ಥಾನಗಳಿದ್ದು ಆ ಪೈಕಿ ಒಂದು ಸ್ಥಾನವು ಹರಿಜನರಿಗೆ ಕಾದಿಡಲ್ಪಟ್ಟಿದೆ. ಎರಡಕ್ಕೂ ಹರಿಜನರೇ ಬರಬಾರದೆಂದಿಲ್ಲ. ಈ ತನಕ ತಿಳಿದುಬಂದಂತೆ ಕಾಂಗ್ರೆಸ್ ಉಮೇದ್ವಾರಿಗಳಾಗಿ ಶ್ರೀ ಎ ಬಿ. ಶೆಟ್ಟಿ ಮತ್ತು ಶ್ರೀ. ಕೆ. ಈಶ್ವರ (ಹರಿಜನ) ನಿಂತಿದ್ದಾರೆ. ಭಾರತೀಯ ಡಿಪ್ರೆಸ್ಡ್ ಕ್ಲಾಸಸ್ ಫೆಡರೇಶನ್" (ಡಾ. ಅಂಬೇಡ್ಕರರ ಪಕ್ಷ) ಪರವಾಗಿ ಶ್ರೀ. ಗೋಪಾಲ ಸಾಲಿಸ್ (ಹರಿಜನ) ಉಮೇದ್ವಾರಿಯಿದ್ದಾರೆ. ಈ ಯೊಂದು ಕಾರಣದಿಂದ ಮಿಶ್ರ ಮತದಾನ ಪದ್ಧತಿಯಿರುವ ಕುಂದಾಪುರ ಡಿವಜನಿನ ಎರಡು ಸ್ಥಾನಗಳಿಗೆ ಚುನಾವಣೆ ನಡೆಯಬೇಕಾಗಿದೆ.

ಪುತ್ತೂರು ಡಿವಿಜನಿನ ಒಂದು ಸಾಮಾನ್ಯ ಸ್ಥಾನಕ್ಕೆ ಕಾಂಗ್ರೆಸ್ ಉಮೇದ್ವಾರಿಯಾಗಿ ಶ್ರೀ. ಕೆ. ಆರ್. ಕಾರಂತರು ನಿಂತಿದ್ದಾರೆ. ಮೇಲ್ಗಡೆ ಕೊಟ್ಟ ವಾರ್ತೆಯಂತೆ ಶ್ರೀ. ಎನ್. ಎಸ್, ಭಟ್ಟರು ರೇ. ಡೆ. ಪಾರ್ಟಿ (ತೀವ್ರವಾದಿ ಪ್ರಜಾಪ್ರಭುತ್ವ ಪಕ್ಷ) ಯ ಉಮೇದ್ವಾರರಾಗುವದರಿಂದ ಅಲ್ಲಿಯೂ ಸ್ಪರ್ಧೆಯಿದೆ.

ಮಂಗಳೂರು ಸಾಮಾನ್ಯ ಮತದಾರ ಕ್ಷೇತ್ರದ ಕಾಂಗ್ರೆಸ್ ಉಮೇದ್ವಾರಿ ಡಾ. ಯು. ಪಿ ಮಲ್ಯರು ಮತ್ತು ಕ್ರಿಶ್ಚಿಯನ್ ಮತದಾರ ಕ್ಷೇತ್ರದ ಕಾಂಗ್ರೆಸ್ ಉಮೇದ್ವಾರಿ ಮಿ. ಪಾಯಸ್, ಇವರು. ಇವರಿಗೆ ಸ್ಪರ್ಧೆಯಿರುವ ಸುದ್ದಿ ಈ ತನಕ ಇಲ್ಲ

Advertise in
'ANTARANGA' Weekly
and
get maximum value for your nominal investment.

'ಇದು ನಿಜವಾಗಿದ್ದರೆ ಕ್ರಿಮಿನಲ್!'

ಹುಬ್ಬಳ್ಳಿ ಘಟನೆಯ ಕುರಿತು ಗಾಂಧಿಜೀಯ ಅಭಿಪ್ರಾಯ

ತಾ. 1-2-46ರಲ್ಲಿ ಹುಬ್ಬಳ್ಳಿಯ ಕಾಂಗ್ರೆಸ್ ಕಚೇರಿಯಲ್ಲಿ ಕೂಡಿದ್ದ ಕರ್ನಾಟಕ ಪಾರ್ಲಿಮೆಂಟರೀ ಬೋರ್ಡಿನ ಸಭೆಗೆ ಸುಮಾರು 25 ಜನರು ಅಧ್ಯಕ್ಷರ ಅಪ್ಪಣೆ ವಿನಹಾ ನುಗ್ಗಿ ಬಂದು ಶ್ರೀ ದಿವಾಕರರನ್ನು ಪ್ರಶ್ನಿಸಲಿಚ್ಛಿಸಿದುದು-ಅಧ್ಯಕ್ಷರು ನಿಷೇಧಿಸಬೇಕೆಂದಾಗ ಕೇಳದೆ ಹೊರಡಲೆದ್ದ ಅವರನ್ನು ಬಲಾತ್ಕಾರದಿಂದ ಕುಳ್ಳಿರಿಸಿ ಫೈಲುಗಳನ್ನು ಕಸಕೊಂಡದು-ಶ್ರೀ. ದಿವಾಕರರ ತಲೆಗೆ ಕೊಡೆಯಿಂದ ಹೊಡೆದುದೇ ಮೊದಲಾದ ದುರ್ಘಟನೆಗಳ ಕುರಿತು ಕರ್ನಾಟಕದಿಂದ ತನಗೆ ಬಂದಿದ್ದ ಪತ್ರವೊಂದನ್ನು ಉದ್ಧರಿಸಿ 'ಇದು ನಿಜವಾಗಿದ್ದರೆ ಕ್ರಿಮಿನಲ್' ಎಂಬ ತಲೆಬರೆಹ ಕೊಟ್ಟು ಗಾಂಧಿಜೀ ಹರಿಜನ'ದಲ್ಲಿ ಈ ರೀತಿ ಬರೆದಿದ್ದಾರೆ:—

"ಸಂಗತಿ ಹೀಗಾದರೆ ಕಾಂಗ್ರೆಸ್ ಸಂಸ್ಥೆಯು ಮುಚ್ಚುಮರೆಯಾಗುವದೇ ಸರಿ. ಬೆದರಿಕೆಯ ಅಡಿಯಲ್ಲಿ ತನ್ನ ಕಾರ್ಯಗಳನ್ನು ಜಯಶೀಲವಾಗಿ ನಡಸಿಕೊಂಡು ಹೋಗಲು ಯಾವುದೊಂದು ಸಂಸ್ಥೆಗೂ ಸಾಧ್ಯವಿಲ್ಲವೆಂಬುದು ಖಂಡಿತ ಇದರ ಹೊಣೆಗಾರಿಕೆಯ ಒಳ ವಿಷಯಕ್ಕೆ ನಾನಿಲ್ಲಿ ಹೋಗುವದಿಲ್ಲ. ಆ ಕೆಲಸವು ಕಾಂಗ್ರೆಸ್ ಕಾರ್ಯಕಾರೀ ಕಮಿಟಿಯಿಂದಾಗುವಂತಹದು. ಆದರೆ ಅಲ್ಲಿ ನಡೆಯಿತೆಂದು ವರದಿಯಾಗಿರುವ ಘಟನೆಯು ಸಭ್ಯತೆಗೂ ಕಾರ್ಯ ಚಲನೆಯ ಸರ್ವ ನಿಯಮಗಳಿಗೂ ವಿರುದ್ಧ ಮಾತ್ರವಲ್ಲ; ಅಹಿಂಸೆಗೆ ಕೂಡಾ ಸ್ಪಷ್ಟವಾಗಿ ವಿರುದ್ಧವಿದೆ. ವೇಳಾಗಿ, ನ್ಯಾಯ ವಿಧಾಯಕ ಸಭಾ ಪ್ರವೇಶದ ಕುರಿತು ಅಸಭ್ಯ ಆತುರವೊಂದು ಹರಡಿದಂತಿದೆ. ಈ ಚುನಾವಣೆಗಳೆಂಬ ಸಿರ್ಧಾರದ ಮೂಲ ಕಾರಣವೇ ದೃಷ್ಟಿ ಪಥದಿಂದ ಮರೆಯಾಗಿದೆ ಎಂಬುದನ್ನು ಇಂತಹ ಅಸಹ್ಯ ವರ್ತನೆಯು ಪ್ರದರ್ಶಿಸಿದೆ".

ANNOUNCEMENT

ಶ್ರೀ ಮಾತಾ ಯುನೈಟೆಡ್ ಕಮ್ಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜೆನ್ಸಿಸ್ ಲಿಮಿಟೆಡ್.

ರಿಜಿಸ್ಟರ್ಡ ಆಫೀಸು **ಕುಂದಾಪುರ** ದ. ಕನ್ನಡ.

(Incorporated in British India. Liability of Members limited)

Authorised Capital Rs 5,00 000
Issued Capital Rs. 1,00,000
Subscribed Capital Rs. 10,740

ಶ್ರೀ ಮಾತಾ ಯುನೈಟೆಡ್ ಕಮ್ಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜೆನ್ಸಿಸ್ ಲಿಮಿಟೆಡ್ ಕುಂದಾಪುರ ಇದರ ಡೈರೆಕ್ಟರರು ಪ್ರಕೃತ ಕುಂದಾಪುರದಲ್ಲಿ ಚಂದ್ರಮೌಳಿ ತಿರುಪುರ ಬಿಲ್ಡರ ಸ್ಟೋರ್ಸ್ಸನ್ನು ನಡೆಸಿಕೊಂಡು ಬರುವ್ಯವಂತ ಮಾಡಿರುತ್ತಾರೆ. ಕಂಪೆನಿಯ ಇತರ ಕಾರ್ಯಕ್ರಮಗಳು ಸಧ್ಯದಲ್ಲೇ ಪ್ರಾರಂಭಿಸಲ್ಪಡುವವು. ಎಲ್ಲರ ಸಹಕಾರವನ್ನು ಹಾರೈಸುತ್ತಿರುವೆವು.

ಕಂಪನಿಯ ಬೋರ್ಡ ಒಫ್ ಡೈರೆಕ್ಟರರ ಪರವಾಗಿ,

ಯಂ. ವಿಶ್ವೇಶ್ವರಯ್ಯ
ಬಿ. ಶ್ರೀನಿವಾಸ ಹೊಳ್ಳ } ಮೆನೇಜಿಂಗ್ ಡೈರೆಕ್ಟರರು.

ಕಂಪೆನಿಯ ಆರ್ಟಿಕಲ್ಸ್ ಮತ್ತು ಮೆಮೊರೆಂಡಂ ಪ್ರಕಾರ ಮಾಡಬಹುದಾದ ಪ್ರಾಮುಖ್ಯ ಕಾರ್ಯೋದ್ದೇಶಗಳು.

1. ಮೆನೇಜ್‌ಮೆಂಟು, 2. ಕಮಿಶನ್ ಏಜೆನ್ಸಿ, 3. ಕಂಟ್ರಾಕ್ಟು, 4. ಸಗಟು ಮತ್ತು ಚಿಲ್ಲರೆ ವ್ಯಾಪಾರ, 5. ಹಣದ ಲೇವಾದೇವಿ, 6. ಕೈಗಾರಿಕೆ.

ಕಂಪೆನಿಯ ಡೈರೆಕ್ಟರರು.

1. ಶ್ರೀ ಕಕ್ಕುಂಜೆ ಚಂದ್ರಶೇಖರ ಅಡಿಗಳು, ಜಮೀನ್ದಾರರು, ಕುಂದಾಪುರ. ಪ್ರೆಸಿಡೆಂಟರು.
2. ಶ್ರೀ ಯಡ್ತರೆ ಮಂಜಯ್ಯ ಶೆಟ್ಟಿ ಬಿ.ಎ.ಎಲ್.ಎಲ್.ಬಿ. ವಕೀಲ, ಕುಂದಾಪುರ, ವೈಸ್ ಪ್ರೆಸಿಡೆಂಟ್
3. ಶ್ರೀ ಪಲ್ಲನಾಡು ಸುಬ್ರಾಯರು, ಜಮೀನ್ದಾರರು ಮತ್ತು ಪತ್ರಿ ವ್ಯಾಪಾರಿಗಳು, ಕುಂದಾಪುರ,
4. ಶ್ರೀ ಎಸ್. ಎಸ್. ಪರಮೇಶ್ವರಯ್ಯ, ಬಿ.ಎ ಎಲ್.ಎಲ್.ಬಿ ವಕೀಲ, ಕುಂದಾಪುರ
5. ಶ್ರೀ ಕೆ ಎಸ್. ವೆಂಕಟರಾವ್, ಜಮೀನ್ದಾರ ಮತ್ತು ಸಾಹುಕಾರರು, ಹೊಸನಗರ.
6. ಡಾಕ್ಟರ್ ಎಸ್ ಆರ್. ಹೆಗಡೆ, ಎಲ್. ಎಂ. ಪಿ. ಬಿಸರರು, ಸರ್ಜನ್, ಗವರ್ನಮೆಂಟ್ ಆಸ್ಪತ್ರೆ, ಕುಂದಾಪುರ
7. ಮಿಸ್ಟರ್ ಎಸ್. ಜರ್ಜ ಜೆ. ಪಾಯಸ್, ಸಾಹುಕಾರ, ಬಂದರ, ಮಂಗಳೂರು.
8. ಶ್ರೀ ಎಚ್. ರಘುರಾಮ ಶೆಟ್ಟರು, ಜಮೀನ್ದಾರರು, ಸಾಹುಕಾರರು ಮತ್ತು ಕಂಟ್ರಾಕ್ಟರರು, ಕುಂದಾಪುರ.
9. ಡಾಕ್ಟರ್ ಎಸ್. ಎಸ್. ಮುಡಿ, ರಿಜಿಸ್ಟರ್ಡ ಮೆಡಿಕಲ್ ಪ್ರೆಕ್ಟೀಶನರ್ ಭಟ್ಕಳ.
10. ಜನಾಬ್ ಬಸ್ತಿ ಕಾಸೀಮ ಸಾಹೇಬ, ಜಮೀನ್ದಾರ ಕುಮಟಾ, ಸಾಹುಕಾರ, ಮಂಗಳೂರು
11. ಜನಾಬ್ ಎಮ್. ಎಚ್. ಅಬ್ದುಲ್ ರಹಿಮಾನ್ ಸಾಹೇಬರು, ಜಮೀನ್ದಾರ ಮತ್ತು ಸಾಹುಕಾರರು ಗಂಗೊಳ್ಳಿ.
12. ಶ್ರೀ ಎಸ್ ಎಸ್ ಹಳನಾಡು, ಪೃಥ್ವಿ ಇನ್ಸೂರೆನ್ಸ್ ಕಂಪೆನಿ ಮಂಗಳೂರು, ಇವರ ಡಿಸ್ಟ್ರಿಕ್ಟ್ ಓರ್ಗನೈಸರ್
13. ಜಿಕೋಡಿ ಸುಬ್ರಾಯ ಭಟ್ಟ, ಜಮೀನ್ದಾರರು, ಉಡುಪಿ
14. ಶ್ರೀ ಯು ಸುಬ್ಬಣ್ಣ ಶೆಟ್ಟಿ, ಜಮೀನ್ದಾರ ಮತ್ತು ಸಾಹುಕಾರರು, ಉಪ್ಪುಂದ
15. ಶ್ರೀ ನಾರಾಯಣ ಹೆಬ್ಬಾರರು, ಜಮೀನ್ದಾರ ಕೋಣಿ, ಕುಂದಾಪುರ
16. ಶ್ರೀ ಬಿ ಶ್ರೀನಿವಾಸ ಹೊಳ್ಳರು, ಜಮೀನ್ದಾರ, ಬೈಂದೂರು } ಮೆನೇಜಿಂಗ್
17. ಶ್ರೀ ಯಂ ವಿಶ್ವೇಶ್ವರಯ್ಯ, ಜಮೀನ್ದಾರ, ಮರವಂತೆ } ಡೈರೆಕ್ಟರರು

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್

Indra Bhavan Coffee Hotel,
Balmatta Road, Mangalore.

ಉಡುಪಿ

ಮಕ್ಕಳ ಕೂಟ--ತಾ. ೨೪-೨-೪೬ರ ಲ್ಲಿ ಉಡುಪಿ ಮೊಡರ್ನ್ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ಮಕ್ಕಳ ಕೂಟದ ಮಹಾಸಭೆಯು ಶ್ರೀ. ಬಿ. ಅಂತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿ ಸ್ವಾವಲಂಬನ ಹಾಗೂ ಸ್ವಾತಂತ್ರ್ಯಜೀವನದ ಮಾದರಿಯ ಉದ್ಯಮದಲ್ಲಿ ಮುಂದುವರಿಯುವ ಕಾರ್ಯವನ್ನು ಕೈಕೊಳ್ಳುವ ನಿರ್ಣಯಗಳಾದುವು. ಮಕ್ಕಳ ಕೂಟದ ಉದ್ದೇಶ, ನಿಯಮ, ಸ್ಥಿರ ಕಾರ್ಯಕ್ರಮಗಳನ್ನು ಕ್ರಮವತ್ತಾಗಿ ಅಧ್ಯಕ್ಷರು ತಯಾರಿಸಬೇಕೆಂದಾಯಿತು. 15 ಜನರ ಕಾರ್ಯಕಾರಿ ಮಂಡಳಿಯೊಂದನ್ನು ರಚಿಸಲಾಯಿತು ಎಂದೋರ್ವರು ಬರೆಯುತ್ತಾರೆ.

ರೇಶನಿಂಗ್ ಡಿಪೋಗಳಲ್ಲಿ ಪ್ರತಿ ವಾರದಲ್ಲಿ ಶುಕ್ರವಾರ ದಿನ ರಜೆಯನ್ನು ಆದಿತ್ಯವಾರ ದಿನ ಅಕ್ಕಿ ವಿತರಣೆಯಾಗುವುದು.

ಪ್ರೆಸ್ ಕೆಲಸಗಾರರ ಸಂಘಸ್ಥಾಪನೆ ಉಡುಪಿಯ ಎಲ್ಲಾ ಪ್ರೆಸ್ಸುಗಳ (ಅಚ್ಚುಕೂಟ) ಗಳ) ಕೆಲಸಗಾರರ ಸಭೆಯು ತಾ. ೨೪-೨-೪೬ನೇ ಆದಿತ್ಯವಾರ ಉಡುಪಿ ಶ್ರೀ ವಿದ್ಯಾನಿಧಿ ತೀರ್ಥ ಸ್ವಾಮಿ ಶಾಲೆಯಲ್ಲಿ ಶ್ರೀ. ಎಮ್. ಪಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸುವ್ಯವಸ್ಥಿತರಿಸದ್ದು ಸಂಕಟಕ್ಕೀಡಾಗಿರುವ ಮುದ್ರಣಾಲಯ ಕೆಲಸಗಾರರು ಸಂಘಟಿತರಾಗಬೇಕೆಂದೂ ಸರ್ಕಾರಿಗೂ ... ತಕರಾರೆಂಬ ಪ್ರಸ್ತಾವನೆ, ಭಾಷಣ, ಚರ್ಚೆಗಳಾದ ಮೇಲೆ 'ಸರ್ವ ಅಭಿವೃದ್ಧಿಯೂ ಮುದ್ರಣಾಲಯ ಕೆಲಸಗಾರರ ಅಭಿವೃದ್ಧಿ ಸಾಧಿಸುವ ಧ್ಯೇಯ'ವುಳ್ಳ ಸಂಘವೊಂದನ್ನು ಸ್ಥಾಪಿಸುವ ಏಕಮತದ ನಿರ್ಧಾರದಂತೆ ಸಂಘದ ರೂಪರೇಖೆಗಳನ್ನು ಆಲೋಚಿಸಲಾಯಿತು. ಸದಸ್ಯತ್ವಕ್ಕೆ ಸಾಮಾನ್ಯರಿಯನ್ನು ಪ್ರವೇಶ ಮಾಡಲಾಗಿಯೂ, ರೂ. ೧೫ರೊಳಗಿನ ಸಂಬಳದವರಿಗೆ ಎರಡಾಣೆ ಮತ್ತು ಮೇಲಿನವರಿಗೆ ನಾಲ್ಕಾಣೆ ಮಾಸಿಕ ವರ್ಗಣಿಯಾಗಿಯೂ ನಿರ್ಧರಿಸಲಾಯಿತು. ಸದಸ್ಯರನ್ನು ಸೇರಿಸಲು ಮುದ್ರಣಾಲಯಕ್ಕೊಬ್ಬನಂತೆ ಆ ಸಂಸ್ಥೆಯನ್ನು ಪ್ರತಿನಿಧಿಗಳನ್ನಾಗಿಯೂ, ಅವರನ್ನೇ ತಾತ್ಕಾಲಿಕ ಕಾರ್ಯಕಾರೀ ಸಮಿತಿಯಾಗಿಯೂ ನೇಮಿಸಿ, ತಾ. ೧೦-೩-೪೬ನೇ ಆದಿತ್ಯವಾರ ೪ ಘಂಟೆಗೆ ಶ್ರೀ ವಿದ್ಯಾನಿಧಿ ತೀರ್ಥ ಶಾಲೆಯಲ್ಲೇ ಸದಸ್ಯರ ಮಹಾಸಭೆ ಸೇರಬೇಕೆಂಬ ನಿರ್ಧಾರವಾಗಿ ಶ್ರೀ. ಟಿ. ಎ. ಶೆಟ್ಟರ ಧನ್ಯವಾದಾರ್ಪಣೆಯೊಂದಿಗೆ ಸಭೆ ಚದರಿತು.

ಕಲಾವೃಂದ ತಾ. ೨೪-೨-೪೬ರಂದು ವೃಂದದ ದ್ವಿತೀಯ ಸಾಹಿತ್ಯಕ ೧೯ನೇ ಸಭೆಯು ಶ್ರೀಮಾನ್ ಎ. ಸುಬ್ರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ. ಮಟ್ಟಿ ವಾಸುದೇವಾಚಾರ್ಯರ 'ರಸಗಳಲ್ಲಾವುದುತ್ತಮ?' ಎಂಬ ವಿಷಯದ ಕುರಿತು ಜರಗಿತು.

ಸಾರ್ವಜನಿಕ ಸಭೆ-ಇದೇ ತಾ. ೨೫ನೇ ಆದಿತ್ಯವಾರ ಉಡುಪಿಯ ರಥಬೀದಿಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ. ಎಂ. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸದ್ಯದ ಆಹಾರಾಭಾವ, ಅದರ ಮೂಲಕಾರಣ, ಅದಿನಿಯ ಅಭಾವ ಇತ್ಯಾದಿಗಳ ಕುರಿತು ಶ್ರೀ ... ಯು. ರಾಮರಾವ್, ಯು. ನಾಗಪ್ಪ ... ಮತ್ತು ಅಧ್ಯಕ್ಷರು ಭಾಷಣವಿತ್ತರು. ನೂಲಿನ ಅಭಾವದಿಂದಾಗಿ ಸುಗ್ಗಿ ಕೈಗಾರಿಕೆಗೆ ಬಂದೊದಗಿದ ಪೀಡೆ ಬಿಡಿದಿರುವದರಿಂದ ಸಂಬಂಧಪಟ್ಟವರ ಪೇಟೆಕೆಯನ್ನು ಮನ್ನಿಸಿ ನೂಲು ಸರಬರಾಯಿ ಮಾಡಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ಠರಾವಾಗಿ ಶ್ರೀ ... ರಾಮರಾಯರ ಧನ್ಯವಾದಾರ್ಪಣೆಯೊಂದಿಗೆ ಸಭೆ ಮುಗಿಯಿತು.

ಬೀಡಿ ಮಜೂರರು ಸಾವಿರ ಬೀಡಿಗೆ ೧ ರೂ. ಮಜೂರಿಯಂತೆ ಮಜೂರಿ ಸಿಗಬೇಕೆಂದು ಮಾಲಕರನ್ನು ಕೇಳಿಕೊಂಡರು. ಹಿಂದೆ ಮುಂದೆಂದು, ಸಂತೋಷದಿಂದ, ಮನಸ್ಸಿಲ್ಲದೆಯೆಂದು ಹೇಗಿದ್ದರೂ ಕೊನೆಗೆ ಕೆಲವು ದಿವಸಗಳೊಳಗೆ ಉಡುಪಿಯ ಎಲ್ಲಾ ಬೀಡಿ ಮಾಲಕರೂ ಮಜೂರರ ಕೇಳಿಕೆಯನ್ನು ಮನ್ನಿಸಿದರು. ಆದರೆ ಈಗ ೨ದಿನಗಳಿಂದ ಸೆಂಟ್ರಲ್ ಬೀಡೀ ವರ್ಕ್ಸ್ ಮಾಲಕರು ಫೇಕ್ಟರಿಯನ್ನು ಮುಚ್ಚುವೆವೆಂದು ೧೪ ದಿವಸದ ನೋಟೀಸು ಫೇಕ್ಟರಿಗೆ ತಾಗಿಸಿದ್ದಾರೆ. ಮಜೂರರು ಇದರ ಪ್ರತಿಭಟನೆಗಾಗಿ ಸಕಲ ಸಿದ್ಧತೆಗಳನ್ನು ಮಾಡುತ್ತಿದ್ದಾರೆ ಎಂದು ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿಗಳು ಬರೆಯುತ್ತಾರೆ.

ಹೊಸ ಸಂಸ್ಥೆ-ಹಲವು ಲಿಮಿಟೆಡ್ ಸಂಸ್ಥೆಗಳ ಸ್ಥಾಪಕರೂ, ವ್ಯವಹಾರದಕ್ಷರೂ ಕಾರ್ಯಚತುರರೂ ಆದ ಶ್ರೀ. ಪಿ. ಎ. ಪೈ ಸಹೋದರರು ಇದೀಗ ಇಪ್ಪತ್ತೈದು ಲಕ್ಷ ಅಧಿಕೃತ ಭಂಡವಾಳವಿರುವ 'ದಿ ಜನರಲ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ಲಿಮಿಟೆಡ್' ಎಂಬ ನೂತನ ಸಂಸ್ಥೆಯೊಂದನ್ನು ರಿಜಿಸ್ಟ್ರು ಮಾಡಿರುತ್ತಾರೆ. ಇದರ ಆರಂಭೋತ್ಸವವು ತಾ. ೨೧ರಲ್ಲಿ ಕಚೇರಿಯಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ಶ್ರೀ. ಎ. ಬಿ. ಸೆಟ್ಟರು ಕುಂದಾಪುರ ಡಿವಿಜನಿನ ಕಾಂಗ್ರೆಸ್ ಹುರಿಯಾಳಾದ ಶ್ರೀ. ಎ. ಬಿ. ಶೆಟ್ಟರು ತಾ. ೨೧ರಲ್ಲಿ ಹಿರಿಯಡ್ಕ, ಯರ್ಲಪಾಡಿ, ಕಾಪು, ಕಟಪಾಡಿ ಮೊದಲಾದ ಕೇಂದ್ರಗಳ ಪ್ರಮುಖರನ್ನು ಭೇಟಿಯಾಗಿ, ಅದೇ ದಿನ ಸಂಜೆ ಉಡುಪಿಗೆ ಬಂದು ಅಜ್ಜರಕಾಡು ಮೈದಾನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಭಾಷಣವಿತ್ತರು. ಮರುದಿನ ಸ್ಥಳೀಯ ಮುಖಂಡರನ್ನು ಭೆಟ್ಟಿಯಾಗಿ ಕುಂದಾಪುರಕ್ಕೆ ತೆರಳಿದರು. ಇವರೊಂದಿಗೆ ಶ್ರೀ. ಎಮ್. ಆರ್. ಪೂಂಜ ಮತ್ತು ಕವಿರಾಜ ಮಹಾಬಲ ಸೆಟ್ಟರೂ ಬಂದಿದ್ದರು. ತಾ. ೨೪ರಲ್ಲಿ ಪರ್ಕಳ, ಹಿರಿಯಡ್ಕ, ಬೈಲೂರು ಕೇಂದ್ರಗಳಲ್ಲಿ ಅಲ್ಲಲ್ಲಿಯ ಮುಖಂಡರನ್ನು ಕಂಡು ಕಾರ್ಕಳಕ್ಕೆ ತೆರಳಿದರು.

ಪತ್ರಿಕೋದ್ಯೋಗಿ ಸಂಘದ ಆಶ್ರಯದಲ್ಲಿ--ಡಾ. ಹರ್ಡೀಕರರು ವೃತ್ತಪತ್ರಿಕೆಗಳ ಭವಿಷ್ಯ, ಅವುಗಳ ಸ್ಥಾನಮಾನಗಳು ಇತ್ಯಾದಿ ವಿಷಯಗಳನ್ನೆತ್ತಿ ತಾ. ೨೨ರಲ್ಲಿ ಬೆಳಗ್ಗೆ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಕೂಡಿದ ಉಡುಪಿಯ ಪತ್ರಿಕಾ ವ್ಯವಸಾಯಿಗಳ ಸಭೆಯಲ್ಲಿ ಭಾಷಣವಿತ್ತರು. ಕಾರ್ಯದರ್ಶಿಯರಾದ ಶ್ರೀ. ಯು. ಎಸ್. ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಕಾರ್ಕಳ-ತಾ. ೨೪ರಲ್ಲಿ ಸ್ಥಳೀಯ ಶ್ರೀ ವೆಂಕಟ್ರಮಣ ಹಾಯರ್ ಎ. ಶಾಲೆಯಲ್ಲಿ ಕುಂದಾಪುರ ಡಿವಿಜನಿನ ಕಾಂಗ್ರೆಸ್ ಹುರಿಯಾಳಾದ ಶ್ರೀ. ಎ. ಬಿ. ಸೆಟ್ಟರನ್ನು ಗೌರವಿಸಲು ಒಂದು ಉಪಹಾರಕೂಟವು ಜರಗಿತು. ಶ್ರೀ. ಸೆಟ್ಟರ ತ್ಯಾಗ, ಸೇವಾದಿಗಳ ಕುರಿತು ಶ್ರೀ. ಕೆ. ವೆಂಕಟೇಶ ಪ್ರಭುಗಳವರು ಭಾಷಣವಿತ್ತರು. ಗೌರವಕ್ಕೆ ಆಭಾರ ಮನ್ನಣೆಯನ್ನು ಸೂಚಿಸುತ್ತಾ ೧೯೪೨ರ 'ಚಲೇ ಜಾವ್'

ದ. ಕ. ಜಿಲ್ಲೆಯಲ್ಲಿ ಡಾ॥ ಹರ್ಡೀಕರರು

ಕಾಸರಗೋಡು ತಾಲೂಕಿನಲ್ಲಿ

ತಾ. ೧೮ರಲ್ಲಿ ಕುಂಬಳೆ ಕೇಂದ್ರದಲ್ಲಿಯ ನ್ಯಾಯಾಮ ಶಾಲೆಯಲ್ಲಿ ಡಾ. ಹರ್ಡೀಕರರು ಕಾಂಗ್ರೆಸಿನ ಸಂಘಟನೆಯ ಕುರಿತು ಮಾತನಾಡಿದರು. ನಂತರ ಪೆರ್ಡಾಲ ಸಂಸ್ಕೃತ ಕಾಲೇಜನ್ನು ಸಂದರ್ಶಿಸಿ ಬದಿಯಡ್ಕದ ಕಾಂಗ್ರೆಸ್ ಕೆಲಸಗಾರರನ್ನು ಭೇಟಿಯಾಗಿ ಕಾಂಗ್ರೆಸ್ ಕಮಿಟಿಗಳ ಸಂಘಟನೆ ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿದರು. ಆ ಬಳಿಕ ಜರಗಿದ ಸಾರ್ವಜನಿಕ ಸಭೆಯಲ್ಲಿ ಡಾ. ಹರ್ಡೀಕರ್, ಕೆ. ಕೆ. ಶೆಟ್ಟಿ, ಕೆ. ಆರ್. ಕಾರಂತ್ ಮೊದಲಾದವರು ಕಾಂಗ್ರೆಸ್ಸನ್ನು ಬಲಗೊಳಿಸುವ ಆವಶ್ಯಕತೆಯ ಕುರಿತು ಬೋಧಪರ ಭಾಷಣವಿತ್ತರು. ಎಲ್ಲರೂ ಕಾಂಗ್ರೆಸಿಗೆ ವೋಟು ಕೊಡಬೇಕೆಂದೂ ಕೇಳಿಕೊಂಡರು.

ಕಾರ್ಕಳದಲ್ಲಿ

ಡಾ. ಹರ್ಡೀಕರರು ಭಾಷಣವೀಯುತ್ತಾ ಸೇವಾದಲದಂತಹ ಸ್ವಯಂಸೇವಕ ಸಂಘಗಳ ಸ್ಥಾಪನೆಯ ಆವಶ್ಯಕತೆ, ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮಗಳನ್ನು ಮುಂದೊತ್ತುವಿಕೆ, ಆರ್. ಎಸ್. ಎಸ್. ಸಂಸ್ಥೆಯು ಹೇಗೆ ಅರಾಷ್ಟ್ರೀಯವಿದೆ ಇತ್ಯಾದಿ ವಿಷಯಗಳನ್ನೆತ್ತಿ ಭಾಷಣವಿತ್ತರು. ಬೈಲೂರು ಸೆಂಟರಿನಲ್ಲಿಯೂ ಕಾಂಗ್ರೆಸ್ ಚುನಾವಣೆಯ ಪ್ರಚಾರದ ಕುರಿತು ಭಾಷಣವಿತ್ತರು.

ಕುಂದಾಪುರ ತಾಲೂಕಿನಲ್ಲಿ

ತಾ. ೨೦ರಲ್ಲಿ ಕೋಟ, ಕೋಟೇಶ್ವರ ಕೇಂದ್ರಗಳಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಕಾರ್ಯವನ್ನು ಪೂರೈಸಿ ಡಾ. ಹರ್ಡೀಕರರು ಕುಂದಾಪುರ ಗಾಂಧಿ ಮೈದಾನದಲ್ಲಿ ಶ್ರೀ ಎಚ್. ಭಾಸ್ಕರ ಕಮ್ತಿರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು. ಶ್ರೀ. ಎ. ಬಿ. ಸೆಟ್ಟರೂ, ಶ್ರೀ. ಎಚ್. ನಾರಾಯಣ ರಾಯರೂ ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಅಣ್ಣಪ್ಪ ಕಾರಂತರು ಡಾ. ಹರ್ಡೀಕರರ ಪರಿಚಯ ಭಾಷಣಮಾಡಿದರು. ಮರುದಿನ ಬೆಳಗ್ಗೆ ಶ್ರೀ. ಸೆಟ್ಟರು ಸೇವಾದಳದ ಶಾಖೆಯಲ್ಲಿ ಧ್ವಜವಂದನೆಯನ್ನು ಮಾಡುತ್ತಾ ಅದರ ನೆರಳಲ್ಲಿ ಜನತೆಯು ಕೈಕೊಳ್ಳತಕ್ಕ ಕಾರ್ಯಕ್ರಮಗಳನ್ನುದ್ದೇಶಿಸಿ ಭಾಷಣವಿತ್ತರು.

ಉಡುಪಿ ತಾಲೂಕಿನಲ್ಲಿ

ತಾ. ೨೧ರಲ್ಲಿ ಡಾ. ಹರ್ಡೀಕರರು ಶ್ರೀ. ಎ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಅಜ್ಜರಕಾಡು ಗಾಂಧಿಮೈದಾನಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತಾ ಕಾಂಗ್ರೆಸ್ ಹೋರಾಟವು ಮುಗಿದಿಲ್ಲ. ಘನತರ ಹೋರಾಟ ಮುಂದೆ ಬರಲಿದೆ. ಆದಕ್ಕೆ ಹಿಂದೀಯರು ತಯಾರಾಗಬೇಕು. ಕಾಂಗ್ರೆಸಿಗೆ ಬೆಂಬಲವೀಯಬೇಕು ಎಂದು ಹೇಳಿದರು. ಆ ದಿನ ಶ್ರೀ. ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೇರ ನೇತೃತ್ವದಲ್ಲಿ ಹಿರಿಯಡ್ಕ ಸೆಂಟರಿನಲ್ಲಿಯೂ ಹರ್ಡೀಕರರ ಭಾಷಣವಿತ್ತು.

ತಾ. ೨೨ರಲ್ಲಿ ಬ್ರಹ್ಮಾವರ ಸ್ವರಾಜ್ಯ ಮೈದಾನಿನಲ್ಲೂ ಶ್ರೀ. ಬಿ. ಅಂತಯ್ಯ ಸೆಟ್ಟರ ನೇತೃತ್ವದಲ್ಲಿ ಏರ್ಪಟ್ಟ ಸಭೆಯಲ್ಲಿ ಕಾಂಗ್ರೆಸ್ ಚುನಾವಣಾ ಕಾರ್ಯಕ್ರಮದ ಕುರಿತು ಡಾ. ಹರ್ಡೀಕರ್, ಶ್ರೀ. ಎ. ಬಿ. ಸೆಟ್ಟಿ, ಎಚ್. ನಾರಾಯಣ ರಾವ್ ಮೊದಲಾದವರು ಭಾಷಣವಿತ್ತರು. ಶ್ರೀ. ಎಂ. ಆರ್. ಪೂಂಜರು ಅಧ್ಯಕ್ಷತೆ ವಹಿಸಿದ್ದರು. ತಾ. ೨೩ರಲ್ಲಿ ಮಧ್ಯಾಹ್ನ ಉಡುಪಿಯ ಕಲಾವೃಂದದ ಆಶ್ರಯದಲ್ಲಿ ಡಾ. ಹರ್ಡೀಕರರು ಸಂಸ್ಕೃತಿಯ ವಿಷಯವನ್ನೆತ್ತಿ ಭಾಷಣಮಾಡಿದರು. ಅಂತೆಯೇ ಸಂಜೆ ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಜರಗಿದ ವಿದ್ಯಾರ್ಥಿ ಸಭೆಯಲ್ಲಿ ಡಾ. ಹರ್ಡೀಕರರು ವಿದ್ಯಾರ್ಥಿಗಳ ಸಂಘಟನೆ, ಶಿಸ್ತು, ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿದರು.

ಚಳವಳಿಯ ಸಾಧನೆಗಾಗಿ ಕಾಂಗ್ರೆಸ್ ಹುರಿಯಾಳುಗಳು ಎಸೆಂಬ್ಲಿ ಕೌನ್ಸಿಲುಗಳಿಗೆ ಪ್ರವೇಶಿಸುವುದಾಗಿ ತಿಳಿಸಿ, ಮತದಾರರೆಲ್ಲರೂ ತನ್ನನ್ನು ಪ್ರೋತ್ಸಾಹಿಸಿ ಎಸೆಂಬ್ಲಿಗೆ ಕಳುಹಿಸಿಕೊಟ್ಟಲ್ಲಿ ತಾನು ಶಕ್ತಿಮೀರಿ ಜನತಾಸೇವೆಯನ್ನು ಮಾಡುವೆನಾಗಿ ಶ್ರೀ. ಸೆಟ್ಟರು ಹೇಳಿದರು.

FOR LIFE ASSURANCE

CONSULT

The New Gaurdian of India Life Insce. Co., Ltd.,

(Chairman.- The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE & KARKALA

HEAD OFFICE.
"United India Life Bldg"
Esplanade, Post Box No. 142,
MADRAS.

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು—

ನಾಟಕಗಳು

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚ	0	8	0
ಕುಶಲವ	0	5	0
ವ್ಯಭಿಚಾರಿಣಿ ಯಾರು?	0	12	0
ಹೆಂಡ್ತಿ ಗಂಡನಾದರೆ!	0	4	0
ಪುರುಷ ವಧು!	0	4	0
ದೇಶಭಕ್ತ	1	4	0
ರಂಗಭೂಮಿ	0	8	0
ಸೇವಾಪಥ	0	8	0
ಪ್ರಕಾಶ	2	4	0
ಮೂರು ಪ್ರಹಸನಗಳು	0	14	0
ಆರೋಗ್ಯ ಪ್ರತಾಪ	0	12	0
ಧರ್ಮಸಂಕಟ	0	5	0
ಸಂಚಾರಿ	0	6	0
ಪ್ರತೀಕಾರ	0	6	0
ಬಣ್ಣದ ಬೀಸಣಿಗೆ	1	4	0
ತಂಭೂಳ ವಡೆ	0	2	0
ಮಾರಾಜಾಯಿ	0	10	0
ಸರಸ್ವತಿ	0	12	0

ಕತೆಗಳು

ಅಂತರಂಗದ ಕತೆಗಳು	0	10	0
ನಾಡಕತೆಗಳು	0	3	0
ಸಂಪಾದೀಶ	0	10	0
ನಾರೀಹೃದಯ	0	14	0
ಭಾರತೀಯ ಕತೆಗಳು	0	14	0
ನಗೆ ಸೋಟಿಗಳು	0	14	0
ಅನ್ನದೇವರು ಮತ್ತು ಇತರ ಕತೆಗಳು	1	0	0
ವಿಷ್ಣುವಿನ ದಶಾವತಾರಗಳು	0	12	0
ಆಕಾಶಗಂಗೆ	1	12	0
ಪ್ರೇಮಗಾಥೆ	0	5	0
ಪ್ರತಿಧ್ವನಿ	1	0	0
[illegible] ದ ನೋಟಗಳು	0	8	0
ಅಮೃತ ಇತ್ಯಾದಿ ಕತೆಗಳು	0	12	0
ಪ್ರೇಮ ಪ್ರವಾಹ	0	8	0
ಬಿಗಿದು	0	6	0

ಕವಿತೆಗಳು

ಕಾವ್ಯ ಸಾಮ್ರಾಜ್ಯ	1	0	0
ಶ್ರೀಮುಖ	1	0	0
ಮುಗುಳು	0	3	0
ಪರಾಗ	0	9	0

ಕಾದಂಬರಿಗಳು

ಸನ್ಯಾಸಿಯ ಸೋಗಿನಲ್ಲಿ	0	8	0
ಲೋಪಾಮುದ್ರ	0	6	0
ವೀರಭೂಮಿ	0	2	0
ಆನಂದ ಅಥವಾ ಮನೆ ಅಳಿಯ	1	0	0
ಮುಗಿದ ಯುದ್ಧ	3	8	0

ಇತರ

ಭಾರತದಲ್ಲಿ ಜಾತಿಭೇದ	1	0	0
ಗೀತೆಯ ಕೈಗನ್ನಡಿ	0	8	0
ಸುಲಭದಲ್ಲಿ ಇಂಗ್ಲಿಷ್	1	4	0
ಬಾಲ ಸಾಮ್ರಾಜ್ಯ	0	3	0
ಆರೋಗ್ಯ ಸಾಧನ	1	0	0
ರಾಷ್ಟ್ರ ಸಭೆಯ ಇತಿಹಾಸ	2	8	0
ಶಾಂತಿಪುರಾಣ	3	0	0
ಮಿತಸಂತತಿ	9	8	0
ಜೀವನ ವ್ಯವಸಾಯ	1	0	0

—ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಜಾಜೀ ನಾಯಕತ್ವದ ಇಂದ್ರಜಾಲ!

(೬ನೇ ಪುಟದಿಂದ ಮುಂದುವರಿದುದು.)

ಘನತೆ ಕ್ಷಯಿಸುವದೆಂಬ ಹೆದರಿಕೆಯಿಲ್ಲದ ಗಾಂಧಿಜೀ, ತನ್ನ ಸ್ಥಾನಮಾನಕ್ಕೆ ಕೀಳೆನಿಸುವ ಶಬ್ದಗಳಿಂದ ರಾಜಾಜಿಯ ಶ್ಲಾಘನೆ ಮತ್ತು ಅವರ ವಿರೋಧಿಗಳ ಖಂಡನೆಮಾಡಿದ್ದಾರೆ 'ಒಂದು ಗಾಳಿ ಸುದ್ದಿಯನ್ನು ನನ್ನ ಕಿವಿಗೆ ಹಾಕದಿರುತಿದ್ದರೆ ನಾನೀ ಪ್ರಸ್ತಾಪಕ್ಕೆ ಹೋಗುತಿದ್ದಿಲ್ಲ' ಎಂಬ ಮಹಾತ್ಮರ ಮಾತು ಕೇವಲ ಬುದ್ಧಿವಂತಿಕೆ! ಅದನ್ನಷ್ಟೇ ಅಲ್ಲಗಳೆದು ಗಾಂಧಿಜೀ ಸುಳಿತುಕೊಳ್ಳಬಹುದಿತ್ತು. ಆದರೆ ಅವರು ಗಾಳಿ ಸುದ್ದಿಯನ್ನು ನೆಪಮಾಡಿ ಗಾದೀ ಸುದ್ದಿ (ಕಾಂಗ್ರೆಸ್ ನಾಯಕ ಹುದ್ದೆ)ಯನ್ನೇ ಹಾರಿಸಿ ಬಿಟ್ಟರು! ತಮಿಳುನಾಡಿನ ಕೆಲವು ನಿಸ್ಸೀಮ ಕಾಂಗ್ರೆಸ್ ಭಕ್ತರಿಗೆ ಅಪರಾಧವಾಗಿ ತೋರಿದ್ದ ರಾಜಾಜಿಯ ಕಾಂಗ್ರೆಸ್ ವಿರುದ್ಧ ಬಂಡಾಯಗಳಲ್ಲೆಲ್ಲಾ ಗಾಂಧಿಜೀಗೆ ಧೈರ್ಯವೊಂದೇ ಕಾಣಿಸಿದೆ! ಜನತೆಯ ದೃಷ್ಟಿಗೆ 'ಧೈರ್ಯ'ವಾಗಿ ತೋರಿದ್ದ ಸುಭಾಸರ ಕಾಂಗ್ರೆಸ್ ಅಧ್ಯಕ್ಷಗಿರಿ ಅಂದೋಲನವು ಗಾಂಧಿಜೀಗೆ ಅಪರಾಧವಾಗಿ ಕಂಡಿತ್ತು. ಕಾಂಗ್ರೆಸ್ ವಿರುದ್ಧವಾದ ಅಂದಿನ ಸುಭಾಸ್ ಮತ್ತು ಇಂದಿನ ರಾಜಾಜಿ ಬಂಡಾಯಗಳ ಗುಣ ತುಲನೆಮಾಡುವದಾದರೆ ಅವರು ಹದ್ದುಮೀರಿದ್ದುದು ಮಾತ್ರ—ಇವರು ಹಾದಿಯನ್ನೇ ಬಿಟ್ಟಿದ್ದರು ಸುಭಾಸರು ತನಗಾದ ಅನ್ಯಾಯಕ್ಕೆ ಪ್ರತೀಕಾರ ಮಾಡಲೆದ್ದಿದ್ದರು-ರಾಜಾಜೀ ಸ್ವತಃ ಅನ್ಯಾಯಮಾಡಿದ್ದರು. ಆದರೆ ಇದು ಗಾಂಧೀ ನೋಟದ ಯುಗ! ಈ ತಕ್ಕಡಿಯಲ್ಲಿ ಟ್ಯಾಗ ಇಡೀ ರಾಷ್ಟ್ರ ಮತ್ತು ಸುಭಾಸರ ತೂಕಕ್ಕಿಂತ ಓರ್ವ ರಾಜಾಜಿಯ ತೂಕ ಹೆಚ್ಚು! ಹಿಂದಿಯರಿಗೆ ಗಾಂಧೀ ವಚನ ವೇದ ವಾಕ್ಯತಾನೆ?

ಆದರೆ ರಾಜಾಜಿ?

ಇಷ್ಟೆಲ್ಲಾ ಆದ ಮೇಲೂ ರಾಜಾಜಿ ಮಹಾತ್ಮರ ಅಭಿಪ್ರಾಯಕ್ಕೆ ವಿರುದ್ಧ ಹೋಗಬಹುದೆ? 'ರಾಜಾಜೀ ನಾಯಕತ್ವ ಕಳಕೊಳ್ಳಬೇಡಿ' ಎಂದು ಮಹಾತ್ಮರು ಕೈಬೀಸಿ ಕೂಗುವಾಗಲೇ 'ನನ್ನನ್ನು ಬೀಳ್ಕೊಡಿ' ಎಂದು ರಾಜಾಜಿ ಕೈಮುಗಿಯುತಿದ್ದಾರಲ್ಲಾ! "ಬಿಡಬೇಡಿ; ಅವರನ್ನು ಸುತ್ತುಗಟ್ಟಿ ಕ್ಷಮೆಯಾಚಿಸಿ ಕರೆತನ್ನಿ" ಎಂದು ಮುಂದಿನ 'ಹರಿಜನ'ದಲ್ಲಿ ಬಂದೀತೆ? 'ನನ್ನ ವ್ಯಕ್ತಿಗತ ಅಭಿಪ್ರಾಯ' ಎನ್ನುತ್ತಾ ಇಷ್ಟನ್ನೆಲ್ಲಾ ಮಾಡಿಸಿದ ಮಹಾತ್ಮರು ತಾನೊಬ್ಬ ವ್ಯಕ್ತಿಯಲ್ಲ,ರಾಷ್ಟ್ರದ ಸೊತ್ತಾಗಿದ್ದೇನೆ ಎಂಬುದನ್ನು ಉದ್ದೇಶ ಪೂರ್ವಕ ಮರೆತಿದ್ದರು ಅಂತೆಯೇ ಇಷ್ಟಾದ ಮೇಲೂ.



Approved firm by the Govt. of Mrs.oy Certified by the Agent of the Govt. of Cylone Indian.

ನಾನು ಹೋಗುತ್ತೇನೆ'ಎನ್ನು'ತ್ತಿದ್ದ ರಾಜಾಜಿ ವಹಿಸಿದ್ದಾರೆ. 'ಅವರಂತೆ ಹೊಣೆ ಹೊರುವವರಿಲ್ಲ'ವಾದ್ದರಿಂದ ಅವರ ತಪ್ಪಿಗಾಗಿ ಅವರನ್ನು ಬಿಡುವ ಹಕ್ಕು ಜನತೆಗಿಲ್ಲ; ಆದರೆ ತನಗೆ ಬೇಸರ ಬರಿಸಿದ್ದಕ್ಕಾಗಿ (ಇದು ಸತ್ಯ ವೈರಾಗ್ಯವೇ? ಎಂಬುದು ಎರಡನೇ ಪ್ರಶ್ನೆ) ಜನತೆಯನ್ನು ರಾಜಾಜಿ ಬಿಟ್ಟು ಹೋಗಬಲ್ಲರು. ಇವೆಲ್ಲಾ ವೈಯ್ಯಾರ, ವೈರಾಗ್ಯಗಳ ಅರ್ಥವರಿಯುವಷ್ಟು ಹೆಡ್ಡರಲ್ಲ ಈಗಿನ ಜನರು. ಇಂತಹ ಆಟಗಳು ಕಾಂಗ್ರೆಸ್ ನಾಯಕರೊಳಗೆ ನಡೆಯದಿರುತಿದ್ದರೆ ಆ ಮಹಾ ಸಂಸ್ಥೆಯ ಕುರಿತು ತುಟಿಯೆತ್ತುವ ಧೈರ್ಯ ಯಾವನೊಬ್ಬನಿಗೂ ಬರುತಿದ್ದಿಲ್ಲ!

ಮಹಾತ್ಮರ ಮಂಗಳ ಗೀತೆ!

ಆದರೆ ನ್ಯಾಯವೊಂದನ್ನು ಅಡಗಿಸಿಬಿಡಲು ಬ್ರಿಟಿಷ್ ಸರಕಾರದ ಸೇನಾ ಶಕ್ತಿಯಿಂದಲೂ ಆಗದು—ಗಾಂಧಿಜೀಯ ಸೇವಾ ಶಕ್ತಿಯಿಂದಲೂ ಆಗದು. 'ಮಹಾತ್ಮರಿಗೂ ಹಾಗನ್ನುವದೇ?' ಎಂದು ಕಣ್ಣು ಕೆರಳಿಸುವವರ ಭೀತಿಯಿಲ್ಲದ ನ್ಯಾಯನಿಷ್ಠುರಿಯೊಬ್ಬನು "ಇಲ್ಲಿ ಗಾಂಧಿಜೀ ಕೇವಲ ಪಕ್ಷಪಾತದಿಂದ ವರ್ತಿಸಿದ್ದಾರೆ" ಎಂದು ಹೇಳುವದೇ ಸರಿ. ಈ ನ್ಯಾಯದ ಬಿಸಿಯೇಗ ಗಾಂಧಿಜಿಗೂ ತಾಗಿದಂತಿದೆ. ರಾಜಾಜೀ ವಿರುದ್ಧ ಪಂಗಡವನ್ನು 'ವ್ಯತಿರಿಕ್ತ ಕೂಟ' (Clique) ಎಂದು ಸಂಬೋಧಿಸಿದ್ದಕ್ಕಾಗಿ ತನಗೆ ಹಲವು ನಿಷೇಧ ಪತ್ರಗಳು ಬಂದಿವೆ. ಕೆಲವರು ಆ ಶಬ್ದವನ್ನು ಹಿಂಪಡೆಯದಿದ್ದಲ್ಲಿ ಖಂಡನಾತ್ಮಕವಾಗಿ ಉಪವಾಸ ಹೂಡುವೆನೆಂದೂ ಬೆದರಿಕೆ ಹಾಕಿದ್ದಾರೆ ಎಂದು ಮಹಾತ್ಮರೊಪ್ಪಿದ್ದಾರೆ. "ಸತ್ಯಾಗ್ರಹ ಶಸ್ತ್ರ ಸಂಗ್ರಹದಲ್ಲಿ ಉಪವಾಸಾಸ್ತ್ರವನ್ನು ಸೇರಿಸಿದವನಾದ ನಾನು ಇಂತಹ ಉಪವಾಸ ಸಲ್ಲದೆಂದು ಹೇಳಬೇಕಾಗಿದೆ. ತಾನು ಯಥಾರ್ಥತೆಯಿಂದ ಅಂಗೀಕರಿಸಿಕೊಂಡ ಒಂದು ಅಭಿಪ್ರಾಯವನ್ನು ಇಡೀ ಲೋಕವೇ ತನ್ನನ್ನಿದಿರಿಸಿದರೂ ಒಬ್ಬನು ಬಿಟ್ಟುಕೊಡಲಾರ. ಆದ್ದರಿಂದ ಇಂತಹ ಉಪವಾಸಮಾಡಬಾರದೆಂದು ನನ್ನ ಸಲಹೆ" ಎಂದು ಈ ಸಂಬಂಧದಲ್ಲಿ ಮಹಾತ್ಮರ ವಾದ. ಇದು ನಿಜ; ಆದರೆ, ಲೋಕವಿದಿರಿಸಿದರೂ ಒಬ್ಬನು ತನ್ನ ಯಥಾರ್ಥಾಭಿಪ್ರಾಯ ಬಿಡಲಾರ ಎಂಬುದು ಗಾಂಧಿಜೀಯ ಮಟ್ಟಿಗೆ ಮಾತ್ರವೇನು? ರಾಜಾಜೀ ನಾಯಕತ್ವಸಲ್ಲದೆಂಬ ದೃಢಾಭಿಪ್ರಾಯ ವಹಿಸಿದವರಲ್ಲಿ ಯಥಾರ್ಥತೆಯಿಲ್ಲವೆಂಬುದರಿಂದಲೇ 'ರಾಜಾಜೀ ನಾಯಕತ್ವ ಕಳಕೊಳ್ಳಬೇಡಿ ಎಂಬ ಸಲಹೆ ಗಾಂಧಿಜೀಯಿಂದ ಬಂದಿರಬಹುದೇ? ಅದೇನೇ ಇರಲಿ, ಮಹಾತ್ಮರು ಈ ಸಂಬಂಧದಲ್ಲಿ ಕೊನೆಯದಾಗಿ ಫೆಬ್ರವರಿ ತಾ. 24ರ 'ಹರಿಜನ'ದಲ್ಲಿ ಬರೆದ ಎರಡು ಲೇಖನಗಳನ್ನು ಇಲ್ಲಿ ಎತ್ತಿಕೊಳ್ಳುವದು ಅಗತ್ಯ:—

"ರಾಜಾಜೀ ಸಂಬಂಧದಲ್ಲಿ"

"ನಾನು ಶ್ರೀ ಕಾಮರಾಜ ನಾದರರ ಪತ್ರಿಕಾ ಸಂದೇಶವನ್ನು ಓದಿದೆ. ನನಗೆ ವ್ಯಸನವಾಗಿದೆ: ನಾನು ನಿಜಕ್ಕೂ ಸುಮ್ಮನಿರಬಲ್ಲೆ; ಆದರೆ ಕೆಲಸ ಕೆಡಬಹುದು. ಅವರು ನನ್ನ ಅನುಯಾಯಿ ಎಂಬು ಹೇಳಿಕೊಳ್ಳುತ್ತಾರೆ. ಹಾಗಿದ್ದರೆ ಅವರು ಪತ್ರಿಕೆಗಳ ಕಡೆಗೋಡುವ ಮೊದಲು, ಗುಪ್ತವಾಗಿ ರಾಜೀನಾಮೆ ಕೊಡುವ ಮೊದಲು ನನಗೆ ತಿಳಿಸುತ್ತಿದ್ದರು. ಮನುಷ್ಯ ನಿರ್ಮಿತ ಸಾಮಾಜಿಕ ಏಣಿಯಲ್ಲಿ ನಾನೋರ್ವ 'ಭಂಗಿ'ಯೆಂದು ಉದ್ದೇಶಪೂರ್ವಕ ನನ್ನನ್ನು ನಾನು ಗಣಿಸಿಕೊಂಡಿದ್ದೇನೆ. ಅದರ ತುದಿಯಲ್ಲಿರಬೇಕೆಂದೇ ನನ್ನ ಆಶೆ. ಶ್ರೀ ಕಾಮರಾಜರು ಒಬ್ಬ ನಾದರರಾಗಿರುವ ಬದಲು ನನ್ನೊಂದಿಗೆ 'ಭಂಗಿ'ಯಾಗಿ ಸೇರಬೇಕು; ಮತ್ತು ಸವಿನಯವಾಗಿ ತನ್ನ ರಾಜೀನಾಮೆಯನ್ನು ಹಿಂಟೆಗೆದುಕೊಳ್ಳಬೇಕೆಂದು ನನ್ನಿಚ್ಛೆ. ಕಾನೂನು ಪ್ರಕಾರ ಅದು ಸಾಧ್ಯವೋ ಎಂಬುದನ್ನು ಪ್ರಾಂತಿಕ ಮತ್ತು ಕೇಂದ್ರ ಸಮಿತಿಗಳೇ ತೀರ್ಮಾನಿಸಬೇಕು. ರಾಜೀನಾಮೆಕೊಟ್ಟು ತನಗೂ ತತ್ವಕ್ಕೂ ಹಾನಿಮಾಡಿದೆನೆಂದು ಅವರು ತಿಳಿದುಕೊಂಡಲ್ಲಿ ನೈತಿಕವಾಗಿ ಹಾಗೆ ಮಾಡುವದು ಪೂರ್ಣ ಸಾಧ್ಯ. ರಾಜೀನಾಮೆ ಕೊಡುವದರಲ್ಲಿ ಅವರ ದೌರ್ಬಲ್ಯ ತೋರಿದೆ. 'ಸಂಚು ಕೂಟ' ಪದವನ್ನು ನಾನು ಉದ್ದೇಶಪೂರ್ವಕ ಉಪಯೋಗಿಸಿದ್ದೆನಾದದನ್ನು ಹಿಂತೆಗೆದುಕೊಳ್ಳುವಂತಿಲ್ಲ 'ಒಂದು ಸಣ್ಣ ವ್ಯತಿರಿಕ್ತ ಪಂಗಡ' ಎಂಬುದೇ ಶಬ್ದಕೋಶದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥ. ರಾಜಾಜೀ ವಿರುದ್ಧ ತಮಿಳುನಾಡಿನಲ್ಲಿ ಅಂತಹ ಪಂಗಡವಿದೆ ಎಂದು ನನಗೆ ಗೊತ್ತು. ಹೆಸರೆತ್ತಿ ಯಾವನೊಬ್ಬನನ್ನೂ ತೋರಿಸಲು ನಾನು ಅಸಮರ್ಥನಿದ್ದೇನೆ. ತನ್ನ ತಲೆಗೆ ಹಿಡಿಯದ ಟೋಪಿಯನ್ನು ಧರಿಸಿಕೊಳ್ಳುವ ಅಗತ್ಯ ಯಾರಿಗೂ ಇಲ್ಲ. ಲೋಕದಲ್ಲೇ ಸುಸಂಘಟಿತ ಸಂಸ್ಥೆಯಾಗಿದ್ದರೂ ಕಾಂಗ್ರೆಸಿನೊಳಗೆ ಹಲವು ಕೂಟಗಳಡಕವಾಗಿವೆ. ಅವುಗಳ ಸಂಖ್ಯೆ ತಗ್ಗಿದಷ್ಟು ಸಂಸ್ಥೆಗೆ ಹಿತಕರ."

"ನಮ್ಮ ಇಂಗ್ಲಿಷಿಗಾಗಿ"

"ನಮ್ಮ ಸ್ವಂತ ಭಾಷೆಗಳಲ್ಲಿ ಮಾತ್ರ

ವನಸ್ಪತಿ ತುಪ್ಪ

ಕಳ್ಳಸಂತೆಯಲ್ಲಿ ಸರ್ವಥಾ ಕೊಂಡುಕೊಳ್ಳಬೇಡಿರಿ.

ಕಾರಣ ನಮ್ಮಲ್ಲಿ ಶಕ್ತಿವರ್ಧಕ ತೈಲವು ಯಥೇಚ್ಛವಿದೆ. ಈ ತೈಲದ ಉಪಯೋಗದಿಂದ ಸಹಿತ ಕೂಡಲು ಕಷ್ಟಾಗುವುದು. ಮಾತ್ರವಲ್ಲದೆ ಕೂಡಲು ಉಳಿದುವುದನ್ನು ತಡೆಗಟ್ಟಿ ಕೂಡಲು ರಾಶಿಯನ್ನು ಬೆಳೆಸುವುದು. ಪಾತಕ್ಕೆ ರಾಮಬಾಣ. ತಿಳಿವುದು. ಡಿಸ್ಟ್ರಿಬ್ಯೂಟರ್ಸರೊಡನೆ ಹೆಚ್ಚಿನ ಮಾಹಿತಿ ಪಡೆಯಿರಿ.

ಸ್ವದೇಶಿ ವನಸ್ಪತಿ ಮೆನ್ಯುಫೆಕ್ಚರಿಂಗ್ ಲಿಮಿಟೆಡ್,
ಪ್ರೊಸ್ಪೆಕ್ಟ್ ಚೇಂಬರ್ಸ್, ಹೊರ್ನ್ಬಿ ರೋಡು, ಫೋರ್ಟ್ ಬೊಂಬಾಯಿ.
ವನಸ್ಪತಿ ತುಪ್ಪ, ಸಾಬೂನು, ಲೋಂಡ್ರಿ ಚಿಪ್ಸ್, ಬರ್ನಾ ಮೇಣಬತ್ತಿಗಳು, ಇತ್ಯಾದಿ ಇತ್ಯಾದಿಯನ್ನೇ ಸದಾ ಸರ್ವದಾ ... ಪಡೆಯಿರಿ.

SWADESHI VANASPATHI MANUFACTURING LTD.,
Prospect Chambers. Hornby Road, FORT BOMBAY.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,..., ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟುಕು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಎಜೆನ್ಸಿ. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya. GADAG.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 8/1946

1 ವುಕ್ಕಿಣಿ ಅಮ್ಮ, 2ನೇ ಅರ್ಜಿದಾರನ ಪಂಡ್ತಿ, 2 ನಾರಾಯಣ ಕಂಮ್ತಿ–ಶ್ರೀನಿವಾಸ ಕಂಮ್ತಿರ ಮಗ.ಶಿವಳ್ಳಿ ಗ್ರಾಮದ ಉಡ್ಪಿ ಕಸಬಾ ಕುಂಜಬೆಟ್ಟಿನಲ್ಲಿರುವವರು.—ಅರ್ಜಿದಾರರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ–

ಅರ್ಜಿದಾರರ ಮಗ ಉಡ್ಪಿ ಕಸಬೆಯಲ್ಲಿ ತಾ. 8-1-46ರಲ್ಲಿ ಮೃತಪಟ್ಟ ಶ್ರೀನಿವಾಸ ಕಂಮ್ತಿಯು "The Canara Mutual Assurance Co., Ltd., Udipi" ಈ ಕಂಪೆನಿಯಲ್ಲಿ ಪಡೆದ ನಂಬ್ರ 9458ನೇ ಪೋಲಿಸಿ ಬಾಬ್ತು ಬರತಕ್ಕ ರೂಪಾಯಿ 490-11-0 ನ್ನು ವಸೂಲುಮಾಡುವರೆ 1ನೇ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲುಮಾಡಿದ ಸದ್ರಿ ಅರ್ಜಿಯು ತಾ. 9-3-46ಕ್ಕೆ ತನ್ಕಿಗೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವ್ಸ ಸದ್ರಿ ಅರ್ಜಿ ತನ್ಕಿ ಸಮಯ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಸ್ಥಾಪಿತಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ,

Haradi Ramanatha Pai,
Advocate for Petitioners.

Udipi, South Kanara
Dated 23-2-1946

ವೇ ಪತ್ರಿಕೆಗಳಿರುತ್ತಿದ್ದರೆ ಎಷ್ಟು ಉತ್ತಮವಾಗುತ್ತಿತ್ತು. ಹಾಗಿರುತ್ತಿದ್ದರೆ ನಾವಿಂದಿನಂತೆ ಕುರುಡರಾಗುತ್ತಿದ್ದಿಲ್ಲ ಒಬ್ಬನು ಬಾಲ ಹಿಡಿದು ಅದೇ ಆನೆ ಎನ್ನುವದು-ಮತ್ತೊಬ್ಬನು ಹಂತ, ಮೊರನೆಯವನ್ನು ಸೊಂಡಿಲು ಹಿಡಿದು ಹಾಗೆನ್ನುವದು. ಪ್ರತಿಯೊಬ್ಬನೂ ಸ್ವಪ್ರಮಾಣಾನುಸಾರವಾಗಿ; ಆದರೆ ಸಾರಾಂಶತಃ ಎಲ್ಲರೂ ತಪ್ಪು. ಅದೇ ರೀತಿ ರಾಜಾಜೀ ವಿರೋಧವು ಒಂದು ಕೂಟದೊಳಗಿನದು ಎಂದು ನಾನು ಹೇಳಿದ್ದೆ ಮತ್ತು ಈಗಲೂ ಹೇಳುತ್ತೇನೆ. ಹೀಗೆ ಹೇಳಿ ನಾನೊಂದು ಮಹಾಪರಾಧ ಮಾಡಿದೆನೆಂದು ನನ್ನೊರ್ವ ಪ್ರಾಣಾಪ್ತರು ಮತ್ತು ಇತರರು ಹೇಳುತಿದ್ದಾರೆ. ನಿಜಕ್ಕೂ ನಾನು ಮತ್ತು ನನ್ನ ವಿಮರ್ಶಕರು ತಂತಮ್ಮ ಸ್ವಮತಾನುಸಾರವಾಗಿ ಸರಿ; ಅಂತೆಯೇ ಇಬ್ಬರೂ ತಪ್ಪು. ಈ ಗುಣಾಗುಣವೆಲ್ಲಾ ಒಂದು ವಿದೇಶೀ ಶಬ್ದಕ್ಕಾಗಿ! ನಾನು ರಾಷ್ಟ್ರೀಯ ಅಥವಾ ಸ್ವಭಾಷೆಯಲ್ಲಿ ಅದನ್ನು ಬರೆಯುತಿದ್ದರೆ ಒಂದು ಶಬ್ದಕ್ಕಾಗಿ ಜಗಳ ಬರುತಿದ್ದಿಲ್ಲ ನಾನು ಶಬ್ದ ಪ್ರಯೋಗ ಅಥವಾ ರಾಜಾಜಿಯನ್ನು ಅಳೆಯುವದರಲ್ಲಿ ತಪ್ಪಿ ಬಿದ್ದಿದ್ದರೆ ನನ್ನನ್ನಾರೂ ಅನುಸರಿಸಬೇಕೆಂದಿಲ್ಲ, ಎಂಬ ಕೊನೆಯ ಮಾತಿನೊಡನೆ ನಾನೀ 'ರಾಜಾಜೀ ಘಟನೆಯನ್ನು ಮುಗಿಸಿ ಬಿಡುತ್ತೇನೆ. ನನಗಾವ ಅಧಿಕಾರವೂ ಇಲ್ಲ ಈ ತಪ್ಪು ಅಳತೆಯಿಂದಾಗುವ ನಷ್ಟವೆಲ್ಲಾ ನನ್ನೊಬ್ಬನದೇ ಆಗುವದು; ಆ ಕಾರಣದಿಂದ ನನ್ನ ನೈತಿಕ ಘನತೆ ಬಹ್ವಂಶ ಅಥವಾ ಸ್ವಲ್ಪಾಂಶ ಕಳೆದು ಹೋಗುವದು".

ಗಾಂಧಿಜೀಯ ಈ ಮೋಹನಾಸ್ತ್ರ ಹೊಸತೇನೂ ಅಲ್ಲ. ನಾದರದ ರಾಜೀನಾಮೆಯಲ್ಲಿ ದೌರ್ಬಲ್ಯದ ಚಿಹ್ನೆ ಕಂಡ ಗಾಂಧಿಯವರು ರಾಜಾಜಿಯ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಎಂದಿನಂತೆ ಧೀರತ್ವವನ್ನೇ, ಗೀತಾ ಬೋಧೆಯ ಅನಾಸಕ್ತಿಯನ್ನೇ ಕಂಡಾರು! 'ಕೇವಲ ನನ್ನದು' 'ನಾನು ಅನಧಿಕಾರಿ' ಎಂದೆಲ್ಲಾ ಬಣ್ಣದ ಮಾತುಗಳನ್ನು ಆತ್ಮಗತವಾಗಿ ಆಡುವದಕ್ಕಿಂತ, ಜಗಳದ ನ್ಯಾಯಾನ್ಯಾಯವನ್ನು ಅರಿತು ರಾಜಾಜೀ ಸರಿಯೆಂದೂ, ಅವರ ವಿರೋಧಿಗಳದು ವ್ಯತಿರಿಕ್ತ ಕೂಟವೆಂದೂ ಮಹಾತ್ಮರು ಸಿದ್ಧ ಮಾಡಿ ತೋರಿಸಬೇಕಿತ್ತು. ಅದನ್ನು ಬಿಟ್ಟು ರಾಜಾಜಿಯ ಪಕ್ಷದಲ್ಲಿ ತನ್ನ ವರ್ಚಸ್ಸನ್ನು ವ್ಯಯಿಸುವ ಒಂದೇ ಕೆಲಸ ಗಾಂಧಿಜೀ ಮಾಡಿದರೇಕೆ? ನ್ಯಾಯವಾದಿಗಳ ದೂರು-ಅದನ್ನೇ ಗಾಂಧಿಜೀ ಹೇಳಬೇಕೇಕೆ? ತನ್ನ ಇಂತಹ ತಪ್ಪನ್ನೂ ಪರಮ ಪ್ರಸಾದವಾಗಿ ಅಂಗೀಕರಿಸಿ ಕೊಳ್ಳುವಷ್ಟು ಅಂಧಶ್ರದ್ಧೆ ಹಿಂದೀಯರಲ್ಲಿದೆ ಎಂಬ ವಿಶ್ವಾಸದಿಂದ ಹಂಗಿಸುವದಕ್ಕಿಲ್ಲೇನು? ಆಗಲಿ! ಹೀಗೆ ತಿಕ್ಕಲ್ಪಟ್ಟದ ಲಾಭ ಠಕ್ಕೆಯರ ಮನೋರಾಜ್ಯ ಸವೆದು ಹೋಗಲಿ!

ಮಂಗಳೂರು-

ಅಡಿಕೆಯ ಸುಂಕ--ಕೇಂದ್ರ ಅಗ್ರಿಕಲ್ಚರ್ ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟಿನ ಮಿ| ಎಚ್. ಜೆ. ಲೋಡಿ ಅವರು ತಾ. ೧೦ರಂದು ಮಂಗಳೂರಿಗೆ ಬಂದಿದ್ದು, ಅಖಿಲ ಭಾ ಅಡಿಕೆ ಬೇಸಾಯಗಾರರ ಕೇಂದ್ರ ಮಾರ್ಕೆಟಿಂಗ್ ಕೋಪರೇಟಿವ್ ಸೊಸೈಟಿಯೊಂದನ್ನು ಸ್ಥಾಪಿಸುವ ಕುರಿತಾಗಿ 'ಶ್ರೀಗಳಾದ ಎಂ. ಎಸ್. ಭಿಡೆ, ಗೋವಿಂದ ಭಟ್, ಸಿ. ಲಕ್ಷ್ಮೀನಾರಾಯಣರಾವ್ ಮತ್ತು ಕೃಷ್ಣ ನಾಯಕರೊಡನೆ ವಿಚಾರವಿನಿಮಯಮಾಡಿದರು. ಶ್ರೀ. ಗೋವಿಂದಭಟ್ಟರು, ಅಡಿಕೆ ಮೇಲೆ ಹೊರಿಸಲಾದ ಸುಂಕವು ಭಾರತದ ಎಲ್ಲ ಭಾಗಗಳಲ್ಲಿಯೂ ಅಡಿಕೆ ಬೆಳೆಸುವವನ ಮೇಲೆಯೇ ಹೇಗೆ ಬೀಳುತ್ತದೆಂಬುದನ್ನು ವಿವರಿಸಿ, ಮಾರ್ಕೆಟಿಂಗ್ ಸೊಸೈಟಿಯನ್ನು ರಚಿಸಿದರೆ ಮಾತ್ರ ಈ ಸುಂಕವು ಅಡಿಕೆ ಉಪಯೋಗಿಸುವವನ ಮೇಲೆ ಬೀಳುವಂತೆ ಸಾಧಿಸಬಹುದು ಎಂದರು. ಮಿ. ಲೋಡಿಯವರು ತಾ. ೧೩ರಂದು ಪುತ್ತೂರಿಗೆ ತೆರಳಿ ಶ್ರೀ. ಎ. ಎಸ್. ಶಾಸ್ತ್ರಿಗಳೊಡನೆಯೂ ವಿಚಾರವಿನಿಮಯ ನಡೆಸಿದರು.

ಕೇಂದ್ರ ಅಸೆಂಬ್ಲಿಯಲ್ಲಿ ಜ. ಸತ್ತಾರ್ ಸೇಟರ ಪ್ರಶ್ನೆಯನ್ನುತ್ತರಿಸುತ್ತ ಅರ್ಥಸಚಿವರು, ಭಾರತದಲ್ಲಿ ೬ ಲಕ್ಷ ಮಂಡಿ ಅಡಿಕೆ ಬೆಳೆಯುತ್ತಿವೆ; ಯುದ್ಧಪೂರ್ವದಲ್ಲಿ ೧ ಲಕ್ಷ ಮಂಡಿ ಅಡಿಕೆ ಹೊರಗಿಂದ ಬರುತ್ತಿದ್ದಿತೆಂದೂ ತಿಳಿಸಿ ಇದರಲ್ಲಿನ, ಕೊಳೆರೋಗ ನಿವಾರಿಸಲು ಮತ್ತು ಹೊರಗಿಂದ ಅಡಿಕೆ ಬಂದು ಇಲ್ಲಿಯ ಅಡಿಕೆಯ ಬೆಲೆ ಇಳಿಯದಂತೆ ಮಾಡಲು ಸರಕಾರವು ಯತ್ನಿಸುತ್ತಿದೆ—ಎಂದರು.

ಕಲ್ಕತ್ತಾ ಅಡಿಕೆಗೆ ಸಂಪ್ರತಿ ಪೇಟೆಗೆ ರೂ. ೩೦—೩೪ರ ಬೆಲೆ ಇದೆ. ಶಿರಸಿಯಲ್ಲಿ ರೂ. ೩೪. ಶಿವಮೊಗ್ಗದಲ್ಲಿ ರೂ. ೩೪ರ ವರೆಗಿದೆ. (ಸುಂಕ ಕಳೆದು) ಮಂಗಳೂರಿನಲ್ಲಿ ಧಾರಣೆ ಸ್ಥಿರವಾಗಿದ್ದರೂ, ಮಾರ್ಚ ತಿಂಗಳಲ್ಲಿ ಹೊಸ ಅಡಿಕೆ ಬಂದ ಬಳಿಕ ತುಸು ಇಳಿ ಮುಖವಾಗಬಹುದು.

ಕಡಲೆ-ಕಡಲೆ ಬೇಳೆ ಮತ್ತು ಕಡ್ಲೆಹಿಟ್ಟಿನ ಅಭಾವವಿರುವುದರಿಂದ, ವ್ಯಾಪಾರಿಗಳೆಲ್ಲರೂ ತಮ್ಮ ಬಳಿಯಲ್ಲಿರುವ ಈ ಪದಾರ್ಥದ ಕುರಿತಾದ ವೃಥಪತ್ರಿಕೆಯೊಂದನ್ನು ತಮಗೆ ಕೊಡಬೇಕೆಂದೂ ಒಂದು ಗೋಣಿಗಿಂತಲೂ ಅಧಿಕ ಪ್ರಮಾಣದಲ್ಲಿ ಪರ್ಮಿಟ್ ಇಲ್ಲದವರಿಗೆ ವಿಕ್ರಯಿಸಬಾರದೆಂದೂ ಕಮಿಷನರಲ್ ಸೇಲ್ಸ್ ಟೇಕ್ಸ್ ಆಫೀಸರರು ಪ್ರಕಟಿಸುತ್ತಾರೆ.

ದ.ಕ. ದ್ರಾವಿಡ ಬ್ರಾಹ್ಮಣ ಸಂಘ-ತಾ. ೧೭-೨-೪೬ರಲ್ಲಿ ಸಂಘದ ಮಹಾಸಭೆಯು ಕೂಡಿದಾಗ ರಾವ್‌ಬಹದೂರ್ ಬಿ. ಶ್ರೀಪತಿರಾಯರು ಸಂಘದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ--ತರಬೇತಿ ಶಾಲೆಯಲ್ಲಿ ಕೆಲವು ಕಾಲದಿಂದ ತರಬೇತಿಯಾಗುತ್ತಿರುವ ವಿದ್ಯಾರ್ಥಿ ಅಧ್ಯಾಪಕರಾಗಿ ಪ್ರಮೋಟಿಸಿ ಮುಡಿಯುತ್ತಿದ್ದ ಶ್ರೀಯುತ ಟಿ. ಲಕ್ಷ್ಮೀನಾರಾಯಣ ರಾವ್ ಬಿ. ಎ. ಎಲ್. ಟಿ., ಅವರು ಗೊಸಪೇಟೆಗೆ ವರ್ಗಾಯಿಸಲ್ಪಟ್ಟಿದ್ದರಿಂದ ಆ ಕುರಿತು ತಾರೀಕು ೧೪-೨-೪೬ರಲ್ಲಿ ವಿದ್ಯಾರ್ಥಿ ಅಧ್ಯಾಪಕ ಸಂಘದ ಬೀಳ್ಕೊಡುವ ಸಮಾರಂಭವು ಹೆಡ್ಮಾಸ್ತರ್ ಶ್ರೀ. ನಾಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು,

ಡಾ. ಹರ್ಡೀಕರರನ್ನು ಸ್ಥಳೀಯ ಪತ್ರಿಕೋದ್ಯೋಗಿಗಳು ತಮ್ಮ ಕಚೇರಿಗೆ ಬರಮಾಡಿಸಿಕೊಂಡು ಸತ್ಕಾರಕೂಟ ಒಂದನ್ನು ಏರ್ಪಡಿಸಿದರು. ಡಾ. ಹರ್ಡೀಕರರು ಸೇವಾದಳ ಮತ್ತು ನಮ್ಮ ಪತ್ರಿಕೋದ್ಯಮದಲ್ಲಾಗಬೇಕಾದ ಸುಧಾರಣೆಯ ಕುರಿತು ಮಾತನಾಡಿದರು.

ಶ್ರೀ ಕೃಪಾಲನಿ ಅವರ ಸಂದೇಶ-ದ. ಕ. ಜಿಲ್ಲೆಗೆ ಚಿತ್ತೈಸಿದ ಆಚಾರ್ಯ ಕೃಪಾಲಿನಿಯವರು ದ. ಕ. ಜಿಲ್ಲೆಗೆ ಕೊಟ್ಟ ಸಂದೇಶ ಹೀಗಿದೆ:-"ಮಂಗಳೂರಿನಲ್ಲಿ ನನಗೆ ಆನಂದದಾಗೂ ಶಾಂತಿದಾಯಕ ಸಮಯ ದೊರೆಯಿತು. ನಾನು ಹಾಜರಾಗಿ ಭಾಷಣಗಳನ್ನಿತ್ತ ಸಭೆಗಳಲ್ಲಿಯ ಶಿಸ್ತನ್ನು ಪ್ರತ್ಯಕ್ಷ ಅನುಭವಿಸಿ ಸಂತೋಷಪಟ್ಟೆನು. ಚಿಕ್ಕಪುಟ್ಟ ಬಾಲಕರು ಸಹ ಮೌನವನ್ನು ತಾಳಿದ್ದರು. ವಿಧಾಯಕ ಕಾರ್ಯಕ್ರಮಗಳ ಕೇಂದ್ರಗಳನ್ನು ಕಂಡು ತೃಪ್ತಿಪಡೆದೆನು. ಸ್ವರಾಜ್ಯ ಸಂಪಾದನೆಗೂ ಅನನ್ಯ ಅಸ್ತಿತ್ವದಲ್ಲಿರಿಸಿಕೊಳ್ಳಲಿಕ್ಕೂ ವಿಧಾಯಕ ಕಾರ್ಯಕ್ರಮವೇ ಪ್ರಧಾನ ಅಂಗವೆಂಬುವರಲ್ಲಿ ನನ್ನ ಆತ್ಮವಿಶ್ವಾಸವಿದೆ".

ಕುಂಬ್ಳೆಯಲ್ಲಿ ರಿಕ್ವಿಸಿಶನ್ ಮಾಡಿದ ಆಸ್ತಿ ವಾಪಾಸು--ಮಿಲಿಟರಿ ಬಗ್ಗೆ ಕುಂಬ್ಳೆಯಲ್ಲಿ ರಿಕ್ವಿಸಿಶನ್ ಮಾಡಿದ ಆಸ್ತಿಯನ್ನೆಲ್ಲ ಅದರ ಹಿಂದಿನ ಒಡೆಯರಿಗೆ ಇದೇ ತಾರೀಕು ೧-೩-೪೬ರಂದು ಕೊಡಲಾಗುವುದೆಂದು ಕೇಳುತ್ತೇವೆ.

ಪುತ್ತೂರು-ಕಣಿಯೂರು ಕೇಂದ್ರ ಸಂಯುಕ್ತ ಗ್ರಾಮಾಭಿವೃದ್ಧಿ ಸಂಘದ ಸಭೆಯು ತಣ್ಣೀರುಪಂತ ಉಪಕೇಂದ್ರದಲ್ಲಿ ನೆರೆಗ್ರಾಮಸ್ಥರ ಸೇರುವಿಕೆಯಿಂದ ಶ್ರೀ. ಕೆ. ಪಿ. ಕುಮಾರಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಗ್ರಾಮ ಸಂಘಟನೆ, ಕೃಷಿಕೈಗಾರಿಕೆ, ಆಹಾರ ಬೆಳವಣಿಗೆಯ ಹೆಚ್ಚಳ, ಇತ್ಯಾದಿ ವಿಷಯಗಳ ಕುರಿತು ನಿರ್ಣಯಗಳಾದುವು.

ಪೆಡೂರ್ರು ಶ್ರೀ. ಅನಂತಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಯ ಸಹಾಯಾರ್ಥವಾಗಿ—

ಶ್ರೀ ಅನಂತಪದ್ಮನಾಭ ಸ್ವಾಮಿಯ ರಥೋತ್ಸವದ ಸಮಯ

ಪೆಡೂರ್ರಿನಲ್ಲಿ ನಾಟಕಗಳು.

ತಾ. 16-3-'46ನೇ ಶನಿವಾರ (ರಥೋತ್ಸವದ ದಿನ) ರಾತ್ರಿ ಘಂಟೆ 9-30ಕ್ಕೆ

ಉಡುಪಿ ನಾಟ್ಯ ಕೂಟದವರಿಂದ

ಕಾಯಿದೆಭಂಗ

(ಎಂಬ ಅರ್ಥಗರ್ಭಿತವಾದ ಸಾಮಾಜಿಕ ನಾಟಕ.)

ಉಡುಪಿ ಶ್ರೀಕೃಷ್ಣ ಮಾರುತಿ ನಾಟ್ಯ ಸಂಘದವರಿಂದ

ತಾ. 18-3-'46ನೇ ಸೋಮವಾರ ರಾತ್ರಿ ಘಂಟೆ 9-30ಕ್ಕೆ

ವರದಕ್ಷಿಣೆ

(ಎಂಬ ಹಾಸ್ಯಪ್ರಧಾನ ಸಾಮಾಜಿಕ ನಾಟಕ)

ತಾ 20-3-'46ನೇ ಬುಧವಾರ ರಾತ್ರಿ ಘಂಟೆ [illegible]ಕ್ಕೆ

ವಿಕ್ರಮ-ಶಶಿಕಲಾ

(ಎಂಬ ಶೃಂಗಾರಭರಿತ ನಾಟಕ).

ಟಿಕೇಟಿನ ದರಗಳು:- ರೂಪಾಯಿ 10, 5, 3, 2, 1 ಮತ್ತು ಆಣೆ [illegible]

ವಿದ್ಯಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ,

P. N ಮಾಧವ ರಾವ್, M. A, B. L,

ದೇವಸ್ಥಾನದ ಎಕ್ಸ್‌ಕ್ಯೂಟಿವ್ ಆಫೀಸರ್ ಮತ್ತು ಶಾಲಾ ಮೆನೇಜರ್.

ವ್ಯಯ ಸಂವತ್ಸರದ

(1946-1947)

ಶ್ರೀಪತಿ ಪಂಚಾಂಗ

ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.

ಬೆಲೆ 0—5—0.

ವಿಳಾಸ.

ಶ್ರೀಪತಿ ನರಸಿಂಹ ಅಡಿಗ,

ಕೋಟೇಶ್ವರ ಗ್ರಾಮ, ಪೋಸ್ಟ್ ಕೋಟ.

ಅಥವಾ

ನವಭಾರತ ಬುಕ್ ಡಿಪೋ, ಉಡುಪಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿದ್ಧಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ಬಾಟ್ಳಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ಬಾಟ್ಳಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಮುಟ್ಟಾಗುವಿಕೆ

ಅನೇಕ ತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— **'ಕುಮಾರಿ ಮಾತ್ರೆಗಳು'** ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೀರಿದ ಕೇಸುಗಳಿಗೆ ರೂ. 5. 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. E.) Tollygunge, Calcutta.

ಸ್ಟಾಕಿಸ್ಟ್: ಶಾ ಕಂಪೆನಿ, ಮಂಗಳೂರು

AGAINST DIABETES

&

all its dreadful results

Consult Specialists:

Dr. Alvas' Research Institute, FAJIR

S. KANARA.

ದಕ್ಷಿಣ ಕನ್ನಡ.

ಇನ್ನಂಜೆ—ಶ್ರೀವಿಷ್ಣು ಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ಫೆಬ್ರವರಿ ತಾ. 15, 16ರಲ್ಲಿ ಡಾ. ಎನ್. ಎಸ್ ಹರ್ಡೀಕರ್, ಹುಬ್ಬಳ್ಳಿ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು ಶಾಲೆಯ ಆಡಳಿತೆ ಕಮಿಟಿಯ ಅಧ್ಯಕ್ಷ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರ ಸ್ವಾಗತ ಭಾಷಣವೂ, ಮುಖ್ಯೋಪಾಧ್ಯಾಯ ಶ್ರೀ. ಎ ಶ್ಯಾಮರಾಯರಿಂದ ವರದಿ, ಸಂದೇಶಗಳ ವಾಚನವೂ ಮುಗಿದ ಬಳಿಕ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣವಾಯಿತು ಶಾಲಾ ಮೆನೇಜರರಾದ ಶ್ರೀ ಶ್ರೀನಿವಾಸ ಮಿತ್ತಂತಾಯರ ಶಾಲಾ ಪರಿಚಯ ಭಾಷಣವಾದ ನಂತರ ವಿದ್ಯಾರ್ಥಿಗಳಿಂದ ಇಂಗ್ಲಿಷ್, ತುಳು, ಕನ್ನಡ ನಾಟಕಗಳು ಅಭಿನಯಿಸಲ್ಪಟ್ಟವು,

ಕೊನೆಗೆ ಅಧ್ಯಕ್ಷರು ಶಾಲೆಯ ಏಳಿಗೆಯನ್ನು ಬಯಸಿ, ಹಳ್ಳಿಗಳಲ್ಲಿ ಇಂತಹ ಆದರ್ಶ ಶಾಲೆಗಳು ಏರ್ಪಡುವುದರಿಂದ ದೇಶೋದ್ಧಾರವಾಗುವುದೆಂದೂ ಅವರು ಹಳ್ಳಿಗಳ ಉದ್ಧಾರಕ್ಕಾಗಿ ಬಿಡು ಸಮಯದಲ್ಲಿ ಪ್ರಯತ್ನಿಸತಕ್ಕದ್ದೆಂದೂ ಭಾಷಣವಿತ್ತರು. ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು

19 2 46ರಲ್ಲಿ ಕುತ್ತೆತ್ತೂರು ಸಹೋದರರಾದ ಶ್ರೀಗಳಾದ ಯು ಅನಂತಾಚಾರ್, ಯು. ಹಯಗ್ರೀವಾಚಾರ್, ಕೆ ಸೀತಾರಾಮರಾವ್, ಕೆ ಗೋಪಾಲಾಚಾರ್ ಮತ್ತು ಕೆ. ಲಕ್ಷ್ಮೀನಾರಾಯಣಾಚಾರ್ ಇಲ್ಲಿಗೆ ಬಂದು ಶ್ರೀ ವಾದಿರಾಜ ಗುರುಕುಲದಲ್ಲಿ ವಿದ್ಯಾರ್ಥಿಗಳಿಗೆ ಭಜನೆಮಾಡಲು 'ದಾಸ ಮಂದಿರ'ವೆಂಬ ಭಜನಾಮಂದಿರಕ್ಕಾಗಿ ಅವರ ತೀರ್ಥರೂಪರ ಸ್ಮಾರಕವಾಗಿ ರೂಪಾಯಿ ೬೦೦೦ವನ್ನು ಕೊಟ್ಟು ಮೆನೇಜ್‌ಮೆಂಟನ್ನು ಪ್ರೋತ್ಸಾಹಿಸಿರುದು ಸ್ತುತ್ಯ.

ಶಿರ್ವ-ಹಿಂದೂ ಹಾ। ಎ। ಶಾಲಾ ಸ್ಥಾಪಕ ಮುಖ್ಯೋಪಾಧ್ಯಾಯರಾಗಿದ್ದ ಕ್ರೈಸ್ತವಾಸಿ ಮಾರ್ಟಿನ್ ಮಿಂಡೋಸ್ ಇವರ ಸ್ಮಾರಕ ದಿನಾಚರಣೆಯು ತಾ. ೨೨ ೨ ೪೬ರಲ್ಲಿ ಡಾ. ಕುಪ್ಪಣ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಮಕ್ಕಳಿಗೆ ತಿಂಡಿ ಹಂಚಲಾಯಿತು

ಕಾಪು-ತಾ. ೬-೩-೪೬ನೇ ಬುಧವಾರ ೩ನೇ ಹೊಸ ಮಾರಿಗುಡಿಯ ಮೂಡುದಿಕ್ಕಿನಲ್ಲಿ ಹೊಸದಾಗಿ ಕಡಿಸಿರುವ ಕರೆಯಲ್ಲಿ ೬೬ ಡ ಕೋಣಗಳ ಸ್ಪರ್ಧೆಯೊಂದು ಜರಗಲಿದೆ. ಮಾರಣೆ ದಿನ ರಾತ್ರಿ ದಶಾವತಾರ ಮೇಳದ ಆಟವಿದೆ ಎಂತ ಶ್ರೀ. ಕೆ. ವಾಸ ಹೆಗ್ಡೇರು ತಿಳಿಸುತ್ತಾರೆ

ಪೆರ್ಡೂರು— ತಾ ೧೭ ೨ '೪೬ ರಿಂ ದಲ್ಗೊಂಡು ತಾ. ೧೯-೩-'೪೬ರ ವರೆಗೆ ಶ್ರೀ ಅನಂತಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ಮಾಮೂಲ್ ಮೇರೆಗೆ ಶ್ರೀಮನ್ಮಹಾರಥೋತ್ಸವದ ಕಾರ್ಯಗಳು ಜರಗಲಿರುವವು ತಾ. ೧೩ಕ್ಕೆ ರಾತ್ರಿ ಭೇರಿತಾಡನ, ಮೃತ್ತಿಕಾ ಸಂಗ್ರಹ, ಅಂಕುರಾರೋಪಣ. ತಾ ೧೪ಕ್ಕೆ ಪ್ರಾತಃಕಾಲ ಧ್ವಜಾರೋಹಣ ರಾತ್ರಿ ಪಲ್ಲಕಿ ಉತ್ಸವ ತಾ. ೧೪ಕ್ಕೆ ಸಂಕ್ರಮಣ, ರಾತ್ರಿ ಬಲಿ, ರಂಗಪೂಜೆ, ತಪ್ಪೋತ್ಸವ, ರಥೋತ್ಸವ ತಾ. ೧೫ಕ್ಕೆ ವಸಂತೋತ್ಸವ ತಾ ೧೬ಕ್ಕೆ ಶ್ರೀ ಮನ್ಮಹಾರಥೋತ್ಸವ ತಾ ೧೭ಕ್ಕೆ ಕವಾಟೋದ್ಘಾಟನ, ಭಕ್ತರ ತುಲಾಭಾರಾದಿ ಸೇವೆಗಳು, ರಾತ್ರಿ ಅವಭೃಥಸ್ನಾನ, ವೀದಿ ಉತ್ಸವ, ಧ್ವಜಾವರೋಹಣ, ರಂಗಪೂಜೆ ತಾ ೧೮ಕ್ಕೆ ಓಕುಳಿ. ತಾ ೧೯ಕ್ಕೆ ಬ್ರಹ್ಮಕುಂಭ ಅಭಿಷೇಕ ಮೊದಲಾದ ಕಾರ್ಯಕ್ರಮಗಳು ಜರಗುವವೆಂದು ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ. . ಎನ್ ಮಾಧವರಾಯರು ತಿಳಿಸುತ್ತಾರೆ

ಕುಂದಾಪುರ--ಇಲ್ಲಿಯ ಬೋ ಹೈಸ್ಕೂಲಿನ ಹೊಸ ಬಿಲ್ಡಿಂಗಿನ ಕೆಲಸವು ಭರದಿಂದ ಸಾಗಹತ್ತಿದೆ. ವಿದ್ಯಾರ್ಥಿಗಳಿಗಿರುವ ಸ್ಥಳಾಭಾವದ ಕೊರತೆಯು ಬೇಗ ಪರಿಹಾರವಾಗಬಹುದೆಂದು ನಂಬುಗೆ ವಂತಿಗೆಯ ವಾಗ್ದಾನದಲ್ಲಿ ರೂ. ಹತ್ತುಸಾವಿರಕ್ಕೆ ಮಿಕ್ಕಿ ವಸೂಲು ಬಂದುದಾಗಿ ತಿಳಿದುಬರುತ್ತದೆ ಈಗಿನ ಈ ತುಟ್ಟಿಕಾಲದಲ್ಲಿ ಕೈಕೊಂಡ ಸಾಹಸದ ಈ ಸತ್ಕಾರ್ಯಕ್ಕೆ ಈ ಶಾಲೆಯ ಹಳೆಯ ವಿದ್ಯಾರ್ಥಿಗಳೂ ಈ ಶಾಲೆಯ ಮೇಲೆ ಅಭಿಮಾನವುಳ್ಳ ಮಹನೀಯರೂ ಉದಾರಬುದ್ಧಿಯಿಂದ ಧನಸಹಾಯವನ್ನು ನೀಡುವರೆಂದು ಆಶಿಸುತ್ತೇವೆ ಎಂದು ಒಂದು ವಾರ್ತೆ

ಗಂಗೊಳ್ಳಿ--ಸರಸ್ವತಿ ವಿದ್ಯಾಲಯ ಹೈಸ್ಕೂಲಿನ ಮತ್ತು ಸರಸ್ವತಿ ವಿದ್ಯಾಲಯ ಹಯ್ಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. ೧೭ ೨-೪೬ರಲ್ಲಿ ಸಾಯಂಕಾಲ ಶ್ರೀ. ಸಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಚ್. ಭಾಸ್ಕರ ಕಾಮತರು ಶಾಲೆಯ ಸ್ವಸ್ತಿವಾಚನವನ್ನು ಮಾಡಿದರು ವರದಿವಾಚನ, ಇನಾಮು ಹಂಚೋಣಗಳಾದ ಬಳಿಕ ಅಧ್ಯಕ್ಷರು ಸಮಯೋಚಿತ ಭಾಷಣವನ್ನು ಮಾಡಿದರು ಆ ತರುವಾಯ ವಿನೋದಾವಳಿಗಳು ಜರಗಿದವು. ಬಳಿಕ್ಕ ಶಾಲಾ ವಿದ್ಯಾರ್ಥಿಗಳ ಸಹಸೇರಿ ಶ್ರೀ ಬಿ ನಾರಾಯಣ ಶೆಣೈಯವರು ಭಾಷಣವಿತ್ತರು ಮಕ್ಕಳಿಗೆ ತಿಂಡಿಹಂಚುವ ಮೂಲಕ ಸಭೆಯು ಕೊನೆಗೊಂಡಿತು.

ಕಾರ್ಕಳ—ತಾ ೧೭ ೨ ೪೬ರಲ್ಲಿ ಶ್ರೀ ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಲಯದಲ್ಲಿ ತಿರುಪತಿ ಶ್ರೀಕ್ಷೇತ್ರದಿಂದ ಆಗಮಿಸಿದ್ದ ಶ್ರೀ. ಸೇತು ಮಾಧವಾಚಾರ್ಯರವರಿಗೆ ಕಾಲೇಜಿನ ಅಧ್ಯಾಪಕ ವೃಂದದವರಿಂದ ಮತ್ತು ಊರ ಮಹನೀಯರಿಂದ 'ಮಾನ ಪತ್ರ'ವು ಸಮರ್ಪಿಸಲ್ಪಟ್ಟಿತು ಈ ಸಂದರ್ಭದಲ್ಲಿ ಇದೇ ಕಾಲೇಜಿನ ಸ್ನಾತಕಿ ಶ್ರೀಮತಿ ಕೆ ಕಮಲಾಬಾಯಿ, ವಿ. ಉದ್ಯಾವರ (ನಾರಾಯಣ ರಾಯರ ಪುತ್ರಿ) ಇವರು ತಾನು ಬರೆದ 'ಕಾಳಿದಾಸ ಮತ್ತು ಅವನ ಕೃತಿಗಳು' ಎಂಬ ಸಂಸ್ಕೃತಗ್ರಂಥವನ್ನೂ ಸಮರ್ಪಿಸಿದರು.

ಮುಲ್ಕಿ ಗ್ರಾಮಾಭಿವೃದ್ಧಿ- ಪರವಾದ ೨೫ನೇ ಸಭೆಯು ತಾ ೧೭ ೨ ೪೬ರಲ್ಲಿ ಶ್ರೀ. ಕೆದಿಂಜೆ ಪೊನ್ನಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಕೂಡಿ, ಇಂಡಸ್ಟ್ರೀಸ್ ಡಿಪಾರ್ಟಮೆಂಟಿನವರು ಮುಲ್ಕಿ ಕಡವಿನ ಬಳಿ ಹಂಚಿನ ಕೈಗಾರಿಕೆಯನ್ನು ಪ್ರಾರಂಭಿಸಿದುದಕ್ಕೂ ಕೃಷಿ ಇಲಾಖೆಯವರು ಮುಲ್ಕಿ ಸೆಂಟರಿಗೆ ಕೃಷಿ ಆಫೀಸರರೊಬ್ಬರನ್ನು ನೇಮಿಸಲಿರುವುದಕ್ಕೂ ಸಂತೋಷಸೂಚಿಸಲಾಯಿತು ಶ್ರೀ ಕುಯಿಂಬ ಶೆಟ್ಟಿ ತಯಾರಿಸಿದ ಸಮುದಾಯ ನೇಯುವ ಯೋಜನೆಯನ್ನು ಜಾರಿಗೆ ತರಲು ಮುಂದಿನ ಸಭೆಗಳಲ್ಲಿ ಆಲೋಚಿಸಬೇಕೆಂದಾಯಿತು ಸರ್ ಎಮ್ ವಿಶ್ವೇಶ್ವರಯ್ಯನವರ ಗ್ರಾಮಕೈಗಾರಿಕೆಯ ಯೋಜನೆಯನ್ನು ಕನ್ನಡದಲ್ಲಿ ರಚಿತರಿಗೆ ಒದಗಿಸಿಕೊಡಬೇಕೆನ್ನುವ, ಮುಂದ್ಮೂರು ಕಟ್ಟದ ವಿಷಯದಲ್ಲಿ ಹಲವರು ಕೊಟ್ಟ ಅಭಿಪ್ರಾಯಗಳನ್ನು ರಿಕಾರ್ಡು ಮಾಡಬೇಕೆನ್ನುವ ಮುಂದಿನ ಸಭೆಯನ್ನು ತಾ ೩ ೩ ೪೬ನೇ ಆದಿತ್ಯವಾರ ಕಿನ್ನಿಗೋಳಿಯಲ್ಲಿ ಕರೆಯಬೇಕೆಂದು ಮತ್ತು ಆ ದಿನ ಶ್ರೀ ಮೈಂದಪ್ಪ ರೈ ಮತ್ತು ಶ್ರೀ ಕಿಲ್ಲೆಯವರಿಂದ ವಾಚಕ ಮಾಡಿಸಬೇಕೆನ್ನುವ ನಿರ್ಣಯಗಳಾದುವು ಎಂದು ಕಾರ್ಯದರ್ಶಿ ಶ್ರೀ ಎಂ. ಆರ್. ಪುಂಜರು ಬರೆಯುತ್ತಾರೆ,

ಪ್ರಯಾಣಿಕರ ಸ್ಟೀಮರ್ ಚಲಾವಣೆ-'ಎಂ. ವಿ. ಸೈಂಟ್ ಅಂತೋನಿ' ಸ್ಟೀಮರು ಇದೇ ತಾ ೨೬ ೨-೪೬ನೇ ಮಂಗಳವಾರ ಪ್ರಾರಂಭಿಸಿ ತದನಂತರ ಪ್ರತಿ ಮಂಗಳವಾರವೂ ಬೊಂಬಾಯಿಯಿಂದ ಹೊರಟು ಮಲ್ಪೆ ವರೆಗೆ ಪ್ರಯಾಣಿಸುವುದು ಮಲ್ಪೆಗೆ ಪ್ರತಿ ಗುರುವಾರ ಬೆಳಿಗ್ಗೆ ಗಂಟೆ ೯ಕ್ಕೆ ತಲಪಿ, ಗಂಟೆ ೧೨ಕ್ಕೆ ಹೊರಡುವದು.

ಕಾಸರಗೋಡು

ವಿದ್ಯಾದಾನ, ಅನ್ನದಾನ ಮೊದಲಾದ ಪುಣ್ಯಕರ್ಮಗಳಲ್ಲಿ ನಿರತರಾಗಿ ಬಡವರ ಕಷ್ಟನಿವಾರಣೆಯ ತನ್ನ ಜೀವಿತದ ಧ್ಯೇಯವಾಗಿಟ್ಟುಕೊಂಡು ಜನರ ಹೃದಯವನ್ನು ಸೂರೆಗೊಂಡ ನೀಲೇಶ್ವರ ರಾಜಕುಟುಂಬದ ಶ್ರೀ ಟಿ. ಸಿ . ಕ ರಾಮವರ್ಮರಾಜರು ಕೆಲವೇ ದಿನಗಳ ಅಸ್ವಾಸ್ಥ್ಯದಿಂದ ತಾ ೧೫ ೨ ೪೬ನೇ ಶುಕ್ರವಾರ ತನ್ನ ೬೫ನೇ ವಯಸ್ಸಿನಲ್ಲಿ ದಿವಂಗತರಾದ ವಾರ್ತೆಯನ್ನು ತಿಳಿಸಲು ತುಂಬಾ ವಿಷಾದಿಸುವೆವು.

ಪ್ರಕಟಣೆ

ತೋನ್ಸೆ ಪಂಚಾಯತ ಬೋರ್ಡು

ಈ ಬೋರ್ಡು ವ್ಯವಹಾರ ಕ್ಷೇತ್ರಕ್ಕೊಳಪಟ್ಟ ಪಡುತೋನ್ಸೆ ಗ್ರಾಮದ ಕೆಮ್ಮಣ್ಣು ಹಪ್ತೆವಾರು ಸಂತೆ, ದಿನಚರ್ಯದ ವಿಶಿಷ್ಟ ಮಾರ್ಕೆಟುಗಳು ಮತ್ತು ಪಡುಕುದ್ರು ಬಾರಿಗಳಲ್ಲಿ 1946ನೇ ಇಸವಿ ಏಪ್ರಿಲ್ 1ನೇ ತಾರೀಕಿನಿಂದ 1947ನೇ ಇಸವಿ ಮಾರ್ಚ 31ನೇ ತಾರೀಕಿನ ವರೆಗೆ ಒಂದು ವರುಷಕ್ಕೆ ವಸೂಲು ಮಾಡುವ ಸ್ವತಂತ್ರವನ್ನು 1946 ನೇ ಇಸವಿ ಮಾರ್ಚ 7ನೇ ತಾರೀಕು, ಗುರುವಾರ ಸಾಯಂಕಾಲ 3 ಘಂಟೆಗೆ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಸದರಿ ಬೋರ್ಡು ಪ್ರೆಸಿಡೆಂಟರಿಂದ ಪ್ರತ್ಯೆಪ್ರತ್ಯೇಕವಾಗಿ ಬಹಿರಂಗವಾಗಿ ಏಲಂ ಮಾಡಲ್ಪಡುವುದೆಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ ಮಾರಾಟದ ಶರ್ತ ವಗೈರೆ ಅನುಭವಗಳನ್ನು ಪ್ರೆಸಿಡೆಂಟರಿಂದ ತಿಳಿಯಬಹುದು

ಪಡುಕುದ್ರು ವೆಂಕಟಕೃಷ್ಣ ರಾವ್
ಪಂಚಾಯತ್ ಬೋರ್ಡ್ ಪ್ರೆಸಿಡೆಂಟ್.

ಪಡುತೋನ್ಸೆ,
1946ನೇ ಇಸವಿ ಫೆಬ್ರವರಿ 23.

BANK WITH THE LARGEST CONNECTIONS ON THE WEST COAST,

OFFERS:-
EFFICIENT
PROMPT &
COURTEOUS
SERVICE OF EVERY TYPE

OPEN AN ACCOUNT
with
The Canara Industrial & Banking Syndicate Ltd
ESTD 1925

WANTED

Four Secondary Grade Trained Teachers (either sex) and five Higher Ele. Trained Teachers (either sex) for Hindu Higher Elementary School, Shirva, Sharada Ele. School, Shirva and Kutyar Vidyadayinee Ele School. For further particulars apply to:—

THE CORRESPONDENT,
Hindu Higher Elementary School, SHIRVA. (S.Kanara)

ENGLISH MADE EASY
(SELF ENGLISH STUDY)

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ. 1—4—0

1—8—0ನ್ನು ಮನಿಯಾರ್ಡರು ಮಾಡಿದರೆ 1ಪ್ರತಿ ಕಳಿಸಲ್ಪಡುತ್ತ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಭಾರತ

The Barkur Educational Society (Regd.)

ಬಾರಕೂರು ವಿದ್ಯಾಭಿವರ್ಧಿನಿ ಸಂಘ.

ಮಹಾಜನರಲ್ಲಿ ವಿನಂತಿ

ಬಾರಕೂರು ಇತಿಹಾಸ ಪ್ರಸಿದ್ಧವಾದ ಪಟ್ಟಣ. ಹಿಂದೆ ಇದು ಸಂಸ್ಕೃತಿಯ ತವರೂರು, ವ್ಯಾಪಾರದ ಕೇಂದ್ರ, ರಾಜರುಗಳ ಮುಖ್ಯ ಪಟ್ಟಣವಾಗಿ ಮೆರೆಯುತ್ತಿತ್ತು. ಕಾಲ ಮಹಿಮೆಯಿಂದ ಹೀನಸ್ಥಿತಿಗೆ ಬಂದು ಈಗ ಹಳ್ಳಿಗಳ ಕೇಂದ್ರವಾಗಿದೆ. ಜನಸಂದಣಿಯು ತುಂಬಾ ಇದ್ದು ವಿದ್ಯೆಯನ್ನಾಶಿಸುವ ಮಕ್ಕಳ ಸಂಖ್ಯೆಯು ಹೆಚ್ಚಿದ್ದರೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲಗಳಿಲ್ಲ. ಬಾರಕೂರಿನ ವ ಆಸುಪಾಸಿನ ಹಳ್ಳಿಗಳಲ್ಲಿ ಪ್ರಾಥಮಿಕ ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳು ಅನೇಕ ವಿದ್ದರೂ ಹತ್ತಿರ ಹ್ಯಾಸ್ಕೂಲುಗಳಿಲ್ಲ. ವಿದ್ಯಾರ್ಥಿಗಳೆಲ್ಲಾ ಪರವೂರಿಗೇ ಹೋಗಿ ಪ್ರೌಢವಿದ್ಯಾಭ್ಯಾಸವನ್ನು ಹೊಂದಬೇಕಾಗಿದೆ. ಜನರೆಲ್ಲರೂ ಆರ್ಥಿಕ ಸ್ಥಿತಿಯಲ್ಲಿ ಅನುಕೂಲರಲ್ಲದ್ದರಿಂದ ಹೆಚ್ಚಿನವರಿಗೆ ಇದು ಸಾಧ್ಯವಿಲ್ಲ. ಆದ್ದರಿಂದ ಬಾರಕೂರು ವ ನೆರೆಹೊರೆಯ ಅನೇಕ ಹಳ್ಳಿಪಟ್ಟಣಗಳ ಸೌಕರ್ಯಕ್ಕಾಗಿ ಕೇಂದ್ರ ಸ್ಥಳವಾದ ಬಾರಕೂರಿನಲ್ಲಿ ಒಂದು ಹ್ಯಾಸ್ಕೂಲು ಅತ್ಯಗತ್ಯವಿದ್ದು ಈಗಿನ ಸ್ಥಿತಿಯಲ್ಲಿ ಜಿಲ್ಲಾ ಬೋರ್ಡು ವ ಮಾನ್ಯ ಸರಕಾರದವರು ಈ ಕೊರತೆಯನ್ನು ನೀಗಿಸುವ ಅಸಾಧ್ಯತೆಯನ್ನು ವ್ಯಕ್ತಪಡಿಸಿದ್ದರಿಂದ ಊರವರೇ ಈ ಕೊರತೆಯನ್ನು ನೀಗಿಸಲು ವಿದ್ಯಾಭಿವೃದ್ಧಿಯೇ ಮುಖ್ಯ ಧ್ಯೇಯವಾಗಿಟ್ಟುಕೊಂಡು **"The Barkur Educational Society"** ಎಂಬ ಸಂಘವನ್ನು ಸ್ಥಾಪಿಸಿ ರಿಜಿಸ್ಟ್ರಿ ಮಾಡಿರುವರು. ಹ್ಯಾಸ್ಕೂಲನ್ನು ಸ್ಥಾಪಿಸುವರೆ ಅನುಮತಿ ಕೊಡಬೇಕಾಗಿ ತಾ. ೯-9-1945ರಲ್ಲಿ ಮಾನ್ಯ ವಿದ್ಯಾಖಾತೆಯ ಡ್ಯಾರೆಕ್ಟರವರಿಗೆ ಅರ್ಜಿಮಾಡಿದ್ದಲ್ಲದೆ ತಾ. 11-2-1946ರಲ್ಲಿ ಸಂಘದ ಕಡೆಯಿಂದ ಮಾನ್ಯ ಡ್ಯಾರೆಕ್ಟರರವರನ್ನು ಡೆಪ್ಯುಟೇಶನ್ ಮೂಲಕ ಸಂದರ್ಶಿಸಿ ಬೇಡಿಕೆಗಳನ್ನು ಮುಂದಿಟ್ಟಾಗ ಮಾನ್ಯ ಡ್ಯಾರೆಕ್ಟರರವರು ಬಾರಕೂರಿಗೆ ಹ್ಯಾಸ್ಕೂಲು ಆಗತ್ಯವೆಂಬ ವಿಚಾರಕ್ಕೆ ಸಮಾಧಾನಪಟ್ಟು ಹ್ಯಾಸ್ಕೂಲಿಗೆ ಬೇಕಾಗುವ ಕಟ್ಟಡಗಳು ವ ಧನ ಸಂಗ್ರಹವನ್ನು ಒದಗಿಸಿಕೊಟ್ಟಲ್ಲಿ ಹ್ಯಾಸ್ಕೂಲನ್ನು ಸ್ಥಾಪಿಸುವರೆ ಅನುಮತಿಕೊಡುವದಾಗಿಯೂ ಇದೇ ಜೂನ್ ತಿಂಗಳಿಂದ I, II, III, IVನೇ ಫೋರ್ಮುಗಳನ್ನು ತೆರೆಯುವರೆಹುಕುಂ ಕೊಡುವದಾಗಿಯೂ ಆಶ್ವಾಸನೆ ಇತ್ತಿರುತ್ತಾರೆ.

ಹ್ಯಾಸ್ಕೂಲನ್ನು ಸ್ಥಾಪಿಸಿ ಯೋಗ್ಯ ರೀತಿಯಿಂದ ನಡೆಯಿಸಿಕೊಂಡು ಹೋಗಲು ಹೇರಳ ದ್ರವ್ಯಸಂಚಯವು ಅಗತ್ಯವಿರುವದರಿಂದ ಸಂಘವು ವಿದ್ಯಾಭಿಮಾನಿಗಳಾದ ಉದಾರ ಮಹನೀಯರ ಸಹಾಯವನ್ನು ಕೋರುತ್ತದೆ. ಸಂಘದ ಸದಸ್ಯ ಚಂದಾವನ್ನು ಈ ಕೆಳಗಿನಂತೆ ನಿರ್ಣಯಿಸಿದೆ.

ಸ್ಥಾಪಕರು ರೂ. 5000 - ವ ಮೇಲ್ಪಟ್ಟು ಕೊಟ್ಟವರು.
ಆಜೀವ ಸದಸ್ಯರು ರೂ. 1000/- ವ ಮೇಲ್ಪಟ್ಟು ಕೊಟ್ಟವರು.
ಗೌರವ ಸದಸ್ಯರು ರೂ. 500/- ವ ಮೇಲ್ಪಟ್ಟು ಕೊಟ್ಟವರು
ಸದಸ್ಯರು ರೂ. 100/- ವ ಮೇಲ್ಪಟ್ಟು ಕೊಟ್ಟವರು.

ಇಷ್ಟರ ವಳಗೆ ಸಂಘವನ್ನು ಸೇರಿದ ಸದಸ್ಯರ ಚಂದಾ ರೂ. 32000/-ಕ್ಕೆ ಮಿಕ್ಕಿರುತ್ತದೆ.

ಉದಾರಿಗಳಾದ ಮಹನೀಯರು ಸಂಘದ ಸದಸ್ಯರಾಗಿ ಯಾ ಸಂಘಕ್ಕೆ ತಮ್ಮ ಶಕ್ತ್ಯಾನುಸಾರ ಸಹಾಯ ಧನವನ್ನು ಕೊಡುವದರ ಮೂಲಕ ಸಂಘವನ್ನು ಪ್ರೋತ್ಸಾಹಿಸಿ ಸಂಘದ ಉದ್ಯಮಗಳು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ವಿನಂತಿ.

ಅಧ್ಯಕ್ಷರು:
ಶ್ರೀ. ಶ್ರೀ. ವಿದ್ಯಾಮಾನ್ಯ ತೀರ್ಥ ಸ್ವಾಮಿಯವರು, ಭಂಡಾರಕೇರಿಮಠ.
ಉಪಾಧ್ಯಕ್ಷ: ಶ್ರೀ. H. ರಾಮಣ್ಣ ಶೆಟ್ಟಿ.
Treasurer:-ಶ್ರೀ. ಡಾಕ್ಟರ್ ಎ. ಎಸ್ ಹೆಬ್ಬಾರ್ L. M. & S.
ಕಾರ್ಯದರ್ಶಿ ಮತ್ತು ಜೊತೆಕಾರ್ಯದರ್ಶಿ:
1. ಶ್ರೀ ಅಲ್ತಾರು ರಾಮಣ್ಣ ಶೆಟ್ಟಿ. 2. ಜೋನ್ ಪಿ. ಸಿಕೇರ, Esq.
ಶ್ರೀ ಸೂಧನ ಮಂಗಲ ಪೂಜಾರಿ, ಗುರು, ಪೆ ಗವೀರ ಸಮಾಜ,
ಆಡಳಿತ ಮಂಡಳಿ ಸದಸ್ಯರು.

ಸಹಾಯ ಧನವನ್ನು ಡಾಕ್ಟರ್ ಎ. ಎಸ್. ಹೆಬ್ಬಾರ್, L. M. & S. ಕೋಶಾಧ್ಯಕ್ಷ, ಬಾರ್ಕೂರು, ಎಡ್ಯುಕೇಶನಲ್ ಸೊಸೈಟಿ (Regd.) ಬಾರ್ಕೂರು ಇವರ ಹೆಸರಿಗೆ ಕಳುಹಿಸಬೇಕಾಗಿ ವಿನಂತಿ.

'ಅಂತರಂಗ' ವಾರ ಪತ್ರಿಕೆಗೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಇದೇ ಫೆಬ್ರವರಿ ತಿಂಗಳ ಅಂತ್ಯದೊಳಗೆ ಚಂದಾದಾರರಾಗುವವರಿಗೆ

ಅಂತರಂಗ ಆಯುರ್ವೇದ ಸಮ್ಮೇಲನಾಂಕವು

ಉಚಿತವಾಗಿ ಕೊಡಲ್ಪಡುವುದು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಬೇಸರಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ -- ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅತಿಸಾರ, ಕೆಮ್ಮು, ಮೈನೋವು, ಹಲ್ಲುನೋವು ... ಬೇನೆಬೇಸರಿಕೆಗಳನ್ನು ಜಮೇರಿಯನ್ ಜೀವನ ಮಿಕ್ಶ್ಚರ್ ...

ಎಮ್. ಜೆ. ಜಮೇರಿಯನ್ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ, ಮುಂಬಾಯಿ ೨

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ಸ... ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆಂಡರ್ ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಲಾಗುವದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು. ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಕಾರಿಬಾಗ್ ರೋಡ್, ಜಿ. ಐ ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲಿ ... ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲಧಾನಿ, ಕೆಮಿಸ್ಟ, ಹಾವೇರಿ ಬ್ಯಾಡಗಿ.

Ayurveda Oushadalaya, GADAG CITY.

ಕರ್ನಾಟಕ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನ

ಮದ್ರಾಸು ಸಮ್ಮೇಳನ-ಪೂಜ್ಯ ಗಾಂಧೀಜೀಯವರ ನೇತೃತ್ವದಲ್ಲಿ ತಾ. ೨೧-೧-೧೯೪೬ರಿಂದ ತಾ. ೨೯-೧-೧೯೪೬ರ ವರೆಗೆ ಮದ್ರಾಸದಲ್ಲಿ ದಕ್ಷಿಣ ಭಾರತದ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನವು ನಡೆಯಿತು. ೧೮ ವಿಧ ರಚನಾತ್ಮಕ ಕಾರ್ಯದ ಬಗ್ಗೆ ವಿಪುಲವಾದ ಚರ್ಚೆ ನಡೆಯಿತು. ಅನೇಕ ವಿಷಯಗಳ ಬಗ್ಗೆ ಪೂಜ್ಯ ಗಾಂಧೀಜೀಯವರ ಮಾರ್ಗದರ್ಶನವು ದೊರೆಯಿತು.

ಸಮ್ಮೇಳನದ ಉದ್ದೇಶ- ಪೂಜ್ಯ ಗಾಂಧೀಜೀಯವರಿಂದ ಪ್ರಣೀತವಾದ ರಚನಾತ್ಮಕ ಕಾರ್ಯಗಳನ್ನು ಸಾಗಿಸಲು ಚರಖಾ ಸಂಘ, ಗ್ರಾಮೋದ್ಯೋಗ ಸಂಘ, ತಾಲೀಮಾ ಸಂಘ, ಹರಿಜನ ಸೇವಕ ಸಂಘ. ಗೋ ಸೇವಾ ಸಂಘ, ಕಸ್ತೂರಿ ಬಾ ಸ್ಮಾರಕ ಸಂಘ, ಹಿಂದುಸ್ತಾನೀ ಪ್ರಚಾರ ಸಂಘ ಮುಂತಾದ ಹಲವು ಸಂಸ್ಥೆಗಳ ನಿರ್ಮಾಣವಾಗಿದ್ದು ಸಾವಿರಾರು ಕಾರ್ಯಕರ್ತರು ಬೇರೆ ಬೇರೆ ಸಂಘಗಳಲ್ಲಿ ಕೆಲಸ ಮಾಡುತ್ತಿರುವರು. ಈ ಎಲ್ಲ ಶಾಖೆಗಳ ಕಾರ್ಯ ಸಮನ್ವಯ ಮಾಡುವುದೇ ಸಮ್ಮೇಳನದ ಉದ್ದೇಶ.

ರಚನಾತ್ಮಕ ಕಾರ್ಯದ ಗುರಿ- ಪ್ರತಿಯೊಬ್ಬ ರಚನಾತ್ಮಕ ಕಾರ್ಯಕರ್ತನೂ "ಸಮಗ್ರ ಶರೀರ ಶಿಲ್ಪಿ"ಯಾಗಬೇಕೆಂದು ಪೂಜ್ಯ ಗಾಂಧೀಜೀಯವರು ಹೇಳಿದ್ದಾರೆ. ಸಮಗ್ರ ರಾಷ್ಟ್ರೋನ್ನತಿಯೇ ರಚನಾತ್ಮಕ ಕಾರ್ಯದ ಗುರಿ. "ಪ್ರತಿಯೊಂದು ರಚನಾತ್ಮಕ ಕಾರ್ಯಕ್ರಮವೂ ರಾಷ್ಟ್ರದ ಸ[illegible]ತ್ತಿಯನ್ನು ಸತ್ಯಾಗ್ರಹ ಶಕ್ತಿಯನ್ನು ಬೆಳೆಸಬೇಕು, ಸತ್ಯಾಗ್ರಹ ಶಕ್ತಿಯನ್ನು ಬೆಳೆಸದ ಕಾರ್ಯಕ್ರಮವು ರಚನಾತ್ಮಕ ಕಾರ್ಯಕ್ರಮವಲ್ಲ," ಎಂದು ಪೂಜ್ಯ ಗಾಂಧೀಜೀಯವರ ಮತ.

ಕಾರ್ಯಕರ್ತರ ದೃಷ್ಟಿ- ಒಂದು ಸಂಸ್ಥೆಯ ಕಾರ್ಯಕರ್ತನು ಇನ್ನೊಂದು ಸಂಸ್ಥೆಯ ರಚನಾತ್ಮಕ ಕಾರ್ಯವು ತನ್ನದಲ್ಲವೆಂದು ತಿಳಿಯಬಾರದು. ಹರಿಜನ ಸೇವಕನು ಖಾದೀಧಾರಿಯೂ, ಸ್ವತಃ ನೂಲಲು ಕಲಿತವನೂ, ನಿಯಮಪೂರ್ವಕ ನೂಲುವವನೂ ಇರಬೇಕು. ಖಾದೀ ಸೇವಕನು ತನ್ನ ಜೀವನದಲ್ಲಿ ಅಸ್ಪೃಶ್ಯತೆಯನ್ನು ತೆಗೆದೊಗೆಯಬೇಕು. ಇಬ್ಬರೂ ಹಿಂದೂಸ್ತಾನೀ ಕಲಿಯಬೇಕು. ಹೀಗೆ ಎಲ್ಲ ಕಾರ್ಯಕರ್ತರೂ ಎಲ್ಲ ರಚನಾತ್ಮಕ ಕಾರ್ಯಕ್ರಮಗಳನ್ನು ಚಲೋ ರೀತಿಯಿಂದ ಅಭ್ಯಾಸ ಮಾಡಿ, ತಿಳಕೊಂಡು, ಸ್ವಂತ ಜೀವನದಲ್ಲಿ ಆಚರಿಸಿ, ರಾಷ್ಟ್ರಕ್ಕೆ ಆದರ್ಶರಾಗಬೇಕು. ಈ ರೀತಿಯಾಗಿ ಆಚರಣೆಯುಳ್ಳ ಜನರ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಗಬೇಕು.

ಕರ್ನಾಟಕ ಸಮ್ಮೇಳನ- ಮೇಲಿನ ದೃಷ್ಟಿಯಿಂದ ರಚನಾತ್ಮಕ ಕಾರ್ಯಸಮನ್ವಯತೆಯನ್ನು ಸಾಧಿಸಲು ಪ್ರತಿಯೊಂದು ಪ್ರಾಂತದಲ್ಲಿ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನವನ್ನು ಕರೆದು ತಾ. ೧೪ [illegible]ಗಾಗಿ ಪ್ರಾಂತ ರಚನಾತ್ಮಕ ಕಾರ್ಯ ಸಮನ್ವಯ ಸಮಿತಿಗಳನ್ನು ನೇಮಿಸಬೇಕೆಂದೂ ಕರ್ನಾಟಕದಲ್ಲಿಯ ಈ ಕೆಲಸದ ಹೊಣೆಯನ್ನು ಶ್ರೀ ದಿವಾಕರ ರಂಗರಾಯರಿಗೆ ಒಪ್ಪಿಸಬೇಕೆಂದೂ ಮದ್ರಾಸ ಸಮ್ಮೇಳನವು ನಿರ್ಧರಿಸಿತು. ಆ ನಿರ್ಧಾರದಂತೆ ಕರ್ನಾಟಕದ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನವನ್ನು ಏಪ್ರಿಲ ತಿಂಗಳ ಮೂರನೇ ವಾರದಲ್ಲಿ ಕರೆಯಬೇಕೆಂಬ ವಿಚಾರವಿದೆ. ಈ ಕರ್ನಾಟಕದ ಸಮ್ಮೇಳನಕ್ಕೆ ಗಾಂಧೀ ಸೇವಾ ಸಂಘದ ಮಂತ್ರಿಗಳಾದ ಶ್ರೀ. ರಘುನಾಥ ಶ್ರೀಧರ ಧೋತ್ರೆ ಇವರು ಬರಲು ಒಪ್ಪಿದ್ದಾರೆ. ಸಮ್ಮೇಳನಕ್ಕಿಂತ ಮೊದಲು ಕೆಲವು ಪ್ರಮುಖ ಕಾರ್ಯಕರ್ತರು ಕೂಡಿ ಸಮ್ಮೇಳನದ ಕಾರ್ಯಕ್ರಮವನ್ನು ನಿಶ್ಚಯಿಸಬೇಕೆಂಬ ವಿಚಾರವಿದೆ.

ವಿಚಾರದ ಆವಶ್ಯಕತೆ-ಮೇಲೆ ವಿವರಿಸಿದ ಕಾರ್ಯ ಸಮನ್ವಯದ ವೈಚಿತ್ರ್ಯ ಮತ್ತು ಆವಶ್ಯಕತೆಯ ಬಗ್ಗೆ ಎಲ್ಲ ಕಾರ್ಯಕರ್ತರ ಭಾವನೆಯು ಅನುಕೂಲವಿರುವುದಾದರೂ ಆ ವಿಚಾರ ಸರಣಿಯನ್ನು ಕಾರ್ಯರೂಪಕ್ಕೆ ತರುವ ವಿಷಯದಲ್ಲಿ ಯೋಗ್ಯ ವಿಚಾರ ಮಾಡಿ ಕಾರ್ಯಕರ್ತರಿಗೆ ಸ್ಪಷ್ಟ ಮತ್ತು ಕಾರ್ಯಕಾರೀ ಮಾರ್ಗದರ್ಶನ ಮಾಡುವುದು ಅವಶ್ಯವಿದೆ. ಈ ದೃಷ್ಟಿಯಿಂದ ಎಲ್ಲ ಕಾರ್ಯಕರ್ತರೂ ವಿಚಾರಮಾಡಿ ತಮ್ಮ ಸೂಚನೆಗಳನ್ನು ತಿಳಿಸಬೇಕಾಗಿ ವಿನಂತಿ ಇದೆ. ರಚನಾತ್ಮಕ ಕಾರ್ಯ ಸಮನ್ವಯ ಸಮಿತಿಯು ಉಪಯುಕ್ತ ಕಾರ್ಯ ಮಾಡುವಂತೆಯೂ ಕೆಲವು ಯೋಜನೆಗಳನ್ನು ಸೂಚಿಸಬೇಕಾದ ಆವಶ್ಯಕತೆ ಇದೆ. ಈಗಿನಿಂದ ವಿಚಾರವಿನಿಮಯವಾಗಿ ಸಮ್ಮೇಳನವು ಉಪಯುಕ್ತವೂ ಯೋಗ್ಯವೂ ಆಗಬೇಕೆಂದು ಈಗಲೇ ಈ ಪರಿಪತ್ರವನ್ನು ಹೊರಡಿಸಲಾಗಿದೆ.

ರಚನಾತ್ಮಕ ಕಾರ್ಯ ವಿವರಣೆ- ಸಮ್ಮೇಳನದ ವೇಳೆಗೆ ಕರ್ನಾಟಕದಲ್ಲಿ ಇದುವರೆಗೆ ನಡೆದ ರಚನಾತ್ಮಕ ಕಾರ್ಯದ ಸ್ಥೂಲ ಪರಿಚಯ ಮಾಡಿಕೊಡುವ ಒಂದು ಪುಸ್ತಿಕೆಯನ್ನು ಹಿಂದಿಯಲ್ಲೂ ಕನ್ನಡದಲ್ಲೂ ಪ್ರಸಿದ್ಧಿಸಬೇಕೆಂಬ ವಿಚಾರವಿದೆ. ಕರ್ನಾಟಕದಲ್ಲಿ ರಚನಾತ್ಮಕ ಸಂಸ್ಥೆಗಳೂ, ಸಂಘಗಳೂ, ಕಾರ್ಯಕರ್ತರೂ ತಂತಮ್ಮ ಕ್ಷೇತ್ರದಲ್ಲಿ ೩೧-೧೨-೧೯೪೫ರ ವರೆಗೆ ನಡೆದ ಕಾರ್ಯದ ಸ್ಥೂಲ ವರದಿಯನ್ನು ತಾ. [illegible] ರೊಳಗಾಗಿ ಕಳಿಸಿಕೊಡಬೇಕಾಗಿ ವಿನಂತಿ ಇದೆ. ಪುಸ್ತಿಕೆಯಲ್ಲಿ ಕೆಲವು [illegible]ಯಲ್ಲಿ ಚಿತ್ರಗಳನ್ನು ಕೊಡಲಾಗುವುದು. ಚಿತ್ರಗಳನ್ನು ಪ್ರಸಿದ್ಧಿಸಲಿಚ್ಛಿಸುವವರು ಪಡಿಯಚ್ಚುಗಳನ್ನು ಕಳಿಸಬೇಕು.

ಎಲ್ಲ ಕಾರ್ಯಕರ್ತರೂ ಸಹಕರಿಸಿ ಸಮ್ಮೇಳನವು ಯಶಸ್ವಿಯಾಗುವಂತೆ ನೆರವಾಗಬೇಕಾಗಿ ವಿನಂತಿ.

ರಂಗರಾವ ದಿವಾಕರ
ಸಂಯೋಜಕ

ಗೃಹಿಣಿಯರ ಕರ್ತವ್ಯ

೨ನೇ ಪುಟದಿಂದ

ಮತ್ತು ಮಕ್ಕಳ ಪಾಲನೆ ಇವುಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಓದಿ ಅವುಗಳಲ್ಲಿ ಹೇಳಿರುವ ಉತ್ತಮ ಕ್ರಮಗಳನ್ನು ಆಚರಣೆಗೆ ತಂದು, ತನ್ನ ಮತ್ತು ತನಗೆ ಸೇರಿದವರ, ತನ್ಮೂಲಕ ದೇಶದ ಸುಖಕ್ಕಾಗಿ ಶ್ರಮಿಸಬೇಕು. ಪ್ರತಿಯೊಬ್ಬ ಮಹಿಳೆಯೂ ಮಿತವ್ಯಯ ಮಾಡಿ, ಸಾಲಗೀಲ ಮಾಡದೆ ದುಃಖದಿಂದ ಜೀವನ ನಡೆಸುವುದನ್ನು ಕಲಿತರೆ ಪ್ರತಿಯೊಂದು ಸಂಸಾರವೂ, ಇದರಿಂದ ದೇಶವೂ ದಾರಿದ್ರ್ಯಕ್ಕೆ ಸಿಲುಕದೆ ಉನ್ನತ ಸ್ಥಿತಿಗೆ ಬರಲು ಅವಕಾಶ ಸಿಗುವುದು. ನೆಮ್ಮದಿಯಾಗಿ ಕಲಹವಿಲ್ಲದೆ ಚೆನ್ನಾಗಿರುವ ಸಂಸಾರದಲ್ಲಿ ಗಂಡಸರೂ ಸಂತೋಷವಾಗಿರುವರಲ್ಲದೆ ಕೆಲಸಮಾಡಲು ಉತ್ಸಾಹಶಾಲಿಗಳಾಗಿರುವರು. ಹೆಂಗಸು ತನ್ನ ಗೃಹದ ಸೌಖ್ಯಕ್ಕಾಗಿ ಶ್ರಮಿಸುವ ಮೂಲಕ ದೇಶದ ಹಿತಕ್ಕೆ ನೆರವಾಗುವಳು.

ಉತ್ತಮ ತಾಯಿಯ ಮೇಲ್ಪಂಕ್ತಿಯನ್ನನುಸರಿಸುವ ಭಾವೀ ಭಾರತದ ಪ್ರಜೆಗಳಾದ ಅವಳ ಮಕ್ಕಳು ದೇಶದ ನಿಜವಾದ ಪರಿವಾರವಾಗುವರು. ಇಷ್ಟೆಲ್ಲಾ ಆಗಬೇಕಾದರೆ ಹೆಂಗಸರು ವಿದ್ಯಾವತಿಯರಾಗಬೇಕು. ವಿದ್ಯೆಯ ಸದುಪಯೋಗವನ್ನು ಮಾಡಬೇಕು. ವ್ಯರ್ಥವಾಗಿ ಅಕ್ಕಪಕ್ಕದ ಮನೆಯ ಹೆಂಗಸರೊಡನೆ ಹುಚ್ಚು ಹರಟೆಯಾಡಿ ಕಾಲಕಳೆಯದೆ ತಮ್ಮ ಸ್ವಪರಿಶ್ರಮದಿಂದ ವಿದ್ಯೆ ಕಲಿತು ಅನೇಕ ಉತ್ತಮ ಪುಸ್ತಕಗಳನ್ನು ಓದಿ, ಉತ್ತಮಾದರ್ಶಗಳನ್ನು ಆಚರಣೆಗೆ ತಂದು ತಮ್ಮ ಗೃಹಸ್ಥ ಜೀವನವನ್ನು ಸುಖಮಯವಾಗಿಯೂ ಆದರ್ಶವನ್ನಾಗಿಯೂ ಮಾಡಿದ್ದೇ ಆದರೆ ನಿಜವಾಗಿಯೂ ನಮ್ಮ ಭಾರತದ ಉದ್ಧಾರವಾಗುವುದು. ಏಕೆಂದರೆ ರಾಷ್ಟ್ರನಿರ್ಮಾಣವಾಗುವುದರಲ್ಲಿ ಸ್ತ್ರೀಯರ ಜವಾಬ್ದಾರಿಯೇ ಹೆಚ್ಚಾಗಿರುವುದು.

WANTED.

For the Alex Pai Distillery

1. **ASSISTANT DEPOT WRITERS**—for the following arrack Depots to join duty from 1-4-1946.

Qualifications: Must be men of good character, 25 to 50 years of age and able to read and write English & Kannada.

Security: Cash Deposit to be furnished in proportion to volume of business at each Depot and a personal surety for Rs 2000/-.

Pay: Rs. 20 to 30/- per month with Dearness allowance of Rs 8/- per month.

Names of Depots: Udipi, Mangalore, Beltangadi, Kasargode, Puttur, Karkala, Mudabidri, Bantwal, Sullia, Moolki, Uppinangadi, Coondapur, Vittal, Baindur, Brahmawar, Hebri, and Haladi.

2. **AGENTS**— for the supply of Cashew fruit at the Distillery site commencing from 1—3—46.

ಏಜಂಟರು— ತಾ 1-3-46ರಿಂದ ಗೇರುಹಣ್ಣುಗಳನ್ನು ಸರಾಯಿ ಬಟ್ಟಿ ಇಳಿಸುವ ಕಾರ್ಖಾನೆಗೆ ಸಪ್ಲೈ ಮಾಡಲು.

3. **MAISTRIES**— for supply coolies for the following Works:

ಮೇಸ್ತ್ರಿಗಳು— ಕೆಳಗೆ ನಮೂದಿಸಿದ ಕೆಲಸಗಳಿಗೆ ಕೂಲಿ ಜನರನ್ನು ಒದಗಿಸಿ ಕೊಡಲು.

1. Destillery ಸರಾಯಿ ಭಟ್ಟಿ ಇಳಿಸುವ ಕಾರ್ಖಾನೆಗೆ
2. Tile Factory ಹಂಚು ಕಾರ್ಖಾನೆಗೆ
3. Clay Quarrying ಮಣ್ಣಿನ ಗಣಿಗೆ
4. Fuel Coupe feeling ಕಟ್ಟಿಗೆ ಒಡೆಯಲು
5. Building construction ಕಟ್ಟೋಣ ಕಟ್ಟಲಿಕ್ಕೆ
6. Agricultural Farms ಕೃಷಿ ಕ್ಷೇತ್ರಕ್ಕೆ

Wages: at rates prevailing from time to time the rate being basic wage 6 annas per day for man cooly and 4 annas per day for women cooly plus Dearness allowance of 125% of the basic wage, i. e. an aggregate of 0—13—6 for a man and 0—9—0 for a woman cooly per day. Loding and fuel - provided free of charge to such coolies as are prepared to live in the cooly lines which will be provided for them. Salary of the Maistry will be rupee one per day for every man cooly and 12 annas for every woman cooly who works for not less than 24 days in a month and proportionately for lesser number of days worked.

ಕೂಲಿ— ಗಂಡಸರಿಗೆ ದಿನಕ್ಕೆ 0—6—0, ಹೆಂಗಸರಿಗೆ 0—4—0, ತುಟ್ಟಿಭತ್ತೆ ಕೂಡಿ ದಿನಕ್ಕೆ ಗಂಡಸರಿಗೆ 0—13—6, ಹೆಂಗಸರಿಗೆ 0—9—0 ಕಾರ್ಖಾನೆಯ ಕಡೆಯಿಂದ ತಯಾರಿಸಿದ ಕುಟೀರಗಳಲ್ಲಿ ವಾಸಿಸುವವಂತಹವರಿಗೆ ಕಟ್ಟಿಗೆ ಮತ್ತು ಬಾಡಿಗೆ ಧರ್ಮಾರ್ಥ. ತಿಂಗಳಲ್ಲಿ 24 ದಿನಗಳಿಗೆ ಕಡಿಮೆಯಾಗದಂತೆ ಕೆಲಸ ಮಾಡುವ ಗಂಡಸು ಮೇಸ್ತ್ರಿಗೆ ದಿನಕ್ಕೆ ಒಂದು ರೂಪಾಯಿ, ಹೆಂಗಸು ಮೇಸ್ತ್ರಿಗೆ ಹನ್ನೆರಡಾಣೆ. ಕಡಿಮೆ ದಿವಸ ಕೆಲಸ ಮಾಡಿದವರಿಗೆ ಅದೇ ಪ್ರಮಾಣ ಮೇಲೆ ಸಂಬಳ

Apply to
Felix Albuquerque,
Felix Wada,
MANGALORE.

ಪತ್ತೆ—
ಫೆಲಿಕ್ಸ್ ಆಲ್ಬುಕರ್ಕ್,
ಫೆಲಿಕ್ಸ್ ವಾಡಾ,
ಮಂಗಳೂರು

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	...	...	0	6	0
2.	ಸಾಮುದ್ರಿಕ ಶಾಸ್ತ್ರ	....	...	0	8	0
3.	ಬಾಲ ರಾಮಾಯಣ	....	....	0	5	0
4.	ಸುಕನಾ ಚರಿತ್ರೆ	....	....	0	5	0
5.	ಕೊಳಲು ಕೃಷ್ಣ	....	....	0	8	0
6.	ಗುರುಪೀಠಗಳ ಅವನತಿ	....	....	0	8	0
7.	ದ್ವೈತಮತ ಖಂಡನೆ	....	....	0	6	0
8.	ಧರ್ಮಸಂಕಟ	....	....	0	4	0
9.	ಪೂರೂರವ	....	....	0	8	0
10.	ಸಿಕ್ಖರ ಜ್ಞಾನ	...	...	0	8	0
11.	ವಿದ್ಯಾರಣ್ಯ ಕಾವ್ಯಂ	....	....	1	0	0
12.	ಚಂದ್ರಗುಪ್ತ ಚಕ್ರವರ್ತಿ	....	....	1	0	0
13.	ಸ್ವದೇಶಿ	....	....	0	4	0
14.	ಹರಿಜನ ಸೇವೆ	....	....	0	4	0
15.	Gauthama the Buddha		....	0	8	0
16.	ಪ್ರಾರ್ಥನೆ	....	....	0	2	0
17.	ಹಿಂದೀ ಪಹಲಿ ಪೋತಿ	....	....	0	2	0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)			0	4	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, ಉಡುಪಿ

ತುಳು ಪುಸ್ತಕಗಳು

ತುಳು ಸಾಹಿತ್ಯ1	....	....	1	0	0
ಕೃಷ್ಣಂಜಿ ಪರ್ಸಂಗೊ	....	....	1	0	0
ತುಳುವಾಲ ಬಲಿಯೇಂದ್ರ	....	....	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು		....	0	8	0
ಕಾಸಿಗ್	....	....	0	8	0
ತುಳು ವ್ಯಾಕರಣ	....	....	1	0	0
ಮದ್ ಮಾಳತ್ತ್ ಮದ್ ಮಾಯ		....	0	4	0
ಜನಪರ್ಲ್	....	....	0	12	0
ತುಳು ಪದ್ಯಮಾಲಿಕೆ	....	....	0	2	0
ಬಂಗಾರ್ದಂಗಿದ ಗತೆ	....	....	0	2	0
ಮಿತ್ಯ ನಾರಾಯಣ ಕತೆ	....	....	0	1	0
ಸತೀ ಕಮಲೆ	....	....	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ. ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. **ದಪ್ಪವಾದ ಹೊದಿಕೆಯುಳ್ಳದ್ದು:**

ಯಶ . ್ರಪದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, ಉಡುಪಿ.

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪ್ರೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

Regd No. M. 3618. **SILVER JUBILEE YEAR** ರಜತೋತ್ಸವದ ವರ್ಷ. **Estd. 1921** ಸ್ಥಾಪಿತ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA

ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ ೨೭] Founder: **SRI A. B. SHETTY.** [No. 27

ಉಡುಪಿ ● **7—3—1946** ● ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ.
ತಲೆನೋವು, ಶೀತ, ... ಥಂಡಿ, ... ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಂಡುದು, ಚೇಳು ವಿಷ ಮುಂತಾದ ಬೇನೆ ... ರೋಗಗಳಿಗೂ ಸಿದ್ಧ ... ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

TO THOSE WHO DEMAND SOMETHING BETTER IN LIFE.

In the competitive world of to-day financial backing provides valuable opportunities whether it be in the field of education, commerce or industry. You are certainly desirous that your children should have better opportunities in life.

Ambitious parents like you have found our Children's Endowment Policies suitable for that purpose.

THE CANARA MUTUAL ASSURANCE COMPANY, LTD.,
Head Office.- **UDIPI, (S. India.)**

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹುರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—0—0. ಪೋಸ್ಟ ಚಾರ್ಜ ನಿರಾಳೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ—ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ,—ದಾವಣಗೇರಿ ಪ್ರೆಸ್. ಆರ್. ಎಲ್. ಕಲಬುರ್ಗಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವ ವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಮ್, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for Diarrhoea, Stomachache, Vomiting and Nausea.

BHUVANENDRA PRODUCTS LTD., **Katapadi.**

'ಭುವನೇಂದ್ರ'
ಚಂದ್ರಮಸ್ **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಬೊಬ್ಬನೂ ಹಿರಿತಕ್ಕ ಅತ್ಯುತ್ತಮ ಔಷಧಿ.**

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನ ೩ ಯಾ ೪ ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ಪಾಯಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L I M; ಡಾ। ವೆಂಕಟರಾವ್, ಕೊಡವೂರು; ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank at

MERCARA

ON 23-1-1946.

The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್

—ಎಂಡ್—

ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾನನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಚ್. ನರಸಿಂಗ ರಾವ್,
ಪ್ರೊಪ್ರೈಟರ್.

ಸ್ವರಾಜ್ಯದ ಹಾದಿಯಾವುದು—

ಹಿಂಸೆಯೋ; ಅಹಿಂಸೆಯೋ ಅಥವಾ ಎರಡನ್ನೂ ಗಮನಿಸದ ಪ್ರತೀಕಾರವೋ?

ಗಾಂಧೀ-ಅರುಣಾ ವಾಗ್ವಾದ.

ಬೊಂಬಾಯಿ ನೌಕಾ ಬಂಡಾಯವನ್ನು ಸ್ಪಷ್ಟವಾಣಿಯಿಂದ ಗಾಂಧಿಜೀ ಖಂಡಿಸಿದ್ದರು. ಅದು ಹಿಂಸೆ; ಹಿಂಸೆಯು ಸರ್ವನಾಶಕಾರಿ, ಮಾತ್ರವಲ್ಲ, ಅವ್ಯವಹಾರ್ಯ ಕೂಡಾ. ಬ್ರಿಟಿಷರು ತಾವು ಭಾರತವನ್ನು ಬಿಟ್ಟು ಹೋಗುವೆವೆಂದು ಘೋಷಿಸಿದ್ದಾರೆ. ನೌಕಾ ಪಡೆಯ ಕೆಲಸಗಾರರಿಗೆ ತಮ್ಮ ಸ್ಥಿತಿ ಅಸಹನೀಯವೆನ್ನಿಸಿದರೆ ಅವರು ಕೆಲಸವನ್ನೆ ಬಿಡಬೇಕು ಹೊರತು ಹೀಗೆ ಮಾಡುವದಲ್ಲ" ಎಂದು ಆಗ್ರಹದಿಂದ ಹೇಳಿಕೊಂಡಿದ್ದರು. ಅದನ್ನು ಖಂಡಿಸಿ ಶ್ರೀಮತಿ ಅರುಣಾ ಅಸ'ಫ್ ಅಲಿಗಳು ಕೊಟ್ಟ ಹೇಳಿಕೆಯನ್ನೂ ಆ ಖಂಡನೆಗೆ ಗಾಂಧಿಜೀಯಿತ್ತ ಉತ್ತರದ ಕೆಲವು ಭಾಗವನ್ನೂ ಇಲ್ಲಿ ಕೊಡಲಾಗಿದೆ. ಸದ್ಯ ರಾಷ್ಟ್ರದಲ್ಲಿದ್ದಿರುವ ನೂತನ ಸ್ಫೂರ್ತಿ ಮತ್ತು ಸ್ಥಿತಿಗೆ ಈ ವಾಗ್ವಾದವು ನಿಕಟ ಸಂಬಂಧವುಳ್ಳದ್ದಾಗಿದೆ. ಪ್ರತಿಯೊಬ್ಬ ಹಿಂದೀಯನಲ್ಲೂ ಈ ಕುರಿತು ಒಂದಲ್ಲೊಂದು ಅಭಿಪ್ರಾಯವೀಗ ಮೊಳೆತಿದೆ. ಈ ವಿಚಾರ ಮಂಥನಕ್ಕೆ ಗಾಂಧೀ-ಅರುಣಾ ವಾಗ್ವಾದ ಸಹಾಯವಾಗಬಹುದೆಂಬುದರಿಂದ ಅದಿಲ್ಲಿ ಬಂದಿದೆ.

ಶ್ರೀಮತಿ ಆಸಫ್ ಅಲಿಯ ಹೇಳಿಕೆ

"ಹಿಂಸೆಯ ಉದ್ದೇಶದಿಂದ ಈ ರೀತಿ ಹಿಂದೂ ಮುಸಲ್ಮಾನರೊಟ್ಟಾಗಿರುವದು ಅಪವಿತ್ರವೆಂದ ಗಾಂಧಿಜೀಯ ಮಾತಿನಿಂದ ನಾನು ಅತ್ಯಂತ ಖೇದಗೊಂಡಿದ್ದೇನೆ. ನಾನಾದರೋ ವಿಧಾಯಕ ರಂಗದಲ್ಲಿ ಹಿಂದೂ ಮುಸ್ಲಿಮರನ್ನು ಒಟ್ಟು ಮಾಡುವ ಬದಲಿಗೆ ಈ ರೀತಿ ಗಡಿ ಪಾಳಯದಲ್ಲೇ ಅವರ ಒಗ್ಗಟ್ಟನ್ನು ಸಾಧಿಸಲಿಚ್ಛಿಸುವವಳು. ರಾಜಕೀಯ ಅಥವಾ ಇತರ ರಿಯಾಯತಿಗಳನ್ನಾಧರಿಸಿ ಆಗುವ ಒಗ್ಗಟ್ಟಿಗಿಂತಲೂ ಇಂತಹ ಒಗ್ಗಟ್ಟೇ ಉಜ್ವಲವಾದುದು. ಹಿಂದೂ-ಮುಸ್ಲಿಂ ಐಕ್ಯವೆಂಬುದು ಯಥಾರ್ಥ ಮತ್ತು ಚಿರಸ್ಥಾಯಿಯಾಗಬೇಕಾದರೆ ಅದಕ್ಕೆ ಬ್ರಿಟಿಷ್ ವಿರೋಧ ರಂಗವೇ ರಂಗವಾಗಿರಬೇಕು ಹೊರತು ಪತ್ರಿ ಹಾಕಿ ಜೋಡಿಸಿದ ಒಗ್ಗಟ್ಟು ಒಗ್ಗಟ್ಟಾಗದು

ಇದಕ್ಕರ್ಥವಿಲ್ಲ

ತಮ್ಮ ಪರಿಸ್ಥಿತಿಯು ಕರುಣಾಜನಕವೆಂದು ಕಂಡು ಬಂದರೆ ನೌಕಾ ಪಡೆಯ ಕೆಲಸಗಾರರು ರಾಜಿನಾಮೆ ಕೊಡಬೇಕೆಂಬ ಗಾಂಧಿಜೀಯ ಮಾತಿನ ಅರ್ಥ ನನಗಾಗುವದಿಲ್ಲ. ಹಾಗೆ ಮಾಡುವದೆಂದರೆ ಅವರು ತಮ್ಮ ಏಕಮಾತ್ರ ಜೀವನೋಪಾಯವನ್ನು ತ್ಯಜಿಸುವದೆಂದೇ ಅರ್ಥ-ಮೇಲಾಗಿ ಅವರೊಂದು ತತ್ವಕ್ಕಾಗಿ ಹೋರಾಡುತಿದ್ದಾರೆ. ಅವರು ರಾಜೀನಾಮೆ ಕೊಟ್ಟಲ್ಲಿ ನಿರುದ್ಯೋಗದೀ ಕಾಲದಲ್ಲಿ ಅವರ ಸ್ಥಾನಗಳಿಗೆ ಸೇರಿಕೊಳ್ಳಲು ನೂರಾರು ಮಂದಿ ತಯಾರಿದ್ದಾರೆ. ಹಾಗೆ ಸೇರಿಕೊಳ್ಳುವವರಾದರೂ ಅದೇ ಪರಿಸ್ಥಿತಿಗೆ ಬಲಿಬೀಳಬೇಕಾಗುವದು ಹೀಗಾಗಿ ಈ ನೌಕಾ ಕೆಲಸಗಾರರು ಏನೊಂದನ್ನೂ ಸಾಧಿಸಿದಂತಾಗುವದಿಲ್ಲ.

ಆಳರಸರು ಹೊರಡುತಿದ್ದಾರೇನು?

ಹಿಂದೀ ಆಳ್ವಿಕೆಗೆ ಅವಕಾಶಮಾಡಿಕೊಡಲು ಹಿಂದುಸ್ಥಾನವನ್ನು ಬಿಟು ಹೋಗುವ ತಮ್ಮ ಬಯಕೆಯನ್ನು ಆಳರಸರು ಜಾಹೀರುಮಾಡಿದ್ದಾರೆಂದು ಗಾಂಧಿಜೀಯನ್ನುತ್ತಾರೆ. ಇದು ವಸ್ತುಸ್ಥಿತಿಗೊಗ್ಗುವ ಮಾತಲ್ಲ. ಆಜಾದ್ ಹಿಂದ್ ಮತ್ತು ನೇತಾಜೀ ದಿನಗಳು, ಅಂತೆಯೇ ಇಂದಿನ ನೌಕಾಗೊಂದಲಗಳ ಅವರ ಮರ್ಜಿಯೇ ಬಿಟ್ಟು ಹೋಗುವ ಪೂರ್ವ ಸೂಚನೆಯೆಂದಾದರೆ, ನಿಜಕ್ಕೂ ಅಧಿಕಾರ ತ್ಯಾಗದ ಭಯಂಕರ ರೀತಿಯದು. ತ್ಯಾಗಪಥವು ಸನ್ಯಾಸಿಯ ಹಾದಿ; ಬ್ರೆನ್‌ಗನ್ ಮತ್ತು ಗುಂಡುಗಳ ಹಾದಿ ಅದಲ್ಲ. ಆದ್ದರಿಂದ ಗಾಂಧಿಜೀಯ ನಂಬಿಕೆ ಸರಿಯಾದುದೆಂದು ನನಗನ್ನಿಸುವದಿಲ್ಲ. ಹಿಂಸೆ ಅಥವಾ ಅಹಿಂಸಾ ವಿಧಾನಗಳ ಮೇಲೀಗ ಜನರಿಗೆ ವಿಶೇಷ ಲಕ್ಷ್ಯವಿಲ್ಲ. ದಬ್ಬಾಳಿಕೆಯನ್ನಿದಿರಿಸುವದೊಂದೇ ಅವರಿಗ[illegible]ೀಗಾಗಿನ ಅವರೀಗ ಹೇಡಿಗಳಾಗಿಲ್ಲ. ಹಿಂದೆಂದೂ ಎತ್ತೀ ಹೊಡೆತಗಳನ್ನಿದಿರಿಸಿಂದ ಸಮೂಹವೆಯಲ್ಲಿ ಅವರೀಗ ಗುಂಡನ್ನಿದಿರಿಸುತಿದ್ದಾರೆ. ತಮ್ಮ ಪ್ರತಿಭಟನೆಯಲ್ಲಿ ಅವರು ಸ್ವಲ್ಪಾಂಶ ಕಠೋರತೆಯನ್ನು ಅಂಗೀಕರಿಸಿದ್ದಾರೆ. ಅವರು ಸಾಯುತಿದ್ದಾರೆ, ಆದರೆ ಅದಕ್ಕಾಗಿ ಗೋಣಗುವಂತಿಲ್ಲ 1942 ಜನತೆಗೊಂದು ಹೊಸ ಜೀವ ಬರಿಸಿದೆ."

ಗಾಂಧಿಜೀಯ ಉತ್ತರ

"ಬೊಂಬಾಯ ಘಟನೆಗಳ ಕುರಿತು ನಾನಿತ್ತ ಹೇಳಿಕೆಯನ್ನು ಧೈರ್ಯದಿಂದ ಖಂಡಿಸಿದ ಶ್ರೀಮತಿ ಅರುಣ ಅಸಫ್ ಅಲಿಯನ್ನು ನಾನು ಅಭಿನಂದಿಸುತ್ತೇನೆ. ನನಗೆ ಹುಟ್ಟಿದವಳಲ್ಲವಾದರೂ, ಓರ್ವ ಬಂಡಾಯಗಾತಿಯಿದ್ದರೂ ಆಕೆ ನನ್ನ ಮಗಳು. ಆದರೂ ಆಕೆ, ನಾಕಷ್ಟು ಅಧಿಕ ಸಂಖ್ಯೆಯಲ್ಲಿರುವ ಗುಪ್ತಗಾಮಿ ಕೆಲಸಗಾರರ ಪ್ರತಿನಿಧಿಯಾಗಿ ಇಲ್ಲದಿರುತಿದ್ದರೆ ನಾನವಳ ಈ ಖಂಡನೆಯನ್ನು ಗಣಿಸುತಿದ್ದಿಲ್ಲ. ಅವಳು ಅಡಗಿಕೊಂಡಿದ್ದ ಕಾಲದಲ್ಲೂ ಅವಳೊಡನೆ ಹಲವು ಬಾರಿ ಮಾತನಾಡುವ ಸುಯೋಗ ನನಗೊದಗಿದ್ದಿತು. ನಾನವಳ ಶಕ್ತಿ ಉಜ್ವಲ ರಾಷ್ಟ್ರ ಪ್ರೇಮ ಮತ್ತು ಧೈರ್ಯಕ್ಕೆ ಮೆಚ್ಚಿದ್ದೆ. ಆದರೆ ನನ್ನ ಮೆಚ್ಚುಗೆ ಹೋಗುವದು ಅಷ್ಟು ದೂರಕ್ಕೆ ಮಾತ್ರ. ನನಗವಳ ಅಂತರ್ಗಾಮಿತ್ವ ಸಮ್ಮತವಾಗಲಿಲ್ಲ. ಯಾವುದೊಂದು ಗುಪ್ತಗಾಮಿ ಚಳವಳವನ್ನೂ ನಾನು ಮೆಚ್ಚುವವನಲ್ಲ. ಮಿಲಿಯಾವಧಿ ಮಂದಿಗೆ ಅಂತರ್ಗಾಮಿಗಳಾಗಲು ಅಸಾಧ್ಯವೆಂದು ನನಗೆ ಗೊತ್ತು; ಮಿಲಿಯಾವಧಿ ಹಾಗಾಗುವದು ಆಗತ್ಯವೂ ಅಲ್ಲ.

ಹೀಗೆ ಸ್ವರಾಜ್ಯ ಸಾಧ್ಯವೆ?

ಆರಿಸಿ ತೆಗೆದ ಕೆಲವರು ತಮ್ಮ ಗುಪ್ತ ಚಟುವಟಿಕೆಗಳಿಂದಲೇ ಮಿಲಿಯಾವಧಿ ಮಂದಿಗೆ ಸ್ವರಾಜ್ಯ ತರುವೆವೆಂದು ನಟನೆ ಮಾಡಬಹುದು. ಇದು ಚಮುಚಟುಂಡ ಉಣ್ಣಿಸುವದಲ್ಲವೇನು? ಎಲ್ಲರಿಗೂ ಅನುಕರಿಸಲು ಸಾಧ್ಯವಿರುವದೆಂದರೆ ಬಹಿರಂಗ ಯುದ್ಧಾಹ್ವಾನ ಮತ್ತು ಬಹಿರಂಗಾಚರಣೆಗಳನ್ನು ಮಾತ್ರ. ನಿಜವಾದ ಸ್ವರಾಜ್ಯವು ಪ್ರತಿಯೊಬ್ಬ ಗಂಡು, ಹೆಣ್ಣು ಮತ್ತು ಮಗುವಿಗೂ ಮುಂದಟ್ಟಾಗಬೇಕು. ಈ ವಿಧಾನಕ್ಕಾಗಿ ದುಡಿಯುವದೇ ನಿಜವಾದ ಕ್ರಾಂತಿ. ಹಿಂದುಸ್ಥಾನವು ಲೋಕದ ಎಲ್ಲಾ ದಳಿತ ಜನಾಂಗಗಳಿಗೆ ಒಂದು ಮಾದರಿಯಂತಿದೆ ಯಾಕೆಂದರೆ ಅದು ತನ್ನ ಆಕ್ರಮಣಗಾರರನ್ನು ಎಳ್ಳಷ್ಟು ಜಖಂಗೊಳಿಸದೆ, ಎಲ್ಲರಿಂದಲೂ ತ್ಯಾಗವನ್ನಪೇಕ್ಷಿಸುವ, ಬಹಿರಂಗವಾದ ನಿರಾಯುಧ ಪ್ರಯತ್ನ ಕೈಗೊಂಡಿದೆ. ನಿಶ್ಯಸ್ತ್ರವಾದ ಜಾಹೀರು ರಣಾಕ್ಕಲ್ಲದೆ ಭಾರತದ ಮಿಲಿಯಾವಧಿ ಮಂದಿ ಎದ್ದು ನಿಲ್ಲುವಂತಿಲ್ಲ.

ಬ್ರಿಟಿಷ್ ಸಚಿವ ಸಮಿತಿಯ ಸಹಜಾಭಿನಯ

ಬ್ರಿಟಿಷ್ ಜಾಹೀರು ನಾಮೆಗಳಲ್ಲಿ ಅಪನಂಬಿಕೆಯಿಟ್ಟು, ಭಾವೀ ಜಗಳವನ್ನು ಊಹಿಸಿಕೊಳ್ಳುವದರಲ್ಲಿ ನಿಜಕ್ಕೂ ದೂರದೃಷ್ಟಿಯ ಅಭಾವವಿದೆ. ಅಧಿಕಾರೀ ಸಮಿತಿಯು ಒಂದು ಮಹಾ ರಾಷ್ಟ್ರವನ್ನೇ ವಂಚಿಸಲಿಕ್ಕಾಗಿ ಬರುತ್ತಿದೆಯೇನು? ಹಾಗೆ ಭಾವಿಸಿಕೊಳ್ಳುವದು ಪುರುಷತ್ವವೂ ಅಲ್ಲ; ಸ್ತ್ರೀತ್ವವೂ ಅಲ್ಲ. ನಾವು ಕಾಯುತ್ತಾ ನಿಲ್ಲುವದರಿಂದಾಗುವ ನಷ್ಟವೇನು? ಬ್ರಿಟಿಷ್ ಹೇಳಿಕೆಗಳು ವಿಶ್ವಾಸಾರ್ಹವಲ್ಲವೆಂಬುದನ್ನು ಆ ಅಧಿಕಾರೀ ಸಮಿತಿಯು ಕೊನೆಯ ಬಾರಿಗೊಮ್ಮೆ ಸಿದ್ಧಮಾಡಿ ಬಿಡಲಿ. ನಂಬಿಕೆಯಿಡುವದರಿಂದ ರಾಷ್ಟ್ರಕ್ಕೆ ಲಾಭವಿದೆ. ವಂಚನೆಗೊಳಗಾದವನು ಸರಿಯಾಗಿ ಹೊಂಗಟ್ಟಿದಲ್ಲಿ ವಂಚಕನಿಗೇನೇ ನಷ್ಟ. ನಾವು ಇದ್ದಂತೆಯೇ ಪರಿಸ್ಥಿತಿಯನ್ನು ಇದಿರಿಸೋಣ. ಮುಂಬರುವ ಸಮಿತಿಯು ಸ್ನೇಹಮಯೀ ಸಮಿತಿಯೆಂದು ಹೇಳಿಕೊಳ್ಳುತ್ತಿದೆ. ಆದ್ದರಿಂದ ಅವರು ವಿಧಾಯಕ ರೀತಿಯ ವಿಮೋಚನೆಯ ಶೋಧಮಾಡುವರೆಂದೇ ಅರಿಯನ್ನನುಭವಿಸೋಣ. ಸಮಸ್ಯೆಯೇನೋ ಬಿಗಿಯಾದುದಿದೆ; ಪ್ರಾಯಶಃ ನಾಗರಿಕರೆಂದೂ ಇದಿರಿಸಿರಲಾರದಷ್ಟು ಕಡುತರ ಬಿಗುಪಿದೆ. ಆ ಸಮಿತಿಯು ಒಡೇಯಲಾಗದ ಒಗಟೆಯನ್ನೇ ಮುಂದೊಡ್ಡುವದು ಸಂಭವನೀಯ. ಅವರದಿರು ಅಂತಹ ಹೀನಸ್ಥಿತಿಯಿದೆ. ತಮ್ಮ ಸ್ವನಿರ್ಮಿತ ಸಂಕಷ್ಟಗಳ ನಡುವೆ ಒಂದು ಯೋಗ್ಯ ಹಾದಿ ಕಂಡುಕೊಳ್ಳಬೇಕೆಂಬ ಯಥಾರ್ಥೇಚ್ಛೆ ಅವರಿಗಿದ್ದಲ್ಲಿ, ಅಲ್ಲೊಂದು ಹಾದಿಯಿದೆ ಎಂಬ ಕುರಿತು ನನಗೆ ಅನುಮಾನವಿಲ್ಲ. ಆದರೆ ರಾಷ್ಟ್ರವೂ ತನ್ನಾಟವಾಡಬೇಕಾಗಿದೆ. ಅದು ಹಾಗೆ ಮಾಡಿದಲ್ಲಿ-ಕೊನೆಯ ಪಕ್ಷ ಸದ್ಯದ ಮಟ್ಟಿಗಾದರೂ, ತನ್ನಗಡಿ ಡೇರೆಯನ್ನದು ಬಿಡಬೇಕಾದೀತು. ತಮ್ಮ ಧೈರ್ಯ ಮತ್ತು ತ್ಯಾಗವು ಅವರಿಗಿತ್ತಿರುವ ಶಕ್ತಿಯನ್ನು ಅರುಣ ಮತ್ತು ಆಕೆಯ ಸ್ನೇಹಿತರು ಬುದ್ಧಿವಂತಿಕೆಯಿಂದ ಉಪಯೋಗಿಸಬೇಕೆಂದು ನನ್ನ ವಿಜ್ಞಾಪನೆ.

ನಾವಿಕರ ಕೃತ್ಯ ದುರ್ಬೋಧೆಯಿಂದಾದುದು.

ಶರಣಾಗಬೇಕೆಂಬ ಸರ್ದಾರರ ಸಲಹೆಯನ್ನು ನೌಕಾ ಪಡೆಯವರು ಅಂಗೀಕರಿಸಿದುದು ಅತ್ಯಂತ ಸಮಾಧಾನಕರ ಸಂಗತಿ ಅವರು ತಮ್ಮ ಮಾನವನ್ನು ಬಿಟ್ಟುಕೊಟ್ಟಿದಲ್ಲ. ನನಗೆ ತಿಳಿದ ಮಟ್ಟಿಗೆ ಅವರು ಎಬ್ಬಿಸಿದ ಬಂಡಾಯವೆಂಬುದು ದುರ್ಬೋಧೆಯಿಂದಾದುದು. ತಮ್ಮ ಸಂಕಷ್ಟಗಳಿಗಾಗಿ ಕೃತಕವಿರಲಿ, ನಿಜವಾದುದೇ ಇರಲಿ-ಅದನ್ನು ಹೂಡಿದ್ದಾಗಿದ್ದರೆ ತಮಗೊಪ್ಪಿಗೆಯ

(೬ನೇ ಪುಟ ನೋಡಿರಿ)

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. **ಬಾಬು ಶೆಟ್ಟಿ**, ಪ್ರೊಪ್ರೈಟರ್.

Indra Bhavan Coffee Hotel,

Balmatta Road, Mangalore.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ,

ರಥಬೀದಿ, ಉಡುಪಿ.

THE MADRAS ALIYASANTHANA BILL

ಮದ್ರಾಸ್ ಅಳಿಯ ಸಂತಾನ ಮಸೂದೆ.

ಮಹಾಶಯರೇ,

ಕಳೆದ ಡಿಶಂಬರ ತಾ. 23ರಲ್ಲಿ ಮುಲ್ಕಿಯಲ್ಲಿ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು ಜರಗಿದಾಗ ಅಳಿಯಸಂತಾನ ಕಟ್ಟಿನಲ್ಲಿ ಬಹುಕಾಲದಿಂದ ಅಪೇಕ್ಷಿಸಲ್ಪಟ್ಟಿರುವ ಕೆಲವು ಸುಧಾರಣೆಗಳು ಆಗುವಂತೆ ಅಗತ್ಯವಿರುವ ಕಾನೂನು ಮಾಡಿಸಬೇಕಾಗಿ ನಿರ್ಣಯವಾಯಿತು. ಈ ವಿಷಯ ಸಾರ್ವಜನಿಕ ಅಭಿಪ್ರಾಯಪಡೆದು ಅಗತ್ಯವಿರುವ ಬದಲಾವಣೆಗಳನ್ನು ಸೂಚಿಸಲು ಒಂದು ಕಮಿಟಿಯು ನೇಮಕವಾಗಿರುತ್ತದೆ. 1939ನೇ ಇಸವಿ ಮೇ 23ರಲ್ಲಿ ಅಳಿಯಕಟ್ಟನ್ನಾಚರಿಸುವ ಸಮಾಜಗಳವರ ಸುಧಾರಣಾ ಪರಿಷತ್ತು ನೇಮಿಸಿದ ಕಮಿಟಿಯವರಿಂದ ತಯಾರಿಸಲ್ಪಟ್ಟಿರುವ ಬಿಲ್ಲಿನ ಮಸೂದೆಯೊಂದನ್ನು ಇದರೊಂಗೆ ಕಳುಹಿಸಿಯದೆ ಅಳಿಯಕಟ್ಟಿನ ಸುಧಾರಣೆಗಳ ಕುರಿತು ಪರ್ಯಾಲೋಚಿಸುವರೆ ಇದನ್ನು ಆಧಾರವಾಗಿ ಇಟ್ಟುಕೊಂಡು ತಮ್ಮ ಅಭಿಪ್ರಾಯವನ್ನು ಬರೆದು ಕೆಳಗೆ ಸಹಿಮಾಡಿದವರಿಗೆ 15-3 1946ರ ಒಳಗೆ ದಯವಿಟ್ಟು ಕಳುಹಿಸೋಣಾಗಲಿ.

ಕಾರ್ನಾಡು ಸದಾಶಿವರಾವ್ ರೋಡ್ ಮಂಗಳೂರು, ತಾ 4-2 1946

ಕೆ ಸದಾನಂದ ಹೆಗ್ಗಡೆ.
ಸೆಕ್ರಟರಿ,
ಬಂಟರ ಯಾನೆ ನಾಡವರ ಸಂಘ

ಮಸೂದೆಯ ಉದ್ದೇಶ

ಅಳಿಯಸಂತಾನ ಕಾನೂನನ್ನು ಅನುಸರಿಸುವವರಿಗೆ ಅನ್ವಯಿಸುವ ಮದುವೆ, ಮರಣಶಾಸನರಹಿತ ವ್ಯತಸ ವಾರಿಸ್ದಾರಿಕೆ, ಕುಟುಂಬದ ಆಡಳಿತ, ಮತ್ತು ಆಸ್ತಿ ವಿಭಾಗ ಸಂಬಂಧವಾದ ಕಾನೂನನ್ನು ಕೆಲವಟ್ಟಿಗೆ ವಿವರಿಸುವುದು ಮತ್ತು ತಿದ್ದುಪಡಿ ಮಾಡುವುದು ಈ ಮಸೂದೆಯ ಉದ್ದೇಶ.

ಅಳಿಯ ಸಂತಾನ ಕಾನೂನನ್ನು ಅನುಸರಿಸುವವರಿಗೆ ಅನ್ವಯಿಸುವ ಮದುವೆ, ಮರಣಶಾಸನರಹಿತ ವ್ಯತಸ ವಾರಿಸ್ದಾರಿಕೆ, ಕುಟುಂಬದ ಆಡಳಿತ, ಮತ್ತು ಆಸ್ತಿ ವಿಭಾಗ ಸಂಬಂಧವಾದ ಕಾನೂನನ್ನು ಕೆಲವಟ್ಟಿಗೆ ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ ಅದಕ್ಕಾಗಿ ಈ ಕೆಳಗಣ ಕಾನೂನನ್ನು ಮಾಡಲಾಗಿದೆ.

I ಪ್ರಸ್ತಾವನೆ.

1. (i) ಈ ಮಸೂದೆಯು 1939ನೇ ಇಸವಿಯ ಮದ್ರಾಸ್ ಅಳಿಯ ಸಂತಾನ ಮಸೂದೆಯೆಂದು ಕರೆಯಲ್ಪಡುವುದು. (ii) (a) ಮದ್ರಾಸ್ ಪ್ರಾಂತದೊಳಗೆ ಅಳಿಯ ಸಂತಾನ ಕಾನೂನನ್ನನುಸರಿಸುವ ಎಲ್ಲಾ ಹಿಂದುಗಳಿಗೆ ಮತ್ತು ಜೈನರಿಗೆ ಈ ಮಸೂದೆಯು ಅನ್ವಯಿಸುವುದು (b) ಮದ್ರಾಸ್ ಪ್ರಾಂತದ ಹೊರಗಿರುವ ಅಳಿಯ ಸಂತಾನ ಕಾನೂನನ್ನು ಅನುಸರಿಸುವ ಎಲ್ಲಾ ಹಿಂದುಗಳ ಮತ್ತು ಜೈನರ ಸದ್ರಿ ಪ್ರಾಂತದೊಳಗಣ ಆಸ್ತಿಗಳಿಗೂ ಈ ಮಸೂದೆಯು ಅನ್ವಯಿಸುವುದು, (iii) ಈ ಮಸೂದೆಯ ಪರಿಚ್ಛೇದ IVರ ಪ್ರಕರಣಗಳು ಜೈನರಿಗೆ ಲಗಾವಾಗಲಾರವು.

2. 1896ನೇ ಇಸವಿಯ IVನೇ ಮಲಬಾರು ಮದುವೆ ಕಾನೂನಿನ ಈ ವರೇಗೆ ರದ್ದಾಗದ ಅಂಶವನ್ನು ಈ ಮೂಲಕ ರದ್ದು ಪಡಿಸಲಾಗಿದೆ.

3. (a) ಈ ಮಸೂದೆಯ ಮೇರೆಗೆ ಅಳಿಯ ಸಂತಾನವೆಂದರೆ ಸ್ತ್ರೀ ಸಂತತಿ ಪರಂಪರೆಯಾಗಿದೆ ಆದರೆ ಮರುಮಕ್ಕತ್ತಾಯಮ್ ಎಂಬ ಕರೆಯಲ್ಪಡುವ ಸಂತತಿ ಪರಂಪರೆಯು ಇದರಲ್ಲಿ ಸೇರಿರುವುದಿಲ್ಲ (b) ಕಲೆಕ್ಟರರೆಂದರೆ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರು ಮತ್ತು ಈ ಕಾನೂನಿನ ಮೇರೆಗೆ ಕಲೆಕ್ಟರರ ಅಧಿಕಾರ ನಡಿಸಲು ಅವರಿಂದ ಅಧಿಕೃತರಾಗುವ ರೆವಿನ್ಯೂ ಡಿವಿಜನಲ್ ಆಫೀಸರರು. (c) ಯಜಮಾನನೆಂದರೆ, ಕಾನೂನು, ಪದ್ಧತಿ, ಕಂಟ್ರಾಕ್ಟು, ಕೋರ್ಟು ಡಿಕ್ರಿ ಅಥವಾ ಇನ್ನಾವುದೇ ರೀತಿಯಲ್ಲಿ ಕುಟುಂಬದ ಆಸ್ತಿಯ ಆಡಳಿತದ ಅಧಿಕಾರ ಹೊಂದಿರುವ ಕುಟುಂಬ ಯಾ ಕವರಿನ ಹಿರಿಯ ಅಥವಾ ಇನ್ನಾರಾದರೂ ಗಂಡು ಯಾ ಹೆಣ್ಣು ಮೆಂಬರ. (d) ಕವರು, ಶಬ್ದವು ಸ್ತ್ರೀ ಸಂಬಂಧವಾಗಿ ಉಪಯೋಗಿಸಲ್ಪಟ್ಟಲ್ಲಿ ಸದರಿ ಸ್ತ್ರೀ, ಅವಳ ಮಕ್ಕಳು ಮತ್ತು ಸ್ತ್ರೀ ಸಂತತಿ ಪರಂಪರೆಯಾಗಿ ಅವಳ ಎಲ್ಲಾ ವಂಶಸ್ಥರಿಂದ ಕೂಡಿದ ತಂಡ (e) ಕವರು ಶಬ್ದವು ಗಂಡಸಿನ ಸಂಬಂಧವಾಗಿ ಉಪಯೋಗಿಸಲ್ಪಟ್ಟಲ್ಲಿ ಆ ಗಂಡಸಿನ ತಾಯಿಯ ಕವರು, (f) ಕುಟುಂಬವೆಂದರೆ ಅಳಿಯ ಸಂತಾನ ಕಾನೂನಿಗೊಳಗಾಗಿ ಆಸ್ತಿಯಲ್ಲಿ ಸಮಷ್ಟಿ ಹಕ್ಕಿರುವ ಅವಿಭಕ್ತ ಕುಟುಂಬಕ್ಕೆ ಸೇರಿರುವ ವ್ಯಕ್ತಿಗಳ ಸಮೂಹ. (g) ಪ್ರಾಯಸ್ಥನೆಂದರೆ 18 ವರ್ಷ ಪ್ರಾಯವಾಗಿರುವ ವ್ಯಕ್ತಿ. (h) ಅಪ್ರಾಯಸ್ಥನೆಂದರೆ 18 ವರ್ಷ ಪ್ರಾಯವಾಗದ ವ್ಯಕ್ತಿ, (i) ನಿಸ್ಸಂತತಿ ಕವರೆಂದರೆ

(i) ಕೇವಲ ಗಂಡಸರಿರುವಂಥಾದ್ದು (ii) ಅಥವಾ ಜೀವಂತ ಸ್ತ್ರೀ ಸಂತತಿ ಇಲ್ಲದೆ 50 ವರ್ಷ ಪ್ರಾಯದಾಟಿರುವ ಸ್ತ್ರೀಯರಿರುವಂಥಾದ್ದು. (iii) ಅಥವಾ ಗಂಡಸರು ಮತ್ತು ಜೀವಂತ ಸ್ತ್ರೀ ಸಂತತಿ ಇಲ್ಲದ 50 ವರ್ಷ ದಾಟಿದ ಸ್ತ್ರೀಯರಿರುವಂಥಾದ್ದು (iv) ಅಥವಾ ಕುಟುಂಬದ ಆಸ್ತಿಯಲ್ಲಿ ಪಾಲು ಪಡೆದಿರುವ ಕೊನೆಯ ಸ್ತ್ರೀ ಮೆಂಬರಳ ಮರಣದ ಕಾಲದಲ್ಲಿ ಸ್ತ್ರೀ ಸಂತತಿ ಇಲ್ಲದಿರುವಂಥಾದ್ದು.

(j) ಸಂತತಿ ಕವರೆಂದರೆ ನಿಸ್ಸಂತತಿಯಲ್ಲದ ಕವರು (k) ನಿಯಮಿತವಾದುದೆಂದರೆ ಈ ಆಕ್ಟಿನ ಮೇರೆಗೆ ಮಾಡಿದ ಕ್ರಮಗಳಿಂದ ನಿಯಮಿತವಾದುದು

II ಮದುವೆ ಮತ್ತು ಅದರ ಸಿಂಧುತ್ವ

4 (i) ಅಳಿಯ ಸಂತಾನ ಸ್ತ್ರೀಯು ಸ್ವಜಾತಿಯ ಪುರುಷನೊಡನೆ ಮಾಡಿಕೊಳ್ಳುವ ದಾಂಪತ್ಯವು ಎಲ್ಲಾ ಉದ್ದೇಶಗಳಿಗೂ ಸಿಂಧುವಾದ ಮದುವೆಯೆಂದು ಪರಿಗಣಿಸಲ್ಪಡುವುದು. (a) ಆದರೆ ದಂಪತಿಗಳು ತಮ್ಮ ಜಾತಿಯ ಸಂಪ್ರದಾಯ ಅಥವಾ ರೂಢಿಯು ನಿಷೇಧಿಸುವ ಬಂಧುತ್ವದ ಅಥವಾ ನೆಂಟಸ್ತಿಕೆಯ ಸಂಬಂಧವುಳ್ಳವರಾಗಕೂಡದು. (b) (i) ಈ ಮಸೂದೆಯು ಜ್ಯಾರಿಗೆ ಬರುವ ಮೊದಲು ಬಳಕೆಯಲ್ಲಿದ್ದು ಮತ್ತು ಜ್ಯಾರಿಗೆ ಬರುವ ತಾರೀಕಿನಲ್ಲಿ ಆಚರಣೆಯಲ್ಲಿರುವ ದಂಪತಿಗಳ ಜಾತಿ ಸಂಪ್ರದಾಯಗಳ ಮೇರೆಗೆ ಜಾಹೀರಾಗಿ ಮದುವೆಯು ನಡೆಸಲ್ಪಡಬೇಕು (ii) ದಂಪತಿಗಳಲ್ಲಿ ಒಬ್ಬ ಅಥವಾ ಇಬ್ಬರೂ ಅಪ್ರಾಯಸ್ಥರಿದ್ದಲ್ಲಿ ಅಂತಹ ಅಪ್ರಾಯಸ್ಥರ ರಕ್ಷಕ ಯಾ ರಕ್ಷಕರ ಸಮ್ಮತಿಯ ಮೇರೆಗೆ ಈ ಕಾನೂನು ಜ್ಯಾರಿಗೆ ಬರುವ ತಾರೀಕಿನಲ್ಲಿ ಇಲ್ಲವೆ ಅನಂತರ ಜಾತಿ ಸಂಪ್ರದಾಯ ಪ್ರಕಾರ ಜಾಹೀರಾಗಿ ನಡೆಸಲ್ಪಡಬೇಕು. (iii) ಈ ಕಾನೂನು ಜ್ಯಾರಿಗೆ ಬರುವ ಮೊದಲು 1896ನೇ ಮಲಬಾರು ಮದುವೆ ಕಾನೂನು ಮೇರೆಗೆ ರಜಿಸ್ಟ್ರಿಯಾದ ಮದುವೆಯಿದ್ದು ಆ ತಾರೀಕಿನಲ್ಲಿ ಊರ್ಜಿತವಿರುವದಾಗಬೇಕು 4. (ii) ಉಪಪ್ರಕರಣ (i)ರ ಮೇರೆಗೆ ಸಿಂಧುವಾಗುವ ಅಪ್ರಾಯಸ್ಥರೊಳಗಣ ಅಥವಾ ಪ್ರಾಯಸ್ಥ ಮತ್ತು ಅಪ್ರಾಯಸ್ಥರೊಳಗಣ ಮದುವೆಯು, ಸದರಿ ಅಪ್ರಾಯಸ್ಥನ ಯಾ ಅಪ್ರಾಯಸ್ಥರ ರಕ್ಷಕ ಯಾ ರಕ್ಷಕರ ಒಪ್ಪಿಗೆ ಪಡಕೊಳ್ಳಲಿಲ್ಲೆಂಬ ಕಾರಣದಿಂದಲೇ ಅಸಿಂಧುವಾಗಲಾರದು 5. ಪ್ರಕರಣ 4ರ ಮೇರೆಗೆ ಸಿಂಧುವಾಗಿರುವ ಮದುವೆಯೊಂದನ್ನು ಮೊದಲು ಮಾಡಿಕೊಂಡಿದ್ದು, ಈ ಕಾನೂನು ಜ್ಯಾರಿಗೆ ಬರುವ ತಾರೀಕಿನಲ್ಲಿ ಅಥವಾ ಅನಂತರ ಗಂಡನಾಗಲಿ ಹೆಂಡತಿಯಾಗಲಿ ಇನ್ನೊಂದು ಮದುವೆ ಮಾಡಿಕೊಂಡಲ್ಲಿ ಅದು ಅಸಿಂಧುವಾಗುವುದು 6. ಪ್ರಕರಣ 4ರ ಮೇರೆಗೆ ಸಿಂಧುವಾದ ಮದುವೆಯನ್ನು ಈ ಕೆಳಗಣ ರೀತಿಯಲ್ಲಿ ರದ್ದುಮಾಡಬಹುದು. (a) ದಂಪತಿಗಳು ತಾವೇ ರಿಜಿಸ್ತ್ರಿ ದಾಖಲೆ ಮೂಲಕ ರದ್ದು ಮಾಡಿಕೊಳ್ಳಬಹುದು. (b) ಅಥವಾ ಈ ಕೆಳಗೆ ನಮೂದಿಸಲ್ಪಟ್ಟ ರೀತಿಯಲ್ಲಿ ಕೋರ್ಟು ಹುಕುಮಿನ ಮೇರೆಗೆ ರದ್ದು ಮಾಡಿಕೊಳ್ಳಬಹುದು. ಆದರೆ ಗಂಡ ಹೆಂಡರಲ್ಲಿ ಒಬ್ಬ ಅಥವಾ ಇಬ್ಬರೂ ಅಪ್ರಾಯಸ್ಥರಿದ್ದ ಪಕ್ಷದಲ್ಲಿ ಅವರು ಪ್ರಾಯಕ್ಕೆ ಬರುವ ತನಕ ಅವರ ಮದುವೆಯು ರದ್ದು ಮಾಡಲ್ಪಡಕೂಡದು 7. (i) ಮದುವೆ ರದ್ದತಿಯ ಬಗ್ಗೆ ಗಂಡ ಯಾ ಹೆಂಡತಿಯು ಕೋರ್ಟಿಗೆ ಅರ್ಜಿ ಹಾಕಬಹುದು

(i) (a) ಮದುವೆಯಾದ ಸ್ಥಳವು ಅಥವಾ ಅರ್ಜಿ ಹಾಕುವ ಸಮಯದಲ್ಲಿ ಎದ್ರಿಯು ಕಾಯಮ್ ವಾಸ್ತವ್ಯ ಯಾ ಅವನ ಸ್ವಾಭಾವಿಕವಾಗಿ ತನ್ನಿಚ್ಛೆಪ್ರಕಾರ ಇರುವ, ಇಲ್ಲವೆ ವ್ಯಾಪಾರ ನಡಿಸುವ, ಅಥವಾ ಲಾಭಕ್ಕಾಗಿ ಸ್ವತಃ ಕೆಲಸಮಾಡುವ ಸ್ಥಳವು ಯಾವ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಸುಪರ್ದಿಯೊಳಗಿರುವುದೋ ಆ ಕೋರ್ಟಿನಲ್ಲಿ ಅರ್ಜಿಮಾಡಿಕೊಳ್ಳಬೇಕು. (i) (b) ಅಂತಹ ಸ್ಥಳವು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಸುಪರ್ದಿಯೊಳಗಿರದೆ ಸಬೋರ್ಡಿನೇಟ್ ಜಡ್ಜರ ಕೋರ್ಟಿನ ಸುಪರ್ದಿಯೊಳಗಿದ್ದಲ್ಲಿ ಆ ಕೋರ್ಟಿನಲ್ಲಿಯೂ, ಅಂತಹ ಕೋರ್ಟು ಇಲ್ಲದೆ ಹೋದರೆ ಸದ್ರಿ ಸ್ಥಳವು ಯಾವ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನ ಸುಪರ್ದಿಯೊಳಗಿರುವುದೋ ಅದಕ್ಕೂ ಅರ್ಜಿ ಮಾಡಬೇಕು. (i) (c) ಅಂತಹ ಸ್ಥಳವು ಮದ್ರಾಸ್ ಹೈಕೋರ್ಟಿನ ಸುಪರ್ದಿಯೊಳಗಿದ್ದ ಪಕ್ಷದಲ್ಲಿ ಮದ್ರಾಸ್ ಸಿಟಿ ಸಿವಿಲ್ ಕೋರ್ಟಿನಲ್ಲಿ ಅರ್ಜಿಮಾಡಿಕೊಳ್ಳಬೇಕು (ii) ಮದುವೆಯು ನಡೆದಿರುವ ಸ್ಥಳ ಮತ್ತು ತಾರೀಕನ್ನು ಅರ್ಜಿಯಲ್ಲಿ ಕಾಣಿಸಬೇಕು ಮದುವೆಯ ಕಾಲದಲ್ಲಿ ಪ್ರತಿವಾದಿಯು ಅಪ್ರಾಯಸ್ಥನಿದ್ದ ಪಕ್ಷದಲ್ಲಿ, ಯಾರ ಒಪ್ಪಿಗೆ ಮೇರೆಗೆ ಆ ಮದುವೆ ನಡೆದಿರುವುದೋ ಅಂತಹ ರಕ್ಷಕನಿದ್ದರೆ ಅವನ ಹೆಸರು ಮತ್ತು ವಿಳಾಸ ಕಾಣಿಸಬೇಕು. 8 ಅಂತಹ ಅರ್ಜಿಯ ನಕಲನ್ನು ಅರ್ಜಿದಾರನ ಪ ಅರ್ಜಿದಾರಳ ಖರ್ಚಿನಿಂದ ಎದ್ರಿಗೆ ಜ್ಯಾರಿ ಮಾಡತಕ್ಕದ್ದು 9. ಮೇಲೆ ಹೇಳಿದಂತೆ ನೋಟೀಸು ಜ್ಯಾರಿಯಾದ ಒಂದು ವರ್ಷದೊಳಗೆ ಅರ್ಜಿಯು ಹಿಂತೆಗೆಯಲ್ಪಡದಿದ್ದ ಪಕ್ಷದಲ್ಲಿ ಅನಂತರ ಅರ್ಜಿದಾರನ ಮನವಿಯ ಮೇರೆಗೆ ಕೋರ್ಟು ತನಗೆ ಯುಕ್ತ ಕಂಡ ವಿಚಾರಣೆ ನಡೆಯಿಸಿ, ಪ್ರಕರಣ 10 ಮೇರೆಗೆ ಸಿಂಧುವಾದ ಮದುವೆ ಆಗಿ

(೧೧ನೇ ಪುಟ ನೋಡಿರಿ)

CANARA BANK LIMITED
Estd 1906
(Incorporated in British India, liability of Members Limited)

SEASON DEPOSITS.

of Rs. 10000 – and over in multiples of Rs. 1000/- and maturing within 30th September 1946 are now accepted at the following rates:—

3 months	2¼%
4 to 5 months	2½%
6 to 9 months	2¾%

Rates for Season Deposits of less than Rs 10000 with a minimum of Rs 1000/- and in multiples of Rs. 500/- may be ascertained on application to our nearest branch

ರಾಷ್ಟ್ರೀಯ ಪುಣ್ಯಕ್ಷೇತ್ರ-
ಝಾನ್ಸಿದುರ್ಗ ಹೇಗಿದೆ?

ಪ್ರಕೃತ ಭಾರತದಲ್ಲಿ ನೇತಾಜೀ ಸ್ಫೂರ್ತಿ ಅಥವಾ ಝಾನ್ಸಿ ರಾಣಿ ಹುರುಪು ಹರಡಿದೆ! ಇಂದು ವಾರ್ಧಾ ಯಾತ್ರೆ ಮಾಡುವವರಿಗಿಂತಲೂ ಅಧಿಕ ಸಂಖ್ಯೆಯಲ್ಲಿ ನೇತಾಜೀ ತಳವೂರಿದ್ದ ಸಿಂಗಾಪುರ ಅಥವಾ ಒವರ್ಮಾ ನಿಲ್ದಾಣಗಳನ್ನು ಕಾಣುವ ಕುತೂಹಲಿಗಳಿರಬಹುದು. ಅಥವಾ ಝಾನ್ಸಿ ಕೋಟೆಯನ್ನು ಸ್ಮರಿಸುವವರಿರಬಹುದು. ಇಂದಿನ ರಾಷ್ಟ್ರೀಯ ವಾತಾವರಣ ಅಸಹಕಾರ ಚಳವಳಿಯ 1920-ಕಾಯಿದೇ ಭಂಗ ಚಳವಳಿಯ 1931-ಆಗೋಸ್ತು ಚಳವಳಿಯ 1942-ಇವುಗಳಿಗಿಂತಲೂ ಸಿಪಾಯಿದಂಗೆ ಯಾನೆ ಪ್ರಥಮ ಹಿಂದೀ ಸ್ವಾತಂತ್ರ್ಯ ಹೋರಾಟದ 1857ರ ಹೋಲಿಕೆಯೇ ಹೆಚ್ಚಾಗಿದೆ ಆ ಚರಿತ್ರಾರ್ಹ ಬಂಡಾಯದಲ್ಲಿ, ದಾಸ್ಯ ಶೃಂಖಲೆಯನ್ನು ಮುರಿದುಕೊಳ್ಳಲು ಉಗ್ರ ಕಾಳಿಯಂತೆ ಹೋರಾಡಿ ಭಾರತೀಯರ ಸ್ವಾಭಿಮಾನದ ಗೋಪುರವೇ ಆಗಿ ರಣರಂಗದಲ್ಲಿ ಕಳಚಿಬಿದ್ದ ಝಾನ್ಸಿರಾಣಿ ಲಕ್ಷ್ಮೀ ಬಾಯಿ ಹಿಂದೀಯರ ಸ್ಮರಣೆಯಿಂದ ಮಾಸುವಂತಿಲ್ಲ. ಆದ್ದರಿಂದಲೇ ನೇತಾಜೀ ಬೋಸರು ತನ್ನ ಆಜಾದ್ ಹಿಂದ್ ಸೇನೆಯ ಒಂದು ಭಾಗವಾಗಿ ಝಾನ್ಸಿರಾಣಿಯ ಹೆಸರಲ್ಲಿ ಮಹಿಳಾ ದಳವೇರ್ಪಡಿಸಿದ್ದರು. ದಕ್ಷಿಣ ಹಿಂದುಸ್ಥಾನವವರ ಮೇಲಿರುವ ಹೇಡಿತನದ ಅಪವಾದಗಳೆಲ್ಲಾ ತೊಡೆದು ಹೋಗುವಂತೆ ಮದ್ರಾಸಿನ ವೀರಪುತ್ರಿ ಕೆಪ್ಟನ್ ಲಕ್ಷ್ಮಿ ಅದರ ನಾಯಿಕೆಯಾಗಿದ್ದಳು.

ಝಾನ್ಸಿಯ ವೀರವಿಧವೆ ರಾಣಿ

ಬ್ರಿಟಿಷರು ದಂತಕ್ಷತವೇನನ್ನೂ ಮಾಡದೆ ಹೆಬ್ಬಾವಿನಂತೆ ಅಖಿಲ ಹಿಂದುಸ್ಥಾನವನ್ನು ನೋಯಿಸದೆ ಉಪಾಯದಿಂದ ನುಂಗಿಕೊಂಡ ಮೇಲೆಯೇ ಹಿಂದೀಯರು ಎಚ್ಚರಗೊಂಡುದು. ಇತರ ರಾಜ್ಯಗಳಂತೆ ಝಾನ್ಸಿಯೂ ಬ್ರಿಟಿಷರ ವಶವಾಗಿತ್ತು. ಅಲ್ಲಿಯ ವಿಧವೆ ರಾಣಿ–ಕೇವಲ 20 ವರುಷ ಪ್ರಾಯದ ತರುಣಿ-ಲಕ್ಷ್ಮೀಬಾಯಿ ಪರಕೀಯ ಗುಲಾಮತ್ವದ ಅಸಹನೀಯ ಯಾತನೆಯನುಭವಿಸುತಿದ್ದಳು. ಅವಳ ಸ್ವರಾಷ್ಟ್ರ ಸ್ವಜನಾಭಿಮಾನ, ಗಂಡುಗಲಿತನಗಳು ಪಂಜರದೊಳಗಿನ ಕೇಸರಿಯಂತೆ ಘರ್ಜಿಸುವ ಬದಲಿಗೆ ಗುರುಗುಟ್ಟುತ್ತಿರಬೇಕಾಗಿ ಬಂತು. ಆಕೆ ಅಪುತ್ರವತಿ; ಒಬ್ಬ ಹುಡುಗನನ್ನು ದತ್ತವಾಗಿ ಸ್ವೀಕರಿಸಿದ್ದಳು. ಆದರೆ ಬೂದಿಮುಚ್ಚಿದ ಕೆಂಡ ಪ್ರಜ್ವಲಿಸುವ ಕಾಲ ಬಂತು. 1857ರಲ್ಲಿ ಸಿಪಾಯಿ ದಂಗೆಯೆದ್ದಿತು. ಹಿಂದುಸ್ಥಾನದ ಆಮೂಲೆಯಿಂದೀಮೂಲೆಯ ವರೆಗೆ ರಕ್ತ ಪ್ರವಾಹ ಹರಿಯಿತು. ಝಾನ್ಸಿಯ ಸಿಂಹಿಣಿ ಗೂಡನ್ನೊಡೆದು ವಿರೋಧಿಗಳ ಮೇಲೆ ನೆಗೆಯಿತು. ರಾಣಿ ಲಕ್ಷ್ಮೀ ಬಾಯಿಯು ಸೇನಾನಿಯಾಗಿ ಮೂರೇ ದಿನಗಳಲ್ಲಿ ಬ್ರಿಟಿಷ್ ಸೇನೆಯನ್ನೋಡಿಸಿ ಪುನಃ ಝಾನ್ಸಿಯ ರಾಣಿಯಾದಳು; ಝಾನ್ಸಿಯ ಕೋಟೆಯಲ್ಲಿ 1858ರ ವರೆಗೂ ಪುನಃ ಸ್ವತಂತ್ರ ಧ್ವಜ ಹಾರಾಡುತಿತ್ತು.

ಧೀರ ಮರಣ

1858ರಲ್ಲಿ ಬ್ರಿಟಿಷ್ ಸೇನಾನಿ ಸರ್ ಹ್ಯೂಜ್ ರೋಸ್ ರಾಣಿಯ ಮೇಲೆ ದಂಡಯಾತ್ರೆ ಬೆಳೆಸಿದ. ಲಕ್ಷ್ಮೀಬಾಯಿ ತನ್ನ ಸರ್ವ ಶಕ್ತಿಯಿಂದ ಭೀಕರ ಪ್ರತಿಭಟನೆ ಕೊಟ್ಟರೂ ಬ್ರಿಟಿಷ್ ಅಧಿಕ ಸಂಖ್ಯಾಬಲದಿದಿರು ಫಲಬರಲಿಲ್ಲ; ಝಾನ್ಸಿ ಕೋಟೆ ಬಿಳಿಹಸ್ತಗತವಾದೊಡನೆ 1858ನೇ ಎಪ್ರಿಲಿನಲ್ಲಿ ಕಾಲ್ಪಿಗೆ ಕಾಲುಕಿತ್ತಳು. ಮುಂದಿನ ತಿಂಗಳಲ್ಲೇ ತನ್ನ ಮಿತ್ರರೊಂದಿಗೆ ದಂಡು ಸಮೇತ ಅಲ್ಲಿಂದ ಗ್ವಾಲಿಯಾರಿನ ಮೇಲೆ ಬಿದ್ದಳು. ಅಲ್ಲಿ ಬ್ರಿಟಿಷ್ ಕೈಗೊಂಬೆಯಾಗಿದ್ದ ಸಿಂಧ್ಯ ಈ ಶಕ್ತಿ ಸ್ವರೂಪಿಣಿಯ ಹೊಡೆತ ಸಹಿಸಲಾರದೆ ಆಗ್ರಾಕ್ಕೆ ಪಲಾಯನ ಮಾಡಿದ. 1858ನೇ ಜೂನಿನಲ್ಲಿ ಬ್ರಿಟಿಷ್ ಸೇನಾಸಾಗರವೇ ಗ್ವಾಲಿಯರಿನ ಮೇಲೆ ಕವಿದು ಬಿತ್ತು. ರಾಣಿ ಪರಿಸ್ಥಿತಿಯನ್ನರಿತುಕೊಂಡಳು. ಯಾವ ಶಕ್ತಿ ಚಾತುರ್ಯದಿಂದಾದರೂ ಬ್ರಿಟಿಷ್ ಕೋಳಿಯನ್ನು ಭಾರತದಿಂದ ಝಾಡಿಸುವ ಉಪಾಯ ತನ್ನ ಜೀವಾವಧಿಯಲ್ಲಿಲ್ಲವೆಂದು ತಿಳಿದಳು. ತನ್ನ ಮುಂದಿನ ಹಾದಿ ಸ್ಪಷ್ಟವಾಯಿತು. ಮಹಾರಾಣಿ ಲಕ್ಷ್ಮೀಬಾಯಿ—20 ವರುಷದ ಎಳೆ ನೆತ್ತರ ವಿಧವೆ ತರುಣಿ-ಪುರುಷ ಯೋಧನ ಗಂಡುಡುಗೆ ತೊಟ್ಟಳು. ತನ್ನ ದತ್ತದ ಮಗನನ್ನು ಬೆನ್ನಿಗೆ ಕಟ್ಟಿಕೊಂಡು, ಸದಾ ಕಾಲ ತನ್ನ ಬಲಗೈಯೊಂದು ಭಾಗವೆಂಬಂತಿದ್ದ ಖಡ್ಗ ಝಳಪಿಸುತ್ತಾ ಕುದುರೆಯೇರಿದಳು. ಆ ಬಿಂಕದ ಕುದುರೆ ಸೀದಾ ರಣರಂಗಕ್ಕೆ ನುಗ್ಗಿತು. ವೈರಿ ಯೋಧರ ಕೋಟೆಯನ್ನು ಭೇದಿಸಿ ಮುನ್ನುಗ್ಗುತ್ತಿದ್ದ ರಾಣಿಯ ಖಡ್ಗದಿಂದ ಬಿಳಿರುಂಡಗಳೆಷ್ಟೋ ಹಾರಿದುವು; ಭಾರತಾಂಬೆಯ ಕಾಲಿಗೆ ಕುಂಕುಮವಾಗಲು ರಕ್ತದ ಕೋಡಿ ಹರಿಯಿತು. ಆವೇಷದಿಂದ ಕಡಿಕಡಿದೊಟ್ಟುತ್ತಾ ಮುಂಧಾವಿಸುತ್ತಿದ್ದ ರಾಣಿ-ಧೀರ ಮಹಿಳಾ ವರ್ಗದ ಮುಕುಟಮಣಿ-ಕಟ್ಟಕಡೆಗೆ ಓರ್ವ ಕಠೋರ ಬಿಳಿ ಸೋಲ್ಜರನ ಶಸ್ತ್ರಕ್ಕೆ ಬಲಿಬಿದ್ದಳು. ಆದರೆ ತನ್ನ ಕೊಲೆಗಾರನ ಎದೆಗೆ ಖಡ್ಗವನ್ನೂರಿ ಆತನೊಂದಿಗೇನೇ ನೆಲಕ್ಕುರುಳಿದಳು! ಆಗ ಕಳಚಿಬಿದ್ದ ಭಾರತದ ಸ್ವಾಭಿಮಾನದ ಗೊಂಡೆ ಈ ವರೆಗೂ ಸ್ವಸ್ಥಾನ ಸೇರಿಲ್ಲ. ನನ್ನನ್ನು ಇದೇ ಸ್ಥಳದಲ್ಲಿ ದಹನ ಮಾಡಬೇಕು.–ನನ್ನ ದತ್ತದ ಮಗನ ಆರೈಕೆ ನೋಡಬೇಕು' ಎಂದು ಮೈಗಾವಲಿನವರಿಗೆ ಹೇಳಿ ಪ್ರಾಣಬಿಟ್ಟಳು. ಅಂದು ನಿಂತ ಭಾರತದ ಸ್ವಾತಂತ್ರ್ಯ ಶ್ವಾಸ ಇದುವರೆಗಾರಂಭವಾಗಿಲ್ಲ!

ಝಾನ್ಸಿ ಈಗ ಹೇಗಿದೆ?

ನೆಲ ಮಟ್ಟದಿಂದ ಸುಮಾರು 100 ಅಡಿ ಎತ್ತರದ ಗುಡ್ಡ ತುದಿಯಲ್ಲಿ ಝಾನ್ಸಿ ದುರ್ಗವೀಗಲೂ ಇದೆ. ಈ ರಾಷ್ಟ್ರೀಯ ಪುಣ್ಯ ಕ್ಷೇತ್ರವು ಈಗಲೂ ಗಂಭೀರ ಮೌನದಿಂದ ಸ್ವಾತಂತ್ರ್ಯ ಸಂದೇಶ ಮತ್ತು ಕ್ರಾಂತಿ ಕಿರಣವನ್ನು ಬೀರುತ್ತಾ ನಿಂತಿದೆ. ಈ ಗುಡ್ಡದ ಬುಡದೊಂದು ಪಕ್ಕದಲ್ಲಿ ವಿಶಾಲ ಕೆರೆ-ಆ ಕೆರೆಯಲ್ಲಿ ಇಡೀ ದುರ್ಗದ ನೆರಳು ಬೀಳುತ್ತದೆ. ಮತ್ತೊಂದು ಬದಿಯಲ್ಲಿ 'ಶ್ರೀ ಝಾನ್ಸಿ ಲಕ್ಷ್ಮಿ ವ್ಯಾಯಾಮ ಮಂದಿರ'ದವರ ವಿಸ್ತಾರಾಂಗಣ- ಅದರ ನಡುವೆ ಉತ್ತರದಲ್ಲಿ ಹಾರಾಡುತ್ತಿರುವ ರಾಷ್ಟ್ರಧ್ವಜ. ಕೋಟೆಯ ಗೇಟನ್ನು ದಾಟುವಾಗಲೇ ಅಲ್ಲೊಂದು ಹನುಮನ ಮೂರ್ತಿ. ಒಳಗಡೆ ನಿಬಿಡಾದ ಜನಸಂದಣಿ-ಅಗಲಕಿರಿದಾದ ಓಣಿಗಳ ನಾಲು ಮನೆಗಳೀಗ ಕಂಗೊಳಿಸುತ್ತಿವೆ ರಾಣಿಯನ್ನಾರೂ ಮರೆತಿಲ್ಲ. ಅಲ್ಲಿ ರಾಣೀ ನಾಮಸ್ಮರಣೆಗಿಂತ ಹೆಚ್ಚಿ[illegible]ಬಾಯಿ ಮಂದಿರ' 'ರಾಣಿ ಲಕ್ಷ್ಮಿ ನಿಕೇತನ' 'ಝಾನ್ಸಿ ಮಹಾರಾಣಿ ವಿದ್ಯಾ[illegible]' 'ಲಕ್ಷ್ಮೀ ರಾಣಿ ಇಂಡಸ್ಟ್ರಿಯಲ್ಸ್' 'ಮಹಾರಾಣೀ ಲಕ್ಷ್ಮೀ [illegible]'-ಇತ್ಯಾದಿ ಇತ್ಯಾದಿ ರಾಣೀ ನಾಮಾಂಕಿತ ಸಂಘ ಸಂಸ್ಥೆ, ನಿಲಯ ಕಟ್ಟಡ, ವ್ಯಾಪಾರ ವಹಿವಾಟುಗಳನ್ನಲ್ಲದೆ ಮಿಕ್ಕಕಡೆಗಳಂತೆ 'ಲೋಡ್ ಹಾರ್ಡಿಂಜ್ ಸದನ' 'ಕಿಂಗ್ ಜೋರ್ಜ್ ನಿಲಯ'ಗಳನ್ನಲ್ಲಿ ಕಾಣಲಾರಿರಿ. ರಾಣಿ ತನ್ನ ಮಗನನ್ನು ಬೆನ್ನಿಗೆ ಕಟ್ಟಿಕೊಂಡು ಕುದುರೆ ಹತ್ತಿ ಖಡ್ಗ ಬೀಸುತ್ತಾ ವೈರಿ ಪಾಳಯ ಭೇದಿಸಿ ನುಗ್ಗುವ ವೀರೋತ್ತೇಜಕ ಚಿತ್ರ ನೇತಾಡದ ಮನೆಯೇ ಅಲ್ಲಿಲ್ಲ.

ರಾಣಿಯ ಕೋಣೆ

ದುರ್ಗದ ಒಳಗಡೆಯ ಝಾನ್ಸಿಕೋಟೆಯು ಈಗಲೂ ಕಾಯಲ್ಪಟ್ಟು ಉತ್ತಮ ಸ್ಥಿತಿಯಲ್ಲಿದೆ. ಅದೀಗ ಬ್ರಿಟಿಷ್ ಮಿಲಿಟರಿಯ ಉಪಯೋಗದಲ್ಲಿದ್ದು ಸಾರ್ವಜನಿಕರ ಪ್ರವೇಶಕ್ಕೆ ಬಹಿಷ್ಕಾರವಿದೆ. ಝಾನ್ಸಿಯ ಹಿಂದಿನ ಅರಮನೆಗಳನ್ನು ಹೋಟೆಲುಗಳಾಗಿ ಮಾಡಿ ಈಗ ಸರಕಾರೀ ಆಫೀಸುಗಳನ್ನಾಗಿ ಮಾರ್ಪಡಿಸಿದ್ದಾರೆ. ಅಖಿಲ ಭಾರತೀಯರಿಗೆ 'ಸ್ವಾತಂತ್ರ್ಯ ಗಂಗಾ ದೇವಾಲಯ'ವಾಗಿರುವ ರಾಣಿಯ ನಿವಾಸಭಾಗವೀಗ ಸ್ಥಳೀಯ ಪೋಲೀಸ್ ಠಾಣ್ಯವಾಗಿದೆ. ರಾಣಿ ಮಲಗುತಿದ್ದ ಮಾಳಿಗೆಯೊಂದು ಕೋಣೆಯನ್ನು ಮಾತ್ರ ಸಾರ್ವಜನಿಕರೀಗಲೂ ನೋಡಿ ಬರಬಹುದು. ಅದೊಂದು ಸಾದಾ ಕೋಣೆ. ಹೊರಗಿನವರಿಗೆ ಒಳಭಾಗ ಕಾಣುವಂತಿಲ್ಲ. ಆದರೆ ಒಳಗಿದ್ದವರು ಕೆಳಗಿನ ಬೀದಿಯಲ್ಲಿ ನಡೆಯುವುದನ್ನೂ ಕಾಣಲಾಗುವಂತೆ ಮಾಯಾ ಕಿಂಡಿ ವ್ಯವಸ್ಥೆಯಿದೆ. ಆ ಖಾಸಗೀ ಕೋಣೆಯೊಂದು ಬಾಗಿಲಿನಲ್ಲಿ ಈಗಲೂ ಒಂದು ಆಳವಾದ ಅಡ್ಡ ಬಿರುಕನ್ನು ಕಾಣಬಹುದು. ಇದು ರಾಣಿಯು ಬೀಸು ಖಡ್ಗದಿಂದಾಗಿರುವ ಬಿರುಕು ಎನ್ನುತ್ತಾರೆ. ಓರ್ವ ಬ್ರಿಟಿಷ್ ಸೋಲ್ಜರನು ಬಾಗಿಲು ತೆರೆದುಕೊಂಡು ತನ್ನ ಕೋಣೆಯೊಳಗೆ ಪ್ರವೇಶಿಸುತ್ತಿರುವ ಸ್ವಪ್ನವು ಒಂದು ರಾತ್ರಿ ಮಲಗಿದ್ದ ರಾಣಿಗೆ ಬಿತ್ತಂತೆ. ಅವಳು ಕೂಡಲೇ ಸದಾ ತನ್ನ ಬಳಿಯಿಟ್ಟುಕೊಳ್ಳುವ ಖಡ್ಗ ತೆಗೆದು ಬಲವಾಗಿ ಬೀಸಿಬಿಟ್ಟಳು. ಆ ಖಡ್ಗವು ಬಾಗಿಲನ್ನು ಛೇದಿಸಿ ಉಂಟಾದ ಶಬ್ದದಿಂದ ರಾಣಿಗೆ ಪೂರ್ತಿ ಪ್ರಜ್ಞೆ ಬಂದಾಗ ಆಕೆ ಶಾಂತಳಾಗಿ ವಿನೋದಗೊಂಡಳಂತೆ. ರಾಣಿ ಲಕ್ಷ್ಮೀಬಾಯಿ ಪೂಜಿಸುತಿದ್ದ ದೇವಾಲಯಗಳು ಈಗಲೂ ಅಲ್ಲಿವೆ. ಬ್ರಿಟಿಷ್ ಸೇನೆ ಮುತ್ತಿಗೆ ಹಾಕಿದಾಗ ಅದನ್ನು ಭೇದಿಸಿಕೊಂಡು ರಾಣಿ ಕುದುರೆ ಹತ್ತಿ ಹೊರಬಿದ್ದ ಕೋಟೆಯೊಂದು ಹಿಂಬದಿ ದ್ವಾರವನ್ನು ಈಗಲೂ ಅಲ್ಲಿಯವರು ಪ್ರೇಕ್ಷಕರಿಗೆ ತೋರಿಸುತಿದ್ದಾರೆ. ರಾಣಿಯು ಕುದುರೆಹತ್ತಿ ವೈರಿಸೇನೆ ಭೇದಿಸಿ ಧಾವಿಸುವ, ದೇಹ ಪ್ರಮಾಣದ ದೊಡ್ಡ ಮೂರ್ತಿಯೊಂದನ್ನು ಕೆತ್ತಿಸಿ ದುರ್ಗದ ಕೆಳಗಿನ ವಿಶಾಲ ಕೆರೆಯ ನಡುವೆ ಒಂದು ಮಂಟಪ ಕಟ್ಟಿ ಅದನ್ನು ನಿಲ್ಲಿಸುವ ವ್ಯವಸ್ಥೆಯನ್ನೀಗ ಝಾನ್ಸಿಯ ನಾಗರಿಕರು ಮಾಡಿದ್ದಾರೆ.

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

UNITED

WE
Offer free **SERVICE** IN INSURANCE
Give full **SECURITY** FOR YOUR MONEY
Guarantee **PROMPT** SETTLEMENT OF CLAIMS.

RAO BAHADUR
B. S. Sawkar, B. A., LL. B.
Chairmen.

A. S. Kini,
Managing Director.

THE UNITED KARNATAKA INSURANCE CO., LTD.
H. O. **DHARWAR.** Estd: 1929.
Insure with or Represent us.
For Particulars apply -
ORGANISING OFFICE: COURT ROAD, **UDIPI.**
Or
M. N. Bhandary & Co., *Sp. Agents,* Kodialbail, Mangalore.

Advertise in
'ANTAKANGA' Weekly
and
get maximum value for your nominal investment.

ಅಪರಾಧಿ ಅಧಿಕಾರಿಯ ಆತ್ಮಹತ್ಯಾ ಪ್ರಯತ್ನ.

ನೀಲಗಂಜ್ ಶಿಬಿರದಲ್ಲಿದ್ದ ಸುಭಾಸ್ ಸೇನಾ ಕೈದಿಗಳ ಮೇಲೆ ಪಹರೆಗಾರರು 1945ನೇ ಸೆಪ್ಟಂಬರ್ 25ರಲ್ಲಿ ಗುಂಡು ಹಾರಿಸಿದುದರ ಪರಿಣಾಮವಾಗಿ 5 ಮಂದಿ ಸತ್ತು 9 ಮಂದಿ ಜಖಂಗೊಂಡಿದ್ದುದರ ಕಡೆಗೆ ಪಂಡಿತ ನೆಹರುಗಳು ರಾಷ್ಟ್ರದ ಲಕ್ಷ್ಯವನ್ನೆಳೆದಿದ್ದರು. ಅಧಿಕಾರಿಗಳು ವಿಚಾರಣೆ ನಡಿಸುವ ಆಶ್ವಾಸನೆ ಕೊಟ್ಟಿದ್ದರು. ಇದಕ್ಕನುಗುಣವಾಗಿ ನೀಲಗಂಜ್ ಶಿಬಿರದ ಅಧಿಕಾರಿಯಾದ ಕೆಪ್ಟನ್ ಮೆನೊಸರನ್ನು ಕೋರ್ಟು ಮಾರ್ಶಲ್ ವಿಚಾರಣೆಗೊಳಪಡಿಸಲಾಯಿತು. ಮೆನೊಸರಿಗೆ-ಕೋರ್ಟು ಮಾರ್ಶಲ್ 5 ವರುಷಗಳ ಕಠಿಣ ಸಜೆ ವಿಧಿಸಿದುದನ್ನು ಭಾರತದ ಮುಖ್ಯ ಸೇನಾನಿ ಕಾಯಂ ಪಡಿಸಿದರು. ಈ ವಾರ್ತೆ ಕಿವಿಗೆ ಬಿದ್ದೊಡನೆ ಕೆಪ್ಟನ್ ಮೆನೊಸರು ತನ್ನನ್ನು ತಾನೇ ಇರಿದುಕೊಂಡರು. ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮದ್ರಾಸಿನಲ್ಲಿ ಹುಡುಗನಿಗೆ ಗುಂಡು

ನೌಕಾಬಂಡಾಯದೊಡನೆ ಸಹಾನುಭೂತಿ ಸೂಚಿಸಲು ಫೆಬ್ರವರಿ ತಾ 25ರಲ್ಲಿ ಮದ್ರಾಸಿನಲ್ಲಿ ನಡೆದಿದ್ದ ಗೊಂದಲ ಸರ್ವಶ್ರುತವಷ್ಟೆ. ಆ ದಿನ ಯುರೋಪಿಯಾನ (ಜಸ್ಟೀಸ್ ಬಯರ್ಸರೆಂದು ಊಹಿಸಲ್ಪಟ್ಟಿದೆ)ನೊಬ್ಬನ ಗುಂಡಿಗೆ ಬಲಿಯಾಗಿ ಸುಮಾರು 17 ವರುಷದ ಓರ್ವ ಹುಡುಗ ಮಡಿದು ಹೋದ. ಹುಡುಗನಾರೆಂಬುದು ಇನ್ನೂ ಗೊತ್ತಾಗಿಲ್ಲ. ಶವದ ಪಂಚನಾಮೆ ನಡೆದಾಗ ಜಸ್ಟೀಸ್ ಬಯರ್ಸ 'ಮತ್ತಿತರರ ಸಾಕ್ಷ್ಯದಿಂದ ತಿಳಿದುಬಂದಂತೆ ಆ ದಿನ ಜ. ಬಯರ್ಸರು ಕೋರ್ಟಿನಿಂದ ಸ್ವತಃ ಕಾರು ಬಿಡುತ್ತಾ ಬಂಗಲೆಗೆ ಹೊರಟಿದ್ದರು. ಜನರು ಸುತ್ತುಗಟ್ಟಿ-ಕಲ್ಲು ಬಿಸಾಡಹತ್ತಿದರು. ಅವರೊಂದಿಗೆ ಮತ್ತೋರ್ವ ಜಸ್ಟೀಸ್ ಕುಸ್ಟಿಗಾಪುನರೂ ಅವರ ಮಗನೂ ಇದ್ದರು. ಆ ಮಗನಿಗೆ ಕಲ್ಲು ಬಿದ್ದು ಜಖಮಾಯಿತು. ಜಸ್ಟೀಸರು ಕಾರನ್ನು ಮತ್ತೊಂದು ರಸ್ತೆಗೆ ತಿರುಗಿಸಿದಾಗ ಅಲ್ಲಿಯೂ ಜನರು ಅಡ್ಡಗಟ್ಟಿ ವಿಶೇಷ ಕಲ್ಲು ಬಿದ್ದುದರಿಂದ ಪ್ರಾಣ ಭಯದಿಂದ ಪಿಸ್ತೂಲು ಹಾರಿಸಿದರು. (ಹುಡುಗ ಅದಕ್ಕೆ ಬಲಿಯಾಗಿರಬೇಕು). ಮದ್ರಾಸ್ ಕಾಂಗ್ರೆಸ್ ಸಾರ್ವಜನಿಕ ಸಭೆಯೊಂದು ಈ ಜಸ್ಟೀಸರನ್ನು ವಿಚಾರಿಸಿ ಶಿಕ್ಷಿಸಬೇಕೆಂದು ಆಗ್ರಹದಿಂದ ಕೇಳಿಕೊಂಡಿವೆ.

ಕಾಲಮಹಾತ್ಮೆ!

ಅಜಾದ್ ಹಿಂದ್ ಕೆಪ್ಟನರಿಗೆ ಶಿಕ್ಷೆ

ಕೆಪ್ಟನ್ ಬುರ್ಹಾನುದ್ದೀನರಿಗೆ ಕೋರ್ಟು ಮಾರ್ಶಲ್ ಜೀವಾವಧಿ ಸಜೆ ವಿಧಿಸಿ, ಅದರೊಂದಿಗೆ ರಿಯಾಯತಿಯ ಶಿಫಾರಸು ಮಾಡಿದ್ದಿತು. ಮುಖ್ಯ ಸೇನಾನಿ ಜನರಲ್ ಅಚಿನ್‌ಲೆಖರು ಅದನ್ನು 7 ವರುಷ ಕಠಿಣ ಸಜೆಯಾಗಿ ತಗ್ಗಿಸಿದ್ದಾರೆ. ಕೆಪ್ಟನ್ ರಶೀದ್ ಆಲಿ (ಲೀಗ್ ವಕಾಲತ್ ಅಪೇಕ್ಷಿಸಿ, ಸುಭಾಸರು ಹಿಂದೂ ರಾಜ್ಯ ಸ್ಥಾಪಿಸಲು ಪ್ರಯತ್ನಿಸುವದನ್ನು ಪ್ರತಿಭಟಿಸಲು ಭಾ. ರಾ. ಸೇನೆಗೆ ಸೇರಿದ್ದೆನೆಂಬ ಹೇಳಿಕೆಯಿತ್ತವ)ರ ನಂತರ ಸುಭಾಸ್ ಸೇನಾ ನಾಯಕರಿಗಾದ ಎರಡನೇ ಶಿಕ್ಷೆಯಿದು. ಕೆ. ಬುರ್ಹಾನುದ್ದೀನರು ತನಗೆ ಶಿಕ್ಷೆಯಾದ ಮೇಲೆ ಕಾಂಗ್ರೆಸ್ ತನ್ನಪರ ನಡಿಸಿದ ಪ್ರಯತ್ನವನ್ನು ಮುಕ್ತ ಕಂಠದಿಂದ ಶ್ಲಾಘಿಸಿ "ನನ್ನ 'ರಾಷ್ಟ್ರ ಸೇವೆಗಾಗಿ ದೊರೆತ ಈ ಏಳು ವರುಷಗಳ ಶಿಕ್ಷೆಯ ಗೌರವಕ್ಕಾಗಿ ಆನಂದಿತನಾದೆ" ಎಂದು ಪತ್ರ ಬರೆದಿದ್ದಾರೆ.

ಗವರ್ನರರ ಕಾರಿಗೆ ಕಲ್ಲು!

ಕೆ. ಬುರ್ಹಾನುದ್ದೀನರ ಶಿಕ್ಷೆಯ ಪ್ರತೀಕಾರ್ಥ ಫೆಬ್ರವರಿ 27ರಲ್ಲಿ ಲಾಹೋರಿನ ವಿದ್ಯಾರ್ಥಿಗಳು ಮೆರವಣಿಗೆ ನಡಿಸಿದ್ದರು. ಒಂದೆಡೆಯಲ್ಲಿ ಪಂಜಾಬ್ ಗವರ್ನರರು ಕಾರಿನಲ್ಲಿ ಬರುತ್ತಿದ್ದಾಗ ಕೆಲವು ವಿದ್ಯಾರ್ಥಿಗಳು ಕಾರಿಗೆ ಕಲ್ಲೆಸೆದು ಗ್ಲಾಸ್ ಪುಡಿಮಾಡಿ ಅದನ್ನು ನಿಲ್ಲಿಸಿ, ಅದರಲ್ಲಿದ್ದ ಯೂನಿಯನ್ ಜೇಕನ್ನು ಕಿತ್ತುಹರಿದರೆಂದು ತಿಳಿದು ಬರುತ್ತದೆ. ಕಾರು ಮತ್ತು ಸೈಕಲಿನಲ್ಲಿ ಹೋಗುತ್ತಿದ್ದ ಬೇರಿಬ್ಬರು ಬ್ರಿಟಿಷ್ ಮಹಿಳೆಯರನ್ನೂ ತಡೆದು ಅವರ ನೆಕ್‌ಟೈ ಕಿತ್ತುಕೊಂಡು ಹರಿದ ವಾರ್ತೆಯಿದೆ. ಲಾಹೋರಿನ ವಿದ್ಯಾರ್ಥಿ ಸಭೆಯೂ ಮೌಲಾನಾ ಆಜಾದರೂ ಈ ಕೃತ್ಯಗಳನ್ನು ಖಂಡಿಸಿದ್ದಾರೆ.

The Canara Industrial & Banking Syndicate, Limited.

(Incorporated in British India. Liability of Share-holders Limited.)

HEAD OFFICE

NOTICE

The Register of Members and Transfer Books of the Syndicate will remain closed from 17th March, 1946 to 14th April, 1946 both days inclusive.

(BY ORDER)

"Mukund Nivas"
UDIPI
4th March, 1946.

K. V. Shenoy,
SECRETARY.

BANK WITH THE LARGEST CONNECTIONS ON THE WEST COAST.

OFFERS:-
EFFICIENT,
PROMPT &
COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD 1925

ಬ್ರಿಟಿಷ್ ಸೋಲ್ಜರನ ಆತ್ಮಹತ್ಯೆ

ಕರಾಚಿಯಿಂದೊಂದು ವಾರ್ತೆ ಬಂದಿದೆ. ಫೆಬ್ರವರಿ 27ರಲ್ಲಿ ಕರಾಚಿಯ ಒಂದು ಚಿನಿವಾರ ಕಟ್ಟೆಗೆ ಓರ್ವ ಬ್ರಿಟಿಷ್ ಸೋಲ್ಜರ್ ಪ್ರವೇಶಿಸಿ ಮುತ್ತು ರತ್ನಗಳ ಒಂದು ದೊಡ್ಡ ಕಲ್ಲನ್ನು ಆರಿಸಿ ತೆಗೆದು, ತನ್ನ ಜೇಬನೊಳಕ್ಕೆ ಕೈ ಹಾಕಿದಾಗ ಹಣ ತೆಗೆಯುತ್ತಾನೆಂದು ನಿರೀಕ್ಷಿಸುತ್ತಿದ್ದ ಸಾಹುಕಾರ ಆತ ರಿವೋಲ್ವರ್ ತೆಗೆದುದನ್ನು ನೋಡಿ ಹೆದರಿ ಹೋದ. ಸೋಲ್ಜರ್ ಸಾಹುಕಾರನ ಇದಿರಿಗೆ ರಿವೋಲ್ವರ್ ತೋರಿಸಿ ಕಲ್ಲು ಹಿಡಿದುಕೊಂಡೇ ರಸ್ತೆಗಿಳಿದನೇಲೆ ಬೊಬ್ಬೆಯಾಯಿತು. ಜನರೆಲ್ಲಾ ನೆರೆದು ಸೋಲ್ಜರನನ್ನು ಬೆನ್ನಟ್ಟಿದರು. ಕೂಡಲೇ ಆತ ತನಗೆ ತಾನೇ ಗುಂಡಿಟ್ಟುಕೊಂಡ.

ಫ್ರೆಂಚ್ ಸೋಲ್ಜರರ ಅತಿರೇಕ ವರ್ತನೆ

ಫ್ರೆಂಚ್ ಸಾಮ್ರಾಜ್ಯ ಮುಷ್ಟಿಯಿಂದ ಬಿಡಿಸಿಕೊಳ್ಳಲು ಫ್ರೆಂಚ್ ಇಂಡೋ ಚೈನದಲ್ಲಿ ಮಹಾ ಬಂಡಾಯವೇಳುವ ಲಕ್ಷಣಗಳು ಕಾಣುತ್ತಿವೆ. ಅಲ್ಲಿ ಫ್ರೆಂಚ್ ಸೇನೆಗಳು ಅಧಿಕ ಸಂಖ್ಯೆಯಲ್ಲಿ ಸಿದ್ಧವಾಗುತ್ತಿವೆ. ಅಲ್ಲಿಯ ಹಲವು ಫ್ರೆಂಚ್ ನ್ಯಾಯವಾದಿಗಳು ಈ ಸ್ವಾತಂತ್ರ್ಯ ಚಳವಳಕ್ಕೆ ಅನುಮೋದನೆಯಿತ್ತಿದ್ದಾರೆ. ಹೀಗೆ ಸಹಾನುಭೂತಿ ತೋರಿಸಿದ್ದ ಓರ್ವ ಫ್ರೆಂಚ್ ಯುವತಿಯನ್ನು ಅಲ್ಲಿದ್ದ ಫ್ರೆಂಚ್ ಸೋಲ್ಜರರು ಹಿಡಿದು ಇದೇ ತಾ 1ನೇ ರಾತ್ರಿ ತಲೆಬೋಳಿಸಿದರು. ಆ ಮೇಲೆ ಅವಳ ಎಂದೂ ಕೈಗಳನ್ನು ಹಿಂದಕ್ಕೆ ಬಿಗಿದು ಇಂಡೋ ಚೈನಾದ ರಾಜಧಾನಿಯಾದ ಸೈಗಾನಿನ ರಸ್ತೆಯಲ್ಲೆಲ್ಲಾ ಮೆರವಣಿಗೆ ನಡಿಸಿದ್ದಾರೆ.

'ಬಹದೂರ'
ಕಬ್ಬಿನ ಗಾಣಗಳು



ಗಟ್ಟಿಮುಟ್ಟಾದ ರಚನೆ,
ಉತ್ತಮ ದರ್ಜೆಯ ಕೈಗಾರಿಕೆ

ಕ್ರಯ ರೂ 430/-

ಬ್ರಿಟಿಷ್ ಇಂಡಿಯ
ಎಂಜನಿಯರಿಂಗ್ ಕಂ.
ಬೊಂಬಾಯಿ 10.

ಪೆರ್ಡೂರು ಶ್ರೀ. ಅನಂತಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಯ ಸಹಾಯಾರ್ಥವಾಗಿ—

ಶ್ರೀ ಅನಂತಪದ್ಮನಾಭ ಸ್ವಾಮಿಯ ರಥೋತ್ಸವದ ಸಮಯ

ಪೆರ್ಡೂರಿನಲ್ಲಿ ನಾಟಕಗಳು.

ತಾ. 16-3-'46ನೇ ಶನಿವಾರ (ರಥೋತ್ಸವದ ದಿನ) ರಾತ್ರೆ ಘಂಟೆ 9-30ಕ್ಕೆ
ಉಡುಪಿ ನಾಟ್ಯ ಕೂಟದವರಿಂದ

ಕಾಯಿದೆಭಂಗ

(ಎಂಬ ಅರ್ಥಗರ್ಭಿತವಾದ ಸಾಮಾಜಿಕ ನಾಟಕ.)

ಉಡುಪಿ ಶ್ರೀಕೃಷ್ಣ ಮಾರುತಿ ನಾಟ್ಯ ಸಂಘದವರಿಂದ
ತಾ. 18-3-'46ನೇ ಸೋಮವಾರ ರಾತ್ರೆ ಘಂಟೆ 9-30ಕ್ಕೆ

ವರದಕ್ಷಿಣೆ

(ಎಂಬ ಹಾಸ್ಯಪ್ರಧಾನವಾದ ಸಾಮಾಜಿಕ ನಾಟಕ.)

ತಾ. 20-3-'46ನೇ ಬುಧವಾರ ರಾತ್ರೆ ಘಂಟೆ 9-30ಕ್ಕೆ

ವಿಕ್ರಮ-ಶಶಿಕಲಾ

(ಎಂಬ ಶೃಂಗಾರಭರಿತ ನಾಟಕ,)

ಟಿಕೇಟಿನ ದರಗಳು:- ರೂಪಾಯಿ 10, 5, 3, 2, 1 ಮತ್ತು ಆಣೆ 8.
ವಿದ್ಯಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

P. N. ಮಾಧವ ರಾವ್, B. A., B. L.,
ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಮತ್ತು ಶಾಲಾ ಮೆನೇಜರ್.

The Canara Banking Corporation Limited.

((Incorporated in British India, with limited Liability)

Estd: 1906.

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... 2¼%

6 months ... 2½%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೭-೩-'೪೬

ಚುನಾವಣೆಯ ನೋಟ

ದೇಶವಿಂದು ಪ್ರಾಂತಿಕ ಚುನಾವಣೆಗಳ ಗದ್ದಲದಲ್ಲಿದೆ. ಗಡಿನಾಡು, ಅಸ್ಸಾಮ್, ಸಿಂಧ್, ಪಂಜಾಬ್ ಪ್ರಾಂತ್ಯಗಳ ಫಲಿತಾಂಶ ತಿಳಿದು ಬಂದಿದೆ. ಮಿಕ್ಕ ಕೆಲವು ಪ್ರಾಂತ್ಯಗಳ ಚುನಾವಣೆಗಳು ಮುಗಿಯುತ್ತಾ ಬಂದಿವೆ; ಇನ್ನುಳಿದ ಮದ್ರಾಸ್ ಮತ್ತಿತರ ಕಡೆಗಳಲ್ಲಿ ಅದು ಭರಭರಾಟೆಯಲ್ಲಿದೆ. ಅಂತೂ ಕೇಂದ್ರ ಮತ್ತು ಪ್ರಾಂತಿಕವೆಂದು ಕಳೆದ ದಶಂಬರದಿಂದ ಇಡೀ ರಾಷ್ಟ್ರದಲ್ಲಿ ಆರಂಭವಾಗಿದ್ದ ಚುನಾವಣಾ ಸ್ಪರ್ಧೆಯ ವಾತಾವರಣವು ಈ ತಿಂಗಳಾಂತ್ಯದೊಳಗೆ ಮುಕ್ತಾಯಗೊಳ್ಳಲಿದೆ; ಭಾರತದಲ್ಲಿ ನಿರ್ಮಾಣವಾಗಬೇಕಾದ ಹೊಸ ಚರಿತ್ರೆಯೊಂದರ ಪ್ರಥಮಾಧ್ಯಾಯ ಅಲ್ಲಿಗೆ ಮುಗಿಯುವದು. ಈ ಮೊದಲ ಭಾಗದ ಗುಣದೋಷಗಳೇನು ಎಂಬುದನ್ನು ಮೇಲಿಂದ ಮೇಲೆ ವಿಮರ್ಶಿಸಲು ಈಗ ಸಾಧ್ಯವಿದೆ. ಮುಖ್ಯವಾಗಿ ಮುಸ್ಲಿಂ ಬಹು ಸಂಖ್ಯೆಯಿರುವ ಗಡಿನಾಡು ಪ್ರಾಂತ್ಯದಲ್ಲಿ ಕಾಂಗ್ರೆಸಿಗೆ ಪ್ರಬಲ ಬಹುಮತ ದೊರೆತಿದೆ. ಅಲ್ಲಿ ಖಾನ್ ಸಾಹೇಬ್ ಮಂತ್ರಿ ಮಂಡಲ ರಚನೆಯಾಗಲಿದೆ. ಅಸ್ಸಾಮಿನಲ್ಲಿ ಕಾಂಗ್ರೆಸ್ಸೀಗ ಬಾರ್ಡೋಲಿ ಮಂತ್ರಿ ಮಂಡಲ ಅಧಿಕಾರ ವಹಿಸಿ, ತನ್ನ ಪ್ರಥಮ ಕಾರ್ಯವಾಗಿ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮತ್ತು ಗುಪ್ತಗಾಮಿ ಚಳವಳಗಾರರ ಮೇಲಿನ ವಾರಂಟು ರದ್ದತಿಯ ಕುರಿತು ಇಷ್ಟರಲ್ಲೇ ಆಜ್ಞೆ ಹೊರಡಿಸಿದೆ. ಪಂಜಾಬಿನಲ್ಲಿ ಈ ಮೊದಲು ಅಧಿಕಾರದಲ್ಲಿದ್ದ ಅಪ್ರಾಗತಿಕ ಹಾಗೂ ಸಂದರ್ಭ ಸಾಧಕ ಯೂನಿಯನ್ ಪಕ್ಷವು ಪರಾಭವ ಹೊಂದಿ ನಾಮ ಮಾತ್ರವುಳಿದಿದೆ. ಅದರ ಸ್ಥಾನಗಳನ್ನೀ ಬಾರಿ ಲೀಗ್, ಕಾಂಗ್ರೆಸ್ ಮತ್ತು ಅಕಾಲಿಗಳು ಹಂಚಿಕೊಂಡಂತಿವೆ. ಲೀಗಿಗೆರಡನೆಯ ಬಹು ಸಂಖ್ಯಾಕ ಪಕ್ಷವಾಗಿ ಕಾಂಗ್ರೆಸ್ ಬಂದಿದೆ. ಏಕಾಕಿಯಾಗಿ ಅಧಿಕಾರ ವಹಿಸುವಷ್ಟು ಬೆಂಬಲವು ಯಾವ ಪಕ್ಷಕ್ಕೂ ದೊರೆಯದೆ, ಸಮ್ಮಿಶ್ರ ಮಂತ್ರಿಮಂಡಲ ರಚಿಸುವಷ್ಟು ಒಮ್ಮತ ಕೂಡಾ ಪಕ್ಷ-ಪಕ್ಷಗಳೊಳಗಾಗದೆ, ಪಂಜಾಬಿನ ಭವಿಷ್ಯವೀವರೆಗೆ ಅನಿಶ್ಚಿತವಾಗಿದೆ. ಸಿಂಧಿನಲ್ಲಿಯೂ ಕಾಂಗ್ರೆಸಿಗೆ ಪಂಜಾಬಿನಂತೆ ಎರಡನೆಯ ಸ್ಥಾನವೇ ದೊರೆಯಿತು. ಮಿ. ಸಯ್ಯದರ ಅಪ್ರಾಗತಿಕ ಲೀಗ್ ಪಕ್ಷವನ್ನು ಕೂಡಿಕೊಂಡು ಅದು ಲೀಗಿನ ಸಮಬಲವಾಯಿತು. ಗವರ್ನರರು ಲೀಗ್ ಪಕ್ಷಕ್ಕೆ ಕೈಹಾರ ಹಾಕಿದರೂ ತನ್ನಾಯುಷ್ಯದಲ್ಲಿ ಲೀಗ್ ಮಂತ್ರಿ ಮಂಡಲಕ್ಕೇನೇ ನಂಬಿಕೆಯಿರುವಂತಿಲ್ಲ. ಇನ್ನುಳಿದ ಪ್ರಾಂತ್ಯಗಳಲ್ಲಿ ಬಂಗಾಳವೊಂದು ಹೆಚ್ಚೆಂದರೆ ಸಿಂಧ್, ಪಂಜಾಬುಗಳ ಪಂಙ್ತಿಗೆ ಸೇರಬಹುದು. ಮಿಕ್ಕೆಲ್ಲಾ ಪ್ರಾಂತ್ಯಗಳಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರುವದು ಖಂಡಿತ. ಅಂತೂ ಮಿ. ಜಿನ್ನರೇ ಒಪ್ಪಿರುವಂತೆ ಎಲ್ಲಿಯೂ ಅಸಹಾಯ ಶೂರನಾಗಿ ಅಧಿಕಾರ ನಿರ್ವಹಿಸುವಷ್ಟು ಬೆಂಬಲ ಲೀಗಿಗೆ ದೊರೆತಿಲ್ಲ; ಲೀಗ್ ಪ್ರಮುಖರು ಇದಕ್ಕಿಂತ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಿದ್ದರು. ಇದಿರು ಕಡೆಯಿಂದ ಕಾಂಗ್ರೆಸ್ ಮಾತ್ರ ನಿರೀಕ್ಷೆಗೂ ಮಿಕ್ಕಿ ವಿಜಯ ಪಡೆದಿದೆ.

ಕಾಂಗ್ರೆಸ್-ಲೀಗ್ ಬಲಾಬಲ ಹೀಗಿದ್ದರೆ, ಮುಸ್ಲಿಂ ಸ್ಥಾನಗಳನ್ನು ಸ್ವಾಧೀನ ಪಡಿಸಿಕೊಳ್ಳುವದರಲ್ಲಿ ಮಿಕ್ಕ ಮುಸ್ಲಿಂ ಪಕ್ಷಗಳನ್ನು ಲೀಗ್ ಹಿಂದೆ ಹಾಕಿದೆ ಎಂಬುದನ್ನು ಒಪ್ಪಬೇಕು. ಆದರೆ ಮುಸ್ಲಿಮರಲ್ಲಿ ಲೀಗಿಗೆ ಪ್ರಥಮಸ್ಥಾನದ ಹಕ್ಕಿದೆ ಎಂಬುದನ್ನು ಕಾಂಗ್ರೆಸ್ ಆ ಮೊದಲೂ ಅಲ್ಲಗಳೆದಿಲ್ಲ; ಲೀಗಿಗೆ ಬೇಕಾದುದು ಅಷ್ಟೇ ಅಲ್ಲ. ತನ್ನನ್ನು ಮುಸಲ್ಮಾನರ ಏಕಮಾತ್ರ ಪ್ರತಿನಿಧಿಯೆಂದು ಒಪ್ಪಬೇಕು ಎಂದದರ ಬೇಡಿಕೆ. ಅಂತಹ ಒಪ್ಪಿಗೆಯನ್ನು ಮುಸಲ್ಮಾನ ಮತದಾರರೇ ಕೊಟ್ಟಿಲ್ಲ. ಇದಕ್ಕೆ ಪ್ರತಿಯಾಗಿ ತನಗೆ ಸರ್ವ ಸಮಾಜಗಳ ಪ್ರಾತಿನಿಧ್ಯವಿದೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಅದೇನೂ ಸುಳ್ಳಾಗಿಲ್ಲ. ಒಟ್ಟಿನ ಮೇಲೆ ಮುಸ್ಲಿಂ ಸ್ಥಾನಗಳನ್ನು ಲೀಗು, ಸಿಖ್ ಸ್ಥಾನಗಳನ್ನು ಅಕಾಲೀ ಪಕ್ಷಗಳು ಹೆಚ್ಚಾಗಿ ಆಕ್ರಮಿಸಿಕೊಂಡಿರಬಹುದು. ಆದರೆ ಕಾಂಗ್ರೆಸ್ ತತ್ವಗಳನ್ನೊಪ್ಪುವ ಆಯಾ ಸಮಾಜಗಳವರಿಗೆ ಮಾತ್ರವಲ್ಲ-ಪ್ರತ್ಯಕ್ಷ ಕಾಂಗ್ರೆಸಿಗರಿಗೂ ಆ ಪಾಳಯಗಳೊಳಗೆ ಪ್ರವೇಶ ದೊರೆತಿದೆ. ಸಾಮಾನ್ಯ ಮತದಾರ ಕ್ಷೇತ್ರಗಳಲ್ಲಂತೂ ಕಾಂಗ್ರೆಸಿಗಿದ್ದುದು ಅವಿರೋಧ ಅಥವಾ ಅಲ್ಪ ವಿರೋಧಗಳು ಮಾತ್ರ. ಅದ್ದರಿಂದ ಈ ಬಾರಿಯ ಚುನಾವಣೆಯಲ್ಲಿ ಬೇರಾವುದೊಂದು ಪಕ್ಷವೂ ಸಾಫಲ್ಯ ಪಡೆದುದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಜಯಿಸಿದೆ.

ಈಗ ಮದ್ರಾಸ್ ಪ್ರಾಂತಿಕ ಎಸೆಂಬ್ಲಿ ಚುನಾವಣೆಯು ರಭಸದಲ್ಲಿದೆ. ಪ್ರಾಂತ್ಯದ ಪ್ರತಿಯೊಂದು ಕ್ಷೇತ್ರದಿಂದ ಬರುತ್ತಿರುವ ವಾರ್ತೆಗಳ ಮೇಲಿಂದ, ಇದನ್ನೊಂದು 'ಹೋರಾಟ'ವೆಂದು ಕರೆದರೆ ಅತ್ಯುಕ್ತಿಯಾಗಬಹುದು; ಕಾಂಗ್ರೆಸು ತನ್ನ ವೈರೀ ಶೇಷಾಂಶವನ್ನು ಝಾಡಿಸಿ ತೆಗೆಯುವ ಕಾರ್ಯವಿದು-ಎನ್ನುವದೇ ಈ ಚುನಾವಣೆಗೆ ಹೇಳಿಸಿದ ನಾಮಕರಣ. ಕಾಂಗ್ರೆಸ್ ಉಮೇದ್ವಾರಿಗಳು ಅಧಿಕ ಸಂಖ್ಯೆಯಿಂದ ಅವಿರೋಧವಾಗಿ ಆರಿಸಿ ಬಂದಿದ್ದಾರೆ. ಮದ್ರಾಸಿನಲ್ಲಿ ಏಕಮಾತ್ರ ಸುಸಂಘಟಿತ ಕಾಂಗ್ರೆಸ್ ವಿರೋಧೀ ಪಕ್ಷವಾಗಿದ್ದ ಜಸ್ಟೀಸ್ ಪಕ್ಷವು 'ಚುನಾವಣೆಯಲ್ಲಿ ಸ್ಪರ್ಧಿಸುವದೇ ಬೇಡ' ಎಂಬ ಯೋಗ್ಯ ನಿರ್ಧಾರ ಮಾಡಿದೆ. ಅಲ್ಲಲ್ಲಿ 'ಕಮ್ಯೂನಿಸ್ಟ' ಮತ್ತು 'ರೆಡಿಕಲ್ ಡೆಮೊಕ್ರೆಟಿಕ್ ಪಕ್ಷ'ದವರ ಹಾಗೂ ಕೆಲವು ಸ್ವತಂತ್ರರ ನಾಮ ಮಾತ್ರ ವಿರೋಧಗಳು ಉಳಿದಿವೆ; 'ವಿರೋಧ'ವೆಂದು ಕರೆಯುವದಕ್ಕಿಂತಲೂ 'ಇದಿರಿನಲ್ಲೇನೋ ಇದೆ!' ಎನ್ನಲಾಗುವಷ್ಟು ತಾತ್ಸಾರದ ಸ್ಪರ್ಧೆಯದು. ಆದ್ದರಿಂದ ಮದ್ರಾಸಿನಲ್ಲಿ ಕಾಂಗ್ರೆಸಿಗೆ ಶೇಕಡಾ 99ರಷ್ಟು ವಿಜಯ ನಿಶ್ಚಯ.

ದಕ್ಷಿಣ ಕನ್ನಡದಲ್ಲಿ ಮದ್ರಾಸ್ ಎಸೆಂಬ್ಲಿಯ ಕಾಂಗ್ರೆಸ್ ಹುರಿಯಾಳುಗಳೆಲ್ಲರೂ ಅವಿರೋಧವಾಗಿ ಆರಿಸಿ ಬಂದರೆಂಬುದು ಜಿಲ್ಲೆಗೊಂದು ಹೆಗ್ಗಳಿಕೆಯ ವಿಷಯ. ಇದಕ್ಕಾಗಿ ಜಿಲ್ಲೆಯ ಮತದಾರರ ಮನೋಗತಿಯನ್ನು ಅಭಿನಂದಿಸಬೇಕು. ಚುನಾವಣೆಯಾಗುತ್ತಿದ್ದರೆ ಈ ತಿಂಗಳಾಂತ್ಯದಲ್ಲಿ ಕೇಳಲಿಕ್ಕಿದ್ದ ಶುಭ ವಾರ್ತೆಯನ್ನು ಮೂರು ವಾರಗಳಿಗೆ ಮುಂಚಿತವಾಗಿಯೇ ಕೇಳುವ ಸುಯೋಗ ಒದಗಿತು. ಹಾಗಾಗುತ್ತಿದ್ದರೆ ಮತದಾರರನ್ನು ಅಭಿನಂದಿಸುವ ಕಾರ್ಯವಿಷ್ಟು -ಈಗ ಆ ಉಪಕಾರ ಸ್ಮರಣೆಯು ಮತದಾರರ ಮನಸ್ಸಿಗೆ, ಜಿಲ್ಲೆಯ ಜನತೆಯ ಕಾಂಗ್ರೆಸ್ ನಿಷ್ಠೆಗೆ ಸಲಬೇಕು. ಜಿಲ್ಲೆಯ ವಾತಾವರಣಕ್ಕೆ ಉಮೇದ್ವಾರರ ಯೋಗ್ಯತೆಯೂ ಬೆರೆತು ಕಣ್ಣದ್ದವರೆಲ್ಲಾ ಕಾಣಲಾಗುವಂತಹ ಅಭೇದ್ಯ ಕಾಂಗ್ರೆಸ್ ಕೋಟೆಯೊಂದು ಇಲ್ಲಿ ಎದ್ದಾಗ, ಅದನ್ನೂ ತಲೆತಾಡಿಸಿ ಭೇದಿಸಬಲ್ಲೆವೆಂಬಂತಹ ಹಠವಾದಿಗಳನ್ನು ದ. ಕ. ಜಿಲ್ಲೆ ಪಡೆದಿಲ್ಲ. ಹೀಗಾಗಿ 'ಕಾಂಗ್ರೆಸಿಗೆ ವಿರೋಧವಿಲ್ಲದ ಜಿಲ್ಲೆ' ಎಂಬ ಕೀರ್ತಿ ಇಂದು ದಕ್ಷಿಣ ಕನ್ನಡಕ್ಕೆ ದೊರೆತುದಕ್ಕಾಗಿ ಆನಂದಿಸಬೇಕು.

ನೂತನ ಸಂವತ್ಸರದ (1946-1947)

ಶ್ರೀಪತಿ ಪಂಚಾಂಗ

ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.

ಬೆಲೆ 0—5—0.

ವಿಳಾಸ:—

ಶ್ರೀಪತಿ ನರಸಿಂಹ ಅಡಿಗ,

ಬೇಳೂರು ಗ್ರಾಮ, ಪೋಸ್ಟ್ ಕೋಟ.

ಅಥವಾ

ನವಭಾರತ ಬುಕ್ ಡಿಪೋ, ಉಡುಪಿ.

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ, ಇವರು

"ಮುಕ್ತಿ"

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯ

ಬಾಲಿವಾಲಾ ಗ್ರಾಂಡ್ ಥಿಯೇಟರಿನಲ್ಲಿ ಪ್ರದರ್ಶಿಸುವರು

ಲೇಖಕರು, ನಿರ್ಮಾಣಕರು ಮತ್ತು ನಿರ್ದೇಶಕರು:

ಶ್ರೀ ಯಂ. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇಂದಿನ ತನಕ ಪ್ರದರ್ಶಿಸದ ನಾಟಕ. ಮಿಲನ-ವಿರಹ, ಆಶೆ-ನಿರಾಶೆ, ಪ್ರೇಮ-ತಾಪಗಳಿಂದೊಡಗೂಡಿದ ಸಂಸಾರದ ಚಿತ್ರ. ಪತಿಯ ಪ್ರೇಮವನ್ನು ಪಡೆಯಲು ಹೆಣಗಾಡಿದ ಸತಿಯ ಜೀವನ. ಪ್ರೇಮಕ್ಕಾಗಿ ಸರ್ವಸ್ವವನ್ನೂ ತ್ಯಜಿಸಲು ಸಿದ್ಧಳಾದ ಸಿನೆಮಾ ನಟಿಯ ನೈಜ ಪರಿಚಯ. ಹಣಗಳಿಸಲು ಬ್ಲ್ಯಾಕ್ ಮಾರ್ಕೆಟಿನವರು ಮಾಡಿದ ಕಾರಸ್ಥಾನ.

ಕಲೆಯ ಪರಿಚಯವನ್ನು ಮಾಡಿ ಅದರ ಸೇವೆಯನ್ನು ಮಾಡಲು ಹೊರಟಿರುವ ಪಾತ್ರವರ್ಗವು ನಟನೆಯಲ್ಲಿಯೂ ನೈಜ ರೂಪವನ್ನು ತೋರುವರು.

ಕೇವಲ ಮೂರು ಪ್ರಯೋಗಗಳು

೧ನೇ ಪ್ರಯೋಗ. ಶನಿವಾರ ತಾ. 30 ಮಾರ್ಚ ಮಧ್ಯಾಹ್ನ ಮೂರು ಘಂಟೆಗೆ

೨ನೇ ,, ಬುಧವಾರ ತಾ. 10 ಎಪ್ರಿಲ್ ,, ,, ,,

೩ನೇ ,, ಶುಕ್ರವಾರ ತಾ. 19 ,, ಬೆಳಿಗ್ಗೆ ಒಂಭತ್ತು ಘಂಟೆಗೆ

ಟಿಕೇಟಿನ ದರ ಟ್ಯಾಕ್ಸ್ ಸಹಿತ

ರೂ. 10-0-0: 7-8-0: 5-0-0: 2-8-0: 1-4-0: 0-10-0.

ರಿಸರ್ವ ಈ ಕೆಳಗಿನ ವಿಳಾಸದಲ್ಲಿ ಮಾಡಿರಿ

Precision Radio & Electrical Mfg. Co.

No. 1. Ishwardas Mansion, Nana chowk,

BOMBAY 7

M. S. SHETTY
MANAGING DIRECTOR.

P. K. NAIR
GENERAL MANAGER.

The Pangal Nayak Bank Limited.

(Incorporated in 1920.)

Registered Office: Court Road, UDIPI.

Sub-Offices at— **Udipi, Mangalore, Katapadi, Kanhangad, Kinnigoli, Nileshwar and Suratkal,** South Canara.

SEASON DEPOSITS for THREE & FOUR

months at a special rate of interest are accepted at all the above offices.

All kinds of up-to-date Banking service is provided promptly.

Please call for particulars of business

Dated the 5th January 1946.

ದೇಶ-ವಿದೇಶ

ಹಿಂದೀ ಆಯ-ವ್ಯಯ ಪಟ್ಟಿ

ಆರು ವರುಷಗಳ ನಂತರ ಇದೀಗ ಮೊದಲ ಬಾರಿ ಹಿಂದೀ ಸರಕಾರದ ಅರ್ಥ ಸಚಿವ ಸರ್. ಆರ್ಚಿಬಾಲ್ಡ್ ರೌಲೀಂಡ್ಸ್‌ರು ಮುಂದಿಟ್ಟ ಭಾರತೀಯ ಬಜೇಟಿನ ಮುಖ್ಯಾಂಗಗಳಿವು:—'ವಿಶೇಷಾದಾಯಗಳ ಮೇಲಿನ ತೆರಿಗೆ'ಯು 1946ನೇ ಮಾರ್ಚಿ 31ರಿಂದ ರದ್ದಾಗುವದು. ಕೆರೋಸಿನ್ ಎಣ್ಣೇ ಮೇಲಿನ ಸುಂಕವು ಗೆಲನಿಗೆ 4 ಆಣೆ 6 ಪೈ ಇದ್ದುದನ್ನು 3 ಆಣೆ 9 ಪೈಗೆ ತಗ್ಗಿಸಲಾಗುವದು. ಮೋಟಾರ್ ಸ್ಪಿರಿಟಿನ ಮೇಲಿನ ಸುಂಕವು ಗೆಲನಿಗೆ 15 ಆಣೆಯಿದ್ದುದನ್ನು 12 ಆಣೆಗಿಳಿಸಲಾಗುವದು. ಆಮದಾಗುವ ಅಡಿಕೆಯ ಮೇಲಿನ ಸುಂಕವನ್ನು ಸಲ್ ಚಾರ್ಜ್ ಇಲ್ಲದೇನೇ ಪೌಂಡಿಗೆ 5½ ಆಣೆಗೇರಿಸಲಾಗುವದು. ಭಂಗಾರದ ಬುಲ್ಲಿಯನ್ ಮತ್ತು ನಾಣ್ಯಗಳ ಮೇಲೆ ತೊಲೆಗೆ ರೂ 25ರ ಹೊಸ ತೆರಿಗೆ ಹಾಕಲಾಗುವದು. ಸದ್ಯ ಬೆಳ್ಳಿಯ ಸುಂಕ 3 ಆ. 7½ ಪೈ ಇರುವದು 8 ಆಣೆಗೇರುವದು. ರೂ. 3500ರ ಅಂತಸ್ತಿನ ಮೇಲಿದ್ದ 15 ಪೈ ಆದಾಯ ತೆರಿಗೆಯನ್ನು 12 ಪೈಗೂ, ರೂ. 5000ದ ಅಂತಸ್ತಿಗಿದ್ದ ಆದಾಯ ತೆರಿಗೆ 2 ಆ. 1 ಪೈಯನ್ನು 2 ಆಣೆಗೂ ತಗ್ಗಿಸಲಾಗುವದು. ಆದಾಯ ಕಕ್ಷೆಯಲ್ಲಿ ಬರುವ ರೂ. 15000ಕ್ಕೆ ಮೇಲಿನ ಆದಾಯ ತೆರಿಗೆಯನ್ನು 0-4-9 ಪೈಯಿಂದ 5 ಆಣೆಗೇರಿಸಲಾಗುವದು.... ಇತ್ಯಾದಿ, ಇತ್ಯಾದಿ

ಪಂಜಾಬಿನಲ್ಲಿ

ಸರ್ವಿಶ್ರ ಮಂತ್ರಿಮಂಡಲ ರಚಿಸಬೇಕೆಂಬ ಕುರಿತು ಕಾಂಗ್ರೆಸ್ ಮತ್ತು ಲೀಗುಗಳೊಳಗೆ ತೀವ್ರ ಮೇಲಾಟ ನಡೆದಿದೆ. ಕಾಂಗ್ರೆಸ್-ಯೂನಿಯನಿಸ್ಟ್; ಅಕಾಲೀ ಪಕ್ಷಗಳನ್ನು ಸಂಯುಕ್ತಗೊಳಿಸಲು ಮೌ. ಆಜಾದರು ಸ್ವತ: ಅಲ್ಲಿ ಹೋಗಿ ಕಾಂಗ್ರೆಸ್ ಪಕ್ಷಕ್ಕೆ ಸಲಹೆ, ಸಹಾಯವೀಯುತ್ತಿದ್ದಾರೆ. ಲೀಗ್ ಮತ್ತು ಸಿಖ್ಖರ ಅಕಾಲೀ ಪಕ್ಷವನ್ನೊಂದುಗೂಡಿಸಿ ಅಧಿಕಾರ ವಹಿಸಿಕೊಳ್ಳಬೇಕೆಂದು ಲೀಗ್ ಕಾರ್ಯದರ್ಶಿ ನವಾಬಝಾದಾ ಲಿಯಾಖತ್ ಅಲೀಖಾನರೂ ಲಾಹೋರಿಗೆ ಹೋಗಿ ಪ್ರಯತ್ನಿಸುತಿದ್ದಾರೆ. ಪಂಜಾಬ್ ಮುಸ್ಲಿಂ ಲೀಗ್ ಪಕ್ಷದ ನಾಯಕ ಮಾಮ್ದೋತಿನ ನವಾಬರು ಮೌ. ಆಜಾದರೊಡನೆ ಮಾತುಕತೆ ನಡೆಸಿದ್ದಾರೆ. ಯಾವುದೊಂದು ತೀರ್ಮಾನವೂ ಇದುವರೆಗಾಗಿಲ್ಲ.

ಬಿಹಾರಿನಲ್ಲಿ.

ಈಗ ಚುನಾವಣೆಗಳಾರಂಭವಾಗಿವೆ. ಕಾನ್‌ಪುರ, ಕುಂತಿ, ಗುಮ್ಲ ಮೊದಲಾದ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಅಲ್ಲಿಯ ಆದಿವಾಸಿ ಪಕ್ಷಕ್ಕೂ ತಿಕ್ಕಾಟಗಳಾಗಿ ಹಲವರು ಜಖಂಗೊಂಡ ವಾರ್ತೆಯಿದೆ. ಕುಂತಿ ಡಿವಿಜನಿನ ತಾಷ್ಕಾರಾ ರಝೂರಿನಲ್ಲಿ ನಡೆದ ಇಂತಹ ಗಲಭೆಯೊಂದರಲ್ಲಿ ಪೋಲೀಸರು ಗುಂಡು ಹಾರಿಸಿ, ಆರು ಮಂದಿ ಮಡಿದಿರಬೇಕೆಂದು ಅನಧಿಕೃತ ವಾರ್ತೆ. ಚೋಟಾ-ನಾಗಪುರ್ ಭಾಗವನ್ನು ಬಿಹಾರಿನಿಂದ ಪ್ರತ್ಯೇಕಿಸಬೇಕೆಂದೇ ಆದಿವಾಸಿಗಳ ವಾದ.

ಸ್ಪೈಯಿನಿನ ಫ್ರಾಂಕೋ.

ಸರಕಾರವನ್ನು ಕಿತ್ತೊಗೆಯಬೇಕೆಂದು ಮಿತ್ರ ರಾಷ್ಟ್ರಗಳ, ವಿಶೇಷವಾಗಿ ರಶ್ಯದ ಉದ್ದೇಶವಿದೆ. ಫ್ರಾನ್ಸ್ ಮತ್ತು ಸ್ಪೈಯಿನ್ ನಡುವಿನ 300 ಮೈಲುದ್ದದ ಗಡಿಯನ್ನು ಫ್ರಾನ್ಸ್ ಸರಕಾರವು ಮುಚ್ಚಿದೆ. ಜನರಲ್ ಫ್ರಾಂಕೋ ತನ್ನ ಮಂತ್ರಿ ಮಂಡಲದ ಸಭೆ ಸೇರಿಸಿ ಈ ಘಟನೆಯನ್ನು ತೀವ್ರವಾಗಿ ಖಂಡಿಸಿ ತ್ರಿಮೂರ್ತಿಗಳಿಗೆ ಉತ್ತರ ಕೊಟ್ಟಿದ್ದಾನಲ್ಲದೆ ಫ್ರಾನ್ಸಿನ ಗಡಿಯಲ್ಲಿ ಸ್ಪೈಯಿನಿನ ಸೇನಾ ಸಂಗ್ರಹವಾಗಿದೆ ಎಂದು ತಿಳಿದು ಬರುತ್ತದೆ.

ರೈಲ್ವೇ ಅಪಘಾತ

ಡೆಹರಾಡನ್ ಎಕ್ಸ್‌ಪ್ರೆಸ್ ರೈಲು ಬಂಡಿಯು, ಲಕ್ನೋವಿಗೆ 48 ಮೈಲು ದೂರದ ಭಾಗುವಾಲಿ ರೈಲ್ವೇ ಸ್ಟೇಶನಿನಬಳಿ ಇದೇ ತಾ 4ರಲ್ಲಿ ಒಂದು ಗುಡ್ಸ್ ಟ್ರೈನಿಗೆ ಢಿಕ್ಕಿ ಹೊಡೆದು ಭೀಕರ ಅನಾಹುತವಾಗಿದೆ. 30 ಮಂದಿ ಮಡಿದು 100ಕ್ಕೂ ಮಿಕ್ಕಿ ಜಖಂ ಗೊಂಡರೆಂದು ವಾರ್ತೆ ಬಂದಿದೆ.

ಹಿಂದೀ ಆಹಾರ ಸಮಿತಿಯು

ಲಂಡನಿನಲ್ಲಿ ಅಲ್ಲಿಯ ಆಹಾರ ಸಮಿತಿಯೊಡನೆ ಪರ್ಯಾಲೋಚನೆ ನಡಿಸಿ ಈಗ ವಾಷಿಂಗ್ಟನಿಗೆ ಹೊರಟಿದೆ. ಲಂಡನ್ನಿನಲ್ಲಿ ಅದರ ಬೇಡಿಕೆಗೆ ಪೂರ್ಣ ಬೆಂಬಲ ದೊರೆತು ಬ್ರಿಟಿಷ್ ಸರಕಾರವು ಈ ಕುರಿತು ಅಗತ್ಯವುಳ್ಳ ಕಾರ್ಯ ಕೈಕೊಳ್ಳುವೆನೆಂಬ ಆಶ್ವಾಸನೆ ಕೊಟ್ಟಿದೆ.

ರಶ್ಯಾ-ಆಂಗ್ಲೋ ಅಮೇರಿಕಾ ತಿಕ್ಕಾಟ

ಚೀನದ ಮಂಚೂರಿಯದಿಂದ ಶರ್ತ ಪ್ರಕಾರ ರಶ್ಯವು ತನ್ನ ಸೇನೆಯನ್ನು ಹಿಂದೆಗೆಯದಿದ್ದ ಕುರಿತು ಅಮೇರಿಕವು ಜಿಗುಪ್ಸೆ ಪ್ರದರ್ಶಿಸಿದೆ. ಚೀನೀಯರು 'ಕ್ವಿಟ್ ಮಂಚೂರಿಯಾ' ಚಳವಳ ನಡಿಸುತಿದ್ದಾರೆ. ಈ ಚಳವಳಕ್ಕೆ ರಶ್ಯವು ನಿಷೇಧ ಸೂಚಿಸಿದೆ. ಈಗ ರಶ್ಯನ್ ಸೇನೆ ಮಂಚೂರಿಯದಿಂದ ಹಿಂದೆರಳಹತ್ತಿದೆ.

ಇರಾನಿನಿಂದ

ರಶ್ಯವು ತನ್ನ ಸೇನೆಯನ್ನು ಹಿಂದೆಗೆದುಕೊಳ್ಳಬೇಕೆಂದು ಇಂಗ್ಲಾಂಡು-ಅಮೇರಿಕಗಳು ಒತ್ತಾಯಿಸಿ ಅಲ್ಲಿದ್ದ ತಮ್ಮ ಸೇನೆಗಳನ್ನು ವಾಪಾಸು ಕರೆದಿವೆ. ಆದರೆ ರಶ್ಯವು ತನ್ನ ಅರೆವಾಸಿ ಸೇನೆಯನ್ನಷ್ಟೇ ಹಿಂದೆಗೆಯುವದೆಂದೂ, ಅಲ್ಲಿಯ ಗೊಂದಲ ಪ್ರದೇಶವಾದ ಉತ್ತರ ಭಾಗದಿಂದ ಹಿಂದೆಗೆಯುವಂತಿಲ್ಲವೆಂದೂ ಹೊಸ ಧೋರಣೆ ಮುಂದಿಟ್ಟಿದೆ. ಇದರಿಂದ ಅಮೇರಿಕ, ಇಂಗ್ಲಾಂಡುಗಳು ಕೆರಳಿ ಬಿದ್ದು ಅಮೇರಿಕವು ನಿಷೇಧ ಕಳುಹಿದ ವಾರ್ತೆಯಿದೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 144/1944 R.I.A. No. 2078/1945

ವಾದಿ ಮಂಜಯ್ಯ ಹೊಳ್ಳ ತಿಪ್ಪಯ್ಯ ಹೊಳ್ಳರ ಮಗ ಕುಂದಾಪುರ ತಾಲ್ಲೂಕ ವಡೇರಹೋಬಳಿ ಗ್ರಾಮದಲ್ಲಿರುವವ ರಹಿತಾ Post Coondapoor.— ಅರ್ಜಿದಾರ.

4ನೇ ಪ್ರತಿವಾದಿ ಮೈದಿನ್ ಕುಟ್ಟಿಬ್ಯಾರಿ ಬಿರಿಯನ್ ಬ್ಯಾರಿ ಮಗ ಮೈಸೂರು ಪ್ರಾವಿನ್ಸ ಹೊಸನಗರ ತಾಲೂಕು ಸಾಗರಮುನ್ಸಿಫ್ ಕೋರ್ಟ ಚಕ್ಕಬಂದಿ ಕೆರೆಹಳ್ಳಿ ಹೋಬಳಿ ರಿಪನ್ ಪೇಟೆಯಲ್ಲಿರುವವ ವ್ಯಾಪಾರಸ್ಥ, Post Hosanagar— ಎದ್ರಿ.

ಸದ್ರಿ 4ನೆ ಎದ್ರಿಗೆ ತಿಳಿಯಪಡಿಸುವದೇನಂದ್ರೆ—ಸದ್ರಿ ಅರ್ಜಿದಾರನು ಸದ್ರಿ ಎದ್ರಿಯ ಮೇಲೆ ಕೂಡಾ ದಾಖಲು ಮಾಡಿದ ಮೇಲಿನ ದಾವೆಯಲ್ಲಿ ಆದ ಡಿಕ್ರಿಯ ಪ್ಲೆಂಟು ದುರಸ್ತಿ ಕುರಿತು ದಾಖಲು ಮಾಡಿದ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 9-3-46ಕ್ಕೆ ತನ್ಕಿಗೆ ಮುಜೋದಾಗಿರುತ್ತದೆ. ಆ ಕುರಿತು 4 ನೆ ಎದ್ರಿ ಕಡೆಯಿಂದ ಏನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದ್ರೆ ಸದ್ರಿ 4ನೆ ಪ್ರತಿವಾದಿಯನ್ನು ಎಕ್ಸಪಾರ್ಟೆ ಮಾಡಿ ಆತನ ಪರೋಕ್ಷದಲ್ಲಿ ಸದ್ರಿ ಅರ್ಜಿ ತೀರ್ಮಾನಿಸೋಣಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಮೊಕ್ಕಾಂ: ಕುಂದಾಪುರ |
ತಾರೀಕು 28 2 1946 |

(Sd.) M. Mahabala Hebbar
Advocate for Petitioner

ಬೇಕಾಗಿದ್ದಾರೆ

ರಂಗಭೂಮಿಯಲ್ಲಿ ಮತ್ತು ಚಲಚಿತ್ರದಲ್ಲಿ ಪಾರ್ಟನ್ನು ವಹಿಸಲು ರೂಪವತಿಯರಾದ ಮತ್ತು ಗಾಯನ, ನರ್ತನಗಳಲ್ಲಿ ಅಭಿರುಚಿಯುಳ್ಳ ಯುವತಿಯರು ಬೇಕಾಗಿದ್ದಾರೆ. ಛಾಯಚಿತ್ರ ಸಮೇತ ಅರ್ಜಿಯನ್ನು ಬರೆಯತಕ್ಕದ್ದು. ಛಾಯಚಿತ್ರವನ್ನು ಹಿಂದಕ್ಕೆ ಕಳುಹಿಸಲಾಗುವುದು. ಕಲಾಪ್ರೇಮಿಗಳಿಗೆ ಇದೊಂದು ಸುಸಂಧಿ. ಯೋಗ್ಯರಾಗಿಆರಿಸಲ್ಪಟ್ಟವರಿಗೆ ಉತ್ತಮ ಸಂಬಳವನ್ನು ಕೊಡಲಾಗುವುದು. ಕರೆಕಳುಹಿಸದ ಹೊರತು, ಸಮಕ್ಷಮ ಭೇಟಿ ನಿಶೇಧ. ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಿರಿ.

To
The Managing Director
New Karnataka Theatres
C/o Precision Radio &
Electrical Mfg. Co.
No. 1. Ishwardas Mansion
Nana Chowk
Bombay 7

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು 8—3—46ರಿಂದ

ತೆಲುಗು ಚಿತ್ರಗಳಲ್ಲಿ ಮೊದಲ ಮೆಟ್ಟಲೇರಿದ
ಪುರಾಣ ಶ್ರೇಷ್ಠ ಪುಣ್ಯ ಕಥೆ.

ಪಾದುಕಾ

(ರಾಮ ಪಾದುಕಾ ಪಟ್ಟಾಭಿಷೇಕ)

ಬರುವ ಚಿತ್ರ—

ಕಿಂಗ್ ಓಫ್ ಕಿಂಗ್ಸ್.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ.)

ಈ ಔಷಧಿನ ಬಾಟ್ಲುಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಆದರೆ ಕೇವಲ ೪ ಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು. ದ. ಕ.

ಸ್ಥಾಪಕರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

AGAINST DIABETES
&
all its dreadful results
Consult Specialists:
Dr. Alvas' Research
Institute, FAJIR
S. KANARA.

ರತಿಸುಖ ಸಾಧನಗಳು

ಅನೇಕರು ಕೆಟ್ಟ ಸ್ತ್ರೀ ವ್ಯಾಧಿಗಳು ಅಂಟಿಸಿ ಕೊಂಡು ಮರಣಾಂತರಪ್ಪ ವ್ಯಸನಕ್ಕೆ ಗುರಿ ಆಗುವರು. ಆದರಿಂದ

ಸ್ತ್ರೀವ್ಯಾಧಿಗಳು ಯಾವುವು ಸೇರದಂತೆ ಡಾಕ್ಟರುಗಳು ಈ ರಹಸ್ಯ ರಬ್ಬರ್ ಚೀಲವನ್ನು ಕಂಡು ಹಿಡಿದಿರುವರು. ಈ ಚೀಲವನ್ನು ಸಂಭೋಗ ಸಮಯದಲ್ಲಿ ಉಪಯೋಗಿಸುವದರಿಂದ ಸ್ತ್ರೀಸಂಗದಲ್ಲಿ ಆನಂದವನ್ನು ಕೊಡುವುದು. ರತಿಕ್ರೀಡೆಗೆ ಆತಂಕವಿಲ್ಲ, ಮೇದರೋಗದ ಹೆದರಿಕೆಯಿಲ್ಲ. ಗರ್ಭಧರಿಸುವ ಭಯವಿಲ್ಲ.

ಗಂಡಸರ ಮರ್ಮದ ರಬ್ಬರ್ ಚೀಲ 1-8-0.
ಹೆಂಗಸರ ಮರ್ಮದ ರಬ್ಬರ್ ಚೀಲ 2-8-0.

ದಿ. ಸುರಾಟ ಟ್ರೇಡಿಂಗ್ ಕಂಪೆನಿ (N)
ನಂ 275। ದಿ. ಚೈನಾ ಬಜಾರು ರೋಡು
ಜಿ. ಟಿ. ಮದ್ರಾಸು.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವವರ್ಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಕಷ್ಟವಾಗುವುದಿಲ್ಲ —ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. [illegible]

ಜರ್ಮೇನಿಯನ್ ಜೀವನ ಮಿಕ್ಸ್ಚರ್ [illegible]

[illegible]

ಎಮ. ಎಮ. ಜರ್ಮೇನಿಯನ್ [illegible]
[illegible]

ಉಡುಪಿ

ಕೌನ್ಸಿಲು ಸಭೆ—ಇತ್ತೀಚೆಗೆ ಜರಗಿದ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯಲ್ಲಿ ಶ್ರೀಮತಿ ಲೀಲಾಬಾಯಿ ಕಾಮತರು ಕೌನ್ಸಿಲಿನ ಉಪಾಧ್ಯಕ್ಷೆಯರಾಗಿ ಏಕಮತದಿಂದ ಆರಿಸಲ್ಪಟ್ಟರು. ನಗರಸಭೆಯ ಬಜೆಟ್ ವಿಷಯದಲ್ಲಿ ಖರ್ಚಿನ ಭಾಗದಲ್ಲಿ ಕೆಲವು ಕಡಿಮೆ ಮಾಡಬೇಕೆಂದು ಸೂಚಿಸಿದ ಸರಕಾರಿ ಆರ್ಡರನ್ನು ವಿಮರ್ಶಿಸಲಾಯಿತು. ಖರ್ಚನ್ನು ಹೇಗೆ ಕಡಮೆ ಮಾಡಬಹುದೆಂಬುದನ್ನು ಕಮಿಶನರರು ಸೂಚಿಸಬೇಕೆಂದಾಯಿತು. ಚೆಯರ್‌ಮೆನ್ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಕಾಮತರು ಚಹಾ ಸತ್ಕಾರವನ್ನಿತ್ತರು.

ಕರ್ನಾಟಕ ಸಂಘಟನೆ— ಅಧ್ಯಕ್ಷ ಶ್ರೀ ಎಸ್. ರಾಜಗೋಪಾಲ ಕೃಷ್ಣ ರಾಯರು ೩ನೇ ತಾ ೩ರ ಬೆಳಿಗ್ಗೆ ಕಾರ್ಕಳದಲ್ಲಿ ಕರ್ನಾಟಕ ಏಕೀಕರಣ ತಾಲೂಕು ಉಪಸಮಿತಿಯನ್ನು ತಾಲೂಕಿನ ಮುಖ್ಯ ಪ್ರದೇಶಗಳಿಂದ ಸದಸ್ಯರನ್ನಾಯ್ದು ಏರ್ಪಡಿಸಿ ಬಂದಿರುವರು. ಈ ಸಮಿತಿಗೆ ಶ್ರೀ ಪಿ. ವಿ. ಉಪಾಧ್ಯಾಯರು ಅಧ್ಯಕ್ಷರು; ಶ್ರೀ ಕೆ. ಪಿ. ಕಾಮತರೂ ಶ್ರೀ. ಎಚ್. ವಿಠಲ ಶೆಣೈಯರೂ ಕಾರ್ಯದರ್ಶಿಗಳು.

ಪಾಂಗಾಳ—ಇಲ್ಲಿಯ ಹಿಂದೂ ಎಲಿಮೆಂಟರಿ ಶಾಲೆಯ ಹೆತ್ತವರ ಕೂಟದ ಮಹಾಸಭೆಯು ಕಳೆದ ತಾ 25ರಲ್ಲಿ ಉಡುಪಿ ರೇಂಜ್ ಶಾಲೆಗಳ ಡಿ. ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಭಿವೃದ್ಧಿಗೋಸ್ಕರ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಬೇಕೆಂಬ ಸೂಚನೆಯು ಸಭೆಯಲ್ಲಿ ಬಂದಮೇರೆಗೆ ಸಂಘಸ್ಥಾಪನೆಯು ಈ ಸಮಾರಂಭದಲ್ಲೆ ನಡೆಯಿತು ಮರುದಿನ ಹಳೆ ವಿದ್ಯಾರ್ಥಿ ಸಂಘದ ಮಹಾಸಭೆಯು ತಾ 26ರಲ್ಲಿ ಡಾ। ಪಿ. ಗೋಪಾಲಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಕೆ. ಸಂಜೀವ ಭಟ್ಟರ ನೇತೃತ್ವದಲ್ಲಿ ಜರಗಿ 5 ಜನ ಸದಸ್ಯರಿರುವ ಕಾರ್ಯಕಾರೀ ಮಂಡಳಿಯ ರಚನೆಯಾಯಿತು. ಶ್ರೀಗಳಾದ ಡಾ। ಕೆ. ರಾಮಣ್ಣ ಸೆಟ್ಟಿ, ಅಧ್ಯಕ್ಷ, ಪಟೇಲ್ ಪಿ. ರಾಘವೇಂದ್ರ ರಾವ್, ಉಪಾಧ್ಯಕ್ಷ. ಕೆ. ಮುದ್ದಣ್ಣ ಸೆಟ್ಟಿ, ಕಾರ್ಯದರ್ಶಿ. ಪಿ. ಜನಾರ್ಧನ ರಾವ್, ಜತೆಕಾರ್ಯದರ್ಶಿ. ಕೋಟಿಬೀಡು ಅಣ್ಣಯ ಸೆಟ್ಟಿ, ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು. ಈತನಕ ಸಂಘಕ್ಕೆ ಸುಮಾರು ರೂಪಾಯಿ 300 ಧನಸಹಾಯ ದೊರೆತಿರುವುದಾಗಿ ತಿಳಿದು ಬರುತ್ತದೆ

ಕಾಸರಗೋಡು—ರೆಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯ ಚುನಾವಣಾ ಪ್ರಚಾರ ಸಭೆಯೊಂದು, ಕಳೆದವಾರ ಶ್ರೀ ಜೆ. ರಮಾನಂದ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎನ್. ಎಸ್. ಭಟ್ ಮೊದಲಾದವರ ಭಾಷಣಗಳಾದುವು

ದ. ಕ. ಜಿಲ್ಲೆಯಲ್ಲಿ ಎಸೆಂಬ್ಲಿಗೆ ಅವಿರೋಧ ಆಯ್ಕೆ

ಮಂಗಳೂರು ಡಿವಿಜನಿಗೆ ಡಾ। ಯು. ಪಿ. ಮಲ್ಯರೂ ಪುತ್ತೂರು ಡಿವಿಜನಿಗೆ ಶ್ರೀ ಕೆ. ಆರ್. ಕಾರಂತರೂ, ಕುಂದಾಪುರ ಡಿವಿಜನಿಗೆ ಶ್ರೀ ಎ. ಬಿ. ಸೆಟ್ಟಿಯರೂ ಶ್ರೀ ಕೆ. ಈಶ್ವರನವರೂ (ಹರಿಜನ) ಪಶ್ಚಿಮ ಕರಾವಳಿ ಹಿಂದೀ ಕ್ರೈಸ್ತರ ಸ್ಥಾನಕ್ಕೆ ಮಿ. ಎಲ್. ಸಿ. ಪಾಯಸ್ ಅವರೂ ಮದ್ರಾಸ್ ಎಸೆಂಬ್ಲಿಗೆ ಕಾಂಗ್ರೆಸ್ ಟಿಕೇಟಿನಿಂದ ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ. ಮುಹಮ್ಮದೀಸ್ಥಾನಕ್ಕೆ ಲೀಗ್ ಮೆಂಬರರಾದ ಖಾನ್ ಸಾಹೇಬ್ ಎಚ್. ಎಸ್. ಹುಸ್ಸೆನ್ ಸಾಹೇಬರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿರುವರು.

ಬೆಳ್ಳೆ—ಇಲ್ಲಿಯ ಇಗರ್ಜಿ ಕಂಪೌಂಡಿನಲ್ಲಿ ತಾ 3ರಲ್ಲು "ಪುತ್ರವಾತ್ಸಲ್ಯ" ನಾಟಕವೂ, 'ಸ್ಥಳೀಯ ಕಥೋಲಿಕ ಸಂಘದವರಿಂದ 'ವಿಚಿತ್ರ ಆಗಮನ' ವೆಂಬ ನಾಟಕವೂ ಯಶಸ್ವಿಯಾಗಿ ಅಭಿನಯಿಸಲ್ಪಟ್ಟವು ಪುತ್ರ ವಾತ್ಸಲ್ಯ' ನಾಟಕವನ್ನು ಬರೆದು ಮುಖ್ಯ ಪಾತ್ರವಹಿಸಿದ ಶ್ರೀ ದಾಂತಿಯವರಿಗೆ ಕಥೋಲಿಕ ಸಂಘದ ಪರವಾಗಿ ಶ್ರೀ. ಫ್ರಾನ್ಸಿಸ್ ಡೇಸ–ಇವರು ಸುವರ್ಣ ಪದಕವನ್ನು ಇತ್ತು ಸನ್ಮಾನಿಸಿದರು.

(೭ನೇ ಪುಟದಿಂದ ಮುಂದುವರಿದುದು.)

ರುವ ರಾಜಕೀಯ ಧುರೀಣರಿಂದ ಮಾರ್ಗದರ್ಶಿತ್ವ ಅಥವಾ ಮಧ್ಯಸ್ಥಿಕೆ ದೊರೆಯುವ ವರೆಗಾದರೂ ಕಾಯಬೇಕಿತ್ತು. ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಬಂಡಾಯವೆಬ್ಬಿಸಿದ್ದಾಗಿದ್ದರೆ ಅವರ ಅಪರಾಧ ಇಮ್ಮಡಿಯಾಗುತ್ತದೆ. ಸುಸಜ್ಜಿತ ಕ್ರಾಂತಿಕಾರೀ ಪಕ್ಷವೊಂದರ ಕರೆಬಾರದೆ ವಿನಹಾ ಹಾಗೆ ಮಾಡಕೂಡದು. ತಮ್ಮ ಶಕ್ತಿಯಿಂದ ಭಾರತದ ವಿಮೋಚನೆ ಸಾಧಿಸಿಬಿಡುವೆವೆಂದು ಭಾವಿಸಿದ್ದರೆ ಅವರು ಯೋಚನೆಯಿಲ್ಲದವರು ಮತ್ತು ಪ್ರಜ್ಞಾಶೂನ್ಯರು. ಹಿಂದೆಂದೂ ತೋರಿಸದಂತಹ ಕಠಿಣ ದೃಢತೆಯನ್ನು ಹೋರಾಟಗಾರರೀಗ ತೋರಿಸುತಿದ್ದಾರೆ ಎನ್ನುವ ಅರುಣನ ಮಾತು ಸರಿ. ಆದರೆ ಈ ಬಾರಿಯಂತಹ ಸಮಯಹರಿಯದೆ ಆತ್ಮಹತ್ಯಾ ಘೋರಣೆಯ ದೃಢತೆಯು ಖಂಡಿತನವಾಗುವದು.

ಹಿಂಸಾಹಿಂಸೆಯು ಗಣ್ಯವಿಲ್ಲವೆ?

"ಹಿಂಸೆ ಅಥವಾ ಅಹಿಂಸೆಯು ನೀತಿ ರಾಷ್ಟ್ರದ ಏನೊಂದು ಅಭಿರುಚಿಯೂ ಜನರಲ್ಲಿಲ್ಲ" ಎಂದು ಹೇಳಲು ಅರುಣ ಬಾಧ್ಯಳೇ ಇದ್ದಾಳೆ ಆದರೆ ಜನತಾ ಸ್ವಾತಂತ್ರ್ಯವನ್ನು ತರಬಲ್ಲುದಾವುದು, ಹಿಂಸೆಯೋ ಅಹಿಂಸೆಯೋ ಎಂಬುದನ್ನು ತಿಳಿಯಬೇಕೆಂಬ ಕುರಿತು ಜನರಲ್ಲಿ ಅತಿ ಹೆಚ್ಚಿನ ಅಭಿರುಚಿಯಿದೆ ಜನತೆಯು ಇದು ವರೆಗೆ ಎಷ್ಟೇ ಅಶುದ್ಧವಿದ್ದರೂ—ಅಹಿಂಸೆಯ ಹಾದಿಯಲ್ಲೇ ಸಾಗಿದೆ. ಈ ಅಹಿಂಸಾತ್ಮಕ ಪಥವು ಹಲವು ತಲೆಮಾರುಗಳ ಜಾಡ್ಯದಲ್ಲಿದ್ದ ಹಿಂದುಸ್ಥಾನವನ್ನೆಬ್ಬಿಸಲಿಲ್ಲವೇ-ಆ ಆತುರವಷ್ಟೇ ಒಗ್ಗಿದ್ದರೂ ಜನರಲ್ಲಿ ಸ್ವರಾಜ್ಯವೊಂದು ಆತುರವನ್ನು ಅದು ನಿರ್ಮಿಸಲಿಲ್ಲವೇ—ಎಂಬ ಪ್ರಶ್ನೆಗಳನ್ನು ಕುರಿತೊಂದು ಸಲವೂ ಅರುಣಾ ಮತ್ತು ಅವಳ ಕಾಮ್ರೇಡ್‌ಗಳು ತಮಗೆ ತಾವೇ ಕೇಳಿಕೊಳ್ಳಬೇಕು. ಆಗ ಅವರಿಗೆ ಒಂದೇ ಒಂದು ಉತ್ತರ ದೊರೆತೀತೆಂದು ನನ್ನ ಅಭಿಪ್ರಾಯ"

ಉಡುಪಿ ಡಿ. ಮು. ಕೋರ್ಟಿನಲ್ಲಿ—

ಕ್ರಮ ನಂಬ್ರ 347/1940—ಕ್ರಮ ಅರ್ಜಿ ನಂಬ್ರ 460/1941.

ಕಮಲ ಶೆಡ್ತಿ ಕೂಡಾ —(ವಾದಿರು) ಮತ್ತು ತುಂಗಮ್ಮ ಹೆಗ್ಗಡ್ತಿ ಕೂಡಾ —(ಪ್ರತಿವಾದಿರು) ಯಿವರೊಳಗಿನ

ಮೇಲ್ಕಂಡ ದಾವೆಯಲ್ಲಿ ರಿಸೀವರಾಗಿ ನೇಮಕಪಟ್ಟ ಎಡ್ವಕೇಟ್ ಬಿ. ನಾರಾಯಣ ಶೆಟ್ಟಿಯು, ತಾರೀಕು 25—2—46ರಲ್ಲು ಕೊಡೋಣಾದ ಯಿ ಕೋರ್ಟಿನ ಹುಕುಂ ಪ್ರಕಾರ ಕೆಳಗೆ ಕಾಣ್ಸಿದ ತಪಸೀಲು ಮೇರೆಗಿನ ಡಿಕ್ರಿಗಳನ್ನು ಮತ್ತು ಗೇಣಿ ವಸೂಲಿ ಹಕ್ಕನ್ನು ಯಿ ಕೆಳಗೆ ನಮೂದ್ಸಿದ ಶರ್ತಗಳಿಗನುಸರಿಸಿ ತಾರೀಕು 20—3—1946ನೆ ಬುಧವಾರ ಪೂರ್ವಾಹ್ನ ಗಂಟೆ 10ಕ್ಕೆ ಉಡ್ಪಿ ಮ್ಯುನಿಸಿಪಾಲಿಟಿ ಒಳಗಿನ ಮನೆ ನಂಬ್ರ 4789/XIನ, ಸದ್ರಿ ರಿಸೀವರ ಆಫೀಸಿನಲ್ಲಿ ಬಹಿರಂಗವಾದ ಏಲಂಮಿನಲ್ಲಿ ವಿಕ್ರಯಿಸಲ್ಪಡುವುದೆಂತ ಯಿ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ವಿಕ್ರಯಿಸಲ್ಪಡತಕ್ಕ ಡಿಕ್ರಿ ಮತ್ತು ಗೇಣಿ ವಸೂಲಿ ಹಕ್ಕಿನ ತಪ್ಸೀಲು.

ಲೋಟ್ ನಂಬ್ರ	ಸಾಲದ ಸ್ವಭಾವ	ಪೆಸ್ಲೆದಾರ ವ ಹಕ್ಕುದಾರ	ದೇಣೆದಾರನ ಹೆಸರು ಮತ್ತು ವಿಳಾಸ	ವಿವೇಜು
1 (a)	ಉಡ್ಪಿ ಡಿ. ಮು. ಕೋರ್ಟಿನ O. S. 284/42ನೆ ಡಿಕ್ರಿ.	೧ನೇ ವಾದಿ ಕಮಲ ಶೆಡ್ತಿ	ಜಬ್ಬ ಪೂಜಾರಿ, ಗಡೀಮನೆ ರುಕ್ಮ ಪೂಜಾರ್ತಿ ಮಗ–ಹಂದಾಡಿ ಗ್ರಾಮ (ಕುಟುಂಬದ ಪರವಾಗಿ ಸಹಾ)	ಡಿಕ್ರಿ ಅಸ್ಲು ರೂಪ್ಯಾ 140–14–8 ಮತ್ತು ತಾ. 12-4-43ರಿಂದ ಸಾ. ಸೇ. 6%ಲ್ಲಿ ಬಡ್ಡಿ.
1 (b)	ಚಿತ್ರಭಾನು ಸಂವತ್ಸರಕ್ಕೆ ಬರತಕ್ಕ ಚಾಲಗೇಣಿ.		—ಡಿ—	ಅವ್ವಲ್ ತೊಳ್ಸಲು ಅಕ್ಕಿ ಕ್ವಾದೆ ಮುಡಿ 28½ ನಗದು ರೂಪ್ಯಾ 2-8-0. ಹುಲ್ಲು ಸೂಡಿ 250 ವಗೈರೆ ಮತ್ತು ತಾ. 6-3-43ರಿಂದ ಸೇ. 6¼ರಲ್ಲಿ ಬಡ್ಡಿ. (ತಾ. 6-2-44ರಲ್ಲು ಬರಕೊಟ್ಟ ನೋಟೀಸಿನ ಆಧಾರದಿಂದ ಆಂದಿನಿಂದ 3 ವರ್ಷಗಳ ವ್ಯಾದೆ ಇರುತ್ತದೆ.)
2 (a)	ಉಡ್ಪಿ ಡಿ. ಮು. ಕೋರ್ಟಿನ S. C. 306/42ನೆ ಡಿಕ್ರಿ		ಮುತ್ತು ಪೂಜಾರಿ, ಗೋವಿಂದ ಪೂಜಾರಿ ಅಳಿಯ ಉಡ್ಪಿ ತಾಲೂಕು ಹಂದಾಡಿ ಗ್ರಾಮ.	ಡಿಕ್ರಿ ಅಸ್ಲು ರೂಪ್ಯಾ 41–4–0 ಮತ್ತು ತಾ. 24-8-42ರಿಂದ ಸಾ. ಸೇ. 6%ಲ್ಲಿ ಬಡ್ಡಿ.
2 (b)	ಚಿತ್ರಭಾನು ಸಂವತ್ಸರದ ಆದಿಯಿಂದ ತಾ. 8-8-43ವರೇಗಿನ ಪಾಮಾಸ್ಯಾ ಗೇಣಿ.		—ಡಿ—	ವರ್ಷ ನಂದರ ತೊಳ್ಸಲು ಅಕ್ಕಿ ಕ್ವಾದೆ ಮುಡಿ 5ರಂತೆ, ಚಿತ್ರಭಾನು ಮತ್ತು ಸ್ವಭಾನು ಆಂಶಕ್ಕೆ ಬರತಕ್ಕ ಜುಮ್ಲಾ ಗೇಣಿ ಬಾಬ್ತು ಆಗುವ ಸಗ್ತು ರೂಪ್ಯಾ 50–7–0 ಮತ್ತು ಗೇಣಿ ಬಾಕಿ ಮೇಲಣ ಸೇ. 6¼ಲ್ಲಿ ಬಡ್ಡಿ. (ಚಿತ್ರಭಾನು ಗೇಣಿ ಬಾಕಿಗೆ ತಾ. 8-8-43ರಲ್ಲು ಬರಕೊಟ್ಟ ನೋಟೀಸಿನ ಆಧಾರದ ಮೇಲೆ ಅಂದಿನಿಂದ 3 ವರ್ಷದ ವ್ಯಾದೆ ಇರುತ್ತದೆ)
3	ಉಡ್ಪಿ ಡಿ. ಮು. ಕೋರ್ಟಿನ S. C. 73/43ನೆ ಡಿಕ್ರಿ.		ನಾರಾಯಣ ಪೂಜಾರಿ, ಗೋವಿಂದ ಪೂಜಾರಿ ಅಳಿಯ–ಉಡ್ಪಿ ತಾಲೂಕು ಮಟ್ಪಾಡಿ ಗ್ರಾಮ.	ಡಿಕ್ರಿ ಅಸ್ಲು ರೂಪ್ಯಾ 202 10–9 ಮತ್ತು ತಾ. 5 7 43ರಿಂದ ಸಾ. ಸೇ. 6%ಲ್ಲಿ ಬಡ್ಡಿ.
4	–ಡಿ.— S. C. 77/43 ಡಿ.		ಬಚ್ಚಿ ಹೆಂಗ್ಸು, ಹಂಗಾರಕಟ್ಟೆ ಗೋವಿಂದ ಪೂಜಾರಿ ವಿಧವೆ–ಸಾಸ್ತಾನ ಗೊತ್ತಿಲ್ಲ.	ಡಿಕ್ರಿ ಅಸ್ಲು ರೂಪ್ಯಾ 146-9 6 ಮತ್ತು ತಾ. 29 3 43ರಿಂದ ಸಾ. ಸೇ. 6%ಲ್ಲಿ ಬಡ್ಡಿ.
5	ಡಿ — S. C. 78/43 ಡಿ.		ಕೂಸ ಜಟ್ಟು, ಕೂಸ ಕೋಟಿ ಅಳಿಯ ಉಡ್ಪಿ ತಾಲೂಕು ಹಂದಾಡಿ ಗ್ರಾಮ.	ಡಿಕ್ರಿ ಅಸ್ಲು ರೂಪ್ಯಾ 43 7–2 ಮತ್ತು ತಾ. 29-3 43ರಿಂದ ಸಾ. ಸೇ. 6%ಲ್ಲಿ ಬಡ್ಡಿ.
6	– –ಡಿ. O. S. 74/34 ಡಿ.	[illegible]	ಪಾಬಣ್ಣ ಶೆಟ್ಟಿ, ರುಕ್ಮಿಣಿ ಶೆಡ್ತಿ ಮಗ ಉಡ್ಪಿ ತಾಲೂಕು ಹಂದಾಡಿ ಗ್ರಾಮದ ಬೆಂಣೆ ಕುದ್ರು ಕುಟುಂಬದ ಪರವಾಗಿ ಸಹಾ.	ಡಿಕ್ರಿ ಬಾಕಿ ಅಸ್ಲು ರೂಪ್ಯಾ 452 12-4 ತಾ. 11 11 43ರಿಂದ ಸಾ. ಸೇ. 6%ಲ್ಲಿ ಬಡ್ಡಿ. (ಡಿಕ್ರಿ ತಾ. 14-3-34 ಆಗಿದ್ದು 14-3-46ಕ್ಕೆ 12 ವರ್ಷ ಭರ್ತಿ ಆಗುವುದರಿಂದ ಅಮಲ್‌ಜ್ಯಾರಿ ನಡಿಸಿ ವ್ಯಾದೆ ಊರ್ಜಿತ ಇದಲಾಗುವುದು.)

ಮಾರಾಟದ ಶರ್ತಗಳು.

1. ಸರ್ವ ಸಾಧಾರಣ ಸಿ. ಪ್ರೊ. ಕೋಡಿನಲ್ಲಿ ವಿಧಿಸಿದ, ಜರಸೊತ್ತು ಏಲಂಮಿನ ಶರ್ತಗಳನ್ನು ಅನುಸರಿಸ ಲಾಗುವುದು.

2. ಏಲಂಮಿನಲ್ಲಿ ಪಡೆಯುವಾತನು ಮೂರು ವಾರು ಕಾಯಂ ಮಾಡಿದಕೂಡಲೆ ಕ್ರಯದ ಐವೇಜನ್ನು ರಿಸೀವರಿಗೆ ತೆತ್ತು, ಕ್ರಯಕ್ಕೆ ಪಡಕೊಂಡವರ ಖರ್ಚಿನಿಂದ ಟ್ರಾನ್ಸ್‌ಫರ್ ದಸ್ತಾವೇಜು ಮಾಡಿಸಿ ಕೊಳ್ಳತಕ್ಕದ್ದು.

3. ಖರೀದಿದಾರನಿಗೆ ಸಿಲ್ಲುವಾತನು, ದೆಸಕಾಸ್ತು ಆಗತಕ್ಕ ಡಿಕ್ರಿ ವಗೈರೆ ಐವೇಜುಗಳ ಕುರಿತು ಎಲ್ಲಾ ವಿಷಯಗಳನ್ನು ದರ್ಬಾಸ್ತಿಗಿಂತ ಮುಂಚಿತವಾಗಿ ಅಲ್ಲಾದ ವಿಚಾರಿಸಿ ತಿಳಕೊಳ್ಳತಕ್ಕದ್ದು. ಮೇಲೆ ಹೇಳಿದ ತಪಶೀಲುಗಳಲ್ಲಿ ಏನಾದ್ರು ಅಬದ್ಧ ಯಾ ನ್ಯೂನತೆ ಇರುತ್ತದೆಂಬ ಕಾರಣದಿಂದ ಏಲಂ ಆದಬಳಿಕ ಆಕ್ಷೇಪಿಸ ಕೂಡದು.

ಮೊಕ್ಕಾಂ: ಉಡ್ಪಿ.
ತಾ 27–2–1946,

B. Narayana Shetty,
Reciever.

ದಕ್ಷಿಣ ಕನ್ನಡ.

ಮಂಗಳೂರು-

ಜಿಲ್ಲಾ ಆಹಾರ ಸಮಿತಿಯ—ಸಭೆಯು ತಾ. ೨೫ರಂದು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಕಲೆಕ್ಟರರು ಸಂಗ್ರಹಣದ ಕುರಿತು ಮಾಹಿತಿ ಕೊಡುತ್ತ, ೭೪,೨೦೦ ಟನ್ ಸಂಗ್ರಹಿಸುವುದು ನಮ್ಮ ಗುರಿ—ಎಂದರು. ಸುಗ್ಗಿಯ ಬೆಳೆಯು ತುಂಬ ಹಾಳಾದುದರಿಂದ ಇಷ್ಟನ್ನು ಸಂಗ್ರಹಿಸುವುದು ಕಷ್ಟವಾಗಬಹುದೆಂದು ಸಮಿತಿಯ ಸದಸ್ಯರೂ ಅಭಿಪ್ರಾಯಪಟ್ಟರೂ, ಸದ್ಯ ಆಹಾರ ಪರಿಸ್ಥಿತಿಯಿಂದಾಗಿ ನಾವು ಆ ಗುರಿಯನ್ನು ಮುಟ್ಟಲೇಬೇಕಾಗುವುದೆಂದು ಕಲೆಕ್ಟರರು ತಿಳಿಸಿದರು. ಆಕ್ಷೇಪಣೆಗಳ ವಿಚಾರಣೆಯ ಬಗ್ಗೆ ತಕ್ಕ ಸೂಚನೆ ಕೊಡಲಾಗಿದೆ ಎಂದೂ ಕಲೆಕ್ಟರರು ಸೂಚಿಸಿರುವರು. ಏಲಕ್ಕಿ ಮಿಶ್ರಿತರ ತೋಟಗಾರರ ವಿನಂತಿಯನ್ನು ಸ್ವೀಕರಿಸಿದ ಮೇಲೆ ಅಡಿಕೆ ಬೇಸಾಯಗಾರರಿಗೆ ಮಾತ್ರ ಅವರ ಬಳಿಯ ಅಕ್ಕಿ ಸಂಗ್ರಹವನ್ನೂ ಅವರಲ್ಲೆ ಇರಿಸಿಕೊಳ್ಳುವ ರಿಯಾಯತಿ ತೋರಿಸುವುದರಲ್ಲಿ ನ್ಯಾಯವಿಲ್ಲ ಎಂದು ಕಲೆಕ್ಟರರು ವಿವರಿಸಲು ಸಮಿತಿಯು ಅದನ್ನೊಪ್ಪಿತು.

ತೆಂಗಿನ ಕಾಯಿ, ತೆಂಗಿನ ಎಣ್ಣೆ, ಕೊಬ್ಬರಿಗಳನ್ನು ಪ್ರಾಂತದಿಂದ ಹೊರಗೆ ಕಳುಹದಂತೆ ನಿರ್ಬಂಧ ಹೊರಿಸಲು ನಿರ್ಧರಿಸಲಾಯಿತು.

ಹಸುಗೆಯಲ್ಲಿ ಕಡಿತಮಾಡಿದ ಬಳಿಕವೂ ೪೦೦೦ ಟನ್ ಅಕ್ಕಿಯ ಕುಂದುಂಟಾಗಬಹುದು. ಇದನ್ನು ಮುಂದೆ ಅರ್ಧ ಪಾವು ಗಂಜಿಯಾ ಗೋಧಿಯನ್ನು ಬಿಡ್ಡಾಯ ಮಾಡಿಯೆ ತುಂಬಬೇಕಾಗುವುದು ಎಂದು ವಿವರಿಸಲಾಯಿತು. ಅಂತು ಸಧ್ಯ ಈ ವಿಚಾರವನ್ನು ಮುಂದುವರಿಸಲಾಗಿದೆ. ಆದರೆ, ಆಹಾರ ಧಾನ್ಯವನ್ನು ಅತಿ ಜಾಗ್ರತೆಯಿಂದ ಖರ್ಚುಮಾಡತಕ್ಕದ್ದೆಂದೂ, ಉಳಿಕೆ ಏನಾದರೂ ಇದ್ದರೆ ರಿಕ್ವಿಸಿಶನ್ ನೋಟಿಸ್ ಇಲ್ಲದಿದ್ದರೂ ಸ್ಟೋರಿಗೊಪ್ಪಿಸಬೇಕೆಂದೂ ವಿನಂತಿಸಲಾಯಿತು. ಕಾಫಿ ಹೋಟೆಲುಗಳಿಗೆ ಕೊಡುತ್ತಿರುವ ಅಕ್ಕಿಯಾ ಗೋಧಿಯ ಪ್ರಮಾಣದಲ್ಲಿ ಸೆ. ೧೦ರಷ್ಟು ಕಡಿತಮಾಡಿ, ಆ ಅಂಶವನ್ನು ನೆಲಗಡಲೆಯ ರೂಪದಲ್ಲಿ ಕೊಡಲು ನಿರ್ಧಾರವಾಯಿತು. ಉತ್ಸವಾದಿ ವಿಶೇಷ ಕಾರ್ಯಗಳಿಗಾಗಿ ಕೊಡುವ ಪಡಿಯನ್ನೂ ಆದಷ್ಟು ನಿಯಂತ್ರಿಸಬೇಕೆಂದಾಯಿತು. ಗೆಣಸು, ನೆಲಗಡಲೆ, ಮರಗೆಣಸುಗಳ ಉಪಯೋಗದ ಕುರಿತು ಪ್ರಚಾರಮಾಡಲು ನಿರ್ಧಾರವಾಯಿತು. ಹೆಚ್ಚು ಭತ್ತ, ಗೆಣಸು ಇತ್ಯಾದಿಗಳನ್ನು ಬೆಳೆಸುವಂತೆ ಸಮಿತಿಯ ಸದಸ್ಯರೆಲ್ಲರೂ ಪ್ರಚಾರ ಮಾಡಬೇಕೆಂದು ವಿನಂತಿಸಿಕೊಳ್ಳಲಾಯಿತು. ೫೦ ಸಾವಿರ ರೂಪಾಯಿಯ ಗೊಬ್ಬರವನ್ನೂ ೨೫,೦೦೦ ರೂ. ಬೀಜವನ್ನೂ ನಮ್ಮ ಜಿಲ್ಲೆಯಲ್ಲಿ ಧರ್ಮಾರ್ಥ ಹಂಚುವ ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳಲು ನಿರ್ಧರಿಸಲಾಯಿತು. ಗೆಣಸನ್ನು ಜಿಲ್ಲೆಯ ಹೊರಗೆ ಕಳುಹಿಸುವುದನ್ನು ನಿರ್ಬಂಧಿಸಲು ನಿರ್ಧರಿಸಲಾಯಿತು.

ನೇಕಾರರ ಮುಷ್ಕರ—ಈ ಮೊದಲೇ ಆರಂಭವಾಗಬೇಕಾಗಿದ್ದ ಈ ಮುಷ್ಕರವು ಮಾಲಿಕರು ಒಡಂಬಡಿಕೆಗೆ ಒಪ್ಪಲು ಸಮ್ಮತಿಸಿದುದರಿಂದ ನಿಲ್ಲಿಸಲ್ಪಟ್ಟಿತು. ಆದರೆ, ಮಾಲಿಕರು ನೇಕಾರ ಮಜೂರರ ಕೇಳಿಕೆಗಳನ್ನು ಮನ್ನಿಸದಿದ್ದುದರಿಂದ, ತಾ ೨೬ರಂದು ನಗರದ ಹಲವು ಮಗ್ಗದ ಕಾರ್ಖಾನೆಗಳೊಳಗೆ ಕೆಲಸಮಾಡದೆ ತಟಸ್ಥರಾಗಿ ಕುಳಿತು ಮುಷ್ಕರ ಹೂಡಿದರು ರಾತ್ರಿಯಾದರೂ ಮಜೂರರು ಕಾರ್ಖಾನೆಯಿಂದ ಹೋರಡದಿದ್ದುದರಿಂದ ಪೋಲಿಸರ ಸಹಾಯದಿಂದ ಇವರನ್ನು ಹೊರ ಹಾಕಲಾಯಿತು. ಮರುದಿನವೂ ಇದೇ ರೀತಿ ನಡೆಯಿತು. ತಾ. ೨೮ರಿಂದ ನಗರ ನೇಕಾರರ ಕಾರ್ಖಾನೆಗಳಲ್ಲಿ ಮಜೂರರೂ ಕೆಲಸಕ್ಕೆ ಹೋಗದೆ ಅಖಂಡ ಮುಷ್ಕರ ಹೂಡಿದ್ದಾರೆ.

ಹೋಟೆಲುಗಳಿಗೆ ಹೆಚ್ಚು— ಸಕ್ಕರೆ ಮಾರ್ಚ್, ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೊಡಲು ನಿರ್ಧರಿಸಲಾಗಿದೆ.

ಮುಸ್ಲಿಂ ಲೀಗಿನ: ಕೇಂದ್ರ ಸಮಿತಿಯ ಕಾರ್ಯಕಾರಿಗಳಲ್ಲೊಬ್ಬರಾದ ಕಾಸಿ ಮಹಮ್ಮದ್ ಇಸಾ ಅವರು ತಾ. 27ರಂದು ಮಂಗಳೂರಿಗೆ ಆಗಮಿಸಿದರು. ಕೇಂದ್ರ ಎಂ ಎಲ್ ಎಗಳಾದ ಮಲಬಾರಿನ ಸತ್ತಾರ್ ಶೇಟ್ ಇವರ ಅಧ್ಯಕ್ಷತೆಯಲ್ಲಿ ಕೇಂದ್ರ ಮೈದಾನಿನಲ್ಲಿ ಸಭೆ ಸೇರಿತು ಮಹಮ್ಮದ್ ಇಸಾ ಅವರು ಪಾಕಿಸ್ತಾನದ ಕುರಿತು. ಮಾತನಾಡಿ, ಇದನ್ನು ಸಾಧಿಸಲು ಪ್ರತಿಯೊಬ್ಬನೂ ಸಿದ್ಧನಾಗಿರಬೇಕೆಂದೂ ಚುನಾವಣೆಯಲ್ಲಿ ಲೀಗು ಉಮೇದ್ವಾರರೇ ಆರಿಸಿ ಬರುವಂತೆ ಯತ್ನಿಸಿರೆಂದೂ ವಿನಂತಿಸಿದರು.

ಜಿಲ್ಲಾ ಪತ್ರಿಕೋದ್ಯೋಗಿಗಳ ವಾರ್ಷಿಕ ಅಧಿವೇಶನವು ತಾ. 28ರಂದು ಸಂಘದ ಆಫೀಸಿನಲ್ಲಿ ಸೇರಿ ಹೊಸ ವರ್ಷದ ಕಾರ್ಯಕಾರಿ ಮಂಡಲದ ಆಯ್ಕೆಯಾಯಿತು.

ಹಾಲಾಡಿ- ತಾ 28-2-46ರಲ್ಲಿ. ಇಲ್ಲಿ ಬ್ರೆಂಚ್ ಪೋಸ್ಟಾಫೀಸನ್ನು. ಶ್ರೀ ಉಡುಪಿ ಪೋಸ್ಟಲ್. ಇನ್ಸಪೆಕ್ಟರರು ತೆರೆದಿರುವರು.

ವಿಟ್ಲ:—ವಿಠಲ ವಿದ್ಯಾ ಸಮಿತಿಯ ಪರವಾಗಿ ಸಮಿತಿಯ ಮೆಂಬರರಾದ ಶ್ರೀ ತಿರುಮಲ ವರ್ಮರಾಜರು ಮತ್ತು ಶ್ರೀ ಕರುಗವಿಲ್ಲ ಗುರಿಕ್ಕಾರ ತಿಮ್ಮಣ್ಣ ಭಟ್ಟರು ಕೂಡಾ ವಿಟ್ಲದಲ್ಲಿ ಸ್ಥಾಪಿಸಲಿಕ್ಕಿರುವ ಹೈಸ್ಕೂಲಿನ ಸಹಾಯಾಪೇಕ್ಷಿಗಳಾಗಿ, ಬಂಟ್ವಾಳ ಮುಕ್ಕಾಮಿನಲ್ಲಿ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರನ್ನು ಕಂಡಾಗ ತನ್ನ ಹುಟ್ಟೂರಿನ ಹೈಸ್ಕೂಲಿಗೆ ಸಹಾಯಮಾಡುವ ಭರವಸೆ ಕೊಟ್ಟಿರುತ್ತಾರೆ.

ಸೂಡ:—ಬೋರ್ಡು ಎಲಿಮೆಂಟರಿ ಶಾಲೆಯ ಹೆತ್ತವರ ಕೂಟದ ಸಭೆಯು ತಾ 28-2-46ರಲ್ಲಿ ಪಟೇಲ್ ಶ್ರೀ. ಯಸ್ ಶೀನಪ್ಪ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿ, ಉಪಹಾರಾದಿಗಳಿಂದ ಜರಗಿತು.

ಹಾಡಿಗೋಪುರ—ಇದೇ ತಿಂಗಳ ತಾ 8 ನೇ ಶುಕ್ರವಾರ ಉದಿಯಾವರ ಮಹಾ ಗಣಪತಿ ದೇವಸ್ಥಾನದ ವರ್ಷಂಪ್ರತಿ ಜರಗುವ ಉತ್ಸವವು ಜರಗುವುದರಿಂದ ಭಕ್ತ ಮಹಾಜನಗಳು ಬಂದು ಉತ್ಸವದಲ್ಲಿ ಸಹಭಾಗಿಗಳಾಗಿ ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಬೇಕಾಗಿ ವಿನಂತಿ.

ಇನ್ನಂಜೆ—ತಾ 27-2-46ರಲ್ಲು ಇನ್ನಂಜೆಯಲ್ಲಿ ಮಜೂರು ಹೇರೂರು ಮತ್ತು ಇನ್ನಂಜೆ ಗ್ರಾಮಗಳಿಗೆ ಒಂದು ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ಬೈಲೂರು—ಅಖಿಲ ಕರ್ನಾಟಕ. ಏಕೀಕರಣಸಂಘದ ಅಧ್ಯಕ್ಷ ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯರ ಗೌರವಾರ್ಥವಾಗಿ ತಾ 3ನೆಯ ಸಂಜೆಗೆ ನೀರೆಬೈಲೂರಲ್ಲಿ ಧಾರವಾಡದ ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪೆನಿಯ ಕಾರ್ಯದರ್ಶಿಗಳಾದ ಶ್ರೀ ಕಿಣಬ್ರದರ್ಸರು ಏರ್ಪಡಿಸಿದ್ದ ಒಂದು ಸತ್ಕಾರಕೂಟವಿದ್ದಿತು. ಶ್ರೀ ಕಿಣಿಯರ ಸ್ವಾಗತವಾದಮೇಲೆ, ಕರ್ನಾಟಕದಲ್ಲಿ ಸಂಘಗಳ ಅವಶ್ಯಕತೆಯ ಕುರಿತು ಶ್ರೀ ರಾಜಗೋಪಾಲ ಕೃಷ್ಣ ರಾಯರು ಕದಿತರ ವಿಷಯದ ಮೇಲೆ ಶ್ರೀ ಸಿ. ವಿ. ಉಪಾಧ್ಯಾಯರೂ, ಶ್ರೀ ಜಾರ್ಕಳ ನಾಗಣ್ಣ ಹೆಗಡೆ ಮೊದಲಾದವರೂ ಭಾಷಣಮಾಡಿದ ಮೇಲೆ, ಕರ್ನಾಟಕ ಏಕೀಕರಣದ ಕುರಿತು ಶ್ರೀ ಜಿನರಾಜ ಹೆಗ್ಗಡೆಯರು ಸ್ಫೂರ್ತಿದಾಯಕವಾಗಿ ಭಾಷಣ ಮಾಡಿದರು, ಉಪಾಹಾರವೂ ಛಾಯಾಚಿತ್ರವೂ ಮುಗಿದು ಮಾರಣೆ ಬೈಲಿನಲ್ಲಿ ನೆರೆದಿದ್ದ ಸುಮಾರು 300 400 ಮಂದಿ ಗ್ರಾಮಸ್ಥರ ಮಹಾ ಸಭೆಯಲ್ಲಿ ಶ್ರೀ ಜಾರ್ಕಳ ನಾಗಣ್ಣ ಹೆಗ್ಗಡೆಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣದ ವಿಷಯವಾಗಿ ಮತ್ತೆ ಅದೇ ಮುಖಂಡರಿಂದ ಭಾಷಣಗಳಾದುವು.

ಮುಂಬಾಯಿ—ತಾ ೨೪-೨-೪೬ರಲ್ಲಿ ಶ್ರೀ ಭಗವತಿ ನೃತ್ಯಕಲಾ ಮಂಡಳಿಯ ಆರಂಭ ಮಹೋತ್ಸವವು ಶ್ರೀ ಸದಾನಂದ ಮಹಾರಾಜರವರ ಪೌರೋಹಿತ್ಯದಿಂದಲೂ ಶ್ರೀ ಕೆ. ಲಕ್ಷ್ಮೀನಾರಾಯಣ ಕೌಶಿಕರವರ ಅಧ್ಯಕ್ಷತೆಯಿಂದಲೂ ಮಂಡಳಿಯ ಸ್ಥಾಪಕರಾದ ಶ್ರೀ. ಐತಪ್ಪನವರ ಮನೆಯಲ್ಲಿ ವಿಜ್ರಂಭಣೆಯಿಂದ ನೆರವೇರಿಲ್ಪಟ್ಟಿತು. ಶ್ರೀಗಳಾದ ಕೆ. ಸೀತಾರಾಮ ಕೌಶಿಕ್ ಮಾಸ್ಟರ್, ಡಿ. ಯಸ್. ಆವಿನ್ ರಾಮಚಂದ್ರ ಉಚ್ಚಿಲ್, ಕುಂಬಳೆ ನಾರಾಯಣ, ವಿ. ಕೆ. ಕೋಟೆಕಾರ್. ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು, ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ಶ್ರೀ ರಜಕ ಸಂಘ ಮುಂಭಾಯಿ- ಇದರ ಒಂಭತ್ತನೇ ವಾರ್ಷಿಕ ಮಹಾ ಸಭೆಯು ತಾ. 24-2-46ರ ರಲ್ಲು ಸಂಘದ ಅಧ್ಯಕ್ಷ ಶ್ರೀ. ನಾಗಪ್ಪ ಯಸ್. ಕುಂದರರ ಅಧ್ಯಕ್ಷತೆಯಲ್ಲಿ ಕರ್ನಾಟಕ ವೀರ ವ್ಯಾಯಾಮ ಶಾಲಾ ವಠಾರದಲ್ಲಿ ಜರಗಿ ರಚಿಸಲ್ಪಟ್ಟಿತು.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೀ ಮುಸುಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ & ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:—

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT SHWAS-HARI

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ಸೂಚಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು:— ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ. ಐ ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇತ್ಯಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ,ರೂ. 3/- ಕೈಮೀರಿದ ಕೇಸುಗಳಿಗೆ ರೂ. 5. ಗತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE.

F. C. S. (A. E.) Tollygunge, Calcutta

ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ರುವುದೆಂದು ಸವಾಧಾನ ಪಟ್ಟಲ್ಲಿ ಬರಹ ನಿತಿ ಹುಕುಮು ಕೊಟ್ಟು ಸದ್ರಿ ಮದುವೆಯನ್ನು ರದ್ದುಪಡಿಸತಕ್ಕದ್ದು ಈ ಹುಕುಮಿನ ತಾರೀಕಿನಿಂದ ಆ ಮದುವೆಯು ರದ್ದಾಗುವುದು. 10 ಈ ಪರಿಚ್ಛೇದ ಮೇರೆಗಿನ ಅರ್ಜಿಗಳಿಗೆ ಸಾಧ್ಯವಾದ ಮಟ್ಟಿಗೆ 1908ರ ಸಿವಿಲ್ ಪ್ರೊಸೀಜರ್ ಕೋಡಿನ (1908 ಆಕ್ಟ 5) ಪ್ರಕರಣಗಳು ಅನ್ವಯಿಸುವವು. 11. ಪ್ರಕರಣ 4ರ ಮೇರೆಗೆ ಸಿಂಧವಾದ ಮದುವೆಯ ದಾಂಪತ್ಯ ಹಕ್ಕು ಸ್ಥಾಪನಾರ್ಥವಾದ ದಾವೆಯನ್ನು ಯಾವ ಕೋರ್ಟಿಗಾಗಲಿ ದಾಖಲುಮಾಡಿಕೊಳ್ಳುವ ಹಕ್ಕಿರುವುದಿಲ್ಲ.

III ಪೋಷಣೆ ಮತ್ತು ರಕ್ಷಕತ್ವ

12 (i) ಗಂಡನ ರಕ್ಷಣೆಯಲ್ಲಿರುವ ಅಪ್ರಾಯಸ್ಥ ವಿವಾಹಿತ ಹೆಣ್ಣು ಮಕ್ಕಳ ಹೊರತು, ಇತರ ಅಪ್ರಾಯಸ್ಥ ಮಕ್ಕಳು ಮತ್ತು ಹೆಂಡತಿಯು ತಂದೆ ಯಾ ಗಂಡನ ಪೋಷಣೆಗೆ ಹಕ್ಕುದಾರರಾಗಿರುವರು ಆದರೆ ನ್ಯಾಯವಾದ ಕಾರಣವಿಲ್ಲದೆ ಹೆಂಡತಿಯೊಬ್ಬಳು ತನ್ನ ಗಂಡನೊಂದಿಗಿರಲು ನಿರಾಕರಿಸಿದ ಪಕ್ಷದಲ್ಲಿ ಅವಳು ಗಂಡನಿಂದ ಪೋಷಣೆ ಪಡೆಯಲು ಹಕ್ಕುದಾರಳಲ್ಲ (ii) ಉಪಪ್ರಕರಣ (i)ರ ಪ್ರಯಾವ ವಿಷಯವಾದರೂ, ಒಬ್ಬ ವ್ಯಕ್ತಿಗೆ ಆತನ ಕುಟುಂಬ ಯಾ ತವರಿನ ಆಸ್ತಿಯಿಂದ ದೊರೆಯುವ ಅಶನಾರ್ಥದ ಹಕ್ಕಿಗೆ ಬಾಧಕವನ್ನುಂಟುಮಾಡಲಾಗದು. (iii) ಉಪಪ್ರಕರಣ (i)ರ ಮೇರೆಗೆ ಕೋರ್ಟು ಅಶನಾರ್ಥ ಕೊಡಿಸುವಾಗ, ಅಶನಾರ್ಥ ಕೊಡುವ ವ್ಯಕ್ತಿಯ ಸ್ಥಿತಿಗತಿ ಮತ್ತು ಅನುಕೂಲತೆಯನ್ನೂ, ಅಶನಾರ್ಥಿಯ ನ್ಯಾಯವಾದ ಆವಶ್ಯಕತೆಗಳನ್ನೂ ಪರಿಗಣಿಸಿಕೊಳ್ಳತಕ್ಕದ್ದು. 13. ಅಪ್ರಾಯಸ್ಥ ಹೆಂಡತಿಯ ದೇಹ ಮತ್ತು ಆಸ್ತಿಗಳ ವಿಷಯದಲ್ಲಿ ಗಂಡನು ರಕ್ಷಕನಾಗಿರತಕ್ಕದ್ದು. ಮತ್ತು ಪ್ರಕರಣ 15ಕ್ಕೊಳಗಾಗಿ, ಗಂಡಂದಿರ ರಕ್ಷಣೆಯಲ್ಲಿರುವ ಅಪ್ರಾಯಸ್ಥ ವಿವಾಹಿತ ಹೆಣ್ಮಕ್ಕಳ ಹೊರತು, ಉಳಿದ ಅಪ್ರಾಯಸ್ಥ ಮಕ್ಕಳ ದೇಹ ಮತ್ತು ಆಸ್ತಿಯ ಕುರಿತು ತಂದೆಯು ರಕ್ಷಕನಾಗುವನು. ಆದರೆ ಅಂತಹ ರಕ್ಷಕತ್ವವು ಹೆಂಡತಿಯ ಅಥವಾ ಮಕ್ಕಳ ಕುಟುಂಬ ಯಾ ತವರಿನ ಆಸ್ತಿಗಳ ಹಕ್ಕುಗಳಿಗೆ ವ್ಯಾಪಿಸಲಾರದು. 14 ತಂದೆಯು ಮೃತನಾಗಿದ್ದರೆ ಅಥವಾ ಮದುವೆಯು ರದ್ದಾಗಿದ್ದರೆ ತಾಯಿಯು ಅವಳ ಮಕ್ಕಳ ದೇಹ ಮತ್ತು ಆಸ್ತಿಯ ರಕ್ಷಕಳಾಗುವಳು. 15. 13 ಮತ್ತು 14ನೇ ಪ್ರಕರಣಗಳ ಯಾವ ವಿಷಯವಾದರೂ, 1890ರ ಗಾರ್ಡಿಯನ್ ಎಂಡ್ ವಾರ್ಡ್ ಆಕ್ಟಿನ ವ್ಯಾಪನೆಗೆ ಬಾಧಕವನ್ನುಂಟುಮಾಡಲಾರದು.

ಮದ್ರಾಸ್ ಅಳಿಯ ಸಂತಾನ ಮಸೂದೆ.

(೩ನೇ ಪುಟದಿಂದ ಮುಂದುವರಿದುದು)

IV ಮರಣಶಾಸನ ರಹಿತನ್ಮೃತನ ವಾರಿಸ್ಸಾರಿಕೆ

16 ಒಬ್ಬನು ತನ್ನ ಎಲ್ಲಾ ಆಸ್ತಿಗಳ ಕುರಿತು, ಜ್ಯಾರಿಗೆ ಬರತಕ್ಕ ಕ್ರಮವಾದ ಮರಣಶಾಸನ ಮಾಡದೆ ಮೃತನಾದ ಪಕ್ಷದಲ್ಲಿ ಅಂತಹ ಆಸ್ತಿಗಳು ಮರಣಶಾಸನರಹಿತ ಮೃತನ ಆಸ್ತಿಗಳೆಂದು ಪರಿಗಣಿಸಲ್ಪಡುತ್ತವೆ. 17 ಅಳಿಯ ಸಂತಾನ ಗಂಡನೊಬ್ಬನು ಮರಣಶಾಸನವಿಲ್ಲದೆ ಮೃತನಾದ ಪಕ್ಷದಲ್ಲಿ ಅವನ ಸ್ವಾರ್ಜಿತ ಅಥವಾ ಸ್ವಂತ ಆಸ್ತಿಗಳು, ಪ್ರಕರಣ 18, 19, 20, 21, 22, ಮತ್ತು 23ರ ಮೇರೆಗೆ ಕ್ರಮವಾದ ಮತ್ತು ಅವುಗಳ ನಿಯಮಾನುಸಾರವಾದ ವಾರೀಸ್ದಾರರಿಗೆ ಹೋಗತಕ್ಕದ್ದು. 18. ಮರಣಶಾಸನರಹಿತ ಮೃತನಿಗೆ ಜೀವಂತ ಮಗು ಯಾ ಮಕ್ಕಳು, ಅಥವಾ ಅವರ ಸಂತತಿಪರಂಪರೆಯ ಕಿರಿಯ ಅಥವಾ ಕಿರಿಯರು ಯಾ ಇಬ್ಬರೂ, ಮತ್ತು ತಾಯಿ ಯಾ ವಿಧವೆ ವಿಧವೆಯರೂ, ಅಥವಾ ಅವರಿಬ್ಬರೂ ಇದ್ದರೆ ಆತನ ಇಡೀ ಆಸ್ತಿಯು ಅವರೆಲ್ಲರ ಹಕ್ಕಿನದಾಗುವುದು. ತಾಯಿ ಮತ್ತು ವಿಧವೆ ಯಾ ವಿಧವೆಯರಿಲ್ಲದ ಪಕ್ಷದಲ್ಲಿ ಇಡೀ ಆಸ್ತಿಯು ಮಗು ಯಾ ಮಕ್ಕಳಿಗೂ ಅವರ ಸಂತತಿಯವರಿಗೂ ಹೋಗತಕ್ಕದ್ದು ಆದರೆ ಮರಣಶಾಸನರಹಿತ ಮೃತನ ಆಸ್ತಿಗೆ, ಸಂತತಿಪರಂಪರೆ ಹಕ್ಕಿನವನಾದ ಹಿರಿಯರು ಆತನ ಮೊದಲು ಮೃತರಾಗಿದ್ದರೆ ಮಾತ್ರ ಕಿರಿಯರಿಗೆ ಸದ್ರಿ ಆಸ್ತಿಯಲ್ಲಿ ಹಕ್ಕು ಬರತಕ್ಕದ್ದು. 19. ಪ್ರಕರಣ 18ರಲ್ಲಿನ ಈ ವಾರೀಸ್ದಾರರೊಳಗೆ ಈ ಕೆಳಗಣಂತೆ ಆಸ್ತಿಯು ವಿಭಾಗಿಸಲ್ಪಡಬೇಕು. (i) ಒಬ್ಬಳು ಯಾ ಒಬ್ಬಳಿಗಿಂತ ಹೆಚ್ಚು ವಿಧವೆಯರಿದ್ದಲ್ಲಿ ಪ್ರತಿಯೊಬ್ಬ ವಿಧವೆಗೆ ಮಗುವಿನಷ್ಟೇ ಪಾಲಿನ ಹಕ್ಕಿರುವುದು. (ii) ತಾಯಿಗೆ ಮಗುವಿನಷ್ಟೇ ಪಾಲು ಪಡೆಯಲು ಹಕ್ಕಿರುವುದು (iii) ಪ್ರತಿಯೊಂದು ಮಗುವಿಗೂ, ಹೆಣ್ಣಾಗಲಿ ಗಂಡಾಗಲಿ, ಸರಿಸಮಾನ ಪಾಲಿನ ಹಕ್ಕಿರುವುದು. ಆದರೆ ಮಗುವು ಮರಣಶಾಸನರಹಿತ ಮೃತನ ಮೊದಲೇ ಮೃತಪಾಗಿದ್ದಲ್ಲಿ ಅಂತಹ ಮಗುವಿನ ಸಂತತಿ ಪರಂಪರೆಯವರು, ಸದ್ರಿ ಮಗುವು ಸಾಯದೆ ಬದುಕಿದ್ದರೆ ಅದಕ್ಕೆ ದೊರೆಯುತ್ತಿದ್ದಷ್ಟೇ ಪಾಲಿಗೆ ಹಕ್ಕುದಾರರಾಗುವರು. (iv) ಮೃತನ ಮೊಮ್ಮಕ್ಕಳು ಅವರ ತಂದೆ ಯಾ ತಾಯಿಯು ಸಾಯದೆ ಬದುಕಿದ್ದರೆ ಪಡೆಯುತ್ತಿದ್ದ ಪಾಲಿಗೆ ಹಕ್ಕುದಾರರಾಗುವರು, ಆದರೆ ಮೊಮ್ಮಕ್ಕಳು ಕೂಡಾ ಮರಣಶಾಸನರಹಿತ ಮೃತನ ಮೊದಲೇ ಮೃತರಾಗಿದ್ದರೆ, ಸದರಿ ಮೊಮ್ಮಕ್ಕಳ ಸಂತತಿ ಪರಂಪರೆಯವರು ಆ ಮೊಮ್ಮಕ್ಕಳು ಜೀವಂತವಿದ್ದರೆ ಪಡೆಯುತ್ತಿದ್ದ ಪಾಲಿಗೆ ಹಕ್ಕುದಾರರಾಗುವರು (v) ಇದೇ ರೀತಿಯಲ್ಲಿ ಮರಣಶಾಸನರಹಿತ ಮೃತನ ಆಸ್ತಿಯು ಆತನ ಜೀವಂತ ಸಂತತಿ ಪಾರಂಪರ್ಯ ವಾರಿಸ್ದಾರರಿಗೆ, ಅವರು ಆತನ ಮರಿಮಕ್ಕಳಾಗಿರಲಿ, ಅಥವಾ ಅದಕ್ಕಿಂತಲೂ ದೂರದ ವಾರಿಸ್ದಾರರಾಗಿರಲಿ, ಹೋಗತಕ್ಕದ್ದು

ವಿವರಣೆ:- ಮರಣಶಾಸನರಹಿತ ಮೃತನು ಸಾಯುವ ಕಾಲದಲ್ಲಿ ಆತನ ಮಗು, ಮೊಮ್ಮಗು ಅಥವಾ ಇತರ ಹಿರಿಯರು ಜೀವಂತವಿದ್ದ ಪಕ್ಷದಲ್ಲಿ ಅವರ ಕಿರಿಯರಿಗೆ ಆಸ್ತಿಯಲ್ಲಿ ಹಕ್ಕು ಬರಲಾರದು. 20. ಮರಣಶಾಸನರಹಿತ ಮೃತನಿಗೆ ಮಗುವಾಗಲಿ ಮೃತ ಮಗುವಿನ ಸಂತತಿಯವರಾಗಲಿ ಇಲ್ಲದೆ, ತಾಯಿ ಮತ್ತು ವಿಧವೆ ಯಾ ವಿಧವೆಯರು ಮಾತ್ರ ಇದ್ದ ಪಕ್ಷದಲ್ಲಿ ಆತನ ಅರೆವಾಸಿ ಆಸ್ತಿಯು ತಾಯಿಗೂ, ಇನ್ನರೆವಾಸಿ ವಿಧವೆ ಯಾ ವಿಧವೆಯರಿಗೂ ಹೋಗತಕ್ಕದ್ದು. ವಿಧವೆ ಇಲ್ಲದ ಪಕ್ಷದಲ್ಲಿ ಇಡೀ ಆಸ್ತಿಯು ತಾಯಿಗೆ ಹೋಗತಕ್ಕದ್ದು. 21. ಮರಣಶಾಸನರಹಿತ ಮೃತನಿಗೆ ಮಗು ಯಾ ಮೃತ ಮಗುವಿನ ಸಂತತಿಯವರಾಗಲಿ ಅಥವಾ ತಾಯಿಯಾಗಲಿ ಇಲ್ಲ[illegible] ತ್ತು ವಿಧವೆ ಯಾ ವಿಧವೆಯರಿದ್ದರೆ, ಆತನ ಅರೆವಾಸಿ ಆಸ್ತಿಯು ತಾಯಿಯ ತವರಿಗೂ ಇನ್ನರೆವಾಸಿ ವಿಧವೆ ಯಾ ವಿಧವೆಯರಿಗೂ ಸಮಪಾಲಿನಲ್ಲಿ ಹೋಗತಕ್ಕದ್ದು. 22 ಪ್ರಕರಣ 18 ಮತ್ತು 20ರಲ್ಲಿ ಕಾಣಿಸಲ್ಪಟ್ಟ ಯಾವ ವಾರೀಸ್ದಾರರೂ ಮರಣಶಾಸನರಹಿತ ಮೃತನಿಗೆ ಇಲ್ಲದೆ ತಾಯಿಯ ತವರು ಮಾತ್ರ ಇದ್ದಲ್ಲಿ ಇಡೀ ಆಸ್ತಿಯು ಸದರಿ ತವರಿಗೆ ಹೋಗತಕ್ಕದ್ದು 23 ಪ್ರಕರಣ 18, 20 ಮತ್ತು 21ರಲ್ಲಿ ಕಾಣಿಸಲ್ಪಟ್ಟ ಯಾವ ವಾರೀಸ್ದಾರರೂ ಮರಣಶಾಸನರಹಿತ ಮೃತನಿಗೆ ಇಲ್ಲದೆ ಹೋದರೆ ಇಡೀ ಆಸ್ತಿಯು ಆತನ ತಾಯಿಯ ತಾಯಿ (ಅಜ್ಜಿ) ತವರಿಗೆ ಅಥವಾ ಸ್ತ್ರೀ ಸಂತತಿ ಪರಂಪರೆಯಾಗಿ ದೂರದಕ್ಕಿಂತ ಹತ್ತಿರದಕ್ಕೆ ಪ್ರಥಮಹಕ್ಕಿರುವುದು. 24. ಅಳಿಯಸಂತಾನ ಸ್ತ್ರೀಯೊಬ್ಬಳು ಮರಣಶಾಸನರಹಿತ ಮೃತಳಾದರೆ ಅವಳ ಸ್ವಾರ್ಜಿತ ವ ಸ್ವಂತ ಆಸ್ತಿಯು ಅವಳ ತವರಿನ ಆಸ್ತಿಯಾಗಿ ಪರಿಗಣಿಸಲ್ಪಡುವುದು. ಆದರೆ ಅಂತಹ ತವರಿನ ಉಪತವರುಗಳೊಳಗೆ ಸದ್ರಿ ಆಸ್ತಿಯು ತವರುವಾರಾಗಿ ವಿಭಾಗಿಸಲ್ಪಡತಕ್ಕದ್ದು. 25 ತಾಯಿಯ ಮತ್ತು ಅವಳ ಹಿರಿಯ ತವರುಗಳಿಲ್ಲದ ಪಕ್ಷದಲ್ಲಿ ಸದ್ರಿ ಆಸ್ತಿಯು ಗಂಡು ಸಂತತಿ ಪರಂಪರೆಯಾಗಿ ಅವಳ ವಾರೀಸ್ದಾರರಿಗೆ ಹೋಗತಕ್ಕದ್ದು. ಅವರೂ ಇಲ್ಲದ ಪಕ್ಷದಲ್ಲಿ ಅವಳ ಗಂಡನಿಗೆ ಹೋಗತಕ್ಕದ್ದು. 26. (i) ಪಾಲಾಗುವ ವರೆಗೆ ಪ್ರಕರಣ 18, 20 ಮತ್ತು 21ರಲ್ಲಿ ಕಾಣಿಸಲ್ಪಟ್ಟಿರುವ ಆಸ್ತಿಯು ಸ್ವಾಧೀನತೆ ಮತ್ತು ಆಡಳಿತವು ವಾರೀಸ್ದಾರರಲ್ಲಿ ಹಿರಿಯನ ಹಕ್ಕಿನದಾಗಿರುವುದು. (ii) ಪ್ರಕರಣ 21, 22, 23, 24 ಮತ್ತು 25ರಲ್ಲಿ ಕಾಣಿಸಲ್ಪಟ್ಟಿರುವ ತವರಿನ ಯಜಮಾನನು ಸದರಿ ಪ್ರಕರಣದಲ್ಲಿ ಕಾಣಿಸಲ್ಪಟ್ಟಿರುವ ಆಸ್ತಿಯು ಪಾಲಾಗುವ ತನಕ ಅದರ ಸ್ವಾಧೀನತೆ ಮತ್ತು ಆಡಳಿತದ ಹಕ್ಕುದಾರನಾಗಿರತಕ್ಕದ್ದು.

(34ನೇ ಅಖಿಲ ಭಾರತ ಆಯುರ್ವೇದ ಪ್ರದರ್ಶನದಲ್ಲಿ ಸುವರ್ಣ ಪದಕ ಬಹುಮಾನ ಪಡೆದಿದೆ)

ಮಾರ್ಗರೇಟರ

ಫಿಟ್ಸ್ ಕ್ಯೂರ್

ಮಕ್ಕಳ ಭಯಂಕರ ಬಾಲಗ್ರಹವನ್ನು ಅತ್ಯಲ್ಪಕಾಲವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸುವುದು.

ಪ್ರತಿಯೊಂದು ಸ್ಥಳದಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ ಧಾರಾಳ ಕಮಿಶನ್ನು ಹೆಚ್ಚಿನ ಮಾಹಿತಿಗೆ ನಮಗೆ ಬರೆಯಿರಿ

BRIGHTSTAR AGENCIES,
Hospital Road, Udipi, S. K.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು ಮೊದಲ ದಿವಸ ಬೆಳಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕರೂ ಪೋಸ್ಟ ಚಾರ್ಜ ಅಣೆ

ಏಜೆಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

WANTED

Four Secondary Grade Trained Teachers (either sex) and five Higher Ele Trained Teachers (either sex) for Hindu Higher Elementary School, Shirva, Sharada Ele. School, Shirva and Kutyar Vidyadayinee Ele. School. For further particulars apply to—

THE CORRESPONDENT,
Hindu Higher Elementary School, SHIRVA (S. Kanara)

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ

ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು

V ಕುಟುಂಬ ಮತ್ತು ಅದರ ಆಡಳಿತೆ.

27. ಯಜಮಾನನು ವ ಯಜಮಾನಳು ಕುಟುಂಬದ ಆದಾಯ ವೆಚ್ಚಗಳ ನಿಜವಾದ ಲೆಕ್ಕಪತ್ರಗಳನ್ನು ಸರಿಯಾಗಿ ಇಡತಕ್ಕದ್ದು, ಮತ್ತು ವರ್ಷಕೊಮ್ಮೆ ಪ್ರತಿ ಅಗೋಸ್ತು ತಿಂಗಳಲ್ಲಿ ಹಿಂದಿನ ಫಸಲಿಯ ಲೆಕ್ಕಪತ್ರಗಳನ್ನು ಕುಟುಂಬದ ಪ್ರಾಯಸ್ಥ ಮೆಂಬರರೆಲ್ಲರ ಪರಿಶೀಲನೆಗಾಗಿ ಕುಟುಂಬದ ಮನೆಯಲ್ಲಿ ಇಡತಕ್ಕದ್ದು. ಕುಟುಂಬದ ಮೆಂಬರರು ಈ ಲೆಕ್ಕಪತ್ರಗಳ ನಕಲನ್ನಾಗಲಿ ಅದರ ಕೆಲವಂಶವನ್ನಾಗಲಿ ಬರೆದು ತೆಗೆದುಕೊಳ್ಳಬಹುದು. 28. (i) ಕುಟುಂಬದ ಹಿತ ಮತ್ತು ಅವಶ್ಯಕತೆ ಅಥವಾ ಪ್ರಯೋಜನಕ್ಕಾಗಿಯಲ್ಲದೆ, ಮತ್ತು ಕುಟುಂಬದ ಬಹುಪಕ್ಷೀಯ ಪ್ರಾಯಸ್ಥ ಮೆಂಬರರ ಬರಹನಿಶಿ ಸಮ್ಮತಿ ವಿನಹ ಕುಟುಂಬದ ಸ್ಥಿರಸೊತ್ತನ್ನು ಮಾರಲು ಅಥವಾ ಭೋಗ್ಯಾದಿ ಅಡವು ಮಾಡಿಕೊಡಲು, ಅಥವಾ 5 ವರ್ಷಕ್ಕಿಂತ ಹೆಚ್ಚಿಗೆ ವಾಯಿದೆಗೇಣಿಗೆ ಕೊಡಲು ಯಜಮಾನನಿಗೆ ಹಕ್ಕಿರುವುದಿಲ್ಲ. (ii) ಕುಟುಂಬದ ಹಿತ ಮತ್ತು ಆವಶ್ಯಕತೆ ಅಥವಾ ಪ್ರಯೋಜನಕ್ಕಾಗಿಯಲ್ಲದೆ ಯಜಮಾನನು ಕುಟುಂಬದ ಯಾವ ಆಸ್ತಿಯನ್ನಾದರೂ 5 ವರ್ಷಕ್ಕಿಂತ ಹೆಚ್ಚಿನ ವಾಯಿದೆಗೆ ಭೋಗ್ಯಾದಿ ಮಾಡಿಕೊಟ್ಟಲ್ಲಿ ಅಥವಾ ಸಂಪೂರ್ಣವಾಗಿಯಾಗಲಿ ಅಂಶವಾಗಿಯಾಗಲಿ ಹಿಂದೆ ಕೊಡುವ ಶರ್ತದಿಂದ ಮುಂಗೇಣಿ ತೆಗೆದುಕೊಂಡು ವಾಯಿದೆಗೇಣಿಗೆ ಕೊಟ್ಟಲ್ಲಿ ಅದು ಬಂಧುವಾಗಲಾರದು. 29. ಕುಟುಂಬದ ಆವಶ್ಯಕತೆಯ ಹೊರತಾಗಿ ಯಜಮಾನನು ಮಾಡುವ ಯಾವ ಸಾಲವಾಗಲಿ ಆಸ್ತಿ ಅಡವಾಗಲಿ ಕುಟುಂಬದ ಮೇಲೆ ಲಗಾವಾಗಲಾರದು. 30. ಕುಟುಂಬದ ಪ್ರತಿಯೊಬ್ಬ ಮೆಂಬರನು, ಅವನು ಮನೆಯಲ್ಲಿ ವಾಸಿಸಲಿ ವಾಸಿಸದಿರಲಿ, ಕುಟುಂಬದ ಆದಾಯ ಮತ್ತು ಸ್ಥಿತಿಗತಿಯ ಮೇರೆಗೆ ಜೀವನಾಂಶ ಪಡೆಯುವ ಹಕ್ಕುಳ್ಳವನಾಗಿರುವನು. 31. ಈ ಪರಿಚ್ಛೇದದ ಪ್ರಕರಣಗಳು ಪ್ರತ್ಯೇಕ ಆಸ್ತಿ ಇರುವ ಪ್ರತಿಯೊಂದು ಕವರಿಗೂ ಅದೊಂದು ಕುಟುಂಬವೆಂಬಂತೆ ಲಗಾವಾಗುವುದು.

VI ಆಸ್ತಿ ವಿಭಾಗ.

32. (i) ಯಾವುದಾದರೊಂದು ಕವರಿನ ಬಹುಸಂಖ್ಯಾಕ ಪ್ರಾಯಸ್ಥ ಮೆಂಬರರು ಇಡೀ ಕುಟುಂಬದ ಹಕ್ಕಿನದಾದ ಎಲ್ಲಾ ಆಸ್ತಿಗಳಲ್ಲಿ ಪಾಲು ಕೇಳಿ ಅದರಿಂದ ಪ್ರತ್ಯೇಕವಾಗಬಹುದು. ಆದರೆ ಯಾವುದಾದರೊಂದು ಕವರಿಗೆ ಅಥವಾ ಕವರುಗಳಿಗೆ ಸಮಾನ ಸಂಬಂಧವಿರುವ ಹಿರಿಯಳ ಜೀವಿತ ಕಾಲದಲ್ಲಿ ಅವಳ ಸಮ್ಮತಿ ವಿನಹ ಯಾವ ಕವರಿಗೂ ಕುಟುಂಬದಿಂದ ಪಾಲು ಕೇಳುವ ಹಕ್ಕಿರುವುದಿಲ್ಲ. ಈ ಹಿರಿಯಳಿಗೆ 50 ವರ್ಷ ದಾಟಿದ ವಿನಹ, ಅವಳು ಒಂದು ವೇಳೆ ಪಾಲಿಗೆ ಸಮ್ಮತಿ ಕೊಟ್ಟರೆ ಅದು ಬಂಧುವಾಗಿ ಪರಿಗಣಿಸಲ್ಪಡಲಾರದು. (ii) ಕುಟುಂಬದಿಂದ ಒಂದು ಕವರಿನವರು ಪಡೆಯುವ ಪಾಲನ್ನು ಕೂಡ ಆನಂತರ ಕುಟುಂಬದ ಆಸ್ತಿಯಂತೆಯೇ ಸದ್ರಿ ಕವರಿನ ಮೆಂಬರರು ಅನುಭವಿಸಿಕೊಂಡು ಬರಬೇಕು. ವಿವರಣೆ(*a*) ಈ ಪರಿಚ್ಛೇದ ಮತ್ತು VIIನೇ ಪರಿಚ್ಛೇದಕ್ಕಾಗಿ ಒಂದು ಕುಟುಂಬದ ಗಂಡು ಮೆಂಬರನು, ಅಥವಾ ಜೀವಂತ ಮಗು, ಯಾ ಸ್ತ್ರೀ ವಂಶಪರಂಪರೆಯಾಗಿ ಸಂತತಿಯಿಲ್ಲದ ಸ್ತ್ರೀಯು, ಅವನಿಗಿಂತ ಅಥವಾ ಅವಳಿಗಿಂತ ಮೊದಲಿನ ಹಿರಿಯಳು ಜೀವಂತಳಾಗಿಲ್ಲದ ಪಕ್ಷದಲ್ಲಿ ಪ್ರತ್ಯೇಕ ಕವರಾಗಿ ಪರಿಗಣಿಸಲ್ಪಡಬೇಕು. (*b*) ಅಂತಹ ಗಂಡು ಮೆಂಬರನನ್ನು ಅಥವಾ 50 ವರ್ಷ ದಾಟಿದ ಸ್ತ್ರೀಯನ್ನು ಈ ಪರಿಚ್ಛೇದಕ್ಕಾಗಿ ನಿಸ್ಸಂತತಿ ಕವರೆಂದ ಪರಿಗಣಿಸಲಾಗುವುದು. 33 (i) (*a*) ಒಂದು ಕುಟುಂಬವು ಪಾಲಾಗುವಾಗ, ಅದರ ಜೀವಂತ ಮೆಂಬರರೊಳಗೆ ಸದ್ರಿ ಕುಟುಂಬದ ಆಸ್ತಿಯನ್ನು ತಲೆವಾರು ಪಾಲುಮಾಡಿದ ಪಕ್ಷದಲ್ಲಿ ಪ್ರತಿಯೊಬ್ಬ ಮೆಂಬರನಿಗೆ ಎಷ್ಟು ದೊರೆಯುವುದೋ ಅಷ್ಟಕ್ಕೆ ಮಾತ್ರ ಕುಟುಂಬದ ಹಿರಿಯಳು ಹಕ್ಕುದಾರಳಾಗುವಳು. (*b*) ಉಳಿದ ಆಸ್ತಿಯು, ಅಥವಾ ಕುಟುಂಬದ ಹಿರಿಯಳು ಮೃತಳಾಗಿದ್ದರೆ ಇಡೀ ಆಸ್ತಿಯು ಈ ಕೆಳಗಣ ರೀತಿಯಲ್ಲಿ ಪಾಲಾಗತಕ್ಕದ್ದು ಕುಟುಂಬದ ಆರೆವಾಸಿ ಆಸ್ತಿಯು ತಲೆವಾರು, (ಅಂದರೆ ಆಗ ಜೀವಂತವಿರುವ ಕುಟುಂಬದ ಎಲ್ಲಾ ಮೆಂಬರರೊಳಗೆ ತಲೆ ಮೇಲೆ ಪಾಲುಮಾಡಿದ ಪಕ್ಷದಲ್ಲಿ ಒಂದು ಕವರಿಗೆ ಎಷ್ಟು ಬೀಳುವದೋ ಅಷ್ಟು) ಇನ್ನುಳಿದ ಆರೆವಾಸಿ ಮುಖ್ಯ ಕವರುಗಳೊಳಗೆ ಕವರುವಾರು ಪಾಲಾಗತಕ್ಕದ್ದು. ಮುಖ್ಯ ಕವರುಗಳ ಉಪಕವರುಗಳೊಳಗೆ ಪಾಲಾಗುವಾಗಲೂ ಇದೇ ತತ್ವವು ಅನುಸರಿಸಲ್ಪಡಬೇಕು. (ii) (*b*) ಈ ಪ್ರಕರಣದ ಉಪಪ್ರಕರಣ (1)ರ ಮೇರೆಗೆ ನಿಸ್ಸಂತತಿ ಕವರಿಗೆ ದೊರೆಯುವ ಪಾಲು, ಪಾಲಾಗುವಾಗ ಸದರಿ ಕುಟುಂಬದಲ್ಲಿ ಒಂದು ಅಥವಾ ಹೆಚ್ಚು ಸಂತತಿ ಕವರಿದ್ದ ಪಕ್ಷದಲ್ಲಿ ಕೇವಲ ಜೀವನಾಂಶವಾಗಿರಬೇಕು ಇಂತಹ ನಿಸ್ಸಂತತಿ ಕವರಿನ ಕೊನೆಯ ಮೆಂಬರನು ಮೃತನಾದ ಮೇಲೆ ಸದರಿ ಆಸ್ತಿಯು ಅತಿ ಸಮೀಪದ ಸಂತತಿ ಕವರಿಗೆ ಯಾ ಕವರುಗಳಿಗೆ ಹೋಗತಕ್ಕದ್ದು ಒಂದಕ್ಕಿಂತ ಹೆಚ್ಚು ಕವರುಗಳಿದ್ದ ಪಕ್ಷದಲ್ಲಿ ಅವುಗಳೊಳಗೆ ಆ ಆಸ್ತಿಗಳು ಮೇಲಿನ (i) (*b*) ಉಪಪ್ರಕರಣದ ಮೇರೆಗೆ ಪಾಲಾಗತಕ್ಕದ್ದು. ಸಂತತಿ ಕವರೇ ಇಲ್ಲದ ಪಕ್ಷದಲ್ಲಿ ಕೊನೆಯ ಜೀವಂತ ಮೆಂಬರನಿಗೆ ಇಡೀ ಆಸ್ತಿಯು ಇಚ್ಛಾನುಸಾರ ಹೋಗಬೇಕು. 34. ಒಂದು ಕುಟುಂಬದ ಆಸ್ತಿಯು ಗಡಿನಿಶಿ ಪಾಲಾಗುವವರೆಗೆ ಅದರಲ್ಲಿ ಪಾಲಿನ ಹಕ್ಕುಳ್ಳ ಯಾರಿಗಾದರೂ ಆ ಆಸ್ತಿಯಲ್ಲಿ ಜಪ್ತಿ, ವಿಕ್ರಯ ಅಥವಾ ಇನ್ನಾವರೀತಿಯ ಪರಾಧೀನಕ್ಕಾದರೂ ಒಳಗಾಗುವ ಹಕ್ಕಿರುವುದಿಲ್ಲ. 35. ಕುಟುಂಬದ ಆಸ್ತಿ ಪಾಲಾಗುವ ಸಂದರ್ಭದಲ್ಲಿ ಆ ಕುಟುಂಬದ ಹಿರಿಯಳಿಗೆ ದೊರೆಯುವ ಪಾಲು ಜೀವನಾಂಶ ಮಾತ್ರವಿದ್ದು ಅವಳ ಮರಣದ ನಂತರ ಅದು ಅವಳ ಕವರಿನ ಆಸ್ತಿಯಾಗಿ ಪರಿಗಣಿಸಲ್ಪಡಬೇಕು 36. ಈ ಪರಿಚ್ಛೇದದ ಪ್ರಕರಣಗಳು ಪ್ರತಿಯೊಂದು ಕವರಿನ ಆಸ್ತಿಗೂ ಅದೊಂದು ಕುಟುಂಬವೆಂಬಂತೆ ಲಗಾವಾಗತಕ್ಕದ್ದು.

VII ಕುಟುಂಬದ ಅವಿಭಕ್ತತೆ.

37. (i) ಒಂದು ಕುಟುಂಬದ ಪ್ರತಿಯೊಂದು ಕವರಿನ ⅔ನೇ ಅಂಶಕ್ಕಿಂತ ಮಿಕ್ಕಿದ ಪ್ರಾಯಸ್ಥ ಮೆಂಬರರು ಕಲೆಕ್ಟರರಿಗೆ ಅರ್ಜಿಹಾಕಿ ತಮ್ಮ ಕುಟುಂಬವನ್ನು ಅವಿಭಕ್ತವಾಗಿ ರಿಜಸ್ಟ್ರಿಮಾಡಿಸಬಹುದು. (ii) ಇಂತಹ ಅರ್ಜಿಯು ನಿಯಮಿತ ಕ್ರಮ ಮತ್ತು ವಿವರಗಳನ್ನೊಳಗೊಂಡಿರಬೇಕು. (iii) ಕುಟುಂಬದ ಎಲ್ಲಾ ಪ್ರಾಯಸ್ಥ ಮೆಂಬರರಿಗೆ ನೋಟೀಸು ಕೊಟ್ಟು ಮತ್ತು ತನಗೆ ಯುಕ್ತ ಕಂಡ ರೀತಿಯಲ್ಲಿ ವಿಚಾರಣೆ ನಡಿಸಿ, ಕುಟುಂಬದ ಪ್ರತಿ ಕವರಿನ ⅔ನೇ ಅಂಶಕ್ಕೆ ಮಿಕ್ಕಿದ ಪ್ರಾಯಸ್ಥ ಮೆಂಬರರು ಸ್ವೇಚ್ಛೆಯ ಮೇರೆಗೆ ಅರ್ಜಿಗೆ ಸಹಿಹಾಕಿ ತಮ್ಮ ಕುಟುಂಬವನ್ನು ಅವಿಭಕ್ತವಾಗಿ ರಿಜಸ್ಟ್ರಿಮಾಡಲು ಅಪೇಕ್ಷೆಪಟ್ಟಿರುವರೆಂದು ಸಮಾಧಾನಪಟ್ಟಲ್ಲಿ ಕಲೆಕ್ಟರರು ಸದರಿ ಕುಟುಂಬವನ್ನು ಅವಿಭಕ್ತವಾಗಿ ರಿಜಿಸ್ಟ್ರಿಮಾಡತಕ್ಕದ್ದು. (iv) ಹೀಗೆ ಅವಿಭಕ್ತವಾಗಿ ರಿಜಿಸ್ಟ್ರಿಯಾದ ಮೇಲೆ, ಸದರಿ ರಿಜಿಸ್ಟ್ರಿಯು 38ನೇ ಪ್ರಕರಣದ ಮೇರೆಗೆ ರದ್ದುಮಾಡಲ್ಪಡುವ ತನಕ ಅಂತಹ ಕುಟುಂಬಕ್ಕೆ ಪರಿಚ್ಛೇದ VIರ ಪ್ರಕರಣಗಳು ಅನ್ವಯಿಸಲಾರವು. 38. (i) 37ನೇ ಪ್ರಕರಣದ ಮೇರೆಗೆ ಅವಿಭಕ್ತವಾಗಿ ರಿಜಿಸ್ಟ್ರಿಮಾಡಲ್ಪಟ್ಟ ಕುಟುಂಬದ ⅓ನೇ ಅಂಶಕ್ಕೆ ಮಿಕ್ಕಿದ ಪ್ರಾಯಸ್ಥ ಮೆಂಬರರು ಕಲೆಕ್ಟರರಿಗೆ ಅರ್ಜಿಹಾಕಿ ಸದರಿ ರಿಜಿಸ್ಟ್ರಿಯನ್ನು ರದ್ದುಪಡಿಸಿಕೊಳ್ಳಬಹುದು (ii) ಅಂತಹ ಅರ್ಜಿಯು ನಿಯಮಿತ ಕ್ರಮ ಮತ್ತು ವಿವರಗಳನ್ನೊಳಗೊಂಡಿರಬೇಕು. (iii) ಕುಟುಂಬದ ಎಲ್ಲಾ ಪ್ರಾಯಸ್ಥ ಮೆಂಬರರಿಗೆ ನೋಟೀಸು ಕೊಟ್ಟು, ತನಗೆ ಯುಕ್ತಕಂಡ ರೀತಿಯಲ್ಲಿ ವಿಚಾರಣೆ ನಡಿಸಿ, ಕುಟುಂಬದ ⅓ನೇ ಅಂಶಕ್ಕೆ ಮಿಕ್ಕಿದ ಮೆಂಬರರು ಸದರಿ ಅರ್ಜಿಗೆ ಸ್ವೇಚ್ಛೆಯಿಂದ ಸಹಿಹಾಕಿ ತಮ್ಮ ಕುಟುಂಬದ ಅವಿಭಕ್ತತೆಯ ಪದ್ಧತಿಯನ್ನು ಅಪೇಕ್ಷಿಸುವರೆಂದು ಸಮಾಧಾನವಾದಲ್ಲಿ ಕಲೆಕ್ಟರರು ಸದ್ರಿ ರಿಜಿಸ್ಟ್ರಿಯನ್ನು ರದ್ದುಮಾಡಬಹುದು. 39. ಈ ಪರಿಚ್ಛೇದದ ಸಂಬಂಧವಾದ ವ್ಯವಹಾರಗಳ ತನಿಖೆ ನಡಿಸುವಾಗ ಮತ್ತು ಈ ಕೆಳಗಣ ವಿಷಯಗಳ ಕುರಿತು ಕಲೆಕ್ಟರರಿಗೆ 1908ನೇ ಸಿವಿಲ್ ಪ್ರೊಸಿಜರ್ ಕೋಡಿನ ಮೇರೆಗೆ ಕೋರ್ಟಿಗಿರುವ ಅಧಿಕಾರಗಳೇ ಇರುತ್ತವೆ. (*a*) ಕಲೆಕ್ಟರರು ಸಂಬಂಧಪಟ್ಟ ಯಾವನಾದರೊಬ್ಬ ವ್ಯಕ್ತಿಯು ತನ್ನ ಮುಂದೆ ಹಾಜರಾಗುವಂತೆ ನಿರ್ಬಂಧಿಸಿ ಪ್ರಮಾಣಪೂರ್ವಕವಾಗಿ ಆತನ ವಿಚಾರಣೆ ನಡಿಸಬಹುದು (*b*) ಸಂಬಂಧಪಟ್ಟ ದಾಖಲೆಗಳನ್ನು ತನ್ನ ಮುಂದೆ ಹಾಜರುಪಡಿಸುವಂತೆ ನಿರ್ಬಂಧಿಸಬಹುದು. (*c*) ಸಾಕ್ಷಿಗಳ ವಿಚಾರಣೆ ನಡಿಸಲು ಕಮಿಷನುಗಳನ್ನು ನೇಮಿಸಬಹುದು. ಈ ಪರಿಚ್ಛೇದದ ಮೇರೆಗೆ ಕಲೆಕ್ಟರರು ನಡಿಸುವ ವಿಚಾರಣೆಯೆಲ್ಲಾ ಕೋರ್ಟು ವಿಚಾರಣೆಯ ಪ್ರಮಾನುಗುಣವೆಂದು ಪರಿಗಣಿಸಲ್ಪಡುವುದು. 40. ಪ್ರಕರಣ 37ರ ಮೇರೆಗೆ ಒಂದು ಕುಟುಂಬವನ್ನು ಅವಿಭಕ್ತವಾಗಿ ರಿಜಿಸ್ಟ್ರಿಮಾಡುವ ಮತ್ತು ಪ್ರಕರಣ 38ರ ಮೇರೆಗೆ ಸದರಿ ರಿಜಿಸ್ಟ್ರಿಯನ್ನು ರದ್ದುಮಾಡುವ ಕಲೆಕ್ಟರರ ಹುಕುಮು ಕೊನೆಯದಾಗಿದ್ದು ಅದನ್ನು ಪ್ರಶ್ನಿಸಲು ಯಾವ ಸಿವಿಲ್ ಕೋರ್ಟಿಗೂ ಹಕ್ಕಿರಕೂಡದು. 41. ಕಲೆಕ್ಟರರು ಪ್ರಕರಣ 37 ಮತ್ತು 38ರ ಮೇರೆಗೆ ತನ್ನ ಬಳಿಗೆ ಬಂದ ಎಲ್ಲಾ ಅರ್ಜಿಗಳ ಮತ್ತು ಆ ಕುರಿತು ತಾನು ಕೊಟ್ಟ ಹುಕುಮುಗಳ ರಿಜಿಸ್ಟ್ರಿಯನ್ನಿಟ್ಟು ನ್ಯಾಯವಾದ ವೇಳೆಯಲ್ಲಿ ಅದನ್ನು ಪರಿಶೀಲಿಸಬಿಡಬೇಕು. ಮತ್ತು ನಿಯಮಿತ ಫೀಸು ಪಡಕೊಂಡು ಸದರಿ ರಿಜಿಸ್ಟ್ರಿಯ ಯಾವುದಾದರೊಂದು ವಿಷಯದ ಮಂಜೂರು ನಕಲು ಕೊಡತಕ್ಕದ್ದು.

VIII ಇತರ ವಿಷಯಗಳು.

42. ಒಬ್ಬನು ಒಂದು ಆಸ್ತಿಯನ್ನು ತನ್ನ ಹೆಂಡತಿಯ ಹೆಸರಲ್ಲಿ ಮಾತ್ರ ಅಥವಾ ಹೆಂಡತಿ ಮತ್ತು ಒಂದು ಯಾ ಹೆಚ್ಚು ಮಕ್ಕಳ ಹೆಸರಲ್ಲಿ ಅಥವಾ ಅವಳ ಎಲ್ಲಾ ಮಕ್ಕಳ ಹೆಸರಲ್ಲಿ ಮಾತ್ರ ಕ್ರಯಚೀಟು ಮಾಡಿಸಿದರೆ, ಮರಣಶಾಸನ, ಯಾ ದಾನಪತ್ರ ಮಾಡಿಕೊಟ್ಟರೆ, ಆ ಕ್ರಯಚೀಟು ಮರಣಶಾಸನ ವ ದಾನಪತ್ರದಲ್ಲಿ ಅಥವಾ ಸಂಬಂಧಪಟ್ಟವರ ಆ ಕುರಿತಾದ ನಡತೆಯಲ್ಲಿ ಪ್ರತಿಕೂಲ ಉದ್ದೇಶವು ತೋರಿಬಾರದಿದ್ದರೆ ಸದ್ರಿ ಆಸ್ತಿಯು ಆತನ ಹೆಂಡತಿಯ, ಅವನಿಗೆ ಅವಳಲ್ಲಿ ಹುಟ್ಟಿದ ಗಂಡು ಯಾ ಹೆಣ್ಣು ಮಕ್ಕಳ ಮತ್ತು ಸ್ತ್ರೀವಂಶಪರಂಪರೆಯಾಗಿ ಸದ್ರಿ ಹೆಣ್ಣು ಮಕ್ಕಳ ಸಂತತಿಯವರ ಕವರಿನ ಆಸ್ತಿಯಾಗಿ ಪರಿಗಣಿಸಲ್ಪಡಬೇಕು. ಆದರೆ ಅಂತಹ ಕವರಿನ ಉಪಕವರುಗಳೊಳಗೆ ಈ ಆಸ್ತಿಯು ಕವರುವಾರು ಪಾಲಾಗತಕ್ಕದ್ದು.

43 (i) ಈ ಕಾನೂನಿಗನುಸಾರವಾಗಿ ಅದರುದ್ದೇಶಗಳನ್ನು ನೆರವೇರಿಸಲು ಸ್ಥಳೀಯ ಸರಕಾರದವರು ಬೇಕಾದ ನಿಯಮಗಳನ್ನು ಮಾಡಬಹುದು. (ii) ಮೇಲಿನ ಯಾವ ವಿಷಯಕ್ಕಾದರೂ ಪ್ರತಿಕೂಲವಾಗದೆ ಈ ನಿಯಮಗಳು, ವಿಶೇಷವಾಗಿ ಈ ಕಾನೂನನ್ನು ಸ್ಪಷ್ಟಪಡಿಸಲು ಅಗತ್ಯವಾದ ಎಲ್ಲಾ ವಿಷಯಗಳನ್ನೊಳಗೊಳ್ಳಬಹುದು. (iii) ಈ ಪರಿಚ್ಛೇದದ ಮೇರೆಗೆ ಮಾಡಲ್ಪಡುವ ಎಲ್ಲಾ ನಿಯಮಗಳು ಫೋರ್ಟು ಸ್ಯಾಂಟ್ ಜೋರ್ಜ್ ಗಜೆಟಿನಲ್ಲಿ ಪ್ರಕಟಿಸಲ್ಪಡಬೇಕು ಮತ್ತು ಹಾಗೆ ಪ್ರಕಟಿಸಲ್ಪಟ್ಟ ಮೇಲೆ ಈ ಕಾನೂನಿನಂತೆಯೇ ಅವುಗಳು ಜಾರಿಗೆ ಬರತಕ್ಕದ್ದು. 44. (a) ಈ ಕಾನೂನಿನಲ್ಲಿರುವ ಯಾವ ವಿಷಯವಾದರೂ, ಇದು ಜ್ಯಾರಿಗೆ ಬರುವ ಮೊದಲು ರದ್ದತಿ ಹೊಂದಿರುವ ಮದುವೆಯ ಗಂಡ ಹೆಂಡಿರಿಗೆ ಅಥವಾ ಮಕ್ಕಳಿಗೆ ಯಾವ ಹಕ್ಕನ್ನೂ ಕೊಡಲಾರದು. (b) ಈ ಕಾನೂನಿನಲ್ಲಿ ಸ್ಪಷ್ಟವಾಗಿ ಕಾಣಿಸಲ್ಪಟ್ಟಿರುವ ಹೊರತು, ಅಳಿಯ ಸಂತಾನ ಕಾನೂನು, ಪದ್ಧತಿ ಅಥವಾ ರೂಢಿಯ ಇತರ ಯಾವ ಕ್ರಮಕ್ಕಾದರೂ ಲಗಾವಾಗಲಾರದು.

— ಬೇಕು —

ಕಾರ್ಕಳ ತಾಲೂಕು ಆಫೀಸಿನ ಬಳಿಯಲ್ಲಿರುವ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಗೆ ಸೆಕೆಂಡರಿ ಮತ್ತು ಹಾಯರ್‌ಗ್ರೇಡು ಟ್ರೈನಾದ ಉಪಾಧ್ಯಾಯ ಉಪಾಧ್ಯಾಯಿನಿಯರು ಬೇಕು. ಗ್ರ್ಯಾಂಟು ಮತ್ತು ಡಿ. ಎ. ಅಲ್ಲದೆ ತಿಂಗಳಿಗೆ ರೂ. 2-0-0 ಕೂಡಿಸಿ ಹಾಯರ್‌ಗ್ರೇಡಿನವರಿಗೂ, ರೂ. 1-0-0 ಕೂಡಿಸಿ ಸೆಕೆಂಡರಿ ಗ್ರೇಡಿನವರಿಗೂ ಕೊಡಲಾಗುವುದು— ದಿ ಮೆನೇಜರ

ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆ

ಕುಕ್ಕುಂದೂರು P. O. ಕಾರ್ಕಳ, ದ. ಕ.

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2.	ಸಾಮುದ್ರಿಕ ಶಾಸ್ತ್ರ	0	8	0
3.	ಬಾಲ ರಾಮಾಯಣ	0	5	0
4.	ಸುಕನಾ ಚರಿತ್ರೆ	0	5	0
5.	ಕೊಳಲು ಕೃಷ್ಣ	0	8	0
6.	ಗುರುಪೀರಗಳ ಅವನತಿ	0	8	0
7.	ದ್ವೈತಮತ ಖಂಡನೆ	0	6	0
8.	ಧರ್ಮಸಂಕಟ	0	4	0
9.	ಪೂರೂರವ	0	8	0
10.	ನಿಶ್ಚಯ ಜ್ಞಾನ	0	8	0
11.	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13.	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gauthama the Buddha	0	8	0
16.	ಪ್ರಾರ್ಥನೆ	0	2	0
17.	ಹಿಂದೀ ಪಹಲಿ ಪೋತಿ	0	2	0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)	0	4	0
19.	ಭಾರ್ಗ್ವ ಗೀತಾಂಜಲಿ	0	2	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣ ರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮಪ್‌ನಾಳತ್ತ್ ಮನ್‌ಮಾಯೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಗತೆ	0	2	0
ಮಿತ್ಯ ನಾರಾಯಣ ಕತೆ	0	1	0
ಪಕೀ ಕಮಲ್	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. **ದಪ್ಪವಾದ ಹೊದಿಕೆಯುಳ್ಳದ್ದು.**

ಹಳಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪಿ. ಎ. ಪೈ ಬ್ರದರ್ಸ್, ಉಡುಪಿ.
ನವಭಾರತ ಬುಕ್ ಡಿಪೋ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ ೨೮] Founder: SRI A. B. SHETTY. [No. 28

ಉಡುಪಿ ● 14—3—1946 ● ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

REGD.

ಅಮೃತಾಂಜನ. ತಲೆವೇದನೆ, ಶೀತ, ..ನೆ, ಉಳುಕು, ಕೆಮ್ಮಿಗೆ, ಘುಜ, ಹಲ್ಲು ವೇದನೆಗೆ ಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಬಾಧೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

TO THOSE WHO DEMAND SOMETHING BETTER IN LIFE.

In the competitive world of to-day financial backing provides valuable opportunities whether it be in the field of education, commerce or industry. You are certainly desirous that your children should have better opportunities in life.

Ambitious parents like you have found our Children's Endowment Policies suitable for that purpose

THE CANARA MUTUAL ASSURANCE COMPANY, LTD.,

Head Office.- **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—0—0. ಪೋಸ್ಟ ಚಾರ್ಜ ನಿರಾಳ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಹುಂಬರವಾಡಿ ಸ್ಟೋರ್ಸ. ದಾವಣಗೇರಿ— ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ,

ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

— ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು —

ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ತ್ರಿವೇಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ.

The best preventive in epidemics of CHOLERA

"BHUVANENDRA"

CHANDRAMAS Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.**

ದೊಡ್ಡವರಿಗೆ ೪೦ರಿಂದ ೮ ಬೊಟ್ಟು, ಸಣ್ಣ ಮಕ್ಕಳಿಗೆ ೧೦ರಿಂದ ೨ ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। [illegible] ಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank at

MERCARA

ON 23-1-1946.

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಶುಭಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

ಒಂದು ವಿಚಾರಾತ್ಮಕ ಲೇಖನ—ನಂ. ೧.

ಮುಷ್ಕರ ಪ್ರವಾಹದ ಮೂಲವೆಲ್ಲಿ?— ಮೋಸ್ಕೋದಲ್ಲಿ!—

'ವಿಚಾರಿ'ಯಿಂದ.

ದ. ಕ. ಜಿಲ್ಲೆಗೆ ಕೆಲಸಗಾರರ ಸಂಘಟಿತ ಮುಷ್ಕರದ ಅನುಭವ ಈ ಬಾರಿ ಆಗಿದೆ. ಜಿಲ್ಲೆಯ ಕೇಂದ್ರ ಸ್ಥಳಗಳಾದ ಮಂಗಳೂರು, ಉಡುಪಿ, ಬಂಟ್ವಾಳ ಮೊದಲಾದ ಕಡೆಗಳಲ್ಲಿ 'ಬೀಡಿ ಮಜೂರ ಸಂಘ' 'ನೇಯಿಗೆ ಮಜೂರ ಸಂಘ' 'ಹಂಚು ಮಜೂರ ಸಂಘ' ಇತ್ಯಾದಿಗಳು ಸ್ಥಾಪನೆಯಾಗಿ ಕಳೆದ ಕೆಲವು ವರುಷಗಳಿಂದ ಸಂಘಟನೆಗೊಂಡು, ಈ ದಿನ ಅವೆಲ್ಲಾ ಬೀಡಿ ಪಡೆಯುವ ಬದಲಿಗೆ ಹೋರಾಡಿಯೇ ಪಡೆಯುವ ಸ್ಥಿತಿಗೇರಿವೆ. ಕ್ರಮಬದ್ಧವಾಗಿ ಹೇಗಿದ್ದರೂ ಈ ಸಂಘಗಳೆಲ್ಲಾ ಕಮ್ಯೂನಿಸ್ಟರಿಂದಲೇ ಸ್ಥಾಪನೆಗೊಂಡು, ಕಮ್ಯೂನಿಸ್ಟರ ಕೈಯಲ್ಲೇ ಇವೆ. ಜಿಲ್ಲೆಯ ಇಡೀ ಮಜೂರ ವರ್ಗವನ್ನು ಗಣಿಸಿದರೆ ಹೀಗೆ ಸಂಘಟನೆಗೊಂಡಿರುವ ಭಾಗ ತೀರಾ ಕಡಿಮೆ; ನೂರರಲ್ಲೊಂದಂಶವಾಗಬಹುದು; ಅಥವಾ ಅಷ್ಟೂ ಇಲ್ಲ. ಜಿಲ್ಲೆಯ ಜನ ಸಂಖ್ಯೆಯಲ್ಲೇ ಅಧಿಕಾಂಶವಾಗಬಹುದಾದ ರೈತರದೊಂದು ಸಂಘಸ್ಥಾಪನೆ ಯಾರಿಂದಲೂ ಆಗಿಲ್ಲ. ಆ ಕ್ಷೇತ್ರದಲ್ಲಿಯೂ ಕಮ್ಯೂನಿಸ್ಟರ ಪ್ರಯತ್ನ ಆರಂಭವಾದ ಲಕ್ಷಣ ಮಾತ್ರ ಕಾಣುತ್ತಿದೆ. ಸಂಘಟನೆಗೊಂಡಿರುವ ಅಲ್ಪಾಂಶ ಮಜೂರರು ಕಮ್ಯೂನಿಸ್ಟರ ಕೈಯಲ್ಲಿದ್ದಾರೆಂಬುದು ನಿರ್ವಿವಾದ.

ಕಮ್ಯೂನಿಸ್ಟರ ಕೈಯಲ್ಲಿರುವದರಿಂದ

ಸಹಜವಾಗಿ ಕೆಲಸಗಾರರ ಸಂಘಗಳಲ್ಲಿ ಒಂದು ವಿಧದ ದರಗು, ಬಿಂಕ, ಕಠೋರತೆ ಕಂಡುಬರುತ್ತಿದೆ. ಆದರೆ ಕೆಲಸಗಾರರ ನಡುವೆ ಇಷ್ಟೊಂದು ಸಂಘಟನೆ, ಶಕ್ತಿ, ಕಮ್ಯೂನಿಸ್ಟರ ಕೈವಾಡದಿಂದಲ್ಲದೆ ಅನ್ಯಥಾ ಅಸಾಧ್ಯವೆಂಬುದನ್ನು ಒಪ್ಪಬೇಕು. ಇದು ಕೇವಲ ಈ ಜಿಲ್ಲೆಯ ಅನುಭವದಿಂದ ಹೇಳುವ ಮಾತು. ಅವರ ಕಾರ್ಯವಿಧಾನಗಳಾಗಲೀ, ಧ್ಯೇಯ ಘೋಷಣೆಗಳಾಗಲೀ, ಘೋಷ ಘರ್ಜನೆಗಳಾಗಲೀ ಮಿಕ್ಕ ಸಾರ್ವಜನಿಕರು—ಶಾಂತ ಸಭ್ಯ ವಾತಾವರಣವನ್ನು ಉಳಿಸಿಕೊಳ್ಳಬಯಸುವವರು—ಸ್ವಾಗತಿಸುವಂತಹವಲ್ಲ. ಆದರೆ ಅವೆಲ್ಲಾ ಸ್ವಶಕ್ತಿಯಿಂದಲೇ ಮುಂದೊತ್ತಿ ಆಕ್ರಮಿಸುವಂಥವುಗಳು. ಇಲ್ಲಿ ಕೆಲಸಗಾರರ ಬೇಡಿಕೆಗಳು ಮತ್ತವುಗಳಿಗಾಗಿ ಹೂಡುವ ಚಳವಳಗಳನ್ನೇ 'ಆಕ್ರಮಣ'ವೆಂದು ಸಂಬೋಧಿಸಿದೆನೆಂಬ ಅರ್ಥ ಕಟ್ಟಬಾರದು. ಬೇಡಿಕೆಗಳ ವಾದ ಪ್ರತ್ಯೇಕ. ಪ್ರಸ್ತುತ ಲೇಖನವು ಅವುಗಳಿಗೆ ಸಂಬಂಧಿಸಿದ್ದಲ್ಲ. ಕಮ್ಯೂನಿಸ್ಟ ಸೂತ್ರಕ್ಕೊಳಪಟ್ಟಿರುವ ಸಂಘಗಳ ಮನೋವೃತ್ತಿ, ಮತ್ತು ಆ ಪ್ರವಾಹದ ಮೂಲ ಬಗ್ಗೆ ಯಾವುದೆಂಬುದನ್ನು ತೋರಿಸಿಕೊಡುವದೇ ಈ ಲೇಖನದ ಉದ್ದೇಶ. ಉಡುಪಿಯ ಮಜೂರರು ತಮಗೆ ಎರಡುಣೆ ಮಜೂರಿ ಹೆಚ್ಚ ಬೇಕು ಅಥವಾ ಒಂದು ತಿಂಗಳ ಬೋನಸು ಸಿಗಬೇಕು ಎಂಬ ಕಾರಣ ಕೊಟ್ಟು ಮುಷ್ಕರ ಹೂಡಬಹುದು. ಇದು ಸ್ಥಳೀಯ ಮಜೂರ-ಮಾಲಿಕರೊಳಗಿನ ವಾದ. ನ್ಯಾಯಾನ್ಯಾಯ ವಿಚಾರಿಸಿ ತೀರ್ಮಾನಿಸಬೇಕಾದ ವಿಷಯ. ಇಂತಹ ವಿಚಾರಣೆಗೂ ಒಂದು ತಳಹದಿ ಬೇಕಾಗುತ್ತದೆ. 'ಮಾಲಿಕ ಮನೋಗತಿ' ಮತ್ತು 'ಕೆಲಸಗಾರ ಮನೋಗತಿ' ಬೇರೆ ಬೇರೆ ಇವೆ. ಲಾಭ-ನಷ್ಟ, ನೀತಿ-ನಿಯಮ, ಆಚಾರ-ವ್ಯವಹಾರ, ಇವೆಲ್ಲದರಲ್ಲೂ ಆವೆರಡು ಮನೋವೃತ್ತಿಗಳು ಪ್ರತ್ಯೇಕವಾಗಿವೆ. ನಿಜವಾದ ನ್ಯಾಯ ಪಕ್ಷಪಾತಿ, ರಾಷ್ಟ್ರ ಅಥವಾ ಊರಹಿತೈಷಿಯೊಬ್ಬನು ಮಜೂರ ಮನೋವೃತ್ತಿಯನ್ನೇ ಆಸ್ತಿವಾರವಾಗಿ ಇಟ್ಟುಕೊಂಡು ಈ ಜಗಳವನ್ನು ತೀರ್ಮಾನಿಸಿಯಾನು. ಅಂತಹ ತೀರ್ಮಾನಕ್ಕೆ ಮಾಲಿಕನೊಪ್ಪದಿದ್ದರೆ? ಆಗ ಮಾಲಕರ ಅಪರಾಧವನ್ನಿದಿರಿಸಿ ಹೋರಾಡುವದು ಕೆಲಸಗಾರರ ಕರ್ತವ್ಯ; ಅವರಿಗೆ ಬೆಂಬಲವಾಗುವದು ಸಾರ್ವಜನಿಕರ ಕರ್ತವ್ಯ. ಆ ತೀರ್ಮಾನಕ್ಕೆ ಮಾಲಿಕನೊಪ್ಪಿದರೆ? ಆಗಲಾದರೂ 'ಮಾಲಿಕ ನಮ್ಮಾತ'ಎಂದು ಭಾವಿಸುವದು ಕೆಲಸಗಾರರ ಕರ್ತವ್ಯವಾಗುವದಿಲ್ಲವೆ? ಕಮ್ಯೂನಿಸ್ಟರ ಕೈಯಲ್ಲಿರುವ ಸಂಘಗಳಿಗೆ ಆ ಉಪಕಾರಸ್ಮರಣೆ ಮಾಡಲಾಗುವದಿಲ್ಲ. ಮಾತ್ರವಲ್ಲ, ಕಮ್ಯೂನಿಸ್ಟ ಮನೋಗತಿಯು ಪ್ರಥಮತ ಸೌಮ್ಯ ರೀತಿಯಿಂದ ತೀರ್ಮಾನ ಹುಡುಕಿಕೊಳ್ಳಲು ಬಿಡುವದೇ ಇಲ್ಲ. ಕಾರಣವೆಂದರೆ ಸ್ಥಳೀಯ ಜಗಳದಲ್ಲೂ ಕಮ್ಯೂನಿಸ್ಟರಾದವರಿಗೆ ಮುಖ್ಯವಾಗಿ ತಮ್ಮ ತತ್ವ ಪ್ರಚಾರವಾಗಬೇಕು. ದಕ್ಷಿಣ ಕನ್ನಡದ ಮಜೂರ ಚಳವಳಗಳನ್ನು ಅವಲೋಕಿಸುವವರು ಈ ಗುಟ್ಟನ್ನು ಮರೆಯಬಾರದು.

ಮಜೂರ ಮನೋಗತಿ

ಹೀಗೆ ಮೂರು ಮನೋಗತಿಗಳಿವೆ. ಮಾಲಿಕ ಮನೋವೃತ್ತಿ—ಮಜೂರ ಮನೋವೃತ್ತಿ—ಕಮ್ಯೂನಿಸ್ಟ ಮನೋವೃತ್ತಿ. ದ. ಕ. ಮಜೂರ ಸಂಘಗಳು ಕಮ್ಯೂನಿಸ್ಟ ಮನೋವೃತ್ತಿಯನ್ನು ತಾಗಿಸಿಕೊಂಡಿವೆ. ಈ ಪೈಕಿ ಮಾಲಿಕ ಮನೋವೃತ್ತಿ ಪ್ರಥಮತಃ ಖಂಡನೀಯ; ಅದರ ಕಾಲ ಮುಗಿದಿದೆ; ಅದನ್ನು ತೆಗೆದೇ ಹಾಕಬೇಕು. ಆ ಮೇಲೆ ಉಳಿಯುವ ಚೇತನಮಯೀ ಮಜೂರಮನೋವೃತ್ತಿಯನ್ನು ಕಮ್ಯೂನಿಸ್ಟ ಮನೋವೃತ್ತಿಯ ಮೇಲೆ ಯುದ್ಧಕ್ಕೆಬ್ಬಿಸಬೇಕು. ಭಾರತದಲ್ಲಿ ಇಂದು ಅಗತ್ಯವಾಗಿ ಆಗಬೇಕಾದ ಕಾರ್ಯವಿದು. ಕಮ್ಯೂನಿಸ್ಟರು ಈ ವಾದದಿಂದ ಉರಿದು ಬೀಳಬಹುದು. 'ಫೇಸಿಸ್ಟ ವಾದವೆಂದರೆ ಇದೇ' ಎಂಬ ಬಿರುದು ಕೊಡಬಹುದು; ತಮ್ಮದೇ ಮಜೂರ ಮನೋವೃತ್ತಿಯೆಂದು ಸಾಧಿಸಬಹುದು. ಆದ್ದರಿಂದ ಮಜೂರ—ಕಮ್ಯೂನಿಸ್ಟ ಭಿನ್ನ ಮನೋಗತಿ ಯಾವದೆಂಬುದನ್ನು ಇಲ್ಲಿ ತೋರಿಸಿ ಕೊಡುವದು ಅಗತ್ಯ. 'ಸಮಾಜವಾದೀ ಸರಕಾರ'ಅಥವಾ 'ಜನತಾ ರಾಜ್ಯಭಾರ' ಸ್ಥಾಪನೆಯೇ ಮಜೂರರ ಗುರಿಯಾಗಬೇಕು; ಕಮ್ಯೂನಿಸ್ಟರ ಗುರಿಯೂ ಅದೇ. ಹೀಗೆ ಧ್ಯೇಯ ವ್ಯತ್ಯಾಸವಿಲ್ಲದ್ದರಿಂದಲೇ ಮಜೂರರನ್ನು ಕಮ್ಯೂನಿಸ್ಟರು ಸುಲಭದಲ್ಲಿ ಆಕರ್ಷಿಸಿಕೊಳ್ಳಬಲ್ಲರು. ಆದರೆ ಅದರ ಸಾಧನೆಯ ವಿಧಾನ ಮಾತ್ರ ಇವೆರಡರೊಳಗೆ ಸಂಪೂರ್ಣ ಭಿನ್ನವಾದುದಷ್ಟೇ ಅಲ್ಲ—ಪರಸ್ಪರ ವಿರುದ್ಧವಾದುದು. ದೃಷ್ಟಾಂತಕ್ಕಾಗಿ ದಕ್ಷಿಣ ಕನ್ನಡವನ್ನೇ ಕಣ್ಣ ಮುಂದಿಟ್ಟುಕೊಳ್ಳೋಣ. ...ದಲ್ಲಿ ಜನತಾ ರಾಜ್ಯಭಾರ ಬೇಕೆಂಬ ಗುರಿಯುಳ್ಳ ಒಬ್ಬ ಮಜೂರನು ತಾನು ಅದಕ್ಕಾಗಿ ಇಲ್ಲಿಯ ಮಾಲಕರೊಡನೆ ಹೋರಾಡಬೇಕಾಗಿದೆ ಎಂದು ಎಂದಿಗೂ ತಿಳಿಯಲಾರ. ಅವನು ಇಲ್ಲಿ ಹೂಡುವ ಮುಷ್ಕರ, ಎಬ್ಬಿಸುವ ಜೈಘೋಷ, ವಹಿಸುವ ಧೋರಣೆ-ಎಲ್ಲವುಗಳಲ್ಲೂ ನ್ಯಾಯ ಸಂಪಾದಿಸಿಕೊಳ್ಳುವ ಒಂದೇ ವಾದ ಇದ್ದೀತು. ಓರ್ವ ಧನಿ ನ್ಯಾಯವಾನ ನಾದರೆ ಆ ದಿನದ ಸಭೆಯಲ್ಲಿ ಆತನಿಗೆ ಧನ್ಯವಾದ ದೊರೆತೀತು. ಆತನನ್ನು ಅಭಿನಂದಿಸಬಾರದೇಕೆ? ರೂ. 2000 ಇದ್ದವನೊಬ್ಬ ಹತ್ತಿಪ್ಪತ್ತು ಮಂದಿಗೆ ಕೆಲಸ ಕೊಡುವ ಬೀಡಿ ಕಾರ್ಖಾನೆಯನ್ನೋ, ಮೂರು ನಾಲ್ಕು ಮಗ್ಗಗಳನ್ನೋ ಇಟ್ಟಾನು. ಭಾರತದಲ್ಲಿ ಸಮತಾವಾದ ಜಾರಿಗೆ ಬಂದರೂ 2000 ರೂ. ಇಟ್ಟುಕೊಳ್ಳುವದು ಕಾಯಿದೇ ವಿರುದ್ಧವಾಗುವಂತಿಲ್ಲ. ಅಂದ ಮೇಲೆ ಬೀಡಿ ಅಥವಾ ಮಗ್ಗದ ಕೆಲಸಗಾರರು ತಮ್ಮ ಧನಿಗಳನ್ನು 'ಶ್ರೀಮಂತ ದಗಾಖೋರರು' ಎಂದು ಭಾವಿಸುವಂತಿಲ್ಲ. ವೇತನ ಮತ್ತು ವರ್ತನೆಯಲ್ಲಿ ಆತ್ಮನ್ಯಾಯ ಪಾಲಿಸಿದರಾಯಿತು. ಜನತಾ ರಾಜ್ಯ ಸ್ಥಾಪನೆಯ ಕಾರ್ಯಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಯಾವುದೊಂದು ಕಾರ್ಯಾಲಯವನ್ನೂ ನಡಿಸದೆ ಸಾವಿರಾರು ರೂ.ಗಳನ್ನು ಕೂಡಿಸಿಟ್ಟವರ ವಿರುದ್ಧವಾಗಿ ಇಲ್ಲಿ ಯಾವ ಚಳವಳವೂ ಎದ್ದಿಲ್ಲ. ಅಂದ ಮೇಲೆ ಸಮತಾವಾದ ಸ್ಥಾಪನೆಗಾಗಿ ಧನಿಗಳ ಮೇಲೆ ಯುದ್ಧ ಬೇಡ. 'ದುಡಿಯುವವರ ರಾಜ್ಯ' ಸಂಪಾದನೆಯ ಯೋಗ್ಯತೆ ಗಳಿಸಲಿಚ್ಛಿಸುವವರು ಮಜೂರರಲ್ಲಿ ಸುಸಂಘಟನೆ, ಜ್ಞಾನ ಪ್ರಸಾರ, ಜನತಾ ಸಂಪರ್ಕ ಚಳವಳಿ, ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಮುಖ್ಯ ಭಾಗವಹಿಸಿ ತಾವೇ ರಾಷ್ಟ್ರವನ್ನಿಸಿ ನ್ಯಾಯ ವಿಧಾಯಕ ಸಭೆಗಳಲ್ಲೋ, ರಾಜ್ಯಾಂಗ ರಚನಾ ಸಮಿತಿಯಲ್ಲೋ ತಮ್ಮ ಅಪೇಕ್ಷೆಯ ವಿಧಾನವೇ ಬರುವಂತೆ ನೋಡುವ ಪ್ರಯತ್ನ, ಇತ್ಯಾದಿಗಳನ್ನೇ ಕೈಗೊಂಡಾರು-ಇವು ಜನತಾ ರಾಜ್ಯಭಾರ ಸಾಧನೆಯ ನಿಜವಾದ ಯತ್ನಗಳು. 'ಮಜೂರ ಮನೋವೃತ್ತಿ'ಯಿದ್ದವರು ಹಿಡಿಯಬೇಕಾದ ಹಾದಿ ಇದೇ.

ಕಮ್ಯೂನಿಸ್ಟ ಮನೋಗತಿ

ಈ ರೀತಿ ಮಜೂರ ಮನೋಗತಿಯ ರಂಗ ಇಲ್ಲಿಯೇ—ತಮ್ಮ ಬೇಡಿಕೆಗಳ ಮಟ್ಟಿಗೆ ಸ್ಥಳೀಯ ಸ್ಥಿತಿಗತಿ, ತಮ್ಮ ಗುರಿಯ ಮಟ್ಟಿಗೆ ಭಾರತ, ಆ ನಂತರವೇ ಜಗತ್ತು ಅವರ ಕಾರ್ಯಕ್ಷೇತ್ರಗಳು. ಆದರೆ ಕಮ್ಯೂನಿಸ್ಟ ಮನೋಗತಿಯ ರಂಗ ಇವಲ್ಲವೇ ಅಲ್ಲ. ಅವರೆಬ್ಬಿಸುವ ಜಗಳಗಳೋ-ಅವು ಸತ್ಯಕ್ಕೂ ಇಲ್ಲಿಯೇ ಹುಟ್ಟುವಂಥಗಳಲ್ಲ. ಅವರ ಕಾರ್ಯರಂಗ ಪ್ರಥಮತಃ ಮತ್ತು ಸರ್ವದಾ ಜಗತ್ತು; ಅವರು ಪ್ರೇರಣೆಹೊಂದುವದು ಮೋಸ್ಕೋದಿಂದ. ಈ ಮಾತನ್ನು ಕಮ್ಯೂನಿಸ್ಟರು ಕಂಠೋ

(೧೧ನೇ ಪುಟ ನೋಡಿರಿ)

CHAMPAES
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—
ಉಡುಪಿ ಪಂಚಾಂಗಂ
ವ್ಯಯ ಸಂ॥ 1946-'47.
ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.
ಬೆಲೆ 0-4-0; Postage extra.
ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು.

ಮದ್ರಾಸ್ ಪ್ರಾಂತಿಕ ಎಸೆಂಬ್ಲಿ ಚುನಾವಣೆಯ ಗದ್ದಲವೇ ಈ ಬಾರಿ ದಕ್ಷಿಣ ಕನ್ನಡದಲ್ಲಿಲ್ಲವಾಯಿತು! ಮತದಾರರ ಮಟ್ಟಿಗೆ ಏನೋ ಒಂದು ಕಳೆದು ಹೋದ ಅನುಭವವಾಗುತ್ತಿದೆ— ಆಮಂತ್ರಣ ಬಾರದೇನೇ ಬೀಗರ ಮನೆಯ ಮದುವೆ ಕಾರ್ಯ ಮುಗಿದು ಹೋದರೆ ಹೇಗೋ ಹಾಗೆ! ಮತದಾರನಿಗೆ ಮಾನ್ಯತೆ ಬರುವ ಕಾಲವಿದು. 'ಬೇಡಪ್ಪಾ ಈ ವೋಟಿನ ಗದ್ದಲ' ಎಂದು ಹಣೆ ಮುಟ್ಟಿ ದೂರುವವರಿರಬಹುದು. ಆದರೆ ನಿಜಕ್ಕೂ ಅದಕ್ಕಾಗಿ ಅಂತರ್ಯತಃ ಅಭಿಮಾನ ಪಡದ ಮತದಾರನಿರಲಾರ, ಹಂಗು-ದಾಕ್ಷಿಣ್ಯ-ಒತ್ತಾಯ, ಇವೆಲ್ಲಕ್ಕೂ ಒಬ್ಬನನ್ನು ಈಡುಮಾಡಿ ಬಿಡುವಂತಹದು ಮತಾಧಿಕಾರ. ಆದರೆ ಹಲವರ ಕಣ್ಣು ಬೀಳುತ್ತದೆಂಬ ಕಾರಣದಿಂದ ತಮ್ಮ ಸೌಂದರ್ಯವನ್ನು ಅಡಗಿಸಿಕೊಳ್ಳುವವರಿದ್ದಾರೆಯೋ? ಉಪದ್ರವಗಳುಂಟೆಂಬ ಕಾರಣದಿಂದ ತನ್ನ ಮತಾಧಿಕಾರವನ್ನೇ ಜರಿಯುವವರಿರಲಾರರು. ಬೋಳು ತಲೆಗೆ ಮುಕುಟವೇರುವ ಅಸಾಧ್ಯಾನಂದ-ಅಡ್ಡಾಡಿಯ [illegible] ಅನುಯಾಯಿಗಳು ಬರುವ ಅಪೂರ್ವಾನುಭವ-ಕಡೆಗಣಿಸಲ್ಪಟ್ಟವನೂ ಕೈ ಮುಗಿದು ಕರೆದೊಯ್ಯಲ್ಪಡುವ ಅಪರಿಚಿತಾನಂದ, ಇಂತಹದೆಲ್ಲಾ ಚುನಾವಣೆಯ ಕಾಲದಲ್ಲಿ ಮಾತ್ರ! ಈ ಬಾರಿ ದಕ್ಷಿಣ ಕನ್ನಡದಲ್ಲಿ ಈ ಸುಖಗಳಿಗೆ ಸೊನ್ನೆ ಬಿತ್ತು.

ಜಾಗ್ರತಿಯ ಅಭಾವ

ಹಿಂದುಸ್ಥಾನದ ಕೇಂದ್ರ ಎಸೆಂಬ್ಲಿ ಚುನಾವಣೆಗಳು ನಡೆಯುತ್ತಿದ್ದಾಗ ಇಲ್ಲಿ ಸಂಚರಿಸುತ್ತಿದ್ದ ರಶ್ಯನ್ ರಾಜಕಾರಣಿಯೊಬ್ಬರು ಇಲ್ಲಿಯ ಅವಿರೋಧ ವಿಜಯಗಳ ಕುರಿತು ಕೌತುಕ ಸೂಚಿಸಿದ್ದರು. 'ಒಬ್ಬನಿಗೆ ಇದಿರಾಳಿಯಿಲ್ಲದೆ ಹೋಗಬಹುದು; ಆದರೆ ಅಷ್ಟಕ್ಕಾಗಿ ಮತದಾರರ ಹಕ್ಕನ್ನು ಅಪಹರಿಸಬಾರದು; ಒಂದು ಸ್ಥಾನಕ್ಕೆ ಒಬ್ಬನೇ ಉಮೇದ್ವಾರಿಯಿದ್ದರೂ ಚುನಾವಣೆ ನಡೆಸಲೇಬೇಕು, ಅವನ ಮೇಲೆ ತಮಗೆ ವಿಶ್ವಾಸವಿದೆ ಯಾ ಇಲ್ಲ ಎಂಬುದನ್ನು ಮತದಾರರು ಹೇಳುವಂತಾಗಬೇಕು' ಎಂದವರ ಅಭಿಪ್ರಾಯ. ಇದು ಸ್ವದೇಶದ ಅನುಭವದಿಂದ ಆಡಿರುವ ಮಾತು. ರಶ್ಯದಲ್ಲಿ ಚುನಾವಣೆಯೆಂಬುದು ನಡೆಯುವದಿದೆ. ಆದರೆ ಅಲ್ಲಿ ವಿರುದ್ಧ ಪಕ್ಷಗಳೇ ಇಲ್ಲ. ಆದ್ದರಿಂದ ಉಮೇದ್ವಾರಿಗಳ ಮೇಲಿನ ವಿಶ್ವಾಸ, ಅವಿಶ್ವಾಸಗಳೇ ಮತಕ್ಕೆ ಬೀಳುತ್ತವೆ. ಹಿಂದುಸ್ಥಾನದ ಪರಿಸ್ಥಿತಿ ಅದಕ್ಕಿಂತ ಭಿನ್ನವಿದ್ದರೂ, ಇಂತಹ ಅವಿರೋಧ ಆಯ್ಕೆಗಳು ಗೆದ್ದವರು, ಮತ್ತವರನ್ನು ನಿಲ್ಲಿಸಿದ ಪಕ್ಷ ಪ್ರಮುಖರು ಹಾಗೂ

ಒಂದು ನೋಟ.

ಸ್ಪರ್ಧೆಯ ಹುರುಪಿಳಿದ ಕಾಂಗ್ರೆಸ್ ಜಿಲ್ಲೆ-ದ. ಕ.

ನಿಕಟ ಸಂಬಂಧಿಕರಿಗೆ ಹೊರತು ಬೇರಾರಿಗೂ ಆನಂದದಾಯಿಯಾಗವು. ದಕ್ಷಿಣ ಕನ್ನಡವಂತೂ 1936ರ ಆಹಾರವಿಹಾರಾನುಕೂಲತೆಗಳ ಸುಖಸ್ಮರಣೆಯನ್ನು ನೆನಸಿಕೊಂಡು 'ಹಾ! ಆ ಕಾಲ ಹೋಯಿತು' ಎಂದು ಕೊರಗುವಂತೆಯೇ ಅಂದಿನ ಚುನಾವಣಾ ಗದ್ದಲವನ್ನೂ ನೆನಸಿ ಇಂದು ಬಾಯಿ ನೀರೂರಿಸುವಂತಾಗಿದೆ. ಈಗ ಗೋಡೆಗಳೆಲ್ಲಾ '.......ಮತ ಕೊಡಿರಿ' ಪತ್ರಗಳ ಕವಚ ತೊಟ್ಟು ನಿಲ್ಲಬೇಕಾಗಿದ್ದ ಕಾಲ; ಬಂಜರು ಸ್ಥಳಗಳೆಲ್ಲಾ ಸಾರ್ವಜನಿಕ ಸಭೆಗಳ ಜನಪ್ರೈರಿನಿಂದ ರಾಜಿಸಿ, ಅವೆಲ್ಲವುಗಳ ಮೆದುಳ ತೆನೆಯನ್ನು ಉಮೇದ್ವಾರಿಗಳ ಸಹಾಯಕ ಭಾಷಣಗಾರನು ಸಂಗ್ರಹಿಸುತ್ತಾ ನಿಲ್ಲುವ ಕಾಲ; ದೊಡ್ಡ ಮನುಷ್ಯರ ಭೇಟಿಗಾಗಿ ಹುರಿಯಾಳುಗಳು ಧಾವಿಸಿ ಅವರ ಬಂಗ್ಲೆಯೇ ಮೊದಲ ಎಸೆಂಬ್ಲಿಯೆಂಬಂತೆ, ಭಾಷಣವಿತ್ತು ನಿರ್ಧಾರಗಳನ್ನು ಮಂಜೂರು ಮಾಡಿಸಿಕೊಂಡು ಬರುವ ಕಾಲ ಇಂತಹ ಕಾಲದಲ್ಲಿ ದಕ್ಷಿಣ ಕನ್ನಡವೀಗ ಕಾಣುತ್ತಿರುವದೇನನ್ನು? ಕೇಳುತ್ತಿರುವದೇನನ್ನು? ಬೀಡಿ ಮಜೂರ + ನೇಯಿಗೆ ಮಜೂರರ ಸಭೆಗಳನ್ನು; 'ಇಂಕ್ವಿಲಾಬ್ ಝಿಂದಾಬಾದ್' 'ಮಜೂರ ದ್ರೋಹಿಗಳನ್ನು ಓಡಿಸಿರಿ' 'ಮೂರು ತಿಂಗಳ ಬೋನಸ್ ಸಿಗಲೇಬೇಕು!' ಘರ್ಜನೆಗಳನ್ನು! ಸುವರ್ಣ ಸಂಧಿಯಾಗಬೇಕಾಗಿದ್ದ ಕಾಲ ಪಾಷಾಣ ಸಂಧಿಯಾದಂತೆ-ಮನಸೇಚ್ಛೆ ಉಂಡಾತನಕ್ಕೆ ಸುತುವಿನಲ್ಲಿ ನೆಲಗಡಲೆ ಬಂದಂತೆ!

ಏಳು ಸ್ಥಾನಗಳು

ಮದ್ರಾಸ್ ಎಸೆಂಬ್ಲಿಗೆ ದಕ್ಷಿಣ ಕನ್ನಡವು ಏಳು ಮಂದಿ ಪ್ರತಿನಿಧಿಗಳನ್ನು ಕಳುಹಿಕೊಡಬೇಕಾಗಿತ್ತು. ಕೊನೆಯ ಮುಹೂರ್ತದಲ್ಲಿ ಹೊರಡಲು ಸನ್ನದ್ಧರಾಗಿ ಉಳಿದವರು ಏಳಕ್ಕೆ ಏಳೇ ಮಂದಿ! ಆ ಪೈಕಿ ಹಿಂದೀ ಕ್ರೈಸ್ತರ ಒಂದು ಸ್ಥಾನಕ್ಕೆ ಮಲಬಾರಾದರೂ ಪ್ರತಿಸ್ಪರ್ಧೆಯನ್ನು ನಿಲ್ಲಿಸಬಹುದಿತ್ತು. ಕೇಂದ್ರ ಎಸೆಂಬ್ಲಿಗೆ ಕಾಂಗ್ರೆಸು ಮಲಬಾರಿನವರನ್ನೇ ನಿಲ್ಲಿಸಿತೆಂಬ ಕಾರಣದಿಂದ ದಕ್ಷಿಣ ಕನ್ನಡಿಗರೊಬ್ಬರು ಸ್ಪರ್ಧಿಸಲಿಲ್ಲವೇನು? ಅದಕ್ಕೆ ಪ್ರತೀಕಾರವನ್ನು ಮಾಡ ಬಯಸಿ, ಅದೇ ಪರಿಣಾಮಕ್ಕೊಳಗಾಗಲು ಮಲಬಾರು ತಯಾರಿರಲಿಲ್ಲ. ಎರಡು ಜಿಲ್ಲೆಗಳಿಗಿದ್ದ ಏಕ ಮಾತ್ರ ಕ್ರೈಸ್ತ ಸ್ಥಾನಕ್ಕೆ ದ. ಕ. ದವರಾದ ಕಾಂಗ್ರೆಸ್ ಉಮೇದ್ವಾರಿ ವಿ. ಪಾಯಸರು ಅವಿರೋಧವಾಗಿ ಗೆದ್ದು ಬಂದರು. ಕುಂದಾಪುರ ವಿಭಾಗ ಮತ್ತು ಪುತ್ತೂರು ವಿಭಾಗವೆಂದು ಈ ಜಿಲ್ಲೆಯೊಳಗಿಂದಲೇ ಎರಡು ಸ್ಥಾನಗಳು ಮುಸಲ್ಮಾನರಿಗಿದ್ದುವು. ಕಮ್ಯೂನಿಸ್ಟರ 'ಕಾಂಗ್ರೆಸ್ ಮತ್ತು ಲೀಗಿಗೆ ಜಯವಾಗಲಿ!' ಎಂಬ ಘೋಷಣೆಯು ಇಲ್ಲಿ ಎಲ್ಲರ ಹೃದಯದಲ್ಲಿಯೂ 'ಆಗಲಿ!' ಎಂದೇ ಪ್ರತಿಧ್ವನಿಸಿದಂತಿದೆ. ಮಿಕ್ಕವರೆಲ್ಲಾ ಕಾಂಗ್ರೆಸ್ ಭಕ್ತರು; ಮುಸಲ್ಮಾನರೆಲ್ಲಾ ಲೀಗ್ ನಿಷ್ಠೆಯವರು. ಎರಡು ಸ್ಥಾನಗಳಿಗೂ ಲೀಗ್ ಉಮೇದ್ವಾರಿಗಳೇ ಅವಿರೋಧವಾಗಿ ಗೆದ್ದು ಬಂದಿದ್ದಾರೆ. ಕುಂದಾಪುರ ಡಿವಿಜನಿನ ಖಾನ್ ಸಾಹೇಬ್ ಎಚ್. ಎಸ್. ಹುಸ್ಸೇನ್ ಸಾಹೇಬರ ವಿರುದ್ಧ ನಾಮಪತ್ರ ಹಾಕಿದವರೇ ಇಲ್ಲ. ಪುತ್ತೂರು ಡಿವಿಜನಿನ ಸ್ಥಾನಕ್ಕೆ ಬೇರಿಬ್ಬರು ಸ್ವತಂತ್ರ ಮುಸಲ್ಮಾನರು ನಾಮಪತ್ರವನ್ನೇನೋ ಹಾಕಿದ್ದರು. ಮಿ. ಜಿನ್ನರು ತನ್ನ ಇತ್ತೀಚೆಗಿನ ಭಾಷಣದಲ್ಲಿ ಲೀಗ್ ವಿಜಯಕ್ಕೆ ಕೊಟ್ಟ ಕಾರಣವಾದ 'ಅಲ್ಲಾನ ಕೃಪೆ'ಯಿಂದ ಅವರೂ ಹಿಂಪೆಗೆದು ಕೊಂಡು ಜಿಲ್ಲೆಯ ಎರಡು ಸ್ಥಾನಗಳೂ ಲೀಗಿಗೆ ದೊರೆತುವು. 'ಲೀಗಿಗೆ ಬಿದ್ದ ಓಟು ಪಾಕಿಸ್ತಾನಕ್ಕೆ ಬಿದ್ದಂತೆ' ಎಂಬ ಕ್ವಯದೀ ಅಝಾಮರ ಅಪ್ಪಣೆಯಂತೆ ದಕ್ಷಿಣ ಕನ್ನಡವು ಪಾಕಿಸ್ತಾನಕ್ಕೆ ಹೋಯಿತು!

ಪುತ್ತೂರು ಡಿವಿಜನಿನಲ್ಲಿ

ಆದರೆ ಜನಸಾಮಾನ್ಯರು ನಿರೀಕ್ಷಿಸುತ್ತಿದ್ದುದು ಸಾಮಾನ್ಯ ಮತದಾರ ಕ್ಷೇತ್ರಗಳ ಚುನಾವಣೆಗಳನ್ನೇ. ಪುತ್ತೂರು ಡಿವಿಜನಿನ ಕಾಂಗ್ರೆಸ್ ಉಮೇದ್ವಾರಿ, ಶ್ರೀ. ಕೆ. ಆರ್ ಕಾರಂತರಿಗೆ ವಿರೋಧವುಂಟೆಂಬ ನಿರೀಕ್ಷೆ ಹಳೆಯದು. ಜಿಲ್ಲೆಯ ಮಿಕ್ಕ ಭಾಗ ಹೇಗಿದ್ದರೂ ಪುತ್ತೂರು ಡಿವಿಜನು ಹೋರಾಟ ರಂಗವಾಗುವದೆಂದು ಎಲ್ಲರೂ ಆಶಿಸಿದ್ದರು. ರೇಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯ ಉಮೇದ್ವಾರಿ ಶ್ರೀ ಎನ್. ಎಸ್. ಭಟ್ಟರು ನಾಮಪತ್ರ ಹಾಕುವ ಮೊದಲೇ ಅವರ ಕಡೆಯ ನಾನಾ ಪತ್ರಗಳು ಜಿಲ್ಲೆಯ ನಾನಾ ಕಡೆಗಳಲ್ಲಿ ಅಂಟಿಸಲ್ಪಟ್ಟಿದ್ದವು. ಕಾಗದದ ಅಭಾವ ಮತ್ತು ಮುದ್ರಣದ ಅತಿ ವೆಚ್ಚವಿರುವ ಈ ಕಾಲದಲ್ಲಿ ರೇಡಿಕಲ್ ಡೆಮೊಕ್ರೆಟಿಕ್‌ನವರ ಗೋಡೆ ಪತ್ರಗಳನ್ನು ಉಡುಪಿಯಲ್ಲಿಯೂ ಕಂಡವರು ಅವರು ಸಾಹಸಮಯೀ ಉಮೇದ್ವಾರಿಯೆಂದು ಭಾವಿಸಿದ್ದರೇ ಹೊರತು ಈ ರೀತಿ ಉಮೇದ್ವಾರೀತೆಂದು ನೆನಸಿರಲಿಲ್ಲ. ಆದರೆ ಜಿಲ್ಲೆಯ ಸ್ಥಳ ಮಹಾತ್ಮೆಯೋ-ಕಾರಂತರ ಅಥವಾ ಕಾಗದಗಳ ಪುಣ್ಯವೋ--ಅವರ ನಾಮಪತ್ರವೇ ಸರಿಯಿಲ್ಲದೆ ಹೋಗಬೇಕೇ? 'ರೇಡಿಕಲ್' (ಶಬ್ದ ಕೋಶದಲ್ಲಿರುವ ಅರ್ಥ-'ಅಮೂಲಾಗ್ರ ಸುಧಾರಣೆಯಿಚ್ಛಿಸುವವ) ಆಗಿದ್ದೂ ತಮ್ಮ ಹೆಸರಿಗೇ ವಿರುದ್ಧವಾಗಿ ಇಂತಹ ತಪ್ಪು ಮಾಡಿದವರ ಮೇಲೆ ಆಪಕ್ಷವು ಶಿಸ್ತು ಜ್ಯಾರಿ ಮಾಡಬಾರದೇಕೆ?

ಮಂಗಳೂರು ಡಿವಿಜನಿನಲ್ಲಿ

ಕಾಂಗ್ರೆಸ್ ಉಮೇದ್ವಾರಿ ಡಾ| ಯು. ಪಿ. ಮಲ್ಯರಿಗೆ, ಎಷ್ಟೇ ಮೂಸಿ ನೋಡಿದರೂ ಎಲ್ಲಿಂದಲೂ ವಿರುದ್ಧ ಗಾಳಿ ಬೀಸುವ ಲಕ್ಷಣ ತೋರದಿದ್ದುದರಿಂದ, ಅವರ ಅವಿರೋಧ ಆಯ್ಕೆಯನ್ನೇ ನಿರೀಕ್ಷಿಸಲಾಗಿತ್ತು. 1936ರ ಚುನಾವಣೆಯಲ್ಲಿ ಇಲ್ಲಿ ತೀವ್ರ ಸ್ಪರ್ಧೆಯಿತ್ತು. ಆ ಸಲದ ವಾತಾವರಣವೇ ಈ ಬಾರಿಯಿರಲಿಲ್ಲ 'ಕಮ್ಯೂನಿಸ್ಟ್' 'ರಿ. ಡೇ. ಪಕ್ಷ' ಮೊದಲಾದ ಹೊಸ ಹುರುಪಿನವರ ಮೇಲಲ್ಲದೆ ಮಂಗಳಾದೇವಿಯ ಅನುಗ್ರಹದಿಂದ ಬೇರಾರ ಮೇಲೂ ಈ ಬಾರಿ ಸಂದೇಹವಿರಲಿಲ್ಲ. ಕಮ್ಯೂನಿಸ್ಟರೇನಂತೆ? ಎಂಬ ಪ್ರಶ್ನೆಗೆ 'ಬೋನಸ್ ಅಂತೆ' ಎಂಬ ಉತ್ತರ ಬಂತು. ಈಗ ಬೋನಸ್ ಕೇಳುತ್ತಿರುವ ವಿಧಾನದಲ್ಲೇ ವೋಟು ಕೇಳ ಹತ್ತಿದ್ದರೆ? ಹಾಗೇನೂ ಆಗದಿದ್ದುದು ಜಿಲ್ಲೆಯ ಪುಣ್ಯ!

ಕುಂದಾಪುರ ಡಿವಿಜನಿನಲ್ಲಿ

ವೋಟಿನ ಚಿಹ್ನೆ ಮಾತ್ರವಲ್ಲ—ಅದರ ಸ್ವರೂಪವೇ ಕತ್ತರಿಯಾಕಾರದಲ್ಲಿದ್ದ ಕ್ಷೇತ್ರವೆಂದರೆ ಕುಂದಾಪುರ ಡಿವಿಜನ್. ಅದನ್ನು ನೆನಸಿಕೊಂಡು, ಹರಿಜನರಿಗೆ ಪ್ರತ್ಯೇಕ ಮತದಾನದ ಹಕ್ಕನ್ನಿತ್ತ 'ಮೆಕ್ಡೊನಾಲ್ಡ್ ಎವಾರ್ಡ್'ನ ವಿರುದ್ಧ ಉಪವಾಸ

(ಮುಂದಿನ ಪುಟ ನೋಡಿರಿ)



Approved firm by the Govt. of Mysore
Certified by the Agent of the Govt. of Ceylon Indian.

CANARA BANK LIMITED

Estd: 1906

(Incorporated in British India, liability of Members Limited.)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	....	2½%
6 to 9 months	....	2¾%

Rates for Season Deposits of less than Rs 10000/- with a minimum of Rs. 1000/- and in multiples of Rs. 500/- may be ascertained on application to our nearest branch.

(೩೪ನೇ ಅಖಿಲ ಭಾರತ ಆಯುರ್ವೇದ ಪ್ರದರ್ಶನದಲ್ಲಿ ಸುವರ್ಣ ಪದಕ ಬಹುಮಾನ ಪಡೆದಿದೆ)

ಮಾರ್ಗರೀಟರ

ಫಿಟ್ಸ್ ಕ್ಯೂರ್

ಮಕ್ಕಳ ಭಯಂಕರ ಬಾಲಗ್ರಹವನ್ನು ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸುವುದು.

ಪ್ರತಿಯೊಂದು ಸ್ಥಳದಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ. ಧಾರಾಳ ಕಮಿಶನನ್ನು ತೆಟ್ಟನ ಮಾಹಿತಿಗೆ ನಮಗೆ ಬರೆಯಿರಿ.

BRIGHTSTAR AGENCIES,
Hospital Road., Udipi, S. K.

ಪಂಜಾಬಿನಲ್ಲಿ ಕಾಂಗ್ರೆಸ್ ಮಿಶ್ರಪಕ್ಷದ ಅಧಿಕಾರ

ಪಂಜಾಬಿನಲ್ಲಿ ಕಾಂಗ್ರೆಸ್-ಯೂನಿಯನಿಸ್ಟ್-ಅಕಾಲೀ ಪಕ್ಷಗಳ ಸಂಯುಕ್ತ ಮಂತ್ರಿಮಂಡಲ ಸ್ಥಾಪನೆ ನಿಶ್ಚಯವಾಗಿದೆ ಹೆಸರು ಪ್ರಕಟಣೆ ಮಾತ್ರ ಬಾಕಿ. ಪಂಜಾಬನ್ನು ತನ್ನ ಅಂಕೆಗೆ ತರಬೇಕೆಂಬ ಮುಸ್ಲಿಂ ಲೀಗಿನ ಪ್ರಯತ್ನ ಮತ್ತೊಮ್ಮೆ ಮಣ್ಣುಗೂಡಿದೆ. ಅಝಾದ್-ಜಿನ್ನಾ ಎಳೆದಾಟದಲ್ಲಿ ಸ್ಥೂಲ ಹೃದಯದ ಮೌಲಾನರು ಕ್ಷಯದೀ ಅಝಾದರನ್ನು ಬೀಳಿಸಿದ ಸುಂದರ ದೃಶ್ಯವಿದು. ಲೀಗಿನ ಸಂಕುಚಿತ ಮನೋವೃತ್ತಿಗೆ ಪಡೆದ ಯೋಗ್ಯ ಪ್ರತಿಫಲವಿದು.

ಪಂಜಾಬಿನಲ್ಲಿ ಪಕ್ಷಬಲ

ಪಂಜಾಬ್ ಪ್ರಾಂತಿಕ ಎಸೆಂಬ್ಲಿ ಚುನಾವಣೆಯಲ್ಲಿ ಮಿಕ್ಕ ಪಕ್ಷಗಳಿಗಿಂತ ಹೆಚ್ಚಿನ ಸ್ಥಾನ ಸಂಪಾದಿಸಿದುದು ಮುಸ್ಲಿಂ ಲೀಗ್, ಕಾಂಗ್ರೆಸ್ ಎರಡನೆಯದು. ಆ ಮೇಲೆ ಅನುಕ್ರಮವಾಗಿ ಅಕಾಲೀ ಮತ್ತು ಯೂನಿಯನಿಸ್ಟ್ ಪಕ್ಷಗಳು ಇದುವರೆಗೂ ಅಧಿಕಾರದಲ್ಲಿದ್ದ ಮಾಲಿಕ್ ಕಿಝ್ರಾಂ ಹಯತ್ ಖಾನರ ಯೂನಿಯನಿಸ್ಟ್ ಪಕ್ಷವು ಪ್ರಬಲ ಪರಾಭವಗೊಂಡಿದ್ದಿತು. ಪಂಜಾಬಿನಲ್ಲಿ ಚುನಾವಣೆ ಮುಗಿದಾಗ ಇದ್ದ ಪರಿಸ್ಥಿತಿಯೇ ಉಳಿದಿದ್ದರೆ ಗವರ್ನರರು ಮುಸ್ಲಿಂ ಲೀಗ

ನಿರಾಶೋದ್ರೇಕಿತ ಲೀಗ್ ಪಕ್ಷೀಯರ ಪ್ರತಿಭಟನೆ.

ನ್ನೇ ಅಧಿಕಾರ ವಹಿಸಲು ಕರೆಯಬೇಕಿದ್ದಿತು. ಆದರೆ ಏಕಾಕಿಯಾಗಿ ;ಆ ಹೊಣೆ ಹೊರುವಷ್ಟು ಅಧಿಕ ಸಂಖ್ಯೆ ಆ ಪಕ್ಷದಲ್ಲಿರಲಿಲ್ಲ. ಕಾಂಗ್ರೆಸ್-ಯೂನಿಯನಿಸ್ಟ್—ಅಕಾಲಿಗಳೊಂದಾಗಿ ಅವಿಶ್ವಾಸ ಠರಾವು ತಂದೊಡನೆ ಅದು ಮಗುಚಿ ಬೀಳಬೇಕಾಗುತಿತ್ತು. ಆದರೆ ಉಳಿದ ಪಕ್ಷಗಳಲ್ಲಿ ಯಾವುದಾದರೊಂದನ್ನು ಕೂಡಿಕೊಂಡಲ್ಲಿ ಮುಸ್ಲಿಂ ಲೀಗ್ ನಿಶ್ಚಿಂತೆಯಿಂದ ಅಧಿಕಾರಕ್ಕೆ ಹೆಗಲು ಕೊಡುತಿತ್ತು. ಎರಡನೇ ಪಕ್ಷವಾದ ಕಾಂಗ್ರೆಸಿಗೆ ಹಾಗಿರಲಿಲ್ಲ; ಅದು ಯೂನಿಯನಿಸ್ಟ್ ಮತ್ತು ಅಕಾಲೀ ಪಕ್ಷಗಳೆರಡನ್ನೂ ಸೇರಿಸಿಕೊಳ್ಳದೆ ಅಧಿಕಾರ ವಹಿಸುವಂತಿರಲಿಲ್ಲ. ಆದರೂ ಲೀಗಿನ ಸಂಕುಚಿತ, ಸರ್ವಾಧಿಕಾರೀ ಮನೋವೃತ್ತಿಯು ಮಿಕ್ಕೆಲ್ಲರಿಗೂ ಅಸಹನೀಯವಿದ್ದುದರಿಂದ ಅಲ್ಲಿ ಲೀಗ್ ವಿರೋಧೀ ಸಮ್ಮಿಶ್ರ ಮಂಡಲ ಸ್ಥಾಪನೆಗವಕಾಶ ದೊರೆಯಿತು.

ಕಾಂಗ್ರೆಸ್-ಲೀಗ್ ಮೇಲಾಟ

ಪಂಜಾಬ್ ಚುನಾವಣೆ ಮುಗಿದೊಡನೆ ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಅಝಾದರೂ, ಲೀಗ್ ಕಾರ್ಯದರ್ಶಿ ನವಾಬಝಾದಾ ಲಿಯಾಖತ್ ಆಲೀಖಾನರೂ ಲಾಹೋರಿಗೆ ಧಾವಿಸಿದ್ದರು-ಸಿಂಧ್ ಚುನಾವಣೆಯಾದೊಡನೆ ಕರಾಚಿಗೆ ಧಾವಿಸಿದ್ದಂತೆ! ಇವರಿಬ್ಬರು ಪ್ರಮುಖರೂ ಈ ಬಾರಿ ಪ್ರಾಂತಿಕಾಧಿಕಾರ ಸ್ಥಾಪನೆಯ ಪ್ರಯತ್ನಗಳಲ್ಲಿ ಪರಸ್ಪರ ಸ್ಪರ್ಧಿಗಳಿದಂತಿದೆ. ಬೆನ್ನಲ್ಲೇ ಪಂಜಾಬು ಪಂಚಾಯತ್ ರಂಗವಾಗಿ ಮಾರ್ಪಟ್ಟಿತು. ಕಾಂಗ್ರೆಸ್-ಯೂನಿಯನಿಸ್ಟ್-ಅಕಾಲೀ, ಕಾಂಗ್ರೆಸ್-ಲೀಗ್, ಲೀಗ್-ಅಕಾಲೀ ಸಂಧಾನ ಮಾತುಕತೆಗಳ ಆರಂಭವಾದುವು. ಮುಖ್ಯವಾಗಿ ಅಕಾಲೀ (ಸಿಖ್) ಪಕ್ಷವನ್ನೊಲಿಸಿಕೊಳ್ಳಲು ಕಾಂಗ್ರೆಸ್ ಮತ್ತು ಲೀಗುಗಳೊಳಗೆ ವಿಶೇಷ ಮೇಲಾಟ ನಡೆಯಿತು. ಒಂದು ಗಣ್ಯ ವಿಷಯವೆಂದರೆ ಲೀಗ್ ಪ್ರಮುಖರು ಕಾಂಗ್ರೆಸ್ ಪಕ್ಷದೊಡನೆ ಸಂಧಾನಕ್ಕೆ ಸಿದ್ಧರಿದ್ದರೂ ಮಾಲಿಕ್ ಕಿಝ್ರಾರರ ಯೂನಿಯನಿಸ್ಟ್ ಪಕ್ಷದ ಸಂಪರ್ಕಕ್ಕೆ ತಯಾರಿರಲಿಲ್ಲ. ಪಾಕಿಸ್ತಾನ್ ಪ್ರಶ್ನೆಯನ್ನು ಪ್ರತ್ಯೇಕವಿಟ್ಟು ಪ್ರಾಂತಿಕ ಸಂಬಂಧದ ವಿಷಯಗಳಲ್ಲಿ ನಡೆಸಿದ ಲೀಗ್-ಅಕಾಲೀ ಮಾತುಕತೆಗಳು ಬಹುತೇಕವಾಗಿ ಜಯಶೀಲವಾಗಿದ್ದುವಂತೆ! ಆದರೆ ಸಿಖ್ಖರು ಆ ಪ್ರಾಮುಖ್ಯ ಪ್ರಶ್ನೆಯನ್ನೇ ಮರೆತು ಬಿಡಲೊಪ್ಪಲಿಲ್ಲ. ಆದ್ದರಿಂದ ಲೀಗ್-ಅಕಾಲೀ ಸಂಧಾನ ಮಾತುಕತೆ ಮುರಿಯಿತು. ಕಾಂಗ್ರೆಸ್-ಯೂನಿಯನಿಸ್ಟ್-ಅಕಾಲೀ ಸಂಧಾನ ಫಲಿಸಿತು. ಎಸೆಂಬ್ಲಿಯ ಹೊರಗಡೆ ಈ ಮೂರೂ ಪಕ್ಷಗಳು ಪ್ರತ್ಯೇಕವಾಗಿ ತಮ್ಮ ನೈತಿಕ ತತ್ವಗಳನುಸಾರ ವರ್ತಿಸಬಹುದು; ಒಂದು ಒಮ್ಮತದ ಆರ್ಥಿಕ ಯೋಜನಾನುಸಾರವಾಗಿ ಅವು ಒಂದಾಗಿ ಕಾರ್ಯವಿಧಾನಸಾಗಿಸಬೇಕು, ಎಂಬುದೇ ಈ ಸಮ್ಮಿಶ್ರ ಪಕ್ಷದ ಘೋಷಣೆಯ ತಳಹದಿ.

ಹೊಸ ಮಂಡಲದ ಸ್ವರೂಪ

ಈ ಮಿಶ್ರಪಕ್ಷದ ಸಂಖ್ಯೆಯೀಗ (10 ಮುಸಲ್ಮಾನರ ಸಮೇತ) 90 (ಲೀಗಿನವರೊಬ್ಬರು ಸಮ್ಮಿಶ್ರ ಪಕ್ಷಕ್ಕೆ ಸೇರಿದ್ದರಿಂದ) ಮುಸ್ಲಿಂ ಲೀಗ್ 78 (ಯೂನಿಯನಿಸ್ಟ್ ಪಕ್ಷದ 4 ಜನ ಮುಸ್ಲಿಂ ಲೀಗಿಗೆ ಸೇರಿದ್ದರು) ಸ್ವತಂತ್ರರು 4. ಇನ್ನು ಉಪಚುನಾವಣೆಯಾಗಲು ಉಳಿದಿರುವ ಸ್ಥಾನಗಳು 3 ಮಾಲಿಕ್ ಕಿಝ್ರಾರ್ ಹಯತ್ ಖಾನರು ಎಸೆಂಬ್ಲಿ ಚುನಾವಣೆಯಲ್ಲಿ ಮೂರು ಸ್ಥಾನಗಳಿಗೆ ಉಮೇದ್ವಾರಿಯಾಗಿದ್ದರು. ಮೂರರಲ್ಲೂ ಅವರೇ ವಿಜಯಿಯಾಗಿದ್ದರು. ನಿಯಮಾನುಸಾರವಾಗಿ ಎರಡು ಸ್ಥಾನಗಳಿಗೆ ಅವರು ರಾಜೀನಾಮೆ ಕೊಟ್ಟು ಮರುಚುನಾವಣೆ ನಡೆಯಬೇಕಾಗಿದೆ. ಅವುಗಳ ಫಲಿತಾಂಶ ಹೇಗಾದರೂ ಸಮ್ಮಿಶ್ರ ಪಕ್ಷಕ್ಕೀಗ ಸ್ಪಷ್ಟ ಬಹುಮತ ದೊರೆತಿದೆ. ಯೂನಿಯನಿಸ್ಟ್ ಪಕ್ಷದ ನಾಯಕ ಮಾಲಿಕ್ ಕಿಝ್ರಾಂ ಹಯತ್ ಖಾನರನ್ನೇ ಈ ಮಿಶ್ರಪಕ್ಷದ ನಾಯಕರಾಗಿ ನೇಮಿಸಿರುವದರಿಂದ ಅವರೇ ಈ ಬಾರಿಯೂ ಪ್ರಧಾನಿಯಾಗಲಿದ್ದಾರೆ. ಹೊಸ ಮಂತ್ರಿ ಮಂಡಲದಲ್ಲಿ ಆರು ಮಂತ್ರಿಗಳಿರುವರೆಂದೂ, ಆ ಪೈಕಿ, ಮೂವರು ಯೂನಿಯನಿಸ್ಟ್, ಇಬ್ಬರು ಕಾಂಗ್ರೆಸ್, ಓರ್ವ ಅಕಾಲಿಯೆಂದೂ ಊಹಿಸಲಾಗಿದೆ. ಎರಡು ಪಾರ್ಲಿಮೆಂಟರಿ ಕಾರ್ಯದರ್ಶಿ ಸ್ಥಾನಗಳನ್ನೂ, ಎಸೆಂಬ್ಲಿ ಉಪಾಧ್ಯಕ್ಷ ಸ್ಥಾನವನ್ನೂ ಕಾಂಗ್ರೆಸ್ ಸಿಖ್ಖರಿಗೆ ಕೊಡಲಾಗುವದು. ಪಂಜಾಬಿನಲ್ಲಿ ಸರ್ವಪಕ್ಷೀಯ ಅವಿರೋಧಿ ಅಧಿಕಾರ ಸ್ಥಾಪಿಸಲಾಗುವಂತೆ ಲೀಗ್ ಸಹಕಾರ ನೀಡಬೇಕೆಂದು ಮಾಲಿಕ್ ಕಿಝ್ರಾರರು ಲೀಗ್ ಪಕ್ಷದ ನಾಯಕರಾದ ಮಾಮ್ದೋತಿನ ನವಾಬರನ್ನು ಆಮಂತ್ರಿಸಿ ಅವರೊಳಗೀಗ ಮಾತುಕತೆ ನಡೆಯುತ್ತಿದೆ. ಹೇಗಿದ್ದರೂ ಮೌ. ಆಜಾದರೆಂದಂತೆ—"ಪಂಜಾಬು 93 ನೇ ಸೆಕ್ಷನಿನಾಳ್ವಿಕೆಗೊಳಗಾಗುವದು ತಪ್ಪಿತು. ಕಳೆದ ಎಂಟು ವರುಷಗಳಿಂದ ಪಂಜಾಬಿನಲ್ಲಿ ನಡೆಯುತ್ತಿದ್ದ ವಿಧಾನವಿಂದಿಗೆ ಸಮಾಧಿಗೊಂಡಿತು. ಮಾಲಿಕ್ ಕಿಝ್ರಾರ್ ಹಯ್ಯತ್ ಖಾನರಿನ್ನು ಹೊಸ ಜಗತ್ತಿನಲ್ಲಿ-ಕಾಂಗ್ರೆಸ್ ಜಗತ್ತಿನಲ್ಲಿ-ಕಾರ್ಯ ಮಾಡಬೇಕಾಗಿ ಬಂದಿದೆ."

ಲೀಗಿನವರ ರೋಷಾವೇಶ!

ಈ ಸಮ್ಮಿಶ್ರ ಮಂತ್ರಿ ಮಂಡಲದಲ್ಲಿ ಭಾಗವಹಿಸಲು ಪಂಜಾಬ್ ಪ್ರಾಂತಿಕ ಲೀಗ್ ಪ್ರಮುಖರು ಸಿದ್ಧರಿದ್ದರೆಂದೂ, ಆದರೆ ಡಿಲ್ಲೀಂಗಿನಲ್ಲಿದ್ದ ಮಿ. ಜಿನ್ನರಿಗೆ ಟ್ರಂಕ್ ಕರೆ ಹೋಗಿ ಅವರಿಂದ ನಿರಾಕರಣೆ ಬಂತೆಂದೂ ಮೌ. ಆಜಾದರೆಂದಿದ್ದಾರೆ. ಪಕ್ಷಪ್ರಮುಖರ ಸುದೀರ್ಘ ಹೇಳಿಕೆಗಳು-ಪರಸ್ಪರ ಖಂಡನೆಗಳು—ಪ್ರಕಟವಾಗಿವೆ.

(ಆನೇ ಪುಟ ನೋಡಿ)

(ಹಿಂದಿನ ಪುಟದಿಂದ)

ಕುಳಿತು ಗೆದ್ದ ಗಾಂಧೀಜಿಯನ್ನು ಡಾ| ಅಂಬೇಡ್ಕರರಂತೆಯೇ ಹಲವರು ಬೈದಿರಬೇಕು. ಇಲ್ಲಿ ಎರಡು ಸ್ಥಾನಗಳು. ಎಲ್ಲರಿಗೂ ಎರಡೆರಡು ವೋಟಿನ ಅಧಿಕಾರ. ಆ ಎರಡರಲ್ಲಿ ಓರ್ವ ಹರಿಜನನೇ ಬರಬೇಕು; ಉಳಿದೊಂದು ಸ್ಥಾನಕ್ಕೆ ಹರಿಜನ ಸಮೇತ ಯಾವ ವರ್ಣದವನೂ ಬರಬಹುದು. ಇಲ್ಲಿಯ ಕಾಂಗ್ರೆಸ್ ಉಮೇದ್ವಾರಿಗಳು ಶ್ರೀ. ಎ. ಬಿ. ಶೆಟ್ಟರು ಮತ್ತು ಶ್ರೀ ಕೆ. ಈಶ್ವರನವರು. ಡಾ. ಅಂಬೇಡ್ಕರರ ಪಕ್ಷದ ಶ್ರೀ ಗೋಪಾಲ ಸಾಲಿಯಾನ್ನರೊಬ್ಬರೇ ಇದಿರಾಳಿ. ಈ ದೆಸೆಯಿಂದ ಸಾಲಿಯಾನ್ ಶೆಟ್ಟರು ಯಾರಾರಿಗೆ ಎಷ್ಟೆಷ್ಟು ಎಂಬ ಗುಟ್ಟೇ ಕೆಲವರಿಗರ್ಥವಾಗಲಿಲ್ಲ. ಇದೇನೋ 'ಈಶ್ವರ-ಸಾಲಿಯಾನ' ಕಾಳಗವೆಂದು ನೆನಸಿಕೊಂಡು 'ಶ್ರೀ ಶೆಟ್ಟರಿಗೆ ವಿರೋಧವಿಲ್ಲವಲ್ಲಾ!' ಎಂದು ಪ್ರಶ್ನಿಸಿದವರುಂಟು. ಸಾಧ್ಯವಿದ್ದರೆ ಈ. + ಸಾ. ಇಬ್ಬರು ಬರುವದಕ್ಕೂ ಅಡ್ಡಿಯಿರಲಿಲ್ಲ ಆದರೆ ಶ್ರೀಮಾನ್ ಸಾಲಿಯಾನರು ಹಿಂದೆಗೆದುಕೊಂಡರು. ಕುಂದಾಪುರ ಡಿವಿಜನಿನ ಮತದಾರರಿಗೆ ಎರಡು ಪೆಟ್ಟಿಗೆಯನ್ನು ಮೂಸಿಗೆ ಹಿಂಬುವ ಶಿಕ್ಷಣಾಶನ ಅಭ್ಯಾಸವಾಗುವದು ತಪ್ಪಿತು. ಕುಂದಾಪುರ ಡಿವಿಜನ್ ಹೋರಾಟರಂಗವಾಗುವ ಸಂದರ್ಭ ಹೇಗೂ ಇರಲಿಲ್ಲ; ಆದರೆ 'ಪಂಚಾಟ ರಂಗ'ವಾಗುವಂತಿತ್ತು. ಆ ವಿಕೃತಿಯ ಕೆಲಸ ತಪ್ಪಿಹೋಯಿತು

ದ. ಕ. ಜಿಲ್ಲೆಯ ಏಳು ಸ್ಥಾನಗಳಲ್ಲಿ ಐದು ಕಾಂಗ್ರೆಸಿಗೂ ಎರಡು ಮುಸ್ಲಿಂ ಲೀಗಿಗೆ ದೊರೆತುವು. ಮತದಾರರು ಮಲಗಿದ್ದಂತೆಯೇ ಕಾರ್ಯವಾಗಿ ಹೋಯಿತು. ಇಂತಹ ಅವಿರೋಧ ವಾತಾವರಣವುಳ್ಳ ಜಿಲ್ಲೆ ಪ್ರಾಯಶಃ ಇಡೀ ಹಿಂದುಸ್ಥಾನದಲ್ಲೇ ಇಲ್ಲ; ಇದ್ದರೂ ಬಹಳವಿರುವಂತಿಲ್ಲ

UNITED

WE } Offer free SERVICE IN INSURANCE
Give full SECURITY FOR YOUR MONEY.
Guarantee PROMPT SETTLEMENT OF CLAIMS.

RAO BAHADUR
B S. Sawkar, B.A., LL.B
Chairman

A S. Kini,
Managing Director.

THE UNITED KARNATAKA INSURANCE CO. LTD.

H. O. DHARWAR. ESTD 1929.

Insure with or Represent us.

For particulars apply -
ORGANISING OFFICE: COURT ROAD, UDIPI.
Or
M N Bhandary & Co., Sp. Agents, Kodialbail, Mangalore.

ಬೇಕಾಗಿದ್ದಾರೆ

ರಂಗಭೂಮಿಯಲ್ಲಿ ಮತ್ತು ಚಲಚಿತ್ರದಲ್ಲಿ ಪಾರ್ಟನ್ನು ವಹಿಸಲು ರೂಪವತಿಯರಾದ ಮತ್ತು ಗಾಯನ, ನರ್ತನಗಳಲ್ಲಿ ಅಭಿರುಚಿಯುಳ್ಳ ಯುವತಿಯರು ಬೇಕಾಗಿದ್ದಾರೆ. ಭಾವಚಿತ್ರ ಸಮೇತ ಅರ್ಜಿಯನ್ನು ಬರೆಯತಕ್ಕದ್ದು. ಭಾವಚಿತ್ರವನ್ನು ಹಿಂದಕ್ಕೆ ಕಳುಹಿಸಲಾಗುವುದು. ಕಲಾಪ್ರೇಮಿಗಳಿಗೆ ಇದೊಂದು ಸುಸಂಧಿ. ಯೋಗ್ಯರಾಗಿ ಆರಿಸಲ್ಪಟ್ಟವರಿಗೆ ಉತ್ತಮ ಸಂಬಳವನ್ನು ಕೊಡಲಾಗುವುದು. ಕರೆಕಳುಹಿಸದ ಹೊರತು, ಸಮಕ್ಷಮ ಭೇಟಿ ನಿಷೇಧ. ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಿರಿ.

To
The Managing Director
New Karnataka Theatres
C/o Precision Radio & Electrical Mfg. Co
No. 1. Ishwardas Mansion
Nana Chowk
Bombay 7

ಅಮೇರಿಕ ಬ್ರಿಟನ್ ಮತ್ತು ರಶ್ಯಗಳೊಳಗೆ ಮನೋಮಾಲಿನ್ಯ!

ಪರ್ಶಿಯಾ, ಟರ್ಕಿ, ಬಲ್ಗೇರಿಯಾಗಳಲ್ಲಿ ಘರ್ಷಣೆ.

ಅಶಿಯಾ ರಾಷ್ಟ್ರಗಳ ಮೇಲೆ ರಶ್ಯಕ್ಕಾವ ಅಧಿಕಾರ ಬದ್ಧ ಹಿಡಿತವೂ ಇಲ್ಲದಂತೆ ಮಾಡಲು ಅಮೇರಿಕ ಬ್ರಿಟನುಗಳೀಗ ದೃಢ ಸಂಕಲ್ಪ ಮಾಡಿದಂತಿದೆ. ಈ ವರೆಗಿನ ಪರಿಸ್ಥಿತಿ ಮತ್ತು ಒಪ್ಪಂದಗಳು ರಶ್ಯಕ್ಕೆ ಪ್ರತಿಕೂಲವಿವೆ. ಆದರೂ ತಾನಿದ್ದ ಕಡೆಗಳಿಂದ ಒಮ್ಮೆಗೇ ಹಿಂದೆಗೆಯಲು ರಶ್ಯದ ಮನಸ್ಸೊಡಂಬಡುವದಿಲ್ಲ; ಆದರ ಕೃತಿ ಅಮೇರಿಕ ಬ್ರಿಟನುಗಳಿಗೆ ಸಹನವಾಗುವದಿಲ್ಲ. ಸದ್ಯಸ್ಥಿತಿಯ ಮೇಲಿಂದ ಈ ಘರ್ಷಣೆಗಳೇ ಯುದ್ಧ ಹೇತುವಾಗುವವೆನ್ನುವದು ಅಸಾಧ್ಯ. ಆದರೂ ಪರಿಸ್ಥಿತಿ ಉದ್ರೇಕಾವಸ್ಥೆಯಲ್ಲಿದೆ. ಮುಖ್ಯವಾಗಿ ಚೀನದ ಮಂಚೂರಿಯ ಮತ್ತು ಇರಾನಿನಿಂದ ರಶ್ಯನ್ ಸೇನೆಯನ್ನು ಹಿಂದೆಗೆಯಬೇಕೆಂಬ ಕುರಿತು ಆಂಗ್ಲೋ ಅಮೆರಿಕಾನರ ವಿಜ್ಞಾಪನಾ ರೂಪದ ಕಂಠೋಕ್ತ ಎಚ್ಚರಿಕೆ ಹೋಗಿದೆ.

ಮಂಚೂರಿಯದಲ್ಲಿ

ಜಾಪಾನ್ ಯುದ್ಧಾಂತ್ಯದ ಸಮಯದಲ್ಲಿ ರಶ್ಯವು ಜಾಪಾನಾಕ್ರಮಿತ ಚೀನದ ಮಂಚೂರಿಯದೊಳಗೆ ನುಗ್ಗಿ ಅದನ್ನಾಕ್ರಮಿಸಿಕೊಂಡಿದ್ದಿತು. ಆದರೆ ಆದರ ಬೆನ್ನಲ್ಲೇ ನಡೆದ ಚೀನಾ-ರಶ್ಯಾ ಒಪ್ಪಂದದಲ್ಲಿ ಮಂಚೂರಿಯವನ್ನು ಚೀನಕ್ಕೆ ಅಲ್ಪಾವಧಿಯೊಳಗೆ ಬಿಟ್ಟು ಕೊಡಲೊಪ್ಪಿದುದನ್ನು ನೋಡಿ ಎಲ್ಲರೂ ಆಶ್ಚರ್ಯಗೊಂಡಿದ್ದರು. ಈ ಶರ್ತಪ್ರಕಾರ ಕಳದ ದಶಂಬರ್ ತಾ. ೩ರಲ್ಲೇ ಮಂಚೂರಿಯದಲ್ಲಿದ್ದ ಕೆಂಪು ಸೇನೆ ಹಿಂದಿರುಗಬೇಕಾಗಿದ್ದಿತು ಆದರೆ ಆ ಭಾಗಗಳಲ್ಲಿ ಕೆಲವು ಅಕ್ರಮ ಸೇನಾ ತಂಡಗಳ ಹಾವಳಿಯಿದ್ದುದರಿಂದ ರಶ್ಯನ್ ಸೇನೆ ಫೆಬ್ರವರಿ ೩ರ ವರೆಗೆ ನಿಲ್ಲಬೇಕೆಂದು ಚೀನವೇ ವಿಜ್ಞಾಪಿಸಿಕೊಂಡಿದ್ದಿತು. ರಶ್ಯವು ಆ ದಿನ ದಾಟದ ಮೇಲೂ ತನ್ನ ಸೇನೆಯನ್ನು ಹಿಂದೆ ಕರೆಯುವ ಸಿದ್ಧತೆಯಲ್ಲಿರಲಿಲ್ಲ. ಕೆಲವು ಅನಾನುಕೂಲತೆಗಳ ನೆವ ಹೇಳಿ ಮತ್ತೂ ನಿಂತಿತು. ಚೀನೀಯರ 'ಕ್ವಿಟ್ ಮಂಚೂರಿಯಾ' ಚಳವಳನೆದ್ದಿತು ಈ ಕುರಿತು ರಶ್ಯಾ-ಚೀನಾ ಮಾತುಕತೆಗಳು ನಡೆಯಹತ್ತಿದವಲ್ಲದೆ ಚೀನವು ಅಮೇರಿಕ ಬ್ರಿಟನುಗಳಿಗೂ ದೂರಿಟ್ಟಂತೆ ಕಾಣುತ್ತದೆ. ಅಮೇರಿಕವು ಆದಕ್ಕಾಗಿ ರಶ್ಯಕ್ಕೆ ನಿಷೇಧ ಸೂಚಿಸಿದೆ ಈಗ ರಶ್ಯವು ಮಂಚೂರಿಯದಿಂದ ತನ್ನ ಸೇನೆಯನ್ನು ಹಿಂದೆಗೆದಿರುವ ವಾರ್ತೆ ಬಂದಿದೆ. ಆದರೆ ಮಂಚೂರಿಯದಲ್ಲಿದ್ದ ಜಾಪಾನೀ ಸೊತ್ತುಗಳನ್ನೆಲ್ಲಾ ರಶ್ಯಾನರೊಯ್ದಿದ್ದಾರೆ. ಅದು ಯುದ್ಧ ನಷ್ಟ ಪರಿಹಾರವಾಗಿ ತನಗೆ ದೊರೆಯತಕ್ಕದ್ದೆಂದು ಚೀನೀ ಸರಕಾರವನ್ನುತ್ತಿದೆ. ಮಂಚೂರಿಯದಲ್ಲಿದ್ದ ತನ್ನ ಯಂತ್ರಾಲಯ ಇತ್ಯಾದಿಗಳನ್ನು ರಶ್ಯಾನರು ಹಾಳುಗೆಡಹಿದ್ದಾರೆಂದೂ ಕೆಲವೆಡೆ ಬೆಂಕಿ ಹಚ್ಚಿ ಹೋಗಿದ್ದಾರೆಂದೂ ಆರೋಪಿಸಲಾಗಿದೆ.

ಇರಾನಿನಿಂದ

ನಾಜೀ ಆಕ್ರಮಿತ ಇರಾನನ್ನು ಒಂದೆಡೆಯಿಂದ ಆಂಗ್ಲೋ ಅಮೇರಿಕನ್ ಸೇನೆಯೂ ಮತ್ತೊಂದೆಡೆಯಿಂದ ರಶ್ಯನ್ ಸೇನೆಯೂ ನುಗ್ಗಿ ವಿಮೋಚನೆಗೊಳಿಸಿ ತಾವು ನಿಂತಿದ್ದುವು. ಇವು ಮೂರು ರಾಷ್ಟ್ರಗಳ ಸೇನೆಗಳೂ ಯುದ್ಧ ಮುಗಿದ ಮೇಲೆ ಹಿಂದೆರಳಬೇಕೆಂಬ ಅವಧಿ ನಿಶ್ಚಯವಾಗಿತ್ತು. ಆದರೆ ಪರ್ಶಿಯದಲ್ಲಿರುವ ಎಣ್ಣೆ ಸಂಪತ್ತಿನ ಮೇಲೆ ಇವು ಮೂರು ರಾಷ್ಟ್ರಗಳಿಗೂ ಕಣ್ಣಿರುವದರಿಂದ ಅವುಗಳೊಳಗೆ ಪರಸ್ಪರ ದ್ವೇಷಾಸೂಯೆಯಿರುವದನ್ನು ಮರೆಯಬಾರದು. ಇರಾನಿನೊಂದು ಭಾಗದವರು ಇತ್ತೀಚೆಗೆ ಸರಕಾರೀ ವಿರುದ್ಧ ನಡಿಸಿದ್ದ ಬಂಡಾಯವೂ, ರಶ್ಯವು ಆ ಬಂಡಾಯಕ್ಕಿತ್ತ ಪ್ರೋತ್ಸಾಹವೂ ಸರ್ವ ಶ್ರುತವಿದೆ. ತಂತಮ್ಮ ಸೇನೆಗಳನ್ನು ಹಿಂದೆಗೆದುಕೊಳ್ಳುವ ಕುರಿತು ಈ ತ್ರಿರಾಷ್ಟ್ರಗಳು ನಿಶ್ಚೈಸಿದ್ದ ದಿನ ಇದೇ ಮಾರ್ಚ ತಾ 2. ಅಲ್ಪ ಸಂಖ್ಯೆಯಲ್ಲಿದ್ದ ಆಂಗ್ಲೋ ಅಮೆರಿಕನ್ ಸೇನೆಗಳು ಅಲ್ಲಿಂದ ಹಿಂದೆಗೆದರೂ ರಶ್ಯವು ತನ್ನ ಸೇನೆಯ ಅರೆಪಾಲಿಯನ್ನು ಮಾತ್ರ ಹಿಂದೆಗೆಯುವೆನೆಂದೂ ಪರ್ಶಿಯದ ಉತ್ತರ ಭಾಗದಲ್ಲಿ ಸ್ವಲ್ಪಾಂಶ ಸೇನೆಯನ್ನು ಇಡುವೆನೆಂದೂ ಸಂಕಲ್ಪಿಸಿತು ಈ ಕುರಿತು ಅಮೇರಿಕವು ವಿಜ್ಞಾಪನಾ ರೂಪದ ಸ್ಪಷ್ಟ ಎಚ್ಚರಿಕೆ ಕಳುಹಿಸಿದೆ; ಬ್ರಿಟನೂ ಅಮೇರಿಕವನ್ನನುಸರಿಸಿ ತನ್ನ ಖಂಡನೆ ಸೂಚಿಸಿದೆ ಮಂಚೂರಿಯದ ಸಂಬಂಧದಲ್ಲಿ ಚೀನೀ ಸರಕಾರದೊಡನೆ ಸಂಧಿ ಪ್ರಯತ್ನ ನಡಿಸಿ ನೋಡಿದಂತೆಯೇ ರಶ್ಯವೀಗ ಇರಾನ್ ಸರಕಾರದೊಡನೆಯೇ ಸಂಧಾನ ಮಾತುಕತೆಗಳಿಗಾರಂಭಿಸಿದೆ, ಇದು ಜಯಗೊಂಡು ತನ್ನಲ್ಲಿ ಕೆಂಪು ಸೇನೆಯುಳಿಯಲು ಇರಾನ್ ಸರಕಾರವೊಪ್ಪಿದರೆ ಎಲ್ಲವೂ ಶಾಂತಿ ಪರ್ಯವಸಾನಗೊಳ್ಳುವದು. ಅದಕ್ಕೆ ವಿರುದ್ಧವಾಗಿ ರಶ್ಯನ್ ಸೇನೆ ಅಲ್ಲಿ ನಿಂತಲ್ಲಿ ಆಂಗ್ಲೋ ಅಮೇರಿಕಾನರಿಗೆ ಅದೆಂದಿಗೂ ಸಹನವಾಗದು. ಆದ್ದರಿಂದ ಮುಂದೇನಾಗುವದೋ ನೋಡಲಿಕ್ಕಿದೆ.

ಟರ್ಕಿ-ರಶ್ಯಾ ಜಗಳ

ಇನ್ನೊಂದು ಆತುರದಾಯೀ ಜಗಳವೆಂದರೆ ಟರ್ಕಿ ಮತ್ತು ರಶ್ಯಗಳೊಳಗೆದ್ದಿರುವ ಸ್ಥಳ ವಿವಾದ. ಟರ್ಕಿಯ ಈಶಾನ್ಯ ಮೂಲೆಯಾದ ಕಾರ್ಸ್ ಮತ್ತು ಅರ್ದಹಾನ್ ಪ್ರಾಂತ್ಯಗಳನ್ನು ಸೋವಿಯಟ್ ರಿಪಬ್ಲಿಕಿಗೆ ಒಪ್ಪಿಸಬೇಕೆಂದು ರಶ್ಯವು ಟರ್ಕಿಯನ್ನು ಕೇಳಿದೆಯೆಂದೂ ಇದೇ ಸೂಚನೆಯನ್ನು ಇಂಗ್ಲಾಂಡು ಅಮೇರಿಕಗಳಿಗೆ ತಿಳಿಸಿದೆಯೆಂದೂ ಪ್ರಕಟವಾಗಿದೆ. ಅಂತೆಯೇ ಡಾರ್ಡನೆಲ್ಸನ್ನೂ ರಶ್ಯವು ದೀರ್ಘ ಕಾಲದಿಂದ ಅಪೇಕ್ಷಿಸುತ್ತಿದೆ. ಈಗ ಟರ್ಕಿಯದಾಗಿದ್ದು, ಸೋವಿಯೆಟ್ ಸರ್ಕಾರದ ಅರ್ಮೇನಿಯಮ್ ಗಡಿಯಲ್ಲಿರುವ ಕಾರ್ಸ್, ಅರ್ದಹಾನ್ ಮತ್ತು ಬಾಟಮ್ ಜಿಲ್ಲೆಗಳು ಮೂಲತಃ ರಶ್ಯದ ಕ್ಷೇತ್ರಗಳು. 1914—1೮ರ ಯುದ್ಧಾನಂತರ ನಡೆದ ಒಪ್ಪಂದದಂತೆ ಟರ್ಕಿಗೆ ಹೋಗಿದ್ದುವು. ಆ ಮೇಲಿನೊಂದು ಕರಾರು ಪ್ರಕಾರ ಟರ್ಕಿಯು ಬಾಟಮ್ ಜಿಲ್ಲೆಯನ್ನು ರಶ್ಯಕ್ಕೆ ಬಿಟ್ಟುಕೊಟ್ಟರೂ ಉಳಿದೆರಡು ಜಿಲ್ಲೆಗಳು ಇದುವರೆಗೂ ಟರ್ಕಿಯ ಸ್ವಾಧೀನದಲ್ಲೇ ಇವೆ. ಈ ಸ್ಥಳಗಳ ತೀರ್ಮಾನವಾಗದೆ ಟರ್ಕಿಯೊಡನೊಂದು ಒಪ್ಪಂದ ಮಾಡಿಕೊಳ್ಳಲು ರಶ್ಯವು ತಯಾರಿಲ್ಲವಾದ್ದರಿಂದ ಟರ್ಕಿ-ರಶ್ಯಾ ಸ್ನೇಹ ಕರಾರು ಆಗಿಲ್ಲ. ಈ ಬಾರಿ ರಶ್ಯವು ತನ್ನ ಬೇಡಿಕೆಯನ್ನು ಬಲವಾಗಿ ಮುಂದೊತ್ತಹತ್ತಿದೆ. ಬ್ರಿಟನ್ ಅಮೇರಿಕಗಳ ಬೆಂಬಲವು ಟರ್ಕಿಗಿದೆ. ಅದೇ ರೀತಿ ರಶ್ಯದ ಸೂತ್ರಕ್ಕೊಳಪಟ್ಟಿರುವ ಬಲ್ಗೇರಿಯದ ಮಂತ್ರಿಮಂಡಲದಲ್ಲಿ ಅಮೇರಿಕದ ಪಕ್ಷಪಾತಿಯಾದ ಅಲ್ಲಿಯ ವಿರುದ್ಧ ಪಕ್ಷೀಯ ಸದಸ್ಯರಿಬ್ಬರನ್ನು ಸೇರಿಸಿಕೊಳ್ಳಬೇಕೆಂದು ಅಮೇರಿಕದ ಸೂಚನೆ; ಅದಕ್ಕೆ ಬ್ರಿಟನಿನ ಬೆಂಬಲ. ಆದರೆ ರಶ್ಯವು ಆದಕ್ಕೊಪ್ಪದೆ ಬಲ್ಗೇರಿಯದಲ್ಲಿ ಅಮೇರಿಕಾನರು ಅಶಾಂತಿ ಹಬ್ಬುತಿದ್ದಾರೆ ಎಂದು ಆರೋಪಿಸಿದೆ.

ಚರ್ಚಿಲ್ಲರ ಘರ್ಜನೆ

ಹೀಗೆ ಬ್ರಿಟನ್, ಅಮೇರಿಕ ಮತ್ತು ರಶ್ಯಗಳೊಳಗಿನ ಸಂಬಂಧ ಎಲ್ಲೆಡೆಯಲ್ಲೂ ಕೆಡುತ್ತಾ ಬಂದಿರುವಾಗ, ಅಮೇರಿಕದ ವೆಸ್ಟಮಿನಿಸ್ಟರ್ ಕಾಲೇಜಿನಲ್ಲಿ ಭಾಷಣವೀಯುತ್ತಾ ಹಳೇ ಹುಲಿ ಚರ್ಚಿಲ್ಲರು ಲೋಕದ ನಾಲ್ದೆಸೆಗಳಲ್ಲೂ ಪ್ರತಿಧ್ವನಿಸಿದ ವಿಲಕ್ಷಣ ಘರ್ಜನೆ ಕೊಟ್ಟಿದ್ದಾರೆ. ಏಕ ಭಾಷಾಭಕ್ತರಾದ ಆಂಗ್ಲೋ-ಅಮೆರಿಕಾನರು ಸರ್ವ ವಿಧದಿಂದಲೂ ಸರ್ವ ಕಾಲದಲ್ಲೂ ಒಟ್ಟಾಗಿರುವ ಅಧಿಕೃತ ವ್ಯವಸ್ಥೆ[illegible]ಬೇಕೆಂದು ಒತ್ತಿ ಹೇಳಿ, ಯುರೋಪಿನಲ್ಲಿ ರಶ್ಯದ ಪ್ರಭಾವ ಹಬ್ಬಿದೆಯೆಂದೂ, ರಶ್ಯವು ಯುದ್ಧದ ಪ್ರತಿಫಲವನ್ನೆಲ್ಲಾ ತಾನೇ ಪಡೆಯಲು ಪ್ರಯತ್ನಿಸುತ್ತಿದೆಯೆಂದೂ, ಇಂದಿನ ಯುರೋಪು ತಾವಪೇಕ್ಷಿಸಿದ ಯುದ್ಧೋತ್ತರ ಯುರೋಪಲ್ಲವೆಂದೂ ಗುಡುಗಿದ್ದಾರೆ. ಕಮ್ಯೂನಿಸಂ ಕಂಟಕವನ್ನು ತಡಮಾಡದೆ ಕಿತ್ತುಹಾಕಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿ, ಈ ಕುರಿತು ಸಮಜಾಯಿಸುವಿಕೆಯ ಧೋರಣೆ ಅನಾಹುತಕಾರಿಯೆಂದೂ ಎಚ್ಚರಿಸಿದ್ದಾರೆ. ಅಮೇರಿಕಾಧ್ಯಕ್ಷ ಟ್ರುಮೇನರಿಗೂ, ಬ್ರಿಟಿಷ್ ವಿದೇಶ ಮಂತ್ರಿ ಮಿ. ಬೆವಿನರಿಗೂ ಚರ್ಚಿಲ್ಲರ ಮಾತುಗಳು ಸಮ್ಮತವಾದಂತಿವೆ.

ನ್ಯೂ ಕರ್ನಾಟಕ ಥಿಯೇಟರ್ಸ್ ಮುಂಬಯಿ, ಇವರು

"ಮುಕ್ತಿ"

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯ

ಬಾಲಿವಾಲಾ ಗ್ರಾಂಡ್ ಥಿಯೇಟರಿನಲ್ಲಿ ಪ್ರದರ್ಶಿಸುವರು

ಲೇಖಕರು, ನಿರ್ಮಾಣಕರು ಮತ್ತು ನಿರ್ದೇಶಕರು.

ಶ್ರೀ ಯಂ. ಎಸ್. ಶೆಟ್ಟಿ.

ರಂಗಭೂಮಿಯ ಮೇಲೆ ಇಂದಿನ ವರೆಗೆ ಪ್ರದರ್ಶಿಸದ ನಾಟಕ. ಮಿಲನ-ವಿರಹ, ಆಶೆ ನಿರಾಶೆ, ಪ್ರೇಮ ರಾಗಗಳಿಂದೊಡಗೂಡಿದ ಸಂಸಾರದ ಚಿತ್ರ. ಪತಿಯ ಪ್ರೇಮವನ್ನು ಪಡೆಯಲು ಹೆಣಗಾಡಿದ ಸತಿಯ ಜೀವನ. ಪ್ರೇಮಕ್ಕಾಗಿ ಸರ್ವಸ್ವವನ್ನೂ ತ್ಯಜಿಸಲು ಸಿದ್ಧಳಾದ ಸಿನೆಮಾ ನಟಿಯ ನೈಜ ಪರಿಚಯ. ಹಣಗಳಿಸಲು ಬ್ಲ್ಯಾಕ್ ಮಾರ್ಕೆಟಿನವರು ಮಾಡಿದ ಕಾರಸ್ಥಾನ.

ಕಲೆಯ ಪರಿಚಯವನ್ನು ಮಾಡಿ ಅದರ ಸೇವೆಯನ್ನು ಮಾಡಲು ಹೊರಟಿರುವ ಪಾತ್ರವರ್ಗವು ನಟನೆಯಲ್ಲಿಯೂ ನೈಜ ರೂಪವನ್ನು ತೋರುವರು.

ಕೇವಲ ಮೂರು ಪ್ರಯೋಗಗಳು

೧ನೇ ಪ್ರಯೋಗ. ಶನಿವಾರ ತಾ. 30 ಮಾರ್ಚ ಮಧ್ಯಾಹ್ನ ಮೂರು ಘಂಟೆಗೆ
೨ನೇ ,, ಬುಧವಾರ ತಾ. 10 ಎಪ್ರಿಲ್ ,, ,, ,,
೩ನೇ ,, ಶುಕ್ರವಾರ ತಾ. 19 ,, ಬೆಳಗ್ಗೆ ಒಂಭತ್ತು ಘಂಟೆಗೆ

ಟಿಕೇಟಿನ ದರ ಟ್ಯಾಕ್ಸ್ ಸಹಿತ

ರೂ 10-0-0; 7-8-0; 5-0-0; 2-8-0, 1-4-0; 0-10-0.

ವಿವರ್ಗೆ ಈ ಕೆಳಗಿನ ವಿಳಾಸದಲ್ಲಿ ನೋಡಿರಿ.

Precision Radio & Electrical Mfg. Co
No. 1. Ishwardas Mansion, Nana chowk,
BOMBAY 7

M. S. SHETTY
MANAGING DIRECTOR.

P. K. NAIR
GENERAL MANAGER.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ಮುಟ್ಟಾಗುಳಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗಿಸುವುವು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಲಿಷ್ಟವಾದ ಕೇಸುಗಳಿಗೆ ರೂ. 5. ೬ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಧಿಕ.)

Mrs. P. DEVEE,
F. D. S (A. E.) Tollygunge, Calcutta
ಸ್ಟಾಕಿಸ್ಟ್: ಶ್ರೀ ಕಂಪೆನಿ, ಮಂಗಳೂರು

The Canara Banking Corporation Limited.
(Incorporated in British India, with limited Liability)
Estd: 1906
Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... $2\frac{1}{4}$%
6 months .. $2\frac{1}{2}$%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ನವಯುಗ

ಉಡುಪಿ, ಗುರುವಾರ, ೧೪-೩-'೪೬

ಪ್ರಾಂತಿಕ ಚುನಾವಣೆ.

215 ಸದಸ್ಯರುಳ್ಳ ಮದ್ರಾಸ್ ಪ್ರಾಂತಿಕ ಎಸೆಂಬ್ಲಿಗೆ ಸುಮಾರು 93 ಮಂದಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ. ತನ್ನ ಏಳು ಸ್ಥಾನಗಳನ್ನೂ ಸ್ಪರ್ಧೆಯಿಲ್ಲದೆ ತುಂಬಿಸಿ ಕೊಟ್ಟ ದಕ್ಷಿಣ ಕನ್ನಡದಂತಹ ಬೇರೆ ಜಿಲ್ಲೆಗಳವೆಯೇ ಎಂಬ ವಿವರ ಗೊತ್ತಾಗಿಲ್ಲ. ಅವಿರೋಧವಾಗಿ ಆಯ್ಕೆಗೊಂಡ 93 ಮಂದಿಯಲ್ಲಿ ಸುಮಾರು 70 ಮಂದಿ ಕಾಂಗ್ರೆಸ್ ಪ್ರತಿನಿಧಿಗಳು. 13 ಮಂದಿ ಮುಸ್ಲಿಂ ಲೀಗಿನವರು. ಉಳಿದ 10ರಲ್ಲಿ 6 ಮಂದಿ ಯುರೋಪಿಯನರು; ಉಳಿದವರು ಸ್ವತಂತ್ರ ಉಮೇದ್ವಾರಿಗಳು. ಇನ್ನುಳಿದ 122 ಸ್ಥಾನಗಳಿಗೆ ಚುನಾವಣೆಯಾಗಲು ಉಳಿದಿದೆ. ಇಡೀ ಪ್ರಾಂತ್ಯದಲ್ಲಿ ಈ ಚುನಾವಣಾ ಕಾರ್ಯವು ಇದೇ ತಿಂಗಳ ತಾ. 18ರಿಂದ ತಾ; 25ರ ವರೆಗಿನ ದಿನಗಳಲ್ಲಿ ನಡೆಯಲಿದೆ.

ಈ ಬಾರಿ ಮದ್ರಾಸ್ ಪ್ರಾಂತಿಕ ಚುನಾವಣಾರಂಗದಲ್ಲಿ-ಸಾಮಾನ್ಯ ಮತದಾರ ಕ್ಷೇತ್ರಗಳಲ್ಲಿ—ಸ್ಪರ್ಧಿಸುತ್ತಿರುವ ಎರಡು ಮುಖ್ಯ ಪಕ್ಷಗಳೆಂದರೆ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್. ಇದೆಲ್ಲಿಯೂ ಸಮಬಲ ಹೋರಾಟವಾಗಿಲ್ಲ. ಕಾಂಗ್ರೆಸಿನಿದಿರು ಕಲೆಯುತ್ತುವಷ್ಟು ಶಕ್ತಿ ಕಮ್ಯೂನಿಸ್ಟ ಪಕ್ಷಕ್ಕೆ ಬಂದಿದೆ ಎಂಬುದಕ್ಕಿಂತ ಹೆಚ್ಚಿನ ಅರ್ಥವಾವುದೂ ಈ ಸ್ಪರ್ಧೆಯಲ್ಲಿಲ್ಲ. ಅದನ್ನು ಅತ್ಯುಕ್ತಿಯಿಂದ ವರ್ಣಿಸಿದರೇನೇ ಕಮ್ಯೂನಿಸ್ಟರ ಇಷ್ಟಸಿದ್ಧಿಯಾದಂತೆ! ಕಾರಣ—ಅವರ ಸ್ಪರ್ಧೆಗೆ ಪ್ರಚಾರ ಮೌಲ್ಯವಿದ್ದಷ್ಟು ಎಸೆಂಬ್ಲಿ ಸ್ಥಾನಗಳ ಆಶೆಯಿದ್ದಿರಲಾರದು. ಆದರೆ ಇದು ಕಾಲಗತಿಯ ಸೂಚನೆಯೆಂಬುದು ಖಂಡಿತ. 1937ರ ಚುನಾವಣೆಯಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಕಾಂಗ್ರೆಸನ್ನು ಇದಿರಿಸಿದ್ದ ಏಕಮಾತ್ರ ಸುಸಂಘಟಿತ ಹಾಗೂ ಗಣ್ಯ ಪಕ್ಷವೆಂದರೆ 'ಜಸ್ಟೀಸ್ ಪಾರ್ಟಿ'. ಆಗಿನ ಸೋಲಿನಿಂದ ಅದು ನೆಲಮುರಿದು ಬೀಳಬೇಕಾಯಿತು. ಆ ಮೇಲೆ ತೀವ್ರಗತಿಯಿಂದ ಬೀಸಿದ ಪ್ರಗತಿ ಗಾಳಿಯು ಈ ಅಪ್ರಾಗತಿಕ ಪಕ್ಷಕ್ಕೆ ಚೇತನ ಬರಿಸುವ ಬದಲು ಶ್ವಾಸಾಪಹಾರವನ್ನೇ ಮಾಡಿತು! ಇಂದು ಜಸ್ಟೀಸ್ ಪಕ್ಷವೇ ಇಲ್ಲವೆಂದಾಗಿದೆ; ಅದರ ಸ್ಥಾನದಲ್ಲಿ—ಅಂತಹ ಶಕ್ತಿ, ಕಳಕಳಿಗಳಿಲ್ಲವಾದರೂ—ಇಂದು ಕಮ್ಯೂನಿಸ್ಟ ಪಕ್ಷವೆದ್ದಿದೆ. ಹಳೆಯದು ಹೊಸತೊಂದಕ್ಕೆ ತನ್ನ ಸ್ಥಾನ ಬಿಟ್ಟುಕೊಟ್ಟ ದೃಶ್ಯವಿದು. ಕೇವಲ ಚುನಾವಣೆಯ ಜಯಾಪಜಯಗಳೇ ಮುಖ್ಯವೆಂದಾದರೆ ಕಾಂಗ್ರೆಸು ಕಳೆದ ಬಾರಿಯ ಇದಿರಾಳಿಗೆ ಹೆದರಿದ್ದ ನಾಲ್ಕನೇ ಒಂದಂಶದಷ್ಟು ಕೂಡಾ ಈ ಬಾರಿಯ ವೈರಿಯನ್ನು ಗಣಿಸಬೇಕಾಗಿಲ್ಲ ಆದರೆ ಚುನಾವಣೆಯೆಂಬುದು ಕಾಂಗ್ರೆಸಿನ ಮುಂದಿರುವ ಗುರಿಯ ಒಂದು ಹೆಜ್ಜೆ ಮಾತ್ರ; ಅದೇ ನಿಲ್ದಾಣವಲ್ಲ. ಆದ್ದರಿಂದ ಕಮ್ಯೂನಿಸ್ಟ್ ವಿರೋಧವನ್ನು ಕಡೆಗಣಿಸಲಾಗುವದಿಲ್ಲ. ಅವರಿಂದಾಗಲಿರುವ ಹಾನಿ-ವೃದ್ಧಿಗಳ ಕಡೆಗೆ ಕಾಂಗ್ರೆಸ್ ಈಗಲೇ ಸಾಕಷ್ಟು ಲಕ್ಷ್ಯಕೊಡುವದು ಅಗತ್ಯವು ಬೆಳೆಯಲಿರುವ ಶಿಶು; ಅದರಲ್ಲಿರುವ ಹಿತಾಹಿತಗಳೂ ಮುಂದೆಂದೂ ಬಗ್ಗಿಸಲಾರದಷ್ಟು ಬೆಳೆಯಲಿರುವದು ಖಂಡಿತ. ಕಳೆದ ಬಾರಿಯ ಚುನಾವಣೆಯಲ್ಲಿ ಅವರ ಹೆಸರೇ ಕೇಳಿಬಂದಿರಲಿಲ್ಲ; ಈ ಬಾರಿ ಇದಿರುಗಡೆಯಲ್ಲಿ ಅವರನ್ನು ಕಾಣುತಿದ್ದೇವೆ; ಇನ್ನೊಂದು ಬಾರಿಗೆ ಮೇಲ್ಗಡೆಯಿಂದಲೇ ಅವರು ಕಾಣಿಸಿಕೊಂಡಾರು. ಪ್ರಗತಿ ಸಾಧನೆಗೆ ಸಹಾಯಕವೆಂದಾದರೆ ಆ ಪಕ್ಷದ ಇಂತಹ ಅಭಿವೃದ್ಧಿಯನ್ನೇ ಜನತೆಯು ಹಾರೈಸಬೇಕು. ಜನತಾ ಸರಕಾರವೇ ಅವರ ಗುರಿ-ಮಿಕ್ಕ ಪಕ್ಷಗಳಿಗೆ ಆ ಗುರಿ ಮುಟ್ಟುವ ಯೋಗ್ಯತೆಯಿಲ್ಲವಾದ್ದರಿಂದ ಕಮ್ಯೂನಿಸ್ಟ್ ಪಕ್ಷದ ಅವತಾರವೆಂದಾಗುತಿದ್ದರೆ ಅದನ್ನಲ್ಲದೆ ಇನ್ನೊಂದನ್ನು ಸ್ವಾಗತಿಸಲು ಲೋಕಸುಖಿಚ್ಛಾ ಕಾಂಕ್ಷಿಯೊಬ್ಬನು ತಯಾರಿರಲಾರ. ಆದರೆ ಹಿಂದೀ ಕಮ್ಯೂನಿಸ್ಟರ ಧೋರಣೆಯೇನು? ರಾಜಕೀಯರಂಗದಲ್ಲಿ ಕಾಲಿಡುವ ಯೋಗ್ಯತೆ ಅವರಿಗಿದೆಯೇ? ಗುರಿಯ ನೋಟ ಪ್ರತ್ಯೇಕ. ಕಾಂಗ್ರೆಸಿನ ಗುರಿಯೂ ಅದೇ. ಕೆಲಸಗಾರರ ಸಂಘಟನೆಯೂ ಹಾಗೆಯೇ 'ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳೊಂದಾಗಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕು' ಎಂಬುದೊಂದೇ ಕಮ್ಯೂನಿಸ್ಟರ ಸದ್ಯದ ರಾಜಕೀಯ ಧೋರಣೆ. ಇದು ಕಾಂಗ್ರೆಸಿಗೆ ಬೇಡವಾಗಿರುವ ವಿಷಯವೆ? ಆದರೆ ಲೀಗಿನ ಬೇಡಿಕೆಯನ್ನು ಕಾಂಗ್ರೆಸ್ ಒಪ್ಪಿ ಒಂದಾಗಬೇಕೆಂಬುದೇ ಅವರಧೋರಣೆಯ ಅಂತರ್ಯ. ಅದರ ನ್ಯಾಯಾನ್ಯಾಯ ಹೇಗಿದ್ದರೂ ಅದು ರಾಜಕೀಯ ಭೂವಿ.ಯೊಳಗಡೆಯ ಒಂದು ವಾದರಂಗವಾತ್ರ. ಈ ವಾದರಂಗಕ್ಕಿಳಿದ ಪಕ್ಷವು ರಾಜಕೀಯ ಸ್ವರೂಪ ಹೊಂದುವಂತಿಲ್ಲ ಕಾಂಗ್ರೆಸ್ ಸ್ವಾತಂತ್ರ್ಯ ಕೇಳುತ್ತಾ ಪ್ರವೇಶಿಸಬಹುದು; ಲೀಗ್ ಪಾಕಿಸ್ತಾನ್ ಕೇಳುತ್ತಾ ಬರಬಹುದು; 'ಅವರಿಗದನ್ನು ಕೊಡಬೇಕು; ಇವರಿಗಿದನ್ನು ಕೊಡಬೇಕು' ಎಂದು ಹೇಳುತ್ತಾ ಕಮ್ಯೂನಿಸ್ಟ್ ಪಕ್ಷ ಬರುವದು ಅನಗತ್ಯವಾಗಿ; ಅಧಿಕ ಪ್ರಸಂಗಿಯಾಗಿ! ಆದ್ದರಿಂದ ಕ್ರಮಬದ್ಧ ರಾಜಕೀಯರಂಗದಲ್ಲಿ ಇಂದಿನ ಕಮ್ಯೂನಿಸ್ಟ್ ಪಕ್ಷಕ್ಕೆ ಸ್ಥಾನವೇ ಇಲ್ಲ. ಅಂತಹ ಅಸ್ತಿತ್ವ ಶೂನ್ಯರಿಗೆ ಮತಕೊಡುವಷ್ಟು ಪ್ರಜ್ಞಾಶೂನ್ಯರು ಮದ್ರಾಸ್ ಪ್ರಾಂತ್ಯದ ಮತದಾರರಲ್ಲ ಮತಾಧಿಕಾರವು ಸದುಪಯೋಗವಾಗಬೇಕು; ತಪ್ಪಿದರೆ ದುರ್ದೈವಶಾತ್ ದುರುಪಯೋಗವಾದರೂ ಆಗಬೇಕು. ಕಮ್ಯೂನಿಸ್ಟರಿಗೆ ಕೊಟ್ಟು ನಿರುಪಯೋಗವಾಗಬೇಕೆ? ಆದ್ದರಿಂದ ಸಂಜಾಬು ಪ್ರಾಂತ್ಯವು ಕಮ್ಯೂನಿಸ್ಟರಿಗೆ ಕಲಿಸಿದ ಪಾಠವನ್ನು ಮದ್ರಾಸ್ ಪ್ರಾಂತ್ಯವು ಮುಂದಟ್ಟುವಡಿಸುವದೆಂದು ನಿರೀಕ್ಷಿಸುತ್ತೇವೆ.

ಮಂಗಳೂರು ನೇಯಿಗೆ ಕೆಲಸಗಾರರ ಮುಷ್ಕರವು—ಇತ್ತೀಚೆಗೆ ಪ್ರಾರಂಭವಾಗಿದೆಯಷ್ಟೆ. ಮುಷ್ಕರವು ಶಾಂತ ರೀತಿಯಿಂದ ಮುಂದೆ ಸಾಗುತ್ತಿದೆಯಾದರೂ ಕೆಲವು ದಿವಸಗಳ ಹಿಂದೆ ಮುಷ್ಕರ ಹೂಡಿದ ಕೆಲಸಗಾರರಲ್ಲೊಬ್ಬನಾದ ರಾಘವ ಎಂಬ ಹುಡುಗನು ಕಾರ್ಖಾನೆಯ ಗೇಟಿನ ಬಾಗಿಲಲ್ಲಿ ಪಿಕೆಟಿಂಗ್ ನಡಿಸುವುದರ ಮೂಲಕ ಸಾರ್ವಜನಿಕ ವ್ಯವಹಾರಗಳಿಗೆ ಅಡ್ಡಿ ಮಾಡಿದನೆಂದು ಪೋಲೀಸರು ಆರೋಪಣೆ ಹೊರಿಸಿದುದರಿಂದ ಆತನಿಗೆ ಸ್ಟೇಶನರಿ ಸಬ್ ಮೆಜಿಸ್ಟ್ರೇಟರು ರೂಪಾಯಿ 200 ಜುಲ್ಮಾನೆ ವಿಧಿಸಿರುವರಾಗಿ ತಿಳಿದುಬರುತ್ತದೆ. ಮುಷ್ಕರಗಾರರಲ್ಲಿ ಮನಸ್ಸಿದ್ದವರು ಪುನಹ ಕೆಲಸಕ್ಕೆ ಹೋಗಬಹುದೆಂಬ ತೀರ್ಮಾನವಾಗಿದೆ ಎಂದೂ ವದಂತಿ.

ಮೂಲ ತೀರ್ಪು ಕಾಯಂ—ಶ್ರೀಪೇಜಾವರ ಮಠದ ಮಾಜಿ ಏಜಂಟರಾದ ಶ್ರೀ ಪಿಂಯೂಳ ನರಸಿಂಹಾಚಾರ್ಯ, ಎಸ್. ಪಿ. ತೋಳ್ಪಡಿತ್ತಾಯ, ಬಿ. ಶ್ರೀನಿವಾಸರಾವ್, ಮತ್ತು ಎಸ್. ಗುರುರಾಜ ಉಡ್ಪ ಈ ನಾಲ್ವರು ಮಠದ ಸಾಧಾರಣ ರುಪಾಯಿ 15,000/- ಬೆಲೆಬಾಳುವ ಚಿನ್ನಾಭರಣಗಳ ವಿಚಾರದಲ್ಲಿ ಮೊದಲಿನವರು ನಂಬಿಕೆ ದ್ರೋಹ ಮಾಡಿದರೆಂದೂ ಉಳಿದವರು ಆ ಕೆಲಸದಲ್ಲಿ ಸಹಭಾಗಿಗಳಾಗಿದ್ದರೆಂದೂ ಆರೋಪ ಹೊರಿಸಲಾಗಿತ್ತು. ಕುಂದಾಪುರ ಸ. ಡಿ. ಮೆಜಿಸ್ಟ್ರೇಟರು ಎಲ್ಲರೂ ಅಪರಾಧಿಗಳೆಂದು ನಿರ್ಧರಿಸಿ ನರಸಿಂಹಾಚಾರ್ಯರಿಗೆ ಒಟ್ಟು ಎರಡು ವರ್ಷಗಳ ಕಠಿನ ಸಜೆ, ರೂ. 600/- ಜುಲ್ಮಾನೆ; ತೋಳ್ಪಡಿತ್ತಾಯರಿಗೆ ಮತ್ತು ಬಿ. ಶ್ರೀನಿವಾಸರಾಯರಿಗೆ ತಲಾ ಆರು ತಿಂಗಳ ಕಠಿಣ ಸಜೆ ಮತ್ತು ರೂ. 200/- ಜುಲ್ಮಾನೆ; ಎಸ್. ಗುರುರಾಜ ಉಡುಪರಿಗೆ ಒಂದು ವರ್ಷ ಕಠಿನ ಸಜೆ, ರೂ. 600/- ಜುಲ್ಮಾನೆ ಎಂದು ವಿಧಿಸಿದ್ದರು. ಈ ನೊಕದ್ದಮೆಯ ಅಪೀಲನ್ನು ಜಿಲ್ಲಾ ಮತ್ತು ಸೆಶ್ಯನ್ಸ್ ಜಡ್ಜರಾದ ಶ್ರೀ. ಕೆ. ಶ್ರೀನಿವಾಸನ್, ಐ. ಸಿ. ಎಸ್; ಅವರು ವಿಚಾರಿಸಿ ಅಪಸ್ನು ಡಿಸ್‌ಮಿಸ್ ಮಾಡಿ ಮೂಲ ತೀರ್ಪನ್ನೇ ಕಾಯಂ ಮಾಡಿದರು.

ಯುನಿವರ್ಸಿಟಿ ಕಮಿಶನ್- ಡಾ. ಪಿ. ಟಿ. ಪೇ, ಶ್ರೀ. ಎಸ್. ಗೋವಿಂದರಾಜುಲ್ಲು[illegible]ಖಾನ್ ಬಹದೂರ್ ಮಹಮ್ಮದ್ ಅಬ್ದುಲ್ ಹಕ್ ಮೊದಲಾದವರನ್ನೊಳಗೊಂಡ ಸದಸ್ಯರಿರುವ ಮದ್ರಾಸ್ ಯುನಿವರ್ಸಿಟಿ [illegible] ತಾ [illegible]ರಲ್ಲು ಸಂಜೆ ಮಂಗಳೂರಿಗೆ ಬಂದಿದ್ದು [illegible]ನ ಸ್ಟಂಟ್ ಎಲೋಸಿಯಸ್ ಕೊಲೇಜು, ಸ್ಟಂಟ್ ಅಗ್ನೆಸ್ ಕೊಲೇಜುಗಳನ್ನು ಸಂದರ್ಶಿಸಲಾಯಿತು. ತಾ 12ರಲ್ಲು ಗವರ್ನಮೆಂಟ್ ಕೊಲೇಜು, ಟ್ರೈನಿಂಗ್ ಕೊಲೇಜುಗಳನ್ನು ಸಂದರ್ಶಿಸಿ ತಾ 13ರಲ್ಲು ಮಂಗಳೂರಿನಿಂದ ಹಿಂತಿರುಗಿತು.

ಅಜೆಕಾರ್—ಮುನಿಯಾಲಿನ ಪ್ರೇಮಾ ಮೆಡಿಕಲ್ ಹಾಲಿನ ಶಾಖೆಯೊಂದು ತಾ.6.3 46ರಲ್ಲಿ ಅಜೆಕಾರಿನಲ್ಲಿ ಸ್ಥಳೀಯ ರೆವಿನ್ಯೂ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ತೆರೆಯಲ್ಪಟ್ಟಿತು. ಫಾದರ್ ಫೆರ್ನಾಂಡಿಸ್ ಮೊದಲಾದವರ ಭಾಷಣಗಳಾದ ಮೇಲೆ ಡಾ. ಕೃಷ್ಣ ಅವರು ಮುನಿಯಾಲಿನಂತೆಯೇ ಇಲ್ಲಿಯೂ ಜನ ಸೇವೆ ಸಲ್ಲಿಸುವ ಭರವಸೆಯಿತ್ತರು.

ಶ್ರೀ. ಪಳ್ಳಿಮನೆ ಮಹಾಬಲಶೆಟ್ರು ನಿಧನ—ಬ್ರಹ್ಮಾವರದಲ್ಲಿ ಪೊಕ್ಯುಮೆಂಟ್ ರೈಟರರಾಗಿ ಪ್ರಸಿದ್ಧರಾಗಿದ್ದ ಶ್ರೀ ಪಳ್ಳಿಮನೆ ಮಹಾಬಲ ಶೆಟ್ರು ಇತ್ತೀಚೆಗೆ ಜ್ವರ ಪೀಡಿತರಾಗಿದ್ದು ತಾ 10-3 46ರಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಅತ್ಯಂತ ಕಾರ್ಯನಿಷ್ಠರಿದ್ದು ತುಂಬಾ ಸ್ವಂತ ಸಂಪಾದನೆ ಮಾಡಿದ್ದರು.

ದೇವಮ್ಮ ಸೆಡ್ತಿಯರ ನಿಧನ-ಕುಂದಾಪುರ ಬೋರ್ಡ್ ಹ್ಯಾಸ್ಕೂಲಿನ ಹೆಡ್ಮಾಸ್ತರ್ ಶ್ರೀ. ಬಿ. ಶ್ಯಾಮರಾಯ ಸೆಟ್ಟರ ಮಾತೋಶ್ರೀಯವರಾದ ದೇವಮ್ಮ ಸೆಡ್ತಿಯವರು ತಾ 12ರಲ್ಲು ಕಾರ್ಕಳದ ತನ್ನ ಪುತ್ರ ಎಡ್ವೊಕೇಟ್ ಶ್ರೀ ಬಾಲಕೃಷ್ಣ ಸೆಟ್ಟರ ಮನೆಯಲ್ಲಿ ದೈವಾಧೀನರಾದರು. ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವೆವು.

ಪುತ್ತೂರು

ತಾ 9-3-46ರಲ್ಲು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಬೋರ್ಡ್ ಹಾ. ಎ. ಶಾಲಾ ಕಟ್ಟಡದಲ್ಲಿ 'ಸುಭದ್ರಾ ಕಲ್ಯಾಣ'ವೆಂಬ ಯಕ್ಷಗಾನ ಕಾಲಕ್ಷೇಪವು ಯಶಸ್ವಿಯಾಗಿ ಜರಗಿತು. ಶ್ರೀ. ಎಸ್. ಎಸ್. ಕಿಲ್ಲೆಯವರ ಕೃಷ್ಣ, ಶ್ರೀ. ಕೆ. ಪಿ ವೆಂಕಪ್ಪ ಸೆಟ್ಟರ ಬಲರಾಮ. ಶ್ರೀ. ಪೊಳಲಿ ಶಾಸ್ತ್ರಿಗಳ ಹನುಮಂತ; ಶ್ರೀ. ಕೆ. ಬಾಲಕೃಷ್ಣರಾಯರ ಅರ್ಜುನ, ಪಾತ್ರಗಳು ಉತ್ತಮವಾಗಿದ್ದುವು. ಆರಂಭದಲ್ಲಿ ಶ್ರೀ ಜತ್ತಪ್ಪ ರೈಗಳು ಪಾತ್ರ ವರ್ಗದ ಪರಿಚಯವನ್ನು ನೆರೆದ ಸಭಿಕರಿಗೆ ಮಾಡಿಕೊಟ್ಟರು.

ವಿವಾಹ ಸಮಾರಂಭ-ಶ್ರೀ ಪುತ್ತೂರು ಬೈಲು ಸಂಕಪ್ಪ ರೈಗಳ ಪುತ್ರ ಶ್ರೀ. ಬಿ. ವಿಶ್ವನಾಥ ರೈ, ಬಿ. ಎ. ಮತ್ತು ಶ್ರೀ ಉಡುಪಿ ಬಡಗಬೆಟ್ಟು ಸುಬ್ಬಯ್ಯ ಹೆಗ್ಡೆಯವರ ಪುತ್ರಿ ಶ್ರೀಮತಿ ಮನೋರಮೆ ಇವರ ವಿವಾಹ ಸಮಾರಂಭವು ತಾ 11ರಲ್ಲು ಎಸ್. ಆರ್. ಎಸ್ ಹೋಮಿನಲ್ಲಿ ವಿಜೃಂಭಣೆಯಿಂದ ಜರಗಿತು.

ಧನ್ಯವಾದ

ಮದ್ರಾಸ್ ಪ್ರಾಂತಿಕ ಎಸೆಂಬ್ಲಿ ಚುನಾವಣೆಯ ಸಂಬಂಧವಾಗಿ ನನಗೆ ಸಹಾಯ ಸಲ್ಲಿಸಿದ ಮತ್ತು ಬೆಂಬಲದ ಆಶ್ವಾಸನೆಯಿತ್ತ ನನ್ನ ಎಲ್ಲಾ ಮಿತ್ರರಿಗೂ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಜಿಲ್ಲೆಯ ಕಾಂಗ್ರೆಸ್ ಉಮೇದ್ವಾರಿಗಳೆಲ್ಲರೂ ಅವಿರೋಧವಾಗಿ ಆರಿಸಲ್ಪಟ್ಟುದಕ್ಕಾಗಿ ಕಾಂಗ್ರೆಸ್ ಸದಸ್ಯರಿಗೆ ಮತ್ತು ಕಾಂಗ್ರೆಸ್ ಅಭಿಮಾನಿಗಳೆಲ್ಲರಿಗೂ ಹಾರ್ದಿಕ ಕೃತಜ್ಞತೆ ಸಲಬೇಕು. ನಮ್ಮ ಜನತೆಯ ಹೃದಯದಲ್ಲಿ ನಮ್ಮೀ ರಾಷ್ಟ್ರೀಯ ಸಂಸ್ಥೆಯು ಹೇಗೆ ಬೇರೂರಿದೆ ಎಂಬುದರ ಯೋಗ್ಯ ಪ್ರದರ್ಶನವಿದು. ಇದರಿಂದಾಗಿ, ಇಡೀ ರಾಷ್ಟ್ರದ ಕಾಂಗ್ರೆಸ್ ಭಾವನೆಯ ಜಿಲ್ಲೆಗಳ ಪಂಙ್ತಿಯಲ್ಲಿ ದಕ್ಷಿಣ ಕನ್ನಡಕ್ಕೆ ಸನ್ಮಾನ್ಯ ಸ್ಥಾನವೊಂದು ದೊರೆಯುವಂತಾಯಿತು.

ನಿಮ್ಮ ಯಥಾರ್ಥವಾದಿ,
ಎ. ಬಿ. ಶೆಟ್ಟಿ.

ಪ್ರಾಂತಿಕ ಚುನಾವಣೆಗೆ ಖುಕಾಂಗ್ರೆಸ್ ವಿಜಯ.

ಗಡಿನಾಡಿನಲ್ಲಿ

ಕಾಂಗ್ರೆಸ್ ಮಂತ್ರಿಮಂಡಲ ರಚನೆಯಾಗಿದೆ. ಡಾ| ಖಾನ್ ಸಾಹೇಬ್, ಪ್ರಧಾನಿ, ಕಾನೂನು ಮತ್ತು ವ್ಯವಸ್ಥೆ ಹಾಗೂ ಸಾರ್ವಜನಿಕ ಖಾತೆಗಳ ಮಂತ್ರಿ. ಕಾಜೀ ಅತ್ತಾವುಲ್ಲಾ ಖಾನ್, ಕಂದಾಯ ಮಂತ್ರಿ. ನ್ಯಾಯ, ಅರಣ್ಯ, ಜೈಲ್, ಆಸ್ಪತ್ರೆ, ಖಾತೆಗಳು. ಲಾಲಾ ಮೆಹರ್ ಚಂದ್ ಖಾನಾ, ಅರ್ಥಖಾತೆಯ ಮಂತ್ರಿ. ಸುದ್ದಿ, ಉದ್ಯೋಗ ಮತ್ತು ಜೇಸಾಯ ಖಾತೆಗಳು. ಖಾನ್ ಮುಹಮ್ಮದ್ ಯಹ್ಯಾ ಜನ್, ವಿದ್ಯಾ ಮಂತ್ರಿ. ಸ್ಥಳೀಯ ಆಡಳಿತೆ ಖಾತೆ.

ಪಂಜಾಬಿನಲ್ಲಿ

ಗವರ್ನರರು ಕಾಂಗ್ರೆಸ್–ಯೂನಿಯನಿಸ್ಟ್-ಅಕಾಲೀ ಸಮ್ಮಿಶ್ರ ಪಕ್ಷಗಳ ನಾಯಕ ಮಾಲಿಕ್ ಕಿಝಾರ್ ಹಯಾತರನ್ನು ಮಂತ್ರಿಮಂಡಲ ರಚನೆಗೆ ಆಮಂತ್ರಿಸಿದ್ದಾರಾದರೂ ಇನ್ನೂ ಪರ್ಯಾಲೋಚನೆ ನಡೆಯುತ್ತಿದೆಯಾದ್ದರಿಂದ ತಾ 11ರ ವರೆಗೆ ಅಲ್ಲಿಯ ಮಂತ್ರಿಗಳ ಹೆಸರು ಪಟ್ಟಿಯು ಅಧಿಕಾರ ಬದ್ಧ ಪ್ರಕಟಣೆಗೊಂಡಿಲ್ಲ.

ಬಿಹಾರಿನಲ್ಲಿ

ಪ್ರಾಂತಿಕ ಚುನಾವಣೆ ಮುಗಿದು ಕಾಂಗ್ರೆಸ್ ಪ್ರಬಲ ಪಕ್ಷವಾಗಿ ಗೆದ್ದಿದೆ. ಅಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪಿಸುವ ಕುರಿತು ಗವರ್ನರರು ಬಾಬು ರಾಜೇಂದ್ರ ಪ್ರಸಾದರೊಡನೆಯೂ ಮಾಜೀ ಪ್ರಧಾನಿ ಶ್ರೀ ಕೃಷ್ಣ ಸಿಂಹರೊಡನೆಯೂ ಆಲೋಚನೆ ನಡಿಸಿದ್ದಾರೆ. ಅಂತೆಯೇ ಲೀಗ್ ಪ್ರಮುಖರೂ ಗವರ್ನರರಿಂದ ಆಮಂತ್ರಿಸಲ್ಪಟ್ಟಿದ್ದಾರೆ. ಬಿಹಾರ್ ಪ್ರಾಂತ್ಯದ ಎಲ್ಲಾ ಕ್ಷೇತ್ರಗಳ ಚುನಾವಣೆಯು ತಾ 9ಕ್ಕೆ ಮುಗಿದು ಕಾಂಗ್ರೆಸ್ಸಿಗೇ ಪ್ರಬಲ ಬಹುಮತ ದೊರೆತಂತಿದೆ.

ಬೊಂಬಾಯಿಯಲ್ಲಿ

ತಾ 11ರಲ್ಲಿ ಚುನಾವಣೆಗಾರಂಭವಾಗಿ ಪ, 175 ಮಂದಿ ಸದಸ್ಯರುಳ್ಳ ಬೊಂಬಾಯಿ ಎಸೆಂಬ್ಲಿಗೆ 40 ಮಂದಿ ಅವಿರೋಧವಾಗಿ ಆರಿಸಿ ಬಂದಿದ್ದಾರೆ. ಕಾಂಗ್ರೆಸೇ ನಿಸ್ಸಂಶಯವಾಗಿ ಪ್ರಬಲ ಬಹುಮತ ಪಡೆಯಲಿದೆ.

ಬಂಗಾಳದಲ್ಲಿ

ಚುನಾವಣಾ ದಿನಗಳು ಮಾರ್ಚಿ ತಾ 18 ಮತ್ತು 21. ಮುಸ್ಲಿಂಲೀಗ್ ವಿರೋಧಿಯಾದ ಮುಸ್ಲಿಂ ಪಾರ್ಲಿಮೆಂಟರೀ ಬೋರ್ಡು ತನ್ನ ಪರವಾಗಿ 80 ಮುಸ್ಲಿಂ ಸ್ಥಾನಗಳಿಗೆ ಹುರಿಯಾಳುಗಳನ್ನು ನಿಲ್ಲಿಸಿದೆಯಲ್ಲದೆ ಉಳಿದ 30 ಸ್ಥಾನಗಳವರಿಗೆ ತನ್ನ ಬೆಂಬಲವಿತ್ತಿದೆ ಲೀಗಿನವರು ಪ್ರಬಲ ಪ್ರಚಾರಕ್ಕಿಳಿದಿದ್ದಾರೆ. ಚಿತ್ತಗಾಂಗಿನಲ್ಲಿ 144ನೇ ಸೆಕ್ಷನ್ ಜ್ಯಾರಿಯಾಗಿದೆ.

ಒರಿಸ್ಸಾದಲ್ಲಿ

ಪ್ರಾಂತಿಕ ಚುನಾವಣೆಗಳು ಎಪ್ರಿಲ್ ಪ್ರಥಮ ವಾರದಲ್ಲಿ ನಡೆಯಲಿರುವನಾದರೂ 60 ಸದಸ್ಯರುಳ್ಳ ಅಲ್ಲಿಯ ಎಸೆಂಬ್ಲಿಯ 34 ಸ್ಥಾನಗಳು ಅವಿರೋಧವಾಗಿ ಕಾಂಗ್ರೆಸಿಗೆ ದೊರೆತಿರುವುದರಿಂದ ಅಲ್ಲಿ ಇಷ್ಟರಲ್ಲೇ ಕಾಂಗ್ರೆಸ್ ಮಂತ್ರಿ ಮಂಡಲ ರಚನೆಯ ಮಾತುಕತೆಗಾರಂಭವಾಗಿದೆ.

ಮಧ್ಯ ಪ್ರಾಂತ್ಯದಲ್ಲಿ

ಚುನಾವಣೆಗಳು ನಡೆಯುತ್ತಿವೆ. ಕಾಂಗ್ರೆಸ್ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ಉಮೇದ್ವಾರಿ ನೇಮಕದ ಕುರಿತು ತಪ್ಪು ಮಾಡಿದರೆಂದು ನಾಗಪುರದ ಹಳೇ ಕಾಂಗ್ರೆಸ್ ವೀರರಲ್ಲೊಬ್ಬರಾದ ಜನರಲ್ ಆವಾರಿಯವರು ಉಪವಾಸ ವ್ರತಹಿಡಿದಿದ್ದಾರೆ. ಯಾರೆಷ್ಟು ಪ್ರಯತ್ನಿಸಿದರೂ ಅವರು ತನ್ನ ಹಠ ಬಿಟ್ಟಿಲ್ಲ. ಈಗ ಅವರ ಸ್ಥಿತಿ ತೀರಾ ನಿರಾಶಾಜನಕವಾಗಿದೆ. ಜಿಲ್ಲೆಲ್ಲಾ ತಳಮಳದ ಕಾರ್ಮೋಡ ಕವಿದಿದೆ. ಈ ಕುರಿತು ಈ ಮೊದಲೂ ಜನರಲ್ ಆವಾರಿಯವರಿಗೆ ಎಚ್ಚರಿಕೆ ಕೊಟ್ಟಿದ್ದ ಗಾಂಧಿಜೀ ತನ್ನ ಕೊನೆಯ ಅಭಿಪ್ರಾಯದಲ್ಲಿ ಹೀಗೆಂದಿದ್ದಾರೆ. "ಅವರನ್ನು ಸಾಯಲು ಬಿಡುವದೇ ಮಾಸಿ ಗುರಿಯು ಅಯೋಗ್ಯವಿದ್ದರೆ ಎಷ್ಟೇ ಯೋಗ್ಯ ವಿಧಾನವಾದರೂ ಅಯೋಗ್ಯವೇ ಸರಿ". (ಈಗ ಅವಾರಿ ಉಪವಾಸ ನಿಲ್ಲಿಸಿದ್ದಾರೆ.)

ಸಂಯುಕ್ತ ಪ್ರಾಂತ್ಯದಲ್ಲಿ

ಚುನಾವಣೆಗಳು ರಭಸದಿಂದ ನಡೆಯುತ್ತಿವೆ. ಇಷ್ಟರಲ್ಲೇ ಕಾಂಗ್ರೆಸ್ ಉಮೇದ್ವಾರಿಗಳು ಅಧಿಕ ಸಂಖ್ಯೆಯಲ್ಲಿ ಅವಿರೋಧ ಆಯ್ಕೆ ಪಡೆದಿದ್ದಾರೆ. ಲೀಗ್ ಮತ್ತು ರಾಷ್ಟ್ರೀಯ ಮುಸಲ್ಮಾನರೊಳಗೆ ತೀವ್ರ ಸ್ಪರ್ಧೆಯಿದ್ದು ಅಲಹಾಬಾದಿನಲ್ಲಿ ಅವೆರಡು ಪಕ್ಷಗಳೊಳಗಾದ ಕಾದಾಟದಿಂದ 15 ಮಂದಿ ಆಸ್ಪತ್ರೆ ಸೇರಿದರು.

ಮದ್ರಾಸಿನಲ್ಲಿ

ಚುನಾವಣೆಯು ಭರಘರಾಟೆಯಲ್ಲಿದೆ. ಅ. ಭಾ. ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾ. ಪಿ ಸಿ. ಜೋಶಿಯವರು ಮದ್ರಾಸಿಗಾಗಮಿಸಿ, ಮಧುರೆ ಇತ್ಯಾದಿ ನಗರಗಳಲ್ಲಿ ಭಾಷಣಗಳನ್ನಿತ್ತು ಪ್ರಚಾರ ಕಾರ್ಯ ಸಾಗಿಸುತ್ತಿದ್ದಾರೆ. ಡಾ| ಪಟ್ಟಾಭಿ, ಟಿ ಪ್ರಕಾಶಮ್, ಶ್ರೀ ನಾಡರ್ ಮೊದಲಾದ ಕಾಂಗ್ರೆಸ್ ಪ್ರಮುಖರು ಕಮ್ಯೂನಿಸ್ಟರನ್ನು ಖಂಡಿಸಿ ಪ್ರಚಾರಕ್ಕಿಳಿದಿದ್ದಾರೆ.

ರೇ. ಡೇ. ಪಕ್ಷದ ಸಭೆಯಲ್ಲಿ ಗೊಂದಲ

ಮದ್ರಾಸ್ ನಗರದೊಂದು ಭಾಗಕ್ಕೆ ಕಾಂಗ್ರೆಸಿಗೆ ವಿರುದ್ಧವಾಗಿ ರೇಡಿಕಲ್ ಡೆಮೊಕ್ರೆಟಿಕ್ ಪಕ್ಷದ ಪರವಾಗಿ ಶ್ರೀ. ಕೆ. ಎಸ್. ಶೆಟ್ಟಿ (ಕಾಪು ಸರ್ವೋತ್ತಮ ಶೆಟ್ಟಿ) ನಿಂತಿದ್ದಾರೆ. ಶ್ರೀ ಶೆಟ್ಟರನ್ನು ಸಮರ್ಥಿಸಲು ಆ ಪಕ್ಷೀಯರು ಇದೇ ತಾ 11ರಲ್ಲಿ ಪೆದ್ದುನಾಯಕನ್ ಪೇಟೆಯಲ್ಲೊಂದು ಸಾರ್ವಜನಿಕ ಸಭೆ ಕರೆದಿದ್ದರು. ಸಭಾಧ್ಯಕ್ಷರಾಗಿದ್ದ ಅಲ್ಲಿಯ ಹೋಟೆಲ್ ಕೆಲಸಗಾರ ಸಂಘದ ಕಾರ್ಯದರ್ಶಿ ಎಸ್. ಮಹದೇವನ್ ಎಂಬವರು ಕಾಂಗ್ರೆಸನ್ನು ಆಕ್ಷೇಪಣೀಯ ಮಾತುಗಳಿಂದ ಬೈದರೆಂದು ಸಭೆಯಲ್ಲಿ ಗೊಂದಲವೆದ್ದಿತು. ಕಾಂಗ್ರೆಸ್ ಘೋಷಣೆಗಳೆದ್ದು ಕಲ್ಲಿನ ಸುರಿಮಳೆಗಾರಂಭವಾಯಿತು. ಜನರು ರೇ. ಡೇ. ಪಕ್ಷದವರ ಧ್ವಜಗಳನ್ನು ಕಿತ್ತು ಬಿಸಾಡಿ ಸಭೆಯು ಗಲಿಬಿಲಿಗೊಂಡು ಚದರಿತು.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು 8—3—46ರಿಂದ

ತೆಲುಗು ಚಿತ್ರಗಳಲ್ಲಿ ಮೊದಲ ಮೆಟ್ಟಲೇರಿದ
ಪುರಾಣ ಶ್ರೇಷ್ಠ ಪುಣ್ಯ ಕಥೆ.

ಪಾದುಕಾ

(ರಾಮ ಪಾದುಕಾ ಪಟ್ಟಾಭಿಷೇಕ)

ಬರುವ ಚಿತ್ರ—

ಕಿಂಗ್ ಓಫ್ ಕಿಂಗ್ಸ್.

The Pangal Nayak Bank Limited.

(Incorporated in 1920.)

Registered Office Court Road, UDIPI.

Sub-Offices at— Udipi, Mangalore, Katapadi, Kanhangad, Kinnigoli, Nileshwar and Suratkal, South Canara.

SEASON DEPOSITS for THREE & FOUR

months at a special rate of interest are accepted at all the above offices.

All kinds of up to-date Banking service is provided promptly.

Please call for particulars of business

Dated the 5th January 1946.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ,

ಶ್ರೀ ದೇವಿಯ ಅಷ್ಟಬಂಧ ಕಲಶಕ್ಕೆ ಸಹಾಯ ಕೊಟ್ಟವರ ಹೆಸರು ಮ ಹಣದ ವಿವರ.

ಕೊಪ್ಪಲು ಹಳೆ ಫಂಡು ಬಲೆಯವರಿಂದಾ ರೂ. 30, ಕಂನನ ಬಲೆ ಫಂಡಿನವರಿಂದಾ ರೂ, 25, ಅಳ್ವೆಕೋಡಿ ಬಲೆ ಫಂಡಿನವರಿಂದಾ ರೂ. 25, ಕರ್ಕಿಕಳಿ ಮುಕ್ಕಳು ಬಲೆ ಫಂಡಿನವರಿಂದಾ ರೂ. 25, ಕರ್ಕಿಕಳಿ ಹಳೆ ಫಂಡಿನವರಿಂದಾ ರೂ. 25, ಮಡಿಕಲ್ಲು ಮಳಿಬಲೆ ಫಂಡಿನವರು ರೂ. 25, ಅಳ್ರಗೋಳಿ ಬಲೆ ಫಂಡಿನವರು ರೂ. 20, ಗಂಗೆಬೈಲು ಬಲೆ ಫಂಡಿನವರು ರೂ. 20, ಕೋಡೇರಿ ಹೊಸಫಂಡು ಬಲೆಯವರು ರೂ. 25, ಜಾಕಿ ಗೋವಿಂದನ ಬಲೆಫಂಡು ರೂ. 20, ಜಾಕಿ ಗೋವಿಂದ ಸ್ವತಹಾ ರೂ. 10, ಅಣ್ಣಯ್ಯ ನಾಯ್ಕ ಪಟ್ಟೆಯೂರ್ದ ಆಫೀಸರ್ ಶಾಸತಿ ರೂ. 2, ಬಸವ ಮಂಜಾ ರೂ. 2, ಕಣ್ಣು ಕತ್ತಲೆ ಬೇಡು 2, ಕಜಕನ ಪುಟ್ಟ ರೂ. 2, ಅಜ್ಜಯ್ಯನ ಮಂಜಾ ರೂ. 2, ಮಂಗಲ ರೂ. 2, ಗಂಗೆ ಪುಟ್ಟ ರೂ. 2, ಕಸ್ನನ ದುರ್ಗಾ ರೂ. 5, ಪಿ. ಅಬ್ದುಲ್ ಕಾದಿರ್ ಸಾಹೇಬ್ ರೂ. 5, ಕರ್ಕಿಕಳಿ ಕೃಷ್ಣಪ್ಪ ರೂ. 5, ಯಂ. ಇಸುಬ್ ಸಾಹೇಬ್ ರೂ. 5, ಮೊಗೇರ ಮಂಜಾ ರೂ, 1, ಕಂಸ್ನಾ ರೂ. 2, ಸೋಟೆ ಮಗ ನಾರಾಯಣ ರೂ. 1, ಬೈಗೆ ನಾರನ ಗೋವಿಂದಾ ರೂ. 3, ಉಚ್ಚೀಲ ಮಂಜಾ ರೂ. 2, ದೋಳ್ಳನ ಮಾಸ್ತಿ ರೂ. 2, ಪೂಜಾರಿ ಸುಬ್ಬಾ ರೂ. 1, ಪುರಂದಿ ಮಾಸ್ತಿ ರೂ. 2, ಸಂಜೀರಿ ಮಂಜಾ ರೂ. 2, ಬುದ್ಧಿವಂತನ ಕಂಸ್ನಾ ರೂ. 2, ಹ... ನ ಮಾಚ ರೂ. 2, ಸೋಮ ಮಂಜ ರೂ. 2, ಹೊಳೆಕಡಿ ಅಣ್ಣಪ್ಪಾ ರೂ. 2. ಕೆ. ಕೃಷ್ಣಪ್ಪ ಪಟ್ಟೆಯೂರ್ದ ಆಫೀಸರ್ ಕೊಡೇರಿ ರೂ. 5, ಯು. ಶೀನಪ್ಪ ರೂ. 5, ಮಾಚ. ರೂ. 1, ರಾಮ. ರೂ. 1, ಬಾಡಿನ ಗೋವಿಂದ ರೂ. 2, ಮುಳಿಮನೆ ಚಿಕ್ಕಾ ರೂ. 2, ಬಾಡಿಮನೆ ನಾಗ ರೂ. 2, ಅಣ್ಣಪ್ಪ ನಾಯರಿ ಕೊಡೇರಿ ಉಗ್ರಾಣ ರೂ. 2, ದೊಡ್ಡಮನೆ ಕುಪ್ಪ ರೂ. 1, ಬರ್ಡಪ್ಪ ಪಾನುಭಾಗರು ರೂ. 1, ಅಂಚೆ ಕೇಶಾ ರೂ. 1, ಮುಂಡೇಶ್ವರ ಮಂಜಾ ರೂ. 2, ಪುರ್ನಯ್ಯನ ದುರ್ಗಾ ರೂ. 2, ಗೋವಿಂದನ ಮಗ ದುರ್ಗಾ ರೂ. 1, ಚಂಡಮ್ಮನ ದುರ್ಗಾ ರೂ. 2, ಮಾಣಹಿತ್ಲು ದುರ್ಗಾ ರೂ. 1, ಚೌಂಡು ಪುಟ್ಟ ರೂ. 1, ಜಮಲಾ ರೂ. 340

ಈ ನಿಧಿಯ ತಾ 31-12-45ಕ್ಕೆ ಕೆನರಾ ಬೇಂಕಿನಲ್ಲಿ ಜಮು, ರೂ. 3177-9-0

ತಾ 21-1-46ಲ್ಲು ಬೇಂಕಿನಲ್ಲಿ ಜಮು. A. G. Nambiyar L. R. C. P. (Lond) L R. C. P. (Eng)Civil asst. Surgeon ರೂ 50.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾರ್ಯರ್,
ರಥಬೀದಿ, ಉಡುಪಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಪಟ್ಟಣ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ರೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಹಿಂದೀ ಆಹಾರಾಭಾವದ ಕುರಿತು ಆತುರ.

ಶ್ರೀಮಂತ ವರ್ಗಕ್ಕೆ ಗಾಂಧಿಜೀಯ ಸಲಹೆ.

ಆಹಾರ ಸ್ಥಿತಿಯ ಕುರಿತು ಒಬ್ಬರು ಹಾಕಿದ್ದ ಸ್ವಾರಸ್ಯಪೂರ್ಣವಾದ ಪ್ರಶ್ನೆಗಳನ್ನೂ ಆ ಕುರಿತು ತನ್ನ ಅಭಿಪ್ರಾಯಗಳನ್ನೂ ಗಾಂಧಿಜೀ ಪ್ರಕಟಿಸಿದ್ದಾರೆ:—

"ನನಗೊಬ್ಬ ಬಾತ್ಮೀದಾರರು ಈ ರೀತಿ ಬರೆಯುತ್ತಾರೆ-'ನೀವೀಗ ಪೂನದಲ್ಲಿದ್ದೀರಿ. ಪತ್ರಿಕೆಗಳಿಂದ ನನಗೆ ತಿಳಿದು ಬರುವಂತೆ ಎಚ್.ಎಚ್. ಆಗಾಖಾನರು ನಿಮ್ಮನ್ನೇ ಹಿತಾರಿದ್ದಾರೆ. ಪೂನದಲ್ಲಿರುವ ಅವರ ಅರಮನೆಗೆ ಸಂಬಂಧಿಸಿ ಬೇಕಾದಷ್ಟು ಆಸ್ತಿ ಮತ್ತು ಸರಬರಾಯಿ ನೀರಿನ ಅನುಕೂಲತೆಗಳಿವೆ. ಗಣೇಶಕಿಂಡಿಯಲ್ಲಿರುವ ಸರಕಾರೀ ಭವನದ ವಿಶಾಲ ಸ್ಥಳ ಕೂಡಾ ಹೀಗೆಯೇ ಇದೆ. ಇವೆರಡೂ ಸ್ಥಳಗಳನ್ನೂ ಆಹಾರ ಬೆಳವಣಿಗೆಗಾಗಿ ಉಪಯೋಗಿಸಕೂಡದೆ? ನೀವು ಇದನ್ನು ಅವರಿಗೆ ಸೂಚಿಸುವಿರಾ?

"ನಿಮಗೆ ಉಪವಾಸ ವ್ರತಗಳಲ್ಲಿ ನಂಬಿಕೆಯಿದೆ. ಉಪವಾಸವೆಂಬುದು ಕೇವಲ ಧಾರ್ಮಿಕಾಚರಣೆ ಮಾತ್ರವಲ್ಲ; ಆರೋಗ್ಯ ಸಾಧಕವೂ ಆಗಿದೆ ಎಂದು ನೀವು ಹೇಳಿದ್ದೀರಿ. ಹಾಗಿದ್ದ ಮೇಲೆ ಸುಖಜೀವಿ ಶ್ರೀಮಂತರನ್ನು ವಾರಕ್ಕೊಂದು ದಿನದ ಊಟ ಅಥವಾ ವಾರದಲ್ಲೊಂದು ಯಾನೆ ಕೆಲವು ಊಟಗಳನ್ನಾದರೂ ಬಿಡುವಂತೆ ಪ್ರೇರೇಪಿಸಲಾರಿರಾ? ಹಾಗೆ ಮಾಡಿದಲ್ಲಿ ಬಡವರ ಉಪಯೋಗಕ್ಕೆ ವಿಶೇಷ ಆಹಾರ ಧಾನ್ಯಗಳು ಉಳಿಯಬಹುದು.

"ನೊಳಕೆ ಬರಿಸಿದ ಸ್ವಲ್ಪವೇ ಧಾನ್ಯವನ್ನಾದರೂ ಹಸಿಹಸೀ ತಿಂದಲ್ಲಿ, ಅದರಲ್ಲಿ ವಿಶೇಷ ಪೋಷಣಾಂಶ ದೊರೆಯುವದೆಂದು ಹೇಳುತ್ತಾರೆ. ಇದು ನಿಜವೇ?"

ಮೇಲಿನದು. ನನಗೆ ಬಂದಿದ್ದೊಂದು ಪತ್ರದ ಸಾರಾಂಶ ಮೂರು ಸೂಚನೆಗಳೂ ಗಮನಾರ್ಹವಿವೆ. ಮತ್ತು ಸುಲಭದಲ್ಲಿ ಆಚರಣೆಗೆ ತರಲಾಗುವಂತಹವಿವೆ. ಮೊದಲನೆಯದು ಆಸ್ತಿ, ನೀರಿನ ಅನುಕೂಲತೆಯುಳ್ಳವರಿಗೆ ಹೊಂದಿಕೆಯಾಗುವಂತಹದು. ಎರಡನೆಯದು ಶ್ರೀಮಂತರಿಗೆ ಸಂಬಂಧಿಸಿದುದು. ಮೂರನೆಯದು ಸರ್ವರಿಗೂ ಲಗಾವಾಗುತ್ತದೆ. ಸಾರಾಂಶತಃ ಹಸಿಯಾಗಿ ತಿನ್ನಲಾಗುವಂತಹದನ್ನೆಲ್ಲಾ ಹಸಿಹಸಿ ತಿನ್ನುವದೇ ಮೇಲು. ಈ ನಿಯಮವನ್ನು ಚತುರತೆಯಿಂದ ಅನುಕರಿಸಿದಲ್ಲಿ, ಜನರು ಆಹಾರ ನಿಯಮಗಳನ್ನು ಅರಿತುಕೊಂಡು ಅದಕ್ಕನುಗುಣವಾಗಿ ವರ್ತಿಸಿದಲ್ಲಿ, ಅಮೋಘವಾದ ಮಿತವ್ಯಯದ ಪರಿಣಾಮವುಂಟಾಗುವದು ಖಂಡಿತ".

ಭಾರತಕ್ಕೆ ಹೊರಗಿನಿಂದ ಅಕ್ಕಿ ಸರಬರಾಯಿ.

ಲಂಡನ್ ಮತ್ತು ವಾಷಿಂಗ್ಟನಿಗೆ ಹೋಗಿರುವ ಹಿಂದೀ ಆಹಾರ ಸಮಿತಿಯ ನಾಯಕ ಸರ್. ಎ. ರಾಮಸ್ವಾಮಿ ಮುದಲಿಯಾರರು, ಆಮೇರಿಕಾಂಗ್ಲೋ ಸಂಯುಕ್ತ ಆಹಾರ ಸಮಿತಿಯ ಮುಂದೆ ಭಾರತದ ಪರಿಸ್ಥಿತಿಯ ಸರಿಯಾದ ಚಿತ್ರವನ್ನಿಟ್ಟು ಅವರ ಲಕ್ಷ್ಯವನ್ನಾಕರ್ಷಿಸಿದ್ದಾರೆ "ಹೊರಗಿನಿಂದ ಆಹಾರಧಾನ್ಯಗಳು ಸರಬರಾಯಿಯಾಗದೆ ಹೋದರೆ ಬಂಗಾಳದ ಬರಗಾಲದಲ್ಲಿ ಸತ್ತುದಕ್ಕಿಂತ ಐದಾರು ಪಾಲಷ್ಟು ಜನ ಈ ಬಾರಿ ಆಹುತಿಯಾಗಬೇಕಾಗುವದು. ಬರಗಾಲ ವ್ಯಾಪಿಸಿ ಬಿಟ್ಟರೆ ಆಡಳಿತೆಯ ಯಂತ್ರವೇ ಮುರಿದು ಬೀಳುವದು. ಸೇನಾ ವಿಸರ್ಜನೆಯ ಕಾಲದಲ್ಲೇ ಇಂತಹ ಅನಾಹುತವುಂಟಾದಲ್ಲಿ ಅದು ಸರ್ವವ್ಯಾಪಿಯಾಗುವದು. ಬರಗಾಲ ನಿರ್ಮಾಣವಾಗುತ್ತದಾದರೆ, ಲಂಡನಿನ ಸಚಿವ ಸಮಿತಿ ಹೋದಂತೆ ಲಂಡನಿಗೆ ಹಿಂದಿರುಗುವಂತಾಗಬಹುದು" ಮುಂತಾದ ಸ್ಪಷ್ಟ ಎಚ್ಚರಿಕೆಗಳು ಇಲ್ಲಿಯ ಸ್ಥಿತಿಗತಿಯ ಕಡೆಗೆ ಐರೋಪ್ಯರ ಕಣ್ಣು ತೆರೆಯಿಸಿವೆ. ಆಸ್ಟ್ರೇಲಿಯವು ಇಂಗ್ಲೆಂಡಿಗೆ ಕಳುಹಲಿಕ್ಕಿದ್ದ 20 ಸಾವಿರ ಟನ್ ಅಕ್ಕಿಯನ್ನು ಹಿಂದುಸ್ಥಾನ ಮತ್ತು ಸಿಲೋನಿಗೆ ಕಳುಹಿಕೊಡಲು ಬ್ರಿಟಿಷ್ ಸರಕಾರವೀಗ ನಿರ್ಧರಿಸಿದೆ. "ಅಕ್ಕಿಯೇ ಪ್ರಾಮುಖ್ಯಾಹಾರವಾಗಿರುವ ನಮ್ಮ ಸಾಮ್ರಾಜ್ಯದ ಭಾಗಗಳಲ್ಲಿ ಅಕ್ಕಿಯ ಅಭಾವವಿರುವ ಈ ಕಾಲದಲ್ಲಿ ಇಲ್ಲಿರುವ ನಾವು ಅಕ್ಕಿಯ ಆಹಾರವನ್ನೇ ಬಿಟ್ಟು ಬಿಡಬೇಕೆಂದು ನಿರ್ಧರಿಸಿದ್ದೇವೆ" ಎಂದು ಬ್ರಿಟಿಷ್ ಆಹಾರ ಖಾತೆಯ ಓರ್ವ ವಕ್ತಾರನೆಂದಿದ್ದಾನೆ.

BANK WITH THE LARGEST CONNECTIONS ON THE WEST COAST.

OFFERS:-

EFFICIENT, PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd.

ESTD 1925

(೪ನೇ ಪುಟದಿಂದ ಮುಂದುವರಿದುದು.)

ಮಿ. ಜಿನ್ನರಂತೂ ಉರಿದು ಬಿದ್ದು ಉರಿ ನಂಜನ್ನೇ ಕಾರಿದ್ದಾರೆ. "ಎರಡು ಗೊಂಬೆಗಳು-ಒಂದು ಕಾಂಗ್ರೆಸಿನ 'ರಾಷ್ಟ್ರಪತಿ' ಮತ್ತೊಂದು ಗ್ಲೇನ್ಸಿಯದು-ತಮ್ಮ ತತ್ವಗಳನ್ನೆಲ್ಲಾ ಗಾಳಿಗೆ ತೂರಿ ಒಟ್ಟಾಗಿವೆ. ಆದರೆ ಸಿಖ್ಖರ ಬಡ್ಡು ನಾಯಕತ್ವವು ಆ ಬಲೆಯಲ್ಲಿ ಬಿದ್ದುದು ಶೋಚನೀಯ. ಸದ್ಯ ಆತ್ಮ ಮತ್ತು ದೇಹ ಎರಡನ್ನೂ ಕಳಕೊಂಡಿರುವ ಕಾಂಗ್ರೆಸ್ ಮತ್ತು ಯೂನಿಯನಿಷ್ಟ್ ಪಕ್ಷ ಪ್ರಮುಖರಿಗೆ ತಮ್ಮ ಕಾರ್ಯ ಸಾಧನೆಗಾಗಿ ಹುಸಿ ಭರವಸೆ ಕೊಡುವ ಅಭ್ಯಾಸವಿದ್ದದ್ದೇ. ಈ ಸಮ್ಮಿಶ್ರ ಮಂತ್ರಿ ಮಂಡಲವು 'ಲೀಗ್' ವಿರುದ್ಧವಾಗಿ ಕೃತ್ರಿಮ ರಚನೆಗೊಂಡ ಪ್ರಣಯ ಕೂಟವೆಂಬುದು ಖಂಡಿತ. ತನ್ನ ಮಗ್ಗುಲ ಮರಿ ಕಿಝರ್ ಹಯತರನ್ನು ತನ್ನ ಸ್ವದೇಶ ಪ್ರಯಾಣದ ಮೊದಲೇ ಮತ್ತೊಮ್ಮೆ ಅಧಿಕಾರಕ್ಕೆ ಕರೆದು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಸರ್. ಬರ್ಟ್ರಾಂಡ್ ಗ್ಲೇನ್ಸಿಯವರನ್ನು ನಾನುಅಭಿನಂದಿಸುತ್ತೇನೆ" ಎಂದು ಮಿ. ಜಿನ್ನರು ಬೈಗಳ ಮಳೆಯನ್ನೇ ಕರೆದಿದ್ದಾರೆ. ಖಾನ್-ಕಿಝರ್ ಕತ್ತರಿಯಿಂದೇ ಮೊದಲಿನಿಂದಲೂ ಮಿ. ಜಿನ್ನರು ಯೂನಿಯನಿಸ್ಟ್ ಆಡಳಿತೆಯನ್ನು ಸಂಬೋಧಿಸುತ್ತಿದ್ದರು. ಲಾಹೋರಿನ ಮುಸಲ್ಮಾನರೆಲ್ಲಾ ಈ ಹೊಸ ಮಂಡಲದ ವಿರುದ್ಧವಾಗಿ ನಿಷೇಧ ಪ್ರದರ್ಶಿಸಿದ್ದಾರೆ. ಹರತಾಳ, ಮೆರವಣಿಗೆಗಳಾಗಿವೆ. ಘೋಷಾ ಸ್ತ್ರೀಯರೂ ವಿರುದ್ಧ ಪ್ರದರ್ಶನ ನಡೆಸಿದ್ದಾರೆ.

ಲಾಹೋರಿನಲ್ಲಿ ಗುಂಡು ಹಾರಾಟ

ಇದೇ ತಾ. ೧೦ಲ್ಲಿ ಲಾಹೋರಿನಲ್ಲಿ ಈ ಸಂಬಂಧವಾಗಿ ಶೋಚನೀಯ ದುರ್ಘಟನೆ ನಡೆದುಹೋಯಿತು. ಹೊಸ ಮಂತ್ರಿ ಮಂಡಲದ ಕೃತಕ ಶವದಹನ ಮೆರವಣಿಗೆಯೊಂದನ್ನು ಮುಸ್ಲಿಂ ವಿದ್ಯಾರ್ಥಿಗಳು ಹೊರಡಿಸಿ ನಿಷೇಧ ಘೋಷಗಳೊಡನೆ ಲಾಹೋರಿನಲ್ಲಿ ಮುಂದೊತ್ತಿದ್ದರು. ಸಶಸ್ತ್ರ ಪೋಲೀಸರದನ್ನು ತಡೆದು ನಿಲ್ಲಿಸದೆ ಮೆರವಣಿಗೆಯನ್ನು ಹಿಂಬಾಲಿಸಿ ನಡೆದಿದ್ದರು. ಸರಕಾರೀ ಭವನವನ್ನು ದಾಟಿ ಈ ನಿಷೇಧ ದಂಡು ಅಲ್ಲಿಯ ಸನಾತನ ಧರ್ಮ ಕಾಲೇಜಿನ ಮುಂಭಾಗಕ್ಕೆ ಬಂದಾಗ, ಆ ಕಾಲೇಜು ವಿದ್ಯಾರ್ಥಿಗಳು ತಮ್ಮ ವರಾಂಡದಲ್ಲೇ ನಿಂತುಕೊಂಡು ವಿರುದ್ಧ ಘೋಷಗಳನ್ನೆಬ್ಬಿಸತೊಡಗಿದರು. ಕೂಡಲೇ ಹಿಂದೂ ಮುಸ್ಲಿಂ ವಿದ್ಯಾರ್ಥಿಗಳು ಪರಸ್ಪರ ಇಟ್ಟಿಗೆ ತುಂಡುಗಳನ್ನು ಅರ್ಧ ಘಂಟೆಯ ವರೆಗೂ ಎಸೆದಾಡಿಕೊಂಡರು. ಪೋಲೀಸರಿದನ್ನು ನೋಡುತ್ತಾ ನಿಂತಿದ್ದರು. ಆದರೆ ಇಟ್ಟಿಗೆ ತುಂಡೊಂದು ಪೋಲೀಸ್ ಇನ್ಸ್‌ಪೆಕ್ಟರರ ಮುಖಕ್ಕೆ ಬಂದು ಬಿದ್ದ ಮೇಲೆ ಅವರು ಗುಂಡುಹಾರಿಸಿದರು. ಒಟ್ಟಿಗೆ 11 ಮಂದಿ ವಿದ್ಯಾರ್ಥಿಗಳು ಜಖಂ ಗೊಂಡಿದ್ದು ಅವರಲ್ಲಿ 7ಮಂದಿ ಹಿಂದು 4ಮುಸಲ್ಮಾನರೆಂದು ತಿಳಿದುಬರುತ್ತದೆ. ಇಬ್ಬರು ಹಿಂದೂ ಮತ್ತೋರ್ವ ಮುಸ್ಲಿಂ ವಿದ್ಯಾರ್ಥಿಯ ಸ್ಥಿತಿ ವಿಷಮವಾಗಿದೆ. ಸನಾತನ ಧರ್ಮ ಕಾಲೇಜ್ ಕಂಪೌಂಡಿನ ಒಳಗಡೆಯಿದ್ದ ಹಿಂದೂ ವಿದ್ಯಾರ್ಥಿಗಳ ಮೇಲೆ ಗೋಲೀಬಾರು ಮಾಡಿದ ಕುರಿತು ವಿಚಾರಣೆ ನಡೆಯಬೇಕೆಂದು ಪ್ರಮುಖರು ಒತ್ತಾಯಿಸಿದ್ದಾರೆ. "ಇದು ಗವರ್ನರ್ ಸರ್. ಗ್ಲೇನ್ಸಿಯವರ ವರ್ತನೆಯ ಹಾಗೂ ಮುಸ್ಲಿಂ ಗೊಂಬೆಗಳ ವಿರುದ್ಧ ನಡೆಸುವ ಪ್ರದರ್ಶನ ಮಾತ್ರ. ಆದ್ದರಿಂದ ಇದಕ್ಕೆ ಜಾತೀಯ ಬಣ್ಣ ಕೊಡಬೇಡಿ" ಎಂದು ಮಾಮ್ದೋತಿನ ನವಾಬರೇ ಮೊದಲಾದ ಲೀಗ್ ಪ್ರಮುಖರು ಮುಸಲ್ಮಾನರನ್ನು ಕೇಳಿಕೊಂಡಿದ್ದಾರೆ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

- ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :

ಬೇಕು

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿಯ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ. ಕೆ ನಾರಾಯಣ ರಾಯರ ಸ್ಟೇಂಡಾರ್ಡ್ (10 H. P.) ಸೇಡಾನ್ ಕಾರಿಗೆ ಒಬ್ಬ ಯೋಗ್ಯ ಅನುಭವಸ್ಥ ಡ್ರೈವರನು ಬೇಕು. ಸಂಬಳ ಮತ್ತು ಪ್ರಯಾಣವಲ್ಲಿದ್ದರೆ ಬತ್ತ ಕೊಡಲಾಗುವುದು ಶಿಫಾರಸು ಪತ್ರದೊಂದಿಗೆ ಅರ್ಜಿಯಾಗಲೀ, ಖುದ್ದಾಗಿಯಾಗಲೀ ವಿಚಾರಿಸುವುದು.

ವಿಳಾಸ: **ದಿ ಸೀನಿಯರ್ ಇನ್ಸ್‌ಪೆಕ್ಟರ್,**

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್,

ಕಾರ್ಕಳ, ದ. ಕ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಆ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಎಲ್ಲಾ ಅಂಗಡಿಗಳಲ್ಲಿ ದೊರೆಯುವವು, ಅಂದರೆ ಕೇವಲ ಆ ಪಟ್ಟಣಗಳಲ್ಲಿ ಒಂದು ಬಾಟ್ಲಿ ತರಿಸಿದರೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಅಳಿಯಸಂತಾನ ಮಸೂದೆಯ ಕುರಿತು ಅಭಿಪ್ರಾಯಗಳು.

ಅಳಿಸಂತಾನಕಟ್ಟು ರದ್ದಾಗಬೇಕು

1939ರಲ್ಲಿ ರಚಿಸಲ್ಪಟ್ಟಿದ್ದ ಸುಧಾರಣಾ ಮಸೂದೆಯು ಕುರಿತು ಅಭಿಪ್ರಾಯ ಸಂಗ್ರಹಿಸಲು ಬಂಟರ ಯಾನೆ ನಾಡವರ ಸಂಘದ ಕಾರ್ಯದರ್ಶಿಯವರು ಕಳೆದ ವಾರದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವದನ್ನು ನೋಡಿ ಈ ಕಟ್ಟಿಗೊಳಪಟ್ಟ ಹೆಚ್ಚಿನ ಕಿರಿಮೆಂಬರರ ಈ ಕೆಳಗಿನ ಸ್ಪಷ್ಟ ಅಭಿಪ್ರಾಯವನ್ನು ಮುಂದಿಡುವದು ಅಗತ್ಯವೆನ್ನಿಸಿದೆ.

ಪ್ರಕಟಿತ ಮಸೂದೆಯು ಅಳಿಯ ಕಟ್ಟಿನಲ್ಲಿ ಗಣ್ಯ ಬದಲಾವಣೆಯೇನನ್ನೂ ಸೂಚಿಸುವದಿಲ್ಲ. ಮದುವೆಯ ಸಿಂಧುತ್ವ ಮತ್ತು ಮರಣ ಶಾಸನ ರಹಿತ ಮೃತನ ಆಸ್ತಿಗಳ ವಾರಿಸ್ದಾರಿಕೆಗಳಲ್ಲಿ ಕೆಲವು ಸುಧಾರಣೆಗಳು ಸೂಚಿಸಲ್ಪಟ್ಟಿವೆ. ಕುಟುಂಬದ ಆಡಳಿತೆ, ಆಸ್ತಿ ವಿಭಾಗ ಮೊದಲಾದವುಗಳ ಸಂಬಂಧದ ಸೂಚನೆಗಳು ಏನೇನೂ ತೃಪ್ತಿಕರವಲ್ಲ. ಮಾತ್ರವಲ್ಲ, ಇನ್ನಷ್ಟು ಕೋರ್ಟು ವ್ಯವಹರಣೆಗಳಿಗೆ ಅವು ಆಸ್ಪದವೀಯುವಂತಿವೆ ಹೊರತು ಸುವ್ಯವಸ್ಥೆ ಸ್ಥಾಪಿಸುವಂತೆ ಕಾಣುವದಿಲ್ಲ.

'ಅಳಿಯ ಸಂತಾನ ಕಟ್ಟೇ' ಅಸ್ವಾಭಾವಿಕವಾದುದು; ಲೋಕದ ಬೇರಾವ ಭಾಗದಲ್ಲೂ ಇಲ್ಲದ್ದು. ಅಂತಹ ಒಂದು ಕೃತ್ರಿಮ ಶಾಸನದ ಪರಿಣಾಮವಾಗಿ ಅಳಿಯ ಸಂತಾನ ಕುಟುಂಬಗಳು ಅಧೋಗತಿಗಿಳಿಯುತ್ತಿರುವವೆಂದು ಮುಂಬಂದರಲ್ಲಿ ಒಂದು ವಿಧದ ಜಾಗ್ರತಿಯೇನೋ ತೋರುತ್ತಿದೆ. ಆದರೆ ದೀರ್ಘಕಾಲದಿಂದಿದ್ದ ಒಂದು ಕ್ರಮದ ಆಸ್ತಿವಾರವನ್ನೇ ಅಡಿಮೇಲು ಮಾಡುವ ಧೈರ್ಯ ಅವರಿಗಿರುವಂತಿಲ್ಲ. ಆದ್ದರಿಂದ ಇಂತಹ ನಾಮಮಾತ್ರ ಸುಧಾರಣೆಗಳನ್ನು ಸೂಚಿಸಹತ್ತಿದ್ದಾರೆ. 1939ರಲ್ಲೇ 'ಏನೂ ಸಾಲದು' ಅನ್ನಿಸಿದ್ದ ಮಸೂದೆಯನ್ನೇ ಈಗ ಮುಂದೆ ತಂದಿರುವದು ತೀರಾ ಅತೃಪ್ತಿಕರ. ಆದ್ದರಿಂದ 'ಬಂಟರ ಯಾನೆ ನಾಡವರ ಸಂಘ'ವು ಅಳಿಯಕಟ್ಟನ್ನಾಚರಿಸುವ ಇತರ ಸಮಾಜಗಳ ಸಹಕಾರ ಪಡೆದು 'ಅಳಿಯ ಸಂತಾನ ಕಟ್ಟು ಬೇಕೋ ಬೇಡವೋ'? ಎಂಬುದನ್ನೇ ಮತಕ್ಕೆ ಹಾಕಿ, ಆ ಕಟ್ಟಿಗೆ ಸಂಬಂಧಪಟ್ಟ ಪ್ರಾಯಸ್ಥರೆಲ್ಲರ ಮತವನ್ನು ಪ್ರಥಮತಃ ಸಂಗ್ರಹಿಸಿ ನೋಡಲಿ. ನನಗೆ ಪೂರ್ಣ ಭರವಸೆಯಿರುವಂತೆ ಅಳಿಯ ಕಟ್ಟಿನ ರದ್ದತಿಗೆ ಬಹುಮತ ದೊರೆತರೆ, ಆ ಮೇಲೆ ಮಕ್ಕಳ ಕಟ್ಟನ್ನು ಅಂಗೀಕರಿಸುವ ಯೋಜನೆಯೊಂದನ್ನು ತಯಾರಿಸಿ ಪ್ರಕಟಿಸಲಿ, ಎಂದೇ ಬಹು ಸಂಖ್ಯಾಕರ ಪರವಾಗಿ ವಿಜ್ಞಾಪನೆ.

—ಎನ್. ಎಸ್. ಕುಕ್ಯಾನ್,
ಕಾರ್ಯದರ್ಶಿ ಬಿ. ಎಸ್. ವಿದ್ಯಾವರ್ಧಕ ಸಂಘ, ಶಿರ್ವ.

ಅಳಿಯ ಸಂತಾನ ಮಸೂದೆ

ನಾಡವರ ಸಂಘದ ಕಾರ್ಯದರ್ಶಿಯವರು ಪ್ರಕಟಿಸಿರುವ 'ಮದ್ರಾಸ್ ಅಳಿಯ ಸಂತಾನ ಮಸೂದೆ'ಯನ್ನು ಪರಾಮರ್ಶಿಸಿ ಪೂರ್ಣ ಸಮಾಧಾನಗೊಂಡೆ. ಈ ಕಟ್ಟಿನಿಂದಾಗುತ್ತಿದ್ದ ಮುಖ್ಯ ಅನಾಹುತಗಳೆಂದರೆ ಯಜಮಾನನ ದುರಾಡಳಿತೆ ಮತ್ತು ಮರಣ ಶಾಸನ ಮಾಡದೇನೇ ಸತ್ತವರ ಹೆಂಡತಿ ಮಕ್ಕಳ ಅನಾಥತ್ವ. ಇವುಗಳಿಗೂ, ಇತರ ದೋಷಗಳಿಗೂ ಈ ಮಸೂದೆಯಲ್ಲಿ ಯೋಗ್ಯ ನಿವಾರಣೆಗಳು ಬಂದಿವೆ. ತೀವ್ರಗಾಮಿಗಳು ಕೆಲವರು ಅಳಿಯ ಸಂತಾನ ಕಟ್ಟೆಂಬುದು ಅಪ್ರಾಗತಿಕವೆನ್ನಬಹುದು. ಇದಕ್ಕೆ 'ಹಳೆಯದೆಲ್ಲವೂ ಹಾಳು' ಎಂಬ ವಿಚಾರ ರಹಿತ ಸ್ಫೂರ್ತಿಯೇ ಕಾರಣ ಹೊರತು ಬೇರೇನೂ ಅಲ್ಲ. ತುಸು ವಿಚಾರ ಬುದ್ಧಿಯಿದ್ದವರಿಗೆ ಈ ಕಟ್ಟು ತೀರಾ ಪ್ರಗತಿಶೀಲವಾದುದೆಂಬುದು ಮನವರಿಕೆಯಾಗಿದೆ. ಪ್ರಕೃತ ಇಡೀ ಲೋಕದ ಗುರಿಯೆಂದರೆ ಸಮತಾವಾದಿ ಸರಕಾರ; ಅಥವಾ ಸಾಮೂಹಿಕ ಅನುಭೋಗದ ಆಡಳಿತೆ. ಅಳಿಯ ಸಂತಾನ ಕುಟುಂಬಗಳ ಮಟ್ಟಿಗೆ ಈ ಸಮತಾವಾದ ಯಾನೆ 'ಸಹಕಾರೀ ತತ್ವ'ವು ತಲೆಮಾರುಗಳಿಂದ ಜ್ಯಾರಿಯಲ್ಲಿದೆ. ಸಾಮೂಹಿಕ ಹಿತ ಸಾಧನೆಯ ಅಂಕೆಯೊಳಗೆ ವ್ಯಕ್ತಿಯು ಪ್ರಗತಿ ಹೊಂದಬಹುದೆಂಬುದೇ ಈ ಕಟ್ಟಿನ ಸಾರ. ಇದರಿಂದಾಗಿ ಅಳಿಯ ಕಟ್ಟನ್ನಾಚರಿಸುವ ಹೆಚ್ಚಿನವರಲ್ಲಿ ಆಲಸ್ಯ, ಮಹತ್ವಾಕಾಂಕ್ಷೆಯ ಅಭಾವ, ಇತ್ಯಾದಿ ದುರ್ಗುಣಗಳು ಬೆಳೆದಿದ್ದರೆ, ಅದಕ್ಕೆ ಈ ಕಟ್ಟಿನಿಂದ ದೊರೆತಿರುವ ಅನುಕೂಲತೆಯೇ ಕಾರಣವಲ್ಲದೆ ಅನನುಕೂಲತೆಯಲ್ಲ. ಆದಕ್ಕಾಗಿ ಅಂಥವರ ಮನೋವೃತ್ತಿಯನ್ನು ಸುಧಾರಿಸಿ ಉದ್ಯೋಗಕ್ಕೆ ಹಚ್ಚುವ ವ್ಯವಸ್ಥೆಗಳಾಗಬೇಕು; ಬದಲಿಗೆ ಕಟ್ಟುಕಟ್ಟಳೆಯನ್ನೇ ದೂರುವದಾಗಲೀ ನಿರ್ಮೂಲಿಸುವದಾಗಲೀ ಸಲ್ಲದು. ದುರ್ಗುಣಗಳಿಗೆ ಆವಕಾಶವೀಯುವ ಅಂಶಗಳು ಅಳಿಸಂತಾನ ಕಾನೂನಿನಲ್ಲಿ ಇರುವದನ್ನು ಈ ಮಸೂದೆಯು ತಿದ್ದುತ್ತದೆ. ಕುಟುಂಬದ ಆಡಳಿತೆಯ ಆಯ-ವ್ಯಯಗಳನ್ನು ಪರಿಶೀಲಿಸುವ ಅಧಿಕಾರವೂ ನ್ಯಾಯವಾದ ರೀತಿಯಿಂದ ಪಾಲು ಕೇಳುವ ಅಧಿಕಾರವೂ ಅದರಲ್ಲಿವೆ. ಆದರಿಂದ ಈ ಮಸೂದೆಗೆ ಎಲ್ಲರೂ ಬೆಂಬಲ ಕೊಡುವರೆಂದು ನಿರೀಕ್ಷಿಸುತ್ತೇವೆ.

ಯು. ಬಿ. ಸೆಟ್ಟಿ.
ಉದ್ಯಾವರ.

ದಕ್ಷಿಣ ಕನ್ನಡ

ಕಟಪಾಡಿ–ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಮತ್ತು ಹೈಸ್ಕೂಲು–ಈ ಎರಡು ಸಂಸ್ಥೆಗಳ ವರ್ಧಂತ್ಯುತ್ಸವವು ತಾ 10-3-46ರಲ್ಲಿ ಶ್ರೀ. ಎ. ಬಿ. ಶೆಟ್ಟರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಹಾಯರ್ ಎಲಿಮೆಂಟರಿ ಶಾಲೆಯ ವರದಿಯು ಶ್ರೀ. ಕೆ. ಪಿ. ಮಲ್ಯರಿಂದಲೂ, ಹೈಸ್ಕೂಲಿನ ವರದಿಯು ಶ್ರೀ. ಪಿ. ರಾಮದಾಸ ನಾಯಕ್ ಬಿ.ಎ., ಎಲ್.ಟಿಯವರಿಂದಲೂ ಓದಲ್ಪಟ್ಟ ಬಳಿಕ ಹಾಯರ್ ಎಲಿಮೆಂಟರಿ ಶಾಲೆಯ ಸ್ವಸ್ತಿವಾಚನವನ್ನು ಶ್ರೀ ಎ. ಶ್ಯಾಮರಾವ್ ಬಿ.ಎ.,ಎಲ್.ಟಿ.ಯವರು ಮಾಡಿದರು. ಎರಡೂ ಶಾಲೆಗಳ ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣೆಯಾದ ಬಳಿಕ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ 25 ವರ್ಷಗಳ ವರೆಗೆ ಎಡೆಬಿಡದೆ ಮುಖ್ಯ ಅಧ್ಯಾಪಕರಾಗಿದ್ದು ಅದರ ಹಾಗೂ ಶ್ರೀ ವೆಂ. ಸ್ವಾ. ವಿದ್ಯಾವರ್ಧಕ ಸಂಘದ ಚಟುವಟಿಕೆಗಳಲ್ಲಿ ತುಂಬಾ ಭಾಗವಹಿಸಿ ಅದರ ಮೇಲ್ಮೆಗಾಗಿ ದುಡಿಯುತ್ತಿದ್ದು ಕಳೆದ ಜುಲೈ ತಿಂಗಳ ಆದಿಯಿಂದ ಹೈಸ್ಕೂಲು ಸಹಾಯಕ ಅಧ್ಯಾಪಕರಾಗಿ ವರ್ಗಾಯಿಸಲ್ಪಟ್ಟ ಶ್ರೀ ಕೆ. ಆರ್. ಶೆಣೈಯವರಿಗೆ ಅವರ ಸೇವೆಯ ರಜತೋತ್ಸವದ ಸಂತೋಷ ಸೂಚನಾರ್ಥವಾಗಿ ಸಂಘದ ವತಿಯಿಂದ ಸಂಭಾವನೆಯು ಕೊಡಲ್ಪಟ್ಟಿತು. ಇದಾದ ಬಳಿಕ ಅಧ್ಯಕ್ಷರು ಎರಡೂ ಶಾಲೆಗಳ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಅವುಗಳ ಇನ್ನೂ ಹೆಚ್ಚಿನ ಏಳಿಗೆಗಾಗಿ ಅಮೂಲ್ಯ ಸೂಚನೆಗಳನ್ನಿತ್ತು ಭಾಷಣವಿತ್ತರು. ಶ್ರೀ ಕೆ. ಆರ್. ಶೆಣೈಯವರು ಸಂಘದ ಪರವಾಗಿ ಎಲ್ಲರಿಗೂ ವಂದನೆಗಳನ್ನರ್ಪಿಸಿದ ಬಳಿಕ ಹಾ। ಎ। ಶಾಲೆಯ ಹೆಮ್ಮಕ್ಕಳಿಂದ 'ಧ್ರುವ ವಿಜಯ' ನಾಟಕ, ಹೈಸ್ಕೂಲು ಮಕ್ಕಳಿಂದ 'ದ್ರೌಪದಿ ಪ್ರತಾಪ' ಯಕ್ಷಗಾನ ಪ್ರದರ್ಶನ, ಬಹು ಉತ್ತಮ ರೀತಿಯಲ್ಲಿ ಜರಗಿದುವು. ರಾತ್ರಿ 10-30ಕ್ಕೆ ಹಾ। ಎ। ಶಾಲಾ ಹಳೇ ವಿದ್ಯಾರ್ಥಿ ಶ್ರೀ ಜಿ. ಎಸ್. ತಲಚೇರಿಕಾರ್‍ರವರಿಂದ 'ಸಂತ ನಿವಾರಾಮ್ಯ' ಎಂಬ ಹರಿಕಥಾ ಕಾಲಕ್ಷೇಪವೂ ಜರಗಿತು

ಈ ಕೇಂದ್ರದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ದಿನಾಚರಣೆ ಸಮಾರಂಭವು ತಾ 16 3-46ರಲ್ಲಿ ಜರಗುವುದು.

ಕಿನ್ನಿಗೋಳಿ–ಸ್ಥಳೀಕ "ಲಿಟ್ಲ್ ಫ್ಲವರ್ಸ್ ಗರ್ಲ್ಸ್" ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 3-3-46 ಶ್ರೀ ಅದೂರುಲಕ್ಷ್ಮಿನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ವಿ. ಶೆಣೈಯವರು ಶಾಲಾ ವರದಿಯನ್ನು ಓದಿದರು. ವಿವಿಧವಿನೋದಾವಳಿ, ಕೊಂಕಣ ನಾಟಕ, ಅಧ್ಯಕ್ಷರ ಭಾಷಣ, ಬಹುಮಾನ ಹಂಚೋಣ ಇವೇ ಮೊದಲಾದ ಕಾರ್ಯಕ್ರಮಗಳಿದ್ದುವು.

ಮೂಲ್ಕಿ–ಸ್ಥಳೀಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯು ಈ ವರ್ಷ ತಾ 16-3-46ರಿಂದ 23-3-46ರ ತನಕ ಜರಗಲಿರುವುದು.

ಕುಂದಾಪುರ–ಇಲ್ಲಿಯ ಬೋರ್ಡ್ ಹೈಸ್ಕೂಲ್ ಕಟ್ಟಡ ನಿಧಿಗೆ P. M. R Committee- Coondapoorದವರು ಸಾವಿರದೊಂದು ರೂಪಾಯನ್ನೂ, ಮದ್ರಾಸ್ ಮೊದರ್ನ್ ಕೆಫೆಯ ಮಾಲಿಕರಾದ ಶ್ರೀ. ಕೆ. ಸೀತಾರಾಮರಾಯರು ತನ್ನ ಸಹೋದರ ದಿವಂಗತ ಶ್ರೀ. ಕೆ. ರಾಮಕೃಷ್ಣರಾಯರ ಸ್ಮಾರಕಕ್ಕಾಗಿ ಶ್ರೀ. ಎ. ಶ್ರೀನಿವಾಸಾಚಾರ್ಯರ ಮುಖಾಂತರ ಸಾವಿರದೊಂದು ರೂಪಾಯನ್ನೂ ದಾನ ಮಾಡಿದ್ದಾರೆ. ಇದು ಸ್ತುತ್ಯ.

ಉಡುಪಿ

ಮಕ್ಕಳ ಕೂಟ–ತಾ. 10-3-46ರಲ್ಲಿ ಮಕ್ಕಳಕೂಟದ ವಿಶೇಷ ಸಭೆಯೊಂದು ಮೊದರ್ನ್ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಶ್ರೀ. ಬಿ. ಅಂತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿ 120 ಮಕ್ಕಳು ಕೂಟಕ್ಕೆ ಸೇರಿದನಂತರ ಹಲವು ಮಕ್ಕಳ ಭಾಷಣಗಳಾದುವು. ರಜಾ ಕಾಲದಲ್ಲಿ ಮಕ್ಕಳು ಕೈಕೊಳ್ಳಬೇಕಾದ ರಚನಾತ್ಮಕ ಕಾರ್ಯಕ್ರಮಗಳ ಮತ್ತು ಮಕ್ಕಳಕೂಟದಿಂದ ಹೊಂದಬಹುದಾದ ಪ್ರಯೋಜನಗಳ ಕುರಿತು ಅಧ್ಯಕ್ಷರ ಭಾಷಣ ಕಾರ್ಯದರ್ಶಿಯ ಧನ್ಯವಾದದೊಂದಿಗೆ ಸಭೆ ಮುಗಿಯಿತು.

ಬಹುಮಾನ ವಿತರಣೆ– ಇಂಟರ್ ಸ್ಕೂಲ್ ಎತ್ಲೆಟಿಕ್ ಎಸೋಸಿಯೇಶನಿನ ನೇತೃತ್ವದಲ್ಲಿ ಜರಗಿದ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚುವ ಸಮಾರಂಭವು ತಾ. ೧೦ರಲ್ಲು ಜೋಂಟಿ ಲೈಫ್ ಇನ್ಶ್ಯೂರೆನ್ಸ್ ಕಂಪೆನಿಯ ಕೊಟ್ಟಿಕಾರ್ ಬ್ರದರ್ಸರ ಆಫೀಸು ವಠಾರದಲ್ಲಿ ಶ್ರೀ ಜಿ. ಸಿ. ರೇಗೊ, ವಕೀಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬಹುಮಾನ ಹೊಂದಿದವರಿಗೆಲ್ಲಾ ಕೊಟ್ಟಿಕಾರ್ ಬಂಧುಗಳು ಚಹಾ ಸತ್ಕಾರವನ್ನಿತ್ತು ಗೌರವಿಸಿದರು. ಕ್ರಿಶ್ಚಿಯನ್ ಹೈಸ್ಕೂಲ್ ಹೆಡ್ಮಾಸ್ಟರ್ ಕಾರಟರು ಧನ್ಯವಾದಗಳನ್ನರ್ಪಿಸಿದರು.

ಪೆರ್ಡೂರು ಶ್ರೀ. ಅನಂತಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಯ ಸಹಾಯಾರ್ಥವಾಗಿ—

ಶ್ರೀ ಅನಂತಪದ್ಮನಾಭ ಸ್ವಾಮಿಯ ರಥೋತ್ಸವದ ಸಮಯ

ಪೆರ್ಡೂರಿನಲ್ಲಿ ನಾಟಕಗಳು.

ತಾ. 16-3-'46ನೇ ಶನಿವಾರ (ರಥೋತ್ಸವದ ದಿನ) ರಾತ್ರಿ ಘಂಟೆ 9-30ಕ್ಕೆ

ಉಡುಪಿ ನಾಟ್ಯ ಕೂಟದವರಿಂದ

ಕಾಯಿದೆಭಂಗ

(ಎಂಬ ಅರ್ಥಗರ್ಭಿತವಾದ ಸಾಮಾಜಿಕ ನಾಟಕ.)

ಉಡುಪಿ ಶ್ರೀಕೃಷ್ಣ ಮಾರುತಿ ನಾಟ್ಯ ಸಂಘದವರಿಂದ

ತಾ. 18-3-'46ನೇ ಸೋಮವಾರ ರಾತ್ರಿ ಘಂಟೆ 9-30ಕ್ಕೆ

ವರದಕ್ಷಿಣೆ

(ಎಂಬ ಹಾಸ್ಯಪ್ರಧಾನವಾದ ಸಾಮಾಜಿಕ ನಾಟಕ.)

ತಾ 20-3-46ನೇ ಬುಧವಾರ ರಾತ್ರಿ ಘಂಟೆ 9-30ಕ್ಕೆ

ವಿಕ್ರಮ-ಶಶಿಕಲಾ

(ಎಂಬ ಶೃಂಗಾರಭರಿತ ನಾಟಕ).

ಟಿಕೇಟಿನ ದರಗಳು:– ರೂಪಾಯಿ 10, 5, 3, 2, 1 ಮತ್ತು ಆಣೆ 8.

ವಿದ್ಯಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

P. N. ಮಾಧವ ರಾವ್, M. A, B. L,
ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಮತ್ತು ಶಾಲಾ ಮೆನೇಜರ್.

ವ್ಯಯ ಸಂವತ್ಸರದ

(1946-1947)

ಶ್ರೀಪತಿ ಪಂಚಾಂಗ

ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.

ಬೆಲೆ 0—5—0.

ವಿಳಾಸ:—

ಶ್ರೀಪತಿ ನರಸಿಂಹ ಅಡಿಗ,
ಬೇಳೂರು ಗ್ರಾಮ, ಪೋಸ್ಟ್ ಕೋಟ.
ಅಥವಾ
ನವಭಾರತ ಬುಕ್ ಡಿಪೋ, ಉಡುಪಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 403/31 R. E. P 630/1945.

ಅರ್ಜಿದಾರರು.ನೆಂಕಪ್ಪ ಕಾರಂತ ಕೂಡಾ.
ಎದ್ರಿರು.ನಾರಾಯಣ ಕಾರಂತ ಕೂಡಾ.

1ರಿಂದ 4ನೆ ವರೆಗಿನ ಎದ್ರಿರಿಗೆ ತಿಳಿಸುವ ದೇನೆಂದರೆ–

1ನೆ ಎದ್ರಿ ನಾರಾಯಣ ಕಾರಂತ. 2ನೆ ಎದ್ರಿ ತಿಂಮಯ್ಯ ಯಾನೆ ಕೃಷ್ಣಪ್ಪ ಕಾರಂತ. 3ನೆ ಎದ್ರಿ ರಾಮಪ್ಪ ಕಾರಂತ. 4ನೆ ಎದ್ರಿ ಪರಮೇಶ್ವರ ಕಾರಂತ–ಕಂಡಿಕೆರೆ ಸುಬ್ರಾಯ ಕಾರಂತರ ಮಕ್ಕಳು. ಕುಂದಾಪುರ ತಾಲ್ಲೂಕು ನಾವುಂದ ಗ್ರಾಮಸ್ಥರು.

ಮೇಲೆ ಹೇಳಿರುವ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರರು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ದಾಖಲು ಮಾಡಿದ್ದಾರೆ. ಅದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾರೀಕು 23-3-1946ಕ್ಕೆ ನಿಶ್ಚಯಿಸಲಾಗಿರುವಂತೆ ನಿಮಗೆ ಇದರಿಂದ ತಿಳಿಸಲಾಗುತ್ತದೆ.

B. Mahabala Holla.
Advocate for petitioners.

ತಾರೀಕು 8-3-46 }
ಮೊಕ್ಕಾಂ ಕುಂದಾಪುರ }

ದಕ್ಷಿಣ ಕನ್ನಡ.

ಮಂಗಳೂರು.

ಬಾವಿ ತೋಡಿಸುವವರಿಗೆ–ಹೆಚ್ಚು ಆಹಾರ ಬೆಳೆಸುವ ಸಂಬಂಧವಾಗಿ, ನೀರಿಲ್ಲದ ಕಡೆಗಳಲ್ಲಿ ರೈತರು ಬಾವಿ ತೋಡಿಸಲು ಸರಕಾರದವರು ಸಹಾಯ ಧನ ಕೊಡುವ ಯೋಜನೆಯನ್ನು ನಮ್ಮ ಜಿಲ್ಲೆಗೂ ಅನ್ವಯಿಸಿರುವರು. ಇದೇ ಮಾರ್ಚಿ ತಾ. ೬ರ ನಂತರ ಆರಂಭಿಸಿ, ಇದೇ ಜೂನ್ ೧೫ರೊಳಗೆ ಪೂರ್ಣಗೊಳಿಸುವ ಬಾವಿಗಳಿಗೆ ರೂ ೩೦೦, ಮತ್ತು ದುರಸ್ತಿಗೊಳಿಸುವ ಬಾವಿಗಳಿಗೆ ರೂ. ೧೫೦, ಸಹಾಯ ಧನ ಕೊಡುವರೆಂದು ತಿಳಿಯಲಾಗಿದೆ. ಈ ಬಾವಿಗಳಿಂದ, ಬರುವ ಮೂರು ವರ್ಷಗಳಿಗೆ ಬೆಳೆ ಮಾಡುವ ಶರ್ತದಲ್ಲಿ ಸಹಾಯಧನ ಸಲಿಸಲಾಗುವುದು.

ಸುಭಾಷ್ ಸೈನಿಕರು–ನಮ್ಮ ಜಿಲ್ಲೆಯ ಉಡ್ಪಿ ತಾಲೂಕಿನ ಕಲ್ಯಾಣಪುರದಲ್ಲಿ ಹುಟ್ಟಿದ ಸಾಮುವೇಲ್ ಫೆರ್ನಾಂಡಿಸ್ ಎಂಬ ಸುಭಾಷ್ ಸೇನೆಗೆ ಸೇರಿದ ಯುವಕರೊಬ್ಬರು ಮಂಗಳೂರಿಗೆ ಬಂದಿರುವರು. ಇವರ ಹೇಳಿಕೆಯಂತೆ ನಮ್ಮ ಜಿಲ್ಲೆಯವರು ಜರ್ಮನಿಯಲ್ಲಿದ್ದವರು ಒಟ್ಟು ೮ ಮಂದಿ, ಈಗಾಗಲೇ ಇಬ್ಬರು ಬಂದಿದ್ದು ಉಳಿದವರು ಬೇಗನೇ ಬರಲಿರುವರೆಂದು ಕೇಳಿಬರುತ್ತದೆ.

ಜಿಲ್ಲಾ ಪ್ರತಿಕೋದ್ಯೋಗಿಗಳ ಸಂಘ–ಈ ಸಂಘದ ವಾರ್ಷಿಕ ಮಹಾ ಸಭೆ ಈಚೆಗೆ ಅದರ ಕಾರ್ಯಾಲಯದಲ್ಲಿ ರಾವ್ ಸಾಹೇಬ್ ಎ. ಎಲ್. ಪಿಂಟೋ ಅವರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರ್ಷಕ್ಕೆ ಕಳದ ಬಾರಿಯ ಕಾರ್ಯಕಾರೀ ಸಮಿತಿಯನ್ನೇ ಪುನಃ ಆರಿಸಲಾಯಿತು. ಉಪಾಧ್ಯಕ್ಷರಾಗಿ ರಾವ್ ಸಾಹೇಬ್ ಎ. ಎಲ್. ಪಿಂಟೋ ಅವರನ್ನು ಆರಿಸಲಾಯಿತು.

ಟಾಪು ಸಜೆ–ತನ್ನ ಮಾವ ನಿಕೊಲಸ್ ಡಾಲ್ಮೆಡೋ ಎಂಬಾತನನ್ನು ಕೊಲೆ ಮಾಡಿದ ಆರೋಪದ ಮೇಲೆ ಕಾರ್ಕಳದ ಬಳಿಯ ಕುಕ್ಕುಂದೂರಿನಲ್ಲಿರುವ ಪೇದ್ರು ಕುತಿನ್ಹಾ ಇವನ ವಿಚಾರಣೆ ಸೆಶನ್ಸ್ ಜಡ್ಜ ಶ್ರೀ ಕೆ. ಶ್ರೀನಿವಾಸನ್ ರವರ ಮುಂದೆ ನಡೆದು ಆರೋಪಿಗೆ ಟಾಪು ಸಜೆ ವಿಧಿಸಲಾಯಿತು.

ನೇಯಿಗೆ ಮುಷ್ಕರ–ಮಂಗಳೂರಿನ ನೇಯಿಗೆ ಮಜೂರರು ಕಳೆದ ತಾ. 26ರಿಂದ ಮುಷ್ಕರ ಹೂಡಿದ್ದಾರಷ್ಟೆ. ಮಜೂರ ಸ್ವಯಂ ಸೇವಕರು ನೇಯಿಗೆ ಕಂಪೆನಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿರುವರೆಂದು ತಿಳಿದು ಬರುತ್ತದೆ. ಈ ಸಂಬಂಧದ ಪರಿಸ್ಥಿತಿಯ ಸಂಬಂಧ ಪ್ರಚಾರವಾದ ಅನೇಕ ವರ್ತಮಾನಗಳ ಕುರಿತು ಜಿಲ್ಲಾ ರಾಷ್ಟ್ರೀಯ ಧುರೀಣರು ಹೀಗೆ ತಿಳಿಸಿದರು.

"ಮುಷ್ಕರಗಾರರು ಸಂಪೂರ್ಣ ಅಹಿಂಸಾತ್ಮಕ ಧೋರಣೆಯನ್ನು ವಹಿಸಬೇಕಾದುದು ಯಶಸ್ಸಿಗೆ ಅತ್ಯಾವಶ್ಯಕ. ತಮಗೆ ದ್ರೋಹ ಬಗೆಯುವ ಇತರ ಕೆಲಸಗಾರರ ಹೃದಯ ಪರಿವರ್ತನಕ್ಕೆ ಪ್ರಯತ್ನಗಳಾಗಬೇಕು. ಯಾವ ತರದ ದೈಹಿಕ ಬಲತ್ಕಾರವಿಲ್ಲದ ಪಿಕೆಟಿಂಗ್ ನ್ಯಾಯವೆನಿಸುವುದು. ಪಿಕೆಟ್ ಮಾಡುವವರು ಬಂಧಿ ವಾಸಕ್ಕೂ ಸಿದ್ಧರಿರಬೇಕು. ಕೆಲವು ಕಡೆಗಳಲ್ಲಿ ಮಾಲಕರು ಹಲವು ತರದ ಕುಹಕೋಪಾಯಗಳಿಂದ (ಒಂದು ಕಡೆಯಲ್ಲಿ ಮೆಣಸಿನ ಹೊಗೆ ಹಾಕಿದರಂತೆ!) ಪಿಕೆಟ್ ಮಾಡುವವರನ್ನು ನಿರುತ್ಸಾಹಗೊಳಿಸ ನೋಡಿದರೆಂದು ಸುದ್ದಿ ಇದೆ. ಇದು ನಿಜವಿದ್ದರೆ, ಖಂಡನೀಯವಿದೆ. ತಮ್ಮ ಧೋರಣೆಯು ನ್ಯಾಯಶೀಲವೆಂದು ವಿಶ್ವಾಸವಿದ್ದವರಿಗೆ ಯಾವ ಅಮಾನುಷಿಕ ಕೃತ್ಯಕ್ಕೆ ಕೈಹಾಕುವ ಅಗತ್ಯವಿಲ್ಲ. ಕೆಲವು ಕಡೆ ಮಾದಕದ್ರವ್ಯ ಪ್ರೇರಿತ ಪುಂಡರನ್ನು ಸಂಪುತೊಟ್ಟ ಮಜೂರರ ಮೇಲೇರಿಸಲಾಯಿತಂತೆ. ಇದೂ ನಿಜವಿದ್ದರೆ ದ್ವಿಗುಣಿತವಾಗಿ ಖಂಡನೀಯ, ಆದರೆ ಬಂಡವಾಳ ಶಾಹಿಯು ಜಗತ್ತಿನಲ್ಲೇ ಇಂತಹ ಕೃತ್ಯಗಳಿಗೆ ಕುಕೀರ್ತಿ ಪಡೆದಿದೆ. ಆದುದರಿಂದ ಧೀರ ಸತ್ಯಾಗ್ರಹಿಯಂತೆ ಚಳವಳಗಾರರು ಅಹಿಂಸೆಯನ್ನು ಕೊನೆಯ ತನಕ ಪರಿಪಾಲಿಸಿ, ಆ ಉದ್ದೇಶದಲ್ಲಿ ಆದೆಂತಹ ಉನ್ನತ ಬಲಿದಾನವನಾದರೂ ಕೊಡಲು ಸಿದ್ಧರಿರಬೇಕು. ಅಂಥವರಿಗೆ ಅಪಜಯವೆಂದಿಲ್ಲ. ಬ್ರಿಟಿಷರನ್ನು ಟಿಣಿಸಿದ ಸತ್ಯಾಗ್ರಹವು ಅದರ ಉಪಾಂಗಗಳಾದ ಬಂಡವಾಳಶಾಹಿಯನ್ನೂ ಪಳಗಿಸ ಬಲ್ಲುದು".

ಗಾ। ಕೊಲೇಜ್ ಯೂನಿಯನ್–ಇದರ ವಾರ್ಷಿಕೋತ್ಸವ ಕಳೆದ ತಾ. 1ರಂದು ಸಂಜೆ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಅಧ್ಯಕ್ಷ ಟಿ. ಲೋಹಿಣಿ ಅವರಿಂದ ಸ್ವಾಗತ ಭಾಷಣ; ಕಾರ್ಯದರ್ಶಿ ಬಿ. ಟಿ. ರೈ ಅವರಿಂದ ವರದಿವಾಚನ; ಶ್ರೀ ಸೂರ್ಯನಾರಾಯಣ ಅಡಿಗ ಅವರಿಂದ ಶ್ರೇಯ ಪ್ರಾರ್ಥನೆ, ಶ್ರೀ ಎ. ವಸಂತಿಯವರಿಂದ ಅಪಕ್ಕೆ ಉತ್ತರ, ಪಿ. ಸ್ವಾಮಿನಾಥನ್ ಅವರಿಂದ ಕೊಲೇಜ್ ಸಿಬ್ಬಂದಿ ಪರವಾಗಿ ಶ್ರೇಯಪ್ರಾರ್ಥನೆ; ಶ್ರೀ ಸುಬ್ರಹ್ಮಣ್ಯಂ ಅವರಿಂದ ಉತ್ತರ; ಅನಂತರ ಬಹುಮಾನ ವಿತರಣ; ಶ್ರೀ ನಳಿನಿ ಸಗರ್ಕಾರರಿಂದ ಹೊರ ತೆರಳುವ ವಿದ್ಯಾರ್ಥಿಗಳ ಪರವಾಗಿ ಶ್ರೇಯಪ್ರಾರ್ಥನೆ; ಶ್ರೀ ಎಂ ಮುರಲೀಧರರಾಯರಿಂದ ಅದಕ್ಕೆ ಉತ್ತರ, ಅಧ್ಯಕ್ಷ ಭಾಷಣ, ವಂದನಾರ್ಪಣೆಗಳಾದ ಮೇಲೆ ಮುಕ್ತಾಯ.

ಜಿಲ್ಲಾ ಬೀಡಿ ಮಜೂರರ–ಪ್ರಥಮ ಸಮ್ಮೇಲನವು ತಾ.3ರಂದು ಜರಗಿತು. ಮುಂಜಾನೆ ಪ್ರಭಾತ ಫೇರಿ ನಡೆದು, ಶ್ರೀ ಕೇಶವ ಕಾಮತರು ಧ್ವಜವನ್ನು ಹಾರಿಸಿದ ಬಳಿಕ, ರಘುನಾಥಯ್ಯ ಸ್ಮಾರಕ ಭವನದಲ್ಲಿ ಕಾರ್ಯಕಾರಿ ಸಭೆ ನಡೆಯಿತು. ಸಂಜೆ, ಶ್ರೀ ಎಸ್. ಎಸ್. ಹೊಳ್ಳರ ಅಧ್ಯಕ್ಷತೆಯಲ್ಲಿ ಮೈದಾನದಲ್ಲಿ ಬಹಿರಂಗ ಸಭೆ ಜರಗಿತು. ಶ್ರೀ ಬಿ. ಚಿನ್ನಯ್ಯನವರು ಸ್ವಾಗತ ಭಾಷಣವನ್ನೀಯುತ್ತ "ನಮ್ಮ ಕನಿಷ್ಠ ಕೇಳಿಕೆಗಳಾದ ಒಂದು ತಿಂಗಳ ಬೋನಸ್, ಮತ್ತು ೧೦೦೦ ಬೀಡಿಗಳಿಗೆ ರೂ. ೧-೮-೦ ಕೂಲಿ ಸಿಗಬೇಕೆಂಬುದನ್ನು ಪ್ರತಿಪಾದಿಸುವುದಕ್ಕಾಗಿ ಸಮ್ಮೇಲನ ಕರೆದಿದ್ದೇವೆ"–ಎಂದರು. ಆ ಬಳಿಕ ಶ್ರೀ ಬಿ. ವಿ. ಕಕ್ಕಿಲ್ಲಾಯರು ಸಮ್ಮೇಲನದ ಉದ್ಘಾಟನೆಯನ್ನು ನೆರವೇರಿಸುತ್ತ, "ಬೀಡಿ ಕೈಗಾರಿಕೆಯನ್ನು ಕೊ-ಒಪರೇಟಿವ್ ಕ್ರಮದಲ್ಲಿ ಸಂಘಟಿಸಬೇಕು" ಎಂದರು. ಕೇರಳದ ಮಜೂರ ಮುಂದಾಳುರಾದ ಇಂಬಿಚ್ಚಿಬಾವಾ ಅವರು ಮಾತನಾಡಿದರು. ಶ್ರೀ ಶಾಂತಾರಾಮ ಪೈಗಳು ಸಮ್ಮೇಲನಕ್ಕೊಂದು ಸಂದೇಶವಿತ್ತ ಬಳಿಕ ಕಾರ್ಯದರ್ಶಿ ಯಂ. ಮಂಜು ಅವರು ವರದಿಯನ್ನೋದಿದರು. ಶ್ರೀ ಕಕ್ಕಿಲ್ಲಾಯರು ಠರಾವುಗಳನ್ನೊಂದೊಂದಾಗಿ ಓದುತ್ತಾ ವಿವರಿಸಿದರು. ಒಂದು ತಿಂಗಳ ಬೋನಸ್, ೧೦೦೦ ಬೀಡಿಗೆ ರೂ ೧—೮—೦ ಕೂಲಿ–ಇತ್ಯಾದಿ ಬೇಡಿಕೆಗಳು ಠರಾವಿನಲ್ಲಿದ್ದುವು. ಶ್ರೀಗಳಾದ ಕೇಶವ ಕಾಮತ್, ಲಿಂಗಪ್ಪ ಸುವರ್ಣರ ಭಾಷಣಗಳಾದಮೇಲೆ ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ನಗರದಲ್ಲಿ ಪ್ಲೇಗ್–ತಾ. ೨-೩-೪೬ಕ್ಕೆ ಅಂತ್ಯವಾಗುವ ವಾರದ ಪ್ಲೇಗಿನಿಂದ ಒಬ್ಬರು ಮಡಿದ ವರದಿಬಂದಿದೆ. ಕಳೆದ ದಶಂಬರದಲ್ಲಿ ಆರಂಭವಾದ ಈ ಪಿಡುಗು ಈ ತನಕ ೧೬ ಜನರಿಗೆ ತಗಲಿ ೧೨ ಮಂದಿ ಮಡಿದಿದ್ದಾರೆ.

ಮಿ। ಜೆರೊಮ್ ಸಲ್ಡಾನರ–ಅಧ್ಯಕ್ಷತೆಯಲ್ಲಿ ಮಿಲಾಗ್ರಿಸ್ ಇಗರ್ಜೆಯ ಬಳಿ ಸಭೆಯೊಂದು ಜರಗಿದಾಗ, ಶ್ರೀಗಳಾದ ಎಂ. ಎಸ್. ಶ್ರೀಪ್ಸ, ದಿ। ಬ। ಪಿ. ಸಿ. ಲೋಬೊ, ಡಾ। ಜೆ. ಸಿ, ಸಾಲ್ಡಾನ್ಹ—ಮೊದಲಾದವರು ಕಾಂಗ್ರೆಸ್ ಪ್ರತಿಜ್ಞಾ ಪತ್ರಕ್ಕೆ ಸಹಿಹಾಕಿದರು.

ಪ್ರಕಟಣೆ.

ಶ್ರೀ ಕಾವುಡಿ ಗ್ರಾಮದ ಮಾನಂಬಳ್ಳಿ ನಾಗ್ಗ ಸೆಟ್ರ ಹೆಮ್ಮಗ ಕುಪ್ಪಯ್ಯ ಸೆಟ್ಟಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ—ನಮ್ಮ ಅಳಿಯ ಸಂತಾನದ ಕುಟುಂಬದ ಅಡಳ್ತೆದಾರನಾದ ಸುಮಾರು ೮೦ ವರ್ಷ ಪ್ರಾಯದ ರಾಮಣ್ಣ ಸೆಟ್ಟಿಯೆಂಬವನು ಇತ್ತೀಚೆಗೆ ಸುಮಾರು ೨೦ ದಿನಗಳಿಂದ ಹುಚ್ಚು ಹಿಡಿದು, ತನ್ನ ಆಡಳ್ತೆ ಹಕ್ಕಿನ ವಳಗಿರುವ ಆಸ್ತಿಗಳನ್ನು ಸಿಕ್ಕಿದವರಿಗೆಲ್ಲಾ ಬರೆದು ಹಾಕುತ್ತೇನೆಂಬದಾಗಿ ಹೇಳುತ್ತಾ ತಿರುಗಾಡುತ್ತಿದ್ದಾನೆ. ಇದನ್ನು ಕೇಳಿದ ಕೆಲವರು ಧರ್ಮಕ್ಕೆ ಬರೆಯಿಸಿಕೊಂಡರೆ ಏನಾಗುತ್ತದೆ, ಮತ್ತು ಹಾಗೆ ಬರೆಯಿಸಿಕೊಂಡರೆ ಇವನ ಬಡ ಕುಟುಂಬವು ಸಿವಿಲ್ ವ್ಯವಹರಣೆ ಮಾಡಲಿಕ್ಕೆ ಸಮರ್ಥರಲ್ಲ ಎಂಬದಾಗಿ ತಿಳಿದು ಬರಸಿಕೊಳ್ಳಬೇಕೆಂಬದಾಗಿ ಆಲೋಚಿಸುತ್ತಾರೆ ಎಂಬುದಾಗಿ ತಿಳಿದು ಬರುತ್ತದೆ. ಹಾಗೆ ಆ ಹುಚ್ಚನಿಂದ ಏನನ್ನೇ ಆದರೂ ಬರೆಯಿಸಿಕೊಂಡಲ್ಲಿ ಅದು ಅಳಿಯ ಸಂತಾನ ಕಟ್ಟಳೆಯ ಪ್ರಕಾರ ಸಿಂಧುವಾಗತಕ್ಕದಲ್ಲ. ಈ ವರುಷದ ಗೇಣಿಯನ್ನು ಆತನೇ ವಸೂಲು ಪಡೆದು ಅನಾವ್ರಯ ಮಾಡಿ ತೀರ್ವೆಗೆ ಮನೆ ಜಪ್ತಿ ಆಗಿಯದೆ. ಸುಮಾರು ೩೦ ವರುಷಗಳ ಹಿಂದೆ ಈಗಿನಂತೆಯೇ ಅವನಿಗೆ ಹುಚ್ಚು ಹಿಡಿದು ಅಲೆದಾಡುತಿರುವವನನ್ನು ಕುಟುಂಬದವರು ಮತ್ತು ಹೆಂಡತಿ ಮನೆಯವರು ಹಿಡಿದು ಬ್ರಹ್ಮಾವರ ಡಾಕ್ಟರ್ ಶ್ರೀ. ಶೇಷಗಿರಿ ರಾಯರಿಂದ ಗುಣಪಡಿಸಿರುತ್ತೇವೆ. ಈ ಬಾರಿಯಲ್ಲಿ ಅದೇ ರೀತಿ ಹುಚ್ಚು ಹಿಡಿದಿರುತ್ತದೆ. ಈ ಹಿಂದೆ ಹೆಂಡತಿಗೆ ಕೊಟ್ಟ ಆಸ್ತಿಗಳನ್ನೆಲ್ಲಾ ದೇವರಿಗೆ ಹೇಳುತ್ತೇನೆಂಬದಾಗಿ ಹುಚ್ಚಿನಿಂದ ಹೇಳುತ್ತಾ ತಿರುಗಾಡುತ್ತಾನೆ. ಈ ಹಿಂದೆಯೂ ಇನ್ನು ಮುಂದೆಯೂ ಆತ ಹೇಳಿದ್ದು ಯಾವುದೇ ಆಗಲಿ, ಯಾವ ತರದ ರಿಕಾರ್ಡೇ ಆಗಲಿ ಎಷ್ಟಕ್ಕೂ ಸಿಂಧುವಾಗತಕ್ಕದಲ್ಲ.

ಕುಪ್ಪಯ್ಯ ಶೆಟ್ಟಿ ರುಜು.

11 3-1946. ಪೋಸ್ಟ್- ಬಾರಕೂರು.

NOTICE

In the Court of the District Munsif of Mangalore.

R. I. A. No. 306/46 in O. S. 214/45.

Between–

Lalithamma —Plaintiff

and

B N. Srinivasa Rao-Defendant

To

B N. Anantha Rao, son of Narnappayya, Kolambe Village, Mangalore Taluk-Proposed Defendant.

Take notice that the above petition to implead you as a supplemental defendant stands posted before this Court on 16—3—46 and you are hereby informed that you may appear on that date and file your objections, if any; otherwise, the petition will be proceeded with exparte.

Mangalore, 6—3—1946. } **U. Rama Rao,** Vakil for Plaintiff.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ನರ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ [illegible], ¼ ರಾತ್ಲ 2-12-0.

ಎಲ್ಲಾ ತಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ: ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾರಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಂತ ಔಷಧಿ ರವಾನಿಸಲಾಗುವುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಭಾಷಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ತನರ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

'ಬಹದೂರ'

ಕಬ್ಬಿನ ಗಾಣಗಳು



ಗಟ್ಟಿಮುಟ್ಟಾದ ರಚನೆ,

ಉತ್ತಮದರ್ಜೆಯ ಕೈಗಾರಿಕೆ

ಕ್ರಯ ರೂ. 430/-

ಬ್ರಿಟಿಷ್ ಇಂಡಿಯ

ಎಂಜನಿಯರಿಂಗ್ ಕಂ.

ಬೊಂಬಾಯಿ 10.

ಮುಷ್ಕರ ಪ್ರವಾಹದ ಮೂಲವೆಲ್ಲಿ?

(೩ನೇ ಪುಟದಿಂದ)

ಕ್ತವಾಗಿ ಖಂಡಿಸಬಹುದು. 'ಮಂಗಳೂರು ಮತ್ತು ಉಡುಪಿಯ ಮಗ್ಗ ಕೆಲಸಗಾರರಿಗೆ 3 ತಿಂಗಳ ಬೋನಸು ಸಿಗಬೇಕು.' 'ಉಡುಪಿಯ ಬೀಡಿ ಕೆಲಸಗಾರರಿಗೆ ಎರಡಾಣೆ ಕೂಲಿ ಹೆಚ್ಚಬೇಕು' ಎಂಬ ಬೇಡಿಕೆಗಳಲ್ಲಿ ಮೋಸ್ಕೋದ ಕೈವಾಡವಿದೆಯೆ?' ಎಂದವರು ಸವಾಲು ಹಾಕಬಹುದು. 'ನೀವು ಮಂಗಳೂರಿನ ಅಥವಾ ಉಡುಪಿಯ ಮಜೂರ-ಮಾಲಕರೊಗಿನ ಸಂಬಂಧ ಮತ್ತು ಲಾಭ-ನಷ್ಟಗಳ ತುಲನೆಯೊಂದನ್ನೇ ಮಾಡಿ ಮುಷ್ಕರ ಹೂಡಿಸಿರುವಿರಾ? ಮತ್ತು ಆ ಸಂಬಂಧದ ಜಗಳವೆಬ್ಬಿಸುವಾಗ ನಿಮ್ಮ ಕಾರ್ಯಾಚರಣೆಗಳನ್ನು ಸ್ಥಳೀಯ ಸ್ಥಿತಿಗತಿ ಗ್ರಮತಿಗಳಿಗೇನೇ ಹೊಂದಿಸಿರುವಿರಾ? ಎಂದು ನಿಮ್ಮ ಮನಸ್ಸಾಕ್ಷಿಯನ್ನೇ ಪ್ರಶ್ನಿಸಿಕೊಳ್ಳಿ' ಎಂಬುದೇ ಅವರಿಗುತ್ತರ. ಅವರ ಮಜೂರರು ಕಾರ್ಖಾನೆಗಳಲ್ಲಿ ಕೆಲಸಗಾರರಾಗಿರಬೇಕು; ಸಂಘಗಳಲ್ಲಿ ಸೈನಿಕರಾಗಿರಬೇಕು. 'ಮ್ಹಾಲಕ' ಎಂದರೆ 'ನರಭಕ್ಷಕ ಹುಲಿ' ಎಂಬ ಭಾವನೆ ಅವರಲ್ಲಿರಬೇಕು ಮಾಲಕನಿಂದ ನ್ಯಾಯದಾನವಾದಾಗ 'ನಾವು ವಿಜಯ ಪಡೆದು ಒಂದು ಹೆಜ್ಜೆ ಮುಂದಿಟ್ಟೆವಾದ್ದರಿಂದ ಮುಂದಿನ ಹೆಜ್ಜೆಯನ್ನು ನಿರ್ಧರಿಸಬೇಕು' ಎಂಬ ಭಾವನೆ ವಹಿಸಬೇಕು:- ಹೀಗೆ ಮುಂದೊತ್ತಿಯೇ ಜನತಾ ರಾಜ್ಯ ಸ್ಥಾಪಿಸುವ ಭರವಸೆ ಕಮ್ಯೂನಿಸ್ಟರಿಗಿರುವಂತಿದೆ. ಮೇಲ್ಗಡೆ ಕೊಟ್ಟ ಕಾರಣಗಳ ಮೇಲಿಂದ ದ. ಕ. ದ ಮಾಲಿಕರು ಶ್ರೀಮಂತ ವರ್ಗಕ್ಕೆ ಸೇರುವಂಥವರಲ್ಲ. ಆದ್ದರಿಂದ 'ಜನತಾ ರಾಜ್ಯದ ಹೋರಾಟ'ವೆಂದು ಭಾವಿಸಿ ಅವರೊಡನೆ ಕಾದಾಡುವದೆಂದರೆ, ಕತ್ತಲೆಯಲ್ಲಿ ಕಳ್ಳನೆಂದು ಭಾವಿಸಿ ಕಾವಲಿನವನಿಗೆ ಹೊಡೆದಂತೆಯೇ ಸರಿ. ಇಷ್ಟೊಂದು ಜ್ಞಾನ ಕಮ್ಯೂನಿಸ್ಟರಿಗಿಲ್ಲವೆ? ಇದೆ. ಆದರೆ ಕಮ್ಯೂನಿಸ್ಟನು ಆ ಜ್ಞಾನವನ್ನು ಉಪಯೋಗಿಸಬಾರದೆಂಬ ಬಹಿಷ್ಕಾರವೇ ಇದೆ. ಯಾರೂ ಸ್ಥಳೀಯ ತಪ್ಪು ನಿವಾರಣೆಗಾಗಿ-ಅಥವಾ ಸ್ಥಳೀಯ ಮಜೂರರ ಹಿತ ಸಾಧನೆಗಾಗಿ- ಕಮ್ಯೂನಿಸ್ಟ ಆಗಲಾರರು. ಭಾರತದ ಸ್ಥಿತಿಗತಿಯ ಸೂಕ್ಷ್ಮ ಪರಿಚಯವುಳ್ಳವನೊಬ್ಬನಿಗೆ, ಈ ವಾತಾವರಣದಿಂದಾಗಿ ಒಬ್ಬನೇ ಒಬ್ಬ 'ಕಮ್ಯೂನಿಸ್ಟ' ಹುಟ್ಟುವದು ಅಸಾಧ್ಯ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಸಮತಾವಾದಿಗಳು, ಜನತಾವಾದಿಗಳು, ಕ್ರಾಂತಿವಾದಿಗಳು ಇಲ್ಲಿ ಅಗತ್ಯವಾಗಿ ನಿರ್ಮಾಣಗೊಂಡಾರು.-ಆದರೆ ಇಂದು ನಮ್ಮಲ್ಲಿರುವ 'ಕಮ್ಯೂನಿಸ್ಟ'ರಂಥವರು ಮಾತ್ರ ಇಲ್ಲಿಯ ಪ್ರೇರಣೆಯಿಂದಲೇ ಹುಟ್ಟಲಾರರು. ಇವರು ಇದ್ದಾರಾದರೆ ಹೊರಗಿನ ಸೂತ್ರವನ್ನು ಆಧರಿಸಿಯೇ! ಅವರು ಮಾಡುವದೆಲ್ಲವೂ ಹೊರಗಿನ ಪ್ರೇರಣೆಯಿಂದಲೇ. ಈ ವಾದವನ್ನು ಕೆಲವು ನಿದರ್ಶನಕೊಟ್ಟು ಸಮರ್ಥಿಸಿಕೊಳ್ಳದಿದ್ದರೆ ಹುಸಿ ಆರೋಪ ಹೊರಿಸಿದ ಅಪವಾದ ಬಂದೀತು. ಯಾಕಂದರೆ ಮೋಸ್ಕೋ ಮತ್ತು ಭಾರತೀಯ ಕಮ್ಯೂನಿಸ್ಟರೊಳಗಿನ ರಿಕಾರ್ಡು ಸಿಕ್ಕಿ ಸಂಬಂಧವೇನೂ ಇರಲಾರದು.

ಮೋಸ್ಕೋ ಮೇಲಿನ ಅಂಧಶ್ರದ್ಧೆ

ಶುದ್ಧ ಗಾಂಧೀವಾದೀಗಳಿಗೆ ವಾರ್ಧಾ ಹೇಗೋ, ಇಡೀ ಜಗತ್ತಿನ ಕಮ್ಯೂನಿಸ್ಟರಿಗೆ ಮೋಸ್ಕೋ ಹಾಗೆ. ಅವರು 'ಗಾಂಧಿಜೀ ತಪ್ಪು ಮಾಡುವಂತಿಲ್ಲ' ಎಂದರೆ ಇವರು 'ಸ್ಟ್ಯಾಲಿನನಿಂದ ಪ್ರಮಾದವಾಗುವಂತಿಲ್ಲ' ಎಂಬ ನಂಬಿಕೆ ವಹಿಸಿದ್ದಾರೆ. ಇದಕ್ಕೆ ಕೇವಲ ನಂಬಿಕೆಯೊಂದೇ ಆಧಾರವಲ್ಲ. 'ಕಮ್ಯೂನಿಸ್ಟ್' ಪಕ್ಷ ಎಂಬುದು ಯಾವ ರಾಜ್ಯದಲ್ಲೇ ಇರಲಿ; ಆದರ ಗುರಿ ಇಡೀ ಲೋಕದಲ್ಲಿ ಮಜೂರ ರಾಜ್ಯಭಾರವಾಗಬೇಕೆಂಬುದೇ. ಸ್ವತಂತ್ರ ರಾಷ್ಟ್ರವೊಂದರಲ್ಲಿ ಬಹುಶೇಕವಾಗಿ ಈ ಪಕ್ಷವೇ ನ್ಯಾಯವಾದಿ ಪಕ್ಷ. ಆದರೆ ಭಾರತದಂತಹ ಗುಲಾಮ ರಾಷ್ಟ್ರದಲ್ಲಿರುವ ಕಮ್ಯೂನಿಸ್ಟರು ಇಲ್ಲಿಯ ಸ್ಥಿತಿಗತಕ್ಕಂತೆ ಸ್ವರಾಜ್ಯ ಮೊದಲು ಎಂದೊಪ್ಪಿ, ಆ ಮೊದಲ ಪ್ರಯತ್ನದಲ್ಲೇ ತೊಡಗಿದಲ್ಲಿ, ಅವರಾಗ 'ಕಮ್ಯೂನಿಸ್ಟ್' ಅನ್ನಿಸುವಂತಿಲ್ಲ. ಕಮ್ಯೂನಿಸ್ಟ ಆಗಿ ಇರುವವರ ಸರ್ವ ಪ್ರಥಮ ಧ್ಯೇಯವೇ ಕೂಲಿಗಾರ ರಾಜ್ಯ ಸ್ಥಾಪನೆಯೆಂದಾದ ಮೇಲೆ ಅವರು 'ಸ್ವರಾಜ್ಯವಾದಿ'ಗಳಲ್ಲ. ಕಮ್ಯೂನಿಸಮೇ ಸರಿಯೆನ್ನುವಂತೆ ಮಾಡಿದ ಮಿಕ್ಕ ರಾಷ್ಟ್ರಗಳಲ್ಲಿರುವ ಸ್ವಾತಂತ್ರ್ಯ ಇಲ್ಲಿಲ್ಲವಾದರೂ ಕಮ್ಯೂನಿಸ್ಟರು ಇಲ್ಲಿದ್ದಾರೆ. 'ಕೆಲಸಗಾರರ ರಾಜ್ಯಭಾರ' ಇರುವ ಒಂದು ಮಾದರಿ ರಾಷ್ಟ್ರ ರಶ್ಯ; ಪ್ರಥಮತಃ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ ಕಮ್ಯೂನಿಸ್ಟರು ನಿರ್ಮಾಣಗೊಂಡುದು ಕೂಡಾ ರಶ್ಯದ ಪ್ರೇರಣೆ. ಸಹಾಯಗಳಿಂದಲೇ. ಆದರೆ ಇಡೀ ಜಗತ್ತಿನ ಕಮ್ಯೂನಿಸ್ಟರ ಕೇಂದ್ರ ಸಂಸ್ಥೆಯಾಗಿದ್ದ 'ಕೊಮಿಂಟರ್ನ್'ನ್ನು ಆ ೧೯೪೩ರ ಪರಿಸ್ಥಿತಿಗನುಗುಣವಾಗಿ ಸ್ಟ್ಯಾಲಿನ್ 1943ರಲ್ಲಿ ಬರ್ಖಾಸ್ತು ಪಡಿಸಿಕೊಂಡ. ತೋರುವಿಕೆಯ ಸಂಬಂಧ ಅಲ್ಲಿಗೆ ಹರಿಯಿತು; ಆದರೆ ಯಾವುದೂ ಎಳ್ಳಷ್ಟು ಅಲುಗಾಡಿದುದಿಲ್ಲ. ಗಾಂಧಿಜೀ ಕಾಂಗ್ರೆಸಿನ ನಾಲ್ಕಾಣೆ ಸದಸ್ಯತನವನ್ನೂ ಬಿಟ್ಟು ಸಂಬಂಧ ಕಡಿದುಕೊಂಡಂತೆಯೇ ಆಯಿತು! ಲೋಕದ ಸರ್ವ ರಾಷ್ಟ್ರಗಳ ಕಮ್ಯೂನಿಸ್ಟರಿಗೆ ಮೋಸ್ಕೋದ ಮೇಲಿನ ಆಕರ್ಷಣೆ ಹೆಚ್ಚಿತು—ಹೃದಯ ಸಂಬಂಧ ಬಿಗುವಾಯಿತು— ಹೊರತು ಸಡಲಿದುದಿಲ್ಲ. ಮೋಸ್ಕೋ ಮರ್ಜಿ ಹೇಗೋ ಜಗತ್ತಿನ ಎಲ್ಲಾ ಕಮ್ಯೂನಿಸ್ಟರ ಮಾತು, ವರ್ತನೆ ಹಾಗೆ! ಬ್ರಿಟಿಷ್ ಸರಕಾರದ ಕಡೆಗೆ ವಹಿಸುವ ಧೋರಣೆಯಿಂದಾರಂಭಿಸಿ, ಉಡುಪಿ ಬೀಡಿ ಮಾಲಿಕನ ಇದಿರಾಗಿಯೂ ಅದೇ ಮರ್ಜಿ-ಮೋಸ್ಕೋ ಪ್ರೇರಣಾನುಸಾರ!

(ಮುಂದುವರಿಯುವುದು.)

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಒಪರೇಟಿವ್ ಬೇಂಕ್ ಲಿಮಿಟೆಡ್,
ಮಂಗಳೂರು.

ಏಲಂ ನೋಟೀಸು.

ಇದೇ ಬರುವ ಮಾರ್ಚ ತಾ. 19ನೇ ಮಂಗಳವಾರ ಪೂರ್ವಾಹ್ನ ಘಂಟೆ 11ಕ್ಕೆ ಮೂಲ್ಕಿ ಪ್ರಯಾಣಿಕರ ಬಂಗ್ಲೆಯಲ್ಲಿ ಪೆಜಮಾಡಿಯಲ್ಲಿರುವ ಕೆಳಗಿನ ಆಸ್ತಿಯನ್ನು ಬಹಿರಂಗವಾಗಿ ಏಲಂ ಮಾಡಲಾಗುವುದು. ಬೇಂಕಿನ ಅಧ್ಯಕ್ಷ ಶ್ರೀ. ಎಮ್. ಶಿವರಾಯರು ಏಲಂ ನಡೆಸುವರು. ಕ್ರಯಕ್ಕೆ ಪಡೆಯಲು ಅಪೇಕ್ಷೆಯುಳ್ಳವರು ಏಲಂ ಸಮಯ ಹಾಜರಿದ್ದು ಡಿಪಾಸಿಟ್ಟಿನಲ್ಲಿ ಭಾಗವಹಿಸಬೇಕಾಗಿ ಅಪೇಕ್ಷಿಸಲಾಗುತ್ತದೆ. ಡಿಪಾಸ್ಟನ್ನು ರೂ. 2000/- ದಿಂದ ಆರಂಭಿಸಲಾಗುವುದು. ಏಲಮಿನಲ್ಲಿ ಪಡೆಕೊಂಡವರು ಡಿಪಾಸಿಟ್ಟು ಮೊಬಲಗಿನ ನಾಲ್ಕನೆಯ ಒಂದಂಶವನ್ನು ಕೂಡಲೆ ನಗದಾಗಿ ಪಾವತಿ ಮಾಡಬೇಕು. ಮತ್ತು ಆ ಮೇಲೆ 15 ದಿನಗಳೊಳಗೆ ಕ್ರಯಸಾಧನ ಮಾಡಿಕೊಳ್ಳಬೇಕು. ಇದಕ್ಕೆ ತಪ್ಪಿದರೆ ಸದರಿ ಸ್ಥಳವನ್ನು ಪುನಃ ಏಲಂ ಮಾಡಿ ಬೇಂಕಿಗೆ ಉಂಟಾಗಬಹುದಾದ ನಷ್ಟವನ್ನು ಏಲಮಿನ ದಿನ ಪಾವತಿ ಮಾಡಿದ ಐವಜಿನಿಂದ ವಜಾ ಮಾಡಲಾಗುವುದು. ಕ್ರಯ ಸಾಧನದ ಖರ್ಚುಗಳನ್ನು ಕ್ರಯಕ್ಕೆ ಪಡೆಕೊಳ್ಳುವವರೇ ವಹಿಸಬೇಕು.

ಆಸ್ತಿಯ ವಿವರ

ಮಂಗಳೂರು ತಾಲೂಕು ಪೆಜಮಾಡಿ ಗ್ರಾಮಕ್ಕೆ ಸೇರಿದ

ಸರ್ವೆ ನಂಬ್ರ	ಕಿಸಂ	ವಿಸ್ತೀರ್ಣ	ತೀರ್ವೆ
189 1B	ಪುಂಜ	50 ಸೆಂಟ್ಸು	0—6—0

ಈ ಸ್ಥಳ ಮತ್ತು ಅದರಲ್ಲಿರುವ ಮಂಚು ಛಾವಣಿ ಕಟ್ಟೋಣ ವಗೈರೆ.

ಮಂಗಳೂರು, 5 3 46.

ಯು. ರಾಂ ಶಂಕರರಾವ್ ರಾವ್,
ಕಾರ್ಯದರ್ಶಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಬಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟುಕು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ವರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಶಕ್ತ್ಯವಿಹೀನ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ
Ayurveda Oushadalaya GADAG.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ -- ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ

ಹೊಟ್ಟೆನೋವು, ವಾಂತಿ, ಅಪಚನ, ಕಾವು, ಮೈನೋವು, ಹಲ್ಲುನೋವು, ಮಕ್ಕಳ ರೋಗ ... ಇತ್ಯಾದಿ ಎಲ್ಲಾ ಚಿಲ್ಲರೆ ಬೇನೆಗಳನ್ನು

ಜನೇರಿಯನ್ ಜೀವನ ಮಿಕ್ಶ್ಚರ್ ನಿಶ್ಚಯವಾಗಿ ...

ಎಮ್. ಜನೇರಿಯನ್ ಮತ್ತು ಕಂ.
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ೨.

AGAINST DIABETES
&
all its dreadful results
Consult Specialists:
Dr. Alvas' Research Institute, FAJIR
S. KANARA



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೀಕೂ ನಿಲ್ಲುವದು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮುರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು ಕೆಮ್ಮು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩ ೬ ೦; ೫ ೧೨ ೦ ಮತ್ತು ೧೦ ೨ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್ & ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ಪನವಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.





Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	0	6	0
2	ಸಾಮುದ್ರಿಕ ಶಾಸ್ತ್ರ	0	8	0
3.	ಬಾಲ ರಾಮಾಯಣ	0	5	0
4.	ಸುಕನ್ಯಾ ಚರಿತ್ರೆ	0	5	0
5.	ಕೊಳಲು ಕೃಷ್ಣ	0	8	0
6.	ಗುರುಪೀರಗಳ ಅವನತಿ	0	8	0
7.	ದ್ವೈತಮತ ಖಂಡನೆ	0	6	0
8	ಧರ್ಮಸಂಕಟ	0	4	0
9	ಪೂರೂರವ	0	8	0
10.	ನಿಶ್ಚಯ ಜ್ಞಾನ	0	8	0
11.	ವಿದ್ಯಾರಣ್ಯ ಕಾವ್ಯಂ	1	0	0
12.	ಚಂದ್ರಗುಪ್ತ ಚಕ್ರವರ್ತಿ	1	0	0
13.	ಸ್ವದೇಶಿ	0	4	0
14.	ಹರಿಜನ ಸೇವೆ	0	4	0
15.	Gauthama the Buddha	0	8	0
16.	ಪ್ರಾರ್ಥನೆ	0	2	0
17	ಹಿಂದೀ ಪಹಲಿ ಪೋತಿ	0	2	0
18	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣ ಭಾಷಾ ಪುರಾಣಗ್ರಂಥ)	0	4	0
19.	ಭಾರತ ಗೀತಾಂಜಲಿ .	0	2	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ

ತುಳು ಪುಸ್ತಕಗಳು

ತುಳು ಸಾಹಿತ್ಯ1	1	0	0
ಕೃಷ್ಣರಾಜಿ ಪರ್ಸಂಗೊ	1	0	0
ತುಳುವಾಲ ಬಲಿಯೇಂದ್ರೆ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮರ್ವಾಳತ್ತ್ ಮರ್ವಾಯಿ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಗತೆ	0	2	0
ಮಿತ್ಯ ನಾರಾಯಣ ಕತೆ	1	0	0
ಸತೀ ಕಮಲೆ	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ

ಬೆಲೆ: 2—8—0. **ದಪ್ಪವಾದ ಹೊದಿಕೆಯುಳ್ಳದ್ದು.**

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.

ಬೆಲೆ: 3—0—0
(ದಪ್ಪವಾದ ಹೊದಿಕೆಯುಳ್ಳದ್ದು)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪಿ. ಎ. ಪೈ ಬ್ರದರ್ಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. **SILVER JUBILEE YEAR** ರಜತೋತ್ಸವದ ವರ್ಷ. **Estd. 1921** ಸ್ಥಾಪನೆ.

ನವಯುಗ

NAVAYUGA

ವರ್ಷ ೨೫ ವಾರ ೨೯ | ಪ್ರತಿ ಗುರುವಾರ ಹೊರಡುವ ಸಚಿತ್ರ ವಾರಪತ್ರಿಕೆ | Vol 25 No. 29

Founder **SRI A. B. SHETTY.**

ಉಡುಪಿ ● **21-3-1946** ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ ತಲೆನೋವು, ಶೀತ, ನೋವು, ಉಳುಕು, ಸೆಳೆತ, ಗಂಟಲು, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ಇತ್ಯಾದಿ ನೋವುಗಳಿಗೆ ಉತ್ತಮ ಔಷಧಿ ಎಲ್ಲಾ ರೋಗಗಳಿಗೂ ಸಿದ್ಧ. ಸಧ, ಹುಳುಕಡ್ಡಿ ಮುಲಾಮು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

TO THOSE WHO DEMAND SOMETHING BETTER IN LIFE.

In the competitive world of to-day financial backing provides valuable opportunities whether it be in the field of education, commerce or industry. You are certainly desirous that your children should have better opportunities in life.

Ambitious parents like you have found our Children's Endowment Policies suitable for that purpose.

THE CANARA MUTUAL ASSURANCE COMPANY, LTD.,

Head Office **UDIPI, (S. India.)**

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸನೀರಿನಲ್ಲಿ ಸೇವಿಸಬೇಕು

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಷ್ಟ ಚಾರ್ಜ ಗಿರಾಕಿ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರ,—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ —ದಾವಣಗೇರಿ ಪ್ರೆಸ್. ಆರ್. ಎಲ್. ಶಿವ ಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY

ಹೊಸ ವರ್ಷದ ಅಭಿನಂದನೆ

ನಮ್ಮ ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ,

ನವವರ್ಷವು

ಆನಂದಕರವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

—ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು—

ಬೊಂಬಾಯಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ ಮತ್ತು ಮಧುರಾ

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for Diarrhoea, Stomachache Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು.—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್। ಎಸ್। ಶೆಟ್ಟಿ, ರಥಬೀದಿ, ಡಾ। ಪಿ। ಬಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M., ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

ANNOUNCEMENT

We have pleasure to announce the opening of a branch of the Bank at

MERCARA

ON 23-1-1946.

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ ಇದಕ್ಕಿಂತಲೂ ದ್ವಿಗುಣಿತ ವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಕಮ್ಯೂನಿಸ್ಟ್ ಧೋರಣೆ—ಲೇಖಾಂಕ ೨.

ಇವರೆಲ್ಲಾ 'ರಶ್ಯನ್ ಹಿಂದೀಯರು'!

'ವಿಚಾರಿ'ಯಿಂದ.

ವಿಚಾರವೆಂಬ ಮುಸುಕನ್ನು ಹಾಕಿಕೊಂಡು ಕಮ್ಯೂನಿಸ್ಟ್ ತತ್ವವನ್ನು ತಿವಿಯುವ ಖಡ್ಗಧಾರೆಯಿದು–ಎಂದು ಈ ಲೇಖನಮಾಲೆಗೆ ಯಾರೂ ಅಪಾರ್ಥ ಕಟ್ಟಬಾರದು. ಕಮ್ಯೂನಿಸ್ಟ್ ಕಾಮ್ರೇಡ್‌ಗಳು ಶ್ರಮ ಜೀವಿಗಳ ಮಧ್ಯದಲ್ಲೇ ತಮ್ಮ ಕಾರ್ಯರಂಗವನ್ನು ಆರಿಸಿಕೊಂಡಿದ್ದಾರೆ. ನಿಜವಾದ ರಾಷ್ಟ್ರ ಭಕ್ತನೊಬ್ಬನು ಬಹು ಸಂಖ್ಯಾಕರಾದ ಮಜೂರರನ್ನೇ ರಾಷ್ಟ್ರವೆಂದು ಭಾವಿಸಿಯಾನು. ಇಂದು ಈ ಜನ ಸಾಮಾನ್ಯರು ಪ್ರಚಲಿತ ರಾಜ್ಯಭಾರ ಮತ್ತು ಸಾಮಾಜಿಕ ಪದ್ಧತಿಗಳೆಂಬ ದ್ವಿಗಾಲೀ ಗಾಣದೊಳಗೆ ಸಿಕ್ಕಿ ನುಚ್ಚುನುರಿಯಾಗುತಿದ್ದಾರೆಂಬುದು ಖಂಡಿತ. ಹಿಂದೀ ಕಮ್ಯೂನಿಸ್ಟರು ಆ ಗಾಣವನ್ನು ಮುರಿದುಬಿಡಬೇಕೆಂದು ರಶ್ಯದ ಕತ್ತಿ ಸುತ್ತಿಗೆಯನ್ನೆತ್ತಿದ್ದಾರೆ. ಇಲ್ಲಿ 'ವಿಚಾರಿ' ಹೇಳುವದಿಷ್ಟೆ: "ನೀವು ಸುತ್ತಿಗೇ ಬಲವನ್ನು ಉಪಯೋಗಿಸುವಷ್ಟು ಸೂಕ್ಷ್ಮ ಬುದ್ಧಿಯನ್ನು ಪ್ರಯೋಗಿಸುವದಿಲ್ಲ. ಮೇಲೆ ಕೆಳಗೆ ನೋಡದೇನೇ ಆ ಗಾಣವನ್ನು ಬಡಿಯುತಿದ್ದೀರಲ್ಲಾ–ಅದರೊಳಗೆ ಸಿಕ್ಕಿ ಹೋಗಿರುವ ಆ ಜಂತುಗಳು ಉಳಿಯುವವೇ? ಹೊರಗಿನ ಸ್ಫೂರ್ತಿಯಿಂದಲ್ಲದೆ ಅವರ ಮೇಲಿನ ಮಮತೆಯಿಂದಲೇ ನೀವು ಮುಂದೆಬಂದಿದ್ದರೆ ಹೀಗೆ ಮಾಡುತಿದ್ದಿರಾ? ನಿಲ್ಲಿ ಶಕ್ತಿ ಯುಕ್ತಿ ಎರಡನ್ನೂ ಉಪಯೋಗಿಸಿ ಆ ಗಾಣಕ್ಕೆ ಆಹುತಿಯಾಗಿರುವವರನ್ನು ತಪ್ಪಿಸಿ, ಗಾಣದ ಮೇಲೆಯೇ ಅವರ ಅಧಿಕಾರ ಸ್ಥಾಪನೆ ಮಾಡಿರಿ. ಆ ಮೇಲೂ ಅದು ಯಾವ ಕೆಲಸಕ್ಕೂ ಬೇಕಾದ ನಿರುಪಯೋಗೀ ಯಂತ್ರವೆಂದಾದರೆ ಅದನ್ನು ಪುಡಿ ಮಾಡಿ ಕತ್ತಿ ಸುತ್ತಿಗೆ ತಯಾರಿಸೋಣ". ಈ ವಾದ ತಪ್ಪೆಂದಾದರೆ ಈ ಲೇಖಕನು ನಿಜಕ್ಕೂ ಅಪರಾಧಿ. ಇಷ್ಟೇ ಹೊರತು ಬೇರೆ ಉದ್ದೇಶ ಇಲ್ಲೆಂಬುದನ್ನು ತಿಳಿದುಕೊಂಡರಾಯಿತು. ಈಗ "ಮುಷ್ಕರ ಪ್ರವಾಹದ ಮೂಲ ಟ್ರಿಗ್ಗ–ಮೋಸ್ಕೋವಲ್ಲಿ' ಎಂಬ ವಾದಕ್ಕೆ ಕೆಲವು ನಿದರ್ಶನಗಳನ್ನು ಕೊಟ್ಟು ಮುಂದುವರಿಸೋಣ.

ಯುದ್ಧಾವಧಿಯಲ್ಲಿ

ಇಲ್ಲಿದೆ ಸ್ಪಷ್ಟ ದಾಖಲೆ:—ಜಾಗತಿಕ ಯುದ್ಧಾರಂಭಕ್ಕೆ ಮೊದಲು ಬ್ರಿಟನ್–ರಶ್ಯಗಳೊಳಗ ಜಗುಪ್ಸೆಯ ಮನೋಭಾವವಿತ್ತು. ಭಾರತೀಯ ಕಮ್ಯೂನಿಸ್ಟರೂ ಹಿಂದೀ ಸರಕಾರವನ್ನು ದ್ವೇಷಿಸಿ, ಅಲ್ಲಲ್ಲಿ ಗೊಂದಲವೆಬ್ಬಿಸುತಿದ್ದರು. ಯುದ್ಧಾರಂಭನಾದೊಡನೆ ರಶ್ಯದ ಧೋರಣೆ ಹೇಗಿತ್ತೋ ಹಿಂದೀ ಕಮ್ಯೂನಿಸ್ಟರ ಧೋರಣೆಯೂ ಹಾಗಿತ್ತು. ಜರ್ಮನಿ ರಶ್ಯದ ಮೇಲೆ ಬಿದ್ದು ಬ್ರಿಟನ್–ರಶ್ಯಗಳೊಂದಾದೊಡನೆ ಇಲ್ಲಿಯ ಕಮ್ಯೂನಿಸ್ಟರಿಗೆ ಯುರೋಪು ಯುದ್ಧವೇ 'ಜನತಾ ಯುದ್ಧ'ವಾಗಿ ಹೋಯಿತು! ಆ ಕಾಲದಲ್ಲಿ ಇಡೀ ಹಿಂದುಸ್ಥಾನದಲ್ಲಿ ಕಮ್ಯೂನಿಸ್ಟರು ಕೆಲಸಗಾರರಿಂದ ಮುಷ್ಕರ ಹೂಡಿಸಿದುದಿದೆಯೇ ಎಂದು ಶೋಧಿಸಬೇಕು; ಇಲ್ಲವೇ ಇಲ್ಲ. ಮಜೂರರು ಈಗಿನದಕ್ಕಿಂತಹೆಚ್ಚಿನ ಕಷ್ಟ ನಷ್ಟಗಳಿಗೀಡಾಗಿದ್ದರೂ, 'ಜನತಾ ಯುದ್ಧ–ಯುದ್ಧ ಕಾರ್ಯಕ್ಕೆ ಹಾನಿ ಕೂಡದು' ಎಂಬುದರಿಂದ ಅವರು ನ್ಯಾಯಬದ್ಧ ಮುಷ್ಕರಗಳನ್ನಾದರೂ ಆಗ ತಡೆ ಹಿಡಿದಿದ್ದರು. ಮಂಗಳೂರು, ಉಡುಪಿಗಳಲ್ಲಿ ಇಂದು ಆರಂಭವಾಗುತ್ತಿರುವ ಮುಷ್ಕರಗಳಿಗಿಂತ ಬಲವಾದ ಕಾರಣಗಳು ಯುದ್ಧಾವಧಿಯಲ್ಲಿ ಇರುತಿದ್ದರೂ ಆಗ ಜಿಲ್ಲೆಯಲ್ಲೆಲ್ಲೂ ಮುಷ್ಕರ ನಡೆದುದಿಲ್ಲ. ಕಾಂಗ್ರೆಸಿನ ಆಗೋಸ್ತು ನಿರ್ಧಾರವನ್ನೂ ಜನತಾ ಚಳವಳಗಳಿಗಂತೂ ಕಮ್ಯೂನಿಸ್ಟರಿಟ್ಟ ಅಡ್ಡಗಾಲನ್ನು ಎಂದೂ ಮರೆಯಲಾಗುವದಿಲ್ಲ. ಈಗ ಯುದ್ಧ ಮುಗಿದು ಇಂಗ್ಲಾಂಡು–ರಶ್ಯಗಳೊಳಗೆ ವ್ಯಾಪಾರಿಕ ಜಗಳಗಳೆದ್ದಿವೆ—ಕಮ್ಯೂನಿಸ್ಟರಿಗೂ ಇಲ್ಲಿ ಮುಷ್ಕರ ಹೂಡುವ ಹುರುಪೆದ್ದಿದೆ. ಇಂದಿನ ಪರತಂತ್ರ ಅಥವಾ ನಾಳೆಯ ಸ್ವತಂತ್ರ ಭಾರತದ ಮೇಲೆ ರಶ್ಯಾ ಬೀಳುತ್ತದಾದರೆ ಇಲ್ಲಿಯ ಕಮ್ಯೂನಿಸ್ಟರೆಲ್ಲಾ ರಶ್ಯನರೆಂದುಭಾವಿಸಬೇಕು.

ಅಂತೂ 'ಹಿಂದೀ ಕಮ್ಯೂನಿಸ್ಟ್' ಎನ್ನುವದಕ್ಕಿಂತ 'ರಶ್ಯನ್ ಹಿಂದೀಯ' ಎನ್ನುವದೇ ವಾಸಿ; 'ಆಂಗ್ಲೋ–ಇಂಡಿಯನ್' ಪದಕ್ಕಿಂತ ನಾಲ್ಮಡಿ ಸತ್ಯವಾದ ಹೆಸರಿದು. ಈ ಕಮ್ಯೂನಿಸ್ಟ್ ತಾನು ರಶ್ಯನ್ ಪ್ರಜೆಯೆಂಬಂತೆ ವರ್ತಿಸುತ್ತಾನೆ. ಇದಕ್ಕಿಂತಲೂ ಕಠೋರವಾದ ಆರೋಪವನ್ನಿಸುವ, ಆದರೆ ಸತ್ಯವಾದ ಮಾತು–ರಶ್ಯನ್ ರಾಷ್ಟ್ರೀಯ ಹಿತವೊಂದನ್ನೇ ಆತ ಸಾಧಿಸುತ್ತಾನೆ.

ಎಲ್ಲೆಲ್ಲೂ ಒಂದೇ ರೋಗ!

ಭಾರತದಲ್ಲಿರುವ ಕಮ್ಯೂನಿಸ್ಟರು ಮಾತ್ರ ವಿದೇಶೀಯರಾಗಿರುವದಲ್ಲ ಇಡೀ ಲೋಕದ ಪ್ರತಿಯೊಂದು ರಾಷ್ಟ್ರದಲ್ಲಿರುವ ಕಮ್ಯೂನಿಸ್ಟರ ಹಣೆಬರೆಹವೂ ಇದೇ. ಯಾವ ಕಡೆಯಲ್ಲಿರುವ ಕಮ್ಯೂನಿಸ್ಟನಾದರೂ ತನ್ನ ಕಾಲಡಿಯಲ್ಲಿರುವದನ್ನು ಕೈಯಿಂದ ಹೆಕ್ಕಿಕೊಳ್ಳುವವನಲ್ಲ–ದೂರದ ರಶ್ಯವನ್ನು ಕಣ್ಣಿನಿಂದ ನೋಡುತ್ತಾ ನಿಲ್ಲುವವನು. ಆ ನೋಟಕ್ಕನುಸಾರವಾಗಿ ಇಲ್ಲಿ ಹೆಜ್ಜೆಯಿಡುವವನು; ಹಾಗೆ ಕುರುಡು ಹೆಜ್ಜೆಯಿಟ್ಟು ಅಡ್ಡಾದಿಡ್ಡಿ ನಡೆದು ಸಿಕ್ಕಿದಕ್ಕೆಲ್ಲಾ ಢಿಕ್ಕಿ ಹೊಡೆಯುವವನು! ಇಟಲಿಯ ಕಮ್ಯೂನಿಸ್ಟರು ಮಾಡಿದ್ದೇನು? ಮುಸಲನಿ ನಿರ್ನಾಮವಾದ ಮೇಲೆ–ಅವನ ಸೇನಾನಿ ಮಂಡಲದ ನಾಯಕ ಆಗಿದ್ದು, ಫೇಸಿಸ್ಟ್ ಕಠೋರತೆಯ ಮಟ್ಟಿಗೆ 'ಸವಾಯಿ ಮುಸಲನಿ' ಎನ್ನಿಸಿದ್ದ ಮಾರ್ಶಲ್ ಬೋಡೊಗ್ಲಿಯೋನನ್ನು ಸಮರ್ಥಿಸಲು ರಾಷ್ಟ್ರೀಯ ಕಾರಣವೇನಾದರೂ ಅವರಿಗಿದ್ದಿತೆ? ಒಂದು ಕಾಡ ಮಧ್ಯದಲ್ಲಿ ಇಟಲಿಯ ಕಮ್ಯೂನಿಸ್ಟರಿಗೆ ಬಲಿಬಿದ್ದ ಅನಾಥ ಮುಸಲನಿಯು ಹುಲಿಯ ಹಿಂಡಿಗೆ ಸಿಕ್ಕಿದ ದನದಂತಾದ. ಅವನನ್ನು ಕೊಂದು, ಮರಕ್ಕೆ ನೇತಾಡಿಸಿ, ಉಗುಳುವಷ್ಟು ರೋಷ ಕಮ್ಯೂನಿಸ್ಟರಿಗಿದ್ದಿತು. ಆದರೆ ಆದೇ ಫೇಸಿಸ್ಟ್ ಹಟ್ಟಿಯ ಮತ್ತೊಂದು ದನ ಬೊಡೊಗ್ಲಿಯೋನ ಕೆಚ್ಚಲಿಗೆ ಬಾಯಿ ಹಾಕಿ ನಿಲ್ಲಲು ಈ ಕಮ್ಯೂನಿಸ್ಟ್ ಹುಲಿಗಳು ತಯಾರು! ಮುಸಲನಿ–ಬೊಡೊಗ್ಲಿಯೋರೊಳಗಿನ ಇಂತಹ ವ್ಯತ್ಯಾಸಕ್ಕೆ ಕಾರಣವೆಂದರೆ ಮುಸಲನಿ ರಶ್ಯದ ಮೇಲೆ ಬಿದ್ದಿದ್ದ–ಬೋಡೊಗ್ಲಿಯೋನ ಮಂತ್ರಿ ಮಂಡಲಕ್ಕೆ ರಶ್ಯವೊಪ್ಪಿಗೆ ಕೊಟ್ಟಿತು; ಇಷ್ಟೆ! ಅಂತೆಯೇ ಇಟಲಿಯ ಒಂದು ಭಾಗವಾದ ಟ್ರೀಸ್ಟೆಯನ್ನು ಕತ್ತರಿಸಿ ಮಾರ್ಶಲ್ ಟಿಟೋನ ಯುಗೊಸ್ಲಾವೇಕಿಯಕ್ಕೆ ಸತ್ತಿ ಹಾಕಿದಾಗ ಇಟಲಿಯಾನರೆಲ್ಲಾ ಅದನ್ನು ವಿರೋಧಿಸಿದರು; ಅಲ್ಲಿಯ ಕಮ್ಯೂನಿಸ್ಟರು ಮಾತ್ರ, ಇದಕ್ಕಪವಾದ. ಕಾರಣವೆಂದರೆ ಅದೇ–ಮಾರ್ಶಲ್ ಟಿಟೋನ ಬೆಂಗಡೆಯಲ್ಲಿ ರಶ್ಯವಿದ್ದುದೊಂದೇ.

ಚೀನೀ–ಜರ್ಮನ್ ಕಮ್ಯೂನಿಸ್ಟರು

ಇನ್ನು ಚೀನೀ ಕಮ್ಯೂನಿಸ್ಟರ ಸ್ವರೂಪವೆಂತಹದೆಂಬುದನ್ನು ನೋಡೋಣ. ಚೀನದ ಪಾಲಿಗೆ 1941 ಎಂದರೆ ಅದರ ಅದೃಷ್ಟ ನಿರ್ಣಾಯಕ ಇಸವಿ. ಜಾಪಾನು ಅದನ್ನು ಜೀವ ಮಾತ್ರ ಉಳಿಸಿದ್ದ ಕಾಲ. ಚೀನೀ ಧಾನ್ಯದಿಂದ ಹುಟ್ಟಿದ ಒಂದೇ ಒಂದು ಹನಿ ರಕ್ತವಾದರೂ ಜಾಪಾನೀ ದ್ವೇಷದಿಂದ ಕುದಿಯ ಬೇಕಾಗಿದ್ದ ಕಾಲ. ಇದೇ ಸಮಯದಲ್ಲಿ ರಶ್ಯವು ಜಾಪಾನಿನೊಡನೊಂದು ಸಂಧಾನ ಕರಾರು ಮಾಡಿಕೊಂಡಿತು, ಜರ್ಮನಿಯೊಂದಿಗೆ ಈ ಕಡೆಯಿಂದ ಜಾಪಾನೂ ತನ್ನ ಮೇಲೆ ಬೀಳದಂತೆ ಮಾಡುವದಕ್ಕಾಗಿ, ಆ ಅಪಾಯ ನಿರೀಕ್ಷಣೆಯಿಂದ ಹೆದರಿ ಹೋಗಿದ್ದ ರಶ್ಯಕ್ಕೆ ಆ ಕರಾರು ಮಾಡಿಕೊಳ್ಳುವ ಅಗತ್ಯವಿತ್ತು. ಕರಾರಿನಲ್ಲಿದ್ದುದಿಷ್ಟೆ:— 'ಮಂಚೂರಿಯದ ಮೇಲಿನ ಜಾಪಾನೀ ಆಳ್ವಿಕೆಗೆ ರಶ್ಯವು ಒಪ್ಪಿಗೆ ಕೊಡುತ್ತದೆ. ಚೀನಾ–ಜಾಪಾನ್ ಯುದ್ಧದಲ್ಲಿ ರಶ್ಯವು ತಾಟಸ್ಥ್ಯ ವಹಿಸುತ್ತದೆ' ಆತ ಕಮ್ಯೂನಿಸ್ಟನೇ ಇರಲಿ, ಕಾಲವುರುಷನೇ ಇರಲಿ––ತಾನು ಚೀನದಲ್ಲಿ ಹುಟ್ಟಿದವನೆಂಬ ನೆನಪಾದರೂ ಇದ್ದ ಓರ್ವ ಚೀನೀಯನು ಇಂತಹ ಪ್ರಾಣಾಪತ್ತಿನ ಕಾಲದಲ್ಲಿ ಇಂತಹ ಕರಾರನ್ನು ಸಮರ್ಥಿಸುವ ಹಾಗುಂಟೆ? ಆದರೆ ಚೀನೀ ಕಮ್ಯೂನಿಸ್ಟರು ಅದನ್ನು ಶಿರಸಾವಹಿಸಿಕೊಂಡರು. ಅಲ್ಲಿಯ ಕಮ್ಯೂನಿಸ್ಟ್ ಪಕ್ಷವು ಈ ಕುರಿತು ಅಧಿಕೃತ ಸಮ್ಮತಿಯನ್ನು ಕೊಟ್ಟಿತು. ಇನ್ನು ಜರ್ಮನಿಯ ಕಡೆಗೆ ನೋಡೋಣ. ಈ ಯುದ್ಧ ಸಂಭವದ ಪ್ರಾಣಾವಧಿನೋವನ್ನು ಜರ್ಮನ್ ಪ್ರಜೆಗಳನುಭವಿಸಿದುದು ಜರ್ಮನಿಯ ಮೂಲ ನೆಲವನ್ನೇ ತುಂಡರಿಸಿ ರಶ್ಯಾ ಮತ್ತು ಪೋಲೆಂಡುಗಳಿಗೆ ಹಂಚಿ ಹಾಕಿದಾಗ. ಇದಕ್ಕಾಗಿ ಮಿಕ್ಕೆಲ್ಲಾ ಜರ್ಮನರ ಕಣ್ಣಿನಿಂದ ದುಃಖಾಶ್ರು ಸುರಿದರೆ, ಜರ್ಮನ್ ಕಮ್ಯೂನಿಸ್ಟರು ಹರ್ಷಾಶ್ರುಗರೆದರು. ಕಾರಣ—ಜರ್ಮನಿಯ ಒಂದು ತುಂಡು ಹೋದುದು ಪ್ರತ್ಯಕ್ಷ ರಶ್ಯಕ್ಕೆ; ಮತ್ತೊಂದು ತುಂಡು ಪೂರ್ತಿಯಾಗಿ ರಶ್ಯದ ಬೆನ್ನಿಗೆ ಬಿದ್ದ ಪೋಲೆಂಡಿಗೆ. ಆದ್ದರಿಂದ ಅದು ಸ್ವತಃ ತಮಗೆ ಸೇರಿದಂತೆ ಎಂದು ಜರ್ಮನಿಯ ಕಮ್ಯೂನಿಸ್ಟರು ಭಾವಿಸಿದರೇ ಹೊರತು ತಮ್ಮಿಂದ ಕಳೆದು ಹೋಯಿತು ಎಂದು ನೆನಸಲಿಲ್ಲ. ಅವರು ಕಮ್ಯೂನಿಸ್ಟರು–ಜರ್ಮನರಲ್ಲ!

(೧೧ನೇ ಪುಟ ನೋಡಿರಿ)

CANARA BANK LIMITED

Estd: 1906

(Incorporated in British India. liability of Members Limited)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	2¼%
4 to 5 months	2¼%
6 to 9 months	2½%

Rates for Season Deposits of less than Rs 10000/- with a minimum of Rs 1000/- and in multiples of Rs. 500/- may be ascertained on application to our nearest branch.

CHAMPAE'S

Snow & Castrex

(Sole Distributers for(India.)

Prop: K. G. NAYAK,

Santhekatte, UDIPI, S. K.

ಬೇಕಾಗಿದ್ದಾರೆ

ರಂಗಭೂಮಿಯಲ್ಲಿ ಮತ್ತು ಚಲಚಿತ್ರದಲ್ಲಿ ಪಾರ್ಟನ್ನು ವಹಿಸಲು ರೂಪವತಿಯರಾದ ಮತ್ತು ಗಾಯನ, ನರ್ತನಗಳಲ್ಲಿ ಅಭಿರುಚಿಯುಳ್ಳ ಯುವತಿಯರು ಬೇಕಾಗಿದ್ದಾರೆ. ಭಾವಚಿತ್ರ ಸಮೇತ ಅರ್ಜಿಯನ್ನು ಬರೆಯತಕ್ಕದ್ದು. ಭಾವಚಿತ್ರವನ್ನು ಹಿಂದಕ್ಕೆ ಕಳುಹಿಸಲಾಗುವುದು. ಕಲಾಪ್ರೇಮಿಗಳಿಗೆ ಇದೊಂದು ಸುಸಂಧಿ. ಯೋಗ್ಯರಾಗಿ ಆರಿಸಲ್ಪಟ್ಟವರಿಗೆ ಉತ್ತಮ ಸಂಬಳವನ್ನು ಕೊಡಲಾಗುವುದು. ಕರೆಕಳುಹಿಸದ ಹೊರತು, ಸಮಕ್ಷಮ ಭೇಟಿ ನಿಷೇಧ. ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಿರಿ.

To

The Managing Director

New Karnataka Theatres

C/o Precision Radio & Electrical Mfg. Co.

No. 1. Ishwardas Mansion

Nana Chowk

Bombay 7

> ಸರ್ವಾಧಿಕಾರ, ಪೋಲಿಸು ರಾಜ್ಯಭಾರವಿರುವ ರಶ್ಯವು ಗಡಿ ವಿಸ್ತರಣಾ ಭ್ರಮೆಯಲ್ಲಿದೆ.
>
> —ಚರ್ಚಿಲ್.

ಚರ್ಚಿಲ್-ಸ್ಟಾಲಿನ್ ವಾಗ್ವಾದ.

ಯುದ್ಧೋನ್ಮತ್ತ, ಚಾಡಿಖೋರ, ಹುಚ್ಚ, ಒರಟು ಅಪ್ರಾಗತಿಕ—ಚರ್ಚಿಲ್ಲರಿಗೆ ಸ್ಟಾಲಿನರ ಉಡುಗೊರೆ.

> ಲೋಕದಲ್ಲೇ ಇಂಗ್ಲಿಷ್ ಭಾಷಾ ಭಕ್ತರ ಅಧಿಕಾರ ಸ್ಥಾಪಿಸಲೆದ್ದಿರುವ ಚರ್ಚಿಲ್ ಮತ್ತವರ ಮಿತ್ರರು ಹಿಟ್ಲರ್ ಮತ್ತವನ ಮಿತ್ರರಿಗೆ ಸಮಾನ.
>
> —ಸ್ಟಾಲಿನ್.

ಅಮೇರಿಕ ಸಂಚಾರದಲ್ಲಿರುವ ಬ್ರಿಟನಿನ ಹಳೆಯ ಹುಲಿ ಮತ್ತು ಜಗತ್ಪ್ರಸಿದ್ಧ ಖಂಡಿತವಾದಿ ಮಿ. ಚರ್ಚಿಲ್ಲರು ಅಲ್ಲಿಯ ಫುಲ್ಟೋನ್ ಎಂಬಲ್ಲಿತ್ತ ಭಾಷಣದಲ್ಲಿ ಬ್ರಿಟಿಷ್-ಅಮೇರಿಕಗಳು ಏಕರೂಪೀ ಸಂಘಟನೆಗೊಂಡು ರಶ್ಯದ ಆಕ್ರಮಣಕ್ಕೆ ತಡೆ ಹಾಕಬೇಕು. ಪೋಲೆಂಡು, ಯುಗೋಸ್ಲೇವಿಯಾ, ರುಮೇನಿಯಾ, ಹಂಗೇರಿ, ಆಸ್ಟ್ರಿಯಾ ಮೊದಲಾದ ಪೂರ್ವ ಯುರೋಪು ರಾಷ್ಟ್ರಗಳು ರಶ್ಯದ ಸರ್ವಾಧಿಕಾರದ ಹಿಡಿತದೊಳಗಿವೆ. ಅಲ್ಲೆಲ್ಲಾ ಅನಾಯಕತ್ವ ಮತ್ತು ಪೋಲಿಸ್ ರಾಜ್ಯವಿದೆ–ಎಂದು ಮುಂತಾಗಿ ಕಠೋರ ಟೀಕೆ ಮಾಡಿದ್ದರು. ಈ ಸಂಬಂಧವಾಗಿ ರಶ್ಯನ್ ಸರಕಾರದ ಮುಖ ಪತ್ರದಂತಿರುವ 'ಪ್ರಾವ್ದಾ'ದ ಬಾತ್ಮೀದಾರನ ಪ್ರಶ್ನೆಗಳಿಗೆ ಉತ್ತರವಾಗಿ ಮಾರ್ಶಲ್ ಸ್ಟಾಲಿನರಿತ್ತ ಕೆನ್ನೇತಾಡನದಂತಹ ಖಂಡ ತುಂಡ ಉತ್ತರವಿದು:

ಯುದ್ಧಾಪೇಕ್ಷಿ ಚರ್ಚಿಲ್!

"ಅಮೇರಿಕದಲ್ಲಿ ಮಿ. ಚರ್ಚಿಲ್ಲರಿತ್ತಿದ್ದ ಇತ್ತೀಚಿಗಿನ ಭಾಷಣಕ್ಕೆ ನೀವು ಕಟ್ಟುವ ಕಿಮ್ಮತ್ ಯಾವುದು?" ಎಂದು ಪ್ರಶ್ನಿಸಲ್ಪಟ್ಟಾಗ ಸ್ಟಾಲಿನರಂದರು: "ಮಿತ್ರ ರಾಷ್ಟ್ರಗಳೊಳಗೆ ವಿಷ ಬೀಜವನ್ನು ಬಿತ್ತಿ ಅವುಗಳ ಐಕ್ಯ ಭಂಗಮಾಡುವ ಅಪಾಯಕಾರಿಯೆಂದೇ ನಾನದಕ್ಕೆ ಕಟ್ಟುವ ಬೆಲೆ. ಚರ್ಚಿಲ್ಲರು ಏಕಾಕಿಯಲ್ಲ. ಅವರಿಗೆ ಬ್ರಿಟನಿನಲ್ಲಿ ಮಾತ್ರವಲ್ಲ; ಅಮೇರಿಕದಲ್ಲಿಯೂ ಮಿತ್ರರಿದ್ದಾರೆ. ಚರ್ಚಿಲ್ ಮತ್ತು ಅವರ ಮಿತ್ರರಿಗೆ ಹಿಟ್ಲರ್ ಮತ್ತು ಅವನ ಮಿತ್ರರ ಹೋಲಿಕೆಯಿರುವದನ್ನು ಗಮನಿಸಬೇಕು. ಚರ್ಚಿಲ್ಲರೀಗ ಒಬ್ಬ ಯುದ್ಧ ಭಿಕ್ಷುಕನ ಸ್ಥಾನ ಸ್ವೀಕರಿಸಿದ್ದಾರೆ. ಜನಾಂಗ ತತ್ವವನ್ನಾಧರಿಸಿಯೇ ಹಿಟ್ಲರನು ಯುದ್ಧಾಪೇಕ್ಷೆ ಮಾಡಿದ್ದ. ಜರ್ಮನಿ ಭಾಷೆ ಮಾತಾಡುವವರು ಮಾತ್ರವೇ ನಿಜವಾದ ರಾಷ್ಟ್ರವೆಂದು ಆತ ಘೋಷಿಸಿದ್ದ. ಅವನಂತೆಯೇ ಚರ್ಚಿಲ್ಲರು ಕೂಡ ಇಂಗ್ಲಿಷ್ ಮಾತಾಡುವ ರಾಷ್ಟ್ರಗಳಿಗೆ ಮಾತ್ರ ಪೂರ್ತಿ ಬೆಲೆ ಬರಬೇಕು-ಅವು ಬಾಕಿ ಜಗತ್ತನ್ನು ಆಳಬೇಕು ಎಂಬಂತಹ ಜನಾಂಗ ತತ್ವವನ್ನಾಧರಿಸಿ ತನ್ನ ಯುದ್ಧಾಕಾಂಕ್ಷೀ ಚಳವಳ ಹೂಡಿದ್ದಾರೆ. ಸ್ಪಷ್ಟವಾಗಿ ಹೇಳುವದಾದರೆ ಚರ್ಚಿಲ್ ಮತ್ತವರ ಮಿತ್ರರು ಇಂಗ್ಲಿಷ್ ಮಾತಾಡದ ಎಲ್ಲಾ ರಾಷ್ಟ್ರಗಳಿಗೂ ಒಂದು ಸಮರ ಶರ್ತವನ್ನೇ ಒಡ್ಡಿದ್ದಾರೆ. ಆದರೆ ಸ್ವರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿಯೇ ಈ ಕಠಿಣ ಹೋರಾಟದಲ್ಲಿ ರಾಷ್ಟ್ರಗಳು ರಕ್ತಸ್ರವಿಸಿದ್ದುವು. ಹಿಟ್ಲರರ ಬದಲಿಗೆ ಚರ್ಚಿಲ್ಲರ ಅಧಿಕಾರ ಬರಬೇಕೆಂದು ಅವು ಇಂತಹ ತ್ಯಾಗ ಮಾಡಿದ್ದಲ್ಲ.

ಈ ಯುದ್ಧೋನ್ಮತ್ತ ಗೆಲ್ಲಬಹುದೆ?

"ಈಗ ತಾನೇ ಮುಗಿದಿರುವ ದ್ವಿತೀಯ ಯುದ್ಧದ ನಂತರ ಪೂರ್ವ ಯುರೋಪಿನ

ವಿರುದ್ಧವಾಗಿ ಹೊಸ ಸೇನಾ ಚಟುವಟಿಕೆ ಹೂಡುವ ತಮ್ಮ ಕಾರ್ಯದಲ್ಲಿ ಚರ್ಚಿಲ್ ಮತ್ತವರ ಮಿತ್ರರು ಗೆಲ್ಲಬಲ್ಲರೇ ಎಂಬುದನ್ನು ನಾನರಿಯೆ. ಮಿಲಿಯಾವಧಿ ಸಾಮಾನ್ಯ ಜನರು ಶಾಂತಿ ತತ್ವದ ಪಹರೆ ಮಾಡುತ್ತಿರುವಾಗ ಚರ್ಚಿಲ್ ಪಂಗಡದ ಈ ಉದ್ದೇಶ ಸಾಧನೆಯಾಗುವದು ಶಕ್ಯವಿದೆ. ಒಂದೊಮ್ಮೆಗೆ ಹಾಗಾದ ಪಕ್ಷದಲ್ಲೂ ಅವರು ಈ ಹಿಂದೆ 26 ವರುಷಕ್ಕೆ

ಖಾಲಿ ಕಾಗದದ ತುಂಡೆಂದೂ ಸೋವಿಯೆಟ್ ವಿರೋಧಕ್ಕೊಂದು ಸರದಿಯಾಗಿ ಅದನ್ನು ಉಪಯೋಗಿಸಿ ಗೊಂದಲ ನಿರ್ಮಾಣಮಾಡಬಹುದೆಂದೂ ಚರ್ಚಿಲ್ಲರ ಮಾತಿನ ಅರ್ಥವಿರುವಂತಿದೆ.

ಚಾಡಿ ಅಸಭ್ಯತೆ, ಮತ್ತು ಅಚಾತುರ್ಯ!

"ರಶ್ಯದ ಒತ್ತಿನಲ್ಲಿರುವ ರಾಷ್ಟ್ರಗಳ ಪ್ರಜಾಸತ್ತೆಯ ಕುರಿತು ಚರ್ಚಿಲ್ಲರ ಭಾಷ

ಇಂದ್ರ ವೈಭವ!

ಶಾಂತಿ ಭವನ

ಈಗಾಗಲೇ ನಿಮ್ಮ ಮಕ್ಕಳ ಮದುವೆಗೆ ಅಣಿಮಾಡಿರಿ!

ವಿದ್ಯುದ್ದೀಪಗಳಿಂದಲಂಕೃತವಾಗಿ ಶೋಭಾಯಮಾನವಾದ

ವಿವಾಹ ಮಂದಿರ

ನಿಮಗೆ ಬೇಕಾದ ಚವಲೋಪನಯನ, ಮದುವೆ, ಹೋಮ, ಶಾಂತಿ ವಿಧವಿಧ ಉತ್ಸವಗಳಿಗೆ ಇಂದೇ ಬರೆಯಿರಿ

ಹಿಂದೂ, ಜೈನ, ಬೌದ್ಧ, ಮುಸಲ್ಮಾನ್, ಕ್ರೈಸ್ತ, ಸಿಕ್, ಪಾರ್ಸಿ ಸರ್ವಜಾತಿಯವರಿಗಾಗಿ

ಬಡವರ ಬಂಧು! ರಾಜ ಸತ್ಕಾರ!!

ಶಾಂತಿನಿಕೇತನ ಕುರಾಡಿ

ಬ್ರಹ್ಮಾವರ ದ. ಕನ್ನಡ.

ದ. ಇಂಡಿಯಾ.

ಮೊದಲೊಮ್ಮೆ ಸವೆ ಬಡಿಯಲ್ಪಟ್ಟಂತೆಯೇ ಈ ಬಾರಿಯೂ ಅಪ್ಪಳಿಸಲ್ಪಡುವದು ಖಂಡಿತ. ಇಂಗ್ಲಿಷ್ ಮಾತಾಡದ, ಆದರೆ ಜಗತ್ತಿನ ಜನಸಂಖ್ಯೆಯ ಬಹುಸಂಖ್ಯಾಕರನ್ನೊಳಗೊಂಡ ರಾಷ್ಟ್ರಗಳು ಹೊಸ ಗುಲಾಮತ್ವಕ್ಕೆ ಬಲಿ ಬೀಳಲೊಪ್ಪುವಂತಿಲ್ಲ. ಪೂರ್ವ ಕಟ್ಟುನಿಟ್ಟಿನ ಅಪ್ರಾಗತಿಕ ಮನುಷ್ಯ ಚರ್ಚಿಲ್ಲರಿಗೆ ಈ ಸ್ಪಷ್ಟ ಹಾಗೂ ಸರ್ವಶ್ರುತ ಗುಟ್ಟು ತಿಳಿಯದಿರುವದೇ ಅವರ ದುರದೃಷ್ಟಕ್ಕೆ ಕಾರಣ. ಚರ್ಚಿಲ್ಲರ ಗುರಿ ನಿಸ್ಸಂದೇಹವಾಗಿಯೂ ಯುದ್ಧ; ರಶ್ಯದೊಡನೆ ಯುದ್ಧಕ್ಕೆಳಬೇಕೆಂಬ ಕರೆ ಅವರದ್ದು. ಆದರೆ ಪ್ರಕೃತ ಬ್ರಿಟನ್ ಮತ್ತು ರಶ್ಯಗಳೊಳಗಿರುವ ಕರಾರಿಗನುಸಾರವಾಗಿ ಈ ಕಾರ್ಯಕ್ರಮವು ಅಸಂಗತವಿದೆ. ನಿಜ; ನಾಜಿಕರನ್ನು ಮಂಚಿಸುವದಕ್ಕಾಗಿ ರಶ್ಯಾ-ಬ್ರಿಟನ್ ಪರಸ್ಪರ ಸಹಾಯ ಮತ್ತು ಮೈತ್ರಿ ಒಪ್ಪಂದವು ಇನ್ನೊಂದು 20 ವರುಷಕ್ಕೆ ಬೆಳೆಯಬೇಕೆಂದು ಚರ್ಚಿಲ್ಲರು ಆದೇ ಬಾಯಿಯಲ್ಲಿ ಹೇಳಿರುವದು ನಿಜ ಇವೆರಡು ವಿಷಯಗಳು ಜತೆಗೂಡುವಂತಹವಲ್ಲ. ಆ ಕರಾರು ಪತ್ರವೆಂಬುದು ಒಂದು

ಣದ ಭಾಗವಂತೂ ಕೇವಲ ಸೋವಿಯೆಟಿನ ಸಂಬಂಧವಲ್ಲಾಡಿರುವ ಚಾಡಿ; ಬಚ್ಚಾಳತನದ ಮತ್ತು ವ್ಯವಹಾರ ಚಾತುರ್ಯಾಭಾವವುಳ್ಳ ತರಳೇಮಾತು. ವಾರ್ಸಾ, ಬರ್ಲಿನ್, ಪ್ರೇಗು, ವಿಯೆನ್ನಾ, ಬುಡಾಪೆಸ್ಟ, ಬೆಲ್‌ಗ್ರೇಡ್, ಬುಚಾರೆಸ್ಟ್, ಸೋಫಿಯಾ ಮುಂತಾದ ಈ ಪ್ರಸಿದ್ಧ ನಗರಗಳೆಲ್ಲಾ ಸೋವಿಯೆಟಿನ ಗಡಿಯೊಳಗಾಗಿವೆ ಎಂದು ಚರ್ಚಿಲರನ್ನುತ್ತಾರೆ. ಇವುಗಳ ಮೇಲೆ ರಶ್ಯದ ವರ್ಚಸ್ಸು ಮಾತ್ರವಲ್ಲ, ಪ್ರತ್ಯಕ್ಷ ಮೋಸ್ಕೋದ ಹತೋಟಿ ಹೆಚ್ಚುತ್ತಿದೆ ಎಂದು ಅವರ ಅಂಬೋಣ, 'ವಿಸ್ತಾರಗೊಳ್ಳಬೇಕೆಂದು ಸೋವಿಯೆಟಿಗಿರುವ ಮಿತಿ ಮೇರೆಯಿಲ್ಲದ ಆತುರಗಳು' ಎಂದು ಅವರಿದನ್ನು ಸಂಬೋಧಿಸಿದ್ದಾರೆ. ರಶ್ಯ ಮತ್ತದರ ನೆರೆರಾಷ್ಟ್ರಗಳ ಕುರಿತು ಚರ್ಚಿಲ್ಲರಾಡಿರುವ ಅಸತ್ಯ ಚಾಡಿಯಿದು ಎಂಬುದನ್ನು ತೋರಿಸಲು ಪ್ರಯಾಸವೇ ಬೇಡ. ವಿಯೆನ್ನಾ ಮತ್ತು ಬರ್ಲಿನುಗಳಲ್ಲಿ ಸೋವಿಯೆಟ್ ನಿಯಂತ್ರಣವಿದೆ ಎನ್ನುವ ಮಾತಂತೂ ಶುದ್ಧ ತಿಳಿಗೇಡಿತನ. ಅವು ಚತುರಾಷ್ಟ್ರಗಳ ನಿಯಂತ್ರಣ ಕಮಿಶನಿನ ಅಂಕೆಯಲ್ಲಿವೆ. ರಶ್ಯಕ್ಕಲ್ಲಿ ನಾಲ್ಕನೇ ಒಂದಂಶ ವೋಟುಮಾತ್ರವಿದೆ. ಕೆಲವರಿಗೆ ಅತಿಶಯೋಕ್ತಿಯಿಲ್ಲದೆ ಮಾತಾಡಲಿಕ್ಕೆನೇ ತಿಳಿಯದು. ಆದರೆ ಪ್ರತಿಯೊಂದಕ್ಕೂ ಒಂದು ಮಿತಿ ಬೇಕು.

ರಶ್ಯದ ಸ್ವರಕ್ಷಣಾ ಧೋರಣೆ

ಎರಡನೆಯದಾಗಿ ಆದೊಂದು ನೋಟವನ್ನು ಮರೆಯಬಾರದು. ಜರ್ಮನರು ಫಿನ್ಲೇಂಡ್, ಪೋಲೆಂಡ್, ರುಮೇನಿಯಾ, ಬಲ್ಗೇರಿಯ ಮತ್ತು ಹಂಗೇರಿಯ ಮೂಲಕವೇ ರಶ್ಯದ ಮೇಲೆ ಧಾಳಿ ನಡೆಸಿದ್ದರು. ಈ ರಾಷ್ಟ್ರಗಳಲ್ಲಿದ್ದ ಸರಕಾರಗಳು ರಶ್ಯಕ್ಕೆ ವಿರುದ್ಧವಿದ್ದುದರಿಂದಲೇ ಹೀಗಾಗಲು ಸಾಧ್ಯವಾಯಿತು. ಜರ್ಮನ್ ಆಕ್ರಮಣದ ಪರಿಣಾಮವಾಗಿ ರಶ್ಯವು ಸುಮಾರು ಏಳು ಮಿಲಿಯ ಜನರನ್ನು ಕಳಕೊಂಡಿತು. ಅರ್ಥಾತ್ ಬ್ರಿಟನ್-ಅಮೇರಿಕಗಳಿಗೆ ಒಟ್ಟಿಗೆ ಆದ ನಷ್ಟಕ್ಕಿಂತ ಎಷ್ಟೋ ಪಾಲು ಹೆಚ್ಚಿನ ನಷ್ಟ ರಶ್ಯಕ್ಕಾಯಿತು. ಈ ನಿಜ ಸ್ಥಿತಿಯನ್ನು ನುರೆಮಾರೆಮಾಡುವ ಬಯಕೆ ಕೆಲವರಲ್ಲಿರಬಹುದು. ಆದರೆ ಸೋವಿಯೆಟ್ ಯೂನಿಯನ್ ಅದನ್ನು ಸರ್ವಥಾ ಮರೆಯುವಂತಿಲ್ಲ. ಭವಿಷತ್ಕಾಲದಲ್ಲಿ ಇಂತಹ ಅಪಾಯ ಬಾರದಂತೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಈ ನೆರೆಯ ರಾಷ್ಟ್ರಗಳಲ್ಲಿ ತನ್ನಲ್ಲಿ ನಮ್ರತೆಯಿಡಬಲ್ಲ ಸರಕಾರಗಳೇ ಸ್ಥಾಪನೆಯಾಗುವಂತೆ ರಶ್ಯವು ನೋಡುವದರಲ್ಲಿ ಆಶ್ಚರ್ಯವೇನಿದೆ? ಸೋವಿಯೆಟ್ ಯೂನಿಯನಿನ ಈ ಹೆಜ್ಜೆ ಮತ್ತು ಭಾವನೆಯನ್ನೇ 'ವಿಸ್ತಾರಗೊಳ್ಳುವ ಆಶೋತ್ತರ'ವೆನ್ನುವ ದೋರ್ವನು -ಆತ ಹುಚ್ಚನಲ್ಲವಾದರೆ–ಕರೆಯುವದಾದರೂ ಹೇಗೆ?"

ಕಮ್ಯೂನಿಸಮಿನ ಅವಾಂತರ ಮತ್ತು ರಶ್ಯದ ನೆರೆಯ ರಾಷ್ಟ್ರಗಳಲ್ಲಿರುವ ಸರ್ವಾಧಿಕಾರಿತ್ವಗಳ ಕುರಿತು ಚರ್ಚಿಲ್ಲರು ಮಾಡಿರುವ ಟೀಕೆಯನ್ನು ಸ್ಟಾಲಿನರು ಕಠೋರವಾಗಿ ಖಂಡಿಸಿ, 'ಬ್ರಿಟನಿನಲ್ಲಿ ಲೇಬರ್ ಪಕ್ಷವೊಂದೇ ಅಧಿಕಾರದಲ್ಲಿದ್ದು ಮಿಕ್ಕ ಪಕ್ಷಗಳಿಗೆ ಆಡಳಿತೆಯಲ್ಲಿ ಭಾಗವಹಿಸುವ ಅವಕಾಶವಿಲ್ಲ. ಆದರೆ ಈ ರಾಷ್ಟ್ರಗಳಲ್ಲಿ ನಾಲ್ಕೈದು ಪಕ್ಷಗಳಿವೆ; ಎಲ್ಲಕ್ಕೂ ಆಳ್ವಿಕೆಯ ಅವಕಾಶವಿದೆ' ಎಂದಿದ್ದಾರೆ. ತಮ್ಮ ಹಸ್ತಕರಾದ ಅಪ್ರಾಗತಿಕರನ್ನು ಈ ರಾಷ್ಟ್ರಗಳಲ್ಲಿ ಸ್ಥಾಪಿಸುವ ಬಯಕೆ ಚರ್ಚಿಲ್ಲರದ್ದೆಂದೂ ಆರೋಪಿಸಿ, ಸಾಮಾನ್ಯ ಜನರ ಪ್ರಭಾವವೆಂತಹದೆಂಬುದನ್ನು ಚರ್ಚಿಲ್ಲರಿಗೆ ಚುನಾವಣೆಯಲ್ಲಾದ ಪರಾಭವದ ನಿದರ್ಶನ ಕೊಟ್ಟು ನೆನಪಿಗೆ ತಂದಿದ್ದಾರೆ.

ಚರ್ಚಿಲ್ಲರ ಉತ್ತರ

ಸ್ಟಾಲಿನರ ಖಡ್ಗಧಾರೆಯಂತಹ ಮಾತುಗಳಿಗೆ ನ್ಯೂಯೋರ್ಕಿನ ಔತಣ ಕೂಟವೊಂದರ ಭಾಷಣದಲ್ಲಿ ಮಿ. ಚರ್ಚಿಲ್ಲರಿಂದ ಮರುತ್ತರ ಬಂದಿದೆ, "ಯುದ್ಧವು ಅನಿವಾರ್ಯ ಅಥವಾ ಆಗತ್ಯವೆಂಬ ನಂಬಿಕೆ

ಯಲ್ಲಿ ನಾಸಿಲ್ಲ. ರಶ್ಯವನ್ನಾಳುವವರು ಸದ್ಯಸ್ಥಿತಿಯಲ್ಲಿ ಯುದ್ಧವನ್ನಪೇಕ್ಷಿಸುತಿದ್ದಾರೆಂದೂ ನಾನು ನಂಬುವದಿಲ್ಲ. ರಶ್ಯದ ಜನತೆಯ ಮೇಲೆ ನನಗಿರುವ ಸದಭಿಲಾಷೆ ಮತ್ತು ಗೌರವವನ್ನಾಗಲೀ, ರಶ್ಯವು ಸುರಕ್ಷಿತವಾಗಿದ್ದು ಅಭಿವೃದ್ಧಿ ಪಡೆಯಬೇಕು ಮತ್ತು ಜಾಗತಿಕ ಸಂಸ್ಥೆಯ ಮಹಾ ರಥದಲ್ಲಿ ಯೋಗ್ಯ ಸ್ಥಾನವದಕ್ಕಿರಬೇಕು ಎಂದು ನನಗಿರುವ ಆತುರವನ್ನಾಗಲೀ ತಗ್ಗಿಸುವ ಯಾವ ಮಾತನ್ನೂ ಬೇರೆಯವರಾಡಲು ನಾನು ಬಿಡುವಂತಿಲ್ಲ. ಆದರೆ ರಶ್ಯವು ಇದಕ್ಕನುಗುಣವಾಗಿ ವರ್ತಿಸುವದೋ ಇಲ್ಲವೋ ಎಂಬುದು, 1,80,000,000 ರಶ್ಯಾನರನ್ನೂ ಮಿಲಿಯಾವಧಿ ಸಂಖ್ಯೆಯ ಹೊರಗಿನವರನ್ನೂ ತಮ್ಮ ಮುಷ್ಟಿಯೊಳಗಿಟ್ಟುಕೊಂಡಿರುವ ಕೈಬೆರಳೆಣಿಕೆಯ ಅಲ್ಲಿಯ ಕೆಲವೇ ಮಂದಿ ಸಮರ್ಥರ ನಿರ್ಧಾರವನ್ನು ಹೊಂದಿಕೊಂಡಿದೆ. ಹಿಟ್ಲರ್ ಧಾಳಿಯಿಂದ ರಶ್ಯಕ್ಕಾಗಿರುವ ಭೀಕರ ನಷ್ಟವನ್ನು ಯಾರೂ ಮರೆತಿಲ್ಲ. ರಶ್ಯನ್ ಜನತೆಯ ಮೇಲೆ ಗಾಢ ಸಮಾನ-ಭೂತಿ-ಅವರೊಡನೆ ಸಹಕರಿಸಿ ವರ್ತಿಸಬೇಕೆಂಬ ಆತುರ—ಇಂಗ್ಲಿಷ್ ಭಾಷಾಭಕ್ತರಲ್ಲೆಲ್ಲೂ ಇದೆ. ಸೋವಿಯೆಟ್ ಸರಕಾರವು ಈ ಸದ್ಭಾವನೆಯ ಸಂದರ್ಭವನ್ನು ಉಪಯೋಗಿಸಿಕೊಳ್ಳುವ ಬದಲಿಗೆ ನಿರುತ್ಸಾಹಗೊಳಿಸುತ್ತಾದರೆ ಅದರ ಜವಾಬ್ದಾರಿಯು ಸಂಪೂರ್ಣವಾಗಿ ಅವರದ್ದೇ. ದೃಷ್ಟಾಂತಕ್ಕಾಗಿ ತಮಗೆ ಅಸಮ್ಮತವಾಗುವ ಭಾಷಣಗಳನ್ನು ನಿವಾರಿಸಿಕೊಳ್ಳುವ ಸದ್ದಾರಿ ಅವರ ಕಣ್ಣ ಮುಂದೆಯೇ ಇದೆ. ಅದು ಈಗ ತಾನೇ ತೆರೆಯಲ್ಪಟ್ಟಿರುವ-ಮುಂದಿನ ಹದಿನೈದೇ ದಿನಗಳೊಳಗಿನ-ಹಾದಿ.

ಕಷ್ಟಕ್ಕೆ ಮಿಕ್ಕ ಪ್ರತಿಫಲ ಪಡೆದಿದೆ.

ನಾನು ಮುಖ್ಯಾಧಿಕಾರಿಯಾಗಿದ್ದಾಗ, ಇರಾನಿನಲ್ಲಿದ್ದ ಸೇನೆಯನ್ನು ಹಿಂದೆಗೆದುಕೊಳ್ಳಲು ಒಂದು ಅವಧಿ ತಾರೀಕು ನಿಶ್ಚೈಸಿ ಅದರ ಸ್ವಾತಂತ್ರ್ಯವನ್ನೊಪ್ಪಿ ಬ್ರಿಟನ್ ರಶ್ಯಾ ಮತ್ತು ಇರಾನಿನೊಡನೆ ಒಪ್ಪಂದ ಮಾಡಿದ್ದಿತು. ಈ ಒಂದಿಗೆ ಟೆಹರಾನಿನಲ್ಲಿ ನನ್ನ, ಅಧ್ಯಕ್ಷ ರೂಸವೆಲ್ಟರ ಮತ್ತು ಸ್ಟಾಲಿನರ ಸಹಿಬಿದ್ದಿತ್ತು. ಕರಾರಿನನುಸಾರ, ಬ್ರಿಟನ್, ಅಮೇರಿಕಗಳು ಇಷ್ಟರಲ್ಲೇ ಇರಾನನ್ನು ಬಿಟ್ಟು ಬಂದಿವೆ. ಆದರೆ ರಶ್ಯವು ಅಲ್ಲಿಂದ ಕಾಲ್ತೆಗೆಯುವ ಬದಲಿಗೆ ಇನ್ನಷ್ಟು ಸೇನೆಯನ್ನಲ್ಲಿ ಹೊಗಿಸುತ್ತಿದೆ ಎಂಬ ಸುದ್ದಿಯೀಗ ಬರುತ್ತಿದೆ. ಇದೀಗ ಸಂಯುಕ್ತ ರಾಷ್ಟ್ರಗಳ ಭದ್ರತಾ ಕೌನ್ಸಿಲಿನಲ್ಲಿ ತೀರ್ಮಾನಗೊಳ್ಳುವಂತಾಗಲಿ. ಆ ತೀರ್ಮಾನವು ಮನ್ನಿಸಲ್ಪಡಲಿ ತನ್ನ ಯುದ್ಧ ಸಾಹಸಕ್ಕೆ ತಕ್ಕ ಬಹುಮಾನ ದೊರೆಯಲಿಲ್ಲವೆಂದು ರಶ್ಯ ವ್ಯಸನಿಸುವರೆ ಕಾರಣವಿಲ್ಲ ಅದಕ್ಕಾಗಿರುವ ನಷ್ಟ ಭಯಂಕರವಿದ್ದರೆ, ಅದಕ್ಕಾಗಿರುವ ಲಾಭವೂ ಅಮೋಘವಿದೆ. ಅದರ ಎಂದು ಲಪ್ಪತ ಶಕ್ತಿಯ ವೈರಿಗಳಾದ ಜರ್ಮನಿ ಮತ್ತು ಜಪಾನುಗಳು ಪತನಗೊಂಡಿವೆ. ಜಪಾನಂತೂ ಸಂಪೂರ್ಣವಾಗಿ ಅಮೇರಿಕನ್ ಶಸ್ತ್ರದಿಂದಲೇ ನಿಪಾತಗೊಂಡಿತು. ರಶ್ಯವು ಒಂದೇ ಒಂದು ಪೆಟ್ಟುಕೊಡದೆ ತಾನು 40 ವರುಷಗಳ ಮೊದಲು ಜಪಾನಿಗೆ ಬಿಟ್ಟುಕೊಟ್ಟುದನ್ನೆಲ್ಲಾ ಮರು ಸಂಪಾದಿಸಿತು. ಬಾಲ್ಟಿಕ್ ರಾಷ್ಟ್ರಗಳು, ಫಿನ್ಲೆಂಡಿನ ದೊಡ್ಡ ಭಾಗ, ರಶ್ಯಕ್ಕೆ ಸೇರಿ ಹೋಗಿವೆ. ಅದರ ಕರ್ಝೂನ್ ಲೈನ್ ಅಸ್ತಿತ್ವಕ್ಕೆ ಬಂದಾಗಿದೆ. ಡಾರ್ಡನೆಲ್ಸ್ ಕೊಲ್ಲಿಯಲ್ಲಿ ರಶ್ಯನ್ ಹಡಗುಗಳಿಗೆ ಸಂಚಾರ ಸ್ವಾತಂತ್ರ್ಯ ಪುನಃ ದೊರೆತುದನ್ನು ನಾನು ಸ್ವಾಗತಿಸಿದ್ದೆ. ಆದರೆ ಈಗ ರಶ್ಯಕ್ಕೆ ಅಷ್ಟೇ ಸಾಕಾಗುವದಿಲ್ಲವಂತೆ. ಕಾನ್ಸ್ಟೆಂಟಿನೋಪ್ಲಿನ ಮೇಲೆ ಅಧಿಕಾರ ನಡಿಸಲಾಗುವಂತೆ ಡಾರ್ಡನೆಲ್ಸ್ ಜಲಸಂಧಿಯಲ್ಲಿ ಅದಕ್ಕೊಂದು ಕೋಟೆ ಬೇಕಾಗಿದೆ. ಜಲಸಂಧಿಯನ್ನು ಎಲ್ಲರಿಗೂ ತೆರೆದಿಡುವ ಬದಲಿಗೆ ಒಂದು ರಾಷ್ಟ್ರಕ್ಕೆ ಅದನ್ನು ಮುಚ್ಚುವ ಅಧಿಕಾರಬೇಕೆಂಬುದೇ ಇದರ ಅರ್ಥ. ಇದೂ ಜಾಗತಿಕ ಭದ್ರತಾ ಕೌನ್ಸಿಲಿನಲ್ಲಿ ತೀರ್ಮಾನ ಹೊಂದಬೇಕು. ಈ ವಿಶೇಷ ಪರೀಕ್ಷೆ ಕೂಡಲೇ ನಡೆಯ ಬೇಕಾಗಿ ಬಂದಿದೆ.

ಅಮೇರಿಕಾಂಗ್ಲ ಅಭೇದ್ಯ ಸಂಬಂಧ

ಇತ್ತೀಚೆಗೆ ತಪ್ಪಭಿಪ್ರಾಯಗಳ ಪ್ರಸಾರವಾಗಿದೆ. ಒಂದೇ ಪಕ್ಷದ್ದಾದ್ದರಿಂದ ಸದ್ಯದ ಬ್ರಿಟಿಷ್ ಸರಕಾರವು ಸ್ವತಂತ್ರ ಪ್ರಜಾಪ್ರಭುತ್ವವಲ್ಲ ಎನ್ನುವದಕ್ಕಿಂತ ಹೆಚ್ಚಿನ ತಪ್ಪು ತಿಳುವಳಿಕೆ-ಪೋಲೆಂಡ್, ರುಮೇನಿಯ, ಬಲ್ಗೇರಿಯಾ ಮತ್ತಿತರ ಸರಕಾರಗಳಲ್ಲಿ ಹಲವು ಪಕ್ಷಗಳು ಸೇರಿವೆ ಎಂಬುದಕ್ಕಿಂತ ಹೆಚ್ಚಿನ ಅಪಾರ್ಥ—ಬೇರೊಂದಿದೆಯೇ? ಈ ಆರೋಪವು ಒಂದೇ ಪಕ್ಷವು ಅಧಿಕಾರನಿರ್ವಹಿಸುವ ಅಮೇರಿಕಕ್ಕೂ ಅನ್ವಯಿಸುತ್ತದೆ. ಆದರೆ ಪ್ರಜಾಪ್ರಭುತ್ವ ಸರಕಾರಗಳು ಸ್ವತಂತ್ರ ಚುನಾವಣೆಯನ್ನಾಧರಿಸಿವೆ ಎಂಬ ಸತ್ಯಸ್ಥಿತಿಯನ್ನೇ ಮರೆಯಲಾಗಿದೆ. ಕೇವಲ ಒಂದೇ ಪಕ್ಷದ ಉಮೇದ್ವಾರಗಳಿಗೆ ಅವಕಾಶವಿರುವ-ಮತದಾರನು ಗುಟ್ಟಿನಲ್ಲಿ ಮತದಾನ ಮಾಡಲಿಕ್ಕೂ ಇಲ್ಲದ-ಒಂದು ಚುನಾವಣೆಯನ್ನು ಮಾತ್ರ ಪ್ರಜಾಸತ್ತೆಯೆನ್ನುವದು ಅಸಾಧ್ಯ. ನಾನು ಬ್ರಿಟನ್-ಅಮೇರಿಕಗಳ ಸ್ವತಂತ್ರ ಸಹಜ ಮತ್ತ ನಿಕಟ ಸಂಬಂಧವನ್ನು ಅಪೇಕ್ಷಿಸಿದ್ದೆ. ಅದು ಅಗಲದಂತೆ ಮಾಡುವ ಶಕ್ತಿ ಪ್ರಪಂಚದಲ್ಲಿ ಯಾವುದಕ್ಕೂ ಇರಲಾರದು. ನಾಳೆ ಸೂರ್ಯನು ಮೂಡುವದೆಷ್ಟು ಸತ್ಯವೋ ಈ ಐಕ್ಯ ನಿರ್ಮಾಣವೂ ಅಷ್ಟೇ ಸತ್ಯ".

ಭಾರತದ ಭವಿಷ್ಯದ ಕುರಿತು ಮಿ. ಆಟ್ಲಿಯವರ ಆಶಾಜನಕ ಭಾಷಣ.

ಕಾಂಗ್ರೆಸ್ ಪ್ರಮುಖರಲ್ಲಿ ಸಮಾಧಾನ.

ಪ್ರಧಾನಿ ಅಟ್ಲಿ.

ಭಾರತಕ್ಕೆ ಈ ತಿಂಗಳಲ್ಲೇ ಬರಲಿರುವ ಬ್ರಿಟಿಷ್ ಮಂತ್ರಿ ಸಮಿತಿಯ ಸಂಬಂಧದ ಚರ್ಚೆಯ ವೇಳೆ ಕಾಮನ್ಸ್ ಸಭೆಯಲ್ಲಿ ತಾ. 15ರಲ್ಲಿ ಪ್ರಧಾನ ಮಂತ್ರಿ ಮಿ ಅಟ್ಲಿಯವರಿತ್ತ ಬೆಲೆಯುಳ್ಳ ಅಭಿಪ್ರಾಯದ ಸಾರಾಂಶವಿದು:—

ಸಮಿತಿಗೆ ಸ್ವಾತಂತ್ರ್ಯ

"ಈ ನಿಷ್ಟ ಮಂಡಲಿಗೆ ಸಾಧ್ಯವಿದ್ದಷ್ಟು ಸ್ವತಂತ್ರ ವರ್ತನೆಯ ಅಧಿಕಾರವನ್ನು ಕೊಟ್ಟು ಬಿಡಬೇಕೆಂಬುದೇ ಸರಕಾರದ ಉದ್ದೇಶ.

ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳ ಸಂ [illegible] ದಲ್ಲಿವೆ. ಅಲ್ಪ ಸಂಖ್ಯಾಕರು ನಿರ್ಭಯವಾಗಿ ಬಾಳುವ ನಡಿಸ ವಂತಾಗಬೇಕು ಇದಕ್ಕೆ ಪ್ರತಿಯಾಗಿ, ಬಹುಸಂಖ್ಯಾಕರ ಪ್ರಗತಿಗೆ ತಡೆಯಾಗಿ ಒಂದು ಅಲ್ಪ ಸಂಖ್ಯಾಕರ ವಿಶೇಷಾಧಿಕಾರ ಬೀಳುವಟಿಕ್ಕೆ ಮಾತ್ರ ನಾವು ಅವಕಾಶ ಕೊಡುವಂತಿಲ್ಲ. ತಮ್ಮನ್ನು ತಾವೇ ಆಳಕೊಳ್ಳುವ ಆಡಳಿತೆಯ ಹೊಣೆಗಾರಿಕೆಯನ್ನು ಅಲ್ಲಿ ಭಾರತೀಯರಿಗೆ ಬಿಟ್ಟು ಕೊಟ್ಟು ಅದೇ ಕಾಲದಲ್ಲಿ ಅಲ್ಪ ಸಂಖ್ಯಾಕರ ರಕ್ಷಣೆಯ ಹೊಣೆ ಮತ್ತು ಅವರ ಹೆಸರಿನಿಂದ ಅಲ್ಲಿ ತಲೆಹೊಗಿಸುವ ಅಧಿಕಾರವನ್ನು ಇಲ್ಲಿ ಇಂಗ್ಲಾಂಡಿನಲ್ಲಿ ಇಟ್ಟುಕೊಳ್ಳಲಾಗುವದಿಲ್ಲ. ಹೊಸ ರಾಜ್ಯಭಾರ ಪದ್ಧತಿಯ ಕ್ರಮ ನಿಯಮಗಳೆಲ್ಲಾ ಕಾರ್ಯತಃ ಜ್ಯಾರಿಗೆ ಬರುವ ಅವಧಿಯ ವರೆಗೆ ಹಿಂದುಸ್ಥಾನದಲ್ಲಿ ತಾತ್ಕಾಲಿಕ ಸರಕಾರವೊಂದನ್ನು ಸ್ಥಾಪಿಸುವ ಬಯಕೆ ನಮಗಿದೆ.

ಭವಿಷ್ಯವೊಂದನ್ನೇ ಭರವಸೆಯಿಂದ ನೋಡೋಣ

ಗತಕಾಲದ ಘಟನೆಗಳ ಸ್ಮರಣೆಯು ಹಾನಿಕರವಿದೆ ಕಳೆದು ಹೋದ ದೀರ್ಘಾವಧಿಯಲ್ಲಿ ಒಂದಲ್ಲೊಂದು ಸುಸಂದರ್ಭಗಳು ಆ ಪಕ್ಷ ಅಥವಾ ಈ ಪಕ್ಷದ ದೋಷಗಳಿಂದಾಗಿ ತಪ್ಪಿ ಹೋಗಿವೆ. ಎರಡು ಪಕ್ಷಗಳಿಂದಲೂ ತಪ್ಪುಗಳಾಗಿವೆ ಎಂದು 20 ವರುಷಗಳ ಅನುಭವ ಬಲದಿಂದ ನಾನು ಹೇಳಬಲ್ಲೆ. ಆದರೆ ಈ ಬಾರಿ ನಾವು ಹಿಂದೆ ನೋಡಿ ಜಗ್ಗುವದಕ್ಕಿಂದ ಭವಿಷ್ಯದ ಕಡೆಗೇನೇ ಕಣ್ಣಿಟ್ಟು ನೋಡುವದು ಮೇಲು. ಗತಕಾಲದ ಯೋಜನೆಗಳನ್ನು ಸದ್ಯಸ್ಥಿತಿಗೆ ಹೊಂದಿಸುವದು ಸರಿಯಲ್ಲ. 1946ರ ಹವಾಮಾನವು 1920, 1930, ಅಥವಾ 1942ರ ಹವಾಮಾನದಂತೆ ಕೂಡಾ ಇಲ್ಲ. ಹಿಂದಿನ ಘೋಷಣೆಗಳಿಗೆ ಕಡೆಗಣಿಸಲ್ಪಟ್ಟವೆ ಆ ಕಾಲದಲ್ಲಿ ಹಿಂದೀಯರು ತಮ್ಮ ಉಗ್ರ ಭಾವನೆಯನ್ನು ಪ್ರದರ್ಶಿಸುತಿದ್ದ ಶಬ್ದಗಳು ಕೂಡಾ ಈಗ ಮೂಲೆಪಾಲಾಗಿ ಹೊಸ ಶಬ್ದ ಮತ್ತು ಹೊಸ ಭಾವನೆಗಳು ಮುಂದೆ ಬಂದಿವೆ. ಯುದ್ಧ ಪರಿಣಾಮವಾಗಿ ಎಲ್ಲೆಲ್ಲೂ ಜನತಾ ಭಾವನೆ ಪ್ರಜ್ವಲಗೊಂಡಿದೆ. ಪ್ರಕೃತ ಹಿಂದುಸ್ಥಾನದಲ್ಲಿ-ಅಂತೆಯೇ ಏಶಿಯ ಖಂಡದಲ್ಲಿ-ರಾಷ್ಟ್ರೀಯತೆಯೆಂಬುದು ತೀವ್ರಗತಿಯಿಂದ ಬೆಳೆಯುವದಿರುವದಂತೂ ಖಂಡಿತ.

ಭಾರತದ ಉಪಕಾರ ಸ್ಮರಣೆ

ಅರಾಜಕತೆಗೆ ಪರಾಭವವೊದ್ದುವ ಮಹತ್ಕಾರ್ಯದಲ್ಲಿ ಕಳೆದ 25 ವರುಷಗಳೊಳಗೆ ಎರಡು ಬಾರಿ ಹಿಂದುಸ್ಥಾನವು ದೊಡ್ಡ ಪಾಲು ಪಡೆದಿದ್ದಿತೆಂಬುದು ಈ ಸಂದರ್ಭದಲ್ಲಿ ಸ್ಮರಿಸಬೇಕಾದ ಸಂಗತಿ. ಅಂದ ಮೇಲೆ, 400 ಮಿಲಿಯ ಜನರಿರುವ ಒಂದು ರಾಷ್ಟ್ರ—ಸ್ವಾತಂತ್ರ್ಯಕ್ಕಾಗಿ ಸಾಯಲು ಎರಡು ಬಾರಿ ತನ್ನ ಪುತ್ರರನ್ನು ಬೀಳ್ಕೊಟ್ಟಿದ್ದ ದೇಶ-ಈ ದಿನ ತನ್ನ ಅದೃಷ್ಟವನ್ನು ತಾನೇ ನಿರ್ಣೈಸುವ ಅಧಿಕಾರಬೇಕೆಂದು ಕೇಳುವದರಲ್ಲಿ ಆಶ್ಚರ್ಯವೇನಾದರೂ ಇದೆಯೆ? ಲೋಕದಲ್ಲಿ ತನ್ನ ಸ್ಥಾನಮಾನವಾವುದಿರಬೇಕೆಂಬುದನ್ನು ಸ್ವತಃ ಭಾರತವೇ ನಿರ್ಣಯಿಸಬೇಕಾಗಿದೆ. ಬ್ರಿಟಿಷ್ ಕಾಮನ್‌ವೆಲ್ತಿನೊಳಗಿರುವದನ್ನೇ ಹಿಂದುಸ್ಥಾನವು ಆರಿಸಿಕೊಳ್ಳುವದೆಂದು ನನ್ನಾಶೆ ಹಾಗೆ ಮಾಡುವದರಿಂದ ಹಿಂದುಸ್ಥಾನಕ್ಕೆ ಹೆಚ್ಚಿನ ಅನುಕೂಲತೆಯಿದೆಯೆಂದು ನನ್ನ ದೃಢಾಭಿಪ್ರಾಯ ಆದರೆ ಅದರ ಸ್ವಂತೇಚ್ಛೆಯಿಂದಲೇ ಆಗ ಬೇಕಾದ ನಿರ್ಧಾರವಿದು. ಬ್ರಿಟಿಷ್ ಕಾಮನ್‌ವೆಲ್ತ್ ಮತ್ತು ಸಾಮ್ರಾಜ್ಯಗಳೊಳಗಿನ ಸಂಬಂಧವು ಹೊರಗಿನ ಒತ್ತಾಯದಿಂದೇನೂ ನಿಂತಿಲ್ಲ. ಅದು ಸ್ವತಂತ್ರ ಜನತೆಯ ಸ್ವೇಚ್ಛಾಬದ್ಧ ಸಂಬಂಧವಾಗಿದೆ ಇದಕ್ಕೆ ಪ್ರತಿಯಾಗಿ ಪೂರ್ಣ ಸ್ವಾತಂತ್ರ್ಯವನ್ನೇ ಹಿಂದುಸ್ಥಾನವಪೇಕ್ಷಿಸಿದರೆ-ಹಾಗೆ ಮಾಡುವ ಅಧಿಕಾರ ಅದಕ್ಕಿದೆ ಎಂದು ನಮ್ಮ ಅಭಿಪ್ರಾಯ-ಈ ಬದಲಾವಣೆಯು ಸಾಧ್ಯವಿದ್ದಷ್ಟು ಸುಲಭದಲ್ಲಿ [ಮತ್ತು ಸುಗಮವಾಗಿ ಸಾಗುವಂತೆ ಸಹಾಯ ಮಾಡುವದು ನಮ್ಮ ಕರ್ತವ್ಯ.

The Pangal Nayak Bank Limited.

(Incorporated in 1920.)

Registered Office: Court Road, UDIPI.

Sub Offices at— **Udipi, Mangalore, Katapadi, Kanhangad, Kinnigoli, Nileshwar and Suratkal, South Canara.**

SEASON DEPOSITS for THREE & FOUR

months at a special rate of interest are accepted at all the above offices.

All kinds of up-to-date Banking service is provided promptly.

Please call for particulars of business.

Dated the 5th January 1946.

ಅಟ್ಲಿ ಭಾಷಣದಿಂದ— ಅನುಕೂಲ ವಾತಾವರಣ.

ಭಾವೀ ರೂಪರೇಷೆ

ಭಾರತದ ಮಾತೃಭೂವಾಗ ಹಲವಾರು ಜಾತಿ, ಧರ್ಮ, ಭಾಷೆಗಳು ಬೆರಕೆಗೊಂಡಿರುವ ಒಂದು ರಾಷ್ಟ್ರದ ಕುರಿತು ಆಡುತಿದ್ದೇನೆ ಬುದು ನನಗೆ ಸಂಪೂರ್ಣಗೊತ್ತಿದೆ ಅವುಗಳಿಂದಾಗಿ ಎದ್ದಿರುವ ತೊಡಕುಗಳನ್ನೂ ನಾನು ಒಲ್ಲೆ. ತೊಂದರೆಗಳನ್ನು ಭಾರತೀಯರೇ ಬಿಡಿಸಿಕೊಳ್ಳಬೇಕು ಈ ಕಾರ್ಯದಲ್ಲಿ ನಾವು ನಮ್ಮ ಸರ್ವಾಧಿಕಾರ ಪ್ರಯೋಗಿಸುವಂತಿಲ್ಲ ನಮ್ಮ ಮೊದಲ ಕರ್ತವ್ಯವೆಂದರೆ ತೀರ್ಮಾನ ತಯಾರಿಯ ಒಂದು ಯಂತ್ರ ನಿರ್ಮಾಣ. ಮಂತ್ರಿ ಮಂಡಲ ಸಮಿತಿಯ ಮತ್ತು ವೈಸರಾಯರ ಮುಖ್ಯೋದ್ದೇಶವು ಇದೇ. ಹೊಸ ರಾಜ್ಯಾಂಗ ರಚನೆಯು ತಯಾರಾಗುವವರೆಗಿನ ಮಧ್ಯಾವಧಿಗಾಗಿ ಒಂದು ಹಿಂದೀ ಸರಕಾರ ಸ್ಥಾಪಿಸುವ ಬಯಕೆ ನಮಗಿದೆ. ಹಲವು ಹಿಂದೀ ಸಂಸ್ಥಾನಗಳು ಅಭಿವೃದ್ಧಿ ಪಥದಲ್ಲಿ ಸಾಗಿವೆ. ತಿರುವಾಂಕೂರಿನಲ್ಲಿ ಗಣ್ಯ ಘಟನೆ ನಡೆದಿದೆ. ಹಿಂದುಸ್ಥಾನದ ರಾಷ್ಟ್ರೀಯ ಭಾವಪಕ್ಷ ಸಂಸ್ಥಾನ ಮತ್ತು ಪ್ರಾಂತ್ಯಗಳನ್ನು ವಿಂಗಡಿಸಿರುವ ಗಡಿಗಳು ತಡೆಗಳಾಗಿಲ್ಲ. ಬ್ರಿಟಿಷ್ ಭಾರತ ಮತ್ತು ಸಂಸ್ಥಾನಗಳಲ್ಲಿರುವ ನೇತಾರರು ರಾಷ್ಟ್ರದ ವಿವಿಧ ವಿಭಾಗಗಳ ಸ್ಥಾನ ನಿರ್ಧರಿಸುವವರಲ್ಲೂ ಸಂಸ್ಥಾನಗಳಿಗದರಲ್ಲಿ ತಕ್ಕ ಸ್ಥಾನ ಹುಡುಕುವವರಲ್ಲೂ ವಿಜಯಿಗಳಾಗುವರೆಂದು ನನ್ನಾಶೆ. ಭಾರತದ ಅಭಿವೃದ್ಧಿ ಪಥದಲ್ಲಿ ಹಿಂದೀ ರಾಜರು ತಡೆಯಾಗುವರೆಂದು ಕ್ಷಣ ಮಾತ್ರಕ್ಕೂ ನಾನು ನಂಬಲಾರೆ. ಭಾವೀ ಬ್ರಿಟನ್-ಭಾರತ ಸಂಬಂಧದ ಒಪ್ಪಂದಗಳಲ್ಲಿ ಭಾರತಕ್ಕೆ ಪ್ರತಿಕೂಲವಾಗಿ ನಮಗೆ ಅನುಕೂಲವಾಗುವಂತಹದಾವುದನ್ನೂ ನಾವು ಮಾಡುವಂತಿಲ್ಲ. ನಮ್ಮ ಮುಂದಿರುವ ಈ ಸಮಸ್ಯೆಯ ತೀರ್ಮಾನವು, ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್ ಹಾಗೂ ಸಾಮ್ರಾಜ್ಯಕಷ್ಟೇ ಅಲ್ಲ, ಇಡೀ ಲೋಕಕ್ಕೇನೇ ಮುಖ್ಯವಾದುದು. ರಾಜಕೀಯ ಭಾರತವೇ ಆಸ್ವಾದ ಬೆಳಕೆಂಬ ಭಾವನೆ ನನ್ನದು. ನಾವೀ ಮಹಾ ಪ್ರಶ್ನೆ ಬಿಡಿಸುವ ಹೊತ್ತಿನಲ್ಲೇ ಅಲ್ಲಿ ಮಹತ್ವದ ಆರ್ಥಿಕ ಅನಾಹುತಗಳದ್ದಿರುವುದು ಶೋಚನೀಯ. ವಿಶೇಷತಃ ಭಾರತದ ಆಹಾರ ಸರಬರಾಯಿಯ ಕುರಿತು ನಮಗಿರುವ ಆತುರವು ಅಗಮ್ಯವಾದುದು ವಿಜಯ್ ನಿರ್ಧಾರದೊಡನೆ ನನ್ನ ಅನುಯಾಯಿಗಳು ಹಿಂದುಸ್ಥಾನಕ್ಕೆ ಹೊರಡಲಿದ್ದಾರೆ; ಎಲ್ಲರೂ ಅವರಿಗೆ ದೇವಾನುಗ್ರಹವನ್ನು ಹಾರೈಸಬೇಕು".

ಪ್ರಮುಖರಿಂದ ಸ್ವಾಗತ

ಮೌ. ಅಜಾದರು—ಬ್ರಿಟಿಷ್ ಪ್ರಧಾನಿಗಳ ಭಾಷಣವನ್ನು ಸ್ವಾಗತಿಸಿದ್ದಾರೆ "ಬ್ರಿಟಿಷ್ ಮಂತ್ರಿ ಮಂಡಲ ಸಮಿತಿಯು ಭಾರತದಲ್ಲಿರುವಾಗ ಯಾವ ವಾತಾವರಣವಿಂಬೇಕೆಂದು ನನ್ನ ಅಪೇಕ್ಷೆಯಿತ್ತೋ ಅದನ್ನು ನಿರ್ಮಿಸಲು ಬ್ರಿಟಿಷ್ ಪ್ರಧಾನಿಯ ಭಾಷಣವು ಸಹಾಯಕವಾಗಿದೆ. ಅದು ಕೆಲವು ಮೂಲಭೂತ ಸಮಸ್ಯೆಗಳ ಮೇಲೆ ಬೆಳಕು ಚಲ್ಲಿದೆ. ಅದರ ಭಾವನೆಯು ದೇಶದಲ್ಲಿ ಸಾರ್ವತ್ರಿಕ ಶ್ಲಾಘನೆ ಪಡೆಯುವವೆಂದು ನಾನು ನಂಬುತ್ತೇನೆ. ಮುಂದಿನ ನಿಜವಾದ ಸಮಸ್ಯೆಯು ಭಾವಮಯೀ ತತ್ವಗಳಿಗೆ ಸಂಬಂಧಿಸಿರದೆ ಪ್ರತ್ಯಕ್ಷ ಕಾರ್ಯಾಚರಣೆಯನ್ನೇ ಅವಲಂಬಿಸಿದೆ ಮತ್ತು ಸ್ವಾಭಾವಿಕವಾಗಿ ಇದರಿಂದಲೇ ಭವಿಷತ್ಪರಿಣಾಮವು ಪ್ರವಹಿಸಬೇಕು".

ಪಂಡಿತ ನೆಹರುಗಳು—'ಮಾತಿನಲ್ಲಿ ಸ್ವರಮಾಧುರ್ಯವಿದೆ' ಎಂದು ಅಟ್ಲೀ ಭಾಷಣವನ್ನು ಸ್ವಾಗತಿಸಿದ್ದಾರೆ. "ಮಿ. ಅಟ್ಲೆಯವರ ಭಾಷಣದ ಸ್ವರ ಮತ್ತು ವಿಧಾನದಲ್ಲಿ ಒಂದು ಬದಲಾವಣೆ--ಒಂದು ಮಧುರ ವ್ಯತ್ಯಾಸ-ಕಂಡು ಬರುತ್ತದೆ. ನಾನದನ್ನು ಸ್ವಾಗತಿಸುತ್ತೇನೆ. ಆದರೆ ಒಂದು ವಿಷಯವನ್ನು ಮರೆಯಬಾರದು. ಹಿತಕರ ಸೂಚನೆಗಳು-ಅವು ಸ್ನೇಹ ಪೂರ್ಣ ಭಾವನೆಯಿಂದ ಒಂದಿದ್ದರೂ ಕೂಡಾ-ಸ್ವತಃ ಬಹಳ ದೂರ ಹೋಗುವಂತಿಲ್ಲ. ವಿಷಯದ ಪರ್ಯಾಲೋಚನೆಗೆ ಅವು ಸಹಾಯಕವಾಗಬಹುದು ಆದರೆ ಪರ್ಯಾಲೋಚಿಸುವುದಾವುದು ಮತ್ತು ಹೇಗೆ ಎಂಬುದೇ ಇಲ್ಲಿ ಮುಖ್ಯ. ಭಾರತ ಸ್ವಾತಂತ್ರ್ಯದ ಫಲಸಾಧನೆಯ ಯೋಜನೆಯನ್ನಲ್ಲದೆ, ಬೇರೆ ಮಧ್ಯ ಪಂಚಾಯತಿಕೆಗೆ ಒಪ್ಪದ ಸ್ಥಿತಿಗೆ ನಾವೀಗ ಬಂದಿದ್ದೇವೆ ತನ್ನದಲ್ಲದ ಧೋರಣೆಗೆ ಹಲವು ಬಾರಿ ಎಳೆಯಲ್ಪಟ್ಟ ಅನುಭವ ಹಿಂದುಸ್ಥಾನಕ್ಕೆ ಸಾಕಷ್ಟಾಗಿದೆ. ಯಾವ ಕಾಲದಲ್ಲಾಗಲೀ ಯಾವುದೇ ವಿದೇಶೀ ಧೋರಣೆ ವಹಿಸುವ ಮತ್ತು ಒಪ್ಪಂದ ಮಾಡಿಕೊಳ್ಳುವ ಪೂರ್ಣಾಧಿಕಾರ ಹಿಂದುಸ್ಥಾನದ್ದೇ ಆಗಿರಬೇಕು. ಅದು ಜಾಗತಿಕ ಶಾಂತಿಯ ಪ್ರತಿಜ್ಞೆ ವಹಿಸಿದೆ. ಆದ್ದರಿಂದ ಜಾಗತಿಕ ಸಂಘದಂತಹ ಶಾಂತಿ ಸ್ಥಾಪಕ ಸಂಘಗಳಲ್ಲಿ ಭಾಗವಹಿಸಲು ಅದು ಸದಾ ಸಿದ್ಧ. ಯುದ್ಧಗಳಿಗೆ ಮೂಲ ಹೇತುವಾದ, ಒಂದು ರಾಷ್ಟ್ರವು ಇನ್ನೊಂದರ ಮೇಲೆ ಅಧಿಕಾರ ನಡೆಸಲು ನೋಡುವ ಸ್ವಾರ್ಥವು ತೊಲಗಬೇಕಾಗಿದೆ"

ಗಾಂಧಿಜೀ—ತನ್ನ ಅಭಿಪ್ರಾಯವನ್ನು ಅಮಾನತಿಟ್ಟಿದ್ದಾರೆ. ಬೊಂಬಾಯಿಯಲ್ಲಿ ಗಾಂಧಿಜೀ ತಾ. 16ನೇ ಮುಂಜಾನೆ ಸಂಚಾರಕ್ಕೆ ಹೊರಟಿದ್ದಲ್ಲಿ 'ಯುನೈಟೆಡ್ ಪ್ರೆಸ್ಸ್'ನ ಬಾತ್ಮೀದಾರ ಅವರನ್ನು ಸಂಧಿಸಿದಾಗ "ಏನು ವಾರ್ತೆ ತಂದಿದ್ದೀರಿ?" ಎಂದು ಗಾಂಧಿಜೀ ಸವಾಲು ಹಾಕಿದರು 'ಬಾಪೂಜೀ ಸ್ವರಾಜ್ಯ ಬರುತ್ತಿದೆ" ಎಂದನಾತ. ಗಾಂಧಿಜೀ ಹೊಟ್ಟೆ ತುಂಬಾ ನಕ್ಕು ಹೇಳಿದರು:"ಹಾಗೇನು? ಸ್ವರಾಜ್ಯ ಬರುತ್ತಾ ಇದೆಯೆಂದು ನೀವು ಹಲವು ಬಾರಿ ನನಗೆ ಹೇಳಿದ್ದೀರಿ. "ಸ್ವರಾಜ್ಯ ಬಂದಾಯಿತು" ಎಂಬ ವಾರ್ತೆಯನ್ನು ನೀವು ತಂದಾಗಲೇ ನನಗೆ ಸಂತೋಷವಾಗುವದು". ಅಟ್ಲೀ ಭಾಷಣದ ಕುರಿತು ಅಭಿಪ್ರಾಯ ಕೇಳಿದಾಗ "ನಾನದನ್ನು ಓದಿದ್ದೇನೆ. ಆದರೆ ಸದ್ಯ ಏನನ್ನೂ ಹೇಳಲಾರೆ" ಎಂದು ಬಿಟ್ಟರು. ಆದರೆ ಗಾಂಧಿಜೀ ಅತ್ಯಂತ ಸಂತೋಷದಲ್ಲಿದ್ದುದರಿಂದ ಅಟ್ಲೀ ಭಾಷಣದಿಂದ ಅವರು ಆನಂದಗೊಂಡಿದ್ದಾರೆಂದು ಅವರೊಂದಿಗಿದ್ದ ಧುರೀಣರ ಊಹೆ

ಮಿ. ಜಿನ್ನರು—ಮಾತ್ರ ಅಟ್ಲೀ ಭಾಷಣದಿಂದ ಕಳವಳದಂತಿದೆ "ಮಿ. ಅಟ್ಲೆಯವರು ಜಾಗ್ರತೆಯಿಂದ ಮತ್ತು ಘನಸ್ಥಿಕೆಯಿಂದಾದರೂ ಹಗ್ಗದ ಮೇಲಿನ ಹೆಜ್ಜೆಯಂತೆ ಮಾತಾಡಿದ್ದಕ್ಕಾಗಿ ನಾನು ಸಂತೋಷ ಪಡುತ್ತೇನೆ "ಒಂದು ಅಲ್ಪ ಸಂಖ್ಯಾಕ ಸಮಾಜವು ಬಹು ಸಂಖ್ಯಾಕರ ಪ್ರಗತಿಯ ಮೇಲೆ ತನ್ನ ವಿಶೇಷಾಧಿಕಾರ ಪ್ರಯೋಗಿಸಿ ತಡೆಯೊಡ್ಡಲು ಬಿಡುವಂತಿಲ್ಲ" ಎಂದವರ ಮಾತು. ಅವರ ಕಲಕಾಲದಿಂದ ಸಾಗಿರುವ ಒಂದು ಸುಳ್ಳು ಪ್ರಚಾರದ ಬಲೆಗೆ ಬಿದ್ದಿದ್ದಾರೆ. ಬಹು ಸಂಖ್ಯಾಕರ ಪ್ರಗತಿಯನ್ನು ವಿಶೇಷಾಧಿಕಾರದಿಂದ ತಡೆಯುವ ಪ್ರಶ್ನೆಯೇ ಇಲ್ಲಿಲ್ಲ. 'ನನ್ನೀ ಕೋಣೆಯೊಳಗೆ ಬಾ' ಎಂದು ಜೇಡನು ನೊಣವನ್ನು ಕರೆಯುತ್ತದೆ. ನೊಣವು ಅದಕ್ಕೊಪ್ಪದಿದ್ದರೆ ನೊಣವು ಕಂಟಕಸ್ವರೂಪಿ' ಎಂದಂತೆಯೇ ಇದೂ ಕೂಡಾ. ಅದೇ ಬಗೆಗೆ "ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳು ನಮ್ಮ ತಲೆಯಲ್ಲಿವೆ. ಅವರು ನಿರ್ಭಯರಾಗಿ ಬಾಳುವಂತಾಗಬೇಕು" ಎಂದ ಅವರ ಮಾತೂ ನನ್ನ ಲಕ್ಷ್ಯದಲ್ಲಿದೆ. ಮುಸಲ್ಮಾನರು ಅಲ್ಪ ಸಂಖ್ಯಾಕರಲ್ಲ; ಅವರೊಂದು ರಾಷ್ಟ್ರ! ಸ್ವನಿರ್ಧಾರವು ಅವರ ಜನ್ಮಸಿದ್ಧ ಹಕ್ಕು. ಏಕ ಮಾತ್ರ ರಾಜ್ಯಾಂಗ ರಚನಾ ಸಂಸ್ಥೆಯ ನಿರ್ಧಾರದೊಡನೆ ಮಂತ್ರಿ ಸಮಿತಿ ಇಲ್ಲಿಗೆ ಬರುವದಾದರೆ ನಮ್ಮೆಲ್ಲರ ಸಹಕಾರ ಅಪೇಕ್ಷಿಸುವುದರಲ್ಲಿ ಅರ್ಥವಿಲ್ಲ. ಮಿ. ಅಟ್ಲೆಯವರ ಭಾಷಣದಲ್ಲಿ ಪರಸ್ಪರ ವಿರುದ್ಧವಾದ ಹಲವು ವಿಷಯಗಳು ಒಂದೆಡೆಯಲ್ಲೇ ಬಂದಿವೆ. ನಮಗೆ ಭಾರತದ ವಿಭಜನ ಮತ್ತು ಪಾಕಿಸ್ತಾನದ ಸ್ಥಾಪನೆಬೇಕಾಗಿದೆ. ತೀರ್ಮಾನದ ಹಾದಿ ಅದೊಂದೇ"

ವಿದೇಶಿಯರ ಅಭಿಪ್ರಾಯ—ಅಮೇರಿಕ ಮತ್ತು ಬ್ರಿಟನಿನ ಪತ್ರಿಕೆಗಳು 'ಬಿಕ್ಕಟ್ಟು ನಿವಾರಣೆಯ ಯೋಗ್ಯ ಹಾದಿ' ಎಂದು ಅಟ್ಲೆ ಭಾಷಣವನ್ನು ಹೊ[illegible] ಸದ್ಯದ ಬ್ರಿಟನ್-ರಶ್ಯಾ ಸಂಬಂಧದ ಪ್ರಭಾವದಿಂದೆಂಬಂತೆ ರಶ್ಯನ್ ಪತ್ರಿಕೆಗಳಲ್ಲಿ 'ಇದೊಂದು ಕುಹಕೋಪಾಯ'ವೆಂದು ಟೀಕಿಸುತ್ತಿವೆ. ಒಟ್ಟಿನ ಮೇಲೆ ಅಟ್ಲೀ ಭಾಷಣಕ್ಕೆ ಬಹುಮತೀಯ ಅಭಿಪ್ರಾಯದ ಬೆಂಬಲ ದೊರೆತಿದೆ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ರೋಗಗಳಾದ ಮೇಲೆ [illegible] ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವುದು ತಪ್ಪಿಸುವುದಿಲ್ಲ —ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ [illegible]

ಜವೇರಿಯನ್ ಜೀವನ ಮಿಕ್ಸ್ಚರ್ [illegible]

[illegible]

UNITED

WE

Offer free SERVICE IN INSURANCE

Give full SECURITY FOR YOUR MONEY

Guarantee PROMPT SETTLEMENT OF CLAIMS.

RAO BAHADUR
B. S. Sawkar B. A., LL. B. Chairman

A. S. Kini. Managing Director.

THE UNITED KARNATAKA INSURANCE CO., LTD.

H. O. DHARWAR. ESTD 1929.

Insure with or Represent us.

For [illegible]
ORGANISING OFFICE COURT ROAD, UDIPI.
Or
M. N. Bhandary & Co., Sp. Agents, Kodialbail, Mangalore.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

S C. 41-46.

ಶೇಕ್ ಮಮ್ಮಬ್ಬ — ವಾದಿ

ಮತ್ತು

ಮುಹಮ್ಮದ್ ಬ್ಯಾರಿ — ಪ್ರತಿವಾದಿ

ಪ್ರತಿವಾದಿ ಮುಹಮ್ಮದ್ ಬ್ಯಾರಿಗಳಿಗೆ, ಮಾಮದ್ ಬ್ಯಾರಿಗಳ ಮಗ, ಕಲಾಯಿ ಕಸಬಿನ, ಮಂಗ್ಳೂರು ವ್ಯಾಪಾರಿ [illegible] ವಾಸ್ತವ್ಯ.

ವಾದಿ ಶೇಕ್ ಮಮ್ಮಬ್ಬನವರು ಪ್ರತಿವಾದಿಯಿಂದ ಬರತಕ್ಕ ಮರೇಜುಗಳ ವಸೂಲಾತಿ ಬಗ್ಗೆ ದಾಖಲ್ಮಾಡಿದ ಸೋಲ್ಲಂದ ವ್ಯಾಜ್ಯವು ಸದ್ರಿ ಕೋರ್ಟಿನಲ್ಲಿ 28-3-1946ಕ್ಕೆ ಪ್ರತಿವಾದಿಯ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ಪ್ರತಿವಾದಿಯು ಆ ದಿನ ಹಗಲು ಗಂಟೆ 10½ಗೆ ಸದ್ರಿ ಕೋರ್ಟಿನ ಮುಂದೆ ಮುದ್ದಾಗಿಯಾಗಲೀ, ಯಾ ಕ್ರಮಪ್ರಕಾರ ಅಧಿಕಾರ ಹೊಂದಿದ ಪ್ಲೀಡರ್ ಮುಖಾಂತರವಾಗಿಯಾಗಲೀ ಹಾಜರಾಗಿ [illegible] ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರ ಹಾಜರಿಯಲ್ಲಿ [illegible] ತೀರ್ಮಾನಿಸಲಾಗುವದೆಂದು [illegible] ಪ್ರಕಾರ ಈ ನೋಟೀಸು [illegible]

ಮಂಗಳೂರು
15-3-46

D Mohan Rao
ವಾದಿಪರ ವಕೀಲ್

The Canara Banking Corporation Limited.

(Incorporated in British India with limited Liability)

Estd: 1906

Head Office: UDIPI, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates.

3—4 months	...	2¼%
6 months	...	2½%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೨೧-೩-'೪೬

ಆಹಾರಾಭಾವ ಮತ್ತು ಕಾಂಗ್ರೆಸ್

ಬೊಂಬಾಯಿಯಲ್ಲಿ ನೆರೆದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ದೇಶದಲ್ಲೆದ್ದಿರುವ ಆಹಾರಾಭಾವದ ಕಡೆಗೆ ವಿಶೇಷ ಲಕ್ಷ್ಯವಿತ್ತು ಪ್ರಮುಖ್ಯ ಕಾರ್ಯಕ್ರಮಗಳನ್ನು ಜನತೆಯ ಮುಂದಿಟ್ಟಿದೆ. ಸಹಜ ಸಂಬಂಧವಿಲ್ಲದ ವಿದೇಶೀ ಆಡಳಿತೆಯೊಂದು, ವಸ್ತುಸ್ಥಿತಿಗೆ ಹೊಂದಿಕೊಳ್ಳಬೇಕೆಂದು ಎಷ್ಟೇ ಒದ್ದಾಡಿದರೂ ಅದು ನೆಲ ಮುಟ್ಟುವಂತಿಲ್ಲವೆಂಬುದಕ್ಕೆ ಹಿಂದೀ ಸರಕಾರದ ಧೋರಣೆಯೂ ಹೃದಯ ಸಂಬಂಧವುಳ್ಳ ಜನತಾ ಸಂಸ್ಥೆಯೊಂದು ಅನಧಿಕಾರಿಯಿದ್ದರೂ ಅದು ಮಾರ್ಗಶೋಧನೆ ಬಲ್ಲುದೆಂಬುದಕ್ಕೆ ಕಾಂಗ್ರೆಸಿನ ಧೋರಣೆಯೂ ನಿದರ್ಶನವಾಗಿದೆ. ಕಾಂಗ್ರೆಸ್ ಸಮಿತಿ ಬೊಂಬಾಯಿಯಲ್ಲಿ ನೆರೆದಿದ್ದಾಗಲೇ ಆಹಾರ ಸ್ಥಿತಿಯ ಸಂಬಂಧವಾಗಿ ವೈಸರಾಯಿ ವೇವೆಲರು ತನ್ನ ಖಾಸಗೀ ಕಾರ್ಯದರ್ಶಿ ಮಿ ಎಬೆಲ್ಲರ ಮೂಲಕ ಮಹಾತ್ಮಾ ಗಾಂಧಿಯವರಿಗೊಂದು ಹೊಸ ಸೂಚನೆ ಕಳುಹಿದ್ದರು. ವಿವಿಧ ಪಕ್ಷಗಳ 14 ಮಂದಿ ಪ್ರತಿನಿಧಿಗಳನ್ನಾರಿಸಿ, ಒಂದು ಕಮಿಟಿ ರಚಿಸಬೇಕೆಂದು ವೈಸರಾಯರ ಪ್ರಥಮ ಸೂಚನೆಯಿದ್ದಿತಂತೆ. ಆದರೆ ಕಾಂಗ್ರೆಸ್ ಕಮಿಟಿಯು ಅದರೊಳಗೆ ಸೇರಲೊಪ್ಪಲಿಲ್ಲ. ಲೋರ್ಡ್ ವೇವೆಲ್, ಮಹಾತ್ಮಾ ಗಾಂಧಿ, ಮಿ. ಜಿನ್ನಾ ಮತ್ತು ಭೋಪಾಲದ ನವಾಬರುಳ್ಳ ನಾಲ್ಕೇ ಮಂದಿಯ ಸಮಿತಿ ನಿರ್ಮಿಸಿ ಅದಕ್ಕೆ ಪೂರ್ಣಾಧಿಕಾರ ಕೊಡಲ್ಪಡುವದೆಂಬ ಹೊಸ ಸೂಚನೆ ವೈಸರಾಯರಿಂದ ಬಂತು. ಆಡಳಿತೆಯ ಪದ್ಧತಿ ಬದಲಾದ ವಿನಹಾ, ಎಷ್ಟೇ ಪ್ರಮುಖರುಳ್ಳ ಒಂದು ವಿಶೇಷ ಸಮಿತಿಯನ್ನು ರಚಿಸಿದರೂ ಯಾವ ಪ್ರಯೋಜನವೂ ಆಗಲಾರದೆಂಬುದರಿಂದ ಕಾಂಗ್ರೆಸ್ ಅದನ್ನೂ ತಿರಸ್ಕರಿಸಿಬಿಟ್ಟಿತು. ಚುನಾವಣೆಗಳು ಮುಗಿದೊಡನೆ ಕೇಂದ್ರ ಸರಕಾರವನ್ನು ಪುನರ್ಘಟಿಸಿಕೊಳ್ಳುವೆವೆಂದು ವೈಸರಾಯರೇ ಘೋಷಿಸಿದ್ದಾರೆ. ಈಗ ಪ್ರಾಂತಿಕ ಚುನಾವಣೆಗಳೆಲ್ಲಾ ಮುಗಿಯುತ್ತಾ ಬಂದಿವೆ. ಅಂದ ಮೇಲೆ ಆಹಾರ ಬಿಕ್ಕಟ್ಟನ್ನು ನಿವಾರಿಸಲು ಸದ್ಯಕ್ಕಿರುವ ಏಕಮಾತ್ರ ಉಪಾಯವಾದ ಕೇಂದ್ರದಲ್ಲಿ ಜನತಾ ಸರಕಾರ ರಚನೆ ಮಾಡುವದನ್ನು ಮರೆತು ಈ ಕಮಿಟೀ ನಾಟಕಕ್ಕೆ ವೈಸರಾಯರಿಳಿದುದೇಕೆ? ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಆದರೆ ಆಹಾರಾಭಾವದ ಹೇತು ಮೂಲವಾಗಿ ಅಧಿಕಾರದ ಅಭಾವವಿದ್ದರೂ ಅಧಿಕಾರಾನಂತರವೇ ಆಹಾರವೆಂದು ಸಹಿಸಿಕೊಂಡಿರುವದಸಾಧ್ಯವಾದ್ದರಿಂದ ಜನತೆಯ ಮುಂದೆ ಸದ್ಯಸ್ಥಿತಿಗನುಗುಣವಾದ 15 ಸೂಚನೆಗಳ ಕಾರ್ಯಕ್ರಮವೊಂದನ್ನು ಕಾಂಗ್ರೆಸ್ ಇಟ್ಟಿದೆ.

ಪರಕೀಯರೆಷ್ಟೇ ಸಜ್ಜನರಿದ್ದರೂ ಸ್ವಜನರಾಗಲಾರರೆಂಬುದಕ್ಕೆ ವೇವೆಲ್ ಸರಕಾರದ ಧೋರಣೆಯೇ ನಿದರ್ಶನ. ಆಹಾರ ಬಿಕ್ಕಟ್ಟಿನ ನಿವಾರಣೆಗೆ ಹಿಂದೀ ಸರಕಾರಕ್ಕೆ ತಿಳಿದಿರುವ ಹಾದಿಯೆಂದರೆ 'ಅಧಿಕ ಆಹಾರ ಬೆಳೆಸಿರಿ' ಘೋಷ, ಮೆರವಣಿಗೆಗಳನ್ನು ಪೇಟೆ ಪಟ್ಟಣಗಳ ಬೀದಿಗಳಲ್ಲೆಬ್ಬಿಸುವದೊಂದೇ; ಸ್ಥಳೀಯ ಅಧಿಕಾರಿಗಳಿಗೆ ಗೊತ್ತಿರುವದು 'ಅಕ್ಕಿ ಬೆಳೆಯುವ ಮರ'ವನ್ನೇ ತಮ್ಮ ಜನ್ಮದಲ್ಲಿ ಕಂಡಿರದಂತಹ ಕೆಲವರನ್ನು ಕೂಡಿಸಿ 'ಆಹಾರ ಸಮಿತಿ'ಗಳನ್ನು ನಿರ್ಮಿಸಿ, ತಾವು ಬೆಳೆಸಿದ ಈ ಕಳೆಯನ್ನೇ ಬೆಳೆಯೆಂದು ಮೇಲಧಿಕಾರಿಗಳಿಗೆ ವರದಿ ಮಾಡುವದೊಂದೇ; ಇವರೆಲ್ಲರ ಶಿರಸ್ಸಾಗಿರುವ ಲೋರ್ಡ್ ವೇವೆಲರ ಬುದ್ಧಿಯೂ ಅದೇ—ಘಾಸ್ಯಕ್ಕಾಗಿ ಮಾನ್ಯರದೊಂದು ಕಮಿಟಿ ರಚಿಸುವದಷ್ಟೇ ಅವರಿಗೆ ಗೊತ್ತು; 14 ಜನರು ಹೆಚ್ಚಾದರೆ ನಾಲ್ಕೇ ಜನರಿರಲಿ ಎಂದು ಮಾತ್ರ ಅದನ್ನು ಬದಲಾಯಿಸಿಕೊಳ್ಳಲು ಗೊತ್ತು! 'ಹಸಿವೆ ಯುದ್ಧವನ್ನು ಗಾಳಿ ಹಾಕಿ ಶಮನಿಸುವದಕ್ಕಾಗಿ ಕೆಲವು ಕೋಟಿ ಬೀಸಣಿಗೆಗಳು ತಯಾರಾಗಬೇಕು' ಎಂಬ ವ್ಯವಸ್ಥೆಯಾಗುತ್ತಿದ್ದರೆ ಈ ಕಣ್ಣೀರ ಯುಗದಲ್ಲೊಮ್ಮೆ ನಗುವೇಳುತಿತ್ತು. ಜನಸಾಮಾನ್ಯರ ಆಹಾರಾಭಾವ ನಿವಾರಣೆಗಾಗಿ, ಅದರ ಗಂಧ ಗಾಳಿಯೇ ಸೋಂಕದ ಕೆಲವು ಬಣ್ಣದ ಬೀಸಣಿಗೆಗಳ 'ಆಹಾರ ಸಮಿತಿ'ಯ ನಿರ್ಮಾಣವಾಗುವದೂ ಅಷ್ಟೇ ಅಪಹಾಸ್ಯಕರ!

ಆದರೆ ಜನತಾ ಸಂಪರ್ಕವುಳ್ಳ ಸಂಸ್ಥೆಯಾದ ಕಾಂಗ್ರೆಸು ಈ ಬರಗಾಲದ ಮೂಲವೆಲ್ಲಿ ಎಂಬುದನ್ನು ಬಲ್ಲುದು. ಏನೇ ಮಾಡಿದರೂ ಸದ್ಯಕ್ಕೀ ರೋಗವು ಪ್ರಬಲಿಸಿ ಪ್ರಾಣಾವಧಿಗೆ ಮುಟ್ಟದಂತೆ ತಡೆಯುವ ಚಿಕಿತ್ಸೆ ಮತ್ತು ಪಥ್ಯದ ಹೊರತು ಬೇರೆ ವಿಧಿಯಿಲ್ಲವೆಂಬುದೂ ಈ ಗೃಹ ವೈದ್ಯನಿಗೆ ಗೊತ್ತಿದೆ. ಆದ್ದರಿಂದಲೇ, ಬೇಸಾಯ ಯೋಗ್ಯ ಒಂದಿಂಚು ಸ್ಥಳವನ್ನೂ ಬಿಡದೆ ಸಾಗುವಳಿ ಮಾಡುವದು—ಆದಾಯ ದೃಷ್ಟಿಯ ಪೈರುಗಳ ಬದಲಿಗೆ ಆಹಾರ ಧಾನ್ಯಗಳನ್ನೇ ಬೆಳೆಸುವುದು—ಅವುಗಳಿಗಾಗಿ ಹೊಸ ಕಾಲುವೆ ಬಾವಿಗಳ ಮೂಲಕ ನೀರು ಹಾಗೂ ಗೊಬ್ಬರ ಇತ್ಯಾದಿಗಳ ಅನುಕೂಲತೆಯೊದಗಿಸುವದು—ಮದುವೇ ಇತ್ಯಾದಿಗಳ ಕೂಟವನ್ನೇ ನಿಲ್ಲಿಸಿ ಆಹಾರದ ರವಷ್ಟು ಭಾಗ ಕೂಡಾ ಅನಾವ್ಯಯವಾಗದಂತೆ ನೋಡುವದು. ಹಣ್ಣು ಹಂಪಲು ಸಂಗ್ರಹಕ್ಕೆ ಪ್ರೋತ್ಸಾಹ-ವಿಸರ್ಜಿತ ಸೈನಿಕರನ್ನು ಆಹಾರೋತ್ಪತ್ತಿ ಮತ್ತು ವಿತರಣಾ ಕಾರ್ಯಕ್ಕೆ ಹಚ್ಚುವದು-ಇತ್ಯಾದಿ 15 ಕಾಂಗ್ರೆಸ್ ಸೂಚನೆಗಳು ಬಂದಿವೆ. ನಿಷ್ಪಕ್ಷಪಾತ ಬುದ್ಧಿಯಿಂದ ಅವುಗಳನ್ನು ವಿಮರ್ಶಿಸುವವರಿಗೆ, ಅನ್ನಾಭಾವದ ಅವಧಿಯಲ್ಲಿ ಇದೀಗ ಮೊದಲ ಬಾರಿ, ನೋವಿದ್ದಲ್ಲೇ ಲೇಪ ಹಚ್ಚಿದಂತಹ ಅನುಭವವಾಗದಿರದು. ಇವೆಲ್ಲಾ ಜನತೆಯ ರಂಗದಲ್ಲೇ ಕಾಣಿಸಿಕೊಳ್ಳಬೇಕಾದ ಸುಧಾರಣೆಗಳು; ಜನಜೀವನಕ್ಕೇನೇ ಸಂಬಂಧಿಸಿದುವುಗಳು ಹೊರತು ಪ್ರದರ್ಶನಾಂಶವಾವುದೂ ಅಲ್ಲಿಲ್ಲ. ಸರಕಾರೀ ಕಾರ್ಯಾಲಯಗಳಲ್ಲಿ ಫಲಾಹಾರ ಕೂಟ ಕರೆದು, ರಾಜ ರಸ್ತೆಗಳಲ್ಲಿ 'ಅಧಿಕಾಹಾರ ಬೆಳೆಸಿರಿ' ಮೆರವಣಿಗೆ ಹೊರಡಿಸುವ ಅಭ್ಯಾಸ ಮಾತ್ರವಿರುವ ಇಂದಿನ ಆಡಳಿತೆಗೆ ಇವುಗಳನ್ನು ಕಾರ್ಯತಃ ಆಚರಣೆಗೆ ತರಲು ಸಾಧ್ಯವೆ? ಇಂತಹದರ ತಯಾರಿಗಾಗಿ ನಿರ್ಮಾಣಗೊಂಡ ಯಂತ್ರವೇ ಇದಲ್ಲ. ಆದ್ದರಿಂದ ಪ್ರಥಮತಃ ಕೇಂದ್ರಾಡಳಿತೆಯು ಬದಲಾವಣೆಯಾಗಬೇಕು. ಕಮಿಟೀಮೋಹದ ಇಂದಿನ ಸರಕಾರದ ಬದಲಿಗೆ ಕಾರ್ಯೋತ್ಸಾಹದ ಜನತಾ ಸರಕಾರ ರಚನೆಯಾಗಬೇಕು. ವೈಸರಾಯಿ ವೇವೆಲರು, ತನ್ನ ವಾಗ್ದಾನದಂತೆ ಕೇಂದ್ರದಲ್ಲಿ ಕೂಡಲೇ ಜನಪ್ರತಿನಿಧಿ ಸರಕಾರ ಸ್ಥಾಪಿಸುವದೇ ತಾನು ಮಾಡಬೇಕಾದ ಆಹಾರಾಭಾವ ನಿವಾರಣಾ ಕಾರ್ಯವೆಂಬುದನ್ನು ಇನ್ನಾದರೂ ತಿಳಿಯಲಾರರೆ?

ಪ್ರಕಟಣೆ

ಉಡುಪಿ ತಾಲೂಕು ಕಾಪು ಪಂಚಾಯತ್ ಬೋರ್ಡಿಗೆ ಒಪ್ಪಿದ ಹಸ್ತಾಂತರವ, ದಿನಸಿ ಮಾರ್ಕೆಟುಗಳಲ್ಲಿ ತಾರೀಕು 1-4-46ರಿಂದ [illegible] ಏರಿಸಲಾಗುವ ಮತ್ತು ಮಾರ್ಕೆಟು ಸ್ಟಾಲ್ಸುಗಳನ್ನು ಪೂರ್ವೋಕ್ತ ಅವಧಿಯ ವರ್ಷದಲ್ಲಿ ಸ್ವಾಧೀನತೆಯಿಂದ ಉಪಯೋಗಿಸುವ ಸ್ವತಂತ್ರವನ್ನು ಇನ್ನೇ ಬರುವ ತಾರೀಕು 24-3-46ನೇ ಆದಿತ್ಯವಾರ ಅಪರಾಹ್ನ ಗಂಟೆ 2ರಿಂದ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಪ್ರೆಸಿಡೆಂಟರಿಂದ ಯಾ, ಅವರು ಅಧಿಕೃತರನ್ನಾಗಿ ಮಾಡುವವರಿಂದ ಬಹಿರಂಗವಾದ ಯೇಲಂ ಮೂಲಕ ಮಾರಾಟ ಮಾಡಲಾಗುತ್ತದೆ. ಮಾರ್ಕೆಟುಗಳನ್ನು ಏಲಮಿನಲ್ಲಿ ವಹಿಸಿಕೊಂಡವರು ತಾರೀಕು 9-4-46ರ ವಳಗೆ ನಿಶ್ಚಯವಾದ ಕರಾರು ಬರಕೊಡಲಿಕ್ಕೆ ತಪ್ಪಿದಲ್ಲಿ ಅಂಥ ಮಾರ್ಕೆಟುಗಳನ್ನು ಮುಂದಿನ ನೋಟೀಸು ಉಜ್ರು ಶಿವಾ ತಾರೀಕು 11-4-46ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಪುನಃ ಯೇಲಂ ಮಾಡಿ ಹಾಗೆ ಮಾಡುವ ಯೇಲಮಿನಿಂದ ಉಂಟಾದ ನಷ್ಟವನ್ನು ಅದಕ್ಕೆ ಕಾರಣರಾದ ಕಂಟ್ರಾಕ್ಟರರ ಡಿಪೋಜಿಟು ವಗೈರೆಯಿಂದ ವಸೂಲು ಮಾಡಲಾಗುವುದು. ಸದ್ರಿ ಏಲಂ ಶರ್ತಗಳ ಕುರಿತು ಬೇಕಾದ ಅನುಭವವನ್ನು ಪ. ಬೋರ್ಡ್ ಆಫೀಸಿನಲ್ಲಿ ಓದಿಕೊಳ್ಳಬಹುದು ಎಂಬ ಸಂಗತಿಯನ್ನು ಈ ಮೂಲಕ ತಿಳಿಸಲಾಗುತ್ತದೆ.

ಕಾಪು 15-3-46 } ಕಾಪು ಮಂಜುನಾಥ ಶೆಣೈ. ಪ್ರೆಸಿಡೆಂಟ್, ಪ.ಬೋ.ಕಾಪು

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 9/1946.

1 ಯಮುನಾ ಬಾಯಿ ಕುಂಬಳೆ ಮಂಜುನಾಥ ಭಕ್ತರ ವಿಧವೆ. 2 ವಾಮನ ಭಕ್ತ. 3 ಕೃಷ್ಣಮೂರ್ತಿ. 4 ರಾಮಚಂದ್ರ. 5 ಅನಂತ, ಪ್ರಾಯಸ್ಥರು. ಕುಂಬಳೆ ಮಂಜುನಾಥ ಭಕ್ತರ ಮಕ್ಕಳು. ಕ್ಷೇಮ ಚಿಂತಕರು, ತಾಯಿ. 1ನೇ ಅರ್ಜಿದಾರಳು. ಕಾರ್ಕಳ ಕಸಬೆಯಲ್ಲಿರುವವರು —ಅರ್ಜಿದಾರರು.

ಮತ್ತು

1 ಗೌರಿ ಅಂಮ. ವಾಮನ ಭಕ್ತರ ವಿಧವೆ. 2 ಮುಕುಂದ ಭಕ್ತ. 3 ವೈಕುಂಠ ಭಕ್ತ. ವಾಮನ ಭಕ್ತರ ಮಕ್ಕಳು. 1-2ನೇ ಯೆದ್ರಿರು ಪುತ್ತೂರು ಕಸಬೆಯಲ್ಲಿಯೂ 3ನೇ ಯೆದ್ರಿಯು, c/o. ಯಮ್. ರಾಮ ಕಾಮತ್ ಪ್ರೊಪ್ರೈಟರ್, ಕಾಮತ್ ಸ್ಟೋರ್ಸ್, ಮಾಟುಂಗಾ, ಬೊಂಬಾಯಿ. 19—ಯೆದ್ರಿರು.

—ಇವರೊಳಗೆ

1ನೇ ಅರ್ಜಿದಾರಳ ಗಂಡ ಮತ್ತು 2ರಿಂದ 5ನೇ ವರೆಗಿನ ಅರ್ಜಿದಾರರ ತಂದೆ ಸ್ವರ್ಗಸ್ಥ ಕುಂಬಳೆ ಮಂಜುನಾಥ ಭಕ್ತರ ಬಾಬ್ತು Empire of India Life Assurance Co, Ltd. Bombay. ಯೀ ಕಂಪೆನಿಯಿಂದ ಬರತಕ್ಕ ಪೋಲಿಸಿ ಹಣ ಮತ್ತು ಬೋನಸ್ ಮತ್ತು The Andhra Commercial Bank Ltd. Madras, The Mysore Spun Silk Mills Ltd, Bangalore; The Mysore Lamp Works Ltd. Bangalore, Mangalore Automobiles Ltd. Mangalore, The Mysore Stone Ware Pipes and Potteries Ltd. Bangalore, The Travancore Sugars and Chemicals Ltd, The India Gold Prospecting and Mining Syndicate Ltd. ಯೀ ಕಂಪೆನಿಗಳಿಂದ ಬರತಕ್ಕ ಷ್ಯೇರು ಮತ್ತು dividends ವಗೈರೆ ಷ್ಯೇರುಗಳ ವಸೂಲಿ ಹಕ್ಕಿನ ಕುರಿತು ಅರ್ಜಿದಾರರಿಗೋಸ್ಕರ 1ನೇ ಅರ್ಜಿದಾರಳಿಗೆ ಸಕ್ಸೆಷನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 9-4-1946ಕ್ಕೆ ಯಿಡೋಣಾಗಿಯದೆ. ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ತನಖಿ ದಿವಸ ಬೆಳಗ್ಗೆ 10 ಗಂಟೆಗೆ ಕೋರ್ಟು ಮುಂದೆ ಆಕ್ಷೇಪ ಜ್ಯಾಹೀರು ಮಾಡತಕ್ಕದ್ದದ್ದು.

K. Varadaraya Pai.
Advocate for Petitioner.

Date 19-3-1946 }
Udipi }

WANTED

Wanted a Secondary grade trained lady teacher to be employed in St. Antonys' Girls Higher Elementary School, Airody from 1-1-'46.

For further particulars apply to—

St. Antonys' Girls' H. E. School.
SASTAN Post, Udipi Tq S. Kanara.

Sastan, 8-3-'46.



Approved firm by the Govt. of Mysore
Certified by the Agent of the Govt. of Cylone Indian.

ಸ್ವದೇಶ

ಕಾಂಗ್ರೆಸ್ ಕಾರ್ಯಕಾರೀ ಸಮಿತಿ

ಸಭೆಯು ಬೊಂಬಾಯಿಯಲ್ಲಿ ಇದೇ ತಾ 12ರಲ್ಲಿ ಪ್ರಾರಂಭವಾಗಿ ನಾಲ್ಕು ದಿನಗಳ ತನಕ ಹಲವು ಪ್ರಾಮುಖ್ಯ ವಿಷಯಗಳ ಪರ್ಯಾಲೋಚನೆ ನಡಿಸಿದೆ. ದೇಶದ ಹೊಸವಾತಾವರಣವನ್ನು-ಮುಖ್ಯವಾಗಿ ಅಲ್ಲಲ್ಲಿ ಎದ್ದಿರುವ ಗೊಂದಲಗಳನ್ನು-ಲಕ್ಷ್ಯಪೂರ್ವಕ ವಿಮರ್ಶಿಸಿ ತನ್ನ ಅಹಿಂಸಾ ಘೋಷಣೆಯನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ದೇಶದ ಆಹಾರಾಭಾವದ ಕುರಿತು 15 ಸೂಚನೆಗಳುಳ್ಳ ಕಾರ್ಯಕ್ರಮವೊಂದನ್ನು ಮುಂದಿಟ್ಟಿದು ಮತ್ತು ಮುಂಬರುವ ಬ್ರಿಟಿಷ್ ಮಂತ್ರಿ ಸಮಿತಿಯೊಡನೆ ವ್ಯವಹರಿಸಲು ಅಧ್ಯಕ್ಷ ಮೌ. ಆಜಾದರನ್ನು ಪ್ರತಿನಿಧಿಯಾಗಿ ನೇಮಿಸಿ, ಅವರು ಪಂಡಿತ ನೆಹರು, ಮತ್ತು ಸರ್ದಾರ್ ಪಟೇಲರ ಸಣ್ಣ 'ಎಡ್ ಹೊಕ್' ಸಮಿತಿ ರಚಿಸಿದುದೇ ಈ ಬಾರಿಯ ಮುಖ್ಯ ನಿರ್ಧಾರಗಳು, ಶಿಷ್ಟ ಮಂಡಲಿಯೊಡನೆ ಸಂಧಾನಿಸುವ ಕಾಲದಲ್ಲಿ ಮಹಾತ್ಮಾ ಗಾಂಧಿಯವರು ಡಿಲ್ಲಿಯಲ್ಲೇ ಇರಬೇಕೆಂದೂ, ಮುಂದಿನ ವರ್ಕಿಂಗ್ ಕಮಿಟಿ ಅಲ್ಲಿಯೇ ನಿರಿಸು ನಡೆಯುತ್ತಿರಬೇಕೆಂದೂ ನಿಶ್ಚಯವಾಗಿದೆ.

ಸ್ನೇಹಪರ ವರ್ತನೆ

ಬ್ರಿಟಿಷ್ ಶಿಷ್ಟ ಮಂಡಲಿಯೊಡನೆ ಮೈತ್ರೀಭಾವವಿಡಬೇಕು. ಅದಕ್ಕೆ ಸಾಧ್ಯವಿರುವ ಸಹಾಯವನ್ನೆಲ್ಲ ಸಲ್ಲಿಸಬೇಕೆಂದು ಕಾಂಗ್ರೆಸಿನ ನಿರ್ಧಾರ. ಹಿಂದೀ ವಿರುದ್ಧ ಶಾಸನ ಮಂಜರು ಮಾಡಿರುವ ದಕ್ಷಿಣ ಆಫ್ರಿಕದಿಂದ ಹೈ ಕಮಿಶನರರನ್ನು ಹಿಂದೆ ಕರೆಯಬೇಕು. (ದ. ಆಫ್ರಿಕದೊಡನಿರುವ ವ್ಯಾಪಾರ ಸಂಬಂಧವನ್ನು ಕಡಿಮೆ ಕೊಳ್ಳಲು ಹಿಂದೀ ಸರಕಾರ ನಿರ್ಧರಿಸಿದೆ) ಅಸ್ಸಾಮಿನಲ್ಲಿ ಕಾಂಗ್ರೆಸ್ ಅಧ್ಯಕ್ಷರು ಮಾಡಿದಂತೆ ಕಾಂಗ್ರೆಸ್ ಪ್ರಾಂತಿಕ ಮಂತ್ರಿ ಮಂಡಲಗಳಲ್ಲಿ ಸ್ನೇಹ ಸೂಚನೆಯಾಗಿ 1937ರಂತೆ ಕಾಂಗ್ರೆಸ್ ಪ್ರತಿಜ್ಞೆಗೆ ಸಹಿಹಾಕಬೇಕೆಂಬ ಶರ್ತವಿಲ್ಲದೆ ಮುಸ್ಲಿಂ ಲೀಗಿಗೆ ಸ್ಥಾನ ಕೊಡಬೇಕು (ಎಂದು ನಿರ್ಧಾರವಾಗಿದೆ. ಡಿಲ್ಲಿಯಲ್ಲೀಗ ವಿಶೇಷ ಸೆಕೆಯಿರುವದರಿಂದ ಬ್ರಿಟಿಷ್ ಶಿಷ್ಟ ಮಂಡಲದ ಕಾರ್ಯಸ್ಥಲ್ವಾಣವಾಗಿ ಸಿಮ್ಲಾವನ್ನೇ ಆರಿಸಿ ಅಲ್ಲಿ ಸರ್ವ ವ್ಯವಸ್ಥೆ ನಡೆದಿದೆ. ಚುನಾವಣೆಗಳೆಲ್ಲಾ ಮುಗಿದೊಡನೆ ಕಾಂಗ್ರೆಸಿನ ಮಹಾಧಿವೇಶನ ಸೇರಬೇಕೆಂದು ನಿರ್ಧಾರವಾಗಿರುವದರಿಂದ, ಪ್ರತಿ ನಿಧಿಗಳ, ಅ. ಭಾ. ಪದಸ್ಥರ, ಮತ್ತು ಅಧ್ಯಕ್ಷ ಚುನಾವಣೆಗಳ ಕಾಲ ನಿಯಾಮಕ ಪಟ್ಟಿಯನ್ನು ಶ್ರೀ. ಕೃಪಾಲನಿ ಪ್ರಕಟಿಸಿದ್ದಾರೆ. ಕಾಂಗ್ರೆಸ್ ಸಮಿತಿ ಸಭೆ ಮುಗಿದೊಡನೆ ಪೂರ್ವ ನಿಶ್ಚಯದಂತೆ ಪಂಡಿತ ನೆಹರುಗಳು ಮಲಯಕ್ಕೆ ಹೊರಟು ಹೋದರು.

ಪ್ರಾಂತಿಕ ಚುನಾವಣೆಗಳು

ಮದ್ರಾಸಿನಲ್ಲಿ—ಇದೇ ತಾ. 18 ರಿಂದ ಮದ್ರಾಸ್ ಪ್ರಾಂತಿಕ ಚುನಾವಣೆಗಳು ಆರಂಭವಾಗಿ, ಇಡೀ ಪ್ರಾಂತ್ಯವು ಧ್ವಮುಧುಮಿಸುತ್ತಿದೆ. ಒಂದು ವಾರದೊಳಗೆ 129 ಸ್ಥಾನಗಳ ಚುನಾವಣೆ ಮುಗಿಯಲಿದೆ. ಚಿತ್ತೂರು ಜಿಲ್ಲಾ ಮುಸ್ಲಿಂ ಮತದಾರ ಕ್ಷೇತ್ರದ ಓರ್ವ ಉಮೇದ್ವಾರಿ ಪಿ. ಅಬ್ಬಾಸ್ ಅಲಿಯವರು ಆಕಸ್ಮಾತ್ ಮೃತಪಟ್ಟುದರಿಂದ ಅಲ್ಲಿಯ ಚುನಾವಣೆ ಮುಂದುವರಿಯಿತು.

ಸಂಯುಕ್ತ ಪ್ರಾಂತ್ಯದ— 228 ಸ್ಥಾನಗಳ ಪೈಕಿ ಫಲಿತಾಂಶ ಪ್ರಕಟವಾದ 216 ಸ್ಥಾನಗಳಲ್ಲಿ ಕಾಂಗ್ರೆಸಿಗೆ 143 ಸ್ಥಾನಗಳು ದೊರೆತಿವೆ; ಮುಸ್ಲಿಂ ಲೀಗ್ 42, ರಾಷ್ಟ್ರೀಯ ಮುಸ್ಲಿಂ 6, ಸ್ವತಂತ್ರರು, 14, ಅಹ್ರಾರ್.

ಬಂಗಾಳದಲ್ಲಿ— ಚುನಾವಣೆಗಳು ಭರಭರಾಟೆಯಲ್ಲಿವೆ. ಹಲವೆಡೆ ಹಿಂಸಾತ್ಮಕ ಘರ್ಷಣೆಗಳಾಗಿವೆ, ಅಲ್ಲಿಯ ಮೈಮೆನ್ ಸಿಂಗ್ ಜಿಲ್ಲೆಯ ಲಿಂಗುರಾ ಒಸ್ಮಾರಿನಲ್ಲಂತೂ ಅತ್ಯಂತ ಶೋಚನೀಯ ದುರ್ಘಟನೆ ನಡೆಯಿತು. ಬೇರಿಬ್ಬರೊಂದಿಗೆ ಕಾಂಗ್ರೆಸ್ ಚುನಾವಣಾ ಸಭೆಯೊಂದರ ಪ್ರಚಾರಕ್ಕೆ ಹೊರಟಿದ್ದ 18 ವರುಷ ಪ್ರಾಯದ ಮಹೇಂದ್ರ ಚಂದ್ರದಾಸನನ್ನು ಪಕ್ಕದ ಕಾಡಿನಿಂದ ಬಂದ ಪುಂಡರದೊಂದು ಗುಂಪು ಚಿತ್ರಹಿಂಸೆಮಾಡಿ ಕೊಂದುಹಾಕಿರುವ ವಾರ್ತೆ ಬಂದಿದೆ. ಕಮ್ಯೂನಿಸ್ಟ್ ಪುಂಡರ ಕೃತ್ಯವಿದು ಎಂದು ಮೃತನ ತಾಯಿ ಹೇಳುತ್ತಾಳೆ.

ಬಿಹಾರಿನಲ್ಲಿ—ಒಟ್ಟು 152 ಸ್ಥಾನಗಳಿದ್ದು ಕಾಂಗ್ರೆಸಿಗೆ 98, ಲೀಗಿಗೆ 34, ಮೋಮಿನ್ ಪಕ್ಷಕ್ಕೆ 5, ಆದಿವಾಸಿಗಳಿಗೆ 3, ಜಮೀನ್ದಾರರಿಗೆ 4, ವಿಶೇಷ ಮತದಾರ ಕ್ಷೇತ್ರಗಳು 8, ಹೀಗಿವೆ. ಮಧ್ಯಪ್ರಾಂತ್ಯ ಬೊಂಬಾಯಿ ಮೊದಲಾದ ಕಡೆಗಳಲ್ಲಿ ಚುನಾವಣೆಗಳು ನಡೆಯುತ್ತಿವೆ.

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. ನಂಬ್ರ 12/1946.

ಮೊದಿಕಟ್ಟ ಬ್ಯಾರಿ—ಮಿದ್ದ್ನ ಬ್ಯಾರಿ ಮಗ ಕಬ್ಬ ಗ್ರಾಮ. ಪುತ್ತೂರು ತಾಲ್ಲೂಕು —ಅರ್ಜಿದಾರ.

ಮತ್ತು

1 ಬೀಪಾತುಂಮ-ಯಿದ್ದ್ನ ಬ್ಯಾರಿ ವಿಧವೆ. 2 ಅಬ್ದುಲ್ ರಹಿಮಾನ್ ಬ್ಯಾರಿ. 3 ಯಿಬ್ರಾಯಿ. 4 ಹಂಮದೆ. 5 ಹಾಸ್ಸಿಂಮ. 6 ಅಬ್ದುಲ್ ಕಾದ್ರಿ. ಯಿದ್ದ್ನ ಬ್ಯಾರಿ ಮಕ್ಕಳು. 5-6ನೇಯವರು ಮೈನರರು, ಗಾರ್ಡಿಯನ್ ತಾಯಿ 1ನೇ ಯೆದ್ರಿ —ಯೆದ್ರಿರು.

ಸದ್ರಿ ಅರ್ಜಿದಾರನು ಸೆಂಟ್ರಲ್ ಯೆಕ್ಸೈಸ್ ಡಿಪಾರ್ಟ್‌ಮೆಂಟಿನ ಕಲ್ಲಿಕೋಟೆ ಡಿವಿಜನ್ ಅಸಿಸ್ಟಾಂಟ್ ಕಲೆಕ್ಟರವರಿಂದ ಅರ್ಜಿದಾರಗೆ ವ, ಯೆದ್ರಿರಿಗೆ ವಸೂಲಾಗತಕ್ಕ ರೂಪಾಯಿ 482 12-0ಯನ್ನು ವಸೂಲು ಮಾಡುವರೆ ಅರ್ಜಿದಾರನ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಕಾಣ್ಸ ಅರ್ಜಿದಾರನು ದಾಖಲು ಮಾಡಿದ ಅರ್ಜಿಯು ತನ್ನ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ತಾ 21 3 46ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪವಿರುವವರು ಈ ಕೋರ್ಟಿನಲ್ಲಿ ಸದ್ರಿ ದಿವಸ ದಾಖಲು ಮಾಡಿಕೊಳ್ಳತಕ್ಕದ್ದು ಯೆಂತ ಈ ಮೂಲಕ ತಿಳಿಯಪಡಿಸಲಾಗಿಯದೆ.

ಪುತ್ತೂರು 10-3 46 **ಪಿ. ಕೃಷ್ಣ ಭಟ್ಟ** ಅರ್ಜಿದಾರನ ಕಡೆ ವಕೀಲ.

ಪ್ರಕಟಣೆ

ಪಂಚಾಯತ ಬೋರ್ಡು, ಕಟಪಾಡಿ

1946—47ನೇ ವರ್ಷದ ಬಾಬ್ತು ಪಂಚಾಯತ ಬೋರ್ಡು ಸಾರ್ವಜನಿಕ ಇಳಿಯುವ ಸ್ಥಳದಲ್ಲಿ (public landing place) ವ ಪಂಚಾಯತ ಬೋರ್ಡು ಮಾರ್ಕೇಟಿನಲ್ಲಿ ವ ರಿ ವಸೂಲು ಮಾಡುವ ಸ್ವತಂತ್ರವನ್ನು ಇದೇ ಮಾರ್ಚಿ ತಿಂಗಳ ತಾ 26ರಂದು ಪಂಚಾಯತ ಬೋರ್ಡು ಆಫೀಸಿನಲ್ಲಿ ಅಪರಾಹ್ನ ಗಂಟೆ 4.30ರಿಂದ 5 30ರ ವರೆಗೆ ಪಂಚಾಯತ ಬೋರ್ಡು ಪ್ರೆಸಿಡೆಂಟರಿಂದ ಏಲಂ ಮಾಡಲಾಗುವುದು.

(*Sd*) **P. Venkatraya Nayak,**
President.

NOTICE.

ಉಡುಪಿ ತಾಲ್ಲೂಕು ... ದು ಗ್ರಾಮದಲ್ಲಿರುವ ... ರೇಳ್ಸ ಲೂವಿಸರ ಮಗ ಡೇನಿಸ್ ಲೂವಿಸನು ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸುವುದೇನಂದ್ರೆ:—

ಉಡುಪಿ ಡಿ. ಮು. ಕೋರ್ಟ್ R. E. P. 454/44ನೇ ಅಮ್ಲುಜ್ಯಾರಿಯಲ್ಲಿ ಜಪ್ತಿ ಮಾಡೋಣಾದ ನನ್ನ ಬಾಬ್ತು ಒಂದು ಅಪೂರ್ಣವಾದ ಮಚ್ಚಿಯನ್ನು ಉಡುಪಿ ಎಡಿಶನಲ್ ಡಿ. ಮು .ಕೋರ್ಟಿನ R. E. P. 407/1945 ನೇ ಅಮ್ಲುಜ್ಯಾರಿಯ ಅರ್ಜಿದಾರನಾದ ಕಲ್ಯಾಣಪುರ ಕುಸ್ಮಾಲಿ ಸಾಹೇಬರಿಗೆ ನೋಟೀಸು ಕೊಟ್ಟು ಬಹಿರಂಗವಾದ ಹರಾಜಿನಲ್ಲಿ ಮಾರಾಟ ಮಾಡಬಹುದಾಗಿಯೂ, ಹುಟ್ಟಿ ಬಂದ ಐವಜನ್ನು ಸದ್ರಿ R. E. P. 407/45ನೇ ಅಮ್ಲುಜ್ಯಾರಿಯ ಕ್ರೆಡಿಟಿಗೆ ಡಿಪೋಜಿಟು ಮಾಡಬೇಕಾಗಿಯೂ, ಸದ್ರಿ ಎಡಿಶನಲ್ ಕೋರ್ಟ್ R. E. A. 71/46ರಲ್ಲಿ ಹುಕುಂ ಆಗಿಯದೆ. ಆ ಹುಕುಂ ಪ್ರಕಾರ ಸದ್ರಿ ಮಚ್ಚಿಯನ್ನು ತಾ. 31-3-1946ನೇ ಆದಿತ್ಯವಾರ ದಿವಸ ಬೆಳಗ್ಗೆ 9ಗಂಟೆಯಿಂದ 10ಗಂಟೆ ವರೆಗೆ ಉಡುಪಿ ಕಸಬೆಯಲ್ಲಿರುವ ನನ್ನ ಎಡ್ವೋಕೇಟರಾದ ಶ್ರೀ ಬೈಲೂರು ವಾಸುದೇವರಾಯರು ತನ್ನ ಆಫೀಸಿನಲ್ಲಿ ಯೇಲಂ ಮಾಡುತ್ತಾರೆ. ವ್ಯಾಸು ಉಳ್ಳವರು ಸದ್ರಿ ಯೇಲಮಿನಲ್ಲಿ ವಹಿಸಿಕೊಳ್ಳಬಹುದು. ಯೇಲಮಿಗೆ ವಹಿಸಿಕೊಳ್ಳಲು ಇಷ್ಟವಿದ್ದವರು ರೂಪಾಯಿ 50/-ವಾಡು ಕರಿಯುವ ಮೊದಲು ನನ್ನ ಎಡ್ವೋಕೇಟರ ವಶಾ ಕೊಟ್ಟು ರಶೀದಿ ಪಡಿಯಬೇಕು. ಯೇಲಂ ಯಾರ ಹೆಸ್ರಿಗೆ ಕಾಯಂ ಆಗುತ್ತದೋ ಅವರ ಬಾಬ್ತು ರೂಪಾಯಿ 50/-ನ್ನು ಕ್ರಯದ ಐವಜಿನಲ್ಲಿ ಮುಜ್ರೆ ತೆಗದು ಬಾಕಿ ಐವಜನ್ನು ಮಾತ್ರ ವಸೂಲು ಮಾಡಲಾದೀತು. ಯೇಲಮಿನ ಐವಜು ರೂಪಾಯಿ 50/-ಕ್ಕಿಂತ ಕಡಿಮೆ ಆದಲ್ಲಿ ಯೇಲಂದಾರನ ಡಿಪೋಜಿಟು ಐವಜಿನಲ್ಲಿ ಕ್ರಯದ ಐವಜು ಕಳದು ಬಾಕಿ ಐವಜು ಕೂಡಲೇ ವಾಪಸು ಕೊಡಲಾದೀತು. ಉಳ್ದವರ ಡಿಪೋಜಿಟು ಐವಜು ಯೇಲಂ ಆದ ಬಳಿಕ ... ಅವರವರಿಗೆ ವಾಪ್ಸು ಕೊಡಲಾದೀತು. ಯೇಲಮಿನ ಐವಜು ರೂಪಾಯಿ 50/-ಕ್ಕಿಂತ ಜಾಸ್ತಿ ಆದಲ್ಲಿ, ಹಾಗೆ ಜಾಸ್ತಿ ಆದ ಕ್ರಯದ ಐವಜನ್ನು ಯೇಲಂದಾರನು ಕೂಡಲೇ ಕೊಟ್ಟು ರಶೀದಿ ಪಡಿಯಲಿಕ್ಕೆ ತಪ್ಪಿದ್ರೆ ಸದ್ರಿ ಮಚ್ಚಿ ಕೂಡಲೇ ಪುನಹಾ ಯೇಲಂ ಹಾಕಲ್ಪಡುವುದು. ಹಾಗೆ ಪುನಹಾ ಯೇಲಂ ಹಾಕಿದ್ದಲ್ಲಿ ಹುಟ್ಟಿಬಂದ ಐವಜು ಪ್ರಥಮ ಯೇಲಮಿನಕ್ಕಿಂತ ಕಡಿಮೆಯಾದಲ್ಲಿ ಹಾಗೆ ಕಡಿಮೆ ಆದ ನಷ್ಟವನ್ನು ಪ್ರಥಮ ಯೇಲಂದಾರನು ಡಿಪೋಜಿಟು ಇಟ್ಟ ರೂಪಾಯಿ 50/ರಲ್ಲಿ ವಜಾ ಮಾಡಲ್ಪಡುವುದು,

ಸದ್ರಿ ಯೇಲಂ ಆಗತಕ್ಕ ಮಚ್ಚಿ ಪ್ರಕೃತ ಉಪ್ಪೂರು ಗ್ರಾಮದಲ್ಲಿರುವ ಯಾಜೆಫ್ ಲೂಕಾಸ್ ಲೂವಿಸರ ಮಗ ಕಾಮಿಲ್ ಲೆಸ್ಲಿ ಲೂವಿಸರ ಸುಪರ್ದು ಸದ್ರಿ ಕೋರ್ಟಿನವರು ಕೊಟ್ಟ ಪ್ರಕಾರ ಇವರ ಸ್ವಾಧೀನ ಇರುತ್ತದೆ. ವ್ಯಾಸು ಉಳ್ಳವರು ಅದನ್ನು ಪರೀಕ್ಷಿಸಿಕೊಂಡು ಬರತಕ್ಕದ್ದು. ಮತ್ತು ಯೇಲಮಿನಲ್ಲಿ ನಿಲ್ಲುವವರು ಸದ್ರಿ ಮಚ್ಚಿಯನ್ನು ಪರೀಕ್ಷೆ ಮಾಡಿ ಬಂದಿರುವುದಾಗಿ ಭಾವಿಸಲ್ಪಡುತ್ತದೆ. ಸದ್ರಿ ಮಚ್ಚಿಯು ಅಪೂರ್ಣವಾದ್ದು ಮತ್ತು ಉಡುಪಿ ಡಿ. ಮು. ಕೋರ್ಟ್ R. E. A. 104/45ನೇ ಬಾಧ್ಯತೆ ಅರ್ಜಿದಾರನಿಗೆ ಅಪ್ಪ್ರಥಮ ಜವಾಬುದಾರಿಯಿಂದ ಅಸಲು ರೂಪಾಯಿ 1000/ ಮತ್ತು ವಸ್ತೆವಜು ತಾರೀಕು ಬಾಗ್ಯಾತಿನ ಪೂರಾ ಬಡ್ಡಿ ಸಲಬೇಕಾಗಿರುವುದರಿಂದ ಯೇಲಮಿಗೆ ಸದ್ರಿ ಮಚ್ಚಿ ಪಡಕೊಂಡವರು ಸದ್ರಿ ಬಾಧ್ಯತೆ ಅರ್ಜಿದಾರಗೆ ವಸ್ತೆವಜು ಪ್ರಕಾರ ಸಂಪೂರ್ಣ ಐವಜನ್ನು ತೆರಬೇಕಾಗಿರುತ್ತದೆ. ಸದ್ರಿ ಮಚ್ಚಿಗೆ ವಾಡು ಕರೆಯುವರೇ ರೂ. 5/ ಎಣ್ಸಿಯದೆ.

Camp, UDIPI
D. 20-3-46 **D. Lewis**

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **22—3—46**ರಿಂದ

ಮುರಲಿ ಚಿತ್ರ

ಪ್ರಾಸ

ಉಷ್ವರೀ ಬಾಲ, ಸ್ನೇಹಪ್ರಭಾ ಪ್ರಧಾನ್, ಕಾಮಿನಾಥ್, ನಜೀರ್, ಬಿ. ಬಿಲ್ಮೋರಿಯಾ.

ಬರುವ ಚಿತ್ರ— **ಫರಿಯಾದ್**

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ವಾಸೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.

ಮಂಗಳೂರು.

ನಗರದಲ್ಲಿ ಪ್ಲೇಗು–ಅ. ೮ಕ್ಕೆ ಅಂತ್ಯವಾದ ವಾರದಲ್ಲಿ ಪ್ಲೇಗು ಇಬ್ಬರಿಗೆ ತಗಲಿ, ಒಬ್ಬರು ಆಸ್ಪತ್ರೆಯಲ್ಲಿ ಮಡಿದರು ಎಂಬ ವರದಿ ಬಂದಿದೆ. ಇಲಿಗಳ ಬೇಟೆ, ಪ್ಲೇಗ್ ನಿರೋಧ ದಾಕು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಲೇ ಇವೆ.

ನಗರದ ಕಥೋಲಿಕ—ಸಮಿತಿಯ ರಿಗಾಗಿ, ಹಿಂದೀ ತರಗತಿಯೊಂದು ಪಳ್ನೀರಿನ ಲ್ಲಿರುವ ಭಗಿನೀ ಸಮಾಜದ ನೇತೃತ್ವದಲ್ಲಿ ಆರಂಭವಾಗಿದೆ.

ಜಿಲ್ಲೆಯ ೪೬ ಲೇಬರ್ ಶಾಲೆ–ಗಳಲ್ಲಿಯೂ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಮಧ್ಯಾಹ್ನದ ಊಟ ಹಾಕಿಸಲು ಜಿಲ್ಲಾ ಲೇಬರ್ ಇಲಾಖೆಯವರು ನಿರ್ಧರಿಸಿದ್ದಾರೆ. ಊಟದ ವ್ಯವಸ್ಥೆಯನ್ನು ನಿರ್ವಹಿಸಿಕೊಳ್ಳುವವರಿಂದ ಲೇಬರ್ ಆಫೀಸರರು ಅರ್ಜಿಗಳನ್ನು ಅಪೇಕ್ಷಿಸುತ್ತಾರೆ.

ಪಿಲಕ್ಕಿ ಕಂಟ್ರೋಲ್–ಹಾಗೂ ಮಾರ್ಕೆಟಿಂಗ್ ಬೋರ್ಡನ್ನು ಸ್ಥಾಪಿಸುವ ಉದ್ದೇಶದಿಂದ, ಇದೇ ತಾ. ೧೬ ರಂದು, ಮದ್ರಾಸಿನಲ್ಲಿ ಕೇಂದ್ರ ಸರಕಾರದ ಆಶ್ರಯದಲ್ಲಿ ಪಿಲಕ್ಕಿ ತೋಟಗಾರರ ಸಭೆಯೊಂದು ಸೇರಲಿದೆ. ಕಾಫಿ ಕಂಟ್ರೋಲ್ ಹಾಗೂ ಮಾರ್ಕೆಟಿಂಗ್ ಬೋರ್ಡು ಇರುವಂತೆಯೆ ಪಿಲಕ್ಕಿಯ ಬೆಲೆಯನ್ನು ಒಂದು ಮಿತಿಗಿರಿಸಿ ಅದನ್ನು ತೋಟಗಾರರಿಂದ ಸಂಗ್ರಹಿಸಿ ವಿಕ್ರಯಿಸುವುದೇ ಸ್ಥಾಪಿಸಲ್ಪಡಲಿರುವ ಈ ಬೋರ್ಡಿನ ಉದ್ದೇಶ.

EPILEPSY & HYSTERIA

Cured for ever.

By smelling this wonderful herb when attacked by fits a black worm 1¼" long will come out with the sneezes of the patient. The patient will get a miracle cure of the disease for ever.

Apply in English to.

Shri. 108 Mahatma
Sidh Baba. Nagod Post
(JUBBULPORE)

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

O. S. ನಂಬ್ರ 10/1946.

ಮೊಜಾರಿಯೊ ಬೆಂಜಮಿನ್ ಡಿಸೋಜ. ಇವರ ಬಗ್ಗೆ (1) ಮಾಗ್ಗಿ ಡಿಸೋಜ (2) ಅಂತೋನ್ ಜವಾಂವ ಡಿಸೋಜ – ವಾದಿ.

ಎದ್ರು

ಜೊರೆಸ್ ನೋರ ಫೊರೊಂಡ – ಪ್ರತಿವಾದಿ.

ಪ್ರತಿವಾದಿಗಳಿಗೆ ಜೊರೆಸ್‌ನೋರ ಮೊರೊಂಡ್, ಮಾಸ್ಟರ್ ಮೊರೊಂಡ ಪೇಟೆ, ಮಂಗಳೂರು ತಾಲೂಕು ಕದ್ರಿ ಗ್ರಾಮದ ಬಿಜೈಯಲ್ಲಿರುವವರು.

ಪ್ರತಿವಾದಿಯು ವಾದಿಗೆ ತಾ 21-1-1941 ರಲ್ಲಿ ಬರೆದುಕೊಟ್ಟ ಮೂಲಗೇಣಿಚೀಟಿನ ಮೆಪ್ಪುವಳ್ಳಿ ಪ್ರಕಾರ ಗೇಣಿಯನ್ನು ಸಲ್ಲಿಸದೆ ಬಾಕಿ ಮಾಡಿಕೊಂಡದ್ದರಿಂದ ಪ್ರತಿವಾದಿಯ ಮೂಲಗೇಣಿ ಹಕ್ಕನ್ನು ರದ್ದು ಮಾಡಿ ಆಸ್ತಿ ಸ್ವಾಧೀನತೆ ಬಗ್ಗೂ ಗೇಣಿ ವಗೈರೆ ವಸೂಲಿ ಬಗ್ಗೂ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ವ್ಯಾಜ್ಯವು 1946ನೇ ಇಸವಿ ಮಾರ್ಚ ತಿಂಗಳ ತಾರೀಕು 29ರಲ್ಲು ಹಗಲು 11 ಘಂಟೆಗೆ ತನ್ನಿಗೆ ಇಟ್ಟಿರುತ್ತದೆ. ಪ್ರತಿವಾದಿಯು ಖುದ್ದು ಅಗಲಿ ವಕೀಲಿ ಮೂಲಕವಾಗಲಿ ಹಾಜರಾಗಲಿಕ್ಕೆ ತಪ್ಪಿದರೆ ಪ್ರತಿವಾದಿಯ ಗೈರು ಹಾಜರಿಯಲ್ಲಿ ವ್ಯಾಜ್ಯವು ತನ್ನಿಖೆ ಯಾಗುವುದು.

ಮಂಗಳೂರು } N. E. L. Peris
ತಾ 14-3-1946 } Vakil for Plantiff.

ಜಿಲ್ಲಾ ಎಮ್. ಎಲ್. ಎ. ಗಳವರಿಗೆ ಸತ್ಕಾರ–ಮದ್ರಾಸ್ ಎಸೆಂಬ್ಲಿಗೆ ಪ್ರತಿಕಕ್ಷಿಗಳಿಲ್ಲದೆ ಆರಿಸಿಬಂದ ಕಾಂಗ್ರೆಸ್ ಪಕ್ಷದ ಶ್ರೀಯುತರು ಎ. ಬಿ. ಶೆಟ್ಟಿ, ಕೆ. ಆರ್. ಕಾರಂತ್, ಡಾ। ಯು. ಪಿ. ಮಲ್ಯ, ಕೆ. ಈಶ್ವರ, ವಿ. ಪ್ಯಾಸ್ ಮತ್ತು ಲೀಗ್ ಪಕ್ಷದ ಜನಾಬ್ ಎಚ್. ಎಸ್. ಹುಸೇನ್ ಮತ್ತು ಮಹಮ್ಮದ್ ಚವ್ಹಾಡ್ ಸಾಹೇಬರಿಗೆ ತಾ 13ರಲ್ಲು ಕೆನರಾ ಚೇಂಬರ್ ಒಫ್ ಕೋಮರ್ಸ್ ಕಡೆಯಿಂದ ಉಪಾಹಾರ ಸತ್ಕಾರ ನಡೆಯಿತು. ಈ ಸಂಧರ್ಭದಲ್ಲಿ ಶ್ರೀಗಳಾದ ವೈಕುಂಠ ಬಾಳಿಗ, ಎ. ಶ್ರೀನಿವಾಸ ಪಜ್ಯೆ, ಕೇಶವ ಶೆಣ್ಯೆ, ರಾವ್ ಸಾಹೇಬ್ ಪಿ. ರಾಮದಾಸ್, ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು.

ಕರ್ನಾಟಕ ಬೇಂಕ್ ಕಟ್ಟಡದಲ್ಲಿ ಡಾ। ಯು. ರಾಮರಾವ್, ಮತ್ತು ಶ್ರೀ ಕೆ. ಆರ್. ಕಾರಂತರು ತಾ 14ರಲ್ಲಿ ಸತ್ಕಾರ ಕೂಟದಿಂದ ಗೌರವಿಸಲ್ಪಟ್ಟರು. ರಾವ್ ಬಹದೂರ್ ಶ್ರೀಪತಿ ರಾವ್, ಶ್ರೀ ಎಸ್. ಆನಂದ ಉಪಾಧ್ಯಾಯರು ಮಾತನಾಡಿದರು.

ಎರಡನೇ ಬೆಳೆಯ ಭತ್ತ–ಒಪ್ಪಿಸುವ ಅವಧಿಯನ್ನು ತಾ 31-3-46ರ ತನಕ ವೃದ್ಧಿಸಿನೆಯಾಗಿಯೂ ಆನಂತರ ಒಪ್ಪಿಸುವವರಿಗೆ ಕಡಿಮೆದರ ಕೊಡಲಾಗುವುದೆಂದೂ ಜಿಲ್ಲಾ ಕಲೆಕ್ಟರರ ಆಪ್ಪಣೆಯೊಂದು ಹೊರಟಿದೆ. ಭತ್ತವನ್ನೇ ಸ್ಟೋರುಗಳಿಗೆ ಒಪ್ಪಿಸುವ ಕ್ಷೇತ್ರದವರು ಈಕಡೆ ನಿಗಾ ಕೊಡಬೇಕಾಗಿದೆ.

ಉಡುಪಿ

ಹೊಸ ಮಿನಾನು ಮಾರ್ಕೆಟು–ಎಪ್ರಿಲ್ ತಿಂಗಳಾರಂಭದಿಂದ ಕುಂಜಿಬೆಟ್ಟಿನಲ್ಲಿ ಮಿನಾನು ಮಾರ್ಕೆಟನ್ನು ತೆರೆಯಲು ಉಡುಪಿ ಮುನಿಸಿಪಲ್ ಕೌನ್ಸಿಲಿನ ನಿರ್ಧಾರವಾಗಿಯದೆ. ತಲೆಹೊರೆ ಒಂದರ ಆರು ಪೈಯಂತೆ ಸುಂಕ ವಸೂಲು ಮಾಡಬೇಕೆಂದು ಸಹ ನಿಶ್ಚಯಿಸಲಾಗಿದೆ.

ಟೀಪಾರ್ಟಿ–ಶ್ರೀ ಬಡಗಬೆಟ್ಟು ಸುಬ್ಬಯ್ಯ ಹೆಗ್ಡೆಯವರು ಇತ್ತೀಚೆಗೆ ಪುತ್ತೂರಲ್ಲಿ ಜರಗಿದ ತನ್ನ ಮಗಳ ವಿವಾಹ ಸಮಾರಂಭದ ಸಲುವಾಗಿ ಕಳದ ಶುಕ್ರವಾರ ಸಂಜೆ ಬೋರ್ಡ್ ಹೈಸ್ಕೂಲ ವಠಾರದಲ್ಲಿ ಊರ ಗೃಹಸ್ಥ ಗೃಹಿಣಿಯರಿಗೆ ಟೀಪಾರ್ಟಿಯಿತ್ತರು.

ಕೃಷ್ಣಾಪುರ–ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಮ್ಮ ಗುರುಗಳ ಆರಾಧನೆಯನ್ನು ಆದಿ ಕೃಷ್ಣಾಪುರ ಮಠದಲ್ಲಿ ತಾ 19ರಲ್ಲು ಮಹಾವೈಭವದಿಂದ ಜರಗಿಸಿದರು.

ಉಡುಪಿ ಪ್ರೆಸ್ ಕೆಲಸಗಾರರ ಸಂಘ–ದ ಸಂಘಟಿತ ಮಹಾ ಸಭೆಯು ಇದೇ ತಾ 17ನೇ ಅಪರಾಹ್ನ ಉಡುಪಿ ಬೋರ್ಡ್ ಹೈಸ್ಕೂಲ ಶಾಲೆಯಲ್ಲಿ ಶ್ರೀ. ಎಸ್. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿತು. ಸಂಘದ ಉಚ್ಚ ಘೋಷಣೆ ಮತ್ತು ಕೆಲಸಗಾರರ ಸ್ಥಿತಿಗತಿಗಳನ್ನು ವಿವರಿಸಿ ಅಧ್ಯಕ್ಷರ ಮುನ್ನುಡಿಯಾದ ಮೇಲೆ ಸಂಘದ ನಿಧಿನಿಯಮಗಳು ಸವಿವರವಾಗಿ ಚರ್ಚಿಸಲ್ಪಟ್ಟು ಮಂಜೂರಾದುವು. ಆ ಮೇಲೆ ನಿಬಂಧನಾನುಸಾರ ಪ್ರೆಸ್ ಕಾರ್ಮಿಕರಾಗಿಯೂ ಸಾಮೂಹಿಕವಾಗಿಯೂ 15 ಮಂದಿಯ ಕಾರ್ಯಕಾರೀ ಸಮಿತಿಯು ಚಾಲ್ತಿ ವರುಷಕ್ಕೆ ಚುನಾಯಿಸಲ್ಪಟ್ಟಿತು. ಶ್ರೀಗಳಾದ ಕೆ. ವಿಠಲದಾಸ್ ಕಾಮತ್, ಅಧ್ಯಕ್ಷ, ಟಿ. ವಾಮನ ಕಿಣಿ, ಉಪಾಧ್ಯಕ್ಷ, ಟಿ. ಅಣ್ಣಪ್ಪ ಶೆಟ್ಟಿ, ಕಾರ್ಯದರ್ಶಿ, ಕೆ. ನರಸಿಂಹ ಶೆಣ್ಯೆ, ಜತೆ ಕಾರ್ಯದರ್ಶಿ, ಕೆ. ಶ್ರೀನಿವಾಸಾಚಾರ್, ಖಜಾನ್ಜಿಯಾಗಿ ಆರಿಸಲ್ಪಟ್ಟರು. ಸಂಘಕ್ಕೆ ಸಂಬಂಧಿಸಿದ ಇತರ ವಿಷಯಗಳು ನಿರ್ಧರಿಸಲ್ಪಟ್ಟ ಮೇಲೆ ಮುಕ್ತಾಯ ಭಾಷಣ, ಶ್ರೀ. ಕೆ. ವಿ. ಕಾಮತರ ಧನ್ಯವಾದಗಳೊಂದಿಗೆ ಸಭೆ ಮುಗಿಯಿತು.

ಮಳೆ–ಕೆಲವು ದಿವಸಗಳಿಂದ ವಿಶೇಷ ಮೋಡವಿದ್ದು ಕಳದ ತಾ 16ನೆ ರಾತ್ರಿ ಪ್ರಚಂಡ ಮಳೆ ಬಿದ್ದಿರುತ್ತದೆ. ಆನಂತರ ವಿಶೇಷ ಸೆಕೆಯಿದೆ.

ಕಟಪಾಡಿ–ಈ ಕೇಂದ್ರದ ಪ್ರಾಥಮಿಕ ಶಾಲಾ ಅಧ್ಯಾಪಕ ಸಂಘದ ದಿನಾಚರಣೆ ಸಮಾರಂಭವು ತಾ. 16-3-46ರಲ್ಲಿ ಶ್ರೀ. ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ಸಂಜೀವ ಭಟ್ ಎಮ್. ಎ., ಎಲ್. ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಶ್ರೀಯು. ರಾಮಚಂದ್ರ ಮಲ್ಯರು ಸಂಘದ 11 ವರ್ಷಗಳ ಸಂಕ್ಷಿಪ್ತ ವರದಿಯನ್ನು ಓದಿದರು. ಶಿಕ್ಷಣೋಪಕರಣ, ಆವೆ ಮಣ್ಣಿನ, ಹಾಗೂ ಕಾಗದದ ವೃತ್ತಿ ಮೊದಲಾದುವುಗಳ ವಸ್ತು ಪ್ರದರ್ಶನದ ಉದ್ಘಾಟನೆಯನ್ನು ಅಧ್ಯಕ್ಷರು ಜರಗಿಸಿದರು. ಲಘು ಉಪಾಹಾರವಾದ ಬಳಿಕ ಮಕ್ಕಳಿಂದ ನೃತ್ಯ, ನಾಟಕ, ಯಕ್ಷಗಾನ ಮೊದಲಾದ ಚಟುವಟಿಕೆಗಳ ಪ್ರದರ್ಶನವು ಜರಗಿತು. ಅಧ್ಯಕ್ಷರು ಇಂತಹ ದಿನಾಚರಣೆಯ ಆವಶ್ಯಕತೆಯನ್ನು ವಿವರಿಸಿದರು.

BANK WITH THE LARGEST CONNECTIONS ON THE WEST COAST.

OFFERS:-
EFFICIENT.
PROMPT &
COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd.
ESTD 1925

ಆಶ್ಚರ್ಯಕರ] **ನರೆತ ಕೂದಲು** [ಗುಣಕಾರಿಗಳು

ರಂಗನ್ನು ಉಪಯೋಗಿಸಬೇಡಿರಿ! ಸುವಾಸನೆಯುಳ್ಳ ನಮ್ಮ ಆಯುರ್ವೇದೀಯ ಎಣ್ಣೆಯನ್ನೇ ಉಪಯೋಗಿಸಿರಿ. ಆಗತಾನೆ ನಿಮ್ಮ ನರೆತ ಕೂದಲು ಅರವತ್ತು ವರುಷಗಳ ತನಕವೂ ಕಪ್ಪಗಾಗಿಯೇ ಇರುವುವು. ದೃಷ್ಟಿದೋಷ ತಲೆನೋವು ಸಹ ಈ ತೈಲ ಉಪಯೋಗದಿಂದ ದೂರವಾಗುವುದು. ಕೆಲವೇ ನರೆತ ಕೂದಲುಗಳು ಕಪ್ಪಗಾಗಬೇಕಾದರೆ ರೂ. 2-8-0ರ ಸೀಸೆ; ಜಾಸ್ತಿ ನರೆತ ಕೂದಲುಗಳ ಉಪಯೋಗಕ್ಕೆ ರೂ. 3-8-0ರ ಸೀಸೆ; ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಲ್ಲಿ ರೂ. 5/ರ ಸೀಸೆಯನ್ನು ಉಪಯೋಗಿಸಬೇಕು. ಗುಣವಾಗಲಿಲ್ಲವೆಂದು ಖಾತ್ರಿಪಡಿಸುವವರಿಗೆ ಸೀಸೆಯ ದಬ್ಬಲ್ ಕ್ರಯವು ಕೊಡಲಾಗುವುದು.

ಬಿಳಿ ಕುಷ್ಟ ಮತ್ತು ಲ್ಯೂಕೊಡರ್ಮಾ

ಈ ಭಯಾನಕ ವ್ಯಾಧಿಗಳನ್ನು ಹೋಗಲಾಡಿಸಲು ಕೆಲವೇ ದಿನಗಳ ಲೇಪನ ಸಾಕಾಗುವುದು. ಸಾವಿರಾರು ಹಕೀಮರು, ಡಾಕ್ಟರರು ಕವಿರಾಜರುಗಳಿಂದ ಅಸಾಧ್ಯವೆಂದು ಬಿಡಲಾದ ಕೇಸುಗಳನ್ನು ಈ ಔಷಧವು ಗುಣಪಡಿಸಿಯದೆ. ಹದಿನೈದು ದಿವಸಗಳ ಔಷಧಕ್ಕೆ ರೂ. 2 8 0 ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯಾಗಲೀ ಹಿಂದಿಯಲ್ಲಾಗಲೀ ಮಾಡತಕ್ಕದ್ದು. ಇಂದೇ ಬರೆಯಿರಿ:

Vaidraj Akhil Kishor Ram.
No. 6, KATRISARAI, (Gaya)

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿಶ್ಚೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ದಿನ್ನಿನ ತಿಬ್ಬಿಗಳು ಹೆತ್ತು ಕತಿಕು ಅಲಡಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು**, ದ. ಕ.

ಸ್ಟಾಕಿಸ್ಟರು– ಡಾ| ಪಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ದಿ ಮುಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ವ್ಯಯ ಸಂವತ್ಸರದ
(1946-1947)
ಶ್ರೀಪತಿ ಪಂಚಾಂಗ

ಬಹಳ ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.

ಬೆಲೆ 0—5—0.

ವಿಳಾಸ. –

ಶ್ರೀಪತಿ ನರಸಿಂಹ ಅಗಿ್ರ,
ಬೇಳೂರು ಗ್ರಾಮ, ಪೋಸ್ಟ್ ಕೋಟೆ.
ಅಥವಾ
ನವಭಾರತ ಬುಕ್ ಡಿಪೋ, ಉಡುಪಿ.

ದಕ್ಷಿಣ ಕನ್ನಡ.

ಬನ್ನಾಡಿ—ಬನ್ನಾಡಿ ಶ್ರೀ ಪರಮಹಂಸ ಹಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ 23-3-46ನೇ ಸಂಜೆ ಘಂಟೆ 5-30ಕ್ಕೆ ವಕೀಲ್ ಶ್ರೀ ವೆಂಕಪ್ಪ ಸೆಟ್ಟರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವದು. ಎಲ್ಲ ಮಹನೀಯರಿಗೂ ಸುಸ್ವಾಗತವಿದೆ.

ಸ್ವೈರವರ್ತನೆ—ಬ್ರಹ್ಮಾವರ, ಕೊಕ್ಕರ್ಣೆ, ಭಾರಕೂರು ಮೊದಲಾದೆಡೆಗಳಲ್ಲಿ ಮರ ಮತ್ತು ಕಟ್ಟಿಗೆ ಗಾಡಿಗಳಿಗಿರುವ ಪರ್ಮಿಟು ಚೆಕ್ಕ್ ಮಾಡಲು ಅಧಿಕಾರ ಪಡೆದಿರುವೆವೆಂದು ಹೇಳಿ ಕೊಳ್ಳುವವರು ಕೆಲವರಿದ್ದಾರೆ. ಅಂಥವರು ಪರ್ಮಿಟು ವಿಮರ್ಶಿಸುವುದರ ಜೊತೆಗೆ ಗಾಡಿಯೊಂದರ ಆರಾಣೆಯಿಂದ ಹಿಡಿದು ಹನ್ನೆರಡಾಣೆಯ ವರೆಗೂ ಸುಂಕವೆಂದು ವಸೂಲು ಮಾಡುತ್ತಾರೆ. ನಿಮಗೆ ಸುಂಕ ಕೇಳಲು ಮತ್ತು ಪರ್ಮಿಟು ವಿಮರ್ಶಿಸಲು ಇರುವ ಅಧಿಕಾರ ಪತ್ರವನ್ನು ತೋರಿಸಿರೆಂದರೆ ಅದನ್ನು ಮನೆಯಲ್ಲಿ ಮರೆತು ಬಿಟ್ಟೆವೆನ್ನುತ್ತಾರೆ. ಹಣಕೊಟ್ಟಬಗ್ಗೆ ರಶೀದಿ ಕೊಡುವುದಕ್ಕೆ ಕಾಗದದ ಅಭಾವವಂತೆ! ಮತ್ತು ಅನಗತ್ಯವಂತೆ! ತಾವು ಗಾಡಿ ನಿಲ್ಲಿಸಲು ಹೇಳಿದ ಮೇಲೆ ಒಂದೇ ನಿಮಿಷ ತಡವಾದರೂ ರಿಪೋರ್ಟು ಬರಯುವೆವೆಂದೂ, ತಾವು ಕರೆದಲ್ಲಿಗೆ ಪೋಲೀಸರು ಬರುತ್ತಾರೆಂತಲೂ ಆಜ್ಞಾಪಿಸಿ ಗಾಡಿಯವರನ್ನು ಹೆದರಿಸುತ್ತಾರೆ! ಅವೆಷ್ಟೋ ಸಲ ಒಂದಕ್ಕಿಂತ ಹೆಚ್ಚು ಸಲ ಸುಂಕತೆರುವ ಪ್ರಸಂಗವೂ ಬರುತ್ತದೆ. ಆದ್ದರಿಂದ ಇನ್ನು ಮುಂದೆ (ಮೇಲೆ ಸೂಚಿಸಿದ ಸ್ಥಳಗಳಲ್ಲಿ) ಪರ್ಮಿಟ್ ಚೆಕ್ಕು ಮಾಡಲು ಅಧಿಕಾರ ಹೊಂದಿದವರು ತಮ್ಮ ಅಧಿಕಾರ ಪತ್ರವನ್ನು ಕೇಳಿದಾಗ್ಯೆ ತೋರಿಸಲು ಅನುಕೂಲವಾಗುವಂತೆ ಕೈಯಲ್ಲಿ ಇಟ್ಟುಕೊಳ್ಳುವುದಲ್ಲದೆ, ಸುಂಕವಸೂಲು ಮಾಡುವುದಿದ್ದರೆ ಅದೆಷ್ಟೆಂದು ಸೂಚಿಸಿ ಪೇಟೆಯ ಅಥವಾ ಈಚೆ ಕಡಗಳಲ್ಲಿ ಬೋರ್ಡು ತೂಗುಹಾಕಬೇಕು. ಇಲ್ಲವಾದರೆ ಪರಪೂರಿನವರಿಗೆ ಕೇಳಿದ ಜನರಿಗೆಲ್ಲಾ ಹಣಕೊಡುತ್ತಾ ಹೋಗ ಬೇಕಾಗುವುದು. ಸಂಬಂಧ ಪಟ್ಟವರು ಇತ್ತ ಗಮನಿಸುವರೆ?—"ಪೇಠ ಸಂಚಾರಿ."

ಕುಂದಾಪುರ—ಇಲ್ಲಿಯ ವಕೀಲ್ ಶ್ರೀ. ಕೆ. ವೆಂಕಪ್ಪ ಶೆಟ್ಟಿ ಮಗ ಡಾಕ್ಟರ್ ಶ್ರೀ. ವ್ಯಾ. ಎಸ್. ಶೆಟ್ಟಿ ಎಮ್. ಬಿ. ಬಿ. ಎಸ್. ಇವರು "ಕುಂದಾಪುರ ಕ್ಲಿನಿಕ್" ಎಂಬ ಚಿಕಿತ್ಸಾಲಯವನ್ನು ತಾ. 17-3-46ರಂದು ತೆರೆದರು.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. I. A. 82/46.
O. S. 415/45.

ನಾಗಪ್ಪ ಮಂಜ — ವಾದಿ
ಗೌರಮ್ಮ ಇತ್ಯಾ — ಪ್ರತಿವಾದಿರು.

ಸದ್ರಿ ವಾದಿಯು ಜಾಹೀರು ಮಾಡುವ ದೇನೆಂದ್ರೆ:—

ಪ್ರತಿವಾದಿರು 1 ಗೌರಮ್ಮ ವೆಂಕಟ್ರಮಣ ಹೆಬ್ಬಾರರ ಹೆಂಡತಿ. 2 ಸುಬ್ಬಮ್ಮ 1ನೇಯವಳ ಮಗಳು ವ ವಿಶ್ವೇಶ್ವರ ಉಡ್ಪರ ಹೆಂಡ್ತಿ.

ಸರ್ವ ತಾಲೂಕು ಸ್ವಬರ ಕ್ಷೇತ್ರಯಲ್ಲಿ ಬಸಲಾಡಿ ವಿಶ್ವೇಶ್ವರ ಉಡ್ಪರ ಮನೆಯಲ್ಲಿರುವವರು.

ಸದ್ರಿ ನಂಬ್ರದಲ್ಲಿ ಫೈನಲ್ ಡಿಕ್ರಿ ಆಗಬೇಕೆಂತ ವಾದಿ ಕೊಟ್ಟ ಅರ್ಜಿಯು ತಾ 6-4-46 ಕ್ಕೆ ತನ್ನಿಗೆ ಮುಡೋಹಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದ್ರೆ ಆ ದಿನ್ನ ಕೋರ್ಟು ಮುಂದೆ ಸ್ವತಹಃ ಯಾ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಪಡಿಸಿಕೊಳ್ಳತಕ್ಕದ್ದು. ತಪ್ಪಿದ್ದೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿಯದೆ.

G Sanjeeva Rau.
Pleader for Plaintiff.

Kundapur
Date 16-3-46

ಮಲಬಾರಕ್ಕೆ ಅಕ್ಕಿ:—ದಕ್ಷಿಣ ಕನ್ನಡ ಜಿಲ್ಲೆಯಿಂದ ಮಲಬಾರಿಗೆ ಕೆಲಕಾಲದ ಹಿಂದೆ ಸುಮಾರು 6 ಸಾವಿರ ಟನ್ ಅಕ್ಕಿ ಸಾಗಿತ್ತು. ಈಗ ಅದೇ ಪ್ರಕಾರವಾಗಿ ತಿರುಗಿ ಸುಮಾರು 8 ಸಾವಿರ ಟನ್ ಅಕ್ಕಿ ಇಲ್ಲಿಂದ ಅತ್ತ ಕಡೆ ಸಾಗಲಿದೆ ಎಂದು ತಿಳಿದು ಬರುತ್ತದೆ.

"ಈ ತರದ ಸಾಗುವಿಕೆಗೆ ಜಿಲ್ಲಾ ಆಹಾರ ಸಮಿತಿಯವರಾಗಲಿ ಸ್ವತಃ ಮಾನ್ಯ ಕಲೆಕ್ಟರರಾಗಲಿ, ಹೊಣೆಗಾರರಲ್ಲವೆನ್ನಬಹುದು" ಎಂದು ವಿಮರ್ಶಿಸುತ್ತಾ ಸ್ಥಳೀಯ ಪತ್ರಿಕೆಯೊಂದು ಈ ಅತೀ ಮುಖ್ಯ ಮತ್ತು ಮಹತ್ವದ ವಿಚಾರದಲ್ಲಿ ಈ ಕೆಳಗಿನ ಅಭಿಪ್ರಾಯವನ್ನು ಪ್ರಕಟಿಸಿದುದನ್ನು ಸಾರಾಂಶವಾಗಿ ಇಲ್ಲಿ ಕೊಡಲಾಗಿದೆ.

ಈ ಅಕ್ಕಿ ಮಲಬಾರಿಗೆ ಸಾಲ ರೂಪವಾಗಿ ಒಯ್ಯಲ್ಪಡುವುದೆಂಬದೇನೊ ನಿಜ. ಕೊಟ್ಟ ಸಾಲ ಸಮಯಕ್ಕೆ ಸಿಗದಿದ್ದರೆ ನಮಗೆ ಹೆಚ್ಚಿನ ಕಷ್ಟ. ಅಕ್ಕಿ ಅಭಾವದ ಕಾಲದಲ್ಲಿ ಸಾಲ ವಾಪತಿ ಮಾಡಲು ಮನಸ್ಸಿದ್ದರೂ ಕಾರ್ಯತಃ ಸಾಧ್ಯವಾಗುವುದಿಲ್ಲ.

ಅಕ್ಕಿಯ ಮಟ್ಟಿಗೆ ನಮ್ಮ ಜಿಲ್ಲೆ ಸ್ವಾವಲಂಬಿ ಅಲ್ಲವೆಂಬ ವಿಷಯ ಎಲ್ಲರಿಗೂ ಗೊತ್ತಿದೆ. ಆಂತಹ ಸಂದರ್ಭದಲ್ಲಿ ನಮ್ಮಲ್ಲಿ ದಾಸ್ತಾನಿರುವುದನ್ನು ಬೇರೆ ಕಡೆ ಕೊಟ್ಟು, ನಮಗೆ ಕಡಿಮೆ ಬಿದ್ದಾಗ ಇತರ ಊರುಗಳಿಂದ ಪೂರೈಕೆಗಾಗಿ ಪ್ರಯತ್ನಿಸುವುದಕ್ಕೆ ಪ್ರಯತ್ನ ಮಾಡುವುದು ಬೇಗನೆ ತುಂಬಾ ಬೇಡದ ವಿಚಾರ.

ಉಚ್ಚಿಲ—ಸರಸ್ವತಿ ಮಂದಿರದಲ್ಲಿ ಮೊಗವೀರ ಸಮಾಜ ಸುಧಾರಕ ಸಂಘ, ಬಾರ್ಕೂರು ಹೋಬಳಿ ಇವರ ಮಹಾಸಭೆಯು ತಾ 24-3-46ಕ್ಕೆ ಡಾ. ಎಫ್. ಎಚ್. ಪಿ. ಮೊಯಿಲಿ ಅಧ್ಯಕ್ಷತೆಯಲ್ಲಿ ಜರಗಲಿರುವುದು.

[೧೦ನೇ ಪುಟದಿಂದ]

ರಿರವು. ಆದ ಜೀವನ ನಡೆಸುವರ ವಿಶೇಷ್ಠಿ ಪಡೆತ್ತಿರುವ ಪಟಣಿನಂತರು ಈ ಕಡೆಗೆ ಗಮನ ಕೊಡದೆ ಹೊರಗಿನ ಸಂಸ್ಥೆಗಳಲ್ಲಿ ಹಣ ಸಂಚಯ ಮಾಡಿ ಪರ ಊರುಗಳನ್ನು ಪ್ರೋತ್ಸಾಹಿಸುವಂತಾಗುತ್ತದೆ. ಇದು ಯೋಚನೀಯವಲ್ಲವೆ?

ವಿಚಾರವಂತರೂ, ಬಿಟ ಅತರೂ ಧಾಬ್ಲ ಕಿನಲ್ಲಿ ಇನ್ನೂ ಕಮ್ಮಿಯಾಗಿಲ್ಲ. ಭಾವೀ ಜಗತ್ತು ಪ್ರಗತಿಪಥದಲ್ಲಿ ಮುಂದುವರಿಯುತ್ತಿರುವಾಗ ಅದರ ಜೊತೆ ಪುತ್ತೂರು ತಾಲೂಕು ಕೂಡಾ ಯಾಕೆ ವೃದ್ಧಿಯ ಕಡೆಗೆ ಮುಂಸಾಗಬಾರದು? ಪ್ರತೀ ವರ್ಷ ಎಂಬಂತೆ ತಾಂಡವ ನೃತ್ಯವನ್ನು ತೋರಿಸುತ್ತಿರುವ ಮಲೇರಿಯಾ ರೋಗದ ಉಪಶಮನಕ್ಕಾಗಿ ಪ್ರಯತ್ನ ಪಡಬೇಕಾದದ್ದಿದೆ. ಜನ ಶಕ್ತಿಯು ಆಹಾರದ ಕಮ್ಮಿ ಪರಿಮಿತಿಯಿಂದಲೂ ಸಾಲ ನಿವಾರಣೆ ಬಗ್ಗೂ ಹೆಚ್ಚಿನ ತಿಂಗಳಲ್ಲಿ ಘಾಟಿಗಳ ಮೇಲೆ ಹೋಗಿ ಅಲ್ಲಿ ದುಡಿಯುತ್ತಿರುವುದರಿಂದ ಇಲ್ಲಿಯ ಹಲವು ಉಪಯುಕ್ತ ಸ್ಥಳಗಳು ಬಂಜರು ಬೀಳುತ್ತಿರುವುದು. ಇಂತಹ ನ್ಯೂನತೆಗಳನ್ನು ಹೋಗಲಾಡಿಸಿ ಗ್ರಾಮದ ಉತ್ಪತ್ತಿಯಿಂದಲೇ ತಾಲೂಕನ್ನು ಹಸನಾಗಿ ವೃದ್ಧಿಪಡಿಸಿ ಇನ್ನಷ್ಟು ಉತ್ತಮ ಸ್ಥಿತಿಗೆ ತರಬಹುದಾಗುತ್ತದೆ. ಅದಕ್ಕೆ ಅನುಕೂಲವೂ ಉಂಟು.

ವಿಚಾರವಂತ ವಕೀಲರುಗಳು ಈಗಿನ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನಿಂದಾಗಿ ಕಕ್ಷಿಗಾರರು ಬೇಕಾದಷ್ಟು ಸಿಗುತ್ತಿರುವುದರಿಂದಲೂ, ಅಳಿಯ ಸಂತಾನದ ಕಟ್ಟಿನ ವಿರುದ್ಧ ಯಜಮಾನರುಗಳು ಮಕ್ಕಳ ಸಂತಾನವನ್ನೆ ಆಚರಿಸುತ್ತಿರುವುದರಿಂದ ವಾದ ವಿವಾದಗಳು ಜಾಸ್ತಿ ಬೆಳೆದು ವಕೀಲರ ಹಸ್ತ ಮೊಕದ್ದಮೆಗಳು ಬಂದು ಬೀಳುತ್ತಿರುವುದರಿಂದಲೂ, ಹಣದ ಸಂಚಯವು ತಮ್ಮ ಮುಂದಿರುವುದನ್ನು ನೋಡದೆ, ದೇಶೀಯ ಕಾರ್ಯದಲ್ಲೇ ಇದ್ದು ಸಿಮ್ಮುದಾಯಿಗಳಿರು. ಇದು ತಾಲೂಕಿನ ಹೆಚ್ಚಿನ ಜಿಲ್ಲೆಯ ದುರ್ಭಾಗ್ಯ. ಇಷ್ಟು ವರ್ಷಗಳಲ್ಲಿ ಕಷ್ಟ ಹೊಂದಿದವರನ್ನು ಸಾಮಾನ್ಯ ಜನರು ಪಡುತ್ತಿರುವ ಚಿತ್ರಗಳು ಕಣ್ಣೆದುರು ಬಂದು ತನ್ನ ತಾಂಡವ ನೃತ್ಯವನ್ನು ತೋರಿಸುತ್ತಿದೆಯಾದರೂ ವಿಚಾರಿಗಳು ಆ ಕಡೆ ದೃಷ್ಟಿ ಕೊಡದಿರುವುದು ಇನ್ನಷ್ಟು ವ್ಯಸನಕರ. ಮಾರ್ಗದರ್ಶಕರೇ! ಕರ್ತವ್ಯಶೂನ್ಯರಾದರೆ ಸಾಮಾನ್ಯರು ಏನು ತಾನೇ ಮಾಡಲಾಪರು? ವಿವೇಕವೇ ಅತ್ಕಕ್ತಿಯನ್ನು ಕಾರ್ಯ ಪಥದಲ್ಲಿ ಪರ್ಯವಸಾನಗೊಳಿಸುವಂತೆ ಪ್ರೇರೇಪಿಸು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿ ಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಗಳಿಗೆ ತಕ್ಕಂತಾದ ಔಷಧಿ ರವಾನಿಸಲಾಗುವದು. (1) ಉಡುಪಿ ಏಜೆಂಟರು:— ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:— ಪಾಪ್ಯುಲರ್ ಸ್ಟೋರ್ಸ್, ಕೆಮೆಸ್ಟ್ 183, ಸುಜಾರಿಬಾಗ್ ರೋಡ್, ಡಿ. ಐ. ಪಿ. ಕ್ವೈಟ್, ಪರ್ಗಾನ ಕ್ರಾಸ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಕೆ. ಐ. ಪಿ. ಮಾಟುಂಗಾ.

ನೋಟೀಸು

—ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟ ಕ್ರಮ ನಂಬ್ರ 211/1943ನೇ ವ್ಯಾಜ್ಯದಲ್ಲಾದ ಎವಾರ್ಡ ಡಿಕ್ರಿಯ ನಂತರ ಸದರಿ ವ್ಯಾಜ್ಯದಲ್ಲಿ ಆದ R. I. A. No. 610/1945ನೇ ಅರ್ಜಿಯಲ್ಲಿ ಆದ ಹುಕುಂ ಮೇರೆಗೆ ಈ ಕೆಳಗೆ ವಿವರಿಸಿದ ಆಸ್ತಿಯನ್ನು ಲೀಲಾಂ ಮಾಡಿ ಕ್ರಯವರಿಸುವರೇ ಸದ್ರಿ ಕೋರ್ಟನಿಂದ ನೇಮಕವಾದ ರಿಸೀವರ್ ವಕೀಲ ಜಿ. ಸಿ. ರೇಗೋ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ.

ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದ ಉಡುಪಿ ಮುನಿಸಿಪಾಲಿಟಿಯ ನಂಬ್ರ III ನೇ ಅಂಬಲಪಾಡಿವಾರ್ಡಿಗೆ ಸೇರಿದಂತಾ.-

ಸ. ನಂ. 83-9-ಬಾಗಾಯ್ತು- ಸೆಂಟ್ಸ 20.
83-15-ಬಾಗಾಯ್ತು- ಸೆಂಟ್ಸ 17.

ಪಟ್ಟು ಸೆಂಟ್ಸ 37 ವಿಸ್ತೀರ್ಣದ ಅರ್ಧ ಮೂಲಗೇಣಿ ಹಕ್ಕಿನ ಆಸ್ತಿಯಾಗಿದ್ದು ಸದರಿ ಎರಡು ಸಬ್ ಡಿವಿಜನುಗಳು ಒಂದಕ್ಕೊಂದು ತಾಗಿದ್ದು ಒಮ್ಮತ್ತುವಾದ ಸ್ಥಳವಾಗಿ ಸದ್ರಿ ಸ್ಥಳದ ಮೂಡುಬದಿಗೆ ಉಡುಪಿ ಉಡಿಯಾವರ ರಾಜರಸ್ತೆಯೂ ಪಡುಬದಿಗೆ ಅಜ್ಜರಕಾಡು ಪಾರ್ಕ ರಸ್ತೆಯೂ ಇರುತ್ತವೆ. ಸದ್ರಿ ಸ್ಥಳದ ಮೂಡು ರಾಜರಸ್ತೆಯ ಕಿನಾರೆಗೆ ತಾಗಿ ಒಂದು ಹಂಚು ಛಾವಣಿಯ ಮನೆಯೂ ಸದ್ರಿ ಮನೆಯ ಹಿಂಬದಿಯಲ್ಲಿ ಕಲ್ಲು ಪಾಗಾರ ದ ಸುಂದಗಳಿರುವ ಒಂದು ಬಾವಿ ಮತ್ತು ಹಲಸು, ಮಾವು, ತೆಂಗು, ವಾಗ್ವಾನಿ ವಗೈರೆ ಮರದ ಸಸಿಗಳು ಇರುತ್ತವೆ. ಸದರಿ ಮನೆಯಲ್ಲಿ ಯಾರೂ ವಾಸಿಸುತ್ತಿಲ್ಲದೆ ನಾನು ರಿಸೀವರನಾಗಿ ಕೋರ್ಟು ಮೂಲಕ ಸದ್ರಿ ಸ್ಥಳ ಮನೆ ವಗೈರೆಯನ್ನು ಕೋರ್ಟ ಮೂಲಕ ಸ್ವಾಧೀನಪಡಿಸಿಕೊಂಡು ಸ್ವಾಧೀನದಾರನಾಗಿರುತ್ತೇನೆ.

ಮೇಲೆ ವಿವರಿಸಿದ ಸದರಿ ಆಸ್ತಿಯನ್ನು ಕೋರ್ಟ ಹುಕುಂ ಮೇರೆಗೆ ಇದೇ ಮಾರ್ಚ ತಿಂಗಳ ತಾರೀಕು 31ನೇ ಆದಿತ್ಯವಾರ ಪ್ರಾತಃ ಘಂಟೆ 10ರಿಂದ 11ರ ವರೆಗೆ ಉಡುಪಿ ಮುನ್ಸಿಫ್ ಕೋರ್ಟ ಇಳಿಯಿರುವ ನನ್ನ ಆಫೀಸಿನಲ್ಲಿ ಹರಾಜು ಮಾಡಲ್ಪಡುವದು.

ಮಾರಾಟದ ಶರ್ತಗಳು

1. ಏಲಂ ಮಾಗ್ತುವ ಆಸ್ತಿ ಒಂದೇ ಲೋಟಾಗಿ ಲೀಲಾಂ ಮಾಡಲ್ಪಡುವದು.

2. ಲೀಲಾಂ ಬಗ್ಗೆ ವಾರು ಕರಿಯುವ ಮೌಲ್ಯ ರೂ 1000/ ಎಂದು ನಿರ್ಣಯಿಸಲ್ಪಟ್ಟಿದೆ.

3. ಹರಾಜಿನಲ್ಲಿ ಅತ್ಯಧಿಕವಾದ ಮೌಲ್ಯಕ್ಕೆ ಕರೆದವರ ಹೆಸರಿಗೆ ಲೀಲಾಂ ಕಾಯಂ ಮಾಡಲ್ಪಡುವದು.

4. ಲೀಲಾಂನಲ್ಲಿ ಕ್ರಯಕೊಂಡವರು ಲೀಲಾಂ ಸಂಪೂರ್ಣ ಆದ ಕೂಡಲೇ ಲೀಲಾಂ ಕಾಯಂ ಮಾಡಲ್ಪಟ್ಟ ಕೂಡಲೇ ರಿಸೀವರನ ವಶ ಕೊಡತಕ್ಕದ್ದು.

5. ಲೀಲಾಂಗೆ ಕ್ರಯಕೊಂಡವರು ರಿಸೀವರಿಂದ ಕ್ರಯಚೀಟು ಬರಸಿಕೊಳ್ಳುವ ಬಗ್ಗೆ ರಸಿ, ರಿಜಿಸ್ಟ್ರಿ ಫೀಸು, ಬರದ ಫೀಸು ವಗೈರೆ ಎಲ್ಲಾ ಖರ್ಚು ತೆರಬೇಕಾದ್ದರಿಂದ ಆ ಬಗ್ಗೆ ಆಗತಕ್ಕವುಳ್ಳ ಮೊಬಲಗನ್ನು ಲೀಲಾಂ ಕಾಯಂ ಮಾಡಲ್ಪಟ್ಟ ಕೂಡಲೇ ನನ್ನ ವಶ ಡಿಪೊಜಿಟು ಮಾಡತಕ್ಕದ್ದು.

6. ಲೀಲಾಂ ಮಾಡಿದ ಕುರಿತು ರಿಸೀವರನು ಕೋರ್ಟಿಗೆ ರಿಪೋರ್ಟು ಮಾಡಿ ಲೀಲಾಂ ಆದ 8 ದಿವಸಗಳಲ್ಲಿ ಪರ್ಯಾಸ್ತವಾರನ ವಶಕ್ಕೆ ಸದ್ರಿ ಆಸ್ತಿಯ ಕ್ರಯಚೀಟನ್ನು ರಿಜಿಸ್ಟ್ರಿ ಮಾಡಿಕೊಡಲ್ಪಡುವದು.

7. ಆಸ್ತಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸಂಬಂಧಿಸಿದ ಆಕ್ಷೇಪಣೆಗಳಿದ್ದರೆ ಕೋರ್ಟ ಮೂಲಕ ಪಡೆದು ಕ್ರಯಚೀಟಿನ ರಿಜಿಸ್ಟ್ರಿ ಸಮಯ ಪರ್ಯಾಸ್ತವಾರನ ವಶ ಕೊಡಲ್ಪಡುವದು.

ಈ ಶರ್ತಗಳಿಗನುಸರಿಸಿ ಲೀಲಾಂ ಮಾಡಿ ಕ್ರಯವರಿಸಿಕೊಡಲ್ಪಡುವುದು.

ಲೀಲಾಂನ ಆಸ್ತಿಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುವವರು ನನ್ನ ಆಫೀಸಿಗೆ ಲೀಲಾಂನ ಮುಂಚಿತವಾಗಿ ಬಂದು ವಿಚಾರಿಸಬಹುದು.

Gratian C Rego,
ಉಡುಪಿ ರಿಸೀವರ.
ತಾ. 12-3-1946.

ಪುತ್ತೂರು ತಾಲೂಕಿನ ನೈಜಚಿತ್ರ

ಲೇಖಕ:- ಎಂ. ಬಿ ನರ್ಸಪ್ಪ, ಪುತ್ತೂರು.

[ಪುತ್ತೂರು ತಾಲೂಕಿನ ನೈಜಚಿತ್ರ'ವೆಂದಿದರೂ ಇದು ಸಾಮಾನ್ಯವಾಗಿ ಎಲ್ಲ ಕಡೆಗಳ ಸ್ಥಿತಿಯೂ ಇರುವುದರಿಂದ ದೀರ್ಘವಿದ್ದರೂ ಇದನ್ನಿಲ್ಲಿ ಪ್ರಕಟಿಸಲಾಗಿದೆ. —ಸಂ. ನಂ.]

ಗತಿಸಿದ ೧೯೪೬ ಇನೇ ವರ್ಷದ ದುರಂತದ, ಅಂದರೆ ಜಿಲ್ಲೆಯ ಆಹಾರ ಸಮಸ್ಯೆಯೊಂದು (ಮುಂದಿಗಾಗಿ ಅಕ್ಕಿ ಭತ್ತಗಳು ನಾನಾ ಮೂಲೆಗಳಿಂದ ಪರ ಜಿಲ್ಲೆಗಳಿಗೆ ಕಳ್ಳ ವ್ಯಾಪಾರ ಮೂಲಕ ಸಾಗಿದುದರ ಕಾರಣದಿಂದಾಗಿ ಹಾಹಾಕಾರ ಎದ್ದು ಆಗಿನ ಜಿಲ್ಲಾಧಿಕಾರಿಗಳು ವರ್ಗವಾಗಿ ಹೋದ ಸಮಯ) ಆಗಲೇ ಜಿಲ್ಲೆಗೆ ಹೊಸತಾಗಿ ಬಂದಿದ್ದ ಜಿಲ್ಲಾಧಿಕಾರಿಗಳಾದ ಶ್ರೀ. ಪಿ. ರಾಮದಾಸ್ ಬಿ. ಎ. ಇವರಿಗೆ ಬಗೆಹರಿಯದ ಪ್ರಶ್ನೆಯಾಗಿತ್ತು. ಜಿಲ್ಲೆಯ ನಾನಾ ಕಡೆಗಳಲ್ಲಿ ಅಕ್ಕಿ ಇಲ್ಲ, ಚಿಲ್ಲರೆ ಇಲ್ಲ, ಚಿಮಿಣಿಎಣ್ಣೆ ಇಲ್ಲ, ಸಕ್ಕರೆ ಇಲ್ಲ, ಅದು ಇಲ್ಲ, ಇನ್ನೊಂದು ಸಿಕ್ಕಲಾರದು, ಮತ್ತೊಂದನ್ನು ಕೇಳಬೇಡಿರಿ ಎನ್ನುತ್ತಿದ್ದ ಕಾಲ. ಇನ್ನೇನು, ಅಕ್ಕಿ, ದವಸಧಾನ್ಯಗಳಿಗೆ ವಿಪರೀತ ಬೆಲೆಯಾಗಿದ್ದು ಬಡ ಜನರ ಬಾಳುವೆ ಅಸಾಧ್ಯವಾಗಿ ಹಸಿವು ದೇವತೆಗೆ ಬಲಿ ಅರ್ಪಿಸುವ ಸಮಯವು ಬರಲಿಕ್ಕಿರುವುದೋ ಎಂದು ಬೆದರಿದ ಕಾಲ. ಇಂತಹ ಸಮಯದಲ್ಲಿ ಜಿಲ್ಲೆಗೆ ಬೇಕಾದ ಆಹಾರ ಹಾಗೂ ಪ್ರಕೃತ ಜೀವನಾವಶ್ಯಕ ವಸ್ತುಗಳ ಸಂಗ್ರಹಕ್ಕಾಗಿ ಜಿಲ್ಲಾಧಿಕಾರಿಗಳು ಕೆಲ ಅಧಿಕಾರಿಗಳು, ಜನತೆ ಹಾಗೂ ಜಿಲ್ಲಾ ಪತ್ರಿಕೆಗಳು ಒಗ್ಗಟ್ಟಿನಿಂದ ಪರಸ್ಪರ ಸಹಕರಿಸಿದರು. ಬೆಲೆ ನಿಯಂತ್ರಣವಾಯಿತು. ಕಳ್ಳ ವ್ಯಾಪಾರಕ್ಕೆ ತಡೆಯಾಯಿತು. ಚಿಲ್ಲರೆ ಸಿಕ್ಕುವಂತಾಯಿತು. ಜೀವನಾವಶ್ಯಕ ವಸ್ತುಗಳು ಮಿತವಾಗಿ ಸಿಕ್ಕುವ ಅಭಿಮಾನವಿತು. ಜಿಲ್ಲೆಯ ಮೂಲೆಗಳಿಂದ ಅಕ್ಕಿ-ಭತ್ತ ಸಂಗ್ರಹವಾಗುತ್ತಾ ಬಂತು. ಬಡವರ ಅರೆ ಹೊಟ್ಟೆಗಳು ತುಂಬ ಬಂತು. ಸಕಾಲದ ಮುಂಜಾಗ್ರತೆಯಿಂದ ಬಡ ಸಮಾಜವು ಕೃತಜ್ಞತೆ ಸೂಚಿಸಿತು. ಆಗಿನ ಸಮಯದಲ್ಲಿ ಪುತ್ತೂರು ತಾಲೂಕು ಸಕಾಲದಲ್ಲಿ ಮಂಗಳೂರಿಗೆ ಇದ್ದ ಅಕ್ಕಿ-ಭತ್ತ ಸಂಗ್ರಹವನ್ನು ಜಿಲ್ಲೆಯ ಇತರ ಕಡೆಗಳಿಗೆ ಒದಗಿಸುವರೆ ಕಳುಹಿಸಿಕೊಟ್ಟಿತು. ಜಿಲ್ಲಾಧಿಕಾರಿಗಳು ವ್ಯಕ್ತಿಕೆಳಗಿನ ಅಧಿಕಾರಿಗಳು ಜವಾಬ್ದಾರಿಯಿಂದ ತಮ್ಮ ಕಾರ್ಯ ಚಟುವಟಿಕೆಗಳನ್ನು ತೋರಿಸಿದರು. ಜಿಲ್ಲಾಧಿಕಾರಿಗಳ ಕಾರ್ಯ ಪ್ರಯತ್ನವು ಜಯಶೀಲವಾಗಿ ಬಂತು. ಪುತ್ತೂರು ತಾಲೂಕು ಸಕಾಲದಲ್ಲಿ ಹೆಚ್ಚಿನ ಅಕ್ಕಿಯನ್ನು ಒದಗಿಸಿಕೊಟ್ಟ ಬಗ್ಗೆ ತಾಲೂಕನ್ನು ಪ್ರತಿ ಒಂದು ಸಾರ್ವಜನಿಕ ಸಭೆಗಳಲ್ಲೂ ಜಿಲ್ಲಾಧಿಕಾರಿಗಳು ಪ್ರಶಂಸಿಸಿದರು. ಜನತೆಯನ್ನು ಕೊಂಡಾಡಿದರು. ಆ ಸಂಬಂಧ ಪುತ್ತೂರು ತಾಲೂಕು ಇನ್ನಿತರ ತಾಲೂಕಿನ ಸೇವೆಯನ್ನು ಸಕಾಲದಲ್ಲಿ ಮಾಡಿತು. ಮುಂದಿನ ಇದರ ಪರಿಣಾಮ ಏನಾಯಿತು?

ಸ್ವತ್ತು ಸೂರೆಯಾಗುತ್ತಿದೆ

ಯುದ್ಧದ ಕಾಲವು ಪುತ್ತೂರನ್ನು ಸೋಂಕದ ಬಡಲಿಲ್ಲ. ಒಂದಲ್ಲ ಎರಡು ಸಲ ಸರ್ಕಾರ ಯುದ್ಧ ಫಂಡಿಗೆಂದು ಲಕ್ಷಗಟ್ಟಲೆ ಹಣ ಸಂಗ್ರಹಿಸಿ ಕಳುಹಿಸಲ್ಪಟ್ಟಿವು. ಅಕ್ಕಿ ಹಾಗೂ ಅಡಕೆ ಬೆಳೆಯುವ ತಾಲೂಕೆಂದು ಆ ಬರಿಯ ಹಣದ ರೂಪದ ವ್ಯತ್ತದಲ್ಲಿ ಹೊಂದಿದಂತ ಕಾಣ್ಕೆಯಿಂದ ಯುದ್ಧ ಸಹಾಯ ನಿಧಿ, ಸರಕಾರಿ ಪತ್ರಗಳು, ಸಣ್ಣ ಸಣ್ಣ ಉಳಿತಾಯದ ನಿಧಿ, ಸರಕಾರಿ ಸೇವಿಂಗ್ಸ್ ಬ್ಯಾಂಕಿಗೆ ನಿಧಿ, ಯುದ್ಧದಲ್ಲಿ ಸತ್ತವರಿಗೆ, ಘಾಯಪಟ್ಟವರಿಗ ನಿಧಿ, ಯುದ್ಧದಿಂದ ಹಿಂತಿರುಗುವವರಿಗ ನಿಧಿ, ಸೈನಿಕರ ಕುಟುಂಬದವರ ಸಹಾಯಕ್ಕೆ ನಿಧಿ, ಸರಕಾರಕ್ಕೆ ಸಾಲ ಕೊಡಿರೆಂಬ ಹಣ, ನಾಟಕಕ್ಕೆ ಹಣ, ಬಾಲ್ ಆಟಕ್ಕೆ ಹಣ ಆ ಬಗ್ಗೆ ಹಣ, ಈ ಬಗ್ಗೆ ಹಣ ಎಂದು ತಾಲೂಕಿನ ಕಚೇರಿಯಿಂದ ಹಿಡಿದು ಗ್ರಾಮ ಕಲೆಕ್ಟರ ವರೇಗೆ ಲಕ್ಷಗಟ್ಟಲೆ ಹಣ ಸಂಗ್ರಹಿಸಿದರು. ಹಾಗೂ ಈಗಲೂ ಸಂಗ್ರಹಿಸಿ ಕಳುಹಿಸುತ್ತಿರುವರು.

ತಾಲೂಕಿನ ಜನರು ದುಡಿದು, ಅರೆ ಹೊಟ್ಟೆಯಿಂದ ಜೀವನ ನಡೆಸಿ ಅಂಗಿ ಬಟ್ಟೆಗೆದು, ಮದುವೆ ಮುಂಜಿಗೆಂದು, ಮಕ್ಕಳ ವಿದ್ಯಾಭ್ಯಾಸಕ್ಕೆಂದು ಹಾಗೂ ಇನ್ನಿತರ ಆಪತ್ ಧನವೆಂದು ಇಟ್ಟ ಹಣವು ಮೇಲಿನ ಶಿರೋನಾಮೆಗಳ ಪೈಕಿ ಕೆಲವಕ್ಕೆ ತೆಗೆದುಕೊಳ್ಳಲ್ಪಟ್ಟಿತು. ಸ್ಟೋರಿಗೆ ಅಕ್ಕಿ ಒಪ್ಪಿಸುವಲ್ಲಿ ಹಣ ಸಂಗ್ರಹ, ಸಕ್ಕರೆ ಕೂಪನಿಗೆ ಹೋಗುವಾಗ್ಗೆ ಹಣ ಸಂಗ್ರಹ, ರೇಶನ್ ಅಕ್ಕಿ ಪಡೆಯುವಲ್ಲಿ ಹಣ ಸಂಗ್ರಹ, ತಾಲೂಕು ಆಫೀಸಿಗೆ ಅರ್ಜಿ ಹಿಡಕೊಂಡು ಹೋದರೆ ಅಲ್ಲಿ ಹಣ ಸಂಗ್ರಹ, ರಿಜಿಸ್ಟ್ರಆಫೀಸಿಗೆಹೋದರೆ ಅಲ್ಲಿಹಣಸಂಗ್ರಹ ಪರೇಲರಲ್ಲಿ, ಕ್ಯಾಂಪುಭಾಗರಲ್ಲಿ, ರೆವಿನ್ಯೂ ಇನ್ಸ್‌ಪೆಕ್ಟರರಲ್ಲಿಹಾಗೂತಳೆಯಾರುಗಳಲ್ಲಿಹೋದರೆ ಹಣ ವಸೂಲಿ, ಈ ರೀತಿ ರೆವಿನ್ಯೂ ಡಿಪಾರ್ಟುಮೆಂಟಿನ ಪ್ರತೀ ಒಂದು ಶಾಖೆಗಳಲ್ಲಿ ಹಣ ಸಂಗ್ರಹವಾಗುತ್ತಿದೆ. ಕೆಲವು ಕಡೆಗಳಲ್ಲಿ ಒತ್ತಾಯ ರೂಪದಿಂದಲೂ ಹಣ ಕೊಡದಿದ್ದರೆ ಯಾವ ಕೆಲಸವೂ ಆಗಲಾರದೆಂಬ ಬೆದರಿಕೆಗೂ ದಾವಮಾಡಾಯಿ ಪ್ರಕಾರ ಎಕ್ರೆ ಒಂದಕ್ಕೆ 40 ಮುಡಿ ಬರುತ್ತದೆಂಬುವನ್ನು ಸಿದ್ಧಾಂತ ಪಡಿಸಿ ನೋಡಿದ" ಎಂಬ ಭರವಸೆಯನ್ನು ಮದ್ರಾಸು ಸರಕಾರಕ್ಕೆ ತಿಳಿಸಲ್ಪಟ್ಟು ಆ ಮೂಲಕ ಬೇಕಾದ ಹುಕುಂ ಪಡೆದು ಪ್ರತೀ ಒಂದು ಎಕ್ರೆ ಸ್ಥಳಕ್ಕೆ ಈ ಮುಂಚಿಗಿಂತ ಜಾಸ್ತಿ ಅಕ್ಕಿಯನ್ನು ಒಪ್ಪಿಸಲು ತಿಳಿಸಲ್ಪಟ್ಟು ಆ ರೀತಿ ಸಂಗ್ರಹವಾಗುತ್ತಿದೆ. ಧನಿಗಳಿಗೆ ನಿರಾಯಾಸವಾಗಿ ಮುಡಿ 1ರ ರೂ. 10-ದೊರಕುತ್ತಿರುವಾಗ್ಗೆ ಅವರು ಕೂಡಾ, ಈ ವಿಷಯದಲ್ಲಿ ಅಧಿಕಾರಿಗಳೊಡನೆ ಸಹಕರಿಸುತ್ತಿರುವುದು ವಿಶೇಷವಲ್ಲ. ಅಂದರೆ ಅಕ್ಕಿ ಮುಡಿಗಳು ರಾಶಿರಾಶಿಯಾಗಿ ಸಾಗುತ್ತಲೇ ಇರುತ್ತವೆ. ಅದರೆ ಒಳಗ್ಗಿನಿಂದ ರಾತ್ರಿ ವರೇಗೂ ಬೆವರು ಸುರಿಸಿ ದುಡಿದ ಒಕ್ಕಲುಗಳು ಇದರ ಕಷ್ಟ ತೊಂದ್ರೆಗಳನ್ನು ಮೂಕ ಪಶುಗಳಂತೆ ಅನುಭವಿಸುತ್ತಿರುವರು. ಮೇಲಾಗಿ ಉಳಿತಾಯದ

> ## ಹಿಂದುಗಳ ಪವಿತ್ರ ಗ್ರಂಥ—
> # ಗೀತೆಯ ಕೈಗನ್ನಡಿ
> **ಭಗವದ್ಗೀತೆಯ ಸಮೂಲ ಭಾಷಾಂತರ.**
> ಬೆಲೆ 0-8-0 ---- ಟಪ್ಪಾಲು ದ್ವಾರ 0-12-0
>
> ## ಸುಲಭವಾಗಿ ಇಂಗ್ಲಿಷನ್ನು ಕಲಿಸುವ ಪುಸ್ತಕ—
> # ಸುಲಭದಲ್ಲಿ ಇಂಗ್ಲಿಷ್
> **ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ**
> ಬೆಲೆ ರೂ. 1-8-0 ---- ಟಪ್ಪಾಲು ದ್ವಾರಾ ರೂ. 1-12-0
>
> **ಅಖಿಲ ಭಾರತದಲ್ಲಿ ಹೆಸರು ಪಡೆದ ನವೀನ ವಿಶೇಷಾಂಕ**
> # ಅಂತರಂಗ ಆಯುರ್ವೇದ ಸಂಚಿಕೆ
> ಬೆಲೆ ರೂ 1-0-0 ---- ಟಪ್ಪಾಲು ದ್ವಾರ 1-4-0
>
> (1) **ಅಂತರಂಗ ಆಫೀಸು, ಉಡುಪಿ.**
> (2) **ನವಭಾರತ ಬುಕ್ ಡಿಪ್ಪೊ, ಉಡುಪಿ.**
> (3) **ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.**

ಮೊದಲೂ ಹಣ ಸಂಗ್ರಹವಾಗಿದೆ. ಕೆಲವು ಕಡೆಗಳಲ್ಲಿ ಈ ರೀತಿ ಹಣ ವಸೂಲು ಮಾಡಿ ರಶೀದಿ ಕೊಡದೆ ಕೆಲವು ಅಧಿಕಾರಿಗಳ ಕಿಸೆಗಳು ತುಂಬಿರುವುದೆಂಬುದರಲ್ಲಿಯೂ ಪುಕಾರು ಎದ್ದಿತ್ತು. ಈ ಸಂಗತಿ ಅವರವರ ಆತ್ಮಸಾಕ್ಷಿಗೂ, ದೇವರು ಒಬ್ಬನು ಇರುವುದು ನಿಜವಾಗಿದ್ದರೆ ಅವನಿಗೂ ತಿಳಿದಿದೆ ಎಂದು ಹೇಳಬಹುದು.

ಅಕ್ಕಿ ಸಾಗುವಿಕೆ

ಒಬ್ಬ ಮನುಷ್ಯನ ದೇಹವು ಹುಟ್ಟಿ, ಬೆಳೆದು ನಂತರ ಕ್ರಮವಾಗಿ ಬರುವಂತೆ ಪ್ರತೀ ಒಂದು ಜೀವರಾಶಿಗೂ, ಜಡ ವಸ್ತುಗಳಿಗೂ ಕ್ಷೀಣಿಸುವ ನಿಯಮ ಇರುತ್ತದೆ. ಅದರಂತೆಯೇ ಗದ್ದೆಗಳ ಸಾರವತ್ತಾದ ಭಾಗವು ಕಾಲಕ್ರಮೇಣ ಕಮ್ಮಿಯಾಗುತ್ತಾ ಬರುವುದೂ ಉಂಟು. ಸಾರವತ್ತಾದ ಭಾಗವನ್ನು ವೃದ್ಧಿಸುವರೆ ಅನೇಕ ಶೋಧನೆಗಳೂ, ವಿವಿಧ ತರದ ಗೊಬ್ಬರಗಳ ಸಂಗ್ರಹಗಳೂನಡೆದಿವೆಯಾದರೂ ಅವನ್ನು ಪ್ರತೀ ಒಂದು ಗದ್ದೆಯ ಭಾಗಕ್ಕೆ ಕೊಡುವಷ್ಟು ಯಾ ಬೇಕಾದಷ್ಟು ಒದಗಿಸುವರೆ ಈ ವರೇಗೆ ಅಸಾಧ್ಯವಾಗಿದೆ. ಅವರೆ ಕೆಲವು ಗದ್ದೆಗಳ ಬೆಳೆಯನ್ನು ಕಂಡು ಸರ್ವಸಾಮಾನ್ಯ ತಾಲೂಕಿನ ಎಲ್ಲಾ ಕಡೆಗೆ ಅಕ್ಕಿಯೊಂದೂ ವಸೂಲು ಮಾಡಲ್ಪಟ್ಟು ಹಳ್ಳಿಗಳ ದಾರಿದ್ರ್ಯವನ್ನು ಹೆಚ್ಚಿಸಿದಂತಾಗಿದೆ.

ಧನಿಯ ಎಂದೂ ಮುಗಿಯದ ಸಾಲ, ಅರೆ ಹೊಟ್ಟೆಯಿಂದ ನಡೆಸುವ ಜೀವನ, ಆಹಾರವನ್ನುಹೆಚ್ಚಿಗೆ ಬೆಳೆಸಿರಿ ಎಂಬ ಪ್ರಚಾರಕ್ಕನುಗುಣವಾಗಿ ಬೇಕಾದ ಖರ್ಚಿಗೆ ಬೀಜಾವರಿಗಳನ್ನು ಬಿಡದಿರುವಿಕೆ. ಈ ಕಾರಣಗಳಿಂದ ಸಹಸ್ರಗಟ್ಟಲೆ ಬಡ ದುಡಿಯುವ ಜನರು ಘಟ್ಟಗಳಿಗೆ ಹೋಗುತ್ತಿರುವುದನ್ನು ನಾವು ಕಾಣುತ್ತಿರುವೆವು. ಈ ಕಾರಣಗಳಿಂದ ಆಹಾರ ಹೆಚ್ಚಿಗೆ ಬೆಳೆಸುವುದರ ಬದಲಿಗೆ ಹಲವು ಉಪಯುಕ್ತ ಸ್ಥಳಗಳು ಬಂಜರು ಬೀಳುತ್ತಿರುವುದೂ ಆಶ್ಚರ್ಯವಲ್ಲ. ಇದೂ ಕೂಡಾ ಶ್ರೀಮಂತರಿಗೆ ಅನುಕೂಲವೇ ಆಗುತ್ತದೆ. ಹಲವು ಸಹಸ್ರ ರೂಪಾಯಿ ಬೆಲೆ ಬಾಳುವುದು ಬರೇ ಬೆಲೆಗೆ, ಇಲ್ಲವೆ ಅಲ್ಪ ಸ್ವಲ್ಪ ಕ್ಕೆ ಆಸ್ತಿಗಳು ಕೈಸೇರಿಬಿಡುತ್ತವೆ. ಅದರೆ ಇವುಗಳ ಅಂತ್ಯ ಪರಿಣಾಮವಲ್ಲಿ ಎಂಬುದನ್ನು ಮುಂದಕ್ಕೆ ನೋಡಬೇಕಾಗಿದೆ.

ಇನ್ಶೂರೆನ್ಸಿನ ಪ್ರಭಾವ

ತಾಲೂಕಿನ ಹಣವು (ಸ್ವತ್ತು) ಹಲವು ರೂಪಗಳಿಂದ ಹೊರ ಹೋಗುವುದಕ್ಕೆ ಇನ್ಶೂರೆನ್ಸ್ ವ್ಯಾಪಾರವೂ ಮತ್ತೊಂದು ಕಾರಣ. ಯಾವ ಉದ್ದಿಮೆಗಳಿಗಾದರೂ ಮಿತವುಂಟು. ಆದರೆ ಬಹುತೇಕವಾಗಿ ಅಧಿಕಾರದ ಪ್ರಭಾವಕ್ಕೆ ಒಳಗಾಗಿ, ಸ್ವಾತಂತ್ರ್ಯದ ದಾಕ್ಷಿಣ್ಯಕ್ಕೆ ಬಲಿಬಿದ್ದು ಹೋಟೆಲು ಕಾರುಗಳಲ್ಲಿ ಡಾಕ್ಟರರನ್ನು ಕೂರಿಸಿ ಅಲ್ಲಲ್ಲಿ ಪಕ್ಕನೇ ಭೇಟಿ ನಡಿಸಿ ಇನ್ಶೂರೆನ್ಸಿಗೆ ಸೇರಬೇಕು, ನಮ್ಮತು ಹಾಕಬೇಕು, ಹಣ ಕಟ್ಟಬೇಕು ಎಂದು ಹಣ ಪಡೆದರೆ ತಾತ್ಕಾಲಿಕ ಪ್ರಯೋಜನವು ಹಲವರಿಗಾಗಬಹುದು. ಆದರೆ ಒತ್ತಾಯದಿಂದಗಿ ಒಂದೆರಡು ಕಂತುಗಳನ್ನು ಕಟ್ಟಿ ನಂತರ ಬಿಟ್ಟುಬಿಡುವುದಾದಲ್ಲಿ ಅಂತಹ ಅನಾವಶ್ಯಕ ಇನ್ಶೂರೆನ್ಸ್ ಫಲಕಾರಿಯಾಗುವುದರ ಬದಲಿಗೆ ಮುಂದಕ್ಕೆ ಅಂತಹ ಜನರು ಬಂದಾಗ್ಗೆ ದ್ವೇಷಿಗಳ ಹಾಗೆ ಕಾಣುವ ಪ್ರಸಂಗ ಬರುತ್ತಿದೆ.

ಹೇಟು-ಕೋಟು-ಇಜಾರ ಹಾಗೂ ಕಾರಿನಲ್ಲಿ ಖುಷಿ ಬಂದ ಹಾಗೆ ತಿರುಗಾಡುವ ಸಾಲಕ್ಕಾಗಿ ಇನ್ಶೂರು ಆಗಕೂಡದು. ಹಾಗಾದರೆ ಮುಂಚೆ ಒಬ್ಬ ಗೌಳಿಗನು ಹೆಚ್ಚಿನ ಹಾಲು ತೆಗೆಯುತ್ತೇನೆಂದು ದನದ ಕೆಚ್ಚಲನ್ನು ಕೊಯ್ದಂತಾಗುತ್ತದೆ. ಮಾತ್ರವಲ್ಲ ಸ್ವಸಮಾಜವನ್ನು ವಂಚಿಸಿದಂತಾಗುತ್ತದೆ.

ಸಾಮಾನ್ಯ ಜನರ ರಕ್ತ ಶೋಷಣೆ

ಕೆಲವು ಧನಿಗಳ ಕಿಸೆಗೆ ಮುಡಿ 1ರ 10 ರಂತೆ ಬೀಳಬಹುದು ಆದರೆ ಅದು ಸಹಸ್ರ, ಲಕ್ಷಗಟ್ಟಲೆ ಜನರಿಗೆ ವಿಪರೀತ ಕರ ಬಿದ್ದಂತೆ ಆಗುತ್ತದೆ. ದವಸ ಧಾನ್ಯಗಳ ವಿಪರೀತ ಬೆಲೆ ರೀತ ಬೆಲೆಯು ಪೆಟ್ಟು ಶ್ರೀಮಂತರಿಗೆ, ದೊಡ್ಡ ದೊಡ್ಡ ಅಧಿಕಾರಿಗಳಿಗೆ ಬೀಳುವುದಿಲ್ಲ. ಮೊದಲೇ ಅವರಿಗೆ ಅವಕ್ಕನುಕೂಲವಾಗಿ ಉತ್ಪತ್ತಿಗಳಿಗೆ ವಿಪರೀತ ಧಾರಣೆಯ ಅವಕಾಶ ಕೊಡಲ್ಪಟ್ಟಿವೆ. ಆ ಧಾರಣೆಯಿಂದ ಸಿಕ್ಕಿದ ಯತೇಷ್ಟ ನೋಟುಗಳ ರಾಶಿಯಿಂದ ಸ್ವಲ್ಪ ಸ್ವಲ್ಪ ಯುದ್ಧ ಫಂಡಿಗೂ, ಆ ಸಹಾಯ ಧನ, ಈ ಸಹಾಯ ಧನ ಇವಕ್ಕೂ ಕೊಡಬಹುದು ಹಲವು ಸಂಬಂಧಪಟ್ಟವರಿಗೆ ತೃಪ್ತಿಯಾಗಬಹುದು ಆದರೆ ಲಕ್ಷಗಟ್ಟಲೆ ದಿನ ಕೂಲಿ, ಅಲ್ಪವೇತನ ಸಿಕ್ಕುತ್ತಿರುವ ಸಾಮಾನ್ಯ ಜನರಿಗೆ ಮಾತ್ರ ಇದರ ನೇರವಾದ ಪೆಟ್ಟು ಬೀಳುತ್ತಿದೆ.

ಹಣ ಊರಲ್ಲಿಯೇ ಇರಬಾರದೇಕೆ?

ಮೇಲಿನ ಅನೇಕ ರೀತಿಯ ಹಣವು ಪರ ಪ್ರಾಂತ್ಯಗಳಿಗೆ ಯಾ ಪರದೇಶಗಳ ಪ್ರಯೋಜನಾರ್ಥವಾಗಿ ಹೋದುದರಿಂದ ಆ ಮೂಲಕದ ಬಡ್ಡಿ ಹಣವು ಹಲವು ಜನರಿಗೆ ದೊರಕಬಹುದು. ಆದರೆ ಸಾಮಾನ್ಯ ಜನರಿಗೇನು ಪ್ರಯೋಜನವಾದಂತಾಯಿತು? ಸಾಮಾನ್ಯ ಜನರ ಸರಾಸರಿ ಖರ್ಚು ತಿಂಗಳು ಒಂದರ ಯುದ್ಧಕ್ಕೆ ಮೊದಲು ಇದ್ದುದಕ್ಕಿಂತ ಈಗಿನ ಖರ್ಚು ನಾಲ್ಕು ಯಾ ಐದು ಪಟ್ಟು ಜಾಸ್ತಿಯಾಗಿದೆ. ಅಂದರೆ ಆ ಮೂಲಕ ಸಾಮಾನ್ಯ ಜನರು ಶೇಕಡಾ 300/ ಯಾ 400/ ಜಾಸ್ತಿ ಕರಕೊಡುತ್ತಾರೆಂತಾಯಿತು. ಹೀಗಾದರೆ ಸಾಮಾನ್ಯರಿಗೆ ದಿನ ನಿತ್ಯ ಊಟ ಮಾಡುವುದಾಗಲೀ, ವಸ್ತ್ರ ಉಡುವುದಾಗಲೀ, ವಿದ್ಯಾಭ್ಯಾಸ ಹೊಂದುವುದಾಗಲೀ ಎಲ್ಲಿ ಸಾಧ್ಯವಾಗಬಹುದು?

ತಾಲೂಕಿಗೆ ಸಂಬಂಧಪಟ್ಟ ಪಟ್ಟಣಗಳಲ್ಲಿಯ, ಗ್ರಾಮಗಳಲ್ಲಿ ಅನುಕೂಲವಿದ್ದ ಕೃಷಿ ಕೈಗಾರಿಕೆಗಳಿಗೆ ತಾಲೂಕಿನಿಂದ ಹೊರ ಹೋಗುವ ವಿಪುಲ ಹಣ ಸಂಚಯದಿಂದ ಪ್ರೋತ್ಸಾಹ ಕೊಡಬಹುದಿತ್ತು. ಅನೇಕ ರೀತಿಯ ಸಹಕಾರ ಹೊಂದಿದ ಸಾಬೂನು, ಎಣ್ಣೆ, ತೆಂಗಿನಕಾಯಿ, ಹಣ್ಣು ಹಂಪಲು, ಭತ್ತದ ಬೆಳೆ, ವಸ್ತ್ರ ತಯಾರಿಸುವ ಇತ್ಯಾದಿ ಅನೇಕ ತರದ ಕಾರ್ಯಕ್ರಮಗಳನ್ನು, ಆಧುನಿಕ ರೀತಿಗೆ ಒಪ್ಪುವ ಸಣ್ಣಸಣ್ಣ ಉಪಯುಕ್ತ ಕಟ್ಟಡಗಳನ್ನು ಕಟ್ಟಿಸಿ ಜನರ ಉಪಯೋಗಕ್ಕೆ ಅನುಕೂಲಿಸಿ ಕೊಡಬಹುದಿತ್ತು. ಸುನಿತ ಹಣವಂತರು, ವಳಗಿದ ವಿಜ್ಞಾನಿಗಳಿಂದ ಅನೇಕ ರೀತಿಯ ಉಪಯುಕ್ತವಾದ ಜೀವನಾವಶ್ಯಕ ವಸ್ತುಗಳನ್ನು ತಯಾರಿಸುವಂತೆ ಮಾಡಿ ನಿಯಮಿತವಾದ ಸಂಸ್ಥೆಗಳನ್ನು ನಡಿಸಿ ಬರಬಹುದಿತ್ತು. ಆದರೆ ಅಶಿಸ್ತಿನವೂ ಆಡಂಬರವೂ

(೯ನೇ ಪುಟ ನೋಡಿರಿ.)

(೨ನೇ ಪುಟದಿಂದ)

ತತ್ವರಹಿತ ತಗಾದೆಗಾರರ ತಂಡ

ಅಂತೆಯೇ ಹಿಂದುಸ್ಥಾನದಲ್ಲಿರುವವರೂ ಕಮ್ಯೂನಿಸ್ಟರು ಹೊರತು ಹಿಂದೀಯರಲ್ಲ; ಪ್ರತಿಯೊಂದು ದೇಶದಲ್ಲಿರುವವರೂ ಕಮ್ಯೂನಿಸ್ಟರು ಹೊರತು ಆ ದೇಶೀಯರಲ್ಲ. ಅವರ ಗುರಿ, ಧೋರಣೆ ಮತ್ತು ಕಾರ್ಯಕ್ರಮಗಳೋ? ಅವು ಇನ್ನಷ್ಟು ವಿಲಕ್ಷಣ. ಓದಿದವರಿಗಾಶ್ಚರ್ಯವಾಗಬಹುದು-ಒಂದು ಒಗಟಿಯಾಗಿ ತೋರಬಹುದು-ಅವರ ಗುರಿ 'ಕಮ್ಯೂನಿಸಮ್' ಅಲ್ಲ, ಕಮ್ಯೂನಿಸ್ಟರು; ಗುರಿಯೇ ರಶ್ಯದ ಕಮ್ಯೂನಿಸ್ಟರು ಹೊರತು ರಶ್ಯದ ಕಮ್ಯೂನಿಸಮ್ ಅಲ್ಲ! ಅರ್ಥಾತ್ ಕಮ್ಯೂನಿಸಮನ್ನು ಅನ್ವಯಿಸಿಕೊಂಡು ರಶ್ಯದ ಕಮ್ಯೂನಿಸ್ಟರು ಸ್ವರಾಷ್ಟ್ರೀಯ ಹಿತಕ್ಕನುಗುಣವಾಗಿ ವರ್ತಿಸುತಿದ್ದಾರೆ, ಇತರ ದೇಶಗಳ ಕಮ್ಯೂನಿಸ್ಟರು, ಈ ತಿರುಳನ್ನು ಗಮನಿಸದೆ ಕೇವಲ ರಶ್ಯದ ಕಮ್ಯೂನಿಸ್ಟರ ವರ್ತನೆಯೊಂದನ್ನೇ ಅಂಧ ಶ್ರದ್ಧೆಯಿಂದ ಅನುಕರಿಸುತಿದ್ದಾರೆ. ಕಮ್ಯೂನಿಸ್ಟ್ ರಶ್ಯವು ಲೋಕದಲ್ಲೆಲ್ಲಾ ಮಜೂರ ರಾಜ್ಯ ಸ್ಥಾಪನೆಯಾಗಬೇಕೆಂಬ ಕಾರಣದಿಂದ ತನ್ನ ಸ್ವಂತ ಹಿತಕ್ಕೆ ವಿರುದ್ಧವಾಗಿ ವರ್ತಿಸಿದ ಒಂದೇ ಒಂದು ನಿದರ್ಶನವಿಲ್ಲ ಕಮ್ಯೂನಿಸ್ಟರಿಗಾಗಿ ಪ್ರತಿಬಾರಿಯೂ ರಾಷ್ಟ್ರೀಯ ಪ್ರವಾಹಕ್ಕೆ ಅಡ್ಡ ಬಂದಿರುವ ಹಿಂದೀ ಕಮ್ಯೂನಿಸ್ಟರು ಅಂತಹ ಒಂದು ಸಂದರ್ಭವನ್ನಾದರೂ ತೋರಿಸಿಕೊಡಬಲ್ಲರೆ? ಇಡೀ ಲೋಕದ ಕಮ್ಯೂನಿಸ್ಟರ ಕೇಂದ್ರ ಸಂಸ್ಥೆಯಾದ ಕೋಮಿಂಟರ್ನ್ ಮೋಸ್ಕೋದಲ್ಲಿ 1943ರ ವರೆಗಿತ್ತು. ಅದು ರಶ್ಯನ್ ಯುದ್ಧವು ಭೀಕರಾಕೃತಿಯಲ್ಲಿದ್ದ ಕಾಲ. ಅಮೇರಿಕಾಧ್ಯಕ್ಷ ರುಸವೆಲ್ಟರ ಒಂದು ಗುಪ್ತಪತ್ರ ಹೋದ ಬೆನ್ನಲ್ಲೇ, ಕಾಮ್ರೇಡ್ ಸ್ಟಾಲಿನರು ಯಾವ ದೇಶದ ಕಮ್ಯೂನಿಸ್ಟರನ್ನೂ ವಿಚಾರಿಸದೆ ಅದನ್ನು ಬರ್ಖಾಸ್ತು ಪಡಿಸಿಕೊಂಡರು. ರಶ್ಯದ ಹಿತಕ್ಕೆ-ಸ್ವರಾಷ್ಟ್ರದ ಅನುಕೂಲತೆಗೆ--ಅದು ಅಗತ್ಯವೆಂದು ಪಕ್ಕಾ ವ್ಯವಹಾರಜ್ಞ ಸ್ಟಾಲಿನರಿಗೆ ತೋರಿದ್ದರಿಂದ ಹಾಗೆ ಮಾಡಿದರು. ಚೀನದಲ್ಲಿ ಕಮ್ಯೂನಿಸ್ಟ್-ಚಿಯಾಂಗ್ ಕಾಳಗ ನಡೆದೇ ಇತ್ತು; ಸ್ಟಾಲಿನ್-ಚಿಯಾಂಗ್ ಒಪ್ಪಂದ ಆ ಮಧ್ಯದಲ್ಲೇ ಆಗಿ ಹೋಯಿತು. ಇದು ಆಂಗ್ಲೋ ಅಮೆರಿಕನಾರನ್ನು ದೂರವಿಡಬೇಕೆಂದು ಹೂಡಿದ್ದ ಹಂಚಿಕೆ ಹೊರತು ಚೀನೀ ಕಮ್ಯೂನಿಸ್ಟರನ್ನು ಉದ್ಧರಿಸುವ ಉಪಾಯವಾಗಿರಲಿಲ್ಲ. ಪ್ರತಿಯೊಂದು ಸಂದರ್ಭದಲ್ಲೂ ಹೀಗೆಯೇ-ರಶ್ಯವು ಆಯಾಯಾ ದೇಶದ ಕಮ್ಯೂನಿಸ್ಟರನ್ನು ಮಿಕ್ಕವರಂತೆಯೇ ಆಯಾಯಾ ರಾಷ್ಟ್ರೀಯರೆಂದೇ ಭಾವಿಸಿ ತನ್ನ ಕೆಲಸವೊಂದನ್ನೇ ಮಾಡಿಕೊಂಡಿತು; ಆದರೆ ಪ್ರತಿಯೊಂದು ರಾಷ್ಟ್ರದ ಕಮ್ಯೂನಿಸ್ಟರೊತಾವು ರಶ್ಯಾನರೆಂಬಂತೆ ವರ್ತಿಸಿ ರಶ್ಯದ ಹಿತವೊಂದನ್ನೇ ಸಾಧಿಸಿಕೊಟ್ಟರು. ರಶ್ಯದ ಕಮ್ಯೂನಿಸಮನ್ನೋ, ರಶ್ಯದ ಧೋರಣೆಯನ್ನೋ ಅನುಕರಿಸುವ ಬದಲು ಹಿಂದೀ ಕಮ್ಯೂನಿಸ್ಟರೂ ಹಿಂದುಸ್ಥಾನದ ಸ್ವಾತಂತ್ರ್ಯವೇ ಮುಖ್ಯವೆಂದು ಭಾವಿಸುತಿದ್ದರು. ಆದರೆ ರಶ್ಯದ ಕಮ್ಯೂನಿಸ್ಟರ ಕಾರ್ಯ ವಿಧಾನವೊಂದನ್ನೇ ನೇರಾನೇರ ಅನುಕರಿಸಿ ಇಲ್ಲಿಯೂ ರಶ್ಯದ ಕಾರ್ಯವನ್ನೇ ಮಾಡಿದರು!

ಅಂಧಾನುಕರಣೆಯ ಅನಾಹುತ

ಒಂದು ತತ್ವಕ್ಕೆ ಕಾಲ, ಕ್ಷೇತ್ರ ನಿರ್ಬಂಧವಿಲ್ಲ; ಸ್ವಕೀಯತೆ ಪರಕೀಯತೆ ಎಂಬುದಿಲ್ಲ. ಆದರೆ ವ್ಯಕ್ತಿಗಿದೆ. ಅಂತೆಯೇ ರಶ್ಯದ ತತ್ವ ಧೋರಣೆಗಳು ಲೋಕದ ಯಾವ ಭಾಗಕ್ಕೂ ಪರಕೀಯವಾಗಲಾರವು. ಸಮತಾವಾದವು ಯಾರಿಗೂ ವಿದೇಶೀಯವಾದುದಲ್ಲ. ಯುದ್ಧ ಕಾಲದಲ್ಲಿ ಸ್ವರಾಷ್ಟ್ರೀಯ ಹಿತಕ್ಕಾಗಿ ರಶ್ಯವು ನಿರ್ಮಿಸಿಕೊಂಡ ಸಂಬಂಧ, ದ್ವೇಷಗಳೊಳಗಿನ ರಾಷ್ಟ್ರ ಹಿತಸಾಧಕ ಧೋರಣೆಯೂ ಅಂತೆಯೇ ಎಲ್ಲರಿಗೂ ಅನುಕರಣೀಯ ಆದರೆ ರಶ್ಯವು ಭಾರತಕ್ಕೆ 'ಪರದೇಶ'. ರಶ್ಯಾನರು ಭಾರತೀಯರಿಗೆ 'ವಿದೇಶೀಯರು'. ರಶ್ಯಾನರು ಚಲಿಸಿದಂತೆ ಚಲಿಸುವದು ಪರಾನುಕರಣೆ ಉದಾ: ಚೀನೀ ಕಮ್ಯೂನಿಸ್ಟರೊಡನೆ ಕಾದಾಡುತಿದ್ದ ಚಿಯಾಂಗ್ ಕೈಶೇಕರೊಡನೆ ರಶ್ಯವು ಸ್ನೇಹ ಕರಾರು ಮಾಡಿಕೊಂಡಂತೆ, ಸ್ವರಾಷ್ಟ್ರಕ್ಕೆ ಹಿತವೆಂದು ಕಂಡರೆ ರಶ್ಯದೊಡನೆ ಕಲಹಕ್ಕೆದ್ದ ಇರಾನಿನೊಡನೆ ಹಿಂದೀ ಕಮ್ಯೂನಿಸ್ಟರು ಸಂಧಾನಮಾಡಿಕೊಳ್ಳಬಹುದು. ಆದರೆ ಊಹೂಂ! ರಶ್ಯದ ವೈರಿಗಳೇ ಕಮ್ಯೂನಿಸ್ಟರ ವಿರೋಧಿಗಳು; ರಶ್ಯದ ಸ್ನೇಹಿತರೇ ಕಮ್ಯೂನಿಸ್ಟರ ಮಿತ್ರರು. ಅಂದರೆ ರಶ್ಯಾನರಂತೆ ಇವರು ಹೊರತು ರಶ್ಯದ ಧೋರಣೆಯಂತೆ ಇವರ ಧೋರಣೆಯಲ್ಲ. ಆದ್ದರಿಂದಲೇ ರಶ್ಯನ್ ರಾಜ್ಯಭಾರ ಪದ್ಧತಿಯನ್ನೊಪ್ಪುವವನೊಬ್ಬನು ಹಿಂದೀ ಕಮ್ಯೂನಿಸ್ಟರಿಂದಲೆ ಜಿಗುಪ್ಸೆಗೊಳಗಾದಾನು. ಅಲ್ಲಿ ಜೀವಂತ ಮತ್ತು ಆದೇಯವಾಗಿರುವ ಸ್ವರಾಷ್ಟ್ರಪ್ರೇಮವು ಇಲ್ಲಿಯವರಲ್ಲಿ ಸೊನ್ನೆ! ಅವರು ಅಲ್ಲಿಯ ಅನುಕೂಲತೆಗಾಗಿ ಹಿಡಿದ ದಿಕ್ಕನ್ನೇ ಹಿಡಿದು, ಇಲ್ಲಿಯವರೂ ಹೋಗುತಿದ್ದಾರೆಂಬುದೇ ಅವರಿವರೊಳಗಿನ ಸಾಮ್ಯತೆ ಆದರೆ ಇಂತಹ ಪರಾಂಧಾನುಕರಣೆಯು ಎಷ್ಟೇ ಪ್ರಜ್ಞಾಶೂನ್ಯ ರಾಷ್ಟ್ರಕ್ಕಾದರೂ ಒಗ್ಗುವಂತಹದಲ್ಲ. ಆದ್ದರಿಂದಲೇ ಹಿಂದೀ ಕಮ್ಯೂನಿಸ್ಟರ ರಾಜಕೀಯವೆಂದರೆ ಎಲ್ಲರಿಗೂ ಜಿಗುಪ್ಸೆ. ನಮ್ಮದಲ್ಲವಾದ ಅವರ ಈ ಧೋರಣೆಗೆ ಇಲ್ಲಿಯ ರಾಜಕೀಯ ರಂಗದಲ್ಲಿ ಒಂದು ಸ್ಥಾನವೇ ದೊರೆತಿಲ್ಲವಾದ್ದರಿಂದ ಅದನ್ನು ಕಡೆಗಣಿಸಬಹುದು. ಆದರೆ ಈ ಧೋರಣೆಯನ್ನವರು ಮಜೂರ ರಂಗದೊಳಗೆ ಹೊಗಿಸುತ್ತಿರುವ ಅನಾಹುತವನ್ನು ಮಾತ್ರ ಕಡೆಗಣಿಸಲಾಗುವದಿಲ್ಲ. ಆ ವಿಷಯವನ್ನು ಮುಂದಿನ ಸಂಚಿಕೆಯಲ್ಲಿ ಎತ್ತಿಕೊಳ್ಳೋಣ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದಮನುಕೆಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ಕೇಕೂ ನಿಲ್ಲುವವು, ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ಕೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಸೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦ ೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಪಿ.ನಟರಾಜನ್ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT SHWAS-HARI

FOR LIFE ASSURANCE
CONSULT
The New Gaurdian of India Life Insce. Co., Ltd.,
(*Chairman* - The Hon'ble Mr. M. CT. M. Chidambaram Chettyar.)
A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ,

ಗೀವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

'ಬಹದೂರ'

ಕಬ್ಬಿನ ಗಾಣಗಳು



ಗಟ್ಟಿಮುಟ್ಟಾದ ರಚನೆ,
ಉತ್ತಮದರ್ಜೆಯ ಕೈಗಾರಿಕೆ
ಕ್ರಯ ರೂ. **430/-**

ಬ್ರಿಟಿಷ್ ಇಂಡಿಯಾ
ಎಂಜನಿಯರಿಂಗ್ ಕಂ.
ಬೊಂಬಾಯಿ 10.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ **1946-'47.**

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.
ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು.

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.

THE BHARATH MILLS, Ltd.

With

Dr. T. M. A. Pai, M. B., B. S.	Upendra Ananth Pai, Esq.
Kochikar Panduranga Pai, Esq.	Dr. K. L Aithala, M. B., B. S.
A. L. N. Rao, Esq., B. A., B. L.	A. L. N. Rao, Esq., B. A., B. L.
Dr. K. L. Aithala, M. B., B. S.	Kochikar Manjunath Pai, Esq.
T. N. Kelu Nambiar Esq.	Kalsank Venkatraya Pai, Esq.
Dr. V. K. Ballal, L. I. M.	B. Padmanabha Pai, Esq.
T. Ramesh U. Pai, Esq	T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—6—0
ಬಿಡಿ ಪ್ರತಿಗೆ ರೂ. 0—1—6

NAVAYUGA

ವರ್ಷ ೨೫] ಪ್ರತಿ ಗುರುವಾರ ಹೊರಡುವ ಗ್ರಾಮ್ಯೀಯ ವಾರಪತ್ರಿಕೆ. [Vol. 25
ವಾರ ೩೦] Founder: SRI A. B. SHETTY. [No. 30

ಉಡುಪಿ ● 28—3—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6.

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಉಳುಕು, ಕೀಲುನೋವು, ಹಲ್ಲು ನೋವು, ಚೇಳು ಕಡಿತ, ಇತ್ಯಾದಿ ನೋವುಗಳಿಗೆ ಉಪಯುಕ್ತವಾದ ಅಮೃತಾಂಜನ.

REGD.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

THE PROTECTION

If a mother was left unprovided for and if the children were too young to earn a livlihood and maintain the family, how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,
Head Office.- **UDIPI, (S. India.)**

THE
Bombay Life Assurance Company Ltd.
(ESTD. 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ನ್ಯೂ ಕರ್ಣಾಟಕ ಥಿಯೇಟರ್ಸ್ ಮುಂಬಯಿ, ಇವರು

"ಮುಕ್ತಿ"

ಎಂಬ ಸಾಮಾಜಿಕ ನಾಟಕವನ್ನು ಮುಂಬಯಿಯ
ಬಾಲಿವಾಲಾ ಗ್ರಾಂಡ್ ಥಿಯೇಟರಿನಲ್ಲಿ
ಮೊದಲನೇಯ ಸಾರಿ ಪ್ರದರ್ಶಿಸುವರು.
ಲೇಖಕರು, ನಿರ್ಮಾಣಕರು ಮತ್ತು ನಿರ್ದೇಶಕರು:
ಶ್ರೀ ಯಂ. ಎಸ್. ಶೆಟ್ಟಿ.

ಪ್ರಯೋಗಗಳು

೧ನೇ ಪ್ರಯೋಗ. ಶನಿವಾರ ತಾ. 30 ಮಾರ್ಚ 1946 ಮಧ್ಯಾಹ್ನ ಮೂರು ಘಂಟೆಗೆ
೨ನೇ ,, ಬುಧವಾರ ತಾ. 10 ಏಪ್ರಿಲ್ ,, ,, ,, ,,
೩ನೇ ,, ಶುಕ್ರವಾರ ತಾ. 19 ,, ಬೆಳಿಗ್ಗೆ ಒಂಭತ್ತು ಘಂಟೆಗೆ

ಮನದಲ್ಲೇ ಕ್ರಾಂತಿಯನ್ನು ಮಾಡುವ ಹೊಸ ಕಥೆ. ಮಿಲನ-ವಿರಹ, ಆಶೆ-ನಿರಾಶೆ, ಪ್ರೇಮ ತಾಪಗಳಿಂದೊಡಗೂಡಿದ ಸಂಸಾರದ ಚಿತ್ರ. ಪತಿಯ ಪ್ರೇಮವನ್ನು ಪಡೆಯಲು ಪರಿಶ್ರಮಗಳಲ್ಲಿ ಹಾಯುವ ಸತಿಯ ಜೀವನ. ಸಿನೇಮಾ ನಟಿಯಾದರೂ ಪ್ರೇಮಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಜಿಸಲು ಸಿದ್ಧಳಾದ ನಾರಿಯ ನೈಜ ಪರಿಚಯ. ಬ್ಲ್ಯಾಕ್ ಮಾರ್ಕೆಟ್ ನವರು ಹಣಗಳಿಸುವ ಒಂದೇ ಯೋಜನೆಯಿಂದ ಮಾಡಿದ ಅನೇಕ ರೀತಿಯ ಕಾರಸ್ಥಾನ. ಕಡೆಗೆ ಪತಿಯ ದುಷ್ಕೃತ್ಯಕ್ಕಾಗಿ ಸತಿಯೋರ್ವಳ ಬಲಿದಾನ. ಅಂತ್ಯದಲ್ಲಿ? ಅದೇ ಮುಕ್ತಿ.

ಕಲೆಯ ಪರಿಚಯವನ್ನು ಮಾಡಿ ಅದರ ಸೇವೆಯನ್ನು ಮಾಡಲು ಹೊರಟಿರುವ ಪಾತ್ರವರ್ಗದವರು ನಟನೆಯಲ್ಲಿಯೂ ನೈಜ ರೂಪವನ್ನು ತೋರುವರು. 'ನಾಟಕವು ನಾಟಕಕ್ಕಾಗಿ ಅಲ್ಲ' 'ಜನತೆಗಾಗಿ' ಎಂಬುದೇ ನಮ್ಮ ಧ್ಯೇಯ. ಕಲಾ ಸೇವೆಯೇ ನಮ್ಮ ಗುರಿ. ಕನ್ನಡ ಅಭಿಮಾನಿಗಳೂ ಕಲಾ ಪ್ರೇಮಿಗಳೂ ತಮ್ಮ ಸಂಪೂರ್ಣ ಬೆಂಬಲವನ್ನು ಕೊಡುವರೆಂಬ ನಂಬುಗೆಯು ನಮಗೆ ಪೂರ್ಣವಿದೆ.

ಪಾತ್ರ ವರ್ಗ.- ಶ್ರೀಮತಿ ಎ. ಜಿ. ಗಂಗೊಳ್ಳಿ, ಶ್ರೀಮತಿ ಎಲ್. ಬಿ. ಮೋಗ್ರೆ, ಶ್ರೀಮತಿ ಕಸ್ತೂರಿ ಬಾಯಿ ಮಾತ್ಸ್ಯಾಂಡಕರ್, ಶ್ರೀಮತಿ ವಿಠು ಬಾಯಿ ಕಾರ್ವೇಕರ್, ಶ್ರೀಯುತ ಎಸ್. ಜಾದಾಮಣಿ, ಬಿ. ವಿ. ರಾವ್, ಎಲ್. ಜೆ. ಪಿ. ಆಂದ್ರಾದೆ, ಕೆ. ಸಿ. ಪಾಲ್, ಬಿ. ಎಸ್. ಚೆಗ್ಡೆ, ಬಿ.ದಾಮೋದರ್, ಟಿ. ಆಂದ್ರಾದೆ, ಯಂ.ಎಸ್.ಸಾಲ್ಯಾನ್, ರಾಜಕುಮಾರ್, ವಿ. ಜಿ. ಶೆಟ್ಟಿ, ಯಂ. ಯಂ. ಶೆಟ್ಟಿ, ಯಂ. ಎಚ್. ವಿ. ಫುತ್ರನ್.

ಟಿಕೇಟಿನ ದರ (ಟ್ಯಾಕ್ಸ್ ಸಹಿತ)

ರೂ. 10-0-0; 7-8-0, 5-0-0; 2-8-0; 1-4-0; 0-10-0.

ಇತರ ದಿನಗಳಲ್ಲಿ ಟಿಕೇಟು ದೊರೆಯುವ ಸ್ಥಳ—

Precision Radio & Electrical Mfg. Co.
No. 1. Ishwardas Mansion, Nana chowk, BOMBAY 7.
ನಾಟಕದ ದಿನ ಬೆಳಿಗ್ಗೆ 9 ಘಂಟೆಯಿಂದ ಥಿಯೇಟರಿನಲ್ಲಿ ಟಿಕೇಟು ದೊರೆಯುವುದು.

M. S. SHETTY MANAGING DIRECTOR. **D. K. NAIR** GENERAL MANAGER

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ವ್ಯಾಪಕವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಕೋರಿಕೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ನೋಟೀಸು

ದಿ ನಾರ್ದರ್ನ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

'ನಾರ್ದರ್ನ ಹೌಸ್' ಸರ್ ಫೆರೋಜ್‌ಶಾ ಮೇಥಾ ರೋಡ್, ಫೋರ್ಟ್
ಬೊಂಬಯಿ ,

ನಾರ್ದರ್ನ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಇವರು ಮಂಗಳೂರಿನಲ್ಲಿ, ಕೇಂದ್ರ ಮೈದಾನಿನ ಮುಂಭಾಗದಲ್ಲಿ, ಜಿಲ್ಲಾ ಪೋಲೀಸ್ ಹಾಗೂ ಕಲೆಕ್ಟರರ ಆಫೀಸುಗಳ ಮಧ್ಯೆ, ವಿಶಾಲವಾದ ಆಸ್ತಿಯನ್ನು ಬೆಲೆಗೆ ಕೊಂಡುಕೊಂಡಿದ್ದಾರೆ ಎಂಬ ವಿಷಯವನ್ನು ತಿಳಿಸಲು ಸಂತೋಷಪಡುತ್ತಾರೆ. ಈ ಸ್ಥಳವು, ರೈಲ್ವೆ ಸ್ಟೇಶನ್, ಟಪ್ಪಾಲು ಆಫೀಸು, ಹಾಗೂ ಸ್ಕೂಲು ಕಾಲೇಜುಗಳಿಗೆ ಅನತಿ ದೂರದಲ್ಲಿದೆ. ಈ ಸ್ಥಳದಲ್ಲಿ ಬೇಂಕು ಮತ್ತಿತರ ಆಫೀಸುಗಳಿಗೂ, ಅಂಗಡಿಗಳಿಗೂ ಅನುಕೂಲವಾಗುವಂತಹ ಆಕರ್ಷಕವಾದ (ಪ್ರದರ್ಶಕ ಕಿಟಿಕಿಗಳಿರುವ) ಕಟ್ಟಡವನ್ನು ಈ ಕಂಪೆನಿಯು ಕಟ್ಟಲಿದೆ. ಆಗತ್ಯವಿದ್ದವರು, ತಮ್ಮ ಬೇಡಿಕೆಗಳನ್ನು ನಮೂದಿಸಿ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಕಮ್ಯೂನಿಸ್ಟ್ ಧೋರಣೆ—ಲೇಖಾಂಕ ೩.

ಅಗ್ಗದ ಜೀವಗಳೇ ಆಹುತಿ!

'ವಿಚಾರಿ'ಯಿಂದ.

ಎಲ್ಲಾ ದೇಶಗಳ ಕಮ್ಯೂನಿಸ್ಟರಂತೆ ಹಿಂದೀ ಕಮ್ಯೂನಿಸ್ಟರೂ ರಶ್ಯಾನಂ ನೆರಳುಗಳಂತಿದ್ದಾರೆ; ರಶ್ಯನ್ ದೇವತೆಯ 'ಪಾತ್ರಿ'ಗಳಾಗಿದ್ದಾರೆ-ಎಂಬುದು ಕಳೆದೆರಡು ಲೇಖನಗಳಲ್ಲಿ ಬಂದಿದೆ. ಇದನ್ನು ಆರೋಪವೆಂದು ಗಣಿಸಿ ನಮ್ಮ ಕಮ್ಯೂನಿಸ್ಟ್ ಕಾಮ್ರೇಡ್‌ಗಳು ಉತ್ತರ ಕೊಡಬಲ್ಲರೆಂಬುದು ನನಗೆ ಗೊತ್ತಿದೆ. ಆ ವೈಶಿಷ್ಟವಾದ ಪ್ರತಿಭಟನೆ ಹೀಗಿದ್ದೀತು—ಸಂಕುಚಿತ ರಾಷ್ಟ್ರೀಯ ಭಾವನೆಯು ಭಂಡವಾಳ ಶಾಹಿಯ ಒಂದು ಅಂಗ; ಲೋಕಯುದ್ಧದಂತಹ ಅನಾಹುತಗಳಿಗೆ ಅದೇ ಹೇತು. ಇದಕ್ಕೆ ಪ್ರತಿಯಾಗಿ ಸರ್ವಸಮಾನತೆಯ ಮಜೂರ ಜಗತ್ತನ್ನು ಸ್ಥಾಪಿಸಲು ಇಡೀ ಲೋಕದಲ್ಲಿ ಏಕ ಧೋರಣೆ, ಒಮ್ಮುಖದ ಪ್ರಯತ್ನ ಇರಬೇಕೆಂಬುದಕ್ಕಾಗಿಯೇ ಜಗತ್ತಿನ ಪ್ರತಿಯೊಂದು ರಾಷ್ಟ್ರದ ಕಮ್ಯೂನಿಸ್ಟರೂ ರಶ್ಯದ ಅನುಕರಣೆ ಮಾಡುತ್ತಿದ್ದಾರೆ. ಧನಿಕ-ದರಿದ್ರ ಭೇದದೊಂದಿಗೆ ಆ ರಾಷ್ಟ್ರ-ಈ ರಾಷ್ಟ್ರ ವ್ಯತ್ಯಾಸವೂ ಸಮೂಲನಾಶವಾಗಬೇಕು." ಇದು ತೋರುವಿಕೆಗೆ ವಿಶಾಲ ಭಾವನೆಯೆಂದು ಕಂಡರೂ ನಿಜಕ್ಕೂ ಬಾಲಭಾಷೆ. ಇದೇ ಕಮ್ಯೂನಿಸ್ಟರ ಧೋರಣೆಯೆಂದಾದರೆ ಸ್ಟ್ಯಾಲಿನರ ರಶ್ಯವನ್ನೇ ಅವರು ತಮ್ಮ ಪ್ರಥಮ ವಿರೋಧಿಯೆಂದು ಭಾವಿಸಬೇಕು. ಯಾಕೆಂದರೆ ಇಡೀ ಲೋಕವೇ ಬೋಲ್ಶೆವಿಸಮಿನ ಕಾರ್ಯಕ್ಷೇತ್ರವೆಂದಿದ್ದ ತನ್ನ ಮೊದಲಿನ ಧೋರಣೆಯನ್ನು ಬದಲಾಯಿಸಿಕೊಂಡು ಸ್ವರಾಷ್ಟ್ರೀಯ ಹಿತವೊಂದನ್ನೇ ಗಣಿಸುತ್ತಿದೆ ಇಂದಿನ ರಶ್ಯ. ಆದರೆ ಅದರ ಮರ್ಜಿಯೇ ಸರಿ; ಭಾರತದ ಕಮ್ಯೂನಿಸ್ಟರದ್ದು ತಪ್ಪು. ಮೊದಲನೆಯದು ಅನುಭವದಿಂದಾಗಿರುವ ನಿರ್ಧಾರ, ಎರಡನೆಯದು ಹುಚ್ಚು ಹುರುಸಿಗೆ ದೊರೆತ ಒಂದು ಆಕಾರ. 'ಅ'ವ್ಯವಸ್ಥೆ ಇದ್ದಲ್ಲಿಯೇ 'ಅ'ವನ್ನು ತೊಡೆದು, ವ್ಯವಸ್ಥೆ ಸ್ಥಾಪಿಸಬೇಕು. ಬದಲಿಗ ಇನ್ನೊಂದೆಡೆಯಿಂದ 'ಸು'ವನ್ನು ತಂದು ಕೂಡಿಸಿದರೂ ಕೂಡಾ 'ಸುಅವ್ಯವಸ್ಥೆ'ಯೇ ಆದೀತು ಹೊರತು ಸುವ್ಯವಸ್ಥೆಯೂ ಆಗದು; ವ್ಯವಸ್ಥೆಯೂ ಆಗದು. ರಶ್ಯದ ಕ್ರಾಂತಿಯಲ್ಲಿ ಭಾಗವಹಿಸಿ ಅನುಭವವುಳ್ಳ ಸ್ಟ್ಯಾಲಿನರನ್ನೇ ಈ ಕುರಿತು ಪ್ರಶ್ನಿಸಲಿ. "ಹಿಂದೂಸ್ಥಾನದಲ್ಲಿ ಕ್ರಾಂತಿ ನಾಯಕನ ಸ್ಥಾನ ನಿಮಗೆ ಸಿಕ್ಕಿತೆಂದು ಭಾವಿಸಿಕೊಳ್ಳಿ. ಅಲ್ಲಿಯ ಕಮ್ಯೂನಿಸ್ಟರ ಕಾರ್ಯಕ್ರಮಗಳೇನು ಮುಂದೊತ್ತಲಿ ಎನ್ನುವಿರಾ?" "ಎಂದು ವಿಚಾರಿಸಲು "ಆ ಹಿಂದುಸ್ಥಾನವನ್ನೊಮ್ಮೆ ಇಲ್ಲಿಗೆ ತನ್ನಿ ನೋಡಿ ಹೇಳುತ್ತೇನೆ" ಎಂದು ಉತ್ತರಬಂದೀತು! ಒಂದು ರಾಷ್ಟ್ರವು ಎಷ್ಟೇ ಪ್ರಗತಿ ಪಡೆದರೂ ಸೂರ್ಯಬಿಂಬವಾಗಿ ಮಿಕ್ಕ ರಾಷ್ಟ್ರಗಳಿಗೆ ಪ್ರಕಾಶಬೀರಲಾರದು. ಸೂರ್ಯನ ಬೆಳಕು ಕೂಡಾ ಏಕಕಾಲದಲ್ಲಿ ಎಲ್ಲಾ ರಾಷ್ಟ್ರಗಳಿಗೂ ಸಮಾನವಾಗಿ ಬೀಳುತ್ತಿದೆಯೆ? ರಶ್ಯದ ಬೋಲ್ಶೆವಿಸಮಿನಲ್ಲಂತೂ ಪ್ರಕಾಶವೊಂದೇ ಇರುವದಲ್ಲ ರಶ್ಯದ ಬೋಲ್ಶೆವಿಸಮನ್ನು ಅಂಟಿಸಿಕೊಂಡು ಜಗತ್ತಿನಲ್ಲಿ ಮಜೂರ ಶಾಹಿಯನ್ನು ಸ್ಥಾಪಿಸುವೆವೆನ್ನುವವರು, ಭಂಡವಾಳ ಶಾಹಿಯು ಧುರಾರನಿಂದ ಅಂಟುರೋಗವಾಗಿ ಲೋಕಕ್ಕೆ ತಾಗಿದುದಲ್ಲವೆಂಬುದನ್ನು ತಿಳಿದಿರಬೇಕು. ಆಯಾಯ ರಾಷ್ಟ್ರದ ಸ್ಥಿತಿಗತಿಗನುಗುಣವಾದ ಸಮತಾವಾದವು ಅಲ್ಲಲ್ಲಿಯೇ ಹುಟ್ಟಿ, ಲೋಕವೊಂದು ಮಟ್ಟಕ್ಕೆ ಬರಬೇಕು. ಬೋಲ್ಶೆವಿಸಮಿನ ಕತ್ತಿ ಸುತ್ತಿಗೆಯಿಂದ ತರಿದು ಒತ್ತಿ ಲೋಕವನ್ನು ಸಮಮಟ್ಟಮಾಡಿ ಬಿಡುವೆವೆನ್ನುವವರು ಹುಚ್ಚರು. ಅದು ಉತ್ಪತ್ತಿಯಾಗುವಂತಹದು- ಆಮದಾಗುವಂತಹದಲ್ಲ.

ಮಜೂರ ರಂಗದಲ್ಲಿ

ನಮಗೆ ಇನ್ನೊಂದು ಪರಕೀಯವಾದ--ದ. ಕ.ದ ಹಳ್ಳೀ ರೈತರು ಬೊಂಬಾಯಿಗೆ ಹೋಗಿ ಬಂದವನ ಚಲ್ಲಾಣವನ್ನು ಕಾಣುವ ದೃಷ್ಟಿಯಿಂದ ಕಾಣಬೇಕಾದ— ಈ ಕಮ್ಯೂನಿಸಮಿಗೆ ನಮ್ಮಲ್ಲಿ ಸ್ಥಾನ ದೊರೆತುದು ಹೇಗೆ? ಎಂಬ ಪ್ರಶ್ನೆಯಿದೆ. ಸ್ಥಾನವೆಲ್ಲಿ ದೊರೆತಿದೆ? ಹಿಂದೀ ಜನತೆಗೆ ಕಮ್ಯೂನಿಸ್ಟರು ಬೇಕಾಗಿದ್ದಾರೆಯೆ? ಚುನಾವಣೆಗಳ ಫಲಿತಾಂಶವನ್ನು ನೋಡಿದರೆ ಕಮ್ಯೂನಿಸ್ಟರು ಬೆಳೆಯುತ್ತಾ ಬಂದ ಪರಿಮಾಣದಲ್ಲೇ ಅವರನ್ನು ದೂರ ದೂರ ಇಡಲು ಜನತೆಯು ಪ್ರಯತ್ನಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಸುಶಿಕ್ಷಿತ ವರ್ಗವೂ 'ಶ್ರೀಮಂತ ಸುಲಿಗೆಗಾರ'ರ ವರ್ಗವಲ್ಲವಷ್ಟೆ? ಅವರಲ್ಲಿ ಕಮ್ಯೂನಿಸ್ಟರ ಪ್ರಭಾವ ಬಿದ್ದಿದೆಯೆ? ಇಲ್ಲವೇ ಇಲ್ಲ. ಹಾಗಾದರೆ ನಾನಿಷ್ಟೊಂದು ಪ್ರಾಮುಖ್ಯತೆ ಕೊಟ್ಟಿರುವ-ನಖಶಿಖಾಂತ ಶೋಧಮಾಡುತ್ತಿರುವ-ಆ ಕಮ್ಯೂನಿಸ್ಟರು ಎಲ್ಲಿದ್ದಾರೆ? ದಕ್ಷಿಣ ಕನ್ನಡದ ಅನುಭವದಿಂದ ಹೇಳುವದಾದರೆ ಬೀಡಿ ಕೆಲಸಗಾರರು, ನೇಯಿಗೆ ಕೆಲಸಗಾರರು, ಹಂಚು ಕೆಲಸಗಾರರೊಂದಿಗಿದ್ದಾರೆ. ಶ್ರಮಜೀವಿಗಳೆಂದರೆ ಈ ವರ್ಗ ಮಾತ್ರವಲ್ಲ. ಜಿಲ್ಲೆಯಲ್ಲಿರುವ ಬುದ್ಧಿ ಪರಿಶ್ರಮಿಗಳ ಹಾಗೂ ಕಾಯಕಷ್ಟ ಜೀವಿಗಳ ವಿಭಾಗ ಮತ್ತು ಸಂಖ್ಯೆ ನೋಡುವಾಗ—ಕಮ್ಯೂನಿಸ್ಟರಿಂದಿನ 'ರಂಪಾಟ'ವೆಬ್ಬಿಸದಿರುತ್ತಿದ್ದರೆ ಅವರಾವ ಮೂಲೆಯಲ್ಲಿದ್ದಾರೆಂಬುದೇ ಜನತೆಗೆ ತಿಳಿಯಲಾರದಷ್ಟು ಅಗಣ್ಯ, ಅಜ್ಞಾತ ಸ್ಥಾನವು ಅವರೀಗ ಆಕ್ರಮಿಸಿಕೊಂಡಿರುವಂತಹದು. ಬೇಂಕಿಂಗ್ ಮತ್ತಿತರ ಸಂಸ್ಥೆಗಳ ಕೆಲಸಗಾರರು, ಅಧ್ಯಾಪಕರು ಮೊದಲಾದ ಬುದ್ಧಿಶ್ರಮಜೀವಿಗಳು ಇಂದು ಬೀಡಿ ಕೆಲಸಗಾರರಿಗಿಂತ ಕಡಿಮೆ ಸಂಬಳ ಪಡೆಯುತ್ತಿದ್ದಾರೆ. ಕಮ್ಯೂನಿಸ್ಟರೇಕೆ ಆ ಕ್ಷೇತ್ರದೊಳಗೆ ತಲೆಹೊಗಿಸಿಲ್ಲ? ರೈತರು, ಮತ್ತಿತರ ಕಾಯಕಷ್ಟ ಜೀವಿಗಳ ಸಂಖ್ಯೆ ಉತ್ಪನ್ನವೂ ಬೀಡಿ ಕೆಲಸಗಾರರಷ್ಟಿಲ್ಲ. ಕಮ್ಯೂನಿಸ್ಟರೇಕೆ ಆ ಕಡೆಗೆ ಕಾಲು ಚಾಚಿಲ್ಲ?

ಸುಲಭದಲ್ಲಿ ಬಲೆಗೆ ಬೀಳುವವರೇ ಬೇಕು!

ಕಾರಣವಿದೆ. ಬುದ್ಧಿ ಜೀವಿಗಳಿಗೆ, ನಾನು ಇದುವರೆಗೆ ವರ್ಣಿಸಿದ ಕಮ್ಯೂನಿಸ್ಟ್ ದೋಷಗಳ ಪರಿಚಯವಿದೆ ಕ್ಲಾರ್ಕರು, ಉಪಾಧ್ಯಾಯರೇ ಮೊದಲಾದವರಷ್ಟು ತುಟ್ಟಿ ಪೀಡೆಗೊಳಗಾಗಿರುವವರು ಬೇರಿಲ್ಲ. ಅವರ ಕಷ್ಟ ಅಸಹನೀಯ, ಆದರೆ, ಅದಕ್ಕೆ ಪರಿಹಾರವಾಗಿ 'ಕಮ್ಯೂನಿಸಮ್' ಮಾತ್ರವೇನು, ಕಳ್ಳತನವಿದೆ, ಖಿಲಾಡಿತನವಿದೆ; ನಮಗೆ ಹೇಳಿಸಿದ ಹಾದಿ ಅದಾವುದೂ ಅಲ್ಲ' ಎಂಬ ಭಾವನೆ ಅವರದು ಇದಕ್ಕೆ ಪ್ರತಿಯಾಗಿ "ಈ ಶಿಕ್ಷಿತರನ್ನಿಸುವವರೆಲ್ಲಾ ಕೇವಲ ಗೊಂಬೆಗಳು"ಎಂಬಂತೆ ಕಮ್ಯೂನಿಸ್ಟರು ಅವರನ್ನು ಬಹಿಷ್ಕರಿಸಿ ಬಿಟ್ಟಿದ್ದಾರೆ. ಅದರೊಂದು ಮಾತು. ಶಿಕ್ಷಿತವರ್ಗವು ಚೇತನ ಬರಿಸಲಾಗದ ನಿರ್ಜೀವಿಗಳೆಂಬ ಕಮ್ಯೂನಿಸ್ಟ್ ವಾದವನ್ನು ಒಪ್ಪಿಕೊಂಡರೂ ಎಲ್ಲರಿಗಿಂತ ಹೆಚ್ಚಿನ ಕಷ್ಟಕ್ಕೀಡಾಗಿರುವ ಶ್ರಮಜೀವಿಗಳು ಹಾವಷ್ಟೆ? 'ಅವರ ಅಜ್ಞಾನವೇ ಅವರ ಆಪತ್ತು' ಎಂದಾದರೆ ಅದನ್ನಾದರೂ ನಿವಾರಿಸುವದು ಶ್ರಮಜೀವಿಗಳ ಉದ್ಧಾರದ ಧ್ಯೇಯವುಳ್ಳ ಕಮ್ಯೂನಿಷ್ಟರ ಕರ್ತವ್ಯವಾಗುವದಿಲ್ಲವೆ? 'ನಮಗಲ್ಲಿ ಸ್ವಾಗತವೇ ಇಲ್ಲ; ನಾವೇನುಮಾಡಲಿ?' ಎಂದು ಕಮ್ಯೂನಿಸ್ಟರ ಪ್ರಶ್ನೆಯೇನು? 'ನೀವು ಕೈ ಹಾಕಬೇಡಿ' ಎಂಬ ಸೂಚನೆ ಕೊಟ್ಟ ಬೇರಾರನ್ನಾದರೂ ಸಾಧ್ಯವಿದ್ದಲ್ಲಿ ನೀವು ಬಿಟ್ಟಿದಿದೆಯೆ? ಅಂದಮೇಲೆ ಶಿಕ್ಷಿತರಿಗಾಗುವಂತಹದು— ತಲೆಯಿದ್ದವರು ಒಪ್ಪುವಂತಹದು — ನಿಮ್ಮಲ್ಲಿಲ್ಲ, ಅಥವಾ ಅಲ್ಲಿಂದ ಸಿಕ್ಕುವಂತಹದೇನೂ ನಿಮಗಿಲ್ಲ ಎಂಬುದೇ ಇದರಗುಟ್ಟು. ಅವರು ಹಾಗಿರಲಿ; ಹಳ್ಳಿಯ ರೈತರು? ನೀವು ಮಂಗಳೂರು ಮತ್ತು ಉಡುಪಿಯಲ್ಲಿ ರೈತರ ಹೆಸರುಹಾಕಿ ಕೆಲವು ಸಭೆಕರೆದುದಿರಬಹುದು; ಆದರೆ ರೈತರಿಗೂ ಬೀಡಿ ಕೆಲಸಗಾರರಂತೆ ಪೇಟೆವಾಸದ ಸೌಕರ್ಯ ಒದಗಿಸುವದೇ ಕಮ್ಯೂನಿಸಮಿನ ಗುರಿಯಾಗಿರಲಿಕ್ಕಿಲ್ಲವಾದ್ದರಿಂದ ರೈತರ ಸಭೆಗಳಾಗಿಲ್ಲವೆಂದೇ ತಿಳಿದುಕೊಳ್ಳೋಣ. ರಾ

(೧೧ನೇ ಪುಟ ನೋಡಿರಿ)

ಬೇಕಾಗಿದ್ದಾರೆ

ರಂಗಭೂಮಿಯಲ್ಲಿ ಮತ್ತು ಚಲಚಿತ್ರದಲ್ಲಿ ಪಾರ್ಟನ್ನು ವಹಿಸಲು ರೂಪವತಿಯರಾದ ಮತ್ತು ಗಾಯನ, ನರ್ತನಗಳಲ್ಲಿ ಅಭಿರುಚಿಯುಳ್ಳ ಯುವತಿಯರು ಬೇಕಾಗಿದ್ದಾರೆ. ಭಾವಚಿತ್ರ ಸಮೇತ ಅರ್ಜಿಯನ್ನು ಬರೆಯತಕ್ಕದ್ದು. ಭಾವಚಿತ್ರವನ್ನು ಹಿಂದಕ್ಕೆ ಕಳುಹಿಸಲಾಗುವುದು. ಕಲಾಪ್ರೇಮಿಗಳಿಗೆ ಇದೊಂದು ಸುಸಂಧಿ. ಯೋಗ್ಯರಾಗಿ ಆರಿಸಲ್ಪಟ್ಟವರಿಗೆ ಉತ್ತಮ ಸಂಬಳವನ್ನು ಕೊಡಲಾಗುವುದು. ಕರೆಕಳುಹಿಸದ ಹೊರತು, ಸಮಕ್ಷಮ ಭೇಟಿ ನಿಷೇಧ. ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರವನ್ನು ಮಾಡಿರಿ.

To
The Managing Director
New Karnataka Theatres
C/o Precision Radio &
Electrical Mfg. Co.
No. 1. Ishwardas Mansion
Nana Chowk
Bombay 7

CANARA BANK LIMITED

Estd: 1906

(Incorporated in British India. liability of Members limited.)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	....	2⅜%
6 to 9 months	....	2½%

Rates for Season Deposits of less than Rs 10000/- with a minimum of Rs 1000/- and in multiples of Rs. 500/- may be ascertained on application to our nearest branch.

ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ದೇವಸ್ಥಾನದಿಂದ ಪ್ರಕಟಣೆ

ಇದೇ ಬರುವ 1946ನೇ ಇಸವಿಯ ಜೂನು ತಾರೀಕು 9ರಲ್ಲಿ ಶ್ರೀ ಮೂಕಾಂಬಿಕಾ ದೇವಳ ಸಂನಿಧಿಯಲ್ಲಿ ಅಷ್ಟಬಂಧ ಕಲಶ ಮಹೋತ್ಸವವನ್ನು ನೆರವೇರಿಸುವದೆಂತ ಶ್ರೀ ದೇವಳ ಮೊಕ್ತೇಸರರು ನಿಶ್ಚಯಿಸಿದ ಪ್ರಯುಕ್ತ ಸದ್ರಿ ಕೆಲಸಕ್ಕೆ ಹೇರಳ ಹಣ ಬೇಕಾದರಿಂದ ಮೊಕ್ತೇಸರರ ಪರವಾಗಿ ಎಕ್ಸಿಕ್ಯುಟಿವ್ ಆಫೀಸರನಾದ ನಾನು ಈ ಮೂಲಕ ಸರ್ವ ಭಕ್ತಾದಿಗಳಿಗೂ ತಮ್ಮ ಯಥಾಶಕ್ತಿ ಹಣ ಸಹಾಯಮಾಡಬೇಕಾಗಿ ಕೋರುತ್ತೇನೆ ಹಣವನ್ನು ಕಳುಹಿಸುವವರು ದೇವಳ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ. ಎಡ್ತರೆ ಮಂಜಯ್ಯ ಶೆಟ್ರು, ಎಡ್ವೋಕೇಟ್, ಕುಂದಾಪುರ, ಕಲಶ ಫಂಡಿನ ಕೋಶಾಧಿಕಾರಿಯಾದ ಇವರಿಗೆ ಹಣವನ್ನು ಕಳುಹಿಸಬಹುದು. ಅಥವಾ ಶ್ರೀ ದೇವಳ ಎಕ್ಸಿಕ್ಯುಟಿವ್ ಆಫೀಸರ್ ಸಿ.ಎಚ್. ಶೆಟ್ಟಿ ಇವರಿಗೆ ಕಳುಹಿಸಬಹುದೆಂಬ ಸಂಗ್ತಿ ಸರ್ವ ಭಕ್ತಾದಿಗಳಿಗೂ ಈ ಮೂಲಕ ತಿಳಿಯುದೆ.

C. H. SHETTY, E. O.

ಕಮ್ಯೂನಿಸ್ಟರು ಕೆಲಸಗಾರರನ್ನು ತಪ್ಪುದಾರಿಗೆಳೆಯುತ್ತಿದ್ದಾರೆ.

ದಕ್ಷಿಣ ಕನ್ನಡ ಟ್ರೇಡ್ ಯೂನಿಯನ್ ಕೌನ್ಸಿಲಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರ ಹೇಳಿಕೆಯ ಭಾಗ.

ಸಹಕರಿಸಿದ್ದೇಕೆ?

ನಾನು ಸೆರೆಮನೆಯಿಂದ 1944ನೇ ಜನವರಿಯಲ್ಲಿ ಬಿಡುಗಡೆ ಹೊಂದಿಬಂದ ಮೇಲೆ, ಉಡುಪಿ ಬಿಟ್ಟು ಮಂಗಳೂರಲ್ಲೇ ನೆಲೆಸುವ ನಿರ್ಧಾರ ಮಾಡಿದೆ. ಸೆರೆಮನೆಯಿಂದ ಬಂದ ನನ್ನಲ್ಲಿ, ಏನಾದರೂ ಸಾರ್ವಜನಿಕ ಸೇವೆಯಲ್ಲಿ ನಿರತನಾಗಬೇಕೆಂಬ ಲವಲವಿಕೆ ಇತ್ತು. ಆದರೆ ಅದಕ್ಕೆ ಹಿರಿಯರಿಂದೇನೂ ಪ್ರೋತ್ಸಾಹ ದೊರೆಯಲಿಲ್ಲ. ಆಗ ಕಮ್ಯೂನಿಸ್ಟ್ ತರುಣರು ಕೆಲವರು ಮಂಗಳೂರಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಅವರ ಕಾರ್ಯೋತ್ಸಾಹ ನನ್ನ ಮನವನ್ನೆಳೆಯಿತು. ನಾವೆಲ್ಲಾ ಒಟ್ಟು ಸೇರಿ ದ. ಕ. ಜನತಾ ಆಹಾರ ಸಮಿತಿ ಸ್ಥಾಪಿಸಿ ದುಡಿದೆವು. ಅದರಲ್ಲೇ ನೆರೆಹಾವಳಿ ನಿವಾರಣಾ ಕೆಲಸವನ್ನೂ ಮಾಡಿದೆವು. ಈ ಕಾರ್ಯೋತ್ಸಾಹದ ಆತ್ಮೀಯತೆಯಿಂದಾಗಿ ನಮ್ಮ ಸಂಪರ್ಕವು ನಿಕಟವಾಯಿತು. ನಾನು ಅವರ ಮಜೂರ ಸಂಘಟನಾ ಕೆಲಸದಲ್ಲಿ ಸಾಧ್ಯವಾದ ಮಟ್ಟಿಗೆ ನೆರವಾದೆ ಆದರೆ ನಾನು ಕಾಂಗ್ರೆಸ್ಸಿಗನೇ ಆಗಿದ್ದೆ; ಅವರು ಕಮ್ಯೂನಿಸ್ಟರೇ ಆಗಿದ್ದರು. ನಮ್ಮ ನಮ್ಮ ವೈಯುಕ್ತಿಕತೆಯನ್ನು ನಾವು ಬಿಟ್ಟುಕೊಡಲಿಲ್ಲ ಜಿಲ್ಲೆಯ ಮಜೂರ ಸಂಘಟನೆಯನ್ನೆಲ್ಲಾ ಒಂದುಗೂಡಿಸಿ ದಕ್ಷಿಣ ಕನ್ನಡ ಜಿಲ್ಲಾ ಟ್ರೇಡ್ ಯೂನಿಯನ್ ಸೆಂಟ್ರಲ್ ಕೌನ್ಸಿಲ್, ಶ್ರೀ. ಎ. ಬಿ ಶೆಟ್ರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದಾಗ ನಾನದರ ಅಧ್ಯಕ್ಷನಾಗಿ ಆರಿಸಲ್ಪಟ್ಟೆ. ಆದರೆ ಮಜೂರ ಸಂಘಗಳನ್ನು ಯಾವುದಾದರೊಂದು ಪಾರ್ಟಿಯ ಹಸ್ತಕವಾಗಿ ಉಪಯೋಗಿಸಬಾರದು; ಕೇವಲ ಟ್ರೇಡ್ ಯೂನಿಯನ್ ಲೈನಿನಲ್ಲೇ ಕೆಲಸ ಮಾಡುತ್ತಾ ಹೋಗಬೇಕೆಂಬುದನ್ನು ನಾನು ಸ್ಪಷ್ಟಗೊಳಿಸಿದೆ. ಅದಕ್ಕೆ ನನ್ನ ಕಮ್ಯೂನಿಸ್ಟ್ ಬಂಧುಗಳು ಆಗ ಒಪ್ಪಿದ್ದರು.

ಮಜೂರ ಧ್ವಜ ಯಾವುದು?

ಶ್ರೀ. ಎಸ್. ಎನ್. ಹೊಳ್ಳರು ಬಂಧವಿಮುಕ್ತರಾಗಿ ಮಂಗಳೂರಿಗೆ ಬಂದಾಗ ನಡೆದ ಸಾರ್ವಜನಿಕ ಸಭೆಯಲ್ಲಿ ರಾಷ್ಟ್ರೀಯ ಮತ್ತು ಕೆಂಪು ಧ್ವಜಗಳೆರಡೂ ಏರಿಸಲ್ಪಟ್ಟಿದ್ದುವು. ಆ ಮೇಲೆ ಶ್ರೀ. ಹೊಳ್ಳರು ಬಂಟ್ವಾಳಕ್ಕೆ ಆಮಂತ್ರಿಸಲ್ಪಟ್ಟು ಹೋದರು. ನಾನೂ ಹೋಗಿದ್ದೆ. ಅಲ್ಲಿ ಕೆಂಪು ಧ್ವಜದೊಂದಿಗೆ ಕಾಂಗ್ರೆಸ್ ಮತ್ತು ಲೀಗ್ ಧ್ವಜಗಳಿದ್ದುವು. ಕಾಂಗ್ರೆಸ್ ಧ್ವಜದ ಕೋಲು ಇತರ ಧ್ವಜದವುಗಳಿಗಿಂತ ಗಿಡ್ಡಾಗಿತ್ತು. ಆಗ ಶ್ರೀ. ಹೊಳ್ಳರು ಆಕ್ಷೇಪಿಸಿ, ಮೆರವಣಿಗೆ ನಿಲ್ಲಿಸಿ ಅದನ್ನು ದೊಡ್ಡದು ಮಾಡಿಸಿದರು. ನಾವು ಯಾವಾಗಲೂ ರಾಷ್ಟ್ರೀಯ ಧ್ವಜಕ್ಕೆ ಪ್ರಾಮುಖ್ಯತೆ ಕೊಡಬೇಕೆಂದರು. ಆ ಮೇಲೆ ತಾ. 22-10-45ರಲ್ಲು ದ. ಕ. ಜಿಲ್ಲಾ ಮಜೂರ ಸಮ್ಮೇಳನ ನಡೆಯಿತು. ನಾನದರ ಸ್ವಾಗತ ಸಮಿತಿಯ ಅಧ್ಯಕ್ಷನಿದ್ದರೂ ನಾಮ ಮಾತ್ರವಾಗಿದ್ದೆ. ಅದೊಂದು ಕಮ್ಯೂನಿಸ್ಟ್ ಪರಿಷತ್ತಾಗಿಯೇ ನಡೆದಿದ್ದಿತು. ಎಲ್ಲೆಲ್ಲಿಯೂ ಕೆಂಪು ಬಾವುಟ, ಕೆಂಪು ಕಂಠವಸ್ತ್ರ, ಕೆಂಪು ಬೇಜು ತೋರಿಬರುತ್ತಿತ್ತು. ನಾನು ದ. ಕ. ಪ್ರೆಸ್ ವರ್ಕರ್ಸ್ ಯೂನಿಯನಿನ ಅಧ್ಯಕ್ಷನಾಗಿರುತ್ತೇನೆ. ಈ ಯೂನಿಯನಿನವರು ನೇಕಡ 75ಕ್ಕಿಂತಲೂ ಮಿಕ್ಕಿ ಕಾಂಗ್ರೆಸಿಗರು. ಅವರೂ ಸಮ್ಮೇಳನದಲ್ಲಿ ಸಹಕರಿಸಿದ್ದುದರಿಂದ ಅಲ್ಲಲ್ಲಿ ಒಂದೆರಡು ಕಾಂಗ್ರೆಸ್ ಧ್ವಜಗಳನ್ನು ಹಿಡಿಯುವ ವ್ಯವಸ್ಥೆ ಮಾಡಿರೆಂದು ನಾನು ಶ್ರೀ. ಹೊಳ್ಳರೊಡನೆ ಕೇಳಿಕೊಂಡೆ. "ಬೇಡ; ಕೆಲಸಗಾರರ ಧ್ವಜ ಕತ್ತಿ ಸುತ್ತಿಗೆಯ ಕೆಂಬಾವುಟ; ಅದೊಂದೇ ಸಾಕು; ಇನ್ನಾವ ಧ್ವಜವೂ ಬೇಡ" ಎಂದು ಬಿಟ್ಟರು ಶ್ರೀ. ಹೊಳ್ಳರು. ಕಮ್ಯೂನಿಸ್ಟರು ತಾವೇ ತಾವಾಗಿ ನಡೆದಿದ್ದರು ಈ ಸಮ್ಮೇಳನದಲ್ಲಿ. 'ರೆಡ್ ಗಾರ್ಡ್' ಎಂಬ ಸ್ವಯಂಸೇವಕ ದಳದ ಸಂಘಟನೆಗೆ ಹಣವು ಬೇಕಷ್ಟು ವ್ಯಯಿಸಲ್ಪಟ್ಟಿತು. ಸಮ್ಮೇಳನದ ಸಂದರ್ಭದಲ್ಲಿ ಗಲಾಟೆಮಾಡುವುದುಚಿತವಲ್ಲೆಂದು ನಾನು ನನಗಾದ ಎಲ್ಲಾ ಅಪಮಾನಗಳನ್ನೂ ಸಹಿಸಿ ತಣ್ಣಗಿದ್ದೆ. ಶ್ರೀ. ಬಿ. ಎ. ಕಕ್ಕಿಲ್ಲಾಯರ ಠಕ್ಕೇಟರತನವನ್ನು ತಾಳಿಕೊಂಡೆ. ಈ ಕಮ್ಯೂನಿಸ್ಟ್ ಬಂಧುಗಳೊಡನೆ ಸಮ್ಮೇಳನಾನಂತರ ಮಾತಾಡಿ ಎಲ್ಲವನ್ನೂ ತಿಳಿಸಿಬಿಡಬೇಕು; ಅವರು ದಾರಿಗೆ ಬರಲೂಬಹುದೆಂದು ಆಶಾಜ್ಯೋತಿಯ ಅಂತ್ಯದ ಹಾರಾಟ ನಡೆದಿತ್ತು ನನ್ನಲ್ಲಿ.

ಇಂದೀಗ ಮಜೂರರ ಧ್ವಜ ಯಾವುದೆಂಬುದನ್ನು ಅಖಿಲ ಭಾರತ ಟ್ರೇಡ್ ಯೂನಿಯನ್ ಕೌನ್ಸಿಲಿನ ಪ್ರಧಾನ ಕಾರ್ಯದರ್ಶಿ ಶ್ರೀ. ಎಮ್. ಎನ್. ಜೋಶಿಯವರೇ ಅಧಿಕೃತವಾಗಿ ತಿಳಿಸಿರುತ್ತಾರೆ. ಮದ್ರಾಸಿನ ಬಂದರು ಕೆಲಸಗಾರರ ಸಂಘದ ಅಧ್ಯಕ್ಷರ ಪ್ರಶ್ನೆಗೆ ಉತ್ತರವಾಗಿ ಅವರು, "ಕತ್ತಿ ಸುತ್ತಿಗೆಯ ಕೆಂಪು ಧ್ವಜ"ವು ಟ್ರೇಡ್ ಯೂನಿಯನ್ ಧ್ವಜವಲ್ಲ; ಕೇವಲ 'ಟ್ರೇಡ್ ಯೂನಿಯನ್'ಎಂದು ಬರೆದಿರುವ ಕೆಂಪು ಧ್ವಜ "ಮಾತ್ರ"ವೆಂದವರು ಸ್ಪಷ್ಟೀಕರಿಸಿರುತ್ತಾರೆ. ನಮ್ಮ ಕಮ್ಯೂನಿಸ್ಟ್ ಬಂಧುಗಳು ಇದಕ್ಕೇನೆನ್ನುತ್ತಾರೆ?

ವಿಧಾಯಕ ಕೆಲಸವೇ ಇಲ್ಲ

ಕೆಲಸಗಾರರಲ್ಲಿ ಸದಾ ಅತೃಪ್ತಿಯ ಬೇಗೆಯನ್ನೆಬ್ಬಿಸಿ, ತಮ್ಮಂತೆಯೇ ಮಾನವರಿರುವ, ತಾವು ಸದಾ ಕೈಕೆಳಗೆ ಕೆಲಸಮಾಡಬೇಕಾಗಿ ಬರುವ ಮಾಲಿಕರನ್ನು ರಾಕ್ಷಸರಂತೆ ಚಿತ್ರಿಸಿ, ದ್ವೇಷಾಗ್ನಿ ಕಾರುವ ಉದ್ಧಟ ಬಂಡಾಯಗಾರ ಮನೋವೃತ್ತಿಯನ್ನುಂಟುಮಾಡುವುದೇ ಕಮ್ಯೂನಿಸ್ಟರ ಮುಖ್ಯ ಉದ್ದೇಶವಿರುವಂತಿದೆ. ಬಡ ಕೆಲಸಗಾರರ ಕರುಣಾಮಯ ಸಾಮಾಜಿಕ ಮತ್ತು ಸಾಂಪತ್ತಿಕ ಪರಿಸ್ಥಿತಿಯನ್ನು ನಿಜವಾಗಿಯೂ ಸುಧಾರಿಸುವ ಯಾವ ವಿಧಾಯಕ ಕಾರ್ಯವನ್ನಾದರೂ ಅವರು ಸಾಧಿಸಿದುದು ನನಗೆ ತೋರಿಬರುವುದಿಲ್ಲ. ಕೆಲಸಗಾರರನ್ನು ಸದಾ ಹೊಗಳಿ ಪುಸಲಾಯಿಸುವ, ಮಾಲಿಕರನ್ನು ತೆಗಳಿ ನಿಷೇಧಿಸುವ ಕೇವಲ ಏಕಪಕ್ಷೀಯ ಪ್ರಚಾರವನ್ನವರು ಎಡೆಬಿಡದೆ ನಡೆಸುತ್ತಿದ್ದಾರೆ. ಇದರಿಂದಾಗಿ ಮಂಗಳೂರಿನ ಮಾಲಿಕ ಮಜೂರರೊಳಗೆ ಮನಃಕ್ಲೇಶವು ತೀವ್ರವಾಗಿ ಬೆಳೆ... ಹತ್ತಿ ಕೆಲಸಗಾರರ ನಿಜವಾದ ಹಿತಕ್ಕೆ ಘಾತವಾಗಿದೆ. ಅತ್ಯಾದಾರ ಮನೋವೃತ್ತಿಯ ಮಾಲಿಕನೂ ಕಠಿಣ ಹೃದಯನಾಗಿ ನಡೆಯ ಹತ್ತಿದ್ದಾನೆ. ಮೊದಲು ಮಜೂರ ಸಂಘಗಳನ್ನು ಅಂಗೀಕರಿಸಿ, ಕೆಲಸಗಾರರ ನ್ಯಾಯವಾದ ಕೇಳಿಕೆಗಳನ್ನೆಲ್ಲಾ ಮುಕ್ತ ಮನಸ್ಸಿನಿಂದ ಸ್ವಚ್ಛ ಹೃದಯದಿಂದ ವಿಚಾರಿಸಿ ತೃಪ್ತಿಪಡಿಸಲು ಹಾತೊರೆಯುತ್ತಿದ್ದ ಮಾಲಿಕರು ಕೂಡಾ, ಇಂದು ಕಮ್ಯೂನಿಸ್ಟರ ನಾಯಕತ್ವದಿಂದಾಗಿ ತೀವ್ರ ಸಂಶಯವುಳ್ಳವರಾಗಿ ದ್ವೇಷಭಾವ ತಾಳುತ್ತಿದ್ದಾರೆ. ಇದರ ಪರಿಣಾಮವಾದರೂ ಎಲ್ಲಿ?

ಹಂಚು ಕಾರ್ಖಾನೆಯ ಮುಷ್ಕರ

ನಮ್ಮೊಳಗಿನ ದೂರವನ್ನು, ಹಂಚು ಕಾರ್ಖಾನೆ ಮುಷ್ಕರವು ಮತ್ತಷ್ಟು ವಿಶಾ

UNITED

WE

Offer free SERVICE IN INSURANCE.

Give full SECURITY FOR YOUR MONEY.

Guarantee PROMPT SETTLEMENT OF CLAIMS.

RAO BAHADUR B. S. Sawkar, B. A., LL. B. Chairman.

A. S. Kini, Managing Director.

THE UNITED KARNATAKA INSURANCE Co., LTD.

H. O. DHARWAR. ESTD: 1929.

Insure with or Represent us.

For Particulars apply -

ORGANISING OFFICE COURT ROAD, UDIPI.

Or

M. N. Bhandary & Co., Sp. Agents, Kodialbail, Mangalore.

ANNOUNCEMENT

We have pleasure to announce the opening of a branch of the Bank at

MERCARA

ON 23-1-1946.

The Vijaya Bank Limited.

Head Office:- MANGALORE.



Approved firm by the Govt. of Mysore
Certified by the Agent of the Govt. of Ceylon Indian.

ನವಯುಗದ

ಚಂದಾಹಣ ಬಾಕಿ ಇರುವವರಿಗೆ ಕಳುಹಿಸುವ ವಿ. ಪಿ. ಯನ್ನು ಅವರು ದಯಮಾಡಿ ಸ್ವೀಕರಿಸುವಂತೆ ವಿನಂತಿ.

ಮ್ಯಾನೇಜರ್.

ಲಗೊಳಿಸಿತು. ನಾನು ಮುಷ್ಕರಕ್ಕೆ ವಿರೋಧವಿದ್ದೆ. ಒಂದೆಡೆ ಮೈದಾನಿನಲ್ಲಿ ಬೈದು ಭಂಗಿಸುವ, ಇನ್ನೊಂದೆಡೆ ಸಂಭಾವಿತತನದ ಸೋಗಿನಿಂದ ರಾಜಿಗಾಗಿ ಮುಂದಾಗುವ ಕಮ್ಯೂನಿಸ್ಟರ ಕಾರ್ಯರೀತಿಯೇ ಅವಿವೇಕ ಮತ್ತು ಅನರ್ಥಕಾರಿಯಾದುದೆಂದು ಖಂಡಿಸಿದೆ. 'ನೀವು ನಿಮ್ಮ ಬೈದಾಟದ ಚಳವಳವನ್ನೆಲ್ಲಾ 15 ದಿವಸ ನಿಲ್ಲಿಸಿ ಸುಮ್ಮನಿರಿ. ನಿಮ್ಮ ಕೌನ್ಸಿಲ್ ಅಧ್ಯಕ್ಷನಾಗಿರುವ ನನ್ನ ಮೇಲೆ ಸ್ವಲ್ಪ ವಿಶ್ವಾಸವಿಟ್ಟು ನನಗೆ ಅವಕಾಶಕೊಡಿ. ಸಂಧಾನದಿಂದಲೇ ಬೋನಸು ಕೊಡಿಸುವ ಜವಾಬ್ದಾರಿ ನನ್ನದೆ"ಂದು ನಾನು ದೊಡ್ಡ ಜವಾಬ್ದಾರಿ ಹೊತ್ತು ಆಶ್ವಾಸನೆ ಕೊಟ್ಟೆ. ಆದರೆ ಕಾಂಗ್ರೆಸಿಗನಾದ ನನಗೆ 'ಕ್ರೆಡಿಟ್' ಬರುವುದು ಕಮ್ಯೂನಿಸ್ಟರಿಗೆ ಹೇಗೆ ಸಹನವಾದೀತು? ಕಮ್ಯೂನಿಸ್ಟ ಬಂಧುಗಳು, 3 ತಿಂಗಳ ಬೋನಸು ನಿಶ್ಚಯ ಸಿಕ್ಕಿತೆಂದು ಹಂಚಿನ ಕೆಲಸಗಾರರಲ್ಲಿ ಪ್ರಚಾರ ನಡಿಸಿರುತ್ತಾರೆ. ಮುಷ್ಕರದ ಸಂಬಳವಂತಿರಲಿ, ಮ್ಹಾಲಕರು 'ಲೋಕ್ ಔಟ್' ಮಾಡಿ ಕೆಲಸಗಾರರನ್ನು ಹೊರಹಾಕಿದ ಸಂಬಳವೂ ಅವರಿಗಿಲ್ಲ. ಹಂಚಿನ ಮಜೂರ ಸಂಘವನ್ನು ಮ್ಹಾಲಕರು ಅಂಗೀಕರಿಸದೆ ಧಿಕ್ಕರಿಸಿ ಬಿಟ್ಟಿದ್ದಾರೆ. "ಡಬ್ಲ್ ಪ್ರೆಸ್ಸಿಂಗಿಗೆ" ಅವರು ಒಪ್ಪಬೇಕಾಗಿ ಬಂದಿದೆ. ಇಷ್ಟೆಲ್ಲಾ ಆದ ಮೇಲೂ ಮೇ ತಿಂಗಳ ಅಂತ್ಯಕ್ಕೆ ೩ ತಿಂಗಳ ಬೋನಸು ಕೊಡಬೇಕೆಂದು ಜಿಲ್ಲಾ ಕಲೆಕ್ಟರರೊಂದು ತೀರ್ಮಾನ ಕೊಟ್ಟಿದ್ದಾರೆ ಆದರೆ ಮ್ಹಾಲಕರು ಅದಕ್ಕೊಪ್ಪಲು ತಯಾರಿಲ್ಲ. ಮೇ ತಿಂಗಳ ಮೇಲೆ ಕೆಲಸಗಾರರಿಗೆ ಏನು ಮಾಡುವುದಕ್ಕೂ ಉಪಾಯವಿಲ್ಲ. ಆದುದರಿಂದ ಅವರು ವಂಚಿಸಲ್ಪಟ್ಟಂತೆಯೇ ಸರಿ. ಇದೀಗ ಕಮ್ಯೂನಿಸ್ಟರು ಮುಷ್ಕರದಿಂದ ಪಡೆದ ವಿಜಯದ ಸ್ವರೂಪ!

ನೇಕಾರರ ಮುಷ್ಕರ

ನೇಕಾರರ ಮುಷ್ಕರವು ಇಂದೀಗ ನೀರು ಕುಡಿಯುತ್ತಿದೆ. ನೂಲುವ ಕೈಗಾರಿಕೆಯ ಪ್ರಕೃತದ ಪರಿಸ್ಥಿತಿಯಲ್ಲಿ, ಸ್ಪಷ್ಟ ವಿಚಾರವುಳ್ಳವನಾರೂ ಮುಷ್ಕರಕ್ಕೆ ಮುಂದಾಗಲಾರ. ಆದರೆ ಮುಂದಿಟ್ಟ ಹೆಜ್ಜೆ ಹಿಂದಿಡಬಾರದೆಂಬ ಒಣ ಪ್ರತಿಷ್ಠೆಯೇ ಈ ಮುಷ್ಕರದ ಮೂಲವಿರುವಂತಿದೆ. ಯಾರೊಡನೆಯೂ ಹೇಳದೆ ಕೇಳದೆ ತಮ್ಮದೇ ಆದ ಲೋಕದಲ್ಲಿ ವಿಹರಿಸಿ ಏಕಾಏಕಿ ಮುಷ್ಕರವನ್ನಾರಂಭಿಸಿಬಿಡುವುದು; ಆ ಮೇಲೆ ಕಾಂಗ್ರೆಸ್ಸಿಗರು, ಅವರಿವರೆಡೆಗೆಲ್ಲಾ ಓಡಾಡಿ ಇತ್ಯರ್ಥಪಡಿಸಿರೆಂದು ಒತ್ತಾಯಪಡಿಸುವುದರಲ್ಲಿ ಮತ್ತು ದೂರುವುದರಲ್ಲಿ ಅರ್ಥವಿದೆಯೇ? ಇನ್ನು ಕಾಂಗ್ರೆಸ್ ಮಂತ್ರಿ ಮಂಡಲಿಯು ಪರೀಕ್ಷೆ ಮಾಡಲಿಕ್ಕಿದೆಯಂತೆ ಕಾಂಗ್ರೆಸ್ಸಿನ ಧೋರಣೆಯನ್ನು ಹೆಜ್ಜೆ ಹೆಜ್ಜೆಗೂ ವಿರೋಧಿಸಿ, ಅವರ ಬದ್ಧವಿರೋಧಿ ಲೀಗನ್ನಪ್ಪಿಕೊಂಡು, ಕಾಂಗ್ರೆಸನ್ನು ಸಾಧ್ಯವಾದಲ್ಲೆಲ್ಲಾ ತಿವಿಯಲೆತ್ನಮಾಡುತ್ತಾ ಬಂದಿರುವ ಕಮ್ಯೂನಿಸ್ಟರು ಕಾಂಗ್ರೆಸ್ ಮಂತ್ರಿಮಂಡಲವನ್ನು ಯಾವ ಮುಖದಿಂದ ಪರೀಕ್ಷೆಮಾಡುವುದೋ ತಿಳಿಯದು! ಅದು ಕೆಲಸಗಾರರ ಮತ್ತು ಕೃಷಿಕರ ಹಿತಸಾಧನೆಯನ್ನು, ತನಗೆ ತೋರಿದಂತೆ ಮತ್ತು ಕಾಂಗ್ರೆಸ್ಸಿನ ಧೋರಣೆ ಮತ್ತು ಕಾರ್ಯಕ್ರಮದಂತೆ, ಮಾಡುವುದೇ ಹೊರತು ಕಮ್ಯೂನಿಸ್ಟರಿಗೆ ಬೇಕಾದಂತೆ ಎಂದೂ ನಡೆವ ಹಾಗಿಲ್ಲ.

ಪ್ರತಿ ಮಜೂರ ಸಂಘಗಳನ್ನು ಸ್ಥಾಪಿಸಬೇಕು

ಕಮ್ಯೂನಿಸ್ಟರು ಮುಸ್ಲಿಂ ಬೀಡಿ ಲೇಬರ್ ಯೂನಿಯನ್ ಮೊದಲಾದ ಸಂಘಗಳನ್ನು ಅಂಗೀಕರಿಸಿ ಅವುಗಳೊಂದಿಗೆ ಸೇರಿ ನಡೆಯಲು ಸಿದ್ಧರಿದ್ದಾರೆ. ಆದರೆ ಅವರ ಧ್ಯೇಯ ಮತ್ತು ಕಾರ್ಯಕ್ರಮದ ಕುರಿತು ಮೂಲಭೂತ ಭೇದವಿರುವ ಕಾಂಗ್ರೆಸ್ಸು, ಮಜ್‌ದೂರ್ ಸೇವಾ ಸಂಘಗಳನ್ನು ಸ್ಥಾಪಿಸಿ, ಕೆಲಸಗಾರರ ಹಿತ ಸಾಧನೆಗೆ ಮುಂದಾದರೆ ಅದು ಮಜೂರ ದ್ರೋಹವಾಗುವುದು! ಆ ಕುರಿತು ಮೊದಲೇ ಎಚ್ಚರಿಸಿದ್ದಾರೆ ಕೆಲಸಗಾರರನ್ನವರು. ಆದರೆ ಜಿಲ್ಲೆಯ ಕೆಲಸಗಾರರೂ, ಕಾಂಗ್ರೆಸ್ಸಿಗರೂ, ಕಮ್ಯೂನಿಸ್ಟರ ಈ ತಪ್ಪು ನಾಯಕತ್ವವು, ಬಡ ಕೆಲಸಗಾರ ಮತ್ತು ಕೃಷಿಕರನ್ನು ಎಂತಹ ಅನಾಹುತಕ್ಕೆಳೆದೊಯ್ಯುವುದೆಂಬುದನ್ನು ಚೆನ್ನಾಗಿ ಮನಗಂಡು ಅದನ್ನು ತಡೆಗಟ್ಟಲೆತ್ನಿಸಬೇಕು. ಕಾಂಗ್ರೆಸ್ ಧ್ವಜದಡಿಯಲ್ಲಿ ಮಜೂರ ಮತ್ತು ಕೃಷಿಕ ಸಂಘಟನೆಗಳನ್ನೂ ಸ್ಥಾಪಿಸಲು ಮುಂದಾಗಬೇಕು. ಜಿಲ್ಲಾ ಕಾಂಗ್ರೆಸ್ ಕಮಿಟಿಯವರೂ, ಎಸೆಂಬ್ಲಿ ಮೆಂಬರರೇ ಮೊದಲಾದ ಜನಪ್ರತಿನಿಧಿಗಳೂ ಸ್ಪಷ್ಟ ಧೋರಣೆ ವಹಿಸಿ ಕಾರ್ಯಪ್ರವೃತ್ತರಾಗಬೇಕು. ಕಾಂಗ್ರೆಸ್ಸಿನ ಧ್ಯೇಯವನ್ನು ಚೆನ್ನಾಗಿ ತಿಳಿ[illegible] ಅನುದಿನವೆಂಬಂತೆ. ಕೆಲಸಗಾರರ ಹಿತಸಾಧನೆಗಾಗಿ ದುಡಿವ ಶಿಬ್ಬಂದಿ ಮೂಲಕ ಮಜೂರ ಸಂಘಟನೆಗಳನ್ನು ಸ್ಥಾಪಿಸುವ ಯತ್ನ ನಡೆಯಬೇಕು ಕೇವಲ ಕಮ್ಯೂನಿಸ್ಟರನ್ನು ದೂರಿ ನಿಷೇಧಿಸುವುದರಿಂದಲೇ ತೃಪ್ತರಾಗಿದ್ದರೆ ಸಾಲದು.

ಕೆ. ಕೆ. ಶೆಟ್ಟಿ,
ಅಧ್ಯಕ್ಷ, ದ. ಕ. ಟ್ರೇಡ್ ಯೂನಿಯನ್,
ಸೆಂಟ್ರಲ್ ಕೌನ್ಸಿಲ್,

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.

FOR LIFE ASSURANCE
CONSULT
The New Gaurdian of India Life Insrce. Co, Ltd.,
(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA.
MANGALORE & KARKALA.

HEAD OFFICE.
"United India Life Bldg"
Esplanade, Post Box No. 142,
MADRAS.

ಆಸ್ತಮಾ ಕಾಯಿಲೆಗೆ ರಾಮಬಾಣ

ಅಸ್ತ್ಮಾ (Asthma) ಉಬ್ಬಸ ಕಾಯಿಲೆಗೆ ಜಗತ್ಪ್ರಸಿದ್ಧನಾದ 'ಲಕ್ಷ್ಮೀ ಭೂತಿ' ಔಷಧಿಯೊಂದೇ ರಾಮಬಾಣ. ತಾ 16-4-46ನೆ ಪೌರ್ಣಿಮ ದಿನ ಒಂದು ಡೋಸ್ ಔಷಧಿಯನ್ನು ಸೇವಿಸಿದರೆ ತೀವ್ರ ಆಶ್ಚರ್ಯಕರ ಗುಣವಾಗುತ್ತೆ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Sri Janki Sewashram
P. O. ChitraKott (U. P.)

ಆಶ್ಚರ್ಯಕರ] # ನರೆತ ಕೂದಲು **[ಗುಣಕಾರಿಗಳು**

ರಂಗನ್ನು ಉಪಯೋಗಿಸಬೇಡಿರಿ! ಸುವಾಸನೆಯುಳ್ಳ ನಮ್ಮ ಆಯುರ್ವೇದೀಯ ಎಣ್ಣೆಯನ್ನೇ ಉಪಯೋಗಿಸಿರಿ. ಆಗತಾನೆ ನಿಮ್ಮ ನರೆತ ಕೂದಲು ಅರವತ್ತು ವರುಷಗಳ ತನಕವೂ ಕರ್ರಗಾಗಿಯೇ ಇರುವುದು. ದೃಷ್ಟಿದೋಷ, ತಲೆನೋವು ಸಹ ಈ ತೈಲ ಉಪಯೋಗದಿಂದ ದೂರವಾಗುವುದು. ಕೆಲವೇ ನರೆತ ಕೂದಲುಗಳು ಕರ್ರಗಾಗಬೇಕಾದರೆ ರೂ. 2-8-0ರ ಸೀಸೆ, ಜಾಸ್ತಿ ನರೆತ ಕೂದಲುಗಳ ಉಪಯೋಗಕ್ಕೆ ರೂ. 3-8-0ರ ಸೀಸೆ ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಲ್ಲಿ ರೂ. 5/-ರ ಸೀಸೆಯನ್ನು ಉಪಯೋಗಿಸಬೇಕು. ಗುಣವಾಗಲಿಲ್ಲವೆಂದು ಖಾತ್ರಿಪಡಿಸುವವರಿಗೆ ಸೀಸೆಯ ಡಬ್ಬಲ್ ಕಿಮ್ಮತ್ತು ಕೊಡಲಾಗುವುದು.

ಬಿಳಿ ಕುಷ್ಟ ಮತ್ತು ಲ್ಯೂಕೋಡರ್ಮಾ

ಈ ಭಯಾನಕ ವ್ಯಾಧಿಗಳನ್ನು ಹೋಗಲಾಡಿಸಲು ಕೆಲವೇ ದಿನಗಳ ಲೇಪನ ಸಾಕಾಗುವುದು. ನೂರಾರು ಹಕೀಮರು, ಡಾಕ್ಟರರು ಕವಿರಾಜರುಗಳಿಂದ ಅಸಾಧ್ಯವೆಂದು ಬಿಡಲಾದ ಕೇಸುಗಳನ್ನು ಈ ಔಷಧವು ಗುಣಪಡಿಸಿಯದೆ. ಹದಿನೈದು ದಿವಸಗಳ ಔಷಧಕ್ಕೆ ರೂ. 2-8-0. ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯಾಗಲೀ ಹಿಂದಿಯಲ್ಲಾಗಲೀ ಮಾಡತಕ್ಕದ್ದು. ಇಂದೇ ಬರೆಯಿರಿ.—

Vaidraj Akhil Kishor Ram,
No. 6, KATRISARAI, (Gaya.)

—ಮಕ್ಕಳನ್ನು ಹಡೆಯುವುದು ಸಾಕು.—

ಅಶಕ್ತ ಸ್ತ್ರೀಯರಿಗೆ # ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನ [illegible] ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ [illegible].

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ** [illegible], ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವವಾತ ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ರ ಬ್ಸಿನ ಡಬ್ಬಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರಗಳ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು—ಡಾ॥ ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಭಾರತಕ್ಕೆ ಬಂದಿರುವ ಬ್ರಿಟಿಷ್ ತ್ರಿಮೂರ್ತಿಗಳು

ಲೋರ್ಡ್ ಪೆಥಿಕ್ ಲಾರೆನ್ಸ್—ಸರ್. ಸ್ಟಾಫೋರ್ಡ್ ಕ್ರಿಪ್ಸ್—ಮಿ. ಎ. ವಿ. ಅಲೆಕ್ಸಾಂಡರ್.

"ನಾವು ಯಾವುದೇ ಒಂದನ್ನು ನಿರ್ಧರಿಸಿಕೊಂಡು ಇಲ್ಲಿ ಬಂದಿಲ್ಲ. ಲೋರ್ಡ್ ವೇವೆಲರನ್ನು ಕೂಡಿಕೊಂಡು ಹಿಂದೀ ಪ್ರಮುಖರೊಡನೆ, ಮತ್ತಿಲ್ಲಿಯ ಚುನಾಯಿತ ಪ್ರತಿನಿಧಿಗಳೊಡನೆ ಆಲೋಚನೆ ನಡಿಸಿ, ನಿಮ್ಮ ಸ್ವಾಧಿಕಾರವು ಸಂಪೂರ್ಣವಾಗಿ ನಿಮ್ಮ ಕೈಗೇನೇ ಬರಬೇಕೆಂಬ ನಿಮ್ಮ ಹೆಬ್ಬಯಕೆಯನ್ನು ಈಡೇರಿಸುವ ಉತ್ತಮೋಪಾಯವನ್ನು ಕಂಡು ಹಿಡಿದು, ಜವಾಬ್ದಾರಿಯನ್ನು ಹೆಗ್ಗಳಿಕೆ ಮತ್ತು ಗೌರವದೊಡನೆ ನಿಮಗೆ ವರ್ಗಾಯಿಸಲು ನಾವು ಸಮರ್ಥರಾಗಬೇಕೆಂಬ ಏಕಮಾತ್ರ ಉದ್ದೇಶ ನಮ್ಮದು. ನಾವು ಆಗಿ ಹೋದುದರ ಕಡೆಗೆ ಹಜ್ಜೆ ಹಿಂದಿಡುವದಿಲ್ಲ; ನಾವು ಮುಂದಡಿಯಿಡುತ್ತೇವೆ"—ಇದೇ ತಾ. ೨೧ರಲ್ಲಿ ಕರಾಚಿಯ ವಿಮಾನ ನಿಲ್ದಾಣದಲ್ಲಿಳಿದೊಡನೆ ಬ್ರಿಟಿಷ್ ಮಂತ್ರಿಮಂಡಲ ಸಮಿತಿಯವರು ವ್ಯಕ್ತಪಡಿಸಿದ ಅಭಿಪ್ರಾಯ. ಭಾರತದ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸ್, ವ್ಯಾಪಾರೀ ಬೋರ್ಡಿನ ಅಧ್ಯಕ್ಷ, ಸರ್. ಸ್ಟಾಫೋರ್ಡ್ ಕ್ರಿಪ್ಸ್, ಪ್ರಥಮ ನೌಕಾಧಿಪತಿ, ಮಿ. ಅಲೆಕ್ಸಾಂಡರರಿರುವ ಸಮಿತಿಯಿದು.

ಲೋರ್ಡ್ ಪೆಥಿಕ್ ಲಾರೆನ್ಸ್

ಇವರು ೭೦ರ ಗಡಿ ದಾಟಿರುವ ಹಣ್ಣು ಮುದುಕ. ಬ್ರಿಟನಿನಲ್ಲಿ ದೀರ್ಘಾವಧಿಯ ಸಾರ್ವಜನಿಕ ಸೇವಾತತ್ಪರರ ಪಂಕ್ತಿಯಲ್ಲಿ ಲೋರ್ಡ್ ಲಾರೆನ್ಸರಿಗೂ ಸ್ಥಾನವಿದೆ. ತನ್ನ ಯವ್ವನ ಕಾಲದಲ್ಲಿ ಕೆಲವು ಉಗ್ರ ಕಾರ್ಯಕ್ರಮಗಳಲ್ಲೂ ಪ್ರವೃತ್ತರಾಗಿದ್ದರು. ಹೋರಾಟ ಸ್ಫೂರ್ತಿಯ ಮಟ್ಟಿಗೆ ಗಂಡನಿಗಿಂತಲೂ ಲೇಡಿ ಪೆಥಿಕ್ ಲಾರೆನ್ಸರು ಹೆಚ್ಚಿನ ಕೀರ್ತಿ ಪಡೆದಿದ್ದಾರೆ. ಈ ಬ್ರಿಟಿಷ್ ಮಹಿಳೆಗೆ ಹಿಂದೀ ರಾಷ್ಟ್ರೀಯತೆಯ ಮೇಲೆ ವಿಶೇಷ ಸಹಾನುಭೂತಿಯಿದೆ. ಹಿಂದೀ ಸ್ವಾತಂತ್ರ್ಯದ ಕುರಿತು ಮಿಸೆಸ್ ಲಾರೆನ್ಸರ ಅಭಿಪ್ರಾಯ, ಹಿಂದೀ ರಾಷ್ಟ್ರೀಯ ಮುಖಂಡರ ಅಭಿಮತದಷ್ಟೇ ಉಜ್ವಲವಾದುದು. ಬ್ರಿಟಿಷ್ ಮಹಿಳೆಯರ ಮತದಾನದ ಹಕ್ಕಿಗಾಗಿ ನಡೆದಿದ್ದ ಉಗ್ರ ಚಳವಳಿಯಲ್ಲಿ ಪ್ರಾಮುಖ್ಯ ಭಾಗ ವಹಿಸಿ 'ಧೀರ ನಾಯಕಿ' ಎಂದು ಹೊಗಳಿಸಿಕೊಂಡಿದ್ದ ಮಹಿಳೆಯಾಕೆ. ಅನಾರೋಗ್ಯದ ದೆಸೆಯಿಂದ ಈ ಬಾರಿ ಗಂಡನೊಂದಿಗೆ ಭಾರತಕ್ಕೆ ಆಗಮಿಸಲು ಲೇಡಿ ಪೆಥಿಕ್ ಲಾರೆನ್ಸರಿಗಾಗಲಿಲ್ಲ. ಲೋರ್ಡ್ ಪಥಿಕರು ಆಮೋದ ವರ್ಗಕ್ಕೆ ಸೇರಿದವರಲ್ಲ. ಅವರಲ್ಲಿನ್ನು ಕಠಿಣ ಹೃದಯವಾಗಲೀ, ಭಾರತದ ಮೇಲಿನ ಜಿಗುಪ್ಸೆ ಮತ್ತು ದ್ವೇಷವಾಗಲೀ ಲೋರ್ಡ್ ಪೆಥಿಕ್ ಲಾರೆನ್ಸರಲ್ಲಿಲ್ಲ. ಆದ್ದರಿಂದಲೇ ಆ ಮೆರಿ ಗದ್ದುಗೆಗೆ ಲಾರೆನ್ಸರೇರಿದಾಗ ಸರ್. ಸಪ್ರುಗಳಂಥವರು ಸಂತೃಪ್ತಿಪಟ್ಟಿದ್ದರು. ಇವರು ಈ ಮೊದಲೂ ಹಿಂದುಸ್ಥಾನವನ್ನು ಸಂದರ್ಶಿಸಿ ಪರಿಚಯ ಪಡೆದವರು. ಅಧಿಕಾರಾರೂಢರಾದ ಮೇಲೆ, ರಾಜಕೀಯ ಕೈದಿಗಳ ಬಿಡುಗಡೆಯೇ ಮೊದಲಾದ ಪ್ರಶ್ನೆಗಳ ಕುರಿತು ಹಿಂದೀಯರ ಮನ ನೋಯುವ ಮಾತುಗಳನ್ನಾಡಿದ್ದರು. ಆದರೆ ಭಾರತಕ್ಕೆ ಅಧಿಕಾರ ದಾನ ಮಾಡುವ ಕುರಿತು ನಿಸ್ಸಂಶಯವಾಗಿಯೂ ಉದಾರ ಮನೋವೃತ್ತಿಯುಳ್ಳವರು. ಆದರೆ ಸಾವಧಾನಿ. ಎಲ್ಲವೂ ಸುಗಮವಾದರೆ ಲೋರ್ಡ್ ಲಾರೆನ್ಸರಿಂದ ಪ್ರಗತಿಗೆ ತಡೆ ಬೀಳುವಂತಿಲ್ಲ. ಸಹಾನುಭೂತಿಯಿಂದ ಎಲ್ಲವನ್ನೂ ಪರಿಶೀಲಿಸಬೇಕೆಂಬ ನಿರ್ಲಿಪ್ತ ಭಾವವಲ್ಲದೆ ಯಾವ ದಿಕ್ಕಿಗೂ ಅವರು ವಾಲುವಂತೆ ಕಾಣುವದಿಲ್ಲ.

ಸರ್. ಸ್ಟಾಫೋರ್ಡ್ ಕ್ರಿಪ್ಸ್

ಇವರಂತೂ ಹಿಂದೀಯರಿಗೆ ಸುಪರಿಚಿತರು. ೧೯೪೨ರಲ್ಲೊಮ್ಮೆ ಇಂತಹ ಕಾರ್ಯಕ್ಕಾಗಿಯೇ ಇಲ್ಲಿಗೆ ಬಂದಿದ್ದು 'ಅಸಫಲರು' ಎಂಬ ಅಪವಾದಕ್ಕೊಳಗಾಗುವಂತೆ ಅವಸರವಸರದಿಂದ ಎಲ್ಲವನ್ನೂ ಕೆಡಿಸಿ ಹೋಗಿದ್ದರು. ಆದರೆ ನಿಜಕ್ಕೂ ಸಹೃದಯದ ಮನುಷ್ಯ. ಬ್ರಿಟಿಷ್ ಮಂತ್ರಿಮಂಡಲದ ಸಂಬಂಧವಾರಂಭವಾಗುವ ಮೊದಲಿನ ಮುಹೂರ್ತದ ವರೆಗೂ 'ಸಮತಾವಾದಿ' ಎಂದು ಹೇಳಿಕೊಳ್ಳುತ್ತಲೂ ಹೇಳಿಸಿಕೊಳ್ಳುತ್ತಲೂ ಇದ್ದರು ಸರ್. ಕ್ರಿಪ್ಸರು ಕೀರ್ತಿಶಿಖರಕ್ಕೇರಿದುದು ರಶ್ಯಾ—ಜರ್ಮನಿ ಯುದ್ಧಾರಂಭವಾದುದರಿಂದ. ಜರ್ಮನ್-ರಶ್ಯಾ ತಾಟಸ್ಥ್ಯ ಒಪ್ಪಂದವಿದ್ದಾಗ ಸಮತಾವಾದಿ ಕ್ರಿಪ್ಸರೇ ಬ್ರಿಟಿಷ್ ರಾಯಭಾರಿಯಾಗಿ ರಶ್ಯದಲ್ಲಿದ್ದರು ನಾಜೀ ವಿರುದ್ಧವಾಗಿ ರಶ್ಯವನ್ನು ಹುರಿದುಂಬಿಸುವ ಮಹತ್ಕಾರ್ಯವು ಅವರಿಂದಾಯಿತೆಂಬುದರಿಂದ ಮುಂದಿನ ಪ್ರಧಾನಿ ಪಟ್ಟವೇ ಸರ್. ಕ್ರಿಪ್ಸರಿಗೆ ಮೀಸಲಿದ್ದಂತೆ ಕಾಣುತಿತ್ತು. ಆದರೆ ಆಗ ಮುಖ್ಯ ಮಂತ್ರಿಯಾಗಿದ್ದ ಮಿ. ಚರ್ಚಿಲ್ಲರು ಇವರಿಗೊಂದು ಸಾಗದ ಕಾರ್ಯಕೊಟ್ಟು—'ಕ್ರಿಪ್ಸ್ ಸೂಚನೆ'ಯೆಂದು ಹೆಸರಾದ ಕೊಡುಗೆಯೊಂದಿಗೆ ಭಾರತಕ್ಕೆ ಬೀಳ್ಕೊಟ್ಟು—ತೇಜೋವಧೆ ಮಾಡಿದರೆನ್ನಬೇಕು. ಆದರೆ ಹಿಂದೀ ಪ್ರಮುಖರು ಕ್ರಿಪ್ಸರನ್ನು 'ಅವಸರವಾದಿ' ಎಂದರು ಹೊರತು ಅನ್ಯಾಯಿಯೆನ್ನಲಿಲ್ಲ. ಆ ಬಾರಿ 'ಒಂದೋ ಸ್ವೀಕರಿಸಲಿ,ಅಥವಾ ಬಿಟ್ಟು ಬಿಡಲಿ; ಮಧ್ಯಹಾದಿಯಿಲ್ಲ' ಎಂಬ ಆಜ್ಞೆ ಬ್ರಿಟಿಷ್ ಸರಕಾರದ್ದಿತ್ತು. ಈ ಬಾರಿ ಅಂತಹ ಕಟ್ಟುನಿಟ್ಟೇನೂ ಇಲ್ಲ. ಇಂಗ್ಲಾಂಡಿನಿಂದ ಬರುವಾಗ ಅವರು ಯಾವುದೊಂದನ್ನೂ ಬುತ್ತಿಕಟ್ಟಿಕೊಂಡು ಬಂದಿಲ್ಲ. ಇಲ್ಲಿಯೇ ಆಲೋಚಿಸಿ ತೀರ್ಮಾನ ಹುಡುಕುವ ಸ್ವಾತಂತ್ರ್ಯ ಇಂದಿನ ಕ್ರಿಪ್ಸರಿಗಿದೆ. ಹಿಂದಿನ ಕ್ರಿಪ್ಸ್ ಕೊಡುಗೆಯಲ್ಲೂ ರಾಷ್ಟ್ರ ವಿಭಾಗದ ಅಂಶ ಹೊಳೆದಿತ್ತು; ಆವೇಳೆ ಸರ್. ಕ್ರಿಪ್ಸರು ಮಿ. ಜಿನ್ನರ ಅಭಿಪ್ರಾಯವನ್ನು ಬಹುಮಟ್ಟಿಗೆ ಸಮರ್ಥಿಸುವಂತೆ ಕಾಣುತಿತ್ತು. ಆದರೆ ಮೊನ್ನೆ ಕರಾಚಿಯಲ್ಲಿ ಇಳಿದೊಡನೆ "ಮಾತುಕತೆಗಳಿಗೆ ಕ್ರಿಪ್ಸ್ ಕೊಡುಗೆಯನ್ನೇ ಅಸ್ತಿವಾರವಾಗಿ ಇಟ್ಟುಕೊಳ್ಳುವಿರಾ?" ಎಂದು ಪ್ರಶ್ನಿಸಿದಾಗ "ನಾವು ಹಿಂದೆ ಹೋಗುವುದಿಲ್ಲ; ಮುಂದೊತ್ತಲಿದ್ದೇವೆ' ಎಂದು ಕ್ರಿಪ್ಸರಂದಿದ್ದಾರೆ. 'ಮನುಷ್ಯ ಒಳ್ಳೆಯವ; ಮನಸ್ಸು ಯಾವ ಸಂದರ್ಭದಲ್ಲಿ ಹೇಗೆ ನಿಲ್ಲುವದೋ ಹೇಳಲಾಗುವದಿಲ್ಲ'-ಎಂದು ಸರ್. ಕ್ರಿಪ್ಸರ ಸ್ವಭಾವಜ್ಞರನ್ನುತ್ತಾರೆ.

ಮಿ. ಎ. ವಿ. ಅಲೆಕ್ಸಾಂಡರ್

ಇವರು ಕಡಲ ರಾಣಿ ಬ್ರಿಟನ್ನಿನ ಹಡಗು ಖಾತೆಯ ಶಿರಸ್ಥರಾಗಿದ್ದಾರೆ. ಚೇಂಬರ್ಲೇನ್ ಯುದ್ಧ ಮಂಡಲದಲ್ಲಿಯೂ ಪ್ರಥಮ ಜಾಗತಿಕ ಮಹಾ ಯುದ್ಧ ಸಮಯದಲ್ಲಿಯೂ ಮಿ. ಚರ್ಚಿಲ್ಲರಿಗಿದ್ದ ಸ್ಥಾನವದು. ಅಲೆಕ್ಸಾಂಡರ್—ಚರ್ಚಿಲ್ಲರೊಳಗೆ ಸ್ಥಾನ ಸಾಮ್ಯತೆ ಮಾತ್ರವಲ್ಲ; ಬುದ್ಧಿ ಸಾಮ್ಯತೆಯೂ ಇದೆ. ಬ್ರಿಟಿಷ್ ಲೇಬರ್ ಮಂತ್ರಿಮಂಡಲದಲ್ಲಿ ಚರ್ಚಿಲ್ ಭಾವನೆಯ ಅಂಶವೇನಾದರೂ ಸೇರಿಕೊಂಡಿದ್ದರೆ ಅದು ಅಲೆಕ್ಸಾಂಡರರಿಂದ ಎಂದು ಬ್ರಿಟನ್ನಿನ ಮನಶ್ಶಾಸ್ತ್ರಜ್ಞರಿಗೆ ಗೊತ್ತಿರುವ ವಿಷಯ. ಹಿಂದೀ ಸ್ವಾತಂತ್ರ್ಯಾಕಾಂಕ್ಷೆಯ ಮೇಲೆ ಮಿ. ಚರ್ಚಿಲ್ಲರಷ್ಟೇ ಕಟ್ಟುಗ್ರ ದ್ವೇಷವಿದ್ದವರು ಮಿ. ಅಲೆಕ್ಸಾಂಡರರು. ಸಮರ್ಥ ಮನುಷ್ಯ; ಮಾತು, ಕಾರ್ಯ, ಎರಡರಲ್ಲೂ ಪ್ರವೀಣ. ಲಾರೆನ್ಸ್ ಮತ್ತು ಕ್ರಿಪ್ಸ್, ಇಬ್ಬರನ್ನೂ ಅಪ್ರತ್ಯಕ್ಷ 'ರಿಂಗ್ ಮಾಸ್ಟರ'ರಾಗಿ ತನ್ನ ಸನ್ನಿಧಿಯಲ್ಲೇ ಇವರು ತಿರುಗಿಸಿಕೊಳ್ಳಬಲ್ಲರೆಂದು ಹಿಂದೀ ಸ್ವಾತಂತ್ರ್ಯಾಕಾಂಕ್ಷಿಗಳಲ್ಲಿ ಭಯವೆದ್ದಿದೆ. ಆದರೆ ಯಾವ ಮನುಷ್ಯನಾದರೂ ಸಮಯ-ಸಂದರ್ಭಗಳಿಗಾಧೀನನು. ಕಮ್ಯೂನಿಸ್ಟ್ ವಿರೋಧಿ ಮಿ. ಚರ್ಚಿಲ್ಲರು ಸಮಯ ಬಂದಾಗ ರಶ್ಯದ ಅಗ್ರಗಣ್ಯ ಸ್ನೇಹಿತನಾದುದಿಲ್ಲವೇ? ಅಂತೆಯೇ ಭಾರತವನ್ನು ಸಮಾಧಾನಪಡಿಸಬೇಕೆಂಬ ಕುರಿತು ಈಗ ಬ್ರಿಟನಿನಲ್ಲಿ ಎರಡಭಿಪ್ರಾಯವಿಲ್ಲದಿರುವಾಗ ಮಿ. ಅಲೆಕ್ಸಾಂಡರರೊಬ್ಬರು ಅದಕ್ಕೆ ಕಂಟಕವಾಗಲಾರರು. ವೈರಿಯಲ್ಲಿ ಸ್ನೇಹಭಾವ ಮೂಡಿದರೆ ಅದು ಶಿಲಾಸ್ತಂಭದಷ್ಟು ಗಟ್ಟಿ. ಆದ್ದರಿಂದ ಪಸ್ತುಸ್ಥಿತಿಯಲ್ಲಿ ಮಿ. ಅಲೆಕ್ಸಾಂಡರರಿಂದ ಹಿಂದೀಯ ಬಿಕ್ಕಟ್ಟು ತೀರ್ಮಾನಕ್ಕೆ ಸಹಾಯವಾದೀತು ಹೊರತು ಅಪಕಾರವಾಗದೆಂಬ ಆಶೆಯಿದೆ.

ದೇನ ವಿಮಾ ಕಂಪೆನಿ

ಮೂಲಧನ

ಅಧಿಕೃತ	ರೂ 20,00,000
ಹೊರಡಿಸಿದ, ವಂತಿಗೆಯಾದ ಮತ್ತು ತೆತ್ತ...	ರೂ 10,00,000

ಡ್ಯಾರೆಕ್ಟರರ ಮಂಡಳಿ

ಪ್ರಾಣಲಾಲ್ ದೇವಕರಣ ನಾನ್‌ಜಿ, ಎಸ್ಕ್ವಾಯರ್., ಜೆ. ಪಿ. ಚೆಯರ್‌ಮೆನ್.
ಜೂನಿಲಾಲ್ ದೇವಕರಣ ನಾನ್‌ಜಿ, ಎಸ್ಕ್ವಾಯರ್.
ರಾಜರತ್ನ ನಾನ್‌ಜಿ ಕಾಳಿದಾಸ ಮೆಹತಾ, ಎಮ್. ಬಿ. ಇ.
ಮಾಧವಲಾಲ್ ಮಕನ್‌ಜಿ ಭಟ್, ಎಸ್ಕ್ವಾಯರ್. ಜೆ. ಪಿ.
ಸಂಗ್ರಾಮ ಹರಿದಾಸ್ ಅಭಿಗತಲಾಲ್, ಎಸ್ಕ್ವಾಯರ್.
ಪೋರ್‌ಬಂದರಿನ ಕೆಪ್ಟನ್ ನಟವರಸಿಂಹಜಿ
ಲಲಿತ್ ಚಂದ್ರ ಸಿ. ಡಿ. ನಾನ್‌ಜಿ, ಎಸ್ಕ್ವಾಯರ್.
ಲಕ್ಷ್ಮೀಕಾಂತ್ ಎಸ್. ಥಾಬೋಳ್ಕರ್, ಎಸ್ಕ್ವಾಯರ್, ಜೆ. ಪಿ.
ಜಯಂತಿಲಾಲ್ ಆರ್. ತ್ರಿವೇದಿ, ಎಸ್ಕ್ವಾಯರ್.
ತನೂಭಾಯಿ ದಿ. ದೇಸಾಯಿ, ಎಸ್ಕ್ವಾಯರ್, ಬಿ.ಎ.,ಎಲ್.ಎಲ್.ಬಿ.
ವಿಜಯಚಂದ್ರ ಎಸ್. ಕಾಂತೂಲ್, ಎಸ್ಕ್ವಾಯರ್.
ಹಿಮ್ಮತ್‌ಲಾಲ್ ಪಿ. ಗಾಂಧಿ, ಎಸ್ಕ್ವಾಯರ್, ಮೆನೇಜಿಂಗ್ ಡ್ಯಾರೆಕ್ಟರ್.

ಮೆನೇಜರ್

ನರಹರಿ ಕ. ದೇಸಾಯಿ, ಬಿ. ಎ. ಎಲ್. ಎಲ್. ಬಿ.

ಮೆಸರ್ಸ್ ಭೂಷಣಕುಮಾರ್ ಕೂಳೂರ್‌ಕಾರ್ ಎಂಡ್ ಕೋ

ಬ್ರ್ಯಾಂಚ್ ಚೀಫ್ ಏಜಂಟ್ಸ್

ದೇವಕರಣ ನಾನ್‌ಜಿ ಇನ್ಶೂರೆನ್ಸ್ ಕೊ, ಲಿಮಿಟೆಡ್,

ಮಣ್ಣಗುಡ್ಡೆ ಮೈನ್ ರೋಡ್,

ಮಂಗಳೂರು, ದಕ್ಷಿಣ ಕನ್ನಡ.

ಹೆಡ್ ಆಫೀಸು:

ದೇವಕರಣ ನಾನ್‌ಜಿ ಬಿಲ್ಡಿಂಗ್ಸ್

ಬೊಂಬಾಯಿ 1

The Canara Banking Corporation Limited.

(Incorporated in British India, with limited Liability)

Estd: 1906

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... 2¼%

6 months ... 2½%

These deposits will however not be accepted to run beyond 31-8-1946.

With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೨೮-೩-'೪೬

ಹಿಂದೀ ಆಹಾರ ಬೊಬ್ಬೆಯ ಪ್ರತಿಧ್ವನಿ

ಭಾರತದ ಕೋಟ್ಯಾವಧಿ ಜನರೀಗ ಆಹಾರ ಬಿಕ್ಕಟ್ಟಿಗೆ ಸಿಲುಕಿದ್ದಾರೆ. ಮುಂದಿನ ಕೆಲವು ತಿಂಗಳುಗಳಲ್ಲಿ ಅವರ ಅದೃಷ್ಟ ಹೇಗಾಗುವದೆಂದು ಹೇಳಲಾಗುವದಿಲ್ಲ. "ಎಂತಹ ವಿಷಮ ಸನ್ನಿವೇಶವೇ ಇರಲಿ-ಅದರ ದೂರದ ನೋಟದಲ್ಲಿರುವಷ್ಟು ಭೀಕರತೆ ಪ್ರತ್ಯಕ್ಷಾನುಭವದಲ್ಲಿಲ್ಲವೆಂದು ಹಲವು ಬಿಕ್ಕಟ್ಟಿನ ಸಂದರ್ಭಗಳನ್ನು ಇದಿರಿಸಿ ಅನುಭವವುಳ್ಳ ನಾನು ಹೇಳುತ್ತೇನೆ" ಎಂಬ ಲೋರ್ಡ್ ವೇವೆಲರ ಜಾಣ್ನುಡಿಯು ಸದಾ ಸ್ಮರಣೀಯವಿದ್ದರೂ ಇಂದಿನ ಆಹಾರಾಭಾವವು ನಿಜಕ್ಕೂ ಅಂತಹದಲ್ಲ. ಇಲ್ಲಿಯ ಹಸುಗೇ ಪರಿಮಾಣವನ್ನು ಪರಮಾವಧಿಗೆ ತಗ್ಗಿಸಿ, ಹೊರಗಿನಿಂದ ಆಮದಾಗಬಲ್ಲ ಕಾಳು ಮಾತ್ರವನ್ನೂ ಬಿಡಲಾಗದಷ್ಟು ಪ್ರಯತ್ನ ನಡಿಸಿ ನೋಡಿದರೂ ಭಾರತದ ಆಹಾರಾಭಾವದ ಭೀಕರತೆ ತಗ್ಗುವ ಆಸೆ ಕಾಣುವದಿಲ್ಲ. ಇಡೀ ಹಿಂದೂ ದೇಶಕ್ಕೆ ಮುಂದಿನ ಆರು ತಿಂಗಳುಗಳಿಗೆ ಕನಿಷ್ಟ ಪಕ್ಷ 500,000 ಟನ್ ಅಕ್ಕಿ, 2000,000 ಗೋಧಿ ಬೇಕೆಂದು ನಿರ್ಧರಿಸಲ್ಪಟ್ಟಿದೆ. ಇದರ ಶೇಕಡಾ 60ರಷ್ಟನ್ನು ಮಾತ್ರ ತಾವು ಪೂರೈಸಬಲ್ಲೆವೆಂದು ವಾಷಿಂಗ್ಟನಿನಲ್ಲಿರುವ ಮಿತ್ರ ರಾಷ್ಟ್ರೀಯ ಸಂಯುಕ್ತ ಆಹಾರ ಬೋರ್ಡಿನವರು ಹಿಂದೀ ಆಹಾರ ನಿಯೋಗ ಮಂಡಲಿಯವರಿಗೆ ಸೂಚಿಸಿದ್ದಾರೆ. ಆ ಮೇಲಿನ ಅಂಶಕ್ಕಾಗಿ ಭಾರತವು ಯಾವ ದಿಕ್ಕನ್ನು ನೋಡಬೇಕು? ಅಕ್ಕಿಯ ಪುಟ್ಟಿಗೆ ಹಿಂದುಸ್ಥಾನವು ಮುಖ್ಯವಾಗಿ ಆಸೆ ಕಟ್ಟಿಕೊಂಡದ್ದು ಸಯ್ಯಾಮಿನಿಂದ ಬಂದೀತೆಂದೇ. ಸಯಾಮ್ ವಿಶೇಷವಾಗಿ ಅಕ್ಕಿ ಉಳಿತಾಯವಿರುವ ರಾಷ್ಟ್ರ. ಭಾರತವೊಂದೇ ಅಕ್ಕಿಯ ಅಭಾವ ತೀರಾ ಅಸಹನೀಯವಾಗಿರುವ ದೇಶ. ಮೋಟಾಗಿ ಬ್ರಿಟನಿಗೆ 1500000 ಟನ್ ಅಕ್ಕಿಯನ್ನು ಸಯಾಮ್ ಕೊಡತಕ್ಕದ್ದೆಂಬ ಕರಾರಿದೆ. ಹಿಂದುಸ್ಥಾನವೂ ಆ ಕರಾರಿಗೆ ಸಹಿ ಹಾಕಿದೆ. ಬ್ರಿಟನಿನ ಆಹಾರ ಖಾತೆಯ ಪತ್ರಾಧಿಕಾರಿಗಳೊಬ್ಬರು ಹಿಂದುಸ್ಥಾನದ ಕಡೆಗೆ ಬೆರಳು ತೋರಿಸುತ್ತಾ "ಅಕ್ಕಿಯೇ ಮುಖ್ಯಾಹಾರವಾಗಿರುವ ನಮ್ಮ ಸಾಮ್ರಾಜ್ಯದ ಜನತೆಯು ಇಂತಹ ಸಂಕಷ್ಟದಲ್ಲಿರುವಾಗ ಅದೇ ಅವಶ್ಯಕಾಹಾರವಾಗಿರದ ನಾವು ಬ್ರಿಟಿಷರು ಅಕ್ಕಿಯ ಆಹಾರವನ್ನೇ ತ್ಯಜಿಸುವ ನಿರ್ಧಾರ ಮಾಡಿದ್ದೇವೆ" ಎಂದು ಘೋಷಿಸಿದ್ದರು. ಹೀಗಿರುವಾಗ ಸಯಾಮಿನ ಉಳಿತಾಯದೊಂದು ಭಾಗದಿಂದ ಹಿಂದುಸ್ಥಾನದ ಅಭಾವ ನಿವಾರಣೆಯಾಗುವದೆಂಬ ಆಸೆಯು ಸಹಜ, ಮತ್ತು ನ್ಯಾಯವಿದೆ. ಆದರೆ ಸಯಾಮು ಈ ಆಶೆಯನ್ನು ಈಡೇರಿಸಿ ಕೊಡುವ ಲಕ್ಷಣವೇ ಕಾಣಸದಿರುವದು ಹಿಂದೀಯರ ದೌರ್ಭಾಗ್ಯವೆನ್ನಬೇಕು. "ಅಕ್ಕೀ ಸಾಗಿಸಲು ಹಡಗ ವ್ಯವಸ್ಥೆಯಿಲ್ಲ" ಎಂಬ ವಾದವೊಂದು ಮೊದಮೊದಲು ಕೇಳಬರುತಿತ್ತು; "ಅದಲ್ಲ; ಸಯಾಮಿನ ಧಾನ್ಯೋತ್ಪಾದಕನು ತನ್ನ ಉಳಿತಾಯದ ಅಕ್ಕಿಯನ್ನು ಬದಲು ಧಾನ್ಯಕ್ಕಲ್ಲದೆ ಬೆಲೆ ಬಾರದ ಕಾಗದದ ಹಣಕ್ಕೆ ಮಾರಲು ತಯಾರಿಲ್ಲ" ಎಂದು ಆ ಮೇಲೆ ಕೇಳಿ ಬಂತು. ಈಗ ಕೇಳಿ ಬರುತ್ತಿರುವ ಕಾರಣವೇ ಬೇರೆ. ಸಯಾಮಿನ ಉಳಿತಾಯದ ಅಕ್ಕಿಯೂ ಅಂತರರಾಷ್ಟ್ರೀಯ ಸಂಗ್ರಹಕ್ಕೇನೇ ಸೇರುವಂತಹದಂತೆ. ಆದ್ದರಿಂದ ಅದರ ವಿತರಣೆಯು ಸಂಯುಕ್ತ ಆಹಾರ ಬೋರ್ಡಿನಿಂದಲೇ ಆಗಬೇಕಾಗಿದೆಯಂತೆ! ಹಿಂದುಸ್ಥಾನವು ಭಿಕ್ಷುಕನ ಸ್ಥಾನದಲ್ಲಿ ನಿಂತು ಆ ಬೋರ್ಡು ಕೊಡುವ ದಾನವನ್ನು ಪಡೆಯಬೇಕಾಗಿದೆ. ಮೇಲ್ಗಡೆ ಸೂಚಿಸಿದಂತೆ ಬೋರ್ಡು ಹಿಂದುಸ್ಥಾನದ ಆವಶ್ಯಕತೆಯ 60%ನ್ನು ಮಾತ್ರ ಪೂರೈಸಲು ತಯಾರಿದೆ. [illegible] ರದಿಂದ ಭಾರತವನ್ನು ಉಪವಾಸ ಹಾಕಿದ ದೋಷವು ಮಿತ್ರ ರಾಷ್ಟ್ರೀಯ ಆಹಾರ ಬೋರ್ಡಿಗೆ ತಟ್ಟಲಾರದೇ? ಭಾರತದಲ್ಲಿ ಪ್ರತ್ಯಕ್ಷ ಬಂಗಾಲವೆದ್ದು ಮಿಲಿಯಾವಧಿ ಜನ ಸಾಯಬೇಕಾಗಿ ಬಂದಲ್ಲಿ, ಹಿಂದೀ ಸರಕಾರದ ಅಸಡ್ಡೆಯಿಂದಾಗಿ ನಿರ್ಮಾಣಗೊಂಡ ಆ ದುಸ್ಥಿತಿಯನ್ನು ರಕ್ಷಿಸಿಕೊಟ್ಟ ಹೊಣೆಯು ನಿಜಕ್ಕೂ ಅಮೇರಿಕದ ನೇತೃತ್ವದಲ್ಲಿರುವ ಈ ಆಹಾರ ಬೋರ್ಡಿನದು! ಹಿಂದೀಯರಂತೂ ಈ ವಿಷಯದಲ್ಲಿ ಪರಮಾವಧಿ ಸಹನೆಯನ್ನೂ ಪರಮಾವಧಿ ಸಾಹಸವನ್ನೂ ಪ್ರದರ್ಶಿಸಿದ್ದಾರೆ. ಮಾನವ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾರೆ. ಇನ್ನೇನು ಮಾಡಲಿಕ್ಕಿದೆ? ರೇಷನ್ ಪರಿಮಾಣವನ್ನು ಇನ್ನೂ ತಗ್ಗಿಸಿಕೊಳ್ಳಲೆ? ಹಿಂದೀಯರ ಹಸುಗೇ ಪರಿಮಾಣವು ಜನರಲ್ ಮೆಕಾರ್ಥರರು ಜಾಪಾನ್ ಪ್ರಜೆಗಳಿಗೆ-ಯುದ್ಧಾಪರಾಧದ ಶಿಕ್ಷೆಯನ್ನನುಭವಿಸುತ್ತಿರುವ ಆ ಜನಾಂಗಕ್ಕೆ-ಶಿಫಾರಸು ಮಾಡಿರುವ ಹಸುಗೆಯ ಸ್ಸನೇ ಅಂಶದಷ್ಟು ಮಾತ್ರವಿದೆ. ಇನ್ನೂ ಅದನ್ನು ತಗ್ಗಿಸಿದರೆ ಹಿಂದೀಯರು ಆಹಾರವನ್ನು ಮೂಸಿಯೇ ಬದುಕಬೇಕೆಂದು ಆಜ್ಞಾಪಿಸಿದಂತಾಗಬಹುದು. ಇಲ್ಲಿಯ ಪರಿಸ್ಥಿತಿ ಮಿತ್ರ ರಾಷ್ಟ್ರಗಳಿಗಿನ್ನೂ ತಿಳಿದಿಲ್ಲವೆನ್ನೋಣವೆ? ಹಿಂದೀ ಆಹಾರ ನಿಯೋಗ ಮುಂದಾಳಿಯವರು—ಸರ್. ರಾಮಸ್ವಾಮಿ ಮುದಲಿಯಾರ್, ಸರ್. ರಾಮಮೂರ್ತಿಗಳಂಥವರು-ಕುರುಡರೂ ತಿಳಿಯಲಾಗುವ ರೀತಿಯಲ್ಲಿ ಇಲ್ಲಿಯ ಆಹಾರಾಭಾವದ ಚಿತ್ರವನ್ನು ಬಿಡಿಸಿ ಅಮೇರಿಕ, ಇಂಗ್ಲಾಂಡುಗಳ ಜನತೆಯ ಮುಂದೆ ಇಟ್ಟಿದ್ದಾರೆ. ವಾಷಿಂಗ್ಟನಿನಲ್ಲಿರುವ ಭಾರತೀಯ ಏಜೆಂಟ್-ಜನರಲ್ ಸರ್. ಜಿ. ಎಸ್. ಬಾಜ್ಪಾಯಿಯವರ ಈ ಕೆಳಗಿನ ಮಾತುಗಳಿಂದಲೂ ಎಚ್ಚರಗೊಳ್ಳದವರಿದ್ದರೆ ಅಂಥವರು ಸ್ಮಶಾನಯೋಗ್ಯರೇ ಸರಿ:-"ಇಷ್ಟರಲ್ಲೇ ಭಾರತದ ದಕ್ಷಿಣ ಮತ್ತು ಪಶ್ಚಿಮ ಕಡೆಯ 120,000,000 ಜನರ ಕಿವಿಗೆ ಮೃತ್ಯುದೇವತೆಯ ರೆಕ್ಕೆ ಸಪ್ಪಳವು ಸಮೀಪದಲ್ಲಿ ಕೇಳಬರಹತ್ತಿದೆ. ನಮಗೆ ಬೇಕಾಗಿರುವದು ಆಹಾರ ಮಾತ್ರ-ಮತ್ತದು ಬದುಕುವುದಕ್ಕಾಗಿ ಮಾತ್ರ. ನಮ್ಮ ಹೊಟ್ಟೆಗೆ 'ಬೆಲ್ಟ್' ಬಿಗಿದುಕೊಳ್ಳಬೇಕೆಂಬ ಮಾತೇ ಇಲ್ಲ. ಯಾಕೆಂದರೆ ನೆಟ್ಟಗಾಗಿರುವದನ್ನು ಇನ್ನೂ ನೆಟ್ಟಗೆ ಮಾಡುವೆನೆಂದರೆ ಆಗದು." ಮಿಲಿಯಾವಧಿ ದೇಶಬಂಧುಗಳ ಪ್ರಾಣವುಳಿಸುವ ಪವಿತ್ರಕಾರ್ಯದಲ್ಲಿ ಹಿಂದೀ ಆಹಾರ ಮಂಡಲಿಯ ಸದಸ್ಯರು ವಿದೇಶಗಳಲ್ಲಿ ಮಿತಿಮೀರಿ ಪ್ರಯತ್ನಿಸಿದ್ದರು. 'ಆಹಾರಬೋರ್ಡಿನ ಸಹಾಯ ಸಾಲದು; ನಾವೀಗ ನಿಮ್ಮ ಕಡೆಗೆ ಕೈನೀಡುತ್ತೇವೆ' ಎಂದು ಅಮೇರಿಕದ ಜನತೆಯನ್ನು ಅಂಗಲಾಚಲು ಅವರು ಹಿಂಜರಿಯಲಿಲ್ಲ; "ಅಮೇರಿಕವು ಸಾಕಷ್ಟು ಸಹಾಯ ಕೊಡದಿದ್ದರೆ ನಾವು ರಷ್ಯದ ಕಡೆಗೆ ನೋಡಬೇಕಾಗುವದು; ಇದರ ಪರಿಣಾಮವು ನಿಮಗೆ ಹಿತಕರವಾಗಲಿಕ್ಕಿಲ್ಲ" ಎಂದು ಆಂಗ್ಲೋ ಅಮೇರಿಕನರಿಗೆ ಹೆದರಿಕೆ ಹುಟ್ಟಿಸಿಯೂ ನೋಡಿದ್ದರು. ಹಿಂದುದೇಶದ ಅಸಾಮಾನ್ಯ ಆಹಾರ ಬಿಕ್ಕಟ್ಟೇ ಇಂತಹ ಅಸಾಮಾನ್ಯ ಕೆಲಸಗಳನ್ನು ಹಿಂದೀ ಪ್ರತಿನಿಧಿಗಳಿಂದ ಮಾಡಿಸಿದೆ. ಹಸಿವು ಪೀಡಿತರು ಮಾಡಲು ಹಿಂಜರಿಯುವಂತಹ ಕಾರ್ಯವೇ ಇರಲಾರದು. 40 ಕೋಟಿ ಎನಿಸಿರುವ ಒಂದು ಭೂಖಂಡವು ಉದರಾಗ್ನಿ ಬೇಗೆಯಿಂದಾಗಿ ಇಂತಹ ವಿಲೇವಾಚರಣೆಗಳಿದಿರುವಾಗ ಸ್ಥಿತಿ ಹೇಗೆಯೇ ಮುಂದುವರಿದಲ್ಲಿ ಪರಿಣಾಮವೇನಾಗಬಹುದೆಂಬುದು ಸಂಬಂಧಪಟ್ಟ ಅಧಿಕಾರೀ ರಾಷ್ಟ್ರಗಳಿಗೆ ಮುಂದಟ್ಟಾಗಿದ್ದರೆ ಅವು ಸಯಾಮಿನ ಅಕ್ಕಿಯನ್ನು ದೂರಕ್ಕೊಯ್ಯು ದಾಸ್ತಾನಿಡುತ್ತಿರಲಿಲ್ಲ. ಇನ್ನಾದರೂ ಆ ಭಾಗದಲ್ಲಿ ಅಗತ್ಯವುಳ್ಳ ಕಾರ್ಯವನ್ನವರು ಕೈಗೊಳ್ಳಲಾರರೆ?

ಅಳಿಯ ಸಂತಾನ ಮಸೂದೆ

ಬಂಟರ ಯಾನೆ ನಾಡವರ ಸಂಘದ ಪರವಾಗಿ, ನಮ್ಮ ಮೂರು ವಾರಗಳ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಅಳಿಯ ಸಂತಾನ ಕಾನೂನಿನ ತಿದ್ದುಪಡಿ ಮಸೂದೆಯ ಮೂಲ ರೂಪದ ಕಡೆಗೆ ಸಂಬಂಧಪಟ್ಟ ಸರ್ವರೂ ಲಕ್ಷ್ಯವಿತ್ತಿರಬೇಕೆಂದು ನಂಬುತ್ತೇವೆ. ಈ ಕುರಿತು ಆಕ್ಷೇಪಗಳನ್ನು ಕಳುಹುವ ಅವಧಿಯು ತಾ15-4-46ರ ವರೆಗೆ ಮುಂದುವರಿದಿದೆ. ಆಕ್ಷೇಪಣೆಗಳ ಸಂಗ್ರಹವಾದೊಡನೆ, ಸಂಘದ ಮಹಾಸಭೆಯು ನೇಮಿಸಿದ್ದ ಸಮಿತಿಯು ಜಿಲ್ಲಾ ಸಂಚಾರ ಕೈಗೊಂಡು ಪ್ರತಿಯೊಂದು ಪ್ರಾಮುಖ್ಯ ಸ್ಥಳದಲ್ಲೂ ಸಭೆ ಕರೆದು, ತಮ್ಮ ಅಭಿಮತವನ್ನು ಮುಂದಿಡಲು ಸಾರ್ವಜನಿಕರಿಗೆ ಸಂದರ್ಭವನ್ನೊದಗಿಸಿಕೊಡಲಿದೆ. ಇಂತಹ ಸಭೆಗಳ ಸ್ಥಳ ಮತ್ತು ತಾರೀಕುಗಳು ಸಕಾಲದಲ್ಲಿ ಪ್ರಕಟಿಸಲ್ಪಡುವವು.

ಈ ಕರಡು ಮಸೂದೆಯು ಅಳಿಯ ಕಟ್ಟನ್ನಾಚರಿಸುವವರೆಲ್ಲರ ಕೂಲಂಕುಶ ಪರಿಶೀಲನೆಗೊಳಗಾಗಬೇಕಾದುದು ಅತ್ಯಗತ್ಯ. ಇಂತಹ ಅಭಿಪ್ರಾಯ ಮಂಥನದಿಂದ ಏಳುವ ಕೊನೆಯ ತೀರ್ಮಾನದಂತೆ ಮಸೂದೆಯು ರೂಪ ಬದಲಾವಣೆ ಹೊಂದಲು ಬದ್ಧವಿದೆ. ನಾಡವರ ಸಂಘವು ಮಸೂದೆಯ ವಿಮರ್ಶೆಗೆ ಸಾಕಷ್ಟು ಅನುಕೂಲತೆ ಮತ್ತು ಅವಕಾಶವನ್ನು ಒದಗಿಸಿರುವಾಗ, ತಮ್ಮ ಬಾಳುವೆಯ ವಿಧಿ ನಿಯಮಗಳನ್ನು ರೂಪಿಸುವ ಈ ಪ್ರಾಮುಖ್ಯ ಕಾರ್ಯದಲ್ಲೂ ಸಂಬಂಧಪಟ್ಟ ಜನರು ಅಸಡ್ಡೆ ವಹಿಸಬಾರದು. ವಂಶ ಪಾರಂಪರ್ಯವಾಗಿ ಒಂದು ಕಾನೂನಿಗೊಳಪಟ್ಟಿದ್ದ ಸಮಾಜಗಳವರಿಗೆ ಅದರ ಗುಣಾವಗುಣಗಳ ಕುರಿತು ಬೋಧಿಸುವ ಆವಶ್ಯಕತೆಯಿಲ್ಲ; ಅಂಥವರು ತಮ್ಮ ಅನುಭವದ ಒರೆಗಲ್ಲಲ್ಲಿ ತಿಕ್ಕಿ ಸದ್ಯದ ಮಸೂದೆಯನ್ನು ಪರೀಕ್ಷಿಸುವದೂ ಕಷ್ಟವಲ್ಲ. ತಮಗೆ ಹಾಗೂ ತಮ್ಮ ಭಾವೀ ಸಂತತಿ ಪರಂಪರೆಗೆ ಲಗಾವಾಗುವ ಈ ತಿದ್ದುಪಡಿಯ ಕುರಿತು ಸಂಬಂಧಪಟ್ಟ ಜನರು ಪ್ರಕಟಿಸುವ ಅಭಿಪ್ರಾಯಗಳಲ್ಲಿ ಅನುಕರಣೆಯಿಂದ ಅಥವಾ ಬಲವು ಒತ್ತಾಯಗಳಿಂದ ಬಂದ ಅಂಶವೇ ಇರಬಾರದೆಂಬುದಕ್ಕಾಗಿ ನಾವು ನಮ್ಮ ಅಭಿಪ್ರಾಯ ಪ್ರಕಟಣೆಯನ್ನು ಹಿಂದೆ ಹಾಕಿದ್ದೇವೆ. ನಿಶ್ಚಿತ ಅವಧಿಯೊಳಗೆ ಸಂಬಂಧಪಟ್ಟವರು ತಮ್ಮ ಅಭಿಮತವನ್ನು ಬಂಟರ ಯಾನೆ ನಾಡವರ ಸಂಘದ ಕಾರ್ಯದರ್ಶಿಗೆ ಕಳುಹಿಕೊಡಬೇಕಾಗಿ ವಿನಂತಿ. ಆ ಸಂಬಂಧವಾಗಿ ನೆರೆಯುವ ಸಭೆಗಳಲ್ಲಿ ಸಂಬಂಧಪಟ್ಟ ಪ್ರತಿಯೊಬ್ಬನೂ ಹಾಜರಿದ್ದು ಭಾಗವಹಿಸುವದು ಅಗತ್ಯ. ಕಾರಣಯುಕ್ತವಾದ ಚುಟುಕಾದ ಅಭಿಪ್ರಾಯಗಳಿಗೆ ನಮ್ಮ ಪತ್ರಿಕೆಯಲ್ಲೂ ಸ್ವಾಗತವಿದೆ.

WANTED

FOR THE

S. V. S. High School,

KATAPADI.

1. A Y. M. C. A. trained Physical Instructor of the Higher Grade. Pay Rs.30 - 2/2 - 50 per mensem plus Rs. 8 D. A.

2. A Drawing Master with Higher Grade Technical Teachers' Certificate in Drawing. Pay Rs. 25/- 2/2 -45 per mensem plus Rs. 8 D. A.

The selected candidate must be prepared to join duty on 5—6—1946.

Apply to—

The Correspondent,

S.V.S. High School, Katapady, S.K.

'ಅಂತರಂಗ' ವಾರಪತ್ರಿಕೆಯನ್ನು ವಿಕ್ರಯಿಸಲು ಅಲ್ಲಲ್ಲಿ ನ್ಯೂಸ್ ಏಜಂಟರು ಬೇಕು.

ಶರ್ತಗಳಿಗೆ ಬರೆಯಿರಿ—

'ಅಂತರಂಗ', ಉಡುಪಿ.

ಮಂಗಳೂರು.

ದ.ಕ. ಜಿಲ್ಲಾ ಕಾಂಗ್ರೆಸ್ ಸಮಿತಿ ತಾ 20-3-46ರಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಳಿಯ ಸಭೆಯು ಶ್ರೀ ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ೧. ಜಿಲ್ಲಾ ಕಾಂಗ್ರೆಸ್ ಸಂಸ್ಥೆಯು ಅಧಿಕ ವ್ಯವಸ್ಥಿತ ರೀತಿಯಿಂದ ಬಲಗೊಂಡು ಕಾರ್ಯ ನಿರ್ವಹಿಸುವರೆ ಸಂಯುಕ್ತ ಕಮಿಟಿಗಳನ್ನು (Group Committees) ಸ್ಥಾಪಿಸಬೇಕಾಗಿಯೂ ಈ ಕಮಿಟಿಗಳನ್ನು ರಚಿಸಿ ಅವುಗಳ ಕೆಲಸವನ್ನು ವ್ಯವಸ್ಥೆಗೊಳಿಸಲಿಕ್ಕೆ ಪೂರ್ಣ ಸಮಯದ ನಾಲ್ವರು ತಲಬುದಾರಿ ಕಾರ್ಯಕರ್ತರನ್ನು ನೇಮಿಸಬೇಕಾಗಿಯೂ ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟಿತು. ೨. ತಲಬುದಾರಿ ವ್ಯವಸ್ಥಾಪಕರನ್ನು (organised) ತಿಂಗಳೊಂದರ ರೂ. ೪೦ ತಲಬು ಮತ್ತು ೨೦ ರೂಪಾಯಿಗಳ ಪ್ರಯಾಣ ಭತ್ತೆಗಳನ್ನು ಕೊಟ್ಟು ನೇಮಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ಈ ಕಾರ್ಯಗಳನ್ನು ನಿರ್ವಹಿಸುವರೆ ಈ ಕೆಳಗಿನ ಉಪ ಸಮಿತಿಯನ್ನು ನೇಮಿಸಲ್ಪಟ್ಟಿತು. ೧. ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ. ೨. ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಚಾರ ಕಾರ್ಯದರ್ಶಿ. ೩. ತಾಲೂಕುಗಳಿಂದ ಒಬ್ಬೊಬ್ಬರನ್ನು ತೆಗೆದುಕೊಂಡು ಈ ಸಮಿತಿಯು ರಚಿಸಲ್ಪಟ್ಟಿತು. ೩. ಕಿಸಾನ್ ಮತ್ತು ಮಜೂರರ ಕಡೆಗೆ ಕಾಂಗ್ರೆಸ್ಸಿನ ಸಹಾನುಭೂತಿಯು ಏಕ ರೀತಿಯಾಗಿದ್ದರೂ ಕಮ್ಯೂನಿಸ್ಟರು ಮಜೂರ ಮತ್ತು ಕಿಸಾನ ಸಂಘಗಳನ್ನು ತಪ್ಪು ದಾರಿಗೆಳೆದು ತಮ್ಮ ಪಾರ್ಟಿಯನ್ನು ಬಲಪಡಿಸುವದಕ್ಕೋಸ್ಕರ ಈ ಸಂಘಗಳನ್ನು ಉಪಯೋಗಿಸುತ್ತಿರುವದರಿಂದ ಮಜೂರರಿಗೆ ಇದರಿಂದ ಹಾನಿಯುಂಟಾಗದಂತೆ ನೋಡಿಕೊಳ್ಳಲು ತಲಬುದಾರೀ ಕಾರ್ಯಕರ್ತರನ್ನು ನೇಮಿಸಿ ಮಜೂರ ಸಂಘಟನೆಯನ್ನು ಕೈಕೊಳ್ಳಬೇಕೆಂದು ನಿರ್ಣಯಿಸಲಾಯಿತು. ಕಾಂಗ್ರೆಸ್ಸಿಗರು ಕಮ್ಯೂನಿಸ್ಟರೊಂದಿಗೆ ತಮ್ಮ ಕಾರ್ಯದ ಪರಿಣಾಮದ ಪರಿಜ್ಞಾನವಿಲ್ಲದೆ ವ್ಯವಹಾರ ನಡೆಸುವದರಿಂದ ಅವರ ವರ್ಚಸ್ಸನ್ನು ಹೆಚ್ಚಿಸಿದಂತಾಗುತ್ತದೆಂದೂ, ಈ ವಿಷಯದಲ್ಲಿ ಕಾಂಗ್ರೆಸ್ಸಿಗರು ಜಾಗರೂಕರಾಗಿರುವದು ಅವಶ್ಯಕವೆಂದೂ ಈ ಸಮಿತಿಯು ತನ್ನ ಧೋರಣವನ್ನು ಸ್ಪಷ್ಟಪಡಿಸುತ್ತದೆ. ೪. ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ್ ಶಿಸ್ತನ್ನು ಮೀರಿ ನಡೆದ ವಿಷಯದಲ್ಲಿ ಅವಶ್ಯವಿದ್ದ ಕ್ರಮ ಕೈಕೊಳ್ಳುವರೆ ಈ ಕೆಳಗಿನ ಒಂದು ಉಪ ಸಮಿತಿಯನ್ನು ನೇಮಿಸಲ್ಪಟ್ಟಿತು. ೧. ಶ್ರೀ ಎಂ. ಡಿ. ಅಧಿಕಾರಿ. ೨. ಕೆ. ವೆಂಕಟೇಶ ಪ್ರಭು. ೩. ಡಾ. ಲಕ್ಷ್ಮೀನಾರಾಯಣ ನ್ಯಾಕ್. ೪. ಎಸ್. ಉಪೇಂದ್ರ ನ್ಯಾಕ್. ೫. ರಚನಾತ್ಮಕ ಕಾರ್ಯಗಳಿಗೆ ಈ ಕೆಳಗಿನವರನ್ನು ನೇಮಿಸಲ್ಪಟ್ಟಿತು 1. ಹಿಂದಿ ವೆಂಕಟೇಶ ಪ್ರಭು, 2. ವಿದ್ಯಾರ್ಥಿಗಳು ಎಂ. ಡಿ. ಅಧಿಕಾರಿ, 3. ಕಿಸಾನ್-ರಾಮ ಪೂತುವಾಳ. ೬. ಈಗ ದೇಶದಲ್ಲಿ ಉತ್ಪನ್ನವಾಗಿರುವ ಭೀಕರ ಆಹಾರ ಪರಿಸ್ಥಿತಿಯ ಕುರಿತು ಜನತೆಯಲ್ಲಿ ಸರಿಯಾದ ಪ್ರಚಾರವಾಗುವಂತೆ ಒಂದು ಹಸ್ತ ಪತ್ರಿಕೆಯನ್ನು ಛಾಪಿಸಿ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕಾಗಿ ನಿರ್ಣಯಿಸಲ್ಪಟ್ಟಿತು.

ಹೊಸ ಜಿಲ್ಲಾ ಕಲೆಕ್ಟರರು-ಜಿಲ್ಲಾ ಕಲೆಕ್ಟರರಾಗಿದ್ದ ರಾವ್‌ಸಾಹೇಬ್ ಪಿ. ರಾಮದಾಸ್ ಅವರಿಗೆ ವರ್ಗವಾಗಿ ಅವರ ಬದಲಿಗೆ ಬಂದ ಹೊಸ ಜಿಲ್ಲಾ ಕಲೆಕ್ಟರ್ ಶ್ರೀ. ಕೆ. ರಾಮವರ್ಮರಾಜರು ಇಲ್ಲಿಗೆ ಬಂದಿದ್ದು ಇಷ್ಟರಲ್ಲೇ ಚಾರ್ಜು ವಹಿಸಿಕೊಂಡಿರುವರು.

ಡಿ. ಎಸ್. ಪಿ. ಗಳಲ್ಲಿಗೆ ದೂರು-ಸ್ಥಳೀಯ ಚಿತ್ರಾ ಟಾಕೀಸಿನ ಶ್ರೀ. ಕೆ. ವಿಠಲದಾಸ ಪೈ ಅವರು, ತಮ್ಮನ್ನು ಪೋಲೀಸರು ಇತ್ತೀಚೆಗೆ ಕೈದು ಮಾಡಿ ಜಾಮೀನಿನ ಮೇಲೆ ಬಿಟ್ಟ ಸಂಗತಿಯಲ್ಲಿ ಅದಕ್ಕೆ ಸಂಬಂಧಿಸಿದ ಘಟನೆಗಳನ್ನು ವಿವರಿಸಿ ಪೋಲೀಸರ ಕುರಿತು ಡಿ. ಎಸ್. ಪಿ.ಗಳಲ್ಲಿ ದೂರು ಕೊಟ್ಟಿರುವಂತೆ ತಿಳಿದುಬಂದಿದೆ. ಇದರ ಮುಂದಿನ ವಿದ್ಯಮಾನಗಳು ಕುತೂಹಲ ಜನಕವಾಗಿವೆಯೆಂದು ವರ್ತಮಾನ

ಹೆಚ್ಚು ಹೆಚ್ಚು ಆಹಾರ ಬೆಳೆಸುವ ಕೃಷಿಕರಿಗೆ-ನೀರಿನ ಪಂಪುಗಳನ್ನು ದಿನ ಒಂದರ ಒಂದು ರೂಪಾಯಿ ಬಾಡಿಗೆಯಲ್ಲಿ ಒದಗಿಸಿಕೊಡುವ ಏರ್ಪಾಡನ್ನು ಸರಕಾರವು ಮಾಡಿರುತ್ತದೆ. ನಮ್ಮ ಜಿಲ್ಲೆಯ ರೈತರು ಆ ಬಗ್ಗೆ ಕೊಯಮುತ್ತೂರಿನ ಅಸಿಸ್ಟಂಟ್ ಇಂಡಸ್ಟ್ರಿಯಲ್ ಇಂಜನಿಯರರಿಗೆ ಕೂಡಲೇ ಅರ್ಜಿ ಮಾಡಬೇಕಾಗಿ ಜಿಲ್ಲಾ ಇಂಡಸ್ಟ್ರೀಸ್ ಆಫೀಸರರು ತಿಳಿಸುತ್ತಾರೆ.

ಕಟೀಲು-ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದ ಜೀರ್ಣೋದ್ಧಾರ ಸಂಘದ ಸ್ಥಾಪನೆಯು ತಾ 23-3-46 ಶನಿವಾರ ಶ್ರೀ. A. ಲಕ್ಷ್ಮೀನಾರಾಯಣ ರಾವ್ ಡಿ. ಬೋ. ಪ್ರೆಸಿಡೆಂಟ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪುರಾಣಪ್ರಸಿದ್ಧವಾದ ಈ ದೇವಸ್ಥಾನಕ್ಕೆ ಜಿಲ್ಲೆಯ ಪ್ರತಿಯೊಬ್ಬ ಭಜಕನೂ ಮನಃಪೂರ್ವಕ ಧನ ಸಹಾಯ ಮಾಡುವನೆಂದೂ, ಮೂಲೆ ಹಳ್ಳಿಗೂ ಹೋಗಲು ಅನುಕೂಲವಾಗುವಂತೆ ತರುಣ ಸೇವಾ ದಳವೊಂದನ್ನು ಏರ್ಪಡಿಸಬೇಕೆಂದೂ ನಿಧಿ ಸಂಗ್ರಹಕ್ಕೆ ಯೋಗ್ಯ ಸಲಹೆಗಳನ್ನಿತ್ತಲ್ಲದೆ ತಮ್ಮ ಸಹಾಯ ಧನವನ್ನು ಅರ್ಪಿಸಿದರು. ಪರವೂರ ಭಜಕ ಮಹನೀಯರು ತಮ್ಮ ಸಹಾಯ ಧನವನ್ನು M. O. ಮೂಲಕ ರವಾನಿಸುವರೆ ಕೇಳಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು. ಧನ್ಯವಾದದೊಡನೆ ಸಭೆಯು ಮುಕ್ತಾಯಗೊಂಡಿತು.

ಉಡುಪಿ

ಭಾಷಣ-[illegible] ಮಹಮ್ಮದ್ ಅಫೀಸ್ ಬಾರ್-ಎಟ್-ಲಾ, ಇವರು ತಾ 21ರಲ್ಲಿ ಉಡುಪಿ ಅಂಜುಮಾನ್ ಕ್ಲಬ್ಬಿನ ವಠಾರದಲ್ಲಿ ಮುಹಮ್ಮದ್ ಪೈಗಂಬರರ ಜನ್ಮದಿನದ ಸಂಬಂಧ ವಿಚಾರಾರ್ಹ ಭಾಷಣವಿತ್ತರು. ವಕೀಲ್ ಶ್ರೀ ಎಮ್. ವಿಟ್ಠಲ ಕಾಮತರು ಅಧ್ಯಕ್ಷತೆ ವಹಿಸಿದ್ದರು.

ಹಿಂದೂ ಮಹಾ ಸಭೆ-ಬ್ರಿಟಿಷ್ ಶಿಷ್ಟ ಮಂಡಲಿಯೊಡನೆ ಸಂಭಾಷಿಸಲು ಮಹಾಸಭೆಯನ್ನು ಆಮಂತ್ರಿಸದಿದ್ದುದನ್ನು ವಿರೋಧಿಸುವದಕ್ಕೂ, ರಾ. ಸ್ವ. ಸೇವಕ ಸಂಸ್ಥೆಯ ಸಮರ್ಥನೆಗೂ ತಾ 23 ಮತ್ತು 24ರಲ್ಲಿ ರಥಬೀದಿಯಲ್ಲಿ ಒಂದೂ ಮಹಾ ಸಭೆಯವರ ಸಾರ್ವಜನಿಕ ಸಭೆಗಳು ಸೇರಿ ಶ್ರೀ. ಎ. ಶೇಸಪ್ಪಯ್ಯ ಮೊದಲಾದವರ ಭಾಷಣಗಳಾದುವು.

ಸಹಕಾರಿಗಳ ಸಭೆ-ಉಡುಪಿ ಲೋಕಲ್ ಕೋಅಪರೇಟಿವ್ ಯೂನಿಯನ್ನಿನ ಮಹಾಸಭೆಯು ತಾ 24ರಲ್ಲು ಶ್ರೀ. ಕೆ. ಜೆ. ಬಲ್ಲಾಳ್, ವಕೀಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ನಿನ ಗತ ವರುಷದ ವರದಿವಾಚನ, ಬರ್‍ತಿ ವರುಷದ ಬಜೆಟ್ ಮಂಜೂರಾತಿ, ಡೈರೆಕ್ಟರರ ಚುನಾವಣೆ, ಇಲ್ಲಾಖಾ ಆಫೀಸರರ ಸರ್ಕಲಾದು ಪರಿಶೀಲನೆ ಮೊದಲಾದ ಕಾರ್ಯಕ್ರಮಗಳು ಜರಗಿದವು. ಜೀನು ಸೊಣಗಳನ್ನು ಸಾಕುವಿಕೆ, ಆಹಾರ ವಸ್ತುಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವ ಆವಶ್ಯಕತೆಯ ಕುರಿತು ಅಧ್ಯಕ್ಷರ ಭಾಷಣವಾಯಿತು.

ಬೆಳ್ತಿಗೆ ಅಕ್ಕಿಯ ಅಭಾವ- ಬೆಳ್ತಿಗೆ ಅಕ್ಕಿ ಕಾರ್ಡಿನವರಿಗೆ ಈ ವಾರದಿಂದ ಅರ್ಧಾಂಶ ಬೆಳ್ತಿಗೆ, ಅರ್ಧಾಂಶ ಕುಚ್ಚಿಗೆ ಅಕ್ಕಿ ಕೊಡಲಾರಂಭವಾಗಿಯದೆ. ಸಾಕಷ್ಟು ಬೆಳ್ತಿಗೆ [illegible] ಇಲ್ಲದಿರುವುದೇ ಕಾರಣವಂತೆ. ಹೋಲ್‌ಸೇಲ್ ಸ್ಟೋರ್ಸಿಗೆ ಒಪ್ಪಿಸಲಾದ ಭತ್ತವೆಲ್ಲಾ ಕುಚ್ಚಿಗೆ [illegible] ನ್ನು ತಾಳಿರಬಹುದೇ?

ರೈತರಿಗೆ ಗೋಧಿ ವಿತರಣೆಯ ವಿಳಂಬ? ಫೆಬ್ರವರಿ ತಾ 17ರಿಂದ ಒಂದೂವರೆ ವಾರ ಪಡಿಯಕ್ಕಿಯ ಕ್ರಮ ಜ್ಯಾರಿಗೆ ಬಂದಂದಿನಿಂದ ರೇಶನ್ ಕ್ಷೇತ್ರವಲ್ಲಿಯ ರೈತರಿಗೆ ಗೋಧಿ ಸಿಕ್ಕುವುದಿಲ್ಲ. ತಮ್ಮ ವಶವಿರುವ ಅಕ್ಕಿಯನ್ನು ಸ್ಟೋರ್ಸಿಗೆ ಒಪ್ಪಿಸಿ ಅದರ ಬದಲು ಗೋದಿ ಪಡೆಯಲು ಏರ್ಪಾಟು ದೊರೆಯುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ತೀವ್ರ ನಿಗಾ ಕೊಡಬೇಕಾಗಿದೆ.

ಬೆಣ್ಣೆ ಎಣ್ಣೆ ಬೆಲೆಯನ್ನು ಮಾರ್ಚ ತಾ 6ರಿಂದ ಜಿಲ್ಲಾ ಕಲೆಕ್ಟರರು ಹೀಗೆ ನಿರ್ಧರಿಸಿದ್ದಾರೆ:—ಉಡುಪಿ ನಗರದಲ್ಲಿ ಉತ್ತಮ ತರಗತಿ ಬಾಟ್ಲಿಗೆ 0-3-3 ಮಧ್ಯಮ ತರಗತಿ 0-3-0, ಕಟಪಾಡಿ, ಬ್ರಹ್ಮಾವರ, ಪಂಗಾಳ ಕಟ್ಟೆ ಕೇಂದ್ರಗಳಲ್ಲಿ 0-3-4 ಮತ್ತು 0-3-1 ಪೈ.

ಮುಂಬಯಿ-ಉದಿಯಾವರ ಬಿಲ್ಲವ ಮಹಾ ಜನ ಸಂಘ ಶಾಖೆ, ಮುಂಬಾಯಿ ಇದರ ವಾರ್ಷಿಕ ಮಹಾ ಸಭೆಯು ತಾ 17-3-46ರಲ್ಲಿ ಶ್ರೀ ಯಸ್. ಯಂ. ಉದ್ಯಾವರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಾರ್ಷಿಕ ವರದಿ ಮತ್ತು ಆಯವ್ಯಯ ಪಟ್ಟಿಯನ್ನು ಮಂಜೂರು ಮಾಡಿ ಬರ್‍ತಿ ವರ್ಷಕ್ಕೆ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರನ್ನು ಚುನಾಯಿಸಲಾಯಿತು.

ಬೊಂಬಾಯಿ- ವಿಜಯ ಬ್ಯಾಂಕಿನ ಬೊಂಬಾಯಿ ಶಾಖೆಯ ಮೆನೇಜರರಾಗಿದ್ದ ಶ್ರೀ. ಮೂಳ್ಕಿ ಸುಂದರ ಭಂಡಾರಿಗಳು ಮಂಗಳೂರು ಕದ್ರಿ ಬ್ರಾಂಚಿಗೆ ಏಜಂಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ಮಂಗಳೂರು ಏಜಂಟರಾಗಿದ್ದು ರಜೆಯ ಮೇಲಿದ್ದ ಶ್ರೀಮಾನ್ ಶಾಂತಪ್ಪ ರೈಗಳು, ಬೊಂಬಾಯಿ ಬ್ರಾಂಚಿನ ಚಾರ್ಜು ವಹಿಸಿಕೊಂಡಿರುತ್ತಾರೆ.

(ಆನೇ ಪುಟದಿಂದ ಮುಂದುವರಿದುದು)

ಏಕಮತ

ಸಭೆ ಮುಗಿದ ಮೇಲೆ ಮುಖ್ಯ ಭಾಷಣಗಾರರು ಹಿಂದುಳಿದವರೊಡನೆ ಮಾತಾಡಿ ಮುಗಿಸುವದನ್ನು ಕಾಯುತ್ತಾ ನಾನು ನನ್ನ ಕಾರಿನಲ್ಲಿ ಕುಳಿತಿದ್ದೆ. ಲೋಕದ ಎಲ್ಲಾ ಹಳ್ಳೀ ಹುಡುಗರ ಸ್ವಭಾವದಂತೆಯೇ, ಹುಡುಗರ ತಂಡವೊಂದು ನನ್ನ ಕಾರಿನ ಆಕರ್ಷಣೀಯ ಹಾಗೂ ವಿಲಕ್ಷಣವಾದ ಉಪಕರಣಗಳನ್ನು ನೋಡಲು ಮುತ್ತಿಗೆ ಹಾಕಿತು. ನಾನು ಹುಡುಗರ ಹೆಸರುಗಳನ್ನು ಕೇಳಿದೆ. ಅವರು ಕೊಟ್ಟ ಉತ್ತರ ಹೀಗಿತ್ತು: ಅಬ್ದುಲ್ ಗಫೂರ್-ಪಿನೋಯಿ ಚಕ್ರವರ್ತಿ-ಕೆರಮತ್ ಅಲಿ-ಕೃಷ್ಣಮಂಡಲ್-ಮುಹಮ್ಮದ್ ಉಸ್ಮಾನ್-ರಖಲ್ ದಾಸ್......ನಾನು ಕೃಷ್ಣ ಮತ್ತು ಮಹಮ್ಮದನನ್ನು ನೋಡಿದೆ. ಒಬ್ಬನ ಹೆಗಲ ಮೇಲೆ ಇನ್ನೊಬ್ಬನು ತನ್ನ ತೋಳನ್ನಿಟ್ಟು ಅವರಿಬ್ಬರೂ 'ಡೇಶ್-ಬೋರ್ಡ್'ನ ಬಗೆತವನ್ನು ಲಕ್ಷ್ಯಪೂರ್ವಕ ಪರಿಶೀಲಿಸುತ್ತಾ ನಿಂತಿದ್ದರು. "ನಿಮ್ಮಿಬ್ಬರ ಸಂಸ್ಕೃತಿಗಳು ಪರಸ್ಪರ ವಿರುದ್ಧವಾಗಿವೆ" ಎಂದು ಒಮ್ಮೆಯೂ ಅವರಿಗಾರೂ ತಿಳಿಸಿದವರಿಲ್ಲ. ಅಥವಾ ತಾವಿಬ್ಬರೂ ಪ್ರತ್ಯೇಕಪ್ರತ್ಯೇಕ ರಾಷ್ಟ್ರದವರೆಂಬುದನ್ನು ನಂಬಲು ಅವರಿಗಾವ ಕಾರಣವೂ ದೊರೆತಿಲ್ಲ.

Public Badminton Tournament

The Parkal Badminton Club is going to conduct a public badminton tournament open for the whole of the West Coast & Mysore State. This tournament is played for fives, doubles and singles and the entrance fees for the same is Rs. 6-4-0, Rs. 4-0-0 and Rs 2-8-0 respectively. The trophies for the winners of fives and doubles are seven individual silver cups and a gold medal for the winner of the singles. The tournament commences on 25th April and the entries will be closed on 15th April All the applications should reach the Secretary, Parkal Badminton Tournament Committee, Manipal Post (S. K.) on or before the 15th April

A. Sanjeeva Hegde, *Secretary.* **B. Karunakara Hegde**, *President.*

THE JUPITER
General Insurance Company Limited.
ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಕಳೆದ ವರುಷ ನನ್ನ ಕಾರ್ಯಕ್ಷೇತ್ರದಲ್ಲಿ ಆಗಿರುವ

ವಿಮಾ ಪ್ರಗತಿಯು ಅತ್ಯಂತ ತೃಪ್ತಿಕರವಿದೆ.

ಈ ಕಾರ್ಯದಲ್ಲಿ ನನ್ನೊಡನೆ ಸಹಕರಿಸಿದ ಓರ್ಗನೈಜರ್‌ರು, ಏಜೆಂಟರು, ಪೋಲಿಸಿ ಹೋಲ್ಡರರು ಮತ್ತು ಸರ್ವ ವಿಧದ ಸಹಾಯಕರು ಹಾಗೂ ಹಿತಚಿಂತಕರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪಿ. ಡಿ. ವಿನಯ, ಉಡುಪಿ.
ಚೀಫ್ ಏಜೆಂಟ್, ದ. ಕ.

ಹಳ್ಳಿಯ ಒಂದು ಚುನಾವಣಾ ಸಭೆ.

ಲೇ:— ಎವರೆಟ್ ರಿಪ್ಲೆ.

[ಅಮೇರಿಕಾನರೊಬ್ಬರು ಬಂಗಾಳದೊಂದು ಹಳ್ಳಿಯಲ್ಲಿ ತಾನು ಕಂಡ ದೃಶ್ಯವನ್ನು ಚಿತ್ರಿಸಿದ್ದಾರೆ. ಹಳ್ಳಿಗಳಲ್ಲಿರುವ ಜಾತಿಭೇದ ರಹಿತ ಬಂಧುಭಾವ—ಮುಸ್ಲಿಂ ಲೀಗಿನವರ ಚುನಾವಣಾ ಕಾರ್ಯ ವಿಧಾನ--ನಿಷ್ಕಳಂಕನಾದ ಜನಮನೋಗತಿ—ಇತ್ಯಾದಿಗಳು ಈ ವಿದೇಶೀ ಲೇಖಕನ ಕೈಗನ್ನಡಿಯಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸಿವೆ]

ನಾನು ಅಮೇರಿಕದಲ್ಲಿ ಕಂಡಿದ್ದ ಚುನಾವಣೆಗಳೆಂದರೆ ನ್ಯೂಯೋರ್ಕಿನ ರಸ್ತೆಗಳಲ್ಲಿ ಸಂಚರ ಧ್ವನಿವಾಹಕಗಳ ಮೂಲಕ ಝೇಂಕರಿಸುತಿದ್ದ ದುರ್ಬಾಣಗಳಂತಹ ಆವೇಶಯುಕ್ತ ಭಾಷಣಗಳು ಮತ್ತು ಆ ನಗರದ ಮಹತ್ತಾದ 'ಮೇಡಿಸನ್ ಸ್ಕ್ವಯರ್ ಗಾರ್ಡನ್'ನ ನಿಲ್ದಾಣದಿಂದ ಗುಡುಗುತಿದ್ದವರ ಘೋಷಣೆಗಳು ಮಾತ್ರ. ಆದ್ದರಿಂದ ನಮ್ಮ ದೇಶದ ಸಣ್ಣ ಹಳ್ಳಿಗಳ ಚುನಾವಣಾ ಸಭೆಗಳು ಹೇಗಿರುವವೋ ನಾನರಿಯೆ. ಆದರೆ ನಮ್ಮ ದೇಶದ ಚುನಾವಣಾ ಪ್ರಚಾರಕರು ತಮ್ಮ ಕರೆಗಳಿಗೆ ನಮ್ಮ ಹಳ್ಳಿಗಳ ಜನರಿಂದ, ನಾನು ಇತ್ತೀಚೆಗೆ ಬಂಗಾಳದಲ್ಲಿ ಕಂಡಂತಹ ಹಳ್ಳಿಗರ ಅಪಾರ ಸಮೂಹವು ಕೊಟ್ಟಂತಹ ಸ್ವಾಗತವನ್ನು ಪಡೆಯಬಲ್ಲರೆಂಬ ಕುರಿತು ನನಗೆ ಸಂದೇಹವಿದೆ.

ಆ ಮಹಾ ಸಭೆ

ಈ ಕಾಂಗ್ರೆಸ್ ಸಾರ್ವಜನಿಕ ಸಭೆಯು, ಮುಸಲ್ಮಾನರೇ ಅಧಿಕ ಸಂಖ್ಯೆಯಲ್ಲಿದ್ದ ಒಂದು ಹಳ್ಳಿಯಲ್ಲಿ ನೆರೆದಿತ್ತು. ಆ ಸಮೂಹದಲ್ಲೆಲ್ಲಾ ಲುಂಗಿ ಮತ್ತು ಫೆಝ್ ಟೋಪಿಗಳೇ ಕಂಡು ಬರುತಿದ್ದುವು. ಆ ಗುಂಪಿನಲ್ಲಿ ಲೀಗ್ ಬೇಜನ್ನು ಕೂಡಾ ಧರಿಸಿಕೊಂಡು ಒಬ್ಬ ನಿಂತಿದ್ದುದನ್ನು ಕಂಡು ನಾನು ಭಯಚಕಿತನಾದೆ; ಆತ ತ್ರಿವರ್ಣೀಯ ಕಾಂಗ್ರೆಸ್ ಬೇಜ್ ತೊಟ್ಟವನೊಬ್ಬನ ಒತ್ತಿನಲ್ಲೇ ನಿಂತಿದ್ದ. ನಮ್ಮ ಕಳೆದ ಬಾರಿಯ ಅಧ್ಯಕ್ಷ ಚುನಾವಣೆಯಲ್ಲಿ ಪರಸ್ಪರ ಕೊಲೆ ಮಾಡುವ ಬಯಕೆ ಇಲ್ಲದೇನೇ ರೂಸವೆಲ್ಟ್ ಮತ್ತು ದಿವೆಯವರ ಗುಬ್ಬಿಗಳನ್ನು ಧರಿಸಿಕೊಂಡವರು ಒಟ್ಟೊಟ್ಟಿಗೆ ನಿಂತಿದ್ದ ದೃಶ್ಯದಂತೆ ಕಾಣುತಿತ್ತು. ಆ ನೋಟ, ಕಲ್ಕತ್ತದಲ್ಲಿ ಕಂಡು ಪಡೆದಿದ್ದ ಅನುಭವದಿಂದಾಗಿ, ಲೀಗಿನವನೆಂದು ಪ್ರದರ್ಶಿಸಿಕೊಳ್ಳುವವನಂತಿರಲಿ;-ಓರ್ವ ಕೇವಲ ಮುಸಲ್ಮಾನನಾದವನು ಕೂಡಾ-ಕಾಂಗ್ರೆಸ್ ಮೀಟಿಂಗಿಗೆ ಹೋಗಿ ಪೆಟ್ಟು ತಿಂದು ಸಾಯಲು ತಯಾರಿರಲಾರನೆಂದು ನಾನು ಭಾವಿಸಿಕೊಂಡಿದ್ದೆ.

ಭಾಷಣಗಳು

ಅಲ್ಲಿರುವಾಗ ವಾರಗಟ್ಲೆ ನೀವು ಬಂಗಾಳೀ ಭಾಷೆಯನ್ನಲ್ಲದೆ ಬೇರಾವುದನ್ನೂ ಕೇಳಲಾರಿರಾದರೂ, ಬಂಗಾಳಿಯಲ್ಲಿ ಹೇಳಿದುದರ ಸಾರಾಂಶವನ್ನರಿಯಬೇಕಾದರೆ ನೀವು ಭಾಷಾಜ್ಞಾನಿಯೇ ಆಗಬೇಕೆಂದಿಲ್ಲ. ನಾನಂತೂ ಅಲ್ಲಿಯ ಭಾಷಣಗಳನ್ನು ಸಾಕಷ್ಟು ಅರ್ಥ ಮಾಡಿಕೊಳ್ಳಲು ಸಮರ್ಥನಾಗಿದ್ದೆ. "ಸಭಿಕರಲ್ಲಿ ಎಲ್ಲರೂ ಭಾರತ ಮಾತೆಯ ಮಕ್ಕಳು. ಎಲ್ಲರೂ ಸಮಾನವಾಗಿ ವಿದೇಶೀ ಆಳ್ವಿಕೆಯ ಸಂಕಲೆಯಲ್ಲಿ ಸಿಕ್ಕಿದವರು' ಎಂದು ಓರ್ವ ಉಪನ್ಯಾಸಕ ಎತ್ತಿ ಹೇಳಿದ. 'ಬರಗಾಲಕ್ಕೆ ಹಿಂದೂ ಮುಸ್ಲಿಂ ಎಂಬ ಪಕ್ಷಪಾತವೇನೂ ಇಲ್ಲ' ಎಂದು ಮತ್ತೊಬ್ಬ ಭಾಷಣಗಾರ ಜ್ಞಾಪಕಕ್ಕೆ ತಂದ. ಅಲ್ಲಿ ಥಳಕಿನ ಮಾತುಗಾರಿಕೆಯೇ ಇರಲಿಲ್ಲ. ಭಾಷಣಗಾರರು ಒಂದಿಂಚು ನೆಲ ಬಿಟ್ಟಿರಲಿಲ್ಲ; ಶೀಲನಾತ್ಮಕವಾಗಿ ಯಥಾರ್ಥವಾದಿಗಳಿದ್ದರು. ಆ ಯಥಾರ್ಥತೆಯು ಜನರಿಗೆ ಮನಮುಟ್ಟುತಿತ್ತೆಂಬುದನ್ನು ಅಲ್ಲಿ ಕಾಣಬಹುದಾಗಿತ್ತು. ಮಾತುಗಳನ್ನು ಅರ್ಥ ಮಾಡಿಕೊಳ್ಳುವ-ಪ್ರಾಯಶಃ ತಾವು ಇತ್ತೀಚೆಗೆ ಕೇಳಿರುವ ವಿಭಜನಾ ಸಂಬಂಧದ ಲೀಗ್ ವಾದಗಳೊಡನೆ ಇವುಗಳನ್ನು ಹೋಲಿಸಿ ನೋಡುವ-ಒಂದು ಆತುರವು ಸಭಿಕರ ಮುಖಗಳಲ್ಲಿ ಕಂಡು ಬರುತಿತ್ತು.

ಮಧ್ಯ ವಿರಾಮ

ಹತ್ತಿರದಲ್ಲೇ ಇರುವ ಸ್ಥಳವೊಂದರಲ್ಲಿ ಮುಸಲ್ಮಾನರು ಪ್ರಾರ್ಥನೆ ನಡಿಸಿ ಬರುವದಕ್ಕಾಗಿ 15 ಮಿನಿಟು ನಿಲ್ಲಿಸಿದ್ದ ಸಭೆ ಪುನಃ ಆರಂಭವಾಯಿತು. ಈ ವಿರಾಮದ ಹೊತ್ತಿನಲ್ಲಿ ಹಿಂದುಗಳು ಶಾಂತವಾಗಿ ಕುಳಿತು ಕಾಯುತಿದ್ದರು ಇನ್ನಷ್ಟನ್ನು ಕೇಳಬೇಕೆಂಬ ಆತುರದಿಂದ ಮುಸಲ್ಮಾನರೆಲ್ಲಾ ಸಭೆಗೆ ಮರಳಿ ಬಂದಿದ್ದರು. 'ವಂದೇ ಮಾತರಂ' ಮತ್ತು 'ಅಲ್ಲಾಹೋ ಅಕ್ಬರ್' ಘೋಷಗಳನ್ನು ಎಲ್ಲರೂ ಒಟ್ಟಿಗೆ ಘೋಷಿಸಿದರು ಇವೆರಡು ಜೈಕಾರಗಳೊಳಗೆ ಅಂತರವಿದೆ ಎಂಬುದು ಅಲ್ಲಿದ್ದವರಲ್ಲಿ ಯಾರೊಬ್ಬನಿಗೂ ಹೊಳೆದಂತೆ ಕಾಣುತ್ತಿರಲಿಲ್ಲ. 'ಹಿಂದೂ ಮುಸ್ಲಿಮ್ ಏಕ್ ಹೋ" ಎಂದೂ ಆಗಾಗ ಜೈಕಾರವೇಳುತಿತ್ತು. ನಾನು ಪಟ್ಟಣಗಳಲ್ಲಿ ಆಗಾಗ ಕೇಳಿದ್ದ 'ಕಾಂಗ್ರೆಸ್ ಮುಸ್ಲಿಮ್ ಲೀಗ್ ಏಕ್ ಹೋ' ಎಂಬ ಘೋಷಣೆಗಿಂತ ಮೇಲಿನ ಘೋಷಣೆಯೇ ಸಹಜ ಮತ್ತು ಸಮಂಜಸವಾಗಿ ನನ್ನ ಕಿವಿಗೆ ಕೇಳಿಸಿತು. ಕಾಲೇಜ್ ವಿದ್ಯಾರ್ಥಿಯಾದ ಮುಸ್ಲಿಂ [illegible]ನೊಬ್ಬನು ತನ್ನ ಭಾಷಣಕ್ಕಾರಂಭಿಸಿದ. ಅವನ ಆಗ್ರಹ ಪೂರ್ಣ ವಿಜ್ಞಾಪನೆಯು ಸಭಿಕರನ್ನು ಪೂರ್ತಿ ಸ್ತಬ್ಧಗೊಳಿಸಿತು. ತನ್ನ ಪ್ರತಿಯೊಂದು ವಾದಕ್ಕೊಮ್ಮೆ ಆತ ತುಸು ನಿಧಾನಿಸುತಿದ್ದ; ಆಗ ಪ್ರತಿಯೊಂದು ತಲೆಯೂ-ನರೆತ ಮತ್ತು ಎಳೆಯ, ಫೆಝ್ ಟೋಪಿಯಿದ್ದ ಮತ್ತು ಖಾಲಿಯಿದ್ದ-ಪ್ರತಿಯೊಂದು ಶಿರಸ್ಸೂ ಸಮ್ಮತಿ ಸೂಚಕವಾಗಿ ಒಲೆದಾಡುತಿತ್ತು.

ಸಭೆ ಮುರಿಯುವ ಪ್ರಯತ್ನ

ಇದೇ ಹೊತ್ತಿನಲ್ಲಿ ಬೊಬ್ಬೆಯೆಬ್ಬಿಸುತ್ತಾ ದೂರದ ಬಯಲಿನಿಂದ ಒಂದು ಮೆರವಣಿಗೆಯು ಸಭಾಸ್ಥಳದ ಕಡೆಗೆ ಬರಹತ್ತಿತು. ಅದರಲ್ಲಿ ಸುಮಾರು 40 ಮಂದಿ ತರುಣರಿದ್ದರು; ಅವರೆಲ್ಲಾ ಬೊಬ್ಬೆ ಹಾಕುತ್ತಾ, ನಗಾರಿ ಬಾರಿಸುತ್ತಾ ಬರುತಿದ್ದರು. ಮೈಕ್ರೋಫೋನ್ ಮತ್ತು ಧ್ವನಿವಾಹಕಗಳು ಅಕಸ್ಮಾತ್ ನಿಂತು ಹೋದುವು. ಮೆರವಣಿಗೆಯು ಭಾಷಣರಂಗದ ಸುತ್ತಿನೊಳಗೆ ಬಂತು ಅವರ ಗದ್ದಲದಿಂದ ಭಾಷಣವನ್ನು ಕೇಳಲಾಗುತ್ತಿರಲಿಲ್ಲ. 'ಹಿಂದೂ ಸಭೆಯಿಂದ ಹೊರಟು ಬನ್ನಿ' ಎಂದು ಕೂಗುತಿದ್ದ ಅವರಿಗೆ ಪ್ರತಿಯಾಗಿ ಸಭಿಕರಲ್ಲಿ ಕೆಲವು ತರುಣರು ವಿರುದ್ಧ ಬೊಬ್ಬೆಗಳನ್ನು ಹಾಕ ಹತ್ತಿದರು. ಈ ಸಂದರ್ಭದಲ್ಲಿ ನಾನು ಆ ಸಭೆಯ ಮಧ್ಯದಲ್ಲಿದ್ದ ಓರ್ವ ತರುಣ ಮುಸಲ್ಮಾನನ ಮೇಲೆಯೇ ನನ್ನ ದೃಷ್ಟಿ ಹಾಕಿದ್ದೆ. ಅವನ ಶುಭ್ರ ಹಸುರು ಚದ್ದರ್ ಮತ್ತು ವಿಶೇಷ ಅಚ್ಚು ಕೆಂಪಾದ ಫೆಝ್ ಟೋಪಿಯಿಂದಾಗಿ ಅವನನ್ನೇ ಪ್ರತ್ಯೇಕಿಸಿ ನೋಡುವದು ಸುಲಭವಾಗಿತ್ತು. ಈ ಗೊಂದಲಕ್ಕೆ ಸಭಿಕರ ಪ್ರತಿಕ್ರಿಯೆ ಹೇಗಿದ್ದೀತೆಂಬುದನ್ನು ತಿಳಿಯಲು ನಾನು ಅವನನ್ನೇ ದಿಕ್ಚಕ್ರವಾಗಿ ಉಪಯೋಗಿಸಿಕೊಂಡೆ

ಸಭಾ ವ್ಯವಸ್ಥೆ

ಆ ತರುಣನು ಒಂದೆಡೆಯಿಂದ ಗದ್ದಲದ ನಡುವೆ ಭಾಷಣ ಕೇಳಬೇಕೆಂಬ ಆತುರದಿಂದಲೂ, ಮತ್ತೊಂದೆಡೆಯಿಂದ ಈ ಥಾಳಿಗಾರರನ್ನು ಓಡಿಸಬೇಕೆಂಬ ಸಹಜಾವೇಶದಿಂದಲೂ ಕತ್ತರಿಯಲ್ಲಿ ಬಿದ್ದು ಒದ್ದಾಡುವವನಂತೆ ಕಾಣುತಿದ್ದ. "ದೃಢವಾಗಿ ಕುಳಿತು ಬಿಡಿ. ಬೇಕೆಂದೇ ಹೂಡಿರುವ ಈ ತಂತ್ರದ ಬಲೆಗೆ ಬೀಳ ಬೇಡ" ಎಂದು ಉಪನ್ಯಾಸಕ ವಿಜ್ಞಾಪಿಸಿಕೊಳ್ಳುತಿದ್ದ. ಆಶ್ಚರ್ಯಕರ ಸ್ವಯಂ ಹತೋಟಿಯಿಂದ ಸಭಿಕರಲ್ಲಿ ಹೆಚ್ಚಿನವರು ಕುಳಿತುಕೊಂಡೇ ಇದ್ದರು. ಸಭೆಯನ್ನು ಚದರಿಸಬೇಕೆಂಬ ತಮ್ಮ ಪ್ರಯತ್ನ ಈ ರೀತಿ ವಿಫಲವಾದೊಡನೆ ಆ ಪುಂಡರು ಸಭಾರಂಗದ ಹೆಬ್ಬಾಗಿಲಲ್ಲಿ ನಿಲ್ಲಿಸಿದ್ದ ತ್ರಿವರ್ಣ ಧ್ವಜದ ಬಿದಿರು ಕಂಬವನ್ನು ಮುರಿದು ಹಾಕಿದರು. ಮತ್ತು ಬಡಿದಾಟವಾರಂಭವಾಯಿತೆಂದು ಸಭಿಕರು ಗ್ರಹಿಸುವಂತೆ ಮಾಡಬೇಕೆಂದು ಲಾಠಿಗಳನ್ನು ಲಟಪಟ ಬಡಿಯ ಹತ್ತಿದರು. ಇದರಿಂದಾಗಿ ಇಡೀ ಸಭೆಯೇ ನಿಲ್ಲಬೇಕಾಗಿ ಬಂತು. ರಕ್ತ ವರ್ಣದ ಫೆಝ್ ಟೋಪಿ ಧಾರಿ ತರುಣನಿಂದ ಮತ್ತೆ ಸಹಿಸಲಾಗಲಿಲ್ಲ. ಆತನೊಂದು ಕೋಲನ್ನು ಹೆಕ್ಕಿಕೊಂಡು ಒಂದೇ ಉಸಿರಿಗೆ ಗಲಭೆಯ ಮಧ್ಯಕ್ಕೆ ಧಾವಿಸಿದ

ಪುಂಡರು ಕಾಲ್ದೆಗೆದರು

ಆ ಕ್ಷಣ ಭೀಕರ ಹೊಯ್ಕೈ ಕಾಳಗ ನಡೆಯುವ ಸಂಭವವಿತ್ತು; ಅದು ಹೇಗೋ ರವಮಾತ್ರ ತಪ್ಪಿಹೋಯಿತು. ಥಾಳಿಗಾರ ಮೆರವಣಿಗೆಯವರು ಆ ಕ್ಷೇತ್ರದ ಒಂದು ಮೂಲೆಗೆ ಹಿಂಜರಿದು ನಿಂತರು. ಸಭಿಕರೆಲ್ಲಾ ಶಾಂತವಾಗಿ ಪುನಃ ಕುಳಿತುಕೊಂಡರು. ಕೆಂಪು ಫೆಝ್ ಟೋಪಿವಾಲನೂ ಕೂಡಾ ಮರಳಿ ಬಂದು, ತನ್ನ ಭುಜವನ್ನೇ ಭಾವಪೂರ್ಣವಾಗಿ ನೋಡುತ್ತಾ ಕುಳಿತುಕೊಂಡ. ನಿರಾಶೆಗೊಂಡ ಮೆರವಣಿಗೆಯವರನ್ನು ಕಾಯಲು ಮೂವರು ಸ್ವಯಂಸೇವಕರು ಪಹರೆಗೆ ನಿಂತರು. ಅಲ್ಲಿಂದ ಹೊರಟು ಹೋಗುವದೇ ವಾಸಿಯೆಂದು ಮೆರವಣಿಗೆಯವರಿಗೆ ತೋರಿದ್ದರಿಂದ ಅವರು ಸಿಟ್ಟುಗೊಂಡು ಬೊಬ್ಬಿಡುತ್ತಾ ಹೋಗಿ ಬಿಟ್ಟರು. ಮುಸ್ಲಿಂ ವಿದ್ಯಾರ್ಥಿ ಭಾಷಣಗಾರನು ಪುನಃ ತನ್ನ ಭಾಷಣಕ್ಕಾರಂಭಿಸಿದ. ಅವನ ಏರಿಕೆಯ ಸ್ವರವನ್ನು ಸಭೆಯು ಮೌನವಾಗಿ ಆಲಿಸ ಹತ್ತಿತು.

ಪೋಲಿಸರು ಇರಲಿಲ್ಲ

ಕಾನೂನು ಮತ್ತು ವ್ಯವಸ್ಥೆಯನ್ನು ರಕ್ಷಿಸುವ ಪೋಲೀಸರ ಸುಳಿವೇ ಅಲ್ಲಿರಲಿಲ್ಲ ಈ ಸಂದರ್ಭದಲ್ಲಿ ಜನರು ಅಹಿಂಸಾ ತತ್ವದೊಂದು ಸ್ಪಷ್ಟ ಪಾಠವನ್ನು ಕೊಟ್ಟು ಪರಿಸ್ಥಿತಿಯನ್ನು ಜಯಶೀಲವಾಗಿ ಹತೋಟಿಗೆ ತಂದಿದ್ದರು. ಅಮೆರಿಕದಲ್ಲಾದರೆ ಇಂತಹ ಕಡೆಗಳಲ್ಲಿ ಪೋಲಿಸರಿಗೆ ಪ್ರಥಮ ಸ್ಥಾನವಿದೆ. ಆದರೆ, ಪೋಲಿಸರ ನಿಷ್ಪಕ್ಷಪಾತತೆಯ ಕುರಿತು ವಿಶ್ವಾಸವಿಲ್ಲದ ಇಲ್ಲಿಯ ಜನರು ಅವರ ಗೈರು ಹಾಜರಿಯನ್ನೇ ಬಯಸುತ್ತಾರೆ. ಪಾಶ್ಚಿಮಾತ್ಯರಾದ ನಾವು, ಸರಕಾರದ ಹೊಣೆಗಾರಿಕೆಯೆಂದು ಭಾವಿಸಿರುವ ಸಂಕಷ್ಟಗಳ ನಿವಾರಣೆಗೆ ಇಲ್ಲಿಯವರು ತಮ್ಮದೇ ಆದ ವಿಧಾನಗಳನ್ನು ಅಂಗೀಕರಿಸಿಕೊಂಡಿದ್ದಾರೆ.

(೯ನೇ ಪುಟ ನೋಡಿರಿ)

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ತಾರೀಕು 27—3—46ರಿಂದ
ಕದಾರ್ರರ ಚಿತ್ರ
ಕಾನೂನ್
ಶ್ರೀ ನಿರ್ಮಲಾ, ಶಾಹು ಮೋದಕ್, ಮೆಹತಾಬ್, ಉಲ್ಹಾಸ್ ಮುಂತಾದವರು ನಟಿಸಿರುವರು.
ಬರುವ ಚಿತ್ರ—
ಕಿಸ್ಮತ್

ಮಗ್ಗಿ
ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ತ್ರಗಳು, ದಾಖಲು ಮತ್ತು ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟುಗಳು ದೊರೆಯುತ್ತವೆ.
Navabharat Book Depot,
UDIPI.

ಮಂಗಳೂರು.

ನಗರ ಸಭೆಯ ಸಾಮಾನ್ಯ—ಅಧಿವೇಶವು ತಾ. ೧೮ರಂದು ಸೇರಿದಾಗ, ಸರ್ಕಸ್ ಕಂಪೆನಿಯೊಂದಕ್ಕೆ ಕೌನ್ಸಿಲಿನ ಅಪ್ಪಣೆಯಂತೆ ಕಮಿಶನರರು ಲೈಸನ್ಸ್ ಕೊಟ್ಟಿರುತ್ತಾ ಜಿಲ್ಲಾ ಕಲೆಕ್ಟರರು ಅದನ್ನು ರದ್ದುಗೊಳಿಸಿದುವನ್ನು ನಿಷೇಧಿಸಲಾಯಿತು. 'ಟಿಪ್ ಟಾಪ್' ಎಂಬ ಜುಗಾರಿಯೆ ಪ್ರಧಾನವಾಗಿರುವ ಕಂಪೆನಿಯೊಂದಕ್ಕೆ ಕೊಟ್ಟ ಲೈಸನ್ಸಿನ ಕುರಿತು ಆಕ್ಷೇಪವೆತ್ತದೆ ಈಗ ಮಾತ್ರ ಆಕ್ಷೇಪಿಸಿದುದು ನಿಷೇಧಕ್ಕೆ ಕಾರಣ.

ನಗರಕ್ಕೆ ನಳ್ಳಿನೀರನ್ನು ಗುರುಪುರ ಹೊಳೆಯಿಂದ ಒದಗಿಸುವ ಯೋಜನೆ ನಡೆಯುತ್ತಿದೆಯಷ್ಟೆ. ಈ ಕುರಿತು, ಸರಕಾರಿ ಇಂಜನಿಯರರೊಬ್ಬರು. ಇಲ್ಲಿಗೆ ಬಂದಿದ್ದು ತಾ. ೨೨ರಂದು ನಗರ ಸಭೆಯ ಸದಸ್ಯರೊಡನೆ ವಿಚಾರ ವಿನಿಮಯ ನಡೆಸಿದರು.

ಜಿಲ್ಲಾ ಬೋರ್ಡಿನ ಸಭೆಯು—ತಾ. ೨೧ರಂದು ಸೇರಿದಾಗ ಬೋರ್ಡ್ ಸದಸ್ಯ ರಘುಚಂದ್ರ ಬಲ್ಲಾಳರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಕುಂದಾಪುರದಲ್ಲಿ ಖಾಸಗಿ ಸಂಸ್ಥೆಯೊಂದು ಹೈಸ್ಕೂಲು ತೆರೆಯುವ ವಿಚಾರವನ್ನು ಆಕ್ಷೇಪಿಸಿತು. ಆದರೆ ಬಾರ್ಕೂರಿನಲ್ಲಿ ಸೆಕೆಂಡರಿ ಶಾಲೆಯೊಂದನ್ನು ತೆರೆಯಲು ಆಕ್ಷೇಪಿಸಲಿಲ್ಲ. ಕಾಪಿನ ಬೋರ್ಡ್ ಶಾಲೆಗೆ ಹೊಸ ಕಟ್ಟಡ ಕಟ್ಟಿಸಲು ಸಮ್ಮತಿಸಿತು. ಹಿಂದಿನ ಜಿಲ್ಲಾ ಬೋರ್ಡ್ ಸಭೆಯೊಂದರಲ್ಲಿ ಕುಂದಾಪುರದಲ್ಲಿ ಪೋಲಿಸರು ನಡೆಸಿದ ಅತಿರೇಕದ ಕುರಿತು ಕೈಕೊಂಡ ಠರಾವನ್ನು ಬೋರ್ಡಿನ ಸ್ವಚ್ಛ ಪುಸ್ತಕದಿಂದ ತೆಗೆದು ಹಾಕಬೇಕೆಂದೂ ಈ ವಿಚಾರವನ್ನು ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ಕಳುಹಿಸಿಕೊಡಬೇಕೆಂದೂ ಡಿ. ಎಸ್. ಪಿ. ಯವರಿಂದ ಬಂದ ಪತ್ರ; ಈ ವಿಚಾರದಲ್ಲಿ ಬೋರ್ಡ್ ಸರಿಯಾದ ನಿದರ್ಶನ ಕೊಡಲಾರದೆ ಹೋದ ವಿದ್ಯಮಾನ- ಇವುಗಳು ಚರ್ಚಿಸಲ್ಪಟ್ಟು; ಹಿಂದೆ ಕೈಕೊಂಡಿದ್ದ ಠರಾವನ್ನು ರದ್ದುಗೊಳಿಸುವುದೆಂದಾಯಿತು.

ಹಿಂದೀ ತರಗತಿಗಳನ್ನು—ಬರುವ ಏಪ್ರಿಲ್ ತಿಂಗಳಿಂದ ನಗರದ ಸೆಂಟ್ರಲ್ ಮಾರ್ಕೆಟ್, ಕದ್ರಿ, ಕೊಡಿಯಾಲಬೈಲು ಮತ್ತು ಜಪ್ಪುಗಳಲ್ಲಿ ತೆರೆಯಲಾಗುವುದು.

ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗಿನ ಒಂದು ಸಭೆಯು ಬೋಳಾರ ಭೋಜ ರಾಯರ ಕಟ್ಟೋಣದ ಮಾಳಿಗೆಯಲ್ಲಿ ಸಂಘಕ್ಕೆ ಹೊಸತಾಗಿ ತೆರೆಯಲ್ಪಟ್ಟ ಆಫೀಸಿನಲ್ಲಿ ಶ್ರೀ. ಕೆ. ಈಶ್ವರನವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಮುಂದಿನ ಕೆಲಸದ ಕುರಿತು ದೀರ್ಘಕಾಲ ಆಲೋಚನೆ-ಚರ್ಚೆ ನಡೆಯಿತು. ಆನಂತರ ಸಂಘದ ಆಶ್ರಯದಲ್ಲಿ ಕಳೆದ ತಿಂಗಳಲ್ಲಿ ಆರಂಭಿಸಿದ್ದ ಮರಣ ಫಂಡಿನ ವರದಿಯನ್ನೂ ಈಶ್ವರನವರು ಸಭೆಯ ಮುಂದಿಟ್ಟು ಈ ಹೊತ್ತಿನ ತನಕ 25 ಮೆಂಬರರು ಸೇರಿರುತ್ತಾರೆ. ಈ ಪೈಕಿ ಹೆಚ್ಚಿನ ಮಂದಿ, ಮಹಿಳೆಯರಾಗಿರುತ್ತಾರೆ ಎಂದರು. ಇದಕ್ಕೊಂದು ಪ್ರತ್ಯೇಕ ಕಮಿಟಿಯನ್ನು ನೇಮಿಸಲಾಯಿತು. ಕಮಿಟಿಗೆ ೯ ಮಂದಿ ಮೆಂಬರರನ್ನು ಆರಿಸಲಾಯಿತು.

ಜಿಲ್ಲಾ ಆದಿದ್ರಾವಿಡ- ಸೇವಾಸಂಘದ ವಾರ್ಷಿಕ ಮಹಾಸಭೆಯು ತಾ. ೧೭ರಂದು ಡಿ. ಸಿ. ಮಿಶನ್ ಶಾಲೆಯಲ್ಲಿ ಇಲ್ಲಿಯ ರೆವಿನ್ಯು ಡಿವಿಜನಲ್ ಆಫೀಸರ್ ಭೂತ ರಾಜರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಕಟ್ಟಿಮಾರು ರಘುಚಂದ್ರ ಬಲ್ಲಾಳರು-ಕೆಲಕಾಲದಿಂದಿತ್ತ ಪಕ್ಷವಾತದಿಂದ ಪೀಡಿತರಾಗಿದ್ದು ಕಳೆದ ತಾ. ೧೯ರಂದು ಮುಂಜಾನೆ ಜಿನಪದ ಸೇರಿದರು. ಶ್ರೀಯುತರು ನಮ್ಮ ಜಿಲ್ಲೆಯ ಸುಪ್ರಸಿದ್ಧ ಜೈನ ವರ್ಗದಾರರು. ಜಿಲ್ಲಾ ಬೋರ್ಡಿನ ಸದಸ್ಯರು. ಮಾಜಿ ಎಂ. ಎಲ್. ಎ.ಗಳು.

ಕಾಂಗ್ರೆಸಿಗೆ ಕ್ರೈಸ್ತರ ಪ್ರೋತ್ಸಾಹ-ಮಂಗಳೂರು ಪ್ರಾಂತದಿಂದ ಈ ವರೆಗೆ ೫೦೦ಕ್ಕೂ ಮಿಕ್ಕ ರೋಮನ್ ಕೆಥೊಲಿಕ್ ಬಂಧುಗಳು ಕಾಂಗ್ರೆಸ್ ಸದಸ್ಯರಾಗಿರುವರೆಂದು ತಿಳಿದುಬಂದಿದೆ.

ಆಗಮನ-ನಮ್ಮ ಲೆಜಿಸ್ಲೇಟಿವ್ ಕೌನ್ಸಿಲಿನ ಕಾಂಗ್ರೆಸ್ ಕ್ರಿಶ್ಚನ್ ಉಮೇದ್ವಾರರಾದ ಮಿ। ರೋಚ್ ವಿಕ್ಟೋರಿಯಾ ಅವರು ಈ ಜಿಲ್ಲೆಯ ಓಟುಗಳ ಸಂಗ್ರಹಕ್ಕಾಗಿ ಮಂಗಳೂರಿಗೆ ಬಂದು ತೆರಳಿರುವರು. ಅಧಿಪತ್ಯಕ್ಕಿರುವ ಈ ಸ್ಥಾನ ಒಂದ್ಕೆ ... ಒಟ್ಟು ಓಟುಗಳ ಸಂಖ್ಯೆ ಇಡೀ ಅಧಿಸ್ಥದಲ್ಲಿ ೪೪೦.

ಹೆಲ್ತಾಫೀಸರರಿಗೆ ಮನವಿ-ಶ್ರೀ ಭಕಾಭಾಯಿ ಪ್ರಭುದಾಸರವರು VIIನೇ ವಾರ್ಡಿನಲ್ಲಿರುವ ಜುಮ್ಮಾ ಮಸೀದಿ ರಸ್ತೆಯಲ್ಲಿ ಹೊಸ ಗೋಡೌನ್ ತೆರೆದು, ಅಲ್ಲಿ ಗಂಧಕದ ಹೊಗೆ ಹಾಕುತ್ತಿರುವರು. ಈ ಗಂಧಕದ ಹೊಗೆಯಿಂದ ನಮ್ಮ ಆರೋಗ್ಯಕ್ಕೆ ಕೆಡುಕುಂಟಾಗಿದೆ. ಡಾಕ್ಟರರೂ ಹಾಗೇ ಅಭಿಪ್ರಾಯ ಪಡುತ್ತಾರೆ. ಈ ತೆರದಲ್ಲಿ ಇಲ್ಲಿ ಹೊಗೆ ಹಾಕುವ ಕ್ರಮ ಮುಂದರಿದರೆ ನಮ್ಮ ಆರೋಗ್ಯವು ಇನ್ನೂ ಕೆಡುತ್ತ ಹೋಗುವುದು. ಇದನ್ನು ಕೂಡಲೇ ತಡೆಯಬೇಕು. ಹಾಗೆಯೇ ಗೇರು ಬೀಜವನ್ನು ತರಗತಿವಾರಾಗಿ ವಿಂಗಡಿಸುವ ಕೆಲಸವು ಹೆಚ್ಚಾಗಿ ರಾತ್ರಿ ಕಾಲ ನಡೆವುದಿದ್ದು, ಅದರಿಂದ ಹೊರಡುವ ಶಬ್ದವು ನಿದ್ದೆಗೇಡಾಗಿ ಪರಿಣಮಿಸುತ್ತದೆ; ಇದನ್ನೂ ನಿಲ್ಲಿಸಬೇಕು'- ಎಂದು ಅಲ್ಲಿಯ ಹಲವು ನಿವಾಸಿಗಳು ಮುನಿಸಿಪಲ್ ಹೆಲ್ತಾಫೀಸರರಿಗೂ ಕಮಿಶನರರಿಗೂ, ಇತರ ಮೇಲಾಧಿಕಾರಿಗಳಿಗೂ ಮನವಿ ಕಳಿಸಿರುವರಾಗಿ ತಿಳಿದುಬರುತ್ತದೆ.

ಎರಡಕ್ಕಿಂತ ಹೆಚ್ಚು ಬಗೆ ಇಲ್ಲ-ಆಹಾರ ಪರಿಸ್ಥಿತಿಯ ದೆಸೆಯಿಂದ ಸರಕಾರದವರು ಊಟದ ಹೋಟೆಲುಗಳಲ್ಲಿ ಒಬ್ಬನಿಗೆ ಬಿಸಿ ಯಾ ತಣ್ಣಗಿನ ಎರಡು ಬಗೆಯ ಊಟಗಳಲ್ಲಿ ಒಂದನ್ನು ಮಾತ್ರ ಬಡಿಸಬಹುದಾಗಿದೆ. ಎರಡನೆಯ (ತಣ್ಣಗಿನ) ಊಟದಲ್ಲಿ ಅನ್ನ ... ಬೆರಕೆ ಮಾಂಸಗಳಿರಬಹುದು. ಹೋಟೇಲುಗಳು ಬಿಸಿ ಮತ್ತು ತಣ್ಣಗಿನ ಎರಡು ಬಗೆಯ ಊಟಗಳನ್ನು ... ಕು ಮತ್ತು ಹೆಚ್ಚಿನ ಎರಡನ್ನು ಅನುಬಂಧವಾಗಿ ತಯಾರಿಸಬಹುದು.

ಬನ್ನಾಡಿ-ಶ್ರೀ ಪರಮ ಹಂಸ ಪ್ರೌಢ ಪ್ರಾಥಮಿಕ ಶಾಲೆಯ ಪಂಚಮ ವರ್ಷೋತ್ಸವವು ತಾ 23 3-1946ರಲ್ಲಿ ಪ್ರಸಿದ್ಧ ವಕೀಲ್ ಶ್ರೀ ಕೆ ವೆಂಕಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಜನಸಂದಣೆಯಿಂದ ಕಿಕ್ಕಿರಿದು ಹೋಗಿದ್ದ ಶಾಲಾ ಮಂದಿರದಲ್ಲಿ ಅಂದಿನ ಕಾರ್ಯಕ್ರಮದಂತೆ ಮಕ್ಕಳ ಎಲ್ಲಾ ಚಟುವಟಿಕೆಗಳು ಅತ್ಯುತ್ತಮ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟವು ಪ್ರೇಕ್ಷಕರು ಈ ಎಲ್ಲಾ ಚಟುವಟಿಕೆಗಳನ್ನು ನೋಡಿ ಮುಗ್ಧರಾದರು ಹಲವು ಭಾಷಣಕರ್ತರು ತಮ್ಮ ಹೃತ್ಪೂರ್ವಕವಾದ ಸದಭಿಪ್ರಾಯಗಳನ್ನು ವ್ಯಕ್ತಪಡಿಸಿದ ತರುವಾಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಾನು ಈ ವರೆಗೆ ನೋಡಿದ ಶಾಲಾ ವರ್ಷೋತ್ಸವಗಳ ಪೈಕಿ ಇದೇ ಅತ್ಯುತ್ತಮವಾದುದೆಂತಲೂ ಶಾಲಾ ಏಳಿಗೆಯ ಕುರಿತು ಮೆನೇಜರರು ಮತ್ತು ಸಹೋದ್ಯೋಗಿ ಉಪಾಧ್ಯಾಯ ಉಪಾಧ್ಯಾಯಿನಿಯರು ಆತ್ಮಪೂರ್ವಕವಾಗಿ ಕೆಲಸ ಮಾಡುತ್ತಿರುವುದರಿಂದ, ಈ ಜಿಲ್ಲೆಯಲ್ಲಿರುವ ಶಾಲೆಗಳಲ್ಲಿ ಇದೊಂದು ಅತ್ಯುತ್ತಮವಾದ ಶಾಲೆ ಎಂತಲೂ ಇದಕ್ಕೆ ಊರವರ ಪ್ರೋತ್ಸಾಹವು ಅತ್ಯಗತ್ಯವೆಂಬುದಾಗಿ ಸದಭಿಪ್ರಾಯಪಟ್ಟರು.

ಬೊಂಬಾಯಿ-ತಾ. 20 2 1946ರಲ್ಲಿ ಬೊಂಬಾಯಿ ಆಗಾಖಾನ್ ಕಟ್ಟಡದಲ್ಲಿ ಉಡುಪಿ ಯಕ್ಷಗಾನ ಕಲಾ ಮಂಡಳಿಯವರ ಮತ್ತು ಇತರ ಯಕ್ಷಗಾನ ಕಲೋಪಾಸಕರ ಕಾಣಿಕೆಯಿಂದ ಯಕ್ಷಗಾನ ಕೂಟವೊಂದು ಜರಗಿತು ಪ್ರಸಂಗ:-"ಕರ್ಣ ಪರ್ವ." ಶ್ರೀ ಪೊಲ್ಯ ದೇಜಪ್ಪ ಸೆಟ್ಟರು ಯಕ್ಷಗಾನ ಕಲೆ ಮತ್ತು ಕಲಾ ಮಂಡಲದ ಧ್ಯೇಯವನ್ನು ವಿವರಿಸಿ ಭಾಷಣವಿತ್ತರು. ಶ್ರೀ ಪಿ. ಐ. ಸೆಟ್ಟರು ಯಕ್ಷಗಾನ ಕಲಾ ಮಂಡಲವನ್ನು ಸರ್ವರೂ ಉದಾರ ಮನಸ್ಸಿನಿಂದ ಪ್ರೋತ್ಸಾಹಿಸುವುದಗತ್ಯವೆಂದು ಸೂಚಿಸಿದರು. ತಾ. 23ರಲ್ಲಿ ದಾದರಿನಲ್ಲಿರುವ ಕನ್ನಡ ಸೇವಾ ಸಮಿತಿಯ ಆಶ್ರಯದಲ್ಲಿಯೂ ಯಕ್ಷಗಾನ ಸಮಾರಂಭ ಜರಗಿತು.

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ನಾಟಕಗಳು				**ಕವಿತೆಗಳು**			
ಸ್ವತಂತ್ರ ಜೀವನೋಪಾಯ	0	3	0	ಕಾವ್ಯ ಸಾಮ್ರಾಜ್ಯ	1	0	0
ಸಂಶಯ ಪಿಶಾಚಿ	0	8	0	ಶ್ರೀಮಂಬ	1	0	0
ಕುಶಲವ	0	5	0	ಮುಗುಳು	0	3	0
ವ್ಯಭಿಚಾರಿಣಿ ಯಾರು?	0	12	0	ಪರಾಗ	0	9	0
ಹೆಂಡ್ತಿ ಗಂಡನಾದರೆ!	0	4	0	ಭಾರತ ಗೀತಾಂಜಲಿ	0	3	0
ಪುರುಷ ವಧು'	0	4	0	ಚಲಚ್ಚಿತ್ರ ಪದ್ಯಾವಳಿ	0	3	0
ದೇಶಭಕ್ತ	1	4	0	**ಕಾದಂಬರಿಗಳು**			
ರಂಗಭೂಮಿ	0	8	0	ಸನ್ಯಾಸಿಯ ಸೋಗಿನಲ್ಲಿ	0	8	0
ಸೇವಾಪಥ	0	8	0	ಲೋಪಾಮುದ್ರೆ	0	6	0
ಪ್ರಕಾಶ	2	4	0	ವೀರಭೂಮಿ	0	2	0
ಮೂರು ಪ್ರಹಸನಗಳು	0	14	0	**ಇತರ**			
ಆರೋಗ್ಯ ಪ್ರತಾಪ	0	12	0	ಗತಿಲಿಂಬ್ಯ ಚರಿತ್ರೆ	2	0	0
ಧರ್ಮಸಂಕಟ	0	5	0	ಕೀರ್ತನ ಕಂಠಾಭರಣ	2	8	0
ಪಂಚಾರತಿ	0	6	0	ಅಸ್ಪೃಶ್ಯತಾಮಾಕರಂದ	0	12	0
ಪ್ರತೀಕಾರ	0	6	0	ಮಲ್ಲಯುದ್ಧ	1	4	0
ಬಣ್ಣದ ಬೀಸಣಿಗೆ	1	4	0	ಸೌಂದರ್ಯಲಹರಿ	1	0	0
ಶಂಭುಕ ವಧೆ	0	2	0	ವಿಕಾಸ ವಾದ ಅಥವಾ ದೇವರು ಸತ್ತನೆ?	1	12	0
ಮೀರಾಬಾಯಿ	0	10	0	ಭಾರತೀಯರ ದೇಶಭಕ್ತಿ	1	12	0
ಸರಸ್ವತಿ	0	12	0	ವರದಕ್ಷಿಣೆ	0	8	0
ಕತೆಗಳು				ಆರತಿ	1	0	0
ಅಂತರಂಗದ ಕತೆಗಳು	0	10	0	ಕಣ್ಣಲ್ಲಿ ಬಟ್ಟು	0	5	0
ನಾಡಕತೆಗಳು	0	3	0	ಹೆಣ್ಣಿನ ತೊಡಕು	0	5	0
ನಂದಾದೀಪ	0	10	0	ಧರ್ಮಸಾಮ್ರಾಜ್ಯ	1	8	0
ನಾರೀಹೃದಯ	0	14	0	ಭಾರತದಲ್ಲಿ ಜಾತಿಭೇದ	1	0	0
ಭಾರತೀಯ ಕತೆಗಳು	0	14	0	ಗೀತೆಯ ಕೈಗನ್ನಡಿ	0	8	0
ನಗೆ ನೋಟಗಳು	0	14	0	ಸುಲಭದಲ್ಲಿ ಇಂಗ್ಲಿಷ್	1	4	0
ಅನ್ನದೇವರು ಮತ್ತು ಇತರ ಕತೆಗಳು	1	0	0	ಬಾಲ ವಾಙ್ಮಯ	0	3	0
ವಿಷ್ಣುವಿನ ಪರಾಪರಾಧಗಳು	0	12	0	ಆರೋಗ್ಯ ಸಾಧನ	1	0	0
ಆಕಾಶಗಂಗೆ	1	12	0	ರಾಷ್ಟ್ರ ಸಭೆಯ ಇತಿಹಾಸ	2	8	0
ಪ್ರೇಮಲಾಭ	0	5	0	ಶಾಂತಿಪುರಾಣ	3	0	0
ಪ್ರತಿಧ್ವನಿ	0	1	0	ಮಿತಸಂತತಿ	0	8	0
ಕಂದೂರಕಾಣದ ನೋಟಗಳು	0	8	0	ಜೇನಿನ ವ್ಯವಸಾಯ	1	0	0
ಆಹುತಿ ಇತ್ಯಾದಿ ಕತೆಗಳು	0	12	0	ವಿಚಾರವಾಹಿನಿ	0	4	0
ಪ್ರೇಮ ಪ್ರವಾಹ	0	8	0	ಪ್ರಕಾಶಿನಿ (೩ ಭಾಗಗಳು ಪ್ರತಿ 1ಕ್ಕೆ)	0	4	0
ಚಿಗುರು	0	6	0				

ನವಭಾರತ ಪುಸ್ತಕ ಭಂಡಾರ, ಉಡುಪಿ

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ

ಜವೇರಿಯನ್ ಜೀವನ ಮಿಕ್ಶ್ಚರ್

ಜವೇರಿಯನ್ ಮತ್ತು ಕಂ ... ಮುಂಬಾಯಿ

ನ್ಯಯ ಸಂವತ್ಸರದ
(1946-1947)
ಶ್ರೀಪತಿ ಪಂಚಾಂಗ

ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.
ಬೆಲೆ 0—5—0.
ವಿಳಾಸ:-
ಶ್ರೀಪತಿ ನರಸಿಂಹ ಅಡಿಗ,
ಬೇಳೂರು ಗ್ರಾಮ, ಪೋಸ್ಟ್ ಕೋಟ.
ಅಥವಾ
ನವಭಾರತ ಬುಕ್ ಡಿಪೋ, ಉಡುಪಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ದಕ್ಷಿಣ ಕನ್ನಡ.

ಬಾರ್ಕೂರು—ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಸರ್ಧಶತ್ಯಬ್ದ ಉತ್ಸವವು ಇದೆ, ತಿಂಗಳ ತಾ 30ನೇ ರವಿವಾರ ಅಪರಾಹ್ನ ಗಂಟೆ ೩ಕ್ಕೆ ಸರಿಯಾಗಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್. ಬಿ. ಎ. ಬಿ. ಯಲ್, ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು ಎಲ್ಲಾ ಮಹನೀಯರಿಗೂ ಸುಸ್ವಾಗತವಿದೆ

ಕೊಕ್ಕರ್ಣೆ—ತಾ 22-3-1946ರಲ್ಲಿ ಡಾ। ಕೆ ವಿ ಶೆಟ್ಟಿರ "ಪ್ರೇಮ ಮೆಡಿಕಲ್ ಹಾಲ"ನ ಉದ್ಘಾಟನಾ ಸಮಾರಂಭವು ಸ್ಥಳೀಯ ಡಾ। ಕೆ. ಆರ್. ಬೋಂಟ್ರ ಎಲ್. ಎಮ್. ಪಿ ಇವರ ಅಧ್ಯಕ್ಷತೆಯಲ್ಲಿ ಲಘು ಫಲಾಹಾರದೊಂದಿಗೆ ಜರಗಿಸಲ್ಪಟ್ಟಿತು. ಆರಮನೆಯವರು ಆದಿಯಾಗಿ ಅನೇಕ ಮಾನ್ಯ ಗೃಹಸ್ಥರು ಕೂಡಿದ್ದರು. ಶ್ರೀ ಎಮ್ ಶಿವರಾಮ ಶೆಟ್ಟರು ನವಡಾಕ್ಟರರ ಪರಿಚಯವನ್ನು ಸಭೆಗೆ ಮಾಡಿಕೊಡುತ್ತಾ, ನವರಿ ಹಾಲಿನ ಶ್ರೇಯೋಭಿವೃದ್ಧಿಯನ್ನು ಬಯಸಿದರು. ನೇಟಿವಾ ಆಸುಪಾಸು ಹಳ್ಳಿಗಳ ಅನೇಕ ಮಹನೀಯರು ಆಶೀರ್ವದಿಸಿದ ಬಳಿಕ, ಮಾನ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ, "ಇಲ್ಲಿಗೆ ಹೊಸ ಹುರುಪಿನ ನವಡಾಕ್ಟರರು ಬಂದದ್ದು ಬಹಳ ಸಂತೋಷಕರ ಕೊಕ್ಕರ್ಣೆ ಹಾಗೂ ಆಸುಪಾಸು ಜನರ ಭಾಗ್ಯೋದಯವೆಂದೇ ಭಾವಿಸತಕ್ಕದ್ದು, ಈ ಪ್ರೇಮ ಮೆಡಿಕಲ್ ಹಾಲ್ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುವದೆಂದೂ, ಸಾರ್ವತ್ರಿಕ ಬೆಂಬಲವು ದೊರೆಯುವುದೆಂದೂ ನಾನು ಪ್ರತ್ಯೂರ್ವಕ ಹೇಳಬಲ್ಲೆ" ಎಂದು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ತದನಂತರ ಅಧ್ಯಕ್ಷರು ಹಾಗೂ ಸಭಿಕರಿಗೂ ವಂದನೆಯನ್ನು ಅರ್ಪಿಸಿ ಸಭೆಯು ಮುಕ್ತಾಯವಾಯಿತು.

ಕಬ್ಬು ಬೆಳೆಸುವ ಕೃಷಿಕರ ಸಂಕಷ್ಟ—ನಮ್ಮ ಜಿಲ್ಲೆಯಲ್ಲಿ ಕಬ್ಬು ಬೆಳೆಸಿ ಬೆಲ್ಲ ಮಾಡುವುದನ್ನು ಕೈಗಾರಿಕೆಯೆಂದು ಪರಿಗಣಿಸಿ, ಆಬ್ಕಾರಿಯವರಿಂದ ಐದು ರೂಪಾಯಿಯಂತೆ (ಕೊಪ್ಪರಿಗೆಗಳಿಗೆ)ಡಿ. ಬೋರ್ಡಿನವರು ಫೀಯನ್ನು ವಸೂಲು ಮಾಡತೊಡಗಿದ್ದಾರೆ. ಸಮುದ್ರದ ಸಮೀಪದ ಸುಮಾರು ಹತ್ತು ಮೈಲು ಪೂರ್ವದಲ್ಲಿರುವ ಜಿಲ್ಲೆಯ ಇತರ ಕಡೆಗಳಲ್ಲಿ ವಿಸ್ತಾರವಾದ ಕಬ್ಬಿನ ಬೆಳೆಗಳಲ್ಲಿಯೂ ಕಾಣಸಿಗಲಾರವು. ಮನೆಯ ಖರ್ಚಿಗೆಂದೋ, ಪೂರ್ವದಿಂದಲೂ ನಡೆದು ಬಂದ ಪದ್ಧತಿಯಿಂದಲೋ, ಅಲ್ಪಸ್ವಲ್ಪ ಕಬ್ಬು ನೆಡುವವರೇ ಜಾಸ್ತಿ. ಈ ಐದು ರೂ, ಗಳೆಂಬುದು ಅಂಥವರಿಗೆ ಸಹಿಸಲಾಗದು. ಹೆಚ್ಚು ಪ್ರಮಾಣದಲ್ಲಿ ಕಬ್ಬು ಬೆಳೆಸುವವರಿಗೂ ಸ್ವಂತ ಗದ್ದೆಗಳಿಲ್ಲದೆ ಎಕ್ರೆಗೆ 70 80ರೂ. ಗೇಣಿ ತೆರುವ ಬಡ ಕೃಷಿಕರೂ ಇದ್ದಾರೆ. ಆದ್ದರಿಂದ ಈ ಎಲ್ಲರ ಮುಂದಿರುವ ಗಹನವಾದ ಪ್ರಶ್ನೆ ಯೆಂದರೆ, ಇನ್ನು ಮುಂದೆ ಕಬ್ಬು ಬೆಳೆಸಬೇಕೋ, ಬಿಡಬೇಕೋ ಎಂಬುದೇ. ಇದೇ ತರವು ಸ್ವತಂತ್ರವಾಗಿ ಬೆಳೆದ ಕನ್ನಡವು ಒಂದೆರಡು ವರ್ಷಗಳಲ್ಲಿ ಬೆಳ್ಳದ ಪೇಟೆಗೆ ಪರಾವಲಂಬಿಯಾಗುವುದರಲ್ಲಿ ಸಂಶಯವಿಲ್ಲ. ಕೃಷಿಕರು ಏನು ಮಾಡಿದರೂ ಸಹಿಸುವರೆಂದು ಒಂದರ ಮೇಲೊಂದು ತೆರಿಗೆ ಹೊಸನಿಧಾನದ ಭಾರವನ್ನು ಅವರ ತಲೆಯ ಮೇಲೆ ಹೇರುವುದರಲ್ಲಿ ಅರ್ಥವಿಲ್ಲ. ಅಧಿಕಾರಿಗಳ ದೃಷ್ಟಿಯಲ್ಲಿ ಬೆಲ್ಲ ಬೆಳೆಯುವುದು ಕೈಗಾರಿಕೆ ಹೇಗಾಯಿತೋ ತಿಳಿಯುವುದಿಲ್ಲ. ಅದೇ ದೃಷ್ಟಿಯಿಂದ ನೋಡಿದರೆ ಭತ್ತ ಬೆಳೆದು, ಬೇಯಿಸಿ ಕುಟ್ಟಿಗೆ ಅಕ್ಕಿ ಮಾಡುವುದೂ ಕೈಗಾರಿಕೆ ಯೆಂಬುದಾಗಿ ಭಾವಿಸಲ್ಪಟ್ಟು ಅದಕ್ಕೂ ರೈತರಿಗೆ ಕರವನ್ನು ಹೊರಲಾದೀತು. ಇದಕ್ಕೆಲ್ಲಾ ಪರಿಹಾರವೆಂದರೆ ರೈತರೆಲ್ಲರೂ ತಮ್ಮ ಹಿತದ ಬಗ್ಗೆ ಸಂಘ ಸ್ವಾಂದವನ್ನು ಆದಷ್ಟು ಬೇಗನೇ ಸ್ಥಾಪಿಸಿಕೊಳ್ಳಬೇಕು ಹಗಲಿಗೆ ಹೆಗಲು ಕೊಟ್ಟು ಅನ್ಯಾಯವನ್ನು ಪ್ರತಿಭಟಿಸಬೇಕು.

ಅಧಿಕಾರಿಗಳಾದರೂ ಈ ಕರವನ್ನು ಕೂಡಲೇ ತೆಗೆದು ಹಾಕಬೇಕಾಗಿ ವಿನಂತಿಸುತ್ತೇನೆ. ಕುಂದಾರು ರಾಮರಾವ್.

ಕಾಸರಗೋಡು—ಮಿಲಿಟರಿಯ ಉಪಯೋಗಾರ್ಥವಾಗಿ ಸರಕಾರವು ಸ್ವಾಧೀನಪಡಿಸಿಕೊಂಡಿದ್ದ ಈ ಸ್ಥಳವನ್ನು ಹಿಂದಕ್ಕೆ ಬಿಟ್ಟು ಕೊಡಲಾಗುತ್ತಿದೆಯಷ್ಟೆ. ಮಿಲಿಟರಿಯವರು ಇಲ್ಲಿಂದ ತೆರಳುವಾಗ ಬಿಟ್ಟು ಹೋಗಿದ್ದ ಕೆಲ ಪದಾರ್ಥಗಳನ್ನು ಸ್ಪರ್ಶಿಸಿ ಹಲವರು ವಿಚಿತ್ರವಾದ ಬೇನೆಗಳಿಂದ ನರಳತೊಡಗಿದ್ದಾರೆ. ಇಲ್ಲಿಯ ಸಿವಿಲ್ ಡಾಕ್ಟರರುಗಳಿಂದ ಚಿಕಿತ್ಸೆ ನಡೆದರೂ ಕೂಡ ಕಷ್ಟಕರವಾಗಿರುವುದರಿಂದ, ಯೋಗ್ಯ ಡಾಕ್ಟರರನ್ನು ಇತ್ತ ಕಳುಹಿಸಿ ಜನರ ಆರೋಗ್ಯವನ್ನು ರಕ್ಷಿಸಬೇಕು ಎಂದು ಸ್ಥಳೀಯರೊಬ್ಬರು ಬರೆಯುತ್ತಾರೆ

ತುಂಗಭದ್ರ—ತಾ. 19-3-1946ರಲ್ಲಿ ಮದ್ರಾಸ್ (Express) ಬಾಡಿಯಲ್ಲ ಅಜಾದ್ ಹಿಂದ್ ಸರಕಾರದ ಸುದ್ದಿ ಮತ್ತು ಪ್ರಚಾರ ಮಂತ್ರಿಗಳಾಗಿದ್ದ ಶ್ರೀ ಯಸ್. ಎ. ಅಯ್ಯರವರು ಮದ್ರಾಸಿನಿಂದ ಬೊಂಬಾಯಿಗೆ ಪ್ರಯಾಣ ಮಾಡುತಿದ್ದಾಗ ಇಲ್ಲಿಯ ಪ್ರೇಮ ಮೆಡಿಕಲ್ ಕೋಲೇಜಿನ ವಿದ್ಯಾರ್ಥಿಗಳು ಅವರನ್ನು ಸಂದರ್ಶಿಸಿ, ಸಂಭಾಷಿಸಿದರು. ಕೊನೆಗೆ ಈ ರೀತಿ ಸ್ಫೂರ್ತಿದಾಯಕವಾದ ಸಂದೇಶವನ್ನಿತ್ತರು. "Continue in the same spirit of service to suffering humanity which has inspired you to join this medical College. Jai-Hind".

ಶ್ರೀ ಹನುಮಾನ್ ವ್ಯಾಯಾಮ ಪ್ರಚಾರಕ ಮಂಡಲ, ಅಮರಾವತಿ

ಕಳೆದ ಹದಿನೆಂಟು ವರುಷಗಳಿಂದಲೂ ನಡೆಸಿಕೊಂಡು ಬಂದಂತೆ ಈ ಬಾರಿಯೂ ಮೇ ತಿಂಗಳ ಒಂದನೇ ತಾರೀಕಿನಿಂದ ಫಿಜಿಕಲ್ ಟ್ರೈನಿಂಗ್ ಕ್ಲಾಸುಗಳು ಆರಂಭವಾಗುವುವು. ಹೆಣ್ಮಕ್ಕಳಿಗೂ ತರಬೇತಿ ತರಗತಿಗಳ ವ್ಯವಸ್ಥೆಯಿದೆ. ಇಲ್ಲಿ ತರಬೇತಾದ ಯುವಕಯುವತಿಯರು ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಾಲೆಗಳಲ್ಲಿ ಡ್ರಿಲ್ ಮಾಸ್ತರರಾಗಿ ನೇಮಕ ಹೊಂದಿರುವರು ಉಮೇದ್ವಾರಿಗಳು ಏಪ್ರಿಲ್ ತಾ. 25 ರೊಳಗಾಗಿ ಅರ್ಜಿ ಕಳುಹಿಸತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಅಪೇಕ್ಷಿಸುವವರು ಒಂದಾಣೆ ಅಂಚೆ ಸ್ಟಾಂಪು ಸಮೇತ ಬರಕೊಳ್ಳಬಹುದು. ವಿಳಾಸ ಎಚ್. ವಿ. ದೇಶಪಾಂಡೆ, ಜನರಲ್ ಸೆಕ್ರೆಟರಿ, ಎಚ್. ವಿ. ಪಿ. ಮಂಡಲ, ಅಮರಾವತಿ.

ಪ್ರಕಟಣೆ ನೋಟೀಸು

ಕುಂದಾಪುರ ತಾಲ್ಲೂಕು ಕುಂದಾಪುರ ಕಸಬಾ ಗ್ರಾಮದಲ್ಲಿ ವಾಸ್ತವ್ಯವಿರುವ ಪಡುವರಿ ಗ್ರಾಮದ ದೊಡ್ಡ ಮನೆ ವೆಂಕಮ್ಮ ಶೆಟ್ಟಿಯ ಮಗಳು ಕೃಷ್ಣಮ್ಮ ಶೆಟ್ಟಿಯು ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮ ಮತ್ತು ಯಡ್ತರೆ ಗ್ರಾಮವು, ಬೈಂದೂರು ಗ್ರಾಮ ಕೂಡಾ ವಗೈರೆ ಗ್ರಾಮಗಳಲ್ಲಿರುವ ತಂದ ಚ್ಯಾಲಗೇಣಿ ವಕ್ಲು ಮತ್ತು ಮೂಲಗೇಣಿ ವಕ್ಲುಗಳಿಗೆ ಮತ್ತು ಸಮಸ್ತ ಜನರಿಗೆ ಸಹಾ ಈ ಮೂಲಕ ಪ್ರಕಟಪಡಿಸುವದೇನಂದ್ರೆ:—

ನನ್ನ ಕುಟುಂಬದ ಬಾಬ್ತು ನೋಲಿ ಕಾಣ್ಸಿದ ಗ್ರಾಮಗಳಲ್ಲಿರುವ ಸ್ಥಿರ ಆಸ್ತಿಗಳ ಪಟ್ಟೆಗಳನ್ನು ನಮ್ಮ ಕುಟುಂಬದಲ್ಲಿ ಹಿರಿಯವಳು ವ ಎಜಮಾನತಿ ವ ಆಡಳಿತೆಗಾರನಾಥೆಯಲ್ಲಿ ಸಹಾ ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ ನಡೆದ ವ್ಯವಹಾರಗಳಲ್ಲಿ ಆದ ತೀರ್ಮಾನಕ್ಕೆ ವಳಪಟ್ಟು ಕೂಡಾ ನನ್ನ ಹೆಸರಲ್ಲಿ ಪಟ್ಟೆಗಳು ಆಗಿ ನಾನು ಸರ್ಕಾರ ತೀರ್ವೆ ಸಲ್ಲಿಸಿ ಸಂಬಂಧಪಟ್ಟ ವಕ್ಲುಗಳ ಗೇಣಿ ವಗೈರೆ ಕೆಲವರಿಂದ ಕೆಲವು ಕೆಲವು ವಸೂಲು ಪಡದು ಕುಟುಂಬದ ಜೀವನ ವಗೈರೆ ಯೋಗ್ಯ ರೀತಿಯಿಂದ ನಡ್ಸಿಕೊಂಡು ಬರುತ್ತಿರುವಲ್ಲಿ ನನಗೆ ವ ನನ್ನ ಕವರಿನವರಿಗೆ ಸಹಾ ಕಷ್ಟ ನಷ್ಟಗಳಿಗೆ ಕಾರಣ ಕೊಟ್ಟು ಕುಟುಂಬಕ್ಕೆ ಕೆಡಕು ತರುವ ದುರುದ್ದೇಶದಿಂದ ನನ್ನ ಕುಟುಂಬದ ಮತ್ತೊಂದು ಕವರಿನ ಕಾವೇರಿ ಶೆಟ್ತಿ ವ ಆಕೆ ಮಗನಾದ ನಾರಾಯಣ ಶೆಟ್ಟಿ ಕೂಡಾ, ಕುಂದಾಪುರ ಕಸಬಾ ಗ್ರಾಮದಲ್ಲಿರುವ ಮಾಗವಳ್ಳಿ ಸುಬ್ರಾಯ ಹೆಬ್ಬಾರ ಮಗ ಚಾಣಕ್ಯ ಕುಯುಕ್ತಿಯಲ್ಲಿ ಪ್ರಸಿದ್ಧಿ ಹೊಂದಿದ ವಕೀಲ ಗುಮಾಸ್ತ. ಎಂ. ಸೀತಾರಾಮ ಹೆಬ್ಬಾರ ಮತ್ತು ವಡೇರ ಹೋಬಳಿ ಗ್ರಾಮದಲ್ಲಿರುವ ತಿಮ್ಮಯ್ಯ ಹೊಳ್ಳರ ಮಗ ಕಾರಿಯಾನೆ ವಿಶ್ವೇಶ್ವರ ಹೊಳ್ಳರ ಕೂಡು ವಿಕೆಯಿಂದ ಯತ್ತಲಾಗಿ ಕೆಲವು ದಿವ್ಸದ ಹಿಂದೆ ಸದ್ರಿ ನಾರಾಯಣ ಶೆಟ್ಟಿ ಸಹಾ ಮಧ್ಯ ರಾತ್ರಿ ಸಮಯ, ಏಬ್ಬಂಟೀಕವಾಗಿ ನನ್ನ ಹಿತಚಿಂತಕರು ಕೂಡಾ ಗೈರ ಹಾಜ್ರಿಯಿದ್ದ ಕಾಲದಲ್ಲಿ ನನ್ನ ವಾಸ್ತವ್ಯದ ಮನೆಗೆ ಬಂದು ನನಗೆ ಮರುಳ್ಮಾಡಿ ನನ್ನಿಂದ ಖಾಲಿ ಕಾಗದಗಳಿಗೆ ಹೆಬ್ಬೆಟ್ಟು ಮಾಡಿಕೊಂಡು, ಹೋದವರು ಅದರಿಂದ ನನಗೆ ವ ನನ್ನ ಕುಟುಂಬಕ್ಕೆ ಕಷ್ಟ ನಷ್ಟಕ್ಕೆ ಕಾರಣವಾಗುವ ರೀತಿಯಿಂದ ವಂಚನೆ ಮೋಸದ ವಾಪಾ ಕರಾರು ಯಂತ ಸೃಷ್ಟಿಸಿ ನನ್ನ ಹೆಸರಲ್ಲಿರುವ ಪಟ್ಟೆ ತಬ್ದೀಲಿಗೆ ಸಹಾ ಅರ್ಜಿ ಕೊಟ್ಟಿರುವದಾಗಿ ನನಗೆ ವರ್ತಮಾನ ಸಿಕ್ಕಿರುತ್ತದೆ. ಹಾಗೆ ಸೃಷ್ಟಿಸಿಕೊಂಡು ರಿಜಿಸ್ಟ್ರಿ ಮಾಡ್ಸಿದ ಆ ಪಾಪಾಕರಾರು ಅಗ್ರೀಮೆಂಟ್ ಪವರ್ ಓಫ್ ಎಟೊರ್ನಿ ಆಗ್ಲೀ ಹ್ಯಾಗೂ ಜ್ಯಾರಿಗೆ ಬರತಕ್ಕದ್ದಲ್ಲ. ಅವುಗಳು ಹಿಂಧ್ಯ ಆಗತಕ್ಕದ್ದೂ ಅಲ್ಲ. ಅದರ ಆಧಾರದ ಮೇಲೆ ಕುಟುಂಬಕ್ಕೆ ಸಾಲ ಮಾಡುವದೆ ಆಗ್ಲಿ ಗೇಣಿ ವಗೈರೆ ವಸೂಲು ಪಡಿಯುವದೆ ಆಗ್ಲಿ ಆ ನಾರಾಯಣ ಶೆಟ್ಟಿಗೆ ಕೂಡಾ ಎಸ್ಟರ ಮಟ್ಟಿಗೂ ಹಕ್ಕಿರುವದಿಲ್ಲ. ಅದುದರಿಂದ ಯಾವೇ ಆಗ್ಲಿ ವಕ್ಲುಗಳು ಆ ನಾರಾಯಣ ಶೆಟ್ಟಿಗೆ ಗೇಣಿ ವಸೂಲು ಕೊಡಕೂಡದು. ಮತ್ತು ಕುಟುಂಬದ ಆಡಳ್ತೆ ಪಟ್ಟೆದಾರನಾಗುತ್ತಾನೆಂಬ ನಾಥೆಯಲ್ಲಿ ಸಾಲ ಕೂಡಾ ಕೊಡಕೂಡದಾಗಿರುತ್ತದೆ. ಹಾಗೆ ಗೇಣಿ ವಸೂಲು ವ ಸಾಲ ಕೂಡಾ ಕೊಟ್ಟಲ್ಲಿ ನನ್ನ ವ ನನ್ನ ಕುಟುಂಬದ ಹಕ್ಕಿಗೆ ಅದು ಹ್ಯಾಗೂ ಬಾಧಕತಕ್ಕದ್ದಲ್ಲವೆಂಬ ಸಂಗ್ತಿ ಈ ಮೂಲಕ ಬಹಿರಂಗವಾಗಿ ಪ್ರಕಟಪಡ್ಸಿರುತ್ತೇನೆ. ನನ್ನ ಹೆಸರ ಪಟ್ಟೆ ವ ನನ್ನ ಕುಟುಂಬದ ಆಡಳಿತೆ ವ ಯಜಮಾನತಿ ಹಕ್ಕು ಕೂಡಾ ನನ್ನ ಹೆಸರಲ್ಲೆ ಪ್ರಚಲಿತ ಸಹಾ ಯಿರುತ್ತದೆಂಬದು ಸರ್ವರೂ ತಿಳಿದಿರತಕ್ಕದ್ದು. 11-3-46.

● ಯೀ ಎಡ ಹೆಬ್ಬೆಟ್ಟಿನ ಗುರ್ತ ಕೃಷ್ಣಮ್ಮ ಶೆಟ್ತಿ ರುಜು.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomacheche, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ ... ಗಾ ಸನ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಬಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಹುಳಿ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಬಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

ಮುಟ್ಟಾಗುಳಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ಪರಿಣಾಮದ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ಪ. ಖ. 12 ಆಣೆ ಅಲಾಯಿದ)

Mrs. P. DEVEE,

P. D. 5 (A 5) Tollygunge, Calcutta.

ಸ್ಟಾಕಿಸ್ಟ್: ಪಾ ಕಂಪೆನಿ, ಮಂಗಳೂರು

(೩ನೇ ಪುಟದಿಂದ ಮುಂದುವರಿದುದು)

ಷ್ಟದ ಜೀವಾಳವಾಗಿರುವ-ನಿಮ್ನ ಕೈಗೆ ಅವರು ಬಂದಲ್ಲಿ ನಿಸ್ಸಂಶಯವಾಗಿ ದ ಕ ಜಿಲ್ಲೆಯೇದ್ವಿತೀಯ ಮಂಚೂರಿಯಾದಂತಾಗಲಿರುವ—ಆ ಕೃತರ ಸಂಘಟನೆಗೆ ನೀವೇಕೆ ಇಳಿದಿಲ್ಲ? ಕಾರಣವಿಷ್ಟೆ ಅವರೆಲ್ಲಾ ದೂರದ ಹಳ್ಳಿಗಳಲ್ಲಿ ದೂರದೂರದ ಮನೆಗಳಲ್ಲಿ ವಾಸಿಸುವವರು. ನಮ್ಮ ಕಮ್ಯೂನಿಸ್ಟರು ಧನಿಕರನ್ನು ತುಳಿಯುವವರೇ ಹೊರತು ಕಲ್ಲುಮುಳ್ಳುಗಳನ್ನು ತುಳಿಯುವವರಲ್ಲ. ಬೀಡಿ, ಮಗ್ಗ, ಕಾರ್ಯಾಲಯಗಳ ಕೆಲಸಗಾರರಂತೆ ಪೇಟೆ ಪಟ್ಟಣಗಳ ಒಂದೊಂದು ಕಡೆಗಳಲ್ಲೇ ಗುಂಪುಗುಂಪಾಗಿ ಅವರು ಸಿಕ್ಕಬೇಕು; ರಾಜರಸ್ತೆಗಳಲ್ಲಿ ಮೆರವಣಿಗೆ ಹೊರಡಲು ಅವರು ದೊರೆಯಬೇಕು. ಈ ಶರ್ತಗಳನ್ನು ಪೂರೈಸಿಕೊಟ್ಟರೆ ಅವರನ್ನು ಉದ್ಧರಿಸುವ ಆಲೋಚನೆಯನ್ನು ಕಮ್ಯೂನಿಸ್ಟರು ಮಾಡುತ್ತಾರೇನೋ!

ಅಜ್ಞಾನಿಗಳ ಆಹುತಿಯಿದು!

ನಾನಿಲ್ಲಿ ಕಮ್ಯೂನಿಸ್ಟ ಕಾಮ್ರೇಡ್‌ಗಳ ಕುರಿತು ಇಂತಹ ವ್ಯಂಗ್ಯೋಕ್ತಿಯನ್ನು ಹೆಗ್ಗಳಿಕೆಯಿಂದಾಡುತ್ತಿಲ್ಲ. ದಕ್ಷಿಣ ಕನ್ನಡದ ಇತ್ತೀಚಿನ ಪ್ರಕ್ಷುಬ್ಧ ವಾತಾವರಣವು ಯಾವ ವರ್ಗದ ಉದ್ಧಾರಕ್ಕೂ ನಿರ್ಮಾಣಗೊಂಡಂತೆ ಕಾಣುವದಿಲ್ಲ. ಸರಳವಾಣಿಯಲ್ಲಿ ಹೇಳುವದಾದರೆ, ಕೆಲಸಗಾರರಂತೂ ಕೆಡುತಿದ್ದಾರೆ; ವಂಚಿಸಲ್ಪಟ್ಟಿದ್ದಾರೆ. ಇಂತಹ ಅನಪೇಕ್ಷಿತ ವಿದ್ಯಮಾನಕ್ಕೆ ಒಂದೋ ಸಾರ್ವಜನಿಕರ ಮಂಕು ಮೌಢ್ಯ ಕಾರಣವಿರಬೇಕು—ಇಲ್ಲವೇ ಈ ಸ್ಥಿತಿ ನಿರ್ಮಾಪಕರ ದುರ್ಬುದ್ಧಿ ಹೇತುವಾಗಿರಬೇಕು. ಅದು ಯಾರು, ಯಾವುದು ಎಂಬುದನ್ನು ಗಣಿಸದೇನೇ ಕಣ್ಣುಮುಚ್ಚಿ ನೋದದ ಆ ಕಡೆಗೆ ಚಾಟಿಯೇಟು ಬಾರಿಸುವದು ಅಗತ್ಯ. ಮಂಕು ತಾಗಿದ್ದವರ ಜಾಡ್ಯ ಬಿಟ್ಟೋಡಬೇಕು—ಅನ್ಯಾಯವಾಗಿ ಕೈಯಾಡಿಸುತ್ತಿರುವವರಿಗೆ ನೋವಾಗಬೇಕು ಎಂಬ ಉದ್ದೇಶದಿಂದ ಬೀಸುವ ಚಾಬೂಕಿದು. ಅಂಕೆ ಮೀರಿದ ಅನಾಚರಣೆಗಳಿಗೆ ಪೊಲೀಸರು ಕಂಠಶುದ್ಧರಿದ್ದು ಆ ವಿಶ್ವಾಸವಾಗಿ ಆತ್ಮಘಾತುಕ ಆಲಸ್ಯವಿರಬೇಕೆಂಬುದು ಖಂಡಿತ. ಆದ್ದರಿಂದಲೇ ಈ ಕೃತ್ಯಗಳ ಕುರಿತು ನಿರ್ದಾಕ್ಷಿಣ್ಯದ ನಿರ್ಭೀತಿಯ ಖಂಡನೆ ನಡೆಯಬೇಕು. ಯಾರು ಏನೇ ಹೇಳಲಿ—ಅಂತಹ ಸಂದರ್ಭದಲ್ಲಿ ನ್ಯಾಯಸಮರ್ಥನೆಗೆ ತಯಾರಾಗದವರಿಗೆ ಆತ್ಮಹತ್ಯಾದೋಷವಿದೆ!

ವಿಚಾರವುಳ್ಳ ಸುಶಿಕ್ಷಿತರನ್ನು ಸಮೀಪಿಸುವಷ್ಟು ಬುದ್ಧಿಬಲವಾಗಲೀ, ಹಳ್ಳಿಯ ರೈತರನ್ನು ಸಮೀಪಿಸುವಷ್ಟು ಶ್ರಮ ಸಹಿಷ್ಣುತೆಯಾಗಲೀ ಇಲ್ಲದ ಕಮ್ಯೂನಿಷ್ಟರು ಪೇಟೆ ಪಟ್ಟಣಗಳ ಅಜ್ಞರ ತಂಡವನ್ನು ಕೂಡಿಕೊಂಡು ತಮ್ಮಾಟವಾಡ ಹತ್ತಿದ್ದಾರೆ; ತಮ್ಮೀ ಹೆಸರನ್ನು ಸ್ಪಷ್ಟವಾಗಿ ಅಡಿ ತೋರಿಸಲಿಕ್ಕೂ ಬಾರದ ಆ ಗುಂಪನ್ನು ಕಮ್ಯೂನಿಸ್ಟರನ್ನಾಗಿ ಮಾಡಿದ್ದಾರೆ. (ದಾಖಲೆಯಲ್ಲಿ ಅವರೆಲ್ಲಾ ಏನಾಗಿದ್ದಾರೋ ನಾನರಿಯೆ-'ಕಮ್ಯೂನಿಸ್ಟ' ಹೆಸರು ಕೊಟ್ಟುದು ಸಂಬಂಧಪಟ್ಟವರ ವರ್ತನೆಯ ಮೇಲಿಂದ ಮಾತ್ರ)

ಒಬ್ಬರಿನ್ನೊಬ್ಬರನ್ನರಿಯರು!

ಅತ್ಯಂತ ದುಃಖದ ವಿಷಯವೆಂದರೆ, ತಮ್ಮ ಅಂಧಾನುಯಾಯಿ ಕೆಲಸಗಾರರ ನಿಜವಾದ ಹಿತಸಾಧನೆ ಹೇಗೆ ಎಂಬ ಗುಟ್ಟು ಈ ಮುಂದಾಳು ಕಾಮ್ರೇಡ್‌ಗಳಿಗರಿಯದು; ತಮ್ಮ ನಾಯಕರಾದ ಈ ಕಮ್ಯೂನಿಸ್ಟ ಕಲಿಗಳಿಗೆ ಬೇಕಾದುದೇನು ಎಂಬ ಅಂತರ್ಯವೇ ಕೆಲಸಗಾರರಿಗರಿಯದು. ನಿಜವಾದ ಮಜೂರ ಹಿತೈಷಿಯೊಬ್ಬನು ಕೆಲಸಗಾರನ ಇಂದಿನ ದುಸ್ಥಿತಿಗಾಗಿ, ಧನಿ ಕಮ್ಯೂನಿಸ್ಟ ಎಂಬ ಕತ್ತರಿಯಲ್ಲಿ ಸಿಕ್ಕಿರುವ ಅವನ ಅಸಹ್ಯ ಬಾಳುವೆಗಾಗಿ, ಕನಿಕರದಿಂದ ಕಣ್ಣೀರಿಟ್ಟಾನು. ಮಾಲಕರನ್ನು ದ್ವೇಷಿಸುವ ಪಾಠ ಕೆಲಸಗಾರರಿಗೆ ಕಮ್ಯೂನಿಸ್ಟರಿಂದ ದೊರೆತಿದೆ. 'ಧನಿ ಕೆಲಸಗಾರರ ರಕ್ಷಕ; ಅವ ಮಾಡಿದ್ದೆಲ್ಲಾ ಮಾನ್ಯ' ಎಂಬ ಭಾವನೆ ತೊಲಗ ಹತ್ತಿರುವದು ನಿಜಕ್ಕೂ ಸಂತೋಷ; ಆದರೆ ಈ ಸಂತೋಷದಷ್ಟೇ ದುಃಖದ ವಿಷಯವೆಂದರೆ ಕೆಲಸಗಾರರು ಬಾವಿಗೆ ಹೆದರಿ ದೂರ ಸರಿದು ಹೊಳೆಗೆ ಬಿದ್ದಿದ್ದಾರೆ; ಮಾಲಕರ ದವಡೆಯಿಂದ ತಪ್ಪಿಸಿಕೊಂಡು ಕಮ್ಯೂನಿಸ್ಟರ ... ಗಳಿಗೆ ಸಿಲುಕಿದ್ದಾರೆ. ಲೋಕದ ವ್ಯಾಪಕ್ಕೆ ಬಾಳುವೆಯಿರುವದು ನಿಜವಾದರೆ ಈ ಕೆಲಸಗಾರರು ಎಚ್ಚರಗೊಳ್ಳುವ ಕಾಲವಿರುವದೂ ಖಂಡಿತ. ಕಮ್ಯೂನಿಸ್ಟ ಕಗ್ಗತ್ತಲೆಯಲ್ಲೇ ಕಣ್ಣು ತೆರೆದು 'ನಮ್ಮೀ ರಕ್ಷಕರ ಕೈಯಿಂದ ನಮ್ಮನ್ನು ರಕ್ಷಿಸುವವರು ಬರಲಿ' ಎಂದವರು ಹಾದಿ ದೀವಿಗೆಗಾಗಿ ಹಾತೊರೆಯುವ ದಿನ ಬರಬಹುದು. ಅಂತೂ ಇದುವರೆಗೆ ಕೆಲಸಗಾರರ ಪರವಿ ಬಂದಿಲ್ಲ. ಮಾಲಕರ 'ದರೋಡೆ'ಯನ್ನು ತಪ್ಪಿಸಿ, ಕಮ್ಯೂನಿಸ್ಟ 'ದಬ ...' ನಡೆಸುವ ಸಾಹಸ ಮಾತ್ರ ನಡೆದಿದೆ. ಕಾಗೆಯ ಬಾಯಿಗೆ ಸಿಕ್ಕಿದ ಪಕ್ಕಿಯನ್ನು ಗಿಡುಗ ಬಿಡಿಸುತ್ತಿದೆ! ಎರಡರ ಬಾಯಿಯಿಂದಲೂ ಅದನ್ನು ತಪ್ಪಿಸಿ, ಸಾಕಿ ಬೆಳೆಸಿ ಅದು ಲೋಕಕ್ಕೇನೇ ಪ್ರಭಾತ ಕಹಳೆಯೂದುವ ಹುಂಜವಾಗುವಂಥಾ ವ್ಯವಸ್ಥೆ ಬರಬೇಕು.

(ಮುಂದುವರಿಯುವದು).

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

The Pangal Nayak Bank Limited.

(Incorporated in 1920.)

Registered Office. Court Road, UDIPI.

Sub-Offices at— **Udipi, Mangalore, Katapadi, Kanhangad, Kinnigoli, Nileshwar and Suratkal,** South Canara.

SEASON DEPOSITS for THREE & FOUR

months at a special rate of interest are accepted at all the above offices.

All kinds of up-to-date Banking service is provided promptly.

Please call for particulars of business.

Dated the 5th January 1946.



ಕ್ಷಣಿಕ ಗುಣಕೊಡುವ ಔಷಧವನ್ನು ಹೆಚ್ಚು ಮರುಳಾಗಬೇಡಿರಿ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ... ಇದರ ಆದನ್ನು ಬೇರುಸಹಿತ ಕಿತ್ತು ... ವುದು. ಈ ಔಷಧ ಸುರುವು ಮಾಡಿದಾಗ ಬೇರೆ ಏನನ್ನೂ ತೀರಾ ನಿಲ್ಲಿಸಬೇಕಿಲ್ಲ; ಹೊಟ್ಟೆ ... ವಾಗುವದು; ಪಚನಶಕ್ತಿಯೂ ತಿದ್ದುವದು, ಶ್ವಾಸನಳಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೀಕು, ಬೆನ್ನು ನೋವು, ... ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಸಾದಾ ...) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ... ಕಿಂಗ) ತೆಗೆದುಕೊಳ್ಳಬೇಕು.

... ಔನ್ಸ್ ... ಔನ್ಸ್ ... ಔನ್ಸ್ ಬಾಟ್ಲಿಗ ಕ್ರಮವಾಗಿ ರೂ. ... ; ... ಮತ್ತು ...

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ. ಸಿ ನಟರಾಜನ್ & ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು.

ವನಮಾಲೀ ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

PUROHIT SHWAS-HARI

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 193. ಶುಕ್ರವಾರಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್‌ಶಾಪ್ ಎದುರುಗಡೆ, ಪರೇಲ್. (3) ಜನ-ಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾದುಂಗಾ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಯ್ಸ್,

ರಥಬೀದಿ, ಉಡುಪಿ.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.

ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,

ಮಾತುಂಗಾ, ಬೊಂಬಾಯಿ.

ಇಲ್ಲಿಯೂ ಸಿಗುವದು.

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.

THE BHARATH MILLS. Ltd.

With

Dr. T. M. A. Pai, M. B., B. S.
Kochikar Panduranga Pai, Esq.
A. L. N. Rao, Esq., B. A., B. L.
Dr. K. L. Aithala, M. B., B. S.
T. N. Kelu Nambiar Esq.
Dr. V. K. Ballal, L. I. M.
T. Ramesh U. Pai, Esq.

Upendra Ananth Pai, Esq.
Dr. K. L. Aithala, M. B., B. S.
A. L. N. Rao, Esq., B. A., B. L.
Kochikar Manjunath Pai, Esq.
Kalsank Venkatraya Pai, Esq.
B. Padmanabha Pai, Esq.
T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. H. Shetty at the Navayuga Press, Udipi, S. India.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೫ ವಾರ ೩೧ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ Founder SRI A. B. SHETTY. M.L.A. | Vol. 25 No. 31

ಉಡುಪಿ ● 4-4-1946 ● ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6.

ಅಂತರಂಗ

ಉಡುಪಿ.
ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಉಳುಕು, ... ನೋವು, ವೇದನೆಗಳಿಗೂ ಎದೆನೋವು ... ರೋಗಗಳಿಗೂ ಸಿದ್ಧೌಷಧ.

REGD.

ಸರ್ವ ಔಷಧ ಅಂಗಡಿಗಳಲ್ಲಿ ಸಿಗುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಮುಂಬಾಯಿ ಮತ್ತು ಕಲ್ಕತ್ತ.

THE PROTECTION

If a mother was left unprovided for and if the children were too young to earn a livlihood and maintain the family, how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer

THE CANARA MUTUAL ASSURANCE COMPANY, LTD.,
Head Office:- **UDIPI, (S. India.)**

THE JUPITER
General Insurance Company Limited.

ದಿ ಜುಪಿಟರ್
ಜನರಲ್ ಇನ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಳೆದ ವರುಷ ನನ್ನ ಕಾರ್ಯಕ್ಷೇತ್ರದಲ್ಲಿ ಆಗಿರುವ
ವಿಮಾ ಪ್ರಗತಿಯು ಅತ್ಯಂತ ತೃಪ್ತಿಕರವಿದೆ.

ಈ ಕಾರ್ಯದಲ್ಲಿ ನನ್ನೊಡನೆ ಸಹಕರಿಸಿದ ಓರ್ಗನೈಝರರು, ಏಜೆಂಟರು, ಪೋಲಿಸಿ ಹೋಲ್ಡರರು ಮತ್ತು ಸರ್ವ ವಿಧದ ಸಹಾಯಕರು ಹಾಗೂ ಹಿತಚಿಂತಕರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪಿ. ಡಿ. ನಾಯ್ಕ, ಉಡುಪಿ.
ಚೀಫ್ ಏಜೆಂಟ್, ದ. ಕ.

THE
Bombay Life Assurance Company Ltd.
(*ESTD. 1908*)
A PREMIER INSURANCE COMPANY.

New Business in 1945 - 2,77,23,100.

KOCHIKAR BROTHERS, LTD.
(ESTD. 1910)
Chief Agents for South India including Travancore, Cochin and Mysore State

New Business in 1945 in our area:- **Over 5 Millions.**

OUR Expert advice gained by 35 years Experience is at your door FREE

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 40ರಿಂದ 6 ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಪ್ರತಿನಿಧಿಗಳು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಅಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಚ್. ನರಸಿಂಗ ರಾವ್,
ಪ್ರೊಪ್ರೈಟರ್.

ANNOUNCEMENT

We have pleasure to announce the opening of a branch of the Bank at

MERCARA
ON 23-1-1946.

The Vijaya Bank Limited.
Head Office:- **MANGALORE.**

ಕಮ್ಯೂನಿಸ್ಟ್ ಧೋರಣೆ—ಲೇಖಾಂಕ ೪

ಇವರು ಮಜೂರರ ವಂಚಕರಲ್ಲವೆ?

'ವಿಚಾರಿ'ಯಿಂದ.

ಕೆಲಸಗಾರರ ಸ್ಥಿತಿ

ಬೀಡಿ, ಮಗ್ಗ, ಹಂಚು ಕಾರ್ಖಾನೆಗಳ ಕೆಲಸಗಾರರು ಕಮ್ಯೂನಿಸ್ಟರಿಗಾಹುತಿಯಾಗಿರುವದಾದರೆ ಆ ಶಿಕ್ಷೆ ಹೊಂದಲು ಅವರಲ್ಲಿರುವ ದೋಷಗಳೇನು? ಅಥವಾ ಕಮ್ಯೂನಿಸ್ಟರಿಂದ ಉದ್ಧಾರ ಹೊಂದಿದರೆಂದೇ ಹೇಳುವದಾದರೆ ಆ ಉಡುಗೊರೆ ಪಡೆಯಲು ಅವರಲ್ಲಿರುವ ಯೋಗ್ಯತೆಯಾದರೂ ಏನು? ಮೊದಲನೆಯದಾಗಿ ಈ ವರ್ಗದ ಕೆಲಸಗಾರರು ಕಮ್ಯೂನಿಸ್ಟರಿಗೆಟಕದಷ್ಟು ದೂರದಲ್ಲಿರುವ ಹಳ್ಳಿ ಕೃತರಂತಿರದೆ ಪೇಟೆ ಪಟ್ಟಣಗಳಲ್ಲಿ ಗುಂಪುಗುಂಪಾಗಿ ಸಿಗಬಲ್ಲರು. ಎರಡನೆಯದಾಗಿ ಕಮ್ಯೂನಿಸ್ಟರನ್ನು ಅಸ್ಪರ್ಶರೆಂದು ಗಣಿಸಿರುವ ವಿದ್ಯಾರ್ಥಿ, ಅಧ್ಯಾಪಕ, ಕ್ಲಾರ್ಕ ಮೊದಲಾದ ವರ್ಗಗಳಂತಹ ವಿದ್ಯಾವಂತರು ಇವರಲ್ಲ. ಮೂರನೆಯದಾಗಿ ಮಿಕ್ಕ ಶ್ರಮಜೀವಿಗಳಿಗಿಂತ ಈ ವರ್ಗದ ಕೆಲಸಗಾರರಲ್ಲಿ ಪುಂಡು ಮನೋವೃತ್ತಿ ಅಂತೆಯೇ ಅವಿಚಾರ ಮತ್ತು ಅಂಧಾನುಕರಣೆ ಜಾಸ್ತಿ. ಕೆಲಸಗಾರರ ನಿಜವಾದ ಹಿತೈಷಿಯೊಬ್ಬನು ಈ ಮೂರು ಕಾರಣಗಳನ್ನು ಸರ್ವಥಾ ಸಮರ್ಥಿಸಲಾರ. ಅವನ ಕಾರ್ಯಕ್ಷೇತ್ರ ಇವು ಮೂರಕ್ಕೂ ವಿರುದ್ಧವಿದ್ದೀತು. ಆತ ಪ್ರಥಮತಃ ಹಳ್ಳಿಯನ್ನೇ ತನ್ನ ಕಾರ್ಯರಂಗವಾಗಿ ಆರಿಸಿಕೊಂಡಾನು; ಅವ ಮುಂದಾಗಿ ಕೆಲಸಗಾರರನ್ನು ಸುಶಿಕ್ಷಿತರನ್ನಾಗಿ ಸುಸಂಸ್ಕೃತರನ್ನಾಗಿ ಮಾಡಲು ಪ್ರಯತ್ನಿಸಿಯಾನು; ಅಂಥವನು ಕೆಲಸಗಾರರ ಒರಟು ಸ್ವಭಾವವನ್ನು ತಿದ್ದಿ, ಲಾಠಿ ಸ್ವರೂಪದಲ್ಲಿರುವ ಅದನ್ನು ಊರುಗೋಲಾಗಿ ಮಾರ್ಪಡಿಸಿಯಾನು; ಅಂಧಾನುಕರಣೆಯ ಬದಲಿಗೆ ಆಲೋಚನಾ ಶಕ್ತಿ ಹೊಳೆಯುವಂತೆ ನೋಡಿಯಾನು. ಆದರೆ ಕಮ್ಯೂನಿಸ್ಟರೇನು ಮಾಡಿದ್ದಾರೆ? ಅವರು ಕೆಲಸಗಾರರಿಗೆ ಕಲಿಸಿರುವದೇನು?

ಬೊಬ್ಬೆ ಮತ್ತು ಒಣ ಹೆಮ್ಮೆ!

ಅವರು ಕೆಲಸಗಾರರಿಗೆ ಕಲಿಸಿರುವ ವಿದ್ಯೆಯೆಂದರೆ (ಸ್ಪಷ್ಟೋಚ್ಚಾರ ಇನ್ನೂ ಕಲಿತಿಲ್ಲ) 'ಇಂಕ್ವಿಲಾಬ್ ಝಿಂದಾಬಾದ್' 'ಟ್ರೇಡ್ ಯೂನಿಯನ್ ಝಿಂದಾಬಾದ್' 'ಮಜೂರ ದ್ರೋಹಿಗಳನ್ನು ಓಡಿಸಿರಿ' 'ಮೂರು ತಿಂಗಳ ಬೋನಸ್ಸು ಸಿಗಲೇಬೇಕು'-ಬಾಯಿಪಾಠಗಳನ್ನು ಮಾತ್ರ. ಅವರು ಕೆಲಸಗಾರರ ಬುದ್ಧಿಗೆ ಸೇರಿಸಿರುವ ಸಂಸ್ಕಾರವೆಂದರೆ ಮೊದಲೇ ಒರಟುತನವಿದ್ದಲ್ಲಿ ಒಣ ಹೆಮ್ಮೆಯನ್ನು ಕೂಡಿಸಿದುದು. ಕೆಲಸಗಾರರ ಸ್ಥಿತಿ ಸುಧಾರಣೆ ಹೊಂದಲೇಬೇಕು. ಅವರಿಗೆ ಸಮಾನತೆ ಕೊಡಲೇಬೇಕು. ಹಾಗೆಯೇ ಅತನ ಮತಿ ಸುಧಾರಣೆ ಹೊಂದಲೇ ಬೇಡವೆ? ಅದೂ ಸಂಸ್ಕಾರ ಸಮಾನತೆ ಹೊಂದಬಾರದೆ? ಕಮ್ಯೂನಿಸ್ಟರ ಕಾರ್ಯ ವಿಧಾನಗಳ ಆಧಾರದಿಂದ ಹೇಳುವದಾದರೆ ಕೆಲಸಗಾರನು ಬುದ್ಧಿ ಸಂಸ್ಕಾರ ಹೊಂದುವದು ಅವರಿಗೆ ಬೇಡವಾಗಿದೆ. ಅವನ ಬುದ್ಧಿ ಸಕ್ಷಗೊಂಡರೆ ಹಿತಾಹಿತ, ಆಗತ್ಯ ಅನಗತ್ಯ, ಇವುಗಳ ಜ್ಞಾನವ ಆ ಬುದ್ಧಿಯಲ್ಲಿಯೇ ಮೂಡೀತು, ಕಮ್ಯೂನಿಸ್ಟರಿಂದದನ್ನು ಕೇಳಿ ತಿಳಿಯುವ ಅವಶ್ಯಕತೆ ಅವನಿಗುಳಿಯದು. ಆವರ ತಲೆಗೆ ಹೊಳೆಯದುದನ್ನು ತಿಳಿಸುವದನ್ನಾಧರಿಸಿಕೊಂಡೇ ಕಮ್ಯೂನಿಸ್ಟ್ ಧುರೀಣತ್ವ ನಿಂತಿರುವಾಗ, ಕೆಲಸಗಾರರಲ್ಲಿ ಸ್ವಯಂಶಕ್ತಿ ಹುಟ್ಟಿಸಿ ಕಮ್ಯೂನಿಸ್ಟರು ತಮ್ಮ ಕಾಲಿಗೆ ತಾವೇ ಕೊಡಲಿ ಹಾಕಿಕೊಂಡಾರೆ? ಆದ್ದರಿಂದ ಅವರು ತಮ್ಮ ಕಾರ್ಯಕ್ಕೆಷ್ಟು ಬೇಕೋ ಅಷ್ಟನ್ನು ಮಾತ್ರ ಕೆಲಸಗಾರರಿಗೆ ಕಲಿಸಿಕೊಟ್ಟಿದ್ದಾರೆ; ಕೆಲಸಗಾರರ ಅಭಿವೃದ್ಧಿಗೆ ಯಾವುದು ಬೇಕೋ ಅದನ್ನವರಿಗೆ ಕಲಿಸಿಕೊಡುವ ಸ್ವಘಾತುಕ ಕೃತ್ಯ ಮಾಡುವದಿಲ್ಲ. ಕಮ್ಯೂನಿಸ್ಟ್ ದಳವು ಅಂತಹ ಆತ್ಮಹತ್ಯಾ ದಳವಲ್ಲ. ಅವರು ತಾವೂ ಕೆಲಸಗಾರ ವರ್ಗವೆಂಬಂತೆ ನಟನೆ ಮಾಡಿ ತೋರಿಸಿಕೊಳ್ಳುತಿದ್ದಾರೆ, ಹೊರತು ಕೆಲಸಗಾರರೇ ತಮ್ಮಂತಾಗಬೇಕೆಂದು ಬಯಸುವದಿಲ್ಲ.

ವ್ಯಕ್ತಿಶಃ ಯೋಗ್ಯರಿವರು

ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯೂನಿಸ್ಟ್ ತರುಣರ ಪರಿಚಯ ನನಗಿದೆ. ಜಿಲ್ಲೆಯ ಮೇಲ್ದರ್ಜೆಯ ಯಾವನೊಬ್ಬ ನಾಗರಿಕನಿಗೂ ಕೀಳೆನಿಸದಷ್ಟು ಸುಸಂಸ್ಕೃತರವರು. ಇದ್ದ ಸ್ಥಿತಿಯೇ ಇದ್ದು ಕೊಳ್ಳಲಿ ಎಂದು ಬಯಸುವ ಸ್ಥಿತಿಭಕ್ತರ, ಈ ಕಾಮ್ರೇಡ್‌ಗಳೆಲ್ಲಾ ಒರಟು ಸ್ವಭಾವಿಗಳೆಂಬ ತಪ್ಪಭಿಪ್ರಾಯ ಕಟ್ಟಿಕೊಂಡಿದ್ದಾರೆ ಪುಂಡುತನ ಮತ್ತು ಜಗಳಾವಕಾಶಗಳನ್ನು ನಿರ್ಮಿಸಿಯೇ ಬಾಳುವ ಪರೋಪಜೀವಿಗಳ ಸಾಲಿನಲ್ಲಿ ಕಮ್ಯೂನಿಸ್ಟ್ ಕಾರ್ಯಕರ್ತರನ್ನೂ ಸೇರಿಸುವವರಿದ್ದಾರೆ. ಇದು ಶುದ್ಧ ತಪ್ಪಭಿಪ್ರಾಯ. ಇವರಂತೆಯೇ ಈ ಕಮ್ಯೂನಿಸ್ಟ್ ತರುಣರು ಸ್ವಂತ ಜೀವನವನ್ನು ಸಾಗಿಸುವದೊಂದನ್ನೇ ತಮ್ಮ ಗುರಿಯಾಗಿಟ್ಟುಕೊಂಡಲ್ಲಿ ಆ ಹಾದಿಯಲ್ಲೂ ತಮ್ಮನ್ನಾರೋಪಿಸುವವರನ್ನು ಹಿಂದೆ ಹಾಕುವಷ್ಟು ವಿದ್ಯೆ, ಬುದ್ಧಿ, ಅನುಭವ, ಚಾತುರ್ಯ, ಎಲ್ಲವೂ ಇದ್ದವರೇ ಇವರೆಲ್ಲ. ಹಾಗಿಲ್ಲದಿರುತಿದ್ದರೆ, ಈ ತರುಣರು ಅನಾಗರಿಕ ಪರಾವಲಂಬಿಗಳಾಗಿರುತಿದ್ದರೆ, ಕಮ್ಯೂನಿಸ್ಟ್ ಕಗ್ಗಂಟನ್ನೊಡೆಯುವ ಕೆಲಸವೇ ಇರುತ್ತಿರಲಿಲ್ಲ. ಅಜ್ಞಾನಿಗಳನ್ನೂ ಪರಾವಲಂಬಿಗಳನ್ನೂ ಸುಧಾರಿಸುವ ಕಾರ್ಯಕ್ರಮದಲ್ಲೇ ಇವರನ್ನು ತಿದ್ದುವ ಕೆಲಸವೂ ಆಗಿ ಹೋಗುತಿತ್ತು. ಕಮ್ಯೂನಿಸ್ಟ್ ಬಂಧುಗಳು ಶಿಕ್ಷಿತರು, ಸಂಸ್ಕೃತರು, ಶಕ್ತರು ಮತ್ತು ಯೋಗ್ಯರು. ಆದರೆ ವಿಶ್ವಾಸಪೂರ್ವಕ ತಪ್ಪು ಹಾದಿ ಹಿಡಿದ ಪ್ರಸಂಗಾವಧಾನಿಗಳೂ ಸಂದರ್ಭಸಾಧಕರೂ ಆಗಿರುವುದರಿಂದಲೇ ಅವರ ಕೋಟೆಯನ್ನೊಡೆಯುವ ಪ್ರಯಾಸವಿದೆ.

ಎರಡೂ ಒಂದೇ

ಮಾಲಕರಿಗೆ 'ನಾವು ಧನಿಗಳು-ಅವರು ಕೆಲಸಗಾರರು' ಎಂಬುದು ಗೊತ್ತಿರುವಷ್ಟೇ ಈ ತರುಣರಿಗೂ 'ನಾವು ಮುಂದಾಳುಗಳು-ಅವರು ಅನುಯಾಯಿಗಳು' ಎಂಬುದರ ಪ್ರಜ್ಞೆಯಿದೆ. ತಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳಲು ಧನಿಗಳು ಉಪಯೋಗಿಸುವಷ್ಟೇ ಮೋಹಕ ವಿದ್ಯೆ, ಆಕೆ ಭರವಸೆಗಳನ್ನು ಇವರೂ ಸ್ವಸ್ಥಾನ ರಕ್ಷಣೆಗಾಗಿ ಪ್ರದರ್ಶಿಸಬಲ್ಲರು. ಇವೆರಡು ಸ್ವಹಿತಸಾಧಕ ಪಂಗಡಗಳ ಹೋರಾಟದಲ್ಲಿ ಕೆಲಸಗಾರರು ಮಾತ್ರ ಬ್ರಿಟಿಷರನ್ನೋಡಿಸಿ ಜಪಾನರು ನಿಂತಿದ್ದ, ಅಥವಾ ಇಂದು ಜಪಾನರನ್ನೋಡಿಸಿ ಬ್ರಿಟಿಷರು ನಿಂತಿರುವ ಬರ್ಮದಂತಾಗಿದ್ದಾರೆಂದೇ ವಿಚಾರಿಯ ಸಂತಾಪ. 'ಕೆಲಸಗಾರರ ಸಮ್ಮತಿಯಿಂದಲೇ ನಾವವರ ಕೆಲಸಮಾಡುತಿದ್ದೇವೆ' ಎಂಬ ಕಮ್ಯೂನಿಸ್ಟ್ ವಾದಕ್ಕೆ ಬೆಲೆಯಿಲ್ಲ. ಕೆಲಸಗಾರರ ಸಮ್ಮತಿ ಧನಿಗಳಿಗಿ [illegible] ಯು ಸ್ವಾರ್ಥಪೂರಿತ ಆಜ್ಞೆಯನ್ನೆಲ್ಲಾ ಕೆಲಸಗಾರನು ಸಂತೋಷಪೂರ್ವಕವಾಡುತ್ತಿರಲಿಲ್ಲವೆ? ಇಂದು ಆ ಸಮ್ಮತಿಯನ್ನು ಕಮ್ಯೂನಿಸ್ಟರು ತಮ್ಮ ಕಡೆಗೆ ತಿರುಗಿಸಿಕೊಂಡಿರಬಹುದು; ನಾಳೆ ಕಾಂಗ್ರೆಸ್ ಮಜದೂರ್ ಸಂಘಗಳವರು ಅವನ್ನೇ ಇಲ್ಲಿಂದ ತಮ್ಮ ಕಡೆಗೆ ತಿರುಗಿಸಿಕೊಳ್ಳಬಹುದು. ಮಜೂರನು ತನ್ನನ್ನು ತಾನರಿಯುವ ವರೆಗೆ ಹೀಗೆ ತಿರುಗುತ್ತಾ ಹೋದಾನು; ವಿದ್ಯೆ, ಬುದ್ಧಿ, ಚೇತನ ಬರುವ ಮನುಷ್ಯನಾಗುವ ವರೆಗೂ ಕೈಬೆತ್ತದಂತೆ ಆತನು ಕೈಬದಲಾವಣೆಹೊಂದಿಯಾನು. ಆದರೆ ತನ್ನನ್ನು ಊರಿಸಿಂತ ಮಾಲಕನ ಕೈಯಿಂದ ಜಾರಿ, ಬೀಸಿ ಹೊಡೆಯುವ ಕಮ್ಯೂನಿಸ್ಟನ ಕೈಗೆ ಬಂದ ಮಾತ್ರಕ್ಕೆ ಆ ಬೆತ್ತವು ಸಜೀವವಾಯಿತೆಂದು ಭಾವಿಸಬೇಕೆ? ಕೂಡದು; ಕರ್ಮಜೀವಿ ಕೊರಡಾಗಿರುವ ಬದಲಿಗೆ ಪ್ರಥಮತಃ ಮನುಷ್ಯನಾಗಿಕೊಳ್ಳಬೇಕು. ಆ ಮಾನುಷತ್ವವನ್ನು ಒದಗಿಸಿ ಕೊಡುವವರು—ಮನುಷ್ಯ ಸಹಜ ಹಕ್ಕು ಸ್ಥಾನಮಾನಗಳನ್ನು ಸಂಪಾದಿಸಿ ಕೊಡತಕ್ಕವರು-ಮಾತ್ರವೇ ಅವನ ಉದ್ಧಾರಕರು. ಈ ದೃಷ್ಟಿಯಿಂದ ನಿನ್ನೆ ಧನಿಯೂ ಅವನ ಉದ್ಧಾರಕನಾಗಿರಲಿಲ್ಲ; ಇಂದು ಕಮ್ಯೂನಿಸ್ಟನೂ ಅವನ ಉದ್ಧಾರಕನಾಗಿಲ್ಲ; ನಾಳೆ ಇದೇ ಮಾದರಿಯ ಬೇರೆಯವನು ಬಂದರೂ ಅವನು ಕೆಲಸಗಾರನ ಉದ್ಧಾರಕನಾಗಲಾರ.

ಕಮ್ಯೂನಿಸ್ಟರ ಪ್ರಚಾರ ರೀತಿ

ನಾನು ಮೇಲ್ಗಡೆ ಪ್ರಸ್ತಾಪಿಸಿದಂತೆ ದಕ್ಷಿಣಕನ್ನಡ ಜಿಲ್ಲೆಯ-ಪ್ರಾಯಶಃ ಎಲ್ಲಾ ಕಡೆಯ ಕಮ್ಯೂನಿಸ್ಟರೂ ಹೀಗೆಯೇ-ಕಮ್ಯೂನಿಸ್ಟ್ ತರುಣರು ಕಲಿತಿರುವ ವಿದ್ಯೆ ಹೆಚ್ಚಾಯಿತೇ ಹೊರತು ಕಡಿಮೆಯಾಗಿಲ್ಲ. ಅವರು ಮಿಕ್ಕೆಲ್ಲಾ ವರ್ಗದ ಸ್ವಸಾಧಕರಂತೆಯೇ ಕೆಲಸಗಾರರ ಸ್ವಭಾವವೇನೆಂಬುದನ್ನು ಸರಿಯಾಗಿ ಬಲ್ಲರು; ಅವರ ಭಾಷೆಯಲ್ಲೇ ಮಾತಾಡಬಲ್ಲರು. ಹೀಗಾಗಿ ಜಿಲ್ಲೆಯ ಸಾರ್ವಜನಿಕ ರಂಗದಲ್ಲಿ ಇದುವರೆಗೆ ಕೇಳಿಬಂದಿರದಂತಹ ಅಸಭ್ಯ ಮಾತುಗಳನ್ನು, ಅಸಹ್ಯ ಟೀಕೆಗಳನ್ನು, ನಾವು ಕಮ್ಯೂನಿಸ್ಟರ ಬಾಯಿಯಿಂದ ಕೇಳಿದ್ದೇವೆ. "ಅಗೋ ನೋಡಿ, ನಮ್ಮ ಬೆವರಿನ ಹಣವು ಧನಿಯ ಹೆಂಡತಿಯ ಕಿವಿಯಲ್ಲಿ ವಜ್ರದ ಬೆಂಡೋಲೆಯಾಗಿ ನೇತಾಡುತ್ತಿದೆ" "ನಮ್ಮ ಈ....ಬೇಡಿಕೆಯನ್ನು ಸಲ್ಲಿಸದಿದ್ದರೆ ರಕ್ತಪಾತವಾದೀತು" "ನಿಮ್ಮ ಹೊಟ್ಟೆಗೆ ಹಿಡಿದ ಬೆಂಕಿಯನ್ನು...ಹತ್ತಿಸಬೇಕು." "ಮಾಲಕರೆಂದರೆ ಕಳ್ಳರು ಅಂದರೆ ಕಳ್ಳಸಂತೆ ಮಾಡುವವರು,....ರು....ಗಳು"—ಉಲ್ಲೇಖಿಸಲು ಸಾಧ್ಯವಾಗಬೇಕೆಂಬುದಕ್ಕಾಗಿ ಮೃದು ವಾಕ್ಯಗಳನ್ನೇ ಹೆಕ್ಕಿ ತೋರಿಸಿದ ಸ್ಯಾಂಪಲ್‌ಗಳಿವು. ವಸ್ತುಸ್ಥಿತಿ ತಾವು ತೋರಿಸಿದಂತಿರುವದೂ ಇಲ್ಲ; ತಾವು ಅರ್ಭಟಿಸಿದಂತಾಗುವದೂ ಇಲ್ಲವೆಂಬುದು ಮಿಕ್ಕವರಿಗೆ ಗೊತ್ತಿದ್ದಷ್ಟೇ ಈ ಭಾಷಣಗಾರರಿಗೂ ತಿಳಿದಿದೆ. ಆದರೆ ಅನ್ಯರ ಕಿವಿ, ಕಂಠದ ಮೇಲೆ ಕಣ್ಣಿಡುವ ಮನೋವೃತ್ತಿಯವರಿಗೆ ವಜ್ರದ ಬೆಂಡೋಲೆಯನ್ನು ತೋರಿಸಿದರೇನೇ ಅರ್ಥವಾದೀತು, ರವಷ್ಟು ತಪ್ಪಿಗೂ ನೆತ್ತರಿಗಾಗಿ ಹಂತೊರೆಯುವ ಹೃದಯವು ರಕ್ತಪಾತದ ಪ್ರ

[೧೧ನೇ ಪುಟ ನೋಡಿರಿ]

CANARA BANK LIMITED

Estd: 1906

(Incorporated in British India. Liability of Members Limited.)

SEASON DEPOSITS.

of Rs 10000/- and over in multiples of Rs. 1000/- and maturing within 30th September 1946 are now accepted at the following rates:—

3 months	2¼%
4 to 5 months	2½%
6 to 9 months	2¾%

Rates for Season Deposits of less than Rs 10000/- with a minimum of Rs. 1000/- and in multiples of Rs 500/- may be ascertained on application to our nearest branch.

★ ಮದ್ರಾಸ್ ಎಸೆಂಬ್ಲಿ ಚುನಾವಣೆ— ★

ಮದ್ರಾಸ್ ಎಸೆಂಬ್ಲಿಯಲ್ಲಿರುವ ಸ್ಥಾನಗಳು 215. ಆ ಪೈಕಿ ಮಾರ್ಚ ಅಂತ್ಯದವರೆಗೆ 209 ಸ್ಥಾನಗಳ ಫಲಿತಾಂಶ ತಿಳಿದು ಬಂದಿದೆ.

ಪಕ್ಷ ಬಲ:—

ಕಾಂಗ್ರೆಸ್ 161.

ಮುಸ್ಲಿಂ ಲೀಗ್ 28.

ಕಮ್ಯೂನಿಸ್ಟ 2

ಯುರೋಪಿಯನ್ 7.

ಸ್ವತಂತ್ರರು 11.

ಎಸೆಂಬ್ಲಿಯ ಒಟ್ಟು ಸ್ಥಾನಗಳ ಪೈಕಿ ಹರಿಜನರಿಗೆ ರಿಜರ್ವ್ ಆಗಿದ್ದ 30 ಸ್ಥಾನಗಳ ಸಮೇತ 146 ಸಾಮಾನ್ಯ ಮತದಾರ ಕ್ಷೇತ್ರಗಳು. ಈ 146ರ ಪೈಕಿ 20 ಫಲಿತಾಂಶ ಗೊತ್ತಾಗಿಲ್ಲ. ಉಳಿದ 144 ಸ್ಥಾನಗಳಲ್ಲಿ ಒಂದೂ ಬಿಡದೆ ಕಾಂಗ್ರೆಸಿಗೇನೇ ದೊರಕಿವೆ. ಸ್ವತಂತ್ರರಾಗಿ, ರೋಯಿಸ್ಟರಾಗಿ, ಕಮ್ಯೂನಿಸ್ಟರಾಗಿ, ಹಿಂದೂ ಸಭಾವಾದಿಗಳಾಗಿ ಕಾಂಗ್ರೆಸನ್ನು ಸ್ಪರ್ಧಿಸಿದವರಲ್ಲಿ ಒಬ್ಬನೇ ಒಬ್ಬನೂ ಗೆದ್ದು ಬಂದಿಲ್ಲ. ಹೆಚ್ಚಿನವರ ಡಿಪೋಜಿಟ್ ಹಣಕ್ಕೇನೇ ಸೊನ್ನೆ ಬಿದ್ದಿದೆ. ಕಾದಿಟ್ಟ ಸ್ಥಾನಗಳ ಪೈಕಿ ಮಹಿಳೆಯರ ಪಾಲಿನ 5, ಹಿಂದೀ ಕ್ರೈಸ್ತರ 5, ಕೂಲಿಗಾರರ 1, ಜಮೀನ್ದಾರರ 2, ಹಿಂದುಳಿದ ವರ್ಗದ 1 ಸ್ಥಾನಗಳನ್ನು ಕಾಂಗ್ರೆಸ್ ಸಂಪಾದಿಸಿದೆ. ಕಮ್ಯೂನಿಸ್ಟರು ಕೂಲಿಗಾರರ 2 ಸ್ಥಾನಗಳನ್ನು ಮಾತ್ರ ಸಂಪಾದಿಸಿದ್ದಾರೆ. ಮಹಿಳೆಯರ 1 ಸ್ಥಾನ, ಕ್ರಿಶ್ಚಿಯನರ 4, ಜಾಮೀನ್ದಾರರ 4, ದಕ್ಷಿಣ ಭಾರತ ಚೇಂಬರ್ ಓಫ್ ಕಾಮರ್ಸಿನ 1, ಮತ್ತು ನಾಟುಕೋಟೆನ ಗರಕಾರರ 1 ಸ್ಥಾನಗಳು ಸ್ವತಂತ್ರ ಉಮೇದ್ವಾರರುಗಳಿಗೆ ದೊರಕಿವೆ.

ಮದ್ರಾಸ್ ಎಸೆಂಬ್ಲಿಯಲ್ಲಿ ಮುಸ್ಲಿಮರ ಪಾಲಿಗೆ ಕಾದಿಡಲ್ಪಟ್ಟಿರುವ ಸ್ಥಾನಗಳು 29. ಅವುಗಳಲ್ಲೊಂದು ಮಹಿಳಾ ಸ್ಥಾನ. ಆ ಪೈಕಿ ಒಂದರ ಫಲಿತಾಂಶ ಮಾತ್ರ ಇನ್ನು ಪ್ರಕಟವಾಗಬೇಕು. ಪರಿಣಾಮ ಗೊತ್ತಾದ 28 ಸ್ಥಾನಗಳನ್ನೂ (ಒಂದು ಮಹಿಳಾ ಸ್ಥಾನ ಸಮೇತ) ಮುಸ್ಲಿಂ ಲೀಗ್ ಗೆದ್ದಿದೆ. ಅದರ ವಿರುದ್ಧ ಸ್ಪರ್ಧಿಸಿದ ಮಜ್ಲೀಸ್, ಕಾಂಗ್ರೆಸ್ ಮೊದಲಾದ ರಾಷ್ಟ್ರೀಯ ಮುಸಲ್ಮಾನರೆಲ್ಲಾ ಪರಾಜಿತರಾದುದು ಮಾತ್ರವಲ್ಲ; ಹೆಚ್ಚಿನವರು ತಮ್ಮ ಡಿಪೋಜಿಟ್ ಕಳಕೊಂಡರು.

ಈ ರೀತಿ ಮಿಕ್ಕೆಲ್ಲಾ ಪ್ರಾಂತ್ಯಗಳಿಗಿಂತ ಸ್ಪಷ್ಟವಾಗಿ ಮದ್ರಾಸ್ ಪ್ರಾಂತಿಕ ಚುನಾವಣೆಯು ಕಾಂಗ್ರೆಸ್ ಮತ್ತು ಲೀಗಿನ ಪ್ರಾಬಲ್ಯವನ್ನು ಪ್ರದರ್ಶಿಸಿತೆನ್ನಬೇಕು.

ಮತದಾರರ ಬೆಂಬಲ ಯಾರಾರಿಗೆ ಎಷ್ಟೆಷ್ಟು?

ಕಾಂಗ್ರೆಸ್ ಕಮ್ಯೂನಿಸ್ಟ ಜಟಾಪಟಿ!

ತಮಿಳು, ಆಂಧ್ರ, ಕೇರಳ ಮತದಾರ ಕ್ಷೇತ್ರಗಳಲ್ಲಿ ಕಮ್ಯೂನಿಸ್ಟ ಹುರಿಯಾಳುಗಳಿದ್ದಲ್ಲೆಲ್ಲಾ ಹಿಂಸಾತ್ಮಕ ಜಗಳಗಳಾಗಿದ್ದುವು. ಕೆಲವೆಡೆ 144ನೇ ಸೆಕ್ಷನ್ ಕೂಡಾ ಜ್ಯಾರಿಯಾಗಿತ್ತು. ಅ. ಭಾ. ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿ ಪಿ. ಸಿ. ಜೋಶಿಯವರು ಈ ಭಾಗಗಳಲ್ಲಿ ಸಂಚಾರ ಮಾಡಿ "ಲಾಠಿ ಹಿಡಿದುಕೊಂಡೇ ಸಭೆಗಳಿಗೆ ಹೋಗಿ; ಒಂದಕ್ಕೆ ಹತ್ತರಂತೆ ಪ್ರತಿಯಾಗಿ ಹೊಡೆಯಿರಿ" ಎಂದು ಕಮ್ಯೂನಿಸ್ಟರನ್ನು ಹುರಿದುಂಬಿಸಿದ್ದರೆಂದು ತಿಳಿದು ಬರುತ್ತದೆ. 'ಕಮ್ಯೂನಿಸ್ಟರಿದಿರು ಲಾಠಿಧಾರಿಗಳಾಗಬೇಕು' ಎಂದು ಡಾ| ಪಟ್ಟಾಭಿಗಳು ಮೊದಲೇ ಹೂಂಕರಿಸಿದ್ದಂತೆ ಆ ಭಾಗಗಳ ಕಾಂಗ್ರೆಸಿಗರಾದರೂ ಹಿಂಸೆಗೆ ಪೂರ್ಣ ವಿಮುಖರಾಗಿದ್ದರೆಂದು ಹೇಳಲಾಗುವದಿಲ್ಲ. ಹೀಗಾಗಿ ಕಾಂಗ್ರೆಸ್-ಕಮ್ಯೂನಿಸ್ಟ ಕಾಳಗಗಳು ಹಲವು ಕಡೆ ನಡೆದಿದ್ದುವು; ರಕ್ತ ಸುರಿದಿತ್ತು; ಆಸ್ಪತ್ರೆಗಳ ಮಂಚಗಳು ತುಂಬ ಬೇಕಾಗಿ ಬಂದಿತ್ತು. ಒಂದೆಡೆಯ ಕಾಂಗ್ರೆಸ್ ಉಮೇದ್ವಾರಿಯ ಮೈಮೇಲೇನೇ ಕಮ್ಯೂನಿಸ್ಟರೇರಿ ಬಂದು ಅವರನ್ನೂ ಅವರ ಪ್ರಾಣ ರಕ್ಷಣೆಗೆ ಬಂದ ಇತರ ಕಾಂಗ್ರೆಸ್ ಕೆಲಸಗಾರರನ್ನೂ ಜಖಂಗೊಳಿಸಿದ್ದರು. ಹೊಡೆತಗಳ ಮಟ್ಟಿಗೆ ದಕ್ಷಿಣ ಭಾರತದಲ್ಲಿ ಕಮ್ಯೂನಿಸ್ಟರೇ ಮೇಲ್ಗೈ ಎಂಬುದನ್ನು ಈ ಚುನಾವಣಾ ಕಾಳಗಗಳು ತೋರಿಸಿದ್ದುವು.

ಜಸ್ಟೀಸ್ ಪಕ್ಷ ಈ ಬಾರಿ ಅಂತರ್ಧಾನ ಹೊಂದಿವೆಯಷ್ಟೆ? ಸ್ವತಂತ್ರರಾಗಿ ಆ ಪಕ್ಷದ ಹಲವರು ಸ್ಪರ್ಧಿಸಿದ್ದರು; ಯಾರೂ ಗೆಲ್ಲಲಿಲ್ಲ.

ಅತ್ಯಂತ ದುರ್ದೈವೀ ಪಕ್ಷವೆಂದರೆ ಹಿಂದೂ ಮಹಾಸಭೆ. ಅಖಿಲ ಭಾರತದ ಯಾವ ಪ್ರಾಂತ್ಯದಲ್ಲೂ ಯಾವದೊಂದು ಮೂಲೆಯಲ್ಲೂ ಅವರು ಗೆದ್ದಂತೆ ಕಾಣುವದಿಲ್ಲ. 11 ಪ್ರಾಂತಿಕ ಎಸೆಂಬ್ಲಿಗಳಲ್ಲಿ ಪ್ರಾಯಶಃ ಒಟ್ಟಿಗೆ ಮೂರು ನಾಲ್ಕು ಮಂದಿ ಹಿಂದೂ ಸಭಾ ಪ್ರತಿನಿಧಿಗಳಿದ್ದಿರಬೇಕು; ಮದ್ರಾಸ್ ಎಸೆಂಬ್ಲಿಗೆ ಒಬ್ಬನೇ ಒಬ್ಬ ಆರಿಸಲ್ಪಟ್ಟಿಲ್ಲ

ಕೆಲವು ಫಲಿತಾಂಶಗಳು

ಈ ಬಾರಿಯ ಚುನಾವಣೆಯ ವೈಶಿಷ್ಟ್ಯ ಮತ್ತು ಜನಮತವು ಹೇಗೆ ಪ್ರವಹಿಸುತ್ತಿದೆ ಎಂಬುದನ್ನು ತೋರಿಸುವದಕ್ಕಾಗಿ ಕೆಲವು ಮಾದರೀ ಮತದಾರ ಕ್ಷೇತ್ರಗಳಲ್ಲಿ ಬಿದ್ದ ಮತಗಳನ್ನು ಇಲ್ಲಿ ಕೊಡಲಾಗಿದೆ:-

ಹೊಸೂರು ಸಾಮಾನ್ಯ ಮತದಾರ ಕ್ಷೇತ್ರ-ಶ್ರೀ. ಎನ್. ನಾಗರಾಜ ಮೋನಿಗಾರ್ (ಕಾಂಗ್ರೆಸ್) 13563; ಡಾ| ಎನ್. ಅಣ್ಣಾಜಿ (ಕಮ್ಯೂನಿಸ್ಟ) 7335.

ಬಂದಾರ್ ಸಾಮಾನ್ಯ ಮತದಾರ ಕ್ಷೇತ್ರಗಳ ಎರಡು ಸ್ಥಾನ—ಶ್ರೀಮತಿ ವಿ. ಸೀತಾಮಹಾಲಕ್ಷ್ಮಮ್ಮ (ಕಾಂಗ್ರೆಸ್) 69319 ವಿ. ಕೂರ್ಮಯ್ಯ (ಕಾಂಗ್ರೆಸ್-ಹರಿಜನ) 70,931. ಚಿ. ವಾಸುದೇವರಾವ್ (ಕಮ್ಯೂನಿಸ್ಟ) 27909, ಗುಂಟೂರು ಬಾಪಿನಿಯ್ಯಾ (ಕಮ್ಯೂನಿಸ್ಟ—ಹರಿಜನ) 29,190. ಕೆ. ಸೂರ್ಯಪ್ರಕಾಶರಾವ್ (ಅಂಬೇಡ್ಕರ್ ಪಕ್ಷ) 3,146. ಶ್ರೀ. ಎಸ್. ಶ್ರೀರಾಮುಲು (ರೋಯಿಸ್ಟ) 1124. ಕೊನೆಯವರ ಡಿಪೋಸಿಟಿಗೆ ನಾಮ ಬಿತ್ತು.

ಪಶ್ಚಿಮ ಕರಾವಳಿಯ ಜಮೀನ್ದಾರ್ ಕ್ಷೇತ್ರ-ಶ್ರೀ. ಕೆ. ಟಿ. ಕುನ್ನಿಕನ್ನರನ್ ನಂಬಿಯಾರ್ (ಕಾಂಗ್ರೆಸ್) 225, ಶ್ರೀ. ಆರ್. ಎಮ್. ಪಾಲಟ್ (ಹಿಂದೂ ಮಹಾ ಸಭಾ) 75.

ಪೂರ್ವ ಗೋದಾವರಿ ಕೂಲಿಗಾರರ ಕ್ಷೇತ್ರ-ಬಿ. ಎಸ್. ಮಲ್ಲಿ ಕಾರ್ಜುನರಾವ್ (ಕಾಂಗ್ರೆಸ್) 4967, ವಿಜಯ ಕುಮಾರ್ (ಕಮ್ಯೂನಿಸ್ಟ) 4356, ಪಿ. ವೆಂಕಟರಾವ್ (ರೋಯಿಸ್ಟ) 1530.

ಬೆಜವಾಡಾ ಮತದಾರ ಕ್ಷೇತ್ರ ಎರಡು ಸ್ಥಾನ-ಕೆ. ಸೂರಯ್ಯ (ಕಾಂಗ್ರೆಸ್) 69 680. ಕೆ. ವೀರ ರಾಘವಲು (ಕಾಂಗ್ರೆಸ್) 68 106, ಕೆ. ವಿ. ನಾರಾಯಣ ರಾವ್ (ಕಮ್ಯೂನಿಸ್ಟ) 34833, ಪಿ. ಸುಂದರಯ್ಯ (ಕಮ್ಯೂನಿಸ್ಟ) 32714.

ಓಂಗೋಲೆ ಮತದಾರ ಕ್ಷೇತ್ರ. ಎರಡು ಸ್ಥಾನ—ಎಮ್ ವೆಂಕಟರಾಜು (ಕಾಂಗ್ರೆಸ್) 50906, ಪಿ. ಸುಬ್ಬಯ್ಯ (ಕಾಂಗ್ರೆಸ್) 49992, ಕೆ. ವೆಂಕಯ್ಯ (ಕಮ್ಯೂನಿಸ್ಟ) 8814 ಕೆ. ರಾಮಸ್ವಾಮಿ (ಕಮ್ಯೂನಿಸ್ಟ) 8888. ಆರ್. ವೆಂಕಟಾದ್ರಿ (ರೋಯಿಸ್ಟ) 174[illegible], [illegible] ಅರ್ಜುನದಾಸ್ (ರೋಯಿಸ್ಟ) 1573.

ಕೊಯಮುತ್ತೂರು-ಮಲಬಾರ್ ಯೂನಿಯನ್ ರಹಿತ ಟೆಕ್ಸ್ಟೈಲ್ ಕೆಲಸಗಾರರ ಕ್ಷೇತ್ರ—ಆರ್. ಕುಪ್ಪುಸ್ವಾಮಿ (ಕಾಂಗ್ರೆಸ್) 13792, ಪಿ ರಾಮಮೂರ್ತಿ (ಕಮ್ಯೂನಿಸ್ಟ) 9715.

ಮದ್ರಾಸ್ ನಗರದ ಉತ್ತರ ಭಾಗದ ಮತದಾರ ಕ್ಷೇತ್ರ-ಗುಂಟೂರು ನರಸಿಂಹ ರಾವ್ (ಕಾಂಗ್ರೆಸ್) 5384. ಡಾ| ಎ ಕೃಷ್ಣಸ್ವಾಮಿ 3564, ಕೆ. ಎಸ್. ಶೆಟ್ಟಿ (ರೋಯಿಸ್ಟ-ಪ. ಕನ್ನಡಿಗರು) 171. ಶ್ರೀ. ಕೆ. ಎಸ್. ಶೆಟ್ಟರ ಡಿಪೋಸಿಟ್ ಹೋಯಿತು.

ಮದ್ರಾಸ್ ನಗರದ ದಕ್ಷಿಣ ಭಾಗ ಕ್ಷೇತ್ರ-ಎನ್. ಎಸ್. ವರದಾಚಾರಿ (ಕಾಂಗ್ರೆಸ್) 7075, ಎಮ್. ವಿ. ಗಣಪತಿ (ಹಿಂದೂ ಸಭಾ) 510. ಶ್ರೀ. ಗಣಪತಿಯ ಡಿಪೋಸಿಟ್ ಹೋಯಿತು.

FOR LIFE ASSURANCE
CONSULT
The New Gaurdian of India Life Insrce. Co., Ltd.,
(Chairman.- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.
LOCAL OFFICES IN SOUTH KANARA
MANGALORE & KARKALA.
HEAD OFFICE
"United India Life Bldg"
Esplanade, Post Box No. 142.
MADRAS.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—
ಉಡುಪಿ ಪಂಚಾಂಗಂ
ವ್ಯಯ ಸಂ॥ 1946-'47
ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.
ಬೆಲೆ 0-4-0; Postage extra.
ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು.

ಮುಸ್ಲಿಂ ಕ್ಷೇತ್ರಗಳಲ್ಲಿ

ವಿಶಾಖ್-ಪೂರ್ವ ಗೋದಾವರಿ ಮುಸ್ಲಿಮ್ ಮತದಾರ ಕ್ಷೇತ್ರ-ಮಿ. ಮಹಮ್ಮದ್ ಇಸ್ಮಾಯಿಲ್ (ಮುಸ್ಲಿಂ ಲೀಗ್) 6188. ಬಿ. ಮುಹಮ್ಮದ್ (ಕಾಂಗ್ರೆಸ್) 112. ಕಾಂಗ್ರೆಸ್ ಉಮೇದ್ವಾರಿಯ ಡಿಪೋಸಿಟ್ ಇಲ್ಲ.

ಕೃಷ್ಣಾ, ಪಶ್ಚಿಮ ಗೋದಾವರಿ ಮುಸ್ಲಿಮ್—ಮಹಬೂಬ್ ಅಲೀ ಬೇಗ್ (ಲೀಗ್) 18207. ಮಿರ್ಜಾ ಹಸನ್ ಖಾನ್ (ಕಾಂಗ್ರೆಸ್) 865. ಎರಡನೆಯವರ ಡಿಪೋಸಿಟ್ ಸೊನ್ನೆ.

ಕರ್ನೂಲು ಜಿಲ್ಲಾ ಮುಸ್ಲಿಮ್—ಮಿ. ಹಮೀದ್ ಖಾನ್ (ಲೀಗ್). 12520. ಶಾಮ್ ಶೇರ್ ಬೇಗ್ (ಕಾಂಗ್ರೆಸ್) 1,155. ಕಾಂಗ್ರೆಸ್ ಹುರಿಯಾಳುವಿನ ಡಿಪೋಸಿಟ್ ಹೋಯಿತು.

ರಾಮ್ನಾಡ್ ಜಿಲ್ಲಾ ಮುಸ್ಲಿಂ—ಖಾನ್ ಸಾಹೇಬ್ ಸಯ್ಯದ್ ಮುಹಮ್ಮದ್ ಸಾಹೇಬ್. (ಲೀಗ್) 19208, ಮಹಮ್ಮದ್ ಅಬುಬಕರ್ ಸಾಹೆಬ್ (ಮಜ್ಲಿಸ್) 807, ಎರಡನೆಯವರ ಡಿಪೋಸಿಟ್ ಸೊನ್ನೆ.

ಕಲ್ಲಿಕೋಟೆ, ತಲ್ಲೇರಿ ಮುಸ್ಲಿಂ—ಬಿ. ಪೋಕರ್ (ಲೀಗ್) 11210, ಅಬ್ದುಲ್ಲಾ ಕೋಯಾ (ಮಜ್ಲೀಸ್) 1642 ಸೋತವರ ಡಿಪೋಸಿಟ್ ಇಲ್ಲ.

ಕೊಟ್ಟಾಯಮ್, ವೈನಾಡ್ ಮುಸ್ಲಿಮ್—ಕಾದರ್ ಕುಟ್ಟಿ (ಲೀಗ್)12607. ಟಿ. ಸಿ. ಮಹಮ್ಮದ್ (ಮಜ್ಲಿಸ್) 233. ಎರಡನೆಯವರ ಡಿಪೋಸಿಟ್ ಇಲ್ಲ

ಚಿರಕಲ್ ಮುಸ್ಲಿಮ್—ಖಾನ್ ಬಹದೂರ್ ಸುಲ್ತಾನ್ ಅಬ್ದುಲ್ ರಹಿಮಾನ್ ಆಲಿ (ಲೀಗ್) 10556. ವಿ. ಮಮ್ಮು (ಮಜ್ಲಿಸ್) 422—ಡಿಪೋಸಿಟ್ ಇಲ್ಲ

ಕಲ್ಲಿಕೋಟೆ, ಕುರುಂಬ್ರನಾಡ್ ಮುಸ್ಲಿಂ—ಪಿ. ಪಿ. ಅಸ್ಸಾನ್ ಕೋಯ (ಲೀಗ್) 23962, ಪಿ. ಹುಸ್ಸೇನ್ ಪಶಾಲ್ವಿ (ಮಜ್ಲಿಸ್) 832. ಡಿಪೋಸಿಟ್ ಇಲ್ಲ.

ಸೇಲಮ್, ಕೊಯಮುತ್ತೂರು, ನೀಲಗಿರಿ ಮುಸ್ಲಿಂ-ಎಮ್. ಎಸ್. ಅತ್ತಾವುಲ್ಲಾ (ಲೀಗ್) 25205. ಜೆ. ಎಮ್. ಎಲಿಯಾಸ್ ಸೇಟ್ (ಮಜ್ಲಿಸ್) 313, ಡಿಪೋಸಿಟ್ ಇಲ್ಲ.

ಕಾಂಗ್ರೆಸ್ ಸೋತುದೆಲ್ಲಿ?

ದಕ್ಷಿಣ ಆರ್ಕೋಟ್, ಟ್ರಿಚಿ, ಸೇಲಮ್, ಕೊಯಮುತ್ತೂರು ಹಿಂದೀ ಕ್ರೈಸ್ತ ಮತದಾರ ಕ್ಷೇತ್ರ—ಮಿ. ಪೊನ್ನುಸ್ವಾಮಿ ಮುದಲಿಯಾರ್(ಸ್ವತಂತ್ರ)14212, ಬಿ. ಎ. ರಾಜರತ್ನಮ್ (ಕಾಂಗ್ರೆಸ್) 5266.

ಉತ್ತರ ಸರ್ಕಾರದ ಹಿಂದೀ ಕ್ರೈಸ್ತ ಮತದಾರ ಕ್ಷೇತ್ರ—ಟಿ. ಜೆ. ಎಮ್. ವಿಲ್ಸನ್ (ಸ್ವತಂತ್ರ) 9406. ಪಿ. ಸತ್ಯಾನಂದಮ್ (ರೋಯಿಸ್ಟ್) 9164 ಜೆ ಇಮಾನ್ಯುವೇಲ್ (ಕಾಂಗ್ರೆಸ್) 5841.

ಮಧುರಾ, ರಾಮ್ನಾಡ್, ತಂಜಾವೂರು ಕ್ರೈಸ್ತ ಕ್ಷೇತ್ರ—ಪರಿಶುದ್ಧನಾದರ್ (ಸ್ವತಂತ್ರ) 13871, ಧರ್ಮರಾಜ ಸಂತೋಷಮ್ (ಕಾಂಗ್ರೆಸ್) 7290.

ರೈಲ್ವೇ ಟ್ರೇಡ್ ಯೂನಿಯನ್ ಕ್ಷೇತ್ರ—ಕೆ. ಅನಂತನ್ ನಂಬಿಯಾರ್ (ಕಮ್ಯೂನಿಸ್ಟ್) 12974, ಆದಿಕೇಶವಲು ನಾಯ್ಕರ್ (ಕಾಂಗ್ರೆಸ್) 5,011.

ಪಶ್ಚಿಮ ಗೋದಾವರಿ ಫ್ಯಾಕ್ಟರಿ ಕೆಲಸಗಾರ ಕ್ಷೇತ್ರ—ಪಿ ವೆಂಕಟೇಶ್ವರಲು (ಕಮ್ಯೂನಿಸ್ಟ್) 6368, ಎಮ್. ಅಪ್ಪಲಸ್ವಾಮಿ (ಕಾಂಗ್ರೆಸ್) 6107.

ಉತ್ತರ ಸರ್ಕಾರ್ದ ನಂ 1ನೇ ಜಮೀನ್ದಾರ್ ಕ್ಷೇತ್ರ-ಮಿರ್ಜಾಪುರದ ಜಮೀನ್ದಾರ್ (ಸ್ವತಂತ್ರ) 52, ವುಯ್ಯೂರಿನ ಕುಮಾರರಾಜಾ (ಕಾಂಗ್ರೆಸ್) 38.

ಬಳ್ಳಾರಿ ತಾಲೂಕು ಮಹಿಳಾ ಮತದಾರ ಕ್ಷೇತ್ರ—ಶ್ರೀಮತಿ ಎ. ಸುಮಂಗಲಮ್ಮ (ಸ್ವತಂತ್ರ) 7137, ಟಿ. ಬಿ. ಜಯಲಕ್ಷ್ಮೀಬಾಯಿ (ಕಾಂಗ್ರೆಸ್) 4543.

ದಕ್ಷಿಣ ಭಾರತ ಚೇಂಬರ್ ಓಫ್ ಕಾಮರ್ಸ್ (ವ್ಯಾಪಾರೀ) ಕ್ಷೇತ್ರ—ಪಿ. ನಟೇಶನ್ (ಸ್ವತಂತ್ರ) 117, ಜಿ. ಪಿ. ರಾಮಮೂರ್ತಿ (ಕಾಂಗ್ರೆಸ್) 108.

ಮದ್ರಾಸ್ ಪ್ರಾಂತ್ಯದ—

ಮತದಾರರ ಮನೋಗತಿಯನ್ನು ಸೂಚಿಸುವುದಕ್ಕಾಗಿ ಕೆಲವು ಮಾದರಿಗಳನ್ನು ಮಾತ್ರ ಮೇಲ್ಗಡೆ ಎತ್ತಿಕೊಳ್ಳಲಾಗಿದೆ. ಇದಿರಾಳಿಗಳ ಡಿಪೋಸಿಟ್ ಹಣವನ್ನು ಉದುರಿಸಿದವರಲ್ಲಿ ಕಾಂಗ್ರೆಸಿಗರೇ ಮೊದಲಿಗರು. ಜನಸಾಮಾನ್ಯರ ಒಂದೇ ಒಂದು ಸ್ಥಾನವಾದರೂ ಕಾಂಗ್ರೆಸೇತರರಿಗೆ ದೊರೆತಿಲ್ಲ. ಹಿಂದೂ ಮಹಾ ಸಭೆ, ಕಮ್ಯೂನಿಸ್ಟ್, ರೋಯಿಸ್ಟ್, ಮತ್ತು ಪಕ್ಷರಹಿತರಾರೂ ಅವರಿಗೆ ಬೇಕಾಗಿಲ್ಲ. ಕೆಲಸಗಾರರು ಕಾಂಗ್ರೆಸಿಗೊಲಿದ ಅರ್ಧದಷ್ಟು ಕಮ್ಯೂನಿಸ್ಟರಿಗೊಲಿದಿದ್ದಾರೆ. ಮಹಿಳೆಯರು 1/5ನೇ ಪಾಲಷ್ಟು ಮಾತ್ರ ಕಾಂಗ್ರೆಸ್ ಬಿಟ್ಟಂತಿದೆ. ಕ್ರೈಸ್ತರ್, ಸಮಪಾಲಿಗೂ ಮಿಕ್ಕಿ ಕಾಂಗ್ರೆಸಿಗೊಲಿದಂತಿದೆ. ಹರಿಜನರ ಎಲ್ಲಾ ಸ್ಥಾನಗಳೂ ಕಾಂಗ್ರೆಸಿಗೇ ದೊರೆತಿವೆ. ಜಮೀನ್ದಾರರು ಮತ್ತು ವ್ಯಾಪಾರಿಗಳೂ ಕಾಂಗ್ರೆಸೆಂದರೆ ತುಸು ಹೆದರುತ್ತಾರೆಂದು ಕಂಡು ಬಂದಿದೆ. ಮುಸಲ್ಮಾನರು ಮಾತ್ರ ಸಂಪೂರ್ಣವಾಗಿ ಮುಸ್ಲಿಂ ಲೀಗಿನ ಹಿಂದಿದ್ದಾರೆ; ಕಾಂಗ್ರೆಸ್, ರಾಷ್ಟ್ರೀಯ ಮುಸ್ಲಿಂ ಅಥವಾ ಪಕ್ಷಾತೀತರಾರೂ ಅವರಿಗೆ ಬೇಡವಾಗಿದೆ. ರೋಯಿಗಳ ರೇಡಿಕಲ್ ಡೆಮೊಕ್ರೆಟಿಕ್ ಪಕ್ಷವು ಹಿಂದೂ ಮಹಾ ಸಭೆಯಂತೆಯೇ ಯಾರಿಗೂ ಬೇಕಾಗಿಲ್ಲ. ಇದೀಗ ಮದ್ರಾಸ್ ಪ್ರಾಂತಿಕ ಚುನಾವಣೆ ಕಲಿಸಿರುವ ಪಾಠ.

ಮುಟ್ಟುಗುಳಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೀರಿದ ಕೇಸುಗಳಿಗೆ ರೂ. 5. 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಜಾಯಿದ.)

Mrs. P. DEVEE,
P. D. 9. (A. E.) Tollygunge, Calcutta.
ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

A Brilliant Record - - -

THE PROGRESS OF "POPULAR"

YEAR	NEW BUSINESS	ANNUAL INCOME	LIFE ASSCE. FUND
1934	Rs. 5,48,896	Rs. 51,969	Rs. 50,110
1938	Rs [illegible],47,931	Rs. 84,830	Rs 1,38,915
1942	Rs. 8,24,450	Rs. 1,26,250	Rs. 3,00,230
1945	**Rs. 20,30,350**	**Rs 3,07,029**	**Rs. 6,34,607**

During the last five years, the BUSINESS IN FORCE has increased by 250 and the ANNUAL INCOME by 300%. During the same period, the RENEWAL EXPENSE RATIO has been lowered from 36.3% and 13.7%.

NOW is the time to join the Company's expanding Field Force. Represent the "POPULAR" and start on to an independent career. Applications are also invited for salaried appointment as ORGANISERS and for CHIEF & DISTRICT AGENCIES on commission basis, in unrepresented areas. Liberal terms and permanent connections.

Write for particulars to:

THE MANAGING DIRECTOR,

THE POPULAR INSURANCE Co., LTD.,

Head office: MANGALORE, S. India.

ಮದ್ರಾಸ್ ಅಳಿಯಸಂತಾನ ಮಸೂದೆ.

೧ ನೀವೊಬ್ಬರೇ ಆಗಿದ್ದಲ್ಲಿ, ಕೊನೆಯ ಪಕ್ಷ ಇಡೀ ಮಸೂದೆಯನ್ನು ಮೂರು ಬಾರಿಯಾದರೂ ಓದಿ ಸರಿಯಾಗಿ ಅರ್ಥ ಮಾಡಿಕೊಳ್ಳಿ. (ಮಾರ್ಚ ತಾ. 7ರ ನವಯುಗದಲ್ಲಿ ಪ್ರಕಟವಾಗಿದೆ) ಇಟ್ಟರು ಪೂರ್ವ ವು ಒಟ್ಟಿಗೆ ಕುಳಿತು, ಅದರ ಪ್ರತಿಯೊಂದು ಭಾಗ ಮತ್ತು ಪ್ರತಿಯೊಂದು ವಾಕ್ಯವನ್ನೂ ಸದ್ಯಸ್ಥಿತಿಯೊಡನೆ ಹೋಲಿಸಿ, ಮುಂದಿನ ಪರಿಣಾಮವನ್ನು ಯೋಚಿಸಿ ವಿಮರ್ಶೆ ನಡಿಸುವದು ಉತ್ತಮ.

೨. ಈ ಮಸೂದೆಯಲ್ಲಿ ಸೂಚಿಸಲ್ಪಟ್ಟಿರುವ ಸುಧಾರಣೆಗಳು ಸಾಕಾಗಲಾರವೆಂದು ನೆನಸುವವರು ಪ್ರತಿ ಮಸೂದೆಯೊಂದನ್ನು ರೂಪಿಸಬಹುದು ಅಥವಾ ಈ ಮಸೂದೆಯ ಭಾಗಗಳನ್ನೇ ತಮ್ಮ ಅಭಿಮತಕ್ಕನುಸಾರವಾಗಿ ಬದಲಾಯಿಸಿದರೆ, ಇದೇ ಹೊಸ ರೂಪ ಹೊಂದಲಾರದೇ ಎಂಬುದನ್ನು ಆಲೋಚಿಸಬೇಕು.

೩. ಇಡೀ ಮಸೂದೆ, ಅಥವಾ ಅದರ ಯಾವುದಾದರೊಂದು ಭಾಗ, ವ, ಭಾಗಗಳು ಬೇಡವೆಂದು ತೋರುವವರು ಹಾಗೆ ಸೂಚಿಸಬಹುದು.

೪. ಸದ್ಯದ ಮಸೂದೆಯು ಸೂಚಿಸುವಂಥಾ ಅಳಿಯ ಸಂತಾನಮದುವೆಯನ್ನು ಸಿಂಧುಗೊಳಿಸುವ ಮತ್ತು ಅವಶ್ಯಕತೆ ತೋರಿದಾಗ ದಂಪತಿಗಳು ಕೋರ್ಟು ಮೂಲಕ ಅದನ್ನು ರದ್ದುಪಡಿಸಿಕೊಳ್ಳುವ ಸುಧಾರಣೆಯು ಹೊಸತು. ಅದು ಬೇಕೋ ಬೇಡವೋ? ದಾಂಪತ್ಯ ಜೀವನದಲ್ಲಿ ಕ್ರಮ ಮತ್ತು ಕಾನೂನುಗಳಿಗೆ ಪ್ರವೇಶ ದೊರೆಯುವದು ಇಷ್ಟವೋ ಅನಿಷ್ಟವೋ?

೫. ಸ್ವಜಾತೀಯ ಸ್ತ್ರೀಪುರುಷರೊಡನೆ ರೂಢಿ ಅಥವಾ ಸಂಪ್ರದಾಯ ಪ್ರಕಾರ ಜಾಹೀರಾಗಿ ಮಾಡಿಕೊಳ್ಳುವ ಮದುವೆ ಮಾತ್ರ ಈ ಸುಧಾರಣೆಯನ್ವಯ ಸಿಂಧುವಾಗಬಲ್ಲುದು. ಈ ನಿರ್ಬಂಧವಿರಬೇಕೋ ಅಥವಾ ಈ ಭಾಗದಲ್ಲಿ ಇಚ್ಛೆಯಿದ್ದವರನ್ನು ತನಗೆ ಸರಿ ತೋರುವ ರೀತಿಯಲ್ಲಿ ವಿವಾಹವಾಗುವ ಸ್ವಾತಂತ್ರ್ಯ ಬೇಕೋ?

೬. ಮದುವೆ ಸಿಂಧುತ್ವದ ವಿಭಾಗದಲ್ಲಿ ನೀವು ಸೂಚಿಸುವ ಇತರ ಬದಲಾವಣೆಗಳಾವುವು?

೭. 'ಪೋಷಣೆ ಮತ್ತು ರಕ್ಷಕತ್ವದ' ವಿಭಾಗವು ಮಿಕ್ಕ ಸುಧಾರಣಾಂಶಗಳಿಗೆ ಹೊಂದಿಕೆಯಾಗುವಂತೆ ಮಾತ್ರ ಇದೆ. ಆದರೂ ಆ ಭಾಗದಲ್ಲಿ ನಿಮ್ಮ ಆಕ್ಷೇಪ ಅಥವಾ ಸೂಚನೆಗಳಿದ್ದರೆ ಯಾವುವು?

೮. ಮರಣ ಶಾಸನವೇನೂ ಮಾಡಿದ

ಅಭಿಪ್ರಾಯ ಪ್ರಕಟಣೆಯ ಅನುಕೂಲತೆಗಾಗಿ ಕೆಲವು ಸೂತ್ರಗಳು.

[ಈ ಮಸೂದೆಯ ಸಂಬಂಧದ ಕೆಲವು ಅಭಿಪ್ರಾಯಗಳು ಪ್ರಕಟಣೆಗಾಗಿ ನಮ್ಮೆಡೆಗೆ ಬಂದಿವೆ. ಸ್ಥಳಾನುಕೂಲತೆ ನೋಡಿಕೊಂಡು ಅವುಗಳ ಸಾರಾಂಶವನ್ನು ಒಂದಿನಿಂದ ಕೊಡಲಾಗುವದು. ಮಸೂದೆಯ ಮುಖ್ಯಾಂಗಗಳಾಗಿ ನಮೂದಿಸಲ್ಪಟ್ಟಿರುವ ಮದುವೆಯ ಸಿಂಧುತ್ವ-ಕುಟುಂಬದ ಆಡಳಿತೆ-ಆಸ್ತಿ ವಿಭಾಗದ ವಿಧಾನ-ಮರಣ ಶಾಸನ ರಹಿತ ಮೃತನ ವಾರಿಸ್ದಾರಿಕೆ ಕುಟುಂಬದ ಅವಿಭಕ್ತತೆ,-ಇವುಗಳ ಸಂಬಂಧದ ಸುಧಾರಣೆಗಳ ರೂಪರೇಖೆಯನ್ನು ಸಂಬಂಧಪಟ್ಟವರು ಮನದಟ್ಟು ಮಾಡಿಕೊಂಡು ಉತ್ತರಿಸಬೇಕೆಂಬುದಕ್ಕಾಗಿ ಒಂದು ಪ್ರಶ್ನಾವಳಿಕೆಯನ್ನು ಕೊಟ್ಟಿದ್ದೇವೆ. ಗಾಢವಾಗಿ ವಿಚಾರಿಸಿಕೊಳ್ಳಬೇಕಾದ ವಿಷಯವಿದಾದ್ದರಿಂದ ವಿಮರ್ಶೆಗನುಕೂಲವಾಗುವಂತೆ ಕೆಲವು ಮುಖ್ಯ ಸೂತ್ರಗಳನ್ನೇ ಇಲ್ಲಿ ಎತ್ತಿಕೊಳ್ಳಲಾಗಿದೆಯಾದರೂ ವಾಚಕರು ಇಡೀ ಮಸೂದೆಯನ್ನು ಕೂಲಂಕುಷವಾಗಿ ಪರ್ಯಾಲೋಚಿಸುವದು ಉತ್ತಮ. ತಮ್ಮ ಅಭಿಪ್ರಾಯಗಳನ್ನು ನಿಶ್ಚಿತಾವಧಿಯೊಳಗೆ (ತಾ 15-4-46) ಬಂಟರ ಯಾನೆ ನಾಡವರ ಸಂಘದ ಕಾರ್ಯದರ್ಶಿಗಳಿಗೆ ರವಾನಿಸತಕ್ಕದ್ದೆಂದು ಮತ್ತೊಮ್ಮೆ ಜ್ಞಾಪಕಕೆ ತರುತ್ತೇವೆ. — ಸಂ. ನ.]

ದೆ ಸತ್ತವನ ಆಸ್ತಿಗಳಿಗೆ ಅವನ ತಾಯಿ ಮತ್ತು ಹೆಂಡತಿ ಮಕ್ಕಳು ಸಮಾನ ಹಕ್ಕಿನ ವಾರೀಸ್ದಾರರಾಗುವರು. ತಾಯಿ, ಹೆಂಡತಿ ಮತ್ತು ಹೆಣ್ಣು ಗಂಡು ಭೇದವಿಲ್ಲದೆ ಪ್ರತಿಯೊಬ್ಬ ಮಗುವಿಗೆ ಸಮಾನ ಪಾಲು. ಈ ಕುರಿತು ನಿಮ್ಮ ಅಭಿಪ್ರಾಯವೇನು?

೯. ಕುಟುಂಬದ ಆಡಳಿತೆಯ ಮಟ್ಟಿಗೆ 'ಯಜಮಾನನು ಪ್ರತಿ ಆಗೋಸ್ತು ತಿಂಗಳಲ್ಲಿ ಹಿಂದಿನ ಫಸಲಿಯ ಲೆಕ್ಕಪತ್ರಗಳನ್ನು ಪ್ರಾಯಸ್ಥರೆಲ್ಲರ ಪರಿಶೀಲನೆಗಾಗಿ ಮುಂದಿಡತಕ್ಕದ್ದು' ಎಂಬೊಂದು ಅಂಶವಿದೆ. ಇಷ್ಟೇ ಸಾಕೆನ್ನುವಿರಾ, ಅಥವಾ ಇದೂ ಬೇಡವೆನ್ನುವಿರಾ? ಇಲ್ಲವೇ ಈ ಕುರಿತು ನೀವು ಸೂಚಿಸುವ ಬದಲಾವಣೆಗಳೇನು?

೧೦. ಯಜಮಾನನು ಕುಟುಂಬದ ಹಿತ ಯಾ ಆವಶ್ಯಕತೆಗಲ್ಲದೆ, ೫ ವರುಷಕ್ಕೆ ಮಿಕ್ಕಿ ಭೋಗ್ಯಾದಿ, ಮುಂಗೇಣಿ ಪಡೆದು ಚಾಯಿದೇಗೇಣಿ ಇತ್ಯಾದಿ ಮಾಡಕೂಡದೆಂದು ಮಸೂದೆಯನ್ನುತ್ತದೆ. ಈ ಕುರಿತು ನೀವೇನನ್ನುವಿರಿ?

೧೧. 'ಆಸ್ತಿವಿಭಾಗ'ದಲ್ಲಿ ಒಂದು ಕವರಿನ ಬಹುಸಂಖ್ಯಾಕ ಪ್ರಾಯಸ್ಥರು ಕುಟುಂಬದ ಆಸ್ತಿಯಲ್ಲಿ ಪಾಲು ಕೇಳಿ ಪ್ರತ್ಯೇಕವಾಗಬಹುದು ಎಂದಿದೆ. ಇದು ಸರಿಯೇ, ಅಥವಾ ಬೇರೆ ವಿಧಾನಬೇಕೆ?

೧೨. ಆದರೆ ಕುಟುಂಬದ ಯಾವುದಾದರೊಂದು ಕವರಿಗೆ ಅಥವಾ ಕವರುಗಳಿಗೆ ಸಮಾನ ಸಂಬಂಧವಿರುವ ಹಿರಿಯಳು ಜೀವಿಸಿರುವಾಗ ಅವಳು ಸಮ್ಮತಿಸದಿದ್ದರೆ,-ಈ ಹಿರಿಯಳಿಗೆ ೫೦ ವರುಷ ದಾಟಿದಿದ್ದರೆ ಅವಳು ಸಮ್ಮತಿ ಕೊಟ್ಟರೂ ಕೂಡಾ-ಯಾವ ಕವರಿಗೂ ಪಾಲು ಪಡೆಯುವ ಹಕ್ಕಿಲ್ಲವೆಂದಿದೆ. ಇದನ್ನೂ ಮೇಲಿನ 'ಬಹುಸಂಖ್ಯಾಕ ಪ್ರಾಯಸ್ಥರಿಗಿರುವ ಪಾಲು ಪಡೆಯುವ ಹಕ್ಕ'ನ್ನೂ ಹೇಗೆ ಹೊಂದಿಸಬೇಕೆನ್ನುವಿರಿ?

೧೩. ಕುಟುಂಬದ ಪ್ರತಿಯೊಬ್ಬ ಮೆಂಬರನಿಗೂ-ಮನೆಯಲ್ಲಿರಲಿ, ಹೊರಗಿರಲಿ-- ಜೀವನಾಂಶ ಪಡೆಯುವ ಹಕ್ಕು ಈ ಮಸೂದೆಯನ್ವಯ ಇದೆ, ಈ 'ಪಾಲು ವಿಧಾನ' 'ಜೀವನಾಂಶ'ಗಳು ಪ್ರತ್ಯಪ್ರತ್ಯೇಕವಾಗಿಯೂ ಪರಸ್ಪರ ಹೊಂದಿಕೆಯಾಗುವಂತೆಯೂ ಹೇಗಿರಬೇಕು ಎಂದು ನಿಮ್ಮ ಅಭಿಪ್ರಾಯ?

೧೪ ಕುಟುಂಬದ ಆಸ್ತಿ ಪಾಲಾಗುವ ನಮೂನೆಯು ಅರೆವಾಸಿ ತಲೆವಾರಾಗಿ, ಅರೆವಾಸಿ ಕವರುವಾರಾಗಿ ಪಾಲಾಗತಕ್ಕದ್ದೆಂಬ ಸೂಚನೆಯಿದೆ. ಇಂತಹ ಪಾಲಾಗುವಾಗ ಇರುವ ಕುಟುಂಬದ ಹಿರಿಯಳಿಗೆ, ಇಡೀ ಆಸ್ತಿಯನ್ನು ಜೀವಂತ ಮೆಂಬರರೊಳಗೆ ತಲೆವಾರು ಪಾಲು ಮಾಡಿದ್ದಲ್ಲಿ ಒಬ್ಬನಿಗೆಷ್ಟು ಬರುವದೋ ಅಷ್ಟನ್ನು ಕೊಡತಕ್ಕದ್ದೆಂದೂ, ಅವಳ ಮರಣಾನಂತರ ಅದು ಅವಳ ಕವರಿಗೇನೇ ಹೋಗಬೇಕೆಂದೂ ಇದೆ. ಆಗಬಹುದೇ ಅಥವಾ ಬೇರೆ ವಿಧಾನ ಬೇಕೆ?

೧೫ ನಿಸ್ಸಂತತಿ ಕವರಿನಪಾಲಿನ ಆಸ್ತಿ ಜೀವನಾಂಶ ಮಾತ್ರವಾಗಿದ್ದು ಕಟ್ಟಕಡೆಗೆ ಸಮೀಪದ ಕವರಿಗೇನೇ ಸೇರಬೇಕೆಂದಿದೆ. ಈ ಕುರಿತು ನಿಮ್ಮ ಅಭಿಪ್ರಾಯ?

೧೬. ಒಂದು ಕುಟುಂಬದ ಪ್ರತಿಯೊಂದು ಕವರಿನ ⅔ನೇ ಅಂಶಕ್ಕೆ ಮಿಕ್ಕಿದ ಪ್ರಾಯಸ್ಥರು ಕಲೆಕ್ಟರರಿಗೆ ಅರ್ಜಿ ಮಾಡಿ ತಮ್ಮ ಕುಟುಂಬವನ್ನು ಅವಿಭಕ್ತ (ಪಾಲೇ ಬೇಡ)ವಾಗಿ ರಿಜಿಸ್ತ್ರ ಮಾಡಿಸಿಕೊಳ್ಳಬಹುದು. ಮತ್ತೆ ಪಾಲಾಗಬೇಕಾದರೆ ⅔ನೇ ಅಂಶಕ್ಕೆ ಮಿಕ್ಕಿದವರು ಅರ್ಜಿ ಹಾಕಿ ಹಾಗೆ ಮಾಡಿಸಿಕೊಳ್ಳಬಹುದು. ಈ ಭಾಗದಲ್ಲಿ ಉಳಿದ ⅓ನೇ ಅಂಶದ ಅಲ್ಪ ಸಂಖ್ಯಾಕರ ಅಭಿಮತಕ್ಕೆ ಯಾವ ರಕ್ಷಣೆ ಕೊಡಬೇಕೆನ್ನುವಿರಿ? ಅಥವಾ ಒಟ್ಟಿನ ಮೇಲೆ ಈ ಕುರಿತು ನೀವು ಕೊಡುವ ತಿದ್ದುಪಡಿ ಯಾನೆ ಆಕ್ಷೇಪಗಳೇನು?

೧೭. ಈ ಮಸೂದೆಯಲ್ಲಿ ಬಿಟ್ಟು ಹೋಗಿರುವ ಅಂಶಗಳಿರುವವಾದರೆ ಅವು ಯಾವುವು? ಮತ್ತು ಹೇಗಿರಬೇಕು? ಸ್ಪಷ್ಟಪಡಿಸಬೇಕಾದ-ಇನ್ನಷ್ಟು ವಿಸ್ತರಿಸಬೇಕಾದ-ಹೊಡೆದು ಹಾಕಬೇಕಾದ ಭಾಗಗಳು ಯಾವುವು? ಮತ್ತು ಹೇಗೆ?

THE

UNITED KARNATAK INSURANCE Co., Ltd.

H. O. DHARWAR. ESTD: 1929.

GLAD TO ANNOUNCE A BUSINESS

INCREASE OF 400.

OVER LAST YEARS FIGURE

We invite applications from young, energetic and ambitious persons for the post of **Organisers, Inspectors** and **Branch Managers** etc

DHARWAR, 5—2—1946. A. S. KINI, Managing Director



Approved firm by the Gov. of Mysore
Certified by the Agent of the Govt. of Cylone Indian.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

S. C. 589/45.

S. I. A. 285/45.

ಅಂತಯ್ಯ ಶೆಟ್ಟಿ-ಉಡ್ಪಿ ತಾಲೂಕು ಹಿರಿಯಡಕ ಮನೆ ಅಂತಯ್ಯ ಶೆಟ್ಟಿ ಮೊಮ್ಮಗ ವಾದಿ (ಆ 1ರ)

ಮತ್ತು

ಸೀನಪ್ಪ ಶೆಟ್ಟಿ ಜಗನ್ನಾಥ ಶೆಟ್ರ ಮಗ, ಉಡ್ಪಿ ತಾಲೂಕು ಹೇರೂರು ಗ್ರಾಮದ ಅಗ್ರಹಾರ ಪ್ರತಿವಾದಿ. (ಎದ್ರಿ)

ಇವರೊಳಗೆ

ಮೇಲ್ಕಂಡ ವಾದಿಯು ಪ್ರತಿವಾದಿಯ ಮೇಲೆ ಪ್ರೋನೋಟು ನಿಮಿತ್ತ ಗೋಸ್ಕರ ದಾವಾ ಮಾಡಿರುತ್ತಾನೆ. ಮತ್ತು ಯಾ ಕೋರ್ಟು O. S. 291/44ನೆ ದಾವೆಯ ಕ್ರೆಡಿಟಿನಲ್ಲಿ ಪ್ರತಿವಾದಿಯ ಪಕ್ಕಿನವಾಗಿ ಡಿಪೋಜಿಟು ಇರುವ ಆ್ಯವೇಜುಗಳಷ್ಟಕೆ ರೂಪಾಯಿ 250/-ನ್ನು ಜಪ್ತಿ ಟು ಮುಂಚೆ ಜಪ್ತಿ ಅಪೇಕ್ಷಿಸಿ ವಾದಿಯು S. I. A. 285/45ನೆ ಅರ್ಜಿಕೊಡಾ ಮಾಡಿರುತ್ತಾನೆ. ಸದ್ರಿ ದಾವೆಯನ್ನೂ ಅರ್ಜಿಯನ್ನೂ ತಾ 15-4-46ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಪ್ರತಿವಾದಿಯು ಆಕ್ಷೇಪವಿರುವಲ್ಲಿ ಸದ್ರಿ ತಾರೀಕಿನ ಹಗಲು ಘಂಟೆ 10ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು ತಪ್ಪಿದ್ದ ಪ್ರತಿವಾದಿಯ ಗೈರುಹಾಜರಿಯಲ್ಲಿ ಕೋರ್ಟಿಗೆ ಯುಕ್ತಕಂಡ ರೀತಿಯಲ್ಲಿ ತೀರ್ಮಾನ ಮಾಡಲ್ಪಡುವುದು ಎಂತ ಈ ಮೂಲಕ ತಿಳಿಸಲಾಗುತ್ತದೆ.

ಉಡ್ಪಿ } B. Narayana Shetty
ತಾ 2-4-46 } ವಾದಿಕವ Advocate.

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, South Kanara.

SEASON DEPOSITS

for Rs 10,000 and above are now accepted at all Offices of the Corporation at the following rates

3—4 months ... 2¼%

6 months ... 2½%

These deposits will however *not* be accepted to run beyond 31-8-1946.

With a net work of Branches and Agencies we offer the best of banking facilities.

ಉಡುಪಿ, ಗುರುವಾರ, ೪-೪-'೪೬.

ಬ್ರಿಟಿಷ್ ಮಂಡಲಿ

ಬ್ರಿಟಿಷ್ ಮಂತ್ರಿ ಮಂಡಲದ ಪರವಾಗಿ ಭಾರತಕ್ಕಾಗಮಿಸಿರುವ ಲೋರ್ಡ್ ಪೆಥಿಕ್ ಲಾರೆನ್ಸ್, ಸರ್. ಸ್ಟಾಫೋರ್ಡ್ ಕ್ರಿಪ್ಸ್, ಮಿ. ಎ. ವಿ. ಅಲೆಕ್ಸಾಂಡರರು ಭಾರತದ ಭಾವೀ ರಾಜ್ಯಾಂಗ ರಚನೆಯ ಕುರಿತು ನವದಿಲ್ಲಿಯಲ್ಲಿ ಮಾತುಕತೆ ನಡೆಸುತಿದ್ದಾರೆ. ಹಿಂದೀ ರಾಜಕೀಯಾಧಿಕಾರ ಬದಲಾವಣೆಯ ಕುರಿತು ಶಿಷ್ಟ ಮಂಡಲಿಗಳು, ಸಭೆ ಸಮ್ಮೇಲನಗಳು, ಭರವಸೆ ಭಾಷಣಗಳು ಈ ಮೊದಲೆಷ್ಟೋ ನಡೆದಿದ್ದುವು; ಆದರೆ ಯಾವುದೂ ಗುರಿ ಮುಟ್ಟಿದುದಿಲ್ಲ. ಅಪಜಯವೇ ಸಂಪ್ರದಾಯವಾಗಿರುವ ವಾತಾವರಣವೊಂದರಲ್ಲಿ ಅಂತಹ ಇನ್ನೊಂದು ಪ್ರಯತ್ನವಾರಂಭವಾಗಿರುವದರಿಂದ ಈ ಕುರಿತು ಆತ್ಮಾಶೆಯನ್ನು ಯಾರೂ ಕಟ್ಟಿಕೊಂಡಿಲ್ಲ. ಆದರೆ ಕಾಲ ಕಳೆದಂತೆ ಸ್ಥಿತಿ ಬದಲಾವಣೆಯಾಗಲೇ ಬೇಕು. ಹಿಂದೀಯರು, ಸ್ವಾತಂತ್ರ್ಯವು ತಮ್ಮ ಜನ್ಮಸಿದ್ಧ ಹಕ್ಕು ಎಂದು ನಂಬಿರುವಂತೆ ಹಿಂದುಸ್ಥಾನವನ್ನಾಳುವದು ತಮ್ಮ ಜನ್ಮಸಿದ್ಧ ಹಕ್ಕು ಎಂದು ಬ್ರಿಟಿಷರು ಹೇಳುವಂತಿಲ್ಲ. ಆದ್ದರಿಂದ ಒಂದಲ್ಲೊಂದು ದಿನ ಭಾರತಕ್ಕೆ ಸ್ವಾತಂತ್ರ್ಯ ದಾನವಾಗದೆ ನಿರ್ವಾಹವಿಲ್ಲವೆಂಬುದು ಸಂದೇಹಾತೀತ ವಿಷಯ. ಆ ಕಾಲವೀಗ ಬಂದಿದೆ; ಸಹಜವಾದ ಕಾರಣ, ಸ್ವನಿರ್ಮಿತ ಕಂಟಕ, ಮುತ್ಸುದ್ದಿತನಗಳನ್ನೊಡ್ಡಿ ಬ್ರಿಟಿಷರು ಆ ಕಾಲವನ್ನು ಈ ವರೆಗೆ ಹಿಂದೂಡಿದರೂ ಈಗ ಅದು ಗೋಡೆಗೆ ಬಂದು ತಾಗಿದೆ. ಇನ್ನು ಹಿಂದೂಡುವದಸಾಧ್ಯವೆಂಬುದು ಬ್ರಿಟಿಷರಿಗೆ ಮನವರಿಕೆಯಾಗಿದೆ. ಆದ್ದರಿಂದ ಇದು ಕೊನೆಯ ಸಂದರ್ಭ. ಈ ಬಾರಿಯೂ ಕೆಲಸ ಹಾಳಾದರೆ, ಸಂಧಾನವಾತುಕತೆಗಳ ಸರ್ವನಾಶ ಅಲ್ಲಿಗೆ ಪೂರ್ತಿ ಮುಗಿದಂತೆ.

ಬ್ರಿಟಿಷ್ ಮಂತ್ರಿ ಸಮಿತಿಯು ಸ್ಪಷ್ಟ ಮಾತಿನಲ್ಲಿ ತನ್ನ ಆಗಮನದ ಧ್ಯೇಯವನ್ನು ಸಾರಿದೆ. ಪ್ರಧಾನಿ ಅಟ್ಲೀಯವರಿತ್ತ ಭಾಷಣವು ಒಂದು ಹೊಸ ಚರಿತ್ರೆಗೆ ಯೋಗ್ಯವಾದ ಮುನ್ನುಡಿಯಾಗಿದೆ. ಹಿಂದೀಯರಿಚ್ಛಿಸುವ ಪಾದರಿಯ ಸ್ವಾತಂತ್ರ್ಯವನ್ನು—ಭಾರತವು ಬ್ರಿಟಿಷ್ ಪರಿವಾರದೊಳಗೆ ಸಂಗ್ರಿಯಲ್ಲಿರಲು ಇಚ್ಛಿಸುವದಾದರೆ ಸಂತೋಷ; ಸಂಬಂಧ ಕಡಿದುಕೊಂಡು ಪ್ರತ್ಯೇಕವಾಗಲು ಬಯಸಿದರೆ ಅದಕ್ಕೂ ಒಪ್ಪಿಗೆ—ಕೊಡುವ ವಾಗ್ದಾನವನ್ನು ಬ್ರಿಟಿಷ್ ಸರಕಾರವು ಸ್ಪಷ್ಟವಾಣಿಯಲ್ಲಿ ಕೊಟ್ಟಿದೆ. ಈ ವಾಗ್ದಾನವನ್ನು ಕಾರ್ಯತಃ ರೂಪಿಸುವದಕ್ಕಾಗಿಯೇ ಮಂತ್ರಿತ್ರಯರನ್ನು ಹಿಂದುಸ್ಥಾನಕ್ಕೆ ಬೀಳ್ಕೊಟ್ಟಿದೆ. ಬ್ರಿಟನ್-ಹಿಂದುಸ್ಥಾನಗಳೊಳಗೆ ದೀರ್ಘಾವಧಿಯಿಂದ ಜಗಳವಾಗಿರುವ ಋಣವನ್ನು ಸಂದಾಯಿಸಲು ಸದ್ಯಸ್ಥಿತಿಯಲ್ಲಿ ಇದಕ್ಕಿಂತ ಉತ್ತಮವಾದ ಬೇರೊಂದು ಹಾದಿ ಬ್ರಿಟಿಷರಿಗಿಲ್ಲ. ದೀರ್ಘಾವಧಿಯಿಂದ ಇಲ್ಲಿದ್ದ ಬ್ರಿಟಿಷರು ಹಿಂದೀ ಸ್ವಾತಂತ್ರ್ಯವನ್ನು 'ಕೊಡುತ್ತೇವೆ-ತೆಗೆದುಕೊಳ್ಳಿ' ಎನ್ನಬೇಕಲ್ಲದೆ, 'ನಿಮ್ಮ ಮೈ ಮೇಲೆ ಹಾಕಿಕೊಳ್ಳಿ!' ಎಂದದನ್ನು ಮುಖಕ್ಕೆಸೆದು ಇಂಗ್ಲಾಂಡಿಗೆ ಹೋಟುಹೋಗುವದು ಅಸಾಧ್ಯ. ಆದ್ದರಿಂದ ಧ್ಯೇಯ ನಿರೂಪಣೆಯ ಮಟ್ಟಿಗೆ ಈ ಬಾರಿ ಬ್ರಿಟಿಷ್ ಸರಕಾರವನ್ನು ದೂರುವದು ತಪ್ಪು. ಬ್ರಿಟಿಷ್-ಭಾರತಗಳೊಳಗಿನ ಭಾವೀ ಸಂಬಂಧ ನಿರ್ಮಾಣವು ಕೇವಲ ಭಾರತದ ಇಚ್ಛೆಗನುಗುಣವಾಗಿಯೇ ಇರಬೇಕೆಂಬುದು ಸ್ಪಷ್ಟವಾಗಿರುವಾಗ ಅಸಂಬಂಧದ ತೀರ್ಮಾನ ಹುಡುಕುವದೂ ಕಷ್ಟವಲ್ಲ.

ಆದ್ದರಿಂದ ಈ ಬಾರಿಯ ಮಾತುಕತೆಗಳ ಆದಿಭಾಗದಲ್ಲೇ 'ಬ್ರಿಟಿಷರು ಅಧಿಕಾರ ತ್ಯಾಗಕ್ಕೆ ಸಿದ್ಧರಿಲ್ಲ' ಎಂಬ ಸದ್ದೆತ್ತಿಯ ಮಾತನ್ನಾಡದೆ ಅದನ್ನು ಅಂತ್ಯ ಭಾಗಿ ಗಿ ಅವಮಾನಿತಿಡಬೇಕು. ಹಿಂದೀಯರು ಏಂತಹದನ್ನೇ ಬಯಸಿದರೂ ತಾನದಕ್ಕೆ ನಕಾರ ಹೇಳುವಂತಿಲ್ಲವೆಂದು ಬ್ರಿಟಿಷ್ ಸರಕಾರವು ಮಾತು ಕೊಟ್ಟಿದೆ. ಆದರೆ ತನ್ನ ಹುಟ್ಟು ಸ್ವಭಾವವಾದ ಕಪಟಾಚರಣೆಯನ್ನು ಅದಿನ್ನೂ ಬಿಟ್ಟಿಲ್ಲವಾದರೆ ಮಿ. ಜಿನ್ನರಂಥವರ ಬಾಯಿಯಿಂದ ಬರುವ ನಕಾರವನ್ನು ಆಧರಿಸಿ ಸ್ವಕಾರ್ಯ ಸಾಧಿಸಿಕೊಳ್ಳಬಹುದು. ಈ ಬಾರಿಯ ಕಂಟಕವೆಂದರೆ ಮುಸ್ಲಿಂ ಲೀಗಿನ ಪಾಕಿಸ್ಥಾನ್ ಬೇಡಿಕೆಯೊಂದೇ. 'ಅಲ್ಪ ಸಂಖ್ಯಾಕರು ನಿರ್ಭೀತಿಯಿಂದ ಸ್ವತಂತ್ರವಾಗಿ ಬಾಳುವಂತಾಗಬೇಕಾದರೂ, ಅವರು ತಮ್ಮ ವಿಶೇಷ ಹಕ್ಕನ್ನು ಉಪಯೋಗಿಸಿ ಬಹು ಸಂಖ್ಯಾಕರ ಪ್ರಗತಿಗೆ ತಡೆಯಾಗುವಂತೆ ಮಾಡಲು ಇಂಬುಕೊಡಲಾರೆವು' ಎಂಬ ಅಟ್ಲೀ ವಚನ ಕಗ್ಗತ್ತಲೆಯಲ್ಲೊಂದು ಕಿರಣದಂತೆ ಮಿಂಚುತ್ತಿದೆ. ಆದರೆ ಆ ಪ್ರಕಾಶವನ್ನೂ ಮುಚ್ಚುಗೊಳಿಸುವ ಮಾತುಕೃತಿಗಳು ಕಂಡುಬರುತ್ತಿವೆ. ಮಿ. ಜಿನ್ನರಂತೂ 'ಪ್ರಥಮತಃ ಪಾಕಿಸ್ಥಾನಕ್ಕೆ ಒಪ್ಪಿಗೆ ದೊರೆಯದೆ ಯಾವುದರಲ್ಲೂ ಭಾಗವಹಿಸುವಂತಿಲ್ಲ' ಎಂಬ ತನ್ನ ಹಠವಾದಿತನವನ್ನು ಎಂತಹ ಸಂದರ್ಭದಲ್ಲೂ ಬಿಟ್ಟು ಕೊಡುವವರಲ್ಲ; ತನ್ನ ಮಂಗ ಮುಷ್ಟಿಯ ಕಿರುಬೆರಳನ್ನೂ ಸಡಲಿಸಲೊಪ್ಪದ ಲೀಗನೊಡನೆ ಕಾಂಗ್ರೆಸ್ ಹಸ್ತಲಾಘವ ಕೊಡಬಹುದೆಂಬ ಆಶೆ ನಿರರ್ಥಕ. ಆದ್ದರಿಂದ ಹಿಂದೀಯ ಪಕ್ಷ ಪಂಗಡಗಳು ಒಮ್ಮತದ ನಿರ್ಧಾರಕ್ಕೆ ಬಂದರೇನೇ ಮುಂದಿನ ಕಾರ್ಯವೆಂಬ ಶರ್ತವು ಬ್ರಿಟಿಷರದಾಗಿದ್ದರೆ ಈ ಶಿಷ್ಟಮಂಡಲಿಯ ನಾಟಕವೇ ಅನಗತ್ಯವಿತ್ತು; ಸಿಮ್ಲಾ ಸಮ್ಮೇಲನದಿಂದ ಪಾಠ ಕಲಿತವರು ಪುನಃ ಅದೇ ಆಟವನ್ನಾಡಿದರೆ, ಅವರು ಲೋಕದಿದಿರು ಹುಚ್ಚರನ್ನಿಸಿಯಾರು. ಆದ್ದರಿಂದ, ಫಲವಿಲ್ಲವೆಂಬುದು ಖಂಡಿತ ಗೊತ್ತಿದ್ದರೂ ಸಂಪ್ರದಾಯ ಪಾಲನೆಗಾಗಿ ಪಕ್ಷ-ಪಕ್ಷಗಳೊಳಗಿನ ರಾಜೀ ಶಾಸ್ತ್ರವೊಂದನ್ನು ಅದು ಮುಗಿಸಿಕೊಳ್ಳಬಹುದು; ಆ ಮೇಲೆ ಒಪ್ಪಿಗೆಯುಳ್ಳ ಬಹು ಸಂಖ್ಯಾಕರ ಅಭಿಮತಾನುಸಾರವಾಗಿ ಅಧಿಕಾರದಾನದ ತನ್ನ ಕಾರ್ಯ ವಿಧಾನವನ್ನದು ಪೂರ್ತಿಗೊಳಿಸಿಯೇ ಹೋಗಬೇಕು. ನ್ಯಾಯ ಮತ್ತು ಕಾರಣಗಳನ್ನಾಧರಿಸಿ ಕಾರ್ಯ ಮಾಡಬೇಕು ಹೊರತು, ಎಷ್ಟೇ ಪ್ರಬಲರಿದ್ದರೂ ಯಾವುದಾದರೊಂದು ಪಕ್ಷೀಯರ ದುರಹಂಕಾರಕ್ಕೆ ತಲೆಬಾಗಬಾರದು. ಇಂದು ಅನ್ಯಾಯವಾಗಿ ಅಸಮ್ಮತಿಸುವವರ ತಪ್ಪಿಗೆ, ನಾಳೆ ಅನಿವಾರ್ಯವಾಗಿ ಸಮ್ಮತಿಸಲೇ ಬೇಕಾಗುವಂತಹ ಪರಿಸ್ಥಿತಿಯನ್ನು ನಿರ್ಮಿಸುವದೇ ಯೋಗ್ಯ ಪ್ರಾಯಶ್ಚಿತ್ತ. ಮಿ. ಜಿನ್ನರ ಬಾಯಿಯಿಂದೀಗ ಕಂಪಕ್ಷರಗಳು ಹೊರಹೊಮ್ಮುತ್ತಿವೆ—ಅವರ ರಕ್ತಪಾತದ ಬೆದರಿಕೆಯಂತಹ ಒಂದು ಟೊಳ್ಳು ವಿಷಯ ಇಂದಿನ ಕ್ರಾಂತಿ ಯುಗದಲ್ಲಿ ಬೇರೊಂದಿರಲಾರದು. ವಿದೇಶೀ ಆಳ್ವಿಕೆಯಿದಿರು ಒಂದು ತಟಕು ರಕ್ತ ಅಥವಾ ಒಂದೇ ಒಂದು ಹನಿ ಬೆವರು ಸುರಿಸಿ ಅಭ್ಯಾಸವಿಲ್ಲದ ಲೀಗ್ ಮುಸಲ್ಮಾನರು, ಇನ್ನು ಸ್ವತಂತ್ರ ರಾಷ್ಟ್ರೀಯ ಸರಕಾರವೊಂದನ್ನು ರಕ್ತ ಸುರಿಸಿ ತೇಲಿಸಿಬಿಡುವರೆಂದು ಬೆದರಿಕೆಯೆ? ಬದಲಿಗೆ ರಾಷ್ಟ್ರೀಯಾಧಿಕಾರ ಬಂದಲ್ಲಿ ಅಂಥವರಲ್ಲಿ ಮಾನುಷತ್ವ ಮೊಳೆತು ಅವರು ತಮ್ಮ ಹಿಂದಿನ ಅಕೃತ್ಯಕ್ಕಾಗಿ ಕ... ...ಪಡುವ ಕಾಲ ಮಾತ್ರ ಬಂದೀತು. ತನ್ನ ನ್ಯಾಯೋಚಿತ ವಾದದ ಸಮರ್ಥನೆಗೆ ಅನ್ಯೋಪಾಯವಿಲ್ಲದ ದೆಸೆಯಿಂದ ಮಿ. ಜಿನ್ನರು ಹಾಕುತ್ತಿರುವ ಒಣ ಬೆದರಿಕೆಗೀಗ ಬ್ರಿಟಿಷ್ ಮಂಡಲಿಯಾಗಲೀ, ಹಿಂದೀ ಪ್ರಮುಖರಾಗಲೀ ಸೊಪ್ಪು ಹಾಕದೆ ಮುಂದೊತ್ತಿದರೆ ಭಾರತಕ್ಕೆ ಉಜ್ವಲ ಭವಿಷ್ಯವಿರುವದು ಖಂಡಿತ.

ಉಡುಪಿ.

ಅಕಾಲನಿಧನ—ದ. ಕ. ಜಿಲ್ಲಾ ಹೋಲ್‌ಸೇಲ್ ಸ್ಟೋರಿನ ಉಡುಪಿ ಡಿಪೋವಿನ ಉತ್ಸಾಹೀ ಏಜಂಟರಾದ ಶ್ರೀ ಕೆ. ವೆಂಕಟೇಶ ಶೆಣೈಯವರು ತಾ 2ನೆ ಮಂಗಳವಾರ ಸಂಜೆ ಅಕಾಲನಿಧನ ಹೊಂದಿದುದು ವಿಷಾದವೆನಿಸುತ್ತದೆ. ಶ್ರೀಯುತರ ಅಗಲುವಿಕೆಯಿಂದ ಅಪಾರ ದುಃಖಕ್ಕೀಡಾದ ಅವರ ಕುಟುಂಬದವರೊಡನೆಯೂ ಪತ್ನೀ ಪುತ್ರಪುತ್ರಿಯರೊಡನೆಯೂ ಸಹಸಂತಾಪವನ್ನು ಸೂಚಿಸಿ ಮೃತರಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಬೆಲ್ಲ ಮತ್ತು ಸಕ್ಕರೆ- ತಯಾರಿಸುವರೆ ಕಬ್ಬು ವ್ಯವಸಾಯಗಳಿಗೆ ಬೇಕಾಗುವ ಕಬ್ಬಿಣದ ಸಲಕರಣೆಗಳ ಸರಬರಾಯಿ ವ್ಯವಸ್ಥೆಯನ್ನು ಸರಕಾರವು ಈಗತಾನೆ ಮಾಡಿದೆ. ಜಿಲ್ಲೆಯಲ್ಲಿ ಪರೀಕ್ಷಾರ್ಥವಾಗಿ ಉಳ್ಳಾಲದಲ್ಲೊಂದು ಕ್ರೇಂದ್ರ ಸ್ಥಾಪಿಸಲ್ಪಡುವುದು. ಆ ಸುಮಾರಿನ ಕಬ್ಬು ವ್ಯವಸಾಯಿಗಳು ತಾವು ಬೆಳೆಸಿದ ಕಬ್ಬನ್ನು ಅಲ್ಲಿಗೆ ಕೊಡುಹೋಗಿ 40 ರಾತ್ಲ ಕಬ್ಬಿನರಸ ಹಿಂಡಿಸುದಕ್ಕೆ ನಾಲ್ಕಾಣೆಯಂತೆ ಚಾರ್ಜುಕೊಟ್ಟು ಸುಲಭದಲ್ಲಿ ತಮ್ಮ ಕೆಲಸವನ್ನು ಪೂರೈಸಬಹುದು. ಇತರ ಭಾಗಗಳಲ್ಲೂ ಅಂತಹ ಕೇಂದ್ರಗಳು ಅಗತ್ಯವೆಂದಾದರೆ ಆ ಕೇಂದ್ರದ ಕೃಷಿಕ ಕಬ್ಬುಬೆಳೆಸುವವರು ಸಾಮುದಾಯಿಕವಾಗಿ ಸಕಾರಣ ಕೊಟ್ಟು ಕಲ್ಲಿಕೋಟೆಯ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಆಫೀಸರರಿಗೆ ಬರಕೊಳ್ಳಬೇಕು.

ಅಲೆವೂರು ಶ್ರೀ ರಾಮ ಮಂದಿರದಲ್ಲಿ—ಇದೇ ತಾ 10ರಿಂದ 16ರ ತನಕ ಶ್ರೀ ರಾಮಭಜನ ಸಪ್ತಾಹವು ಎಂದಿನಂತೆ ಜರಗಲಿರುವುದು. ಸರ್ವ ಭಕ್ತಮಂಡಳಿಗೆ ಸುಸ್ವಾಗತವಿದೆಯೆಂದು ಶ್ರೀ ಯು. ಕೃಷ್ಣ ಭಟ್ಟರು ತಿಳಿಸುತ್ತಾರೆ.

ಮಂಗಳೂರು.

ಬಿ ಇ. ಎಮ್. ಹೈಸ್ಕೂಲಿನ ಹಳೆವಿದ್ಯಾರ್ಥಿಯೂನಿಯನ್ ದೇಸಮಾರಂಭವು ಇದೇ ತಾ 7ರಲ್ಲು ಸಂಜೆ 5½ಗಂಟೆಗೆ ದ. ಕ. ಜಿಲ್ಲಾ ಬೋರ್ಡಿನ ಕಾರ್ಯದರ್ಶಿಯರಾದ ಶ್ರೀ ಎಮ್. ಸುಂದರರಾಯರ ಅಧ್ಯಕ್ಷತೆಯಲ್ಲಿಜರಗುವದು. ತಾ 6ರಲ್ಲು ಯೂನಿಯನ್ನಿನ ವಾರ್ಷಿಕ ಮಹಾಸಭೆ ಜರಗಲಿರುವುದು. ಯೂನಿಯನ್ನಿಗೆ ಸೇರದ ಹಳೆವಿದ್ಯಾರ್ಥಿಗಳು ಮುಂಬರದಾಗಿ ಸೇರಬೇಕಾಗಿ ಕಾರ್ಯದರ್ಶಿಯರ ವಿನಂತಿಯಿದೆ.

ದಕ್ಷಿಣಕನ್ನಡ ಜಿಲ್ಲೆ, ಮಲಬಾರು ಮತ್ತು ಕೊಡಗು ಪ್ರಾಂತಗಳ ನಮ್ಮ ಕಂಪೆನಿಯ ವಿಶೇಷ ಪ್ರಾತಿನಿಧ್ಯವನ್ನ ಪೇಕ್ಷಿಸುವ ಪ್ರಭಾವಶಾಲಿ ಹಾಗೂ ಉತ್ಸಾಹಿ ಏಜಂಟರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿದೆ:—

ಭೂಷಣಕುಮಾರ್ ಕೊಳೂರ್‌ಕಾರ್ ಎಂಡ್ ಕೊ,

ಜೀವ ವಿಮಾ ಪ್ರಧಾನ ಏಜಂಟರು

ದೇವಕರಣ ನಾನ್‌ಜೀ ಇನ್ಶೂರೆನ್ಸ್ ಕೊ., ಲಿಮಿಟೆಡ್.

ಮಣ್ಣಗುಡ್ಡೆ ಮೈನ್ ರೋಡ್,

ಮಂಗಳೂರು, ದಕ್ಷಿಣ ಕನ್ನಡ.

ಹೆಡ್ ಆಫೀಸು:

ದೇವಕರಣ ನಾನ್‌ಜಿ ಬಿಲ್ಡಿಂಗ್ಸ್

ಬೊಂಬಾಯಿ 1

ಮದ್ರಾಸಿಗೆ ಪ್ರಧಾನಿ ಯಾರು?

ಸಂಯುಕ್ತ ಪ್ರಾಂತ್ಯದಲ್ಲಿ ಪಂಡಿತ ಗೋವಿಂದ ವಲ್ಲಭಪಂತರು ಪ್ರಧಾನಿಯಾಗಿ ಮಿ. ರಫಿ ಅಹಮ್ಮದ್ ಕಿದ್ವಾಯಿ, ಡಾ। ಕೈಲಾಸನಾಥ ಕಟಜು, ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಹಾಫಿಜ್ ಮಹಮ್ಮದ್ ಇಬ್ರಾಹಿಮ್, ಶ್ರೀ. ಸಂಪೂರ್ಣಾನಂದರುಳ್ಳ—ಇನ್ನೂ ಹೆಚ್ಚಿನವರನ್ನು ಸೇರಿಸಿಕೊಳ್ಳಲಿರುವ-ಮಂತ್ರಿ ಮಂಡಲ ರಚನೆಯಾಗಿದೆ. ಬೊಂಬಾಯಿಯಲ್ಲಿ ಡಾ। ಬಿ.ಜಿ. ಖೇರರೇ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ನಾಯಕರಾಗಿ ಆರಿಸಲ್ಪಟ್ಟು ಅಧಿಕಾರ ಸ್ವೀಕಾರಕ್ಕೆ ಗವರ್ನರರಿಂದ ಆಮಂತ್ರಿಸಲ್ಪಟ್ಟಿದ್ದಾರೆ. ಅಸ್ಸಾಮಿನಲ್ಲಿ ಹಿಂದಿನ ಕಾಂಗ್ರೆಸ್ ಪ್ರಧಾನಿ ಬಾರ್ಡೋಲಾಯಿ, ಗಡಿನಾಡಿನಲ್ಲಿಯೂ ಹಿಂದಿನವರೇ ಆದ ಡಾ। ಖಾನ್‌ಸಾಹೇಬ್ ಪ್ರಧಾನ ಸಚಿವರಾಗಿದ್ದಾರೆ. ಕಳೆದಬಾರಿ ಕಾಂಗ್ರೆಸ್ ಅಧಿಕಾರದಲ್ಲಿದ್ದ ಪ್ರಾಂತ್ಯಗಳಿಗೂ, ಕಳೆದಬಾರಿ ಕಾಂಗ್ರೆಸ್ ಪ್ರಧಾನಿಗಳಾಗಿದ್ದವರಿಗೂ ಈ ಬಾರಿಯೂ ಅದೇ ಸ್ಥಾನ. ಆದರೆ ಮದ್ರಾಸಿನ ಪ್ರಧಾನಿಪಟ್ಟ ಮಾತ್ರ ಇದಕ್ಕಪವಾದ. ಕಾಂಗ್ರೆಸ್ ಪ್ರಧಾನ ಮಂತ್ರಿಗಳಲ್ಲೆಲ್ಲಾ ಅಗ್ರಗಣ್ಯರೆಂದು ಹೆಸರಾದ ರಾಜಾಜಿ ಈ ಬಾರಿ ಕಾಣೆ!

ಮದ್ರಾಸಿನ ಸ್ಥಿತಿಗತಿ

ಕಟ್ಟಕಡೆಯ ವಾರ್ತೆಯಂತೆ 215 ಸ್ಥಾನಗಳುಳ್ಳ ಮದ್ರಾಸ್ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 164 ಸ್ಥಾನಗಳು ದೊರೆತಿವೆ. ನಾಲ್ಕು ಸ್ಥಾನಗಳ ಫಲಿತಾಂಶ ಮಾತ್ರ ಇನ್ನು ತಾನೇ ತಿಳಿದುಬರಬೇಕು. ಅವುಗಳೆಂದರೆ ಆಂಗ್ಲೋ-ಇಂಡಿಯಾನರ ಪಾಲಿನ 2, ವಿಶ್ವವಿದ್ಯಾಲಯ ಸ್ಥಾನ 1, ಚಿತ್ತೂರು ಮುಸ್ಲಿಂ ಸ್ಥಾನ 1. ಕಳೆದ ಬಾರಿ ರಾಜಾಜೀ ನಿಂತಿದ್ದ ಯುನಿವರ್ಸಿಟಿ ಸ್ಥಾನಕ್ಕೆ ಈ ಬಾರಿ ಕಾಂಗ್ರೆಸ್ ಕಡೆಯಿಂದ ಶ್ರೀ. ಭಾಷ್ಯಮ್ ನಿಂತಿದ್ದು ಅವರು ಗೆದ್ದು ಬರುವದು ಖಂಡಿತ. ಮಿಕ್ಕ ಮೂರು ಸ್ಥಾನಗಳ ಆಸೆಯಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷಬಲ 165 ಎಂದು ಕಟ್ಟಿಕೊಳ್ಳಬಹುದು. ಇವರ ಮುಂದಾಳಾಗಿ, ಅಂತೆಯೇ ಕಾಂಗ್ರೆಸ್ ಪ್ರಧಾನ ಮಂತ್ರಿಯಾಗಿ ಯಾರು ಬರಬಹುದೆಂಬುದೇ ಈಗಿನ ಪ್ರಾಮುಖ್ಯ ಪ್ರಾಂತಿಕ ಪ್ರಶ್ನೆ. ಮದ್ರಾಸ್ ರಾಜಕೀಯ ರಂಗವು ಮಿಕ್ಕ ಕಡೆಗಳಷ್ಟು ಪಾಕಿಸ್ತಾನದಿಯದಲ್ಲವಾದರೂ ಅಲ್ಲಿ ರೀತಿಯ ಜಾತೀಯ ಸ್ಪರ್ಧೆಯಿರುವ ಕಳ, ಬ್ರಾಹ್ಮಣ-ಅಬ್ರಾಹ್ಮಣ ದ್ವೇಷಗಳು, ಆಂಧ್ರ-ತಮಿಳು ಮೇಲಾಟಗಳು ಇಲ್ಲಿಯ ಕಾಂಗ್ರೆಸ್ ಪಕ್ಷದೊಳಗೆ ಅವ್ಯಕ್ತವಾಗಿ ಹುದುಗಿಕೊಂಡಿವೆ. ಪಕ್ಷನಾಯಕನ ಚುನಾವಣೆಯಂತಹ ಸಂದರ್ಭಗಳಲ್ಲಿ ಅವು ಮುಂಭಾಗಕ್ಕೆ ಬಂದು ಆ ಮೇಲೆ ಪುನಃ ಮರೆ ಸೇರಬಹುದು. ಕಳೆದ ಬಾರಿಯೂ ನಾಯಕ ಕಿರೀಟಕ್ಕಾಗಿ ಆಂಧ್ರ-ತಮಿಳರೊಳಗೆ, ಪಟ್ಟಾಭಿ-ರಾಜಾಜೀ ಸಂಬಂಧವಾಗಿ ತೆರೆಯ ಮರೆಯಲ್ಲೇ ನಾಟಕವೊಂದು ನಡೆದಿತ್ತು.

ಈ ಬಾರಿ—

ರಾಜಾಜಿಯಿಲ್ಲದುದರಿಂದಾಗಿ, ಎಸೆಂಬ್ಲಿ ಪಕ್ಷ ನಾಯಕತ್ವವೂ ಒಂದು ಪ್ರಶ್ನೆಯ ವಿಷಯವಾಗಿದೆ. ಕಾಂಗ್ರೆಸ್ ನ್ಯಾಯ ವಿಧಾಯಕ ಸಭಾ ಸದಸ್ಯರ ಸಭೆಯು ಇದೇ ತಾ 7ರಲ್ಲಿ ಮದ್ರಾಸಿನಲ್ಲಿ ನೆರೆದು ನಾಯಕರ ಚುನಾವಣೆಯಾಗಬೇಕಾಗಿದೆ. ಇಷ್ಟರಲ್ಲೇ ಹಲವು ಪ್ರಾಮುಖ್ಯ ಕಾಂಗ್ರೆಸ್ ಸದಸ್ಯರು ಅಲ್ಲಿ ಜಮೆಯಾಗಿ ಪರ್ಯಾಲೋಚನೆ ನಡೆಸಿದ್ದಾರೆ. ತಮಿಳು ನಾಡು ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಕಾಮರಾಜ ನಾಡರ್, ಆಂಧ್ರ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಟಿ. ಪ್ರಕಾಶಮ್, ಕೇರಳ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಮಾಧವ ಮೆನನರು ಈ ಕುರಿತು ಚರ್ಚಿಸಿಕೊಂಡರೂ ಒಮ್ಮತಕ್ಕೆ ಬಂದಿಲ್ಲ. ಕೊನೆಗೆ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಅನುಮತಿಯಂತೆ ವರ್ತಿಸುವ ನಿರ್ಧಾರಕ್ಕೆ ಬಂದಿದ್ದಾರೆ. ಆಂಧ್ರ ಮತ್ತು ತಮಿಳುನಾಡು ಕಾಂಗ್ರೆಸ್ ಕಮಿಟಿಗಳ ಕಾರ್ಯದರ್ಶಿಗಳಾದ ಶ್ರೀ ಕಾಳ ವೆಂಕಟರಾವ್ ಮತ್ತು ಶ್ರೀ ಭಕ್ತವತ್ಸಲಮರೂ, ಕೇರಳದ ಶ್ರೀ ಮಾಧವ ಮೆನನರೂ ಸರ್ದಾರರ ಭೇಟಿಗಾಗಿ ಬೊಂಬಾಯಿಗೆ ಹೋಗಿದ್ದಾರೆ. ಮದ್ರಾಸ್ ನಾಯಕತ್ವವು ಸರ್ದಾರ್ ಪಟೇಲರ ತೀರ್ಮಾನವನ್ನು ಆಧರಿಸಿದೆ.

ಶ್ರೀ. ಟಿ. ಪ್ರಕಾಶಮರೆ?

ನರಿಮನರನ್ನು ಹಿಂದೆಹಾಕಿ ಖೇರರನ್ನು ಪಟ್ಟಕ್ಕೇರಿಸಿದ ಸರ್ದಾರರು ಆಶ್ಚರ್ಯ ಸಿಡಿಸಬಲ್ಲರಾದರೂ, ಸದ್ಯಸ್ಥಿತಿಯಲ್ಲಿ ಆಂಧ್ರನಾಯಕ ಶ್ರೀ ಪ್ರಕಾಶಮರಿಗೇನೇ ಮುಖ್ಯ ಮಂತ್ರಿಯಾಗುವ ಯೋಗವಧಿಕ ಪ್ರಕಾಶಮರು ರಾಜಾಜಿ ಮಂತ್ರಿ ಮಂಡಲದಲ್ಲಿ ಕಂದಾಯ ಮಂತ್ರಿಯಾಗಿದ್ದವರು. ರಾಜಾಜಿ ಗೆರಡನೆಯ ಪ್ರಾಮುಖ್ಯತೆ ಪಡೆದಿದ್ದರ . ರಾಜಾಜೀ ಪ್ರಧಾನಿಯ ಚುರುಕುಬುದ್ಧಿ, ಅಸಾಧಾರಣ ಜಾಣ್ಮೆ ಇವರಲ್ಲಿಲ್ಲ. ಆದರೆ ಸ್ಥೂಲಮತ್ತು ದೊಡ್ಡ ಮನಸ್ಸಿನವರು. ಕಾಂಗ್ರೆಸ್ ನಿಷ್ಠೆಯಲ್ಲಿ ಅಗ್ರಗಣ್ಯರು. ಪ್ರಕಾಶಮರ ದೀರ್ಘಾವಧಿಯ ಸಾರ್ವಜನಿಕಜೀವನದ ಅನುಭವದಿಂದ ಹೇಳುವದಾದರೆ ಅವರ ಪ್ರಧಾನಿತ್ವದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ರೈತ್ವಾರಿ ಪದ್ಧತಿಯಲ್ಲಿ ಗಣ್ಯಬದಲಾವಣೆಗಳಾಗುವದು ಸಂಭವನೀಯ.

ಜಾವಾ ಸ್ವಾತಂತ್ರ್ಯ ಸಮರದ—

ಕುರಿತು ಡಚ್ ಮತ್ತು ಇಂಡೋನೇಶಿಯಾದ ಪ್ರತಿನಿಧಿಗಳೊಳಗೆ ಜಯಶೀಲವಾಗಿ ಸಂಧಾನ ಮಾತುಕತೆ ನಡೆದಿದೆ. ಈ ಪ್ರತಿನಿಧಿಗಳು ಜಾವಾ ರಾಜ್ಯಭಾರ ವ್ಯವಸ್ಥೆಯ ಕೊನೆಯ ತೀರ್ಮಾನ ಪಡೆಯಲು ಹೊಲ್ಲೆಂಡಿಗೆ ಹೋಗಿದ್ದಾರೆ

ಜಾಗತಿಕ ಭದ್ರತಾ ಕೌನ್ಸಿಲಿನಲ್ಲಿ

ಇರಾನಿನ ದೂರನ್ನು ಎಪ್ರಿಲ್ 10ಕ್ಕೆ ಮುಂದುವರಿಸಬೇಕೆಂಬ ರಶ್ಯದ ಸೂಚನೆಯು ಬಿದ್ದು ಹೋದ್ದರಿಂದ ಅದರ ಪ್ರತಿನಿಧಿಯು ಸಭಾತ್ಯಾಗ ಮಾಡಿದ್ದಾನೆ. ಇರಾನಿನ ಪ್ರತಿನಿಧಿಯು ರಶ್ಯವು ತನ್ನ ಸೇನೆ ಹಿಂದೆಗೆಯದಿದ್ದುದರಿಂದ ಪರ್ಶಿಯಾಕ್ಕಾಗುವ ಹಾನಿಯನ್ನು ವಿವರಿಸಿದ್ದಾನೆ. ರಶ್ಯಾ-ಇರಾನುಗಳೊಳಗೆ ನಡೆದಿದ್ದ ಒಪ್ಪಂದ ಮಾತುಕತೆಗಳನ್ನು ವರದಿ ಮಾಡಬೇಕೆಂದು ಕೌನ್ಸಿಲು ಇಕ್ಕಡೆಯವರನ್ನೂ ಕೇಳಿಕೊಂಡಿದೆ.

ಬ್ರಿಟಿಷ್ ಸಚಿವ ಮಂಡಲಿ—

ನವಡಿಲ್ಲಿಯಲ್ಲಿ ಎಲ್ಲಾ ಪ್ರಾಂತಿಕ ಗವರ್ನರರು ಮತ್ತು ವೈಸರಾಯೀ ಕೌನ್ಸಿಲ್ ಮೆಂಬರರೊಡನೆ ಪರ್ಯಾಲೋಚನೆ ನಡೆಸಿದೆ. ಗಾಂಧಿಜೀ ಡಿಲ್ಲಿಗಾಮಂತ್ರಿಸಲ್ಪಟ್ಟು ಹೊರಟಿದ್ದಾರೆ. ಮಿ. ಜಿನ್ನಾ, ಸರೋಜಿನಿ, ಮೊದಲಾದ ಪ್ರಮುಖರೊಡನೆಯೂ ಗಾಂಧೀ, ನೆಹರು ಮುತ್ತಾದವರ ಮುಖಂಡರೊಡನೆಯೂ ಸಮಿತಿಯವರು ಪೀಠಿಕಾ ರೂಪದ ಪರ್ಯಾಲೋಚನೆಗಾರಂಭಿಸಿದ್ದಾರೆ. ಪ್ರಾಂತಿಕ ಪ್ರಧಾನಿಗಳೂ ಇತರ ಆಮಂತ್ರಿತರೂ ದೇಶದ ಬೇರೆಬೇರೆ ಕಡೆಗಳಿಂದ ನವಡಿಲ್ಲಿಗೆ ಹೋಗಿ ಒಟ್ಟಾಗುತಿದ್ದಾರೆ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 30—3—46ರಿಂದ

ಬೊಂಬೇ ಟಾಕೀಸಿನವರ

ಕಿಸ್ಮತ್

ಅಶೋಕ್ ಕುಮಾರ್ ಮಮತಾಜ್ ಶಾಂತಿ, ಪಿ. ಎಫ್. ಸೀತಾವಾಲಾ ವಿ. ಎಚ್. ದೇಸಾಯಿ, ಶಹಾನ ವಾಜ್, ಚಂದ್ರಪ್ರಭಾ.

ಬರುವ ಚಿತ್ರ—

ಜಂಗಲ್ ಬೋಯ್

ಪ್ರಕಟಣೆ

ಪ್ರಕೃತ ಆಹಾರ ಸಮಸ್ಯೆಯು ಸರಕಾರದ ಮತ್ತು ಊರ ಜನರ ಮನಸ್ಸನ್ನು ಆವರಿಸಿರುವದರಿಂದ ಸರಕಾರದವರು ಹೆಚ್ಚಿನ ಆಹಾರ ಪದಾರ್ಥಗಳನ್ನು ಬೆಳೆಸುವ ಬಗ್ಗೆ ಹೆಚ್ಚಿನ ಉಮೇದ್ವಾರಿಯಿಂದ ಕೃಷಿಯನ್ನು ವೃದ್ಧಿಪಡಿಸುವ ಕುರಿತು ನೀರಾಶ್ರಯಗಳ ಬಗ್ಗೆ ಹೊಸ ಬಾವಿಗಳನ್ನುತೋಡಿಸುವ ಬಗ್ಗೆಯೂ, ಮತ್ತು ಹಳೆ ಬಾವಿಗಳನ್ನು ದುರುಸ್ತಿಪಡಿಸುವ ಬಗ್ಗೆಯೂ ಈ ಕೆಳಗಿನ ಸಹಾಯಗಳನ್ನು ಕೊಡುವುದಾಗಿ ನಿಶ್ಚಯಿಸಿದ್ದಾರೆ.

(1) ತಾ 6-3-46ರ ನಂತ್ರ ವ 15-6-46 ರೊಳಗೆ ಹೊಸದಾಗಿ ರಚಿಸುವ ದುರಸ್ತಿ ಮಾಡಲ್ಪಡುವ ಪ್ರತಿಯೊಂದು ಬಾವಿಯ ಕರ್ಚಿನ ನೇಕಡಾ 50ರಷ್ಟು, ಆದ್ರೆ ಹೊಸ ಬಾವಿಗಳಿಗೆ ರೂ 300ಕ್ಕೆ ಮಿಕ್ಕದಷ್ಟೂ, ಮತ್ತು ದುರಸ್ತಿಪಡಿಸುವ ಬಾವಿಗಳಿಗೆ ರುಪಾಯಿ 160ಕ್ಕೆ ಮಿಕ್ಕದಷ್ಟು—ಹಣವನ್ನು ಸರಕಾರದವರು ಸಹಾಯಾರ್ಥವಾಗಿ ಕೊಡುತ್ತಾರೆ.

(2) ಹರಂತು ಹೊಸದಾಗಿ ತೋಡಿಸುವ ಬಾವಿಗಳಲ್ಲಿ ಭೂಮಿಯ ಮೇಲ್ಭಾಗದಿಂದ 20ರಿಂದ 30 ಫೀಟುಗಳೊಳಗಾಗಿ ನೀರು ಸಿಕ್ಕತಕ್ಕದ್ದು ಮತ್ತು ಅಂಥಾ ನೀರನ್ನು ಏತಗಳಿಂದ ತೆಗೆಯಲು ಅನುಕೂಲತೆಯಿರತಕ್ಕದ್ದು.

(3) ಹೊಸ ಬಾವಿಗಳ ನೀರಿನ ಸಹಾಯದಿಂದ ಆಹಾರ ದಿನಸುಗಳನ್ನು ಮತ್ತು ಅಂಥಾ ಪೈರುಗಳನ್ನೇ ಕೆಲಸ ಅಂತ್ಯವಾಗಿ 3 ವರುಷಗಳ ವರೇಗೆ ಬೆಳೆಸತಕ್ಕದ್ದು.

(4) ಹಳೇ ಬಾವಿಗಳನ್ನು ದುರಸ್ತಿ ಮಾಡುವ ವಿಷಯದಲ್ಲಿ ಸದ್ರಿ ಬಾವಿಯ ನೀರಿನಿಂದಾಗಿ ಪ್ರಕೃತ ಸಾಗುವಳಿ ಮಾಡಲ್ಪಡುವ ವಿಸ್ತೀರ್ಣಕ್ಕಿಂತ ½ ಎಕ್ರೆ ಹೆಚ್ಚಿಗೆ ಬತ್ತದ ಪೈರಾಗಲೀ ಅಥವಾ ಒಂದು ಎಕ್ರೆ ಹೆಚ್ಚಿಗೆ ಇತರ ಆಹಾರ ದಿನಸಿನ ಪೈರಾಗಲೀ ಬೆಳೆಸಲಿಕ್ಕೆ ಅನುಕೂಲತೆ ಇದ್ದರೆ ಮಾತ್ರ ಅಂಥ ಬಾವಿಗಳ ದುರಸ್ತಿ ಬಗ್ಗೆ ಸರಕಾರದಿಂದ ಸಹಾಯ ದೊರಕುವುದು.

(5) ಈ ಮೇಲೆ ಹೇಳಿದ ಸಹಾಯ ಪ್ರಮಾಣವು ಬಾವಿಯ ಖರ್ಚಿಗೆ ಸಾಕಾಗದೆ ಹೆಚ್ಚಿಗೆ ಹಣ ಬೇಕಾದಲ್ಲಿ ಸರಕಾರದಿಂದ ಮಿಕ್ಕ ಖರ್ಚಿನ ಬಗ್ಗೆ ಸಾಲ ಕೊಡೋಣಾಗುವುದು. ಸದ್ರಿ ಸಾಲಗಳಿಗೆ ಒಂದು ವರುಷದ ವರೇಗೆ ಬಡ್ಡಿ ಕೂಡಾ ವಿಧಿಸಲ್ಪಡುವುದಿಲ್ಲ. ಮತ್ತು ಕಂತುಗಳನ್ನು 2 ಯಾ 3 ವರ್ಷಗಳ ನಂತರ ವಸೂಲಿಗೆ ಪ್ರಾರಂಭಿಸಲಾಗುವುದು. ಆದುದರಿಂದ ಎಲ್ಲಾ ರೈತರೂ ಹೆಚ್ಚಿಗೆ ಆಹಾರ ದಿನಸುಗಳನ್ನು ಬೆಳೆಸುವ ವಿಷಯದಲ್ಲಿ ಹೆಚ್ಚಿನ ಶ್ರದ್ಧೆ ತೆಗೆದುಕೊಂಡು ಸರಕಾರದಿಂದ ಈಗ ಕೊಡೋಣಾಗುವ ಶ್ರೇಷ್ಠ ಸಹಾಯವನ್ನು ಅತ್ಯಧಿಕವಾಗಿ ಉಪಯೋಗಿಸಿಕೊಳ್ಳುವುದಾಗಿ ಭಾವಿಸುತ್ತೇವೆ.

ಹೀಗೆ ಹೊಸ ಬಾವಿಗಳನ್ನು ರಚಿಸಲು ಯಾ ಹಳೆ ಬಾವಿಗಳನ್ನು ದುರಸ್ತಿಪಡಿಸಲು ಅಪೇಕ್ಷಿಸುವವರು ಜಿಲ್ಲಾ ಕಲೆಕ್ಟರವರಿಗಾಗಲೀ ಯಾ ಈ ಬಗ್ಗೆ ಪ್ರತ್ಯೇಕವಾಗಿ ನೇಮಕಪಟ್ಟ ಸ್ಪೆಶ್ಯಲ್ ತಹಸಿಲ್ದಾರ್, ಮಂಗಳೂರು (Special Tahsildar For Acccicratod Seheme Wolls) ಇವರಿಗೆ ಜರೂರಾಗಿ ಅರ್ಜಿ ಬರಕೊಳ್ಳತಕ್ಕದೆಂದು ಜಿಲ್ಲಾ ಕಲೆಕ್ಟರವರು ತಿಳಿಸುತ್ತಾರೆ.

ಕಾರ್ಕಳ—ಸಜ್ಜನ ಸೇವಾಸಂಘ ಮತ್ತು ಕಬಡಿ ಆಶ್ರಮದ ಸಹಾಯಾರ್ಥವಾಗಿ ತಾ 6-4-46ನೆ ಶನಿವಾರ ರಾತ್ರಿ ಶ್ರೀ ವೆಂಕಟ್ರಮಣ ಸ್ವಾಮಿ ಪಾ। ಎ। ಶಾಲಾ ಕಟ್ಟಡದಲ್ಲಿ ಪಲ್ಲಿಯ ಯಕ್ಷಗಾನ ಕಲಾವಿದರ ಕೂಡುವಿಕೆಯಿಂದ ತಾಳಮದ್ದಲೆಯೊಂದು ನಡೆಯಲಿರುವುದು. ಪ್ರಸಂಗ 'ಸುಭದ್ರಾ ಕಲ್ಯಾಣ'.

ಪ್ರಾಂತಿಕ ನ್ಯಾಯವಿಧಾಯಕ ಸಭೆಗಳ ರೂಪರೇಖೆ.

1935ನೇ ಭಾರತ ಶಾಸನದನ್ವಯ ಅವಿಲ ಬ್ರಿಟಿಷ್ ಹಿಂದುಸ್ಥಾನವು 11 ಪ್ರಾಂತ್ಯಗಳಾಗಿ ವಿಂಗಡಿಸಲ್ಪಟ್ಟಿದೆ. ಮದ್ರಾಸ್, ಬೊಂಬಾಯಿ, ಬಂಗಾಳ, ಸಂಯುಕ್ತ ಪ್ರಾಂತ್ಯ, ಪಂಜಾಬ್, ಬಿಹಾರ್, ಮಧ್ಯ ಪ್ರಾಂತ್ಯ, ಅಸ್ಸಾಮು, ವಾಯುವ್ಯ ಗಡಿನಾಡು, ಒರಿಸ್ಸಾ, ಸಿಂಧ್. ಆ ಪೈಕಿ ಮದ್ರಾಸ್, ಬೊಂಬಾಯಿ, ಬಂಗಾಳ, ಸಂಯುಕ್ತ ಪ್ರಾಂತ್ಯ, ಬಿಹಾರ್ ಮತ್ತು ಅಸ್ಸಾಮು- ಈ ಆರು ಪ್ರಾಂತ್ಯಗಳಲ್ಲಿ ಮಾತ್ರ ಎಸೆಂಬ್ಲಿ ಮತ್ತು ಕೌನ್ಸಿಲ್ ಎಂಬ ಎರಡೆರಡು ನ್ಯಾಯ ವಿಧಾಯಕ ಸಭೆಗಳಿವೆ. ಉಳಿದ ಪ್ರಾಂತ್ಯಗಳಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿ ಮಾತ್ರವಿದೆ.

ಅಸಾಮಾನ್ಯ ಸಂದರ್ಭಗಳ ಹೊರತು ಕ್ರಮಬದ್ಧವಾಗಿ ಲೆಜಿಸ್ಲೇಟಿವ್ ಎಸೆಂಬ್ಲಿಗಳ ಆಯುಷ್ಯ 5 ವರುಷ. ಪ್ರತಿ 5 ವರುಷಕ್ಕೊಮ್ಮೆ ಚುನಾವಣೆ ನಡೆಯಲೇಬೇಕು.

ಪ್ರತಿಯೊಂದು ಲೆಜಿಸ್ಲೇಟಿವ್ ಕೌನ್ಸಿಲ್ ಎಂಬುದು ಒಂದು ಶಾಶ್ವತ ಸಂಸ್ಥೆಯಾಗಿದ್ದು ಅದು ಸಂಪೂರ್ಣವಾಗಿ ಬರ್ಖಾಸ್ತು ಹೊಂದುವಂತಿಲ್ಲ. ಆದರೆ ಒಂದು ನಿಬಂಧನೆಗನುಸಾರವಾಗಿ ಕೌನ್ಸಿಲಿನ ⅓ ನೇ ಸದಸ್ಯರು ಪ್ರತಿ ಮೂರು ವರುಷಕ್ಕೊಮ್ಮೆ ನಿವೃತ್ತಿಗೊಳ್ಳುವಂತಿರುವದರಿಂದ ಆ ಸ್ಥಾನಗಳಿಗೆ ಚುನಾವಣೆ ನಡೆಯಬೇಕಾಗುವದು.

ಪ್ರಾಂತಿಕ ಎಸೆಂಬ್ಲಿಗಳು

ಮದ್ರಾಸ್—215 ಸ್ಥಾನಗಳಿವೆ. ಆ ಪೈಕಿ 146 ಜನಸಾಮಾನ್ಯರವು. ಈ 146ರಲ್ಲಿ 30 ಹರಿಜನರಿಗೆ ಕಾದಿಟ್ಟ ಸ್ಥಾನಗಳು. ಮುಸಲ್ಮಾನರಿಗೆ 28. ಆಂಗ್ಲೋ ಇಂಡಿಯನರಿಗೆ 2, ಯುರೋಪಿಯನರಿಗೆ 3, ಗುಡ್ಡಗಾಡು ಭಾಗಗಳವರಿಗೆ, ಹಿಂದೀ ಕ್ರೈಸ್ತರಿಗೆ 8. ವ್ಯಾಪಾರ, ಉದ್ಯೋಗ, ತೋಟಗಾರರು ಮತ್ತು ಗಣಿಗಳವರಿಗೆ 6, ಜಮೀನ್ದಾರರಿಗೆ 6, ಯುನಿವರ್ಸಿಟಿ ಸೀಟ್ 1, ಕೆಲಸಗಾರರಿಗೆ 6, ಮಹಿಳೆಯರಿಗೆ ಸಾಮಾನ್ಯ ಸ್ಥಾನ 6; ಮುಸ್ಲಿಂ ಮಹಿಳೆಯರಿಗೆ 1, ಹಿಂದೀ ಕ್ರೈಸ್ತ ಮಹಿಳೆಯರಿಗೆ 1.

ಬೊಂಬಾಯಿ—175 ಸ್ಥಾನಗಳು. ಆ ಪೈಕಿ 114 ಸಾಮಾನ್ಯರವು. ಈ 114 ರಲ್ಲಿ 15 ಹರಿಜನರಿಗೂ 17 ಮರಾಟರಿಗಾಗಿಯೂ ಕಾದಿಡಲ್ಪಟ್ಟಿರುವ ಸ್ಥಾನಗಳು. ಮಹಮ್ಮದೀಯರಿಗೆ 29. ಗುಡ್ಡಗಾಡು ಭಾಗಗಳವರಿಗೆ 1, ಆಂಗ್ಲೋ ಇಂಡಿಯನರಿಗೆ 2, ಯುರೋಪಿಯನರಿಗೆ 3; ಹಿಂದೀ ಕ್ರೈಸ್ತರಿಗೆ 3, ವ್ಯಾಪಾರ, ಉದ್ಯೋಗ, ಗಣಿ, ತೋಟಗಳ ಪ್ರತಿನಿಧಿಗಳಿಗೆ 7, ಜಮೀನ್ದಾರರಿಗೆ 2, ಯುನಿವರ್ಸಿಟಿ ಸ್ಥಾನ 1 ಕೆಲಸಗಾರರಿಗೆ 7, ಮಹಿಳೆಯರಿಗೆ ಸಾಮಾನ್ಯ ಸ್ಥಾನ 5, ಮುಸ್ಲಿಂ ಮಹಿಳೆಯರಿಗೆ 1.

ಬಂಗಾಳ—250 ಸ್ಥಾನ. ಆ ಪೈಕಿ 78 ಸಾಮಾನ್ಯರವು. ಈ 78ರಲ್ಲಿ ಶೆಡ್ಯೂಲ್ಡ್ ಕ್ಲಾಸಿ(ಹರಿಜನ)ನವರಿಗೆ ಕಾದಿಟ್ಟ ಸ್ಥಾನಗಳು 30. ಮುಸಲ್ಮಾನರಿಗೆ 117, ಆಂಗ್ಲೋ ಇಂಡಿಯನ್ 3, ಯುರೋಪಿಯನ್ 11, ಹಿಂದೀ ಕ್ರೈಸ್ತರು 2.ವ್ಯಾಪಾರ ಕೈಗಾರಿಕೆ, ಗಣಿ ಪ್ರತಿನಿಧಿಗಳಿಗೆ 19, ಜಮೀನ್ದಾರರಿಗೆ 5, ಯುನಿವರ್ಸಿಟಿ ಸ್ಥಾನ 2, ಕೆಲಸಗಾರರಿಗೆ 8, ಸಾಮಾನ್ಯ ಮಹಿಳೆ 2 ಆಂಗ್ಲೋ ಇಂಡಿಯನ್ ಮಹಿಳೆಯರಿಗೆ 1.

ಸಂಯುಕ್ತ ಪ್ರಾಂತ್ಯ—228 ಸ್ಥಾನಗಳು. ಆ ಪೈಕಿ 140 ಸಾಮಾನ್ಯ ಮತದಾರ ಕ್ಷೇತ್ರಗಳು. ಈ 140ರಲ್ಲಿ 20 ಶೆಡ್ಯೂಲ್ಡ್ ಕ್ಲಾಸಿಗೆ ಕಾದಿಡಲ್ಪಟ್ಟಿವೆ ಮುಸಲ್ಮಾನರಿಗೆ 64, ಆಂಗ್ಲೋ ಇಂಡಿಯನ್ 1, ಯುರೋಪಿಯನ್ 2, ಹಿಂದೀ ಕ್ರೈಸ್ತರು 2, ವ್ಯಾಪಾರ...ಇತ್ಯಾದಿಗಳವರಿಗೆ 3, ಜಮೀನ್ದಾರರಿಗೆ 6, ಯುನಿವರ್ಸಿಟಿ 1, ಕೆಲಸಗಾರರಿಗೆ 3, ಮಹಿಳೆಯರ ಸಾಮಾನ್ಯ ಸ್ಥಾನ 4, ಮುಸ್ಲಿಂ ಮಹಿಳೆಯರಿಗೆ 2

ಪಂಜಾಬ್—175 ಸ್ಥಾನಗಳು. ಈ ಪೈಕಿ 42 ಸಾಮಾನ್ಯ. ಈ 42ರಲ್ಲಿಯೇ 8 ಶೆಡ್ಯೂಲ್ಡ್ ವರ್ಗಕ್ಕೆ ಕಾದಿಡಲ್ಪಟ್ಟಿದ್ದು 8. ಮುಸಲ್ಮಾನ್ 84, ಸಿಖ್ಖ ಸ್ಥಾನಗಳು 31, ಆಂಗ್ಲೋ ಇಂಡಿಯನ್ 1, ಹಿಂದೀ ಕ್ರೈಸ್ತರು 2, ವ್ಯಾಪಾರ ಇತ್ಯಾದಿ ವರ್ಗಗಳಿಗೆ 1, ಜಾಮೀನ್ದಾರರಿಗೆ (ತುಮಾಂದಾರ್ ವರ್ಗದ 1 ಕೂಡಿ) 5, ಯುನಿವರ್ಸಿಟಿ 1, ಕೆಲಸಗಾರರು 3, ಸಾಮಾನ್ಯ ಮಹಿಳೆಯರಿಗೆ 1, ಮುಸ್ಲಿಂ ಮಹಿಳೆಯರಿಗೆ 2, ಸಿಖ್ ಮಹಿಳೆಯರಿಗೆ 1.

ಬಿಹಾರ್—ಜುಮ್ಲಾ 152 ಆ ಪೈಕಿ 86 ಸಾಮಾನ್ಯ ಸ್ಥಾನಗಳು. ಈ 86 ರಲ್ಲೇ 15 ಶೆಡ್ಯೂಲ್ಡ್ ವರ್ಗಕ್ಕೆ ಕಾದಿಟ್ಟದ್ದು. ಮುಸ್ಲಿಂ 39, ಗುಡ್ಡಗಾಡು ಭಾಗಗಳಿಗೆ 7, ಆಂಗ್ಲೋ ಇಂಡಿಯನ್ 1, ಯುರೋಪಿಯನ್ 2, ಹಿಂದೀ ಕ್ರೈಸ್ತರು 1, ವ್ಯಾಪಾರ ಗಣಿ ಇತ್ಯಾದಿಗಳವರಿಗೆ 4, ಜಮೀನ್ದಾರರಿಗೆ 4, ಯುನಿವರ್ಸಿಟಿ 1. ಕೆಲಸಗಾರರು 3, ಮಹಿಳೆಯರ ಸಾಮಾನ್ಯ ಸ್ಥಾನ 3. ಮುಸ್ಲಿಂ ಮಹಿಳೆಯರಿಗೆ 1,

ಮಧ್ಯ ಪ್ರಾಂತ್ಯ—112 ಜುಮ್ಲಾ ಸ್ಥಾನ, ಆ ಪೈಕಿ 84 ಸಾಮಾನ್ಯ ಕ್ಷೇತ್ರಗಳವು. ಈ 84ರಲ್ಲಿ 20 ಹರಿಜನರಿಗೆ ರಿಜರ್ವ್. ಮುಸಲ್ಮಾನ್ 14, ಹಿಂದುಳಿದ ಕ್ಷೇತ್ರಗಳಿಗೆ 1, ಆಂಗ್ಲೋ ಇಂಡಿಯನ್ 1, ಯುರೋಪಿಯನ್ 1, ವ್ಯಾಪಾರ ಇತ್ಯಾದಿ ವರ್ಗಗಳಿಗೊಟ್ಟಿಗೆ 2, ಜಮೀನ್ದಾರರಿಗೆ 3, ಯುನಿವರ್ಸಿಟಿ 1, ಕೆಲಸಗಾರರು 2, ಮಹಿಳೆಯರ ಸಾಮಾನ್ಯ ಸ್ಥಾನ 3.

ಅಸ್ಸಾಮ್—ಜುಮ್ಲಾ 108 ಸ್ಥಾನ. ಈ ಪೈಕಿ 47 ಸಾಮಾನ್ಯ. ಈ 47ರಲ್ಲಿ 7 ಹರಿಜನರಿಗೆ ರಿಜರ್ವ್. ಮುಸ್ಲಿಂ 34, ಹಿಂದುಳಿದ ಗುಡ್ಡಗಾಡು ಭಾಗಗಳಿಗೆ 9, ಯುರೋಪಿಯನ್ 1, ಹಿಂದೀ ಕ್ರೈಸ್ತ 1, ವ್ಯಾಪಾರ ತೋಟ ಇತ್ಯಾದಿ ವರ್ಗಗಳಿಗೆ 11, ಕೆಲಸಗಾರರು 4, ಮಹಿಳೆಯರ ಸಾಮಾನ್ಯ 1.

ಗಡಿನಾಡು ಪ್ರಾಂತ್ಯ—50 ಜುಮ್ಲಾ ಸ್ಥಾನ, ಆ ಪೈಕಿ ಸಾಮಾನ್ಯ ಸ್ಥಾನ 9. ಮುಸಲ್ಮಾನರಿಗೆ 36, ಸಿಖ್ಖರಿಗೆ 3, ಜಮೀನ್ದಾರರಿಗೆ 2.

ಒರಿಸ್ಸಾ—60 ಸ್ಥಾನಗಳು. ಆ ಪೈಕಿ 41 ಸಾಮಾನ್ಯ. ಈ 41ರಲ್ಲೇ 6 ಹರಿಜನರಿಗೆ ರಿಜರ್ವ್. ಮುಸಲ್ಮಾನ್ 4, ಗುಡ್ಡಗಾಡು ವಲಯಗಳವರಿಗೆ 5, ಹಿಂದೀ ಕ್ರೈಸ್ತ 1, ವ್ಯಾಪಾರ, ಗಣಿ, ತೋಟ ಇತ್ಯಾದಿ 1, ಜಮೀನ್ದಾರರಿಗೆ 2, ಕೆಲಸಗಾರರಿಗೆ 1, ಮಹಿಳೆಯರ ಸಾಮಾನ್ಯ 2.

ಸಿಂಧ್—60 ಜುಮ್ಲಾ ಸ್ಥಾನಗಳು. ಆ ಪೈಕಿ 18 ಸಾಮಾನ್ಯ ಮುಸಲ್ಮಾನರಿಗೆ 34, ಯುರೋಪಿಯನರಿಗೆ 2, ವ್ಯಾಪಾರ ಇತ್ಯಾ[illegible], ಕೆಲಸಗಾರರಿಗೆ 1, ಮಹಿಳೆಯರಿಗೆ ಸಾಮಾನ್ಯ 1, ಮುಸ್ಲಿಂ ಮಹಿಳೆಯರಿಗೆ 1.

1936ರ ಚುನಾವಣೆಯಲ್ಲಿ—

ಮದ್ರಾಸಿನಲ್ಲಿ 159, ಬಿಹಾರ್ 98, ಬಂಗಾಳ 54, ಮಧ್ಯ ಪ್ರಾಂತ್ಯ 70, ಬೊಂಬಾಯಿ 86, ಸಂಯುಕ್ತ ಪ್ರಾಂತ್ಯ 134, ಪಂಜಾಬ್ 18, ಗಡಿನಾಡು 19, ಸಿಂಧ್ 7, ಅಸ್ಸಾಮು 33, ಒರಿಸ್ಸಾ 36 ಸ್ಥಾನಗಳು ಕಾಂಗ್ರೆಸ್ ಪಕ್ಷಕ್ಕೆ ದೊರೆತಿದ್ದವು. ಕೊನೆಯ ಭಾಗದಲ್ಲಿ ಪಂಜಾಬ್, ಸಿಂಧ್, ಮತ್ತು ಬಂಗಾಳವನ್ನು ಬಿಟ್ಟು ಮಿಕ್ಕ 8 ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲವಿದ್ದಿತು.

ಈ ಬಾರಿಯ ಚುನಾವಣೆಯಲ್ಲಿ—

ಸಿಂಧಿನಲ್ಲಿ ಲೀಗ್ ಮಂತ್ರಿಮಂಡಲ ರಚನೆಯಾಗಿದ್ದರೂ ಅಲ್ಲಿಯ ತಕ್ಕಡಿ ಸಮ ಮಟ್ಟದಲ್ಲಿ ನಿಂತಿದೆ. ಪಂಜಾಬಿನಲ್ಲಿ ಕಾಂಗ್ರೆಸಿನ ಪ್ರಭಾವಕ್ಕೊಳಗಾಗಿರುವ ಸಮ್ಮಿಶ್ರ ಪಕ್ಷ ಅಧಿಕಾರ ವಹಿಸಿದೆ. ಬಂಗಾಳದಲ್ಲಿ ಮುಸಲ್ಮಾನರಿಗಿರುವ 117 ಸ್ಥಾನಗಳ ಪೈಕಿ 113ನ್ನು ಇಷ್ಟರಲ್ಲೇ ಲೀಗ್ ಸಂಪಾದಿಸಿ, ಅದೇ ಏಕಮಾತ್ರ ಪ್ರಬಲ ಪಕ್ಷವಾಗಿರುವುದರಿಂದ ಅಧಿಕಾರ ವಹಿಸುವ ಸಂಭವವಿದೆ. ಮಿಕ್ಕೆಲ್ಲಾ ಪ್ರಾಂತ್ಯಗಳಲ್ಲೂ ಈ ಬಾರಿಯ ಚುನಾವಣೆಯಲ್ಲಿ ಕಳೆದ ಬಾರಿಗಿಂತಲೂ ಕಾಂಗ್ರೆಸಿಗೆ ಹೆಚ್ಚಿನ ಸ್ಥಾನಗಳು ದೊರೆತಿವೆ. ಗಡಿನಾಡು, ಅಸ್ಸಾಮು ಗಳಲ್ಲಿ ಸರ್ವ ಪ್ರಥಮವಾಗಿ ಕಾಂಗ್ರೆಸ್ ಮಂಡಲ ರಚನೆಯಾಗಿದ್ದು ಮಿಕ್ಕ ಪ್ರಾಂತ್ಯಗಳಲ್ಲಿ ಇದೀಗ ಕಾಂಗ್ರೆಸ್ ಮಂತ್ರಿಮಂಡಲಗಳ ರಚನೆಯಾಗುತ್ತಿವೆ.

ಉಡುಪಿ

ಮುನಿಸಿಪಲ್ ಕೌನ್ಸಿಲು ಮೀಟಿಂಗು

—ಕಳೆದ ತಾ 29ರಲ್ಲು ಚೆಯರ್‌ಮನ್ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ಉಡುಪಿಗೆ ಸಪ್ಪ ರೈಲ್ವೆಲ್ಯಾನು ಹಾಕುವವಿಷಯ ಸರಕಾರದ ರೈಲ್ವೆ ಯೋಜನೆಯಲ್ಲಿ ಇಲ್ಲವೆಂದು ತಿಳಿಸಿದ ಸರಕಾರದ ಆರ್ಡರನ್ನು ರಿಕಾರ್ಡು ಮಾಡಲಾಯಿತು. ಫಯರ್ ಸರ್ವಿಸ್ ಸಹಾಯಾರ್ಥವಾಗಿ ನಗರದ ಮುಖ್ಯ ಆದ ಕೇಂದ್ರಗಳಲ್ಲಿ ನೀರಿನ ಹೊಂಡಗಳನ್ನು ಅಗೆಯುವದೆ ಒಪ್ಪಿಗೆ ಕೊಡಲಾಯಿತು. ಕಿದಿಯೂರು ರಾಮ ರಾಯರಿಂದ ವಸೂಲಾಗತಕ್ಕ ಪ್ರೊಪರ್ಟಿ ಟೇಕ್ಸನ್ನು ಲೆಪ್ಪದಿಂದ ಪಟ್ಟಿಗೆ ಬರೆಯುವುದು ಕ್ಷೇಮಕರವೆಂದು ಅಭಿಪ್ರಾಯ ಪಡಲಾಯಿತು.

ಅಂಬ್ಲಪಾಡಿ, ಕುಂಜಿಬೆಟ್ಟು ಸ್ಮಶಾನಗಳನ್ನು ಹಿಂದೂ ಶವ ಸಂಸ್ಕಾರ ಸಮಿತಿಗೆ ಒಪ್ಪಿಸುವುದು ಸಂದರ್ಭೋಚಿತವೆಂದು ಸೂಚಿಸಿದ ಚೆಯರ್‌ಮೆನರ ನೋಟಿಗೆ ಸಾಕಷ್ಟು ಪ್ರೋತ್ಸಾಹ ದೊರೆಯಲಿಲ್ಲ. ಸಂತೆ ಮಾರ್ಕೇಟು, ಮೀನು ಮಾರ್ಕೆಟುಗಳಲ್ಲಿ ಸುಂಕವಸೂಲು ಮಾಡುವದೆ ಗುತ್ತೇದಾರರು ಸಾಕಷ್ಟು ಮುಂದೆ ಬರದಿದ್ದರಿಂದಲೂ ನಗರಸಭೆಯು ಕಡೆಯಿಂದಲೇ ಸುಂಕ ವಸೂಲಿ ಮಾಡುವದು ಹಾನಿಕರವೆಂದು ಅಭಿಪ್ರಾಯ ಆದುದರಿಂದ ಹಿಂದಿನ ವರುಷದ ಹಿರ್ ಉಪೇಕ್ಷಕರ ಅಲ್ಪ ಮೌಲ್ಯದ ಟೆಂಡರನ್ನೇ ಮನ್ನಿಸಲಾಯಿತು.

Public Badminton Tournament

The Parkal Badminton Club is going to conduct a public badminton tournament open for the whole of the West Coast & Mysore State. This tournament is played for fives, doubles and singles and the entrance fees for the same is Rs 6-4-0, Rs. 4-0-0 and Rs 2-8-0 respectively. The trophies for the winners of fives and doubles are seven individual silver cups and a gold medal for the winner of the singles. The tournament commences on 25th April and the entries will be closed on 15th April. All the applications should reach the Secretary, Parkal Badminton Tournament Committee, Manipal Post (S. K) on or before the 15th April

A. Sanjeeva Hegde, Secretary.

B. Karunakara Hegde, President.

ನವಯುಗದ

ಚಂದಾ ಹಣ ಬಾಕಿ ಇರುವವರಿಗೆ ಕಳುಹಿಸುವ ವಿ. ಪಿ ಯನ್ನು ಅವರು ದಯಮಾಡಿ ಸ್ವೀಕರಿಸುವಂತೆ ವಿನಂತಿ.

ಮೆನೇಜರ್.

ಮಂಗಳೂರು

ಹಸುಗೆ ಅಧಿಕಾರಿಗಳ ಪ್ರಕಟಣೆ- ರೇಶನ್ ಸರಹದ್ದುಗಳ ಒಳಗೆ ಯಾವ ಹೋಟೆಲ್ ಅಥವಾ ರೆಸ್ಟೊರೆಂಟ್‌ಗಳ ಮಾಲಕರೂ ಅಕ್ಕಿಯನ್ನು ಯಾವ ರೂಪದಲ್ಲಿಯೂ ಭೋಜನಕ್ಕೆ ಮೀರಿದ ಯಾವ ಪಾರ್ಟಿಗೂ ಬಡಿಸಲಿಕ್ಕೆ ಕೂಡದೆಂಬ ಕಾನೂನು ಈ ಮೊದಲೇ ಇರುತ್ತದೆ. ಈಗಿನ ಆಹಾರ ಪರಿಸ್ಥಿತಿಯಲ್ಲಿ ಸರಕಾರದವರು ಯಾವ ಸ್ಥಳದಲ್ಲಿಯೇ ಆಗಲಿ (ಸಾರ್ವಜನಿಕ ಮಂದಿರ, ದೇವಸ್ಥಾನ ವನ ಭೋಜನ, ಅಥವಾ ಟೀಪಾರ್ಟಿ ವಗೈರೆಗಳಲ್ಲಿ) ಆಮಂತ್ರಣದಾರರು ಕೂಡಿ ೪೦ ಜನಕ್ಕೆ ಮೀರಿದ ಪಾರ್ಟಿಗೆ ಆಹಾರವನ್ನು ಯಾವ ರೂಪದಲ್ಲಿಯೂ ಬಡಿಸಲಿಕ್ಕೆ ಕೂಡದೆಂದು ಕಾನೂನು ಮಾಡಿರುತ್ತಾರೆ. ಹಾಗೆ ಆಹಾರವನ್ನು ಬಡಿಸಿದಲ್ಲಿ ಆಮಂತ್ರಣಕೊಟ್ಟವನೂ ಊಟದಲ್ಲಿ ಸೇರಿದವರೂ ಶಿಕ್ಷೆಗೆ ಗುರಿ ಆಗುತ್ತಾರೆ ಈ ಕಾನೂನು ಒರೇಬಾಯಾರಿಕೆಗೆ ಅನ್ವಯಿಸುವುದಿಲ್ಲ.

ಮದ್ರಾಸು ಸರಕಾರದ ಆಹಾರ ಖಾತೆಯ ಪ್ರಕಟಣೆ- ಮದ್ರಾಸು ಆಹಾರದ (ಹೋಟೆಲುಗಳಲ್ಲಿ ಊಟ ಬಡಿಸುವ ನಿರ್ಬಂಧ) ೧೯೪೬ನೇ ಹುಕುಮಿನ ಮೇರೆಗೆ ಊಟ ಹಾಕುವ ಸಂಸ್ಥೆಗಳಲ್ಲಿ, ಊಟಗಳಲ್ಲಿ ಮೂರು ಗ್ರಾ ಕ್ಕಿಂತಲೂ(?) ಹೆಚ್ಚಾಗಿ ಬಡಿಸಬಾರದು. ಅದರ ಬದಲಾಗಿ ತೆಗೆದುಕೊಳ್ಳುವ ಆಹಾರ ತಯಾರಿಗೆ ಪ್ರತಿಬಂಧಕವಿಲ್ಲ. ಆಹಾರದ ಅಭಾವವು ಅತಿ ಕಠಿಣವಾಗಿರುವಾಗ ವಿಧವಿಧದ ಪಕ್ವಗಳನ್ನು ಊಟದ ಹೋಟೆಲುಗಳಲ್ಲಿ ಒದಗಿಸುವುದು ಸರಿಯಲ್ಲವೆಂದು ಸರಕಾರವು ತಿಳಿಯುತ್ತಿದೆ. ಅದಕ್ಕಾಗಿ ಸರಕಾರವು ಉಣ್ಣುವವರಿಗೆ ಹಿತವಾದ ಒಂದು ಬಾರದ ಸಲಕ್ಷಣವಾದ ಒಂದೇ ಊಟವನ್ನು ಆರಿಸುವ ಅಧಿಕಾರ ಹೊರತು ತರತರದ ಪಕ್ವಗಳನ್ನು ಪಡೆಯುವುದನ್ನು ನಿರ್ಬಂಧಿಸುವ ಬಗ್ಗೆ ಈ ಕಾನೂನಿನಲ್ಲಿ ತಿದ್ದುಪಡಿ ಮಾಡಲಾಗಿದೆ. ಹಾಗೆ ಪಡೆಯಲಿಚ್ಛಿಸುವ ಆಹಾರದಲ್ಲಿ ಅರಿಸಿಟ್ಟ ಕುರಿ ಮಾಂಸವೂ ಸೇರಿರಬಹುದು. ಊಟ ಹಾಕುವ ಸಂಸ್ಥೆಗಳು ಇನ್ನುಮುಂದೆ ಸತ್ವವುಳ್ಳ ಒಂದು ಬಾರದ ಮತ್ತೊಂದು ಲಘುವಾದ, ಅಲ್ಲದೆ ಇನ್ನೆರಡು ಉಪಹಾರದ ಭಕ್ಷ್ಯಗಳನ್ನು ಹೊರತು ಬೇರೆ ಹೆಚ್ಚಿನ ಪಕ್ವಗಳನ್ನು ತಯಾರಿಸಲಿಕ್ಕೆ ಬಿಡಲಾಗಲಿಕ್ಕಿಲ್ಲ.

ಜಿಲ್ಲಾ ಆಹಾರ ಸಮಿತಿಯು- ಸಭೆಯೊಂದು ಹೊಸ ಕಲೆಕ್ಟರ್ ಶ್ರೀ ರಾಮವರ್ಮ ರಾಜರ ಅಧ್ಯಕ್ಷತೆಯಲ್ಲಿ ತಾ. ೨೯ರಂದು ಜರಗಿತು. ಆಹಾರ ಸಂಗ್ರಹಣ ಧೋರಣೆಯಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲಾಗುವುದಿಲ್ಲವೆಂದು ಕಲೆಕ್ಟರರು ತಿಳಿಸಿದರು. ಆ ಬಳಿಕ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಈ ಠರಾವನ್ನು ಮಂಡಿಸಿದರು: 'ನಮ್ಮ ಜಿಲ್ಲೆಯು ಆಹಾರದ ವಿಚಾರದಲ್ಲಿ ಸ್ವಯಂಪೂರ್ಣವಾಗಿಲ್ಲವೆಂಬುದು ವಿದಿತವಾಗಿದೆ. ಅಲ್ಲದೆ, ಈ ಬಾರಿ ಎರಡನೆ ಬೆಳೆಯು ಹಾಳಾದುದರಿಂದ, ಬರುವ ಜುಲಾಯಿಯ ವರೆಗೇ ಸಾಕಾಗುವಷ್ಟು ಆಹಾರ ಮಾತ್ರ ನಮ್ಮಲ್ಲಿದೆ. ಮುಂದೆ, ಸಪ್ಟಂಬರದ ವರೆಗೇ ಉಣ್ಣಬೇಕಾದರೆ, ನಾವು ಇಷ್ಟರಲ್ಲೇ ಹೊರಗೆ ಕಳುಹಿಸಿದ ೬ ಸಾವಿರ ಟನ್ ಅಕ್ಕಿ ಹಿಂದೆ ಬರಬೇಕು, ಮತ್ತು ಜನರು ಗಾಬರಿಗೊಳ್ಳದಂತೆ ಮಾಡಬೇಕಾದರೆ, ಇನ್ನಾದರೂ, ಜಿಲ್ಲೆಯ ಹೊರಗೆ ಅಕ್ಕಿ ಕಳುಹಿಸುವುದನ್ನು ನಿಲ್ಲಿಸಬೇಕು.' ಈ ಠರಾವು ಸರ್ವಾನುಮತದಿಂದ ಮಾನ್ಯವಾಯಿತು. ಈಗಿನಂತೆ ನಮ್ಮ ಜಿಲ್ಲೆಯಿಂದ ಕೇರಳಕ್ಕೆ ಅಕ್ಕಿ ಹೋಗುತ್ತಾ ಇದ್ದರೆ, ಮಳೆಗಾಲದಲ್ಲಿ ಎರಡು ತಿಂಗಳು ನಮಗೆ ಏನೂ ಇರಲಾರದು ಎಂಬ ಅಭಿಪ್ರಾಯವನ್ನು ಸದಸ್ಯರು ವ್ಯಕ್ತಪಡಿಸಿದರು. ಔಪಚಾರಿಕ ಹಸುಗೆ ಪರಿಧಿಯಲ್ಲಿ ½ ಪಾವು ರಾಗಿಯನ್ನು ಖಡ್ಡಾಯವಾಗಿಯೂ, ಗೋಧಿಯನ್ನು ಐಚ್ಛಿಕವಾಗಿಯೂ ಹಂಚುವುದೆಂದಾಯಿತು. ಎರಡನೆಯ ಬೆಳೆಯ ಅಕ್ಕಿಯನ್ನು ಸ್ವೋರಿಗೊಪ್ಪಿಸುವ ವಾಯಿದೆಯನ್ನು ಎಪ್ರಿಲ್ ೧೫ಕ್ಕೆ ಮುಂದುವರಿಸಲಾಯಿತು. ಗೆಣಸು ಜಿಲ್ಲೆಯಿಂದ ಹೊರಗೆ ಹೋಗದಂತೆ ತಡೆಯಲು ನಿರ್ಧರಿಸಿತು. ಅಲ್ಲದೆ ಗೆಣಸನ್ನು ಡಿಹೈಡ್ರೇಟೆಡ್ ಆಹಾರವಾಗಿ ಪರಿವರ್ತಿಸುವ ಕುರಿತಾಗಿಯೂ ಪರ್ಯಾಲೋಚಿಸಲಾಯಿತು. ಕುಮರಿ ಬೆಳೆಗೆ ಸರಕಾರವು ಸ್ಥಳ ಸಹಾಯ ಇತ್ಯಾದಿಗಳನ್ನೊದಗಿಸುವ ಕುರಿತು ಪ್ರಕಟವಾದ ಸರಕಾರೀ ಪತ್ರವನ್ನು ಓದಿ ವಿವರಿಸಲಾಯಿತು

ಎಂ. ಎಲ್. ಎ ಗಳನ್ನು-ಸ್ಥಳೀಯ ಕಥೋಲಿಕ್ ಬಂಧುಗಳು ತಾ. ೨೬ರಂದು ಮಿಲಾಗ್ರಿಸ್ ಹೈಸ್ಕೂಲಿನ ಬಯಲಿಗೆ ಆಮಂತ್ರಿಸಿ ಗೌರವಿಸಿದರು. ಆಹಾರಾಭಾವವು ಪರಾಕಾಷ್ಠೆಯಲ್ಲಿರುವ ಈ ಕಾಲದಲ್ಲಿ ಉಪಾಹಾರವಿಲ್ಲದೆಯೆ ಸ್ವಾಗತಕೂಟ ಒಂದನ್ನು ಏರ್ಪಡಿಸಿ, ಸಂಬಂಧಪಟ್ಟವರು ಒಂದು ಮಾದರಿಯನ್ನೇ ಹಾಕಿದರು. ಖಾನ್‌ಬಹಾದೂರ್ ಹುಸೇನ್ ಸಾಹೇಬರೊಬ್ಬರನ್ನು ಬಿಟ್ಟು ಉಳಿದ ನಮ್ಮ ಜಿಲ್ಲೆಯ ೬ ಮಂದಿ ಎಂ. ಎಲ್. ಎ.ಗಳೂ ಹಾಜರಿದ್ದರು. ಶ್ರೀ ಎಂ. ಎಸ್. ಶ್ರೀಷ, ಜೆರೋಮ್ ಸಲ್ದಾನ್ಹ, ಮಿ ಸೂಸ್. ರಾ. ಸ ಸಿ. ಸಿ ಲೋಬೋ, ಡಾ। ಕೊಯಿಲೊ ಮೊದಲಾದವರು ಅವಿರೋಧವಾಗಿ ಆರಿಸಿಬಂದಿದ್ದ ನಮ್ಮ ನ್ಯಾಯವಿಧಾಯಕರನ್ನು ಅಭಿನಂದಿಸಿ, ಜಿಲ್ಲೆಯ ಆಗತ್ಯಗಳಾದ, ನೀರಿನ ಸರಬರಾಯಿ, ಮಾರ್ಗಗಳ ರಚನೆ ಇತ್ಯಾದಿಗಳ ಕಡೆಗೆ ಇವರು ಗಮನ ಕೊಡಬೇಕೆಂದರು. ಶ್ರೀ ಗಟ್ಟಾದವು ಬಿ. ಶೆಟ್ಟಿ, ಎಲ್. ಸಿ ಪಾಯಸ್, ಕೆ ಆರ್ ಕಾರಂತ, ಡಾ। ಮಲ್ಯ ಮತ್ತು ಖಾನ್‌ಸಾಹೇಬ್ ಮಾಹಿಮ್ ಚಮ್ನಾಡರು ತಕ್ಕ ಉತ್ತರವಿತ್ತರು. ಮಧ್ಯೆ ಮಧ್ಯೆ ಸಂಗೀತದ ಸವಿಯೂಟವಿತ್ತು. ಡಾ। ಸಲ್ದಾನರು ವಂದನೆಯನ್ನರ್ಪಿಸಿದರು

ರಾಷ್ಟ್ರೀಯ ಸಪ್ತಾಹವು-ತಾ. ೬ರಿಂದ ೧೩ನೆಯ ವರೆಗೆ ಆಚರಿಸಲ್ಪಡುವುದು. ಎಲ್ಲ ಚರಖಾ ಸಂಘಗಳೂ ಇದರಲ್ಲಿ ಭಾಗವಹಿಸಿ, ಪ್ರತಿದಿನವೂ ಧ್ವಜವಂದನೆ, ಸೂತ್ರಯಜ್ಞ ಇತ್ಯಾದಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಕರ್ನಾಟಕ ಚರಖಾ ಸಂಘದ ಮಂತ್ರಿಗಳು ತಿಳಿಸುತ್ತಾರೆ

BANK WITH THE LARGEST CONNECTIONS ON THE WEST COAST,

OFFERS:-
EFFICIENT,
PROMPT &
COURTEOUS
SERVICE OF EVERY TYPE

OPEN AN ACCOUNT
with
The Canara Industrial & Banking Syndicate Ltd
ESTD 1925

ದಕ್ಷಿಣಕನ್ನಡ ಸೆಂಟ್ರಲ್ ಕೋ-ಓಪರೇಟಿವ್ ಬೇಂಕ್, ಲಿಮಿಟೆಡ್, ಮಂಗಳೂರು.

ಏಲಮ್ ನೋಟೀಸು.

ಕೆಳಗೆ ವಿವರಿಸಿದ ಬೇಂಕಿನ ಹೆಜಮಾಡಿ ಕಟ್ಟೋಣದ ಏಲಮ್ ಇದೇ ಮಾರ್ಚ ತಾರೀಕು 19ಕ್ಕೆ ಪ್ರಕಟಿಸಿದ್ದನ್ನು ಇದೇ ಎಪ್ರಿಲ್ ತಾ 21ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11ಕ್ಕೆ ಮುಂದರಿಸಲ್ಪಟ್ಟಿರುತ್ತದೆ, ಬೇಂಕಿನ ಅಧ್ಯಕ್ಷರು ಆ ಸಮಯಕ್ಕೆ ಸರಿಯಾಗಿ ಮೂಲ್ಕಿ ಪ್ರಯಾಣಿಕರ ಬಂಗ್ಲೆಯಲ್ಲಿ ಏಲಮ್ ನಡೆಸುವರು. ಶರ್ತಗಳು ಈ ಮುಂಚೆ ಪ್ರಕಟಿಸಿದಂತೆ—ಅಂದರೆ

(1) ದರ್ಖಾಸ್ತನ್ನು ರೂ 2000/ ದಿಂದ ಆರಂಭಿಸಲಾಗುವುದು

(2) ಏಲಮಿನಲ್ಲಿ ಆಸ್ತಿಯನ್ನು ವಹಿಸಿಕೊಂಡವರು ದರ್ಖಾಸ್ತು ಮೊಬಲಗಿನ ನಾಲ್ಕನೆಯ ಒಂದಂಶವನ್ನು ಕೂಡಲೇ ನಗದಾಗಿ ಪಾವತಿ ಮಾಡಬೇಕು, ಮತ್ತು ಆ ಮೇಲೆ 15 ದಿನಗಳೊಳಗೆ ಉಳಿದ ಐವಜು ಕೊಟ್ಟು ಕ್ರಯ ಸಾಧನ ಮಾಡಿಕೊಳ್ಳಬೇಕು. ಇದಕ್ಕೆ ತಪ್ಪಿದರೆ ಸ್ಥಳವನ್ನು ಪುನಃ ಏಲಮ್ ಮಾಡಿ ಬೇಂಕಿಗೆ ಉಂಟಾಗಬಹುದಾದ ನಷ್ಟವನ್ನು ಏಲಮಿನ ದಿನ ಕೊಟ್ಟ ಹಣದಿಂದ ವಜಾ ಮಾಡಲಾಗುವುದು.

(3) ಕ್ರಯಸಾಧನದ ಎಲ್ಲ ಖರ್ಚುಗಳನ್ನು ಕ್ರಯಕ್ಕೆ ಪಡೆಯುವವರೇ ವಹಿಸಬೇಕು.

ಆಸ್ತಿಯ ವಿವರ:—ಮಂಗಳೂರು ತಾಲೂಕು ಹೆಜಮಾಡಿ ಗ್ರಾಮಕ್ಕೆ ಸೇರಿದ—ಸರ್ವೆ ನಂಬ್ರ 189 1B, ಕಿಸಂ ಪುಂಜ; ವಿಸ್ತೀರ್ಣ 50 ಸೆಂಟ್ಸ್, ತೀರ್ವೆ 0 6 0 ಈ ಸ್ಥಳ ಮತ್ತು ಅದರಲ್ಲಿರುವ ಹಂಚು ಛಾವಣಿ ಕಟ್ಟೋಣ, ವಗೈರೆ

ಮಂಗಳೂರು,
25 3-1946

ಯ.ಎ. ಶಾಂತಾರಾಮ ರಾವ್,
ಕಾರ್ಯದರ್ಶಿ

ಪುತ್ತೂರು ಖೂನಿ-ತಾ. ೨೬ರಂದು ಇಲ್ಲಿಗೆ ಸಮೀಪದ ಕೊಡ್ಯಾಡಿ ಎಂಬಲ್ಲಿ ಜಲ್ಲನರ ಜಾತಿಯವನೊಬ್ಬನು ಅದೇ ಜಾತಿಯ ಇನ್ನೊಬ್ಬನಿಗೆ ತೀವ್ರ ಗಾಯಗೊಳಿಸಿದ ನಿಮಿತ್ತ ಆತನು ಸ್ಥಳೀಯ ಆಸ್ಪತ್ರೆಗೆ ಒಯ್ಯಲ್ಪಟ್ಟು ಅದೇ ದಿನ ಮೃತಿ ಹೊಂದಿರುತ್ತಾನಾಗಿಯೂ ಆಪಾದಿತನು ತಾನೇ ಮಜಿಸ್ಟ್ರೇಟ ಕೋರ್ಟಿಗೆ ಬಂದು ಹೇಳಿಕೆ ಕೊಟ್ಟಿರುತ್ತಾನಾಗಿಯೂ ವದಂತಿ

ರಥೋತ್ಸವದ ವೇಳೆ ಅಪಘಾತ-ಕಳೆದ ತಾ ೧೭ರಂದು ನೆಟ್ಲ ಎಂಬಲ್ಲಿ ರಥೋತ್ಸವವಾಗುತ್ತಿದ್ದಾಗ ರಥದ ಗಾಲಿಯು ಹದಿಮೂರು ವರ್ಷದ ಬಾಲಕನ ಮೇಲೆ ಹಾದು ಆತನು ಕೂಡಲೆ ಮರಣಪಟ್ಟಿರುತ್ತಾನಾಗಿಯೂ ಮತ್ತೊಬ್ಬನಿಗೆ ಸ್ವಲ್ಪ ಪೆಟ್ಟುಗಳು ಆಗಿರುತ್ತದಾಗಿಯೂ ತಿಳಿದುಬಂದಿದೆ

ಕರ್ನಾಟಕ ಸೇವಾಸಂಘ—ಮದ್ರಾಸು-ಈ ಸಂಘದ ಆಶ್ರಯದಲ್ಲಿ ತಾ. ೨೩ರಂದು ನರ್ಸ್. ಮುತ್ತ್ಯಯ್ಯ ಚೆಟ್ಟಿಯಾರರ ಹೈಸ್ಕೂಲಿನಲ್ಲಿ ಮದರಾಸಿನ ಅಡ್ವೋಕೇಟರೂ ಮುಖ್ಯಾಧಿಕಾರಿಗಳಾದ ಶ್ರೀ ಬಿ. ಎಸ್ ಶ್ರೀನಿವಾಸಯ್ಯ ಇವರು ಕುಮಾರವ್ಯಾಸಭಾರತವನ್ನು ಸುಶ್ರಾವ್ಯವಾಗಿ ಓದಿದರು. ಶ್ರೀ ಇ. ಕೆ. ದಿವಾಕರ್ ಒಸ್ತಾರಿ, ಇವರು ದಾಸರ ಕೀರ್ತನೆಗಳನ್ನು ಭಾವಪೂರ್ವಕ ಹಾಡಿದರು. ಕಲ್ಯಾಣಿ ಫಿಲ್ಮ್ಸ್‌ನ ಕಲಾದಿಗ್ದರ್ಶಕರಾದ ಶ್ರೀ ವೆಂಕಟ್ರಾಮನ್ ಇವರು ಇಂಪಾಗಿ ಸಿತಾರ ಬಾರಿಸಿದರು. ಜೊತೆ ಕಾರ್ಯದರ್ಶಿಗಳಾದ ಶ್ರೀ ಸಿ. ಕೆ. ತಿರುಮಲೇಶರು ಇವರೆಲ್ಲರ ಪರಿಚಯ ಮಾಡಿಕೊಟ್ಟಿರಲ್ಲದೆ ಸಂಘದ ಪರವಾಗಿ ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವದಿಲ್ಲ [illegible] ಜವೇರಿಯನ್ ಜೀವನ ಮಿಕ್ಶ್ಚರ [illegible]

ಜವೇರಿಯನ ಮಸ್ತಕಂ [illegible] ಮುಂಬಾಯಿ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಶಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—0 ಪೋಸ್ಟ ಚಾರ್ಜ ೧೦ ಆಣೆ

ಮಾಲಕರು:—ಕಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು.—ಹುಬ್ಬಳ್ಳಿ ಭಾವುರಾವ್,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಬಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ.—ದಾವಣಗೇರಿ ಪ್ರೆಸ್ಸ್, [illegible]

Ayurveda Oushadalaya, GADAG CITY.

CHAMPAE'S
Snow & Castrex
(Sole Distributers for India)
Prop: K. G. NAYAK,
Santhekatte, UDIPI, S. K.

ದಕ್ಷಿಣ ಕನ್ನಡ.

ಮಂಗಳೂರು.

ನೇಕಾರರ ಮುಷ್ಕರ ನಿಂತಿತು ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಯು. ಶ್ರೀನಿವಾಸಮಲ್ಯರು ತಾ. ೩೧ನೇ ಮಾರ್ಚಿಯಲ್ಲಿ ಈ ಪ್ರಕಟಣೆ ಕೊಟ್ಟಿರುವರು. "ಮಂಗಳೂರು ಕೈಮಗ್ಗಗಳ ಮಾಲಿಕರ ಸಂಘಕ್ಕೂ, ದ.ಕ.ನೇಕಾರಸಂಘಕ್ಕೂ ಇದ್ದ ವಿವಾದವು ಮುಷ್ಕರದಲ್ಲಿ ಪರಿಣಮಿಸಿತು. ಮುಷ್ಕರವು ಸುಮಾರು ೩೭ ದಿನಗಳಿಂದಲೂ ನಡೆದಿರುವುದನ್ನು ತಿಳಿಯುತ್ತೇನೆ. ಮುಷ್ಕರಕ್ಕೆ ಸಹಾಯ ನೀಡಿರೆಂದು ದ. ಕ. ಟ್ರೇಡ್ ಯೂನಿಯನ್ ಸಮರ ಸಮಿತಿಯವರು ಜಿಲ್ಲಾ ಕೊಂಗ್ರೆಸ್ ಕಮಿಟಿಯನ್ನು ಕೇಳಿಕೊಂಡರು. ಮುಷ್ಕರಕ್ಕೆ ಸಂಬಂಧಪಟ್ಟ ಕೆಲವು ಮಾಹಿತಿಗಳನ್ನು ಕೂಡಲೇ ಕಳಿಸಬೇಕೆಂದು ಜಿಲ್ಲಾ ಕೊಂಗ್ರೆಸ್ ಕಮಿಟಿಯು ಅವರನ್ನು ಕೇಳಿಕೊಂಡಿತು. ಇದಕ್ಕೆ ಇನ್ನೂ ಸಮರಸಮಿತಿಯಿಂದ ಜವಾಬು ಬಂದಿಲ್ಲ. ಅಷ್ಟರೊಳಗೆ ಮುಷ್ಕರದಿಂದುಂಟಾದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಗೆಹರಿಸಲು ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷನಾಗಿ ನಾನು ಸಂಧಾನ ಮಾಡಿ ತೀರ್ಮಾನಿಸಬೇಕೆಂತ ಮಂಗಳೂರು ಕೈಮಗ್ಗಗಳ ಮಾಲಿಕ ಸಂಘದ ಪರವಾಗಿ ಅವರ ಅಧ್ಯಕ್ಷ ಶ್ರೀ ಎ. ಶ್ರೀನಿವಾಸರಾಯರೂ, ಸಮರಸಮಿತಿ'ಯ (action Committee) ಅಧ್ಯಕ್ಷ ಕಾರ್ಯದರ್ಶಿಗಳಾದ ಶ್ರೀ ಎಸ್. ಎಸ್. ಹೊಳ್ಳ ಬಿ. ವಿ. ಕಕ್ಕಿಲ್ಲಾಯರೂ ನನ್ನನ್ನು ಬರಹ ಮೂಲಕ ಕೇಳಿಕೊಂಡರು. ನಾನು ಕೊಡುವ ತೀರ್ಪಿಗೆ (award) ಉಭಯ ಪಕ್ಷದವರೂ ತಮ್ಮತಮ್ಮ ಸಂಸ್ಥೆಗಳ ಪರವಾಗಿ ನಡೆಕೊಳ್ಳುವುದಾಗಿ ಒಪ್ಪಿದರು. ತೀರ್ಪನ್ನು ಜ್ಯಾರಿಗೆ ತರಲು ಸಹಕರಿಸುವುದಲ್ಲದೆ ಕೆಲಸಗಾರರು ಮುಷ್ಕರ ನಿಲ್ಲಿಸಿ ಕೂಡಲೇ ಕೆಲಸಕ್ಕೆ ಹೋಗಿ, ಯಾವ ಘರ್ಷಣೆಯೂ ನಡೆಯದಂತೆ ನೋಡಿಕೊಳ್ಳುವುದಾಗಿ ಸಮರ ಸಮಿತಿಯ ಅಧ್ಯಕ್ಷ-ಕಾರ್ಯದರ್ಶಿಯವರು ತಮ್ಮ ಸಮಿತಿಯ ಪರವಾಗಿ ಜವಾಬ್ದಾರಿ ವಹಿಸಿದರು. ಅಲ್ಲದೆ, ಮಂಗಳೂರು ಕೈಮಗ್ಗಗಳ ಮಾಲಿಕ ಸಂಘದ ಅಧ್ಯಕ್ಷರು ತಮ್ಮ ಸಂಘದ ಇತರ ಸದಸ್ಯರ ಪರವಾಗಿ ಮುಷ್ಕರ ಹೂಡಿದ ನೇಕಾರರನ್ನು ಯಾವ ತೊಂದರೆಗೂ ಗುರಿಪಡಿಸದೆ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡರು. ಅವರು ಕೆಲಸಕ್ಕೆ ಸೇರಿದ ಮೇಲೆ ಅವರಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುವುದಾಗಿ ಭರವಸೆಕೊಟ್ಟಿದ್ದಾರೆ.

ಕೂಡಲೇ ಮುಷ್ಕರವನ್ನು ನಿಲ್ಲಿಸಿ ನೇಕಾರರು ಕೆಲಸಕ್ಕೆ ಹೋಗತಕ್ಕದ್ದೆಂದು ನಾನು ತೀರ್ಮಾನಿಸಿರುತ್ತೇನೆ. ನಾನು ಸಾಕ್ಷಿ ಹುಟ್ಟಿ ಮಾಲಿಕರಿಗೆ ಹೋಗ ತಕ್ಕದ್ದಿದ್ದೇನೆ. ಮುಷ್ಕರಿಯಿಂದ ಒಂದು ಸಂಗ ಬಂದ ಮೇಲೆ ಸಮರ ಸಮಿತಿ ವಜಾಬು ನೋಡಿಕೊಂಡು, ಅವರ ಸಮಗ್ರಪರಿಶೀಲನೆ ಮಾಡಿ ಈ ವಿವಾದವು ಕೊನೆಗಾಣುವಂತೆ ತೀರ್ಮಾನಿಸುತ್ತೇನಾಗಿ ಹೇಳಿರುತ್ತೇನೆ."

ಜಿಲ್ಲಾ ಶಿಕ್ಷಣ ಪರಿಷತ್ತು-ದ. ಕ. ಜಿಲ್ಲಾ ಶಿಕ್ಷಣ ಪರಿಷತ್ತು, ಜಿಲ್ಲಾ ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ, ಇದೇ ತಾ. ೬ ಮತ್ತು ೭ರಲ್ಲಿ ಕಾಸರಗೋಡು ಜಿ. ಬಿ. ಎಮ್. ಸೆಕಂಡರಿ ಶಾಲೆಯಲ್ಲಿ ಜರಗುವುದು. ಶ್ರೀ ಎಮ್. ಉಮೇಶ ರಾವ್, ಬಿ.ಎ., ಎಲ್. ಎಲ್. ಬಿ., ಇವರು ಅಧ್ಯಕ್ಷತೆ ವಹಿಸುವರು. ಶ್ರೀ ಸಿ. ಇ. ಸುಮಿತ್ರರವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿರುವರು.

ಸರಕಾರೀ ಪ್ರಕಟಣೆ-"ಕೇರೇಶನ್ ಸರಹದ್ದುಗಳ ಒಳಗೆ ಯಾವ ಹೊಟೇಲ್ ರೆಸ್ಟೋರೆಂಟ್ ವಗೈರೆಗಳ ಮಾಲಿಕರು ಅಕ್ಕಿಯನ್ನು ಯಾವ ರೂಪದಲ್ಲಿಯೂ ೩೦ಕ್ಕೆ ಮೀರಿದ ಯಾವ ಪಾರ್ಟಿಗೂ ಬಡಿಸಕೂಡದೆಂಬ ಕಾನೂನು ಈ ಮೊದಲೇ ಇರುತ್ತದೆ. ಇಂದಿನ ಆಹಾರ ಪರಿಸ್ಥಿತಿಯಲ್ಲಿ ಸರಕಾರದವರೂ ಯಾವ ಸ್ಥಳದಲ್ಲಿಯೂ (ಪಬ್ಲಿಕ್ ಹಾಲ್, ದೇವಸ್ಥಾನ, ಓಪನ್ ಏರ್ ಪಿಕ್‌ನಿಕ್ಸ್ ಮುಂತಾದ) ಆಮಂತ್ರಣದಾರರು ಕೂಡಿ ೩೦ ಜನಕ್ಕೆ ಮೀರಿದ ಪಾರ್ಟಿಗೆ ಆಹಾರವನ್ನು ಯಾವ ರೂಪದಲ್ಲಿಯೂ ಬಡಿಸಕೂಡದೆಂದು ಕಾನೂನು ಮಾಡಿರುತ್ತಾರೆ. ಹಾಗೆ ಆಹಾರ ಬಡಿಸಿದ್ದಲ್ಲಿ, ಆಮಂತ್ರಣ ಕೊಟ್ಟವರೂ ಊಟದಲ್ಲಿ ಸೇರಿದವರೂ ಶಿಕ್ಷೆಗೆ ಗುರಿಯಾಗುತ್ತಾರೆ. ಈ ಕಾನೂನು ಬರೇ ಪಾರ್ಟಿಗಳಿಗೆ ಅನ್ವಯವಾಗುವುದಿಲ್ಲ."

ಮಿಲಿಟರಿ ಬಿಟ್ಟ "ವಿಚಿತ್ರ ಬೇನೆ"-ಮಿಲಿಟರಿಯ ಉಪಯೋಗಾರ್ಥ ಸರಕಾರವು ಸ್ವಾಧೀನಪಡಿಸಿಕೊಂಡಿದ್ದ ಸ್ಥಳವನ್ನು ಹಿಂದಕ್ಕೆ ಬಿಟ್ಟು ಕೊಡಲಾಗುತ್ತಿದೆಯಷ್ಟೆ, ಮಿಲಿಟರಿಯವರು ಇಲ್ಲಿಂದ ತೆರಳುವಾಗ ಬಿಟ್ಟು ಹೋಗಿದ್ದ ಕೆಲ ಪದಾರ್ಥಗಳನ್ನು ಸ್ಪರ್ಶಿಸಿ ಹಲವರು ವಿಚಿತ್ರವಾದ ಬೇನೆಗಳಿಂದ ನರಳತೊಡಗಿದ್ದಾರೆ. ಇಲ್ಲಿಯ ಸಿವಿಲ್ ಡಾಕ್ಟರುಗಳಿಂದ ಚಿಕಿತ್ಸೆ ನಡೆವುದು ಕೂಡ ಕಷ್ಟತರವಾಗಿರುವುದರಿಂದ ಯೋಗ್ಯ ಡಾಕ್ಟರರನ್ನು ಇತ್ತ ಕಳಿಸಿ ಜನರ ಆರೋಗ್ಯವನ್ನು ರಕ್ಷಿಸಬೇಕು"—ಎಂದೊಂದು ವಾರ್ತೆ ಪ್ರಕಟವಾಗಿದೆ.

ಕುಂದಾಪುರ-ಇಲ್ಲಿಯ ಡಿ। ಮುನ್ಸಿಫರ ಧರ್ಮಪತ್ನಿ ಶ್ರೀ ಮನೋರಮಾ ದೇವಿ M. A. ಯವರ ಅವಿಶ್ರಾಂತ ಪರಿಶ್ರಮದಿಂದ ಸ್ಥಳೀಕ ಬಾಲಿಕಾ ವೃಂದಕ್ಕೆ ಒಂದು ಶಾಶ್ವತವಾದ ವಿಹಾರ ಮಂದಿರವು ಸ್ಥಾಪಿತವಾಗಲಿಕ್ಕಿದೆ. ಸ್ಥಳೀಕ ಮಹಾಜನರು ಉದಾರಹಸ್ತದಿಂದ ಧನ ಸಹಾಯ ಮಾಡಿರುವರು. ಶ್ರೀ ಕೃಷ್ಣರಾಯ ಕೊಡ್ಗಿ ಮತ್ತು ಸಹೋದರ ಶ್ರೀ ಸರ್ವೋತ್ತಮ ಕೊಡ್ಗಿಯವರು ಈ ಮುಂಚೆ ಥಿಯಸಾಫಿಕಲ್ ಸೊಸೈಟಿಗೆ ದಾನ ಮಾಡಿದ ಸ್ಥಳ ಕಟ್ಟಡ ವಗೈರೆಯನ್ನು ಸದ್ರಿ ಸೊಸೈಟಿಯವರು ತಮ್ಮ ಚಟುವಟಿಕೆಯನ್ನು ನಿಲ್ಲಿಸಿದ್ದರಿಂದ ಅವರಿಂದ ಕ್ರಯಕ್ಕೆ ಪಡೆದು ಭಗಿನೀ ಸಮಾಜಕ್ಕೆ ಉಚಿತವಾಗಿ ಕೊಡಲು ವಾಗ್ದಾನ ಮಾಡಿರುತ್ತಾರೆ.

ಬೈಲೂರು-ಬೈಲೂರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಸ್ಕೌಟು ದಳವು ತಾ 23-3-46ರಲ್ಲಿ ಇಲ್ಲಿಂದ ಹೊರಟು, ವಿನೋದಾವಳಿಗಳಿಂದ ಅಜೆಕಾರಿಗೆ ಪ್ರಯಾಣ ಬೆಳೆಸಿ, ಅಲ್ಲಿ ತಾ 25-3-46ರ ವರೆಗೆ ಶಿಬಿರವಾಸದಲ್ಲಿದ್ದಿತು.

ಪಾಂಗಾಳ-ಮೂಡಬೆಟ್ಟು ಸ್ಪೆಂಟ್ ಜಾನ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿದ್ದ ಪಾಂಗಾಳ ಪೋಸ್ಟಾಫೀಸು ಕಳೆದ ತಾ 22ರಿಂದ ಮಧ್ಯವರ್ತಿ ಸ್ಥಳವಾದ ಪಾಂಗಾಳ ಹಿಂದೂ ಶಾಲಾ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟದೆ. ಇದರ ಆರಂಭೋತ್ಸವವು ಪೋಸ್ಟಲ್ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ತಾ 22ರಲ್ಲು ಜರಗಿತು.

ಫರಂಗಿ ಪೇಟೆ-ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯ ಶಾಲಾ ವರ್ಧಂತಿಯು ತಾ. 10-4-1946ನೇ ಬುಧವಾರ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಜಿಲ್ಲಾ ಕಮಿಶನರ್ ಯವರ್ ಟೀಲ್ ಆಫೀಸರರ ಪ್ರಕಟಣೆ-1945ನೆ ಯಿಸವಿ ಆಹಾರ ಧಾನ್ಯಗಳ ನಿಯಂತ್ರಣ ಆರ್ಡರಿನಂತೆ ಕೊಡೋಣವಾದ ಲೈಸೆನ್ಸ್‌ದಾರರು ತಿಂಗಳು ವಾರು ತಮ್ಮಲ್ಲಿರುವ ಸ್ಟಾಕು ಶಿಲ್ಕು ಪಟ್ಟಿಯನ್ನು ದುರಸ್ತಿಪಡಿಸಿದ 'ಸಿ' ಫಾರ್ಮಿನಲ್ಲಿ ಬರಾಯಿಸಿ ಕಳುಹಿಸುವುದಿಲ್ಲ. ಇನ್ನು ಮುಂದಾದರೂ ಲೈಸೆನ್ಸುದಾರ ವ್ಯಾಪಾರಿಗಳೂ ಕೋಪರೇಟಿವ್ ಸ್ಟೋರುಗಳೂ ಮೇಲೆ ಸೂಚಿಸಿದ 'ಸಿ' ಫಾರ್ಮಿನಲ್ಲಿ ಬರಾಯಿಸಿ ಕಳುಹಿಸದಿದ್ದರೆ ಅಂತಹ ಪಟ್ಟಿಯನ್ನು ಸ್ವೀಕರಿಸೋಣಾಗಲಿಕ್ಕಿಲ್ಲ ಮತ್ತು ತಕ್ಕ ಶಿಕ್ಷೆಗೆ ಗುರಿಪಡಿಸಲಾದೀತು. ದುರಸ್ತಿಪಡಿಸಿದ ಫಾರಂ 'ಸಿ' ಫಾರ್ಮುಗಳು ಮಂಗಳೂರಿನ ಕೆನರಾ ಚೇಂಬರ್ ಒಫ್ ಕಾಮರ್ಸ್ ಆಫೀಸಿನಲ್ಲಿ ದೊರೆಯುವವು.

ನೋಟೀಸು

ಕುತ್ಯಾರು ಡಿ. ಮು. ಕೊರ್ಟಿನಲ್ಲಿ.

R. E. P. 362/1945. O. S. 527/1929

ಕಾರಿ ಯಾನೆ ಲಕ್ಷ್ಮೀ ಪುಂಚ್ಚ ಅರ್ಜಿದಾರಳು.

ವಾಮದೇವ ಹೆಬ್ಬಾರ ಎದ್ರಿ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:-

ಮೇಲೆ ಹೇಳೋಣವಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವಳಾದ ಅರ್ಜಿದಾರಳು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾಳೆ. ಅ ಪ್ರಾಪರ್ಟಿ ಕುರಿತು ಲಿಸ್ಟ್ ಮಾಡಿದ ವಿವರಗಳನ್ನು ನಿರ್ಣಯಿಸಲಿಕ್ಕೆ 1945ನೇ ಇಸ್ವಿ ಎಪ್ರಿಲ್ ತಾರೀಕು 11ಕ್ಕೆ ನಿಶ್ಚಯಿಸೋಣವಾಗಿರುವದೆಂತ ನಿಮಗೆ ಇದರಿಂದ ತಿಳಿಸೋಣವಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)

S. Soorappaya.

Vakil for Petitioner.

ಮೊಕ್ಕಾಂ: ಪುತ್ತೂರು }
ತಾ.18—3—1946 }

ನೋಟೀಸು

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 43/1946.

ರಾಮಣ್ಣ ಶೆಟ್ಟಿ —ವಾದಿ

ಮತ್ತು

ದುಗ್ಗಮ್ಮ ಶೆಡ್ತಿ ಕೂಡಾ 8 ಜನರು. 6ನೇ ಪ್ರತಿವಾದಿ ಅನಂತ ಶೆಟ್ಟಿ, ಯಾನೆ ಎ. ಎನ್. ಶೆಟ್ಟಿ, ದುಗ್ಗಮ್ಮ ಶೆಡ್ತಿ ಮಗ. ಸಿವಿಲ್ ಲೇಬರ್ ಆಫೀಸರ್ ಡಿ. ಎ. ಡಿ. ಧರೂ ಕ್ವಾರ್ಟರ್ಸ್, ಶಿವಾಜಿ ನಗರ. ಪೂನದಲ್ಲಿರುವವರು —ಪ್ರತಿವಾದಿರು.

ಸದ್ರಿ ಮೇಲಿನ ವಾದಿಯು ಮತ್ತು 2ರಿಂದ 8ನೇ ವರೆಗಿನ ಪ್ರತಿವಾದಿರ ತಂದೆ ವ 1ನೇ ಪ್ರತಿವಾದಿಳ ಗಂಡ ಮೃತಪಟ್ಟ ಮುರಳದ ಗುತ್ತು ಸುಬ್ಬಯ್ಯ ಶೆಟ್ಟರು ಬರದಿಟ್ಟ ವೀಲು ನಾಮೆ ಆಧಾರದ ಮೇಲೆ ಸದ್ರಿ ಮೇಲಿನ ಕೈಪೇಚಿನ ಎ. ಶೆಡ್ಯೂಲಿನ ಕಾಣ್ಸಿದ ಎಲ್ಲಾ ಆಸ್ತಿಗಳಲ್ಲಿ ವಾದಿಗೆ ಹಿಸೆ ಕೊಡಿಸಬೇಕೆಂತ ವಗೈರೆ ಕಾಣ್ಸಿ ಸದ್ರಿ ಮೇಲಿನ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 17-4-1946ನೇ ಪೂರ್ವಾಹ್ನ 11 ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿರುತ್ತದೆ. ಸದ್ರಿ ದಿವಸ 6ನೇ ಪ್ರತಿವಾದಿಯು ಖುದ್ದಾಗಿ ಯಾ ವಕೀಲರ ಮುಖಾಂತ್ರ ಕೋರ್ಟು ಮುಂದೆ ಹಾಜ್ರಾಗಿ ಆಕ್ಷೇಪಗಳಿದ್ದರೆ ಮನವಿ ಮಾಡಿಕೊಳ್ಳಬಹುದು. ತಪ್ಪಿದ್ರೆ ಸದ್ರಿ ವ್ಯಾಜ್ಯವು ಆತನ ಗೈರ್ ಹಾಜರಿಯಿಂದ ತೀರ್ಮಾನವಾಗುವದು ಎಂತ ಕೋರ್ಟು ಹುಕ್ಕುಂ ಪ್ರಕಾರ ಪ್ರಕಟಿಸೋಣಾಗಿಯದೆ.

ಮಂಗ್ಳೂರು } **P. Vasudeva Rao.**
27-3-46 } Advocate for plaintiff

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅನೇಕ ದಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ)



ಈ ದಿನ್ನಿನ ಜಾಹೀರುಗಳು ಚೆಲ್ಲು ಕಡೆ ... ಪುತ್ರರಿಗೆ ಬರುವವು. ಅಂದರೆ ಕೇವಲ ಆ ರಸಾಯನಗಳೇ ಹೇಳಿದ ಬಾಣಂತಿಯರಿಗೆ ... ಕೇಳಿಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ವಾತಿಸ್ಥರು- ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಕೀವರಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಕರೀಗದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ದ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿನದ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶಿವಬಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya. GADAG.

ವ್ಯಯ ಸಂವತ್ಸರದ

(1946-1947)

ಶ್ರೀಪತಿ ಪಂಚಾಂಗ

ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.

ಬೆಲೆ 0—5—0.

ವಿಳಾಸ:—

ಶ್ರೀಪತಿ ನರಸಿಂಹ ಅಡಿಗ,

ಬೇಳೂರು ಗ್ರಾಮ, ಪೋಸ್ಟ್ ಕೋಟ,

ಅಥವಾ

ನವಭಾರತ ಬುಕ್ ಡಿಪೋ, ಉಡುಪಿ.

[೨ನೇ ಪುಟದಿಂದ]

ಸ್ವಾರ್ಥದಿಂದಲೇ ಹುರುಪುಗೊಳ್ಳಬೇಕು; ಹೊಟ್ಟೆ ಮಾತ್ರವಿದ್ದು ತಲೆಯಿಲ್ಲದ ವರ್ಗಕ್ಕೆ ಹೊಟ್ಟೆಯ ಬೆಂಕಿಯು ನೆನಪು ಕೊಟ್ಟರೇನೇ ಮುಂದಟ್ಟಾದೀತು; ಅಶ್ಲೀಲ ಸಂಭಾಷಣೆಯು ಸ್ವಭಾವಬದ್ಧವಾಗಿರುವವರಿಗೆ, ಧನಿಗಳನ್ನು ಅಶ್ಲೀಲ ಮಾತುಗಳಿಂದ ಬೈದರೇನೇ ತಿಳಿದೀತು-ಎಂಬುದಕ್ಕಾಗಿಯೇ ಕಮ್ಯೂನಿಸ್ಟರಿಂದ ಇಂತಹವಾಗ್ಬಾಣಗಳು! ವೇದಿಕೆಯಿಂದ ಕೆಳಗಿಳಿದ ಮೇಲೆ ಈ ಕಮ್ಯೂನಿಸ್ಟ್ ಭಾಷಣಗಾರನು, ಹಿರಣ್ಯಕಶಿಪುವಿನ ಪಾತ್ರವನ್ನು ಮುಗಿಸಿ ಬಂದ ವರದಾಚಾರ್ಯರಂತೆಯೇ ಸರಿ. ಅವೆಲ್ಲಾ ರಂಗಭೂಮಿಯಲ್ಲಿ ಮಾತ್ರ!

ಇದು ಅಕ್ಷಮ್ಯ ವಂಚನೆಯಲ್ಲವೆ?

ಅವಿದ್ಯಾವಂತ, ಅಸಂಸ್ಕೃತ ಕೆಲಸಗಾರರ ಅಸಹ್ಯ ಮಾತು ಮತ್ತು ಅಸಭ್ಯ ವರ್ತನೆಗಳಿಗೆ ಕ್ಷಮೆಯಿದೆ. ಈ ತಪ್ಪಿನ ಹೊಣೆ ಹೊರಲು ಸುಮಾರು ಎರಡು ಶತಮಾನಗಳಿಂದ ಆಳುತಿದ್ದರೂ ಜನತೆಯ ನೂರಕ್ಕೈದಾರು ಮಂದಿ ಮಾತ್ರ ವಿದ್ಯಾವಂತರಾಗುವಂತೆ ಮಾಡಿರುವ ಬ್ರಿಟಿಷ್ ಸರಕಾರವೇ ಬಾಧ್ಯವಿದೆ. ಆದರೆ ವಿದ್ಯಾವಂತರಾಗಿದ್ದು ತಮ್ಮ ಅನುಯಾಯೀ ಅಜ್ಞಾನಿಗಳನ್ನು ವಂಚಿಸುವದಕ್ಕಾಗಿಯೇ ಇಂತಹ ನಟನೆ ಮಾಡುವವರ ನಾಗರಿಕತನವನ್ನು ಕ್ಷಮಿಸಬಹುದೆ? ಒಂದು ಕಾರ್ಖಾನೆಯ ಕೆಲಸಗಾರರು ಸಂಕಷ್ಟಕ್ಕೀಡಾದರೆಂದಾದೊಡನೆ, ಅದರ ನಿವಾರಣೆಗಾಗಿ ಪ್ರಯಾಸಪಡುವ ಬದಲಿಗೆ, ತಮ್ಮ ಪ್ರಚಾರಕ್ಕೊಂದು ಸಂದರ್ಭ ದೊರೆಯಿತೆಂದು ಹಿಗ್ಗಿ, ಕೆಲಸಗಾರರನ್ನು ನಿಜವಾದ ಕಾರ್ಯರಂಗದಿಂದೆಬ್ಬಿಸಿಕೊಂಡು ರಾಜರಸ್ತೆಗೆ ತಂದು ಮೆರವಣಿಗೆ ನಡಿಸುವವರನ್ನೂ ಮನ್ನಿಸಲು ಸಾಧ್ಯವೆ? ಪ್ರಚಾರವೆಂಬ ಹೆಸರಿನಿಂದ ಮುಖಂಡರು ಕೆಲಸಗಾರರಿಂದ ಎಬ್ಬಿಸಿರುವ ಬೊಬ್ಬೆಗಳೂ ಹೊಡರುವ ಕೆಲವು ಚಳವಳಗಳೂ ಸಾರ್ವಜನಿಕರಿಗೆ ಅಸಹ್ಯವಾಗಿವೆ. ಅವರಿರುವ ದಿಕ್ಕನ್ನೇ ಜಿಗುಪ್ಸೆಯಿಂದ ನೋಡುವಂತಾಗಿದೆ. ಇಂತಹ ವಾತಾವರಣದ ನಿರ್ಮಾಣವೇ ಕಮ್ಯೂನಿಸ್ಟರ ಗುರಿಯೆ? ಧನಿತನ,ಧನಿಕತನಗಳ ಮೇಲೆ ದ್ವೇಷ ಮೊಳೆಯಿಸುವದು ಕಮ್ಯೂನಿಸ್ಟರ ಧ್ಯೇಯವಿರಬಹುದು; ಸಾರ್ವಜನಿಕರಲ್ಲಿ ಜಿಗುಪ್ಸೆ ಮೊಳೆಯಿಸುವದೂ ಅವರ ಗುರಿಯಲ್ಲವಷ್ಟೆ? ಕೆಲಸಗಾರರನ್ನು ಮುಷ್ಕರಕ್ಕೆ ದೂಡಿ ಉಪವಾಸ ಹಾಕಿದಾಗ ಡಬ್ಬಿ ಹಿಡಿದುಕೊಂಡು ಹೋಗಬೇಕು ಈ ಸಾರ್ವಜನಿಕರ ಸಮ್ಮುಖಕ್ಕೇನೇ ಅಲ್ಲವೆ?

ಅಲ್ಪವು ಎಂದಿಗೂ ಅಮೂಲ್ಯವಾಗದು

ದ. ಕ. ಜನತೆಗೆ ಜೈಕಾರಗಳನ್ನು ಕೇಳಿ ಅನುಭವವಿದೆ; ಅವರೇನೂ ಶಬ್ದ ಕೇಳಿ ಬೆಚ್ಚುವ ಗೂಳಿಗಳಲ್ಲ. ಚಳವಳ, ಸತ್ಯಾಗ್ರಹ, ಪಿಕೆಟಿಂಗ್, ಮುಷ್ಕರಗಳು ಅವರಿಗೆ ಹೊಸತಲ್ಲ. "ಕಾಂಗ್ರೆಸಿನವರು ಜೈಕಾರ ಹಾಕಿಸಿದ್ದಿಲ್ಲವೆ? ಚಳವಳವೆಬ್ಬಿಸಿದ್ದಿಲ್ಲವೆ? ಕೆಲಸಗಾರ ವರ್ಗ ಮಾತ್ರ ಅಂತಹದನ್ನು ಮಾಡಿದರೆ ಇಷ್ಟೊಂದು ಜಿಗುಪ್ಸೆಯೆ?" ಎಂಬ ಪ್ರಶ್ನೆ ಬರಬಹುದು. ನಿಮ್ಮ 'ಎರಡಾಣೆ ಕೂಲಿ ಏರಲೇ ಬೇಕು' 'ಮೂರು ತಿಂಗಳ ಬೋನಸು ಸಿಗಲೇ ಬೇಕು' 'ತೆಗೆದು ಹಾಕಿದ ಕೆಲಸಗಾರರನ್ನು ಹಿಂದೆಗೆಯಲೇ ಬೇಕು' ಇತ್ಯಾದಿ ಬೊಬ್ಬೆಗಳಿಗೆ ಮಾತ್ರ ಸಾರ್ವಜನಿಕರು ಜಿಗುಪ್ಸೆಗೊಳಪಡುವದಲ್ಲ. ಹಸುಗೇ ಕಡಿತದಿಂದಾಗಿ ಎಲ್ಲರಿಗೂ—ಶ್ರೀಮಂತರಿಗೆ ಸಹಾ-ವಿಶೇಷಾಪತ್ತು ಬಂದಿರುವುದು ನಿಜವಷ್ಟೆ? ನಾಳೆ, ಒಳ್ಳೇ ಸಂಭಾವಿತರ ಒಂದು ಗುಂಪು ಮೆರವಣಿಗೆ ತೆಗೆದು "ನಮಗೆ ಎರಡು ಪಾವಕ್ಕಿಯ ರೇಶನ್ ಸಿಗಲೇ ಬೇಕು" ಎಂದು ಬೊಬ್ಬೆ ಹಾಕುತ್ತಾ ಪೇಟೆ ಸುತ್ತಿದರೆ ಸಾರ್ವಜನಿಕರು ಇದಕ್ಕೂ ನಾಲ್ಕಡಿಯ ಅಸಹ್ಯ ಪ್ರದರ್ಶಿಸಿಯಾರು. ಜೈಕಾರವೆಂದರೇನು ತಮ್ಮ ಖಾಸಗೀ ಸಂಕಷ್ಟಗಳನ್ನು ಹೇಳಿಕೊಳ್ಳುವ ಕಿವಿ ಮಾತೆ? ಅದು ಆಕಾಶವಾಣಿ. 'ಭಾರತಮಾತಾಕೀಜೈ'ಗೂ 'ಮೂರು ತಿಂಗಳ ಬೋನಸ್ ಸಿಗಲೇ ಬೇಕು' ಗೂ ವ್ಯತ್ಯಾಸವಿದೆ. 'ನಾಲ್ವರು ಕೆಲಸಗಾರರನ್ನು ಸೇರಿಸಿಕೊಳ್ಳಲೇಬೇಕು' ಎಂಬುದು 'ಇಂಕ್ವಿಲಾಬ್ ಝಿಂದಾಬಾದ್'ಗೆ ಸಮಾನವಾಗದು. ಸಾಮೂಹಿಕ ತತ್ವವೊಂದನ್ನೆತ್ತಿ ಜೈ ಹಾಕಬಹುದು ಹೊರತು ಸ್ಥಳೀಯವಾದದಂತಹ ಅಲ್ಪ ವಿಷಯಕ್ಕೆ ಅಂತಹ ಸ್ಥಾನಕೊಡಬಾರದು. ಮನೆಗೆ ಬೆಂಕಿ ಹಚ್ಚಿದುದನ್ನು ಕೂಗಿ ಹೇಳುತ್ತಾ ಹೋದಂತೆ ಮನೆಯಲ್ಲಿ ಅನಾಚಾರ ನಡೆದುದನ್ನೂ ಸಾರಿ ಹೇಳುವ ಕ್ರಮವಿಲ್ಲ. ಆದ್ದರಿಂದ ಈ ಕುರಿತು ಸಾರ್ವಜನಿಕರು ಅಸಹ್ಯಪಡುವದು ಬುದ್ಧಿಯ ಅಲ್ಪತನಕ್ಕಾಗಿ ಹೊರತು ಕೆಲಸಗಾರರು ಅಲ್ಪರೆಂದಲ್ಲ.

(ಮುಂದುವರಿಯುವುದು.)



ಕ್ಷಣಿಕ ಗುಣಕೊಡುವ ಔಷಧದ
ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿಸದೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೨-೬-೦, ೫ ೧೨-೦ ಮತ್ತು ೧೦ ೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್‌ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



PUROHIT
SHWAS-HARI

The Pangal Nayak Bank Limited.

(Incorporated in 1920.)
Registered Office. Court Road, UDIPI.

Sub-Offices at— **Udipi, Mangalore, Katapadi, Kanhangad, Kinnigoli, Nileshwar and Suratkal,** South Canara.

SEASON DEPOSITS for THREE & FOUR
months at a special rate of interest are accepted at all the above offices.

All kinds of up-to-date Banking service is provided promptly.

Please call for particulars of business

Dated the 5th January 1946.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆಂಡ್ರ ಬರದಲ್ಲಿ ರೋಗಗಳಿಗೆ ತಕ್ಕಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183. ಸುವಾರಿಬಾಗ್ ರೋಡ್, ಜಿ. ಐ ಪಿ ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಎ. ಪಿ. ಮಾಟುಂಗಾ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

ಸ್ಮಾಲ ನಂಬ್ರ 206/1943
ಸ್ಮಾಲ್ ಅಮ್ಲುಜಾರಿ ಅರ್ಜಿ ನಂಬ್ರ 1/1946.
ಪಮ್ಮಕ್ಕೆ ಯಾನೆ ಲಕ್ಷ್ಮಿ ಅಮ್ಮ
— ಅರ್ಜಿದಾರಳು.

1 ಪ್ರತಿವಾದಿ ಅಮದೆ ಬ್ಯಾರಿ, ಬಿಳಿಯೂರು ಮಮ್ಮದೆ ಬ್ಯಾರಿಗಳ ಮಗ. ಉರ್ವಾಲು ಗ್ರಾಮ. 2. ಜಾಮೀನುದಾರ ಪಿ. ವೆಂಕಟ್ರಾವ್, ಸಿಲಿಬೈಲು ಶಂಕ್ರನಾರ್ಣಪ್ಪಯ್ಯನವರ ಮಗ, ಉರ್ವಾಲು ಗ್ರಾಮದ ಪ್ರಯಿಲು—ಯೆದ್ರಿರು.

ಸದ್ರಿ ಒಂದನೇ ಯದ್ರಿ ಅಮದೆ ಬ್ಯಾರಿಗೆ, ಮೇಲಿನ ವ್ಯವಹರಣೆಯಲ್ಲಿ ಯೆದ್ರಿರು ಕೋರ್ಟಿಗೆ ಬರಕೊಟ್ಟ ಜಾಮೀನು ಕರಾರು ಶರತ್ತ ಪ್ರಕಾರ ಜಪ್ತಿ ಆದ ಸೊತ್ತುಗಳು ಮೇಲಿನ ಬಗ್ಗೆ ಹಾಜರುಪಡಿಸಲಿಕ್ಕೆ ತಪ್ಪಿದ ಕಾರಣ ಜಾಮೀನು ಕರಾರು ಶರತ ಉರ್ಜಿತಕ್ಕೆ ತಂದು 2ನೆ ಯೆದ್ರಿಗೆ ವಾರಂಟಿನಲ್ಲಿ ತಪ್ಪಿ ಸಿವಿಲ್ ಜೈಲಿಗೆ ರವಾನಿಸಬೇಕಾಗಿ ಅರ್ಜಿದಾರಳು ಮೇಲಿನ ಅರ್ಜಿ ಕೊಟ್ಟಿರುವದ್ರಿಂದ ಸದ್ರಿ ಅರ್ಜಿಯ ತನಿಖೆಯು ತಾರೀಖು 17-4-1946 ಕ್ಕೆ ಇಟ್ಟಿದೆ. ಈ ಕುರಿತು ಸದ್ರಿ ನ್ಯಾಯದಿನ ಹಗಲು 10 ಘಂಟೆಗೆ ಸದ್ರಿ ಯೆದ್ರಿಯು ಹಾಜರಾಗಿ ಉತ್ತರಿಸದಿದ್ದಲ್ಲಿ ಸದ್ರಿ ಅರ್ಜಿಯು ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲ್ಪಡುವದು. ಯೆಂತ ಯಿದರಿಂದ ತಿಳಿಸೋಣಾಗುತ್ತದೆ

H. Sanjiva Shetty.
Advocate for Petr.
ಪುತ್ತೂರು, ತಾ. 28-3 1946.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಹಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

The General Investment & Commercial Corporation, Limited,

UDIPI. S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.	THE BHARATH MILLS. Ltd.
With	
Dr. T. M. A. Pai, M. B., B. S.	Upendra Ananth Pai, Esq.
Kochikar Panduranga Pai, Esq.	Dr. K. L. Aithala, M. B., B. S.
A. L. N. Rao, Esq., B. A., B. L.	A. L. N. Rao, Esq., B. A., B. L.
Dr. K. L. Aithala, M. B., B. S	Kochikar Manjunath Pai, Esq
T. N. Kelu Nambiar Esq.	Kalsank Venkatraya Pai, Esq.
Dr. V. K. Ballal, L. I. M.	B. Padmanabha Pai, Esq.
T. Ramesh U. Pai, Esq	T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. H. Shetty at the Navayuga Press, Udipi, S. India.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA

ನವಯುಗ

ವರ್ಷ ೨೫ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ | Vol. 25
ವಾರ ೩೨ | Founder: SRI A. B. SHETTY. M. L. A. | No. 32

ಉಡುಪಿ ● 11—4—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6.

ಅಮೃತಾಂಜನ.

ತಲೆನೋವು, ಶೀತ, ನೆಗಡಿ, ಉಳುಕು ... ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಕಟ್ಟಿವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD.

ಔಷಧ, ಜಳುಕಳಲ್ಲಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE PROTECTION

If a mother was left unprovided for and if the children were too young to earn a livlihood and maintain the family, how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,

Head Office.- **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಬಿ., ಎಲ್., ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

THE Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including
Travancore, Cochin and Mysore State

New Business in 1945 in our area:- **Over 5 Millions.**

OUR Expert advice gained by 35 years Experience is at your door FREE

Drop a card to any of our Offices at —

MADRAS * BANGALORE * MADURA * CALICUT
TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ದಾ। ಕೆ। ಶೇಷಗಿರಿ ಶೈ, L I M ; ಡಾ। ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪೋ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಇಚ್ಛಿಸುತ್ತೇನೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.

Head Office.—**MANGALORE**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಕಮ್ಯೂನಿಸ್ಟ್ ಧೋರಣೆ—ಲೇಖಾಂಕ ೫

ಮುಷ್ಕರ ಹೂಡಿಸಿ ಪಡೆದುದೇನು?

'ವಿಚಾರಿ'ಯಿಂದ

ಸ್ಪರ್ಧೆ ಸಮತೆಯನ್ನು ಅಪೇಕ್ಷಿಸುವವರು ಆ ಸಮಾನತೆಯ ರೂಪದಲ್ಲೇ ಏರುತಗ್ಗನ್ನು ನಿರ್ಮಿಸಬಾರದು. ಉತ್ಪತ್ತಿಯನ್ನು ಧನಿ ಮತ್ತು ಕೆಲಸಗಾರರು ಹೇಗೆ ಸಮಾನವಾಗಿ ಅನುಭೋಗಿಬೇಕೋ ಹಾಗೆಯೇ ಅವರೊಳಗೆ ಗುಣ ಸಾಮ್ಯತೆಯೂ ಬೇಕೆಂಬುದೊಂದೇ ನನ್ನ ವಾದ. ನಮ್ಮ ಕಮ್ಯೂನಿಸ್ಟ್ ಬಂಧುಗಳು ಒಂದು ಕ್ಷೇತ್ರದಲ್ಲಿ ಸಮತೆಯನ್ನು ನಿರ್ಮಿಸುವ ಸ್ತುತ್ಯ ಪ್ರಯತ್ನದಲ್ಲಿದ್ದಾರೆ; ಮತ್ತೊಂದು ರಂಗದಲ್ಲಿ ವಿಷಮತೆಯನ್ನು ನಿರ್ಮಿಸಿಬಿಟ್ಟಿದ್ದಾರೆ. ಈ ಲೇಖನ ಮಾಲೆಯಲ್ಲಿ ಬಂದಿರುವ ನನ್ನ ಖಂಡನೆಯೆಲ್ಲವೂ ವಿಷಮತೆಯ ಭಾಗಕ್ಕೆಸೆದಬಾಣಹೊರತು ಸಮಾನತೆಯ ರಂಗಕ್ಕಲ್ಲವೇ ಅಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು. ನಿದರ್ಶನಕ್ಕಾಗಿ ಕಮ್ಯೂನಿಸ್ಟರ ಕೈಯಲ್ಲಿರುವ ಕೆಲಸಗಾರರ ಮತ್ತು ಅವರಿಂದ ಕೆಲಸಮಾಡಿಸುತ್ತಿರುವ ಧನಿಗಳೊಳಗಿನ ಸಂಬಂಧ ಹೇಗಿದೆ ಎಂಬುದನ್ನು ನೋಡೋಣ. ತಮ್ಮ ಬೆವರಿನ ಹಣದಿಂದ ಲಾಭ ಹೊಡೆಯುವವರು ಎಂದು ಕೆಲಸಗಾರರು ದೂರುವ ರೀತಿಯಲ್ಲಿ ಯಜಮಾನರಿದ್ದಾರೆ. ಬೆದರಿಕೆಬೀರಿ, ಪುಂಡು ಮನೋವೃತ್ತಿ ಪ್ರದರ್ಶಿಸಿ ತಮ್ಮನ್ನು ಸುಲಿಗೆ ಮಾಡಲು ಹೊರಟವರು ಎಂದು ಧನಿಗಳು ದೂರುವ ರೀತಿಯಲ್ಲಿ ಕೆಲಸಗಾರರಿದ್ದಾರೆ; ಇವೆರಡಕ್ಕೂ 'ನಿಜ; ನಿಜ' ಎಂದು ನಿಷ್ಪಕ್ಷಪಾತಿ ಸಾರ್ವಜನಿಕರು ಹೇಳುವ ರೀತಿಯಲ್ಲಿ ಎರಡು ಕಡೆಯವರೂ ಇದ್ದಾರೆ. ಉತ್ಪತ್ತಿಯ ಸಮಾನ ಅನುಭೋಗವಾಗಬೇಕೆನ್ನುವ ಕಮ್ಯೂನಿಸ್ಟನೆಂತೂ ಸಮತವಾದಿ, ವರ್ತನೆಯಲ್ಲಿ ಸಮಾನ ಸೌಮ್ಯತೆ ಬೇಕೆನ್ನುವ ಧನಿಯೂ ಮತ್ತೊಂದು ವಿಧದ ಸಮತಾವಾದಿ. ಇಕ್ಕಡೆಯವರೂ ತಂತಮ್ಮ ಅನುಕೂಲತೆಗಾಗಿ ಅರ್ಧಮರ್ಧ ಸಮತಾವಾದಿಗಳು! ಅವರೆ ಎರಡರಲ್ಲೂ ಸಮಾನತೆ ಬೇಕೆನ್ನುವವನೇ ನಿಜವಾದ ಮತ್ತು ಸಂಪೂರ್ಣ ಸಮತಾವಾದಿ. ನನ್ನ ವಾದದ ಗುರಿ ಈ ಸಂಪೂರ್ಣ ಸಮತೆಯೊಂದೇ.

ಸಂಘ ಶಕ್ತಿ.

ಕೆಲಸಗಾರರಲ್ಲಿ ಸಂಘ ಶಕ್ತಿಯಿಲ್ಲದಿದ್ದಾಗ ಧನಿಯು ಕೆಲಸಗಾರನಿಗೆ ನ್ಯಾಯವಾಗಿ ಸಲಬೇಕಾಗಿದ್ದ ಸಂಬಳ ಯಾನೆ ಪಾಲಿನಲ್ಲಿ ವಂಚನೆ ನಡಸಿದನೆನ್ನೋಣ. ಆಗ ಆ ಕೆಲಸಗಾರನು ಧನಿಯೊಡನೆ ಒರಟು ಮಾತುಗಳಿಂದ ವಾದಿಸಿ ನೋಡಬಹುದು ಫಲ ಬಾರದಿದ್ದರೆ ಬಯ್ಯಲಾರಂಭಿಸಬಹುದು ಅದೂ ಫಲಿಸದಿದ್ದರೆ ತನ್ನ ಬುದ್ಧಿಯ ಮಟ್ಟಕ್ಕನುಸಾರವಾಗಿ ಅತ್ಯಾಚಾರಕ್ಕೇನೇ ಇಳಿಯ ಬಹುದು. ಇಲ್ಲಿ ಕೆಲಸಗಾರನ ಗುರಿ ಪೂರ್ಣ ಸರಿಯಾಗಿದ್ದಂತೆಯೇ ಆತನು ಕೈಕೊಂಡ ವಿಧಾನಗಳು ಸಂಪೂರ್ಣ ತಪ್ಪಾಗಿರಬಹುದು. ಇದು ಏಕಾಕಿ ಕೆಲಸಗಾರನಿಂದಾಗುವಂತಹ ಅಪರಾಧ. ಕೆಲಸಗಾರರ ಸಂಘಗಳು ಅದೇ ತಪ್ಪನ್ನು ಸಂಘಟಿಸಿ ದೊಡ್ಡ ರೂಪದಿಂದ ಮಾಡುವದಕ್ಕಾಗಿಯೇ ನಿರ್ಮಾಣ ಗೊಂಡಿರುವವೆ? ಕಮ್ಯೂನಿಸ್ಟರ ಕೈಯಲ್ಲಿರುವ ಸಂಘಗಳ ವರ್ತನೆಗಳ ಮೇಲಿಂದ ಹಾಗೆಂದೇ ಹೇಳಬೇಕಾಗುತ್ತದೆ ಒಂದು ಕಾರ್ಖಾನೆಯ ಮಾಲಕನು ಓರ್ವ ಕೆಲಸಗಾರನನ್ನು ತೆಗೆದು ಹಾಕಿದರೆ, ಆ ಸಂಕಷ್ಟವು ಆ ಕೆಲಸಗಾರನಿಗೆ ಸಹಿಸಲಾಗದ ಹೊರೆಯಾಗಬಹುದು; ಅವನ ಬುದ್ಧಿ ಗೊಂದಲಕ್ಕೀಡಾಗ ಬಹುದು ಯಾಕೆಂದರೆ ಆತನ ಅಲ್ಪ ಶಕ್ತಿಗೆ ಮಿಕ್ಕಿದುದದು. ಆದರೆ ಕೆಲಸಗಾರರ ಸಂಘಕ್ಕೆ ಅದು ಅಂತಹ ಹೊರೆಯಾಗದು. ಅದರ ಶಕ್ತಿ ದೊಡ್ಡದು. ಆದ್ದರಿಂದ ಇಷ್ಟೊಂದು ಅಲ್ಪ ವಿಷಯಕ್ಕಾಗಿ ಅದು ಗಲಿಬಿಲಿಗೊಂಡು ಆರ್ಭಟಿಸುವದು, ಜರೆಯುವದು, ಅಡ್ಡಾಡುವದೇ ಮೊದಲಾದ ದೌರ್ಬಲ್ಯ ಪ್ರದರ್ಶಿಸುವದು ಸರಿಯಲ್ಲ. ಅಂದರೆ ಕೆಲಸಗಾರರ ರದ್ದತಿಯನ್ನು ಸಂಘವು ಕಡೆಗಣಿಸಬೇಕೆಂಬ ಅರ್ಥವಲ್ಲ—ಕಳವಳ ಪ್ರದರ್ಶಿಸ ಬಾರದು: ಕಂಡಾಬಟ್ಟೆ ವರ್ತನೆ ಸಲ್ಲದು. ಅದು ಘನವಾದ ವರ್ತನೆ ವಹಿಸಿದಲ್ಲಿ, ತಾನು ಬೊಬ್ಬೆ ಹಾಕುವ ಬದಲಿಗೆ ಅಪರಾಧಿ ಯಜಮಾನನು ಅಳುವಂತೆ, ...ವಂತೆ ಮಾಡಲು ಸಾಧ್ಯವಿದೆ. ಆದರೆ ನಾನು ಸಕಾರಣವಾಗಿ ವಾದಿಸುತ್ತಾ ಬಂದಂತೆ ಕಮ್ಯೂನಿಸ್ಟರು ಕೆಲಸಗಾರರ ಅಜ್ಞಾನವನ್ನು, ಅಂಥ ಮನೋವೃತ್ತಿಯನ್ನು, ಪುಂಡುಮನೋಗತಿಯನ್ನೇ ಬೆಳೆಸುತ್ತಾ ಬಂದಿದ್ದಾರೆ ಸಂಘವಿಲ್ಲದಾಗ ಏಕಾಕಿ ಕೆಲಸಗಾರರ ಪುಂಡುಮನೋವೃತ್ತಿಯನ್ನಿದಿರಿಸಬೇಕಾಗಿದ್ದ ಧನಿಗಳು ಈಗ ಸಾವಿರಾರು ಜನರಿರುವ ಗುಂಪಿನ ಸಂಘಟಿತ ಪುಂಡಾಟಿಕೆಯನ್ನಿದಿರಿಸಬೇಕಾಗಿ ಬಂದಿದೆ. ಈ ದೃಷ್ಟಿಯಿಂದ, ನಮ್ಮ ಕಮ್ಯೂನಿಸ್ಟರೂ ಖಿಲಾಡಿ ಪಂಗಡಗಳ ನಾಯಕರಾಗಿ 'ಕಾರ್ಬಾರು' ನಡಿಸುವ ಪಾಳೆಯಗಾರರಿಗೆ ಸಮಾನ. ಮಾಲಕ ವರ್ಗವೂ ಈಗ ತನ್ನ ಸಂಘ ರಚಿಸಿಕೊಳ್ಳಹತ್ತಿದೆ. ಇದೇ ರೀತಿಯಲ್ಲಿ ತಮ್ಮ ಅನ್ಯಾಯದ ರಂಗವಾಗಿರುವ ದುಡಿಮೆಯ ಪ್ರತಿಫಲಾಪಹಾರವನ್ನು ಸಂಘಟನಾ ರೂಪದಿಂದ ಮಾಡುವ ಹಂಚಿಕೆಯಿದಲ್ಲವೆ? ಮನೋ ರಂಗದಲ್ಲಿ ಸಂಘಟಿತ ಕೆಲಸಗಾರರಿಂದಾಗುವ ಅನ್ಯಾಯವನ್ನು ಖಂಡಿಸುವವರು ಕಾರ್ಯ ರಂಗದಲ್ಲಿ ಸಂಘಟಿತ ಧನಿಗಳಿಂದಾಗುವ ಅನ್ಯಾಯವನ್ನು ಕ್ಷಮಿಸುವರೇನು? ಎಂಬ ಪ್ರಶ್ನೆ ಬರಬಹುದು. ಅವರು ನಮ್ಮವರಲ್ಲ; ನಮ್ಮವರಾದ ಕೆಲಸಗಾರರು ತಪ್ಪಿ ಬೀಳದಂತೆ ನೋಡುವದೇ ನಮ್ಮ ಕರ್ತವ್ಯ. 'ಮಾಲಕ ಮನೋವೃತ್ತಿಗೆ ಅಸ್ತಿತ್ವವೇ ಇಲ್ಲ' ವೆಂಬ ನಿರ್ಧಾರಕ್ಕೆ ಬಂದು ಅದರೊಡನೆ ಸಂಬೋಧಿಸುವದನ್ನು ಇಲ್ಲಿ ಬಿಟ್ಟೇ ಬಿಡಲಾಗಿದೆ ಅದರ ಮುಂಭಾಗದಲ್ಲಿ ಕೆಲಸಗಾರರು ತಮ್ಮ ದೌರ್ಬಲ್ಯ ಪ್ರದರ್ಶಿಸಿ, ಸೋಲುವ ಬದಲಿಗೆ ಸಶಕ್ತ ಘನತೆಯಿಂದ–ಮರ್ಮ ತಾಡನ ಕೊಟ್ಟು–ಗೆಲ್ಲುವ ವಿಧಾನವನ್ನು ಮಾತ್ರ ಅನುಕರಿಸಬೇಕೆಂಬುದೇ ವಿಚಾರಿಯವಾದ.

ತುಲನಾತ್ಮಕ ಬುದ್ಧಿಯಿರಲಿ

ನಾಗರಿಕರೆನ್ನಿಸುವವರ, ಸುಸಂಸ್ಕೃತರೆನ್ನಿಸುವವರ ಕಪಟ, ವಂಚನೆ ಇತ್ಯಾದಿ ದುರ್ಗುಣಗಳಗಿಂತ ಕೆಲಸಗಾರ ಒರಟು ಮನೋವೃತ್ತಿ ಹೇಯವೆಂದು ನಾನನ್ನಲಾರೆ ಆದರ ಜನ ಸಾಮಾನ್ಯರಿಗೆ ... ...ನೆಯ ವರ್ಗದ ಮನೋವೃತ್ತಿಯಲ್ಲಿ ಅಸಾದಾರಣೆ ಮಾತ್ರ ಹುಟ್ಟುತ್ತದಾದರೆ ಎರಡನೆಯದು ಅಸಹ್ಯವೇ ಆಗಿಬಿಡುತ್ತದೆ ಈ ಪುಂಡು ಮನೋವೃತ್ತಿಯಾದರೂ ಹೆಂಚು, ಬೀಡಿ, ಮಗ್ಗ ಕೆಲಸಗಾರರಲ್ಲಿದೆ ಹೊರತು ಮಾಲಕರಲ್ಲಿಲ್ಲವೆಂದು ನನ್ನವಾದವಲ್ಲ. ಆದರೆ ಕೆಲಸಗಾರರನ್ನದು ಕೆಳದರ್ಜೆಗಿಳಿಸುವಷ್ಟು—ಮಾಲಕರ ಬುದ್ಧಿ ಮಾಲಕರಿಗೆ ಹಾನಿಕರವಾಗಿಲ್ಲ. ದುರ್ನಡತೆ, ದುರ್ಗುಣಗಳು ಎಲ್ಲಿದ್ದರೂ ಖಂಡನೀಯ. ಆದರೆ ಮಾಲಕ ವರ್ಗಕ್ಕೆ ತಮ್ಮಲ್ಲಿರುವ ಇಂತಹ ದುಸ್ವಭಾವಗಳನ್ನು ಮರೆ ಮಾಚಿಕೊಳ್ಳುವಷ್ಟು 'ನಾಚಿಕೆಯೂ' ದರೂ ಇದೆ; ಅವು ತಮ್ಮ 'ಪಾಲಿನ' ಭೂಷಣಗಳಲ್ಲವೆಂಬಷ್ಟು ತಿಳುವಳಿಕೆಯಾದರೂ ಇದೆ. ಆದರೆ, ಕಮ್ಯೂನಿಸ್ಟರ ಕಲಿಸುವಿಕೆಯ ಪರಿಣಾಮವಾಗಿ ಕೆಲಸಗಾರರು ಅಂತಹ ಸ್ವಭಾವವನ್ನೇ ತಮ್ಮ ಶಕ್ತಿಯಾಗಿ, ತಮ್ಮ ಆಯುಧವಾಗಿ, ತಮಗೊಂದು ಭೂಷಣವೆಂಬಂತೆ ರಸ್ತೆ, ಮೈದಾನುಗಳಲ್ಲಿ ಪ್ರದರ್ಶಿಸುತ್ತಿದ್ದಾರೆ. ಇದು ಶೋಚನೀಯವಲ್ಲವೆ? ಕಮ್ಯೂನಿಸ್ಟರಿಂದ ಕೆಲಸಗಾರರಿಗೊದಗಿದ ದುರ್ಗತಿಯಲ್ಲವೆ? ಸಂಸ್ಕಾರ ಹೊಂದಿದ ಬುದ್ಧಿಯು ಒಂದು ತಪ್ಪನ್ನು ನಿವಾರಿಸಿಕೊಳ್ಳಲು ಚಡಪಡಿಸೀತು ಹೊರತು, ಅದಕ್ಕೆ ಮಿಗಿಲಾದ ಪ್ರತೀಕಾರ ಮಾಡಬೇಕೆಂದು ಹಾತೊರೆಯಲಾರದು. ಮಾಲಕರು ಮಜೂರರನ್ನು ದೀರ್ಘಾವಧಿಯಿಂದ ಸಂಪಾಯಿಗಳಂತೆ ಕಂಡಿರಬಹುದು; ವಂಚಿಸುತ್ತಾ ಬಂದಿರಬಹುದು; ಅವಮಾನಿಸಿರಬಹುದು. ಅವೆಲ್ಲವನ್ನೂ ಸದಾ ನೆನಪಿನಲ್ಲಿಕೊಂಡು, ಎಲ್ಲವುಗಳನ್ನೂ ಒಟ್ಟಿಗೆ ತೂಕ ಮಾಡಿ, ಅದಕ್ಕೆ ನಾಲ್ಮಡಿಯ ಪ್ರತೀಕಾರ ಮಾಡಬೇಕೆಂದು ಕೆಲಸಗಾರರು, ಹೀನೈಸಲು ಬಲಾತ್ಕರಿಸಲು, ಮುಖ ಭಂಗ ಮಾಡಲು ಹೊರಟರೆ, ಅವರ ಗುರಿಯಾಗಿರಬೇಕಾದ ಸಮಾನತೆಯ ಸ್ಥಾಪನೆ ಹೇಗೆ? ಹಿಂದುಸ್ಥಾನವನ್ನು 180 ವರುಷಗಳಿಗಳಗೂ ಮಿಕ್ಕಿ ಆಳಿದ ಬ್ರಿಟಿಷರ ತಪ್ಪಿಗಾಗಿ ಮುಂದಿನ 180 ವರುಷ ಇಂಗ್ಲೆಂಡನ್ನು ನಾವು ಆಳಬೇಕು ... ...ನೇತಾರರುಗಳು ವಾದಿಸಬಹುದೆ? ಪರಾಕ್ರಮಣ ಬುದ್ಧಿ ಯಾವ ರಾಷ್ಟ್ರಕ್ಕೂ ಇರಕೂಡದು ಎಂಬ ಅವರ ತತ್ವಕ್ಕಾರು ಗತಿ? ಎಲೆ, ಹೊಗೆಸೊಪ್ಪು ಇತ್ಯಾದಿಗಳ ಕ್ರಯದ ರೂ.ಆ ಪೈಯನ್ನು ಲೆಕ್ಕ ಹಾಕಿಯೇ ಎರಡಾಣೆ ಅಧಿಕ ಸಂಬಳ ಮತ್ತು, ಮೂರು ತಿಂಗಳ ಬೋನಸು ಕೇಳಲು ನಿಮಗೆ ಗೊತ್ತಿದೆ. ಅದೇ ರೀತಿ ನೀವು ಗುಂಪುಗುಂಪಾಗಿ, ರಸ್ತೆ ಮೈದಾನುಗಳಲ್ಲಿ ಯಜಮಾನರಿಗಾಗಿರುವ ಮಾನನಷ್ಟದಾಯೀ ಮಾತುಗಳಿಗೆ, ಅವಮಾನಕಾರಕ ಕೃತಿಗಳಿಗೆ, ಕೋರ್ಟು ನಿಯಮ ಪ್ರಕಾರದ ಲೆಕ್ಕ

(೧೧ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ರೋಜಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರಹ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

CANARA BANK LIMITED
Estd: 1906
(Incorporated in British India, liability of Members Limited)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 6 months	....	2½%
6 to 9 months	....	2¾%

Rates for Season Deposits of less than Rs 10000/- with a minimum of Rs. 1000/- and in multiples of Rs. 500/- may be ascertained on application to our nearest branch.

ವ್ಯಯ ಸಂವತ್ಸರದ
(1946-1947)
ಶ್ರೀಸತಿ ಪಂಚಾಂಗ
ಹಲವು ಉಪಯುಕ್ತ
ಸಂಗ್ರಹಗಳಿಂದೊಡಗೂಡಿದೆ.
ಬೆಲೆ 0—5—0.
ವಿಳಾಸ.—
ಶ್ರೀಪತಿ ನರಸಿಂಹ ಅಡಿಗ,
ಬೇಳೂರು ಗ್ರಾಮ, ಪೋಸ್ಟ್ ಕೋಟ.
ಅಥವಾ
ನವಭಾರತ ಬುಕ್ ಡಿಪೋ, ಉಡುಪಿ.

ನೌಕರ ಶಾಹಿಯ ಬೆಂಬಲ ಮತ್ತು ಪುಂಡಾಟಿಕೆಯಿಂದ ಲೀಗ್ ಗೆದ್ದಿತು!

ಅಜಾದ್—ಅಲೀಖಾನ್—ಕನ್ನಿಂಗಾಮ್ ವಾದ ಪ್ರತಿವಾದ.

ಈ ಬಾರಿಯ ಕೇಂದ್ರ ಮತ್ತು ಪ್ರಾಂತಿಕ ಎಸೆಂಬ್ಲಿಗಳ ಚುನಾವಣೆಗಳ ಸಂದರ್ಭಗಳಲ್ಲಿ ಮುಸ್ಲಿಂ ಲೀಗಿನ ಅತಿರೇಕ ವರ್ತನೆಗಳ ಕುರಿತಾಗಿಯೂ, ಅಧಿಕಾರಿಗಳು ತಮ್ಮ ತಾಟಸ್ಥ್ಯ ಪ್ರತಿಜ್ಞೆಗೆ ವಿರುದ್ಧವಾಗಿ ಲೀಗ್ ಪ್ರತಿನಿಧಿಗಳ ಪರವಾಗಿ ನಡಿಸಿರುವ ಪ್ರಚಾರಗಳ ಕುರಿತಾಗಿಯೂ ತನಗೆ ಹಲವಾರು ದೂರುಗಳು ಬಂದಿದ್ದುವು. ಆದರೂ ತಾನು ಟೀಕೆಗಳಿಯದೆ ಉದ್ದೇಶಪೂರ್ವಕ ಎಲ್ಲವನ್ನೂ ಸಹಿಸಿಕೊಂಡಿದ್ದೆ. ಬಂಗಾಳದ ಘಟನೆಯಿಂದ ಸುಮ್ಮನಿರುವದಸಾಧ್ಯವಾಗಿದೆ, ಎನ್ನುತ್ತಾ ರಾಷ್ಟ್ರಪತಿ ಮೌಲಾನಾ ಅಜಾದರು ಈ ಕೆಳಗಣ ಸಾರಾಂಶವುಳ್ಳ ಗಂಭೀರ ಹೇಳಿಕೆಯೊಂದನ್ನಿತ್ತಿದ್ದಾರೆ: —

ಗಡಿನಾಡಿನ ಮಾಜೀ ಗವರ್ನರ್

"ಅಖಿಲ ಭಾರತದಲ್ಲಿ ಸರ್ವ ವರ್ಗಗಳ ಸರಕಾರೀ ಅಧಿಕಾರಿಗಳೂ ಮುಸ್ಲಿಂಲೀಗಿನ ಕಡೆಗೆ ಬಹಿರಂಗವಾಗಿ ಪಕ್ಷಪಾತತನ ತೋರಿಸಿದ್ದವರ ಕಡೆಗೆ ನಾನು ಸಾರ್ವಜನಿಕರ ಲಕ್ಷ್ಯವನ್ನು ಪ್ರಥಮತಃ ಎಳೆಯಬಯಸುತ್ತೇನೆ. ಸಾರ್ವಜನಿಕ ಸೇವಕರಾಗಿ ತಾವು ಕೈಕೊಂಡಿದ್ದ ತಾಟಸ್ಥ್ಯ ಪ್ರತಿಜ್ಞೆಯನ್ನು ಮರೆತು ಅವರೆಲ್ಲಾ ಕಲ್ಕತ್ತದಿಂದ ಪೇಶಾವರದ ವರೆಗೂ ಮುಸ್ಲಿಂ ಲೀಗಿನ ಪರವಾಗಿ ಸರ್ವ ಶಕ್ತಿಯಿಂದ ಮತ್ತು ಜಾಹೀರಾಗಿ ಕೆಲಸ ಮಾಡಿದ್ದರು. ಯುರೋಪಿಯನ್ ಅಧಿಕಾರಿಗಳು ಈ ಸಂಬಂಧದಲ್ಲಿ ವಿಶೇಷ ಮೆಹನತ್ತು ವಹಿಸಿದ್ದರೆಂಬುದು ಎತ್ತಿ ಹೇಳತಕ್ಕ ವಿಷಯ. ಬಹುಶೀಕವಾಗಿ ಪ್ರತಿಯೊಂದು ಪ್ರಾಂತ್ಯದಿಂದಲೂ—ಮುಖ್ಯತಃ ಗಡಿನಾಡು ಪ್ರಾಂತ್ಯದಿಂದ-ಈ ಕುರಿತು ಹಲವು ದೂರುಗಳು ಬಂದಿವೆ; ಗಡಿನಾಡು ಪ್ರಾಂತ್ಯದ ಸ್ಥಿತಿ ಎಷ್ಟೊಂದು ಮುಂದುವರಿದಿತ್ತೆಂದರೆ, ಅಲ್ಲಿಯ ಮಾಜೀ ಗವರ್ನರ್ ಸರ್. ಜೋರ್ಜ್ ಕನ್ನಿಂಗ್ಹಾಮರೇ ಸ್ವತಃ ಈ ಪಟ್ಟಿಗೆ ದಾಖಲಾಗಿದ್ದರು ಅವರು ಕಾಂಗ್ರೆಸ್ ಉಮೇದ್ವಾರಿಗಳ ವಿರುದ್ಧ ಬಹಿರಂಗವಾಗಿ ಲೀಗಿನ ಚುನಾವಣಾ ಪ್ರಚಾರ ನಡಿಸಿದ್ದರು. ಅಲ್ಲಿಯ ಹೋಟಿ ಮಾರ್ದನ್‌ನಲ್ಲಿ ಜಿಲ್ಲೆಯ ಪ್ರತಿಷ್ಠಾವಂತರೆಲ್ಲಾ ಕೂಡಿದ್ದ ಒಂದು ಮದುವೆಯ ಸಂದರ್ಭದಲ್ಲಿ, ಈ ಗವರ್ನರರು ಲೀಗ್‌ನ್ನು ಸೇರಿ, ಅದರ ಉಮೇದ್ವಾರಿಯಾಗಿ ಚುನಾವಣೆಗೆ ನಿಲ್ಲಬೇಕೆಂದು ನವಾಬರನ್ನು ಬಹಿರಂಗವಾಗಿ ಕೇಳಿಕೊಂಡಿದ್ದರು.

ಯುರೋಪಿಯನ್ ದಂಪತಿಗಳು

ಅಲ್ಲಿಯ ಓರ್ವ ಯುರೋಪಿಯನ್ ಡೆಪ್ಯೂಟಿ ಕಮಿಶನರರು ಲೀಗ್ ಉಮೇದ್ವಾರಿಗಳಿಗೆ ವೋಟು ಕೊಡುವಂತೆ ಜಾಹೀರಾಗಿ ಬೋಧಿಸಿದ್ದಲ್ಲದೆ, ಮತದಾರರ ಭೇಟಿಗೆ ಸ್ವತಃ ಹೋಗಿದ್ದರು. ಅವರ ಪತ್ನಿಗಂತೂ ಲೀಗ್ ವಿಜಯದ ಆತುರವೆಷ್ಟಿತ್ತೆಂದರೆ, ತನ್ನ ಸ್ಥಾನಮಾನಗಳನ್ನೇ ಮರೆತು, ಮತದಾನ ಮಾಡುವಂತೆ ಮತದಾರರನ್ನು ಪುಸಲಾಯಿಸಲು ಆಕೆ ಸ್ವತಃ ಸಂಚರಿಸಿದ್ದಳು. ಗಡಿನಾಡಿನಲ್ಲೊಂದು ಸಂಪ್ರದಾಯವಿದೆ. ಪಠಾಣನೊಬ್ಬನು ಒಂದು ದೋಪತ್ತ (ನಿಲುವಂಗಿ, ಯಾನೆ ಉಡುಗೆ) ವನ್ನು ಓರ್ವ ಮಹಿಳೆಗೆ ಉಡುಗೊರೆ ಕೊಟ್ಟರೆ ಆಕೆ ಅವನ ತಂಗಿಯಾಗುತ್ತಾಳೆ. ಈ ಯುರೋಪಿಯನ್ ಮಹಿಳೆ ಪಠಾಣರನ್ನು ಭೇಟಿಯಾಗಿ ತನಗೊಂದು ದೋಪತ್ತವನ್ನು ಯಾಚಿಸಿ, ಲೀಗ್ ಉಮೇದ್ವಾರಿಗೆ ಮತ ಕೊಡುವದೇ ನೀವು ತನಗೆ ಕೊಡಬೇಕಾದ ದೋಪತ್ತವೆನ್ನುತಿದ್ದಳು. ಗವರ್ನರ್ ಮತ್ತು ಅವರ ಕೈಕೆಳಗಿನ ಅಧಿಕಾರಿಗಳು ಇಷ್ಟೊಂದು ಪ್ರಯತ್ನ ಮಾಡಿದರೂ ಆ ಪ್ರಾಂತ್ಯದಲ್ಲಿ ಕಾಂಗ್ರೆಸ್ ಪ್ರಬಲ ಬಹುಮತ ಪಡೆದು ಜನತೆಯಲ್ಲಿ ತನಗಿರುವ ವರ್ಚಸ್ಸೆಂತಹದೆಂಬುದನ್ನು ಪ್ರದರ್ಶಿಸಿದೆ

ನಿಜವಾದ ಕಾರಣ

ಲೀಗ್ ವಿಜಯದ ಕುರಿತು ಸರಕಾರೀ ಅಧಿಕಾರಿಗಳಿಗೆ, ಅದರಲ್ಲೂ ಬ್ರಿಟಿಷ್ ಅಧಿಕಾರಿಗಳಿಗೆ, ಇಷ್ಟೊಂದು ಆತುರವೇಕೆ, ಎಂದು ನನಗೆ ಹಲವೂ ಸಾರೆ ಆಶ್ಚರ್ಯವಾಗುತಿತ್ತು. ಇಸ್ಲಾಂ ಮತ್ತು ಮುಸಲ್ಮಾನರ ಮೇಲೊಂದು ವಿಶೇಷ ಮಮತೆಯುಂಟಾದುದರಿಂದಾಗಿ ಅವರು ಹೀಗೆ ಮಾಡಬೇಕೆಂದು ಬುದ್ಧಿ ಸರಿಯುಳ್ಳ ಯಾವನೊಬ್ಬನೂ ಎಂದಿಗೂ ಹೇಳಲಾರ. ಇದರ ಮೂಲಕಾರಣ ಹೀಗಿರಬೇಕು:-ಇನ್ನೂ ಅಲ್ಲಗಳೆಯಲಾಗದ ಸ್ಥಿತಿಗೀಗ ಸ್ವಾತಂತ್ರ್ಯದ ಪ್ರಶ್ನೆ ಬಂದಿದೆ. ಇದನ್ನು ಹಿಂದೆ ಹಾಕುವಂತೆ ಕಂಟಕ ನಿರ್ಮಿಸುವದಕ್ಕಾಗಿ ಯಾವ ಕಡ್ಡಿಯನ್ನಾದರೂ ಹಿಡಿದು ನೇತಾಡಲು ಅಧಿಕಾರಿಗಳು ಸಿದ್ಧರಿರುವಂತಿದೆ. ಹಿಂದೀ ಪ್ರಶ್ನೆಯನ್ನು ಹಿಂದೆ ಹಾಕುವ ಆಟದಲ್ಲಿ ತಮ್ಮ ಕೈಯಲ್ಲಿ ಉಳಿದಿರುವ ಕೊನೆಯ ಕಾರ್ಡು ಎಂದರೆ ಮುಸ್ಲಿಂಲೀಗ್ ಎಂದು ಅಧಿಕಾರಿಗಳು ನಂಬಿ ಕೊಂಡಂತೆ ಕಾಣುತ್ತದೆ. ಆದ್ದರಿಂದಲೇ ಲೀಗ್ ಉಮೇದ್ವಾರಿಗಳನ್ನು ಸಾಧ್ಯವಿದ್ದ ಸರ್ವ ವಿಧಾನಗಳಿಂದ ಸಮರ್ಥಿಸಬೇಕೆಂದು ಅಖಿಲ ಭಾರತ ಅಧಿಕಾರೀ ವರ್ಗದಿಂದ ಅಂತಪ್ರಾಂತಿಕ ಬಂಡಾಯವೊಂದು ನಡೆದಿತ್ತು. ಆ ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟವನ್ನು ಬಲಹೀನಗೊಳಿಸುವ ಪ್ರಯತ್ನ ನಡೆದಿತ್ತು. 'ಹಿಂದುಸ್ಥಾನವನ್ನು ಆಳುತ್ತಿರುವದು ನೌಕರಶಾಹಿ' ಎಂದು ಹಿಂದೀಯರಲ್ಲಿರುವ ನಂಬುಗೆಗೆ ಇದೊಂದು ಹೊಸ ಜೋಡಣೆ. ಅಧಿಕಾರಿಗಳ ಸಂಚು ಕೂಟದಿಂದಿರು ಹಲವೂ ಸಾರೆ ಸ್ವತಃ ವೈಸರಾಯರೇ ನಿಸ್ಸಹಾಯಕರಾಗಿ ಹೋಗುತ್ತಾರೆ. ಚುನಾವಣೆಗಳಲ್ಲಿ ಅಧಿಕಾರಿಗಳು ಸಂಪೂರ್ಣ ತಾಟಸ್ಥ್ಯವಹಿಸತಕ್ಕದ್ದೆಂಬು ಲೋರ್ಡ್ ವೇವೆಲರು ಸೂಚಿಸಿರುವದನ್ನೂ, ಅಧಿಕಾರಿಗಳ ಅಂತಹ ವರ್ತನೆಗಳನ್ನು ಅವರೆಂದಿಗೂ ಒಪ್ಪತಕ್ಕವರಲ್ಲವೆಂಬುದನ್ನೂ ನಾನುಬಲ್ಲೆ. ಬಂಗಾಳದ ಪ್ರಾಂತಿಕ ಚುನಾವಣೆಗಳಲ್ಲಂತೂ, ಅಧಿಕಾರಿಗಳ ಆತಂಕ ಮತ್ತು ನೀತಿ ದಿವಾಳಿಗಿರಿಯ ಕಥೆಯು ಸುದೀರ್ಘವಾದುದು; ಅಸಹ್ಯವಾದುದು, ಮತ್ತು ಅತ್ಯಂತ ಕಳಕಳಿಯದು".

ಮಿ. ಅಲೀಖಾನರ ಪ್ರತ್ಯಾರೋಪ

ಮೌಲಾನರ ಆರೋಪಗಳನ್ನು ಕಟುವಾಣಿಯಲ್ಲಿ ಖಂಡಿಸುತ್ತಾ ಮುಸ್ಲಿಂ ಲೀಗ್ ಕಾರ್ಯದರ್ಶಿ ನವಾಬಜಾದಾ ಲಿಯಾಖತ್ ಅಲೀಖಾನರು ಈ ಕೆಳಗಿನ ಉತ್ತರವಿತ್ತಿದ್ದಾರೆ:-"ಕಾಂಗ್ರೆಸ್ ರಾಷ್ಟ್ರಪತಿಯ ಹೇಳಿಕೆಯು ನನ್ನನ್ನು ಆಶ್ಚರ್ಯಗೊಳಿಸಿದೆ. ಸದ್ಯದ ಚುನಾವಣೆಗಳಲ್ಲಿ "ಲೀಗಿನ ಸಮರ್ಥನೆಗಾಗಿ ಅಧಿಕಾರಿಗಳ ಅಂತಪ್ರಾಂತಿಕ ಬಂಡಾಯ ನಡೆದಿತ್ತು" ಎಂದವರು ವಿಲಕ್ಷಣ ಆರೋಪ ಮಾಡಿದ್ದಾರೆ ಸತ್ಯಸ್ಥಿತಿ ತದ್ವಿರುದ್ಧವಿದೆಯೆಂಬುದು ಸರ್ವಶ್ರುತವಾಗಿರುವ ವಿಷಯ. ಪ್ರತಿಯೊಂದು ಕಡೆಯ ಲೀಗ್ ಉಮೇದ್ವಾರಿಗಳೂ ಲೀಗೇತರರಿಗನುಕೂಲವಾಗಿದ್ದ ಅಧಿಕಾರಿಗಳ ಆತಂಕವನ್ನು ಇದಿರಿಸಬೇಕಾಗಿದ್ದುದಷ್ಟೇ ಅಲ್ಲ; ಹಿಂದುಗಳ ಧನ ಜನ ಬಲವೂ ಜಮೀನ್ದಾರರ ಹಾಗೂ ಹಣ ಸಾಲ ಕೊಡುವವರ ವರ್ಚಸ್ಸೂ. ಮುಸ್ಲಿಂ ಮತದಾರರಿಗೆ ಲಂಚ ಕೊಟ್ಟು ಅಥವಾ ಉಪದ್ರವ ಕೊಟ್ಟು ಲೀಗ್ ವಿರುದ್ಧ ಮತ ಕೊಡುವಂತೆ ಮಾಡಲು ಸಂಘಟನೆಯಿಂದ ಪ್ರಯೋಗಿಸಲ್ಪಟ್ಟಿದ್ದುವು. ಎತ್ತಿ ಹೇಳತಕ್ಕ ಒಂದು ಉದಾಹರಣೆಯೆಂದರೆ ಪಂಜಾಬು. ಅಲ್ಲಿಯ ಗವರ್ನರರು ಯೂನಿಯನಿಸ್ಟರ ಪರವಾಗಿ ಲೀಗ್ ಉಮೇದ್ವಾರಿಗಳ ವಿರುದ್ಧವಾಗಿ ಇಡೀ ಸರಕಾರೀ ಯಂತ್ರವನ್ನೇ ಉಪಯೋಗಿಸುವದನ್ನು ಪ್ರೋತ್ಸಾಹಿಸಿದ್ದರು.

ರಾಷ್ಟ್ರಪತಿಯ ದುರುದ್ದೇಶ

ಇವೆಲ್ಲವುಗಳ ಇದಿರಲ್ಲಿ ಮುಸ್ಲಿಂ ಮತದಾರರು ಅಚಲರಾಗಿ ನಿಂತರು; ಮುಸ್ಲಿಂ ಲೀಗ್ ಅಮೋಘ ವಿಜಯಗಳನ್ನು ಸಂಪಾದಿಸಿತು.. ವಸ್ತುಸ್ಥಿತಿಯ ಈ ಅಖಂಡ ನಿದರ್ಶನದಿದಿರಲ್ಲಿ ಮುಖ ತಗ್ಗಿಸಬೇಕಾದ ಕಾಂಗ್ರೆಸ್ ರಾಷ್ಟ್ರಪತಿಯೀಗ ಮಂತ್ರಿ ಸಮಿತಿಯ ಸಂಭಾಷಣೆಯು ಸಮೀಪವಿರುವಲ್ಲೇ ಅಸಹಾಸ್ಯಕರ ಮಾತುಗಳನ್ನು ಪೋಣಿಸಹತ್ತಿದ್ದಾರೆ. ಮಂತ್ರಿ ಸಮಿತಿಯ ಕಣ್ಣಿಗೆ ಮಣ್ಣೆರಚುವ ತಂತ್ರವಿದು. ಸತ್ಯಕ್ಕೂ ಪಾಪಾಸು ಮತ್ತೊಂದು ಭಾಗದಲ್ಲಿದೆ. ನಿರಾತಂಕ ಸ್ವತಂತ್ರ ಚುನಾವಣೆಗಳಾಗುತಿದ್ದರೆ, ಕೇಂದ್ರ ಎಸೆಂಬ್ಲಿ ಮತ್ತು ಬೊಂಬಾಯಿ, ಮದ್ರಾಸ್ ಪ್ರಾಂತಿಕ ಎಸೆಂಬ್ಲಿ ಚುನಾವಣೆಗಳಲ್ಲಾದಂತೆಯೇ ಪ್ರತಿಯೊಂದು ಪ್ರಾಂತ್ಯದಲ್ಲೂ ಲೀಗು ಸೇಕಡಾ ನೂರರಷ್ಟು ವಿಜಯಗಳನ್ನು ಪಡೆಯುತಿತ್ತು".

ಸರ್ ಕನ್ನಿಂಗಾಮರ ನಕಾರ

ಮೊನ್ನೆಯ ವರೆಗೂ ಗಡಿನಾಡಿನ ಗವರ್ನರರಾಗಿದ್ದು ನಿವೃತ್ತಿಗೊಂಡು ಇಂಗ್ಲಾಂಡಿಗೆ ಹೊರಟಿದ್ದ ಸರ್ ಕನಿಂಗಾಮರು ತನ್ನ ಮೇಲೆ ಮೌಲಾನರು ಮಾಡಿದ್ದ ಆರೋಪವನ್ನು ಅಲ್ಲಗಳೆದೇ ಬೊಂಬಾಯಿಯಿಂದ ಹೊರಟುಹೋದರು. "ನನ್ನ ದೀರ್ಘಾವಧಿಯ ಗವರ್ನರ್ ಹುದ್ದೆಯಲ್ಲಿ ನಾನು ಸಂಪೂರ್ಣ ನಿಷ್ಪಕ್ಷಪಾತ ವಹಿಸಿದ್ದೆ. ಈ ಸಂಗತಿ ಸರ್ವ ಪಕ್ಷಗಳ ಪ್ರಮುಖರಿಗೂ ಸರಿಯಾಗಿ ಗೊತ್ತಿದೆ. ಮಿಕ್ಕವರ ಮಾತೇಕೆ, ನಾನು ಅತ್ಯಂತ ಸ್ನೇಹಾಚಾರದಿಂದಿದ್ದ ಗಡಿನಾಡಿನ ಸದ್ಯದ ಪ್ರಧಾನ ಮಂತ್ರಿ ಮತ್ತು ಇತರ ಮಂತ್ರಿಗಳಿಗೆ ಇದು ವಿಶೇಷತ ಮಂದಟ್ಟಾಗಿರಬೇಕು. ಹೋಟಿ ಮಾರ್ದನಿನ ಮದುವೆಯೊಂದರಲ್ಲಿ ಅಲ್ಲಿಯ ನವಾಬರನ್ನು ಲೀಗ್ ಉಮೇದ್ವಾರಿಯಾಗಲು ಪುಸಲಾಯಿಸಿದ್ದೇನೆಂಬ

೪ನೇ ಪುಟ ನೋಡಿರಿ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ. ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಕಮ್ಯೂನಿಸ್ಟ್ ಧೋರಣೆ—ಲೇಖಾಂಕ ೫

ಮುಷ್ಕರ ಹೂಡಿಸಿ ಪಡೆದುದೇನು?

'ವಿಚಾರಿ'ಯಿಂದ

ಸ್ವರ್ವ ಸಮತೆಯನ್ನು ಅಪೇಕ್ಷಿಸುವವರು ಆ ಸಮಾನತೆಯ ರೂಪದಲ್ಲೇ ಏರುತಗ್ಗನ್ನು ನಿರ್ಮಿಸಬಾರದು. ಉತ್ಪತ್ತಿಯನ್ನು ಧನಿ ಮತ್ತು ಕೆಲಸಗಾರರು ಹೇಗೆ ಸಮಾನವಾಗಿ ಅನುಭೋಗಿಸಬೇಕೋ ಹಾಗೆಯೇ ಅವರೊಳಗೆ ಗುಣ ಸಾಮ್ಯತೆಯೂ ಬೇಕೆಂಬುದೊಂದೇ ನನ್ನವಾದ. ನಮ್ಮ ಕಮ್ಯೂನಿಸ್ಟ ಬಂಧುಗಳು ಒಂದು ಕ್ಷೇತ್ರದಲ್ಲಿ ಸಮತೆಯನ್ನು ನಿರ್ಮಿಸುವ ಸ್ತುತ್ಯ ಪ್ರಯತ್ನದಲ್ಲಿದ್ದಾರೆ; ಮತ್ತೊಂದು ರಂಗದಲ್ಲಿ ವಿಷಮತೆಯನ್ನು ನಿರ್ಮಿಸಿಬಿಟ್ಟಿದ್ದಾರೆ. ಈ ಲೇಖನ ಮಾಲೆಯಲ್ಲಿ ಬಂದಿರುವ ನನ್ನ ಖಂಡನೆಯೆಲ್ಲವೂ ವಿಷಮತೆಯ ಭಾಗಕ್ಕೆಸೆದ ಬಾಣ ಹೊರತು ಸಮಾನತೆಯ ರಂಗಕ್ಕಲ್ಲವೇ ಅಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು. ನಿದರ್ಶನಕ್ಕಾಗಿ ಕಮ್ಯೂನಿಸ್ಟರ ಕೈಯಲ್ಲಿರುವ ಕೆಲಸಗಾರರ ಮತ್ತು ಅವರಿಂದ ಕೆಲಸಮಾಡಿಸುತ್ತಿರುವ ಧನಿಗಳೊಳಗಿನ ಸಂಬಂಧ ಹೇಗಿದೆ ಎಂಬುದನ್ನು ನೋಡೋಣ. ತಮ್ಮ ಬೆವರಿನ ಹಣದಿಂದ ಲಾಭ ಹೊಡೆಯುವವರು ಎಂದು ಕೆಲಸಗಾರರು ದೂರುವ ರೀತಿಯಲ್ಲಿ ಯಜಮಾನರಿದ್ದಾರೆ. ಬೆದರಿಕೆಬೀರಿ, ಪುಂಡು ಮನೋವೃತ್ತಿ ಪ್ರದರ್ಶಿಸಿ ತಮ್ಮನ್ನು ಸುಲಿಗೆ ಮಾಡಲು ಹೊರಟವರು ಎಂದು ಧನಿಗಳು ದೂರುವ ರೀತಿಯಲ್ಲಿ ಕೆಲಸಗಾರರಿದ್ದಾರೆ; ಇವೆರಡಕ್ಕೂ 'ನಿಜ; ನಿಜ' ಎಂದು ನಿಷ್ಪಕ್ಷಪಾತಿ ಸಾರ್ವಜನಿಕರು ಹೇಳುವ ರೀತಿಯಲ್ಲಿ ಎರಡು ಕಡೆಯವರೂ ಇದ್ದಾರೆ. ಉತ್ಪತ್ತಿಯ ಸಮಾನ ಅನುಭೋಗವಾಗಬೇಕೆನ್ನುವ ಕಮ್ಯೂನಿಸ್ಟನೆಂತೂ ಸಮತವಾದಿ; ವರ್ತನೆಯಲ್ಲಿ ಸಮಾನ ಸೌಮ್ಯತೆ ಬೇಕೆನ್ನುವ ಧನಿಯೂ ಮತ್ತೊಂದು ವಿಧದ ಸಮತಾವಾದಿ. ಇಕ್ಕಡೆಯವರೂ ತಂತಮ್ಮ ಅನುಕೂಲತೆಗಾಗಿ ಅರ್ಧಮರ್ಧ ಸಮತಾವಾದಿಗಳು! ಆದರೆ ಎರಡರಲ್ಲೂ ಸಮಾನತೆ ಬೇಕೆನ್ನುವವನೇ ನಿಜವಾದ ಮತ್ತು ಸಂಪೂರ್ಣ ಸಮತಾವಾದಿ. ನನ್ನ ವಾದದ ಗುರಿ ಈ ಸಂಪೂರ್ಣ ಸಮತೆಯೊಂದೇ.

ಸಂಘ ಶಕ್ತಿ.

ಕೆಲಸಗಾರರಲ್ಲಿ ಸಂಘ ಶಕ್ತಿಯಿಲ್ಲದಿದ್ದಾಗ ಧನಿಯು ಕೆಲಸಗಾರನಿಗೆ ನ್ಯಾಯವಾಗಿ ಸಲಬೇಕಾಗಿದ್ದ ಸಂಬಳ ಯಾ ಪಾಲಿನಲ್ಲಿ ವಂಚನೆ ನಡೆಸಿದನೆನ್ನೋಣ. ಆಗ ಆ ಕೆಲಸಗಾರನು ಧನಿಯೊಡನೆ ಒರಟು ಮಾತುಗಳಿಂದ ವಾದಿಸಿ ನೋಡಬಹುದು. ಫಲ ಬಾರದಿದ್ದರೆ ಬಯ್ಯಲಾರಂಭಿಸಬಹುದು. ಅದೂ ಫಲಿಸದಿದ್ದರೆ ತನ್ನ ಬುದ್ಧಿಯ ಮಟ್ಟಕ್ಕನುಸಾರವಾಗಿ ಅತ್ಯಾಚಾರಕ್ಕೇನೇ ಇಳಿಯಬಹುದು. ಇಲ್ಲಿ ಕೆಲಸಗಾರನ ಗುರಿ ಪೂರ್ಣ ಸರಿಯಾಗಿದ್ದಂತೆಯೇ ಆತನು ಕೈಕೊಂಡ ವಿಧಾನಗಳು ಸಂಪೂರ್ಣ ತಪ್ಪಾಗಿರಬಹುದು. ಇದು ಏಕಾಕಿ ಕೆಲಸಗಾರನಿಂದಾಗುವಂತಹ ಅಪರಾಧ. ಕೆಲಸಗಾರರ ಸಂಘಗಳು ಅದೇ ತಪ್ಪನ್ನು ಸಂಘಟಿಸಿ ದೊಡ್ಡ ರೂಪದಿಂದ ಮಾಡುವದಕ್ಕಾಗಿಯೇ ನಿರ್ಮಾಣಗೊಂಡಿರುವವೆ? ಕಮ್ಯೂನಿಸ್ಟರ ಕೈಯಲ್ಲಿರುವ ಸಂಘಗಳ ವರ್ತನೆಗಳ ಮೇಲಿಂದ ಹಾಗೆಂದೇ ಹೇಳಬೇಕಾಗುತ್ತದೆ. ಒಂದು ಕಾರ್ಖಾನೆಯ ಮಾಲಕನು ಓರ್ವ ಕೆಲಸಗಾರನನ್ನು ತೆಗೆದು ಹಾಕಿದರೆ, ಆ ಸಂಕಷ್ಟವು ಆ ಕೆಲಸಗಾರನಿಗೆ ಸಹಿಸಲಾಗದ ಹೊರೆಯಾಗಬಹುದು; ಅವನ ಬುದ್ಧಿ ಗೊಂದಲಕ್ಕೀಡಾಗಬಹುದು ಯಾಕೆಂದರೆ ಆತನ ಅಲ್ಪ ಶಕ್ತಿಗೆ ಮಿಕ್ಕಿದುದದು. ಆದರೆ ಕೆಲಸಗಾರರ ಸಂಘಕ್ಕೆ ಅದು ಅಂತಹ ಹೊರೆಯಾಗದು. ಅದರ ಶಕ್ತಿ ದೊಡ್ಡದು. ಆದ್ದರಿಂದ ಇಷ್ಟೊಂದು ಅಲ್ಪ ವಿಷಯಕ್ಕಾಗಿ ಅದು ಗಲಿಬಿಲಿಗೊಂಡು ಆರ್ಭಟಿಸುವದು, ಜರೆಯುವದು, ಅತ್ತಾಡುವದೇ ಮೊದಲಾದ ದೌರ್ಬಲ್ಯ ಪ್ರದರ್ಶಿಸುವದು ಸರಿಯಲ್ಲ. ಅಂದರೆ ಕೆಲಸಗಾರರ ರದ್ಧತಿಯನ್ನು ಸಂಘವು ಕಡೆಗಣಿಸಬೇಕೆಂಬ ಅರ್ಥವಲ್ಲ—ಕಳವಳ ಪ್ರದರ್ಶಿಸಬಾರದು: ಕಂಡಾಬಟ್ಟೆ ವರ್ತನೆ ಸಲ್ಲದು. ಅದು ಹೀನವಾದ ವರ್ತನೆ ವಹಿಸಿದಲ್ಲಿ, ತಾನು ಬೊಬ್ಬೆ ಹಾಕುವ ಬದಲಿಗೆ ಅಪರಾಧಿ ಯಜಮಾನನು ಅಳುವಂತೆ, ಸೋಲುವಂತೆ ಮಾಡಲು ಸಾಧ್ಯವಿದೆ. ಆದರೆ ನಾನು ಸಕಾರಣವಾಗಿ ವಾದಿಸುತ್ತಾ ಬಂದಂತೆ ಕಮ್ಯೂನಿಸ್ಟರು ಕೆಲಸಗಾರರ ಅಜ್ಞಾನವನ್ನು, ಅಂಧ ಮನೋವೃತ್ತಿಯನ್ನು, ಪುಂಡು ಮನೋಗತಿಯನ್ನೇ ಬೆಳೆಸುತ್ತಾ ಬಂದಿದ್ದಾರೆ. ಸಂಘವಿಲ್ಲದಾಗ ಏಕಾಕಿ ಕೆಲಸಗಾರರ ಪುಂಡುಮನೋವೃತ್ತಿಯನ್ನು ದಿರಿಸಬೇಕಾಗಿದ್ದ ಧನಿಗಳು ಈಗ ಸಾವಿರಾರು ಜನರಿರುವ ಗುಂಪಿನ ಸಂಘಟಿತ ಪುಂಡಾಟಿಕೆಯನ್ನು ದಿರಿಸಬೇಕಾಗಿ ಬಂದಿದೆ. ಈ ದೃಷ್ಟಿಯಿಂದ, ನಮ್ಮ ಕಮ್ಯೂನಿಸ್ಟರೂ ಖಿಲಾಡಿ ಸಂಗಡಗಳ ನಾಯಕರಾಗಿ 'ಕಾರ್ಬಾರು' ನಡಿಸುವ ಪಾಳೆಯಗಾರರಿಗೆ ಸಮಾನ. ಮಾಲಕ ವರ್ಗವೂ ಈಗ ತನ್ನ ಸಂಘ ರಚಿಸಿಕೊಳ್ಳುತ್ತಿದೆ. ಇದೇ ರೀತಿಯಲ್ಲಿ ತಮ್ಮ ಅನ್ಯಾಯದ ರಂಗವಾಗಿರುವ ದುಡಿಮೆಯ ಪ್ರತಿಫಲಾಪಹಾರವನ್ನು ಸಂಘಟನಾ ರೂಪದಿಂದ ಮಾಡುವ ಹಂಚಿಕೆಯದಲ್ಲವೆ? ಮನೋರಂಗದಲ್ಲಿ ಸಂಘಟಿತ ಕೆಲಸಗಾರರಿಂದಾಗುವ ಅನ್ಯಾಯವನ್ನು ಖಂಡಿಸುವವರು ಕಾರ್ಯರಂಗದಲ್ಲಿ ಸಂಘಟಿತ ಧನಿಗಳಿಂದಾಗುವ ಅನ್ಯಾಯವನ್ನು ಕ್ಷಮಿಸುವರೇನು? ಎಂಬ ಪ್ರಶ್ನೆ ಬರಬಹುದು. ಅವರು ನಮ್ಮವರಲ್ಲ; ನಮ್ಮವರಾದ ಕೆಲಸಗಾರರು ತಪ್ಪಿ ಬೀಳದಂತೆ ನೋಡುವದೇ ನಮ್ಮ ಕರ್ತವ್ಯ. 'ಮಾಲಕ ಮನೋವೃತ್ತಿಗೆ ಅಸ್ತಿತ್ವವೇ ಇಲ್ಲ' ವೆಂಬ ನಿರ್ಧಾರಕ್ಕೆ ಬಂದು ಅದರೊಡನೆ ಸಂಘರ್ಷಿಸುವದನ್ನು ಇಲ್ಲಿ ಬಿಟ್ಟೇ ಬಿಡಲಾಗಿದೆ. ಅದರ ಮುಂಭಾಗದಲ್ಲಿ ಕೆಲಸಗಾರರು ತಮ್ಮ ದೌರ್ಬಲ್ಯ ಪ್ರದರ್ಶಿಸಿ, ಸೋಲುವ ಬದಲಿಗೆ ಸಶಕ್ತ ಘನತೆಯಿಂದ—ಮರ್ಮ ತಾಡನ ಕೊಟ್ಟು—ಗೆಲ್ಲುವ ವಿಧಾನವನ್ನು ಮಾತ್ರ ಅನುಕರಿಸಬೇಕೆಂಬುದೇ ವಿಚಾರಿಯವಾದ.

ತುಲನಾತ್ಮಕ ಬುದ್ಧಿಯಿರಲಿ

ನಾಗರಿಕರೆನ್ನಿಸುವವರ, ಸುಸಂಸ್ಕೃತರೆನ್ನಿಸುವವರ ಕಪಟ, ವಂಚನೆ ಇತ್ಯಾದಿ ದುರ್ಗುಣಗಳಿಗಿಂತ ಕೆಲಸಗಾರನ ಒರಟು ಮನೋವೃತ್ತಿ ಹೇಯವೆಂದು ನಾನನ್ನಲಾರೆ. ಆದರೆ ಜನಸಾಮಾನ್ಯರಿಗೆ ಮೊದಲನೆಯ ವರ್ಗದ ...ಮನೋವೃತ್ತಿಯಲ್ಲಿ ಅಸಾಧಾರಣೆ ಮಾತ್ರ ಹುಟ್ಟುತ್ತದಾದರೆ ಎರಡನೆಯದು ಅಸ್ಪರ್ಶವೇ ಆಗಿಬಿಡುತ್ತದೆ. ಈ ಪುಂಡು ಮನೋವೃತ್ತಿಯಾದರೂ ಹೆಂಚು, ಬೀಡಿ, ಮಗ್ಗ ಕೆಲಸಗಾರರಲ್ಲಿದೆ ಹೊರತು ಮಾಲಕರಲ್ಲಿಲ್ಲವೆಂದು ನನ್ನ ವಾದವಲ್ಲ. ಆದರೆ ಕೆಲಸಗಾರರನ್ನದು ಕೆಳದರ್ಜೆಗಿಳಿಸುವಷ್ಟು— ಮಾಲಕರ ಬುದ್ಧಿ ಮಾಲಕರಿಗೆ ಹಾನಿಕರವಾಗಿಲ್ಲ. ದುರ್ನಡತೆ, ದುರ್ಗುಣಗಳು ಎಲ್ಲಿದ್ದರೂ ಖಂಡನೀಯ. ಆದರೆ ಮಾಲಕ ವರ್ಗಕ್ಕೆ ತಮ್ಮಲ್ಲಿರುವ ಇಂತಹ ದುಸ್ವಭಾವಗಳನ್ನು ಮರೆಮಾಚಿಕೊಳ್ಳುವಷ್ಟು 'ನಾಚಿಕೆಯಾದರೂ ಇದೆ; ಅವು ತಮ್ಮ ಪಾಲಿನ 'ಭೂಷಣಗಳಲ್ಲವೆಂಬಷ್ಟು ತಿಳುವಳಿಕೆಯಾದರೂ ಇದೆ. ಆದರೆ, ಕಮ್ಯೂನಿಸ್ಟರ ಕಲಿಸುವಿಕೆಯ ಪರಿಣಾಮವಾಗಿ ಕೆಲಸಗಾರರು ಅಂತಹ ಸ್ವಭಾವವನ್ನೇ ತಮ್ಮ ಶಕ್ತಿಯಾಗಿ, ತಮ್ಮ ಆಯುಧವಾಗಿ, ತಮಗೊಂದು ಭೂಷಣವೆಂಬಂತೆ ರಸ್ತೆ, ಮೈದಾನುಗಳಲ್ಲಿ ಪ್ರದರ್ಶಿಸುತ್ತಿದ್ದಾರೆ. ಇದು ಶೋಚನೀಯವಲ್ಲವೆ? ಕಮ್ಯೂನಿಸ್ಟರಿಂದ ಕೆಲಸಗಾರರಿಗೊದಗಿದ ದುರ್ಗತಿಯಲ್ಲವೆ? ಸಂಸ್ಕಾರ ಹೊಂದಿದ ಬುದ್ಧಿಯು ಒಂದು ತಪ್ಪನ್ನು ನಿವಾರಿಸಿಕೊಳ್ಳಲು ಚಡಪಡಿಸೀತು ಹೊರತು, ಅದಕ್ಕಿಮ್ಮಡಿಯ ಪ್ರತೀಕಾರ ಮಾಡಬೇಕೆಂದು ಹಾತೊರೆಯಲಾರದು. ಮಾಲಕರು ಮಜೂರರನ್ನು ದೀರ್ಘಾವಧಿಯಿಂದ ನರಿನಾಯಿಗಳಂತೆ ಕಂಡಿರಬಹುದು; ವಂಚಿಸುತ್ತಾ ಬಂದಿರಬಹುದು; ಅವಮಾನಿಸಿರಬಹುದು. ಅವೆಲ್ಲವನ್ನೂ ಸದಾ ನೆನಪಿನಲ್ಲಿಕೊಂಡು, ಎಲ್ಲವುಗಳನ್ನೂ ಒಟ್ಟಿಗೆ ತೂಕ ಮಾಡಿ, ಅದಕ್ಕೆ ನಾಲ್ಮಡಿಯ ಪ್ರತೀಕಾರ ಮಾಡಬೇಕೆಂದು ಕೆಲಸಗಾರರು, ಹೀನೈಸಲು ಬಲಾತ್ಕರಿಸಲು, ಮುಖ ಭಂಗ ಮಾಡಲು ಹೊರಟರೆ, ಅವರ ಗುರಿಯಾಗಿರಬೇಕಾದ ಸಮಾನತೆಯ ಸ್ಥಾಪನೆ ಹೇಗೆ? ಹಿಂದುಸ್ಥಾನವನ್ನು 180 ವರುಷಗಳಿಗಳಿಗೂ ಮಿಕ್ಕಿ ಆಳಿದ ಬ್ರಿಟಿಷರ ತಪ್ಪಿಗಾಗಿ ಮುಂದಿನ 180 ವರುಷ ಇಂಗ್ಲೆಂಡನ್ನು ನಾವು ಆಳಬೇಕು ಎಂದು ಗಾಂಧೀ ನೆಹರುಗಳು ವಾದಿಸಬಹುದೆ? ಪರಾಕ್ರಮಣ ಬುದ್ಧಿ ಯಾವ ರಾಷ್ಟ್ರಕ್ಕೂ ಇರಕೂಡದು ಎಂಬ ಅವರ ತತ್ವಕ್ಕಾರು ಗತಿ? ಎಲೆ, ಹೊಗೆಸೊಪ್ಪು ಇತ್ಯಾದಿಗಳ ಕ್ರಯದ ರೂ.ಆ. ಪೈಯನ್ನು ಲೆಕ್ಕ ಹಾಕಿಯೇ ಎಂಡಾಣೆ ಅಧಿಕ ಸಂಬಳ ಮತ್ತು ಮೂರು ತಿಂಗಳ ಬೋನಸು ಕೇಳಲು ನಿಮಗೆ ಗೊತ್ತಿದೆ. ಅದೇ ರೀತಿ ನೀವು ಗುಂಪುಗುಂಪಾಗಿ, ರಸ್ತೆ ಮೈದಾನುಗಳಲ್ಲಿ ಯಜಮಾನರಿಗಾಗಿರುವ ಮಾನನಷ್ಟದಾಯೀ ಮಾತುಗಳಿಗೆ, ಅವಮಾನಕಾರಕ ಕೃತಿಗಳಿಗೆ, ಕೋರ್ಟ್ ನಿಯಮ ಪ್ರಕಾರದ ಲೆಕ್ಕ

(೧೧ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

CANARA BANK LIMITED
Estd: 1906
(Incorporated in British India, liability of Members Limited.)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months 2¼%
4 to 5 months 2½%
6 to 9 months 2¾%

Rates for Season Deposits of less than Rs 10000/ with a minimum of Rs. 1000/- and in multiples of Rs 500/- may be ascertained on application to our nearest branch.

ವ್ಯಯ ಸಂವತ್ಸರದ
(1946-1947)
ಶ್ರೀಪತಿ ಪಂಚಾಂಗ
ಹಲವು ಉಪಯುಕ್ತ ಸಂಗ್ರಹಗಳಿಂದೊಡಗೂಡಿದೆ.
ಬೆಲೆ 0—5—0.
ವಿಳಾಸ:—
ಶ್ರೀಪತಿ ನರಸಿಂಹ ಅಡಿಗ,
ಬೇಳೂರು ಗ್ರಾಮ, ಪೋಸ್ಟ್ ಕೋಟ.
ಅಥವಾ
ನವಭಾರತ ಬುಕ್ ಡಿಪೋ, ಉಡುಪಿ.

ನೌಕರ ಶಾಹಿಯ ಬೆಂಬಲ ಮತ್ತು ಪುಂಡಾಟಿಕೆಯಿಂದ ಲೀಗ್ ಗೆದ್ದಿತು!

ಅಜಾದ್–ಆಲೀಖಾನ್–ಕನ್ನಿಂಗಾಮ್ ವಾದ ಪ್ರತಿವಾದ.

ಈ ಬಾರಿಯ ಕೇಂದ್ರ ಮತ್ತು ಪ್ರಾಂತಿಕ ಎಸೆಂಬ್ಲಿಗಳ ಚುನಾವಣೆಗಳ ಸಂದರ್ಭಗಳಲ್ಲಿ ಮುಸ್ಲಿಂ ಲೀಗಿನ ಅತಿರೇಕ ವರ್ತನೆಗಳ ಕುರಿತಾಗಿಯೂ, ಅಧಿಕಾರಿಗಳು ತಮ್ಮ ತಾಟಸ್ಥ್ಯ ಪ್ರತಿಜ್ಞೆಗೆ ವಿರುದ್ಧವಾಗಿ ಲೀಗ್ ಪ್ರತಿನಿಧಿಗಳ ಪರವಾಗಿ ನಡಿಸಿರುವ ಪ್ರಚಾರಗಳ ಕುರಿತಾಗಿಯೂ ತನಗೆ ಹಲವಾರು ದೂರುಗಳು ಬಂದಿದ್ದುವು. ಆದರೂ ತಾನು ಟೀಕೆಗಿಳಿಯದೆ ಉದ್ದೇಶಪೂರ್ವಕ ಎಲ್ಲವನ್ನೂ ಸಹಿಸಿಕೊಂಡಿದ್ದೆ. ಬಂಗಾಳದ ಘಟನೆಯಿಂದ ಸುಮ್ಮನಿರುವದಸಾಧ್ಯವಾಗಿದೆ, ಎನ್ನುತ್ತಾ ರಾಷ್ಟ್ರಪತಿ ಮೌಲಾನಾ ಅಜಾದರು ಈ ಕೆಳಗಣ ಸಾರಾಂಶವುಳ್ಳ ಗಂಭೀರ ಹೇಳಿಕೆಯೊಂದನ್ನಿತ್ತಿದ್ದಾರೆ: –

ಗಡಿನಾಡಿನ ಮಾಜೀ ಗವರ್ನರ್

"ಅಖಿಲ ಭಾರತದಲ್ಲಿ ಸರ್ವ ವರ್ಗಗಳ ಸರಕಾರೀ ಅಧಿಕಾರಿಗಳೂ ಮುಸ್ಲಿಂಲೀಗಿನ ಕಡೆಗೆ ಬಹಿರಂಗವಾಗಿ ಪಕ್ಷಪಾತತನ ತೋರಿಸಿದ್ದುದರ ಕಡೆಗೆ ನಾನು ಸಾರ್ವಜನಿಕರ ಲಕ್ಷ್ಯವನ್ನು ಪ್ರಥಮತಃ ಎಳೆಯಬಿಚ್ಛಿಸುತ್ತೇನೆ. ಸಾರ್ವಜನಿಕ ಸೇವಕರಾಗಿ ತಾವು ಕೈಕೊಂಡಿದ್ದ ತಾಟಸ್ಥ್ಯ ಪ್ರತಿಜ್ಞೆಯನ್ನು ಮರೆತು ಅವರೆಲ್ಲಾ ಕಲ್ಕತ್ತಾದಿಂದ ಪೇಶಾವರದ ವರೆಗೂ ಮುಸ್ಲಿಂ ಲೀಗಿನ ಪರವಾಗಿ ಸರ್ವ ಶಕ್ತಿಯಿಂದ ಮತ್ತು ಜಾಹೀರಾಗಿ ಕೆಲಸ ಮಾಡಿದ್ದರು. ಯುರೋಪಿಯನ್ ಅಧಿಕಾರಿಗಳು ಈ ಸಂಬಂಧದಲ್ಲಿ ವಿಶೇಷ ಮೆಹನತ್ತು ವಹಿಸಿದ್ದರೆಂಬುದು ಎತ್ತಿ ಹೇಳತಕ್ಕ ವಿಷಯ. ಬಹುತೇಕವಾಗಿ ಪ್ರತಿಯೊಂದು ಪ್ರಾಂತ್ಯದಿಂದಲೂ—ಮುಖ್ಯತಃ ಗಡಿನಾಡು ಪ್ರಾಂತ್ಯದಿಂದ-ಈ ಕುರಿತು ಹಲವು ದೂರುಗಳು ಬಂದಿವೆ; ಗಡಿನಾಡು ಪ್ರಾಂತ್ಯದ ಸ್ಥಿತಿ ಎಷ್ಟೊಂದು ಮುಂದುವರಿದಿತ್ತೆಂದರೆ, ಅಲ್ಲಿಯ ಮಾಜೀ ಗವರ್ನರ್ ಸರ್. ಜೋರ್ಜ್ ಕನ್ನಿಂಗ್ಹಾಮರೇ ಸ್ವತಃ ಈ ಪಟ್ಟಿಗೆ ದಾಖಲಾಗಿದ್ದರು. ಅವರು ಕಾಂಗ್ರೆಸ್ ಉಮೇದ್ವಾರಿಗಳ ವಿರುದ್ಧ ಬಹಿರಂಗವಾಗಿ ಲೀಗಿನ ಚುನಾವಣಾ ಪ್ರಚಾರ ನಡಿಸಿದ್ದರು. ಅಲ್ಲಿಯ ಕೋಟೆ ಮಾರ್ಡನ್‌ನಲ್ಲಿ ಜಿಲ್ಲೆಯ ಪ್ರತಿಷ್ಠಾವಂತರೆಲ್ಲಾ ಕೂಡಿದ್ದ ಒಂದು ಮದುವೆಯ ಸಂದರ್ಭದಲ್ಲಿ, ಈ ಗವರ್ನರರು ಲೀಗ್‌ನ್ನು ಸೇರಿ, ಅದರ ಉಮೇದ್ವಾರಿಯಾಗಿ ಚುನಾವಣೆಗೆ ನಿಲ್ಲಬೇಕೆಂದು ನವಾಬರನ್ನು ಬಹಿರಂಗವಾಗಿ ಕೇಳಿಕೊಂಡಿದ್ದರು.

ಯುರೋಪಿಯನ್ ದಂಪತಿಗಳು

ಅಲ್ಲಿಯ ಓರ್ವ ಯುರೋಪಿಯನ್ ಡೆಪ್ಯುಟಿ ಕಮಿಶನರರು ಲೀಗ್ ಉಮೇದ್ವಾರಿಗಳಿಗೆ ವೋಟು ಕೊಡುವಂತೆ ಜಾಹೀರಾಗಿ ಬೋಧಿಸಿದ್ದಲ್ಲದೆ, ಮತದಾರರ ಭೇಟಿಗೆ ಸ್ವತಃ ಹೋಗಿದ್ದರು. ಅವರ ಪತ್ನಿಗಂತೂ ಲೀಗ್ ವಿಜಯದ ಆತುರವೆಷ್ಟಿತ್ತೆಂದರೆ, ತನ್ನ ಸ್ಥಾನಮಾನಗಳನ್ನೇ ಮರೆತು, ಮತದಾನ ಮಾಡುವಂತೆ ಮತದಾರರನ್ನು ಪುಸಲಾಯಿಸಲು ಲೇಡಿ ಸ್ವತಃ ಸಂಚರಿಸಿದ್ದಳು. ಗಡಿನಾಡಿನಲ್ಲೊಂದು ಸಂಪ್ರದಾಯವಿದೆ. ಪಠಾಣನೊಬ್ಬನು ಒಂದು ದೋಪತ್ತ (ನಿಲುವಂಗಿ, ಯಾನೆ ಉಡುಗೆ) ವನ್ನು ಓರ್ವ ಮಹಿಳೆಗೆ ಉಡುಗೊರೆ ಕೊಟ್ಟರೆ ಆಕೆ ಅವನ ತಂಗಿಯಾಗುತ್ತಾಳೆ. ಈ ಯುರೋಪಿಯನ್ ಮಹಿಳೆ ಪಠಾಣರನ್ನು ಭೇಟಿಯಾಗಿ ತನಗೊಂದು ದೋಪತ್ತವನ್ನು ಯಾಚಿಸಿ, ಲೀಗ್ ಉಮೇದ್ವಾರಿಗೆ ಮತ ಕೊಡುವದೇ ನೀವು ತನಗೆ ಕೊಡಬೇಕಾದ ದೋಪತ್ತವೆನ್ನುತಿದ್ದಳು. ಗವರ್ನರ್‌ಮತ್ತು ಅವರ ಕೈಕೆಳಗಿನ ಅಧಿಕಾರಿಗಳು ಇಷ್ಟೊಂದು ಪ್ರಯತ್ನ ಮಾಡಿದರೂ ಆ ಪ್ರಾಂತ್ಯದಲ್ಲಿ ಕಾಂಗ್ರೆಸ್ ಪ್ರಬಲ ಬಹುಮತ ಪಡೆದು ಜನತೆಯಲ್ಲಿ ತನಗಿರುವ ವರ್ಚಸ್ಸೆಂತಹದೆಂಬುದನ್ನು ಪ್ರದರ್ಶಿಸಿದೆ

ನಿಜವಾದ ಕಾರಣ

ಲೀಗ್ ವಿಜಯದ ಕುರಿತು ಸರಕಾರೀ ಅಧಿಕಾರಿಗಳಿಗೆ, ಅದರಲ್ಲೂ ಬ್ರಿಟಿಷ್ ಅಧಿಕಾರಿಗಳಿಗೆ, ಇಷ್ಟೊಂದು ಆತುರವೇಕೆ, ಎಂದು ನನಗೆ ಹಲವೊಮ್ಮೆ ಆಶ್ಚರ್ಯವಾಗುತಿತ್ತು. ಇಸ್ಲಾಂ ಮತ್ತು ಮುಸಲ್ಮಾನರ ಮೇಲೊಂದು ವಿಶೇಷ ಮಮತೆಯುಂಟಾದದರಿಂದಾಗಿ ಅವರು ಹೀಗೆ ಮಾಡಿರಬೇಕೆಂದು ಬುದ್ಧಿ ಸರಿಯುಳ್ಳ ಯಾವನೊಬ್ಬನೂ ಎಂದಿಗೂ ಹೇಳಲಾರ. ಇದರ ಮೂಲಕಾರಣ ಹೀಗಿರಬೇಕು:-ಇನ್ನೂ ಅಲ್ಲಗಳೆಯಲಾಗದ ಸ್ಥಿತಿಗೀಗ ಸ್ವಾತಂತ್ರ್ಯದ ಪ್ರಶ್ನೆ ಬಂದಿದೆ. ಇದನ್ನು ಹಿಂದೆ ಹಾಕುವಂತೆ ಕಂಟಕ ನಿರ್ಮಿಸುವದಕ್ಕಾಗಿ ಯಾವ ಕಡ್ಡಿಯನ್ನಾದರೂ ಹಿಡಿದು ನೇತಾಡಲು ಅಧಿಕಾರಿಗಳು ಸಿದ್ಧರಿರುವಂತಿದೆ. ಹಿಂದೀ ಪ್ರಶ್ನೆಯನ್ನು ಹಿಂದೆ ಹಾಕುವ ಆಟದಲ್ಲಿ ತಮ್ಮ ಕೈಯಲ್ಲಿ ಉಳಿದಿರುವ ಕೊನೆಯ ಕಾರ್ಡು ಎಂದರೆ ಮುಸ್ಲಿಂಲೀಗ್ ಎಂದು ಅಧಿಕಾರಿಗಳು ನಂಬಿ ಕೊಂಡಂತೆ ಕಾಣುತ್ತದೆ. ಆದ್ದರಿಂದಲೇ ಲೀಗ್ ಉಮೇದ್ವಾರಿಗಳನ್ನು ಸಾಧ್ಯವಿದ್ದ ಸರ್ವ ವಿಧಾನಗಳಿಂದ ಸಮರ್ಥಿಸಬೇಕೆಂದು ಅಖಿಲ ಭಾರತ ಅಧಿಕಾರೀ ವರ್ಗದಿಂದ, ಅಂತಪ್ರಾಂತಿಕ ಬಂಡಾಯವೊಂದು ನಡೆದಿತ್ತು. ಆ ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟವನ್ನು ಬಲಹೀನಗೊಳಿಸುವ ಪ್ರಯತ್ನ ನಡೆದಿತ್ತು. 'ಹಿಂದುಸ್ಥಾನವನ್ನು ಆಳುತ್ತಿರುವುದು ನೌಕರಶಾಹಿ' ಎಂದು ಹಿಂದೀಯರಲ್ಲಿರುವ ನಂಬುಗೆಗೆ ಇದೊಂದು ಹೊಸ ಜೋಡಣೆ. ಅಧಿಕಾರಿಗಳ ಸಂಚು ಕೂಟದಿಂದಿರು ಹಲವೊಮ್ಮೆ ಸ್ವತಃ ವೈಸರಾಯರೇ ನಿಸ್ಸಹಾಯಕರಾಗಿ ಹೋಗುತ್ತಾರೆ. ಚುನಾವಣೆಗಳಲ್ಲಿ ಅಧಿಕಾರಿಗಳು ಸಂಪೂರ್ಣ ತಾಟಸ್ಥ್ಯವಹಿಸತಕ್ಕದ್ದೆಂಬು ಲೋರ್ಡ್ ವೇವೆಲರು ಸೂಚಿಸಿರುವದನ್ನೂ, ಅಧಿಕಾರಿಗಳ ಇಂತಹ ವರ್ತನೆಗಳನ್ನು ಅವರೆಂದಿಗೂ ಒಪ್ಪತಕ್ಕವರಲ್ಲವೆಂಬುದನ್ನೂ ನಾನುಬಲ್ಲೆ. ಬಂಗಾಳದ ಪ್ರಾಂತಿಕ ಚುನಾವಣೆ ಇಲ್ಲಂತೂ, ಅಧಿಕಾರಿಗಳ ಆತಂಕ ಮತ್ತು ನೀತಿ ದಿವಾಳಿಗಿರಿಯ ಕಥೆಯು ಸುದೀರ್ಘವಾದುದು; ಅಸಹ್ಯವಾದುದು, ಮತ್ತು ಅತ್ಯಂತ ಕಳಕಳಿಯುದು".

ಎಂ. ಆಲೀಖಾನರ ಪ್ರತ್ಯಾರೋಪ

ಮೌಲಾನಾರ ಆರೋಪಗಳನ್ನು ಕಟುವಾಣಿಯಲ್ಲಿ ಖಂಡಿಸುತ್ತಾ ಮುಸ್ಲಿಂ ಲೀಗ್ ಕಾರ್ಯದರ್ಶಿ ನವಾಬಜಾದಾ ಲಿಯಾಖತ್ ಅಲೀಖಾನರು ಈ ಕೆಳಗಿನ ಉತ್ತರವಿತ್ತಿದ್ದಾರೆ:-"ಕಾಂಗ್ರೆಸ್ ರಾಷ್ಟ್ರಪತಿಯ ಹೇಳಿಕೆಯು ನನ್ನನ್ನು ಆಶ್ಚರ್ಯಗೊಳಿಸಿದೆ. ಸದ್ಯದ ಚುನಾವಣೆಗಳಲ್ಲಿ "ಲೀಗಿನ ಸಮರ್ಥನೆಗಾಗಿ ಅಧಿಕಾರಿಗಳ ಅಂತಪ್ರಾಂತಿಕ ಬಂಡಾಯ ನಡೆದಿತ್ತು" ಎಂದವರು ವಿಲಕ್ಷಣ ಆರೋಪ ಮಾಡಿದ್ದಾರೆ. ಸತ್ಯಸ್ಥಿತಿ ತದ್ವಿರುದ್ಧವಿದೆಯೆಂಬುದು ಸರ್ವಶ್ರುತವಾಗಿರುವ ವಿಷಯ. ಪ್ರತಿಯೊಂದು ಕಡೆಯ ಲೀಗ್ ಉಮೇದ್ವಾರಿಗಳೂ ಲೀಗೇತರರಿಗನುಕೂಲವಾಗಿದ್ದ ಅಧಿಕಾರಿಗಳ ಆತಂಕವನ್ನು ಇದಿರಿಸಬೇಕಾಗಿದ್ದುದಷ್ಟೇ ಅಲ್ಲ; ಹಿಂದುಗಳ ಧನ ಜನ ಬಲವೂ ಜಮೀನ್ದಾರರ ಹಾಗೂ ಹಣ ಸಾಲ ಕೊಡುವವರ ವರ್ಚಸ್ಸೂ. ಮುಸ್ಲಿಂ ಮತದಾರರಿಗೆ ಲಂಚ ಕೊಟ್ಟು ಅಥವಾ ಉಪದ್ರವ ಕೊಟ್ಟು ಲೀಗ್ ವಿರುದ್ಧ ಮತ ಕೊಡುವಂತೆ ಮಾಡಲು ಸಂಘಟನೆಯಿಂದ ಪ್ರಯೋಗಿಸಲ್ಪಟ್ಟಿದ್ದುವು. ಎತ್ತಿ ಹೇಳತಕ್ಕ ಒಂದು ಉದಾಹರಣೆಯೆಂದರೆ ಪಂಜಾಬು. ಅಲ್ಲಿಯ ಗವರ್ನರರು ಯೂನಿಯನಿಸ್ಟರ ಪರವಾಗಿ ಲೀಗ್ ಉಮೇದ್ವಾರಿಗಳ ವಿರುದ್ಧವಾಗಿ ಇಡೀ ಸರಕಾರೀ ಯಂತ್ರವನ್ನೇ ಉಪಯೋಗಿಸುವದನ್ನು ಪ್ರೋತ್ಸಾಹಿಸಿದ್ದರು.

ರಾಷ್ಟ್ರಪತಿಯ ದುರುದ್ದೇಶ

ಇವೆಲ್ಲವುಗಳ ಇದಿರಲ್ಲಿ ಮುಸ್ಲಿಂ ಮತದಾರರು ಅಚಲರಾಗಿ ನಿಂತರು; ಮುಸ್ಲಿಂ ಲೀಗ್ ಅಪೇಕ್ಷೆ ವಿಜಯಗಳನ್ನು ಸಂಪಾದಿಸಿತು. ವಸ್ತುಸ್ಥಿತಿಯು ಈ ಅಖಂಡ ನಿದರ್ಶನದಿದಿರಲ್ಲಿ ಮುಖ ತಗ್ಗಿಸಬೇಕಾದ ಕಾಂಗ್ರೆಸ್ ರಾಷ್ಟ್ರಪತಿಯೀಗ ಮಂತ್ರಿ ಸಮಿತಿಯ ಸಂಭಾಷಣೆಯ ಸಮಯದಲ್ಲೇ ಅಸಹಾಯಕರ ಮಾತುಗಳನ್ನು ಘೋಷಿಸಹತ್ತಿದ್ದಾರೆ. ಮಂತ್ರಿ ಸಮಿತಿಯ ಕಣ್ಣಿಗೆ ಮಣ್ಣೆರಚುವ ತಂತ್ರವಿದು- ಸತ್ಯಕ್ಕೂ ಪಾಪಾಸು ಮತ್ತೊಂದು ವಾದದಲ್ಲಿದೆ. ನಿರಾತಂಕ ಸ್ವತಂತ್ರ ಚುನಾವಣೆಗಳಾಗುತಿದ್ದರೆ, ಕೇಂದ್ರ ಎಸೆಂಬ್ಲಿ ಮತ್ತು ಬೊಂಬಾಯಿ, ಮದ್ರಾಸ್ ಪ್ರಾಂತಿಕ ಎಸೆಂಬ್ಲಿ ಚುನಾವಣೆಗಳಲ್ಲಾದಂತೆಯೇ ಪ್ರತಿಯೊಂದು ಪ್ರಾಂತ್ಯದಲ್ಲೂ ಲೀಗು ಶೇಕಡಾ ನೂರರಷ್ಟು ವಿಜಯಗಳನ್ನು ಪಡೆಯುತಿತ್ತು".

ಸರ್ ಕನ್ನಿಂಗಾಮರ ನಕಾರ

ಮೊನ್ನೆಯ ವರೆಗೂ ಗಡಿನಾಡಿನ ಗವರ್ನರರಾಗಿದ್ದು ನಿವೃತ್ತಿಗೊಂಡು ಇಂಗ್ಲಾಂಡಿಗೆ ಹೊರಟಿದ್ದ ಸರ್. ಕನ್ನಿಂಗಾಮರು ತನ್ನ ಮೇಲೆ ಮೌಲಾನರು ಮಾಡಿದ್ದ ಆರೋಪವನ್ನು ಅಲ್ಲಗಳೆದೇ ಬೊಂಬಾಯಿಯಿಂದ ಹೊರಟುಹೋದರು. "ನನ್ನ ದೀರ್ಘಾವಧಿಯ ಗವರ್ನರ್ ಹುದ್ದೆಯಲ್ಲಿ ನಾನು ಸಂಪೂರ್ಣ ನಿಷ್ಪಕ್ಷಪಾತ ವಹಿಸಿದ್ದೆ. ಈ ಸಂಗತಿ ಸರ್ವ ಪಕ್ಷಗಳ ಪ್ರಮುಖರಿಗೂ ಸರಿಯಾಗಿ ಗೊತ್ತಿದೆ. ವಿಶ್ವವರಮಾತೇಕೆ, ನಾನು ಅತ್ಯಂತ ಸ್ನೇಹಭಾವದಿಂದಿದ್ದ ಗಡಿನಾಡಿನ ಸದ್ಯದ ಪ್ರಧಾನ ಮಂತ್ರಿ ಮತ್ತು ಇತರ ಮಂತ್ರಿಗಳಿಗೆ ಇದು ವಿಶೇಷತಃ ಮನದಟ್ಟಾಗಿರಬೇಕು. ಕೋಟೆ ಮಾರ್ಡನಿನ ಮದುವೆಯೊಂದರಲ್ಲಿ ಅಲ್ಲಿಯ ನವಾಬರನ್ನು ಲೀಗ್ ಉಮೇದ್ವಾರಿಯಾಗಲು ಪುಸಲಾಯಿಸಿದ್ದೇನೆಂಬ

೪ನೇ ಪುಟ ನೋಡಿರಿ,

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಪಾಕಿಸ್ತಾನ್ ಪೆಡಂಭೂತ ರಕ್ತಾಹುತಿ ಕೇಳುತ್ತಿದೆ?

ಅದರ ಸ್ಥಾಪನೆಯೊ? ಉಚ್ಚಾಟನೆಯೊ?

ಹಿಂದೀ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು ಬ್ರಿಟಿಷ್ ಮಂತ್ರಿ ಸಮಿತಿಯೀಗ ನವದಿಲ್ಲಿಯಲ್ಲಿ ನಡೆಸುತ್ತಿರುವ ಮಾತುಕತೆಗಳಲ್ಲಿ, ಬಿಡಿಸಲಾಗದ ಒಗಟಾಗಿ ನಿಂತಿರುವದು-ಸ್ವಾತಂತ್ರ್ಯಪಥದಲ್ಲಿ ಪೆಡಂಭೂತವಾಗಿ ಅಡ್ಡಗಟ್ಟಿರುವದು-ಪಾಕಿಸ್ತಾನ್ ಪ್ರಶ್ನೆಯೊಂದೇ. ಅದರ ಭೀಕರತೆ ಈ ತನಕ ಛಾಯಾ ರೂಪದಲ್ಲಿತ್ತು; ಇಂದು ತೀರ್ಮಾನಕ್ಕಾಗಿ ಅದನ್ನು ಸಮೀಪಿಸಬೇಕಾಗಿ ಬಂದುದರಿಂದ ಸ್ಪಷ್ಟಾಕಾರ ಕಾಣುತ್ತಿದೆ. ಅಂತೆಯೇ ಅದರ ಪ್ರತಿಷ್ಠಾಪನೆಯ ಮತ್ತು ಉಚ್ಚಾಟನಾ ಮಂತ್ರಗಳೂ ಖಂಡಿತ ಸ್ವರದಲ್ಲಿ ಪ್ರಕಟವಾಗಹತ್ತಿವೆ.

ಮಿ. ಜಿನ್ನರ ಸ್ಪಷ್ಟೀಕರಣ

ಲಂಡನಿನ 'ಡೈಲಿ ಹೆರಾಲ್ಡ್' ಪತ್ರಿಕೆಯ ಬಾತ್ಮೀದಾರ ಮಿ. ಪೆಟರ್‌ಸ್ಪಸ್ ಜತೆಗೊಡನೆ ತನ್ನ ಪಾಕಿಸ್ತಾನ ಹೇಗಿರಬೇಕೆಂಬ ನಕಾಶೆಯನ್ನು ಮಿ. ಜಿನ್ನರು ಈ ರೀತಿ ಬಿಡಿಸಿದ್ದಾರೆ. "ನಾನನ್ನುವ ಹೊಸ ರಾಷ್ಟ್ರದಲ್ಲಿ ಸದ್ಯದ ಗಡಿಯಲ್ಲೇ ಆರು ಪ್ರಾಂತ್ಯಗಳಿರಬೇಕು. ಈ ಆರು ಪ್ರಾಂತ್ಯಗಳೆಂದರೆ, ಪಾಕಿಸ್ತಾನದ ವಾಯುವ್ಯ ಗಡಿತುಂಡಾಗಿ ಪಂಜಾಬ್, ಗಡಿನಾಡು ಪ್ರಾಂತ್ಯ, ಸಿಂಧ್, ಬಲೂಚಿಸ್ತಾನ; ಮತ್ತು ಪಾಕಿಸ್ತಾನದ ಈಶಾನ್ಯ ಗಡಿ ತುಂಡಾಗಿ ಅಸ್ಸಾಮು ಮತ್ತು ಬಂಗಾಳ" ಈ ನಕಾಶೆಯಲ್ಲಿ, ಬಹುಸಂಖ್ಯಾಕ ಮುಸಲ್ಮಾನರಿದ್ದರೂ ಹಿಂದೂ ರಾಜರಿರುವ ಕಾಶ್ಮೀರ ಸಂಸ್ಥಾನ ಬಂದಿಲ್ಲ. ಆದರೆ ಕೊನೆಯಲ್ಲಿ ಅದೂ ಪಾಕಿಸ್ತಾನದೊಳಗೆ ಸೇರುವದೆಂಬ ಆಶೆಯನ್ನು ಜಿನ್ನರು ವ್ಯಕ್ತಪಡಿಸಿದ್ದಾರೆ.

ಇದಾವ ನ್ಯಾಯ?

'ಅಸ್ಸಾಮಿನಲ್ಲಿ ಮುಸಲ್ಮಾನರಿಗಿಂತ ಹಿಂದುಗಳೇ ಹೆಚ್ಚಿಗೆ. 40ಲಕ್ಷ ಜನರುಳ್ಳ ಅಖಿಲ ಹಿಂದುಸ್ಥಾನದಲ್ಲೇ ಅತಿದೊಡ್ಡ ನಗರವಾಗಿರುವ ಕಲ್ಕತ್ತದಲ್ಲಿ ಮುಕ್ಕಾಲಂಶ ಹಿಂದುಗಳು. ಇವು ಪಾಕಿಸ್ತಾನದಲ್ಲಿ ಸೇರುವುದು ಹೇಗೆ?'—ಎಂದು ಬಾತ್ಮೀದಾರ ವಿಚಾರಿಸಿದ. "ನಾನು ಈ ಮಟ್ಟಿಗೆ ತಲೆಕೆಡಿಸಿಕೊಳ್ಳುವದಿಲ್ಲ ಒಂದು ಸ್ವತಂತ್ರ ಸ್ವಾಧಿಕಾರೀ ರಾಷ್ಟ್ರವನ್ನು ನಿರ್ಮಿಸುವ ಪ್ರಶ್ನೆಯಿದು. ಆದ್ದರಿಂದ ಅಲ್ಲಿ ವಾಸಿಸುವ ಹಿಂದೂ ಮುಸ್ಲಿಮರ ಸಂಖ್ಯೆಯಂತೆಯೇ ಇತರ ಹಲವು ವಿಷಯಗಳನ್ನು ನೋಡಿಕೊಳ್ಳಲಿಕ್ಕಿದೆ. ಅಂತಹ ಇತರ ವಿಷಯಗಳೆಂದರೆ, ರಕ್ಷಣಾ ವಿಭಾಗಗಳಂತಿರಲಿ, ಅದರ ಆರ್ಥಿಕ ಜೀವನ, ಅದರ ಸ್ಥಾನಭದ್ರತೆ ಮತ್ತು ರಾಜಕೀಯ ಏಕರೂಪ ಇತ್ಯಾದಿಗಳಿವೆ. ಪೋಲೆಂಡಿನ ಜನಸಂಖ್ಯೆಯನ್ನು ಗಣಿಸದೇನೇ ಅದರ ಗಡಿಯು ನಿರ್ಣಯಿಸಲ್ಪಟ್ಟಿಲ್ಲವೆ?" ಎಂದು ಜಿನ್ನರೆಂದರು. "ಹಾಗಾದರೆ ಪೋಲೆಂಡಿನಿಂದ ಜರ್ಮನರನ್ನು ಓಡಿಸಿದಂತೆಯೇ ಪಾಕಿಸ್ತಾನದಿಂದ ಹಿಂದುಗಳನ್ನು ಹೊರದಬ್ಬುವ ಆಲೋಚನೆಯಲ್ಲಿರುವಿರಾ?" ಎಂದು ಮಿ. ಪೆಟರ್ ಪ್ರಶ್ನಿಸಿದ. "ಇಲ್ಲ ಜನ ಬದಲಾವಣೆಯಾಗುವದಾದರೆ ಅದು ಕೇವಲ ಸ್ವೇಚ್ಛೆಯಿಂದಲೇ". ಎಂಬ ಆಶ್ವಾಸನೆ ದೊರೆಯಿತು.

'ನಾವು ಭಿನ್ನ ಸಂಸ್ಕೃತಿಯವರು'

"ಪಾಕಿಸ್ತಾನವು ಒಂದು ಧಾರ್ಮಿಕ ರಾಜ್ಯವಾಗುವದರಿಂದ ಅಲ್ಲಿರುವ ಹಿಂದೀಯರು ವಿದೇಶೀಯರಾಗುವರೆಂಬುದು ತಪ್ಪು. ಅಲ್ಲಿ ಹಿಂದು, ಸಿಖ್ ಮತ್ತು ಕ್ರೈಸ್ತರೆಲ್ಲರಿಗೂ ನಾಗರಿಕ ಹಕ್ಕು ಬಾಧ್ಯತೆಗಳು ದೊರೆಯುವವು. ಅವರ ಧರ್ಮ ಬದಲಾವಣೆ ಮಾಡುವ ಯಾವ ಪ್ರಯತ್ನವೂ ನಡೆಯುವಂತಿಲ್ಲ. ಪಾಕಿಸ್ತಾನದ ರಾಜಧಾನಿ ಯಾವುದು? ಪಾಕಿಸ್ತಾನದ ಎರಡು ತುಂಡುಗಳನ್ನು ಜೋಡಿಸುವ ಗಡಿ ಪಥವೊಂದು ಬೇಡವೆ? ಎಂಬಂತಹ ಪ್ರಶ್ನೆಗಳಿಗೆ ಸವಿವರವಾದ ಉತ್ತರಗಳನ್ನು ನಾನೀಗ ಕೊಡಲಾರೆ. ರಾಜ್ಯಾಂಗ ರಚನಾ ಸಭೆಯೇ ಮಾಡಬೇಕಾದ ನಿರ್ಧಾರಗಳವು. ಯುರೋಪಿಯನ್ ರಾಷ್ಟ್ರಗಳಲ್ಲಿರುವ ಭಿನ್ನತೆಗಿಂತ ಎಷ್ಟೋ ದೊಡ್ಡ ಭೇದಗಳು ಹಿಂದೂ ಮುಸಲ್ಮಾನರೊಳಗಿವೆ. ಯುರೋಪಿನಲ್ಲಾದರೆ, ಎಲ್ಲರಿಗೂ ಕ್ರೈಸ್ತ ಧರ್ಮಾಧಾರವಾಗಿರುವ ಒಂದೇ ಸಂಸ್ಕೃತಿಯಿದೆ. ಇಲ್ಲಿ ನಾವು, ಪರಸ್ಪರ ಪ್ರಬಲ ವಿರೋಧವುಳ್ಳ ಧರ್ಮಗಳ ಎರಡು ಸಂಸ್ಕೃತಿಯುಳ್ಳವರು. ಪ್ರತ್ಯೇಕ ರಾಷ್ಟ್ರವಾದ ಪಾಕಿಸ್ತಾನ್ ವಿನಹಾ ಸಂಧಾನವೆಂಬುದಿಲ್ಲವೇ ಇಲ್ಲ" ಎಂದು ಜಿನ್ನರ ಸ್ಪಷ್ಟ ಮಾತು.

'ನಾನು ಭಾರತೀಯನೇ ಅಲ್ಲ'

ಲಂಡನಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯ ವಿದೇಶ ಸಂಬಂಧ ಸಂಪಾದಕರಾದ ಮಿ. ನೋರ್ಮನ್ ಕ್ಲಿಫ್‌ರ ಒಂದು ಪ್ರ... ...ಯುತ್ತ 'ನಾನು ಭಾರತೀಯನೇ ಅಲ್ಲ' ಎಂದು ಬಿಟ್ಟ ಮಿ. ಜಿನ್ನರ ಮಾತು ಎಲ್ಲರ ಕಣ್ಣನ್ನು ತೆರೆಯಿಸಿದೆ "ಪಾಕಿಸ್ತಾನದ ಕುರಿತು ನೀವು ವಹಿಸಿರುವ ಸಂಧಾನಾತೀತ ಕಠಿಣ ಧೋರಣೆಗೆ ದೇಶ ಭಕ್ತಿಗಿಂತಲೂ ಜಾತಿಯ ಭಕ್ತಿಯೆ ದಲೆಂಬ ಅರ್ಥವಾಗುವದಿಲ್ಲವೆ?" ಎಂದು ಕ್ಲಿಫ್ ಸವಾಲು ಹಾಕಿದಾಗ ಮಿ. ಜಿನ್ನರಂದರು, "ಅಂತಹ ಒಂದು ದೇಶವೆಂಬುದೇ ಇಲ್ಲ. ನಾನೊಬ್ಬ ಭಾರತೀಯನೆಂದು ನಾನು ನೆನಸಿಕೊಳ್ಳುವದೇ ಇಲ್ಲ. ಭಾರತವು ಎರಡು ಮುಖ್ಯ ರಾಷ್ಟ್ರಗಳ ಸಮೇತ ಹಲವು ರಾಷ್ಟ್ರೀಯತೆಗಳಿರುವ ಒಂದು ರಾಜ್ಯ. ಆ ಪೈಕಿ ನಮ್ಮ ಸ್ವಂತ ರಾಜ್ಯಕ್ಕೆ ಪ್ರತ್ಯೇಕವಾದ ಸ್ವಾಧಿಕಾರವನ್ನು ನಾವು ಕೇಳುತಿದ್ದೇವೆ."

'ಅವರೊಟ್ಟಿಗಿರಲು ಸಾಧ್ಯವೇ ಇಲ್ಲ'

"ನಿಮಗೆ ಅಧಿಕಾರದಲ್ಲಿ ಸಮಪಾಲು ಕೊಡುವಂತೆ ಕಾಂಗ್ರೆಸನ್ನು ಸಮಜಾಯಿಸಿದರೆ ನೀವು ಒಪ್ಪುವಿರಾ?" ಎಂದು ಮಿ. ಕ್ಲಿಫ್ ಮತ್ತೊಮ್ಮೆ ಪ್ರಶ್ನಿಸಿದರು." ಇಲ್ಲ. ನಾನು ಅವರ ಜತೆಯಲ್ಲಿ ವಾಸಿಸಲಿಚ್ಛಿಸುವದಿಲ್ಲ ನಮ್ಮೊಳಗೆ ಭಿನ್ನತೆ ಮತ್ತು ಪ್ರತ್ಯೇಕತೆ ಯಿರುವದಷ್ಟೇ ಅಲ್ಲ; ನಾವು ಪರಸ್ಪರ ವಿರೋಧಿಗಳೇ ಆಗಿದ್ದೇವೆ. ನಮ್ಮಿಬ್ಬರನ್ನು ಒಟ್ಟಿಗೆ ಇಡಲು ಬ್ರಿಟನೇಕೆ ಬಯಸಬೇಕು? ನಾವದನ್ನು ತಿರಸ್ಕರಿಸುತ್ತೇವೆ. ಮತ್ತು ನೀವಾ ಕುರಿತು ನಮ್ಮ ಮೇಲೆ ಜುಲುಮೆ ಮಾಡುವಿರಾದಗೆ, ನಿಮ್ಮ ಬಯನೆಟ್‌ಗಳನ್ನು ಇಡಲೇ ಬೇಕಾಗುವದು" ಎಂದು ಮಿ ಜಿನ್ನರ ಘರ್ಜನೆ.

'ಏನೇ ಬಂದರೂ ಪಾಕಿಸ್ತಾನವಿಲ್ಲ'

ನೆಹರುಗಳ ಸ್ಪಷ್ಟ ಉತ್ತರ

"ಏನೇ ಆದರೂ ಎಂತಹ ಪರಿಸ್ಥಿತಿಯಲ್ಲಿಯೂ,- ಒಂದೊಮ್ಮೆಗೆ ಬ್ರಿಟಿಷ್ ಸರಕಾರವು ಒಪ್ಪಿಗೆ ಕೊಟ್ಟರೂ—ಲೀಗ್ ಕೇಳುವ ಪಾಕಿಸ್ತಾನವನ್ನು ಕಾಂಗ್ರೆಸ್ ಒಪ್ಪುವಂತಿಲ್ಲ. ಅಥವಾ ಕಾಂಗ್ರೆಸಿನ ಸಮ್ಮತಿ,

(೩ನೇ ಪುಟದಿಂದ)

ಮಾತು ಅಬದ್ಧ ಮತ್ತು ತನ್ನಿಂದ ತಾನೇ ತಿರಸ್ಕಾರ ಹೊಂದುವಂತಹದು. ಯಾಕೆಂದರೆ, ನಾನು ಅಲ್ಲಿಯ ಒಂದು ಮದುವೆಗೆ ಹೋಗಿದ್ದ ಮಾತು ಹಾಗಿರಲಿ; ನಾನಿದುವರೆಗೆ ಸೋಟಿ ಮಾರ್ಗನಿಗೆ ಹೋದುದೇ ಇಲ್ಲ"-ಎಂದು ಸರ್. ಕನಿಂಗಾಮರ ಅಂಬೋಣ.

ರಾಷ್ಟ್ರಪತಿಯ ಪ್ರತ್ಯುತ್ತರ

ಮಾಜೀ ಗವರ್ನರ್ ಸರ್' ಕನ್ನಿಂಗಾಮರ ನಕಾರದ ಕುರಿತು, ಸಂಬಂಧಪಟ್ಟವರೇ ಸತ್ಯಸ್ಥಿತಿಯನ್ನು ಸ್ಪಷ್ಟಪಡಿಸುವರೆಂಬೂ ಸದ್ಯದ ಗಡಿನಾಡಿನ ಮುಖ್ಯ ಮಂತ್ರಿಗಳೆಂದಲೇ ತನಗೀ ವಾರ್ತೆ ದೊರೆತದರಿಂದ ತಾನದರ ಸತ್ಯತ್ವದ ಕುರಿತು ಸಂದೇಹಪಡಲಿಲ್ಲವೆಂದೂ ಮೌಲಾನಾ ಆಜಾದರೆಂದಿದ್ದಾರೆ ಬಂಗಾಳದಲ್ಲಿ ಸರಕಾರೀ ಅಧಿಕಾರಿಗಳ ಸಮ್ಮುಖದಲ್ಲೇ ಲೀಗ್ ಪುಂಡರು ಲೀಗೇತರ ಉಮೇದ್ವಾರರನ್ನು ಹೊಡೆದುದು-ಅವರ ಮನೆಗೆ ಬೆಂಕಿ ಕೊಟ್ಟುದು-ಅವರ ಕಾರುಗಳ ವಾಹನಗಳನ್ನು ವಶಮಾಡಿದುದು-ಹೊಳೆಗೆ ದೂಡಿದುದು- ವಿರುದ್ಧ ಉಮೇದ್ವಾರರನ್ನು ಬಂಧಿಸಿಟ್ಟುದು-ಫ್ರಿಸೈಡಿಂಗ್ ಆಫೀಸರರೇ ಲೀಗೇತರ ಉಮೇದ್ವಾರರ ವೋಟು ಪೆಟ್ಟಿಗೆಗಳನ್ನು ಕದ್ದುಬಿಡಿಸಿದುದು-ಇತ್ಯಾದಿ ಹಲವು ಪ್ರತ್ಯಕ್ಷ ನಿದರ್ಶನಗಳನ್ನು ಕೊಟ್ಟು ಇನ್ನೊಮ್ಮೆ ನಿಃಶಂಕ ಚುನಾವಣೆ ನಡೆಯುವದಾದರೆ ರಾಷ್ಟ್ರೀಯ ಮುಸಲ್ಮಾನರು ಬಹು ಸಂಖ್ಯೆಯಿಂದ ಆರಿಸಲ್ಪಡುವರೆಂದು ಯುದ್ಧಾಹ್ವಾನವಿತ್ತಿದ್ದಾರೆ. ಈ ಕುರಿತು ನಿಷ್ಪಕ್ಷಪಾತ ವಿಚಾರಣೆ ನಡೆಯಬೇಕೆಂ... ...ಕೇಳಿಕೊಂಡಿದ್ದಾರೆ.

THE

UNITED KARNATAK INSURANCE Co., Ltd.

H. O. DHARWAR. ESTD: 1929.

GLAD TO ANNOUNCE A BUSINESS

INCREASE OF 400%

OVER LAST YEARS FIGURE

We invite applications from young, energetic and ambitious persons for the post of **Organisers, Inspectors** and **Branch Managers** etc.

DHARWAR,
5—2—1946.

A. S. KINI,
Managing Director.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

O. P. No. 14/1946.

ಪೆಂಕಪ್ಪ ಶೆಟ್ಟಿ ಕೂಡಾ -ಅರ್ಜಿದಾರರು.

ಮತ್ತು

ತಿಮ್ಮಾಜು ಹೆಂಗ್ಸು ...ರೈಸ್ಪೊಂಡೆಂಟರು.

ರೈಸ್ಪೊಂಡೆಂಟಳು ತಿಮ್ಮಾಜು ಹೆಂಗ್ಸು, ಅಪ್ಪ ತಪ್ಪ ಅಡ್ಯಂತಾಯರ ಹೆಂಡ್ತಿ, ಮಂಗಳೂರು ತಾಲ್ಲೂಕು ಮಂಜನಾಡಿ ಗ್ರಾಮದಲ್ಲಿ.

ಮೇಲ್ಕಂಡ ಅರ್ಜಿದಾರರು ತಾ 9-3 1931 ನೇ ಇಸವಿಯಲ್ಲಿ ಅಬ್ಬಾಜು ಹೆಂಗ್ಸು ಬರಕೊಟ್ಟ ಆಧವು ವಸ್ತ್ರವಜು ಮೇಲಿಗೆ ರೈಸ್ಪೊಂಡೆಂಟರಾದ ನಿಮಗೆ ಸಲತಕ್ಕ ಪೂರ್ಣ ಅಮೇಜು ರೂಪಾಯಿ 550' ನ್ನು ಕೋರ್ಟಿಗೆ ಡಿಂಪಜಿಟ್ ಮಾಡಿರುತ್ತಾರೆ, ಸದ್ರಿ ಅರ್ಜಿಯು ತಾ. 16-4-1946ನೇ ಹಗಲು ಗಂಟೆ 10½ಗೆ ಮೇಲ್ಕಂಡ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ಅರ್ಜಿಯ ವಿಷಯದಲ್ಲಿ ನಿಮಗೆ ಏನಾದ್ರು ಆಕ್ಷೇಪವಿದ್ದರೆ ನೀವು ಯಾ ನಿಮ್ಮಿಂದ ಅಧಿಕಾರ ಹೊಂದಿದ ಪ್ಲೀಡರಾಗಲೀ ಹಾಜರಾಗಿ ನಿಮ್ಮ ಆಕ್ಷೇಪವನ್ನು ದಾಖಲ್ಲ ಮಾಡತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಏಕ್ಸಪಾರ್ಟಿಯಾಗಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾದೀತು.

B. M. Hegde.

Advocate For Petitioners.

ಮಂಗಳೂರು
ತಾ 6-4-1946

ಅಸಮ್ಮತಿಗಳನ್ನು ಆಧರಿಸಿರುವ ಪ್ರಶ್ನೆಯೇ ಇದಲ್ಲ. ನನಗೆ ಹಿಂದೀ ಜನತೆಯ ಸಾಕಷ್ಟು ಪರಿಚಯವಿದೆ. ಒಂದೊಮ್ಮೆಗೆ ಈ ಬೇಡಿಕೆಗೆ ಕಾಂಗ್ರೆಸ್ ಒಪ್ಪಿದರೂ ಕೂಡಾ ಅದು ರೂಪಗೊಳ್ಳುವಂತಿಲ್ಲ. ಮಿ ಜಿನ್ನರು ಕೇಳುವ ಪಾಕಿಸ್ತಾನವನ್ನು ಕೊಡಲು ಈ ಪ್ರಪಂಚದಲ್ಲಿರುವಂತಹ ಯಾವುದಕ್ಕೂ—ಜಾಗತಿಕ ಸಂಘಕ್ಕೇ ಆದರೂ—ಆಗದ ಮಾತು" ಎಂದು ಪಂಡಿತ ನೆಹರುಗಳು ಕಠೋರತ್ವವಾಗಿ ನುಡಿದಿದ್ದಾರೆ. "ತನ್ನ ಪಾಕಿಸ್ತಾನವೆಂದು ಮಿ ಜಿನ್ನರು ಸಾರಿರುವ ದೊಡ್ಡ ಭಾಗಗಳು ಪಾಕಿಸ್ತಾನಕ್ಕೆ ಮೂಲಭೂತವಾಗಿ ಮತ್ತು ಸುದೃಢವಾಗಿ ವಿರೋಧವಿವೆ. ಮುಸ್ಲಿಂಲೀಗ್ ಅಥವಾ ಇತರರ ಬಯಕೆ ಏನಿದ್ದರೂ ಈ ಭಾಗಗಳನ್ನು ಒತ್ತಾಯಪಡಿಸುವದು ಅಸಾಧ್ಯ. ವಿಶಿಷ್ಟ ಕ್ಷೇತ್ರಗಳು ಪ್ರತ್ಯೇಕವಾಗಲಿಚ್ಛಿಸಿದರೆ ಹಾಗೆ ಮಾಡದಂತೆ ಅವುಗಳನ್ನು ಒತ್ತಾಯಿಸುವಂತಿಲ್ಲ" ಎಂದು ನೆಹರುಗಳೆಂದಿದ್ದಾರೆ.

ಭಾವೀ ಭಾರತದ ರೂಪರೇಷೆ

"ಸ್ವಾತಂತ್ರ್ಯವನ್ನು ಒಪ್ಪಿಕೊಂಡು, ಸಂಪೂರ್ಣಾಧಿಕಾರವುಳ್ಳ ರಾಜ್ಯಾಂಗ ರಚನಾ ಸಭೆಯೊಂದನ್ನು ರಚಿಸಬೇಕು. ಇತ್ತೀಚೆಗೆ ಚುನಾವಣೆಗೊಂಡ ಪ್ರಾಂತಿಕ ಎಸೆಂಬ್ಲಿಗಳಿಂದಾರಿಸಿ ಅಂತಹ ಸಭೆಯ ರಚನೆ ಮಾಡುವದು ಅತ್ಯಂತ ಸುಲಭ. ಈ ಸಭೆಗೆ ಕೊನೆಯ ತೀರ್ಮಾನವೀವ ಅಧಿಕಾರವಿರುವದು ಮುಖ್ಯ. ಒತ್ತಾಯದ ಭಾವನೆ ಹುಟ್ಟದಂತೆ, ಈ ಸಭೆಗೆ ಸೇರಲಿಚ್ಛಿಸದ ಯಾವ ಭಾಗವನ್ನೂ ಬಲಾತ್ಕರಿಸದೆ, ಅದು ಕೊನೆಗೆ ಒಂದು ಸೇರಲಾಗುವಂತೆ ದ್ವಾರವನ್ನು ತೆರೆದಿಡಬೇಕು. ಹೀಗಾಗಿ ಪ್ರಕೃತ ಒಂದು ಅಥವಾ ಎರಡು ಕ್ಷೇತ್ರಗಳು ಸ್ವತಂತ್ರ ವರ್ತನೆ ವಹಿಸಬಹುದು. ಇಂತಹ ತೀರ್ಮಾನವು ಆ ಭಾಗಗಳಲ್ಲಿ ವಾಸಿಸುವವರೆಲ್ಲರ ಮತದಾನದಿಂದಲೇ ಆಗಬೇಕು. ದೃಷ್ಟಾಂತಕ್ಕಾಗಿ ಗಡಿನಾಡು ಪ್ರಾಂತ್ಯ ಮತ್ತು ಪಂಜಾಬಿನ ದಕ್ಷಿಣ ಮತ್ತು ಮಧ್ಯ ಭಾಗಗಳು ಪಾಕಿಸ್ತಾನಕ್ಕೆ ವಿರುದ್ಧವಿವೆ. ಅವುಗಳ ಇಚ್ಛೆಗೆ ವಿರುದ್ಧವಾಗಿ, ರಾಜ್ಯಾಂಗ ರಚನಾ ಸಭೆಯಿಂದವುಗಳನ್ನು ಹೊರದಬ್ಬುವ ಪ್ರಶ್ನೆಯೇ ಇಲ್ಲ. ಆದರೆ ಪಂಜಾಬಿನ ಮತ್ತು ಸಿಂಧ್, ಇತ್ಯಾದಿಗಳ ಕಲವು ಭಾಗಗಳು ರಾಜ್ಯಾಂಗ ರಚನಾ ಸಭೆಯಲ್ಲಿ ಸೇರಲೊಪ್ಪದಿದ್ದರೆ ತಾತ್ಕಾಲಿಕವಾಗಿ ಅಂತಹ ಅಧಿಕಾರ ಅವುಗಳಿಗಿದ್ದೇ ಇದೆ. ಆ ವಿಷಯವು ಅಲ್ಲಿಯ ನಿವಾಸಿಗಳ ವೋಟಿಗೆ ಬಿದ್ದು ತೀರ್ಮಾನಗೊಂಡರಾಯಿತು. ಪ್ರತಿಯೊಂದು ವಿಭಾಗಕ್ಕೂ ಅತಿ ಹೆಚ್ಚಿನ ಸ್ವಾತಂತ್ರ್ಯವಿರುವ ಸರ್ವವಿಭಾಗಗಳ ಸ್ವಸಮ್ಮತಿಯ ಸಂಯುಕ್ತ ರಾಜ್ಯಭಾರ ಸಭೆಯೇ ನಮ್ಮ ಬಯಕೆಯ ಹೊಸ ರಾಜ್ಯಶಾಸನ. ಇವೆಲ್ಲವುಗಳ ಕೆಲವೇ ವಿಷಯಗಳು ಮಾತ್ರ ಕೇಂದ್ರಾಧಿಕಾರಕ್ಕೊಳಪಟ್ಟಿರಬೇಕು. ರಕ್ಷಣೆ, ವಿದೇಶಸಂಬಂಧ, ವಾರ್ತಾವಾಹಕ, ನಾಣ್ಯ ಚಲಾವಣೆ ಇತ್ಯಾದಿ ಸರ್ವ ಸಮಾನ ವಿಷಯಗಳಲ್ಲಿ ಮಾತ್ರ ಕೇಂದ್ರದ ಹತೋಟಿಯಿದ್ದು ಉಳಿದೆಲ್ಲಾ ವಿಷಯಗಳಲ್ಲಿಯೂ ಪ್ರತಿಯೊಂದು ವಿಭಾಗಕ್ಕೂ ತನ್ನಿಚ್ಛೆಯಂತೆ ಅಭಿವೃದ್ಧಿ ಹೊಂದುವ ಸ್ವಾತಂತ್ರ್ಯವಿದೆ" ಎಂದು ನೆಹರುಗಳು ಸ್ಪಷ್ಟಪಡಿಸಿದ್ದಾರೆ.

ಮೂರನೆಯವರು ಹೊರಡಲಿ

"ಸ್ವಾತಂತ್ರ್ಯವು ಒಪ್ಪಂದ ಪೂರ್ವಕ ಲಭಿಸದೆ ಹೋದಲ್ಲಿ ಹಿಂದುಸ್ಥಾನದಲ್ಲಿ ಗೊಂದಲವೇಳಲಿದೆ. ಇದು ನಮ್ಮ ಅಪೇಕ್ಷೆಯಲ್ಲ, ಪರಿಸ್ಥಿತಿಯ ಅಂತಹದು." ಎನ್ನುತ್ತಾ ಪಂಡಿತ ನೆಹರುಗಳೆಂದರು "ಮುಸ್ಲಿಂ ಲೀಗಿಗೆ ಪಾಕಿಸ್ತಾನ ಕೊಡದಿದ್ದಲ್ಲಿ ತೊಂದರೆ ಬಂದೀತು ಎಂಬ ಮಾತು ಕೇಳಬರುತ್ತಿದೆ. ಅಲ್ಪ ಕಿರುಕುಳಗಳು ಬರಬಹುದು. ಆದರೆ ಮೂರನೆಯವರು ಗೈರುಹಾಜರಾದಲ್ಲಿ ಈ ಭಿನ್ನತೆಗಳ ತೀರ್ಮಾನಕ್ಕೊಂದು ಹಾದಿ ಹುಡುಕುವದು ಸುಲಭವಾದ್ದರಿಂದ, ಬ್ರಿಟಿಷರು ಸ್ವಾತಂತ್ರ್ಯವನ್ನಿತ್ತು ಪ್ರಥಮತಃ ಹೊರಟು ಹೋಗಬೇಕು. ಮೂರನೇ ಪಕ್ಷವಿದ್ದಲ್ಲಿ ಇಲ್ಲಿಯ ಮುಖ್ಯ ಪಕ್ಷಗಳ ಹಿಡಿತಕ್ಕೇನೇ ವಸ್ತುಸ್ಥಿತಿಯು ಸಿಗುವದಿಲ್ಲ. ಸ್ವಾತಂತ್ರ್ಯ ದೊರೆಯಿತೆಂದಾದೊಡನೆ ಈ ಪಕ್ಷಗಳು ತಮ್ಮೊಳಗೊಂದು ಒಪ್ಪಂದಕ್ಕೆ ಬರುವವು, ಅಥವಾ ಹಾಗೆ ಒಂದಾಗುವ ಮೊದಲು ಹೋರಾಡಿಕೊಂಡು ಕೊನೆಗೆ ಯಥಾರ್ಥತೆಗೆ ಬರುವವು".

'ಭಾರತೀಯನಲ್ಲದ ಜಿನ್ನಾಗೆ ಸ್ಥಾನವಿಲ್ಲ'

ಸರ್ದಾರರ ಖಂಡತುಂಡ ಮಾತು

"ಮಿ. ಜಿನ್ನರು ಭಾರತೀಯನಲ್ಲವಾದರೆ, ಹಿಂದೀ ರಾಜ್ಯಾಂಗ ರಚನೆಯಲ್ಲಿ ಅವರು ಭಾಗ ವಹಿಸುವ ಪ್ರಶ್ನೆಯೇ ಇಲ್ಲ. ತಾನು ಮತಾಂತರಗೊಂಡ ಮಾತ್ರಕ್ಕೆ ಒಬ್ಬನು ತನಗೆ ಪ್ರತ್ಯೇಕ ರಾಷ್ಟ್ರೀಯತೆಯನ್ನು ಅಪೇಕ್ಷಿಸುವದು ರಾಕ್ಷಸ ವರ್ತನೆ" ಎಂದು ಸರ್ದಾರ್ ವಲ್ಲಭಾಯಿಗಳು ಘರ್ಜಿಸಿದ್ದಾರೆ. "ಮಿ ಜಿನ್ನರನ್ನುವಂತೆ ಧರ್ಮಾನುಸಾರ ರಾಷ್ಟ್ರೀಯತೆಯುಂಟಾದರೆ, ಅವರಂತೆಯೇ ಹಿಂದೀ ಕ್ರೈಸ್ತರು, ಸಿಖ್ಖರು, ಪಾರ್ಸಿಗಳು ಮತ್ತಿತರರು ಪ್ರತ್ಯೇಕತೆ ಕೇಳಬಹುದು. ಕಳೆದ ಐವತ್ತರುವತ್ತು ವರುಷಗಳಿಂದ ರಾಷ್ಟ್ರೀಯ ಧ್ವಜದಡಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ಸು ಜಾತೀಯ ರೂಪ ಹೊಂದಬೇಕಾಗುವದು. ಕಾಂಗ್ರೆಸಿನ ಮಟ್ಟಿಗೆ ಪಾಕಿಸ್ತಾನ್ ಸಂಧಾನವಿಲ್ಲವೇ ಇಲ್ಲ. ವಿಚ್ಛೇದಿತ ಭಾರತಕ್ಕೆ ಭದ್ರತೆಯಿಲ್ಲ, ಹೊರಗಡೆಯಿಂದ ಅದಕ್ಕೆ ಅತ್ಯಪಾಯವಿದೆ. ಭಾರತಕ್ಕೆ ಏಕರೂಪಿ ರಕ್ಷಣಾ ವ್ಯವಸ್ಥೆ ಬೇಕು. ಇಂತಹ ವ್ಯವಸ್ಥೆಯು ಸುಭದ್ರ ಕೇಂದ್ರಾಧಿಕಾರವಿದ್ದರೇನೇ ಸಾಧ್ಯ. ಭಾರತವನ್ನು ವಿಭಾಗಿಸುವದು ಹಿಂದುಸ್ಥಾನ ಮತ್ತು ಪಾಕಿಸ್ತಾನವೆನ್ನಿಸುವ ಎರಡಕ್ಕೂ ಅಪಾಯಕರ. ಹಾಗಾದರೆ ಅಂತರ್ರಾಷ್ಟ್ರೀಯವಾಗಿ ಭಾರತವು ಎರಡನೇ ಅಥವಾ ಮೂರನೇ ದರ್ಜೆಯ ರಾಷ್ಟ್ರವಾಗಬೇಕಾಗುವದು. ಆದರೆ ಸಂಯುಕ್ತ ಭಾರತವು ಲೋಕದ ಪ್ರಥಮ ವರ್ಗದ ಪ್ರಮುಖ್ಯ ರಾಷ್ಟ್ರವಾಗಲಿದೆ" ಎಂದು ಸರ್ದಾರರ ಖಂಡಿತೋಕ್ತಿ.

ಸರ್. ತೇಜ ಬಹದೂರು ಸಪ್ರು,

"ಹೇಗಿದ್ದರೂ ಅವರಿಗೆ (ಲೀಗಿನವರಿಗೆ) ಅತ್ಯಂತ ಅನುಕೂಲವಾಗಬಲ್ಲಷ್ಟು ರಿಯಾಯತಿಗಳನ್ನು ಕೊಡಿ. ಅವರ ಅನುಕೂಲತೆಗಾಗಿ ನಿಮಗೆಂದೆಷ್ಟು ಸಾಧ್ಯವೋ ಅಷ್ಟು ದೂರದ ವರೆಗೂ ಮುಂದೆ ಹೋಗಿ. ಆದರೆ ಯಾವನೊಬ್ಬನ—ಆತ ದೊಡ್ಡವನಿರಲಿ, ಸಣ್ಣವನಿರಲಿ, ಬ್ರಿಟಿಷ್, ಹಿಂದೂ, ಮುಸ್ಲಿಮ್, ಯಾರೇ ಆಗಿರಲಿ—ಸರ್ವಾಧಿಕಾರಿತ್ವಕ್ಕೊಳಗಾಗಲು ನೈತಿಕವಾಗಿ, ರಾಜಕೀಯವಾಗಿ, ಅಥವಾ ಕ್ರಮ ನಿಯಮಾನುಸಾರವಾಗಿ ನಾನು ಬದ್ಧನಾಗಿಲ್ಲ" ಎಂದು ಜಿನ್ನರ ದರ್ಪವಾಣಿಗೆ ಸರ್. ಸಪ್ರುಗಳು ಉತ್ತರವಿತ್ತಿದ್ದಾರೆ. "ಹಿಂದುಗಳ ಮೇಲೆ ಪಾಕಿಸ್ತಾನವನ್ನು ಬಲುವೆಯಿಂದ ಹೇರುವಂತಿಲ್ಲವೆಂದು ಬ್ರಿಟಿಷರು ಜಾಹೀರು ಮಾಡಬೇಕು. ಇದರಿಂದ ಸತ್ಪರಿಣಾಮವಾಗುವದು. ಸದ್ಯ ನಾವು ಅಸಹಾಯಕರ ಸ್ಥಿತಿಗೊಳಗಾಗಿದ್ದೇವೆ. ಇಡೀ ರಾಷ್ಟ್ರದ ಅಭಿವೃದ್ಧಿಯು ಓರ್ವ ವ್ಯಕ್ತಿ ಅಥವಾ ಒಂದು ಸಂಗಡದವರಿಂದ ತಡೆಯಲ್ಪಡುವಂತಿದೆ. ನನಗಿದು ಅಸಹ್ಯವಾಗಿದೆ" ಎನ್ನುತ್ತಾ ಸರ್ ಸಪ್ರುಗಳು, "ರಾಜಿಯಾಗದಿದ್ದರೆ ಬ್ರಿಟಿಷರು ಅಥವಾ ಅಂತರ್ರಾಷ್ಟ್ರೀಯ ಪಂಚಾಯತ ಮಂಡಲಿಯೇ ಈ ಕುರಿತು ತೀರ್ಮಾನಿಸಲಿ" ಎಂದಿದ್ದಾರೆ.

ಸರ್. ಸಿ ಪಿ

"ರಾಷ್ಟ್ರೀಯ ರಕ್ಷಣೆ, ವಿದೇಶ ಸಂಬಂಧ, ಸುಂಕ, ವಾರ್ತಾವಾಹಕ ಸಂಬಂಧ ಇತ್ಯಾದಿಗಳಲ್ಲಿ ತಮಗೂ ಅಭಿಪ್ರಾಯ ಭಾಗ ವಹಿಸುವ ಹಕ್ಕುಳ್ಳ ಕ್ರಮಬದ್ಧ ಕೇಂದ್ರ ಸರಕಾರಕ್ಕೆ ಶರಣು ಹೋಗಲು ಆಶ್ರಿತ ರಾಜರು ಸಿದ್ಧರಿದ್ದಾರೆ. ಆದರೆ ಹಿಂದುಸ್ಥಾನವನ್ನು ವಿಭಾಗಿಸಲು ಎಂದಿಗೂ ಒಪ್ಪುವಂತಿಲ್ಲ. ಏನೇ ಆಗಲಿ, ಎಷ್ಟೇ ಬೆಲೆ ತೆತ್ತಾದರೂ ನಾವು ಭಾರತದ ವಿಭಜನೆಯನ್ನು ವಿರೋಧಿಸುತ್ತೇವೆ. ಅಂತರ್ಯುದ್ಧವೇ ನಡೆಯುವಹಾಗಾದರೂ ಸರಿಯೇ, ವಿಭಾಗಕ್ಕೆ ನಾವು ಒಪ್ಪುವಂತಿಲ್ಲ" ಎಂದು ತಿರುವಾಂಕೂರು ದಿವಾನ್ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರೆಂದಿದ್ದಾರೆ

S. V. H. High School
Innanje. (Residential)

WANTED

(1) Four trained graduates who can teach English, Mathem-atics, Science, History and Geography

Scale Rs 70-5 2 110

Dearness allowance. Rs13 0-0 per month.

(2) One Higher Grade Drawing Instructor

Scale Rs 30 2/2-50

Dearness allowance Rs. 10 0 0 per month.

(3) An Instructor in weaving who has completed III Form of a Secondary School or the VIII Standard of a Higher Elementary School and who has completed the artisan course in weaving in the Govt Textile Institute, Madras or a training course in any other Institution approved by the Advisor to the Govt on Manual Training or has a Technical Teachers' Certificate of the Lower Grade in weaving

Scale Rs 30 - 2/2 50

Dearness allowance Rs 10/ per month

Previous service will be taken into consideration while starting the initial salary

Quarters will be provided in the school compound itself if needed

Headmaster.

FOR LIFE ASSURANCE
CONSULT
The New Gaurdian of India Life Insrce Co., Ltd.
(Chairman The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection

LOCAL OFFICES IN SOUTH KANARA: MANGALORE & KARKALA.
HEAD OFFICE: "United India Life Bldg" Esplanade Post Box No 1[illegible] MADRAS.

BANK WITH THE LARGEST CONNECTIONS ON THE WEST COAST,
OFFERS:-
EFFICIENT, PROMPT & COURTEOUS
SERVICE OF EVERY TYPE
OPEN AN ACCOUNT
with
The Canara Industrial & Banking Syndicate Ltd
ESTD 1925

ಮಗ್ಗಿ
ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ಪಟ್ಟಿಗಳು, ದಾಖಲು ಮತ್ತು ಪ್ರೋಗ್ರೆಸ್ ರಿಪೋರ್ಟ್ ಫಾರ್ಮುಗಳು, ರಿಕಾರ್ಡ್ ಶೀಟುಗಳು ದೊರೆಯುತ್ತವೆ
Navabharat Book Depot,
UDIPI.

The Canara Banking Corporation Limited.

(Incorporated in British India, with limited Liability)

Estd: 1906

Head Office: **UDIPI**, South Kanara.

ANNOUNCEMENT.

A Branch of the Bank has been opened **at SALEM TOWN on 11—4—1946.**

A Branch of the Bank will shortly be **opened at BYADGI.**

ನವಯುಗ

ಉಡುಪಿ, ಗುರುವಾರ, ೧೧-೪-'೪೬

ಅನಿವಾರ್ಯವೆಂದಾದರೆ ಆಗಿಹೋಗಲಿ!

ಹಿಂದೀ ಸ್ವಾತಂತ್ರ್ಯಪಥದಲ್ಲಿ ಮಿ. ಜಿನ್ನರು ಬಳವಾಗಿ ಅಗೆಯುತ್ತಾ ಬರುತ್ತಿರುವ ಕಣಿವೆಗೊಂದು ಅಡ್ಡಮರ ಹಾಕಲು—ಪಾಕಿಸ್ತಾನದ ಪ್ರಶ್ನೆಯನ್ನು ರಾಜೀ ಮೂಲಕ ತೀರ್ಮಾನಿಸಲು—ಬ್ರಿಟಿಷ್ ಮಂತ್ರಿ ಸಮಿತಿಗಾದರೂ ಸಾಧ್ಯವಾಗಬಹುದೆಂಬ ಆಶೆ ನಿರರ್ಥಕ. ಕಾರಣಯುಕ್ತವಾದಕ್ಕೆ ಎಟಕುವಂತಹ ಒಂದು ಅನ್ಯಾಯದೊಡನಾದರೂ, ಬಾವೀ ಯೋಗಕ್ಷೇಮದ ದೃಷ್ಟಿಯಿಂದ ಸಂಧಾನ ಮಾಡಿಕೊಳ್ಳಬಹುದು. ಆದರೆ ಅನ್ಯಾಯವನ್ನು ಕೊನೆಯ ಗುರಿ ಮುಟ್ಟಿಸದೆ ಸಂಧಾನವೇ ಇಲ್ಲವೆಂಬ ಅಚಲ ಘೋಷಣೆ ವಹಿಸಿದವರೊಡನೆಯೂ ರಾಜೀ ತೀರ್ಮಾನ ಹೊಂದಲು ಸಾಧ್ಯವೇ? ಮಿ. ಜಿನ್ನರ ಮೋರ್ಚೆಯು ಎರಡನೆಯ ವರ್ಗದ್ದಾಗಿರುವುದರಿಂದ ಸಂಧಾನವು ಸಾಧ್ಯವೇ ಇಲ್ಲ. ನಾನು ಭಾರತೀಯನೇ ಅಲ್ಲ, ನಾನು ಅವರ ಜತೆಯಲ್ಲಿ ಎಂದಿಗೂ ಬಾಳಲಾರೆ ಪ್ರಮಾಣ. ಪಾಕಿಸ್ತಾನಕ್ಕೆ ಸಮ್ಮತಿ ದೊರೆಯದೆ ಇತರ ಪ್ರಸ್ತಾಪಕ್ಕೆ ನಾವು ಒಪ್ಪಲಾರೆವು. ನಮ್ಮ ಬೇಡಿಕೆಯು ಒಂದಂಶ ಕಡಿಮೆ ದೊರೆತಲ್ಲಿ ನಾವದನ್ನು ಅಂಗೀಕರಿಸಲಾರೆವು. ನಮ್ಮೀ ವಾದವನ್ನು ಮನ್ನಿಸದಿದ್ದರೆ ಬಿಯುಸೆಟಿನ ಜೇಲಿ ನಿಲ್ಲದೇ ರಕ್ತಪಾತವಾದೀತು. ಎಂದೆಲ್ಲಾ ಹೆದರಿಸಹತ್ತಿರುವ ಲೀಗ್ ಪ್ರಧಾನರನ್ನು ನ್ಯಾಯಕ್ಕೊಪ್ಪುವಂತೆ ಮಾಡಬಲ್ಲ ಒಂದು ಶಕ್ತಿ ಪ್ರಪಂಚದಲ್ಲೇ ಹುಟ್ಟಿಲ್ಲ. ಆದ್ದರಿಂದ ಹಿಂದೀ ಪ್ರಶ್ನೆಗೊಂದು ತೀರ್ಮಾನ ಬೇಕೆಂಬ ಆತುರದಿಂದ ಮಿ. ಜಿನ್ನರನ್ನು ಸಮಜಾಯಿಸಬಲ್ಲೆನೆಂಬ ಧೈರ್ಯ ವಹಿಸಿದವರಿದ್ದರೆ ಅಂಥವರು, ಆಹಾರಾಭಾವ ನಿವಾರಣೆಗಾಗಿ ಸಹಾರಾ ಮರುಭೂಮಿಯನ್ನು ಸಾಗುವಳಿ ಮಾಡಬಲ್ಲೆನೆಂದು ಹೊರಡುವ ಸ್ವಪ್ನಲೋಕವಾಸಿಗಳೇ ಸರಿ! 'ನೀವು ಭಾರತೀಯನಲ್ಲವಾದರೆ ಭಾರತದ ರಾಜ್ಯಾಂಗ ರಚನೆಯಲ್ಲಿ ಭಾಗ ವಹಿಸುವ ಅಧಿಕಾರವೇ ನಿಮಗಿಲ್ಲ. ಹಿಂದುಸ್ಥಾನದಲ್ಲಿರುವ ಮುಸಲ್ಮಾನರಲ್ಲಿ ನೇಕಡಾ ೯೦ ಮಂದಿ, ಆದಿಯಲ್ಲಿ ಹಿಂದುಗಳಾಗಿದ್ದು ಆ ಮೇಲೆ ಮತಾಂತರ ಹೊಂದಿದವರು. ಹೀಗೆ ಮತ ಬದಲಾಯಿಸಿಕೊಂಡವರು ತಮಗೊಂದು ಪ್ರತ್ಯೇಕ ರಾಷ್ಟ್ರವನ್ನು ಯಾಚಿಸುವದು ರಾಕ್ಷಸೀ ವರ್ತನ" ಎಂದು ನೋಯಿಸಿ ಮಾತಾಡಿಬಿಟ್ಟ ಸರ್ದಾರರಂಥವರೇ ಲೀಗ್ ಸರ್ವಾಧಿಕಾರಿಯನ್ನು ಸಮಜಾಯಿಸಬೇಕು. ತಮ್ಮ ಬಯಕೆಯೊಂದೇ ನ್ಯಾಯವೆಂಬ ದೃಢಾಭಿಪ್ರಾಯದಿಂದ, ಕೇವಲ ವ್ಯಕ್ತಿಗತ ಅಭಿಲಾಷೆಗಾಗಿ ಚಿರಸ್ಮರಣೀಯ ಯುದ್ಧಗಳನ್ನು ಮಾಡಿಸಿ, ರಕ್ತ ಕಾಲುವೆ ಹರಿಸಿದ್ದ ಅಲ್ಲಾವುದ್ದೀನನಂತಹ ಮೊಗಲ ರಾಜರು ಹಿಂದೀ ಚರಿತ್ರೆಯಲ್ಲಿ ದೊರೆಯುತ್ತಾರೆ. ಇಪ್ಪತ್ತನೇ ಶತಮಾನದ 'ಆಟಂ ಅವಧಿ'ಯಲ್ಲೂ ಆ ಕಾಲದ ಬಾದಶಾಹೀ ಮನೋವೃತ್ತಿಯನ್ನು ತನ್ನಲ್ಲಿ ಆವಾಹನೆ ಮಾಡಿಕೊಂಡು ಜಿನ್ನರು ಅಂದಿನ ಮೊಗಲ ರಾಜರ ಆಟಗಳನ್ನು ತಾನೂ ಆಡುವೆನೆಂದು ಹೊರಟರೆ ಮಿಕ್ಕವರು ಅದಕ್ಕೆ ತಯಾರಾಗಬಲ್ಲರೆ? ಇಂದಿನ ಜಗತ್ತು ಅಥವಾ ಭಾರತವು ಈ ಆಟದ ರಂಗವಾಗುವಂತಿದೆಯೆ? ಆದ್ದರಿಂದ ಮಿ. ಜಿನ್ನರು ಕೇಳುವ ಪಾಕಿಸ್ತಾನವೆಂಬುದು ಅಸಾಧ್ಯ ಪ್ರಶ್ನೆ; ಅಸ್ಪರ್ಶ ವಿಷಯ! ಆದರೆ ಮುಂದಿನ ಹಾದಿ ಯಾವುದು? ಮುಸ್ಲಿಂ ಲೀಗ್ ಒಪ್ಪದೆ ಹಿಂದೀ ಪ್ರಶ್ನೆಯ ಕುರಿತು ಸಂಧಾನವೇ ಇಲ್ಲವೆಂಬ ನಂಬಿಕೆ ಅಂದಿನಿಂದ ಇದುವರೆಗೂ ಇದೆ; ಈಗ ಮುಸ್ಲಿಂ ಲೀಗಿನೊಡನೆ ಸಂಧಾನವಿಲ್ಲವೆಂಬುದು ಸ್ಪಷ್ಟವಾಗಿದೆ. ಹಾಗಾದರೆ ಮುಂದೇನು? ಈ ಪ್ರಶ್ನೆಯನ್ನೀಗ ಬ್ರಿಟಿಷರೇ ಉತ್ತರಿಸಬೇಕು. ಬ್ರಿಟಿಷ್ ಮಂತ್ರಿ ಸಮಿತಿಯು ಪರ್ಯಾಲೋಚನೆಗೆಂದ ದೆಸೆಯಿಂದಾಗಿಯೇ ಪಾಕಿಸ್ತಾನ್ ಪ್ರಶ್ನೆಯ ಸಂಬಂಧದ ಇಕ್ಕಡೆಯವರ ರೋಷಾಗ್ನಿಯೂ ಈಗ ಪ್ರಜ್ವಲಿಸಿದೆ. ಇಂತಹ ಬೆಂಕಿ ಹೊತ್ತಿಸಿ ಹೋಗುವುದೇ ಸಮಿತಿಯ ಧ್ಯೇಯವಲ್ಲವಷ್ಟೆ? ಕಾಂಗ್ರೆಸ್—ಲೀಗ್ ಅಥವಾ ಹಿಂದೂ—ಮುಸಲ್ಮಾನ್ ಪಕ್ಷಗಳು ಇಲ್ಲಿಯೇ ಹೋರಾಡಿಕೊಳ್ಳತಕ್ಕವುಗಳು; ಆದರೆ ಬ್ರಿಟಿಷರು ಇಲ್ಲಿಂದ ಹೊರಡತಕ್ಕವರು. ಅವರವರ ಪಾಲಿನದನ್ನು ಅವರವರು ಮಾಡಿ ಮುಗಿಸಲಿ. ಭಾರತದ ಭಾವೀ ರಾಜ್ಯಾಂಗ ರಚನೆಗೆ ತಯಾರಿರುವ ಬಹುಸಂಖ್ಯಾಕ ಭಾರತೀಯರಿಗೆ ಅಧಿಕಾರವನ್ನೊಪ್ಪಿಸಿ ಪ್ರಥಮತಃ ಬ್ರಿಟಿಷರು ಕಾಲ್ತೆಗೆಯಲಿ. ಇಲ್ಲಿಯವರು ತಮ್ಮೊಳಗೆ ಮಾಡಿಕೊಳ್ಳುವ ಅಂತಯುದ್ಧಕ್ಕೋ, ರಕ್ತಪಾತಕ್ಕೋ ಬ್ರಿಟಿಷರು ಹೆದರಬೇಕಾಗಿಲ್ಲ. ಆ ಹೊಣೆಯೊಂದಿಗೆ ಎಲ್ಲಾ ಜವಾಬ್ದಾರಿಯನ್ನೂ ವಹಿಸಿಕೊಂಡು, ಬ್ರಿಟಿಷರಿಗೆ ಪಾವತಿ ರಶೀದಿ ಕೊಟ್ಟು ಕಳುಹುವವರು ಇಲ್ಲಿ ತಯಾರಿದ್ದಾರೆ. ಮಿ. ಜಿನ್ನರು ಬೆದರಿಕೆ ಹಾಕುತ್ತಿರುವ ಅಂತರ್ಯುದ್ಧವು ಅನಿವಾರ್ಯವೆಂದಾದರೆ ಅನುಭವಿಸದಿರಲಾಗುವದೇ? ಸ್ವಾತಂತ್ರ್ಯದ ಮಾತಂತಿರಲಿ, ಇದನ್ನಾದರೂ ಹಿಂದೂಡುವದರಿಂದ ಪ್ರಯೋಜನವೇನು? ಲೀಗ್ ನಿರ್ಮಿತ ಕೊಳೆಯು ರಕ್ತದಿಂದಲ್ಲದೆ ಬೇರಾವುದರಿಂದ ತೊಳೆದರೂ ಹೋಗುವಂತಹುದಲ್ಲವಾದರೆ, ಇಂದಲ್ಲದಿದ್ದರೆ ನಾಳೆಯಾದರೂ ತೊಳೆದುಕೊಳ್ಳದಿರಲಾಗುವದೆ? ಆಗಲೇ ಬೇಕಾದುದು ಇಂದೇ ಆಗಬಾರದೇಕೆ? ಯುದ್ಧವದನ್ನೇ ನಿರೀಕ್ಷಿಸಿಯಾದರೂ, ಹಿಂದೀ ಸ್ವಾತಂತ್ರ್ಯವನ್ನು ಇನ್ನು ಹಿಂದೆ ಹಾಕುವದು ಅಸಹನೀಯ. ಅದರ ಸಾಧನೆಗಾಗಿ ಇದುವರೆಗೆ ಸಾಕಷ್ಟು ರಕ್ತ ಸುರಿದಿದೆ; ಅದನ್ನು ಅಂಗೀಕರಿಸಿಕೊಳ್ಳುವಾಗಲೂ ಇನ್ನಷ್ಟು ರಕ್ತ ಸುರಿಯುವ ಯೋಗವಿದ್ದರೆ ಸುರಿಯಲಿ, ಆಗುವಂತಹದೊಮ್ಮೆ ಆಗಿ ಹೋಗಲಿ. ಈ ಬಾರಿ ಕಾಂಗ್ರೆಸ್ ಪ್ರಮುಖರೆಲ್ಲಾ ಇಂತಹ ಖಂಡಿತ ವರ್ತನೆ, ಸ್ಪಷ್ಟ ವಕ್ತೃತ್ವವನ್ನು ಅಂಗೀಕರಿಸಿದಂತಿದೆ; ರಾಷ್ಟ್ರವು ನಿಶ್ಶಂಕೆಯಿಂದ, ನಿರ್ಭೀತಿಯಿಂದ ಅವರಿಗೆ ಬೆಂಬಲವಾಗಬೇಕು. ದೇಶ ಹಿತಾಕಾಂಕ್ಷಿಗಳೆಲ್ಲರ ಲಕ್ಷ್ಯ ಮತ್ತು ಶಕ್ತಿಯು ಈ ಕಾರ್ಯಕ್ಕೆ ಕೇಂದ್ರೀಕರಿಸಲ್ಪಟ್ಟಲ್ಲಿ ಲೀಗ್ ಕಂಟಕವೆನ್ನಿಸದು.

ನಿಮ್ಮ ಭವಿಷ್ಯ

ಜೀವ ವಿಮೆಯು ಮುಂದಿನ ಜೀವನ ಯೋಜನೆಯ ಒಂದು ಮುಖ್ಯಾಂಗವಾಗಿದೆ. ಮರಣದ ಸಂದರ್ಭದಲ್ಲಿ ಅದು ಭದ್ರತೆಯನ್ನು ಕೊಡುವುದು ನಿಮ್ಮ ಆವಶ್ಯಕತೆಗಳಿಗೆ ... ಖರ್ಚಿನದಿದು. ನೀವು ಯೋಗ್ಯ ರೀತಿಯಲ್ಲಿ ಯೋಜಿಸಿದರೆ ನಿಮ್ಮ ಆದಾಯದೊಳಗೇ, ನೀವು ಅದೆಷ್ಟು ದೊಡ್ಡ ಮೊತ್ತದ ವಿಮೆಯನ್ನು ತೆಗೆಯಲು ಶಕ್ಯರಾಗುತ್ತೀರಿ ಎಂಬ ವಿಷಯವು ನಿಮ್ಮನ್ನು ಆಶ್ಚರ್ಯಗೊಳಿಸಬಹುದು. ಅದು ಹೇಗೆ ಎಂಬುದನ್ನು ತಿಳಿಯಲು ನಮಗೆ ಬರೆಯಿರಿ:

ಭೂಷಣ್ ಕುಮಾರ್
ಕೊಳ್ಳೂರ್‌ಕರ್ ಎಂಡ್ ಕೋ

ದೇವಕರಣ್ ನಾನ್‌ಜೀ
ಇನ್‌ಶ್ಯೂರೆನ್ಸ್ ಕೋ., ಲಿಮಿಟೆಡ್.

ಇದರ ಜೀವವಿಮಾ ವಿಭಾಗದ
ಪ್ರಾಮುಖ್ಯ ಏಜೆಂಟರು,
ಮಣ್ಣಗುಡ್ಡೆ ಪ್ಲೈನ್ ರೋಡ್,
ಮಂಗಳೂರು, ದಕ್ಷಿಣ ಕನ್ನಡ.

ಹೆಡ್ ಆಫೀಸು:
ದೇವಕರಣ ನಾನ್‌ಜೀ ಬಿಲ್ಡಿಂಗ್ಸ್,
ಬೊಂಬಾಯಿ 1.

ಉಡುಪಿ

ಮಕ್ಕಳ ಕೂಟದ— ಮಹಾ ಸಭೆಯೊಂದು ಉಡುಪಿ ಮೋಡರ್ನ್ ಹಾ. ಎ. ಶಾಲೆಯಲ್ಲಿ ಶ್ರೀ. ಬಿ. ಅಂತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ, ಮೇ ಪ್ರಥಮ ವಾರದಲ್ಲಿ ಮಕ್ಕಳ ಕಲಾ ಪ್ರದರ್ಶನವೊಂದನ್ನು ಏರ್ಪಡಿಸ ಬೇಕೆಂದು ನಿರ್ಧಾರವಾಗಿದೆ.

ರೈತರ ಸಭೆ—ತಾ 7ರಲ್ಲಿ ಉಡುಪಿ ಮತ್ತು ಆಸುಪಾಸಿನ ರೈತರ ಸಭೆಯು ಸಗ್ರಿ ಗುಡ್ಡೆಯಲ್ಲಿ ಸೇರಿ ಶ್ರೀಗಳಾದ ಬಿ. ಎ. ಶೆಟ್ಟಿ, ಯು. ಯಸ್. ಕಾಮತ್ ಮತ್ತು ಶೆಣೈಯವರ ಭಾಷಣಗಳಾದುವು.

ಗೃಹಪ್ರವೇಶ-ವಕೀಲ್ ಶ್ರೀ. ಜಿ. ವಾಸುದೇವರಾಯರು ಕಟ್ಟಿಸಿದ್ದ ಭವ್ಯಗೃಹದ ಪ್ರವೇಶೋತ್ಸವದ ಸಂಬಂಧವಾಗಿ ಕಳೆದ ತಾ 30ರಲ್ಲಿ ಊರಗೃಹಸ್ಥರಿಗೆಲ್ಲಾ ನೂತನಗೃಹದಲ್ಲಿ ಸತ್ಕಾರಕೂಟ ನಡೆಯಿತು.

ಕಾಸರಗೋಡು-ಉಡುಪಿ ಶ್ರೀ ಫಲಿಮಾರು ಮಠದ ಶ್ರೀ ಮದ್ರಘುಮಾನ್ಯ ತೀರ್ಥ ಶ್ರೀ ಪಾದಂಗಳವರು ತಮ್ಮ ಸಂಸ್ಥಾನದ ಶ್ರೀ ರಾಮಚಂದ್ರ ದೇವರ ಶ್ರೀರಾಮ ನವಮೀ ಉತ್ಸವವನ್ನು ಈಸಲ ಕಾಸರಗೋಡಲ್ಲಿ ಜರಗಿಸುವಕ್ಕಾಗಿ ತಾ 2-4-46 ಸಾಯಂಕಾಲ ಕಾಸರಗೋಡನ್ನು ಸೇರಿದರು. ಮಿ. ಮುನ್ಸೀಫರವರೂ ತಹಸೀಲ್ದಾರರೂ ಇನ್ನಿತರ ಊರ ಪ್ರಮುಖರೆಲ್ಲಾ ಸೇರಿ ಶ್ರೀಗಳವರನ್ನು ಸ್ವಾಗತೀಕರಿಸಿದರು. ತಾ 3 4-46ರಿಂದ ಶ್ರೀ ರಾಮೋತ್ಸವದ ಕಾರ್ಯಕಲಾಪಗಳು ಬೆಳಗ್ಗೆ ವೇದ ರಾಮಾಯಣಾದಿ ಪಾರಾಯಣ, ಮಧ್ಯಾಹ್ನ ಶ್ರೀ ರಾಮಚಂದ್ರ ದೇವರ ಪೂಜಾ, ಸಾಯಂಕಾಲ ಪಂಡಿತರುಗಳ ಧಾರ್ಮಿಕ ಭಾಷಣ, ರಾಮಾಯಣ ಪುರಾಣ ವಾಚನ, ರಾತ್ರೆ ಪೂಜಾ, ಹರಿಕಥೆ ಇವುಗಳು ಸಾಂಗವಾಗಿ ಜರಗಿದುವು. ತಾ 4 4-46ರಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಬ್ರಹ್ಮ ಶ್ರೀ ನಿಜ್ಯೋತಿ ಅನಂತ ಉಪಾಧ್ಯರವರು ವೇದ ಮತ್ತು ವಿಜ್ಞಾನ ವಿಷಯದಲ್ಲಿ ಜನರ ಮನದಟ್ಟಾಗುವಂತೆ ಭಾಷಣ ಮಾಡಿದರು. ಅಧ್ಯಕ್ಷರು ಭಾಷಣಕಾರರನ್ನು ಪ್ರಶಂಸಿಸಿ ಭಾಷಣದ ವಿಷಯಕ್ಕೆ ಮಹತ್ವವನ್ನು ಪ್ರದರ್ಶಿಸಿ ಅಧ್ಯಕ್ಷ ಭಾಷಣವನ್ನು ಗಂಭೀರ ವಾಣಿಯಿಂದ ಪೂರೈಸಿದರು. ಇನ್ನಿತರ ದಿನಗಳಲ್ಲಿ ಬ್ರಹ್ಮಶ್ರೀ ಸಾಬಾಜಿ ಶ್ರೀನಿವಾಸಾಚಾರ್ಯರವರು "ಧರ್ಮ" ಎಂಬೀ ವಿಷಯದಲ್ಲೂ ಶ್ರೀಯುತ ಭಂ—ನಾರಾಯಣಾಚಾರ್ಯರು ಮುಕ್ತಿ, ಭಕ್ತ್ಯಾದಿ ವಿಷಯದಲ್ಲೂ ಸುಂದರವಾಣಿಯಿಂದ ಭಾಷಣ ಮಾಡಿದರು. ಹಲವಾರು ಊರ ಜನರುಗಳು ಶ್ರೀ ದೇವರ ಸೇವಾ ನಡೆಯಿಸುತ್ತಾ ಪುಣ್ಯ ಫಲಕ್ಕೆ ಭಾಗಿಗಳಾದರು. ಮೈಸೂರಿನ ಹರಿಕಥಾ ಧುರೀಣಾತ್ಯಾದಿ ಬಿರುದಾಂಕಿತರೇ. ಶ್ರೀ ದಾಸವರ್ಮರ್ತ್ತರು ದಾಸರ ಹರಿಕಥೆಯು ಪ್ರತಿನಿತ್ಯವೂ ನಡೆಯಿತು. ಹರಿಕಥಾ ಸಮಾರಂಭಕ್ಕೆ ಶ್ರೀ ಯದಸೀರು ಮಠದ ಶ್ರೀ ಮದೀದ್ವಾನಂದ ಭಾರತೀ ಶ್ರೀ ಪಾದಂಗಳವರು ಚಿತ್ತೈಸುತ್ತಿದ್ದರು. ತಾ. 10ನೇ ಶ್ರೀ ರಾಮನವಮೀದಿನ ಪಂಚಾಮೃತ ಅಭಿಷೇಕ, ಶ್ರೀ ರಾಮೋತ್ಸವಾದಿ ವಿಶೇಷ ಕಾರ್ಯಕ್ರಮಗಳೂ ಜರಗಿದವು.

ಬಂಟರ ಯಾನೆ ನಾಡವರ ಸಂಘ, ಮುಂಬಯಿ—ಅಳಿಯ ಸಂತಾನ ಮಸೂದೆಯ ಕುರಿತಾಗಿ, ಮುಂಬಾಯಿಯಲ್ಲಿರುವ ಸರ್ವ ಬಂಟರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾದುದರಿಂದ ಸಮಾಜದ ಸ್ತ್ರೀ ಪುರುಷರೆಲ್ಲರೂ ತಾ 14-4-46ನೇ ರವಿವಾರ ಪೂರ್ವಾಹ್ನ ಘಂಟೆ 10ಕ್ಕೆ ದಾದರ್ ಗೋಖಲೆ ರೋಡಿನಲ್ಲಿರುವ ಕಿತ್ತೆ ಭಂಡಾರಿ ಹೋಲಿನ ಮಹಡಿಯಲ್ಲಿ ಶ್ರೀ ಸುಂದರ್ ಶೆಟ್ರ ಅಧ್ಯಕ್ಷತೆಯಲ್ಲಿ ಜರಗುವ ವಿಶೇಷಮಹಾಸಭೆಗೆ ಬಂದು ತಮ್ಮ ವಿಚಾರಗಳನ್ನು ಸಭೆಯ ಮುಂದಿಡಬೇಕೆಂದೂ, ಅಂದಿನ ಸಭೆಯಲ್ಲಿ ನಡೆಯಲಿರುವ ಚರ್ಚೆಯಲ್ಲಿ ಭಾಗವಹಿಸಬೇಕೆಂದೂ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಕಾಂಗ್ರೆಸ್ ಪ್ರಮುಖರ ಮೇಲೆ ಜಿನ್ನರ ವಾಗ್ಬಾಣ.

ನವದಿಲ್ಲಿಯಲ್ಲಿ ತಾ॥7ರಲ್ಲಿ ಸೇರಿದ ಕೇಂದ್ರ ಎಸೆಂಬ್ಲಿ ಮತ್ತು ಪ್ರಾಂತಿಕ ಎಸೆಂಬ್ಲಿಗಳ 450 ಮುಸ್ಲಿಂ ಸದಸ್ಯರ ಸಮೇತ ಸುಮಾರು 2500 ಸಾವಿರ ಜನರಿದ್ದ ಸಭೆಯಲ್ಲಿ ಮಿ. ಜಿನ್ನರಿತ್ತ ಭಾಷಣವು 25 ಮಿನಿಟಿನಲ್ಲಿ ಮುಗಿಯುವಷ್ಟು ಚುಟುಕು ಮತ್ತು ನೀರಸವಾಗಿತ್ತು. ಪ್ರಾಮುಖ್ಯ ಭಾಷಣವೆಂದು ಮೊದಲೇ ಪ್ರಚಾರ ಪಡೆದಿದ್ದ ಆ ಭಾಷಣದಲ್ಲಿ, ಲೀಗ್ ಅಧ್ಯಕ್ಷರು ಎಂದಿನಂತೆ ಕಾಂಗ್ರೆಸಿಗರ ಮೇಲೆ ನಿಂದೆ, ದರ್ಪೋಕ್ತಿಗಳನ್ನಾಡಿದ್ದರೂ ಜಿನ್ನರಲ್ಲಾಗಲೀ ಸಭಿಕರಲ್ಲಾಗಲೀ ಹಿಂದಿನ ಉತ್ಸಾಹ ಕಂಡುಬರುತ್ತಿರಲಿಲ್ಲ. ವಿನಯದಿಂದಲ್ಲವಾದರೂ, ಪರಿಸ್ಥಿತಿಯ ಒತ್ತಾಯದಿಂದ ಅವರು ಕುಗ್ಗಿ ಹೋದಂತೆ ಕಾಣುತಿತ್ತು.

ಜಿನ್ನರ ಭಾಷಣ

“ರಾಜ್ಯಾಂಗ ರಚನೆಯ ಏಕ ಸಭೆಗಾಗಲೀ, ಪಾಕಿಸ್ತಾನಕ್ಕೆ ಮುಂದಾಗಿ ಸಮ್ಮತಿ ದೊರೆಯದೆ ತಾತ್ಕಾಲಿಕ ಸರಕಾರ ರಚನೆ ಮಾಡುವದಕ್ಕಾಗಲೀ ಮುಸ್ಲಿಂ ಭಾರತವು ಎಂದೂ ಒಪ್ಪುವಂತಿಲ್ಲ. ಮುಸಲ್ಮಾನರು ಸಂಯುಕ್ತ ಭಾರತವನ್ನು ಒಪ್ಪಿಕೊಳ್ಳುವದು ಅಸಾಧ್ಯ. ಮುಸ್ಲಿಂ ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾದ ತೀರ್ಮಾನವೊಂದನ್ನು ಹೇರುವ ಪ್ರಯತ್ನ ನಡೆದರೆ, ಮುಸ್ಲಿಂ ಭಾರತವು ತನ್ನ ಸರ್ವ ಶಕ್ತಿಯಿಂದ, ತನ್ನ ಸರ್ವಸ್ವವನ್ನು ಬಲಿ ಕೊಟ್ಟಾದರೂ ಅದನ್ನು ವಿರೋಧಿಸುವದು. (ಉತ್ಸಾಹ ಧ್ವನಿ) ಪಾಕಿಸ್ತಾನ ಮತ್ತು ಅದರ ಪೂರ್ಣಾಧಿಕಾರದ ಮಟ್ಟಿಗೆ ಮಧ್ಯ ಪಂಚಾಯತಿಕೆಯಿಲ್ಲ (ಉತ್ಸಾಹ ಧ್ವನಿ)

ಕಾಂಗ್ರೆಸ್ ಯೋಜನೆಗೆ ನಕಾರ

‘ಪ್ರಾಂತ್ಯಗಳ ಗಡಿಗಳನ್ನು ಬದಲಾಯಿಸಿ ಅವುಗಳಿಗೆ ಸಾಧ್ಯವಿದ್ದ ಸಂಪೂರ್ಣಾಧಿಕಾರ ಕೊಟ್ಟು, ದೇಶ ರಕ್ಷಣೆಯೇ ಮೊದಲಾದ ಕೆಲವು ವಿಷಯಗಳ ಅಧಿಕಾರವುಳ್ಳ ಸಬಲ ಕೇಂದ್ರಾಡಳಿತೆ ಸ್ಥಾಪಿಸುವದೇ ಕಾಂಗ್ರೆಸಿನ ಗುರಿ’ ಎಂದ ನೆಹರು, ಸರ್ದಾರರ ಇತ್ತೀಚಿನ ಸ್ಪಷ್ಟೀಕರಣಗಳನ್ನು ಟೀಕಿಸುತ್ತಾ ಜಿನ್ನರಂದರು: “ಇಂತಹ ಸೂಚನೆಯು ಕಾರ್ಯರೂಪ ಹೊಂದಿದರೆ, ಪಂಡಿತ ನೆಹರುಗಳ ಸ್ವಪ್ನದ ಸರಕಾರ ಸ್ಥಾಪನೆಗೊಂಡರೆ ಅದು 48 ಘಂಟೆ ಬಾಳುವಂತಿಲ್ಲ. ಇಂತಹ ‘ಫೇಸಿಸ್ಟ ಮಹಾ ಸಮಿತಿ’ ರಚನೆಗೊಂಡು, ಅದಕ್ಕೆ ನಮ್ಮ 100 ಮಿಲಿಯ ಜನರ ಅದೃಷ್ಟ ನಿರ್ಣಯಿಸುವ ಅಧಿಕಾರ ದೊರೆತಲ್ಲಿ, ನಮ್ಮ ಮತ್ತು ಇತರ ಮಿಲಿಯಾವಧಿ ಅಲ್ಪ ಸಂಖ್ಯಾಕರ ಹಿತ ಸಂಬಂಧಗಳಿಗೆ ವಿರುದ್ಧವಾಗಿ ಅವರ ಕೈಯ್ಯ ಅಧಿಕಾರ ಯಂತ್ರವು ಚಾಲೂಗಲಿದೆ. ಈ ಯೋಜನೆಯಲ್ಲಿ ಎಂತಹ ಕೃತ್ರಿಮತೆಯಿದೆ ಎಂಬುದನ್ನು ಕಾಂಗ್ರೆಸಿಗರು ಮನಗಂಡಂತೆ ಕಾಣುವದಿಲ್ಲ”.

ಎರಡು ಸಭೆಗಳಾಗಲಿ

“ಕಾಂಗ್ರೆಸ್ ವಾದವು ರಾಷ್ಟ್ರೀಯತೆಯನ್ನಾಧರಿಸಿದೆ. ಕೇವಲ ಸ್ವಪ್ನದಲ್ಲಿರುವವರ ಕಣ್ಣು ಮುಂದಲ್ಲದೆ ಈ ರಾಷ್ಟ್ರೀಯತೆಯೆಂಬುದೇ ಇಲ್ಲ. ನಾವಾದರೋ ವ್ಯವಹಾರ್ಯ ಜಗತ್ತಿನಲ್ಲೇ ಇದ್ದೇವೆ. ಈ ಉಪಭೂಖಂಡದ ಸ್ಥಳಗಳು ಪಾಕಿಸ್ತಾನ್ ಮತ್ತು ಹಿಂದುಸ್ಥಾನ್ ಎಂಬ ಎರಡು ರಾಷ್ಟ್ರಗಳಾಗಿ ರೂಪಗೊಳ್ಳಬೇಕೆಂಬ ಮೂಲ ತತ್ವ ನಮ್ಮದು. ಇದಕ್ಕನುಗುಣವಾಗಿ ಏಕಮಾತ್ರ ರಾಜ್ಯಾಂಗ ರಚನಾ ಸಭೆಗೆ ಸ್ಥಾನವೇ ಇಲ್ಲ. ನಾವದನ್ನು ಒಪ್ಪಿಕೊಂಡರೆ ಸಂಯುಕ್ತ ಭಾರತಕ್ಕೆ ಒಪ್ಪಿಗೆ ಕೊಟ್ಟಂತಾಗುವದು. ಅಂತಹ ಸಭೆಯು ಕೇವಲ ಕಾಂಗ್ರೆಸಿನ ಡಿಕ್ರಿಯೊಂದನ್ನೇ ಮಾಡಬಲ್ಲುದು; ನಾವಲ್ಲಿ ತೀರಾ ನಿಸ್ಸಹಾಯಕರಾದ ಅಲ್ಪ ಸಂಖ್ಯಾಕರಾಗುತ್ತೇವೆ. ನಮ್ಮ ಯೋಜನೆಯಂತೆ ಒಂದು ಹಿಂದುಸ್ಥಾನಕ್ಕೆ, ಒಂದು ಪಾಕಿಸ್ತಾನಕ್ಕೆ, ಹೀಗೆ ಎರಡು ಪೂರ್ಣ ಸ್ವತಂತ್ರಾಧಿಕಾರವುಳ್ಳ ರಾಜ್ಯಾಂಗ ರಚನಾ ಸಭೆಗಳಾಬೇಕಾಗಿದೆ. ರಕ್ಷಣೆಯೇ ಮೊದಲಾದ ಎಲ್ಲಾ ವಿಷಯಗಳಲ್ಲೂ ಪಾಕಿಸ್ತಾನದ ಮಟ್ಟಿಗೆ ಅದರ ಸಭೆಗೇನೇ ಪೂರ್ಣಾಧಿಕಾರವಿಂತಕ್ಕದ್ದು. ನಮ್ಮ ಯೋಜನೆಯಂತೆ ಸುಮಾರು 250 ಮಿಲಿಯ ಜನರುಳ್ಳ ಹಿಂದುಗಳ ಪಾಲಿಗೆ ಈ ಉಪಖಂಡದ ಮುಕ್ಕಾಲಂಶ ಹೋಗಲಿದೆ. ಆ ಹಿಂದುಸ್ಥಾನವು ವಿಸ್ತಾರ ಮತ್ತು ಜನಸಂಖ್ಯೆಯಲ್ಲಿ ಚೀನಾವೊಂದನ್ನು ಬಿಟ್ಟರೆ ಇಡೀ ಪ್ರಪಂಚದಲ್ಲೇ ಅತಿದೊಡ್ಡ ರಾಷ್ಟ್ರವಾಗುವದು. ನಮಗಾದರೋ ಕೇವಲ ನಾಲ್ಕನೇ ಒಂದು ಪಾಲು ಮಾತ್ರ ದೊರೆಯುವದು. ಈ ವ್ಯವಸ್ಥೆಯಿಂದಾಗಿ ನಾವಿಬ್ಬರೂ ನಂನಮ್ಮ ತತ್ವ, ಸಂಸ್ಕೃತಿ, ಮತ್ತು ಸಾಮಾಜಿಕ ಪದ್ಧತಿಗನುಸಾರವಾಗಿ ಸೌಖ್ಯದಿಂದಿರಬಹುದು”.

ಕಾಂಗ್ರೆಸಿಗರಿಗೆ ಯುದ್ಧಾಹ್ವಾನ

“ಕಾಂಗ್ರೆಸ್ ಬೇಡಿಕೆಯಿದಿರು ದೊಗ್ಗಲೂರದೆ ಹೋದರೆ ರಕ್ತಪಾತವಾಗುವದೆಂದೂ, ಆದರ ಸಿದ್ಧತೆ ನಡೆದಿದೆಯೆಂದೂ, ಬ್ರಿಟಿಷ್ ವ್ಯಾಪಾರಕ್ಕೆ ಧಕ್ಕೆ ಕೊಡುವೆವೆಂದೂ ಅವರು ಬ್ರಿಟಿಷರಿಗೆ ಬೆದರಿಕೆ ಹಾಕುತಿದ್ದಾರೆ. ಪಾಕಿಸ್ತಾನಕ್ಕೊಪ್ಪಿಗೆ ಕೊಟ್ಟರೂ ಹಾಗೆಯೇ ಸರಿ ಎಂದು ಹೆದರಿಸಲಾಗಿದೆ. ವಸ್ತುತ: ಬಡಾಯಿ ಮಾತ್ರವಾಗಿರುವ ಇಂತಹ ರಕ್ತಪಾತದ ಬೆದರಿಕೆಗಳಿಂದಾಗಿ ದುರ್ದೈವವಶಾತ್ ಬ್ರಿಟಿಷರು ತಬ್ಬಿಬ್ಬಾಗಿ ಹೋದರೆ ಈಬಾರಿ ಲಗು ಘೋರಣೆ ಅಥವಾ ತಾಟಸ್ಥ್ಯವಹಿಸಿ ಮುಸ್ಲಿಂ ಭಾರತ ಸುಮ್ಮಗಿರುವಂತಿಲ್ಲ (ಉತ್ಸಾಹ ಧ್ವನಿ) ಅದು ಎಲ್ಲಾ ಅಪಾಯಗಳನ್ನಿದಿರಿಸಿ ತನ್ನಾಟವನ್ನು ಆಡಿಯೇ ಸಿದ್ಧ. ‘ಮುಸ್ಲಿಂ ಬೇಡಿಕೆಗೊಪ್ಪದಿದ್ದಲ್ಲಿ ಅಲ್ಪ ಕಿರುಕುಳಗಳಿರಬಹುದು’ ಎಂದ ನೆಹರು ತೀರಾ ತಪ್ಪು ತಿಳಕೊಂಡಿದ್ದಾರೆ. (ಸಭೆಯಲ್ಲಿ ವ್ಯಂಗ್ಯ ನಗು). ಅವರಿನ್ನೂ ಆನಂದ ಭವನದ ಆವರಣದೊಳಗೇ ಇದ್ದಾರೆ (ನಗು). ಅಂತೆಯೇ, ಬ್ರಿಟಿಷರು ತಮ್ಮ ವ್ಯಾಪಾರಾನುಕೂಲಕ್ಕಾಗಿ ಮುಸಲ್ಮಾನರನ್ನು ಮಾರುತ್ತಾರಾದರೆ ವಿಶೇಷ ವ್ಯಾಪಾರ ಸೌಕರ್ಯಗಳನ್ನೀಯುವ ಆಶೆಯನ್ನು ಕಾಂಗ್ರೆಸಿಗರು ಹುಟ್ಟಿಸಹತ್ತಿದ್ದಾರೆ. ಬ್ರಿಟಿಷ್ ಸಾಮಾನುಗಳಿಗೆ ಅನುಕೂಲ ಮಾಡಿಕೊಡಲು ತಾನು ಸಂತೋಷಪೂರ್ವಕ ತಯಾರಿದ್ದೇನೆಂದು ಗಾಂಧಿಯವರೇ ಒತ್ತಿ ಹೇಳಿದ್ದಾರೆ (‘ನಾಚಿಕೆ ನಾಚಿಕೆ’ ಬೊಬ್ಬೆ) ಆದರೆ ಸಾಮಾನು ಪಡಕೊಳ್ಳುವವರು ಕಾಂಗ್ರೆಸಿಗರು ಮತ್ತು ಹಿಂದೂ ಶ್ರೀಮಂತರು ಮಾತ್ರವಲ್ಲ; ಬ್ರಿಟಿಷ್ ಸಾಮಾನುಗಳ ಅತಿ ದೊಡ್ಡ ಗಿರಾಕಿಗಳೆಂದರೆ ಮುಸಲ್ಮಾನರೇ. ತಮಗೆ ಅಗತ್ಯ ತೋರಿದಾಗ ಬೇಕಾದಷ್ಟು ಆಶ್ವಾಸನೆ ಕೊಡುವ ಅಭ್ಯಾಸ ಕಾಂಗ್ರೆಸಿಗಿದ್ದದ್ದೇ. ಆದರೆ ಅವುಗಳನ್ನು ಪಾಲಿಸುವ ಹೊಣೆಗಾರಿಕೆಯನ್ನು ಅದು ಕಲಿತಿಲ್ಲ”.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No. 887/1945
R. I. A. 952/1946

ಸೂರಪ್ಪ ಶೆಟ್ಟಿ —ಅರ್ಜಿದಾರ
ಮತ್ತು
ದಾಸಪಯ್ಯ ಸಹಾ —ರೆಸ್ಪೊಂಡೆಂಟ
ಯವರೊಳಗೆ

1ನೇ ಪ್ರತಿವಾದಿ. ದಾಸಪಯ್ಯ. ಸೀಳಯ್ಯನವರ ಮಗ. ರಿಟಾಯರ್ಡ್ ಪೋಲಿಸ ಕೊನ್ಸಟೇಬಲ್ ಕುಂದಾಪುರ ತಾಲೂಕು ಹಾಲಿ ಕುಂದಾಪುರ ಕಸಬೆಯಲ್ಲಿ ಇರುವವ.

1ನೇ ಪ್ರತಿವಾದಿಯು ವಾದಿಗೆ ತಾರೀಕು 7-11-1943ರಲ್ಲು ಬರಕೊಟ್ಟ ಗೇಣಿಚೀಟು ಪ್ರಕಾರ ಪ್ರತಿವಾದಿಯಿಂದ ಬರತಕ್ಕ ಕೇಣಿ ಬಾಕಿಗೂ, ಆಸ್ತಿ ಸ್ವಾಧೀನತೆಗೂ ದಾಖಲ್ಲು ಮಾಡಿದ ವ್ಯಾಜ್ಯವು ತಾರೀಕು 11-4-1946ಕ್ಕೆ ತನ್ನಿಬಗ್ಗೆ ಇಟ್ಟಿರುವದರಿಂದ ಆದಿನ್ನ 1ನೇ ಪ್ರತಿವಾದಿಯು ಖುದ್ದು ಯಾ ವಕೀಲರ ಮುಖಾಂತ್ರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಆಕ್ಷೇಪ ವಗೈರೆ ಇದ್ದರೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ವ್ಯಾಜ್ಯವು 1ನೇ ಪ್ರತಿವಾದಿಯ ಗೈರಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿಯೇ ಮೂಲಕ ತಿಳಿಸೋದಾಗಿಯದೆ

K. P. Anantha Rao,
Advocate for P ffl

ಕಾಸರಗೋಡು }
ತಾ 4-4-1946 }

ನೋಟೀಸು

ಉಡ್ಪಿ. ಡಿ. ಮು. ಕೋರ್ಟಿನಲ್ಲಿ.

ಕ್ರಮಸಂಖ್ಯೆ 45/445

ಕೌಡಕಂಡೆಲ, ದೂಡ ಮಂಠಕಾಲನ ಅಳಿಯ ಕೊಡವೂರು ಗ್ರಾಮದ ಮಲ್ಪೆ —ವಾದಿ
ಮತ್ತು
ಹಾರ್ಪಿ ನಾಗತಂಬೆಲ ದೇವಪ್ಪನವರ ಮಗ ಕುಂದಾಪುರ ತಾಲ್ಲೂಕು ಗಂಗೊಳ್ಳಿ —ಪ್ರತಿವಾದಿ.
ಯವರೊಳಗೆ.

ಪ್ರತಿವಾದಿಯು ತಾ. 6-7 44ರಲ್ಲು ರೂಪ್ಯಾ 500-0 0ಕ್ಕೆ ಬರಕೊಟ್ಟ ಡಿ. ಪ್ರೊ. ನೋಟಿನ ಅಸ್ಲು ಬಡ್ಡಿ ವಗೈರೆ ಕೇಳಿ ವಾದಿಯು ಮಾಡಿರುವ ಮೇಲ್ಕಂಡದಾವೆ ತಾ.17 4-46ಕ್ಕೆ ತನ್ನಿಗೆ ಇಟ್ಟಿದೆ. ಆಕ್ಷೇಪ ಇರುವಲ್ಲಿ ಸದ್ರಿ ತಾರೀಕಿಗೆ ಹಗಲು 10ಗಂಟೆಗೆ ಕೋರ್ಟಿನಲ್ಲಿ ಸ್ವತಃ ವ ವಕೀಲದ್ವಾರಾ ಜಾಹೀರು ಮಾಡಿಕೊಳ್ಳತಕ್ಕದ್ದು.

Narayana Rao K.
Advocate for Plff.

Camp Udipi }
3 4-45 }

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಚಿಂತೈಸಿ ತಯಾರಿಸಲ್ಪಟ್ಟ **ಅನೋಘ ನಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವವಾತು ಎಂಬ ಸೂತಿಕಾ ರಸಾಯನ



ಆ ಚಿನ್ನದ ತಿಬಾಟ್ಲಿಗಳು ಹುಟ್ಟು ಕಡಿಮೆ ಆಗಿರುವವರಿಗೆ ಬರುವವು. ಆದರೆ ಕೇವಲ ಆ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು ಡಾ| ಪಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ತಾ. **11—4—46**ನೇ ಗುರುವಾರ ರಾತ್ರಿ **9-30**ಕ್ಕೆ
ಸರಿಯಾಗಿ ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿಯಲ್ಲಿ
ಅತ್ಯಪೂರ್ವ ಸಂದರ್ಭ-
ಶ್ರೀ ಸವಾಯಿ ಗಂಧರ್ವರ ಪಟ್ಟ ಶಿಷ್ಯರಾದ ಗಾನ ಭಾಸ್ಕರ
ನೀಲಕಂಠ ರಾವ್ ಮತ್ತು ಶ್ರೀಮತಿ ರಾಮದುರ್ಗ ಕೃಷ್ಣಾಬಾಯಿ
(ಫಿಲ್ಮ್ ಮತ್ತು ರೇಡಿಯೋ ಸ್ಟಾರ್)
ಇವರಿಬ್ಬರ ಗಾಯನ ಕಚೇರಿ

ತಾ12—4—46 ನವಯುಗದವರ ಪಹಿಲಾ ಮಂಗಳ್ ಗೌರ್.
ಸ್ನೇಹಪ್ರಭಾ ಮತ್ತು ಸಾಹುಮೋಡಕ್

ಮುಟ್ಟಾಗುಳಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವಕಾರಣವಿದ್ದರೂ— ‘ಕುಮಾರಿ ಮಾತ್ರೆಗಳು’ ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|-. (ವಿ. ಪಿ. 12 ಆಣೆ ಅಧಾಯಿದ.)

Mrs. P. DEVEE,
F. D. S. (A. E.) Tollygange, Calcutta.
ಸ್ಟಾಕಿಸ್ಟ್: ಶಾ ಕೆಂಪಿನಿ, ಮಂಗಳೂರು

ಇದು ಶ್ರೀಮಂತರ ಮಸೂದೆ.

(ಲೇ.—ಎನ್. ಎಸ್. ಕುಕ್ಯಾರ್, ಶಿರ್ವ)

ಈಗ ಸಾರ್ವಜನಿಕರ ವಿಚಾರಣೆಗೊಳಪಟ್ಟಿರುವ ಅಳಿಯಸಂತಾನ ಕಟ್ಟಿನ ಸುಧಾರಣಾ ಮಸೂದೆಯನ್ನು ಕೂಲಂಕುಷವಾಗಿ ಪರಿಶೀಲಿಸಿದರೆ ಅದು ವಿಶೇಷ ಆಸ್ತಿಯುಳ್ಳ ಕೆಲವೇ ಕುಟುಂಬಗಳಿಗೆ ಮಾತ್ರ ಅನ್ವಯಿಸಬಲ್ಲುದೆಂಬುದು ಎಂಥವನಿಗಾದರೂ ಮನದಟ್ಟಾಗಬಹುದು. ಮದುವೆಯ ಸಿಂಧುತ್ವ, ವಾರಣ ಶಾಸನ ರಹಿತನ ವಾರಿಸ್ಸಾರಿಕೆ, ಕುಟುಂಬದ ಆಡಳಿತೆ, ಪಾಲು ವಿಧಾನ ಇತ್ಯಾದಿ ಮಸೂದೆಯ ಸರ್ವಭಾಗಗಳೂ ಜೀವನಾವಶ್ಯಕತೆಗೆ ಮಿಕ್ಕಿದ ಆಸ್ತಿ ಹುಟ್ಟುವಳಿಯಿದ್ದವರಿಗೆ ಲಾಗಾವಾದುದು ಗೊತ್ತಾಗಬಹುದು. ತೋರತು, ಊಟಕ್ಕಷ್ಟೇ ಇರುವ ಅಥವಾ ಅಷ್ಟಕ್ಕೂ ಕಡಿಮೆಯಿರುವ ಬಹುಸಂಖ್ಯಾಕ ಕುಟುಂಬಗಳಿಗೆ ಈ ಸುಧಾರಣೆಗಳ ಸಂಬಂಧವೇ ಇಲ್ಲವೆನ್ನಬಹುದು

ಶ್ರೀಮಂತರೆಷ್ಟಿದ್ದಾರೆ?

ಒಂದು ಕಾಲದಲ್ಲಿ ಅಳಿಯಕಟ್ಟಿನವರ ಸ್ವಾಧೀನವಿದ್ದ ದಕ್ಷಿಣ ಕನ್ನಡದ ಆಸ್ತಿಪಾಸ್ತಿಗಳಲ್ಲಿ ಈಗ ಹೆಚ್ಚಿನವು ಮಿಕ್ಕ ಸಮಾಜಗಳ ವಶವಾಗಿವೆ. ಇಡೀ ಜಿಲ್ಲೆಯ ಆಸ್ತಿಯ ಮುಖ್ಯ ಭಾಗವೀಗ ಕ್ರೈಸ್ತ ಗುರುಗಳ, ಮಠ ದೇವಾಲಯಗಳ ಪಾಲಿಗೆ ಸೇರಿ ಹೋಗಿದೆ. 'ಟ್ರಸ್ಟಿ'ಗಳ ಕೈಯ್ಯಲ್ಲಿರುವ ಅಧಿಕಾಂಶವನ್ನು ಬಿಟ್ಟುಳಿದ ಆಸ್ತಿಪಾಸ್ತಿಗಳ ಭಾಗದಲ್ಲಿ ಗಣನೀಯ ಅಂಶವು ಅಳಿಯ ಸಂತಾನದ ಮತ್ತು ಮಕ್ಕಳ ಸಂತಾನದ ಕೆಲವೇ ದೊಡ್ಡ ಕುಟುಂಬಗಳಲ್ಲಿ ಹಂಚಲ್ಪಟ್ಟಿದೆ ಈ ಭಾಗವನ್ನೂ ಬಿಟ್ಟರೆ ಮತ್ತುಳಿಯುವ ಕೆಲವಂಶ ಆಸ್ತಿಗಳನ್ನು ಮಾತ್ರ ಇಡೀ ಜಿಲ್ಲೆಯ ಸಾವಿರಾರು ಸಾಮಾನ್ಯ ಕುಟುಂಬಗಳು ಅನುಭೋಗಿಸುತ್ತಿರಬಹುದು. ಇಂತಹ ಬಡ ಕುಟುಂಬಗಳಲ್ಲಿ ಹೆಚ್ಚಿನವರು ಅಳಿಯ ಕಟ್ಟನ್ನಾಚರಿಸುವವರಿರಬಹುದು. ಈ ಮಸೂದೆಯು ಇಂತಹ ಜನ ಸಾಮಾನ್ಯರ ಜೀವನ ಕ್ರಮದಲ್ಲಿ ಗಣ್ಯ ಬದಲಾವಣೆಯೇನನ್ನೂ ಸೂಚಿಸಿದೆ, ಅಳಿಯ ಸಂತಾನದ ಬೆರಳೆಣಿಕೆಯ ಕೆಲವೇ ದೊಡ್ಡ ಕುಟುಂಬಗಳಿಗೆ ಮಾತ್ರ ಅನ್ವಯಿಸುವಂತಿದೆ, ಒಂದು ಪದ್ಧತಿಯನ್ನು ಸುಧಾರಿಸುವದು ಕೆಲವೇ ಮಂದಿ ಶ್ರೀಮಂತರನ್ನು ದೃಷ್ಟಿ ಪಥದಲ್ಲಿಟ್ಟುಕೊಂಡೇ? ಎಲ್ಲರನ್ನು-ಅವರಲ್ಲಿ ಬಹು ಸಂಖ್ಯಾಕರಾದ ಬಡವರನ್ನೇ-ತಮ್ಮ ಗುರಿಯಾಗಿ ಇಟ್ಟುಕೊಳ್ಳಬೇಕು.

ಮಕ್ಕಳ ಸಂತಾನವೇ ಆಗಬೇಕು.

ಜನ ಸಮಾನ್ಯರಿಗೆ ತಮ್ಮ ಪಾಲಿನ ಅಲ್ಪ ಉತ್ಪತ್ತಿ ಅಥವಾ ಅನುಕೂಲತೆಯನ್ನು ಸ್ವತಂತ್ರವಾಗಿ—ಮಾನವ ಸಹಜ ಮಮತೆಗನುಗುಣವಾಗಿ—ಉಪಯೋಗಿಸುವ ಹಕ್ಕು ಬೇಕಾಗಿದೆ ಇಂತಹ ಹಕ್ಕು ಬರಬೇಕಾದರೆ ಮಕ್ಕಳಕಟ್ಟೇ ಬರಬೇಕು. ಮಕ್ಕಳಕಟ್ಟಿನಲ್ಲಿ ಇರುವ ದೋಷಗಳನ್ನು ತೊಡೆದುಹಾಕಿ, ಅದರ ಗುಣಗಳನ್ನು ಮಾತ್ರ ಅಂಗೀಕರಿಸುವ ಹೊಸ ಕಟ್ಟನ್ನು ತರುವದೊಂದೇ ಉಪಾಯ ಹಾಗಾದಲ್ಲಿ ಅಳಿಯ ಸಂತಾನದವರ ಆಸ್ತಿಗಳೆಲ್ಲಾ ಒಂದೆರಡು ವರುಷಗಳಲ್ಲೇ ಇತರ ಸಮಾಜಗಳವರಿಗೆ ಮಾರಾಟವಾಗಿ ಹೋಗುತ್ತವೆ, ಎಂಬೊಂದು ಸಾಮಾನ್ಯ ಹೆದರಿಕೆ ಅದೇಕೋ ಕೆಲವರಲ್ಲಿ ಬೇರು ಬಿಟ್ಟು ಹೋಗಿದೆ. ಅಳಿಯ ಸಂತಾನ ಕಟ್ಟಿನ ಇದುವರೆಗಿನ ಚರಿತ್ರೆಯಿಂದ ಈ ಹೆದರಿಕೆಯು ಪೂರ್ತಿ ನಿರಾಧಾರವೆಂಬುದು ಖಚಿತವಾಗುತ್ತದೆ. ಅಳಿಯ ಕಟ್ಟಿನ ದೋಷಗಳ ದೆಸೆಯಿಂದಾಗಿಯೇ ಆ ಕಟ್ಟಿನವರ ಆಸ್ತಿಗಳು ಮಕ್ಕಳ ಕಟ್ಟಿನವರ ವಶವಾಗಿರುವಾಗ, ಮಕ್ಕಳ ಕಟ್ಟಾದರೆ ಆಸ್ತಿ ಹೋಗುತ್ತದೆ ಎಂಬ ಹೆದರಿಕೆಗ ಬೆಲೆಯಿದೆಯೆ? ಬದಲಿಗೆ ಮಕ್ಕಳ ಕಟ್ಟು ಬಂದಲ್ಲಿ ತಂತಮ್ಮ ಅಭಿವೃದ್ಧಿಯನ್ನು ತಾವೇ ಸಾಧಿಸಿಕೊಳ್ಳುವ ಹೊಣೆಗಾರಿಕೆ ಮತ್ತು ಸ್ವಕರ್ತವ್ಯ ಪ್ರೇರಣೆಯು ದೊರೆತು ಎಲ್ಲರೂ ಸಮಾನ ಅಭಿವೃದ್ಧಿ ಹೊಂದಲು ಅನುಕೂಲವಾಗುವದು. ಆದ್ದರಿಂದ ಈ ಬಾರಿಯ ನಿರರ್ಥಕ ಮಸೂದೆಯ ಕುರಿತು ಯಾರೂ ಸಮಾಧಾನ ಸೂಚಿಸದೆ—ಧುರೀಣರ ಹಂಗು ದಾಕ್ಷಿಣ್ಯಗಳಿಗೆ ಬಲಿಬೀಳದೆ—ಮಕ್ಕಳ ಕಟ್ಟು ಬರುವಂತೆ ಚಳವಳಿಸುವುದು ಅಗತ್ಯವಿದೆ. ಈ ಬಾರಿಯಾದರೂ ಅಳಿಯ ಕಟ್ಟಿನವರೆಲ್ಲಾ ಕಣ್ತೆರೆಯಲಾರರೆ?

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ನಾಟಕಗಳು

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	8	0
ಕುಶಲವ	0	5	0
ವ್ಯಭಿಚಾರಿಣಿ ಯಾರು?	0	12	0
ಹೆಂಡ್ತಿ ಗಂಡನಾದರೆ!	0	4	0
ಪುರುಷ ವಧು	0	4	0
ದೇಶಭಕ್ತ	1	4	0
ರಂಗಭೂಮಿ	0	8	0
ಸೇವಾಪಥ	0	8	0
ಪ್ರಕಾಶ	2	4	0
ಮೂರು ಪ್ರಹಸನಗಳು	0	1[illegible]	0
ಆರೋಗ್ಯ ಪ್ರತಾಪ	0	12	0
ಧರ್ಮಸಂಕಟ	0	5	0
ಪಂಚಾರತಿ	0	6	0
ಪ್ರತೀಕಾರ	0	6	0
ಬಣ್ಣದ ಬೀಸಣಿಗೆ	1	4	0
ಶಂಭೂಕ ವಧೆ	0	2	0
ಸೂರಾಬಾಯಿ	0	10	0
ಸರಸ್ವತಿ	0	12	0

ಕತೆಗಳು

ಅಂತರಂಗದ ಕತೆಗಳು	0	10	0
ನಾಡಕತೆಗಳು	0	3	0
ನಂದಾದೀಪ	0	10	0
ನಾರೀಹೃದಯ	0	14	0
ಭಾರತೀಯ ಕತೆಗಳು	0	14	0
ನಗೆ ನೋಟಗಳು	0	14	0
ಅನ್ನದೇವರು ಮತ್ತು ಇತರ ಕತೆಗಳು	1	0	0
ವಿಷ್ಣುವಿನ ದಶಾವತಾರಗಳು	0	12	0
ಆಕಾಶಗಂಗೆ	1	12	0
ಪ್ರೇಮಲಾಭ	0	5	0
ಪ್ರತಿಧ್ವನಿ	1	0	0
ಕಂದೂಕಾನನ ನೋಟಗಳು	0	8	0
ಅಮಿತ ಇತ್ಯಾದಿ ಕತೆಗಳು	0	12	0
ಪ್ರೇಮ ಪ್ರವಾಹ	0	8	0
ಚಿಗುರು	0	6	0

ಕವಿತೆಗಳು

ಕಾವ್ಯ ಸಾಮ್ರಾಜ್ಯ	1	0	0
ಶ್ರೀಮುಖ	1	0	0
ಮುಗುಳು	0	3	0
ಪರಾಗ	0	9	0
ಬಾರತ ಗೀತಾಂಜಲಿ	0	3	0
ಚಲಚ್ಚಿತ್ರ ಪದ್ಯಾವಳಿ	0	3	0

ಕಾದಂಬರಿಗಳು

ಸನ್ಯಾಸಿಯ ಸೋಗಿನಲ್ಲಿ	0	8	0
ಲೋಪಾಮುದ್ರೆ	0	6	0
ವೀರಭೂಮಿ	0	2	0
ಇತರ			
ಮುಡಿಪಿರಾಷ್ಟ್ರ ಚರಿತೆ	2	0	0
ಕೀರ್ತನ ಕಂಠಾಭರಣ	2	8	0
ಅದ್ವೈತಮಕರಂದ	0	12	0
ಮಲ್ಲಯುದ್ಧ	1	4	0
ಸೌಂದರ್ಯಲಹರಿ	1	0	0
ವಿಕಾಸ ವಾದ ಅಥವಾ ದೇವರು ಸತ್ತನೆ?	1	12	0
ಭಾರತೀಯರ ದೇಶಭಕ್ತಿ	1	12	0
ವರದಕ್ಷಿಣೆ	0	8	0
ಆರತಿ	1	0	0
ಕಣ್ಣಲ್ಲಿ ಬಟ್ಟು	0	5	0
ಹೆಣ್ಣಿನ ತೊಡಕು	0	5	0
ಧರ್ಮಸಾಮ್ರಾಜ್ಯ	1	6	0
ಭಾರತದಲ್ಲಿ ಜಾತಿಭೇದ	1	0	0
ಗೀತೆಯ ಕೈಗನ್ನಡಿ	0	8	0
ಸುಲಭದಲ್ಲಿ ಇಂಗ್ಲಿಷ್	1	4	0
ಬಾಲ ವಾಙ್ಮಯ	0	3	0
ಆರೋಗ್ಯ ಸಾಧನ	1	0	0
ರಾಷ್ಟ್ರ ಸಭೆಯ ಇತಿಹಾಸ	2	8	0
ಶಾಂತಿಪುರಾಣ	3	0	0
ಮಿತಸಂತತಿ	0	8	0
ಜೇನಿನ ವ್ಯವಸಾಯ	1	0	0
ವಿಚಾರವಾಹಿನಿ	0	4	0
ಪ್ರಕಾಶಿನಿ (8 ಭಾಗಗಳು ಪ್ರತಿ 1ಕ್ಕೆ)	0	4	0

ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗದ

ಚಂದಾ ಹಣ ಬಾಕಿ ಇರುವವರಿಗೆ ಕಳುಹಿಸುವ ವಿ. ಪಿ ಯನ್ನು ಅವರು ದಯವಿಟ್ಟು ಸ್ವೀಕರಿಸುವಂತೆ ವಿನಂತಿ.

ಮೆನೇಜರ್.

ಪ್ರಕಟಣೆ

ತೆಂಕಗ್ರಾಮದ ಶ್ರೀ ನಾರ್ಲತ್ತಾಯ ಜೀರ್ಣೋದ್ಧಾರದಬಗ್ಗೆ ಧನ ಸಹಾಯ ಸಿಕ್ಕಿದುದರ ವಿವರ. ಈ ಮುಂಚೆ ಪ್ರಕಟವಾದ ಪ್ರಕಾರ 335 6 0 ಮತ್ತು ಅನಂತರ ರೂಪಾಯಿ 50 ಶ್ರೀ ವಾಮನ ಅನಂತಯ್ಯ ಪಡುಬಿದ್ರೆ, ರೂ. 5ರಂತೆ ವ್ಯಾ. ಮುದ್ದು ಪೂಜಾರಿ, ಮಲ್ಪೆ ರಾಮಪ್ಪ ಮಾಸ್ತರ, ವ್ಯಾ. ನಾರಾಯಣ ಶೆಟ್ಟಿ ಮುಲೂರು ಮೊನ್ನ ಶೆಟ್ಟಿ, ಮುಲೂರು ಚೆನ್ನಪ್ಪ ಶೆಟ್ಟಿ, ವ್ಯಾ. ಹರಿಯಪ್ಪ ಶೆಟ್ಟಿ, ಓಬಯ್ಯ ಶೆಟ್ಟಿ ಕೂಡಾ ರು 50. ರೂ 40ರಂತೆ ವ್ಯಾ ಮುದ್ದು ಶೆಟ್ಟಿ, ರೂ 2ರಂತೆ ವ್ಯಾ. ರಾಮರಾವು, ಗೋಪಾಲಕೃಷ್ಣ ಕಂಪ್ತಿ, ಪಾದೂರು ಮುದ್ದು ಶೆಟ್ಟಿ, ಕುಲೇದು ಗುಂಡು ಶೆಟ್ಟಿ, ಬೆಮರ್ಗಾಳು ಕೊರಗ ಶೆಟ್ಟಿ, ವ್ಯಾ. ಆಸ್ತಿ ಶೆಡ್ತಿ, ವ್ಯಾ. ಸುಬ್ಬಯ್ಯ ಶೆಟ್ಟಿ, ಹರಿರಾಮ ಪ್ರಭು, ಸೂರ್ಯಣ್ಣ ಶೆಟ್ಟಿ, ಸುಬ್ರಾಯ ಶೆಟ್ಟಿ ಸಂಕಪ್ಪ ಶೆಟ್ಟಿ, ಸುಬ್ಬಯ್ಯ ಶೆಟ್ಟಿ ಕೂಡಾ ರೂ. 24. ರೂಪಾಯಿ 1ರಂತೆ. ಬಾಬು ಶೆಟ್ಟಿ, ಅಕ್ಕಶೆಡ್ತಿ, ಅಕ್ಕಣಿ ಶೆಡ್ತಿ, ಕೂಸು ಶೆಡ್ತಿ, ಶೀನ ಶೆಟ್ಟಿ, ಕಾಡ್ಯ ಶೆಟ್ಟಿ, ಕಾರ್ಕಳ ಗೋಪಾಲ ನಾಯಕ, ಕೂಡಾ ರೂ. 7 ಪಾದೆಬೆಟ್ಟು ನಾರಾಯಣ ಶೆಟ್ಟಿ ರೂ 7 ಅಲ್ಲದೆ ಸೆಟ್ಟೆ ಶ್ರೀ ನಾರಾಯಣ ಆಂಡ್ತಿತ್ತಾಯರು ಮತ್ತು ಬೆಮರ್ಗಾಳು ಶಾಂತರಾಜಯ್ಯನವರು ರೂಪಾಯಿ 25ಬೆಲೆ ಬಾಳುವ ಮರಗಳು ಯರಡನ್ನು 2, ಚೀಲ ಸಿಮೆಂಟನ್ನು ಶ್ರೀ ಬೆಮರ್ಗಾಳು ನಾಗಪ್ಪ ಪ್ರಭುಗಳು ದಯಮಾಡಿ ಸಹಾಯ ಮಾಡಿರುವರು ಶ್ರೀ ಸ್ಥಳದಲ್ಲಿ ತಾ 15 | 16ನೇ ಸೋಮವಾರ ಜರಗಲಿಕ್ಕಿರುವ ಉತ್ಸವಾದಿಗಳಿಗೆ ಸರ್ವರೂ ತಮ್ಮ ಮಿತ್ರ ರೊಡಗೂಡಿ ಬಂದು ಚಂದ ಗಾಣಿಸ ಬೇಕಾಗಿ ಮನಃಪೂರ್ವಕ ಕೋರುವ ವಿನಮ್ರ ನಿರಂತರ ಕೃಪಾಭಿಲಾಷಿ.

ವೈ. ಬಾಬು ಶೆಟ್ಟಿ

ಕಾರ್ಯದರ್ಶಿ ಜೀರ್ಣೋದ್ಧಾರ ಸಂಘ.

ನೋಟೀಸು

ಕಾಸ್ರಗೋಡು ಡಿ. ಮು. ಕೋರ್ಟಿನಲ್ಲಿ.

R. E. P. No (1265/45)

ವೆಂಕಟ್ರಮಣ ಅರ್ಜಿದಾರ

ಮತ್ತು

ಕೊರಗ ಯಾನೆ ವೆಂಕಟ್ರಯ್ಯ- ಪ್ರತಿವಾದಿ

ಸದ್ರಿ ಪ್ರತಿವಾದಿ ಮಂಗ್ಳೂರು ತಾಲೂಕು ಮೂಳೂರು ಕೋಡಿ 193ನೇ ಕೋರ್ಟು ಸ್ಪೆಷಲ್ ನಲ್ಲಿ ಅಡ್ಡ ಶ್ರೀ ಕೃಷ್ಣನವರ ಮಗ ವೆಂಕಟ್ರಮಣಯ್ಯಗೆ ತಿಳಿಸುವದೇನಂದ್ರೆ.

ಸದ್ರಿ ಅಪ್ಲಿಕೇಶನ್ ಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಬೇರೆ [illegible] ಗಳನ್ನು [illegible] ಸದ್ರಿ ಅಪ್ಲಿಕೇಶನ್ ತಾ 17 4 1946ಕ್ಕೆ ಮುಲ್ತವಿ ಕೋರ್ಟಿನಲ್ಲಿ ಇಟ್ಟಿರುವದರಿಂದ ನೀವು ಹಾಜರಾಗದಿದ್ದಲ್ಲಿ ಗೈರು ಹಾಜರಿಯಿಂದ ಇತ್ಯರ್ಥಿಸಲ್ಪಡುವದೆಂಬ ಸಂಗ್ತಿ ತಿಳಿಸೋಣಾಗಿಯದೆ

(Sd) **S. Laxman Rau**

Vakil for Petitioner

Kasaragod 4-4-1946

NOTICE

In the Court of the District Munsif of Mangalore.

S. C. No. 65/1946.

Between

P. Krishna Rao —Plaintiff.

and

K. Ganapathi Defendant

To

The defendant K. Ganapathi, son of Monappayya, C/o. H. BalakrishnaNayak H.N Nayak, Santhekatte, Udipi.

Please take Notice that the above suit filed against you for the recovery of the amount due on a pronote executed by you in favour of the plaintiff for Rs 40/- stands posted to the 5th day of June 1946 for your appearance and that on your failure to appear before the above court on the said date, either in person or by a pleader, you will be declared exparte, and the reliefs prayed for will be granted to the plaintiff

P. SHRINIVASA RAU,

Advocate for Plaintiff.

Mangalore, 5th April 1946.

ದಕ್ಷಿಣ ಕನ್ನಡ.

ಮಂಗಳೂರು

ವಸಂತೋತ್ಸವ-"ವಿಮೆನ್ಸ್ ಎಡ್ಯುಕೇಶನ್ ಸೊಸೈಟಿ" ಯವರ ನೇತೃತ್ವದಲ್ಲಿ, ಬಿರ್ಮಿಂಟ್ ನೆರನಲ್ ಬಾಲಿಕಾ ಪಾಠ ಶಾಲೆಯಲ್ಲಿ, ಇದೇ ತಾ. ೧೩ರಲ್ಲಿ, ವಸಂತೋತ್ಸವದ ಆರಂಭೋತ್ಸವವು ಡಾ। ಎಸ್. ಆರ್. ಯು. ಸವೂರ್, (ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದರಾಸು) ಇವರಿಂದ ನಡೆವುದು. ಬೆಳಿಗ್ಗೆ ೧೦ಕ್ಕೆ ವಸ್ತು ಪ್ರದರ್ಶನ ಮತ್ತು ಲಕ್ಕಿ ಡಿಪ್ ಉದ್ಘಾಟನೆ, ೧ಕ್ಕೆ ಸಂಗೀತ ಸಭಾ ಸಾಯಂಕಾಲ ೭ಕ್ಕೆ ನಾಟಕ, ನೃತ್ಯವೊದಲಾದ ಕಾರ್ಯಕ್ರಮಗಳ ವಿವಿಧ ವಿನೋದಾವಳಿ. (ಟಿಕೇಟು ಮೂಲಕ ಪ್ರವೇಶ.)

ಅಕ್ಕಿ ಭತ್ತ ಒಪ್ಪಿಸುವ ವಾಯಿದೆ-ಸೆಂಟ್ರಲ್ ಕೋಪರೇಟಿವ್ ಸೊಸೈಟಿಯವರ ಸೂಚನೆಯಂತೆ, ಪುತ್ತೂರು ತಾಲೂಕಿನ ಈ ಕೆಳಗಿನ ಗ್ರಾಮಗಳವರು, ಎರಡನೇ ಭತ್ತದ ಬೆಳೆಯೊಪ್ಪಿಸುವ ಅವಧಿಯನ್ನು ತಾ. ೩೦ ೪ ೪೬ರ ವರಗೆ ಹೆಚ್ಚಿಸಲಾಗಿದೆ. ತಾ ೧-೫-೪೬ ರಿಂದ ಕಡಿಮೆ ದರದಲ್ಲಿ ಒಪ್ಪಿಸಬೇಕಾದೀತು. ೧. ಕಲ್ಮಕಾರು. ೨. ಕೊಲ್ಲ ಮೊಗರು. ೩. ಹರಿಹರ ಪಳ್ಳತಡ್ಕ. ೪. ಬಾಲ್ಗೋಡು. ೫. ನನಕಿಮ . ಸುಬ್ರಹ್ಮಣ್ಯ. ೭. ಮುದಪಾಡಿ. ೮. ಮುರುಕುಂಜ. ೯. ಅಮರ ಮುಡ್ನೂರು. ೧೦. ಅಮರ ಪಡ್ನೂರು. ೧೧. ಕಲ್ಮಡ್ಕ ಮತ್ತು ೧೨ ಪಂಬತ್ತೋಡಿ.

ಲಾರಿ ಡ್ರೈವರನಿಗೆ ಶಿಕ್ಷೆ—ಕೆಲಸಮಯದ ಹಿಂದೆ ಪಡೂರಿಗೆ ಹೋಗುತ್ತಿದ್ದ ಬಸ್ಸಿಗೂ ಒಂದು ಲಾರಿಗೂ ಡಿಕ್ಕಿಯಾದ ಪರಿಣಾಮವಾಗಿ ಬೊಂಬಾಯಿಗೆ ಹೊರಟಿದ್ದ ವಾಸುದೇವ ರಾವ್ ಎಂಬ ಪ್ರಯಾಣಿಕರು ವಿಶೇಷ ಜಖಂಗೊಂಡು ಮೃತ ಪಟ್ಟಿದ್ದರಷ್ಟೆ. ಆ ಕೇಸಿನ ವಿಚಾರಣೆ ಸಬ್ ಎಡಿಶನಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರ ಮುಂದೆ ನಡೆದು ಸಂಬಂಧಪಟ್ಟ ಲಾರಿ ಡ್ರೈವರನಿಗೆ ೬ ತಿಂಗಳ ಕಠಿಣ ಸಜೆ ವಿಧಿಸಲಾಯಿತು.

ಬತ್ತದ ಸ್ಟಾಕು ಒಪ್ಪಿಸದಿದ್ದುದಕ್ಕೆ ಬತ್ತದ ಸ್ಟಾಕನ್ನು ಒಪ್ಪಿಸಲಿಲ್ಲವೆಂಬ ಆರೋಪದ ಮೇಲೆ ಮೂಲ್ಕಿ ಸಮೀಪದ ತಾಳಿಪಾಡಿ ಗ್ರಾಮದ ಜೇಮ್ಸ್ ಆಲ್ಬರ್ಟ್ ಡಿ' ಸೋಜ ಎಂಬಾತನಿಗೆ ಎಡಿ ಫ। ಮೆಜಿಸ್ಟ್ರೇಟರಲ್ಲಿ ತನ್ನಿ ನಡೆದು ರೂ ೧೨೦ ಜುಲ್ಮಾನೆ ವಿಧಿಸಲಾಯಿತು.

ಪಿರಿಯಾಡಿಕಲ್ ಕಾನ್ಫರೆನ್ಸ್—ಈಚೆಗೆ ಕಲೆಕ್ಟರರ ಆಫೀಸಿನಲ್ಲಿ ಅವರ ಅಧ್ಯಕ್ಷತೆಯಲ್ಲಿ ಪಿರಿಯಾಡಿಕಲ್ ಕಾನ್ಫರೆನ್ಸ್ ಜರಗಿದಾಗ ಜಿಲ್ಲೆಯಲ್ಲಿ ಕೆಲವೊಂದು ರಸ್ತೆಗಳ ಬಾವಿಗಳ, ಕಾಲುಸೇತುವೆಗಳ ನಿರ್ಮಾಣದ ಕುರಿತು ಸಮಾಲೋಚನೆ ನಡೆಯಿತು. ಸ್ಥಳೀಯ ಲೈಟ್ ಹೌಸ್‌ನಲ್ಲಿ ದೀಪಗಳ ವ್ಯವಸ್ಥೆ ಉತ್ತಮಗೊಳಿಸುವ, ಮಂಗಳೂರಿನಲ್ಲಿ ಒಂದು ಈಜಾಡುವ ಕೊಳ ರಚಿಸುವ, ಕೆಲವು ಹೂದೋಟಗಳನ್ನು ರಚಿಸಿ ನಗರವನ್ನು ಅಂದಗೊಳಿಸುವ ವಿಚಾರದಲ್ಲಿ ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯ ತಿಳಿಯುವಂತೆ ಮುಂ ಕಮಿಶನರರಿಗೆ ಆಗಲೇ ಬರೆಯಲಾಗಿದೆಯೆಂದು ಸೂಚಿಸಲಾಯಿತು.

ಶ್ರೀ. ಆತ್ಮಾವರ ಸೋಮಪ್ಪನವರ ಶೋಚನೀಯ ನಿಧನ-ಶಿವಾಜಿ ಟ್ರಾನ್ಸ್‌ಪೋರ್ಟ್ ಕಂಪೆನಿ, ಮಂಗಳೂರು ಇದರ ಪ್ರೊಪ್ರೈಟರರೂ ದ. ಕ. ಜಿಲ್ಲಾ ಗಾಣಿಗರ ಯಾನೆ ಸಪಲ್ಯರ ಸಮಾಜಸುಧಾರಕ ಸಂಘ, ಮಂಜೇಶ್ವರ ಇದರ ಅಧ್ಯಕ್ಷರೂ ಆದ ಆತ್ಮಾವರ ಸೋಮಪ್ಪನವರು ತಾ. 4-4 46ರಲ್ಲಿ ಮಂಗಳೂರಲ್ಲಿ ಸ್ವರ್ಗಸ್ಥರಾದುದು ವಿಷಾದಕರವಿದೆ. ಶ್ರೀಯುತರು ಕುಶಲ ಮತ್ತು ಧೈರ್ಯಶಾಲಿ ವ್ಯಾಪಾರಸ್ಥರಾಗಿದ್ದರಲ್ಲದೆ ಧರ್ಮ ಕಾರ್ಯಕ್ಕೆ ಬಹಳ ಸಹಾಯ ಮತ್ತು ಬೆಂಬಲ ಕೊಡುತ್ತಿದ್ದರು. ಬಡತನದಲ್ಲಿಯೇ ಮೋಟಾರು ವ್ಯವಸಾಯ ಪ್ರಾರಂಭಿಸಿ ಶ್ರೀಮಂತರಾದವರು. ಇವರಿಂದಾಗಿ ಹಲವು ಜನರಿಗೆ ಉದ್ಯೋಗ ದೊರಕಿತ್ತು. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ.

ಕಕ್ಕಟ್ಟೆ-ಇಲ್ಲಿಯ ವೈದ್ಯ ಶ್ರೀ ಕೆ. ವಿ. ಕುಮಾರನ್‌ರು ಬೆಳೂರು ಪಟೇಲ್ ಶ್ರೀ ಮಾಜೈ ಶೆಟ್ರ ಸೊಸೆಗೆ ಪ್ರಾಪ್ತವಾದ ಶಸ್ತ್ರ ಚಿಕಿತ್ಸೆಯಿಂದಲೂ ಗುಣಪಡಿಸಲು ಅಸಾಧ್ಯವಾದ ನಾಸಾರಿಸನ್ (ಮೂಗಿನಲ್ಲಿ ಮಾಮೂಲ ಬೆಳೆಯುವುದು) ಎಂಬ ರೋಗವನ್ನು ಗುಣಪಡಿಸಿದ ಸಂತೋಷಕ್ಕಾಗಿ, ಶ್ರೀ ಶೆಟ್ಟರು ಅವರಿಗೆ ಸಾರ್ವಜನಿಕ ಸಭೆಯಲ್ಲಿ ಬಂಗಾರದ ಪದಕವನ್ನಿತ್ತು ಸತ್ಕರಿಸಿದರು

ಹಾಲಾಡಿ—ಈ ಸಂಟರಿನ ಹಾಗೂ ಆಸುಪಾಸಿನ ಹಳ್ಳಿಗರ ಸಹಕಾರ್ಯಕ್ಕಾಗಿ ಹಾಲಾಡಿಯಲ್ಲಿ ಟಿಪ್ಪಾಲು ಆಫೀಸೊಂದು ತೆರೆಯಲಾ... ದ ಇದ... ಸಿ... ... ಯ ... ಶನಗಳು ... ಧನ ಸಹಾಯ ಮಾಡಿರುತ್ತಾರೆ.

ಹಿರಿಯಡ್ಕ ಮಹತೋಭಾರ್ ಶ್ರೀ... ಭದ್ರ ದೇವರ ಸನ್ನಿಧಿಯಲ್ಲಿ ಇದೇ ತಾ 16ರಲ್ಲು ಧ್ವಜಾರೋಹಣ, 17ರಲ್ಲು ದೀಪಾರಾಧನೆ, 18ರಲ್ಲು ರಂಗಪೂಜೆ, 19ರಲ್ಲು ಶ್ರೀ ಮನ್ಮಹಾರಥೋತ್ಸವ ಮತ್ತು ಭೂತಬಲಿ 20ರಲ್ಲು ಅವಭೃಥಸ್ನಾನ, ಧ್ವಜಾವರೋಹಣ ಇತ್ಯಾದಿ ಶುಭಕಾರ್ಯಗಳು ಜರಗಲಿರುವುವೆಂದೂ ತತ್ಸಂಬಂಧ ಭಕ್ತಾದಿಗಳು ಬಂದು ಗಂಧ ಪ್ರಸಾದವನ್ನು ಸ್ವೀಕರಿಸ ಬೇಕಾಗಿ ಆ ದಳ್ಳ ಮೊಕ್ತೇಸರ ಶ್ರೀ। ಎ ಎಮ್. ನಾಗಣ ಹೆಗ್ಡೇರು ಅಪೇಕ್ಷಿಸುತ್ತಾರೆ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಆಫೀಸು, ಉಡುಪಿ

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದಮನ ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ಶೀತವೂ ನಿಲ್ಲುವವು, ಹೊಟ್ಟೆ ಹಗುರವಾಗುವದು; ಪಚನಕ್ರಿಯೆಯು ತಿದ್ದುವದು, ಶ್ವಾಸ್ವಾಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ಶೀತ, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು ಅಜೀರ್ಣ ಮತ್ತು ಆಮ್ಲ ಪಿತ್ತದಿಂದ ಜಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ ೨.೬.೦: ೫.೧೨ ೦ ಮತ್ತು ೧೦ ೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಫ್ರೆಂಡ್ಸ್ ಲರ್ ಸ್ಟೋರ್ಸ್, ಮಂಗಳೂರು, ಟಿ. ಸಿ. ನಟರಾಜನ್ ೩ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು.

ವನಮಾಲೀ ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ,

ಮುಂಬಯಿ ೨.

PUROHIT SHWAS-HARI

'ಕಿರಿಯರ ಪ್ರಪಂಚ'ದ ಮೂರು ಪ್ರಕಟಣೆಗಳು.



ಆಧುನಿಕ ಕನ್ನಡ ಕವಿಗಳೂ ಉತ್ತಮ ಕತೆಗಾರರೂ ಆದ ಶ್ರೀ. ಎಸ್. ವೆಂಕಟರಾಜರ ೨೦ ಕತೆಗಳ ಸಂಗ್ರಹ.

ಆಕಾಶಗಂಗೆ

ಹೃದಯವನ್ನು ಕಲುಕಿಸುವ-ಕನ್ನಡ ವಾಙ್ಮಯ ಕ್ಷೇತ್ರವನ್ನೇ ಫಲಭರಿತವಾಡಲು ಪ್ರವಹಿಸಿದ ನೂತನ ಪ್ರವಾಹ ಬೆಲೆ ರೂ. 1—12—0.

ದಿನಕ್ಕೊಂದು ನಗೆ! ಆರೋಗ್ಯದ ಬಗೆ!!

ನಗುವಿನೊಂದಿಗೆ ವಿಚಾರದ ಕಿಡಿಯೂ ಬೆಳಗಬೇಕೆ? ಹಾಗಿದ್ದರೆ

ವಿಷ್ಣುವಿನ ದಶಾಪರಾಧಗಳು

ಅರ್ಥಾತ್ **ದಶಾವತಾರಗಳು**

ಎಂಬ ದಶಾವತಾರಗಳ ಕುರಿತಾದ ವಿಡಂಬನ ಗ್ರಂಥವನ್ನೋದಿರಿ.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಎಂ ವಿ ಹೆಗ್ಡೆಯವರ ಕೃತಿ ಬೆಲೆ 0—12—0.

ಭಾರತದಲ್ಲಿ ಜಾತಿಭೇದ

(ಆಚಾರ್ಯ ಕ್ಷಿತಿಮೋಹನ ಸೇನ್ ಶಾಸ್ತ್ರಿ, ಎಂ. ಎ., ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.)

ಜಾತಿಭೇದವು ಹೇಗುಂಟಾಯಿತು? ಅದರ ಇತಿಹಾಸವೇನು? ಎಂಬುದನ್ನೆಲ್ಲಾ ಸಮೂಲಾಗ್ರವಾಗಿ, ವೈಜ್ಞಾನಿಕವಾಗಿ ವಿಮರ್ಶಿಸುವ ಗ್ರಂಥ

ಅನುವಾದಕರು— ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ. | ಬೆಲೆ ರೂ. 1—0—0 ಮಾತ್ರ.

ಪ್ರತಿಗಳು ಸಿಗುವ ಸ್ಥಳಗಳು:—1 ಸ್ಟಾರ್ ಬುಕ್ ಡಿಪೋ, ಮಂಗಳೂರು 2 ನವಭಾರತ ಬುಕ್ ಡಿಪೋ, ಉಡುಪಿ 3 ... ಮಂಜೈ, ಪುತ್ತೂರು. 4 ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 5 ಜೀವನ ಪುಸ್ತಕಾಲಯ, ಧಾರವಾಡ 6 ಸ್ವತಂತ್ರ ಭಾರತ ಬುಕ್ ಡಿಪೊ, ಬೊಂಬಾಯಿ. 7 ಚಿತ್ತರಂಜನ ಭವನ, ಉಡುಪಿ. 8. ಕೆ ವಾಸುದೇವ ಪೈ, ಕುಂದಾಪುರ 9 ಸಾಹಿತ್ಯ ಭಂಡಾರ, ಹುಬ್ಬಳ್ಳಿ 10. ವೆಂಕಟೇಶಯ್ಯ ಬ್ರದರ್ಸ್, ಶಿವಮೊಗ್ಗಾ. 11. ನ್ಯೂ ಸಪ್ಲೈ ಏಜೆನ್ಸಿ, ಕುಮಟ. 12. ಭಕ್ತಾ ಬ್ರದರ್ಸ್, ಶಹಪುರಗೋದು 13. ಶ್ರೀ ಬಸವೇಶ್ವರ ಬುಕ್ ಡಿಪೊ, ಹುಬ್ಬ.

ಅಳಿಯ ಸಂತಾನದ ಕಟ್ಟು ಹೋಗಲೇ ಬೇಕು.

(ಲೇ|| ಎಂ. ಬಿ. ನರ್ಸಪ್ಪ, ಪುತ್ತೂರು.)

ಆಧುನಿಕ ಪ್ರಪಂಚವು ಪ್ರಗತಿಯ ಕಡೆಗೆ ಒಂದೇ ಸವನೆ ಮುಂದಾಗುತ್ತಿದೆ. ಪ್ರತಿಬಂನು ದೇಶವೂ ತನ್ನ ಕಾಲ ಮೇಲೆ ತಾನು ನಿಲ್ಲಬೇಕೆಂಬ ಸಂಬಲವಲ್ಲಿದೆ. ಅದರೊಡನೆ ನಮ್ಮ ಜಿಲ್ಲೆಯೂ ಪ್ರಗತಿಯೊಡನೆ ಮಿಲನವಾಗಬೇಕು, ಪ್ರಗತಿಯ ಕಡೆಗೆ ಗಮನವೀಯಬೇಕಾಗುವಾಗ್ಗೆ ಸಮಾಜದಲ್ಲಿಯೂ ಸುಧಾರಣೆಯಾಗಬೇಕೆಂಬುದರಲ್ಲಿ ಎರಡಭಿಪ್ರಾಯ ಇರದು. ಪ್ರಪಂಚದಲ್ಲಿ ಬೇರೆ ಎಲ್ಲಿಯೂ ಇಲ್ಲದೆ ನಮ್ಮ ಈ ಜಿಲ್ಲೆಯಲ್ಲಿ ಅವರಲ್ಲೂ ಕೆಲವರಲ್ಲಿ ಮಾತ್ರ ಬಳಕೆಯಲ್ಲಿರುವ ಅಳಿಯ ಸಂತಾನದ ಪ್ರತಿಪಾದಕರು ಈ ಸಲ ವಿವೇಕ ತಂದುಕೊಳ್ಳಬೇಕು. ಭೂತಕಾಲದಂತ್ಯ ಅದನ ಕಾಲದ ಸಂಸ್ಕೃತಿಗೂ, ಇಂದಿನ ಪರಿಸ್ಥಿತಿಗೂ ಸಾಮ್ಯತನವಿದೆಯೋ ಎಂಬುದನ್ನು ಪರೀಕ್ಷಿಸಬೇಕು. ಈ ಅಂಕರದಲ್ಲಿ ನಮಗೆ ಕಾಣುತ್ತಿರುವುದೇನು? ನಮ್ಮಗಳ ಕಳಗೇಡಿತನ, ಸ್ವತಂತ್ರವಾದದ ಚಿತ್ರ, ಹಾಗೂ ನಮ್ಮನ್ನು ಎದುರಿಸುತ್ತಿರುವ ನಿವಾಳಿಗಳ ಪದಂಭೂತ ಒಂದೀನ ಸ್ತ್ರೀ ಪುರುಷರು ಯಜಮಾನರನ್ನು ನಂಬಿ ಆಸರ ಇಲ್ಲದ ಭಗ್ನ ಮನೋರಥರಾಗಿ ಮರುಗುತ್ತಿರುವ ಸೈಜಚಿತ್ರದ ದೃಶ್ಯವು ಹೃದಯಾಂತರದಲ್ಲಿ ವೇದನೆಯನ್ನುಂಟು ಮಾಡುತ್ತಿರುವುದು.

ಈ ಅವ್ಯವಸ್ಥೆಯನ್ನು ಹೋಗಲಾಡಿಸುವ ಬಗ್ಗೆ ಈ ಸಲ ಅಳಿಯ ಸಂತಾನದ ಕಟ್ಟಿನ ಗಂಟು ಎಲ್ಲರಿಗೆ ಇತ್ಯರ್ಥವಾಗಲೇಬೇಕು. ಆ ಬಗ್ಗೆ ಒಂದು ಇಟ್ಟೊಂದು ಸರ್ಕಾರ (?) ಒಂದು ತಿದ್ದಿದರೆ ಸಾಲದು ಜನತೆಯೂ ಈ ಬಗ್ಗೆ ಒಲಿಸತಕ್ಕ ಹೋಗಿದೆ.

ಅಳಿಯ ಸಂತಾನದ ವಿಧಾನ ಬೇಡವ್ಯಾಕೆ?

ಅದರಂತೆ ನಡೆಸುವ ಯಜಮಾನನು ಸ್ವಯಂ ಪ್ರಭುತ್ವವನ್ನು ತೋರಿಸುತ್ತಿರುವುದು ಜನ ಜನಿತವಾಗಿದೆ. ಯಜಮಾನಿಕೆ ಒಂದಕೂಡಲೇ ಮನುಷ್ಯನೇ ಬದಲಾಗುತ್ತಾನೆ. ಇನ್ನೇನು? ತಾನೊಬ್ಬ ಪ್ರತಿ ಹುಟ್ಟಿದನೋ ಎಂಬಂತೆ ತೋರಿಸಿಕೊಳ್ಳುತ್ತಾನೆ. ಕುಟುಂಬದಲ್ಲಿ ತನ್ನದೇ ಮಾನಾನು, ತನಗೇನೇ ಅಗ್ರಸ್ಥಾನ, ಎಲ್ಲಾ ಸುಖವೂ ತನಗೇನೇ ಆಗಿಹೋಗುತ್ತದೆ. ಹೆಂಡತಿ ಮಕ್ಕಳಿಗೆ ಬೇರೆ ನವೀನ ತರದ ಮನೆಗಳು, ಬೇಕಾದ ವಿದ್ಯಾಭ್ಯಾಸ, ಹೆಣ್ಣು ಮಕ್ಕಳಿಗೆ ಯೋಗ್ಯನಾದ ವರರನ್ನು ಆರಿಸುವಿಕೆ, ಗಂಭೀರವಾದ ... ಬಗ್ಗೆ ಮುಂದು ಪಟ್ಟು.

ಅಳಿಯ ಸಂತಾನ ಮಾಡುವಲ್ಲಿ ... ವಿದ್ಯಾಭ್ಯಾಸದ ನಿಮಿತ್ತದಿಂದ ... ಮತ್ತು ... ಮನೆಯವರು ... ಮಾಡುವುದು ... ಇವರೆಲ್ಲಿ ... ಗರಿಕೆ ... ಅವರ ... ವಿಧಾನದಿಂದ ... ಬೇರೆ ... ಹೋದ ಕೂಡಲೆ ತನ್ನ ಹೆಂಡತಿ ಮಕ್ಕಳಿಗೆ ಕೆಲವು ಆಸ್ತಿಗಳು ಆಗಿಹೋದವು. ... ನಿವಾಸಕ್ಕೆ ತನ್ನ ಸ್ವಂತ ಸಂಪಾದನೆ ಒಂದು ಪಾಲು ಕೊಂಡವೆಯೇ ಇಲ್ಲ. ಮನೆ ಖರ್ಚಿಗೆ ಸ್ವಲ್ಪಾದರೂ ಬೆಪ್ಪುಂಟು. ಹೆಂಡ್ತಿ ಮಕ್ಕಳಿಗೆ ಕೊಟ್ಟ ಸಾವಿರಾರು ರೂಪಾಯಿಗಳ ಲೆಕ್ಕವೂ ಇರುವುದಿಲ್ಲ. ಕಿರಿಯ ಮೆಂಬರರಿಗೂ, ಅಳಿಯ ಸೊಸೆಯಂದಿರಿಗೂ ಮಾತಾಡುವ ಹಕ್ಕೇ ಇರುವುದಿಲ್ಲ. ಅದೆಷ್ಟು ಅಳಿಯ ಸೊಸೆಯಂದಿರಿಗೆ ಸರಿಯಾದ ವಿದ್ಯೆ. ಆಸರೆ ಇಲ್ಲದೆ ಸ್ವಾಯ ದುಡಿವರು (30,40, ಐವತ್ತರ ವರೆಗೂ) ಕ್ಷಿಸುದುವ ಯೋಗದ ಸೂರಾರು ಕುಟುಂಬಗಳು ಈದಿನ ನಮ್ಮ ಕಣ್ಣ ಮುಂದಿಲ್ಲ? ಅದೆಷ್ಟು ಕುಟುಂಬಗಳು ಬರೇ ಊಟ ಮಾತ್ರ ಮಾಡಿ ಹಗಲಿರುಳು ದುಡಿದು ಅದರಿಂದ ಹುಟ್ಟುವಳಿಯಲ್ಲಿ ಎಷ್ಟನ್ನಾದರೂ ಪಡೆಯದೆ ಹಲವು ವರ್ಷಗಳ ವರೆಗೆ ನಿರಾಶರಾಗಿ ಜೀವ ಸವೆಸುತ್ತಿರುವುದಿಲ್ಲ? ಅದೆಷ್ಟು ಕುಟುಂಬದ ಆಸ್ತಿಗಳು ಆಧಾರಗಳು ಇಲ್ಲವೇ ಈಡು ಮೇಲಾಗಿ ಕ್ರಯಕ್ಕೆ ಪರಾಧೀನ ಪಡಿಸಿದಂತೆ ಮಾಡಿ ತನ್ನ ಹೆಂಡ್ತಿ ಮಕ್ಕಳ ಹೆಸರಿಗೆ ಮಾಡಿಕೊಂಡು ರಮ್ಯ ಸ್ವಾರ್ಥವೇಕ್ಷೆಯನ್ನು ಪೂರೈಸಲಿಲ್ಲ? ಅದೆಷ್ಟು ಕಡೆಗಳಲ್ಲಿ ದುಡ್ಡಿನ ಅನುಕೂಲದಿಂದ ಸಮಾಜದಲ್ಲಿ ಶ್ರೇಷ್ಠನೆನಿಸಿಕೊಂಡು ಕಿರಿಯ ಮೆಂಬರರು ಹಕ್ಕನ್ನು ಕೇಳಿದ್ದ ರೀತಿ ಪಡೆಯುವಲ್ಲಿ ಟ್ಟು ಕಷ್ಟ ಕೊಡುತ್ತಿರುವುದಿಲ್ಲ? ಸಂಯಾದ ಸಂಟಿಸ್ಥಿತಿ ಮೂಡದೆ ಅದೆಷ್ಟು ಅಬಲೆಯರು ರೋಗ ರುಜಿನಗಳಿಂದ ನರಳಿ ಅಕಾಲ ಮರಣ ಯರಾಗಿ ಸಮಾಜದ ಎದುರು ಬಲಿಯಾಗಿ ನಾಶಕ್ಕೆ ಪಡುತ್ತಿಲ್ಲ? ಇದರಿಂದಾಗಿ ಅದೆಷ್ಟು ಅಬಲೆಯರು ಪ್ರಾಣ ಕಳಕೊಳ್ಳಲಿಲ್ಲ? ಇವುಗಳ ಚಿತ್ರಗಳನ್ನು ಪ್ರೇಕ್ಷಕರಾಗಿ ನೋಡಿಕೊಂಡು, ಕಟು ಹೃದಯವನ್ನು ಗುಪ್ತವಾಗಿರಿಸಿ, ತೋರಿಕೆಗೆ ಮೊಸಳೆ ದುಃಖವನ್ನು ತೋರಿಸುತ್ತಿರುವ ಅದೆಷ್ಟು ಯಜಮಾನರುಗಳಿಲ್ಲ? ಕಾನೂನು ಮಸೂದೆಗಳನ್ನು ರಚಿಸುವವರೇ ಇದನ್ನು ಪರಿಶೀಲಿಸಲಿ. ಮೇಲಾಗಿ ಯಜಮಾನರ ಪರವಾಗಿ ಅವರಂಥವರೇ ನೆಂಟರು ಸಿಕ್ಕಿದರೆ ಸ್ವಂತ ಶಕ್ತಿಯೊಡನೆ ದುಬಾರಿ ಶಕ್ತಿ ಬಂದೊದಗುತ್ತದೆ. ಆಗಿನ ಸಹೋದರ-ಸೊಸೆ-ಅಳಿಯಂದಿರ ಪಾಡು ಸಾಯಿ ಪಾಡಾಗುತ್ತದೆ.

ನಮ್ಮ ಜಿಲ್ಲೆಯಲ್ಲಿ ಈ ಮೊದಲು ಹೆಚ್ಚು ಆಸ್ತಿಗಳು ಮಾಗಿ ಚರ ಚರ ಸೊತ್ತುಗಳು ಅಳಿಯ ಸಂತಾನ ಆಚರಿಸುವವರ ಸುಪರ್ದಿಯಲ್ಲಿ ಇತ್ತು. ಕಾಲಕ್ರಮೇಣ ಸ್ವಾರ್ಥದ ವೃಷ್ಟಿಯಿಂದಲೂ, ಇನ್ನಿತರರ ಪೇಟೆಪಟ್ಟಣಗಳ ಸಂಪರ್ಕದಿಂದಲೂ, ವ್ಯವಹಾರ, ಆಡಳಿತೆ ನ, ನಡವಳಿಕೆಗಳ ಅವ್ಯವಸ್ಥೆಯಿಂದಾಗಿಯೂ, ಇದ್ದ ಆಸ್ತಿಗಳು ಒಂದೊಂದೇ ಪರಕೀಯರ ವಶಕ್ಕೆ ಸೇರಿದವು. ಬರೇ ಕೀರ್ತಿ ಕೊಡದ ಮಾತ್ರಕ್ಕೆ ಗುಟ್ಟಾಗಿ ಎಲ್ಲಿ ಆಗಿ ಅದೆಷ್ಟೋ ಆಸ್ತಿಗಳು ಕಂಡವರ ಪಾಲಾಗಿ ಹೋದವು. ಹೆಚ್ಚಿನ ಮಹತ್ವಾಕಾಂಕ್ಷೆಯಿಂದ ದುರಾಡಳಿತ ನಡೆಸಿ ಕಂಡವರ ಆಸ್ತಿಗಳನ್ನು ಸ್ವಾಧೀನಪಡಿಸುವರ ವಕೀಲರುಗಳ ಮನೆ ಕಾಯುವ ಕೆಲಸ ಪ್ರಾರಂಭವಾಯಿತು. ಅಂತೂ ಅಳಿಯ ಸಂತಾನ ಆಚರಿಸುವವರ ಕುಟುಂಬದಲ್ಲಿ ಎಂದೂ ನೆಮ್ಮದಿಯಿಲ್ಲದಂತಾಗಿದೆ. ಇದನ್ನು ತಿಳಿದೂ ತಿಳಿದೂ ಸುಧಾರಣೆ ಮಾಡುವ ನೆವನದಿಂದ ಸಮಯ ದೂಡುವುದರಲ್ಲಿ ಪುರುಷಾರ್ಥ ಇರುವುದಿಲ್ಲ. ಈಗಿನ ಮಸೂದೆಯನ್ನು ಸಂಪೂರ್ಣ ಬದಲಾವಣೆ ಮಾಡಲೇಬೇಕು.

ಮಕ್ಕಳ ಕಟ್ಟಿನ ಪ್ರಯೋಜನ

ಪ್ರಕೃತಿ ನಿಯಮದಂತೆ ಸರ್ವ ಜೀವರಾಶಿಗಳೂ ಗಂಡು ಹೆಣ್ಣು ಸಂಪರ್ಕದಲ್ಲಿ ಸಂತೋಷ ಪಡುತ್ತಿರುವವು. ಆ ಸಂತೋಷ ಸಂಪರ್ಕದಲ್ಲಿ ಹುಟ್ಟಿಬಂದ ಮಕ್ಕಳು ಮಾಗಿಗಳಲ್ಲಿ ವಿಶೇಷ ಪ್ರೀತಿ, ವಿಶ್ವಾಸವೂ ಸಂರಕ್ಷಣಾ ಭಾರವೂ ಇರುತ್ತದೆ. ಯಾವ ಚರಿತ್ರೆ ಪುಟಗಳನ್ನು ತೆಗೆದರೂ ತಂದೆಯ ನಂತರ ಮಗನೇ ಉತ್ತರಾಧಿಕಾರಿಯಾಗುತ್ತಾನೆ. ಅದು ನಿಜವಾಗಿಯೂ ಆಚರಿಸಲ್ಪಡುವಂಥದ್ದೇ ಸರಿ. ಅದಕ್ಕೆ ಅಡ್ಡಿ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಅದು ಪ್ರಕೃತಿ ನಿಯಮ. ಹೀಗಿರುವಾಗ್ಯೆ ಅಳಿಯ ಸಂತಾನದ ಕಟ್ಟಿನ ಆಚರಣೆಯು ಬರೇ ಬೂಟಾಟಿಕೆಯ ಮಾತು. ತೋರಿಕೆಗೆ ಅಂದರೆ ಯಜಮಾನನ ಸ್ವಂತ ಪ್ರಯೋಜನಕ್ಕಾಗಿ ಅಲ್ಲದೆ ಸಾವಿರಾರು ಪ್ರತಿಪಾದಕರಿಗೆ ಅದರಿಂದ ಎಷ್ಟಕ್ಕೂ ಪ್ರಯೋಜನವಿರಲಾರದು.

ಮಕ್ಕಳು ಸಂತಾನ ಆಚರಿಸುವವರಲ್ಲಿ ಮಕ್ಕಳಿಗೆ ತಂದೆಯಿಲ್ಲವೆಂದಿಲ್ಲ. ಆದರೆ ಅದರಲ್ಲಿ ಪುರುಷಾರ್ಥವಿದೆ. ಗಂಡನಾದವನು ಸ್ವತಃ ವೃದ್ಧಿಹೊಂದುವ ಯಾವ ಕಾರ್ಯಕ್ಷೇತ್ರಕ್ಕೂ ಇಳಿದು ತನ್ನ ಶ್ರೇಯಸ್ಸನ್ನು ಗಳಿಸಬಹುದು. ಆದರೆ ಇದು ಅಳಿಯ ಸಂತಾನ ಆಚರಿಸುವವರಿಗೆ ಬಹಳ ಪ್ರಯಾಸಕರವೆಂಬುದು ಪೇಟೆಯಲ್ಲಿ ನ್ಯಾಯ ರೀತಿಯಲ್ಲಿ ಸಾಲ ಸಿಕ್ಕದೆ ಇರುವುದರಿಂದಲೇ ತಿಳಿಯಬಹುದು. ಎಲ್ಲಾ ದೃಷ್ಟಿಯಿಂದಲೂ ಅಳಿಯ ಸಂತಾನದ ಕಿರಿಯ ಮೆಂಬರರನ್ನು ಒಂದು ರೀತಿಯ ಬಂಧನವು ಆವರಿಸಿರುತ್ತದೆ. ಇಂತಹ ಅನುಕೂಲಗಳಿದ್ದರೂ ಮಕ್ಕಳು ಸಂತಾನದ ರೀತಿಯಲ್ಲಿ ಸ್ತ್ರೀಯರಿಗೆ ಹಕ್ಕು ಬಾಧ್ಯತೆ ಇರುವುದಿಲ್ಲ. ಅದೊಂದನ್ನು ಹೋಗಲಾಡಿಸಬೇಕು. ತಾಯಿ-ತಂದೆಗಳ ಸ್ವತ್ತಿಗೆ ಹೆಣ್ಣು-ಗಂಡು ಸರಿಸಮಾನವಾದ ಪಾಲುಗಾರರಾಗಲೇಬೇಕು. ಅದು ಸಹಜವೂ ಆಗಿದೆ. ಹೆಣ್ಣಾಗಿ ಹುಟ್ಟಿದ ಮಾತ್ರಕ್ಕೆ ತಾಯಿ-ತಂದೆಗಳ ಸ್ವತ್ತಿಗೆ ಅನರ್ಹಳಾಗುವುದು ಈಗಿನ ಆಟಂ ಯುಗದಲ್ಲಿ ಒಪ್ಪತಕ್ಕದ್ದಲ್ಲ.

ಬಂಜೆತನ, ಪುಂಸಕತನ, ದೀರ್ಘ ಅನಾರೋಗ್ಯ, ಇತ್ಯಾದಿಗಳಿಗೆ ತಕ್ಕ ವಿಧಾನಗಳನ್ನು ಕಲ್ಪಿಸಿ ಪೂರ್ತಿ ಅಖಂಡವಾದ (ಗಂಡು ಹೆಂಗಸು ಕೂಡಾ) ಸರಿಸಮಾನದ ಹಕ್ಕು-ಬಾಧ್ಯತೆಯಿರುವ ಮಕ್ಕಳು ಸಂತಾನದ ಆಚರಣೆಯೊಂದು ಅಳಿಯ ಸಂತಾನ ಆಚರಿಸುವ ಜನತೆಗೆ ಆಗಲೇಬೇಕು. ನಿಜಾದರ್ಶಿಗಳೂ, ವಿವೇಕ ಶಾಲಿಗಳೂ, ಜನಪ್ರಿಯರೂ ಆದ ಎಷ್ಟೋ ಮಹನೀಯರು ಆ ರೀತಿಯ ಮಸೂದೆ ತಯಾರಿಸಲು ಅರ್ಹರಾದವರು ಇದ್ದೇ ಇರುವರು. ವಿಶಾಲ ದೃಷ್ಟಿಯಲ್ಲಿ ಅದು ಸಾಧ್ಯವೂ ಇದೆ. ಮತಗಣನೆಯ ಅವಶ್ಯವಿದ್ದರೆ ಅದೂ ನಡೆಯಲೇಬೇಕು.

ಜಿಲ್ಲೆಯಲ್ಲಿ ಬರೇ ಆಸ್ತಿವಂತರಾದ ಬಂಟರು ಯಾ, ನಾಡವರು ಇರುವುದಲ್ಲ. ಬಿಲ್ಲವ, ದೇವಾಡಿಗ, ಸಪಳಿಗ, ಮೊಗೇರರು ಇವರೇ ಮೊದಲಾದ ಅನೇಕ ಮಂದಿಗಳು (ಬಂಟರಿಂದಲೂ ಜಾಸ್ತಿ ಜನ ಸಂಖ್ಯೆಯಲ್ಲಿ) ಇರುವರು. ಅವರವರದ್ದು ಅವರವರ ಮಕ್ಕಳಿಗೆ ದೊರಕಲೇಬೇಕು. ಇದಕ್ಕೊಂದು ನವೀನ ರೀತಿಯ ಸುಧಾರಣೆಯಾಗಲೇಬೇಕು. ಅದೇ ಮಕ್ಕಳ ಸಂತಾನದ ರೀತಿ.

ಕೋರ್ಟು ವ್ಯವಹಾರ ನಿಲ್ಲಲಿ. ವಕೀಲರುಗಳ ಮನೆ ಕಾಯುವ ಕೆಲಸ ಇಲ್ಲದೆ ಹೋಗಲಿ. ಕಿರಿಮೆಂಬರರು ಯಜಮಾನರನ್ನು ವೈರಿಗಳಂತೆ ಕಾಣುವುದು ನಿಲ್ಲಲಿ. ದೊಣ್ಣೆ-ಕತ್ತಿ-ಕೋವಿಗಳು ವಿರಾಮ ಹೊಂದಲಿ. ಯಜಮಾನರುಗಳ ಸ್ವಯಂಪ್ರಭುತ್ವವು ಇಲ್ಲದಂತಾಗಲಿ. ಪರಕೀಯರ ಸಹಾಯವು ಇಲ್ಲದಂತಾಗಿ ಮನೆಯವರೆಲ್ಲಾ ಪ್ರೇಮ ಬಂಧನದಿಂದ ಬಿಗಿಯಲ್ಪಡಲಿ. ಇದಕ್ಕನುಕೂಲವಾದ ಮಸೂದೆ ಒಂದು ಬೇಗನೇ ತಯಾರಾಗಲಿ.

ಪ್ರಕಟಣೆ

ಕಾ... ಯಲ್ಲಿರುವ ... ಈ ಮನು... ಎಲ್ಲ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ... ಕಾರ್ಕಳ ... ತಾ|| 13 ನೇ ... ಪೂರ್ವ ... 40 ಸೆಂಟ್ಸ ... ಸ್ಥಿರ್ಆಸ್ತಿ ... ಸಂಪೂರ್ಣ ... ವ್ಯವಹಾರದ ಪ್ರತಿಫಲ ... ಅನುಭವಿಸುತ್ತಿರುವ ... ಪರಾಧೀನವು ... ತಿಳಿಸಿರುತ್ತೇನೆ.

(ದಸ್ಕತು) ಸೇಮಯ್ಯ ಪಾರು ಶೆಟ್ಟಿಗಾರ.

ಶ್ರಾ. 16 3 46

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀಗದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಚುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ... ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ: ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:—ಬಾಗಲಕೋಟ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ... ಸಕ್ಕರ್ಯ... ಮುಂತಾದ ...

ರೇವಣಸಿದ್ಧಪ್ಪ ಹಾಲಪ್ಪ ದಾನಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG.

ಕುಟುಂಬ ದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಶಾಶ್ವತ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಎಷ್ಟೋ ಅವಶ್ಯಕತೆಯೂ ಇರುವುದಿಲ್ಲ ... ಜನರಿಯನ್ ಜೀವನ ಮಿಕ್ಸ್ಚರ ...

... ಜನರಿಯನ ಪುಸ್ತಕ ... ಉಚಿತ ...

(೨ನೇ ಪುಟದಿಂದ)

ಹಾಗೆ ಧನಿಗಳೂ ನಿಮ್ಮಿಂದ ಮಾನನಷ್ಟ ಕೇಳುವದಾದರೆ ನೀವು ನ್ಯಾಯಪ್ರಕಾರ ಪಡೆದ ಒಟ್ಟೀ ಹಣವನ್ನೆಲ್ಲಾ, ನ್ಯಾಯಪ್ರಕಾರವೇ ಆ ಮಾನನಷ್ಟದ ಪರಿಹಾರದ್ರವಾಗಿ ಮರಳಿ ಕೊಡಬೇಕಾದೀತು! ನಿಮ್ಮ ಮಾನವನ್ನೇ ನೀವು ಕೆಡಿಸಿ ಕೊಂಡುದರ ಪ್ರದರ್ಶನವಿದು ಎಂದು ಕನಿಕರ ಪಡುವಷ್ಟು ಧನಿಗಳಲ್ಲಿ ಔದಾರ್ಯವಿದ್ದಲ್ಲಿ ಮಾತ್ರ ಆ ಪಕ್ಷೆಯಿಲ್ಲ. ಇಂತಹ ವರ್ತನೆ ಯಾಕಿರಬೇಕು? ಕೆಲಸದೊಂದಿಗೆ ಸ್ಥಾನ ಮಾನವನ್ನೂ ಕಳಕುವ ಈ ವರ್ತನೆಗೇನೇ 'ಚಳವಳ' 'ಹೋರಾಟ' ಎಂಬ ಓಪ್ಪಕೊಟ್ಟು, ನಿಮ್ಮನ್ನು ಮಂಕುಗೊಳಿಸಿ, ನಿಮ್ಮಿಂದದನ್ನು ಮಾಡಿಸಿ, ತಮ್ಮ ಉದ್ದೇಶ ಸಾಧಿಸಿಕೊಳ್ಳುವ ಕಮ್ಯೂನಿಸ್ಟರ ಬೆನ್ನನ್ನು ನೀವೇಕೆ ಹಿಡಿಯಬೇಕು?

ಮುಷ್ಕರದ ಬೆಲೆಗೊತ್ತೆ?

ನಿದರ್ಶನಕ್ಕಾಗಿ ಮಂಗಳೂರು ಮತ್ತು ಉಡುಪಿಯಲ್ಲಿ ಕಮ್ಯೂನಿಸ್ಟರು ಮಾಡಿಸಿದ ಇತ್ತೀಚಿನ ಮುಷ್ಕರಗಳ ಕಡೆಗೆ ನೋಡೋಣ. ಸಾರ್ವಜನಿಕ ಲಕ್ಷ್ಯವನ್ನೆಳೆದ ಮೂರು ಮುಷ್ಕರಗಳೆಂದರೆ ಒಂದನೆಯದು ಮಂಗಳೂರಿನ ಹಂಚು ಕಾರ್ಖಾನೆಗಳ ಮುಷ್ಕರ; ಎರಡನೆಯದು ಉಡುಪಿಯ ಒಂದು ಬೀಡಿ ಕಾರ್ಖಾನೆಯ ಮುಷ್ಕರ; ಮೂರನೆಯದು ಮಂಗಳೂರಿನ ನೇಕಾರರ ಮುಷ್ಕರ. ಇವುಗಳಲ್ಲಿ ಒಂದನೆಯದು ಮತ್ತು ಮೂರನೆಯದು ಮೂರು ಮೂರು ತಿಂಗಳ ಬೋನಸು ಪಡೆಯುವದಕ್ಕಾಗಿ. ಎರಡನೆಯದು ಕೆಲಸಗಾರರ ದುಡಿಯುವ ಹಕ್ಕನ್ನು ಉಳಿಸಿ ಕೊಳ್ಳುವದಕ್ಕಾಗಿ. ಕೆಲಸಗಾರರ ಧೋರಣೆಯ ಹಿತಾಹಿತಗಳನ್ನಷ್ಟೇ ವಿಮರ್ಶಿಸಲಿರುವ ನಾನು, ಈ ಮುಷ್ಕರಗಳೊಳಗಿನ ವಾದಗಳ ನ್ಯಾಯಾನ್ಯಾಯದ ಸೂಕ್ಷ್ಮ ವಿಮರ್ಶೆಯನ್ನು ಇಲ್ಲಿ ಮಾಡಲಾರೆ. ಕೆಲಸಗಾರರ ಬತ್ತಳಿಕೆಯಲ್ಲಿ ಮುಷ್ಕರವೆಂಬ ಬ್ರಹ್ಮಾಸ್ತ್ರವಿರಬೇಕೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅದು ಹುಸಿಯಾಗುವ ರೀತಿಯಲ್ಲಿ ಎಂದಿಗೂ ಪ್ರಯೋಗಿಸಲ್ಪಡಬಾರದು. ಅಚಾತುರ್ಯದ ಫಲವಾಗಿ ಅದೂ ನಿರರ್ಥಕವಾಗಿ ಹೋದರೆ, ಮತ್ತೆ ಶಕ್ತಿಗಿಲ್ಲದೆ ನ್ಯಾಯಕ್ಕೆ ಬಗ್ಗದವರನ್ನು ಬಗ್ಗಿಸಲು ಕೆಲಸಗಾರರಲ್ಲಿ ಏನು ತಾನೇ ಉಳಿದೀತು? ನಿಜಕ್ಕೂ ಅನ್ಯಾಯ ಮಾಡಿದ ಮಾಲಕನು, ಗೊತ್ತುಗುರಿ ನೋಡಿ ಹೊಡೆದ ಈ ಅಸ್ತ್ರವನ್ನೆಂದಿಗೂ ಗೆಲ್ಲಲಾರನು. ಆದರ ಬೆಲೆಯು ಆ ಶಸ್ತ್ರ ವಿದ್ಯೆಯನ್ನೇ ಅರಿಯದ ಕೆಲಸಗಾರರಿಂದ ಮಾತ್ರ ಕೆಡಬೇಕು. ಖಡ್ಗವಾದರೇನು—ಕ್ಷೌರಿಕನ ಕೈಗೆ ಹೋದಲ್ಲಿ, ಅದು ಮತ್ತೆ ಕತ್ತರಿಸುವದು ದುರಧಿಕಾರದ ಕಂಠವನ್ನಲ್ಲ, ಅದರ ಕೈಯ್ಯನ್ನುಗುಂನ್ನೆ! ದ. ಕ. ಕಮ್ಯೂನಿಸ್ಟರಿಂದ ಮುಷ್ಕರವೆಂಬ ಮಹಾಸ್ತ್ರಕ್ಕೆ ಅಂತಹ ದುರ್ಗತಿಯೊದಗಿದೆ. ಅದು ನಿರರ್ಥಕವೆನ್ನಿಸಿದೆ; ಇನ್ನು ದೀರ್ಘಾವಧಿಯ ತನಕ ಕೆಲಸಗಾರರು ನಿಶ್ಶಸ್ತ್ರರಾಗಿ-ತಾವೇ ಕೆರಳಿಸಿ ನಿಲ್ಲಿಸಿದ ವೈರೀ ವರ್ಗದ ಮುಂದೆ ಸೋಲು ಸೋರಿ ಮಾಡಿಕೊಂಡು-ನಿಲ್ಲಬೇಕಾಗಿ ಬಂದಿದೆ. ಕಮ್ಯೂನಿಸ್ಟರಿಂದ ತಮಗೊದಗಿರುವ ಈ ನಿಸ್ಸಹಾಯಕ ಸ್ಥಿತಿಯನ್ನು-ತಮ್ಮನ್ನು ಯೋಧರಾಗಿ ಮಾಡಿಸುವೆವೆಂದು ಹೇಳಿ ಕೊಳ್ಳುತ್ತಾ ಬಂದು ನಿಶ್ಶಸ್ತ್ರರನ್ನಾಗಿಸಿ, ನಿಸ್ತೇಜರನ್ನಾಗಿಸಿ, ಕೊಟ್ಟಿರುವ ಈ ದಗೆಯನ್ನು-ಕೆಲಸಗಾರರು ನೆನಸಿಕೊಂಡರೆ ಅವರಲ್ಲಿ ಮಿಂಚು ವೇಗದಿಂದ ಜ್ಞಾನೋದಯವಾಗದಿರದು.

ಹಂಚು ಮುಷ್ಕರ

ಮೂರು ತಿಂಗಳುಗಳ ಬೋನಸಿಗಾಗಿ ಮಂಗಳೂರಿನ ಹಂಚು ಕಾರ್ಖಾನೆಗಳ ಕೆಲಸಗಾರರಿಂದ ಮುಷ್ಕರ ಹೂಡಿಸಿದ ಕಮ್ಯೂನಿಸ್ಟರು ಜಿಲ್ಲಾ ಕಲೆಕ್ಟರಿಂದದನ್ನು ರಾಜಿ ಮಾಡಿಸಿದರು. ಆ ರಾಜೀ ತೀರ್ಮಾನದಲ್ಲಿ ಕೆಲಸಗಾರರ ಬೇಡಿಕೆಗಳ ಹೆಚ್ಚಿನಂಶ ಮಾನ್ಯ ಹೊಂದಿದಂತೆ ತೋರಿಬಂತು. ಆದರೆ ಆ ತೀರ್ಮಾನದಂತೆ ವರ್ತಿಸಲು ಮಾಲಕರಿಗೆ ದೊರೆತ ಅವಧಿ ಇನ್ನೂ ಉಳಿದಿದೆ; ಇವರದನ್ನು ಒಪ್ಪಿ ಕೊಂಡಿಲ್ಲವೆಂಬ ವಾರ್ತೆಯೂ ಇದೆ. ಈ ಸಂದರ್ಭದಲ್ಲೇ ರಾಜೀ ತೀರ್ಮಾನ (ಕಾನೂನು ಬದ್ಧ ಹುಕುಮಲ್ಲ) ವಿತ್ತ ಜಿಲ್ಲಾಧಿಕಾರಿಗಳು ವರ್ಗವಾಗಿ ಹೋಗಿದ್ದಾರೆ. ಕಮ್ಯೂನಿಸ್ಟರನ್ನುತ್ತಿರುವ, ತಾವು ಕೆಲಸಗಾರರಿಗೆ ಸಂಪಾದಿಸಿಕೊಟ್ಟ ವಿಜಯವೆಂಬುದೊಂದೇ ಒಂದು ಹೆಗ್ಗಳಿಕೆಯೂ ಅಲ್ಪಾಯುಷಿಯೇ ಎಂಬ ಭೀತಿ ಹುಟ್ಟುತ್ತಿದೆ. ಕಂಬಣ್ಣಾದ ಪುಣ್ಯ ಬಲದಿಂದ ಹಾಗೇನೂ ಆಗದೆ ಕಮ್ಯೂನಿಸ್ಟ್ ವಿಜಯವು ಸಂಪೂರ್ಣಗೊಂಡಿತೆಂದೇ ಭಾವಿಸೋಣ. ಆ ಮುಷ್ಕರದಿಂದಾಗಿರುವ ನಿರುದ್ಯೋಗ ವೆಚ್ಚ, ಮುಷ್ಕರ ವೆಚ್ಚ, ಮತ್ತಿತರ ನಷ್ಟಗಳನ್ನೂ ಈ ಬೋನಸ್ ಲಾಭವನ್ನೂ ರೂ. ಆ. ಪೈ. ಲೆಕ್ಕಾಚಾರದಿಂದ ತುಲನೆ ಮಾಡಿದರೆ ಹೇಗೆ? ಪ್ರತಿಷ್ಠೆಯ ಲಾಭಾಂಶವೊಂದು ಗೆ ಸಾಹುಕಾರರ ಪಾಲಿಗುಳಿಯಬಹುದು; ಆ ಲಾಭವಾದರೂ ಯಾರಿಗೆ? ಕೇವಲ ಕಮ್ಯೂನಿಸ್ಟರಿಗೆ. ನೀವ್ಯಾಗ ಮಾಡಬಲ್ಲರೆಂಬ ಹೆದರಿಕೆಯಿಂದ ಫ್ಯಾಕ್ಟರಿಯೊಳಗೆ ಕೆಲಸಗಾರರಿಗೆ ವಿಶೇಷ ರಿಯಾಯಿತಿಗಳು, ಸಮಾನ ಸ್ಥಾನ ಮಾನಗಳು ಈಗ ದೊರೆಯ ಹತ್ತಿವೆಯಾದರೆ ಕೆಲಸಗಾರರು ಪ್ರತಿಷ್ಠೆ ಹೊಂದಿದರೆನ್ನಬಹುದಿತ್ತು. ತದ್ವಿರುದ್ಧ ಸ್ಥಿತಿ ನಿರ್ಮಾಣಗೊಂಡಿದೆ. ಮಾಲಕರೀಗ ಕೆಲಸಗಾರರನ್ನು ಇದಿರು ವಾದಿಗಳೆಂದು ಗಣಿಸಿ ಹೊಸ ಹೊಸ ಕಿರುಕುಳಗಳನ್ನು—ಚಳವಳಿ ಯಾನೆ ಮುಷ್ಕರ ಚಿಕಿತ್ಸೆಗೊಳಗಾಗದಂತಹ ಒಳಬೇನೆಗಳನ್ನು—ಕೊಡಹತ್ತಿದ್ದಾರೆ. ಅಂದ ಮೇಲೆ, ಮಂಗಳೂರು ಹಂಚು ಮುಷ್ಕರದ ಪರಿಣಾಮವಿಷ್ಟೆ: ಬೋನಸೆಂಬುದು ಮುಷ್ಕರ ಪೂರ್ವದಲ್ಲೆಷ್ಟು ದೂರದಲ್ಲಿತ್ತೋ ಮುಷ್ಕರಾನಂತರವೂ ಅಷ್ಟೇ ದೂರದಲ್ಲಿದೆ. ಆ ಯಜ್ಞದ ಪ್ರಸಾದರೂಪವಾಗಿ ಧನಿ—ಮಜೂರ ವೈಷಮ್ಯವೊಂದು ಮತ್ತು ಕೆಲಸಗಾರರಿಗೆ ವಿಶೇಷ ಕಿರುಕುಳಗಳನ್ನು ದೊರೆತಿವೆ. ಬೋನಸ ಯಾನೆ ಕಮ್ಯೂನಿಸ್ಟರು ತಾವು ಡಿಕ್ರಿ ಮಾಡಿಸಿಕೊಟ್ಟೆವೆನ್ನುವ ಆ ಐವೇಜು ದೊರೆತರೆ (ಅದನ್ನು ಪಡೆಯಲು ಮತ್ತೊಮ್ಮೆ ಕೋರ್ಟಿಗೆ ಹತ್ತಬೇಕಾಗುವದೋ ಎಂಬ ಅನುಮಾನವಿದೆ) ಕೆಲಸಗಾರರಿಗೆ ವ್ಯಾಜ್ಯದ ಖರ್ಚು ಮಾತ್ರ ದೊರೆತಂತಾಗುವದು. ಮಜೂರರಿಂದ ಕಾಳಗ ಮಾಡಿಸಬಲ್ಲರೆಂಬ ಒಂದು ಕೀರ್ತಿಯೋ ಅಪಕೀರ್ತಿಯೋ ಕಮ್ಯೂನಿಸ್ಟ್ ಕಾರ್ಯಕರ್ತರಿಗೆ ದೊರೆಯಿತು. ಅಂತೂ ಇಂತಹ ವಿಶೇಷಾಚರಣೆಯಿಂದ ಏನಾದರೊಂದನ್ನು ಸಂಪಾದಿಸಿಕೊಳ್ಳುವ ಹಕ್ಕಿದ್ದ ಹಂಚು ಕೈಗಾರಿಕೆಗಾಗಲೀ, ಕಾರ್ಖಾನೆಗಾಗಲೀ, ಕೆಲಸಗಾರರಿಗಾಗಲೀ, ಮಾಲಕರಿಗಾಗಲೀ ಯಾವುದೊಂದೂ ದೊರೆಯದೆ ಮೂರನೆಯವರಾದ ಕಮ್ಯೂನಿಸ್ಟರಿಗೊಂದು ಹೆಸರು ಮಾತ್ರ ದೊರೆಯಿತು! ಇದು ವಿಜಯವೇ? ತಮ್ಮನ್ನು ದಣಿಸಿ ಧನಿಗಳು ಪಡೆಯುವ ಲಾಭವನ್ನೇ ಇದಿರಿಗೆ ಲೆಕ್ಕ ಹಾಕುತ್ತಿದ್ದ ಕೆಲಸಗಾರರು, ತಮ್ಮನ್ನು ಕಷ್ಟಕ್ಕೀಡು ಮಾಡಿ ತಾವೆಣಿಸಿರುವ ಲಾಭ ಹೊಂದುತ್ತಿರುವ ಕಮ್ಯೂನಿಸ್ಟರ ಲೆಕ್ಕಾಚಾರವನ್ನು ಇನ್ನಾದರೂ ನೋಡುವದು ಬೇಡವೆ?

(ಮುಂದುವರಿಯುವುದು.)

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗಂ

ವ್ಯಯ ಸಂ॥ 1946-'47

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ.
ಬೆಲೆ 0-4-0; Postage extra.

ಅಂಬಾ ಭವನ ಕಾಫಿ ಕ್ಲಬ್,
ಮಾತುಂಗಾ, ಬೊಂಬಾಯಿ.
ಇಲ್ಲಿಯೂ ಸಿಗುವದು.

The Pangal Nayak Bank Limited.

(Incorporated in 1920.)
Registered Office: Court Road, UDIPI.

Sub-Offices at— **Udipi, Mangalore, Katapadi, Kanhangad, Kinnigoli, Nileshwar and Suratkal,** South Canara.

SEASON DEPOSITS for THREE & FOUR
months at a special rate of interest are accepted at all the above offices.

All kinds of up-to-date Banking service is provided promptly.

Please call for particulars of business

Dated the 5th January 1946

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯರೋಗ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು
ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.
ರಾತ್ತಲು 1ರ 10-0-0, ½ ರಾತ್ತಲು 5-4-0, ¼ ರಾತ್ತಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಟೆಲಾಗ್ಗಿ ಬರವಲ್ಲಿ ರೋಗಗಳಿಗೆ ತಕ್ಕ ಹಾಗೆ ಔಷಧ ರವಾನಿಸಲಾಗುವುದು. (1) ಉಡುಪಿ ಏಜೆಂಟರು: — ನವಭಾರತ ಬುಕ್ ಡಿಪೋ.
(2) ಬೊಂಬಾಯಿ ಏಜೆಂಟರು: ಪ್ರೊಪ್ರೈಟರ್ ಸ್ಟೋರ್ಸ್, ಕೆಮಿಸ್ಟ್ 183, ಪುರಾಂದಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S. K.



Approved firm by the Gov. of Mysore Certified by the Agent of the Govt. of Cylone Indian.

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.

THE BHARATH MILLS, Ltd.

With

Dr. T. M. A. Pai, M. B., B. S.	Upendra Ananth Pai, Esq.
Kochikar Panduranga Pai, Esq.	Dr. K. L. Aithala, M. B., B. S.
A. L. N. Rao, Esq., B. A., B. L.	A. L. N. Rao, Esq., B. A., B. L.
Dr. K. L. Aithala, M. B., B. S.	Kochikar Manjunath Pai, Esq.
T. N. Kelu Nambiar Esq.	Kalsank Venkatraya Pai, Esq.
Dr. V. K. Ballal, L. I. M.	B. Padmanabha Pai, Esq.
T. Ramesh U. Pai, Esq.	T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. H. Shetty at the Navayuga Press, Udipi, S. India.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ

NAVAYUGA

ನವಯುಗ

ವರ್ಷ ೨೫ ವಾರ ೩೩] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ Founder: SRI A. B. SHETTY. M. L. A. [Vol. 25 No. 33

ಉಡುಪಿ ● 18-4-1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ.

ತಲೆಶೂಲೆ, ಶಿರಶೂಲೆ, ನೆಗಡಿ, ಕೆಮ್ಮು, ಧುಮ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಉಳುಕು ... ನೋವು ಮುಂತಾದ ... ರೋಗಗಳಿಗೂ ...

REGD.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE PROTECTION

If a mother was left unprovided for and if the children were too young to earn a livlihood and maintain the family, how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,

Head Office:- **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ಪಾಟೀಲ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಾಲಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ... ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಹಾರೈಕೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.

Head Office.—**MANGALORE**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಲೇಖಾಂಕ ೬.

ಹೋರಾಡಿಸಿದುದೊ? ಹೊಂಡಕ್ಕಿಳಿಸಿದುದೊ?

'ವಿಚಾರಿ'ಯಿಂದ.

ಲೇಖನವಿದು ನಿರೀಕ್ಷೆಗೆ ಮಿಕ್ಕಿ ಬೆಳೆಯುತ್ತಾ ಹೋಯಿತು; ಉಪಾಯವಿಲ್ಲ; ವಿಷಯವಂತಹದಾದ್ದರಿಂದ ವಾಚಕರು ಕ್ಷಮಿಸುವರೆಂಬ ಭರವಸೆಯಿದೆ. ದಕ್ಷಿಣ ಕನ್ನಡದ ಹೆಸರಾಂತ ಮೂರು ಮುಷ್ಕರಗಳ ಪೈಕಿ ಮೊದಲನೆಯದಾದ ಮಂಗಳೂರಿನ ಹಂಚು ಕಾರ್ಖಾನೆಯ ಮುಷ್ಕರದ ಭಾರವೆಷ್ಟೆಂಬುದನ್ನು ಕಳೆದ ಸಂಚಿಕೆಯಲ್ಲಿ ತೂಕಕ್ಕಿಟ್ಟು ತೋರಿಸಲಾಗಿದೆ. ಈಗ ಉಳಿದೆರಡು ಮುಷ್ಕರಗಳ (ಉಡುಪಿಯ ಬೀಡಿ ಕಾರ್ಖಾನೆಯೊಂದರ ಮುಷ್ಕರ ಮತ್ತು ಮಂಗಳೂರಿನ ನೇಯಿಗೆ ಮುಷ್ಕರ) ಗುಣಾವಗುಣಗಳನ್ನು ಪರಿಶೀಲಿಸೋಣ.

ಉಡುಪಿ ಮುಷ್ಕರ

ಉಡುಪಿಯ ಒಂದು ಮುಖ್ಯ ಬೀಡಿ ಕಾರ್ಖಾನೆಯ ಮಾಲಕರು ಎರಡು ಜೆ ಕೂಲಿ ಹೆಚ್ಚಿಗೆ ಕೊಡಲೊಪ್ಪಲಿಲ್ಲ; ಕೆಲಸಗಾರರೊಂದು ದಿನ ಹರತೊಟ್ಟು ನಿಂತರೆಂದು ಅಕಸ್ಮಾತ್ ಬಾಗಿಲು ಹಾಕಿಬಿಟ್ಟರು. ಹದಿನೈದು ದಿನಗಳ ನೋಟೀಸು ಕೊಡದೆ ಕಾರ್ಖಾನೆ ಮುಚ್ಚಿದುದು ತಪ್ಪೆಂಬ ಕ್ರಮಕ್ಕೊಳಗಾಗಿ ಅವರು ಮಾರಣೆ ದಿನವೇ ಬಾಗಿಲು ತೆರೆಯಬೇಕಾಯಿತು. ಕ್ರಮಪ್ರಕಾರ ನೋಟೀಸು ಹಾಕಿಸಿ, ವಾಯಿದೆಯ ದಿನ ಪುನಃ ಬಾಗಿಲು ಮುಚ್ಚುವೆವೆನ್ನುವಾಗ...ಕೆಲಸಗಾರರು ಅಲ್ಲಿಂದ ಹೊರಡಲಾರರು! ಸುಮಾರು ನೂರೈವತ್ತು ಕೆಲಸಗಾರ ಕುಟುಂಬಗಳ ಅನ್ನದ ಪಾತ್ರೆ ಅಲ್ಲಿತ್ತಂತೆ; ಧನಿಯನ್ನು ಬಾಗಿಲು ಹಾಕಲು ಬಿಟ್ಟರೆ ಕೆಲಸಗಾರರು ತಮ್ಮ ದುಡಿಯುವ ಹಕ್ಕಿಗೆ ಬಾಗಿಲು ಹಾಕಿಕೊಂಡಂತಾಗುವದಂತೆ. ಆದ್ದರಿಂದ ಅವರು ಅಮೇಲಿನ ಮೂರು ರಾತ್ರಿ ಮೂರು ಹಗಲು ಅಲ್ಲಿಂದ ಹೊರಡಲೇ ಇಲ್ಲ. ಕೊನೆಯ ರಾತ್ರಿ ಅಲ್ಲಿಂದ ಹೊರಟು ಬರುವಾಗ ಕೈಗಳಲ್ಲಿ ತುಂಬಿದ ಅನ್ನದ ಪಾತ್ರೆಯೂ ಇರಲಿಲ್ಲ, ಭುಜದಲ್ಲಿ 'ದುಡಿತಲಕ್ಷ್ಮಿ' ಕುಣಿಯುತ್ತಿರುವದೂ ಕಾಣಿಸುತ್ತಿರಲಿಲ್ಲ. ಆದರೆ ಪ್ರತಿಯೊಬ್ಬನ ಕಿಸೆಯಲ್ಲಿ ಮಾತ್ರ ಏನೋ ಸ್ವಲ್ಪ ಇದ್ದಿತ್ತು ಎಂದು ತಿಳಿಯಿತು. 'ನನಗೆ ಪೂರೈಸುವದಿಲ್ಲ ನನ್ನನ್ನು ಹೋಗಬಿಡು' ಎಂದು ಕೇಳುವ ಯಜಮಾನನನ್ನ 'ಹಾಂಗೆ ಹೋಗುವಿಯೋ, ನಿನ್ನ ಹಿಡಿದಿಡುವೆ' ಎಂದು ಅಡ್ಡಗಟ್ಟಿ ನಿಲ್ಲಿಸಿದ್ದು ಯಾವ ವರ್ಗದ ಮುಷ್ಕರ? ಕೊನೆಗೆ, ಮೂರು ದಿನ ತನ್ನ ಅಂಗಡಿಯ ದಕ್ಷಿಣೆಯಂತೆ ಧನಿಯನ್ನಾದರೂ ಹೊರಗೆ ಹಾಕಿದರೆ, ಹಾಗೆ ಜೇಬಿಗೆ ಬಿದ್ದ ಪುಡಿ ಕಾಸಿಗೇನೇ ಪಿಡಯುವೆಂದು ಹೊಸ ಕಮ್ಯೂನಿಸ್ಟ್ ವೇದಾಭ್ಯಾಸ ಮಾಡದವರಿಗೆ ಇವುಗಳ ಅರ್ಥವೇ ಆಗುವಂತಿಲ್ಲ. ತನ್ನನ್ನು ದುಡಿಯಿಸುತ್ತಿರುವ ಧನಿಯನ್ನು 'ನನ್ನ ಬೆವರಿನಿಂದ ಹಣ ಹೊಡೆಯುವ ಲಾಭಖೋರ'ನೆನ್ನುವ ಕೆಲಸಗಾರರು, ಆತ ತನ್ನ ಲಾಭಖೋರತನವನ್ನು ಬಿಟ್ಟು ಹೊರಡಲೆದ್ದಾಗ 'ನಮ್ಮ ದುಡಿಯುವ ಶಕ್ತಿಯನ್ನು ಅಪಹರಿಸುವ ಸುಲಿಗೆಗಾರ' ಎಂದು ತಡೆದು ನಿಲ್ಲಿಸಿದರೆ 'ಇವೆರಡರಲ್ಲಿ ಯಾವುದು ಸತ್ಯವಯ್ಯಾ?' ಎಂದು ಮೂರನೆಯವರು ಪ್ರಶ್ನಿಸುವಂತೆ.

ಗರ್ದ' ನನ್ನ ಕೆಲಸಗಾರರಾಗಿ ನೀವು ನಿಲ್ಲಲೇಬೇಕು!' ಎಂದು ಹೇಳುವ ಅಧಿಕಾರ ನಿಜಕ್ಕೂ ಧನಿಗಿಲ್ಲ. 'ನಮ್ಮ ಧನಿಯಾಗಿ ನೀನು ಇರಲೇ ಬೇಕು' ಎಂದು ಹಿಡಿದು ನಿಲ್ಲಿಸುವ ಹಕ್ಕು ಕೆಲಸಗಾರರಿಗುಂಟೇನು? ಯಜಮಾನನು ಅಪರಾಧಿಯೆಂದು ತೀರ್ಮಾನಿಸಿ ಬಂಧಿಸಿ ಇಡುವದದೆ, ಯಜಮಾನನು ಯಜಮಾನನೆಂದೇ ತೀರ್ಮಾನಿಸಿ, ಬಂಧಿಸಿಟ್ಟುಕೊಳ್ಳಲು ನೋಡುವ ಈ ನೂತನ ಕ್ರಮಕ್ಕೇನೆನ್ನಬೇಕು? 'ದುಡಿಯುವ ಕರ್ಮಸ್ವಾತಂತ್ರ್ಯ' ಕೆಲಸಗಾರರಿಗಿದ್ದುಕೊಳ್ಳಲಿ, 'ಬಿಟ್ಟು ನಡೆಯುವ ವ್ಯಕ್ತಿಸ್ವಾತಂತ್ರ್ಯವೂ' ಧನಿಗಿಲ್ಲವೆ? 'ನನಗೆ ಪೂರೈಸುವದಿಲ್ಲವಾದ್ದರಿಂದ ಕೊಡುವದಿಲ್ಲ' ಎನ್ನುವ ಮಾತು ಅಬದ್ಧವೆಂದು ಜಗಳಕ್ಕೆ ನಿಲ್ಲಬಹುದು. 'ನನಗೆ ಪೂರೈಸುವುದಿಲ್ಲವಾದ್ದರಿಂದ ನಾನಿಲ್ಲ' ಎನ್ನುವವರೊಡನೆ ಜಗಳವೇನೆಂದು? 'ನೀನಿರುವದು ನಿನ್ನ ಪೂರೈಕೆಗಾಗಿ ಅಲ್ಲ—ನಮ್ಮ ಅರೈಕೆಗೆ' ಎಂದಾತನನ್ನು ತಡೆಗಟ್ಟಿ ಹಿಡಿಯಲು ಸಾಧ್ಯವೆ?

ಈ ಮುಷ್ಕರದಲ್ಲಿ ಕೆಲಸಗಾರರೊಂದು ನ್ಯಾಯವನ್ನು ಆಧರಿಸಿದ್ದರು ಎಂಬುದನ್ನು ತೋರಿಸಬೇಕೆಂದು ಎಷ್ಟೇ ತಲೆ ಖರ್ಚು ಮಾಡಿದರೂ, ಒಂದು ಕಿರಣ ಯಾವ ಕಡೆಯಲ್ಲೂ ಮಿಂಚದ ಕಗ್ಗತ್ತಲೆಯೇ ಆಗಿತ್ತದು. 'ಬೇರೆ ನ್ಯಾಯ ಶೋಧವೇಕೆ? ಕೆಲಸಗಾರರು ಹೇಳಿದ್ದೇ ನ್ಯಾಯವೆಂದಿಟ್ಟುಕೊಂಡರಾಯಿತು' ಎನ್ನೋಣವೆ? ಅದಕ್ಕೂ ಉಪಾಯವಿಲ್ಲ, ಅವರು ಮೊದಲ ದಿನ ಹೇಳಿದ್ದಕ್ಕೆ ವಿರುದ್ಧವಾದ್ದನ್ನೇ ಮರುದಿನ ಹೇಳಿದ್ದಾರೆ. ದುಡಿಮೆಯ ಹಕ್ಕನ್ನು ಎಂದೂ ಬಿಟ್ಟುಕೊಡಲಾರೆವೆಂದು ಹೋದವರು ಚಿಲ್ಲರೆ ಹಣಕ್ಕೆ ಆ ಹಕ್ಕನ್ನು ..... ಮರಳಿ ಬಂದಿದ್ದರು. ಸ್ವತಃ ಕೆಲಸಗಾರರಿಗೇನೇ ಇಷ್ಟು ತಾತ್ಸಾರವಾಗಿರುವ 'ಕೆಲಸದ ಹಕ್ಕಿ'ಗೆ ಧನಿಗಳೂ ಪ್ರಾಮುಖ್ಯತೆ ಕೊಡದಿರುವದು ಮಹಾಪರಾಧವಾಗುವದು ಹೇಗೆ? ಇಕ್ಕಡೆಯವರೂ ಹೃತ್ಪೂರ್ವಕ ಮನ್ನಿಸದ ಅಲ್ಪ ವಿಷಯವೆಂದು ಕೊನೆಯ ಪರಿಣಾಮದಿಂದ ಸ್ಪಷ್ಟವಾಗಿರುವ ಈ ವಾದಕ್ಕಾಗಿ, ತಮ್ಮ ಕಿವಿ ಕಿವುಡಾಗುವಷ್ಟು ಗಲಭೆಯನ್ನು ಅನವಶ್ಯವಾಗಿ ಎಬ್ಬಿಸಿದರಲ್ಲಾ ಎಂದು ಸಾರ್ವಜನಿಕರಿಗೆ ಮುಷ್ಕರಗಾರರ ಮೇಲೆ ಜಿಗುಪ್ಸೆ ಮೊಳೆಯುವದು ತಪ್ಪೆ?

ನೇಯಿಗೆ ಮುಷ್ಕರ

ಮೂರನೆಯದು ಮತ್ತು ಅತಿದೊಡ್ಡದೆಂದರೆ ಮಂಗಳೂರಿನ ಸುಮಾರು ಮೂರು ಸಾವಿರ ನೇಯಿಗೆ ಕೆಲಸಗಾರರು ಸಾಧಾರಣ ಏಳು ವಾರಗಳ ವರೆಗೆ ನಡಿಸಿದ ಮುಷ್ಕರ. ಮಾಲಕ ವರ್ಗದ ಮಾನುಷತ್ವವು ರೂ. ಆ. ಪೈ. ಲೆಕ್ಕವೊಂದನ್ನೇ ಆಧರಿಸಿರುವದು ನಿಜವಾಗಿದ್ದರೆ ಈ ಮುಷ್ಕರ ಹೂಡಿಸಿದವರಿಗೆ ಮಗ್ಗಗಳ ಮಾಲಕರಿಂದ ಬಹುಮಾನ ದೊರೆಕಿರಬಹುದೆಂದು ನಾನನ್ನುತ್ತೇನೆ. ಏನಿಲ್ಲದೆ ಹೋದರೂ ಮಾಲಕರ ಹೃದಯವು ಕಮ್ಯೂನಿಸ್ಟ್ ಉಪಕಾರಿಗಳ ಮೇಲಿನ ಕೃತಜ್ಞತೆಯಿಂದ ತುಂಬಿ ತುಳುಕದಿರಲಾರದು. ಕಾರಣ, ನೂಲಿನ ಅಭಾವ. ತಮ್ಮ ಎಲ್ಲಾ ಮಗ್ಗಗಗಳನ್ನೂ, ಕೆಲಸದ ಅವಧಿಯ ಎಲ್ಲಾ ಘಂಟೆಗಳಲ್ಲೂ ಚಾಲು ಮಾಡಲು ಸಾಕಾಗುವಷ್ಟು ನೂಲು ದೊರೆಯದೆ ಆದರೆ ಆ ಕಾರಣದಿಂದ ಕೆಲಸಗಾರರನ್ನು ತೆಗೆಯುವದಾಗಲೀ, ತಾತ್ಕಾಲಿಕವಾಗಿ ಕೈಬಿಡುವದಾಗಲಿ ಸಾಧ್ಯವಾಗದೆ—ಮಾಲಕರು ಚಡಪಡಿಸುತ್ತಿರುವ ಕಾಲವಿದು. ತಮ್ಮನ್ನು ನಂಬುವವರಿರುತಿದ್ದರೆ, ಮಗ್ಗಗಳ ಕೆಲವು ಮಾಲಕರೇ ಕಮ್ಯೂನಿಸ್ಟರಾಗಿ ಕೆಲಸಗಾರರನ್ನು ಕಾರ್ಯಾಲಯಗಳಿಂದ ಹೊರಗಿಡುವ ಯುಕ್ತಿ ಹೂಡುತಿದ್ದರೇನೋ! ಆದರೆ ಅವರ ಒದ್ದಾಟವನ್ನು ಕಮ್ಯೂನಿಸ್ಟ್ ಕಾಮ್ರೇಡ್‌ಗಳು ತಾವಾಗಿ ಶಮನ ಮಾಡಿದರು. ಇಲ್ಲವಾದರೆ 'ನೂಲಿಲ್ಲದ ದೆಸೆಯಿಂದ ನಿರುದ್ಯೋಗ ಉಂಟಾಗಿದೆ' ಎಂದು —......ಗೆ ಹೊರಡಿಸುತಿದ್ದವರು— ಸಂಬಂಧಪಟ್ಟ ಅಧಿಕಾರಿಗಳಿಗೆ ತಂತಿ, ಶಿಷ್ಟಮಂಡಲಗಳನ್ನು ಕಳುಹುತಿದ್ದವರು—ಜತೆಯಲ್ಲೇ ಮುಷ್ಕರದ ನೋಟೀಸು ಕೊಡುವದೆಂದರೇನು? ಗೊತ್ತಿದೆ—ಸಿಕ್ಕಿದಷ್ಟೇ ನೂಲಿನ ಸೀರೆಗಳಿಂದ ಧನಿಗಳಿಗೆ ಹೆಚ್ಚಿನ ಮುನಾಫಯಿದೆಯಾದ್ದರಿಂದ ಎಲ್ಲರೂ ಮುಷ್ಕರ ಹೂಡಿದರೆ ಅವರಿಗೆ ನಷ್ಟವಿದೆ ಎಂಬುದು ನಿಜ. ಆದರೆ ಕೆಲಸಗಾರರಿಗೆ? ಇಂತಹ ಕಾಲದಲ್ಲಿ ಅವರು ಹೂಡುವ ಮುಷ್ಕರಕ್ಕೆ ಅರ್ಥ ಬೆಲೆಯುಲ್ಲವೆ? ತಮಗೆ ಅಗತ್ಯವಿರುವ ನೂಲಿನ ಅರೆವಾಸಿಯಷ್ಟೇ ದೊರೆಯುತ್ತಿರುವ ಕಾಲದಲ್ಲಿ 3000 ಕೆಲಸಗಾರರು ಮುಷ್ಕರ ಹೂಡಿದರೆ ಮಾಲಕ ವರ್ಗದ ಪಾಲಿಗೆ 1500 ಕೆಲಸಗಾರರು ಮುಷ್ಕರ ಹೂಡಿದಷ್ಟೇ ಕಷ್ಟನಷ್ಟ. ಮುಷ್ಕರವೆಂಬುದು ಕೆಲಸಗಾರರ ಧ್ಯೇಯಸಾಧನೆಗಾಗಿ ಏಳುವಂತಹದಾದ್ದರಿಂದ ಈ ರೀತಿ ಅದರ ಅರ್ಥಬಲ ತಗ್ಗಿದರೆ ಅವರ ಗುರಿಯು ಎರಡು ಪಾಲು ದೂರಕ್ಕೆ ಹೋದಂತೆ. ಅದೇ ಸಮಯದಲ್ಲಿ ಆ ಹೋರಾಟದ ಕಷ್ಟನಷ್ಟಗಳೋ? ಅವು ಕೆಲಸಗಾರರ ಪಾಲಿಗೆ ಇಮ್ಮಡಿಯಾದಂತೆ—3000 ಜನರಿಂದ ಮುಷ್ಕರ ಮಾಡಿಸುವದರಲ್ಲಿಯೇ 6000 ಜನರಿಂದ ಮಾಡಿಸಿದಷ್ಟು ಪ್ರಯಾಸವಿದೆ. ಯಾಕೆಂದರೆ ನೂಲಿನ ಅಭಾವದಿಂದಾಗಿಯೇ ಅರ್ಧಮರ್ಧ ನಿರುದ್ಯೋಗವೋ 'ಮುಷ್ಕರ'ವೋ ಎದ್ದಿತ್ತಷ್ಟೆ? ಅಂತಹ ಸಂದರ್ಭದಲ್ಲಿ ನಿರುದ್ಯೋಗಿಗಳಾದವರೆಲ್ಲರ ಹೊಣೆಯು ಮೂರು ಪಾಲಾಗಿ ಮಜೂರರು-ಮಾಲಕರು-ಪರಿಸ್ಥಿತಿ, ಈ ಮೂವರ ಮೇಲೆ ಬೀಳುತಿತ್ತು. ಆದರೆ ಸಾರ್ವತ್ರಿಕ ಮುಷ್ಕರವೆಬ್ಬಿಸಿ ಕಮ್ಯೂನಿಸ್ಟರು ನಿರುದ್ಯೋಗಿಗಳನ್ನೂ ಮುಷ್ಕರ ಯೋಧರಾಗಿ ಮಾರ್ಪಡಿಸಿದುದರಿಂದ ಆ ಮೂರು ಪಾಲಿಗೂ ಕೆಲಸಗಾರರೇ ತಲೆಯೊಡ್ಡಬೇಕಾಯಿತು. ಅರ್ಥಾತ್ ಮಂಗಳೂರಿನ ನೇಯಿಗೆ ಮುಷ್ಕರವು ತುಲನಾತ್ಮಕವಾಗಿ ಹೇಳುವದಾದರೆ, ಕೆಲಸಗಾರರ ಪಾಲಿಗೆ 2 ರೂ. ಬೆಲೆಯ ಸಾಮಾನನ್ನು ರೂ. 4ಕ್ಕೆ ಕೊಂಡು 1 ರೂಪಾಯಿಗೆ ಮಾರಬೇಕಾಗಿ ಬಂದ ಒಂದು ವ್ಯಾಪಾರ! ಅಥವಾ, ಮಾಲಕರ ತಲೆಗೆ ನೀರೆರೆದು ಪಿತ್ತವಿಳಿಸಬೇಕೆಂಬ ಛಲದಿಂದ ಇಮ್ಮಡಿ ಭಾರವಾದ ಕೊಡವೊಂದರಲ್ಲಿ ನೀರನ್ನು ಹೊತ್ತು ತರುವಾಗ ಅರೆವಾಸಿ ಮೈಮೇಲೆ ಸೋರಿಹೋಗಿ ಹೊತ್ತವನೇ ಛಳಿಹಿಡಿಸಿಕೊಳ್ಳುವ ಪ್ರಸಂಗ! ಮಾಲಕರ ಪಾಲಿಗೋ? ಮುಷ್ಕರದಿಂದಾಗಿ ತಮಗೆ ಬೇಕಾಗಿದ್ದ ಕೆಲಸಗಾರರು ಬಾರದ ಸಂಕಷ್ಟವೊಂದೊದಗಿದರೆ, ನೂಲಿನ ಅಭಾವದಿಂದಾಗಿ ತೆಗೆದು ಹಾಕಬೇಕಾಗಿದ್ದ ಕೆಲಸಗಾರರು ತಾವಾಗಿ ಬಾರದಿದ್ದ ಒಂದು ಸಂತೋಷವೂ ಒದಗಿದೆ. ವ್ಯಾಪಾರೀ ದೃಷ್ಟಿಯಿಂದ ಇವೆರಡರ ಪೈಕಿ ಸಂಕಷ್ಟವೇ ಮಾಲಿಕರ ಪಾಲಿಗೆ ಹೆಚ್ಚಾಗಬಹುದು. ಆದರೆ ಯುದ್ಧದೃಷ್ಟಿಯಿಂದ ಮಾಲಿಕರಂದನ್ನು ದೀರ್ಘಾವಧಿ ಸಹಿಸಿನಿಂತು ಹೋರಾಡಬಲ್ಲರು; ಆದರೆ ಕೆಲಸಗಾರರ ಪಾಲಿಗೆ ಬಿದ್ದ ಭಾರ ಹೊರಲಾರದುದು. ಮುಷ್ಕರದ ಕೊನೆಯ ಪರಿಣಾಮವೇ ಇಂತಹ ಎಂತಗ್ಗನ್ನು ಸ್ಪಷ್ಟಪಡಿಸಿರುವಾಗ ಈ ಕುರಿತು ವಿಶೇಷ ವಿವರವೇಕೆ?

(ಮುಂದುವರಿಯುವುದು)

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ... ಉತ್ತಮ ಉಪಚಾರ.
ಟೀಪಾರ್ಟಿ ಸಮಾರಂಭಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

CHAMPAE'S
Snow & Castrex
(Sole Distributers for (India.)
Prop: K. G. NAYAK,
Santhekatte, UDIPI, S. K.

★ ಲೀಗ್ ಮುಸಲ್ಮಾನರ ಬಡಾಯಿ! ★

ಮಿ. ಜಿನ್ನರ ನಾಯಕತ್ವದಲ್ಲಿ ಪುಂಡುತನದಿಂದಲೇ ಪಾಕಿಸ್ತಾನವನ್ನು ಪಡೆಗೊಳ್ಳಬೇಕೆಂಬ ದುರಹಂಕಾರವೀಗ ಲೀಗ್ ಮುಸಲ್ಮಾನರ ತಲೆಗೇರಿ ಬಿಟ್ಟಿದೆ. ಬ್ರಿಟಿಷ್ ಸಮಿತಿಯ ಮಾತುಕತೆಗಳು ಪಾಕಿಸ್ತಾನ್ ಪ್ರಶ್ನೆಯನ್ನು ತೀರ್ಮಾನಿಸಲೇಬೇಕಾದ ಬಿಕ್ಕಟ್ಟಿನ ಸ್ಥಿತಿಗೆ ಬಂದಿರುವಾಗಲೇ, ಅವರ ಮತ್ತು ಲೋಕದ ಕಣ್ಣಿಗೆ ಮಣ್ಣೆರಚಬೇಕೆಂಬ ಉದ್ದೇಶದಿಂದ, ಕಳೆದ ವಾರ ನವದಿಲ್ಲಿಯಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ಎಸೆಂಬ್ಲಿ ಸದಸ್ಯರ ಸಮ್ಮೇಳನವು ಮಿ. ಜಿನ್ನರ ಅಧ್ಯಕ್ಷತೆಯಲ್ಲಿ (ಅಧ್ಯಕ್ಷ ಭಾಷಣದ ಸಾರ ಕಳೆದ ವಾರದ ಸಂಚಿಕೆಯಲ್ಲಿ ಬಂದಿದೆ) ನಡೆದಿತ್ತು. ಅಲ್ಲಿ ಆದ ಮುಖ್ಯ ಠರಾವಿನಲ್ಲಿ ಪಾಕಿಸ್ತಾನದ ಬೇಡಿಕೆಯೊಂದಿಗೆ, ಉದ್ದೇಶ ಪೂರ್ವಕ ಹಿಂದೂ ಧರ್ಮವನ್ನೇ ನಿಂದಿಸಲಾಗಿತ್ತು. ಅನಗತ್ಯವಾಗಿ ಇನ್ನೊಂದು ಧರ್ಮದ ಮೇಲೆ ಧಾಳಿಯಿಡುವ ಆಕ್ರಮಣ ಶೀಲವನ್ನು ಧರ್ಮಶ್ರದ್ಧೆಯಿಲ್ಲದವರೂ ಕೂಡಾ ಸಹಿಸುವಂತಿಲ್ಲ. ಒಂದು ಧರ್ಮದ ಶುದ್ಧಾಶುದ್ಧತೆಗೂ ಪಂಥವೀರ್ಯರಿಗೂ ಸಂಬಂಧವಿಲ್ಲ. ಇದೇ ಮಾದರಿಯ ಧಾರ್ಮಿಕ ನೋವು ತಮಗೊದಗಿದಲ್ಲಿ ಸಹಿಸಬಲ್ಲೆವೇ ಎಂಬುದನ್ನು ತಲೆಯುಳ್ಳ ಕೆಲವೇ ಮಂದಿ ಮುಸಲ್ಮಾನರಾದರೂ ಯೋಚಿಸಬೇಕು. ಅಧಿಕ ಪ್ರಸಂಗ, ಆಕ್ರಮಣ ಮನೋವೃತ್ತಿ ಮತ್ತು ಪ್ರತೀಕಾರೇಚ್ಛೆಯಿದ್ದಲ್ಲಿ ಹಿಂದೂ ಧರ್ಮಾನುಯಾಯಿಗಳು ಇಸ್ಲಾಂ ಧರ್ಮವನ್ನು ಇದಕ್ಕಿಂತಲೂ ಕಠಿಣವಾಗಿ ಟೀಕಿಸಲವಕಾಶವಿದೆ. ಆದರೆ ದುರ್ಬಲ ಹೃದಯವೊಂದು ಉದ್ರೇಕದ ಪರಿಣಾಮವಾದ–ಅನ್ಯಾಯವನ್ನು ಗೆಲ್ಲಬೇಕೆಂಬ ಆಶೆಯಿಂದ ಯಾರೂ ಮಹಾ ಅನ್ಯಾಯಿಯಾಗಬಾರದು. ಲೀಗ್ ಮುಸಲ್ಮಾನರಷ್ಟೆ ಪಿತ್ಥವಾಗಿ ಸೇರಿಕೊಂಡಿರುವ ದರ್ಪವಾಣಿಗಳಿಂದಲೇ ಪಾಕಿಸ್ತಾನ ಸಂಪಾದಿಸಬಹುದೆಂಬ ಘೋಷಣೆಯ ಸ್ವರೂಪವನ್ನು ತೋರಿಸುವದಕ್ಕಾಗಿ ದಿಲ್ಲಿಯ ಲೀಗ್ ಕನ್ವೆನ್ಶನಿನಲ್ಲಿ ಸುರಿದ ಕೆಲವು ನುಡಿ ಮುತ್ತುಗಳನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ.

ಲೀಗ್ ಸಮಿತಿಯ ಠರಾವಿನಲ್ಲಿ

ಯಾವ ಹಿಂದೂ ಧರ್ಮ ಮತ್ತದರ ತತ್ವವು (6)0 ಮಿಲಿಯ ಮಾನವರನ್ನು ಅಸ್ಪೃಶ್ಯರೆಂಬ ಹೇಯ ಸ್ಥಾನಕ್ಕೆ ತಳ್ಳುವಂತಹ ಕಠಿಣ ಜಾತೀಯ ಪದ್ಧತಿಯನ್ನು

ಹಿಂದುತ್ವದ ಖಂಡನೆ—ಖಡ್ಗ ಹಿರಿಯುವ ಆತುರ—ರಶ್ಯದ ಸಹಾಯ ಸೂಚನೆ—ಕಾಂಗ್ರೆಸಿಗರ ಮೇಲೆ ಕ್ಷಿಪ್ರ ನಿಂದೆ—ನಾಳೆ ಇಡೀ ಹಿಂದುಸ್ಥಾನವನ್ನೇ ಕೇಳುವೆವೆಂಬ ಭಾವನೆ!

ಸಾವಿರಾರು ವರುಷಗಳಿಂದ ಪೋಷಿಸಿ ಉಳಿಸಿಕೊಂಡು ಬಂದಿರುವದೋ—ಯಾವುದು ಮನುಷ್ಯ ಮನುಷ್ಯರೊಳಗೆ ಅಸ್ವಾಭಾವಿಕ ತಡೆ ಭೇದಗಳನ್ನು ತಂದು ಹಾಕಿರುವದೋ—ಯಾವುದು ಈ ರಾಷ್ಟ್ರದ ಜನತೆಯ ದೊಡ್ಡ ಭಾಗದ ಮೇಲೆ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹೇರಿರುವದೋ—ಯಾವುದು, ಮುಸಲ್ಮಾನ್ ಕ್ರೈಸ್ತ ಮತ್ತಿತರ ಅಲ್ಪ ಸಂಖ್ಯಾಕ ಸಮಾಜಗಳನ್ನು ಎಂದೂ ತಲೆಯೆತ್ತಲಾರದ ನಿರ್ಗತಿಕರನ್ನಾಗಿ ಮಾಡಬೇಕೆಂದು ಬಯಸುವದೋ—ಆ ಹಿಂದೂ ಧರ್ಮಕ್ಕೆ ಆಚಾರ, ವಿಚಾರ ಮತ್ತು ಜೀವನದ ಸರ್ವ ವಿಭಾಗಗಳಲ್ಲೂ ಸಂಪೂರ್ಣ ವಿರುದ್ಧವಾದ ಧರ್ಮಾನುವರ್ತಿಗಳಾಗಿರುವ 100 ಮಿಲಿಯ ಮುಸಲ್ಮಾನರಿಗೆ......ಬಂಗಾಳ ಮತ್ತು ಅಸ್ಸಾಮನ್ನು ಈಶಾನ್ಯ ಭಾಗದಲ್ಲೂ, ಪಂಜಾಬ್, ಗಡಿನಾಡು ಪ್ರಾಂತ್ಯ, ಸಿಂಧ್ ಮತ್ತು ಬಲೂಚಿಸ್ಥಾನಗಳನ್ನು ವಾಯುವ್ಯ ಭಾಗದಲ್ಲೂ ಪಾಕಿಸ್ತಾನ್ ಕ್ಷೇತ್ರಗಳಾಗಿ ಪ್ರತ್ಯೇಕಿಸಿ ಕೊಡತಕ್ಕದ್ದೆಂದೂ ನಮ್ಮೀ ಇಚ್ಛೆಗೆ ವಿರುದ್ಧವಾಗಿ ಹೇರಲ್ಪಡುವ ಯಾವುದೇ ಯೋಜನೆಯನ್ನು ಸರ್ವ ವಿಧಾನಗಳಿಂದ ವಿರೋಧಿಸದೆ ಗತ್ಯಂತರವಿಲ್ಲವೆಂದೂ ಈ ಸಮಿತಿ ಅಭಿಪ್ರಾಯಪಡುತ್ತದೆ'.

ಲೀಗ್ ಪ್ರಮುಖರ ಬಾಯಿಯಿಂದ-

ಮೇಲಿನ ವಾಕ್ಯಗಳುಳ್ಳ ಸುಮಾರು 700 ಶಬ್ದಗಳ ಪಾಕಿಸ್ತಾನ್ ಠರಾವನ್ನು ಸಮರ್ಥಿಸುತ್ತಾ ಕೆಲವು ಮುಸ್ಲಿಂ ಮುಖಂಡರಾಡಿದ ಪುಂಡರ ಮಾತುಗಳು ಇಲ್ಲಿವೆ:-

ತಡವಾದರೆ ಇಡೀ ಹಿಂದುಸ್ಥಾನವೇ ಬೇಕು?

"ಪಾಕಿಸ್ತಾನವೆಂಬುದು ನಮ್ಮ ಬೇಡಿಕೆಯ ಪರಮಾವಧಿಯೆಂದು ಹೇಳಬಾರದು; ಪಾಕಿಸ್ತಾನವು ನಮ್ಮ ಕೊನೆಯ ಸಲದ ಬೇಡಿಕೆಯೆಂದಿಷ್ಟೇ ಹೇಳಬಲ್ಲೆ. ನಾವಿಂದು ಹಿಂದುಸ್ಥಾನದ ಎರಡು ಮೂಲೆಗಳನ್ನು ಮಾತ್ರ ಕೇಳುತಿದ್ದೇವೆ. ಹಿಂದುಸ್ಥಾನವು ನಮ್ಮ ಮೇಲೆ ಧಾಳಿಯನ್ನಾರಂಭಿಸುವದಾದರೆ ಮುಂದೇನಾಗುವದೆಂಬ (ನಮಗಿಷ್ಟೇ ಬೇಕಾಗುವದೆಂಬ) ಭವಿಷ್ಯವನ್ನು ಹೇಳಲು ನನ್ನಿಂದಾಗದು. ಕಾಂಗ್ರೆಸ್ ಪ್ರಮುಖರು ಸಂಯುಕ್ತ ಭಾರತದ ಅಧಿಕಾರ ತಮಗೆ ಕೊಡಬೇಕೆಂದು ಕೇಳುತಿದ್ದಾರೆ; ಇದು ಅಧಿಕಾರ ಭ್ರಮೆ ತಲೆಗೇರಿ ಆಗಿರುವ ಹುಚ್ಚು ಎಂದು ನಾನನ್ನುತ್ತೇನೆ. ಭಾರತದ ಭವಿಷ್ಯವನ್ನು ಈ ಕೊಲೆಗಾರ ತಂಡದ ಕೈಗೆ ಕೊಡುವಷ್ಟು ಹೆಡ್ಡರು ಬ್ರಿಟಿಷ್ ಸಮಿತಿಯವರಲ್ಲ. ಕಾಂಗ್ರೆಸೆಂಬುದು ಹಿಂದೂ ಚತುರರ ಪ್ರತಿನಿಧಿ ಹೊರತು ಜನತಾ ಬೆಂಬಲವುಳ್ಳದ್ದಲ್ಲ. ಅವರೊಮ್ಮೊಮ್ಮೆ ಬೆದರಿಸುತ್ತಾರೆ; ಮತ್ತೊಮ್ಮೊಮ್ಮೆ ಪಾರಿವಾಳಗಳಂತೆ ಕುಗ್ಗಿ ಹೋಗಿ ನಮ್ರ ಧ್ವನಿಯೆತ್ತುತ್ತಾರೆ"—ಬಂಗಾಳದ ನಿಯೋಜಿತ ಲೀಗ್ ಪ್ರಧಾನ ಮಂತ್ರಿ ಮಿ. ಸುಹ್ರವರ್ದಿ.

ಇದು ನಿಜವೆ?

"ಸ್ವತಂತ್ರ ಹಿಂದುಸ್ಥಾನ ಮತ್ತು ಸ್ವತಂತ್ರ ಪಾಕಿಸ್ತಾನದೊಳಗೆ ಯಾವುದಾದರೊಂದನ್ನು ಸೇರುವ ಒಂದೇ ಪ್ರಶ್ನೆಯುಳಿದಲ್ಲಿ ನಾನು ಮುಸಲ್ಮಾನರನ್ನೇ ಸೇರಿಕೊಳ್ಳುತ್ತೇನೆ, ಎಂದು ಗಡಿನಾಡು ಪ್ರಾಂತ್ಯದ ಕಾಂಗ್ರೆಸ್ ಪ್ರಧಾನ ಮಂತ್ರಿ ಡಾ। ಖಾನ್ ಸಾಹೇಬರು ಬ್ರಿಟಿಷ್ ಮಂತ್ರಿಗಳೊಡನೆ ಹೇಳಿದರೆಂಬ ವಾರ್ತೆಯಿದೆ.' (?) ಮೌಲಾನಾ ಆಜಾದರ ಮಾತುಗಳು ಲೀಗ್ ಸ್ಪರ್ಧಿಗಳ ವಿರುದ್ಧ ಹೋರಾಟಗಳಿಗೆ ಹಣ ಸಹಾಯ ಕೊಟ್ಟಿದ್ದ ಕಳ್ಳಸಂತೆಯ ಶ್ರೀಮಂತರ ಮನಸ್ಸಮಾಧಾನಕ್ಕಾಗಿಯಲ್ಲದೆ ಬೇರಲ್ಲ" — ಸಂಯುಕ್ತ ಪ್ರಾಂತ್ಯದ ಲೀಗ್ ಪಕ್ಷೀಯ ನಾಯಕ ಚೌಧರಿ ಖಲಿಕುಝಮಾನ್.

ಕರಿಯರೋ? ಕರ್ಕರೆಯರೋ?

"ಹಿಂದುಗಳು ವಿದ್ಯಾವಂತರಿದ್ದಾರೆ, ಹಣವಂತರಿದ್ದಾರೆ, ಸಂಖ್ಯಾಬಲ ತಮಗಿರುವುದರಿಂದ ಪ್ರಜಾಸತ್ತೆಯನ್ನು ಕೇಳುತಿದ್ದಾರೆ. ಆದರೆ ಮುಸಲ್ಮಾನರ ಪಾಕಿಸ್ತಾನ ರಚಿಸುವದು ಖಂಡಿತ"—ಸಿಂಧಿನ ಲೀಗ್ ಪ್ರಧಾನಿ ಸರ್. ಗುಲಾಮ್ ಹುಸ್ಸೇನ್ ಹಿದಯತುಲ್ಲಾ.

"ಅಸ್ಸಾಮನ್ನು ಪಾಕಿಸ್ತಾನದೊಳ ಸೇರಿಸಿಕೊಳ್ಳಲೇ ಬೇಕೆಂಬ ತಮ್ಮ ಬಯಕೆಯನ್ನು ಪ್ರತಿನಿಧಿಸಲು, ಸುಮಾರು 9 ಮಿಲಿಯ ಜನರಿರುವ ಅಸ್ಸಾಮಿನ ಸರ್ವರೂ ನನ್ನನ್ನು ಕಳುಹಿಕೊಟ್ಟಿದ್ದಾರೆ"—ಅಸ್ಸಾಮ್ ಲೀಗ್ ಪಕ್ಷೀಯ ನಾಯಕ ಸರ್. ಮಹಮ್ಮದ್ ಸಾದುಲ್ಲಾ.

"ಸಂಯುಕ್ತ ಭಾರತದ ರಾಜ್ಯಾಂಗ ರಚನೆಯು ಮುಸಲ್ಮಾನರ ಮೃತ್ಯು ಘಂಟೆಯನ್ನು ಬಾರಿಸಲಿದೆ. ಮಧ್ಯ ಪ್ರಾಂತ್ಯದ ಪ್ರತಿಯೊಬ್ಬ ಮುಸಲ್ಮಾನನೂ ಪಾಕಿಸ್ತಾನಕ್ಕಾಗಿ ಸರ್ವ ತ್ಯಾಗಕ್ಕೆ ತಯಾರಾಗಿ ಯುದ್ಧ ಕರೆಯನ್ನು ಕಾಯುತ್ತಾ ನಿಂತಿದ್ದಾನೆ"—ಮಧ್ಯ ಪ್ರಾಂತ್ಯದ ಸಯ್ಯದ್ ರಾಫುದ್ ಬಿ.

ಖಡ್ಗ ಹಿರಿಯುತ್ತಾರಂತೆ!

"ಹಿಂದೂ ಮುಸ್ಲಿಮರನ್ನು ತಮ್ಮೊಳಗೇನೇ (ಹೋರಾಡಿ ಕೊಂಡು?) ಇತ್ಯರ್ಥಿಸಿಕೊಳ್ಳಲು ಬಿಡಬೇಕೆಂಬುದೇ 'ಕ್ವಿಟ್ ಇಂಡಿಯಾ'ದ ಅರ್ಥವಾಗಿದ್ದರೆ, ಹತ್ತು ಕೋಟಿ ಮುಸಲ್ಮಾನರ ಪರವಾಗಿ 'ಬ್ರಿಟಿಷರು ಹೋಗಿ ಬಿಡಲಿ!' ಎಂದೇ ನಾನನ್ನುತ್ತೇನೆ. ಆದರೆ ಬ್ರಿಟಿಷ್ ಬೆಯನೆಟಿನ ಬಲದಿಂದ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಬಾಗುವ ವರೆಗೆ ಬ್ರಿಟಿಷರು ಇಲ್ಲಿರಬೇಕೆಂದು ಕಾಂಗ್ರೆಸ್ ಬಯಸುತ್ತಿರುವದು ನನಗೊಂದು ಸಮಸ್ಯೆಯಾಗಿದೆ. ನಾನು ದಿಲ್ಲಿಗೆ ಬರುವ ಹಾದಿಯಲ್ಲೆಲ್ಲಾ ಮುಸ್ಲಿಂ ವಿದ್ಯಾರ್ಥಿಗಳೂ, ಯುನಿಫೋರ್ಮ್ ಧಾರಿ ಮುಸಲ್ಮಾನರೂ ನನ್ನನ್ನು ಆತುರಗೊಂಡು ಕೇಳುತಿದ್ದರು—'ಕೈಯದ್-ಇ-ಆಝಮರಿಂದ ಧಾಳಿಯ ಆಜ್ಞೆಗಳು ಎಂದಿಗೆ ಬರುವವು' ಎಂದು. ಅಖಂಡ ಹಿಂದುಸ್ಥಾನ ರೀತಿಯ ರಾಜ್ಯಾಂಗ ರಚನೆಯಾದಲ್ಲಿ ಖಡ್ಗ ಹಿರಿದು ಆಡಕ್ಕಿದಿರುಬಿದ್ದು ಹೋರಾಡುವದೊಂದೇ ಹೊರತು ಅನ್ಯೋಪಾಯ ಮುಸಲ್ಮಾನರಿಗಿಲ್ಲ."—ಗಡಿನಾಡು ಪ್ರಾಂತ್ಯದ ಖಾನ್ ಅಬ್ದುಲ್ ಕ್ವಯಮ್ ಖಾನ್.

ಹಿಂದುಗಳು ಅವರ ಗುಲಾಮರಂತೆ!

"ಕಾಂಗ್ರೆಸ್ ಅಧ್ಯಕ್ಷರೂ ಪಂಜಾಬು ಗವರ್ನರರೂ, ಗೊಂಜೆ ಮುಸಲ್ಮಾನರನ್ನೆತ್ತಿ ಕಟ್ಟಿ ಪಂಜಾಬಿನಲ್ಲಿ ಲೀಗನ್ನು

CANARA BANK LIMITED

Estd: 1906

(Incorporated in British India. Liability of Members Limited.)

SEASON DEPOSITS.

of Rs. 10000 – and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	...	2½%
6 to 9 months	....	2¾%

Rates for Season Deposits of less than Rs 10000/- with a minimum of Rs. 1000/- and in multiples of Rs. 500/- may be ascertained on application to our nearest branch.



Approved firm by the Govt. of Mysore. Certified by the Agent of the Govt. of Cylone Indian.

ವಿವಿಧ ಪಾತ್ರೆಗಳು



ಊಟಪಾತ್ರ, ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಜಿ ವ್ಯಾಪಾರಾಲಯ,

ರಥಬೀದಿ, ಉಡುಪಿ.

ಹಿಂದೆಗಾಕಿದರೂ ನಾವು ಬಿಡುವಂತಿಲ್ಲ"–ಪಂಜಾಬಿನ ಮಮ್ದೋತ್ ನವಾಬ್.

"ಏನೇ ಬಂದರೂ ಮುಸಲ್ಮಾನರು ಹಿಂದೂ ರಾಜ್ಯಾಧೀನವಾಗುವಂತಿಲ್ಲ. 300 ವರುಷಗಳಿಗೆ ಮಿಕ್ಕ ಮುಸಲ್ಮಾನರು ಯಾರನ್ನು ಆಳಿದ್ದರೋ ಆ ಗುಲಾಮ ಜನತೆಯ ಸ್ವಾಧೀನಕ್ಕೆ ಮುಸಲ್ಮಾನರನ್ನು ಬಿಟ್ಟು ಕೊಡಲು ಬ್ರಿಟಿಶರಿಗೆ ಹಕ್ಕಿಲ್ಲ"-ಬೊಂಬಾಯಿಯ ಮಿ. ಚಾಂದ್ರಿಗಾರ್.

"ಭಾರತದ ಮುಸಲ್ಮಾನರೀಗ ಒಂದು 'ಜಿಹಾದ'ನಲ್ಲಿ ಸಿಕ್ಕಿಕೊಂಡಿದ್ದಾರೆ. ಪಾಕಿಸ್ಥಾನವೊಂದೇ ಪರಿಹಾರ"-ಮದ್ರಾಸಿನ ಮಹಮ್ಮದ್ ಇಸ್ಮಾಯಿಲ್

"ಪಾಕಿಸ್ತಾನ ಪಡೆಯುವ ಹೋರಾಟದಲ್ಲಿ ಸರ್ವ ತ್ಯಾಗಕ್ಕೂ ಮುಸ್ಲಿಂ ಮಹಿಳೆ ತಯಾರಿದ್ದಾಳೆ"-ಸಂಯುಕ್ತ ಪ್ರಾಂತ್ಯದ ಬೇಗಮ್ ಅಯ್ಜುಜ್ ರಾಸೂಲ್.

"ಬ್ರಿಟಿಶರು ಅಖಂಡ ಹಿಂದುಸ್ಥಾನ ಸ್ಥಾಪಿಸಲು ಹೊರಟರೆ, ಪಾಕಿಸ್ತಾನಕ್ಕಾಗಿ ಶಸ್ತ್ರಧಾರಿಗಳಾಗಿರೆಂದು, ತಮ್ಮ ಗಂಡಂದಿರು ಮತ್ತು ಮಕ್ಕಳನ್ನು ಮುಸ್ಲಿಂ ಮಹಿಳೆಯರು ಎಬ್ಬಿಸಲಿದ್ದಾರೆ. ಮತ್ತು ತಮ್ಮ ಪುರುಷರ ಜತೆಯಲ್ಲೇ ನಿಂತು ಪಾಕಿಸ್ತಾನಕ್ಕಾಗಿ ಹೋರಾಡಲಿದ್ದಾರೆ"–ಪಂಜಾಬಿನ ಬೇಗಮ್ ಷಾನವಾಜ್

ಅವರ ಭುಜ ಸ್ಫುರಿಸುತ್ತಿದೆ!

"ನ್ಯಾಯ ಮತ್ತು ಸಮಾನತೆಯಿಂದ ಆಗದ ಕೆಲಸವು ಝಳಪಿಸುವ ಉಕ್ಕಿನಿಂದಾಗಲಿದೆ. 'ಅಖಂಡ ಭಾರತ'ದ ಹೋರಾಟವು ಸುಲಿಗೆಯ ಸಮರ, ಅಧಿಕಾರ ಮತ್ತು ಅನ್ಯಾಯ ಸಾಧನೆಯ ಹೋರಾಟ. ಪಾಕಿಸ್ತಾನ್ ಸಾಧನೆಯ ಯಾವ ಕಾರ್ಯಕ್ಕಾದರೂ ಬಂಗಾಳವು ತಯಾರಾಗಿ ನಿಂತಿದೆ"-ಬಂಗಾಳ ಪ್ರಾಂತಿಕ ಲೀಗ್ ಕಾರ್ಯದರ್ಶಿ ಮಿ. ಅಬ್ದುಲ್ ಹಾಶಿಮ್.

"ನಾನು ಪಂಜಾಬಿನ ಯೋಧ ವರ್ಗದ ಪ್ರತಿನಿಧಿ. ಪಾಕಿಸ್ತಾನ್ ಹೋರಾಟ ಕೊಡಲು ಪಂಜಾಬು ಅತ್ಯಾತುರದಿಂದಿದೆ. ನಮಗೊಂದು ಸಂದರ್ಭ ಮಾತ್ರ ದೊರಕಿಸಿ ಕೊಡಿ. ಬ್ರಿಟಿಷ್ ಸೇನೆಯು ಇಲ್ಲಿಂದ ಹೊತ್ತಿನಲ್ಲೇ ನಾವೊಂದು ತರಬೇತಿ ಪ್ರದರ್ಶನ ನಡೆಸಿ ಬಿಡುತ್ತೇವೆ. ಹಿಂದೂ ಮತ್ತು ಮುಸ್ಲಿಂ ಗೂಂಡೆಗಳ ಸಹಾಯದಿಂದ. ಪಂಜಾಬಿನಲ್ಲಿ ಈಗ ಇರುವ ಅಪಾತ್ರಗಳ ಸರಕಾರವು ಕಿತ್ತೊಗೆಯಲ್ಪಡುವ ಚಂದವನ್ನು ಆಮೇಲೆ ಕಾಣಲಿರುವಿರಿ"–ಪಂಜಾಬಿನ ಶೌಕತ್ ಹಯಾತ್ ಖಾನ್.

ಅವರ ಬೆಂಬಲವಾಗಿ ರಕ್ತವಿದೆ?

"ಹಿಂದುಗಳು ಪಾಕಿಸ್ತಾನ ಕೊಟ್ಟರೆ ಅವರು ನಮ್ಮ ಸನ್ಮಿತ್ರರು. ಬ್ರಿಟಿಶರು ಪಾಕಿಸ್ತಾನ ಕೊಡುವವರಾದರೆ ಆಗ ಅವರು ನಮ್ಮ ಮಿತ್ರರು. ಇವರಿಬ್ಬರಲ್ಲಿ ಯಾರೂ ನಮಗೆ ಪಾಕಿಸ್ತಾನ ಕೊಡದೆ ಹೋದರೆ ಆಗ ರಕ್ತವು ನಮಗದನ್ನು ಕೊಡಲಿದೆ. ನಮ್ಮ ಮಕ್ಕಳುಮರಿಗಳು ಎಂದೆಂದಿಗೂ ಅಖಂಡ ಹಿಂದುಸ್ಥಾನದ ಗುಲಾಮರಾಗದಂತೆ ನಾವು ನೋಡಬೇಕಾಗಿದೆ. ಕೇಂದ್ರ ಸರಕಾರ ಅಥವಾ ಹಿಂದೂ ರಾಜ್ಯದ ಹಸ್ತಕ್ಕೆ ನಮ್ಮನ್ನೊಪ್ಪಿಸಿದ್ದಕ್ಕಾಗಿ ಬ್ರಿಟಿಶರೊಡನೆ ನಾವು ಹೋರಾಡಬೇಕಾಗಿ ಬಂದರೆ ಆಗ ಮುಸಲ್ಮಾನರೆಬ್ಬಿಸಲಿರುವ ಘೋರದ ಅನಾಹುತದಿದಿರು ಚೆಂಗಿಜ್‌ಖಾನ್ ಮತ್ತು ಹಾಲಕರು ಮಾಡಿದ್ದುದು ಬರಿಯ ಆಟದಂತೆ ಕಾಣಬಹುದು! ಮುಸಲ್ಮಾನರ ಪಾಲಿಗೀಗ ರಕ್ತದ ಕಡೆಗೆ ನೋಡುವದೊಂದೇ ಉಳಿದಿದೆ. ಪಂಜಾಬಿನಲ್ಲಿ ಜಮೀನ್ದಾರರ ಸಮೇತ ಎಲ್ಲರೂ ಇಷ್ಟರಲ್ಲೇ ಕಮ್ಯೂನಿಸಮಿಗೊಲಿಯ ಹತ್ತಿದ್ದಾರೆ. ಎಂತಹ ಬೆಲೆ ತೆತ್ತಾದರೂ ಪಾಕಿಸ್ತಾನವನ್ನು ಸಂಪಾದಿಸಿಯೇ ತೀರಬೇಕೆಂಬ ಮುಸಲ್ಮಾನರ ಭಾವನೆಯನ್ನು ಅಳಿಸುವೆ ಎಂಬ ಗುಟ್ಟನ್ನು ಹಿಂದುಗಳಾಗಲೀ ಬ್ರಿಟಿಶರಾಗಲೀ ಇನ್ನೂ ಅರಿತಿಲ್ಲವೆಂಬುದು ಅತ್ಯಂತ ಶೋಚನೀಯ. ಪಾಕಿಸ್ತಾನಕ್ಕೆ ಪ್ರತಿಬಂಧವಾಗಿ ದೇಶರಕ್ಷಣೆಯ ಪ್ರಶ್ನೆಯನ್ನು ಮುಂದಿಡಲಾಗುತ್ತಿದೆ. 2 ಮಿಲಿಯಕ್ಕೂ ಕಡಿಮೆ ಸಂಖ್ಯೆಯ ನ್ಯೂಜೀಲೇಂಡು, 7 ಮಿಲಿಯ ಕ್ಕೂ ಕಡಿಮೆ ಜನರಿರುವ ಆಸ್ಟ್ರೇಲಿಯವು ಸ್ವತಂತ್ರವಾಗಿ, ಸ್ವರಕ್ಷಣಮಾಡಿಕೊಳ್ಳಬಲ್ಲುವಾದರೆ 70 ಮಿಲಿಯ ಮಂದಿಯಿದ್ದು, ಉಪಕರಣಾನುಕೂಲತೆಯಿರುವ ಪಾಕಿಸ್ತಾನವು ತನ್ನನ್ನು ತಾನು ರಕ್ಷಿಸಿಕೊಳ್ಳಲಾರದೆ? ಹಿಂದೀ ಸೇನೆಯ ಬಹುಸಂಖ್ಯಾಕರು ಪಂಜಾಬಿನವರು ಆದ್ದರಿಂದ ಸ್ವರಕ್ಷಣೆಯ ಸಮಸ್ಯೆಯೊದ "ಶೇಷ ಹಿಂದುಸ್ಥಾನಕ್ಕೆ ಹೊರತು ಪಾಕಿಸ್ತಾನಕ್ಕಲ್ಲ"-ಈ ಮೊದಲು ಲಂಡನಿನಲ್ಲಿ ಭಾರತೀಯ ಹೈಕಮಿಶನರ್ ಮತ್ತು ವೈಸರಾಯ ಕೌನ್ಸಿಲ್ ಸದಸ್ಯರಾಗಿದ್ದ ಸರ್. ಫಿರೋಜ್‌ಖಾನ್‌ನೂನ್.

ಲೀಗ್ ಘರ್ಜನೆಗೆ ಸಿಖ್ಖರ ಪ್ರತಿಭಟನೆ!

ಸರ್ದಾರ್ ಸಂತಸಿಂಗರ ಖಂಡತುಂಡ ಉತ್ತರ

ಮುಸ್ಲಿಂ 'ಲೀಗ' ಪ್ರಮುಖರ ತುದಿ ಮೊದಲಿಲ್ಲದ ಪೌರುಷ ವಾಣಿಗಳನ್ನು ಕಂಠದಲ್ಲೇ ಒಣಗಿಸಿ ಬಿಡುವ ಬಿಸಿ ಬಿಸಿಯುತ್ತರವು ಸಿಖ್ ನಾಯಕ ಸರ್ದಾರ ಸಂತ ಸಿಂಗರಿಂದ ಬಂದಿದೆ. ಸರ್ದಾರರು ಹಿಂದೀ ವ್ಯಾಪಾರ ಸಮಿತಿ ಸದಸ್ಯರಾಗಿ ವಾಷಿಂಗ್ಟನಿಗೆ ತೆರಳಿ, ಅಲ್ಲಿಂದ ಹಿಂದುಸ್ಥಾನಕ್ಕಾಗಿ ಹೊರಟವರು ಲಂಡನಿಗೆ ಮರಳಿದ್ದರು. ತಾ. 11ರಲ್ಲಿ ಲಂಡನಿನಲ್ಲಿ ಜರಗಿದ ಅಮೃತಸರ ದಿನಾಚರಣೆಯಲ್ಲೂ ಮರುದಿನವೂ ಸರ್ದಾರ್ ಸಿಂಗರು ಲೀಗ್ ಪುಢಾರಿಗಳ ಯುದ್ಧಾಹ್ವಾನವನ್ನು ಸ್ವೀಕರಿಸಿ ಸದ್ದು ಹೊಡೆದಿದ್ದಾರೆ. ಲೀಗ್ ದರ್ಪವನ್ನು ಖಂಡಿಸುವಾಗ ಸರ್ದಾರರ ಬಿಳಿ ರುಮಾಲು ಸುತ್ತಿದ ತಲೆಯು ಆವೇಶದಿಂದ ಅಲೆದಾಡುತಿತ್ತಲ್ಲದೆ, ಹೆಬ್ಬೆಟ್ಟಿನಿಂದ ಮೇಜಿಗೆ ಬಡೆದು, ಪ್ರತಿ ಘರ್ಜನೆ ಕೊಟ್ಟು ಅವರು ಸಿಖ್ಖರ ದೃಢ ಶಪಥವೇನೆಂಬುದನ್ನು ಮುಂದಿಟ್ಟು ಪಠಿಸಿದರು.

ಸರ್ದಾರರ ಘೋಷವಾಣಿ-

"ಮಿ. ಜಿನ್ನಾ ಮತ್ತು ಸರ್. ಫಿರೋಜ್ ಖಾನ್‌ನೂನರ ಇತ್ತೀಚಿನ ಮಾತುಗಳ ಯೋಗ್ಯತೆಗೆ ತಕ್ಕ ಧಿಕ್ಕಾರವು ಅವಕ್ಕೆ ಸಲಲೇ ಬೇಕು. ಈ ಮೊದಲೆಂದಿಗೂ ಹಿಂದುಸ್ಥಾನವು ರಷ್ಯಾ, ಜಪಾನ್ ಅಥವಾ ಜರ್ಮನಿಗಳ ಕಡೆಗೆ ಸಹಾಯಕ್ಕಾಗಿ ಕಣ್ಣು ನೀಡಿದುದಿಲ್ಲ. ಈಗ ಕೂಡಾ ನಾವು ಕಡೆಗೆ ಸಹಾಯಕ್ಕಾಗಿ ನೋಡುವಂತಿಲ್ಲ. ಹಿಂದುಸ್ಥಾ[illegible]ವೆದ್ದರೆ ಅದರ ತೊಂದರೆ ಬ್ರಿಟಿಶರಿಗೆ ಮಾತ್ರ. ಲೋಕವೆಲ್ಲಾ ಕಾಡುಸ್ಥಿತಿಯಲ್ಲಿದ್ದಾಗ ತಾವು ನಾಗರಿಕರಾಗಿದ್ದೆವೆಂದು ಯುರೋಪು ಮತ್ತು ಅಮೇರಿಕದವರು ಕಳೆದ ನೂರು ವರುಷಗಳಿಂದಲೂ ಹೇಳುತ್ತಾ ಬರುತಿದ್ದಾರೆ. ಅವರು ನಾಗರಿಕರಾಗಿದ್ದಲ್ಲಿ, ಎರಡು ಲೋಕ ಯುದ್ಧಗಳಲ್ಲಿ ಮಿಲಿಯಾವಧಿ ಜನರನ್ನು ಕೊಂದು, ಕೈಗಾರಿಕೆ, ಆಸ್ತಿಗಳನ್ನೆಲ್ಲಾ ನಿರ್ನಾಮ ಮಾಡಿದುದೇಕೆ?

ಪಾಕಿಸ್ತಾನ ಕೊಟ್ಟರೆ ಅದನ್ನು ಪುನಃ ಗೆಲ್ಲುವವರೆಗೂ ಹೋರಾಟ!

ಬ್ರಿಟಿಶರಿಂದ ಪಾಕಿಸ್ತಾನವು ದೊರೆತರೆ ಪಂಜಾಬಿನ ಮುಸ್ಲಿಂ ರಾಜ್ಯವನ್ನು ನನ್ನ ಸಮಾಜವು ಅಂಗೀಕರಿಸುವಂತಿಲ್ಲ; ಎಂದೆಂದಿಗೂ ಅದನ್ನೊಪ್ಪುವಂತಿಲ್ಲ. ಬ್ರಿಟಿಶರು ಪಾಕಿಸ್ತಾನ ಕೊಟ್ಟ ದಿನದಲ್ಲೇ ಭಾರತದಲ್ಲಿ ಪ್ರಾರಂಭವಾಗುವ ಒಂದು ಅಂತರ್ಯುದ್ಧವು, ಪಾಕಿಸ್ತಾನ್ ಪ್ರದೇಶಗಳನ್ನು ಪುನಃ ಗೆದ್ದು, ಅವುಗಳನ್ನು ಭಾರತದೊಡನೆ ಮರುಜೋಡಣೆಗೊಳಿಸುವ ವರೆಗೂ ಮುಂದೊತ್ತಲಿದೆ. ಪಾಕಿಸ್ತಾನವು

(೬ನೇ ಪುಟ ನೋಡಿರಿ)

S. V. H. High School
Innanje. (Residential)

WANTED

(1) Four trained graduates who can teach English, Mathem-atics, Science, History and Geography.

Scale: Rs 70-5/2-110

Dearness allowance: Rs13-0-0 per month.

(2) One Higher Grade Drawing Instructor

Scale: Rs. 30-2/2-50.

Dearness allowance: Rs. 10 0 0 per month.

(3) An Instructor in weaving who has completed III Form of a Secondary School or the VIII Standard of a Higher Elementary School and who has completed the artisan course in weaving in the Govt. Textile Institute, Madras or a training course in any other Institution approved by the Advisor to the Govt. on Manual Training or has a Technical Teachers' Certificate of the Lower Grade in weaving.

Scale: Rs. 30 – 2/2 – 50.

Dearness allowance: Rs. 10/- per month.

Previous service will be taken into consideration while starting the initial salary.

Quarters will be provided in the school compound itself if needed.

Headmaster.

THE

UNITED KARNATAK INSURANCE Co., Ltd.

H. O. DHARWAR. ESTD 1929.

GLAD TO ANNOUNCE A BUSINESS

INCREASE OF 400

OVER LAST YEARS FIGURE

We invite applications from young, energetic and ambitious persons for the post of **Organisers, Inspectors** and **Branch Managers** etc.

DHARWAR, 5—2—1946

A. S. KINI.
Managing Director.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಿಗಿದ್ದರೂ, ಶಕ್ತಿ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಿದ್ದರೂ-- 'ಕಾವಡಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ -ಹಿಂದಿನಂತೆಯೇ, ಅಸ್ವಾಭಾವಿಕವಾಗಿ, ಕೆಲವೇ ಗಂಟೆಗಳಲ್ಲಿ ಮುಟ್ಟಾಗಿಸುವುದು, ಎರಡಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ಕೃತಜ್ಞರಾಗಿದ್ದಾರೆ! ಬೆಲೆ ರೂ. 3. ಶೈಘ್ರದ ಕೇಸುಗಳಿಗೆ ರೂ. 5. ಎರಡು ತಿಂಗಳ ಮೀರಿದ ಕಂಟ್ರೋಲಿಗೆ ರೂ. 4½. (ಪ. ಪಿ. 12 ಆಣೆ ಅಧಿಕವು.)

Mrs. P. DEVEE,
P. B. (A P), Tollygunge, Calcutta
ಸ್ಟಾಕಿಸ್ಟ್: ಪೈ ಕಂಪೆನಿ, ಮಂಗಳೂರು

The Canara Banking Corporation Limited.

(Incorporated in British India, with limited Liability)

Estd: 1906

Head Office: **UDIPI**, South Kanara.

ANNOUNCEMENT.

A Branch of the Bank has been opened **at SALEM TOWN on 11—4—1946.**

A Branch of the Bank will shortly be **opened at BYADGI.**

ಉಡುಪಿ, ಗುರುವಾರ, ೧೮-೪-'೪೬

ರಾಜಾಜಿ ಮತ್ತೊಮ್ಮೆ?

ಕೇಂದ್ರಾಧಿಕಾರವನ್ನು ತನ್ನಲ್ಲಿ ಆವಾಹನೆಮಾಡಿಕೊಳ್ಳುವ ನಡುಕವನ್ನು ಹಿಂದೂದೇಶವನುಭವಿಸುತ್ತಿರುವ ಈ ಕಾಲದಲ್ಲಾದರೂ ಪ್ರಾಂತಿಕಾಧಿಕಾರದ ಸುಖಾನುಭವವು ಅದಕ್ಕಾಗದೆ ಹೋಗಿಲ್ಲ. ಹೆಚ್ಚಿನ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ಅಧಿಕಾರ ವಹಿಸಿದ್ದಾರೆ. ಲೋರ್ಡ್ ವೇವೆಲ್, ಲೋರ್ಡ್ ಪೆಥಿಕ್ ಲಾರೆನ್ಸರಂತಹ ವೃದ್ಧ ಧೋರಣೆಯ ಅಧಿಕಾರಿಗಳಿಂದ ಕೂಡಾ 'ಬಿಡಲಾಗುವದಿಲ್ಲ' ಎಂದು ಹೇಳಿಸಿಕೊಂಡ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡುತಿದ್ದಾರೆ; ಪರಕೀಯ ಮನೋವೃತ್ತಿಗಸಾಧ್ಯವಾದುದು ಸ್ವಕೀಯ ಮನೋವೃತ್ತಿಗೆ ಸುಲಭ ಸಾಧ್ಯವೆಂಬುದನ್ನು ತೋರಿಸುತಿದ್ದಾರೆ. ಜೈ ಪ್ರಕಾಶ್, ಲೋಹಿಯಾ, ಪಟವರ್ಧನ್, ಚೌಧರಿ ಮತ್ತು ನೂರಾರು ರಾಜಕೀಯ ಕೈದಿಗಳು ಇಷ್ಟರಲ್ಲೇ ಹೊರಗೆ ಬಂದಿದ್ದಾರೆ ಈ ರೀತಿ ಪೀಠಿಕೆಯೇ ಆಕರ್ಷಣೀಯವಿರುವಾಗ, ಮುಂದಕ್ಕಂತೂ ಜನತೆಯು ಕಾಂಗ್ರೆಸ್ ಸರಕಾರಗಳಿಂದ 'ಅದ್ಭುತ'ವನ್ನೇ ನಿರೀಕ್ಷಿಸಬೇಕು. ಸ್ವಹಿತ ಸಾಧನೆಗಾಗಿ ಸಮಾಜ ಸುಧಾರಕರಾಗಿಯೋ ಜನಜೀವನೋದ್ಧಾರಕರಾಗಿಯೋ ಮುಂದೆ ಬಂದು ತಮ್ಮಾಟವಾಡುತ್ತಿರುವವರ ಸ್ಥಾನಗಳನ್ನು ಕಾಂಗ್ರೆಸ್ ಸರಕಾರಗಳಾಕ್ರಮಿಸಿಕೊಂಡು ಗುರಿಯತ್ತ ನಿಜಕ್ಕೂ ಮುಂದೊತ್ತಲಿವೆ. ಮದ್ಯಪಾನ ನಿಷೇಧ, ಅಸ್ಪರ್ಶತಾ ನಿವಾರಣೆ (ಬೊಂಬಾಯಿ ಸರಕಾರವು ಅಸ್ಪರ್ಶತೆಯನ್ನು ತಪ್ಪಾಗಿ ಮಾಡಬೇಕೆಂಬ ಯೋಚನೆಗೆ ಇಷ್ಟರಲ್ಲೇ ಆರಂಭಿಸಿದೆ) 'ಸಟ್ಟಾ'ದಂತಹ ಜೂಗಾರ ಮತ್ತು ಅನಪ್ರಯಗಳಿಗೆ ಸ್ಪಷ್ಟ ನಿಷೇಧ, ಅಧಿಕಾರಿಗಳ ಲಂಚಗುಳಿತನ ಮತ್ತು ವ್ಯಾಪಾರಿಗಳ ಲಾಭಬೋರತನಗಳಿಗೆ ಪ್ರತಿಬಂಧ, ಇತ್ಯಾದಿಗಳು ನಿರ್ದಾಕ್ಷಿಣ್ಯವಾಗಿ ಜಾರಿಗೆ ಬರಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಸಾಗುವಳಿಗಾರರಿಗೇನೇ ಆಸ್ತಿಯ ಹಕ್ಕಿರುವ ಗುರಿ ಮುಟ್ಟಲು ರೈತ್ವಾರೀ ಪದ್ಧತಿಯಲ್ಲಿ ಕ್ರಾಂತಿಕರ ಸುಧಾರಣೆಯಾಗುವದೆಂಬುದನ್ನೂ, ದೇಶದ ಮುಖ್ಯ ಕೈಗಾರಿಕೆ ಮತ್ತು ಉದ್ಯಮ ಸಂಸ್ಥೆಗಳ ರಾಷ್ಟ್ರೀಕರಣವಾಗುವದೆಂಬುದನ್ನೂ ಸಂಬಂಧಪಟ್ಟವರು ಅಗತ್ಯವಾಗಿ ಗಮನಿಸಬೇಕು. ಭವಿಷ್ಯತ್ಕಾಲವೇನನ್ನೇ ತಂದರೂ ಈ ಬಾರಿಯ ಕಾಂಗ್ರೆಸ್ ಸರಕಾರಗಳು, 1937ರವುಗಳಂತೆ ಅಲ್ಪಾಯುಷಿಗಳಾಗುವ ಸಂಭವವಿಲ್ಲವಾದ್ದರಿಂದ ಜನ ಜೀವನದಲ್ಲಿ ಕ್ರಾಂತಿಕಾರೀ ಬದಲಾವಣೆ ಮಾಡುವವರೆಗೂ ಅವುಗಳಿಗೆ ಬಾಳುವೆಯಿರುವದು ನಿಸ್ಸಂದೇಹ. ಆದ್ದರಿಂದ ಒಂದೋ ಜಮೀನ್ದಾರರ, ಲಂಚ ಖೋರರ, ಸಂಪ್ರದಾಯವಾದಿಗಳ ಕಾಲ ಕಳೆಯಿತೆಂದು ಭಾವಿಸಬೇಕು. ಇಲ್ಲವೇ ಅವುಗಳ ಸಾಲಿಗೆ 'ಕಾಂಗ್ರೆಸಿಗರು' ಎಂಬ ಹೊಸ ವರ್ಗವೊಂದು ಸೇರಿತೆಂದು ಭಾವಿಸಬೇಕು! ಆದರೆ ಕೊನೆಯ ಪಕ್ಷ ಶೇಕಡಾ ೫೦ರಷ್ಟಾದರೂ ಮೊದಲನೆಯದೇ ಸಂಭವಿಸಬಹುದು ಹೊರತು ಎರಡನೆಯದಾಗದು!

ಆದರೆ ಮದ್ರಾಸ್ ಪ್ರಾಂತ್ಯದ ಹೆಜ್ಜೆ ಈ ಭಾಗದಲ್ಲೂ ಹಿಂದೆ ಬಿದ್ದಿದೆ. ನಮ್ಮ ಮುಂದಿನ ಅಧಿಕಾರಿಗಳು ಕಾಂಗ್ರೆಸಿಗರೆಂಬುದು ಚುನಾವಣೆಗೆ ಮೊದಲೇ ಗೊತ್ತಿದ್ದ ವಿಷಯ; ಆದರೆ ಕಾಂಗ್ರೆಸಿಗರ ಪೈಕಿ ಯಾರು ಎಂಬುದು ಈ ದಿನದ ವರೆಗೂ ಗೊತ್ತಾಗಿಲ್ಲ. ಇಂದು (ತಾ. 18) ಮದ್ರಾಸಿನಲ್ಲಿ ಸೇರುವ ಕಾಂಗ್ರೆಸ್ ಎಂ. ಎಲ್. ಎ ಗಳ ಸಭೆಯು ಅದನ್ನು ನಿಶ್ಚೈಸಲಿದೆಯಾದರೂ, ಈ ಸಂಬಂಧವಾಗಿ ತೆರೆಯ ಮರೆಯಲ್ಲಿ ನಡೆದ ನಾಟಕವು ವಿಮರ್ಶನ ತಕ್ಕಂತಹದಿದೆ. ಮದ್ರಾಸ್ ಕಾಂಗ್ರೆಸ್ ಪಕ್ಷದ ನಾಯಕ ಅಥವಾ ಮದ್ರಾಸಿನ ಪ್ರಧಾನಿಯನ್ನು ಆರಿಸಿಕೊಳ್ಳುವ ಅಧಿಕಾರವು ಆ ಪಕ್ಷದ ಸದಸ್ಯರದ್ದೇ ಅದಕ್ಕಾರೂ ಲೋಪವೊದ್ದಿಲ್ಲವಾದರೂ ಈ ಕುರಿತು ಸಲಹೆ ಕೊಡುವ ನಿಯಮಬದ್ಧ ಆವಶ್ಯಕತೆಯು ಕಾಂಗ್ರೆಸ್ 'ಹೈಕಮಾಂಡ'ಗೇ ನಿತ್ತೋರಿ ತಮಿಳುನಾಡು, ಆಂಧ್ರ ಮತ್ತು ಕೇರಳ ಪ್ರಾಂತ್ಯಗಳ ಕಾಂಗ್ರೆಸ್ ನಾಯಕರು ಕಾಂಗ್ರೆಸ್ ಪಾರ್ಲಿಮೆಂಟರಿ ಅಧಿಪತಿ ಸರ್ದಾರ್ ವಲ್ಲಭಾಯಿಗಳ ಉಪದೇಶ ಪಡೆಯಲು ಬೊಂಬಾಯಿಗೆ ಹೋಗಿದ್ದರು. ಅಲ್ಲಿಯೂ ಕೆಲಸ ಪೂರ್ಣಗೊಳ್ಳದೆ ದಿಲ್ಲಿಗೆ ಹೋಗಬೇಕಾದುದರಿಂದ ಮದ್ರಾಸಿನಲ್ಲಿ ಕರೆದಿದ್ದ ಕಾಂಗ್ರೆಸ್ ಪಕ್ಷದ ಸಭೆ ಮುಂದುವರಿಯಬೇಕಾಯಿತು. ರಾಷ್ಟ್ರಪತಿಯ ಬಾಯ್ಮರೆ ಮತ್ತು ಬರಹರೂಪಿ ಸಲಹೆ ಪಡೆದು ಈಗ ಮದ್ರಾಸ್ ಪ್ರಮುಖರೆಲ್ಲಾ ಮರಳಿದ್ದಾರೆ. ಕಷ್ಟದಾಯಿಯಾದ ಹಾಗೂ ಶಕ್ತಿ ಪರೀಕ್ಷಿಸುವ ಕಠಿಣ ಕಾಲ ಮುಂದಿನದು. ಈ ಸಂದರ್ಭದಲ್ಲಿ ರಾಷ್ಟ್ರದ ಮತ್ತು ಪ್ರಾಂತ್ಯದ ಹಿತದೃಷ್ಟಿಯಿಂದ ಸಾಧ್ಯವಿದ್ದಷ್ಟು 1937ರ ಮಂತ್ರಿ ಮಂಡಲವನ್ನೇ ಪ್ರತಿಯೊಂದು ಪ್ರಾಂತ್ಯದಲ್ಲೂ ಪುನಃಸ್ಥಾಪನೆ ಮಾಡಬೇಕೆಂದು ನನ್ನ, ಗಾಂಧೀಜೀಯ ಮತ್ತು ಸರ್ದಾರ್ ಪಟೇಲರ ಅಭಿಪ್ರಾಯ. ಆದ್ದರಿಂದ ಶ್ರೀ. ಸಿ. ರಾಜಗೋಪಾಲಾಚಾರ್ಯರನ್ನೇ ನೀವು ಈ ಬಾರಿಯೂ ಪಕ್ಷ ನಾಯಕನಾಗಿ ಆರಿಸಿಕೊಳ್ಳಬೇಕು. ಈ ಕಾಲದಲ್ಲಿ ರಾಜಾಜಿಯಂತಹ ವಿಶೇಷ ಶಕ್ತಿ ಸಂಪನ್ನನಿರುವದು ಅಗತ್ಯ ಎಂದು ಮೌಲಾನಾ ಅಜಾದರು ಮದ್ರಾಸ್ ಕಾಂಗ್ರೆಸಿಗರನ್ನು ಬಾಯ್ದೆರೆಯಾಗಿ ಒತ್ತಾಯಿಸಿದ್ದರು. 'ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿದ ನಾನು ಶ್ರೀ. ಸಿ. ರಾಜಗೋಪಾಲಾಚಾರ್ಯರನ್ನೇ ಪಕ್ಷನಾಯಕನಾಗಿ ಚುನಾಯಿಸಿಕೊಳ್ಳಬೇಕೆಂಬ ಸಲಹೆ ಕೊಡುತ್ತೇನೆ. ಮಹಾತ್ಮಾ ಗಾಂಧಿ ಮತ್ತು ಸರ್ದಾರ್ ವಲ್ಲಭಾಯಿ ಪಟೇಲರ ಅಭಿಪ್ರಾಯವೂ ಇದೇ. ಆದರೆ ನಾವು ನಮ್ಮ ಸಲಹೆಯನ್ನು ನಿಮ್ಮ ಮೇಲೆ ಒತ್ತಾಯದಿಂದ ಹೇರಲಿಚ್ಛಿಸುವದಿಲ್ಲ. ಪಕ್ಷದ ಬಹುಸಂಖ್ಯಾಕರಿಗೆ ನಮ್ಮ ಸಲಹೆ ಅನನುಕರಣೀಯವೆಂದು ತೋರಿದರೆ, ಸ್ವಂತ ಜವಾಬ್ದಾರಿಯಿಂದ ತನ್ನದೇ ಆದ ನಿರ್ಧಾರಮಾಡಲು ಅದು ಸ್ವತಂತ್ರವಿದೆ' ಎಂಬು ತಾ. 18ರಲ್ಲಿ ಪಕ್ಷದ ಸಭೆ ಕೂಡುವ ಸದಸ್ಯರಿಗಾಗಿ ಒಂದು ಸಂದೇಶವನ್ನೂ ರಾಷ್ಟ್ರಪತಿ ಅಜಾದರು ತಂತೀ ಮೂಲಕ ಕಳುಹಿದ್ದಾರೆ. ಕಾಂಗ್ರೆಸ್ ಸೂತ್ರಧಾರಿಗಳಿಗೆ ಇಂತಹ ಸಲಹೆ ಕೊಡುವ ಅಧಿಕಾರವಿದೆಯಾದರೂ ಅಗತ್ಯವೇನಿದೆ? ರಾಜಾಜೀ ನಾಯಕತ್ವದ ಸಂಬಂಧದ ಇತರ ವಿವಾದಗಳಂತಿರಲಿ. ಈ ಬಾರಿ ಅವರು ಚುನಾವಣೆಗೇನೇ ನಿಂತಿಲ್ಲ. ಹಿಂದಿನಂತೆಯೇ ಈ ಬಾರಿಯೂ ವಿಶ್ವವಿದ್ಯಾಲಯದ ಸ್ಥಾನಕ್ಕೆ, ಕಾಂಗ್ರೆಸು ಪಾರ್ಲಿಮೆಂಟರೀ ಬೋರ್ಡು ಅವರನ್ನು ನೇಮಿಸಿದಾಗ ರಾಜಾಜೀ ನೈಯ್ಯಾರ ಮತ್ತು ವೈರಾಗ್ಯವನ್ನು ಒಟ್ಟೊಟ್ಟಿಗೆ ಪ್ರದರ್ಶಿಸಿ ತಪ್ಪಿಸಿಕೊಂಡಿದ್ದರು. ಇನ್ನವರು ಎಸೆಂಬ್ಲಿ ಪಕ್ಷ ನಾಯಕ ಮತ್ತು ಪ್ರಧಾನಿಯಾಗಬೇಕಾದರೆ ಒಂದೋ ಕೌನ್ಸಿಲಿಗೆ ನಾಮಕರಣ ಹೊಂದಬೇಕು; ಇಲ್ಲವೇ ಎಸೆಂಬ್ಲಿಯ ಯಾವುದಾದರೊಂದು ಸ್ಥಾನವನ್ನು ಆಚಾರ್ಯರಿಗೆ ಬಿಟ್ಟು ಕೊಡಲು ಚುನಾಯಿತ ಸದಸ್ಯನೊಬ್ಬನು ರಾಜಿನಾಮೆ ಕೊಡಬೇಕು. ಎರಡನೆಯ ವಿಧಾನವನ್ನನುಸರಿಸುವಾಗ ಈ ತಿಂಗಳು ಕಳೆಯಬಹುದು. ಈ ತಿಂಗಳಾಂತ್ಯಕ್ಕೇನೇ ಮದ್ರಾಸಿನಲ್ಲಿ ಈಗ ಇರುವ 93ನೇ ಆಳ್ವಿಕೆಯ ಅವಧಿ ಮುಗಿಯಲಿದೆಯಾದ್ದರಿಂದ, ಅದರೊಳಗೆ ಮಂತ್ರಿ ಮಂಡಲ ರಚನೆಯಾಗದಿದ್ದರೆ 93ನೇ ಸೆಕ್ಷನಿಗೆ ಜೀವದಾನ ಮಾಡುವ ವಿಧಿಯು ಪಾರ್ಲಿಮೆಂಟಿನಲ್ಲಾಗಲೇ ಬೇಕಾಗುವದು ಇಷ್ಟೆಲ್ಲಾ ಅಡಚಣೆಗಳು ಮಿಕ್ಕವರಿಗೆ ತ್ರಾಸದಾಯಕವಾಗುವ ಮಾತಂತಿರಲಿ, ಆಗ ಕರೆದರೂ ಎಸೆಂಬ್ಲಿಗೆ ಬಾರಲೊಪ್ಪದ ರಾಜಾಜಿ, ಈಗ ಇಂತಹ ಹಿರುಬಾಗಿಲಿನಿಂದ ಒಳಗೆ ನುಸುಳಲಿಕ್ಕೂ ತಯಾರಾಗಿದ್ದಾರೆಯೇ? ಮದ್ರಾಸಿನ ಮತದಾರರ ಅಭಿಪ್ರಾಯದೊಡನೆ, ಘರ್ಷಣೆಗೆ ನಿಲ್ಲಲು, ರಾಜಾಜಿಯ ಮೇಲೆ ತಮಗಿರುವ ಮಮತೆಯನ್ನು ಕಾಂಗ್ರೆಸ್ ಪ್ರಮುಖರು ಮುಂದೊಡ್ಡಿದ್ದೇಕೆ? ಆಚಾರ್ಯರಂತಹ ಅತಿಚತುರನು ಬೇರಿಲ್ಲವೆಂಬ ಗಾಂಧೀ ಅಜಾದರ ಅಭಿಪ್ರಾಯವು ಸರ್ವಮಾನ್ಯ. ಆದರೆ ಪ್ರಾಂತಿಕಾಧಿಕಾರ ವಹಿಸಲು ಇಷ್ಟೇ ಶಕ್ತಿವಂತರು ಅಗತ್ಯವೆಂದಾದರೆ ರಾಜಾಜಿ ಸಂಘವರು ಪ್ರಧಾನಿಗಳಾಗಿರದ ಮಿಕ್ಕ ಕಾಂಗ್ರೆಸ್ ಪ್ರಾಂತ್ಯಗಳೆಲ್ಲಾ ನಿರರ್ಥಕವೆಂಬ ಅಭಿಪ್ರಾಯವ್ ಹಿಂದಿನಿಂದಿಮುವರೆಗಿನ ರಾಜಾಜಿಯ ವರ್ತನೆ ಮತ್ತು ಹಾವಭಾವ-ಮದ್ರಾಸಿನ ಜನತೆಯ ಮನೋವೃತ್ತಿ-ಪ್ರಾಂತ್ಯದ ಸೂತ್ರಧಾರಿಗಳಲ್ಲಿರಬೇಕಾದ ವಿಶ್ವಾಸ ಮತ್ತು ಯೋಗ್ಯತೆ, ಇವೆಲ್ಲವನ್ನು ಯೋಚಿಸುವಾಗ, ಮದ್ರಾಸ್ ಕಾಂಗ್ರೆಸ್ ಪಕ್ಷೀಯರ ಮೇಲೆ ಗಾಂಧೀ-ಅಜಾದ್-ಪಟೇಲರು ತಮ್ಮ ಅಭಿಪ್ರಾಯದ ಒತ್ತಾಯವನ್ನು ಹೇರಿದುದು ಸರಿಯಲ್ಲವೆಂದು ನಮಗೆನ್ನಿಸುತ್ತದೆ. ಅದೂ ರಾಷ್ಟ್ರಪತಿಯು [illegible] ದೇಶದ ಮಿಕ್ಕೆಲ್ಲಾ ಭಾಗವನ್ನು [illegible] 'ನಿರ್ಧರಿಸಬೇಕು ನೀವೇ'—ಎಂಬ ಒಂದೇ ವಾಕ್ಯವನ್ನಾಧರಿಸಿ, ಮದ್ರಾಸ್ ಕಾಂಗ್ರೆಸ್ ಪಕ್ಷೀಯರು ಪ್ರಾಂತ್ಯದ ಹಿತಕ್ಕನುಕೂಲವಾದ ನಿರ್ಧಾರಕ್ಕೇನೇ [illegible] ಬರುವರೆಂದು ನಂಬುತ್ತೇವೆ.

ಉಡುಪಿ

ಮಹಾಸಭೆ-ಕಳೆದ ಶನಿವಾರ ಕ್ರಿಶ್ಚಿಯನ್ ಹ್ಯಾಸ್ಕೂಲ್ ಹಾಲಿನಲ್ಲಿ ಸ್ಥಳೀಯ ಹಿಂದೂಸ್ಥಾನ್ [illegible] ಎಸೋಸಿಯೇಶನಿನ ಮಹಾಸಭೆಯು ಡಾ। ಎಸ್. ಆರ್. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಗತ ವರುಷದ ವರದಿ ವಾಚನ, ಲೆಖ್ಖ ಪತ್ರಗಳ ಮಂಜೂರಾತಿಯಾದೊಡನೆ ಹೊಸ ವರುಷಕ್ಕೆ ಕಾರ್ಯಕಾರೀ ಮಂಡಳಿಯ ಚುನಾವಣೆ ನಡೆಯಿತು. ಸಭಾಂತ್ಯದಲ್ಲಿ ಕಾರ್ಯದರ್ಶಿ ಶ್ರೀ. ಕೆ. ವಿಠಲ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಅಲೆವೂರು ಶ್ರೀ ರಾಮ ಮಂದಿರದಲ್ಲಿ ತಾ. 10ರಲ್ಲಿ ಆರಂಭವಾದ ಭಜನಾ ಸಪ್ತಾಹವು ತಾ. 16ರಲ್ಲಿ ಮಂಗಲೋತ್ಸವದೊಂದಿಗೆ ಜಯಶೀಲವಾಗಿ ಕೊನೆಗೊಂಡಿತು. ನಾಟಕ, ಹರಿಕಥೆ, ಸಂಗೀತ ಮೊದಲಾದ ಕಾರ್ಯಕ್ರಮಗಳು ಜನತೆಯಲ್ಲಿ ಶ್ರೀ ರಾಮನಾಮದ ಮಹತ್ವವನ್ನು ಪರಿಣಾಮಕಾರಿಯಾಗಿ ಮಾಡಿದುವು.

ರಾಷ್ಟ್ರೀಯ ವಾರದ ಆಚರಣೆಗಾಗಿ ತಾ. 13-4-46ನೇ ಅಪರಾಹ್ನ ಸಾರ್ವಜನಿಕ ಸಭೆಯೊಂದು ಶ್ರೀ. ಬಿ. ಎ. ಶೆಟ್ಟರ ಅಧ್ಯಕ್ಷತೆಯಲ್ಲಿ ಉಡುಪಿ ರಥಬೀದಿಯಲ್ಲಿ ಸೇರಿತು. ರಾಷ್ಟ್ರೀಯ ಸ್ವರಾಜ ಮತ್ತು ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಶ್ರೀಗಳಾದ ಎ. ಎಸ್. ಕಾಮತ್, ಎಂ. ವಿ. ಹೆಗ್ಡೆ ಮತ್ತು ಶ್ರೀ. ಪಿ. ಮಂಜುನಾಥ [illegible] ಭಾಷಣಗಳಾದುವು.

ಶಾಲಾ ವರ್ಧಂತಿ-[illegible] ಲಕ್ಷ್ಮೀನಾರಾಯಣ [illegible] (ಹಿಂದಿನ ಮೆಯಿನ್ ಶಾಲೆಯ) [illegible] ತಾ. 20ನೇ ಶನಿವಾರ ಡಾ। ಸುಂದರ [illegible] ಯವರ ಅಧ್ಯಕ್ಷತೆಯಲ್ಲಿಯೂ, ಶ್ರೀ [illegible] ಕ್ಷೇತ್ರದ ಶಾಲೆಯ ವರ್ಧಂತಿಯು ತಾ. 26ನೇ ಶುಕ್ರವಾರ ಶ್ರೀ. ಕೆ. ಸಂಜೀವ ಶೆಟ್ಟರ ಅಧ್ಯಕ್ಷತೆಯಲ್ಲಿಯೂ ಜರಗಲಿವೆ.

ಸಿಟಿ ಬಸ್ ಸರ್ವಿಸ್— ಈ ತಿಂಗಳ ಪ್ರಥಮ ವಾರದಲ್ಲಿ ಆರಂಭವಾಗಿದೆ. ಉದ್ಯಾವರ, ಮಲ್ಪೆ, ಕಲ್ಯಾಣಪುರ, ಪರ್ಕಳ ಕೇಂದ್ರಗಳಿಗೆ ಸರ್ವಿಸುಗಳಿವೆ. ಆದರೆ ಬಸ್ಸುಗಳಲ್ಲಿ, ಸಮಯದಲ್ಲಿ ಮತ್ತು ದರಗಳಲ್ಲಿ ಸುಧಾರಣೆಯಾಗಬೇಕಾಗಿ ಜನರಾಶಿಸುತ್ತಾರೆ.

ಮಂಗಳೂರು

ರಾಷ್ಟ್ರೀಯ ಸಪ್ತಾಹದ- [illegible] ದಿನದ ಸಲುವಾಗಿ ತಾ. 14ರಲ್ಲಿ ಸೆಂಟ್ರಲ್ ಮೈದಾನದಲ್ಲಿ ಶ್ರೀ. [illegible] ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಕೆ. ಕೆ. ಶೆಟ್ಟಿ, ಬಿ. ಬಿ. [illegible] ಮೊದಲಾದವರ ಭಾಷಣಗಳಾದುವು.

ನೇಮಕ— [illegible] ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾದ ಬಿ. ಎಸ್. [illegible] ರವರು ಎರಡು ತಿಂಗಳ ರಜೆಯಮೇಲೆ ಹೋಗಿರುವ [illegible] ಅವರ ಸ್ಥಾನದಲ್ಲಿ ಪುತ್ತೂರು ತಾಲೂಕು [illegible] ಶ್ರೀ. ಬಿ. ಎಸ್. ತಿಮ್ಮಪ್ಪ ಶೆಟ್ಟರು ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾಗಿ ನೇಮಕ ಹೊಂದಿದ್ದಾರೆ.

ನವದಿಲ್ಲಿಯಲ್ಲಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ನವದಿಲ್ಲಿಯಲ್ಲಿ ತಾ. 12ರಿಂದ 14ರ ವರೆಗೆ ಮೂರು ದಿನ ನಡೆದು ಹಿಂದುಸ್ಥಾನದ ಐಕ್ಯತೆಯನ್ನು ಉಳಿಸಿಕೊಳ್ಳತಕ್ಕದ್ದೆಂದು ನಿರ್ಧಾರಮಾಡಿದೆ. ಕೇಂದ್ರಾಧಿಕಾರಕ್ಕೊಳಪಟ್ಟ ಕೆಲವೇ ವಿಷಯಗಳನ್ನು ಬಿಟ್ಟು ಉಳಿದ ಎಲ್ಲಾ ವಿಭಾಗದಲ್ಲೂ ಸಂಯುಕ್ತ ರಾಜ್ಯ ಘಟನೆಯೊಳಗಿನ ವಿಭಾಗಗಳಿಗೆ ಸ್ವಾತಂತ್ರ್ಯಾಧಿಕಾರವಿರಬೇಕು. ಆದರೆ ಇವೆಲ್ಲವುಗಳಿಗೊಂದು ಪ್ರಬಲ ಕೇಂದ್ರ ಸರಕಾರ ಮತ್ತು ನ್ಯಾಯವಿಧಾಯಕ ಸಭೆ ಇರಬೇಕು ಎಂದು ಕಾಂಗ್ರೆಸ್ ಕಮಿಟಿಯ ಅಭಿಪ್ರಾಯ. ಲೀಗ್ ಸಮಿತಿಯು ಇಂಥವು ಭಾಷಣಗಳ ಮೇಲಿಂದ ಮುಸ್ಲಿಂ ಲೀಗಿನೊಡನೆ ಸಂಧಾನ ಯತ್ನ ನಡಿಸುವುದು ನಿರರ್ಥಕವೆಂದು ನಿರ್ಧರಿಸಲಾಗಿದೆ.

ಬ್ರಿಟಿಷ್ ಸಮಿತಿಯವರು

ಒಕ್ಕೊಟ್ಟಾಗಿ ಎಲ್ಲಾ ಹಿಂದೀ ಪ್ರಮುಖರೊಡನೆಯೂ ಮಾತಾಡಿ ಮುಗಿಸಿ ಈಗ ಒಂದು ಸರ್ಕಾರ ಕೂಟದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಕಾಂಗ್ರೆಸ್ ಮತ್ತು ಲೀಗ್ ಕಮಿಟಿ ಸದಸ್ಯರನ್ನು ಒಂದೆಡೆಯ ಕೂಟದಲ್ಲಿ ಒಟ್ಟುಗೂಡಿಸಿ ಮಾತಾಡಬೇಕೆಂಬ ಬ್ರಿಟಿಷ್ ತ್ರಿಮೂರ್ತಿಗಳ ಅಭಿಪ್ರಾಯಕ್ಕೆ ಮೌ. ಅಜಾದರೊಪ್ಪಿದರೂ, ಮಿ. ಜಿನ್ನರ ಸದಸ್ಯರ ಅನಾನುಕೂಲತೆಯಿಂದಾಗಿ ಒಪ್ಪಲಿಲ್ಲ. ಇದೇ ತಾ. 14ಕ್ಕೆ ಕಾಶ್ಮೀರಕ್ಕೆ ಕೆಲವು ದಿನ ವಿಶ್ರಾಂತಿಪಡೆದು ತಾ. 24ಕ್ಕೆ ನವದಿಲ್ಲಿಗೆ ಮರಳಿ ಬ್ರಿಟಿಷ್ ತ್ರಿಮೂರ್ತಿಗಳು ಭರದಿಂದ ತಮ್ಮ ಕಾರ್ಯಕ್ರಮಗಳನ್ನು ಮುಂದೊತ್ತಲಿರುವರೆಂದು ತಿಳಿದು ಬರುತ್ತದೆ.

ಈ ಬಾರಿ ಯಥಾರ್ಥತೆ

ಎಂತಹ ಬೆಲೆತೆತ್ತಾದರೂ ಹಿಂದೀ ಪ್ರಮುಖರೊಡನೆ ಒಂದು ಒಪ್ಪಂದ ಮಾಡಿಯೇ ತೀರಬೇಕೆಂದೂ, ಕೆಲಸವನ್ನು ಪೂರ್ತಿ ಮುಗಿಸಿಯೇ ಮರಳಬೇಕೆಂದೂ ಲಂಡನಿನಿಂದ ಕೂಲಿಗಾರ ಸರಕಾರದ ಸೂಚನೆಯು ಬ್ರಿಟಿಷ್ ಸಮಿತಿಯವರಿಗೆ ಬಂದಿದೆಯೆಂಬ ವಾರ್ತೆಯಿದೆ. ಈ ಕೆಳಗಿನ ಮೂರು ಕಾರಣಗಳಿಂದಾಗಿ ಬ್ರಿಟಿಷರಿಗೆ ಬಾರಿ ಹಿಂದೀ ಪ್ರಶ್ನೆಯನ್ನು ಇತ್ಯರ್ಥಿಸದೆ ನಿರ್ವಾಹವಿಲ್ಲವಾಗಿದೆ 1. ಹಿಂದುಸ್ಥಾನದಲ್ಲಿ ತಮ್ಮಾಟದ ಅವಧಿ ಮುಗಿಯಿತೆಂದು, ನಾವಿಕ ದಂಗೆಯಿಂದ ಬ್ರಿಟಿಷರಿಗೆ ಮಂದಟ್ಟಾಗಿ ಹೋಗಿದೆ. 2. ಇಂಗ್ಲೆಂಡಿಗೆ ಅಮೇರಿಕ, ರಶ್ಯಗಳ ನಂತರದ ಮೂರನೇ ಸ್ಥಾನಕ್ಕಿಳಿದಿರುವದರಿಂದ ಅತೃಪ್ತ ಭಾರತವು ತನ್ನ ಅಂತರ್ರಾಷ್ಟ್ರೀಯ ಘೋಷಣೆಗೊಂದು ಕಂಟಕವಾಗುವದೆಂಬ ಭೀತಿ ಅದಕ್ಕೆ ಬಡಿದಿದೆ 3. ರಾಜಕೀಯ ದೃಷ್ಟಿಕೋನವೇ ಬದಲಾಗಿರುವ ದೆಸೆಯಿಂದ ಬ್ರಿಟಿಷ್ ಸಾಮಾನುಗಳಿಗೆ ಹೊಸ ಮಾರ್ಕೆಟ್ ನಿರ್ಮಿಸುವ ಆವಶ್ಯಕತೆಯುಂಟಾಗಿದೆ.

ವಿನಂತಿ

೮ ಪುಟಗಳಂತೆ ಪುಟ ಸಂಖ್ಯೆ ಹಾಕಿದ್ದರೂ ಈ ಬಾರಿ ಒಬ್ಬೆ ೧೦ ಪುಟಗಳನ್ನು ಮಾತ್ರ ಕೊಡಲಾಗಿದೆ. ವಾಚಕರು ಗಮನಿಸಬೇಕಾಗಿ ವಿನಂತಿ.

ಮೆನೇಜರ್.

PUBLICATION

ಉಡುಪಿ ಡಿ ಮು. ಕೋರ್ಟಿನಲ್ಲಿ

O. C. No 109/46.

ನ್ಯಾಯದ ನಿಮಲಾಕ್ಷಿ ಡಿಸ್ಟ್ರಿಕ್ಟ ಕೋರ್ಟಿನಿಂದ (O P 32/13ರಲ್ಲಿ ನೇಮಿಸಲ್ಪಟ್ಟ ... Advocate ... ವಾದಿ.

ವಿರುದ್ಧ

... ಪ್ರತಿವಾದಿ

...

ಈ ಮೂಲಕ ತಿಳಿಯಪಡಿಸುವದೇನೆಂದರೆ

ಪ್ರತಿವಾದಿಯಿಂದ ಕಳೆದ ಕಾರಣ, ವಾರ್ಷಿಕ ... ವಾದಿರಿಗೆ ಬರತಕ್ಕ ... ರೂಪಾಯಿ 45 1 6 ... ವಾದಿರು ... ಈ ದಾವೆಯು ತಾ 10 6 1946ಕ್ಕೆ ಇಟ್ಟಿದೆ. ... ಪ್ರತಿವಾದಿಯು ... ವಕೀಲರ ಮುಖಾಂತ್ರ ಈ ದಿವಸ ಹಗಲು 10 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಮೀನ್ದಾರಿಕೊಳ್ಳತಕ್ಕದ್ದು ... ಪ್ರತಿವಾದಿಯನ್ನು ಏಕಪಕ್ಷವಾಗಿ ಮಾಡಿ ತೀರ್ಮಾನಿಸೋಣಾದೀತೆಂಬ ಸಂಗ್ತಿ ಈ ಮೂಲಕ ಪ್ರಕಟಿಸೋಣಾಯಿತು.

M. Vittal Kamath B A., B L

Vakil for Plaintiff

Udipi
12 4-46

ಭವಿಷ್ಯ ಯೋಜಿಸಿರಿ

ಸದುದ್ದೇಶಗಳಿದ್ದರೆ ಮಾತ್ರ ಸಾಲದು. ನೀವು ನಿಮ್ಮ ಹೆಂಡತಿ ಮಕ್ಕಳ ಭದ್ರತೆಗಾಗಿ ಏರ್ಪಾಡು ಮಾಡದಿದ್ದರೆ ಅವರು ನಿಸ್ಸಹಾಯಕರಾಗುವರು. ನಿಮ್ಮ ಸದುದ್ದೇಶಗಳನ್ನು ಕಾರ್ಯರೂಪಕ್ಕೆ ತರುವಂತೆ ಸಹಾಯ ಮಾಡಲು ನೀವು ನಮಗೇಕೆ ಬರೆಯಬಾರದು

ಭೂಷಣ್ ಕುಮಾರ್

ಕೂಳೂರ್‌ಕರ್ ಎಂಡ್ ಕೋ

ದೇವಕರಣ್ ನಾನ್‌ಜೀ

ಇನ್‌ಶ್ಯೂರೆನ್ಸ್ ಕೋ, ಲಿಮಿಟೆಡ್.

ಇದರ ಜೀವವಿಮಾ ವಿಭಾಗದ

ಪ್ರಾಮುಖ್ಯ ಏಜೆಂಟರು,

ಮಣ್ಣಗುಡ್ಡೆ ವ್ಯಾನ್ ರೋಡ್,

ಮಂಗಳೂರು, ದಕ್ಷಿಣ ಕನ್ನಡ.

ಹೆಡ್ ಆಫೀಸು.

ದೇವಕರಣ ನಾನ್‌ಜೀ

ಬಿಲ್ಡಿಂಗ್ಸ್, ಮುಂಬಾಯಿ 1.

BANK WITH THE LARGEST CONNECTIONS ON THE WEST COAST,

OFFERS:-

EFFICIENT
PROMPT &
COURTEOUS

SERVICE OF EVERY TYPE

OPEN AN ACCOUNT

with

The Canara Industrial & Banking Syndicate Ltd

ESTD 1925

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **18—4—46**ರಿಂದ

ಮಿನರ್ವಾದವರ

'ಡಾಕ್ಟರ್ ಕುಮಾರ್'

ಬಲವಂತ್, ಖುರ್ಶಿದ್ ಜ್ಯೂನಿಯರ್, ಪರೀರ ಬಿನರ್ಜೀ, ಸಂತೋಷ ಪ್ರಸಾದ್, ಲಲಿತಾ ಮೊದಲಾದವರು.

ಬರುವ ಚಿತ್ರ—

"ತಹಶಿಲ್ದಾರ್" **Tashildar.**

FOR LIFE ASSURANCE

CONSULT

The New Gaurdian of India Life Insrce. Co., Ltd.

(*Chairman* The Hon'ble Mr. M. CT. M. Chidambaram Chettyar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

(೪ನೇ ಪುಟದಿಂದ)

ಮಂಜೂರಾದಲ್ಲಿ — ಇದೋ ಆರು ತಿಂಗಳೊಳಗೆ ನಾವು ಮಿ. ಜಿನ್ನರಿಂದ ವಿಲೆವಾರಿ ಹೊಂದುವೆವು; ಅಥವಾ ಪಾಕಿಸ್ತಾನ್ ಪ್ರದೇಶಗಳು ಪುನಾರಾಧೀನವಾಗುವ ವರೆಗೂ ಹೋರಾಡುವೆವು.

ಮಿಲಿಯ ಮಂದಿಯ ಆಹುತಿ ಹೆಚ್ಚಲ್ಲ!

ಸಂಪೂರ್ಣ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಿಶೇಷ ಪ್ರಾಣಾಹುತಿಕೊಡಬೇಕಾಗಿ ಬಂದರೂ, ಅಂತಹ ಬೆಲೆ ತೆರಲು ಯೋಗ್ಯವಾದ ವಿಷಯವದು. ಸ್ವಾತಂತ್ರ್ಯ ಲಾಭ ಹೊಂದಬೇಕಾದರೆ ನಾವು ಒಂದು ಮಿಲಿಯ ಮಂದಿಯ ಪ್ರಾಣಾಹುತಿಕೊಡಬೇಕಾಗಿ ಬಂದಲ್ಲಿ ಅದು ತೀರಾ ಅಗ್ಗ ಬೆಲೆಗೆ ದೊರೆಯಿತೆಂದೇ ನಾನೆಣಿಸುತ್ತೇನೆ. ಸ್ವಾತಂತ್ರ್ಯದ ಹಿತಕ್ಕಾಗಿ ಹಿಂದುವು ಮುಸಲ್ಮಾನನ ಕಂಠ ಕತ್ತರಿಸುತ್ತಾನಾದರೆ, ಅದಕ್ಕಾಗಿ ಲೋಕವೇಕೆ ಬೆಚ್ಚಿ ಬೀಳಬೇಕು? ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವದಕ್ಕಾಗಿ, ಎರಡು ಲೋಕ ಯುದ್ಧಗಳಲ್ಲಿ ಕ್ರೈಸ್ತನಾದವನೇ ಕ್ರೈಸ್ತನಾದವನ ಕಂಠ ಕಡಿದಿದ್ದಾನೆ. ಅಮೇರಿಕವು ಇಂದಿನ ಪ್ರಗತಿ ಪಡೆಯಬೇಕಾದರೆ ಅಮೇರಿಕಾನನೇ ಅಮೇರಿಕದವನೊಡನೆ ಹೋರಾಡಿದ್ದಾನೆ. ಹಿಂದೂ ಮುಸ್ಲಿಮ್ ಪ್ರಶ್ನೆಯು ಗೃಹ ಪ್ರಶ್ನೆಯಾಗಿದ್ದು ಅದು ಕೇವಲ ಭಾರತೀಯರ ಉದ್ಯೋಗವಾಗಿದೆ; ಹೊರಗಿನವರು ತೀರ್ಮಾನಿಸಬೇಕಾಗಿರುವ ವಿಷಯ ಅದಲ್ಲ. ರಕ್ತಪಾತವು ಅನಿವಾರ್ಯವೆಂದಾದರೆ ಆಗ ಹಿಂದುಸ್ಥಾನದ ಹಂಬಲವೂ ಅದೇ!

ಜಿನ್ನರ ಅಪಹಾಸ್ಯಕರ ಸ್ವಪ್ನ

ಮುಸ್ಲಿಂ ಲೀಗಿನವರ ಪ್ರತಿಜ್ಞಾ ಸ್ವೀಕಾರೋತ್ಸವಕ್ಕಾಗಲೀ, ಜಿನ್ನರ ಪರಿಹಾಸ್ಯಕರ ಕನಸು ಫಲಿಸುವಂತೆ ಮಾಡಲು ರಶ್ಯವು ಸಹಾಯಕೊಡಬೇಕೆಂದು ಯಾಚಿಸುತ್ತಿರುವ ತಮ್ಮ ಕರವಾಪ್ಸ ಸರ್. ಫಿರೋಜ್ ಖಾನ್‌ನೂನರ ತಿಳಿಗೇಡಿತನದ ಬೆದರಿಕೆಗಾಗಲೀ, ಬ್ರಿಟಿಷ್ ಮಂತ್ರಿ ಸಮಿತಿಯು ವಿಶೇಷ ಪ್ರಾಮುಖ್ಯತೆ ಕೊಡದಿರುವದು ವಿಹಿತ. ಜೆಂಘಿಸ್ ಖಾನನ ರುದ್ರ ನಾಟಕವನ್ನೇ ಪುನಃ ಆಡುತ್ತೇವೆಂಬ ಸರ್. ನೂನರ ಮಾತಿಗನ್ನುತ್ತೇನೆ—ಅವರನ್ನೊಂದು ಕೈನೋಡುವ ಕೆಲಸವನ್ನು ಪಂಜಾಬು ಸಿಖ್ಖರ ಪಾಲಿಗೆ ಬಿಡಿ!

ಪಾಕಿಸ್ತಾನ್ ಹುಣ್ಣು!

ಪಾಕಿಸ್ತಾನವೆಂಬುದು ಹಿಂದುಸ್ಥಾನದ ದೇಹದಲ್ಲಿದ್ದ ಭಯಂಕರ ಹುಣ್ಣಾಗಿ ನಿಲ್ಲಲಿದೆ. ಓರ್ವ ಸಮರ್ಥ ಸರ್ಜನನಿಂದ ಅದನ್ನು ಕತ್ತರಿಸಿ ಗುಣಪಡಿಸಿ, ಆರೋಗ್ಯಕರ ಸ್ಥಿತಿಯನ್ನು ನಿರ್ಮಿಸಿಕೊಳ್ಳದಿದ್ದಲ್ಲಿ ಹಿಂದುಸ್ಥಾನವು ಸರ್ವದಾ ಅದರ ನೋವಿನಿಂದ ನರಳುತ್ತಿರಬೇಕಾದೀತು. ಈಗ ಲೋಕದ ಮುಂದೆ ಪರೀಕ್ಷೆ ಕೊಡಬೇಕಾಗಿ ಬಂದಿರುವದು ಇಂಗ್ಲೆಂಡು ಹೊರತು ಭಾರತವಲ್ಲ ಬ್ರಿಟಿಷ್ ಮಂತ್ರಿ ಸಮಿತಿಯು ಅಹಿಂಸೆಯೊಂದು ಬಗೆದುಗಬೇಕಾಗಿ ಬಂದರೆ—ಯಾಗಾಗುವದನ್ನು ನಾನಪೇಕ್ಷಿಸುವದಿಲ್ಲ—ಅದು ಮುಂಬರುವ ಮಹೋತ್ಪಾತದ ಶಕುನವೇ ಸರಿ. ಸದ್ಯದ ರಾಜಕೀಯ ಸ್ಥಿತಿಯಲ್ಲಿ ತನಗೆ ನ್ಯಾಯ ಮತ್ತು ಸರಿಯೆಂದು ತೋರುವ ನಿರ್ಧಾರಗಳನ್ನು ಮಾಡಲು ಬ್ರಿಟನು ಶಂಕಿಸುತ್ತದಾದರೆ, ಅಥವಾ ಧೈರ್ಯಗುಂದುತ್ತದಾದರೆ, ಅದರ ನುಸಂಗಿ ಆ ಮೇಲೆ ಸಂಭವಿಸುವಂತಹದಕ್ಕೆಲ್ಲಾ ಅವೇ ಹೊಣೆಗಾರನಾಗಬೇಕಾಗಿದೆ'.

ದಕ್ಷಿಣ ಕನ್ನಡ.

ಮಂಗಳೂರು

ಅಕ್ಕಿ ಭತ್ತ ಒಪ್ಪಿಸುವ ಅವಧಿ– ಎರಡನೇ ಅಕ್ಕಿ ಭತ್ತ ಬೆಳೆಯೊಪ್ಪಿಸುವ (ಉಳಿಕೆಯ) ಅವಧಿಯನ್ನು, ಜಿಲ್ಲಾಧಿಕಾರಿಗಳು ಕುಂದಾಪುರ ತಾಲೂಕಿನ ಅಸೂಸೆ ಬೈಲು, ಪಟ್ಟಾಡಿ ಮತ್ತು ಯೋಂಗವಳ್ಳಿ ಈ ಮೂರು ತಾಲೂಕುಗಳಲ್ಲಿ, ತಾ. 30-4-46ರ ವರೆಗೆ ಮುಂದುವರಿಸಿರುವರು.

ರಾಷ್ಟ್ರೀಯ ಸಪ್ತಾಹ–ರಾಷ್ಟ್ರೀಯ ಸಪ್ತಾಹವು, ಟೌನ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ, ತಾ. 6ರಿಂದ 13ರ ವರೆಗೆ, ಬಂಪ್ರತಿ, ಉರ್ವ, ಮಾರ್ನಮಿ ಕಟ್ಟೆ, ಹಂಪನಕಟ್ಟೆ (ಮಿಲಾಗ್ರಿಸ್ ಕಾಲೇಜ ಹತ್ತಿರ) ಮೊದಲಾದ ಕಡೆಗಳಲ್ಲಿ ಸಾರ್ವಜನಿಕ ಸಭೆ, ಭಾಷಣಗಳ ಮೂಲಕ ಆಚರಿಸಲ್ಪಟ್ಟಿತು. ಸ್ಥಳೀಯ ಕಮ್ಯೂನಿಸ್ಟ ಪಾರ್ಟಿಯ ಆಶ್ರಯದಲ್ಲೂ ಒಂದೊಂದು ದಿನ ಒಂದೊಂದು ಕಡೆಯಲ್ಲಿ ಸಭೆ ಜರಗಿ ರಾಷ್ಟ್ರೀಯ ಸಪ್ತಾಹಾಚರಣೆ ನಡೆದಿದೆ.

ಪ್ಲೇಗ್ ಪರಿಸ್ಥಿತಿ–ತಾ. 6ಕ್ಕೆ ಅಂತ್ಯವಾಗುವ ವಾರದ ವರದಿಯಂತೆ, ಪ್ಲೇಗ್ ಯಾರಿಗೂ ತಗಲಿದ ವಾರ್ತೆಯಿಲ್ಲ. ಇನ್ನಾ ಮಸೀದಿ ಕೆರೆ ಬಳಿಯಲ್ಲಿ ಸತ್ತು ಬಿದ್ದ ಇಲಿಯು ಪ್ಲೇಗಿನದೆಂದು ತೀರ್ಮಾನವಾಗಿದೆ. ಇದ ಬಿಲಗಳನ್ನು ಗ್ಯಾಸಿನಿಂದ ಸ್ವಚ್ಛಪಡಿಸುವ ಕೆಲಸವು ಅನಿವಾರ್ಯವಾಗಿ ನಡೆದಿದೆ.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೀ ದುಮುಕಿಸದೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಶುರುವು ಮಾಡಿದಾಗಲೇ ದಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸವಾಗುವದು; ಪಚನಕ್ರಿಯೆಯು ತಿದ್ದುವದು, ಶ್ವಾಸನಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೇಕು, ಬೆನ್ನು ನೋವು, ಗಂಟಲು ಹಿರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಬಿಳೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

ಔನ್ಸ್ ೪ ಔನ್ಸ್ ೧೬ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ. ೨-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟೈಕಿಸ್ಟರು: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್ ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು:

ವನಮಾಲೀ ಭಟ್ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.



PUROHIT SHWAS-HARI

ಹೊಸ ಕಮಿಶನರರು– ಮಂಗಳೂರು ಮುನಿಸಿಪಲ್ ಕಮಿಶನರರಾಗಿ, ಶ್ರೀ. ಕೆ. ನಾರಾಯಣ ಶೆಟ್ಟಿ, ಬಿ.ಎ., ಬಿ.ಎಲ್. ಇವರು ಪುನಃ ನೇಮಕವಾಗಿರುವರು. ಇಲ್ಲಿಯ ಕಮಿಶನರರಾಗಿದ್ದ ಶ್ರೀ. ಸೂರ್ಯನಾರಾಯಣರಾವ್‌ರವರಿಗೆ ಎಲ್ಲೋರಿಗೆ ವರ್ಗವಾಗಿದೆ.

ಧನುರ್ವಿದ್ಯಾ ಪ್ರದರ್ಶನ– ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ವಠಾರದಲ್ಲಿ ಜಿಲ್ಲಾ ಜಡ್ಜ್, ಪಬ್ಲಿಕ್ ಪ್ರೊಸೆಕ್ಯೂಟರ್ ಇವರೇ ಮೊದಲಾದ ಅಧ್ಯ ಮಹನೀಯರುಗಳಿಂದ ಕೂಡಿದ ಸಭೆಯಲ್ಲಿ "ಕಲಿಯುಗದ ಅರ್ಜುನ" ಬಿರುದಾಂಕಿತ ಪ್ರೊ। ಎಂ. ರಾವ ಮೂರ್ತಿಯವರು ಧನುರ್ವಿದ್ಯಾ ಕಲಾಕೌಶಲ್ಯದ ನಾನಾ ಅದ್ಭುತ ಪ್ರಯೋಗಗಳನ್ನು ಪ್ರದರ್ಶಿಸಿದರು.

ರಾಷ್ಟ್ರೀಯ ಸೇವಾದಳದ ಪ್ರಾಂತೀಯ ಶಿಕ್ಷಣ ಶಿಬಿರ–"ಇದೇ ಬರುವ ತಾ. ೧-೫-೪೬ರಿಂದ ಹುಬ್ಬಳ್ಳಿಯಲ್ಲಿ ನಡೆಯಲಿರುವ ಸೇವಾದಳದ ಪ್ರಾಂತೀಯ ಶಿಕ್ಷಣ ಶಿಬಿರದಲ್ಲಿ ತರಬೇತಿ ಹೊಂದಲು ಇಚ್ಛಿಸುವವರು ತಮ್ಮ ಅರ್ಜಿಯನ್ನು ಇದೇ ತಾ. ೨೦ರ ಒಳಗೆ ಜಿಲ್ಲಾ ಕೊಂಗ್ರೆಸ್ ಕಮಿಟಿ ಆಫೀಸಿಗೆ ಮುಟ್ಟುವಂತೆ ಕಳುಹಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನವರಿಂದ ಪಡಕೊಳ್ಳಬಹುದು: ಮರೋಳಿ ರಾಮರಾಜ ಕಿಣಿ, ಜಿಲ್ಲಾ ಸಂಘಟಕ, ರಾಷ್ಟ್ರೀಯ ಸೇವಾದಳ.

ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲ್–ಇದರ ಸಭೆಯೊಂದು ತಾ. ೬-೪-೪೬ರಲ್ಲಿ ಸೇರಿ, ಅಧ್ಯಕ್ಷ ಸ್ಥಾನಕ್ಕೆ ಶ್ರೀ ಕೆ. ಕೆ. ಸೆಟ್ಟಿಯವರಿತ್ತ ರಾಜೀನಾಮೆಯನ್ನು ಸ್ವೀಕರಿಸಿ, ಆಸ್ಥಾನಕ್ಕೆ ಶ್ರೀ। ಯೊಳದವನ್ನೂ, ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಕೇಶವ ಕಾಮತರನ್ನೂ ಆರಿಸಿಕೊಳ್ಳಲಾಯಿತು. ಶ್ರೀ। ಶೆಟ್ಟರು ಕೆಲ ಕಾಲದ ಹಿಂದೆ ಟ್ರೇಡ್ ಯೂನಿಯನಿನ ಅಧ್ಯಕ್ಷರಾಗಿ ಕೊಟ್ಟ ಒಂದು ಪ್ರಕಟಣೆಯನ್ನು ಖಂಡಿಸಿ ಠರಾವಾಯಿತು. ಬೀಡಿ ಕೈಗಾರಿಕೆಯನ್ನು ಕೋ ಒಪರೇಟಿವ್ ಸೊಸೈಟಿ ತತ್ವಕ್ಕನುಸಾರವಾಗಿ ಪುನರ್ಘಟಿಸುವ ಕುರಿತು ಅಭಿಪ್ರಾಯ ವ್ಯಕ್ತವಾಗಿ, ಈ ಠರಾವಿನನ್ವಯ ಉಡುಪಿಯಲ್ಲಿ ಕಾರ್ಯಾರಂಭ ಮಾಡುವ ನಿರ್ಧಾರವಾಯಿತು. ಮುಖ್ಯವಾಗಿ ಮುಡಿಪವನ ರೇಷನ್ ಕಡಿತವನ್ನು ರದ್ದುಗೊಳಿಸಬೇಕೆಂಬ ಕೇಳಿಕೆಯನ್ನು ಮುಂದಿರಿಸಿ ಠರಾವಾಯಿತು.

ಶಿರ್ವ–ತಾ 10-4-46ರಲ್ಲಿ ವಿದ್ಯಾ ಇಲಾಖೆಯ ಡೈರೆಕ್ಟರ್ ಡಾ। ಎಸ್. ಆರ್. ಯು. ಸವೂರರು ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀ. ರಂಗನಾಥ ಮುದಲಿಯಾರ್, ದ. ಕ. ವಿದ್ಯಾಧಿಕಾರಿ ಶ್ರೀ. ಎನ್. ಸುಬ್ಬರಾವ್ ಮತ್ತು ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ಟರೊಂದಿಗೆ ಶಿರ್ವಕ್ಕೆ ಆಗಮಿಸಿ ಶ್ರೀ. ಬಿ. ಎನ್. ಪಿ. ವ. ಸಂಘದವರಿಂದ ಸಂಭ್ರಮದ ಸ್ವಾಗತ ಪಡೆದು, ಸಂಘದ ಆಶ್ರಯದಲ್ಲಿ ಹಿಂದೂ ಹೈಸ್ಕೂಲಾಗಲಿರುವ ಸ್ಥಳ ಇತ್ಯಾದಿಗಳನ್ನು ಸಂದರ್ಶಿಸಿ, ಸದಭಿಪ್ರಾಯಪಟ್ಟು ಮರಳಿದರು.

ಇನ್ನಂಜೆ–ತಾ 10ರಲ್ಲು ಮಾನ್ಯ ಡೈರೆಕ್ಟರ್ ಜೊತೆಗಳವರು, ಡಿವಿಜನಲ್ ಇನ್ಸ್‌ಪೆಕ್ಟರರು ಮತ್ತು ಜಿಲ್ಲಾ ವಿದ್ಯಾಧಿಕಾರಿಗಳೊಡನೆ ಇಲ್ಲಿಯ ಶಾಲೆಯನ್ನು ಸಂದರ್ಶಿಸಿ, ಇದು ಉತ್ತಮ ರೀತಿಯ ಆವಾಸಯುಕ್ತ (Residential) ಹೈಸ್ಕೂಲ್ ಆಗುವುದೆಂದು ಅಭಿಪ್ರಾಯವಿತ್ತಿರುವರು.

ಮೂಲ್ಕಿ ಗ್ರಾಮಾಭಿವೃದ್ಧಿ ಪರವಾದ ಕೈಶರ– 29ನೇ ಸಭೆಯು ಸಂಬಿಕೂರು ಗ್ರಾಮದ ದೇವಸ್ಥಾನದ ಬಳಿ ಕೂಡಿಬರಬೇಕಾಗಿ ನಿಶ್ಚಯಿಸಿದಂತೆ ತಾ 14-4-46ನೇ ಆದಿತ್ಯವಾರ 3 ಘಂಟೆಗೆ ಕೂಡಿ ಬಡಿಸಿದ ಗ್ರಾಮದ ಹರಿಜನರು ಕೆಲವರನ್ನು ಕೂಡ ಹಾಕಿ ಸ್ನಾನ ಮಾಡಿಸಿ ಊಟವನ್ನು ಬಳಸುತ್ತಾ ಗ್ರಾಮೋದ್ಧಾರದ ಯೋಜನೆಯಲ್ಲಿ ಮಾದರಿ ಕುಟುಂಬ ಇಂದರ ಅವಶ್ಯಕ ವಿಷಯಗಳಾದ ಮತ್ತು ಈಗ ಗಾಂಧಿಜಿಯವರ ನೇಚರ್ ಕ್ಯೂರ್ ಯತ್ನದಲ್ಲಿ ಅಡಕವಾಗಿರುವ ನಿರ್ಮಲತೆ, ಕಸಕಡ್ಡಿಗಳನ್ನು ಹಾಕಿಡುವರೆಗುಳಿ, ಮುಂದಕ್ಕೆ ಅದರಲ್ಲಿ ಸಸಿ ನಡುವವಿಚಾರ, ಮನೆಬಳಿ ಕಾಯಿಪಲ್ಯ ಬೆಳಸುವ ಮತ್ತು ಪ್ರದರ್ಶನಕ್ಕೆ ಅನುಕೂಲವಾಗಿ ಅವರ ಕೈಗಾರಿಕೆಗಳನ್ನು ವೃದ್ಧಿಸುವ ವಿಷಯಗಳನ್ನು ಕುರಿತು ಬೋಧಿಸುತ್ತಾ ಶ್ರೀ ಫಲಿಮಾರು ಸ್ವಾಮಿಯವರು ಸಭೆಯು ಫಲಿಮಾರಿನಲ್ಲಿ ಕೂಡಿ ಬರುವಂತೆ ಅನುಕೂಲಿಸಬೇಕಾಗಿ ಹೇಳಿ ಕಳುಹಿಸಲು ಕೂಡಿದ ಸಭಿಕರ ಸಮೇತ ಅಲ್ಲಿಗೆ ಹೋಗಲು ಮೈಸೂರಿನ ಶ್ರೀ ಹರಿ ಸರ್ವೋತ್ತಮ ದಾಸರ ಹರಿ ಕೀರ್ತನೆಯೂ ಶ್ರೀ ಶಿಲ್ಲಿ ಮತ್ತು ಶ್ರೀ ಮೈಂದಪ್ಪರೈಗಳ ವಾಚನವೂ ಸುಮಾರು ರಾತ್ರಿ 12 ಘಂಟೆ ತನಕ ಆಗುತ್ತಾ ನಡುವೆ ಭಾಷಣಗಳ ಮೂಲಕ ಗ್ರಾಮಾಭಿವೃದ್ಧಿ ಕುರಿತು ಕಾರ್ಯರೂಪವಾದ ಕೆಲಸಗಳನ್ನು ಸೂಚಿಸಿ ಮುಂಡ್ಕೂರು ಕಪ್ಪಿದ ವಿಷಯ ಪ್ರಶ್ನೆತಹಿತರನ್ನು ಕೂಡ ಹಾಕಿ ಊರಹಿತಕ್ಕೆ ದುವ ನ್ಯಾಯವಾದ ತೀರ್ಮಾನವು ಒದಗುವಂತೆ ಯತ್ನವಿಡಬೇಕಾಗಿ ಶ್ರೀ ಸ್ವಾಮಿಗಳವರನ್ನು ಕೇಳಿಕೊಂಡು ಮುಂದಿನ 30ನೇ ಸಭೆಯನ್ನು ತಾ 28ನೇ ಆದಿತ್ಯವಾರ 3 ಘಂಟೆಗೆ ಮುಂಡ್ಕೂರಲ್ಲಿ ಜರಗಿಸುವುದಾಗಿಯೂ ಅಂದು ಕೂಡ ವಾಚಕದ ಏರ್ಪಾಡು ಮಾಡುವದಾಗಿಯೂ ತಿಳಿಸಿ 31ನೇ ಸಭೆಯನ್ನು 12-5-46ನೇ ಆದಿತ್ಯವಾರ ಕಟಿಲಲ್ಲಿ ಕೂಡಿಬರುವಂತೆ ಮಾಡಿ ಆದಿನ ಈವರೆಗಿನ ಸಭೆಗಳಲ್ಲಾದ ಎಲ್ಲಾ ನಿರ್ಣಯಗಳನ್ನು ವಿಮರ್ಶಿಸಿ ಪ್ರತಿ ಕೇಂದ್ರದವರು ಯಾವರೀತಿಯ ಕಾರ್ಯಸಾಧನೆಗಳಲ್ಲಿರುವರಾಗಿ ವಿಚಾರಿಸಿ ತಿಳಿದು ಮುಂದಿನ ಕಾರ್ಯಸಾಧನೆ ಯೋಜನೆ ಸಿದ್ಧ ಮಾಡಿಕೊಳ್ಳಬೇಕೆಂದೂ ನಿಶ್ಚಯಿಸಿಕೊಳ್ಳಬೇಕಾಗಿಯೂ ಆದಿನ M.L.A. ಯವರೊಬ್ಬರನ್ನು ಆಮಂತ್ರಿಸಿಕೊಳ್ಳಬೇಕಾಗಿಯೂ ಇನ್ನುಮುಂದಕ್ಕೆ ಕೂಡಿದ ಮಟ್ಟಿಗೆ ದೇವಸ್ಥಾನವು ಇತರ ಸಂಸ್ಥಾ ಕಟ್ಟಡಗಳಲ್ಲಿ ಸಭೆಗಳನ್ನು ಜರಗಿಸಿಕೊಂಡು ಬರುತ್ತಾ ಆಸಂಸ್ಥೆಗಳ ಬೆಂಬಲ ಪಡೆಯಲು ಅನುಕೂಲವಾಗುವಂತೆ ಯತ್ನವಿರುವದೆಂದು ಸೂಚಿಸಿ ಸಭಿಕರೆಲ್ಲರಿಗೂ, ಕೀರ್ತನೆ, ವಾಚನಕರ್ತರಿಗೂ, ಶ್ರೀ ಸ್ವಾಮಿಯವರಿಗೂ, ಹರಿ ಜನರಿಗೆ ತಮ್ಮ ಖರ್ಚಿನಿಂದ ಊಟದ ಅನುಕೂಲಗೊಳಿಸಿದ ಆಡ್ಡೆ ಬೊಳ್ಳೊಟ್ಟು ಶ್ರೀ ರಾಜು ಸೆಟ್ರು ಮತ್ತು ದೊಡ್ಡಣ್ಣ ಶೆಟ್ರಿಗೂ ವಂದನೆಸೂಚಿಸಿ ಹಿಂದಿನ ಸಭೆಯ ಮತ್ತು ಕಣಿಯೂರಿನ ಸಭೆಯ ನಿರ್ಣಯಗಳನ್ನು ಮುಂದಿನ ಸಭೆಯಲ್ಲಿ ಓದಿ ತಿಳಿಯಲು ಬಾಕಿಮಾಡಿ, ಬಹು ವಿಜೃಂಭಣೆಯಿಂದ ಜರಗಿತು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-8-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್. —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ರೋಗಿ ಕಂಡು ಬರೆದರೆ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು. ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಕುಂಬಾರವಾಡ ರೋಡ್, ಜಿ. ಐ. ಪಿ. ರೈಲ್ವೆ, ವರ್ಕ ಶಾಪ್ ಎದುರುಗಡೆ, ಪರೇಲ್ (3) ಬನಾಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಪಿ. ಓ. ಎದುರು ಮಂಗಳೂರು,

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 104/46 O. S 452/44.

ಸೀತಾರಾಮ ವರ್ಣ—ವಾದಿ —ಅರ್ಜಿದಾರ.
ನರಸಿಂಹ ಶೆಟ್ಟಿ, ಸಹಾ —ಎದುರು.

ಯವರೊಳಗೆ

2. ಹೋಟೆಲ್ ಕೃಷ್ಣಯ್ಯ—ಪುಟ್ಟ ಗೋಟರ ಮಗ.

3. ದೇವಡಿಗ ನಾರಾಯಣ—ಶೇಷಿ ಹೆಂಗ್ಸಿನ ಮಗ.

5. ದೇವಡಿಗ ಸೋಮ ಕೊರಾತಿ ಹೆಂಗ್ಸಿನ ಮಗ ಕೋಟೇಶ್ವರ ಗ್ರಾಮದಲ್ಲಿರುವವರು.

ಸದ್ರಿ ಅಮ್ಲಜಾರಿಯಲ್ಲಿ 2-3-5ನೇ ಎದುರಿಗೆ ಈ ಮೂಲಕ ತಿಳಿಸುವದೇನೆಂದ್ರೆ:-

ಮೇಲ್ಕಂಡ ಅಮ್ಲಜಾರಿಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಯಿಸ್ತಿಹಾರ ದರ್ಜ ಮಾಡುವ ಸಲುವಾಗಿ ತಾ 15-6-46ಕ್ಕೆ ಬೆಪ್ಪರೆ ತಪ್ಪಿಗೆ ಯಿದೋರ್ಸಾಗಿಯದೆ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟ ಮುಂದೆ ಹಗಲು ಗಂಟೆಗೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಯಪಡಿಸಿಯದೆ

G Sanjiva Rau,
Pleader for Petitioner,

Kundapur }
Date 12-4-46 }

ಅಳಿಯ ಸಂತಾನ ಮಸೂದೆಗೊಂದು ತಿದ್ದುಪಡಿ.

(ಶ್ರೀ. ಮಹಾಬಲ ಶೆಟ್ಟಿ, ಕೊಳ್ಕೆಬೈಲು)

ಈಗ ಅಳಿಯ ಕಟ್ಟು [illegible] ಪ್ರತಿ [illegible] ಸುಧಾರಣೆ ಆಗಬೇಕೆಂ ಬ [illegible] ಎಲ್ಲೆಲ್ಲಿಯೂ ಕೇ ಳಿ ಬರುತ್ತಿದೆ. ಆದರೆ ಸುಧಾರಣೆಯು ಯಾವ ರೀತಿಯಲ್ಲಿ ಆಗಬೇಕೆಂಬುದು ಜನಮತದಿಂದ [illegible] ನಿರ್ಣಯವಾಗಬೇಕೇ ಹೊರತು ಪಕ್ಷೀ [illegible] ಯಿಂದ ಕೂಡದಿರಬೇಕು. ಇಂ [illegible] ಅಳಿಯ ಸಂತಾನದ ಸುಧಾರಣಾ ಸಮಿ ತಿಯವರು 1939ರ ಸುಧಾರಣಾ ಸಮಿತಿಯ [illegible] ತಯಾರಿಸಲ್ಪಟ್ಟ ಮಸೂದೆಯೊಂದ [illegible] ಆಧಾರವಾಗಿ ಇಟ್ಟುಕೊಂಡು ಸುಧಾರಣೆ [illegible] ಪ್ರಕಟಣೆಯನ್ನು ಹೊರಡಿಸಿದು [illegible] ಜನರು ತಪ್ಪಿಟ್ಟ [illegible] ಅದರ ಬಂದಿನ ಸಮಿತಿಯ [illegible] ಪ್ರತಿಯೊಬ್ಬ ಅಳಿಯ ಸಂತಾನ [illegible] ಅಳಿಯ [illegible] ತಯಾರಿಸಲ್ಪಟ್ಟ [illegible] ಭಿನ್ನಾಭಿಪ್ರಾಯವಿದ್ದರೂ, [illegible] ಸುಧಾರಣೆ ಆಗಬೇಕೆಂತ ಹೇ [illegible] ಪ್ರತಿಯೊಬ್ಬ ಅಳಿಯ ಸಂತಾನಿಗನ [illegible]

ಕುಟುಂಬದ ಆಡಳಿತೆ

[illegible] ಸಂತಾನದ ಕುಟುಂಬವನ್ನು [illegible] ಕಂಪೆನಿಗೆ ಹೋಲಿಸಬಹು [illegible] ಲಿಮಿಟೆಡ್ ಕಂಪೆನಿಯ [illegible] ಪಾಲುಗಾರನಿಗೆ ಸಮಾನ [illegible] ಅವರ ಮೆನೇಜಿಂಗ್ [illegible] ಹುಟ್ಟಿನ ಪ್ರತಿಫಲ ಸಿಕ್ಕುವ [illegible] ಅಳಿಯ ಸಂತಾನದ ಆಡಳ್ತೆದಾರನಿಗೆ [illegible] ಮೆಂಬರರಿಗಿಂತ ಹೆ [illegible] ಪ್ರತಿಫಲ ಸಿಕ್ಕುವ ಪರಿಸ್ಥಿತಿ ಇದೆ [illegible] ಸಂತಾನ ಕುಟುಂಬದ ಆಸ್ತಿಯ ಆಡಳ್ತೆ [illegible] ಯೋಗ್ಯ ಪ್ರತಿಫಲ ಕೊಡ [illegible] ಒಳ್ಳೇ ರೀತಿಯಿಂದ ಆಡಳ್ತೆ [illegible] ಲಕ್ಷ್ಯಭಾವ ತೋರಬಹುದು. [illegible] ಪ್ರತಿಯೊಬ್ಬ ಆಡಳ್ತೆದಾರನು [illegible] ಲೆಕ್ಕ ಇಟ್ಟು ಅದಕ್ಕೆ ಸರಿ ಬರ [illegible] ಮತ್ತು ಆತನಿಗೆ ಒಟ್ಟು ವಸೂಲಿಯ [illegible] 10ರಷ್ಟು ಕಮಿಶನ್ ಕೊಡಲ್ ಬೇ [illegible] ಹಾಗೆ ಇಲ್ಲದಿದ್ದರೆ ಯಾರೂ ಆಡಳ್ತೆ [illegible] ಕುಟುಂಬದ ಆಸ್ತಿಯು [illegible] ಅವಿಭಕ್ತವಾಗಿರುವ ಬದ [illegible] ಬೇಗನೆ ಪುಡ್ಡು [illegible] ಆಡಳ್ತೆ [illegible] ಈ ಕೆಲಸವನ್ನೇ [illegible] ಕೆಲಸ ಮಾಡ [illegible] ಅನುಕೂಲವಾಗುವುದು. ಆ [illegible] ಪ್ರಮಾಣ ಬಗ್ಗೆ [illegible] ಕೊಡುವುದು ನ್ಯಾಯ [illegible]

ಆಸ್ತಿ ವಿಭಾಗ

[illegible] ಆಸ್ತಿ ವಿಭಾಗದ [illegible] ಸಂತಾನ [illegible] ಪ್ರತಿಯೊಬ್ಬನಿಗೂ [illegible] ಕವರು ಸರ್ತಿ [illegible] ಪ್ರತಿಯೊಬ್ಬನಿಗೂ ಸಮಾನ ಪಕ್ಕಿರುವ [illegible] ಬಾಧಕವಾಗುವಂತಹ [illegible] ಕುಟುಂಬದ ಆಸ್ತಿಯು ಆವರ [illegible] ಮೆಂಬರರಿಗೆ ಸರಿ ಸಮಾನ ಪಕ್ಕಿರುವ [illegible] ಪ್ರಮಾಣೀ [illegible] ಈ ವರ್ಷ [illegible] ಸಭೆಯಲ್ಲಿ ಇಂದಿನ ಆ [illegible] ಶ್ರೀ. ಕೆ. ಬಿ. ಬಲ್ಲಾಳರು ಅಳಿಯ ಸಂತಾನದ ಆಸ್ತಿಯಲ್ಲಿ ಎಲ್ಲರಿಗೂ ಸರಿಸ

ಮಾನ ಹಕ್ಕಿದ್ದು, ಕಿಪುಡ, ಹೋಳರನ್ನೊಳ ಗೊಂಡು ಅದೊಂದು ಅನಾಥಾಶ್ರಮವಾಗಿರು ವುದೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಈಗ ಅಳಿಯ ಸಂತಾನದ ಕಾನೂನು ತಿ ದ್ದುಪಡಿಯಾಗಬೇಕೆಂದು ಜನರು ಕೂಗುವ್ದ ದೇಕೆಂದರೆ ತಮಗೆ ಸಿಕ್ಕಬೇಕಾದ ಜೀವನಾಂ ಶದ ಬಗ್ಗೆ ತಾವು ಆಡಳ್ತೆದಾರನ ಮೇಲೆ ಅ ವಸಾರ್ಥ ವ್ಯಾಜ್ಯ ಮಾಡಿಯೇ ಪಡಯಬೇಕೆಂ ಬುದು ತಪ್ಪಬೇಕು. ಮಾತ್ರವಲ್ಲ ತಮಗೆ ಸಿ ಕ್ಕುವ ಆಕ್ಕೀ ಬಗ್ಗೆ ಭೂಮಿಯೇ ಸ್ವಾಧೀನ ತೆಗೆ ಬರಬೇಕು ಎಂಬುದಕ್ಕಾಗಿಯೇ ಆಗಿದ ಅದುದರಿಂದ ಅವಸಾರ್ಥಕ್ಕೆ ಬೇಕಾದ ಆಕ್ಕಿ ಯನ್ನು ಸುಲಭ ರೀತಿಯಲ್ಲಿ ತಾವು ಪಡೆದು ಆ ಬಾಬ್ತಿನ ಭೂಮಿ ತಮ್ಮ ಸ್ವಾಧೀನತೆಗೆ ಸಿ ಕ್ಕುವ ವ್ಯವಸ್ಥೆ ಮಾಡಿದರೆ ನಿಜವಾದ ಸುಧಾ ರಣೆ ಮಾಡಿದಂತಾಗುವುದು. ಹೀಗೆ ಮಾಡಿ ದುದರಿಂದ ಯಾವ ಪಕ್ಷಗೂ ಯಾವ ಕೊರ ತೆಯೂ ಬಾರದೆ ಸಿಕ್ಕಬೇಕಾದ ಆಕ್ಕಿಯು ಪಾಲಿನ ರೂಪದಲ್ಲಿ ನಮಗೆ ಸಿಕ್ಕಿ ಭೂಮಿ ಸ್ವಾಧೀನತೆಗೆ ಬಂದು ನಾವು ಬೇಕಾದ ಕಷ್ಟ ಕೃತವಮಾಡಿಕೊಂಡಿರಬಹುದು ಆದುದರಿಂದ ತಲೆವಾರು ಪಾಲು ಮಾಡುವುದು ನ್ಯಾಯ ಸಮ್ಮತವಾಗಿರುವುದು.

ಈಗ ಕೋರ್ಟಿನಲ್ಲಿ ಒಂದೇ ತಾಯಿ ಮ ಕ್ಕಳ ಒಳಗೂ ಬೇಕಾದಷ್ಟು ಅವಸಾರ್ಥ ವ್ಯಾ ಜ್ಯ ಆಗುವುದನ್ನು ನಾವು ಪ್ರತ್ಯಕ್ಷ ನೋಡಿರು ತ್ತೇವೆ. ಅಳಿಯ ಸಂತಾನ ಕುಟುಂಬದಲ್ಲಿ ಆ ವರವರ ಮಟ್ಟಿಗೆ ಅವರಲ್ಲದೆ ಕವರನ್ನು ಅವ ಲಂಬಿಸಿಕೊಂಡು ಯಾರೂ ಇಲ್ಲ. 1939ರಲ್ಲಿ ರಚಿಸಲ್ಪಟ್ಟ ಮಸೂದೆಯು ಕೇವಲ ಕಮ್ಮಿ ಜನರು ಇರುವ ಕವರಿಗೆ ಒಂದು ಪ್ರಯೋಜ ನ ಮಾಡಿಕೊಟ್ಟಿತ್ತೇ ಹೊರತು ನಿಜವಾದ ಅ ಳಿಯ ಸಂತಾನಿಗನಿಗೆ ಅದರಲ್ಲಿ ಯಾವ ತರದ ಪ್ರಯೋಜನವೂ ಇಲ್ಲ, ಮಾತ್ರವಲ್ಲ, ಬಹುಪ ಕ್ಷೀಯರ ಕವರಿಗೆ ಅನ್ಯಾಯ ತೋರ ಆ ನ್ಯಾಯವೇ ಸರಿ ಎಂದು ಹೇಳಿದರ ಅತಿಶ ಯೋಕ್ತಿಯಾಗಲಾರದು. [illegible] ಕಾರಣ ಕವರು ವಾರು ಪಾಲು ಮಾಡಿಕೊಂಡ ಸಂತರ ಇನ್ನೊಂದು ಕವರಿಗೆ ಅವನ ತಾಯಿ ಇರುವ ವರೀಗೆ ಅಥವಾ ಆಕೆಯ 50 ವರ್ಷದ ವರೆಗೆ ಆತನಿಗೆ ಕೇವಲ ಅವಸಾರ್ಥವಲ್ಲದೆ ಪಾಲಿಲ್ಲ ಎಂದಮೇಲೆ ಸುಧಾರಣೆಎಂದರೆ ಇನ್ನೊಂದು ಕವರಿನವರಿಗ್ಯ ಮಾತ್ರ ಅನುಕೂಲ ಮಾಡಿಕೊ ಟ್ಟಹಾಗೆ ಆಗಿರುತ್ತದೆ. ಈ ⅓ ಅಂಶ ಜನ ಸರ್ತಿ ⅔ ಅಂಶ ಕವರು ಸರ್ತಿ ಪ್ರಕಾರ ಪಾಲು ಮಾ ಡುವಲ್ಲಿ ಕಮ್ಮಿ ಜನರು ಇರುವ ಕವರಿಗೆ ಹೆಚ್ಚು ಆದಾಯ ಕೂಡಿಸಿ ಹೆಚ್ಚಿನ ಜನ ಇರುವ ಕ ವರನ್ನು ಗರೀಬರನ್ನಾಗಿ ಮಾಡಿದಂತಾಗುವು ದೆಂದು ಹೇಳಿದರೆ ತಪ್ಪಾಗಲಾರದು. ಕಾರಣ 1000 ಮುಡಿ ಅಕ್ಕಿ ಇರುವ I ಮನೆಯಲ್ಲಿ ⅓ ಅಂಶ ಕವರು ಸರ್ತಿ ⅔ ಅಂಶ ತಲೆ ಸರ್ತಿ ಪ್ರಕಾರ ಪಾಲು ಮಾಡಿದರೆ ಎಂತಹ ಅನ್ಯಾ ಯವಾಗುವುದೆಂಬುದನ್ನು ಈ ಕೆಳಗೆ ವಿವರಿ ಸಿದ ಉದಾಹರಣೆಯಿಂದ ನಾವು ತಿಳಿದುಕೊ ಳ್ಳಬಹುದು.

ಒಂದು ಕುಟುಂಬದಲ್ಲಿ A ಮತ್ತು B ಯ ನ್ನುವುದು ಮುಖ್ಯ ಕವರುಗಳಾಗಿ ಆ ಪೈಕಿ A ಕವರಿನಲ್ಲಿ 3 ಜನರೂ B ಕವರಿನಲ್ಲಿ 57 ಜನರೂ ಇರುತ್ತಾರೆ ಎಂದು ಭಾವಿಸೋ ಣ. ಈ B ಕವರಿನಲ್ಲಿ C. D. E. F. ಎಂಬ 4 ಉಪ ಕವರುಗಳಿರುತ್ತವೆ. C ಕವರಿನಲ್ಲಿ 10 ಜನರೂ D ಕವರಿನಲ್ಲಿ 25 ಜನರೂ E ಕವರಿನಲ್ಲಿ 15 ಜನರೂ F ಕವರಿನಲ್ಲಿ 7 ಜನ ರೂ ಇರುತ್ತಾರೆ. ಪ್ರತಿ ಒಬ್ಬ ಮೆಂಬರನೀಗೆ ⅔ ಅಂಶ ಜನಸರ್ತಿ ⅓ ಅಂಶ ಕವರು ಸರ್ತಿ ಪ್ರಕಾರ ಪಾಲು ಬಂದಲ್ಲಿ A ಕವರಿನ ಪ್ರತಿ ಒ ಬ್ಬ ಮೆಂಬರನೀಗೆ 91 2-0 ತೊಂಭತ್ತೊಂ ದು ಮುಡಿ ಎರಡು ಕಳ್ಸಿಗೆ ಬರುತ್ತದೆ. ಹಾಗೆ ಯೇ B ಕವರಿನವರಾದ C ಕವರಿನ ಪ್ರತಿಯೊ ಬ್ಬ ಮೆಂಬರನೀಗೆ 15-1/3 ಮುಡಿ ಅಕ್ಕಿ ಯೂ, D ಕವರಿನ ಪ್ರತಿ | ಒಬ್ಬ ಮೆಂಬರನೀ ಗೆ 10 ಮುಡಿಯೂ, E ಕವರಿನ ಪ್ರತಿ ಒ ಬ್ಬ ಮೆಂಬರನೀಗೆ 12-1/3 ಮುಡಿ ಅಕ್ಕಿ ಯೂ F ಕವರಿನ ಪ್ರತಿ ಒಬ್ಬ ಮೆಂಬರನಿ ಗೂ 19.1 3 ಮುಡಿ ಅಕ್ಕಿಯೂ ಬರುವು ದು. ಮೇಲಿನ 1000 ಮುಡಿ ಅಕ್ಕಿಯಲ್ಲಿ ಎಂದೇ ಕುಟುಂಬದ ಪ್ರತಿ ಒಬ್ಬ ಮೆಂಬರನಿ ಗೂ 16-2/3 ಮುಡಿ ಅಕ್ಕಿ ಸಿಕ್ಕಬೇಕಾಗಿರು ವಾಗ ಇಂದಿನ ತಿದ್ದುಪಡಿಯಂತೆ ಅದೇ ಕು ಟುಂಬದ ಮೆಂಬರರೊಳಗೆ ಒಬ್ಬನೀಗೆ 91- 2/3 ಮುಡಿ ಅಕ್ಕಿಯೂ ಮತ್ತೊಬ್ಬನಿಗೆ 10 ಮುಡಿ ಅಕ್ಕಿಯೂ ಸಿಕ್ಕುವದನ್ನು ಯಾರು ತಾನೇ ಸಹಿಸಿಯಾರು? ಇದನ್ನು ಸುಧಾರಣೆ ಎಂತ ಕರೆಯುವರೆ? ಇದು ಕೇವಲ ಕಮ್ಮಿ ಜನ ಇರುವ ಕವರಿನವರ ಚಳವಳವೆಂತ ಹೇ ಳಿದರೆ ತಪ್ಪಾಗಬೀತೇ? ಇದು ಅಲ್ಪಸಂಖ್ಯಾ ವ್ಯಾಟಲ್ಯವನ್ನು ತೋರಿಸುತ್ತದೆ. ಅಲ್ಪಪಕ್ಷೀ ಯರಿಗಾಗಿ ಪಾಕಿಸ್ತಾನ ಬೇಕೆಂಬ ಜಿನ್ನಾ ಸಾ ಹೇಬರ ಹಟಮಾರಿತನಕ್ಕೂ ಇದಕ್ಕೂ ಏನು ಭೇದ? ಈಗಿನ ರಂಗದಲ್ಲಿ ಎಲ್ಲರಿಗೂ ಸರಿ ಸಮಾನ ಹಕ್ಕಿರಬೇಕು; ಪ್ರಜಾಸತ್ತಾ ಸರಕಾ ರ ಬೇಕೆಂಬ ಕೂಗು ಎಲ್ಲ ಕಡೆಯಲ್ಲಿಯೂ ಕೇಳಿ ಬರುತ್ತಿದ್ದರೂ ಅಳಿಯ ಸಂತಾನದ ಕೆಲವೇ ಮೆಂಬರರು ಕವರು ಎಂಬ ನೆವನ ಹೇಳಿಕೊಂಡು ಬೆರಳೆಣಿಕೆಯಷ್ಟು ಮಂದಿಯ ನ್ನು ಅನ್ಯಾನ್ಯಗತಿಕರನ್ನಾಗಿ ಮಾಡಲು ಬಯ ಸುವುದು ಹೇಯ ಕೆಲಸವಲ್ಲವೇ? ಈಗಿನ ಕಾನೂನಿನಂತೆ ಪ್ರತಿಯೊಬ್ಬಂಗೂ ಸಮಾನ

ಹಕ್ಕು ಇರುವದನ್ನೇ ಊರ್ಜಿತಗೊಳಿಸಿ ಅಂ ಥಾ ಹಕ್ಕು ಪ್ರಕಾರ ಸಿಕ್ಕುವ ಅಕ್ಕಿಯು ಆಸ್ತಿ ಪಾಲಿನರೂಪದಲ್ಲಿ ನಮ್ಮ ಅನುಭೋಗಕ್ಕೆ ಸಿ ಕ್ಕುವಂತೆ ತಲೆವಾರು ಪಾಲು ಮಾಡಿದರೆ ಸು ಧಾರಕರು ನ್ಯಾಯ ದಾನ ಮಾಡಿದಂತಾಗು ವುದು. ಅಲ್ಪ ಸಂಖ್ಯಾಕರ ಹೆಸರು ಹೇಳಿ ಹಿಂದೂದೇಶವನ್ನು ವಿಭಜಿಸಬಾರದೆಂತಲೂ, ಅದು ಅಖಂಡವಾಗಿರಬೇಕೆಂತಲೂ ಮುಖಂ ಡರು ಪ್ರಯತ್ನ ಮಾಡುತ್ತಿರುವಾಗ ಜಿನ್ನಾ ಸಾಹೇಬರು ಪಾಕಿಸ್ತಾನಕ್ಕಾಗಿ ಕಿವಿಯನ್ನು ಕಿವುಡುಗಟ್ಟಿಸುವಂತಹ ಕೂಗೆಬ್ಬಿಸಿದರೂ ಜ ಗದ ನೈತಿಕ ಬೆಂಬಲ ಅದಕ್ಕೆ ದೊರೆಯಲಿಲ್ಲ ವೆಂಬುದು ಸುಧಾರಕರಿಗೆ ತಿಳಿಯದ ವಿಷಯ ವೆ? ನಮ್ಮ ಹಿರಿಯರು ಮರಣಶಾಸನ ರಹಿತ ಆಸ್ತಿ ಬಿಟ್ಟು ಹೋದದ್ದು ತನ್ನ ಎಲ್ಲಾ ಕು ಟುಂಬದ ಮೆಂಬರರು ಸರಿಸಮಾನವಾಗಿ ಅ ನುಭವಿಸಬೇಕೆಂತ. ಆಸ್ತಿ ಕೊಟ್ಟವರು ಸರಿಸಮಾನವಾಗಿ ಅನುಭವಿಸಬೇಕೆಂತ ವಿಧಿ ಸಿರುವಾಗ, ಸುಧಾರಕರು ಊಟಕ್ಕಾಗಿ ಮಾ ಡಲಿಟ್ಟ ಹಿರಿಯರ ಆಸ್ತಿಯನ್ನು ತಲೆವಾರು ಪಾಲಾಗಬೇಕೆಂತ ಹೇಳುವದರಲ್ಲಿ ಪರಿಪೂರ್ಣ ನ್ಯಾಯವಿದೆ. ಇದಕ್ಕೆ ಬದಲಾಗಿ ಯಾರಾದ ರೂ ⅓ ಅಂಶ ಕವರು ಸರ್ತಿ ⅔ ಅಂಶ ಜನ ಸರ್ತಿ ಪಾಲಾಗಬೇಕೆಂತ ಹೇಳಿದರೆ ಅವರನ್ನು ಇಂದಿನ ಜಿನ್ನಾ ಪಾರ್ಟಿಯವರಿಗೆ ಹೋಲಿ ಸಿದರೆ ತಪ್ಪಾಗಲಾರದು. ಯಾವಾಗಲೂ ಹೆ ಚ್ಚಿನ ಜನರಿರುವ ಕವರಿನಲ್ಲಿ ಜನ ಹೆಚ್ಚಾದ ಷ್ಟು ಕಮ್ಮಿ ಕವರಿನಲ್ಲಿ ಜನ ಹೆಚ್ಚಾಗಲಾರ ರು. ಹೀಗಿರುವಾಗ ಸಣ್ಣ ಕವರಿನಲ್ಲಿ ಇನ್ನು ಹೆಚ್ಚು ಜನ ಆದೀತು ಎಂತ ಹೇಳುವುದರಲ್ಲಿ ಹುರುಳಿದೆಯೆ? ಯಾರು ಪಾಕಿಸ್ತಾನವನ್ನು ವಿರೋಧಿಸುವರೋ ಅವರು ಖಂಡಿತವಾಗಿ ಕವರು ಎನ್ನುವ ಪ್ರಶ್ನೆಯನ್ನು ವಿರೋಧಿಸು ವರು. ಈಗಿನ ರೇಶನಿಂಗ್ ಪದ್ಧತಿಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಮುಂದೆ ಆಶಿಸುವ ಸಮತಾವಾದದ ರಾಜ್ಯದಲ್ಲಿಯೂ ಕವರು, ಪಂಗಡಗಳೆನ್ನದೆ ಎಲ್ಲವರನ್ನೂ ಸರಿ ಸಮಾನತೆಯಿಂದ ನೋಡುವರು. ಅದ್ದರಿಂ ದ ಕವರು ವಾರು ಪಾಲು ಎಂಬುದು ಅನ್ಯಾ ಯ ಮತ್ತು ಅಂಧಾನುಕರಣೆ. ಯಾವ ನಮ್ಮ ಈಗಿನ ಅಳಿಯ ಸಂತಾನ ಕಾನೂನಿನಿಂದ ಅ ವಸಾರ್ಥ ಪಡೆಯಲು ಪೇಚಾಟವಾಗಿರು ವುದೋ ಅದೇ ಕಾನೂನನ್ನು ತಿದ್ದುಪಡಿ ಮಾ ಡಿ ನಮ್ಮ ಈಗಿನ ಹಕ್ಕು ಪ್ರಕಾರ ಸಿಕ್ಕುವ ಅಕ್ಕಿಯು ತಲೆವಾರು ಪ್ರಕಾರ ಪಾಲಿನ ರೂ ಪದಲ್ಲಿ ನಮಗೆ ಸಿಕ್ಕಿ ನಾವು ಅನುಭವಿಸುವಂ ಥಾ [illegible] ಆಗಬೇಕೆಂಬುದು ನ ನ್ನ ಆಕಾಂಕ್ಷೆ. ಇದು ಈ ಕಡೆಯ ಜನ ಸಾ ಮಾನ್ಯರ ಆಕಾಂಕ್ಷೆಯೂ ಆಗಿದೆ. ಇದಕ್ಕೆ ಎ ಲ್ಲವರೂ ಸಮ್ಮತಿಪಡಲಾರರೆ?

ಜಾಣಾಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ಪರಿಸ್ಥಿತಿಯ ನ್ನು ಪರ್ಯಾಲೋಚಿಸಿ ತಯಾ ರಿಸಲ್ಪಟ್ಟ ಅಮೋಘ ವಾದ ಆಯುರ್ವೇದೀಯ ರಸಾಯನ. ಅಲ್ಪ ಮೌ ಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸು ಲಭವಾಗಿರುವುದು.

ಜೀವನಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ರ ಟಿನ್ನಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿನಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು - ಡಾ| ಎ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗ ಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿ ವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ನವಯುಗದ

ಚಂದಾ ಹಣ ಬಾಕಿ ಇರುವವರಿಗೆ ಕಳುಹಿಸುವ ವಿ. ಪಿ ಯನ್ನು ಅ ವರು ದಯವಾಡಿ ಸ್ವೀಕರಿಸು ವಂತೆ ವಿನಂತಿ.

ಮೆನೇಜರ್.

ಹಳ್ಳಿ ಪಂಡಿತರು.

ಲೇಖಕರು:- ಶ್ರೀ ಕುಂದಾಪುರ ರಾಮರಾವ್.

ನಮ್ಮಜ್ಜ ಹೇಳುತಿದ್ದ ಮಾತಿದು. ಪುಟ್ಟಣ್ಣ ಆರಾಧ್ಯರೆಂದು ಒಬ್ಬರಿದ್ದರಂತೆ. ವೈದ್ಯರಾದವರು ಅವರ ಹೆಸರು ಹೇಳಿ ಔಷಧಿ ಕೊಡಬೇಕು. ಈಗಿನಂತೆ ಎಸ್‌. ಬಿ. ಬಿ. ಎಸ್.; ಎಲ್. ಎಮ್. ಪಿ ಮೊದಲಾದ ಯಾವ ಬಿರುದೂ ಅವರಿಗಿರಲಿಲ್ಲ. ಇಂಗ್ಲೆಂಡು ಅಮೇರಿಕೆಗಳಿಂದ ಮದ್ದನ್ನೂ ಅವರು ತರಿಸುತ್ತಿರಲಿಲ್ಲ. ಕಾಡುಗುಡ್ಡಗಳಲ್ಲಿ ದೊರೆವ ಮೂಲಿಕೆಗಳೇ ಅವರ ಸಕಲ ಸಾಮಾಗ್ರಿಗಳು. 'ನನ್ನ ಮಗನ ಪ್ರಾಣವು ಅವರಿಂದಲೇ ಉಳಿಯಿತು'. 'ಆರಾಧ್ಯರೆಂದರೆ ಪ್ರತ್ಯಕ್ಷ ದೇವರು' ಮೊದಲಾದ ಬಿರುದುಗಳಿಗೆ ತುದಿ ಮೊದಲಿರಲಿಲ್ಲ. ಎಲ್ಲಾ ಕಾಯಿಲೆಗಳಲ್ಲಿ ಅದ್ವಿತೀಯರೆನಿಸಿಕೊಂಡಿದ್ದರೂ, 'ಸನ್ನಿಪಾತ'ದ (Typhoid) ಮಟ್ಟಿಗಂತೂ ಅವರ ಮೇಲ್ಗೈ ಇರಲಿಲ್ಲ.

ಅವರೊಂದು ಸಲ ಧರ್ಮಸ್ಥಳಕ್ಕೆ ಯಾತ್ರೆ ಹೊರಟರು. ಆಗಿನ ಕಾಲದಲ್ಲಿ ನಡೆದೇ ಹೋಗಬೇಕಿತ್ತಷ್ಟೆ? ಕತ್ತಲಾಗುವಾಗ ಬ್ರಾಹ್ಮರ ಮನೆಯೊಂದರಲ್ಲಿ ಉಳಿಯಲು ಸ್ಥಳ ಕೇಳಿದರು. 'ಸಾಧ್ಯವೇ ಇಲ್ಲ' ಎಂದು ಮುಖ ಮುರಿಯುವಂತೆ ಬಾಗಿಲು ಹಾಕಿಕೊಂಡರು. ಬೇರೆಲ್ಲಿಯೂ ಮನೆಗಳಿಲ್ಲದ್ದರಿಂದ ಅಂಗಳದಲ್ಲಿ (ಕಣವೆಂದೂ ಹೇಳುತ್ತಾರೆ) ಉಳಿಯಬೇಕಾಯಿತು.

ಮಧ್ಯ ರಾತ್ರಿಯ ಕಾಲ. ಒಮ್ಮಿಂದೊಮ್ಮೆಯೇ ಅಳುವ ಸದ್ದು ಕೇಳಿತು. 'ಯಾರಾದರೂ ನನ್ನ ಮಗನ ಪ್ರಾಣ ಉಳಿಸಲಾರಿರಾ' ಆರ್ತ ಧ್ವನಿಯು ಎಲ್ಲೆಡೆಗಳಲ್ಲಿಯೂ ವ್ಯಾಪಿಸಿತು. ಯಕ್ಷಗಾನ ಬಯಲಾಟಗಳಲ್ಲಿ, ವೇಷಕ್ಕಾಗಲಿ, ಮೃದಂಗಕ್ಕಾಗಲಿ ಜನವಿಲ್ಲದಿದ್ದರೆ 'ಮೇಳ'ದವರ ಮೇಲೆ ಎಷ್ಟೇ ಸಿಟ್ಟಿದ್ದರೂ ತಿಳಿದವರು ಸಹಾಯಮಾಡದೆ ಇರುವುದಿಲ್ಲ. ಆರಾಧ್ಯರ ಸ್ಥಿತಿಯೂ ಹೀಗೆಯೇ ಆಯಿತು. ಮೊದಲು ಉಳಿದುಕೊಳ್ಳಲು ಸ್ಥಳಕೊಡದಿದ್ದರೇನು? ಕಷ್ಟಕಾಲದಲ್ಲಿ ಸಹಾಯಮಾಡದಿರುವುದಕ್ಕೆ ಯಾರಿಗೂ ಮನವೊಪ್ಪುವುದಿಲ್ಲ.

ಪಂಡಿತರ ಸವಾರಿಯು ಒಳಗೆ ಹೋಯಿತು. ಹೋಗಿ ನೋಡುವಾಗ ಅದೊಂದು ಭಯಂಕರ ದೃಶ್ಯವಾಗಿತ್ತು. ಸುಮಾರು ಇಪ್ಪತ್ತೆರಡು ವಯಸ್ಸಿನ ತರುಣನೊಬ್ಬನು ಗತಪ್ರಾಣನಾಗಿದ್ದನು. ಪ್ರಾಣ ಹೋಯಿತೆಂದು ನೆಲಕ್ಕೂ ಹಾಕಿ ಬಿಟ್ಟಿದ್ದರು! ಅವರು ತಡಮಾಡಲಿಲ್ಲ. ಪರೀಕ್ಷಿಸುವಾಗ 'ಸನ್ನಿಪಾತ'ವೆಂದು ಗೊತ್ತಾಯಿತು. ಹೆಂಚು ಒಡೆದು ಬಿಸುಡಿದ್ದ ಬಳಿಯ ಓಡಿನಿಂದ ನಡು ನೆತ್ತಿಯನ್ನು ಕೆರೆದು ಏನೋ ಚಿಕಿತ್ಸೆ ನಡೆಸಿದರು. ನಾಲ್ಕು ನಿಮಿಷ ಕಳೆಯಿತು, ಉಸಿರಾಡದಿದ್ದ ವ್ಯಕ್ತಿಯು ಮೆಲ್ಲಮೆಲ್ಲನೆ ಶ್ವಾಸೋಚ್ಛ್ವಾಸಕ್ಕೆ ಪ್ರಾರಂಭಿಸಿತು. ಅರ್ಧ ಗಂಟೆಯೊಳಗೆ ಅತ್ತಿತ್ತ ಹೊರಳಾಡುವ ಸಾಮರ್ಥ್ಯ ಬಂದು ಬಿಟ್ಟಿತ.

○○ ○○ ○○

ಮತ್ತೊಂದು ಘಟನೆ ನಡೆಯಿತು. ಉಳ್ಳೂರು ಚಂದ್ರಶೇಖರಯ್ಯ ಎಂದರೆ ಭಾರಿ ಜಮೀನ್ದಾರರು. ಅವರ ಹತ್ತಿರ ಸಾಲಮಾಡದಿದ್ದವರು ಆ ಊರಿನಲ್ಲೇ ಇರಲಿಲ್ಲ. ಮುದ್ದಣ್ಣನೆಂಬೊಬ್ಬ ಕುಳ ನೂರಿ ಸಾವಿರ ರೂಪಾಯಿ ಕೊಡಬೇಕಿತ್ತು. ಕೇಳಿದರೆ 'ಇಂದು ನಾಳೆ' ಹೀಗೆ ಅನೇಕ ಬಾರಿ ಚಾಳಿಸಿದ. ಶೇಖರಯ್ಯ ವ್ಯಾಜ್ಯ ದಾಖಲು ಮಾಡಿದರು. ಹಣ ತೆಗೆದುಕೊಂಡುದೇ ಸುಳ್ಳೆಂದು ಮದ್ದಣ್ಣ ವಾದಿಸಿದ. ಸ್ಪಷ್ಟ ಪಡಿಸುವುದಕ್ಕೆ ಶೇಖರಯ್ಯನಿಗೆ ಬೇರಾವ ಸಾಧನವೂ ದೊರೆಯದ್ದರಿಂದ ತಾನು 'ಪ್ರಮಾಣ' ಮಾಡುವುದಾಗಿ ಹೇಳಿದನು. ಒಂದು ನಿರ್ದಿಷ್ಟ ದಿನದಲ್ಲಿ ಉಳ್ಳೂರು ದೇವಸ್ಥಾನದಲ್ಲಿ ಪ್ರಮಾಣ ಮಾಡುವುದೆಂದಾಯಿತು.

ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡುವನೇ? ಶೇಖರಯ್ಯ ಒಂದು ಶನಿಗಾರ ಅಭ್ಯಂಜನ ಮಾಡಿಕೊಂಡರಂತೆ ಮೊದಲು ಮೂರು ದಿನಗಳಿಂದಲೂ ಜ್ವರ ಬರುತ್ತಿದ್ದುದು ಅವರ ಲಕ್ಷ್ಯಕ್ಕೆ ಬರಲಿಲ್ಲ. ಜ್ವರ ಜಾಸ್ತಿಯಾಗಿ 'ವಿಷಮ'ವಾಯಿತು. ಒಂದು ಎರಡು ಹೀಗೆ ಆರೇಳು ದಿನಗಳೂ ಸಂದು ಬಿಟ್ಟವು. ಪ್ರಮಾಣದ ದಿನ ನಾಳೆ. ಮಾಡಬೇಕೇನು? ಅವರ ಮನೆಗೂ ದೇವಸ್ಥಾನಕ್ಕೂ ಹೆಚ್ಚು ದೂರವಿಲ್ಲ ನಿಜ. ಆದರೆ ಅವರಿಗೆ ಏಳಲು ಸಾಮರ್ಥ್ಯಬೇಕಲ್ಲ; ಇಂಥಾ ಸ್ಥಿತಿಯಲ್ಲಿ ಹೆಂಡಿರು ಮಕ್ಕಳು ಸ್ನಾನಮಾಡಿ ಪ್ರಮಾಣ ಮಾಡಲು ಬಿಡುವರೇ?

'ನಾನು ಸತ್ತರೆ ಅಷ್ಟೇ ಹೋಯ್ತು, ಪ್ರಮಾಣ ಮಾಡಿಯೇ ಸಿದ್ಧ.' ಶೇಖರಯ್ಯ ಹಟ ಹಿಡಿದರು.

'ಹಣ ಹೋದರೆ ಹೋಯ್ತು. ಜೀವಕ್ಕಿಂತ ಹೆಚ್ಚಲ್ಲ' ಹೆಂಡಿರು ಮಕ್ಕಳು ವಾದಿಸಿದರು.

ಇಷ್ಟಾಗುವಷ್ಟರಲ್ಲಿ ಆರಾಧ್ಯರ ಸವಾರಿಯು 'ಹರಿಹರ' ಎಂದು ಶೇಖರಯ್ಯನ ಮನೆಗೆ ಚಿತ್ತೈಸಿತು. ಶೇಖರಯ್ಯನ ಹೆಂಡತಿಯಿಂದ ಸಂಗತಿಯನ್ನು ತಿಳಿದುಕೊಂಡರು. 'ನಾನಿದ್ದೇನೆ ಯೋಚನೆ ಬಿಡಿರಿ'. ಅವರು ಅಭಯ ವಚನ ಕೊಟ್ಟರು.

ಪ್ರಮಾಣದ ದಿನ ಶೇಖರಯ್ಯನನ್ನು ಕೈಹಿಡಿದು ತಣ್ಣೀರು ಸ್ನಾನಮಾಡಿಸಿದರು. ಪ್ರಮಾಣವು ಪೂರೈಸಿತು. ಆರಾಧ್ಯರು ಕೊಟ್ಟ ಮದ್ದಿನಿಂದ ಉರಿಯು ಜಾಸ್ತಿಯಾಯಿತು. ಅದನ್ನು ಶಮನಿಸಲು ರಸಬಾಳೆ ಹಣ್ಣನ್ನು ತಿನ್ನಿಸಿದರು. ಆದರೂ ಅವರಿಗೆ ಅಪಾಯ ಬರಲಿಲ್ಲ ಇದು ನಲವತ್ತು ವರುಷಗಳ ಹಿಂದಿನ ಮಾತು

○○ ○○ ○○

ಈಗಲೂ ಹಳ್ಳಿ ಪಂಡಿತರಿದ್ದಾರೆ ಡಾಕ್ಟರರೊಡನೆ ಸ್ಪರ್ಧಿಸುತ್ತಾರೆ. ನಮ್ಮೂರಲ್ಲೊಬ್ಬ ವೈದ್ಯ. ಹೆಸರು ಸೋಮಣ್ಣ. ಇವನಪ್ಪ ಒಳ್ಳೆ ಹೆಸರು ಪಡೆದಿದ್ದನಂತೆ. ತಂದೆಯ ಹೆಸರನ್ನು ಳಿಸಲು ಮಗನ ಪ್ರಯತ್ನ. ಸುಮಾರು ಇಪ್ಪತ್ತೈದಕ್ಕಿಂತಲೂ ಹೆಚ್ಚು ಗಿಡಮೂಲಿಕೆಗಳ ಪರಿಚಯ ಅವನಿಗೆ. ಕಟಲೇಕಾಳಿನಿಂದ ಹಿಡಿದು ನಿಂಬೇಕಾಯಿಯಷ್ಟು ಗಾತ್ರದ ಮಾತ್ರೆಗಳು, ನಾಲ್ಕೈದು ನಮೂನೆಯ ಕಷಾಯಗಳು! ಇವಿಷ್ಟು ಅವನ ಪಂಡಿತ ತನದ ವೈಶಿಷ್ಟ್ಯ.

ಕಾಹಿಲೆ ಯಾವುದೇ ಇರಲಿ; ಮೊದಲು ಕಷಾಯ, ಅದಾಗದಿದ್ದರೆ ಮಾತ್ರೆ, (Pills) ತಲೆಗೆ ವಾಸನೆ ಎಣ್ಣೆಯ ಸ್ನಾನ. ಅವನು ಹೇಳಿದ ಪಥ್ಯ ಮಾಡದಿದ್ದರೆ ನಾಳೆ ಅವನನ್ನು ದೂರಬಾರದು; ಪಥ್ಯಕ್ಕೆ ಹುಡಿ; ಉಪ್ಪು ಉಪಯೋಗಿಸ ಬಾರದು ಕಾರ ತಿನ್ನಬಾರದು ಹುಳಿಯೂಟ ಮಾಡಿದರೆ ಖಾಹಿಲೆ ಜಾಸ್ತಿಯಾದೀತು! ಎಣ್ಣೆ ನಂಜು ಹಾಲು ಮೊಸರು ತುಪ್ಪ ಬೆಣ್ಣೆ ವರ್ಜ್ಯ ಹೀಗೆ ಏಳು ದಿನ ಮಾಡಬೇಕು ಎಲ್ಲಿಯಾದರೂ ರೋಗಿಯು 'ಪಥ್ಯ'ವಾದರೆ ಅವನು ಹೇಳಿದ ಪಥ್ಯದಲ್ಲಿ ಹೆಚ್ಚು ಕಡಿಮೆಯಾದುದೇ ಕಾರಣ.

ಆಸ್ಪತ್ರೆಗಳಲ್ಲಿ ಕಣ್ಣಿಗೊಬ್ಬರು, ಕಿವಿಗೊಬ್ಬರು. ಹಲ್ಲಿಗೊಬ್ಬರು, ತಲೆಗೊಬ್ಬರು, ಹೀಗೆ ಪ್ರತ್ಯೇಕವಾಗಿ ವೈದ್ಯರಿರುತ್ತಾರಲ್ಲ! ನಮ್ಮ ಸೋಮಣ್ಣನು ಎಲ್ಲವನ್ನೂ ಬಲ್ಲ, ಅವನಿಗೆ ತಿಳಿಯದುದು ಧನ್ವಂತರಿಗೂ ಗೊತ್ತಿಲ್ಲ! ಅವನಲ್ಲೊಂದು ಒಳ್ಳೇ ಗುಣವಿದೆ. ಯಾರೂ ಅದಕ್ಕೆ ಶಿಫಾರಸು ಕೊಡಲೇ ಬೇಕು. ಮದ್ದಿನ ಕ್ರಯ ಆಸ್ಪತ್ರೆಗಳಲ್ಲಿ ಡಾಕ್ಟರರು ಹೇಳಿದಷ್ಟು ಕೊಡಬೇಕಷ್ಟೆ; ನಮ್ಮ ಸೋಮಯ್ಯನಾದರೆ ಚರ್ಚೆ ಮಾಡಿದವರಿಗೆ ರೂಪಾಯಿಯದನ್ನು ಅರ್ಧಾಣೆಗೂ ಕೊಡಬಲ್ಲ! ಹಣವನ್ನು ಮೊದಲೇ ಕೊಡಬೇಕೆಂದಿಲ್ಲ. ಗುಣವಾದ ವೇಳೆ ಕೈಯಲ್ಲಿ ಹಣವಿದ್ದಾಗ ಕೊಟ್ಟರಾಯಿತು.

ಇನ್ನೂ ಒಂದು ವಿಷಯ. ಆಸ್ಪತ್ರೆಗಳಲ್ಲಿ ರೂಪಾಯಿ ನಾಲ್ಕು ಕೊಟ್ಟರೂ ಒಂದು ಸಲದ ಮದ್ದು ಒಂದು ಗುಟುಕಿಗೂ ಬರುವುದಿಲ್ಲ. ಇವನದು ಹಾಗಲ್ಲ. ಒಂದು ಸಲಕ್ಕೆ ಸರಾಸರಿ ಒಂದೂವರೆ ಸೇರು!

ಹುಡುಗರಿಗೆ ತಮ್ಮ ಸರಿವ್ರಾಯದವರನ್ನು ಕಂಡರೆ ಇಷ್ಟ ಹಳ್ಳಿಯವರಿಗೆ ಹಳ್ಳಿ ಪಂಡಿತರಲ್ಲಿಯೇ ನಂಬಿಕೆ. 'ನಿಮಗೆಲ್ಲಾ ಆಸ್ಪತ್ರೆಗೆ ಹೋಗುವುದಕ್ಕೆ ಧಾಡಿಯೇನು?' ಯಾರಾದರೂ ಅಂದರೆ. 'ಹೌದು, ಡಾಕ್ಟರರಿಗೆ ಜ್ವರ ಬಿಡಿಸಲು ಏನು ಗೊತ್ತು? ತಲೆ ನೋವು ಹಲ್ಲು ನೋವು ಇದಕ್ಕೆಲ್ಲಾ ಔಷಧಿ ಸಿಗುವುದೇ?' ಇದೇ ರೀತಿಯ ಉತ್ತರ ಹಳ್ಳಿಯವರದು.

ಸೋಮಣ್ಣನ ಔಷಧಿಯಾಗದಿದ್ದರೆ (ಹಳ್ಳಿಯವರಿಗೆ) ಮದ್ದಣ್ಣ ಸಾಯ್ಸಿಸಿದ್ದಾನೆ. ಅದೂ ಆಗದಿದ್ದರೆ ಹಿರಿಯದ್ದದ ಸದ್ಯ ಹಾಂಡ ಸಿದ್ದಾನೆ. ಪ ಶ್ಯಾ ಜೋರಾದರೆ ಮಾಡುವುದೇನ? ಆಸೆಯೊಂದಿದೆಯಲ್ಲ! ಆಸ್ಪತ್ರೆಗೆ ಹೋಗುವುದು ಗ[illegible] ದರೆ ಆಯ್ತಲ್ಲ, ಇಲ್ಲವಾದರೆ ಕೊಂದುದೇ ಡಾಕ್ಟರರು!

ಎಲ್ಲರೂ ವಿದ್ಯಾವಂತರಾಗುವ ವರೆಗೆ ಹಳ್ಳಿ ಪಂಡಿತರ ಜೀವನಕ್ಕೆ ಕೊರತೆ ಬಾರದು.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟೆ ಫಾರ್ಮಸಿ. ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲೀಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಜರ್ಮೇನಿಯನ್ ಜೀವನ ಮಿಕ್ಸ್ಚರ್

ನಮ್ಮ ... ಪ್ರಸನ್ನ ... ಕಾರ್ಯಾಲಯ

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.

THE BHARATH MILLS, Ltd.

With

Dr. T. M. A. Pai, M. B., B. S.
Kochikar Panduranga Pai, Esq.
A. L. N. Rao, Esq., B. A., B. L.
Dr. K. L. Aithala, M. B., B. S.
T. N. Kelu Nambiar Esq.
Dr. V. K. Ballal, L. I. M.
T. Ramesh U. Pai, Esq.

Upendra Ananth Pai, Esq.
Dr. K. L. Aithala, M. B., B. S.
A. L. N. Rao, Esq., B. A., B. L.
Kochikar Manjunath Pai, Esq.
Kalsank Venkatraya Pai, Esq.
B. Padmanabha Pai, Esq.
T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. U. Shetty at the Navayuga Press, Udipi, S. India.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ 25] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol. 25
ವಾರ 34] Founder: SRI A. B. SHETTY, M.L.A. [No. 34

ಉಡುಪಿ ● 25—4—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಉಳುಕು, ಸೆಳೆತ, ಛಳಿ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಮುಂತಾದವುಗಳಿಗೆ ... ರೋಗಗಳಿಗೂ ಸಿದ್ಧ.

REGD.

ಸಕಲ ಔಷಧಿ ಅಂಗಡಿಗಳಲ್ಲಿಯೂ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE PROTECTION

If a mother was left unprovided for and if the children were too young to earn a livlihood and maintain the family, how much would not anyone feel for their plight?

What would not one give to forestal a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,

Head Office:- **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ಬೇರೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ —ಕುಂಬರವಾಡಿ ಸ್ಟೋರ್ಸ ದಾವಣಗೇರಿ.— ದಾವಣಗೇರಿ ಪ್ರೆಸ್. ...ಎಲ್, ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya. GADAG CITY.

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including

Travancore, Cochin and Mysore State.

New Business in 1945 in our area.— **Over 5 Millions.**

OUR Expert advice gained by 35 years Experience is at your door FREE

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ... ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಪ್ರತಿನಿಧಿಗಳು.—ಡಾ| ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ| ಆರ್| ಎನ್| ಶೆಟ್ಟಿ, ರಥಬೀದಿ; ಡಾ| ಪಿ| ಜಿ| ಆಚಾರ್ಯ ಫಾರ್ಮಸಿ; ಡಾ| ಕೆ| ಶೇಷಗಿರಿ ಪೈ, L. I. M., ಡಾ| ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿದ್ದೇವೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಕಮ್ಯೂನಿಸ್ಟ್ ಘೋಷಣೆ — ಲೇಖನಾಂಕ ೭.

★ 'ಮಜೂರ ದ್ರೋಹಿಗಳನ್ನು ಓಡಿಸಿರಿ' ★

'ವಿಚಾರಿ' ಯಿಂದ.

ಮಂಗಳೂರಿನ ನೇಯಿಗೆ ಮುಷ್ಕರವು ಮೊನ್ನೆಯೆನಿಂ ಹೊಸತಾಗಿ ಜ್ವಲಿಸಿದ ಕಥೆಯನ್ನು ಕೇಳಿಯಾಯಿತು: ಅದು ನಂದಿ ಹೋದ ರೀತಿಯನ್ನು ಒಂದಿಷ್ಟು ಚಿತ್ರಿಸುವೆನು.

ರಾಜಿಯಾದುದೊ? ರದ್ದಾದುದೊ?

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ತೀರ್ಮಾನಕ್ಕೊಪ್ಪಿಸಿ ಮಂಗಳೂರಿನ ನೇಯಿಗೆ ಮುಷ್ಕರವನ್ನು ಕಮ್ಯೂನಿಸ್ಟ್ ಸಂಘಗಳು ಉಪಸಂಹಾರ ಮಾಡಿಕೊಂಡ ಕುರಿತು ಏನನ್ನು ಹೇಳೆಂಬುದೇ ತೋರುವುದಿಲ್ಲ. ಈ ಕುರಿತು ಕಮ್ಯೂನಿಸ್ಟರೇನನ್ನುತ್ತಿದ್ದಾರೆ? ಇದೂ ತಮಗಾದ ವಿಜಯವೆನ್ನುತ್ತಿದ್ದಾರೆಯೆ? ಉತ್ತರಕ್ಕಾಗಿ ಕಮ್ಯೂನಿಸ್ಟ್ ಕಾಮ್ರೇಡ್‌ಗಳ ಬಾಯಿಯನ್ನು ನಾನು ನೋಡೆ. ತ್ರಿಶಿ-ಅವರ ಮನಸ್ಸಾಕ್ಷಿಯೇನನ್ನುತ್ತಿದೆ? ಮಂಗಳೂರಿನ ನೇಯಿಗೆ ಮುಷ್ಕರದ ಮುಟ್ಟಿಗೆ, ಕಮ್ಯೂನಿಸ್ಟರಲ್ಲಿ ಹೇಳನ್ನು ನಡೆಸುವ ಜವಾಬ್ದಾರಿ ಪತ್ರಿಯಮ್ಮದು. ಹೆಚ್ಚೆಂದರೆ ಒಂದು ಸಾರಿ ನಡೆಸುವಷ್ಟು ಮಾತ್ರ. (ಕಾರಣಗಳು ಹಿಂದಿನ ಲೇಖನದಲ್ಲಿ ಬಂದಿವೆ.) ಆ ಮೇಲೂ ಅವರು ಹೋರಾಡಿದ್ದರೆ ಮುಷ್ಕರದವನ್ನು ಸಂಕಷ್ಟಗಳೊಡನೆ ಹೋರತು ಮಗ್ಗಗಳ ಮಾಲಕರೊಡನಲ್ಲ. ದಿನಗಳೆದಂತೆ ಆ ಮುಷ್ಕರವೇ ಅವರನ್ನು ಸೋಲಿಸಿತು. ಕೊನೆಗೆ ಅವರಲ್ಲಿಗೆ ಬಂದರೆಂದರೆ, ಕೆಲಸಗಾರರನ್ನು ಪುನಃ ಕೆಲಸಕ್ಕೆ ಸೇರಿಸುವದೇ ಸದ್ಯಕ್ಕೆ ವಿಜಯವೆಂಬಂತಹ ದುಸ್ಥಿತಿಗೆ! ಈ 'ವಿಜಯ'ವಾದರೂ ಮರ್ಯಾದೆಯಿಂದ ಅವರಿಗೆ ದೊರೆಯುವಂತಾಗ ಬೇಕೆಂಬ ಪ್ರಯತ್ನವು ನಡೆದು ಆ ಹಾದಿಗೆ ಅರ್ಧ ಬೇಲಿ ಬಿದ್ದಿತ್ತು. ನಿಷ್ಪಕ್ಷಪಾತದೃಷ್ಟಿಗೆ ಬಿದ್ದ ಚಿತ್ರವನ್ನಷ್ಟೇ ಇಲ್ಲಿ ಮುಂದಿಡುತ್ತಿದ್ದೇನೆ--ಸುತ್ತ ಅರ್ಧ ಗೋಡೆಯೆದ್ದು, ಕಣಿವೆಯೊಂದರ ದ್ವಾರಮಾತ್ರ ತೆರೆದಿದ್ದ ವಾತಾವರಣ ನೇಯಿಗೆ ಮುಷ್ಕರಗಾರರನ್ನು ಸುತ್ತುಗಟ್ಟಿತು ಕೊನೆಗೆ ನಿರ್ವಾಹವಿಲ್ಲದೆ ಕಮ್ಯೂನಿಸ್ಟರು ಮುಷ್ಕರಗಾರರನ್ನು ಆ ಕಣಿವೆಗೇನೆ ಇಳಿಸಿದ್ದಾರೆ. ಈಗ ಅದನ್ನೇ 'ರಾಜಿ' ಎಂದು ಕರೆಯುತ್ತಿದ್ದಾರೇನೊ! ಹಾಗೆ ಹೇಳಿ ಒಂದೊಮ್ಮೆಗೆ ಹಂಗಿಸುವವರ ಬಾಯಿ ಮುಚ್ಚಿಸಲು ಕಮ್ಯೂನಿಸ್ಟರಿಗೆ ಸಾಧ್ಯವಾದರೂ, ತಮ್ಮ ಮನಸ್ಸಾಕ್ಷಿಯನ್ನು ಅವರೆಂದಿಗೂ ಸಮಾಧಾನಪಡಿಸಲಾರರು. ಈಗ ನೇಯಿಗೆ ಮುಷ್ಕರ ಸಮಾಧಾನಕ್ಕೆ ಹೆಗ್ಗಳಿಕೆ! ಕಮ್ಯೂನಿಸ್ಟರು ಕೆಲಸಗಾರರ ಅಭಿವೃದ್ಧಿಯನ್ನು ಸಾಧಿಸಿದರೆ! 'ಕೆಲಸಗಾರರನ್ನು ಸ್ಪರ್ಶಿಸಬೇಡಿ' ಎಂದು ಕಾಂಗ್ರೆಸಿಗರನ್ನು ಅವರು ಈಗಲೂ ಹೆದರಿಸುತ್ತಿದ್ದಾರೆ. ಹಿರಿಕೆಯಿಂದಲ್ಲವಾದರೂ ನೋವಲಿನಿಂದಲೂ ಕೆಲಸಗಾರರ ಮುಟ್ಟಿಗೆ ಅಸ್ಪೃಶ್ಯತಾಧರ್ಮವನ್ನೇ ಪಾಲಿಸುತ್ತಾ ಬಂದಿರುವ ದಕ್ಷಿಣ ಕನ್ನಡದ ಕಾಂಗ್ರೆಸಿಗರೂ ಈ ಯಾಕೆ! ಅದಕ್ಕೆ 'ಅಸ್ತು' ಎಂದಿದ್ದಾರೆ. ಅದರ ಐತಿಹಾಸಿಕ ವಿಚಿತ್ರವೆಂದು ಕೌತುಕಪಡಬೇಕೋ, ಕಮ್ಯೂನಿಸ್ಟರಿಗೊದಗಿದ ದುರ್ಗತಿಗಾಗಿ ಕನಿಕರಪಡಬೇಕೋ ನನಗರಿಯದು— ಕೆಲಸಗಾರರಿಗಸ್ಪೃಶ್ಯರಾಗಿರಬೇಕೆಂದು ಬೆದರಿಸುತ್ತಿರುವ ಕಾಂಗ್ರೆಸಿಗರ ಕೈಗೇನೇ ಕೆಲಸಗಾರರ ಅದೃಷ್ಟವನ್ನೆತ್ತಿ ಕೊಟ್ಟಿದ್ದಾರೆ ಕಮ್ಯೂನಿಸ್ಟರು! ಇನ್ನು ಗುಟ್ಟೇಕೆ? ಕಣ್ಣ ಮುಂದಿರುವ ವಸ್ತುಸ್ಥಿತಿಯೊಡನೆಯೂ ಕಣ್ಣು ಮುಚ್ಚಾಲೆಯಾಟವೇಕೆ? ಮಗ್ಗಗಳ ಮಾಲಕರನ್ನು ಸೋಲಿಸಬೇಕೆಂದು ಹೊರಟ ಕಮ್ಯೂನಿಸ್ಟರು, ಪ್ರತಿಕೂಲ ಪರಿಸ್ಥಿತಿಯಿಂದಾಗಿ ಎಷ್ಟೊಂದು ದೃಸ್ಥಿತಿಗಳಿಗೆ ಬೀಳಬೇಕಾಯಿತೆಂದರೆ ಅವರು ಮಾಲಕರಿಗಷ್ಟೇ ಅಲ್ಲ; ಅದರೊಂದಿಗೆ ಕಾಂಗ್ರೆಸಿಗರಿಗೂ ಸೋತು ಶರಣಾಗಬೇಕಾಯಿತು ಒಬ್ಬನ ಮೇಲೆ ಧಾಳಿಯಿಟ್ಟು ಇಟ್ಟು ಕಾಲಡಿಗೆ ಬಿದ್ದ ದೃಶ್ಯವಿದು! ಎಂತಹ ಟೊಣಪನ ಊಹೆಗಾದರೂ ನಿಲುಕುವಂತಿಲ್ಲ ಈ ದುರದೃಷ್ಟಕ್ಕೆ ಕೆಲಸಗಾರರನ್ನು ಕಮ್ಯೂನಿಸ್ಟರು ಬೇಕೆಂದೇ ಒಳಿಕೊಡಬಹುದಿತ್ತೇ, ಯಾಕೆ ಬೇಕಿತ್ತು ಈ ಅಧಿಕ ಪ್ರಸಂಗ?

ಇದು ಮಜೂರ ದ್ರೋಹವಲ್ಲವೇ

ಅಂತೂ ಇಂದಿನವರೆಗೆ ಕಮ್ಯೂನಿಸ್ಟರು ಮಾಡಿಸಿದ ಮೂರು ಮುಷ್ಕರಗಳ ಪರಿಣಾಮವೆಂಬದು-000! ತಾವು ಬಯಸಿದ ಪ್ರತಿಫಲಗಳು ಇಂದಲ್ಲವಾದರೆ ನಾಳೆ ದೊರೆಯಲಿವೆ ಎಂದು ಕಮ್ಯೂನಿಸ್ಟರೆನ್ನುವರೆ? ಆ 'ನಾಳೆ'ಯನ್ನು ಕಾಯುವಷ್ಟು ಸಹನೆಯಿರುವ ನೀವು ನನ್ನೆಯೇ ಅಷ್ಟೊಂದು ಗೊಂದಲ ವೆಬ್ಬಿಸಿದ್ದೇಕೆ ಮುಷ್ಕರದ ನೋವಲೂ ಸಂಧಾನ, ಮುಷ್ಕರಾನಂತರವೂ ಅದೇ ರೀತಿಯ ಸಂಧಾನವೆಂದಮೇಲೆ, ಆವೆರಡರ ಮಧ್ಯಾವಧಿಯಲ್ಲಿ ಆದೊಂದು ಮುಷ್ಕರವೇಕೆ? ನಿಮ್ಮ ಸ್ವಂತ ಅಭಿರುಚಿಯೊಂದನ್ನು ತೀರಿಸಿಕೊಳ್ಳಲು ಬಡವರ, ಮಜೀವಿಗಳ ಜೀವನದೊಂದಿಗೆ ನೀವು ಆಟವನ್ನು ಆಡಿದ್ದಲ್ಲವೇ ಇದು? ಕೆಲಸಗಾರರ ಕಷ್ಟದ ಜೀವನವನ್ನು ಆಟದ ವಸ್ತುವಾಗಿ ಉಪಯೋಗಿಸಿ ತಮ್ಮ ಲಾಲಸೆಯನ್ನು ತೀರಿಸಿಕೊಳ್ಳುವವರು ನಿಜಕ್ಕೂ ಮಜೂರ ದ್ರೋಹಿಗಳು 'ಮಜೂರ ದ್ರೋಹಿಗಳನ್ನು ಓಡಿಸಿರಿ' ಎಂಬೊಂದು ಸೊಲ್ಲು ಕೆಲಸಗಾರರಿಗೆ ಕಂಠಗತವಾಗಿದೆ. ಈ ಲೇಖನಮೂಲಕ ಬಾರಿಸಿರುವ—ಮಜೂರರಿಗಾಗಿರುವ ಅಂತರ್ಗಾಮಿ ದ್ರೋಹಿಗಳ—ಡಂಗುರದ ಧ್ವನಿಯೂ ಅದೇ—'ಮಜೂರ ದ್ರೋಹಿಗಳನ್ನು ಓಡಿಸಿರಿ' ಎಂಬುದೇ!

ಅವರಿಗಿದು ಗಣ್ಯವಲ್ಲ

ನಾನೆತ್ತಿಕೊಂಡು ವಿಮರ್ಶಿಸಿದ ಮೂರು ಮುಷ್ಕರಗಳಲ್ಲೂ ಕಮ್ಯೂನಿಸ್ಟರು ಕೆಲಸಗಾರರನ್ನಂತೂ ವಂಚಿಸಿದ್ದಾರೆ; ಜತೆಯಲ್ಲಿ ಸಾರ್ವಜನಿಕರನ್ನೂ ವಂಚಿಸಿದ್ದಾರೆ; ಸಾಲದುದಕ್ಕೆ ತಮ್ಮ ಮನಸ್ಸಾಕ್ಷಿಯನ್ನೇ ತಾವು ವಂಚಿಸಿದ್ದಾರೆ. ಕೆಲಸಗಾರರನ್ನು ವಂಚಿಸಿದುದು ಮಹಾಪರಾಧವಾದರೆ, ಸಾರ್ವಜನಿಕರನ್ನು ವಂಚಿಸಿದುದು ಮಹಾ ಪ್ರಮಾದ, ಮನಸ್ಸಾಕ್ಷಿಯನ್ನೇ ವಂಚಿಸಿಕೊಂಡುದಂತೂ ಅಮಾನುಷತ್ವ. 'ನ್ಯಾಯವೇ ಬಲ'ವೆಂದಿರಬೇಕಾದುದು ಅಗತ್ಯ; ಕಮ್ಯೂನಿಸ್ಟರು ಈ ತತ್ವಾರಾಧಕರಲ್ಲವಾದರೆ 'ಬಲವೇ ನ್ಯಾಯ'ವೆಂಬ ವಿರುದ್ಧ ಮಾರ್ಗವನ್ನಾದರೂ ಹಿಡಿಯಬೇಕಿತ್ತು. ಆಶ್ಚರ್ಯವೆಂದರೆ 'ದೌರ್ಬಲ್ಯವೇ ಬಲ ಮತ್ತು ನ್ಯಾಯ' ಎಂಬ ವಿಲಕ್ಷಣ ಪಥವನ್ನು ಅವರು ಅನುಸರಿಸಿದ್ದರು; ಅದರ ನಿಶ್ಚಿತ ಪ್ರತಿಫಲವಾದ ಪರಾಭವವನ್ನು ಅನುಭವಿಸಿದ್ದರು, ಹೀಗೇಕೆ ಮಾಡಿದರು? ಈ ಪರಾಭವದ ಕಟು ಫಲವನ್ನು ಉಣ್ಣಲು ಆ ಬಡಜೀವಿ ಮಜೂರರಿದ್ದಾರಾದ್ದರಿಂದ ಸಂಗತಿ ದೊಡ್ಡದಲ್ಲವೆಂಬ ಭಾವನೆಯಿಂದಲೇ! ಹೋರಾಟ ಗೆದ್ದಲ್ಲಿ ಸೋಲನುಭವಿಸತಕ್ಕವರು ಮಾಲಕರು; ಅದು ಸೋತರೆ ಕಷ್ಟವುಣ್ಣತಕ್ಕವರು ಮಜೂರರು—ವಿಜಯವು ಯಾವಕಡೆಗೆ ಹೋದರೂ ಅದನ್ನು ಸಂಘಕ್ಕೊದ್ದಿದ ಕೀರ್ತಿಮಾತ್ರ ಕಮ್ಯೂನಿಸ್ಟರಿಗೆ. ಇಂತಹ ಸಂಘರ್ಷ ಹೋರಾಟಗಳಲ್ಲೇ ಕಮ್ಯೂನಿಸ್ಟರ ಅಸ್ತಿತ್ವ; ಅದೊಂದೇ ಅವರ ಪಾಲಿಗೆ—ಅವರ ಪ್ರತಿಫಲವು ಅನ್ಯರ ಪಾಲಿಗಾದ್ದರಿಂದ ಅವರಿಗೆ ಮುಖ್ಯವಲ್ಲ. ಕಮ್ಯೂನಿಸ್ಟರು ಕೆಲಸಗಾರರನ್ನು ಹೋರಾಡಿಸಿ ತಮ್ಮ ಕರ್ತವ್ಯ ಮಾಡಿದ್ದಾರೆ; ಕೆಲಸಗಾರರು ತಮ್ಮ ಕರ್ತವ್ಯವಾದ ಈ ಪ್ರತಿಫಲ ಹೋರಾಟದವನ್ನು ಉಣ್ಣುತ್ತಿದ್ದಾರೆ. ಆ ಹೋರಾಟಗೆಲ್ಲುತ್ತಿದ್ದರೆ ಕಮ್ಯೂನಿಸ್ಟರು ಮಾಲಕರನ್ನು ಸೋಲಿಸಿದರೆಂದಾಗುತ್ತಿತ್ತು; ಅದು ಸೋತುದರಿಂದ ಕಮ್ಯೂನಿಸ್ಟರು ಕೆಲಸಗಾರರನ್ನು ಸೋಲಿಸಿದಂತಾಗಿದೆ! ಇದೊಂದು ಗುಟ್ಟನ್ನು ಕೆಲಸಗಾರರು ತಿಳಿದು ಕೊಂಡರೆ 'ಮಜೂರ ದ್ರೋಹಿಗಳನ್ನು ಓಡಿಸಿರಿ' ಎಂಬ ಮೆರವಣಿಗೆ ಕಮ್ಯೂನಿಸ್ಟ್ ಮುಂದಾಳುಗಳ ಬೆಂಬತ್ತಿ ಹೋಗಲಾರದೆ?

ಸಂಘಟನಾಶಕ್ತಿಗೆ ಶಹಭಾಸ್ ಇದೆ!

ಕಮ್ಯೂನಿಸ್ಟ್ ಮುಷ್ಕರಗಳ ಆರಂಭದಲ್ಲಿ ಅನ್ಯಾಯ-ಅಂತ್ಯದಲ್ಲಿ ಅಹಿತವಿತ್ತೆಂಬುದಕ್ಕಾಗಿಯೇ ನನ್ನ ಖಂಡನೆ. ಹೊರತು ಹೋರಾಟದಲ್ಲಿ ಅಸಾಮರ್ಥ್ಯವಿತ್ತೆಂದಲ್ಲವೇ ಅಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯೂನಿಸ್ಟ್ ಕಾಮ್ರೇಡ್‌ಗಳಲ್ಲದೆ, ಇಲ್ಲಿಯ ಮಜೂರರನ್ನು ಈ ರೀತಿ ಒಟ್ಟುಗೂಡಿಸಬಲ್ಲವರು ಬೇರಿಲ್ಲ. ಇಲ್ಲಿಯ ಕಮ್ಯೂನಿಸ್ಟರಿಗೆ ಕೆಲಸಗಾರರಿಂದ ಅನ್ಯಾಯವಮಾಡಿಸಲಿಕ್ಕಾದರೂ ತಿಳಿದಿದೆ; ಮಿಕ್ಕವರಿಗೆ ಅವರ ಸಂಬಂಧ ಬೆಳೆಸಲಿಕ್ಕೇನೇ ತಿಳಿಯದು. ಹೆಚ್ಚಿನ 'ಸಂಭಾವಿತರ' ಬಣ ಮತ್ತು ಕರಟು ಮನೋವೃತ್ತಿಯನ್ನು ಒಟ್ಟಿಗೆ ಜಜ್ಜಿದರೆ ಹಿಡಿ ಅದರಿಂದ 'ಮನುಷ್ಯರಿಂದ ಮಾಡಿಸುವ ಕೆಲಸವನ್ನು ಮಜೂರರಿಂದ ಮಾಡಿಸುವದೇ!' ಎಂಬೊಂದು ಹಸಿ ಜಿನುಗೀತು! ಮಜೂರರೆಂದರೆ ಅಂತಹ ತಾತ್ಸಾರವಿದೆ ಮಿಕ್ಕವರಲ್ಲಿ ಕಮ್ಯೂನಿಸ್ಟರನ್ನು ಕಂಡು 'ನಿಮಗಿಂತ .... ಅವರು ವಾಸಿ' ಎಂದು ಕೈತೋರಿಸೋಣವೆಂದರೆ ಯಾರೂ ಕಾಣುವದಿಲ್ಲ—ಈ ಮಟ್ಟಿಗೆ ಎಲ್ಲವೂ ಗೊಂಬೆಗಳೇ! ಕೆಲಸಗಾರರು 'ಸಮಾನತೆಯ ನೀಸಕ್ಕೇರಲಿ' ಎಂಬುದೇ ಲೇಖಕನ ವಾದ; ಆದ್ದರಿಂದ 'ಪನಿಯಂತೆ ಇದೆ ... ' ಎಂಬ ಕಮ್ಯೂನಿಸ್ಟ್ ಘೋಷಣೆಯನ್ನು ಖಂಡಿಸಿದರೂ 'ಶವದಂತೆ ಬಿದ್ದಿರಲಿ' ಎಂಬ ಮಿಕ್ಕವರ ಭಾವನೆಗಿಂತ ಇದು ವಾಸಿ ಎಂದು ಸಮ್ಮತಿಸದೆ ನಿರ್ವಾಹವಿಲ್ಲ. ಇದೂ ಕೂಡ ಹಸಿ ಪೀಡೆಗೊಳಗಾಗುವವರ ಮೇಲಿನ ಸಹಾನುಭೂತಿಯಿಂದಲ್ಲ; ಸತಕ್ಕರನ್ನಿಸಬೇಕಾದ ಕೆಲಸಗಾರರು, ಪನಿಯಂತಾದರಲ್ಲಾ ಎಂಬ ಕನಿಕರದಿಂದ. ಹೀಗಿದ್ದರೂ, ಹಾವಿನ ಹೆಡೆಯ ಮಾಣಿಕ್ಯದಂತೆ ಆ ಮುಷ್ಕರ ಶಕ್ತಿಯುಳ್ಳಂತಹ ಪ್ರಕಾಶವಿತ್ತು! ಲಂಗಾರ್ದೌರ್ಯ, ವ್ಯವಹಾರ ಚಾತುರ್ಯ, ದಬ್ಬಾಳಿಕೆಯ ಬಲವುಳ್ಳ ಮಾಲಿಕ ವರ್ಗದಿದಿರು ಮೂರು ಸಾವಿರ ಕೆಲಸಗಾರರು ಪ್ರದರ್ಶಿಸಿದ ಅಪೂರ್ವ ಒಗ್ಗಟ್ಟು ಮತ್ತು ಕಷ್ಟಸಹಿಷ್ಣುತೆಯನ್ನು ಅಭಿನಂದಿಸದಿರುವದಾದರೂ ದೇಶ ... ಇದಾರು ವಾರಗಳ ತನಕ ಇಷ್ಟು ಮಂದಿಯ ಉದರದುರಿ ತಣಿಸಿ ಉದ್ವೇಗವುರಿ ಉಳಿಸಿದ ಆ ಸುವ್ಯವಸ್ಥೆಯನ್ನು ಪ್ರಶಂಸಿಸದಿರುವದಾದರೂ ಹೇಗೆ? ನ್ಯಾಯಾನ್ಯಾಯ, ಹಿತಾಹಿತದ ಪ್ರಶ್ನೆಗಳನ್ನು ಒತ್ತಟ್ಟಿಗಿಟ್ಟು ನೋಡಿದರೆ, ಮೂರೂ ಮುಷ್ಕರಗಳಲ್ಲಿ ಕೀ

(೧೧ನೇ ಪುಟ ನೋಡಿರಿ)

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಸಮಾರಂಭಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಪಾಕಿಸ್ತಾನ್ ಪ್ರಶ್ನೆ—ಯಾರಾರ ತಲೆಯಲ್ಲಿ ಹೇಗೆ ಹೇಗೆ ಸುತ್ತುತ್ತಿದೆ?

ಲೀಗ್ ಕೇಳುವದೇನು?

ಪಾಕಿಸ್ತಾನವೆಂದರೆ ಹಿಂದೂದೇಶದ ಈಶಾನ್ಯ ಮತ್ತು ವಾಯುವ್ಯದ ಎರಡು ತುಂಡುಗಳು ಇವೆರಡು ತುಂಡುಗಳೂ ಬೇರೆ ಬೇರೆಯಾಗಿದ್ದು ಅವುಗಳ ನಡುವೆಯೂ ಹಿಂದುಸ್ಥಾನದ ಪ್ರದೇಶವಿರುತ್ತದೆ. ಅವೆರಡನ್ನು ಪರಸ್ಪರ ಹೊಂದಿಸಲು ಮಧ್ಯದಲ್ಲೊಂದು ಸುಭದ್ರ ಹಾದಿಯನ್ನು ಲೀಗ್ ಕೇಳಬಹುದು.

ಪಾಕಿಸ್ತಾನದ ಈಶಾನ್ಯ ತುಂಡಿನಲ್ಲಿ ಬಂಗಾಳ ಮತ್ತು ಅಸ್ಸಾಮುಗಳಿರಬೇಕು. ವಾಯುವ್ಯ ತುಂಡಿನಲ್ಲಿ ಪಂಜಾಬು, ಗಡಿನಾಡು ಪ್ರಾಂತ್ಯ, ಸಿಂಧ, ಮತ್ತು ಬಲೂಚಿಸ್ಥಾನಗಳಿರಬೇಕು. ಮೊದಲ ತುಂಡಿನ ಕಲ್ಕತ್ತ ಮತ್ತು ಎರಡನೇ ತುಂಡಿನೊಳಗಿರುವ ಕರಾಚಿ ಪಾಕಿಸ್ತಾನಕ್ಕೆ ಸೇರಲಿವೆ.

ರಕ್ಷಣೆ, ವಿದೇಶ ಸಂಬಂಧ ಮೊದಲಾದ ಸರ್ವ ವಿಷಯಗಳಲ್ಲೂ ಪಾಕಿಸ್ತಾನವು ಪೂರ್ಣ ಸ್ವತಂತ್ರವಾಗಿದ್ದು ಆದರಾಚೆಗಿರುವ ಅಫ್ಘಾನಿಸ್ಥಾನ, ಇರಾನ್ ಮೊದಲಾದ ಮುಸ್ಲಿಂ ರಾಷ್ಟ್ರಗಳಂತಹ ಒಂದು ಬೇರೆಯೇ ರಾಷ್ಟ್ರವಾಗಬೇಕು ತನ್ನಿಚ್ಛೆಯಂತೆ ಅದು ಮೈತ್ರಿಕರಾರು ಮಾಡಿಕೊಳ್ಳಬಲ್ಲದಲ್ಲದೆ ಅದರ ಸಾರ್ವಭೌಮಾಧಿಕಾರವು ಯಾವುದೊಂದು ಶರ್ತಕ್ಕೂ ಒಳಪಟ್ಟಿರಬಾರದು.

ಅಖಿಲ ಭಾರತಕ್ಕೊಂದು ಕೇಂದ್ರ ಸರಕಾರವಾದಲ್ಲಿ, ಅಥವಾ ರಕ್ಷಣೆ, ಸಂಚಾರ, ವ್ಯಾಪಾರ, ವಿದೇಶ ಸಂಬಂಧ ಇತ್ಯಾದಿ ಕೆಲವೇ ವಿಷಯಗಳ ಹತೋಟಿಯಿರುವ ಫೆಡರೇಶನ್ ಬಂದಲ್ಲಿಯೂ ಅಖಿಲ ರಾಷ್ಟ್ರದ ಒಟ್ಟು ಸಂಖ್ಯೆಯಲ್ಲಿ ಹಿಂದುಗಳೇ ಬಹುಭಾಗವಾಗಿರುವದರಿಂದ, ಆ ಕೇಂದ್ರಾಧಿಕಾರದಲ್ಲಿ 10 ಕೋಟಿ ಮುಸಲ್ಮಾನರ ಅಭಿಪ್ರಾಯವು ಮಾನ್ಯತೆ ಪಡೆಯುವಂತಿಲ್ಲ. ಅಲ್ಲಿ ಬಹುಸಂಖ್ಯಾಕ ಹಿಂದುಗಳ ಅಭಿಪ್ರಾಯಾನುಸಾರ ಅಧಿಕಾರ ನಡೆಯಲಿರುವದರಿಂದ ಮುಸ್ಲೀಮರು ಹಿಂದುಗಳ ಸ್ವಾಧೀನತೆಗೆ ಬಂದಂತಾಗುವದು.

ಪಾಕಿಸ್ತಾನ ಕೇಳುವದು 10 ಕೋಟಿ ಮುಸಲ್ಮಾನರ ಪರವಾಗಿ; ಸಂಖ್ಯೆಯನ್ನೇ ಆಧರಿಸಿ. ಆದರೆ ಪಾಕಿಸ್ತಾನವನ್ನು ವಿಂಗಡಿಸುವಾಗ ಹಾಗೆ ಜಾತಿ ಸಂಖ್ಯೆಯನ್ನು ಲೆಕ್ಕ ಮಾಡಕೊಡದು. ಹಾಗೆ ಗಣಿಸಿದಲ್ಲಿ 10 ಮಿಲಿಯ ಜನರಿರುವ ಕಲ್ಕತ್ತದಲ್ಲಿ ಮುಕ್ಕಾಲಂಶ ಹಿಂದುಗಳಿದ್ದರೆ; ಅಸ್ಸಾಮು, ಬಂಗಾಳದ ಅರ್ಧ ಭಾಗ, ಮುಂತಾದ ಕಡೆಗಳಲ್ಲಿ ಹಿಂದುಗಳೇ ಅಧಿಕ ಸಂಖ್ಯಾಕರು. ಪಂಜಾಬಿನ ಕೆಲವು ಜಿಲ್ಲೆಗಳಲ್ಲಿ ಸಿಖ್ಖರದ್ದು ಬಹುಮತ. ಇವುಗಳನ್ನೆಲ್ಲಾ ಬಿಟ್ಟಲ್ಲಿ ಪಾಕಿಸ್ತಾನವು ರೂಪುಗೊಳ್ಳುವದೇ ಅಸಾಧ್ಯವಾಗುತ್ತದೆ. ಆದ್ದರಿಂದ ಮುಸಲ್ಮಾನರಿಗೊಂದು ಸ್ವತಂತ್ರ ರಾಜ್ಯಕೊಡಬೇಕೆಂಬ ಉದ್ದೇಶವೊಂದನ್ನೇ ಇಟ್ಟುಕೊಂಡು ಅದನ್ನು ರೂಪಿಸಲು ಅಗತ್ಯವುಳ್ಳಷ್ಟು ಸ್ಥಳಗಳನ್ನು ಮುಸಲ್ಮಾನೇತರರ ಬಹುಸಂಖ್ಯೆಯಿದ್ದರೂ ಗಣಿಸದೆ ಪಾಕಿಸ್ತಾನಕ್ಕೇನೇ ಸೇರಿಸಿ ಗಡಿ ವಿಂಗಡಿಸಬೇಕು

ಕಾಂಗ್ರೆಸ್ ಕೊಡಲು ತಯಾರಿರುವದೆಷ್ಟು?

ಹಿಂದುಸ್ಥಾನದ ಪ್ರಾಂತ್ಯಗಳನ್ನು ಪುನರ್ರಚನೆ ಮಾಡುವದು ಅಗತ್ಯ. ಭಾಷೆ, ಸಂಸ್ಕೃತಿ, ಧರ್ಮ, ಸ್ಥಳೀಯ ವೈಶಿಷ್ಟ್ಯ ಇತ್ಯಾದಿಗಳ ಮೇಲಿಂದ ಆಯಾ ಭಾಗಗಳವರ ಅಭಿಮತಕ್ಕನುಸಾರವಾಗಿ ಹಿಂದುಸ್ಥಾನದ ಅಂಗಾಂಗಗಳನ್ನು ವಿಂಗಡಿಸಿ ಪುನರ್ಘಟನೆ ಮಾಡಬಹುದು

ಹೀಗೆ ರಚನೆಗೊಂಡ ಎಲ್ಲಾ ಘಟಕಗಳನ್ನೂ ಒಂದುಗೂಡಿಸುವ ಒಂದು ಕೇಂದ್ರ ಸರಕಾರವಿರಬೇಕು. ರಕ್ಷಣೆ, ವ್ಯಾಪಾರ, ಸಂಚಾರ, ಸುಂಕ, ವಿದೇಶ ಸಂಬಂಧ, ಹಣಕಾಸು ಮುಂತಾದ ಕೆಲವೇ ವಿಷಯಗಳು ಮಾತ್ರ ಈ ಕೇಂದ್ರ ಸರಕಾರದ ಕೈಯಲ್ಲಿರಬೇಕು. ಉಳಿದ ಎಲ್ಲಾ ವಿಷಯಗಳಲ್ಲೂ ಸ್ಥಳೀಯ ಸರ್ವಾಧಿಕಾರ ಸಮೇತ ಆಯಾಯಾ ಪ್ರಾಂತ್ಯಗಳು ಪೂರ್ಣ ಸ್ವತಂತ್ರವಾಗಿದ್ದು ತಮ್ಮಿಚ್ಛೆಯಂತೆ ಸಾಗಬಹುದು

ಹೀಗೆ ಕೇಂದ್ರಾಧಿಕಾರಕ್ಕೊಳಪಡುವ ಇಲಾಖೆಗಳ ಎರಡೆರಡು ಪಟ್ಟಿ ತಯಾರಿಸಲಾಗುವದು. ಆ ಪೈಕಿ ದೇಶ ರಕ್ಷಣೆ, ವಿದೇಶ ಸಂಬಂಧ, ಇತ್ಯಾದಿ ವಿಷಯಗಳಿರುವ ಪಟ್ಟಿಯು ಕಡ್ಡಾಯವಾಗಿಯೂ, ಮಿಕ್ಕ ವಿಷಯಗಳ ಎರಡನೇ ಪಟ್ಟಿಯು ಪ್ರಾಂತಿಕ ಸರಕಾರಗಳ ಐಚ್ಛಿಕ ವಿಷಯವಾಗಿಯೂ ಇರುವದು. ನಿಶ್ಚೈಸಲ್ಪಡುವ ಕೆಲವು ವಿಷಯಗಳಲ್ಲಿ ಮಾತ್ರ ಅಧಿಕಾರವಿರುವ ಕೇಂದ್ರ ಆಡಳಿತೆ ಅಥವಾ ಸಂಯುಕ್ತಾಧಿಕಾರ ಯಾನೆ ರಾಜ್ಯಾಂಗ ರಚನಾ ಸಭೆಯಲ್ಲಿ ಸೇರಲಿಚ್ಛಿಸದ ಪ್ರಾಂತ್ಯ ಅಥವಾ ಪ್ರಾಂತ್ಯಗಳ ಒಂದು ಗುಂಪನ್ನು, ಹಾಗೆ ಮಾಡಕೂಡದೆಂದು ಪ್ರತಿಬಂಧಿಸದೆ ಆ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಲಾಗುತ್ತದೆ ಇಂತಹ ನಿರ್ಧಾರವು, ಆಯಾಯಾ ಕ್ಷೇತ್ರಗಳ ಮತ ಗಣನೆ ಮಾಡಿ ಬಹುಸಂಖ್ಯಾಕರ ಅಭಿಮತವನ್ನು ಆಧರಿಸಿಯೇ ಆಗಬೇಕು. ಇದೇ ಸ್ವಯಂ ನಿರ್ಣಯಾಧಿಕಾರ.

ಸಂಯುಕ್ತ ಕೇಂದ್ರಾಧಿಕಾರದಲ್ಲಿ ಸೇರಬೊಪ್ಪದ ಭಾಗಗಳಿಗೆ ಒತ್ತಾಯವಿಲ್ಲದಿರುವಂತೆಯೇ ಪ್ರತ್ಯೇಕ ರಾಜ್ಯ ಯಾನೆ ಪಾಕಿಸ್ತಾನದೊಳಗೆ ಸೇರಲೊಪ್ಪದ ಯಾವ ಭಾಗಗಳವರನ್ನೂ ಯಾವದೇ ಕಾರಣದಿಂದ ಒತ್ತಾಯಿಸಲಾಗುವದಿಲ್ಲ

ದೇಶರಕ್ಷಣೆ, ವಿದೇಶ ಸಂಬಂಧ ಮೊದಲಾದ ಕೆಲವು ವಿಷಯಗಳಿಗೆ ಬಲವಾದ ಕೇಂದ್ರಾಧಿಕಾರವಿಲ್ಲದೆ ಹೋದರೆ ದೇಶದ ಎಲ್ಲಾ ತುಂಡುಗಳಿಗೂ ಅಪಾಯವಿದೆ. ಅದನ್ನು ಬಿಟ್ಟು ಮಿಕ್ಕೆಲ್ಲಾ ವಿಷಯಗಳಲ್ಲೂ ಪ್ರಾಂತ್ಯಗಳಿಗೆ ಪೂರ್ಣಾಧಿಕಾರವಿರುವದರಿಂದ ಅವು ತಮ್ಮಿಚ್ಛೆಯಂತೆ ವರ್ತಿಸುವ ಅಧಿಕಾರವೂ ಸಿಗುತ್ತದೆ.

ಈ ಕುರಿತು ಸಮ್ಮೊಳಗೊಂದು ರಾಜಿಗೆ ಬರಲಾಗದಿದ್ದರೆ ಅಂತರ್ರಾಷ್ಟ್ರೀಯ ಪಂಚಾಯತ ಮಂಡಲಿಯೊಂದರ ತೀರ್ಮಾನಕ್ಕೊಪ್ಪಿಸುವದಕ್ಕೆ ಕಾಂಗ್ರೆಸು ತಯಾರು

ಬ್ರಿಟಿಷ್ ಸಮಿತಿಯ ಅಂತರ್ಯವೇನು?

ಹಿಂದೀ ಸ್ವಾತಂತ್ರ್ಯವು ಈ ಬಾರಿ ಒಂದು ತೀರ್ಮಾನ ಹೊಂದುವ ಆವಶ್ಯಕತೆ ಬ್ರಿಟಿಷರಿಗೇನೇ ಹೊಳೆಯಹತ್ತಿದೆ. ಲಾರ್ಡ್ ಪೆಥಿಕ್ ಲಾರೆನ್ಸ್ ಮತ್ತು ಮಿ. ಅಲೆಕ್ಸಾಂಡರು ಯಾವ ಕಡೆಗೂ ಒಲಿದಂತಿಲ್ಲವಾದರೂ ಈ ಪ್ರಶ್ನೆಯ ಮಟ್ಟಿಗೆ, ಅವರು ಅನಿವಾರ್ಯ ಸಂದರ್ಭದಲ್ಲಿ ರಾಷ್ಟ್ರ ವಿಭಜನೆಗನುಕೂಲವಿರುವ ಸರ್. ಕ್ರಿಪ್ಸರನ್ನೇ ಮುಂದೂಡಿದಂತಿದೆ. ತ್ರಿಮೂರ್ತಿಗಳ ಪೈಕಿ ಹೆಚ್ಚಾಗಿ ಮಾತುಕತೆ ನಡೆಸುತ್ತಿರುವವರು ಸರ್. ಕ್ರಿಪ್ಸರೇ.

ಲೀಗ್ ತನ್ನ ಪರ ಮಾರ್ಗಿತನವನ್ನೆಂದಿಗೂ ಬಿಡುವಂತಿಲ್ಲವೆಂದೂ, ದೇಶ ಸ್ವಾತಂತ್ರ್ಯದ ಆತುರದಲ್ಲಿರುವ ಕಾಂಗ್ರೆಸ್ ಸಂಧಾನ ಸಾಧ್ಯತೆಗಾಗಿ ಲೀಗನ್ನು ಸಂತೈಸುವ ವಿನಯ ವಹಿಸಬಲ್ಲುದೆಂದೂ ಬ್ರಿಟಿಷ್ ಸಮಿತಿಯವರು ಊಹಿಸಿದ್ದರು. ಈ ಬಾರಿ ಕಾಂಗ್ರೆಸಿಗರೂ ಕಠಿಣ ಧೋರಣೆ ವಹಿಸಿರುವದರಿಂದ, ಅವೆರಡು ಪಕ್ಷಗಳೊಳಗೆ ಸಂಧಾನವಾಗುವ ಆಶೆಯನ್ನೇ ಬ್ರಿಟಿಷ್ ಸಮಿತಿಯು ಬಿಟ್ಟು ತಾನೇ ಒಂದು ತೀರ್ಮಾನ ಕೊಡಬೇಕಾಗಿ ಬಂದಿದೆ.

ಅತ್ತ ಲೀಗಿನ ಪ್ರತ್ಯೇಕ ರಾಷ್ಟ್ರದ ಬೇಡಿಕೆಗೂ, ಇತ್ತ ಕಾಂಗ್ರೆಸಿನ ಫೆಡರಲ್ ರಾಜ್ಯಭಾರ ಪದ್ಧತಿಗೂ ಹೊಂದಿಕೆಯಾಗುವ ನರಸಿಂಹಾವತಾರ ಧರಿಸುವ ಒಂದು ಯೋಜನೆ ಬ್ರಿಟಿಷ್ ಮಂತ್ರಿ ಸಮಿತಿಯ ಬಹುದು—ಅದೇ 'ಕನ್ಫೆಡರೇಶನ್'.

'ಕನ್ಫೆಡರೇಶನ್' ಎಂದರೆ ಹಿಂದುಸ್ಥಾನವನ್ನು ಎರಡು ಅಥವಾ ಹೆಚ್ಚಿಗೆ ಸ್ವತಂತ್ರ ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರಗಳಾಗಿ ವಿಂಗಡಿಸಿ ಪ್ರತಿಯೊಂದಕ್ಕೂ ಒಂದೊಂದು ಸ್ವತಂತ್ರ ಫೆಡರೇಶನ್ ನಿರ್ಮಿಸುವದು.

ಈ ಫೆಡರೇಶನುಗಳು ಸ್ವೇಚ್ಛೆಯಿಂದ ಒಂದುಗೂಡುವ ಒಂದು ಕೂಟವೇ (ಜಾಗತಿಕ ಸಂಘದಂತೆ) ಕನ್ಫೆಡರೇಶನ್.

ಈ ಕನ್ಫೆಡರೇಶನಿನಲ್ಲಿ ಸಬಲವಾದ ಒಂದು ಮೇಲ್ಗಡೆಯ ಕೇಂದ್ರವಿರಬೇಕು ರಕ್ಷಣೆ, ವಿದೇಶ ಸಂಬಂಧ, ಹಣಕಾಸು, ಸುಂಕ, ವ್ಯಾಪಾರ, ಸಂಚಾರಗಳು ಈ ಮೇಲ್ಕೇಂದ್ರದ ಹತೋಟಿಯಲ್ಲಿರಬೇಕು.

ಕನ್ಫೆಡರೇಶನಿನ ಕೇಂದ್ರ ಸಮಿತಿ ನ್ಯಾಯವಿಧಾಯಕ ಸಭೆಯಾಗಲೀ ಸ್ವಂತ ಅಧಿಕಾರವಾಗಲೀ ಇಲ್ಲ ಅದೊಂದೆ ಕಾರ್ಯಕಾರೀ ಸಮಿತಿ ಮಾತ್ರ ಇದಕ್ಕೆ ಕಾಂಗ್ರೆಸಿಗರೊಪ್ಪುವದಿಲ್ಲ.

ಹಿಂದುಸ್ಥಾನ್, ಪಾಕಿಸ್ತಾನ್, ಮತ್ತಿತರ ಸ್ವತಂತ್ರ ಫೆಡರೇಶನ್‌ಗಳ ಮೇಲಂತಸ್ತಾಗಿ ಕನ್ಫೆಡರೇಶನ್ ಇರಬೇಕಷ್ಟೆ! ಆದರೆ ಪಾಕಿಸ್ತಾನ್ ಗಡಿ ನಿರ್ಣಯಿಸುವದು ಹೇಗೆ? ಮಿ. ಜಿನ್ನರು ಕೇಳುವಂತೆ ಹಿಂದೂ ಬಹುಸಂಖ್ಯೆಯುಳ್ಳ ಭಾಗಗಳನ್ನೂ ಅದಕ್ಕೆ ಸೇರಿಸಿ ಕೊಡಲು ಸಾಧ್ಯವೆ?

ಒಂದೊಮ್ಮೆಗೆ ಗಡಿ ತೀರ್ಮಾನವಾದರೂ ಕನ್ಫೆಡರೇಶನಿನ ಮೇಲ್ಕೇಂದ್ರ ಸಮಿತಿಯಲ್ಲೇ ಹಿಂದುಸ್ಥಾನ್ ಪಾಕಿಸ್ತಾನಗಳು ಜಗಳಾಡಿಕೊಂಡರೆ ತೀರ್ಮಾನ ಹೇಗೆ? ಆಗ ರಕ್ಷಣೆ, ಇತ್ಯಾದಿಗಳ ಗತಿಯೇನು?

ಮತ್ತೊಂದು ವಿಧಾನವೆಂದರೆ, ಸ್ಥಳೀಯ ಜನಮತವನ್ನು ಗಣಿಸಿ ಕೇಂದ್ರದಿಂದ ಪ್ರತ್ಯೇಕವಾಗುವ ಹಕ್ಕನ್ನು ಪ್ರಾಂತ್ಯಗಳಿಗೀವ ಸರ್. ಕ್ರಿಪ್ಸರ 1942ನೇ ಸೂಚನೆಯನ್ನೇ ಆಧರಿಸಿ ತೀರ್ಪು ಕೊಡುವದು. ಲಾರ್ಡ್ ವೇವೆಲರು ಸಿಮ್ಲಾ ಸಮ್ಮೇಲನದ ವೇಳೆ ಜಾಹೀರು ಮಾಡಿದ ಮಾದರಿಯಲ್ಲಿ ತಾತ್ಕಾಲಿಕ ಕೇಂದ್ರ ಸರಕಾರವನ್ನು ಕೂಡಲೇ ಸ್ಥಾಪಿಸುವದು. ಆ ಮೇಲೆ ಸಾವಧಾನವಾಗಿ ರಾಜ್ಯಾಂಗ ರಚನಾ ಸಭೆ ರಚಿಸುವದು.

ಮಿ. ಜಿನ್ನರು ಕೇಳುವ ಮಾದರಿಯ ಪಾಕಿಸ್ತಾನಕ್ಕೊಪ್ಪಲು ಅವರು ಸಿದ್ಧರಿಲ್ಲ; ಆದರೆ ಮಿ. ಜಿನ್ನರನ್ನು ಬಿಟ್ಟು ಮುಂದೊತ್ತುವ ಕುರಿತೂ ಅವರು ಚಿಂತಿಸುತ್ತಿದ್ದಾರೆ ಅದ್ದರಿಂದ ಅವರು ಕೊಡುವ ಏರ್ಪಾಡು ಕೂಡ ಯಾವ ಮಾದರಿ ಎಂದು ಪಕ್ಷದಿಂದ ನಿರಾಕರಿಸಲ್ಪಡದು ಎಂಬ ನಿಶ್ಚಯವಿಲ್ಲ.

CANARA BANK LIMITED

Estd: 1906

(Incorporated in British India, liability of Members Limited)

SEASON DEPOSITS.

of Rs. 10000 - and over in multiples of Rs. 1000/- and maturing within 30th September 1946 are now accepted at the following rates:—

3 months	...	2¼%
4 to 5 months	....	2½%
6 to 9 months	...	2¾%

Rates for Season Deposits of less than Rs. 10000 - with a minimum of Rs. 1000/- and in multiples of Rs. 500/- may be ascertained on application to our nearest branch

ಬೊಂಬಾಯಿಯ ಬಂಟರ ಯಾನೆ ನಾಡವರ ಸಂಘಟಿ ವ್ಯವಸ್ಥಾಪಕ ಮಂಡಲಿಯು ತಾ. 17-4-1945ರಲ್ಲಿ ಸೇರಿ ನಿಯೋಜಿತ ಅಳಿಯ ಸಂತಾನ ಮಸೂದೆಯನ್ನು ಪರ್ಯಾಲೋಚಿಸಿ ತಿದ್ದುಪಡಿ ಯಾನೆ ಸಲಹೆ ಸೂಚನೆಗಳನ್ನು ಕೊಡಲು ಈ ಕೆಳಗಿನ ಸದಸ್ಯರುಳ್ಳ ಒಂದು ಉಪಸಮಿತಿಯನ್ನು ರಚಿಸಿದ್ದಿತು:--ಶ್ರೀಗಳಾದ ಮದನ ಶೆಟ್ಟಿ, ಟಿ. ಎಸ್. ಹೆಗ್ಡೆ, ಎಮ್. ಶ್ರೀಧರ ಶೆಟ್ಟಿ, ಎಮ್. ಶಿವಪ್ಪ ಶೆಟ್ಟಿ, ಭಾಸ್ಕರ ಎಸ್ ಕೈ, ಪಿ. ಎಮ್. ಶೆಟ್ಟಿ ಮತ್ತು ಶ್ರೀ. ಕೆ.ಶ್ಯಾಮರಾಯ ಶೆಟ್ಟಿ. ಮೇಲಿನ ಉಪಸಮಿತಿಯು ಮಾರ್ಚ ತಾ. 20ರಲ್ಲಿ ಶ್ರೀ. ಮದನ ಶೆಟ್ಟರ ನಿವಾಸದಲ್ಲಿ ಸಭೆ ಸೇರಿ, ಬಂಟರ ಯಾನೆ ನಾಡವರ ಸಂಘಕ್ಕೊಪ್ಪಿಸಿದ ವರದಿಯು ತಾ. 11-4-46 ರಲ್ಲಿ ಸೇರಿದ ಸಂಘದ ಮಹಾಸಭೆಯಲ್ಲಿ ಬಹುಮತದಿಂದ ಅಂಗೀಕಾರ ಪಡೆಯಿತು. ಮೊಗವೀರ ವ್ಯವಸ್ಥಾಪಕ ಮಂಡಲಿ ಮತ್ತು ಬಿಲ್ಲವರ ಸಂಘದ ಪ್ರತಿನಿಧಿಗಳೂ ಈ ಮಹಾ ಸಭೆಯಲ್ಲಿ ಹಾಜರಿದ್ದು ಈ ವರದಿಗೆ (ಕೆಳಗಡೆಯಲ್ಲಿ ಬಂದಿದೆ) ತಮ್ಮ ಅನುಮೋದನೆ ಕೊಟ್ಟಿದ್ದಾರೆ.

ಮಂಜೂರಾದ ವರದಿ

'ನಿಯೋಜಿತ ಅಳಿಯ ಸಂತಾನ ಮಸೂದೆಯು ಅಳಿಯ ಕಟ್ಟಿನ ಜನತೆಯ ಆಶೆ, ಆತುರಗಳ ಸರಿಯಾದ ಪ್ರತಿಬಿಂಬವಾಗಿಲ್ಲವೆಂದು ಈ ಸಮಿತಿಯು ಅಭಿಪ್ರಾಯ ಪಡುತ್ತದೆ. ಅಳಿಯ ಸಂತಾನಿಗರ ಸರ್ವಸಾಮಾನ್ಯ ಭಾವನೆ ಹಾಗೂ ಅಭಿಪ್ರಾಯಗಳಿಗೆ ಹೊಂದಿಕೆಯಾಗುವಂತೆ ನಿರ್ಮಾಣಗೊಂಡಿರದ ಈ ಮಸೂದೆಯ ಕೆಲವು ಸೆಕ್ಷನುಗಳನ್ನು ತಿದ್ದುಪಡಿ, ಯಾನೆ ಪ್ರಾಮುಖ್ಯ ಸುಧಾರಣೆ ಮಾಡದಿದ್ದಲ್ಲಿ ಅದು ಅಳಿಯ ಸಂತಾನ ಕಾನೂನನ್ನು ಆಚರಿಸುವ ಜನತೆಗೆ ಗಣ್ಯ ಹಿತವಾಪುದನ್ನು ಮಾಡುವಂತಿಲ್ಲ. ಪ್ರಕಟಿತ ಅಳಿಯ ಸಂತಾನ ಮಸೂದೆಯ. ಇಂತಹ ಕೆಲವು ಅನಪೇಕ್ಷಿತ ಪ್ರಕರಣಗಳನ್ನು ಸೂಚಿಸಬಹುದಾದರೆ:-

ಮರಣ ಶಾಸನ ರಹಿತ ಮೃತನ ವಾರೀಸ್ದಾರಿಕೆ

ಮಕ್ಕಳು ಅಥವಾ ಸಂತಾನ ಪ್ರಹಕ್ಕಿನ ವಾರೀಸ್ದಾರರಿಲ್ಲದವನ ಆಸ್ತಿಗೆ, ತಾಯಿ ಮತ್ತು ವಿಧವೆ ಅಥವಾ ವಿಧವೆಯರೇ ಪೂರ್ಣ ಹಕ್ಕುದಾರರೆಂದು ಈ ಮಸೂದೆಯಲ್ಲಿ ನಮೂದಿಸಲ್ಪಟ್ಟಿದೆ. ಇದು ನಿಜವಾಗಿಯೂ ಅಳಿಯ ಸಂತಾನ ಜನತೆಯ ವಿಶಿಷ್ಟ ಸಾರ್ವತ್ರಿಕ ಭಾವನೆಗೇನೇ ವಿರೋಧವಿದೆ. ದೃಷ್ಟಾಂತಕ್ಕಾಗಿ ಮಕ್ಕಳು ಅಥವಾ ಪಾರಂಪರ್ಯದ ವಾರೀಸ್ದಾರರಿಲ್ಲದವನೊಬ್ಬನು ರೂ. 50000ದ ಆಸ್ತಿ ಮಾಡಿಟ್ಟು ಮರಣ ಶಾಸನ ಮಾಡದೇನೇ ಸತ್ತಲ್ಲಿ ಇಡೀ ಆಸ್ತಿಯು ಅವನ ತಾಯಿ ಮತ್ತು ವಿಧವೆಗೆ ಸಮಪಾಲಾಗಿ ದೊರೆಯುತ್ತದೆ. ಅಳಿಯ ಸಂತಾನ ಕುಟುಂಬಗಳಲ್ಲಿ ಪ್ರಚಲಿತವಾಗಿರುವ ಪದ್ಧತಿಯ ದೃಷ್ಟಿಯಿಂದ ನೋಡಿದರೆ, ಮರಣ ಶಾಸನ ರಹಿತ ಮೃತನ ಅಣ್ಣ ತಮ್ಮ, ಅಕ್ಕತಂಗಿಯರನ್ನು ಹಿಂದೆ ಹಾಕಿ, ಆತನ ಮಕ್ಕಳಿಲ್ಲದ ವಿಧವೆಯ ಕೈಗೆ ಇಷ್ಟು ದೊಡ್ಡ ಸಂಪತ್ತನ್ನು ಕೊಡುವದು ತೀರಾ ಅವಿವೇಕತನವಾಗುವದು. ಇಂತಹ ಸಂದರ್ಭಗಳಲ್ಲಿ ಆ ವಿಧವೆಗೆ ಮಕ್ಕಳಿಲ್ಲದಿದ್ದರೂ ಆಕೆ ಆಸ್ತಿಯ ವಾರಿಸ್ದಾರಳಾಗುತ್ತಾಳೆ. ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಮೃತ ಗಂಡನಿಂದ ಆಕೆಯ ಹಕ್ಕಿಗೆ ದೊರೆತ ಆಸ್ತಿಯೆಲ್ಲಾ ಆವಳ ಎರಡನೇ ಗಂಡನ ಕೈಗೆ ಹೋಗುವ ಸಂಭವವಿದೆ. ಒಂದೊಮ್ಮೆಗೆ ಆಕೆ ದ್ವಿತೀಯ ವಿವಾಹವಾಗದೆ ಉಳಿದರೂ, ಆಸ್ತಿಯು ಆಕೆಯ ತಾಯಿ ಮತ್ತು ತಾಯಿಯ ಕವರಿಗೆ ಹೋಗುತ್ತದೆ. ಇಂತಹ ವಾರಿಸ್ದಾರಿಕೆಯಿಂದ ಮೃತನ ಸಹೋದರ ಸಹೋದರಿಯರೇ ಮೊದಲಾದ ಕುಟುಂಬಿಕರಿಗೆ ಅನ್ಯಾಯವಾಗುವದೆಂಬುದು ಸ್ಪಷ್ಟವಿದೆ ಅಂತೆಯೇ, ಒಬ್ಬನು ಸತ್ತ ನಂತರ ಆತನ ತಾಯಿಯ ಪಾಲಿಗೆ ದೊರೆಯುವ ಆಸ್ತಿಯು ಆಕೆಯ ಹಕ್ಕಿನದೇ ಆದ ಪ್ರತ್ಯೇಕ ಆಸ್ತಿಯಾಗಿದ್ದು, ಆವಳು ಅದನ್ನೆಲ್ಲಾ ತನ್ನ ಒಬ್ಬ ಮಗನಿಗೇನೇ ಅಥವಾ ಯಾರಾದರೊಬ್ಬನಿಗೆ 'ವಿಲ್‌ನಾಮೆ' ಮಾಡುವ ಅಧಿಕಾರ ಹೊಂದಿರುತ್ತಾಳೆ. ನಮ್ಮ ಮಸೂದೆಯ ರ ಹುಟ್ಟಿದ ಸ್ಥಿತಿಗತಿಗಳ ಮೇಲಿಂದ ಇಂತಹ ಘಟನೆಗಳು ಹೆಚ್ಚಾಗಿ ಸಂಭವಿಸಬಾರದೆಂದು ಭಾವಿಸಲಾಗುವದಿಲ್ಲ. ಸ್ತ್ರೀಯು ಯಾವಾಗಲೇ ತನ್ನ ಮಗನ ಆಸ್ತಿಯ ಹಕ್ಕು ಬಾಧ್ಯತೆಗಳು ದೊರೆತರೆ, ಅದು ಆಕೆಯನ್ನು ವಶಪಡಿಸಿಕೊಂಡಿರುವ ಹೆಣ್ಣು ಯಾ ಗಂಡು ಮಕ್ಕಳಿಂದ ದುರ್ವ್ಯಯವಾಗಬಹುದು. ನಿಯೋಜಿತ ಮಸೂದೆಯಲ್ಲಿರುವ ಈ ದೋಷವನ್ನು ನಿವಾರಿಸುದಕ್ಕಾಗಿ ಉಪಸಮಿತಿಯು ಈ ಕೆಳಗಿನ ತಿದ್ದುಪಡಿಗಳನ್ನು ಸೂಚಿಸುತ್ತದೆ:—

ಮಕ್ಕಳು ಅಥವಾ ಅನುವಂಶಿಕ ಬಾಧ್ಯಸ್ಥರಿಲ್ಲದ ಓರ್ವ ಮೃತನಿಗೆ, ತಾಯಿ, ವಿಧವೆ ಮತ್ತು ಸಹೋದರ ಸಹೋದರಿಯರಿದ್ದಲ್ಲಿ, ತಾಯಿ ಮತ್ತು ವಿಧವೆ (ಹೆಚ್ಚಿಗೆ ವಿಧವೆಯರಿದ್ದಲ್ಲಿ ಎಲ್ಲರೂ ಒಟ್ಟಿಗೆ) ಯರಲ್ಲಿ ಪ್ರತಿಯೊಬ್ಬರೂ ರೂ. 3000ದಂತೆ ಮುಂದಾಗಿ ಪಾಲು ಪಡೆಯತಕ್ಕದ್ದು. ಉಳಿದ ಆಸ್ತಿಯು ತಿಲ್ಲೆಲ್ಲಾ ತಾಯಿ, ವಿಧವೆ ಅಥವಾ ವಿಧವೆಯರು, ಅಣ್ಣತಮ್ಮ, ಅಕ್ಕತಂಗಿಯರಲ್ಲಿ ಪ್ರತಿಯೊಬ್ಬನಿಗೂ ಸಮಾನವಾಗಿ ಖಂಡಿತ ಪಾಲಾಗಬೇಕು. ಮೃತನಿಗಿಂತ ಮುಂದಾಗಿ ಆತನ ಸಹೋದರ ಅಥವಾ ಸಹೋದರಿ ಸತ್ತು ಹೋಗಿದ್ದರೆ, ಅವರಾ ಕಾಲದಲ್ಲಿ ಬದುಕಿದ್ದರೆ ಹೇಗೋ ಹಾಗೆಯೇ ಅವರ ಅಂಶಸ್ಥವಾರೀಸುದಾರರಿಗೆ ಪಾಲು ಸಿಗತಕ್ಕದ್ದು. ಸಹೋದರ ಸಹೋದರಿಯರ ಮಕ್ಕಳಿಗೆ ಯಾರಿಂದ ಅಂತಹ ಆಸ್ತಿಗಳನ್ನು ಪಡೆಯುವ ಹಕ್ಕಿದೆಯೋ,—ಆ ಆಸ್ತಿಗಳು ಪ್ರತ್ಯೇಕ ಯಾ ಸ್ವಾರ್ಜಿತ ಆಸ್ತಿಯಾಗಿದ್ದಲ್ಲಿ ಹೇಗೋ ಹಾಗೆಯೇ ಹಕ್ಕು ಬಾಧ್ಯತೆಗಳಿವೆ.

ಮೇಲ್ಗಡೆ ನಮೂದಿಸಿರುವ ವ್ಯವಸ್ಥೆಯು ನಿಜವಾದ ಅಳಿಯ ಸಂತಾನ ಮನೋವೃತ್ತಿಗನುಗುಣವಾಗಿದೆ. ಅಂತೆಯೇ ಈ ವಿಧಾನದಿಂದಾಗಿ ಒಬ್ಬ ಮೃತನ ಆಸ್ತಿಯು ಆತನ ಸಮೀಪದ ಸಂಬಂಧಿಕರೊಳಗೆ ನ್ಯಾಯಸಮ್ಮತಿಗನುಸಾರವಾಗಿ ಪಾಲಾಗಲು ಅನುಕೂಲವಾಗುತ್ತದೆ. ಸಣ್ಣ ಪುಟ್ಟ ಆಸ್ತಿಗಳ ಮಟ್ಟಿಗೆ, ಈ ಸೂಚನೆಯೂ, ನಿಯೋಜಿತ ಅಳಿಯ ಸಂತಾನ ಮಸೂದೆಯಲ್ಲಡಕವಾಗಿರುವ ಸೂಚನೆಯಂತಹ ಪರಿಣಾಮವನ್ನೇ ಉಂಟುಮಾಡುವದು. ದೊಡ್ಡ ದೊಡ್ಡ ಆಸ್ತಿಗಳ ಮಟ್ಟಿಗೆ ಮರಣ ಶಾಸನರಹಿತ ಮೃತನ ಸಮೀಪ ಸಂಬಂಧಿಕರೊಳಗಿನ ತಾರತಮ್ಯಕ್ಕನುಗುಣವಾದ, ಹೆಚ್ಚು ನ್ಯಾಯಪ್ರದವಾದ ಪಾಲು ಕ್ರಮವನ್ನೇ ಇದು ಸೂಚಿಸುತ್ತದೆ

ಮರಣ ಶಾಸನರಹಿತ ಮೃತಳ ವಾರೀಸ್ದಾರಿಕೆ

ಮೃತ್ಯು ಪತ್ರ ಮಾಡದೆ ತೀರಿ ಹೋದ ಮಹಿಳೆಯೊಬ್ಬಳ ಆಸ್ತಿಯ ವಾರೀಸ್ದಾರಿಕೆಯ ಕುರಿತು ನಿಯೋಜಿತ ಅಳಿಯ ಸಂತಾನ ಮಸೂದೆಯಲ್ಲಿ ಸೂಚಿಸಲ್ಪಟ್ಟಿರುವ ಸುಧಾರಣೆಯು ಗಂಡು ಮಕ್ಕಳಿಗೆ ಸ್ಪಷ್ಟವಾಗಿ ಅನ್ಯಾಯ ಮಾಡುತ್ತಿದೆ ಎಂದು ಈ ಉಪಸಮಿತಿಯ ಅಭಿಪ್ರಾಯವಿದೆ. ಒಬ್ಬಳು ತನ್ನ ಸ್ವಾರ್ಜಿತ ಅಥವಾ ಪ್ರತ್ಯೇಕ ಆಸ್ತಿಯನ್ನು ಹಾಗೆಯೇ ಬಿಟ್ಟು ಮೃತಪಟ್ಟಲ್ಲಿ, ಕರಡು ಮಸೂದೆಯನ್ವಯ ಆ ಆಸ್ತಿಯು ಅವಳ ಕವರಿನ ಆಸ್ತಿಯಾಗುತ್ತದೆ; ಅರ್ಥಾತ್ ಗಂಡು ಮಕ್ಕಳಿಗೆ ತಮ್ಮ ಜೀವಮಾನದ ವರೆಗೆ ಮಾತ್ರ ಆ ಆಸ್ತಿಯನ್ನನುಭೋಗಿಸುವ ಹಕ್ಕಿದೆ. ನಿದರ್ಶನಕ್ಕಾಗಿ ಮಕ್ಕಳು ಅಥವಾ ವಂಶಸ ವಾರೀಸ್ದಾರರುಳ್ಳ ಆಕೆಯ ಮಗನೊಬ್ಬನು ಆಕೆಗಿಂತ ಮುಂದಾಗಿ ಮರಣಗೊಂಡಿದ್ದರೆ, ಆ ಮಗನ ಮಕ್ಕಳು ಯಾನೆ ವಂಶಜರಿಗೆ, ಅವಳ ಮರಣಾನಂತರದ ಆಸ್ತಿಯಲ್ಲಿ ಯಾವ ಹಕ್ಕೂ ಇರುವದಿಲ್ಲ. ಈ ವಿಧಾನದಿಂದಾಗಿ, ಅಳಿಯ ಸಂತಾನ ಹಕ್ಕು ಬಾಧ್ಯತೆಗಳಲ್ಲಿರುವ ಅನಪೇಕ್ಷಿತ ಭಾಗವೊಂದು ಇನ್ನೂ ಅಸ್ತಿತ್ವದಲ್ಲೇ ಇರುವಂತಾಗುವದೆಂದು ಈ ಸಮಿತಿಯು ಅಭಿಪ್ರಾಯಪಡುತ್ತದೆ. ಆದ್ದರಿಂದ ಮೃತ್ಯುಪತ್ರರಹಿತ ಮೃತಳ ವಾರೀಸ್ದಾರಿಕೆಯ ಸಂಬಂಧವಾಗಿ ಈ ಕೆಳಗಿನ ತಿದ್ದುಪಡಿಯನ್ನು ಈ ಸಮಿತಿ ಸೂಚಿಸುತ್ತದೆ :—

ಮೃತ್ಯು ಶಾಸನ ರಹಿತ ಮೃತಳ ಸ್ವಾ

ಮುಟ್ಟಾಗುಳಿಕೆ

ಮಲಿನಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರಾಪದ್ರವಿ—ಶೀಘ್ರಗುಣದಾಯಕ, ಅಕ್ರಮವಾದ, ಕೆಲವೇ ಗಂಟೆಗಳಲ್ಲಿ ಸರಿಯಾಗಿಸುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3| ಕ್ರಮಿಯಾದ ಕೇಸುಗಳಿಗೆ ರೂ. 5. 6 ತಿಂಗಳ ಬರ್ಥ ಕಂಟ್ರೋಲಿಗೆ ರೂ. 4|. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

R. D. S. (A. P.) Tollygunge, Calcutta.

ಸ್ಟಾಕಿಸ್ಟ್: ಪಾ ಶೆಣೈ, ಮಂಗಳೂರು

THE

UNITED KARNATAK INSURANCE Co., Ltd.

H. O. DHARWAR. ESTD: 1929.

GLAD TO ANNOUNCE A BUSINESS

INCREASE OF 400%

OVER LAST YEARS FIGURE

We invite applications from young, energetic and ambitious persons for the post of Organisers, Inspectors and Branch Managers etc.

DHARWAR, 5—2—1946.

A. S. KINI. Managing Director.

BANK WITH THE LARGEST ... ON THE WEST COAST,

OFFERS:- EFFICIENT, PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd

ESTD 1926

ರ್ಣತೆ ಯಾನೆ ಸ್ವಂತಾಸ್ತಿಗಳೆಲ್ಲವೂ ಅವಳ ಆನುವಂಶಿಕ ವಾರಿಸ್ದಾರರೊಳಗೆ ಸಮಾನ ಪಾಲಾಗಿ ಹೋಗತಕ್ಕದ್ದು. ಗಂಡ ಮತ್ತು ತಾಯಿಯನ್ನು ವಾರಿಸ್ದಾರಿಕೆಯಿಂದ ವಿನಾಯಿತಿ ಪಡಿಸಬೇಕಲ್ಲದೆ ಪಾಲು ಎಲ್ಲರಿಗೂ ಸ್ತ್ರೀ ಪುರುಷ ಭೇದವಿಲ್ಲದೆ ಸಮಾನ ಸ್ವತಂತ್ರಾಧಿಕಾರವುಳ್ಳದ್ದಾಗಿರಬೇಕು. ಪಾರಂಪರ್ಯ ಹಕ್ಕಿನ ವಾರೀಸ್ದಾರರಿಲ್ಲದ ಸಂದರ್ಭಗಳಲ್ಲಿ ಆಸ್ತಿಯ ಮೊದಲ ೩೦೦೦ ರೂಪಾಯಿಗಳು ತಾಯಿಗೆ ದೊರೆಯತಕ್ಕದ್ದು. ಉಳಿಯುವ ಎಲ್ಲಾ ಅಂಶವೂ ತಾಯಿ, ಮತ್ತು ಸಹೋದರ ಸಹೋದರಿಯರೊಳಗೆ ಸರಿಸಮಾನವಾಗಿ ಮತ್ತು ಪೂರ್ಣಾಧಿಕಾರವುಳ್ಳ ಪಾಲಾಗತಕ್ಕದ್ದು. ಮೃತಳ ಸಹೋದರ ಸಹೋದರಿಯರ ಮಕ್ಕಳು ಯಾ ವಂಶಜ ವಾರೀಸ್ದಾರರಿದ್ದಲ್ಲಿ, ಆ ಸಹೋದರ ಸಹೋದರಿಯರು ಬದುಕಿದ್ದರೆ ಹೇಗೋ ಹಾಗೆಯೇ ಅವರ ಮಕ್ಕಳಿಗೆ ಪಾಲು ಪಡೆಯುವ ಹಕ್ಕಿದೆ. ಈ ಸಹೋದರ ಸಹೋದರಿಯರ ಮಕ್ಕಳೊಳಗಾಗುವ ಪಾಲು ವಿಧಾನವು ಸ್ತ್ರೀ ಪುರುಷ ಭೇದ ರಹಿತ ಸ್ವತಂತ್ರ ಸಮಾನತೆಯನ್ನು ಆಧರಿಸಿರತಕ್ಕದ್ದು. ತಾಯಿಯೇ ಇಲ್ಲದೆ, ತಾಯಿಯ ಕವರು ಮಾತ್ರವಿದ್ದಲ್ಲಿ ಆಸ್ತಿಯು ತಾಯಿಯ ವಂಶಸ್ಥ ವಾರಿಸ್ದಾರರೊಳಗೆ ಸ್ವತಂತ್ರ ಸಮಾನತೆಯನ್ನಾಧರಿಸಿ ಪಾಲಾಗತಕ್ಕದ್ದು. ವಂಶಜ ವಾರೀಸ್ದಾರರು, ತಾಯಿ ಮತ್ತು ತಾಯಿಯ ಕವರಿನವರು ಯಾರೂ ಇಲ್ಲದಿದ್ದರೆ ಮರಣಶಾಸನ ರಹಿತ ಮೃತಳ ಆಸ್ತಿಯೆಲ್ಲಾ ಅವಳ ಗಂಡನಿಗೆ ಸೇರುತ್ತದೆ. ಮೇಲ್ಗಡೆ ಸೂಚಿಸಲ್ಪಟ್ಟ ಹಕ್ಕು ಬಾಧ್ಯಸ್ಥರಾರೂ ಬದುಕಿರದ ಸಂದರ್ಭಗಳಲ್ಲಿ ಆಸ್ತಿಯು ಮಾತೃ ವಿಭಾಗದಲ್ಲಿ ದೂರದವರನ್ನು ಹೊರತುಪಡಿಸಿ ಅಜ್ಜಿಗೂ ಅವಳ ಹಕ್ಕು ಬಾಧ್ಯಸ್ಥರಿಗೂ ಸಿಗಬೇಕು ಮತ್ತು ಆಸ್ತಿಯು ಮೃತಳ ಸಮಾನ ಸಮೀಪದ ಸಂಬಂಧಿಕರೊಳಗೆ ಸರಿಸಮಾನ ಪಾಲಾಗಿ ಪ್ರತಿಯೊಬ್ಬನೂ ತನ್ನ ಪಾಲಿನ ಪೂರ್ಣಾಧಿಕಾರ ಪಡೆಯತಕ್ಕದ್ದು. ತಾಯಿ ಭಾಗದ ಅಜ್ಜಿ ಮತ್ತು ವಂಶ ವಾರಿಸ್ದಾರರೂ ಇಲ್ಲದಿದ್ದಲ್ಲಿ ಆಸ್ತಿಯು ದೊಡ್ಡ ಸ್ತ್ರೀ ವಾರಿಸ್ದಾರರಿಗೆ ಮತ್ತು ಸ್ತ್ರೀಪುರುಷ ಭೇದವಿಲ್ಲದೆ ಸಂಪೂರ್ಣ ಹಕ್ಕಿನ ಆಧಾರದಿಂದ ಅವಳ ಮಕ್ಕಳಿಗೆ ಹೋಗತಕ್ಕದ್ದು.

ಆಸ್ತಿ ವಿಭಾಗ

ಒಂದು ಕವರಿನ ಬಹು ಸಂಖ್ಯಾಕರು ಕೇಳದಿದ್ದರೆ ಮತ್ತು ಕವರಿನ ಹಿರಿಯ ಸ್ತ್ರೀ ಯಜಮಾನತಿಗೆ ೫೦ ವರುಷ ಪ್ರಾಯವಾಗದಿದ್ದರೆ, ಆಸ್ತಿ ವಿಭಾಗವಾಗುವದಕ್ಕೆ ಪ್ರಕಟಿತ ಅಳಿಯಸಂತಾನ ಮಸೂದೆಯು ಒಪ್ಪುವದಿಲ್ಲ. ಅವಿಭಕ್ತ ಕುಟುಂಬವೊಂದರಿಂದ ಪ್ರತ್ಯೇಕವಾಗಬೇಕೆಂದು ಬಯಸುವ ಒಂದು ಕವರಿಗೆ, ಮೇಲಿನ ೫೦ ವರುಷ ಪ್ರಾಯದ ನಿರ್ಬಂಧವು ಒಂದು ಆತಂಕವಾಗಿದೆಯೆಂದು ಈ ಸಮಿತಿ ಅಭಿಪ್ರಾಯಪಡುತ್ತದೆ. ಆದ್ದರಿಂದ ಪ್ರಾಯ ಮಿತಿಯ ಈ ಶರ್ತವನ್ನು ತೊಡೆದು ಹಾಕಬೇಕಾಗಿದೆ.

ಕುಟುಂಬದ ಆಸ್ತಿಯು ಪಾಲಾಗುವಾಗ ಕುಟುಂಬದ ಹಿರಿಯಳಿಗೆ ದೊರೆಯಬೇಕೆಂದು ನಿಯೋಜಿತ ಮಸೂದೆಯಲ್ಲಿ ನಮೂದಿಸಲ್ಪಟ್ಟಿರುವ ಪಾಲು ಸಾಕಾಗದು; ಮತ್ತು ಕುಟುಂಬದಲ್ಲಿ ಅವಳಿಗಿರಬೇಕಾದ ಹಿರಿಸ್ಥಾನಕ್ಕೆ ಹೊಳಿಸಿದಂತಿಲ್ಲವೆಂದು ಈ ಸಮಿತಿಯ ಅಭಿಪ್ರಾಯ. ಮೇಲಾಗಿ ಈ ಹಿರಿಯಳ ಹಕ್ಕಿಗೆ ಹೋಗುವ ಪಾಲಾದರೂ ಅವಳ ಜೀವಮಾನದವರೆಗೆ ಮಾತ್ರ. ಆದ್ದರಿಂದ ಈ ಕುಟುಂಬದ ಹಿರಿಯಳಿಗೆ ಮಸೂದೆಯಲ್ಲಿ ಸೂಚಿಸಲ್ಪಟ್ಟಿರುವದಕ್ಕಿಂತ ಹೆಚ್ಚಿಗೆ ಪಾಲು ದೊರೆಯಬೇಕೆಂದು ಈ ಸಮಿತಿಯು ಅಭಿಪ್ರಾಯಪಡುತ್ತದೆ. ಅದಕ್ಕೋಸ್ಕರ, ಮಸೂದೆಯ ಸೆಕ್ಷನ್ 33 (1) ರ ಪ್ರಕಾರ ಅವಳಿಗೆ ಕೊಡಲ್ಪಟ್ಟಿರುವ ಪಾಲಿನಂತೆಯೇ, ಉಳಿದ ಅರ್ಧವಾಸಿ ಆಸ್ತಿಯು ಕುಟುಂಬಿಕರೊಳಗೆ ತಲೆವಾರು ಪಾಲಾಗುವಾಗಲೂ ಅವಳಿಗೆ ಪಾಲು ಕೊಡತಕ್ಕದ್ದೆಂದು ಈ ಸಮಿತಿ ಸೂಚಿಸುತ್ತದೆ. ಕುಟುಂಬದ ಅರೆವಾಸಿ ಆಸ್ತಿಯು ತಲೆವಾರು ಪಾಲಾಗುವಾಗ ಕುಟುಂಬಿಕರ ಸಮಾನ ಹಿರಿಯಳಿಗೊಂದು ಪಾಲಿದೆಯೇ ಎಂಬ ಕುರಿತು ಸೆಕ್ಷನ್ 33ರಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟಿಲ್ಲ. ಈ ಹಿರಿಯಳಿಗೆ ಸೆಕ್ಷನ್ 33 (1)ರ ಮೇರೆ ಪಾಲು ದೊರೆಯುವಂತೆಯೇ ಸೆ 33 (b) ಪ್ರಕಾರವೂ ಮತ್ತೊಂದು ಪಾಲು ದೊರೆಯಬೇಕೆಂದು ಈ ಸಮಿತಿಯು ಒತ್ತಾಯಪೂರ್ವಕ ಸೂಚಿಸುತ್ತದೆ.

ಅಳಿಯಕಟ್ಟು ಅವ್ಯವಹಾರ್ಯ.

ಮನುಷ್ಯನ ದೃಷ್ಟಿಗೆ ತೋರುವ ಈ ಪ್ರಪಂಚದಲ್ಲಿ ಇರುವೆಯಿಂದ ಹಿಡಿದು ಆನೆಯವರೆಗೆ ಪ್ರತಿಯೊಂದು ಜೀವಿಯೂ ತನ್ನಿಂದ ಹುಟ್ಟುವ ಮರಿಗಳಿಗಾಗಿ, ಅವುಗಳಿಂದ ಮುಂದೆ ತನಗೆ ಏನೊಂದು ಪ್ರಯೋಜನವಿಲ್ಲದಿದ್ದರೂ ತನ್ನ ಸಂತತಿಯ ಪ್ರಾಣರಕ್ಷಣೆಗಾಗಿ, ಅವುಗಳನ್ನು ಸುಖ ಶಾಂತಿಯಲ್ಲಿರಿಸಲಿಕ್ಕಾಗಿ ತನ್ನ ಪ್ರಾಣ ಹೋಗುವವಾದರೂ ಹಿಂಜರಿಯುವುದಿಲ್ಲ. ಇದು ನಿಸರ್ಗನಿಯಮ. ಈ ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ವರ್ತಿಸಿದರೆ ದುಃಖವೂ ನಾಶವೂ ಯಾರಿಗೂ ತಪ್ಪಿದ್ದಲ್ಲ. ನಮ್ಮ ಅಳಿಯಕಟ್ಟು ಈ ಪ್ರಕೃತಿ ನಿಯಮಕ್ಕೆ ವಿರುದ್ಧವಿರುವದು. ಸಾಮಾನ್ಯವಾಗಿ ಮದುವೆಯಾಗಿ ಮಕ್ಕಳಾದಕೂಡಲೇ ಎಂಥಾ ಸ್ಥಿರಮನಸ್ಸಿನ ಅಳಿಯಕಟ್ಟಿನ ಯಜಮಾನನಾದರೂ ತನ್ನ ಹೆಂಡತಿ ಮಕ್ಕಳ ಸುಖಶಾಂತಿಗಾಗಿ ಯತ್ನಿಸುವುದು ಸಹಜವಾಗಿದೆ. ತನ್ನ ಮಕ್ಕಳ ವಿದ್ಯಾಭ್ಯಾಸ ಮುಂದಿನ ಸುವ್ಯವಸ್ಥೆಗಾಗಿ ಪ್ರಯತ್ನಮಾಡಿ ಹಣಗಳಿಸುವದು ಅವನ ನ್ಯಾಯವಾದ ಜವಾಬ್ದಾರಿಯಾಗಿದೆ. ತನ್ನದೆಂದು ಹೇಳಲ್ಪಡುವ ತನ್ನ ಹಿರಿಯರು ಗಳಿಸಿದ ಆಸ್ತಿಯ ಉತ್ಪತ್ತಿಯು ಹೀಗೆ ಯಜಮಾನ ಮತ್ತು ಅವನ ಮಕ್ಕಳ ಸ್ವಾರ್ಥ ಸುಖೋಪಭೋಗತೆಗಾಗಿ ಖರ್ಚಾಗುವುದನ್ನೂ ತಮಗಾಗಲೀ ಮನೆಯ ಸುವ್ಯವಸ್ಥೆಗಾಗಲೀ ಅದು ದೊರೆಯದಿರುವದನ್ನೂ ನೋಡಿ ಎಂಥಹ ಸಾಧು ಸ್ವಭಾವದವನಲ್ಲಾದರೂ ಯಜಮಾನ ಮತ್ತು ಅವನ ಮಕ್ಕಳಮೇಲೆ ಅಸೂಯೆ, ದ್ವೇಷ, ಪ್ರತೀಕಾರ ಬುದ್ಧಿ ಹುಟ್ಟುವುದು ಸಹಜವಿರುತ್ತದೆ. ಒಂದುವೇಳೆ ಅವನಲ್ಲಿ ಈ ಗುಣಗಳ ಅಭಾವವಿದ್ದರೂ, ಅವನನ್ನು ಎಚ್ಚರಿಸಿ ಹುರಿದುಂಬಿಸುವವರು ಬೇಕಾದಷ್ಟು ಜನ ಸಿಕ್ಕುತ್ತಾರೆ. ಹೀಗೆ ಯಜಮಾನ ಮತ್ತು ಅವನ ಕುಟುಂಬಿಕರಲ್ಲಿ ಪರಸ್ಪರ ಬೆಳೆಯುತ್ತಿದ್ದ ದ್ವೇಷವು ಕೊನೆಗೊಳ್ಳುವದೇ ಅಪೂರ್ವ. ಈ ದ್ವೇಷದ ಪರಿಣಾಮ ಖೂನಿ, ಕ್ರಿಮಿನಲ್ ವ್ಯವಹರಣೆ, ಕುಟುಂಬಿಕರಲ್ಲಿ ಹಣವಿದ್ದರೆ ಸಿವಿಲ್ ವ್ಯವಹರಣೆ ಮೂಲಕ ೩, ೪ ವರುಷದನಂತರ ರಿಸೀವರ್‌ರಿಂದ ಊಟದ (?) ಅಕ್ಕಿ ಸಿಗುವುದು—ಹೀಗೆ ಕೋರ್ಟು ವ್ಯವಹರಣೆಯಲ್ಲಿ ಧುಮುಕಿದ ಮನೆಯ ತೋಟ, ಮನೆ ಗದ್ದೆ, ಇತ್ಯಾದಿ ಸ್ಥಿರಚರ ಸೊತ್ತುಗಳು ಹಾಳಾಗಿ ಕ್ರಮೇಣ ಪ್ರಯೋಜನಕ್ಕೆ ಬಾರದವುಗಳಾಗಿ ಹೋಗುವುದೂ ಸಹಜವಿರುತ್ತದೆ. ಉತ್ಪತ್ತಿ ಕಮ್ಮಿಯಿರಲಿ, ಜಾಸ್ತಿಯಿರಲಿ, ಯಾವದೊಂದು ಅಳಿಯಕಟ್ಟಿನ ಕುಟುಂಬದಲ್ಲಿ ಇದ್ದುದರಲ್ಲಿ ಸಮಾನವಾಗಿ ಎಲ್ಲರೂ ಸೇರಿ ಸುಖದುಃಖಗಳಲ್ಲಿ ಭಾಗಿಯಾಗುವ ಕುಟುಂಬ ಒಂದೇ ಒಂದು ಸಿಗುವುದು ದುರ್ಲಭ. ಅಳಿಯಕಟ್ಟು ಇರುವದು ಒಳ್ಳೆಯದೆಂದು ಹೇಳುವ ಯಾರೊಬ್ಬರೇ ಆಗಲಿ, ತಮ್ಮ ಕುಟುಂಬದ ಎಲ್ಲಾ ಮೆಂಬರರ ಉನ್ನತಿಗಾಗಿ, ಕುಟುಂಬದ ಸ್ಥಿರಚರ ಸೊತ್ತಿನ ಸುಸ್ಥಿತಿಗಾಗಿ ತಾನೆಷ್ಟು ಮಟ್ಟಿಗೆ ಪ್ರಯತ್ನಿಸಿದ್ದೇನೆ ಮತ್ತು ತ್ಯಾಗಮಾಡಿದ್ದೇನೆ ಎಂದು ತಮ್ಮನ್ನೆ ನಿರ್ವಿಕಾರ ಮನಸ್ಸಿನಿಂದ ಪರೀಕ್ಷಿಸಿ ನೋಡಲಿ. ಆಗ ಅವರಿಗೆ ಅಳಿಕಟ್ಟಿನಿಂದಾಗುವ ಅನರ್ಥವು ಹೊಳೆಯದಿರದು. ಅಳಿಯಕಟ್ಟಿನ ಹೆಂಗಸರ ಸ್ಥಿತಿಯೂ ಶೋಚನೀಯವಿರುವುದು. ಮೊದಲು ತಂದೆಯ ಅಜ್ಞೆ, ಅಮೇಲೆ ಅವಳ ಯೌವನ ಮತ್ತು ಪ್ರೌಢ ವಯಸ್ಸಿನಲ್ಲಿ ತನ ಮತ್ತು ತನ್ನ ಮಕ್ಕಳಿಗೆ ಮುಂದೆ ಗೋಸೆಯಲ್ಲಿ ಏನೊಂದೂ ಅಧಿಕಾರವಿಲ್ಲದೆ ಹೋಗುವ ಗಂಡನ ಮನೆಯ ಸುವ್ಯವಸ್ಥೆಗಾಗಿ, ದುಡಿಯುತ್ತಿರಬೇಕು. ಅಮೇಲೆ ಗಂಡನ ಕಾಲಾನಂತರ ಮನೆಗೆ ಬಂದರೆ ವಿಧವೆಯಾಗಿ ಪ್ರಾಯಮೀರಿದ ಅವಳಿಂದ ಸಹೋದರರ ಮತ್ತು ಪ್ರಾಯ ಭರಿತರಾದ ಮಕ್ಕಳ ಮಧ್ಯದಲ್ಲಿ ಮನೆಯ ಉನ್ನತಿಗಾಗಿ ಏನುಮಾಡಲೂ ಸಾಧ್ಯವಿರುವುದಿಲ್ಲ. ಹೀಗೆ ಅಳಿಯ ಸಂತಾನದಲ್ಲಿ ಹುಟ್ಟಿದ ಯಾರೊಬ್ಬರಿಗೂ ಮನೆಯ ಶ್ರೇಯಸ್ಸಿಗಾಗಿ ದುಡಿಯುವ ಜವಾಬ್ದಾರಿಯಾಗಲೀ ಜವಾಬ್ದಾರಿ ಇದ್ದರೆ ಅಧಿಕಾರವಾಗಲೀ ಇರುವದಿಲ್ಲ. ಹೀಗೆ ಬೇಜವಾಬ್ದಾರಿ, ಸ್ವಾರ್ಥ, ಅಸೂಯೆ ಪ್ರತೀಕಾರ ಬುದ್ಧಿ, ಇತ್ಯಾದಿಗಳು ತುಂಬಿದ ವಾತಾವರಣದಲ್ಲಿ ಹುಟ್ಟಿ ಬೆಳೆಯುವ ಮಕ್ಕಳು ಎಷ್ಟರಮಟ್ಟಿಗೆ ಉನ್ನತಿ ಹೊಂದಬಹುದು; ಮತ್ತು ಸ್ಥಿರಚರ ಸೊತ್ತುಗಳು ಎಂತಹ ಅವ್ಯವಸ್ಥೆಯಲ್ಲಿರಬಹುದು ಎಂದು ವಾಚಕರೇ ಊಹಿಸಿ ನೋಡಲಿ. ಮಕ್ಕಳ ಕಟ್ಟಿನಲ್ಲಿ ಈ ತರದ ಬೇಜವಾಬ್ದಾರಿ, ಸೋಮಾರಿತನಗಳಿಗೆ ಎಡೆ ಇರುವುದಿಲ್ಲ. ಶಕ್ತಿ ಯೋಗ್ಯತೆ ಇದ್ದವರು ಸುವ್ಯವಸ್ಥೆಯಲ್ಲಿಡುತ್ತಾರೆ; ಇಲ್ಲದವರು ಇದ್ದುದನ್ನು ವಿಕ್ರಯಿಸಿ ತಮಗೆ ಮೆಚ್ಚುವ ಉದ್ಯೋಗದಿಂದ ಜೀವನ ನಡೆಸುತ್ತಾರೆ. ಅಂತೂ ಆಲಸ್ಯ, ಬೇಜವಾಬ್ದಾರಿ ನಿರುದ್ಯೋಗಗಳಿಗೆ ಎಡೆ ಇರುವದಿಲ್ಲ. ಆದ್ದರಿಂದ ಮಕ್ಕಳ ಕಟ್ಟಾಗುವುದೇ ಎಲ್ಲಾ ರೀತಿಯಿಂದಲೂ ಒಳ್ಳೆಯದೆಂದು ನನ್ನ ಮತ. ಕುಟುಂಬದ ಹೆಚ್ಚು ಮೆಂಬರರು ಇಚ್ಛಿಸಿದಲ್ಲಿ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಗಂಡು ಎಲ್ಲಾ ಮೆಂಬರರಿಗೆ ಕೋರ್ಟಿಗೆ ಹೋಗದೇನೇ ಸಮಸಮಾನವಾದ ಪಾಲು ದೊರೆಯುವಂತಾಗುವದೇ ನ್ಯಾಯವೆಂದು ನನ್ನ ಅಭಿಪ್ರಾಯ.

ಅಳಿಯ ಕಟ್ಟಿನ ಮೆಂಬರೊಬ್ಬ
ವಕ್ವಾಡಿ ವಿಟ್ಠಲ ಶೆಟ್ಟಿ.

ನಮ್ಮಲ್ಲಿ ಸಿಗುವ ಕೆಲವು ಅಮೂಲ್ಯ ಪುಸ್ತಕಗಳು

ನಾಟಕಗಳು			
ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	8	0
ಕುಶಲವ	0	5	0
ವ್ಯಭಿಚಾರಿಣಿ ಯಾರು?	0	12	0
ಹೆಂಡ್ತಿ ಗಂಡನಾದರೆ!	0	4	0
ಪುರುಷ ವಧು!	0	4	0
ದೇಶಭಕ್ತ	1	4	0
ರಂಗಭೂಮಿ	0	8	0
ಸೇವಾಪಥ	0	8	0
ಪ್ರಕಾಶ	2	4	0
ಮೂರು ಪ್ರಹಸನಗಳು	0	14	0
ಆರೋಗ್ಯ ಪ್ರತಾಪ	0	12	0
ಧರ್ಮಸಂಕಟ	0	5	0
ಪಂಚಾರತಿ	0	6	0
ಪ್ರತೀಕಾರ	0	6	0
ಬಣ್ಣದ ಬೀಸಣಿಗೆ	1	4	0
ಶಂಭೂಕ ವಧೆ	0	2	0
ಸೂರಾಬಾಯಿ	0	10	0
ಸರಸ್ವತಿ	0	12	0
ಕತೆಗಳು			
ಅಂತರಂಗದ ಕತೆಗಳು	0	10	0
ನಾಡಕತೆಗಳು	0	3	0
ನಂದಾದೀಪ	0	10	0
ನಾರೀಹೃದಯ	0	14	0
ಭಾರತೀಯ ಕತೆಗಳು	0	14	0
ನಗನೋಟಗಳು	0	14	0
ಅನ್ವೇಷಣೆ ಮತ್ತು ಇತರ ಕತೆಗಳು	1	0	0
ವಿಷ್ಣುಶರ್ಮನ ದರ್ಬಾರಗಳು	0	12	0
ಆಕಾಶಗಂಗೆ	1	12	0
ಪ್ರೇಮಲಾಭ	0	5	0
ಪ್ರತಿಷ್ಠೆ	1	0	0
ಕಂಡೂ ಕಾಣದ ನೋಟಗಳು	0	8	0
ಆಹುತಿ ಇತ್ಯಾದಿ ಕತೆಗಳು	0	12	0
ಪ್ರೇಮ ಪ್ರವಾಹ	0	8	0
ಚಿಗುರು	0	6	0

ಕವಿತೆಗಳು			
ಕಾವ್ಯ ಸಾಮ್ರಾಜ್ಯ	1	0	0
ಶ್ರೀಮುಖ	1	0	0
ಮುಗುಳು	0	3	0
ಪರಾಗ	0	9	0
ಭಾರತ ಗೀತಾಂಜಲಿ	0	3	0
ಚಲಚ್ಚಿತ್ರ ಪದ್ಯಾವಳಿ	0	3	0
ಕಾದಂಬರಿಗಳು			
ಸುಶೀಲೆ	1	0	0
ಲಾವಣ್ಯವತಿ	0	12	0
ಸನ್ಯಾಸಿಯ ಸೋಗಿನಲ್ಲಿ	0	8	0
ಲೋಪಾಮುದ್ರೆ	0	6	0
ವೀರಭೂಮಿ	0	2	0
ಇತರ			
ಸಾಮುದ್ರಿಕ ಶಾಸ್ತ್ರ	0	8	0
ಪುರಂದರದಾಸರ ಕೀರ್ತನೆ (೪ ಭಾಗ ಬೈಂಡು ಮಾಡಿದ್ದು)	1	[illegible]	0
ಪಿಶಾಚರ ರಾಮಾಯಣ	0	1	0
ಮಲ್ಲಯುದ್ಧ	1	4	0
ಸೌಂದರ್ಯಲಹರಿ	1	0	0
ವರಪರೀಕ್ಷೆ	0	8	0
ಆರತಿ	1	0	0
ಕಣ್ಣಲ್ಲ ಬಟ್ಟು	0	5	0
ಹೆಣ್ಣಿನ ತೊಡಕು	0	5	0
ಧರ್ಮಸಾಮ್ರಾಜ್ಯ	1	5	0
ಭಾರತದಲ್ಲಿ ಜಾತಿಭೇದ	1	0	0
ಗೀತೆಯ ಕೈಗನ್ನಡಿ	0	8	0
ಸುಲಭದಲ್ಲಿ ಇಂಗ್ಲಿಷ್	1	4	0
ಬಾಲ ವಾಙ್ಮಯ	0	3	0
ಆರೋಗ್ಯ ಸಾಧನ	1	0	0
ರಾಷ್ಟ್ರ ಸಭೆಯ ಇತಿಹಾಸ	2	8	0
ಶಾಂತಿಪುರಾಣ	3	0	0
ಮಿತಸಂತತಿ	0	8	0
ಜೇನಿನ ವ್ಯವಸಾಯ	1	0	0
ವಿಚಾರವಾಹಿನಿ	0	4	0
ಪ್ರಕಾಶಿನಿ (8 ಭಾಗಗಳು—ಪ್ರತಿ 1ಕ್ಕೆ)	0	4	0

ನವಭಾರತ ಪುಸ್ತಕ ಭಂಡಾರ, ಉಡುಪಿ.

The Canara Banking Corporation Limited.
(Incorporated in British India, with limited Liability.)
Estd: 1906.
Head Office: **UDIPI**, South Kanara.

ANNOUNCEMENT.

A Branch of the Bank has been opened at SALEM TOWN on 11—4—1946.

A Branch of the Bank will shortly be opened at BYADGI.

ನವಯುಗ

ಉಡುಪಿ, ಗುರುವಾರ, ೨೫-೪-'೪೬

ಮದ್ರಾಸ್ ನಾಯಕತ್ವ

ಕಟ್ಟಕಡೆಗೆ ಶ್ರೀ. ಟಿ. ಪ್ರಕಾಶಮ್‌ರೇ ಮದ್ರಾಸಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಟ್ಟಿದ್ದಾರೆ. ಇನ್ನು ಮದ್ರಾಸ್ ಪ್ರಾಂತ್ಯದ ಪ್ರಧಾನ ಮಂತ್ರಿಯಾಗಿ ಮಂತ್ರಿ ಮಂಡಲ ರಚಿಸತಕ್ಕವರು ಅವರೇ. ಈ ಬಾರಿಯ ಕಾಂಗ್ರೆಸಿನ ಪಾರ್ಲಿಮೆಂಟರೀ ಕಾರ್ಯಕಲಾಪಗಳ ಪೈಕಿ, ಮದ್ರಾಸ್ ನಾಯಕ ಚುನಾವಣೆಯಲ್ಲಿದ್ದಂಥಾ ಸಮಸ್ಯೆ ಬೇರೆಲ್ಲಿಯೂ ಎದ್ದಿಲ್ಲ. ಗಾಢವಿಚಾರವಿಲ್ಲದ ಸಾಮಾನ್ಯ ಮಾತಿನಿಂದ ಹೇಳುವದಾದರೆ, ಕಾಂಗ್ರೆಸ್ ಅಧಿನಾಯಕರು ಮದ್ರಾಸ್ ಕಾಂಗ್ರೆಸ್ ಪಕ್ಷೀಯರಿಂದ ಪಡೆದಂತಹ 'ಅಪಮಾನ'ವನ್ನು ಬೇರೆಲ್ಲಿಯೂ ಪಡೆದಿಲ್ಲ. ಪ್ರಾಯಶಃ ರಾಷ್ಟ್ರ ಸಭೆಯು ಶಾಸನ ಸಭಾ ಪ್ರವೇಶ ಕಾರ್ಯಕ್ರಮ ಕೈಕೊಂಡಂದಿನಿಂದ ಇದು ವರೆಗೆ, ಪ್ರಾಂತ್ಯದೊಂದು ಪಕ್ಷಕ್ಕೂ ಅದರ ಶಿರಸ್ಸಾಗಿರುವ ನಾಯಕರಿಗೂ ಇಂತಹ ಘರ್ಷಣೆ ಬಂದುದಿಲ್ಲ. ಮದ್ರಾಸಿನಲ್ಲಿ 93ನೇ ಸೆಕ್ಷನಿನ ಆಳ್ವಿಕೆಗೆ ಜೀವದಾನ ಮಾಡುವ ಆವಶ್ಯಕತೆಯನ್ನು ಮದ್ರಾಸ್ ಗವರ್ನರರು ಮನಗಂಡರು; ಪಾರ್ಲಿಮೆಂಟಿನ ಕೆಲವು ಕಾಂಗ್ರೆಸ್ ದ್ವೇಷಿಗಳಿಗೆ ದೂಷಣೆಗೊಂದು ಅವಕಾಶವೂ ಈ ಮೂಲಕ ದೊರೆಯಿತು. ಆದರೆ ಗಾಢ ವಿಚಾರದ ದೃಷ್ಟಿಗೆ ಮದ್ರಾಸ್ ಕಾಂಗ್ರೆಸಿಗರ ಅಥವಾ ಅಖಿಲ ಭಾರತ ಕಾಂಗ್ರೆಸಿನ ಅಧಿಕಾರಿಗಳ ತಪ್ಪೇನೂ ಕಾಣುವಂತಿಲ್ಲ. ಪ್ರಜಾಸತ್ತೆಗೆ ವಿರುದ್ಧವಾದುದಾವುದೂ ಮದ್ರಾಸ್ ರಾಜಕೀಯದಲ್ಲಿ ನಡೆದಿಲ್ಲ. ತಮ್ಮ ಅಭಿಪ್ರಾಯವನ್ನು (ಅಧಿಕಾರವನ್ನಲ್ಲ) ನಿಯಮದ ಎಲ್ಲೆ ಮೀರಿ ಮುಂದೊತ್ತುವದು ಅಧಿಕ ಪ್ರಸಂಗವೆನ್ನಿಸಬಹುದಾದರೂ, ಅಪರಾಧವಾಗದು. ಇಂತಹ ಅಭಿಪ್ರಾಯ ಘರ್ಷಣೆಗಳನ್ನೇ ಭೂತಗನ್ನಡಿಯಿಂದ ಕಂಡು, ಬಣ್ಣ ಹಚ್ಚಿ ವರ್ಣಿಸಿದವರು ಕೊನೆಗಾದರೂ ಮೌನವಾಗುವಂತೆ ಮದ್ರಾಸ್ ನಾಯಕತ್ವವು ಕ್ರಮಬದ್ಧವಾಗಿ ತೀರ್ಮಾನಗೊಂಡುದಕ್ಕಾಗಿ ಸಂತೋಷಪಡಬೇಕು.

ರಾಜಾಜಿಯನ್ನೇ ಆರಿಸಿಕೊಳ್ಳತಕ್ಕದ್ದೆಂದು ಕಾಂಗ್ರೆಸ್ 'ಹೈಕಮಾಂಡ್' ಕೊಟ್ಟ ಸಲಹೆಯು ಅಧಿಕ ಪ್ರಸಂಗದ್ದೆಂದು ನಾವು ಕಳೆದ ವಾರ ಸೂಚಿಸಿದ್ದನ್ನು ಆ ವೇಳೆ ನಡೆದ ಘಟನೆಗಳು ಸಮರ್ಥಿಸಿವೆ. ತಾ. 18ರಲ್ಲಿ ಸೇರಿದ ಮದ್ರಾಸ್ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ 38 ಅನುಕೂಲ, 148 ಪ್ರತಿಕೂಲ ಮತಗಳು ದೊರೆತು ಈ ಸಲಹೆ ಬಿದ್ದು ಹೋಯಿತು. ಈ ನಿರ್ಧಾರವನ್ನು ರಾಷ್ಟ್ರಪತಿಗೆ ತಿಳಿಸಿದಾಗ 'ನೀವು ಒಂದಕ್ಕಿಂತ ಹೆಚ್ಚು ಹೆಸರುಗಳನ್ನು ಕಳುಹಬಹುದು. ನಾನು ಅವುಗಳಲ್ಲೊಂದನ್ನು ಆರಿಸುತ್ತೇನೆ' ಎಂದು ಮೌಲಾನಾ ಆಜಾದರ ಉತ್ತರ ಬಂತು. ಇದು ಕೂಡಾ ಮದ್ರಾಸ್ ಪಕ್ಷೀಯರಿಂದ ಸ್ವಾಗತ ಪಡೆಯಲಿಲ್ಲ. ಪಕ್ಷದ ಕ್ರಮಬದ್ಧ ಹಕ್ಕಿಗಿದ ವಿರುದ್ಧವೆಂದು ವಕೀಲ ಸದಸ್ಯರದನ್ನು ಕ್ರಮಕಾಯದೆಗಳ ಒರೆಗಲ್ಲಿಗೆ ತಿಕ್ಕಿ ತೋರಿಸಿದರು. ಕೊನೆಗೀ ಕುರಿತು ಸ್ಪಷ್ಟ ವಿವರಣೆಯನ್ನು ಕಾಂಗ್ರೆಸ್ ಅಧ್ಯಕ್ಷರಿಂದಲೇ ಪಡೆಯುವಷ್ಟು ವಿನಯ ಬುದ್ಧಿಯು ಮದ್ರಾಸ್ ಕಾಂಗ್ರೆಸ್ ಪಕ್ಷೀಯರಲ್ಲಿದ್ದುದರಿಂದ ಕೆಲಸ ಸಸೂತ್ರವಾಯಿತೆನ್ನಬೇಕು. "ಮದ್ರಾಸಿನ ಸದ್ಯಸ್ಥಿತಿಯನ್ನು ಗಮನಿಸಿ, ಪಕ್ಷದ ಮುಂದೆ ಒಂದಕ್ಕಿಂತ ಹೆಚ್ಚು ಹೆಸರನ್ನಿಟ್ಟು ಚುನಾಯಿಸಿಕೊಳ್ಳುವ ಸಂದರ್ಭವೊದಗಿಸಿಕೊಡುವದು ವಿಹಿತವೆಂದು ನಾನು ಯೋಚಿಸಿದೆ. ಆದ್ದರಿಂದಲೇ ನನ್ನ ತಂತಿಯಲ್ಲಿ 'ಪಕ್ಷವು ಚುನಾಯಿಸತಕ್ಕದ್ದು' ಎಂದು ನಮೂದಿಸದೆ 'ಪಕ್ಷವು ಚುನಾಯಿಸಬಹುದು' ಎಂದಿದ್ದೆ. ಒಬ್ಬರೇ ಹೆಸರನ್ನು ಆರಿಸಿಕೊಳ್ಳಬೇಕೆಂದು ಪಕ್ಷದ ಬಯಕೆಯಿದ್ದಲ್ಲಿ ಅದು ನಿಜಕ್ಕೂ ಹಾಗೆ ಮಾಡಬಲ್ಲುದು. ದಯವಿಟ್ಟು ಪಕ್ಷದ ಅಭಿಪ್ರಾಯವೇನೆಂಬುದನ್ನು ತಿಳಿದು ಫಲಿತಾಂಶವನ್ನು ನನಗೆ ತಿಳಿಸಿಬಿಡಿ" ಎಂದು ಮೌಲಾನರ ಸ್ಪಷ್ಟ ಉತ್ತರ ಬಂತು. ತಾ. 22ರ ಸಭೆಯಲ್ಲಿ ನಾಯಕ ಚುನಾವಣೆಯೇ ನಡೆಯಿತು. ಆಂಧ್ರದ ಶ್ರೀ. ಟಿ. ಪ್ರಕಾಶಮ್‌ರಿಗೆ 82 ಮತಗಳೂ, ತಮಿಳು ನಾಡಿನ ಶ್ರೀ. ಸಿ. ಎನ್. ಮುತ್ತುರಂಗ ಮುದಲಿಯಾರರಿಗೆ 69 ಮತಗಳೂ ಬಿದ್ದು ಆಂಧ್ರರ ಬಯಕೆಯೇ ಫಲಿಸಿತು. ಈ ಚುನಾವಣೆಯಿಂದ ಅಸಮಾಧಾನ ಪಡುವವರು ಹಲವರಿರಬಹುದು; ಆದರೆ ಆಕ್ಷೇಪಕ್ಕವಕಾಶ ದೊರೆಯದಂತೆ ಮದ್ರಾಸ್ ರಾಜಕೀಯದಲ್ಲಿದ್ದ ಗೊಂದಲಕ್ಕೊಂದು ತೀರ್ಮಾನ ಹೊಂದಿದವರನ್ನು ಅಭಿನಂದಿಸಬೇಕು.

ಈ ಸಂಬಂಧವಾಗಿ ಮೇಲಾಟ, ದ್ವೇಷಾಸೂಯೆ, ಅತಿರೇಕ ವರ್ತನೆ, ಅಧಿಕ ಪ್ರಸಂಗಗಳೆಷ್ಟೇ ನಡೆದಿದ್ದರೂ—ಅವು ಒಳಗಡೆಯ ಗಡಿಗೆರೆಗಳನ್ನು ಮೀರಿ ಮುಂದೊತ್ತಿರಬಹುದಾದರೂ—ಕಾಂಗ್ರೆಸ್ ನಿಯಮ ನಿಷ್ಠೆಯ ಎಲ್ಲೆಯನ್ನು ಎಲ್ಲಿಯೂ ಮೀರಿಲ್ಲವಾದ್ದರಿಂದ ಗತಕಾಲದ ಆಗುಹೋಗುಗಳನ್ನು ಸಂಪೂರ್ಣ ಮರೆತು, ಇನ್ನು ಮುಂದೆ ಮದ್ರಾಸಿನಲ್ಲಿ ಕಾಂಗ್ರೆಸ್ ಘನತೆಯನ್ನು ಹೆಚ್ಚಿಸುವ ಕಡೆಗೇನೇ ಸರ್ವರೂ ಒಮ್ಮತದಿಂದ ಪ್ರಯತ್ನಿಸಲು ಬದ್ಧರಿದ್ದಾರೆ. ಮದ್ರಾಸ್ ಪ್ರಾಂತಿಕ ರಾಜಕೀಯದಲ್ಲಿ ಸೇರಿರುವ ಕಲ್ಮಷಗಳು ಹಲವು. ಮುಚ್ಚುಮರೆಯಿಲ್ಲದೆ ಹೇಳುವದಾದರೆ ಬ್ರಾಹ್ಮಣ—ಅಬ್ರಾಹ್ಮಣ ದ್ವೇಷವು ಕಾಂಗ್ರೆಸ್ ಪಕ್ಷದೊಳಗೇನೇ ಇದೆ. ಅಪರೂ, ಈ ಬಾರಿಯ ವಿವಾದದಲ್ಲಿ ಮುಖ್ಯವಾಗಿ ಘರ್ಷಿಸಿಕೊಂಡುದೆಂದರೆ ಆಂಧ್ರ—ತಮಿಳು ಅಭಿಮಾನಗಳೇ. ಮದ್ರಾಸ್ ನಾಯಕತ್ವದ ಪ್ರಶ್ನೆಯು ಉದಾತ್ತ ವಿಚಾರಗಳಿಂದ ಕೂಡಿದ್ದರೂ, ಆಂಧ್ರದ ಸದಸ್ಯರು ಈ ಸಂದರ್ಭದಲ್ಲಿ ಸಂಕುಚಿತ ಪ್ರಾಂತ್ಯಾಭಿಮಾನವನ್ನು ಪ್ರದರ್ಶಿಸಿ, ಮಿಕ್ಕ ಕಡೆಗಳವರ ಭಯ ಸಂದೇಹಗಳನ್ನು ಹೆಚ್ಚಿಸಿದುದು ಖಂಡನೀಯವಿದೆ. ರಾಷ್ಟ್ರಪತಿಯನ್ನು 'ಹೊರಗಿನವರು-ಈ ಸಂಬಂಧದ ಅಧಿಕಾರವಿಲ್ಲದವರು' ಎಂದು ಸಂಬೋಧಿಸಿದ ಶ್ರೀ. ಕೆ. ಆರ್. ಕಾರಂತರಂಥವರ ಸ್ಫೂರ್ತಿಯೂ ಅನುಕರಣೀಯವಲ್ಲ. ಮದ್ರಾಸಿನ ಕಾಂಗ್ರೆಸ್ ಎಂ. ಎಲ್. ಎ. ಗಳಿಗೆ ರಾಷ್ಟ್ರಪತಿ ಅಥವಾ ಕಾಂಗ್ರೆಸ್ ಕಾರ್ಯಕಾರೀ ಸದಸ್ಯರು ಹೊರಗಿನವರು ಎಂಬುದು ಮತದಾರರಿಗೆ ಗೊತ್ತಿದ್ದರೆ ಅವರಿಗೆ ಈ ಎಂ. ಎಲ್. ಎ.ಗಳೇ ಹೊರಗಿನವರಾಗುತ್ತಿದ್ದರು! ಮತದಾರರ ಭಕ್ತಿ ವಿಶ್ವಾಸಗಳನ್ನು ಗಳಿಸಿದುದು ಕಾಂಗ್ರೆಸಿನ ಧ್ಯೇಯ, ಧೋರಣೆ, ತ್ಯಾಗ, ಸೇವೆಗಳಲ್ಲದೆ ಉಮೇದ್ವಾರರ ಯೋಗ್ಯತೆಗಳಲ್ಲ. ಕಾಂಗ್ರೆಸ್ "ಹೈಕಮಾಂಡ್" ಒಪ್ಪಿದವರನ್ನೇ ಜನತೆಯೂ ಮರು ಮಾತಾಡದೆ ತನ್ನ ಪ್ರತಿನಿಧಿಯೆಂದೊಪ್ಪಿತು ಹೊರತು ಉಮೇದ್ವಾರರ ವ್ಯಕ್ತಿಗತ ಯೋಗ್ಯತೆಗಳನ್ನು ಕಂಡಲ್ಲ. ಆದ್ದರಿಂದ ಯಾರಿಗೆ ಕಾಂಗ್ರೆಸ್ ಅಧಿಪತಿಗಳು ಪರಕೀಯರಾಗಿ ಕಾಣುವರೋ ಅಂಥವರಿಗೆ ಮತದಾರರೂ ಪರಕೀಯರೇ! ನಾಯಕನನ್ನು ಚುನಾಯಿಸಿಕೊಳ್ಳುವ ಅಧಿಕಾರ ಕಾಂಗ್ರೆಸ್ ಪಕ್ಷದ್ದೆಂಬುದನ್ನು [illegible] ರಾಷ್ಟ್ರಪತಿಯೂ ಒಪ್ಪಿದ್ದಾರೆ; ಆ ಕುರಿತು ಅವರು ತಮ್ಮ ಅಭಿಪ್ರಾಯವನ್ನು ಮುಂದೊಡ್ಡಿದುದು ಕೂಡಾ ಅಚಾತುರ್ಯವಾಯಿತೆಂದೇ ನಾವೆಂದಿದ್ದೆವು. ಆದರೆ ಸಲಹೆ ಕೊಡುವ ಅಧಿಕಾರವೇ ಅವರಿಗಿಲ್ಲವೆನ್ನುವಷ್ಟು ಅವರು ಪರಕೀಯರೆಂದು ಹೇಳುವಷ್ಟು ಮುಂದೊತ್ತುವದು ಅತಿ ಗರ್ವದ ಹೆಜ್ಜೆ. ಅಪಾಯಕರ ಪ್ರಯಾಣವೆಂಬುದನ್ನು ಯಾರೂ ಮರೆಯಬಾರದು. ಮದ್ರಾಸ್ ನ್ಯಾಯವಿಧಾಯಕ ಸಭೆಗಳ 196 ಮಂದಿ ಸದಸ್ಯರಲ್ಲಿ (ತಮಿಳುನಾಡಿನವರು 101, ಆಂಧ್ರ 77, ಕೇರಳ ಮತ್ತು ಕನ್ನಡಿಗರು 18) ನಾಯಕ ಚುನಾವಣೆಯ ವೇಳೆ 180 ಮಂದಿ ಹಾಜರಿದ್ದರೆಂದೂ ಅವರಲ್ಲಿ 25 ಮಂದಿ ತಟಸ್ಥರಾಗಿ ಉಳಿದಿದ್ದರೆಂದೂ ಒಬ್ಬರ ವೋಟು ತಪ್ಪಾಗಿತ್ತೆಂದೂ ತಿಳಿದು ಬರುತ್ತದೆ. ತನ್ನ ಸಮರ್ಥಕರು ಆ ಸಂದರ್ಭದಲ್ಲಿ ತಟಸ್ಥರಾಗಿ ಉಳಿಯುವುದು ವಿಹಿತವೆಂದು ರಾಜಾಜೀ ಸೂಚಿಸಿರುವರೆಂಬ ವಾರ್ತೆಯಿದೆಯಾದ್ದರಿಂದ ತಾಟಸ್ಥ್ಯ ವಹಿಸಿದವರೆಲ್ಲಾ ರಾಜಾಜಿಯ ಅನುಯಾಯಿಗಳು ಅರ್ಥಾತ್ ತಮಿಳರಿರಬೇಕು. ಹೇಗಿದ್ದರೂ ಶ್ರೀ ಟಿ. ಪ್ರಕಾಶಮರಿನ್ನು ಇಡೀ ಮದ್ರಾಸಿನ ಸರ್ವಸಾಮಾನ್ಯ ನಾಯಕರೆಂದು ಎಲ್ಲ ವರ್ಗದವರೂ ಆಂಧ್ರರು ಮತ್ತು ಸ್ವತಃ ಶ್ರೀ ಪ್ರಕಾಶಮರು ಭಾವಿಸಿಕೊಳ್ಳಲು ಬದ್ಧರಿದ್ದಾರೆ. ಹೊಸ ನಾಯಕರಲ್ಲಿರುವ ತ್ಯಾಗಬುದ್ಧಿ, ದೇಶಭಕ್ತಿ, ಉದಾರ ಹೃದಯದ ಪರಿಚಯ ಪ್ರಾಂತ್ಯಕ್ಕಿದೆ. ಆದರೆ, ಸೇನಾಧಾರ್ಯವು ಆಡಳಿತೆಯ ಶಕ್ತಿಯಲ್ಲ. ಭಿನ್ನಾಭಿರುಚಿ, ಭಿನ್ನಾಭಿಮಾನಗಳ ಹಲವು ವರ್ಗದ ಜನರುಳ್ಳ ಮದ್ರಾಸಿನಂತಹ ಮಹಾಪ್ರಾಂತ್ಯವೊಂದನ್ನು, ಇಂದಿನ ಆಹಾರಾಭಾವದ ಹಾಗೂ ಅಸ್ತವ್ಯಸ್ತ ಸ್ಥಿತಿಗತಿಗಳ ದುಷ್ಕಾಲದಲ್ಲಿ ಮುನ್ನಡೆಸುವ ವ್ಯಕ್ತಿಗತ ಸಾಮರ್ಥ್ಯವು ರಾಜಾಜಿಯಲ್ಲಿದ್ದಷ್ಟು ಪ್ರಕಾಶಮರಲ್ಲಿಲ್ಲ. ಆದ್ದರಿಂದ ಮದ್ರಾಸ್ ಪಕ್ಷದ ಕಳೆದ ವಾರದ ಸಭೆಗಳಲ್ಲಿ ಕಂಡು ಬಂದ ಕೆಲವು ದುಸ್ಫುರಣೆಗಳು ಮುಂದಕ್ಕೂ ಉಳಿಯದೆ, ಪ್ರಕಾಶಮ್ ಮಂತ್ರಿ ಮಂಡಲವು ಕಾಂಗ್ರೆಸ್ ಹೈಕಮಾಂಡಿನ ಸೂತ್ರಗಳಿಗೊಳಪಟ್ಟೇ ಮದ್ರಾಸ್ ಪ್ರಾಂತ್ಯದ ಅಭ್ಯುದಯವನ್ನು ಸಾಧಿಸಲೆಂದು ಸರ್ವರ ಹಾರೈಕೆ.

ಮಂಗಳೂರು

ಮುಷ್ಕರಗಳು ಹೆಚ್ಚುತ್ತಿವೆ-ಮಂಗಳೂರಿನಲ್ಲಿ ಮುಷ್ಕರಗಳ ಗಲಭೆ ಹೆಚ್ಚುತ್ತಿದೆ. ಹಂಚಿನ ಕೆಲಸಗಾರರ ಮುಷ್ಕರವಾಯಿತು; ನೇಕಾರರ ಮುಷ್ಕರವಾಯಿತು; ಈಗ ಗೇರುಬೀಜ, ಕಾಫಿ ಕಾರ್ಖಾನೆಗಳಿಗೆ ಮುಷ್ಕರದ ಬಿಸಿ ಹರಡಿದೆ. ಪಿಯರ್ಸ್ ಲೆಸ್ಲಿ ಕಂಪೆನಿಯಲ್ಲಿ ಕಾಫಿ ಗೇರು ಬೀಜದ ಕೆಲಸ ಮಾಡುವ ಕೆಲಸಗಾರರೂ, ಮಜೂರಿಯ ಕಡಿತವನ್ನು ನಿಷೇಧಿಸುವುದಕ್ಕಾಗಿ ತಾ. 15ಕ್ಕೆ ಮುಷ್ಕರ ಹೂಡಿದರು. ಮರುದಿನ ಇದೇ ಕಂಪೆನಿಯ ಕುಲಶೇಖರದಲ್ಲಿರುವ ಶಾಖೆಯಲ್ಲಿಯೂ ಮುಷ್ಕರ. ಒಟ್ಟು 1600 ಮಂದಿ ಸ್ತ್ರೀಪುರುಷ ಕಾರ್ಮಿಕರು ಇದರಲ್ಲಿ ಭಾಗ ವಹಿಸಿದ್ದಾರೆ. 16ನೆಯ ತಾರೀಕಿಗೆ ಕೆಲಸಗಾರರ ಸಭೆಯೊಂದು ಸೇರಿತು. ಮಜೂರರ ಬೇಡಿಕೆಗಳು ಮಂಡಿಸಲ್ಪಟ್ಟವು. ಈ ಕುರಿತು ಚಳವಳಿ ನಡೆಸಲು ಒಂದು ಸಮಿತಿಯು ನೇಮಿಸಲ್ಪಟ್ಟಿತು.

ಭೋಜನ ಸಮಾರಂಭಗಳಿಗೆ ನಿರ್ಬಂಧ—ಇತ್ತೀಚೆಗೆ ಸರಕಾರದವರು ಜಾರಿಗೊಳಿಸಿದ ಒಂದು ಕಾನೂನಿನ ಪ್ರಕಾರ, ಮದುವೆ ಹಾಗೂ ಇತರ ಸಂದರ್ಭಗಳಲ್ಲಿ 30 ಜನರಿಗಿಂತ ಹೆಚ್ಚು ಜನರಿಗೆ ಊಟ ಕೊಡಬಾರದೆಂದು ತಿಳಿಸಲಾಗಿತ್ತು. ದೇವಸ್ಥಾನಗಳಲ್ಲಿ, ಸಾರ್ವಜನಿಕ ಸಭಾ ಭವನಗಳಲ್ಲಿ, ವಿಹಾರ ಸಮಾರಂಭಗಳಲ್ಲಿ, ಅಥವಾ ಇನ್ನಾವ ಸ್ಥಳಗಳಲ್ಲಿಯಾದರೂ ನಡೆಯತಕ್ಕ ಊಟಗಳಿಗೆ ಈ ನಿಯಮವು ಅನ್ವಯಿಸುತ್ತದೆ. ಆಹಾರ ಕೊಟ್ಟವರೂ ಆಮಂತ್ರಿತರೂ ತಪ್ಪುಗಾರರಾಗುತ್ತಾರೆ. ಯಾವ ಬಗೆಯ ಆಹಾರಕ್ಕೂ ಎಂದರೆ, ಬಿಸ್ಕೀಟು, ಬೀಜಗಳು, ಹುರಿದ ಧಾನ್ಯಗಳು, ರೊಟ್ಟಿಗಳು ಮೊದಲಾದ ಎಲ್ಲ ಆಹಾರಗಳಿಗೂ ಈ ಕಾನೂನು ಅನ್ವಯಿಸುವುದು. ಬರಿಯ ಪಾನಗಳಿಗೆ ಮಾತ್ರ ಅನ್ವಯಿಸುವುದಿಲ್ಲ; ಎಂದೀಗ ವಿವರಣೆ ಕೊಡಲಾಗಿದೆ.

ರಾಗಿ ಅಥವಾ ಇತರ ದವಸಗಳನ್ನು ಜಿಲ್ಲೆಯಲ್ಲಿ ಯಾರೇ ಆಗಲಿ, ಕೂಡಿಟ್ಟಿದ್ದರೆ 1-6-46ಕ್ಕೆ ಮುಂಚೆ, ಸಂಬಂಧಪಟ್ಟ ಅಧಿಕಾರಿಗಳಲ್ಲಿ ತಮ್ಮ ದಾಸ್ತಾನಿನ ವಿವರಗಳನ್ನು ಒಪ್ಪಿಸತಕ್ಕದ್ದು ಎಂದು ಕಲೆಕ್ಟರರ ಹುಕುಮಾಗಿದೆ.

ಮಳೆಯ ಅನಾಹುತ—ತಾ. 16ರಂದು ಸಂಜೆ ಮಂಗಳೂರಿನಲ್ಲಿ ಅನಿರೀಕ್ಷಿತವಾಗಿ ಸಂಭವಿಸಿದ ಗಾಳಿಮಳೆಯಿಂದ ಅಲ್ಲಲ್ಲಿ ಅವಘಡಗಳಾಗಿವೆ. ಪಂಪನಕಟ್ಟೆಯ ಸಿಟಿ ಬಸ್ ನಿಲ್ದಾಣದ ಬಳಿಯ ಪ್ರಯಾಣಿಕರ ನಿಲ್ದಾಣವು ಮುರಿದು ಬಿದ್ದು ಹಲವರಿಗೆ ಜಖಮಾಗಿದೆ.

ನವನಾಯಕ ಶ್ರೀ ಪ್ರಕಾಶಂ

'ಆಂಧ್ರಕೇಸರಿ'ಯೆಂಬುದು ಶ್ರೀ. ಟಿ. ಪ್ರಕಾಶರವರ ಬಿರುದು. ಸ್ಪಷ್ಟ ವಕ್ತೃತ್ವ, ಉದಾರ ಬುದ್ಧಿ ಮತ್ತು ಸ್ಥೂಲ ಧೋರಣೆಯ ಮನುಷ್ಯ. ಹುಟ್ಟು ಶ್ರೀಮಂತರಿವರು. ಪ್ರಕೃತ ಅಖಿಲ ಭಾರತ ದೃಷ್ಟಿಯಿಂದ ಡಾ| ಪಟ್ಟಾಭಿಯವರೇ ಆಂಧ್ರದ ಅಗ್ರಗಣ್ಯಪ್ರಮುಖರಾಗಿದ್ದರೂ, ಆಂಧ್ರದಲ್ಲಿ ಶ್ರೀ ಪ್ರಕಾಶಮರಿಗಿರುವ ವರ್ಚಸ್ಸು ಬೇರಾರಿಗೂ ಇಲ್ಲ. 76 ವರುಷ; ಗಾಂಧಿಜೀಯ ಸಮಪ್ರಾಯ.

1921ರ ವರೆಗೂ ಮದ್ರಾಸಿನಲ್ಲಿ ಪ್ರಮುಖ ವಕೀಲರಾಗಿದ್ದರು. ಆ ಮೇಲೆ ಅಸಹಕಾರ ಚಳವಳಿಯಲ್ಲಿ ಸೇರಿಕೊಂಡರು. 'ಸ್ವರಾಜ್ಯ' ಪತ್ರಿಕೆಯನ್ನು ಸ್ಥಾಪಿಸಿ, ತಾನೇ ಅದರ ಸಂಪಾದಕನಾಗಿ ನಡಿಸಿದ್ದರು. ಈಗ ಅದು ನಿಂತುಹೋಗಿದೆ. 1926ರಿಂದ 1930ರ ವರೆಗೆ ಹಿಂದೀ ಲೆಜಿಸ್ಲೇಟಿವ್ ಎಸೆಂಬ್ಲಿ ಸದಸ್ಯನಾಗಿದ್ದು ಕಾಂಗ್ರೆಸ್ ಆಜ್ಞೆಯಂತೆ ರಾಜಿ ಕೊಟ್ಟು ಬಂದಿದ್ದರು. 1930-31ರ ಕಾಯಿದೇ ಭಂಗ ಚಳವಳಿಯಲ್ಲಿ ಭಾಗ ವಹಿಸಿ ಜೈಲುವಾಸಕ್ಕೀಡಾಗಿದ್ದರು. 1937ರ ರಾಜಾಜೀ ಮಂತ್ರಿಮಂಡಲದಲ್ಲಿ ಶ್ರೀ ಪ್ರಕಾಶಮರೇ ಕಂದಾಯ ಮಂತ್ರಿ. ಆಗ ಕಾಂಗ್ರೆಸ್ ಸರಕಾರವು ಶ್ರೀ ಪ್ರಕಾಶಮರ ಅಧ್ಯಕ್ಷತೆಯಲ್ಲಿ 'ಆಸ್ತಿ ಸಂಬಂಧದ ಮಸೂದೆಯ ಸಮಿತಿ'ಯೊಂದನ್ನು ರಚಿಸಿದ್ದಿತು. ಜಮೀನ್ದಾರೀಗಳಲ್ಲಿರುವ ರೈತರಿಗೇನೇ ಭೂಮಿಯ ಹಕ್ಕು ದೊರೆಯತಕ್ಕದ್ದೆಂದು ಈ ಸಮಿತಿಯು ಬಹುಮತದಿಂದ ಶಿಫಾರಸು ಮಾಡಿದ್ದಿತು. ಆ ಮೇಲೆ 1940ರಲ್ಲಿ ದಿಗ್ಬಂಧನಕ್ಕೊಳಗಾದರು. 1942ರ ಆಗೋಸ್ತು ಗಲಭೆಯಲ್ಲಿ ಮತ್ತೊಮ್ಮೆ ಬಂಧಿಸಲ್ಪಟ್ಟು 1945ರ ವರೆಗೂ ಜೈಲಲ್ಲಿದ್ದರು. ಶ್ರೀ ಪ್ರಕಾಶಮರು ಕಳೆದ 20 ವರುಷಗಳಿಂದಲೂ ಅ. ಭಾ. ಕಾಂಗ್ರೆಸ್ ಕಮಿಟಿಯ ಸದಸ್ಯರು. ಈಗ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಈ ಬಾರಿಯ ಎಸೆಂಬ್ಲಿ ಚುನಾವಣೆಯಲ್ಲಿ ಮದ್ರಾಸ್ ನಗರದಿಂದ ಅವಿರೋಧವಾಗಿ ಆರಿಸಲ್ಪಟ್ಟಿದ್ದರು.

ದಿವಂಗತ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು.

ಲೋಕ ಪ್ರಸಿದ್ಧವಾಗ್ಮಿ, ನ್ಯಾಯ ಪಕ್ಷಪಾತಿ, ನಾಗರಿಕಾಗ್ರೇಸರ ಮತ್ತು ಉಜ್ವಲ ರಾಷ್ಟ್ರಾಭಿಮಾನಿ ಮುಂದಾಳು ಪ್ರಮುಖನಾಗಿದ್ದ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ತನ್ನ 77ನೇ ವಯಸ್ಸಿನಲ್ಲಿ ಇದೇ ತಾ. 17ರ ರಾತ್ರಿ ಮದ್ರಾಸಿನಲ್ಲಿ ದಿವಂಗತರಾದುದರಿಂದ ಅಖಿಲ ರಾಷ್ಟ್ರವು ಮುಖ್ಯವಾಗಿ ಮದ್ರಾಸ್ ಪ್ರಾಂತ್ಯವು ತನ್ನ ಹಿರಿಯ ಪುತ್ರರತ್ನವೊಂದನ್ನು ಕಳಕೊಂಡಿದೆ. ಶಾಸ್ತ್ರಿಗಳು ಪ್ರಥಮತಃ ಅಧ್ಯಾಪಕ ವೃತ್ತಿಯಲ್ಲಿದ್ದವರು. ಆ ಮೇಲೆ ಮಾನ್ಯ ಗೋಖಲೆಯವರ ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿ'ಯ ದೇಶ ಸೇವೆಯಿಂದಾಕರ್ಷಿಸಲ್ಪಟ್ಟು ಅದನ್ನು ಸೇರಿ ಕೊನೆಯ ವರೆಗೂ ರಾಷ್ಟ್ರಾಭ್ಯುದಯಕ್ಕಾಗಿ ದುಡಿದವರು. ಗೋಖಲೆಯವರ ನಿಧನಾನಂತರ ಶಾಸ್ತ್ರಿಗಳೇ ಆ ಸಂಘದ ಅಧ್ಯಕ್ಷರಾಗಿದ್ದರು. ಮಾನ್ಯ ಶಾಸ್ತ್ರಿಗಳು ಲಂಡನಿನ ದುಂಡು ಮೇಜು ಸಮ್ಮೇಳನದಲ್ಲಿಯೂ, ದಕ್ಷಿಣಾಫ್ರಿಕದ ಹಿಂದೀಯರ ಪರವಾಗಿಯೂ ಚಿರಸ್ಮರಣೀಯ ಕಾರ್ಯ ಸಾಧಿಸಿದ್ದರು. ಅಂತೆಯೇ ಕೆನ್ಯದ ಹಿಂದೀಯರ ಪ್ರತಿನಿಧಿಯಾಗಿಯೂ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾಗಿಯೂ ಅವರು ಹಿಂದೀ ಹಿತ ಸಂಬಂಧಗಳಿಗಾಗಿ ದುಡಿದಿದ್ದರು. ಇಂಗ್ಲಿಷ್ ಭಾಷಾಪ್ರೌಢಿಮೆಯಲ್ಲಿ ಮೇಲ್ಪಂಗ್ತಿಯ ಬ್ರಿಟಿಷ್ ಪ್ರತಿಭಾವಂತರು ಕೂಡಾ ಶಾಸ್ತ್ರಿಗಳೆದಿರು ತಲೆಬಾಗ ಬೇಕಾಗಿತ್ತು; ಈ ದೆಸೆಯಿಂದ ಇಂಗ್ಲಾಂಡಿನಲ್ಲಿ ಅವರಿಗಿದ್ದ ಗೌರವವು ಅಸಾಮಾನ್ಯವಿತ್ತು. ಶಾಸ್ತ್ರಿಗಳು ಮಂದಪಕ್ಷೀಯ ಪ್ರಮುಖರಿದ್ದರೂ, ಅವರ ರಾಷ್ಟ್ರಪ್ರೇಮವು ಯಾವನೊಬ್ಬ ಉಗ್ರಗಾಮಿಗೂ ಕಡಿಮೆಯದಾಗಿರಲಿಲ್ಲ ಎಂದು ಗಾಂಧಿಜೀಯಂದಿದ್ದಾರೆ. ಮಹಾತ್ಮರು ಇತ್ತೀಚೆಗೆ ಮದ್ರಾಸಿಗೆ ಬಂದು ಹೋಗುವ ಮೊದಲು ಕಾಯಿಲೆಯಲ್ಲಿದ್ದ ಶಾಸ್ತ್ರಿಗಳನ್ನು ಮೂರು ಬಾರಿ ಸಂದರ್ಶಿಸಿದ್ದರು. ಪಾಕಿಸ್ತಾನಕ್ಕೆ ಬದ್ಧವಿರೋಧಿಯಿದ್ದು, ಅಖಂಡ ರಾಷ್ಟ್ರದ ಸ್ವಾತಂತ್ರ್ಯಕಾಂಕ್ಷಿಯೂ ಉಚ್ಚ ನಾಗರಿಕತೆಯ ಪ್ರತಿಮೂರ್ತಿಯೂ ಆಗಿದ್ದ ಮಾನ್ಯ ಶಾಸ್ತ್ರಿಗಳ ನಿಧನವು ಈ ಕಾಲದಲ್ಲಿ ರಾಷ್ಟ್ರಕ್ಕಾದ ಮಹಾ ನಷ್ಟವೇ ಸರಿ. ಗಾಂಧಿಜೀ ಮೊದಲಾದ ಎಲ್ಲಾ ಧುರೀಣರೂ ಇದಕ್ಕಾಗಿ ದುಃಖ ಸೂಚಿಸಿದ್ದಾರೆ.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **26—4—46**ರಿಂದ

ರಾಜಕಮಲ ಚಿತ್ರ

ಶಾಂತಾರಾಮರ ವಿರಚಿತ

ಪರಬತ್-ಪೇ-ಅಪ್ನಾ-ಡೇರಾ

ಉಲ್ಲಾಸ್ ಮತ್ತು ವನಮಾಲಾ.

ಅನಂತರ—

?

ಆಸ್ತ್ಮಾ ಕಾಯಿಲೆಗೆ ರಾಮಬಾಣ

ಆಸ್ತ್ಮಾ (Asthma) ಉಬ್ಬಸ ಕಾಯಿಲೆಗೆ ಜಗತ್ಪ್ರಸಿದ್ಧವಾದ 'ಲಕ್ಷ್ಮೀ ಘೂತಿ' ಔಷಧಿಯೊಂದೇ ರಾಮಬಾಣ. ತಾ 16 5 46ನೆ ಪೌರ್ಣಮಿ ದಿನ ಒಂದು ಡೋಸ್ ಔಷಧಿಯನ್ನು ಸೇವಿಸಿದರೆ ತೀವ್ರ ಆಶ್ಚರ್ಯಕರ ಗುಣವಾಗುತ್ತೆ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Sri Janki Sewashram
P. O. ChitraKoti (U. P.)

ಢಿಲ್ಲಿ ಮಾತು ಕತೆಗಳ ಪರಿಣಾಮವೇನು?

ಸಿಮ್ಲಾದ ಪುನರಾವರ್ತನೆಯೆ?

ಬ್ರಿಟಿಷ್ ಸಚಿವ ಸಮಿತಿ [ಲೋರ್ಡ್ ಪೆಥಿಕ್ ಲಾರೆನ್ಸ್, ಸರ್. ಸ್ಟ್ಯಾಫೋರ್ಡ್ ಕ್ರಿಪ್ಸ್, ಮಿ. ಅಲೆಕ್ಸಾಂಡರರು] ಈಸ್ಟರ್ ವಿಶ್ರಾಂತಿಗಾಗಿ ತಾ 19ರಲ್ಲಿ ಕಾಶ್ಮೀರಕ್ಕೆ ಹೋಗಿದ್ದಾರೆ. ಐದೇ ದಿನಗಳ ವಿಶ್ರಾಂತಿ ಪಡೆದು ತಾ 24ರಲ್ಲಿ ಪುನಃ ಢಿಲ್ಲಿಗೆ ಮರಳಿ ತಮ್ಮ ಮಾತುಕತೆಗಳ ಕೊನೆಯ ಅಧ್ಯಾಯವನ್ನು ಮುಗಿಸಲಿದ್ದಾರೆ. ಕಾಶ್ಮೀರಕ್ಕೆ ಹೊರಡುವ ಒಂದೆರಡು ದಿನಗಳ ಮೊದಲಿನ ಮಾತುಕತೆಗಳು ಅತ್ಯಂತ ಪ್ರಾಮುಖ್ಯವಿದ್ದುವು. ಸರ್. ಕ್ರಿಪ್ಸರು ಮಿ. ಜಿನ್ನರೊಡನೊಮ್ಮೆ ಮತ್ತು ಮೌಲಾನಾ ಆಜಾದರೊಡನೊಮ್ಮೆ, ಎರಡೆರಡು ಬಾರಿ ಗಾಢ ಸಂಭಾಷಣೆ ನಡಿಸಿದ್ದರು. ಭಾರತ ಕಾರ್ಯದರ್ಶಿ ಪೆಥಿಕ್ ಲಾರೆನ್ಸರೊಡನೆ ಗಾಂಧಿಜೀ ದೀರ್ಘವಾಗಿ ಸಂಭಾಷಿಸಿದ್ದರು. ಬ್ರಿಟಿಷ್ ಸಮಿತಿಯವರು ದೇಶ ವಿಭಜನಾ ಸಂಬಂಧದ ಲೀಗ್-ಕಾಂಗ್ರೆಸ್ ವಿವಾದಗಳ ಕುರಿತು ತಮ್ಮ ನಿರ್ಧಾರ ಸೂತ್ರಗಳನ್ನು ಜಿನ್ನಾ ಮತ್ತು ಆಜಾದರ ಮುಂದಿಟ್ಟಿದಲ್ಲದೆ, ಅವರಿವರ ಅಭಿಪ್ರಾಯಗಳನ್ನು ಪರಸ್ಪರ ವಿನಿಮಯ ಮಾಡಿದರೆಂದು ತಿಳಿದುಬರುತ್ತದೆ. ಕಾಶ್ಮೀರದಿಂದ ಮರಳಿದಾಗಲೂ ಕಾಂಗ್ರೆಸ್-ಲೀಗ್‌ಗಳು ಇದನ್ನಾಧರಿಸಿ ಒಂದು ಒಪ್ಪಂದಕ್ಕೆ ಬಾರದಿದ್ದಲ್ಲಿ ಬ್ರಿಟಿಷ್ ಸಮಿತಿಯೇ ತನ್ನ ತೀರ್ಮಾನವನ್ನು [ಕೊಟ್ಟು ಇಕ್ಕಡೆಯವರನ್ನೂ ಪರಾಮರ್ಶೆಗೆ ಬಿಡಲಿದೆ. ಮತ್ತೂ ಯಾವುದಾದರೊಂದು ಪಕ್ಷವು ಬಹಿಷ್ಕರಿಸಿದರೆ ಬ್ರಿಟಿಷರು ತಮ್ಮ ನಿರ್ಧಾರವನ್ನು ಮುಂದೊತ್ತಲಿರುವರೋ ಅಥವಾ ಸಿಮ್ಲಾ ನಾಟಕವನ್ನೇ ಆಡಲಿರುವರೋ ಎಂಬುದು ಗೊತ್ತಾಗಿಲ್ಲ.

ಪರದೆಯೊಳಗೆ

ಅಧಿಕಾರ ದಾನ ಮಾಡುವ ಬ್ರಿಟಿಷ್ ನಿರ್ಧಾರದಿಂದಾಗಿ ಹಿಂದೀ ಸರಕಾರದ ಉಚ್ಚಾಧಿಕಾರಿಗಳು ತಾವು ಕಡೆಗಣಿಸಲ್ಪಡುವೆವೆಂಬ ಭೀತಿಯಿಂದ ಒಳಗಿಂದೊಳಗೆ ನಾನಾ ಕುತಂತ್ರ ನಡಿಸಿ ಈ ಮಾತುಕತೆಯನ್ನೇ ವಿಫಲಗೊಳಿಸುವ ಪ್ರಯತ್ನದಲ್ಲಿರುವದು ಬೆಳಕಿಗೆ ಬಿದ್ದಿದೆ. ಅತ್ಯಂತ ಅಪಾಯಕರ ತಂತ್ರವೆಂದರೆ ಮುಸಲ್ಮಾನ್ ಪೋಲಿಸರನ್ನೇ ಪುಸಲಾಯಿಸುತ್ತಿರುವದು. ಮೇಲಿನ ವರ್ಗದ ಅಧಿಕಾರಿಗಳು 'ಮುಸಲ್ಮಾನರು ದಂಗೆಯೆದ್ದರೆ ನೀವವರ ಮೇಲೆ ಗುಂಡು ಹಾರಿಸುವಿರಾ?" ಎಂಬ ಗುಪ್ತ ಪ್ರಶ್ನೆಯನ್ನು ಮುಸ್ಲಿಂ ಪೋಲೀಸರಿಗೆ ಕೇಳುತ್ತಿದ್ದರಂತೆ. "ನಾವು ಗುಂಡು ಹಾರಿಸುವಂತಿಲ್ಲ" ಎಂಬ ಉತ್ತರವದಕ್ಕೆ ಬಂದಾಗ 'ಹಿಂದೂ ಪೋಲೀಸರು ಅಂತಹ ಗುಂಪುಗಳ ಮೇಲೆ ಗುಂಡು ಹಾರಿಸಿದರೆ ನೀವು ಸುಮ್ಮಗೆ ನಿಂತು ನೋಡುವಿರಾ?' ಎಂಬ ಮರು ಪ್ರಶ್ನೆ ಹೋಯಿತು. 'ನಾವು ಹಿಂದೂ ಪೋಲೀಸರನ್ನೇ ಗುಂಡೆಸೆದು ಕೊಲ್ಲುವೆವು' ಎಂದು ಮುಸ್ಲಿಂ ಪೋಲೀಸು ಉತ್ತರಿಸಿದ್ದಾರೆಂದು ತಿಳಿದು ಬರುತ್ತದೆ. ಲೀಗನ್ನು ಕಡೆಗಣಿಸಿ ಅಧಿಕಾರದಾನವಾದರೆ ಮುಸಲ್ಮಾನರಿಂದ ಗಲಭೆಯೆಬ್ಬಿಸುವ ಪ್ರಯತ್ನವು ಒಳಗಿಂದೊಳಕೆ ಎಷ್ಟು ಭೀಕರವಾಗಿ ನಡೆದಿದೆ ಎಂಬುದನ್ನು ಇದರಿಂದ ಊಹಿಸಬಹುದು. ಗಾಂಧಿಜೀ ಮೊದಲಾದ ಕಾಂಗ್ರೆಸಿಗರ ಪ್ರಾಣಪ್ರನಂತೆ ನಟಿಸುತ್ತಾ ಈಗ ನೆಹರುಗಳನ್ನು ತನ್ನಲ್ಲಿಗೆ ಆಮಂತ್ರಿಸಿರುವ ಭೋಪಾಲದ ನವಾಬರು ಒಂದು ಗುಪ್ತ ಮಾತುಕತೆಯಲ್ಲಿ 'ವ್ಯಕ್ತಿಶಃ ನಾನು ಪಾಕಿಸ್ಥಾನಕ್ಕೆ ಅನುಮೋದನೆ ಕೊಡುತ್ತೇನೆ. ಮಿ. ಜಿನ್ನ ಮತ್ತು ಲೀಗ್ ಅಲ್ಲವಾಗಿದ್ದರೆ ಕಾಂಗ್ರೆಸಿಗರು ಮುಸಲ್ಮಾನರಿಗೆ ಇಷ್ಟು ಬೆಲೆಕೊಡುತ್ತಿರಲಿಲ್ಲ' ಎಂದು ಹೇಳಿದ್ದು ಬೆಳಕಿಗೆ ಬಿದ್ದಿದೆ.

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟಿರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರಾಗಿ ಪ್ರೋತ್ಸಾಹಿಸಬೇಕಾಗಿಯೂ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್,
ನವಯುಗ.

ಉಡುಪಿ

ಸ್ಕೂಲ್ ಡೇ ಸಮಾರಂಭ— ... ಎಲ್. ಎಸ್. ರಾವ್ ಮುನಿಸಿಪಲ್ ಬೋಯಿಸ್ ಶಾಲೆಯ ವರ್ಷಂತಿ ಸಮಾರಂಭವು ತಾ 20 ರಲ್ಲಿ ಡಾ। ಎಸ್. ಆರ್. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಟಿ. ಎ. ಪೈಗಳವರು ಶಾಲಾ ಸ್ವಸ್ತಿವಾಚನ ಮಾಡಿದರು. ಹೆಡ್ಮಾಸ್ಟರ್ ಶ್ರೀ ಎ. ಶಂಕರರಾಯರು ಶಾಲಾ ವರದಿಯನ್ನೋದಿದರು. ಆರೋಗ್ಯದೃಷ್ಟಿಯಿಂದ ಶಾಲಾ ಮಕ್ಕಳ ವೈದ್ಯಕೀಯ ಪರೀಕ್ಷೆ, ಉಪಾಧ್ಯಾಯರ ಸಂಬಳದ ಹೆಚ್ಚಳ ಮೊದಲಾದ ವಿಷಯಗಳನ್ನೆತ್ತಿ ಅಧ್ಯಕ್ಷರು ಭಾಷಣಮಿತ್ತರು. ನಾಟಕ ವಿನೋದಾವಳಿಗಳ ಪ್ರದರ್ಶನದೊಂದಿಗೆ ಸಭಾಂತ್ಯವಾಯಿತು. (ಸಭಾರಂಭದಲ್ಲಿ ಭಾರತ ಮಾತಾ ಪ್ರಾರ್ಥನೆ, ಕಾಲದ ಭಾರತ ಮಾತೆಯು ದೇವಾನೆಯುತ್ತ ... ಅದರ ಧರಿಸಿದ್ದು ಮಾತ್ರ ... ಇವೆರಡರ ಸಂಬಂಧ ಪ್ರೇಕ್ಷಕ ವರ್ಗಕ್ಕೆ ತಿಳಿಯಲಿಲ್ಲ ... ಬರೆಯುತ್ತಾರೆ.)

ಶೋಚನೀಯ ನಿಧನ— ಉಡುಪಿಯ ... ಕೆಲಸಗಾರರಲ್ಲೊಬ್ಬನಾದ ಮಿ. ಗ್ರೆಗೋರಿ ಫೆರ್ನಾಂಡೀಸರು ಇದೇ ತಾ 22ನೇ ... ಸಿನೆಮಾ ನೋಡಿ ಮರಳುವಾಗ ವಿಷದ ಹಾವು ಕಡಿದು, ಅಂದೇ ಮರಣಗೊಂಡರು. ಶೋಚನೀಯವಿದೆ

ಮಾವು, ಹಲಸು, ಬಾಳೆಹಣ್ಣು ಜಿಲ್ಲೆಯ ಹೊರಗೆ ಹೋಗಕೂಡದು
ರಸ್ತೆ, ರೈಲ್, ನೀರು ದೋಣಿ ಇತ್ಯಾದಿ ಯಾವ ಮಾರ್ಗದಿಂದಾದರೂ ಈ ಜಿಲ್ಲೆಯಿಂದ ಮಾವು, ಹಲಸು, ಬಾಳೆಹಣ್ಣುಗಳು ಹೊರಗೆ ಹೋಗಕೂಡದೆಂದು ಜಿಲ್ಲಾ ಕಲೆಕ್ಟರರ ಹುಕುಂ ಹೊರಟಿದೆ.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್— ಈ ಸಂಸ್ಥೆಯ ವಿಶಿಷ್ಟ ಮಹಾ ಸಭೆಯೊಂದು ತಾ 12-5-46ರಲ್ಲಿ ಜರಗಲಿರುವುದು. ಈ ಸಭೆಯಲ್ಲಿ ಈಗ ಇರುವ ರೂ 20,000ದ ಮೂಲ ಧನವನ್ನು ... ಹೆಚ್ಚಿಸುವ ಕುರಿತು ಆಲೋಚಿಸಲಾಗುತ್ತದೆಂದು ತಿಳಿಯಲಾಗುತ್ತದೆ. ... [illegible] ... 1944ರಲ್ಲಿ ಈ ಸಂಸ್ಥೆಯು ... ಶೇಕಡಾ 6½ ರಂತೆ ...

ಭಾಂಶವನ್ನು ಕೊಡಲಾಯಿತು. 1945ರಲ್ಲಿ ಸಹಾ ಆ ಷ್ಟೇ ಲಾಭಾಂಶವನ್ನು ಹಂಚಲು ಡೈರೆಕ್ಟರರು ಶಿಫಾರಸು ಮಾಡಿರುವರೆಂದು ತಿಳಿಯುತ್ತದೆ

ಹವಾಮಾನ— ಇತ್ತೀಚೆಗೆ ... ದಿನಗಳಿಂದ ಕವಿದಿದೆ. ಸೆಕೆ ವಿಪರೀತವಾಗಿದೆ. ಬಾವಿ ನೀರು ಆರಿ ಹೋಗಿದ ... ಹಾಕುವ ಸಮಯ ತಾ 23ನೇ ರಾತ್ರಿ ಸಿಡಿಲ್ಮಿಂಚು ಇದ್ದರೂ ಮಳೆ ಬೀಳಲಿಲ್ಲ

ರೇಶನ್ ಸಕ್ಕರೆ— ಬಡ ಕಾಫಿ ಹೋಟೆಲುಗಳಲ್ಲಿ ಇತ್ತೀಚೆಗೆ ಕಡಿ ಕಾಫಿ, ಟೀ ದೊರೆಯುತ್ತಿದೆ. ಕಾರಣವೇನೆಂದು ಪ್ರಶ್ನಿಸಿದರೆ ಸಾಕಷ್ಟು ಪರಿಮಾಣದಲ್ಲಿ ಸಕ್ಕರೆ ಸಿಕ್ಕುವುದಿಲ್ಲವೆಂದು ಉತ್ತರ. ರೇಶನ್ ಅಂಗಡಿಗಳಿಗೆ ಸೆಕೆ ಕಾಲವೆಂದು ತೋರುವ ಅಲ್ಲಿಯೂ ಸಕ್ಕರೆಯ ಅಭಾವವೇ ಪ್ರದರ್ಶಿಸಲಾಗುತ್ತಿದೆ. ದೊಡ್ಡವರಲ್ಲಿಯ ಡಿನ್ನರ್ ಪಾರ್ಟಿ, ಉಪಹಾರ ಕೂಟಗಳಲ್ಲಿ ಸಕ್ಕರೆ ತಿಂಡಿಗಳಿಗೆ ಕಡಿಮೆಯೇನೂ ಇಲ್ಲವಂತೆ. ಬಡವರು ಮದುವೆ ಮೊದಲಾದ ಶುಭ ಶೋಭನಗಳಿಗೆ ಸಕ್ಕರೆಯ ಸಲುವಾಗಿ ಪ್ರಾರ್ಥಿಸಿಕೊಂಡರೆ ಅನಪೇಕ್ಷಿತ ಮಾತುಗಳೇ ಹೊರಡುತ್ತವಂತೆ. ಜನತಾ ಸರಕಾರದ ಉದಯ ಕಾಲದಲ್ಲಿಯಾದರೂ ಅಧಿಕಾರಿಗಳ ಮನೋವೃತ್ತಿ ಮಾರ್ಪಾಟು ಹೊಂದಲು ಸಾಧ್ಯವಿಲ್ಲವೇ ಎಂಬುದು ಜನತೆಗೊಂದು ಸಮಸ್ಯೆಯಾಗಿದೆ.

ತಾಲೂಕಿನ ವ್ಯಾಪಾರಿಗಳಿಗೆ— 1939ನೇ ಇಸವಿಯ ಮದ್ರಾಸು ಸಾಮಾನ್ಯ ಮಾರಾಟಗಳ ಮೇಲಿನ ತೆರಿಗೆಯ ಶಾಸನದ ಪ್ರಕಾರ 1945-'46ನೇ ವರ್ಷದ ಬಾಬ್ತು ಪಂಗಾಮಿಯಾಗಿ ತೆರಿಗೆ ಹೊರಿಸಲ್ಪಟ್ಟ ಉಡುಪಿ ತಾಲೂಕಿನ ಎಲ್ಲಾ ವ್ಯಾಪಾರಿಗಳು 1939ನೇ ಇಸವಿಯ ಮದ್ರಾಸು ಸಾಮಾನ್ಯ ಮಾರಾಟಗಳ ಮೇಲಿನ ತೆರಿಗೆಯ (ಟರ್ನ್‌ಓವರ್ ಮತ್ತು ತೆರಿಗೆ ಹೊಂದಿಸುವ) ಕುರಿತ ಕ್ರಮಗಳ ಸೆಕ್ಶನ್ 11 (1)ನೇ ಕ್ರಮದ ಮೇರೆಗೆ 1946ನೇ ಇಸವಿ ಮಾರ್ಚ 31ನೇ ತಾರೀಕಿಗೆ ಅಂತ್ಯವಾಗುವ ವರ್ಷದ ಬಾಬತು ತಮ್ಮ ವ್ಯಾಪಾರದ ವಹಿವಾಟಿನ ಒಟ್ಟು ಮೊಬಲಗನ್ನು ತೋರಿಸುವ ಒಂದು ರಿಟರ್ನನ್ನು A ಫಾರ್ಮಿನಲ್ಲಿ 1946ನೇ ಇಸವಿ ಮೇ ತಿಂಗಳ ಒಂದನೇ ತಾರೀಕಿನೊಳಗಾಗಿ ನಮಗೆ ತಲ್ಪುವಂತೆ ಕಳುಹಿಸಿಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸದರಿ ಆಕ್ಟಿನ 15 (a) ಸೆಕ್ಷನಿನನ್ವಯ ದಂಡನೆಗೆ ಗುರಿಪಡಿಸಲಾದೀತು ಎಂದು ಅಸಿಸ್ಟೆಂಟ್ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಶ್ರೀ. ಎಂ. ಗಣಪತಿಯವರು ತಿಳಿಸುತ್ತಾರೆ.

ಕಿನ್ನಿಮೂಲ್ಕಿ— 28-4-46ನೇ ಆದಿತ್ಯವಾರ ದಿವಸ ಸಂಜೆ ಘಂಟೆ 4ಕ್ಕೆ ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಕೆ. ಮುಡ್ಡುಗಿರಿಯವರ ಅಧ್ಯಕ್ಷತೆಯಲ್ಲಿ ಜರಗಲಿರುವ ಉಚ್ಚ ಕಿನ್ನಿಮೂಲ್ಕಿ ಪದ್ಮಶಾಲಿ ವೈಶ್ಯ ಸಮಾಜ ಸೇವಾ ಸಂಘದ 6ನೇ ವರ್ಷೋತ್ಸವಕ್ಕೆ ಸ್ವಸಮಾಜದ ಎಲ್ಲಾ ಬಂಧುಗಳಿಗೂ ಆಮಂತ್ರಣವಿರುವುದಾಗಿ ಸದ್ರಿ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ

ಪ್ರಕಟಣೆ

ಕಾರ್ಕಳ ತಾಲೂಕಿನ ಅಜೆಕಾರ ಪಂಚಾಯತ ಬೋರ್ಡು ಶಾಲೆಗೆ ಹೆಡ್‌ಮಾಸ್ಟರರಾಗಿ ಹಾಯರ್ ಗ್ರೇಡ್ ತರಬೇತಾದ ಒಬ್ಬ ಅಧ್ಯಾಪಕರು ಬೇಕಾಗಿದ್ದಾರೆ. ತುಟ್ಟಿಭತ್ತೆ ಕೂಡಾ ರೂಪಾಯಿ 31 ಸಂಬಳ ಕೊಡಲಾಗುವುದು. ಕೆಲಸಕ್ಕೆ ಹಾಜರಾಗಲಿಚ್ಛಿಸುವವರು ತಾ 15-5-46ರೊಳಗೆ ಅರ್ಜಿ ಮಾಡಿಕೊಳ್ಳಬಹುದು.

ಪ್ರೆಸಿಡೆಂಟ್,
ಅಜೆಕಾರು ಪಂಚಾಯತ ಬೋರ್ಡು.

ಕೋಟೆಕಾರು— ವಿದ್ಯಾಪ್ರಚಾರಿಣೀ ಪಾಠಶಾಲಾ ವಿದ್ಯಾರ್ಥಿಗಳ ಯಕ್ಷಗಾನ ಸಮಿತಿಯ ವಾರ್ಷಿಕೋತ್ಸವವು ಶ್ರೀ ಗೋವಿಂದರಾವ್, ವಿದ್ವಾನ್ ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ತಾ 20-4-46ರಲ್ಲಿ ಜರಗಿತು. ಅಧ್ಯಕ್ಷರು ದನ್ನನ ಗದಾಯುದ್ಧ ವಾಚನ ಮಾಡಿದರು. ಊರ ಪರವೂರ ಪ್ರಮುಖ ಅರ್ಥಧಾರಿಗಳಿಂದ ಮತ್ತು ಶಾಲಾ ಮಕ್ಕಳಿಂದ ಕರ್ಣಾರ್ಜುನರ ಕಾಳಗ ಯಕ್ಷಗಾನ ಸಾಗಿತು. ಶ್ರೀ ಪುಟ್ಟಣ್ಣ ಶೆಟ್ಟರ ಧನ್ಯವಾದ ಅರ್ಪಣವಾಯಿತು

ಇನ್ನಂಜೆ— ಶ್ರೀ ಕುತ್ತೆತ್ತೂರು ಶೀನಾ ... ಮಂಡಾಯರು ಶೆಟ್ಟಿಬೆಟ್ಟುವಿನಲ್ಲಿ ವಾಸ ಮಂದಿರವೆಂಬ ಭಜನ ಹಾಲನ್ನು ಕಟ್ಟುವ ನಿಮಿತ್ತ ರೂಪಾಯಿ 6000ವನ್ನು ಕೊಟ್ಟದು ಮಾತ್ರವಲ್ಲದ ಇತ್ತೀಚೆಗೆ ಪುನ. ರೂಪಾಯಿ 4000ವನ್ನು ಕಳುಹಿಸಿದುದು ಸ್ತುತ್ಯ

ಮಾರಾಟಕ್ಕೆ ಸಿದ್ಧವಿದೆ.

1. ಭದ್ರ ಮಾಸೀರ್ (ನಂಬ್ರ 23) 125 ಟನ್ ಭಾರ ಒಯ್ಯಲ್ಪಡುವ ಇತ್ತೀಚೆಗೆ ಹೊಸತಾಗಿ ಕಟ್ಟಿರುವ ಕೋಟ್ಯ.
2. ಮಹೇಶಮೂರ್ತಿ (ನಂಬ್ರ 101) 135 ಟನ್ ಭಾರ ಒಯ್ಯಲ್ಪಡುವ ಹೊಸತಾಗಿ ಕಟ್ಟಲ್ಪಟ್ಟ ಕೋಟ್ಯ.

— ಇದೂ ಅಲ್ಲದೆ

ಮಂಗಳೂರು, ಸೆಂಟ್ರಲ್ ಮೈದಾನಿನ ಬಳಿ, ನಗರದ ಮಧ್ಯ ಭಾಗದಲ್ಲಿ, ವ್ಯಾಪಾರ ವಹಿವಾಟಿಗನುಕೂಲವಾದ ಕಡೆಯಲ್ಲಿ 69 ಸೆಂಟ್ಸ್ ವಿಸ್ತೀರ್ಣವುಳ್ಳ ಸ್ಥಳದಲ್ಲಿ ವಾಸಕ್ಕೆ ಯೋಗ್ಯವಾದ ಐದು ಭವ್ಯ ಕಟ್ಟಡಗಳೂ ಎರಡು ಅಂಗಡಿಗಳೂ ಮಾರಾಟಕ್ಕಿವೆ.

ಆಗತ್ಯವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಪೋಸ್ಟು ಬಾಕ್ಸ್ ನಂಬ್ರ 110
ಮಂಗಳೂರು.

ಕಿರಿಯರ ಪ್ರಪಂಚ'ದ ಮೂರು ಪ್ರಕಟಣೆಗಳು.

ಆಕಾಶಗಂಗೆ

ಆಧುನಿಕ ಕನ್ನಡ ಕವಿಗಳೂ ಉತ್ತಮ ಕತೆಗಾರರೂ ಆದ ಶ್ರೀ ಎಸ್ ವೆಂಕಟರಾಜರ ೨೦ ಕತೆಗಳ ಸಂಗ್ರಹ.

ಆಕಾಶಗಂಗೆ

ಹೃದಯವನ್ನು ಕುಲುಕಿಸುವ–ಕನ್ನಡ ವಾಙ್ಮಯ ಕ್ಷೇತ್ರವನ್ನೇ ಫಲಭರಿತವಾಡಲು ಪ್ರವಹಿಸಿದ ನೂತನ ಪ್ರವಾಹ ಬೆಲೆ ರೂ 1—12—0

ದಿನಕ್ಕೊಂದು ನಗೆ! ಆರೋಗ್ಯದ ಬಗೆ!!

ನಗುವಿನೊಂದಿಗೆ ವಿಚಾರದ ಕಿಡಿಯೂ ಹೊಳೆಯಬೇಕೆ? ಹಾಗಿದ್ದರೆ

ವಿಷ್ಣುವಿನ ದಶಾಪರಾಧಗಳು

ಅರ್ಥಾತ್ ದಶಾವತಾರಗಳು

ಎಂಬ ದಶಾವತಾರಗಳ ಕುರಿತಾದ ವಿಡಂಬನ ಗ್ರಂಥವನ್ನೋದಿರಿ.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಎಂ ವಿ ಹೆಗ್ಡೆಯವರ ಕೃತಿ. ಬೆಲೆ 0—12—0

ಭಾರತದಲ್ಲಿ ಜಾತಿಭೇದ

(ಆಚಾರ್ಯ ಕ್ಷಿತಿಮೋಹನ ಸೇನ್ ಶಾಸ್ತ್ರಿ, ಎಂ. ಎ., ಇವರ ಹಿಂದಿ ಗ್ರಂಥದ ಕನ್ನಡ ಅನುವಾದ.)

ಜಾತಿಭೇದವು ಹೇಗುಂಟಾಯಿತು? ಅದರ ಇತಿಹಾಸವೇನು? ಎಂಬುದನ್ನೆಲ್ಲಾ ಸಮೂಲಾಗ್ರವಾಗಿ, ವೈಜ್ಞಾನಿಕವಾಗಿ ವಿಮರ್ಶಿಸುವ ಗ್ರಂಥ.

ಅನುವಾದಕರು— ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ. | ಬೆಲೆ ರೂ. 1—0—0 ಮಾತ್ರ.

ಪ್ರತಿಗಳು ಸಿಗುವ ಸ್ಥಳಗಳು:— 1 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2 ನವಭಾರತ ಬುಕ್ ಡಿಪ್ಪೋ, ಉಡುಪಿ. 3 ... ಬುಕ್ ... ಪುತ್ತೂರು 4 ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 5 ಜೀವನ ಪುಸ್ತಕಾಲಯ, ... 6 ... ಭಾರತ ಬುಕ್ ಡಿಪ್ಪೋ, ಬೊಂಬಾಯಿ. 7. ಚಿತ್ರರಂಜನ ಭವನ, ಉಡುಪಿ. 8. ಕೆ. ದಾಮೋದರ ಪೈ, ಕುಂದಾಪುರ. 9. ಸಾಹಿತ್ಯ ಭಂಡಾರ, ಹುಬ್ಬಳ್ಳಿ. 10. ವೆಂಕಟೇಶಯ್ಯ ಬ್ರದರ್ಸ್, ಶಿವಮೊಗ್ಗಾ. 11. ನ್ಯೂ ಸಪ್ಲೈ ... 12. ಭಕ್ತ ಬ್ರದರ್ಸ್, ಕಾಸರಗೋಡು. 13. ಶ್ರೀ ಬಸವೇಶ್ವರ ಬುಕ್ ಡಿಪೋ, ಹುಬ್ಬಳ್ಳಿ.

ದಕ್ಷಿಣ ಕನ್ನಡ.

ಹಿರಿಯಡಕ—ಸ್ಥಳೀಕ ಬೋರ್ಡ್ ಹಾಯರ್ ಎಲಿಮೆಂಟ್ರಿ ಶಾಲೆಯ ವಾರ್ಷಿಕೋತ್ಸವವು ತಾ. 13-4-46ರಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಿಕ ಬಾಲಕಿಯರು "ಪನ್ನಾದಾಸಿ" ಎಂಬ ನಾಟಕವನ್ನು ಉತ್ತಮ ರೀತಿಯಲ್ಲಿ ಅಭಿನಯಿಸಿದರು. ಮಕ್ಕಳ ವಿವಿಧ ವಿನೋದಾವಳಿಗಳನ್ನು ನೋಡಿ, ಸಭಿಕರು ಬಹಳ ಸಂತೋಷಪಟ್ಟರು. ಶಾಲೆಯು ಈಗಿನ ಮುಖ್ಯ ಉಪಾಧ್ಯಾಯ ಶ್ರೀ ಮಂಜಯ್ಯ ಶೆಟ್ಟರ ಸಾಹಸದಿಂದ ಒಳ್ಳೆ ಸ್ಥಿತಿಯಲ್ಲಿದೆ ಎಂದು ಅಧ್ಯಕ್ಷರು ಹೇಳಿದರು. ನಾಟಕದಲ್ಲಿ ಪಾತ್ರವಹಿಸಿದ ಬಾಲಿಕಾ ಬಾಲಕಿಯರಿಗೆ ರಜತ ಪದಕಗಳೂ ಬಹುಮಾನಗಳೂ ಕೊಡಲ್ಪಟ್ಟುವು. ಅಧ್ಯಕ್ಷರು ಪನ್ನಾವೀರನ ಪಾತ್ರವಹಿಸಿದ ಬಾಲಕಿಗೆ ಒಂದು ರಜತ ಪದಕವನ್ನು ಕೊಟ್ಟರು.

ಎಣ್ಣೆಹೊಳೆ—ಸ್ಥಳೀಯ ಸರಕಾರಿ ಹಿನ್ದು ಶಾಲೆಯ ಮಕ್ಕಳಿಗೆ ಎಣ್ಣೆಹೊಳೆ ಯಂಗ್ ಮೆನ್ಸ್ ಸಂಘದ ವತಿಯಿಂದ ಧರ್ಮಾರ್ಥ ಉಡುಪು ಹಂಚುವ ಸಮಾರಂಭವೂ, ಶಾಲಾ ದಿನಾಚರಣೆಯೂ, ತಾ. 16 3-46ರಲ್ಲಿ ಶ್ರೀ. ಎಸ್ ವಿ. ಕೆಂಪಣ್ಣನವರು ಅಸಿಸ್ಟಾಂಟ್ ಡಿರೆಕ್ಟರ್ ಆಫ್ ಫಿಶರೀಸ್, ಮದ್ರಾಸ್ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀಗಳಾದ ಉಚ್ಚಿಲ ನರಸಪ್ಪಯ್ಯ, ಕೃಷ್ಣಯ್ಯ, ಆನಂದರಾವ್, ದೂಜಪ್ಪ, ಆಮೀನ್, ರಂಬು ಪಿ. ಮೂಳೂರು ಕಾರ್ ಪಿ. ಶಿವಣ್ಣ ಹೆಗ್ಡೆ, ಪದ್ಮನಾಭ ಶೆಟ್ಟಿ, ಸೈ. ಕೆ. ಕೋಟ್ಯಾನ್ ಕಾರರು ಮೊದಲಾದವರು ಸಂಘದ ಮತ್ತು ಶಾಲೆಯ ಅಭಿವೃದ್ಧಿಯನ್ನು ಹಾರೈಸಿ ಭಾಷಣವಿತ್ತರು.

ಪ್ರಕಟಣೆ

ಶ್ರೀ ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು ಅಷ್ಟಬಂಧ ಕಲಶಕ್ಕೆ ಹಣ ಕೊಟ್ಟವರ ಹೆಸರುಗಳು

ಆರ್. ಸುಬ್ಬರಾವ್ ರೂ 100, ಕುಂಬ್ಳಾಪಿ ಅಂತಯ್ಯ ಶೆಟ್ಟರು ರೂ 15 ಭೋಜಾಳಿ ನಂಜಪ್ಪ ಶೆಟ್ಟರು ರೂ 10, ಬಾನಾಳಿ ರಂಗ್ಗಯ್ಯ ಶೆಟ್ಟರು ರೂ 5, ಹಾಡಿಮನೆ ಅಣ್ಣಪ್ಪ ಶೆಟ್ಟರು ರೂ 10, ಹರ್ಜಿ ನಾರಾಯಣ ಶೆಟ್ಟರು ರೂ 5, ಬೈನಕಾಡ್ಲು ಮಂಜಯ್ಯ ಶೆಟ್ಟರು ರೂ 5, ಹೊಸಮನೆ ಸೂರಪ್ಪ ಶೆಟ್ಟರು ರೂ 10, ಸಾಲಿಬೈಲು ವೀರ ಶೆಟ್ಟರು ರೂ 2, ನೂಕೋಡಿ ಗೋವಿಂದ ಶೆಟ್ಟರು ರೂ 2, ವೆಂಕಟ್ರಮಣ ಪುರಾಣಿಕರು ರೂ 1. ವೆಂಕಟಯ್ಯ ಶೆಟ್ಟರು ಹರ್ಜಿ, ರೂ 2. ರಾಮ ಭಟ್ಟ ರೂ 1, ಕೆಳಮನೆ ಅಣ್ಣಪ್ಪ ಶೆಟ್ಟರು ರೂ 2, ಚಿತ್ತೂರು ಪುಟ್ಟಯ್ಯ ಶೆಟ್ಟರು ರೂ 5, ಸುರಪ ಚಿಕ್ಕಯ್ಯ ಶೆಟ್ಟರು ರೂ 2, ಚಿತ್ತೂರು ವೀರಣ್ಣ ಶೆಟ್ಟರು ರೂ 10, ಮೊದಲಿನ ಹಣ ವಸೂಲಾದ್ದು H. ವಿಜಯೇಂದ್ರ ನಾಯ್ಕ ರೂ 5, ಕೆ. ಕೆ. ಕುಂಞಪ್ಪ ನಂಬ್ಯಾರ್ ರೂ 5, ಮಂಜುನಾಥ ರೂ 1, ಹೆಸ್ರು ಗೊತ್ತಿಲ್ಲಾ ರೂ 1, ಮುದಾಬಲ ಶೇರಿಗಾರ, ರೂ 5, ದಾಸಪ್ಪ ಶೇರಿಗಾರ ರೂ 2, ಯೀ ಮೇಲಿನ ರೂ. 206 ಪೂರ್ತಿ ವಸೂಲಾದ್ದು. ಕೊಡುವದಾಗಿ ವಾಗ್ದಾನ ಮಾಡಿದವರು ತೆಕ್ಕಟ್ಟೆ ಮನೆ ದಾರಪ್ಪ ಶೆಟ್ಟರು ರೂ 5, ಕೂಸಕೊಡ್ಲು ಕುಪ್ಪಯ್ಯ ಶೆಟ್ಟರು ರೂ 5, ಆರೆಕಲ್ಲುಮನೆ ಹೆರಿಯಣ್ಣ ಶೆಟ್ಟರು ರೂ 5, ಕೋಣಿ ಮನೆ ರಾಮಯ್ಯ ಶೆಟ್ಟರು ರೂ 5, ಊರಬೈಲು ಅಬ್ಬಕ್ಕ ಹಡ್ತಿ ರೂ 5, ಬೆಳ್ವಾಳ ನಾಗಯ್ಯ ಶೆಟ್ಟರು ರೂ 5, ತುಕ್ರ ಮಕ್ಕಿ ಮಂಜಯ್ಯ ಶೆಟ್ಟರು ರೂ 4, ಪಡಾಸ ಕೊಡ್ಲು ಗೋವಿಂದ ಶೆಟ್ಟರು ರೂ 10, ಜುಮುಲಾ ರೂ 44

ಬೊಂಬಾಯಿ—ಉಡುಪಿ ಯಕ್ಷಗಾನ ಕಲಾ ಮಂಡಲಿಯವರು ಬೊಂಬಾಯಿಯಲ್ಲಿ ಯಕ್ಷಗಾನ ಕೂಟಗಳನ್ನೇರ್ಪಡಿಸಿ ಜನ ಮನೋರಂಜನೆ ಮಾಡುತ್ತಿದ್ದಾರೆ. ತಾ. 30 3 46ರಲ್ಲಿ ಮಾಟುಂಗದ ಪೋರೆಸ್ವರ್ ಕಟ್ಟಡದ ಮಾಳಿಗೆಯಲ್ಲಿ ಪಾಲಿಸುತ್ತಿದ ಕಾಳಗ ಮತ್ತು ಅಂಗದಸಂಧಾನ ಯಕ್ಷಗಾನ ಕೂಟವು ಮಾಟುಂಗ ಮಿತ್ರಮಂಡಲದ ವತಿಯಿಂದ ಜರಗಿತು. ತಾ 13 4 46ರಲ್ಲಿ ಟಾಕೂರ್ ದ್ವಾರ್, ಮಾರುತಿ ದೇವಸ್ಥಾನದ ಸಭಾಂಗಣದಲ್ಲಿ 'ಅಂಗದ ಸಂಧಾನ' ಯಕ್ಷಗಾನ ಎಡ್ವೋಕೇಟ್ ಶ್ರೀ ಜಿ. ಆರ್. ಮಧ್ವಾಪಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಪ್ರೊಕ್ಕೆ ದೇಜುಶೆಟ್ಟರು, ಯಕ್ಷಗಾನ ದಿಂದಾಗುತ್ತಿರುವ ಧಾರ್ಮಿಕ ಮತ್ತು ಕನ್ನಡ ಸಾಹಿತ್ಯ ಸೇವೆಯನ್ನು ವಿವರಿಸಿ ಭಾಷಣವಿತ್ತರು. ತಾ 20ರಲ್ಲಿ ಕನ್ನಡ ಸಾಹಿತ್ಯ ಸಂಘದ ಆಶ್ರಯದಲ್ಲೂ ಯಕ್ಷಗಾನ ಸಮಾರಂಭವಿತ್ತು.

ಮೊಗವೀರ ವ್ಯವಸ್ಥಾಪಕ ಮಂಡಳಿ-ಮುಂಬಾಯಿ—ಇದರ ಮಹಾಸಭೆಯು ಮಾರ್ಚತಿಂಗಳ ತಾ ೨೧ರಲ್ಲು ಮಂಡಳಿಯ ಕಚೇರಿಯಲ್ಲಿ ನಡೆಯಿತು. ಅಧ್ಯಕ್ಷರಾದ ಶ್ರೀಯುತ ರಾಮರಾಯರು ಸಭಿಕರನ್ನು ಸ್ವಾಗತೀಕರಿಸಿ, ಮಂಡಳಿಯು ಮೊಗವೀರ ಸಮಾಜ ಮತ್ತು ಕನ್ನಡಕ್ಕಾಗಿ ಹೋರಾಡುತ್ತ ಆವರ ಜೀವಿತದಲ್ಲಿ ಎಷ್ಟೋ ಕೊಡಬೇಕಾಗಿ ರುವುದೆಂಬುದನ್ನು ವಿವರವಾಗಿ ತಿಳಿಸಿ ಹೇಗೆ ದೂರದ ಮುಂಬಾಯಿಯಲ್ಲಿ ಕನ್ನಡವನ್ನು ಉತ್ತೇಜಿಸಿ ಕಾರ್ಯಗಳನ್ನು ನಡೆಸಿದೆ ಎಂಬುದನ್ನು ವಿವರಪಡಿಸಿ ಇನ್ನು ಮುಂದೆಯೂ ಮಂಡಳಿಯು ಎಂದಿನಂತೆ ಭರದಿಂದ ಬಡವೊಗವೀರರ ಮತ್ತು ಕನ್ನಡದ ಕಾರ್ಯವನ್ನು ಹೆಚ್ಚೆಚ್ಚು ಗೈಯುವುದಕ್ಕಾಗಿ ಸದಸ್ಯರ ಸಹಾಯ ಮತ್ತು ಸಹಾನುಭೂತಿಯನ್ನು ಕೋರಿದರು. ವಾರ್ಷಿಕವರದಿಯು ಮಂಜೂರಾತಿಗಾಗಿ ಸದಸ್ಯರ ಅನುಮತಿ ಕೋರಿದರು. ಉಪಾಧ್ಯಕ್ಷರಾದ ಶ್ರೀ ಎಲ್. ಕೆ. ಸಾಲಿಯಾನರು ಅನುಮೋದಿಸಲಾಗಿ ಸರ್ವಾನುಮತದಿಂದ ವರದಿ ಮಂಜೂರಾಯಿತು. ಎರಡನೇಯದಾಗಿ ಮುಂದಿನ ಎರಡು ವರ್ಷಗಳಿಗೆ ಈ ಕೆಳಗಿನ ಕಾರ್ಯಕರ್ತರನ್ನು ಒಳಗೊಂಡು ಮುಂದಿನ ಜನ ರಲ್ ಸಭೆ ಸದಸ್ಯರ ವ್ಯವಸ್ಥಾಪಕ ಸಮಿತಿಯನ್ನು ಪುನೀಕರಿಸಲಾಯಿತು. ಅಧ್ಯಕ್ಷ ಶ್ರೀ. ಜಿ. ಶಿವ ಸಾಲಿಯಾನ್; ಉಪಾಧ್ಯಕ್ಷರು ಶ್ರೀಗಳಾದ ನಾರಾಯಣ ವಿ ಬಂಗೇರ ಮತ್ತು ಎಲ್ಲಪ್ಪ ಕೆ. ಕೋಟಿಕುರ್, ಪ್ರಧಾನಕಾರ್ಯದರ್ಶಿ ಶ್ರೀ. ವೀರಪ್ಪ ಒ. ಮಡುಪದ್ರಿ. ಕಾರ್ಯದರ್ಶಿಗಳು ಶ್ರೀಗಳಾದ ರಮಾನಂದ ಅಮೀನ್ ಮತ್ತು ರಾಮ. ಡಿ. ಮೆಂಡನ್ ಕೋಶಾಧಿಕಾರಿಗಳು: ಶ್ರೀಗಳಾದ ಗೋಪಾಲ ಸಿ ಪುತ್ರನ ಮತ್ತು ಬೇಜು. ಟಿ. ಕಾಂಚನರು. ಲೆಕ್ಕ ಪರಿಶೋಧಕರಾಗಿ ಶ್ರೀಗಳಾದ ನಾರಾಯಣ ಪುತ್ರನ ಮತ್ತು ನಾರಾಯಣ ಜಿ. ಪುತ್ರನರನ್ನು ನೇಮಿಸಲಾಯಿತು. ಕಡೇಯದಾಗಿ ಮೊಗವೀರ ಏರಿಯ ಧುರೀಣರಾದ ಶ್ರೀ. ವೈ. ಕೆ ಪುತ್ರನ, ಶ್ರೀ ಬಿ. ಕರ್ಕೇರ, ಶ್ರೀ. ರಾಮಪ್ಪ ಜಿ. ಅಮೀನ್, ಶ್ರೀ ರಾಮು ಕೆ. ಕುಂದರ್ ಮೊದಲಾದವರು ಮಂಡಳಿಯ ಏಳಿಗೆಗಾಗಿ ಸೂಚನೆಗಳನ್ನು ಮುಂದುಮಾಡಿ ಮಾತಾಡಿದರು. ಮತ್ತು ಧನ್ಯವಾದಗಳೊಡನೆ ಸಭಾಂತ್ಯವಾಯಿತು.

ದಿ ಮುಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡೆ ನಾಶಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವದಿಲ್ಲ — ಮತ್ತು ಅವಶ್ಯಕತೆಯೂ ಇರುವದಿಲ್ಲ ... ಜಮೇಯಿಯನ್ ಜೀವನ ಮಿಕ್ಸ್ಚರ್ ...

ಜಮೇಯಿಯನ್ ಮೆಡಿಕಲ್ ಹಾಲ್, ಮುಂಬಾಯಿ ೨

FOR LIFE ASSURANCE

CONSULT

The New Gaurdian of India Life Insrce Co., Ltd,

(Chairman The Hon'ble Mr. M. CT. M. Chidambaram Chettiar.

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA	HEAD OFFICE
MANGALORE & KARKALA.	"United India Life Bldg" Esplanade Post Box No. 142, MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಆನೋಘವಾದ ಮಧುರದ್ರವ ರಸಾಯನ. ಅಲ್ಪಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವನಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾರ್ಕ್ ಇದೆ)



ಆ ಔಷಧಿಯ ಬಾಟ್ಲಿಗಳು ಹೆಚ್ಚು ಕಡಿಮೆ ಎಲ್ಲ ಔಷಧಾಲಯಗಳಲ್ಲೂ ದೊರೆಯುವವು ...

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾಲಬೈಲು ದ. ಕ.
ಸ್ಟಾಕಿಸ್ಟರು ಡಾ! ಎ. ಕೆ. ಶಿವರಾವ್ ರಥಬೀದಿ, ಉಡುಪಿ.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 25/1946

1. ಬಾಂಗಾಳ ಅಣ್ಣಪ್ಪ ನಾಯಕ್. 2. ಬಾಂಗಾಳ ರಘುನಾಥ ನಾಯಕ್. 3. ಬಾಂಗಾಳ ಸದಾಶಿವ ನಾಯಕ್, ಜನರಲ್ ಪವರ್ ಯಟಾರ್ನಿ ಹೋಲ್ಡರ್ ೨ನೇ ಅರ್ಜದಾರ —ಅರ್ಜದಾರರು.

ಉಡುಪಿ ಕಸಬೆ ಅಜ್ಜರಕಾಡಿನಲ್ಲಿರುವ ೧, 3ನೇ ಅರ್ಜದಾರರ ಮಗ ಮತ್ತು 2, 3 ನೇ ಅರ್ಜದಾರರ ಅಣ್ಣ ಮೃತ Captain. P. K. Nayak, I.M.S, I.A.M.C. ಇವರ ಬಾಬ್ತು Imperial Bank of India, Asansol, Burdwan District, Bengal, ಇದರ ಬ್ಯಾಂಕಿನಲ್ಲಿ Current Account ನಲ್ಲಿರುವ ಅಸಲು ರೂ 1221 2 0 ಮತ್ತು ಬಡ್ಡಿ ವಸೂಲಿ ಬಗ್ಗೆ ಮಂದಿನ ಅರ್ಜದಾರರಿಗೆ ಸಕ್ಸೆಷನ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ಅರ್ಜದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 8 6 1946ಕ್ಕೆ ಮುಂದೊತ್ತಲಾಗಿಯದೆ. ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ತಾರೀ ದಿವಸ ಬೆಳಗ್ಗೆ 10 ಗಂಟೆಗೆ ಕೋರ್ಟಿನ ಮುಂದೆ ಆಕ್ಷೇಪ ಹ್ಯಾಜರು ಮಾಡತಕ್ಕದ್ದು.

By order of the court.

K. Varadaraya Pai.
Advocate for Petitioner.

Dated 17-4 1946 }
Udipi }

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 21/1946.

ಶ್ರೀವೇಣಿ ಯಾನೆ ಲಕ್ಷ್ಮೀ ಅರ್ಜದಾರಳು.

ಮೇಲ್ಕಂಡ ಅರ್ಜಿ ನೆಂಬರಿನ ಅರ್ಜದಾರಳ ಮಗ ವಿನೋದ ನಾಯನು ಲಗ್ನವಾಗದೆ ಮರಣಪಟ್ಟು ಅವನಿಗೆ ತಾಯಿ ಅರ್ಜದಾರಳು ಮುಖ್ಯ ವಾರಿಸ್ದಾರಳಾಗಿ ಸದ್ರಿ ಮೃತನ ಬಾಬ್ತು ಈ ಕೆಳಗೆ ಕಾಣಿಸಿದ ಮೊಬಲಗನ್ನು ವಸೂಲು ಮಾಡುವದಕ್ಕೆ ತಾನು ಹಕ್ಕುದಾರಳಾಗಿ ಆ ಬಗ್ಗೆ ಸಕ್ಸೆಷನ್ ಸರ್ಟಿಫಿಕೇಟ್ ಕೊಡುವಂತೆ ಕೊಟ್ಟ ಮೇಲ್ಕಂಡ ಅರ್ಜಿ ವಿಚಾರಣೆಯು ತಾರೀಕು 8 6-1946ಕ್ಕೆ ಮುಂದೆ ಹಾಕಲ್ಪಟ್ಟಿರುವದರಿಂದ ಆಕ್ಷೇಪ ಹೇಳತಕ್ಕವರು ಆ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಸಾಲದ ಪರಿಶಿಷ್ಟಾದಿ ಪಟ್ಟಿ.

1 Bombay Life Assurance Company Limited Bombay Rs. 998 7-0. As per Policy No. 104613 standing in the name of the deceased, 2 Bombay Life Assurance Company Ltd., Bombay Rs 987 10-0 As per Policy No. 120995 standing in the name of the deceased 3 Government of India Post office Savings Bank Account Mangalore 250-0-0 Mangalore Post Office Savings Bank Pass book No 59582. Kept as Security with the Salt Revenue Department, Madras

Total Rs 2235 1-0.

P. Padmanabha Rao B.A., B.L.
V. H for Petitioner.

Udipi }
D 10-4 1946 }

Advertise in

"ANTARANG", Weekly

and

get maximum value for your nominal investment

ಮದ್ರಾಸ್ ಅಳಿಯಸಂತಾನ ಮಸೂದೆ.

ಶ್ರೀ. ಎ ಶಂಕರ ಆಳ್ವ, ವಕೀಲ್, ಮಂಗಳೂರು.

ಒಂದನೇ ಯಾನೆ ನಾಡವರ ಸಂಘದ ಮಹಾ ಸಭೆಯಲ್ಲಿ ತಯಾರಿಸಿದ ಅಳಿಯ ಸಂತಾನ ಮಸೂದೆಯು ಪ್ರಕಟಿತವಾಗಿರುತ್ತದೆ. ಸಂಘದ ಸೆಕ್ರೆಟರಿಗಳು ವಿನಂತಿ ಮಾಡಿಕೊಂಡ ಹಾಗೆ ಅನೇಕ ಮಹನೀಯರು ತಮ್ಮ ಅಭಿಪ್ರಾಯಗಳನ್ನು ಕಳುಹಿಸಿಕೊಟ್ಟಿರುವರೆಂದು ನಂಬುತ್ತೇನೆ. ನಮ್ಮ ಕಾನೂನು ಮಟ್ಟಿಗೆ ತಿದ್ದುಪಡಿ ಅವಶ್ಯವಿರುತ್ತದೋ ಎಂಬ ವಿಷಯವನ್ನು ಸುಮಾರು ಕಾಲು ಶತಮಾನಗಳಿಂದೀಚೆಗೆ ನಮ್ಮ ಮಹಾ ಸಭೆಗಳಲ್ಲಿ ಚರ್ಚೆ ನಡೆಯುತ್ತಾ ಬರುತ್ತಿದ್ದರೂ ಇಷ್ಟರವರೆಗೆ ಏನೂ ಫಲಿತಾಂಶ ಬರಲಿಲ್ಲ. ಈಗ ಜಾರಿಗೆ ಬಂದಿರುವ ಮದ್ರಾಸ್ ಅಳಿಯ ಸಂತಾನ ಆಕ್ಟು ಅಳಿಯ ಸಂತಾನ ಅನುಸರಿಸುವವರನ್ನು ಸಹ ಅದರಲ್ಲಿ ಸೇರಿಸಿದ್ದರೂ ಅಷ್ಟರಿಂದ ಆಗಿನ ಗವರ್ನರರ ಮೇಲು ಮನವಿಗೆ ಸಹ ಅನ್ವಯಿಸುವದಿಲ್ಲ ಎಂತ ತಿದ್ದುಪಡಿ ಆಗಿರುತ್ತದೆ. ಅದರಿಂದ ನಮ್ಮ ಮಟ್ಟಿಗೆ ಪ್ರತ್ಯೇಕ ಕಾನೂನನ್ನಾದರೂ ಜಾರಿ ಮಾಡಬೇಕೆಂತ ನಮ್ಮ ಮಹನೀಯರು ಪ್ರಯತ್ನಪಡುವ ಸಮಯದಲ್ಲಿ ನ್ಯಾಯವಿಧಾಯಕ ಸಭೆಯು ನಿಂತುಹೋಗಿತ್ತು. ಅದರ ನಂತರ ಈಗಲಾದರೂ ನಾವು ಹೆಚ್ಚು ಸಮಯವನ್ನು ಕಳೆಯದೆ ನಮ್ಮಿಂದಾದಷ್ಟು ಪ್ರಯತ್ನಗಳನ್ನು ನಡೆಸಿಕೊಂಡು ಆದಷ್ಟು ಬೇಗನೆ ಮಸೂದೆಯನ್ನು ಕಾನೂನು ಆಗಿ ಜಾರಿಗೆ ಬರುವ ಹಾಗೆ ಮಾಡುವದು ಅತ್ಯಗತ್ಯ.

ಈ ಸಂದರ್ಭದಲ್ಲಿ ನಾವು ಪ್ರತಿಯೊಬ್ಬರೂ ಈಗ ಪ್ರಕಟಿತವಾಗಿರುವ ಮಸೂದೆಯನ್ನು ಚನ್ನಾಗಿ ಪರಿಶೀಲಿಸಿ ಅದರಲ್ಲಿ ಅಗತ್ಯ ಬಿದ್ದ ತಿದ್ದುಪಡಿಗಳನ್ನು ಮಾಡಿ ಮುಂದರಿಸತಕ್ಕದ್ದು. ನಮ್ಮಲ್ಲಿ ಈಗ ಜಾರಿಯಲ್ಲಿರುವ ಅಳಿಯ ಸಂತಾನ ಕಾನೂನನ್ನು ನಾವು ಒಪ್ಪಿಕೊಳ್ಳುವದರಲ್ಲಿ ಏನೂ ಸಂದೇಹವಿಲ್ಲ. ಅನೇಕ ಕಾಲಗಳ ಹಿಂದೆ ಅದು ಸರಿಯಾದ ಕಾನೂನಾಗಿರಲಿಕ್ಕೆ ಸಾಕು. ಇನ್ನು ಮುಂದೆಯೂ ಆಗಬಹುದು. ಆದರೆ ಪ್ರಕೃತ ಮತ್ತು ನಾವು ಮುಂದೆ ನೋಡುವಷ್ಟು ಕಾಲ ಅದು ಅಗತ್ಯವಿಲ್ಲವೆಂತ ಕಾಣುತ್ತದೆ. ಈಗ ರಷ್ಯ ದೇಶದಲ್ಲಿ ನಡೆಯುವ ಹಾಗೆ ಸಮಾಜದವರು ಒಟ್ಟಿಗೆ ಕೂಡಿ ನಡೆಸುವ ಬೇಸಾಯ, ಕೈಗಾರಿಕೆ ಪದ್ಧತಿಗೆ ನಮ್ಮ ಅಳಿಯ ಸಂತಾನ ಕುಟುಂಬ ಪದ್ಧತಿ ಮಾದರಿಯಾಗಬಹುದು. ಆದರೆ ನಮ್ಮ ಜಿಲ್ಲೆಯಲ್ಲಿ ಅಳಿಯ ಸಂತಾನ ಕುಟುಂಬಗಳಲ್ಲಿ ಸಿವಿಲ್, ಕ್ರಿಮಿನಲ್ ವ್ಯವಹಾರಗಳು ಜಾಸ್ತಿಯಾಗಿ ಇದ್ದ ಆಸ್ತಿಗಳು ಖರ್ಚಾಗಿ ಅಲ್ಲಲ್ಲಿ ನಮ್ಮ ಭಾಗದ ... ನಮ್ಮ ... ವನ್ನು ... ತೆಗೆದಿಟ್ಟ ... ಆವಶ್ಯಕತೆ. ಅದರ ಬದಲಿಗೆ ನಮ್ಮ ... ನಮ್ಮ ಕಾನೂನನ್ನು ... ಪದ್ಧತಿ ಮಾಡಿದ ಹಾಗೆ ಆಗ ... ಪ್ರಕಾರ ಒಬ್ಬ ... ಅವನ ಎಲ್ಲಾ ಸಂತಾನಗಳು ... ಕುಟುಂಬದವರ ಕೈ ಸೇರುತ್ತದೆ. ಆದರೆ ಅವನು ... ತನ್ನ ಎಲ್ಲಾ ಸೊತ್ತುಗಳ ... ತನ್ನ ಮಕ್ಕಳ ಪಾಲಾಗಬೇಕು ... ಅದರಿಂದ ಅವನು ... ಪ್ರಕಾರದ ವ್ಯವಸ್ಥೆ ಮಾಡಿದರೆ ಅವನ ... ತಿದ್ದುಪಡಿಯಾಗ ... ಕಾನೂನು ಕೂಡಾ ... ನ್ಯಾಯ ... ವಾಗಿರಬೇಕಾಗಿದ್ದಕ್ಕೆ.

ಈ ಸಂದರ್ಭದಲ್ಲಿ ಮುಂದಿರುವ ಮಸೂದೆ ವಿಷಯದಲ್ಲಿ ಆಲೋಚನೆ ಮಾಡುವ. ನಮ್ಮ ಜಿಲ್ಲೆಯಲ್ಲಿ ಪ್ರಕಟಿತವಾದ ಒಂದೆರಡು ಅಭಿಪ್ರಾಯಗಳನ್ನು ನಾನು ನೋಡಿದ್ದೇನೆ. ಈ ಮಸೂದೆಯು ಕ್ರಿಯಾತ್ಮಕ ಮಸೂದೆ ಎಂಬುದಕ್ಕೆ ಏನೂ ಆಧಾರವಿಲ್ಲ. ಹೆಚ್ಚಾಗಿ ಹೇಳುವದಾದರೆ ಸಾಮಾನ್ಯ ಕುಟುಂಬಗಳು ಸೇರುವಾಗಲಾಗದ ಹಾಗೆ ಅವರ ಹಿತಕ್ಕಾಗಿ ... ಮಸೂದೆ ... ಯಾವ ರೀತಿ ಛಿದ್ರವಾಗಬೇಕೆಂದು ಜನ ಮೋರೆಗೋ ಯಾವ ಕಿನರು ಮೋರೆಗೋ ಎಂಬುದರಲ್ಲಿ ನಾವು ಹೆಚ್ಚು ಆಲೋಚನೆ ಮಾಡಬಾರದು. ಯಾವ ವಿಧದಿಂದ ನೋಡಿದರೂ ಕೆಲವು ಅನ್ಯಾಯವಾಗಬಹುದು. ಆದರೆ ಇಂಥ ವುಗಳು ಹೊಸ ಕಾನೂನು ಯಾ ಸಮಾಜ ಮಾರ್ಪಾಟವಾಗುವಾಗ ಆಗುವಂಥ ಹೆಚ್ಚು ಕಡಿಮೆಗಳು ಸರ್ವಸಾಮಾನ್ಯವಾಗಿ ಅರ್ಥ ಅಸ್ತಿಗಳ ಮಟ್ಟಿಗೆ ಕವರು ಯಾರು ಮತ್ತು ಬಾಕಿ ಉಳಿದ ಅರ್ಧ ಆಸ್ತಿಗಳ ಮಟ್ಟಿಗೆ ಜನವಾರು ಎಂತ ಮಸೂದೆಯಲ್ಲಿ ಇರುವದನ್ನು ಈಗ ಸರ್ವಸಾಮಾನ್ಯವಾಗಿ ಜನರು ಒಪ್ಪಿಕೊಳ್ಳುತ್ತಾರೆ. ಅದೂ ಅಲ್ಲದೆ ಇತ್ತಲಾಗಿ ಕರಾರು ಯ ಏರ್ಪಾಡುಗಳಲ್ಲಿ ಇದೇ ರೀತಿಯಲ್ಲಿ ಕೆಲವು ಕುಟುಂಬಗಳು ತಮ್ಮ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ.

ನನ್ನ ಮಟ್ಟಿಗೆ ಈ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳು ಅವಶ್ಯವೆಂದು ಕಾಣುತ್ತದೆ. III ನೇ ಪರಿಚ್ಛೇದದಲ್ಲಿ ಪೋಷಣೆ ಮತ್ತು ರಕ್ಷಕತ್ವದ ವಿಷಯದಲ್ಲಿ ಕೆಲವು ಸಂಗ್ತಿಗಳನ್ನು ಕಾಣಿಸಿರುತ್ತಾರೆ. 13ನೇ ಪ್ರಕರಣ ಮೇರೆಗೆ ತಂದೆ ಯಾ ಗಂಡನು ರಕ್ಷಕನಾದಲ್ಲಿ ಅವನಿಗೆ ತನ್ನ ಮಕ್ಕಳ ಯಾ ಹೆಂಡತಿಯ ಕುಟುಂಬದ ಆಸ್ತಿ ಮಟ್ಟಿಗೆ ರಕ್ಷಕತ್ವ ಆಗಲಿಕ್ಕೆ ಸಾಧ್ಯವಿಲ್ಲ ಎಂತ ಕಾಣಿಸಿರುತ್ತದೆ. ಇದು ಸರಿ ಅಲ್ಲ. ರಕ್ಷಕನಿಗೆ ಈ ಅಧಿಕಾರ ಅಗತ್ಯವಿಲ್ಲ. ತನ್ನ ಮ್ಯಾನೇಜರ ಮಕ್ಕಳ ಯಾ ಹೆಂಡತಿಯ ಅರಣಾರ್ಥ ಪಡಕೊಳ್ಳುವದೆ ಯಾ ಯಾನ ವಿಧ ಹಿಂದಲಾದರೂ ಅವರ ಅಂದರೆ ಆಸ್ತಿಯನ್ನು ಕಾಪಾಡುವದೆ ಯಾ ಅಗತ್ಯ ಕಂಡನ್ನವಹರಣೆಯನ್ನು ಮಾಡುವದೆ ಅವನಿಗೆ ಎಷ್ಟು ಅಗತ್ಯವಿರುತ್ತದೋ ಅಷ್ಟು ಮಟ್ಟಿಗೆ ಅವನಿಗೆ ಕುಟುಂಬದ ಆಸ್ತಿಯಲ್ಲೂ ಹಕ್ಕು ಕೊಡತಕ್ಕದ್ದು. 14ನೇ ಪ್ರಕರಣ ಪ್ರಕಾರ ತಂದೆ ತೀರಿ ಹೋದ ಸಕ್ಕದಲ್ಲಿ ಯಾ ಮದುವೆಯ ಕಾರಣಾರ್ಥ ತಾಯಿಯೇ ತನ್ನ ಮಕ್ಕಳ ಗಾರ್ಡಿಯನ್ ಎಂತ ಕಾಣಿಸಿರುತ್ತದೆ. ತಂದೆಯು ಜೀವಂತನಾಗಿದ್ದರೆ ಅವನೇ ಗಾರ್ಡಿಯನ್ ಆಗುವದು ಆವಶ್ಯ. ಯಾಕೆಂದರೆ ಮಕ್ಕಳಿಗೆ ಅವನಿಂದ ಆರಣಾರ್ಥ ಕೇಳುವದೆ ಹಕ್ಕಿರುತ್ತದೆ. ಮತ್ತು ನಿಜವಾಗಿಯೂ ಅವನೇ ಅವರ ಪೋಷಣೆಯನ್ನು ನೋಡತಕ್ಕದ್ದು. ಆದರೆ ಬರೇ ಸಣ್ಣ ಮಕ್ಕಳಿಗೆ ತಂದೆಯನ್ನು ಗಾರ್ಡಿಯಾನನಾಗಿ ಮಾಡುವ ಅಗತ್ಯ ಇಲ್ಲ ಅದ್ದರಿಂದ 7 ವರ್ಷಕ್ಕೆ ಮಿಕ್ಕಿದ ಮಕ್ಕಳಿಗೆ ತಂದೆಯೇ ಗಾರ್ಡಿಯಾನನಾಗುವದು ಅಗತ್ಯ.

IV ನೇ ಪರಿಚ್ಛೇದವನ್ನು ಎಲ್ಲವರೂ ಅನೇಕ ಸಲ ಓದಬೇಕಾಗುತ್ತದೆ. ಅದರಲ್ಲಿ ಕೆಲವು ತಿದ್ದುಪಡಿಯು ಅಗತ್ಯವಿರುತ್ತದೆ. 18 ರಿಂದ 23 ನೇ ಪ್ರಕರಣ ಪ್ರಕಾರ ಒಬ್ಬ ವ್ಯಕ್ತಿಯು ಮೃತಪಟ್ಟರೆ ಅವನ ತಂದೆಗೆ ಯಾವತರದ ಹಕ್ಕೂ ಬರುವದಿಲ್ಲ. ತನ್ನ ತಾಯಿಕವರು ಯಾ ತಾಯಿಯ ತಾಯಿಕವರು ಆದರೂ ಅವನ ಆಸ್ತಿಯನ್ನು ಪಡಕೊಳ್ಳಬಹುದು. ಆದರೆ ಅವನ ತಂದೆಗೆ ಏನೂ ಹಕ್ಕಿರುವದಿಲ್ಲ. ಇದು ಸರಿಯಲ್ಲ. ತನ್ನ ತಂದೆಗೂ ತಾಯಿಯ ಹಾಗೆಯೇ ಒಂದು ಭಾಗವನ್ನು ಇಡುವದು ನ್ಯಾಯಕ್ಕೂ ಸಮಾಜದ ಸ್ಥಿತಿಗೂ ಸರಿಯಾದ್ದಾಗಿರುತ್ತದೆ. ಈ ಮಸೂದೆಯು ನಿಜವಾಗಿಯೂ ಅಳಿಯ ಸಂತಾನವನ್ನು ಮಾರ್ಪಾಟು ಮಾಡುವದೆ ನಿರ್ಧರಿಸಿದ ಮಸೂದೆಯಾಗಿರುತ್ತದೆ. ಅದರಲ್ಲಿ ನಾವು ಅಜಾಗ್ರತೆಯಿಂದ ಆಸ್ತಿಯು ಹೆಣ್ಣು ಸಂತತಿ ಪ್ರಕಾರವೇ ಹೋಗಬೇಕೆಂಬ ಕೆಲವು ಪ್ರಕರಣಗಳನ್ನು ಬಾಯಿಯಲ್ಲಿಡುವದು ಸರಿಯಲ್ಲ. 24ನೇ ಪ್ರಕರಣಪ್ರಕಾರ ಒಂದು ಹೆಂಗಸು ತೀರಿಹೋದಲ್ಲಿ ಅವಳ ಆಸ್ತಿಯು ಅವಳ ಕವರಿಗೆ ಹೋಗಬೇಕಾಗಿರುತ್ತದೆ. ಆದರೆ ನಾವು "ಕವರು" ವಿವರಣೆಯನ್ನು ನೋಡಿದರೆ ಅದು ಅವಳಮಕ್ಕಳು ಮತ್ತು ಸ್ತ್ರೀ ಸಂತತಿ ಪರಂಪರೆಯಾಗಿರುತ್ತದೆ. 25ನೇ ಪ್ರಕರಣಪ್ರಕಾರ ತನ್ನ ಮಾವಿಯು ಕವರು ಇಲ್ಲದ್ದರೆ ತನ್ನ ಗಂಡುಮಕ್ಕಳ ಸಂತತಿಯಲ್ಲಿ ಆಸ್ತಿಯು ಹೋಗಬೇಕಾಗಿರುತ್ತದೆ. ಒಂದು ಉದಾಹರಣೆ ತೆಗೆದುಕೊಳ್ಳಿ. ಒಬ್ಬಳಿಗೆ ಅವಳ ಮಗ ತೀರಿಹೋಗಿ ಅವನಿಗೆ ಒಂದುಮಗು ಇರುತ್ತದೆ. ಮತ್ತು ತನ್ನ ತಂಗಿಯಮಗಳ ಮಗಳು ಒಬ್ಬಳು ಇರುತ್ತಾಳೆ. ಹೀಗೆ ಇವರಿಬ್ಬರೇ ... ಈ ಪ್ರಕರಣ ಪ್ರಕಾರ ತನ್ನ ಮಗನ ಮಗುವಿಗೆ ಏನೂ ... ಹಕ್ಕು ಬರುವದಿಲ್ಲ. ಅವನ ತಂಗಿಯ ಮಗಳಿಗೆ ಯಾ ಮೊಮ್ಮಗಳಿಗೆ (ಮಗಳ ಮಗಳಿಗೆ) ಎಲ್ಲಾ ಹಕ್ಕು ಬರುತ್ತದೆ. ಇದು ಎಷ್ಟುಮಾತ್ರಕ್ಕೂ ಸಮಾಜ ಸ್ಥಿತಿಗೆ ಸರಿಯಾದದ್ದಲ್ಲ. ಈ ಮಸೂದೆಯಲ್ಲಿ ಕವರು ಅಂದರೆ ಎಲ್ಲಾ ಸಂತತಿಯವರನ್ನು ಸೇರಿಸತಕ್ಕದ್ದು. ಮಗಳ ಮಕ್ಕಳಾಗಲೀ ಮಗನ ಮಕ್ಕಳಾಗಲೀ. ನಾವು ಸುಧಾರಣೆಯನ್ನು ಮಾಡುವಾಗ ಅಲ್ಲಲ್ಲಿ ಸ್ವಲ್ಪ ತಿದ್ದುಪಡಿ ಮಾಡಿದರೆ ಸಾಲದು. ಯಾವಾಗ ಒಬ್ಬನ ಆಸ್ತಿಯು ತನ್ನ ತಂಗಿ, ಮತ್ತು ಅವಳ ಮಕ್ಕಳಿಗೆ ಅಳಿಯಕಟ್ಟಿನ ಪ್ರಕಾರ ಹೋಗುವದಿಲ್ಲವೋ ನಾವು ಹೆಣ್ಣು ಸಂತಾನ ಯಾ ಗಂಡು ಸಂತಾನ ಎಂಬ ಬೇಧವನ್ನು ಎಷ್ಟು ಮಾತ್ರಕ್ಕೂ ಸಹಿಸಕೂಡದು. ಅದೂ ಅಲ್ಲದೆ ಒಬ್ಬಳು ತೀರಿಹೋದರೆ ಅವಳ ಗಂಡನಿಗೆ ಸಹ ಆಸ್ತಿಯಲ್ಲಿ ಹಕ್ಕು ಬರತಕ್ಕದ್ದು.

ಕುಟುಂಬ ಮತ್ತು ಅದರ ಆಡಳಿತೆಯಲ್ಲಿ ಯಜಮಾನನು ಲೆಕ್ಕಪತ್ರ ಇಡಬೇಕು ಎಂತ ಮಾಡಿದ ನಿರ್ಧಾರವು ಹೆಚ್ಚಿನ ವ್ಯವಹಾರಗಳಿಗೆ ಆಸ್ಪದಕೊಡುತ್ತದೆ. ಯಾವಾಗ ಒಂದು ಕವರಿನವರಿಗೆ ಪಾಲುಕೇಳುವ ಹಕ್ಕು ಇರುತ್ತದೋ ಮತ್ತು ಅವರಿಗೆ ಯಜಮಾನನ ಒಟ್ಟಿಗೆ ಇರುವದೆ ಸಾಧ್ಯವಿಲ್ಲ ಎಂತ ಕಂಡರೆ ಅವರು ತಮ್ಮ ಪಾಲು ಪಡಕೊಂಡು ಹೋಗುವದು ಉತ್ತಮ. 33ನೇ ಪ್ರಕರಣ ಮೇರೆಗೆ ನಿಸ್ಸಂತತಿ ಕವರಿನವರಿಗೆ ಜೀವನಾಂಶ ಹಕ್ಕು ಮಾತ್ರ ಕೊಡತಕ್ಕದ್ದು ಎಂತ ವಿವರಿಸಿದ್ದು ನನ್ನ ಅಭಿಪ್ರಾಯದ ಮಟ್ಟಿಗೆ ಸರಿಯಲ್ಲ. ಮಸೂದೆಯಪ್ರಕಾರ ಒಬ್ಬನ ತಾಯಿಯು ತೀರಿಹೋಗಿದ್ದರೆ, ಮತ್ತು ಅವಳ ತಾಯಿಕೂಡ ಜೀವಂತಳಾಗಿರದಿದ್ದರೆ, ಅವನಿಗೆ ತನ್ನ ಪಾಲು ಕೇಳಬಹುದು. ಅಂದರೆ ಅನೇಕರಿಗೆ ಸಾಧಾರಣ ಏಳೆ ಪ್ರಾಯದಲ್ಲಿಯೇ ಪಾಲು ಕೇಳಬಹುದು. ನಾನು ಮೇಲೆ ಹೇಳಿದ ಮೇರೆಗೆ ಅವನ ಸಂತತಿಯವರುಸಹ ಏಕೆ ಹಕ್ಕುಳ್ಳವರಾಗಕೂಡದು. ಮಸೂದೆ ಪ್ರಕಾರ ಒಬ್ಬನಿಗೆ ಮತ್ತು ಅವಳ ತಂಗಿಗೆ ಸರಿಯಾದ ಎರಡು ಪಾಲುಗಳು ಸಿಕ್ಕುತ್ತವೆ. ಅವಳು ಅವನನ್ನು ಮಾರಾಟ ಮಾಡಬಹುದು. ಆದರೆ ಅವನು ಮಾರಾಟ ಮಾಡಕೂಡದು. ಗಂಡು ಸರಿಗೂ ಹೆಂಗಸರಿಗೂ ಸರಿ ಸಮಾನ ಹಕ್ಕುಗಳು ಸಮಾಜದಲ್ಲಿ ಇರಬೇಕು ಎಂಬ ಸಂಗ್ತಿ ನಾನು ಒಪ್ಪುತ್ತೇನೆ ಮತ್ತು ಅದು ಜನಾಂಗದ ಏಳಿಗೆಗೂ ಸರಿಯಾಗಿರುತ್ತದೆ. ಆದರೆ ಗಂಡಸರನ್ನು ಆವಶ್ಯವಿಲ್ಲದ ನಿರ್ಬಂಧನೆಗೆ ಗುರುಪಡಿಸುವದು ಸರಿಯಲ್ಲ. ಆಸ್ತಿಕಾಲಾಗಿ ಬೇರೆಯವರ ಕೈಸೇರುತ್ತದೆ ಮತ್ತು ಅಳಿಯ ಸಂತಾನವನ್ನು ನಾವು ತೆಗೆದುಹಾಕಿದರೆ ನಮ್ಮ ಮುಂದಿನ ಏಳಿಗೆ ... ಯಾ ... ಹಿಂದೆ ಬಿದ್ದಿತೆಂಬ ... ಮತ್ತು ಹೆದರಿಕೆಯ ಮಾತುಗಳಿಂದ ನಾವು ಬೇರೆಯಾಗಿ ಕೊಳ್ಳುವದು ಬೇಡ. ಇವೀ ಜಗತ್ತೇ ಬಹು ಬೇಗನೇ ಮಾರ್ಪಾಟನಾಗುತ್ತದೆ. ಜನಾಂಗಗಳು ಪ್ರತ್ಯೇಕವಾಗಿರುವದೆ ಎಷ್ಟುಮಾತ್ರಕ್ಕೂ ಸಾಧ್ಯವಿಲ್ಲ. ಸಣ್ಣ ಸಣ್ಣ ಸಂಸ್ಥೆಯವರು ತಮ್ಮ ಕುಂದು ಕೊರತೆಗಳನ್ನು ಸರಿಪಡಿಸಿ ಇತರರೊಂದಿಗೆ ಕಲಿತು ಮುಂದರಿಯುವದೇ ಸರಿಯಾದಮಾರ್ಗ ಹಾಗೆ ಮುಂದರಿಯುವದಕ್ಕೆ ನಾವು ಎಷ್ಟುಮಾತ್ರಕ್ಕೂ ಹಿಂಜರಿಯಕೂಡದು. ಈ ಧ್ಯೇಯವನ್ನು ನಾವು ಕೈಹಿಡಿದುಕೊಂಡು ಈ ತಿದ್ದುಪಡಿಗಳೊಡನೆ ನಮ್ಮ ಮಸೂದೆಯು ಆದಷ್ಟು ಬೇಗನೇ ಕಾನೂನು ಆಗುವಹಾಗೆ ಪ್ರತಿಯೊಬ್ಬನೂ ಪ್ರಯತ್ನಪಡಬೇಕಾಗಿ ನನ್ನ ಅರಿಕೆ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಫೋಡಿಯಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟುಕು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿನಕ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ತಂಬಲಕಾಯಿ,ಎಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಪತ್ರವ್ಯವಹಾರ ಮುಂದಿನ ವಿಳಾಸಕ್ಕೆ ಮಾಡಬೇಕು.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya. GADAG.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಎಳ್ಳು, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾರ್ಯ,

ರಥಬೀದಿ, ಉಡುಪಿ.

(೨ನೇ ಪುಟದಿಂದ)

ಸಗಾರರು ಪ್ರದರ್ಶಿಸಿದ ಸಂಘ ಶಕ್ತಿಯನ್ನು ಹೊಗಳದಿರಲಾಗುವದೆ? ಆದರೇನು ಮಾಡಲಿ? ಸಂಘ ಬಲದಿಂದ ಹುಟ್ಟಿದ ರಾಕ್ಷಸನ ಶಕ್ತಿ ರಾಕ್ಷಸನಂತೆಯೇ ಪ್ರಯೋಗಿಸಲ್ಪಟ್ಟಿತೆಂಬುದೊಂದೇ ಪಶ್ಚಾತ್ತಾಪ-ವಿಜಯ ಮತ್ತು ಬಾಳುವೆ ಬೇಕಾದರೆ ರಾಕ್ಷಸನ ಶಕ್ತಿಗೆ ರಾಮನ ಬುದ್ಧಿ ಬೇಕು. ಇಂತಹ ಮಜೂರನ ಕಂಠಕ್ಕೆಂದಲ್ಲದೆ ಬೇರಾರ ಅಲಂಕಾರಕ್ಕೂ ಈ ಲೇಖನ ಮಾಲಿಯನ್ನು ಪೋಣಿಸಿದ್ದಲ್ಲ. ಈ ಕುರಿತು ಯಾರಾದರೂ ತಪ್ಪು ತಿಳಕೊಂಡಿದ್ದರೆ, ಅದನ್ನು ತಿದ್ದುವ ಭಾಗವನ್ನು ಜೋಡಿಸಿ ಈ ಲೇಖನವನ್ನು ಬೆಳೆಸದೆ ಕೆಲಸಗಾರ ಬಂಧುಗಳ ಮುಂದೆ ಕೆಲವು ಸೂತ್ರಗಳನ್ನಿಟ್ಟು ಮುಗಿಸಿಬಿಡುತ್ತೇನೆ.

ಮಜೂರರೇ ತಿಳಿದಿರಿ!

ನಿಮ್ಮ ಸ್ವಂತ ಸುಖದುಃಖ, ಲಾಭನಷ್ಟ, ಹಿತಾಹಿತಗಳು ನಿಮಗೇನೇ ಗೊತ್ತಿರುವಷ್ಟು ಬೇರಾರಿಗೂ ಗೊತ್ತಿರಲಾರದೆಂದು ಖಂಡಿತವಾಗಿ ತಿಳದುಕೊಳ್ಳಿ. 'ನಿಮ್ಮ ಸಂಗತಿ ನಮಗೆ ಗೊತ್ತಿದ್ದಷ್ಟು ನಿಮಗೆ ಗೊತ್ತಿಲ್ಲ' ಎಂದು ಈಚೆಯಿಂದ ಮಹಾತ್ಮಾ ಗಾಂಧಿ, ಆಚೆಯಿಂದ ಸ್ಟಾಲಿನ್ ಬಂದು ಹೇಳಿದರೂ ಒಪ್ಪಬೇಡಿ.

ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಗುಟ್ಟು ನಿಜಕ್ಕೂ ನಿಮಗೆ ತಿಳಿದಿರಲಿಕ್ಕಿಲ್ಲ. ಆದರೆ ಆ ಕುರಿತು ಯಾರಿಂದಾದರೂ ಏನಾದರೂ ಕಲಿಸಲ್ಪಟ್ಟ ಮಾತ್ರಕ್ಕೆ ಅದೇ ಸರಿಯೆಂದಾಗಲೀ ಸಂಪೂರ್ಣವೆಂದಾಗಲೀ ಭಾವಿಸಿಕೊಳ್ಳಬೇಡಿ. ಅಥವಾ ಈ ಮಟ್ಟಿಗೆ ಸಂಗತಿಗೊತ್ತಿದ್ದ ಬೇರೆಯವರು ನಿಮ್ಮ ಪರವಾಗಿ ನೇಮಿಸಿಕೊಳ್ಳಬೇಡಿ. ಅವೆಲ್ಲಾ ನೀವಾಗಿ ಮುಂದಟ್ಟು ಮಾಡಿಕೊಳ್ಳಬೇಕಾದ ವಿಷಯ; ನಿಮ್ಮ ಪರವಾಗಿ ಬೇರೆಯವರು ಮಾಡುವಂತಹದಲ್ಲ.

ನಿಮ್ಮನ್ನು ರಕ್ಷಿಸಬೇಕೆಂಬುದಕ್ಕಾಗಿಯೇ ಕೆಲಸಕೊಡುತ್ತೇವೆನ್ನುವವರನ್ನಾಗಲೀ ನಿಮ್ಮನ್ನು ಉದ್ಧರಿಸುವದಕ್ಕಾಗಿಯೇ ಹೋರಾಡುತ್ತೇವೆ ಎನ್ನುವವರನ್ನಾಗಲೀ ಅಷ್ಟಕ್ಕಾಗಿಯೇ ನಂಬಬೇಡಿ. ನಿಮ್ಮ ರಕ್ಷಣೆ ಅಥವಾ ಉದ್ಧಾರವನ್ನು ಅವರು ಊಹಿಸಿ ತಿಳಿಯಬೇಕು—ಆದರೆ ನೀವು ಉಂಡು ಅನುಭವಿಸಿದವರಾದ್ದರಿಂದ ಈ ಮಟ್ಟಿಗೆ ನಿಮ್ಮ ಅಭಿಪ್ರಾಯವೇ ಸರಿ. ಆ ಮಾನ್ಯರಿಗಿಂತಲೂ ನಿಮ್ಮ ಮನಸ್ಸಾಕ್ಷಿ ಮೇಲು.

ನಿಮ್ಮನ್ನು ಸಂಘಟಿಸುವ ಶಕ್ತಿಯುಳ್ಳ ಯಾರು ಬಂದರೂ ಸ್ವಾಗತವಿರಲಿ. ಆದರೆ ಹಾಗೆ ಬಂದವರನ್ನು ಮುಂದಿಟ್ಟುಕೊಂಡು ನೀವೇ ಹಿಂದಿನಿಂದ ಹೋಗಿ; ನಿಮ್ಮನ್ನು ಹಿಂದಿಟ್ಟುಕೊಂಡು ಅವರಾಗಿ ಮುಂದೆ ಹೋಗಲುಬಿಡಬೇಡಿ.

ನೀವು ಕಲಿಯಬೇಕು; ಯಾವುದೇ 'ಇಸಮ್'ನ್ನಾದರೂ ಕಲಿತುಕೊಳ್ಳಬೇಕು. ಆದರೆ ನಿಮಗೆ ಅರ್ಥವಾಗದ—ನ್ಯಾಯವೆಂದು ತೋರದ—ಯಾವುದನ್ನಾದರೂ ನಿಮ್ಮದನ್ನಾಗಿ ಮಾಡಿಕೊಳ್ಳಬೇಡಿ. ಆಯಾಯಾ ಕಾಲದಲ್ಲಿ ನಿಮಗೆಷ್ಟು ಮಂದಟ್ಟಾಗಿದೆಯೋ ಅಷ್ಟು ಮಾತ್ರ ನಿಮ್ಮದಾಗಿರಲಿ.

ವಿಧೇಯತೆ ಬೇಕಾದರೂ ವಿನಯಶೀಲತೆ ಬೇಕು; ಶಕ್ತಿ ಮತ್ತು ಸಾಹಸವಿರಬೇಕಾದಂತೆಯೇ ಸಂಸ್ಕಾರ ಮತ್ತು ಸಹನಶೀಲತೆಯೂ ಬೇಕು. ಹಾಗಿದ್ದುಕೊಂಡು ಧನಿಗಳು ನಿಮ್ಮನ್ನು ಕಾಲಡಿಯ ಕಲ್ಲಿನಂತೆ ತುಳಿಯುವದನ್ನೂ ನಿಲ್ಲಿಸಿಬಿಡಿ; ಕಮ್ಯೂನಿಸ್ಟರು ನಿಮ್ಮನ್ನು 'ಕೈಯ್ಯ ಕಲ್ಲಿನಂತೆತ್ತಿ ತಮಗಾಗದವರ ಮುಖಕ್ಕೆಸೆಯುವದನ್ನೂ ತಪ್ಪಿಸಿಕೊಳ್ಳಿ.

ನೀವು ಅಜ್ಞರೆಂದೊಪ್ಪಿಕೊಳ್ಳಿ—ಆದರೆ ನಿಮ್ಮ ನಾಯಕನಿಗೆ ಆ ಅಜ್ಞತೆ ನಿವಾರಿಸುವಷ್ಟೇ ಅಧಿಕಾರ ಹೊರತು ನಿಮ್ಮೆಲ್ಲರ ತಲೆಯನ್ನು ಸೂಡಿ ಕಟ್ಟಿ ಅದಕ್ಕೆ ತನ್ನ ಮೆದುಳನ್ನು ಜೋಡಿಸುವ ಹಕ್ಕಿಲ್ಲವೆಂದು ತಿಳಿದುಕೊಳ್ಳಿ. ನೀವು ಶ್ರಮ ಪಡುವವರು ಹೌದೆನ್ನಿ-ಆದರೆ ಆ ಶ್ರಮದ ಯೋಗ್ಯ ಪ್ರತಿಫಲವನ್ನೆಲ್ಲಾ ತುಂಬಿಕೊಳ್ಳುವ ಹಕ್ಕು ನಿಮ್ಮ ಅನ್ನಕೋಶಕ್ಕೆ ಹೊಂತು ಧನಿಯ ನಾಣ್ಯಕೋಶಕ್ಕಿಲ್ಲವೆಂದು ತಿಳಿದುಕೊಳ್ಳಿ.

ಬಡವರ ಸುಲಿಗೆಯಿಂದ ಶ್ರೀಮಂತಿಕೆಯಿದೆ ಎಂಬುದಕ್ಕಾಗಿ ನೀವು ಶ್ರೀಮಂತರನ್ನು ದ್ವೇಷಿಸಬೇಕು; ಶ್ರೀಮಂತರನ್ನು ದ್ವೇಷಿಸಬೇಕೆಂಬ ಕಮ್ಯೂನಿಸ್ಟ್ ತತ್ವಪಾಲನೆಗಾಗಿ ಶ್ರೀಮಂತರಲ್ಲದವರನ್ನೂ ಶ್ರೀಮಂತರೆಂದು ಭಾವಿಸಿ ದ್ವೇಷಿಸಬಾರದು.

ಸಭೆ, ಮೆರವಣಿಗೆ, ಘೋಷಣೆ ಮುಂತಾದ ಪ್ರಚಾರ ಪ್ರದರ್ಶನಗಳೆಲ್ಲಾ ಬೇಕು. ಆದರೆ ಅವುಗಳಲ್ಲಿ ದೇಹದಾರ್ಢ್ಯಸಾಧನೆಯ ವ್ಯಾಯಾಮ ದೃಷ್ಟಿಯಿರಬೇಕು ಹೊರತು, ಅದಾವುದೂ ಅವಸರವಸರದ ಯುದ್ಧ ತರಬೇತಿಯಂತಿರಬಾರದು.

ಬುದ್ಧಿವಂತಿಕೆ ಮತ್ತು ಸಿರಿವಂತಿಕೆಯಲ್ಲಿ ನಿಮಗೆ ಮೇಲ್ಗೈಯ್ಯಾದವರ ಅಡಿಯಾಳಾಗಬೇಡಿ; ಅಂಧಾನುಕರಣೆಮಾಡಬೇಡಿ. ಅದು ಮಾತ್ರ ಗುಲಾಮಗಿರಿ ಹೊರತು, ಶಿಸ್ತು ಮತ್ತು ಕ್ರಮ ನಿಯಮಗಳಿಗೊಳಗಾಗುವದು ಗುಲಾಮತ್ವವಲ್ಲ.

ನ್ಯಾಯ ಸಾಧನೆಗೆ ಹಲವು ಮೆಟ್ಟಲುಗಳಿರುವಾಗ ಒಮ್ಮೆಗೇ ಹನುಮೋಲ್ಲಂಘನೆಮಾಡಬೇಡಿ ಅನುಕ್ರಮವಾಗಿ ನಯ ವಿನಯ, ಸಂಧಾನ ಸಖ್ಯ, ರೀತಿ ರಿಯಾಯತಿ, ಚಾತುರ್ಯ ಚತುರೋಕ್ತಿ, ಭೇದ ಬೆದರಿಕೆಗಳನ್ನು ಸರ್ವಶಕ್ತಿಯಿಂದ ಪ್ರದರ್ಶಿಸಿ, ಕೊನೆಯದಾಗಿ ಮುಷ್ಕರ ಯಾನೆ ಸಮರ ಹೂಡಿ ಗೆಲ್ಲಿರಿ.

ತಿಳಿದಿರಲಿ; ನೀವು 10 ರೂಪಾಯಿ ಬುದ್ಧವರಾದರೆ 11 ರೂಪಾಯಿಯಿದ್ದವನನ್ನು ಶ್ರೀಮಂತನೆಂದು ನೀವೂ ಭಾವಿಸಕೂಡದು; ಅವನೂ ಹಾಗೆ ನೆನಸಿಕೊಳ್ಳಲು ಬಿಡಬಾರದು. ಶಿಸ್ತು ನಿಯಮಗಳ ಪಾಲನಾ ನಿಷ್ಠುರವನ್ನೂ ಅಧಿಕಾರ ಲಾಲಸೆಯೆಂದು ನೀವು ಕಟ್ಟಿಕೊಳ್ಳಬಾರದು; ಶಿಸ್ತು ನಿಯಮಗಳ ಹೆಸರಿನಿಂದ ಅಧಿಕಾರದರ್ಪ ಪ್ರದರ್ಶಿಸಲಿಕ್ಕೂ ಬಿಡಬಾರದು.

ನಿಮಗಿರುವ ಜೀವನ ಅನಾನುಕೂಲತೆಯಿಂದಾಗಿ ನಿಮ್ಮನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳಲು ನೋಡುವವರೂ ಮಜೂರ ದ್ರೋಹಿಗಳು; ನಿಮ್ಮಲ್ಲಿರುವ ಜ್ಞಾನದ ಅಭಾವದಿಂದಾಗಿ ನಿಮ್ಮನ್ನು ಸ್ವಾರ್ಥೋದ್ದೇಶದಿಂದ ಉಪಯೋಗಿಸಿಕೊಳ್ಳುವವರೂ ಮಜೂರ ದ್ರೋಹಿಗಳು. 'ಮಜೂರದ್ರೋಹಿಗಳನ್ನು ಓಡಿಸಿರಿ.'

ನಿಮ್ಮಿಂದಾಗಿ ಮಿಕ್ಕವರಿದ್ದಾರೆ. ನಿಮ್ಮನ್ನು ನೀವು ಉಳಿಸಿಕೊಂಡರೆ ಎಲ್ಲರನ್ನೂ ಉಳಿಸಿದಂತೆ. ಆದ್ದರಿಂದ 'ನಿಮಗಾಗಿ ನೀವು ಮತ್ತು ನಿಮಗಾಗಿ ಮಿಕ್ಕವರೂ' ಇರಬೇಕು ಯಾವವಿಧದಲ್ಲಿಯೂ ನೀವು ಇನ್ನೊಬ್ಬರ ಕೈಗೊಂಬೆಗಳಾಗಬಾರದು. ಸ್ವತಃ ನಿಮ್ಮ ಜ್ಞಾನ, ಸಂಸ್ಕಾರ, ಶಕ್ತಿ ಮತ್ತು ಸರ್ವವಿಧದ ಸಮಾನತೆ ಸಂಪಾದಿಸಿಕೊಳ್ಳುವದಕ್ಕಲ್ಲದೆ ಬೇರಾರಿಗಾಗಿಯೂ, ಯಾವುದಕ್ಕಾಗಿಯೂ ಏನನ್ನೂ ಮಾಡಬೇಡಿ

ಮಹಾ ವೀರನಿಗಿಂತ ಮಜೂರ ಮೇಲು. ಹೋರಾಟಗಾರರಾದಾಗ ನಿಮ್ಮಲ್ಲಿರುವ ಶಕ್ತಿಗಿಂತ ಕೆಲಸಗಾರರಾಗಿರುವಾಗ ನಿಮಗಿರುವ ಶಕ್ತಿ ಹೆಚ್ಚಿನದು. ಆದ್ದರಿಂದ ನಿರ್ವಾಹವಿಲ್ಲದಾಗ ಹೊರತು ಹೆಗ್ಗಳಿಕೆಯಿಂದ ಎಂದೂ ಹೋರಾಟಕ್ಕಿಳಿಯಬೇಡಿ.

ನಿಮ್ಮ ಉದ್ಯೋಗವೇ ನಿಮ್ಮ ಪಾಲಿಗೆ ಪ್ರಥಮ ನ್ಯಾಯವೆಂದುಗಣಿಸಿ ಮೊದಲ ಮರ್ಯಾದೆಯನ್ನು ಅದಕ್ಕೆ ಸಲ್ಲಿಸಿರಿ. ನಿಮ್ಮನ್ನು ದುಡಿಯಿಸುವವರ, ಅಥವಾ ನಡೆಯಿಸುವವರ, ಪ್ರತಿಯೊಂದು ಮಾತು ಕೃತಿಯನ್ನೂ ಆ ಒರೆಗಲ್ಲಿಗೆ ತಿಕ್ಕಿ ಪರೀಕ್ಷಿಸಿಕೊಳ್ಳಿ.

ಜಗತ್ತಿನ ಸಾರಸ್ವರೂಪವೇ ನೀವು. ಸಶಕ್ತ ಸ್ವತಂತ್ರರೂ ನೀವಾದಲ್ಲಿ ಸದಾ ವಿಜಯಿಗಳೂ ನೀವೇ.

ಮುಗಿಯಿತು.

CHAMPAES

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ... ಬೇರೆ. ಅದು ದಮ್ಮನ್ನು ಬರೇ ಮುಚ್ಚಿಡದೆ ಅದನ್ನು ಬೇರುಸಹಿತ ಕಿತ್ತು ಹಿಡಿಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೀಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮುರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ಕೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಬಿಳೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩ ೬ ೦; ೫.೧೨.೦ ಮತ್ತು ೧೦.೨.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್ ಎಂಡ್ ಕೊ., ಸ್ಟೇಷನ್ ರೋಡು.

ಮುಂಬಯಿ ಸೋಲ ಏಜಂಟರು.

ಏನವಾಲೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ ೨

PUROHIT SHWAS-HARI

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ಕ್ಕೆ ರೂ. 5—8—0; ½ ಪೌಂಡು ರೂ 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್. —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿಟಿ ಸಂಗ್ತಿ ಬಾದದ್ದ ರೋಗಗಳಿಗೆ ಚಿಕಿತ್ಸಾದ ಔಷಧಿ ದೊರಕಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಕುರಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ, ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟ ೧೧೩.

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.

THE BHARATH MILLS, Ltd.

With

Dr. T. M. A. Pai, M. B., B. S.	Upendra Ananth Pai, Esq.
Kochikar Panduranga Pai, Esq.	Dr. K. L. Aithala, M. B., B. S.
A. L. N. Rao, Esq., B. A., B. L.	A. L. N. Rao, Esq., B. A., B. L.
Dr. K. L. Aithala, M. B., B. S.	Kochikar Manjunath Pai, Esq.
T. N. Kelu Nambiar Esq.	Kalsank Venkatraya Pai, Esq.
Dr. V. K. Ballal, L. I. M.	B. Padmanabha Pai, Esq.
U. Ramesh U. Pai, Esq.	U. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. H. Shetty at the Navayuga Press, Udipi, S. India.